# ಸಾಳ್ವ ಸಂಪುಟ – ನೇಮಿನಾಥ ಚರಿತೆ, ರಸರತ್ನಾಕರಂ, ಶಾರದಾವಿಲಾಸಂ

## ರಸರತ್ನಾಕರಂ

## ಶೃಂಗಾರ ಪ್ರಪಂಚ ವಿವರಣಂ

**ಪ್ರಥಮ ಪ್ರಕರಣಂ**

*ಪರಮಾರ್ಹಂತ್ಯವಧೂಟಿಗೊಲ್ದು ತನುವಂ ಗೆಲ್ದೈದೆ ಮೂದೇವರೊಂ*
*ದಿರವಂ ನಕ್ಕನೃತಾದಿಗಂಜಿ ಕಡು ಶೋಕಂಗೊಟ್ಟು ಮೋಹಾಳಿಗು*
*ದ್ಧುರ ದೋಷಾಳಿಗೆ ಪೇಸಿ ಕಾಯ್ದು ಭವಮಂಸುಟ್ಟೇಱಿಲೋಕಾಗ್ರಮಂ*
*ಸ್ಥಿರನಾಗಿರ್ದ ರಸೈಕಸೀಗೆ ಮುದಮಂ (ಶ್ರೀಮಜ್ಜಿನಾಧೀಶ್ವರಾ) ೧*

*ಸತತಗುಣನಿಲಯೆ ಲೋಕ*
*ಸ್ತುತೆ ತರುಣಮೃಣಾಳವರ್ಣೆ ಸಕಲಕಲಾ ವಿ*
*ಶ್ರುತ ನಿರುಪಮೆ ಚಿನ್ಮಯೆ ಭಾ*
*ರತಿ ಯೆನಸುಂ ನೆಲಸುಗೆಮ್ಮ ಮುಖಸರಸಿಜದೊಳ್ ೨*

*ರಸರತ್ನಾಕರ ಮೀ ಕೃತಿ*
*ವೆಸರೆಂದಿಡೆ ಸುಕವಿನಿಕರ ಬುಧಸಮಿತಿಗಳೀ*
*ಕ್ಷಿಸಿ ಕೈಕೊಂಡೆಸೆವಿದಱೊಳ್*
*ರಸರತ್ನಂಗಳನೆ ಪಡೆಯದಿಕ್ಕುಮೆ ಚದುರರ್ ೩*

*ರಸಮಿಲ್ಲದ ಕಾವ್ಯಂ ನೀ*
*ರಸಮದಱಿಂ ಕೃತಿಗೆ ರಸಮೆ ಸಾರಂ ನೆಗೞ್ದೀ*
*ರಸಭಾವಮನಱಿದ ಕವಿಯ ಕಬ್ಬಮೆ ಸಾರಂ ೪*

*ವಸುಧಾಚಕ್ರದೊಳೊಪ್ಪುತಿರ್ಪ ಜಸವಂತಂ ಶ್ರೀ ಜಿನಾಧೀಶ ಪಾ*
*ದಸರೋಜಾತಮದಾಳಿ ಶಬ್ದ ಸದಲಂಕಾರಾದಿ ಶಾಸ್ತ್ರಜ್ಞರೊ*
*ಲ್ದು ಸಭಾರಂಜನವಾಣಿ ರಾಜಬುಧಮಾನ್ಯಂ ಮಾರ್ಗಸಾರಂಗಳಿಂ*
*ರಸರತ್ನಾಕರಮಂ ಸಮಂತು ಕವಿ ಸಾಳ್ವಂ ಪೇೞ್ದನೊಳ್ಪಿಂಬಿನಂ ೫*

*ಅವಗುಣಮಿದಱೊಗೇನಾ*
*ನುವುಳ್ಳೊಡಂ ನಿಮ್ಮ ಗುಣಮನುಱಿ ಮೆಱೆಯಲ್ ತಿ*

*ರ್ದುವುದು ಬಹುಶ್ರುತರೆನಿಸಿದ*
*ಕವಿಗಳು ಬುಧರೊಲ್ದು ಗುಣಕೆ ಪುರುಡಿಪರೊಳರೇ* ೭

*ಕವಿಯೆಂಬ ಪೆಸರ್ಗೆ ಮಚ್ಚರಿ*
*ಪವಿವೇಕಿಗಳಿರದಲೆಗಳೆಗೊಳ್ಗಬ್ಬಿಗರೀ*
*ವಿವಿಧ ರಸಾಮೃತಮಂ ಸಲೆ*
*ಸವಿದಮರ್ದುಣಿಯಂತೆ ಸುಖಿಸುತಿರ್ಕನವರತಂ* ೭

*ಆನಾರ್ಯರಿಂದೆ ತಿಳಿದಮೃ*
*ತಾನಂದಿಯ ರುದ್ರಭಟ್ಟನಾ ತೆಱದಿಂ ವಿ*
*ದ್ಯಾನಾಥ ಹೇಮಚಂದ್ರರ*
*ಭೂನುತಮಾರ್ಗಾದಿಯಂದಮಂ ವಿರಚಿಸಿದೆಂ* ೮

ವ : ಇಂತು ನಾಗವರ್ಮ ಕವಿಕಾಮಾದಿಗಳ ಮಾರ್ಗದಿಂ ರಸ ಭಾವಾ ಭಾಸಂ ಗಳನೆಲ್ಲಾ ವಿದ್ವತ್ ಸಭೆಗಮುಭಯ ಭಾಷಗಮಿಷ್ಟಮಪ್ಪಂತು ಕನ್ನಡಿಸಿದೆನದೆಂ ತೆಂದೊಡೆ

*ಮುನ್ನೊರೆದ ಕೃತಿಗಳಿರೆ ಬಱಿ*
*ಕಿನ್ನೇವುದೊ ಕಬ್ಬ ಮೆನ್ನದಿರ್ ಕನ್ನೆಗೆ ಮು*
*ನ್ನಂ ನಗೆಗಣ್ ನೆಗಟ್ದಿರೆ ಬಱಿ*
*ಯಂ ನೆಲೆಮೊಲೆ ಮೂಡಿ ಮಾಡವೇ ಮೋಹನಮಂ* ೯

ವ : ಎಂದಿರ್ಪುದಱಿಂದೆ ಚತುರರ್ಕಳ್ ಲೇಸಂ ಕೈಕೊಳ್ಗೆ ಪ್ರಯೋ ಜನಮೇ ನೆಂದೊಡೆ

*ರಸಭಾವಾಲಂಕಾರ*
*ಪ್ರಸರಮೆ ಪರಮೇಶ್ವರನುರುಚರಿತ್ರಮದ ಱಿನೊ*
*ಳ್ಪೆಸೆವಾ ಸಮ್ಯಕ್ತ್ವ ಮದಱ*
*ಬಸಮಾಗದೆ ಪರಮಶಾಂತಮಮೃತಶ್ರೀಯುಂ* ೧೦

*ವ್ಯರ್ಥಮಿದಲ್ಲಿದು ಜಿನನ ಪ*
*ದಾರ್ಥ ಮನೋಧರ್ಮ ಬೋಧ ಶಾಸ್ತ್ರಂ ಚಿದ್ವಿ*
*ದ್ಯಾರ್ಥಿಗೆ ಹೇಯೋಪಾದೇ*
*ಯಾರ್ಥಜ್ಞಾನಾರ್ಥಮಪ್ಪುದೀ ರಸಶಾಸ್ತ್ರಂ* ೧೧

**ಸೂತ್ರ ೧**

*ಭಾವಂ ವಿಭಾವಮೆಸೆವನು*
*ಭಾವಂ ಸಂಚಾರಿಭಾವಮೆಂಬಿಂತಿವಱಿಂ*
*ದಾವಿಷ ತಮಕ್ಕುಂ ರಸ*
*ಮಾವುದುಮೆಂದಱಿಗೆ ಭರತಶಾಸ್ತ್ರಕ್ರಮದಿಂ*

ವೃತ್ತಿ: ನಾಗವರ್ಮನಿಂತಪ್ಪುಗೆಯ್ದನದಱ ವಿವರಮೆಂತೆಂದೊಡೆ ರಾಗಾದ್ಯಭಿನಯ ದೊಡ ಗೂಡಿದ ಸ್ಥಾಯಿ ವ್ಯಭಿಚಾರಿಲಕ್ಷಣಮಪ್ಪ ಚಿತ್ತವೃತ್ತಿಯೆ ಭಾವಮೆನಿಕ್ಕುಂ. ಆ ಚಿತ್ತವೃತ್ತಿಗಳ್ ಕಾವ್ಯನಾಟ್ಯಶಾಸ್ತ್ರ ಪ್ರಸಿದ್ಧಂಗಳಪ್ಪ ಆಲಂಬನೋದ್ದೀಪನ ಸ್ವಭಾವಂಗಳಾದ ಲಲನಾದಿ ಕಂಗಳಿಂ ವಿಶಿಷ್ಟತ್ವದಿಂ ಸ್ಥಾಯಿಭಾವಂಗಳನುದ್ಬೋಧಿಪುದಱಿಂ ವಿಭಾವಮೆನಿಕ್ಕುಂ ಮತ್ತಮಾ ಸ್ಥಾಯಿ ವ್ಯಭಿಚಾರಿ ಲಕ್ಷಣ ಭೂತಚಿತ್ತವೃತ್ತಿವಿಶೇಷಂಗಳ್ ಕಟಾಕ್ಷಭೂಜ ವಿಕ್ಷೇಪಾದ್ಯನುಭವಂಗಳಿಂ ಸಾಮಾಜಿಕನನುಭವಿಸುವುದಱಿಂದನುಭಾವಂ ಗಳೆನಿಕ್ಕುಂ ಮತ್ಯಾದಿಗಳಾ ಸ್ಥಾಯಿಗಳಂ ನಾನಾ ಪ್ರಕಾರದಿಂದಭಿಮುಖವಾಗಿ ಮಾಡುತ್ತೆ ಸಂಚರಿಪುದಱಿಂ ವ್ಯಭಿಚಾರಿಗಳೆನಿಕ್ಕುಮೀ ಮೂದೆಱದ ಭಾವಂಗಳ್ ಸ್ಥಾಯಿಗಳಂ ವ್ಯಕ್ತಂ ಮಾಳ್ಪುದಂಱಿಂ ಕಾರ್ಯಕಾರಣ ಸಹಕಾರಿಗಳಕ್ಕುಮಿಂತೆಂಬ ಶಬ್ದಕ್ಕೆ ವಿಭಾವಾನುಭಾವ ವ್ಯಭಿಚಾರಿಭಾವಂಗಳೆಂಬ ವ್ಯಪದೇಶಂಗಳಾದುವಿಂತಾದ ಸ್ಥಾಯಿಭಾವಂ ಗಳಿವೆನ್ನವಿವನ್ಯನವಿವೆನ್ನ ವಲ್ತಿವನ್ಯವಲ್ತೆಂಬ ಸಂಬಂಧವಿಶೇಷ ಸ್ವೀಕಾರ ಪರಿಹಾರ ನಿಯಮದ ನವಸಾಯದಿಂ ಸಾಧಾರಣಂಗಳಾದುವು. ಸಾಧಾರಣದಿಂ ಸಾಮಾಜಿಕರ್ಗೆ ಕಾವ್ಯ ನಾಟಕಾದಿಗಳಿಂ ವ್ಯಕ್ತಮಾದುವವರ್ಗೆ ಮುನ್ನ ವಾಸನಾರೂಪದಿನಿರುತಿರ್ಪುದಱಿಂ ರತ್ಯಾದಿಗಳ್ ಸ್ಥಾಯಿಭಾವಂಗಳೆನಿಕ್ಕುಂ ನಿಯತಮಾಗಿಯನುಭವಿಪರನೆಯ್ದಿರ್ದುದ ಱಿಂ ಸಾಧಾರಣೋಪಾಯಬಲದಿಂ ಗೋಚರಿಸಿದುದಱಿಂದನುಭೂಯಾತ್ಮಕಂ ರಸಂ ತಾನಾದುದು ವಿಭಾವಾದಿ ಜೀವಿತಾವಧಿಯುಮಲೌಕಿಕಮುಮಕ್ಕುಂ. ಚಮತ್ಕಾರಕಾರಿ ಯಾದುದಱಿಂ ಬ್ರಹ್ಮಾಸ್ವಾದ ಸೋದರಂ ನಿಮೀಲಿತನಯನಂಗಳುಳ್ಳ ಕವಿಹೃದಯರಿಂದೆ ರಸ್ಯಮಾನಮಾದುದು, ದುಗ್ಧಾಸ್ವಾದನದಂತೆ ಸ್ವಸಂವೇದನಸಿದ್ಧಂ. ಮತ್ತಮಾ ರಸಂಗಳೀ ವಿಭಾವಾದಿಗಳಿಂದಭಿವ್ಯಕ್ತಂಗಳಲ್ಲದೆ ವಿಭಾವಾದಿಗಳ ಕಾರ್ಯಮಲ್ತದೆಂತೆನೆ ಚಕ್ರಕುಲಾ ಲಾದಿಗಳ್ ಇಲ್ಲದೊಡಂ ಘಟಮಿರ್ಪಂತೆ ವಿಭಾವಾದಿಗಳ್ ವಿನಾಶಮಾದೊಡೆ ರಸಮಿರ್ಪುದಿಲ್ಲ. ಮತ್ತಮವು ಜ್ಞಾಪಕಂಗಳಕ್ಕುಮೆಂದೊಡೆಮದಲ್ತು. ಘಟಾದಿಯಂತೆ ಸಿದ್ಧ ವಸ್ತುಗಳಿಲ್ಲದುದಱಿಂದಾದೊಡೆ ಲೋಕದೊಳ್ಕಾರಕಜ್ಞಾಪಕಂಗಳಿಂ ಬೇಱಪ್ಪ ದೊಂದುಂ ಕಾಣಲ್ಪಟ್ಟುದಿಲ್ಲ. ತಾನಲೌಕಿಕ ಸಿದ್ಧಿಯಾದುದೆಂದೊಡದು ಭೂಷಣಮಲ್ಲದೆ ದೂಷಣಮಲ್ತು. ಮತ್ತಂ ವಿಭಾನುಭಾವವ್ಯಭಿಚಾರಿಗಳಿಂ ರಸಮಭಿವ್ಯಕ್ತಮಾಗಬೇಕಲ್ಲದೊಂದಱಿದಾಗದಾದೊಡದುಂ ವ್ಯಭಿಚಾರಮಪ್ಪುದೆಂತೆಂದೊಡೆ ಸಿಂಹ ಶಾರ್ದೂಲಾದಿ ಭಯಾನಕಕ್ಕೆ ವಿಭಾವಮದಱಿಂದಮೆ ಭಯಾನಕಮಾದುದಿಲ್ಲ. ಅದುವೆ ವೀರರೌದ್ರಾದ್ಭುತಂಗಳ್ಗಮಾಗುತ್ತಿರ್ಪುದಱಿಂ ಮತ್ತಮಾ ಕರುಣಕ್ಕಶ್ರುಪಾತಾದಿಯನು ಭಾವಮಂತದೆ ಶೃಂಗಾರ ವೀರ ಭಯಾನಕಕ್ಕಮಪ್ಪುದು ಕರುಣಕ್ಕೆ ಚಿಂತಾದಿಗಳ್ ವ್ಯಭಿಚಾರಿಗಳಂತವೆ ಶೃಂಗಾರ ವೀರ ಭಯಾನಕಕ್ಕಮಪ್ಪುವೊಂದೊಂದೆಡೆಯೊಳೆ ತ್ತಾನುಮೋರೊಂಗಱ ಸ್ವೀಕಾರಮುಂಟು.

*ಈಕೆಯ ಲೋಚನಂ ಕುಸುಮಸಾಯಕವೀಕೆಯ ಪುರ್ಬು ಕರ್ಪುವಿ*
*ಲ್ಲೀಕೆಯ ಕುಂತಳಂ ಭ್ರಮರಸಂಕುಳವೀಕೆಯ ವಾಗ್ವಿಲಾಸಮೇ*
*ಕೋಕಿಲನಾದವೀಕೆಯ ಮೊಗಂ ಶಶಿಯೀ ಜಗಮಂ ಗೆಲಲ್ಕೆ ಸಾ*
*ಕೀಕೆಯ ರೂಪಮೆಂದು ಮಕರಧ್ವಜನೀಕೆಯನೆಯ್ದೆ ಪೊರ್ದುಗುಂ ೧೨*

*(ಇದು ವಿಭಾವಮ್)*

*ಮನಮೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂ*
*ಬಿನ ಕೋಲ್ಗಂ ತಳಿವಾಲಿನೀರ್ಗಮಲರ್ವಾಸಿಂಗಂ ಕುಳಿರ್ಕೋಳ್ಗ ನಂ*

*ದನಕಂ ಚಂದನಕಂ ಪಸುರ್ಪಸೆವ ಬಾೞ್ದೊಂಪಕ್ಕ ಮೊಂದೊಂದೆ ತ*
*ಣ್ಬ ನಿಯಂ ಸೂಸುತುಮಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ ೧೩*

*(ಇವನುಭಾವಂಗಳ್)*

*ಹೃದಯಾಧೀಶಂ ಕುರುಳ್ಗಳವ್ವಳಿಸೆ ನುಡಿಯೆ ಮೇಲ್ವಾಯೆ ಲಲ್ಲೈಸೆ ಮೆಲ್ಪಿಂ*
*ಮೊದಲೊಳ್ ಸರ್ವಾಕ್ಷಿಪಾತಂ ಬೞಿಕದು ನಯನಾರ್ಧಾವಲೋಕಂ ಬೞಿಕ್ಕೊಂ*
*ದುದಯಂ ನೇತ್ರತ್ರಿಭಾಗಂ ಬೞಿ ಕಿಱಿದುದಪಾಂಗೇಕ್ಷಣಂ ತಾಂ ಬೞಿಕ್ಕಾ*
*ವುದುಮಿಲ್ಲಾಯ್ತುಗ್ಗಳಂ ಕಾಮದಿನಿನಿಯಳ ಸುಮ್ಮಾನದಿಂ ಮಾನಮಲ್ತೇ ೧೪*

ವ: ಇಲ್ಲಿ ಗರ್ವವ್ರೀಡಾ ಕೋಪ ಹರ್ಷ ಸಮ್ಮೋಹ ವ್ಯಭಿಚಾರಿ ಭಾವಂಗಳಿರ್ದುವಿಂತಾದೊಡ ಮಾಕ್ಷೇಪದಿಂ ಮತ್ತೊಂದೊಂದನ್ನೈದುತಿರ್ಪುದಱಿಂ ವ್ಯಭಿಚಾರಮಲ್ತು. ವ್ಯಭಿಚಾರಿಸಾತ್ವಿಕ ಭಾವಂಗಳ ವಿಚಾರಂ ಮುಂದೆ ಪೇೞ್ದಿರ್ದು ದಲ್ಲಿಯವಂತಿಳಿಗೆ. ಲಕ್ಷಣಗ್ರಂಥಂಗಳೆಲ್ಲಂ ಪಾಠಮಾದಲ್ಲದೆ ಸಭಾರಂಜಕನಾಗನ ದಱಿಂದಿವನೆ ಸಂಕ್ಷೇಪಿಸಿ ಸೂತ್ರಂಗಳಂ ಮಾಡಿ ಪೇೞ್ವೆಂ ಅವಂ ಮೊದಲಾದ ಸೂತ್ರೋದಾಹರಣಂಗಳಂ ಪಾಠಮಂ ಮಾಡಿಕೊಂಬು ದಾದಿ ಶಬ್ದಂಗಳ್ ಬಂದುದಱಿಂ ನವರಸಂಗಳ್ಗೆ ವೃತ್ತಿಯಂ ಬರೆದೆಂ ಆ ವೃತ್ತಿಗಳುಮಂ ವಿಚಾರಮುಮಂ ನೋಡಿ ಕೇಳಿ ತಿಳಿವುದು.

**ಸೂತ್ರ ೨**

*ಎಸೆಗುಂ ದೇಹಿಗೆ ಮನದೊಳ್*
*ಬೆಸುಗೆ ಮನಕ್ಕಿಂದ್ರಿಯಂಗಳೊಂದುಗೆ ಕೂಟಂ*
*ಎಸೆವಿಂದ್ರಿಯಮರ್ಥದೊಳೀ*
*ಕ್ಷಿಸೆ ಬೞಿಯಂ ನೆಗೞ್ದುಮರ್ಥಬೋಧೆಯೆ ತಱದಿಂ*

**ಸತ್ರ ೩**

*ಒದವಿರ್ದ ಚಿತ್ತದಿಂ ತೋ*
*ರ್ಪುದು ಭಾವಂ ಭಾವದಿಂದೆ ರಸಮುದಯಿಸುಗುಂ*
*ವದನಮದಂ ಪ್ರಕಟಿಪುದಾ*
*ವದನದೆ ರಸಮಿಂತಿದೆಂದು ತಿಳಿಗೆ ರಸಜ್ಞರ್*

**ಸೂತ್ರ ೪**

*ಭಾವಂ ಮನಃಪ್ರವೃತ್ತಿ ವಿ*
*ಭಾವಂ ರಸಪುಷ್ಟಿಯಂ ವಿಶೇಷಿಸುವುದೆ ದಲ್*
*ಭಾವದೆ ಪುಟ್ಟಿದರಸಮಂ*
*ಭಾವುಕರದ ನಱಿದು ಸವುವುದೆ ಅನುಭಾವಂ*

**ಸೂತ್ರ ೫**

*ಸ್ಥಿರತಾಗದತದಿಂ ಸ್ಥಾಯಿಯೆ*
*ಪರಿಚೇತೋವೃತ್ತಿ ತಾನೆ ಸತ್ವಮದಱಿನು*
*ಬ್ಬರಿಕುಂ ಸಾತ್ವಿಕಭಾವಂ*
*ಸ್ಥಿರತೆಯೊಳಿರದುದಱಿನಾಯ್ತು ಸಂಚಾರಿ ವಲಂ*

**ಸೂತ್ರ ೬**

*ಒದವಿದ ನಾಟಕದೊಳ್ ಕಾ*
*ವ್ಯದೊಳೀಕ್ಷಿಸೆ ಪೇೞಲಾದ ಭಾವಾದಿಯನೊ*
*ಳ್ಪೊದವೀಕ್ಷಿಪ ಕೇಳ್ವ ಸಭಾ*
*ಸದರ್ಗೆ ರಸೋತ್ಪತ್ತಿಯೆಂದು ಪೇೞ್ವರ್ಪಿರಿಯರ್*

ವ : ಆ ರಸಂಗಳನಭಿಯಿಪನೊಳಂ ಸಭ್ಯರೊಳಂ ರಸೋತ್ಪತ್ತಿಯಕ್ಕುಂ

**ಸೂತ್ರ** ೭
**ಸ್ಥಾಯಿಭಾವಂಗಳ್**

*ರತಿ ಪರಿಹಾಸಂ ಶೋಕೋ*
*ದ್ಗತಿಯುತ್ಸಾಹಂ ಪ್ರಕೋಪ ವಿಸ್ಮಯ ಭಯಸಂ*
*ತತಿ ವಿಜುಗುಪ್ಸತೆಯೆಂದು*
*ನ್ನತಿವಡೆಗುಂ ಸ್ಥಾಯಿಭಾವಮೊಪ್ಪುವ ಶಮಮುಂ*

**ಸೂತ್ರ** ೮
**ಸಾತ್ವಿಕಭಾವಂಗಳ್**

*ಪುಲಕಾಶ್ರುಸ್ವೇದಸ್ತಂ*
*ಭಲಯಸ್ವರ ಭೇದಕಂಪ ವೈವರ್ಣ್ಯಂಗಳ್*
*ಸಲೆ ಸಾತ್ವಿಕ ಭಾವಂಗಳ್*
*ವಿಲಸಿತಕವಿಮಾರ್ಗದಿಂದಮೆಂಟು ತೆಱಂಗಳ್*

**ಸೂತ್ರ** ೯
**ಅನುಭಾವಂಗಳ್**

*ಭ್ರುಕುಟಿಮುಖ ರಾಜಲೋಚನ*
*ವಿಕೃತ್ಯಧರಕಂಪನಾತ್ತರಚರಣನ್ಯಾ*
*ಸಕ ವಾಗಾದ್ಯಂಗಕ್ರಿಯೆ*
*ಸುಕವಿಗಳಿಂ ಪೇ ಟಿಪಟ್ಟುದಿಂತನುಭಾವಂ*

**ಸೂತ್ರ** ೧೦

**ವ್ಯಭಿಚಾರಿಭಾವಂಗಳ್**

*ಮತಿ ಲಜ್ಜಾ ವೇಗ ಶಂಕಾ ಮರಣ ಚಪಲತಾ ಹರ್ಷ ನಿರ್ವೇದ ದೈನ್ಯ*
*ಸ್ಮೃತಿ ಮೋಹಾಲಸ್ಯ ಗರ್ವ ಶ್ರಮ ಮದ ಜಡತಾ ಗ್ಲಾನಿ ಸಂಸುಪ್ತಿ ನಿದ್ರಾ*
*ಧೃತಿತರ್ಕೋನ್ಮಾದ ಬೋಧಾಮಯಸವಿಷಾದೋತ್ಸುಕಾವರ್ಷ ಚಿಂತಾ*
*ಸತತಾಸೂಯಾವಹಿತ್ಥೋಗ್ರಸುವಿಲಸದಪಸ್ಮಾರಕಾಖ್ಯಾನದಿಂದಂ*

ವ : ಈ ಮೂವತ್ತುಮೂಱುಂ ವ್ಯಭಿಚಾರಿಭಾವಂಗಳಿವಂ ಮುಂದೆ ಉದಾಹರಿಪೆಂ

**ಸೂತ್ರ** ೧೧

*ವರಶೃಂಗಾರಂ ಹಾಸ್ಯಂ*
*ಕರುಣಂ ವೀರಂ ಪ್ರರೌದ್ರಮದ್ಭುತಮಿರದು*
*ಬ್ಬರಿಪ ಭಯಾನಕ ಭೀಭ*
*ತ್ಸರಸಂಗಳಿವೆಂಟು ಮತ್ತೆ ನುತ ಶಾಂತರಸಂ*

**ಸೂತ್ರ** ೧೨

*ಹರಿತಂ ಶೃಂಗಾರ ವರ್ಣಂಸಿತರುಚಿ ಹಸಿತಂ ರೌದ್ರಮಾರಕ್ತಯುಕ್ತಂ*
*ಕರುಣಂ ಶ್ಯಾಮಪ್ರಭಾಂಗಂ ಪ್ರಚುರರುಚಿರ ಗೌರಂ ಸುವೀರಂ ಭಯಂ ಭಾ*
*ಸುರಧೂಮಾಕಾರಮತ್ಯದ್ಭುತಮದು ಕನಕಂ ಕೃಷ್ಣಾ ಶುಭ್ರಾನ್ವಿತಂ ವಿ*
*ಸ್ತರದಿಂ ಭೀಭತ್ಸುವೆಂಬೀ ಪರಿಯನಱಿಗೆ ತನ್ಮಾರ್ಗದೊಳ್ ಸತ್ಕವೀಂದ್ರರ್*

**ಸೂತ್ರ** ೧೩

*ನಿರುತಂ ಶೃಂಗಾರಸಾರಕ್ಕಧಿಪತಿ ಹರಿ ಹಾಸಕ್ಕಧೀಸಂ ಗಜಾಸ್ಯಂ*
*ಹರನಾಳ್ದಂ ನಾಡೆ ರೌದ್ರಕ್ಕೆಱೆಯನೆ ಕರುಣಕ್ಕಂತಕಂ ನೋಡೆವೀರ*
*ಕ್ಕರಸಿಂದ್ರಂಭೀತಿಗಂ ಮಿಟ್ಟುವೆ ಗುರು ಬಿದಿನಾಥಂ ಪೊದಟ್ದಿದ್ಭುತಕ್ಕಂ*
*ತೀರದಾ ಭೀಭತ್ಸುವಿಂಗಂ ಪ್ರಭುವೆನಿಸಿ ಮಹಾಕಾಳನಾಭೀಳಶೀಲಂ*

ವ : ಮತ್ತಮಲ್ಲಿ

*ಸಾರಂ ಸಂಸಾರದೊಳಬ*
*ಲಾರತ್ನಂ ಸಾರಮಲ್ಲಿ ಯೌವನಮದಜೊಳ್*
*ಸಾರಂ ಮಧುರಾಕಾರಂ*
*ಸಾರಂಮತ್ತಂತದರ್ಕಮನುಕೂಲರಸಂ೧೫*

ವೃತ್ತಿ : ಭೋಗರತ್ನಂ ಮೃಗಾಕ್ಷಿಯೆಂದಪ್ಪುದಜಿಂದೆಲ್ಲಾ ರಸದೊಳಂ ಶೃಂಗಾರರಸಮೆ ಲೋಕಕ್ಕೆ ಸೊಗಯಿಪ್ಪುದಾದ ಕಾರಣದೆ ಮೊದಲೊಳೀ ಶೃಂಗಾರರಸಂ ಪೇಟಿಪಟ್ಟುವಲ್ಲಿ ಮತ್ತೆ ಕೆಲಂಬರಾರ್ದ್ರಸ್ಥಾಯಿ ಸ್ನೇಹರಸಮೆಂಬರದುರತ್ಯಂತರ ದೊಳಂತರ್ಭಾವಂ. ಸ್ತ್ರೀ ಸ್ತ್ರೀಯರ್ಗೆ, ಪುರುಷರ್ ಪುರುಷರ್ಗೆ ಸ್ನೇಹಮಾದುದೆಂದೊಡ ದುವುಂ ರತಿಯೊಳಂತರ್ಭಾವಂ. ರಾಮಲಕ್ಷ್ಮಣರ್ ಮೊದಲಾದುವರಸ್ನೇಹಂ ಧರ್ಮವೀರದೊಳಂತರ್ಭಾವಂ. ಮಾತಾಪಿತೃಗಳೊಳ್ ಬಾಳಕಂ ಮಾಟ್ಪ ಸ್ನೇಹಂ ಭಯದೊಳಂತರ್ಭಾವಂ. ಪುತ್ರಾದಿಕಂ ಗಳಲ್ಲಿಯುಂ ವೃದ್ಧಂಗಂ ಇಂತಟಿವುದು. ಆರ್ದ್ರ ಸ್ಥಾಯಿಲೌಲ್ಯರಸಮೆಂದೊಡದುವುಂ ಹಾಸದಲ್ಲ ಮೇಣ್ ರತಿಯಲ್ಲಿ ಮೇಣನ್ಯತ್ರದಲ್ಲಿ ಅಂತರ್ಭಾವಂ. ಈ ರೀತಿಯಲ್ಲಿ ಭಕ್ತಿಮೊದಲಾದುವಂ ಯೋಜಿಸಿ ಕೊಳ್ವುದಿಂತು ರತ್ಯಾದಿಸ್ಥಾಯಿ ವೊಂಬತ್ತು. ಅಲ್ಲಿ ಶೃಂಗಾರಾದಿ ರಸವೊಂಬತ್ತವಜೊಳ್ ಸ್ಥಾಯಿಭಾವಲಕ್ಷಣಂ.

ಪರಸ್ಪರ ಚೇತೋಬಂಧಾತ್ಮಿಕಂ ರತಿ. ಚೇತೋವಿಕಾಸಂ ಹಾಸಂ. ಚಿತ್ತ ವೈಧುರ್ಯಂ ಶೋಕಂ. ಸಂರಂಭಸ್ಥಿರತ್ವಮುತ್ಸಾಹಂ. ಸ್ವಾಂತತೈಕ್ಷ್ಣ ಪ್ರಬೋಧಂ ಕ್ರೋಧಂ. ಹೃದ್ವಿಸ್ತಾರಂ ವಿಸ್ಮಯಂ. ಆಕೂತವೈಕ್ಲಬ್ಯಂ ಭಯಂ. ಮನಸ್ಸಂಕೋಚಂ ಜುಗುಪ್ಸೆ. ತೃಷ್ಣಾಕ್ಷಯಂ ಶಮಂ ಜುಗುಪ್ಸಾಲಸ್ಯೌಗ್ರ್ಯ ಭಾವವರ್ಜ್ಯಂ ಶೃಂಗಾರಂ.

**ಸೂತ್ರ ೧೪**

*ಆರಯೆ ರತಿಯಿಂದಂ ಶೃಂ*
*ಗಾರಂ ಸ್ತ್ರೀಪುಂಸಯೋಗದಿಂ ತೊಲಗಿಕೆಯಿಂ*
*ಸಾರಂ ಸಂಭೋಗಂ ಶೃಂ*
*ಗಾರಂ ಸವಿಯೆನಿಪ ವಿಪ್ರಲಂಭ ಸಮಾಖ್ಯಂ*

**ಸೂತ್ರ ೧೫**

*ಇತರೇತರ ರತಿಯುತ ದಂ*
*ಪತಿಗಳೆಯಾಲಂಬನಂ ವಿಭಾವಂ ಜ್ಯೋತ್ಸ್ನೋ*
*ನ್ನತ ಶಶಿನಂದನಗೀತಾ*
*ದಿ ತತೋದ್ದೀಪನ ವಿಭಾವಮುಂ ತಾನಕ್ಕುಂ*

**ಸೂತ್ರ ೧೬**

*ವಿನುತೇಕ್ಷಣಾದಿಯಾರಸ*
*ಕನುಭಾವಂ ನೆಗೆದ ರೋಮಹರ್ಷಾದಿಗಳಿಂ*
*ಪೆನ ಸಾತ್ವಿಕಂಗಳೆನಿಕುಂ*
*ಘನ ಧೃತಿ ನಿರ್ವೇದ ನಾದಿಸಂಚಾರಿ ವಲಂ*

ವೃತ್ತಿ : ಅನ್ಯೋನ್ಯಮಾಲಂಬನ ವಿಭಾವಂ ಆಲಂಬನ ಗುಣಮಾಲಂಬನ ಚೇಷ್ಟೆಯಾಲಂಬನಾ ಲಂಕರಣಮಾಲಂಬನ ತಟಸ್ಥಮೆಂದುದ್ದೀಪನ ವಿಭಾವಮಕ್ಕುಮವಂ ಮುಂದೆ ಕಾಣ್ಬುದು. ಆದಿಶಬ್ದದಿಂ ಮೇಖಲಾಸ್ಖಲನ ಶ್ವಸಿತ ಸಾಧ್ವಸ ಕೇಶಬಂಧನ ವಸ್ತ್ರ ಸಂಯಮನಾಮ ಲೇಪನಾಭರಣ ಮಾಲ್ಯಸಮಜ್ಞಿವೇಶನ ಸಮ್ಯಜ್ವಿಚಿತ್ರೇಕ್ಷಣ ಚಾಟು ಪ್ರಭೃತಿ ವಾಚಿಕ ಕಾಯಿಕವ್ಯಾಪಾರಾದಿ ಲಕ್ಷಣಮನುಭಾವಮದು ಪರಸ್ಪರಾಲಿಂಗನಾ ಲೋಕನ ಚುಂಬನಾದ್ಯನಂತಭೇದಂ. ರೋಮಾಂಚ ಸ್ವೇದ ಕಂಪಾಶ್ರು ಪ್ರಭೃತಿ ಸಾತ್ವಿಕಭಾವಂ. ಸುಖಮಯಧೃತಿ ನಿರ್ವೇದ ಹರ್ಷ ಲಜ್ಜಾ ಮದ ಗರ್ವಾದಿ ವ್ಯಭಿಚಾರಿಗಳಕ್ಕುಮಿ ವಱಿಂ ರತಿಸ್ಥಾಯಿಭಾವಂ ಚರ್ವ್ಯಮಾಣಮಾಗೆ ಶೃಂಗಾರರಸಂ

ವ : ಅಲ್ಲಿ ಸಂಭೋಗಕ್ಕೆ

*ಅಲರ್ಗಣ್ಪೆಂಡೇಱೆ ರೋಮಾಂಚನದೊದವಿನಿತುಂ ಥಾರುಥಟ್ಟಾಗೆ ಬಾಯೊಳ್*
*ಪಲವುಂ ನುಣ್ಮಾತುಗಳ್ ಲಾವುಗೆಯ ಕೊರಳನಲ್ಲಾಡಿದಂತಾಗೆ ಝುಮ್ಮೆಂ*
*ದೊಲೆ ವಂಗಂ ತೂಗೆ ಸುಯ್ಯಂತೊಳಗಿಱಿಯೆ ಬೆಮರ್ ಪೊಣ್ಮೆ ನಾಣ್ಪೂಸೆ ಕಾಮೋ*
*ಜ್ವಲದಿಂ ಕೈಮಿಕ್ಕ ಮಳ್ಜಂತ್ರಮನೆ ಕೆಡಪಿದಂತಿರ್ವರುಂ ಮೂರ್ಛೆವೋದರ್ ೧೬*

*ಅತಿಮಗ್ನಾ ಪಾಂಗ ಭೃಂಗಂ ಮುಖಸರಸಿಜದೊಳ್ ತನ್ನ ಬಾಹಾಭುಜಂಗಂ*
*ಸುತನು ಶ್ರೀಖಂಡ ಶಾಖಾಂತರದೊಳಧರ ಸದ್ವಿದ್ರುಮಂ ದಂತಮುಕ್ತಾ*
*ತತಿಯೊಳ್ ಪಾಣಿಪ್ರವಾಳಂ ಕುಚಕುಲಶದೊಳಿಂಬಾಗೆ ತಳ್ತಿರ್ದನಿಂತ*
*ಪ್ರತಿಮಂ ಲೀಲಾವತೀದೇವಿಯ ಹೃದಯದೊಳಾ ರೂಪಕಂದರ್ಪದೇವಂ ೧೭*

*ಪದಟೆಸಿದಂಗನೆಟ್ಟಿರದ ಕಣ್ಮಲರಾಱದ ಸೇದೆ ಮಗ್ಗುಲಿ*
*ಕ್ಕದ ಪುಳಕಂಗಲಿಂಗದ ಬೆಮರ್ ಮಿಡುಕೋಡದ ಪುರ್ವು ಬಾಗಿ ಬೀ*
*ಯದ ತುಟಿ ಕೆತ್ತುಗುಂದದ ಕುಚಂ ನಡುಕಂಗಿಡ ದೂರುಗಂದೆಯೇ*
*ಱದ ಕರಘಾತಮೊಪ್ಪೆ ಸುಸಿಲಂ ಸವಿದೊಯ್ಯನೆ ಜಾರೆ ಜಾರಿದಳ್ ೧೮*

ವ : ಮತ್ತಂ ರುದ್ರಭಟ್ಟನರಸ ಕಳಿಕೆಯ ಪದ್ಧತಿಯಿಂ ಶೃಂಗಾರೋದ್ದೀಪನಂ ಚತುಷ್ಕಮಾದುದಲ್ಲಿ

**ಸೂತ್ರ ೧೭**

*ಆಲಂಬನದುರುಗುಣ ಚೇ*
*ಷ್ಟಾಲಂಕೃತಿಯುಂ ತಟಸ್ಥಮೆನಿಪೀ ನಾಲ್ಕುಂ*
*ಮೇಲಾದುದ್ದೀಪನಮಿ*
*ನ್ನಾಲಂಬನ ಗುಣಮೆ ರೂಪಯೌವನ ಮುಖ್ಯಂ*

ವ : ಆಲಂಬನ ಗುಣಕ್ಕೆ

*ಕರುವಿಟ್ಟಂ ಕಾಮದೇವಂ ರತಿಯತಿಶಯದಿಂ ಬಣ್ಣವಿಟ್ಟಳ್ ಬಸಂತಂ*
*ಬರೆದಂ ಸರ್ವಾಂಗಮಂ ಕಣ್ದೆಱೆದನೊಸೆದು ಶೀತಾಂಸು ಚೈತ್ರಾನಿಲಂ ತೀ*
*ವಿರೆ ಜೀವಂಬೊಯ್ದನಂತಲ್ಲದೊಡೆ ಸೊಗಯೋಪೀ ರೂಪಮೀ ಬಣ್ಣಮೀ ಮೆ*
*ಯ್ಸಿರಿಯೀ ಕಣ್ಚೆಲ್ಲಮೀ ಭಾವಕಮೊಗೆಯದೆನಲ್ ಕಾಂತೆ ಕಣ್ಗೆದ್ದಮಾದಳ್* ೧೯

*ಕಡೆದವೊಲಿರ್ಪ ಪೆರ್ಮೊಲೆ ತೊದಳ್ನುಡಿ ಮೆಲ್ನಡೆ ಚೆಲ್ವನಾಂತ ತೆ*
*ಳ್ನಡು ನಳಿತೋಳ್ ಪೊದಟ್ಟಧರಮೊತ್ತದೆಯುಂ ನಿಱಿಗೊಂಡ ಚುಂಬು ಸೋ*
*ರ್ಮುಡಿ ಕಡುನುಣ್ಪುವೆತ್ತತೊಡೆ ತುಂಬಿದ ಪೀನನಿತಂಬಬಿಂಬವೊ*
*ರ್ಕುಡಿತೆಯೆನಿಪ್ಪ ಕಣ್ ಕರಮೆ ರಂಜಿಸೆ ಬಂದರಿಳೇಶಕಾಂತೆಯರ್*

*(ಇದು ರೂಪಂ)* ೨೦

*ಮಗಮಗಿಸಿತ್ತು ತೋಳ ಮೊದಲಾನನಮುಳ್ಳರಲಾಯ್ತು ಕಣ್ಮಲರ್*
*ಮಿಗೆ ನಿಡಿದಾಯ್ತು ಮೂಡಿದುವು ಪೇರುರದೊಳ್ ಮುಕುಳಸ್ತನಂಗಳೂ*
*ರುಗಳೆಡೆ ನುಣ್ಪುನಾಂತುದು ಬಸಿಱ್ಪಡವಾದುದು ಬಾಸೆ ನೀಳ್ದುದಾ*
*ಕೆಗೆ ಬರೆ ಜವ್ವನಂ ಬಟಿಕೆ ಕಾಮನ ಕೈಗೆ ಕಾರ್ಮುಕಂ* ೨೧

*ಮನದ ವಿವೇಕಂ ಪೀನ*
*ಸ್ತನದೊಳ್ ನಾಲಗೆಯ ಮಾತು ಕಣ್ಣೊಳ್ ಕರಂ ತ*
*ರ್ಜನಮುಮರೆ ನಿಮಿರ್ದ ಪುರ್ವಿನ*
*ಕೊನೆಯೊಳ್ ನೆಲಸಿದುದು ಯೌವನಂ ನೆಲಸಲೊಡಂ*

*(ಇದಾಲಂಬನಗುಣಂ ಯೌವನಂ)* ೨೨

**ಸೂತ್ರ ೧೮**
*ತರದಾಲಂಬನ ಚೇಷ್ಟೆಯೆ*
*ಪರ ತದನುಭವಂಗಳೆಂದೆರ ಟ್ತೆಱನಲ್ಲಿ*
*ನ್ನೆರಡನೆಯದೇಕರೂಪಂ*
*ಪರಮೆಂಬುದು ವಿಂಶತಿಪ್ರಕಾರಮೆನಿಕ್ಕುಂ*

ವ: ಅಲ್ಲಿಯಾಲಂಬನಾನುಭವಮೆ ತದನುಭವಮದಂ ಮೊದಲೆ ಪೇೞ್ವೆಂ

*ಇನಿಯನನಟ್ಕೆಱಿಂ ಚದುರೆ ನೋಡುವ ನೋಡಿಪ ಲಲ್ಲೆವಾತಿನೊಂ*
*ದಿನಿದನೆ ಸೂಸುವಂತೆ ನೆಗೞ್ದೋದಿಪ ತಾನೊಸೆದಪ್ಪುವಪ್ಪೆ ಬಿ*

*ಮ್ಮನೆ ಸವಿಗೆಯ್ದು ಚುಂಬಿಸುವ ಚುಂಬನಕಾಂಪ ವಿನೋದಕೇಳಿಯೊಳ್*
*ಮನಸಿಜ ತಂತ್ರದೀಕ್ಷೆಯಧಿದೇವತೆಯಂತವಳಾದಮೊಪ್ಪಿದಳ್        ೧೩*

*(ಇದು ತದನುಭವಂ)*

ವ : ಇನ್ನಾ ಪರಮೆಂಬುದಜೊಳಗೆ

**ಸೂತ್ರ ೧೯**

*ವರ ಭಾವ ಹಾವ ಹೇಳೆಗ*
*ಳುರುಶೋಭಾಕಾಂತಿ ದೀಪ್ತಿಮಾಧುರ್ಯಂಗಳ್*
*ತರದಿಂ ಪ್ರಾಗಲ್ಭ್ಯೌದಾ*
*ರ್ಯರುಚಿರ ಧೈರ್ಯಂಗಳೆಂಬಿವೀರ್ಯೆದುತೆಱಂ*

**ವ :** ಅಮೃತಾನಂದಿಯಿಂದೀ ಭಾವಾದಿತ್ರಯಂಗಳಂಗ ಸಮುದ್ಭವಂಗಳ್. ಶೋಭಾದಿಸಪ್ತಕಂ ಶೃಂಗಾರ ಭಾವಜಂಗಳ್. ಮುಂದಣ ಆಪತ್ತುಂ ಸ್ವಾಭಾವಿಕಂಗಳ್

**ಸೂತ್ರ ೨೦**

*ವಿಲಸಿತ ಬಾವಂ ಮನದ ಮೊ*
*ದಲ ವಿಕ್ರಿಯೆ ಮುದಣಿಸೆವಲಂಕಾರಕ್ಕಂ*
*ದಲಿದುಂ ಸಿಂಗರದೊಳ್ ತಾಂ*
*ಸಲೆ ನೇತ್ರ ಭ್ರೂಮಿಕಾರಮಿತ್ತೊಡೆ ಹಾವಂ*

**ಲಕ್ಷ್ಯಂ**

*ವನರುಹನೇತ್ರೇಯೀ ಕುವರಿ ಲಕ್ಷ್ಯಂ ನಾಣಚಿದಪ್ಪಿದ ಕಾಮದಿಂದ ಮಾ*
*ವನುಮನದೆಂದಿನಂತೆ ನೆಟೆ ನೋಡದ ಸೋಂಕದಳಾದಳಾನತಾ*
*ನನೆ ರತವಾರ್ತೆಯಂ ಸಖಿಯರೆಂದೊಡೆ ಲಾಲಿಸಳೀಗಳೀಗಳೆಂ*
*ದೆನೆ ತಳೆಯಲ್ ಸ್ವಯಂವರಮನಾಱಳೆ ಮಾಡುಗೆ ಭೂಪನೋಪಳಿಂ        ೧೪*

*ಮೀಸಲ್ ವಾಯ್ದೆಱೆ ನಗೆ ಪೊಱ*
*ಸೂಸದ ಕಣ್ಣ ಳಸದಲಸದೊಳ್ದೊಡೆ ಲಜ್ಜಾ*
*ಭಾಸಮುಮೋಸರಿಸದ ಬಗೆ*
*ಮಾಸರವಾಯ್ತುವಳೊಳೊಗೆದ ಕೊಡುಗೂಸತನಂ        ೧೫*

*(ಇದು ಭಾವಂ)*

*ಎಳೆಯುಳಿರುತೆನ್ನ ಪಕ್ಕದೊ*
*ಳೆಳಸಿ ಮನೋಜಾತರೂಪತಾನೆನ್ನಕೆ ಕ*
*ಣ್ಗೊಳಿಪೆ ನೆವದಿಂದೆ ನಿನ್ನಂ*
*ಬಳೆದನುರಾಗದೊಳೆ ನೋಡಿದಳ್ ಕಡೆಗಣ್ಣಿಂ     ೧೬*

*(ಇದು ಹಾವಂ)*

**ಸೂತ್ರ ೧೧**

*ಅಂತೆಸೆವಾ ಹಾವಮದ*
*ತ್ಯಂತ ವ್ಯಕ್ತಿಯನೆ ತಾಳ್ದಿ ಶೃಂಗಾರಮನೊ*
*ಲ್ದಾಂತುದ್ದೋತಿಸಿದೊಡೆ ಸಲೆ*
*ಕಾಂತ ಪೆಸರಿಂದೆ ಹೇಳೆಯೆಂಬುದು ಸಲ್ಗುಂ*

*ನಿಮಿರ್ದುವು ಪೊಲೆದುವಳುಂಕಿದು*
*ವಮರ್ದುವು ಚುಂಬಿಸಿದುವಪ್ಪಿದುವು ಸಂಭ್ರಮದಿಂ*
*ಸಮದೃಷ್ಟಿಯಾಗಿ ಸಿಲ್ಕಿದು*
*ವೆಮೆಯಿಕ್ಕಲ್ಮಱೆದವಳ ಧವಳಕಟಾಕ್ಷಂ          ೧೭*

ವ : ಮತ್ತಂ

*ಹರಿನೀಲಚ್ಛವಿ ಪುಂಡರೀಕನಯನಂ ವಿಸ್ತೀರ್ಣ ವಕ್ಷಸ್ಥಲಂ*
*ಪರಿವೃತ್ತಾಯತ ಬಾಹು ಪೀವರ ನಿತಂಬಂ ಗಂಡರೊಳ್ ನೀರನೆಂ*
*ಬರ ಮಾತಂ ಕಿವಿಯಾಱೆ ಕೇಳ್ದು ಕಿವಿವೇಟಂಗೊಂಡು ಕಣ್ಣಾರ್ವಿನಂ*
*ಹರಿಯಂ ನೋಡಿದಳಾಕೆ ತನ್ನ ಕಡೆಗಣ್ಗಳ್ ಬೀಱೆ ಬೆಳ್ದಿಂಗಳಂ     ೧೮*

*(ಇದು ಹೇಳೆ)*

**ಸೂತ್ರಂ ೧೨**

*ರೂಪೋಪಭೋಗ ತಾರು*
*ಣ್ಯಾಪೂರ್ಣದಿನೊಗೆದಲಂಕೃತಿಯೆ ಶೋಭೆ ವಲಂ*
*ಆ ಪದೆದ ಶೋಭೆ ರಾಗ*
*ವ್ಯಾಪಾರದೆ ನಿಬಿಡಮಾಗೆ ಕಾಂತಿಯೆನಿಕ್ಕುಂ*

**ಲಕ್ಷ್ಯಂ**

*ನಯನಾಕರ್ಷಣ ಮಂತ್ರದೇವತೆಯ ಚೇತೋಜಾತಸಾಮ್ರಾಜ್ಯಲ*
*ಕ್ಷ್ಮಿಯ ಲಾವಣ್ಯರಸಾಂಬುರಾಶಿಯ ಲಸದ್ವಿದ್ಯಾಧರಾಧೀಶಪು*
*ತ್ರಿಯ ದಿವ್ಯಾಂಗಮನೊಲ್ದು ರನ್ನದೊಡವಿಂ ಕೈಗೆಯ್ದು ಪೆಂಪಿಂ ವಿದ*
*ಗ್ಧೆಯರಂದೇನೆಮೆಯಿಕ್ಕದೀಕ್ಷಿಸಿದರೋ ಕೈಗಣ್ಮೆದೊಂದಟ್ತೆಯಿಂ ೧೯*

*(ಇದು ಶೋಭೆ)*

*ಎಳೆಮಿಂಚಿದೊಪ್ಪವಿಟ್ಟಂತಮರ್ದಿನ ಕಲೆ ರೂಪಾಂತುದೆಂಬಂತೆ ಮುತ್ತಂ*
*ತೊಳದಿಟ್ಟಂತಂಗಜಾತಂ ಮಸೆದು ಪಿಡಿದ ಕೂರ್ವಾಳಿದೆಂಬಂತೆ ಡಾಳಂ*
*ಪೊಳೆಯುತ್ತುಂ ಸುತ್ತಲುಂ ನೋಟ್ಪರ ಬಗೆಗೆ ಭಯಂ ಪುಟ್ಟೆ ತಳ್ಪೊಯ್ಯತತ್ಕೋ*
*ಮಳೆ ಚೆಲ್ಪಿಂದೊಪ್ಪೆ ಬರ್ಪಂಗಜನ ಗಜದವೊಲ್ನಾಡೆ ಕಣ್ಗೆಡ್ಡಮಾದಳ್*

*(ಇದು ಕಾಂತಿ) ೨೦*

**ಸೂತ್ರಂ ೧೩**

*ಕಾಂತಿಯೆ ಬಿತ್ತರಮಾಗಲೊ*
*ಡಂ ತಾಂ ದೀಪ್ತಿಯೆಯೆನಿಕ್ಕುಮದ ಹೀನ ದ್ರ*
*ವ್ಯಾಂತರಯೋಗದೊಳಂ ಚೆ*
*ಲ್ವಂ ತಾಳ್ದಿದ ರಮ್ಯತಾಗುಣಂ ಮಾಧುರ್ಯಂ*

**ಲಕ್ಷ್ಯಂ**

*ತೊಳ ತೊಳಪ ಕೋಮಲಾಂಗದ*
*ಬೆಳಗಿಂ ಮರದೆಲೆಯ ಕಟ್ಟೆಲೆಯನಟ್ಟುತೆ ಕೋ*
*ಮಳೆ ಕಾಮನ ದೀವಿಗೆವೋಲ್*
*ತಳರ್ದಳ್ ನಿಜಪತಿಯ ಕೂಡೆ ನಂದನವನದೊಳ್ ೨೧*

ವ : ಮತ್ತಂ

*ಬಿಸಿಲಂ ಲಾವಣ್ಯದಿಂ ನುಣ್ಪಡರೆ ಬೆಳಗುತುಂ ನೀಳ್ದಪಾಂಗಂಗಳಿಂ ನು*
*ಣ್ಣಿಸುತುಂ ದಿಕ್ಕಾಮಿನೀಸಂಕುಲಮನಮಲಹಾಸ ಪ್ರಭಾಪೂರದಿಂ ಪು*
*ಟ್ಟಿಸುತುಂ ತಳ್ತಚ್ಚವೆಳ್ದಂಗಳನಯುವ ಶೃಂಗಾರ ವಾರಾಶಿಯೊಳ್ತೇಂ*
*ಕಿಸುತುಂ ವಕ್ತ್ರೇಂದುವಂ ಬಂದುದು ನೆಱೆದಿದಿರಂ ವಾರನಾರೀ ನಿಕಾಯಂ*

*(ಇದು ದೀಪ್ತಿ) ೨೨*

*ಕಱೆಯಿರೆಯುಂ ಶಶಿಕಳೆ ಸಿರಿ*
*ನೆಱೆದಂತಿರೆ ನಾರಸೀರೆಯುಟ್ಟೊಡಮಾ ಪೆಣ್*
*ನೆಱೆ ರಂಜಿಸುತಿರ್ದಳ್ ಮನ*
*ದೆಱೆಯನ ಸಂಗಡದೊಳಟ್ಟೆಯಿಂದಾಯೆಡೆಯೊಳ್ ೨೨*

*(ಇದು ಮಾಧುರ್ಯಂ)*

**ಸೂತ್ರಂ ೧೪**

*ಎನಸುಂ ಲಜ್ಜೆಯಿನಾದ ಭೀತಿಯ ತವಿಲ್ ಪ್ರಾಗಲ್ಭ್ಯ ಮಾ ಪೆಣ್ಣ ಪೆಂ*
*ಪೆನಿತಾಯಾಸದೊಳಂ ಲಸದ್ವಿನಯ ಬಾಹುಳ್ಯಂ ದಲೌದಾರ್ಯಮೀ*
*ಘನ ಚಾಪಲ್ಯದ ಪೆರ್ಮೆಯಿಂ ಕಿಡದ ಚೇತೋವೃತ್ತಿ ತಾಂ ಧೈರ್ಯಮಿಂ*
*ತೆನೆ ಸಂದೊಪ್ಪಿತು ಪೆರ್ಮೆವೆತ್ತ ಸುಕವೀಂದ್ರಪ್ರೋಕ್ತಮಾರ್ಗಂಗಳಿಂ*

**ಲಕ್ಷ್ಯಂ**

*ಪೊಸಸುಸಿಲೊಳ್ ನೃಪಾತ್ಮಜೆ ವಿದಗ್ಧೆಯವೋಲ್ ಪ್ರಿಯನೊಲ್ದು ಮೇಳಿಪೊಂ*
*ದೆಸಕದೆ ನಾಣನೊಕ್ಕು ಗತಭೀತಿಯಿನಪ್ಪುವ ಮುದ್ದುಗೆಯ್ವ ಚುಂ*
*ಬಿಸುವ ಮರಲ್ವ ಮೆಯ್ಗುಡುವ ಮೆಯ್ಮಱೆವೆಟ್ಟ ಜುವಾಜುವಾಸೆಗೆ*
*ಯ್ವಸಿಯಳದೇಂ ಮನಂಬಿಡಿದಳೋ ಚದುರಿಂ ಸುದತೀ ಮನೋಜನಾ (ಇದು ಪ್ರಾಗಲ್ಭ್ಯಂ) ೨೪*

*ನಡೆದೊರ್ಗಾವುದಮಂ ಪ್ರಿಯಂಬೆರಸು ಬೇರ್ನಾಡಿಂಗೆ ಪೋದಂದು ಮೆ*
*ಲ್ಲಡಿಗಳ್ ನೊಂದು ಸಿರೀಷ ಕೋಮಳೆಯಳುಂಬಂ ಸೇದೆವಟ್ಟಿರ್ದುಮಾ*
*ಗಡೆ ತನ್ನೊಂದು ಬಟಲ್ಕೆಯಂ ಮಱೆದು ಚಿತ್ತಾಧೀಶನಂಪ್ರಿದ್ವಯಂ*
*ಬಿಡಿದೊತ್ತುತ್ತುಪಚಾರವಾಗಲಮರ್ದೇಂ ಚಿತ್ತಕ್ಕೆ ತಣ್ಪಿತ್ತಳೋ (ಇದು ಔದಾರ್ಯಂ) ೨೫*

*ಕೂರಿಸಬೇಡವಂಗೆಳಸಿ ಮುಂ ಬಸವಾದರ ಕಾಮದಾಹಮಂ*
*ನಾರಿ ನಿರೀಕ್ಷಿಸೆಂದ ಸಖಿವಾಕ್ಯಮನೊಲ್ಲದೆ ತಂದೆ ತಾಯ್ಗಳಂ*
*ದೂರಿಸಿ ತಂಗಿಯೇಂ ಸುಖಮನುಂಡಪೆಯೆಂಬೆನೆ ನಿನ್ನಮಾತು ತಾಂ*
*ಸೇರದು ಮಾಟಿದೆಂ ಮನಮನೆಂದಪೆ ಧೈರ್ಯಮಿದೆಂತು ಸಾರ್ದುದೋ ೨೬*

ವ : ಮತ್ತಂ

*ಅನಿತಂಗೆಯ್ದುಟಿಯೆಂಬ ತಾಯ ನುಡಿಯ ಕಯ್ಕೊಂಡೆನೇ ನಂಟರೀ*
*ತನ ನಣ್ಪಂ ಬಿಸುಡೆಂದೊಡಾ ನುಡಿಯ ನಾನೇಗೊಂಡೆನೇ ನಾಣನೆ*

*ಳ್ವನಿತಂ ಕಾದೆನೆ ಬೇಡಿದೊಂದು ಪುರುಳಂ ಮಾರ್ಕೊಂಡೆನೇ ಬೇಡ ಬೇ*
*ಡೆನೆ ಕಂಡಾನೆರೆದಟ್ಟೆಯುಂ ಬಗೆಯನೇಂ ಗಂಡಂ ಮನಂಗಂಡನೋ ( ಇದು ಧೈರ್ಯಂ)    ೩೭*

**ಸೂತ್ರಂ ೧೫**

*ಸತಿಗಾತ್ಮ ಕೇಳಿ ಮೊಟ್ಟಾ*
*ಯಿತ ಬಿಬ್ಬೋಕಾಖ್ಯಲಲಿತ ಲೀಲಾಕಿಳಿಕಿಂ*
*ಚಿತ ವಿಚ್ಛಿತ್ತಿವಿಲಾಸವಿ*
*ಹೃತ ವಿಭ್ರಮಕುಟ್ಟಮಿತಮೆನಲ್ ಪತ್ತುತೆಱಂ*

ವ : ಇವು ಸ್ವಾಭಾವಿಕಂಗಳೆಂದಱಿವುದು.

ವ : ಇವು ಸ್ವಾಭಾವಿಕಂಗಳೆಂದಱಿವುದು

**ಸೂತ್ರಂ ೧೬**

*ಕೃತಚಿತ್ರೋತ್ತಮ ಬುದ್ಧಿಯಿಂ ರಮಣಿ ಕಾಂತಧ್ಯಾನದಿಂದಂಗಭಂ*
*ಗತೆಯಂ ಪೆತ್ತುದಱಿಂದಮಿಂತೆರಡು ಭೇದಂ ನೋಡೆ ಮೊಟ್ಟಾಯಿತಂ*
*ಪತಿಯೊಳ್‌ಬೆಬ್ಬೊಲವಂ ಪರರ್ಗಱಿಪದಂತಿರ್ಪಂಗನಾ ಕೃತ್ಯದಿಂ*
*ಧೃತಗರ್ವಾದಿಯಿನಾದನಾದರತೆಯಿಂ ಬಿಬ್ಬೋಕಮಿಂತಿರ್ತೆಱಂ*

ವ : ಅಲ್ಲಿ ಪೂರ್ವಾರ್ಧಕ್ಕೆ

**ಲಕ್ಷ್ಯಂ**

*ಇನಿಯನೆ ನೀನೆ ನೀಂ ನೆಗೆೞ್ದಂದಮನೀಕ್ಷಿಸೆನುತ್ತೆ ಕೂರ್ತ ಕಾ*
*ಮಿನಿ ಕೃತದೋಷಿಯಾದವನೆ ಭೋಂಕೆನೆ ತನ್ನ ಪದಕ್ಕೆ ನಮ್ರನಾ*
*ದನುವುಮನಾಗಳೀೞ್ದೊದೆದು ತಾಂ ಮಿಗೆ ಜರ್ವುವ ರೀತಿಯಂ ಜಲ*
*ಕ್ಕನೆ ನಿಜಹಸ್ತದಿಂ ಬರೆದು ತೋಱಿದಳೊಪ್ಪುವ ಭಾವಚಿತ್ರದಿಂ       ೩೮*

ವ : ಮತ್ತಂ

*ಒಡವೋದರ್ ಬಂದರೆಂಬೀ ನುಡಿಯನೆ ಪೆಱರಿಂ ಕೇಳ್ದು ಕೇಳ್ದಂತೆ ಸಾಸಿ*
*ರ್ಮಡಿ ರಾಗಂ ತನ್ನೊಳಾಗಳ್ ಪುದಿದಿರೆ ನಿಜಚಿತ್ತೇಶ್ವರಂ ಬಾರನೆಂಬೀ*
*ಪಡಿವಾತಂ ಕೇಳ್ದು ಕೇಳ್ದಂತೆರ್ದೆ ಪಡಿದೆಱೆದಂತಾಗೆ ಬೆಂಬಿಟ್ಟವಳ್ ನೂ*
*ರ್ಮಡಿ ಮುನ್ನಿಂ ಕುಂದಿದಳ್ ತತ್ಕ್ಷಣದೊಳೆ ಮದನಾಗ್ನಿ ಪ್ರಸಂತಾಪದಿಂದಂ          ೩೯ ( ಇವೆರಡುಂ ಮೊಟ್ಟಾಯಿತಂ)*

*ಪರಿದೆಯ್ದಲ್ಕೆಯ್ದಿ ನೋಡಲ್ ನುಡಿಸಲೊಡರಿಸಲ್ಕಾಗಳುಂ ತೀಡುವಂತಃ*
*ಕರಣವ್ಯಾಪಾರಮಂಮೆಲ್ಲನೆ ಮಱೆಸಿ ತದಾಲೋಕನಾಲಾಪದಿಂದಂ*
*ಪರಿಹಾಸಂಗೆಯ್ದು ತನ್ನೋಪನೊಳಭೀಮತ ಸಂಸಿದ್ಧಿಯಂ ತೀರ್ಚಿಕೊಂಡೆ*
*ಲ್ಲರುಮಂ ದೂಱುತ್ತುಮಿರ್ಪಂಗನೆಯರ ಬಗೆಯಂ ಭಾವಿಸಲ್ ಬಲ್ಲನಾವಂಳಂ*

ವ : ಮತ್ತಂ

*ಅಣಿಯರಮೆನ್ನಂ ನಲ್ಲಂ*
*ಪ್ರಣಯದಿನೇಳಿಸುತೆ ಸೊಂಕುತಂ ಬರೆ ಸಖಿ ಕೇ*
*ಳಣಿಯರದಿಂದವನಂ ಕಡೆ*
*ಗಣಿಸಿದೆನೇಂ ತಪ್ಪುಗಂಡು ಸ್ವೈರಿಪರೊಳರೇ ೪೧ (ಇವೆರಡುಂ ಬಿಬ್ಬೋಕಂ)*

**ಸೂತ್ರಂ ೨೭**

*ಭಾಸುರ ಸುಕುಮಾರಾಂಗ*
*ನ್ಯಾಸಂ ಲಲಿತಂ ಪ್ರಿಯಾಚರಣಮಂ ನಗೆಯಿಂ*
*ಲೇಸಾಗಭಿನಯಿಪೊಡೆ ಕೇ*
*ಳಾಸುದತಿಯ ನೆಗೞ್ದ ಲೀಲೆ ಲೀಲೆಯೆನಿಕ್ಕುಂ*

**ಲಕ್ಷ್ಯಂ**

*ನಗೆಗಣ್ ಸೂಸೆ ವಿಲಾಸಮಂ ನಗೆಮೊಗಂ ಲಾವಣ್ಯಮಂ ಬೀಱೆ ಸಾ*
*ವಗಿಸುತ್ತಂ ಕಚಬಂಧಮಂ ಶಿಥಿಲನೀವೀಬಂಧಮಂ ಕಾಂಚಿಯೊಳ್*
*ತೆಗೆಯುತ್ತುಂ ಸ್ಮರಮಂತ್ರದೇವತೆಯವೋಲ್ ಬಾಹಾಲತಾಂದೋಳನಂ*
*ಬಗೆಯಂ ಬಲ್ಸೆಱೆಗೆಯ್ಯೆ ಬಾಲೆ ಮೆಱೆದಳ್ ಲೀಲಾಪದನ್ಯಾಸಮಂ ೪೨*

ವ : ಮತ್ತಂ

*ಕುಡುವುರ್ವಂ ನಸುನೀವುತಂ ತಿಳಕಮಂ ತಿರ್ದುತ್ತುಮಾಸ್ಯಾಬ್ಜಮಂ*
*ತೊಡೆಯುತ್ತುಂ ಕುಟಿಲಾಲಕಾವಳಿಗಳಂ ಸಯ್ತೊತ್ತಿ ಚೆಲ್ವಾಗಿ ನೇ*
*ರ್ಪಡಿಸುತ್ತುಂ ಮದಿರಾಲಸೇಕ್ಷಣೆ ಮದಸ್ತಂಭೇರಮಾಕಾರದಿಂ*
*ನಡೆ ಪಾಡುತ್ತುಮುಪಾಂಗಣ ಪ್ರಘಣದೊಳ್ ತನ್ವಂಗಿ ಕಣ್ಗೊಪ್ಪಿದಳ್ (ಇದು ಲಲಿತಂ) ೪೩*

*ಪ್ರಿಯೆ ತನ್ನೋಪನ ಕೆಯ್ತುಮಂ ನುಡಿವ ಚಾತುರ್ಯೋಕ್ತಿಯಂ ನೋಟ್ಟಿ ಭಂ*
*ಗಿಯನಿರ್ಪಂದವನಾಳಿಗೊಳ್ವ ತೆಱದಿಂ ತಾನಟ್ಟಿಱಿಂ ಚಿತ್ತದೊಳ್*

*ನಿಯತಂ ಭಾವಿಸಿ ತಾನೆ ಮಾಡಿಯುಮದಂ ಕೊಂಡಾಡಿಯುಂ ಕೂಡೆ ನೋ*
*ಡಿಯುಮಿರ್ದೊಪ್ಪಿಯುಮಿಂತದೇಂ ನಲಿದಳೋ ತತ್ಕಾಂತೆಯೇಕಾಂತದೊಳ್ಳಳ ( ಇದು ಲೀಲೆ)*

**ಸೂತ್ರಂ ೧೮**

*ಸಂತೋಷ ರೋಷ ಭಯ ನಯ*
*ಚಿಂತಾದಿಗಳಣಮೆ ನೆಱೆಯೆ ಕಿಳಿಕಿಂಚಿತಮೊ*
*ಳ್ವಾಂತಲ್ಪಾಭರಣದೆ ಚೆ*
*ಲ್ವಂ ತಾಂ ತಲೆದವಳ ಕೇಳಿ ವಿಚ್ಛಿತ್ತಿ ವಲಂ*

**ಲಕ್ಷ್ಯಂ**

*ಆತನಿಗಾದ ಬೇಟಮಭಿಜಾತತೆಯಿಂ ನೆಗಟ್ದೊಂದು ಧೈರ್ಯಮಂ*
*ತಾತನಿನಾದ ಭೀತಿ ನಿಜಬಾಲ್ಯದಿನುಣ್ಮಿದ ಲಜ್ಜೆಹೃತ್ಸಮು*
*ದ್ಭೂತನಿನಾದ ಸೊರ್ಕು ಸುಚರಿತ್ರತೆಯಿಂ ಸಲೆ ಸಂದ ಸೌಷ್ಠವಂ*
*ಚೇತದೊಳುಣ್ಮೆ ಕನ್ನೆ ತಳೆದಳ್ ಕಿಲಕಿಂಚಿತ ಭಾವಚೇಷ್ಟೆಯಂ        ೪೫ ( ಇದು ಕಿಳಿಕಿಂಚಿತಂ)*

*ಕಳೆ ತುಡಿಸಲ್ಕದೇಂ ತುಡುಗೆಯಂ ಸಹಜಾಂಗದ ಕಾಂತಿಯಿಂದಮ*
*ಗ್ಗಳಮೆ ವಿಲೇಪಂಗಳಿವು ಬೇಟ್ಕುಮೆ ಸಾಲದೆ ಸಾಜದಿಂ ಮನಂ*
*ಗೊಲಿಸುವ ಗಂಧಮಾಸತಿಗೆ ಮಂಗಳ ಸಾಧನಮಾದಹಾರಮುಂ*
*ತಿಳಕಮುಮಾರುಮಂ ಮಸುಳಿಸಲ್ ನೆಱೆಗುಂ ಮೃಗಶಾಬನೇತ್ರೆಯಾ             ೪೬ ( ಇದು ವಿಚ್ಛಿತ್ತಿ)*

**ಸೂತ್ರಂ ೧೯**

*ವಾಸಾಸನಾದಿಯಂಗ*
*ನ್ಯಾಸಾದಿ ವಿಶೇಷಮಂದು ವಿಲಾಸಂ ನಾಣಿಂ*
*ಲೇಸಾಗಿ ನುಡಿಯೆ ತಕ್ಕುದ*
*ನಾ ಸತಿ ನುಡಿಯದ ಗಭೀರತೆಯೆ ವಿಹೃತಾಖ್ಯಂ*

**ಲಕ್ಷ್ಯಂ**

*ಕಳಕಾಂಚೀಕ್ಷುದ್ರಘಂಟಾನಿನದಮೆಸೆವಿನಂ ಬಂದು ತನ್ವಂಗಿ ಸೌಧ*
*ಸ್ಥಳದೊಳ್ ಕುಳ್ಳಿರ್ದ ತನ್ನೋಪನ ತೊಡೆಯನವಷ್ಟಂಭದಿಂದೇಱೆ ವೀಣಾ*
*ಕಳನಾದಂ ಕಂಠನಾದಕ್ಕನುಗತಮೆನೆ ತದ್ವಲ್ಲಕೀ ವಾದನ ವ್ಯಾ*
*ಜಳತಾಂಗನ್ಯಾಸದೊಳ್ಪಂ ತಳೆದಿರೆ ಮುದದಿಂ ಪಾಡಿದಳ್ ಕಾಂತೆಯೊರ್ವಳ್ ೪೭ ( ಇದು ವಿಳಾಸಂ)*

*ಎನ್ನನೆ ಕೂರ್ತು ಮೆಲ್ಲರದೆ ಪಾಡುತೆ ಪಟ್ಟಿರೆ ಕೇಳುತಾಗಳಾ*
*ನೆನ್ನದೆ ಪಾಡು ಪಾಡೆನುತೆ ಬರ್ಪುದು ಮೆಟ್ಟಿನತಾನನಾಬ್ಜದಿಂ*
*ದೆನ್ನೊಳದೇನುಮಂ ನುಡಿಯದುಂಗುಟದಿಂ ಬರೆಯುತ್ತೆ ಭೂಮಿಯಂ*
*ರನ್ನದ ಕಂಕಣಂದಿರಿಪುತುಂ ನೆಱೆ ನಿಂದಳನೆಂದು ಕಾಣ್ಬೆನೋ ೪೮ (ಇದು ವಿಹೃತಂ)*

**ಸೂತ್ರಂ ೩೦**

*ಮದರಾಗಾದಿಯಿನಾದ ವಿಭ್ರಮದ ಸತ್ವೋದ್ಯೋಗಮುಂ ಕಾಮಮೋ*
*ಹದೆ ತಾಂ ಪಲ್ಲಟಮಾಗಿ ಸಿಂಗರಿಸಿಕೊಳ್ವೊಂದಂದಮುಂ ವಿಭ್ರಮಂ*
*ವಿದಿತಂ ಕುಟ್ಟಮಿತಂ ಮನಃಪ್ರಿಯನ ಸೋಂಕಂ ಚಿತ್ರದಿಂದೊಲ್ದುಮೊ*
*ಲ್ಲದಳಂ ತಾಗಿಯೆ ಬಾಹ್ಯದೊಳ್ ಪ್ರಿಯೆಯೆ ಗೆಯ್ದಾ ಕೂಟಮಿಂತೊಪ್ಪುಗುಂ*

**ಲಕ್ಷ್ಯಂ**

*ಮದಿರಾಪಾನ ವಿಕಾರಮುಂ ನವವಯಸ್ಸಂಪತ್ತಿಯುಂ ಬಂದು ನೋ*
*ಡದವೋಲ್ ನೋಡುವ ನಲ್ಲನಿರ್ದಿರವುಮೊಂದುತ್ಸಾಹಮಂ ಮಾಡೆ ಚಿ*
*ತ್ತದೊಳಾಗಳ್ ತನುಮಧ್ಯೆಗೇನೆಸೆದುದೋ ನೃತ್ಯಂ ಚತುರ್ಭಂಗಿ ಭೇ*
*ದದ ಲೀಲಾಭಿನಯ ಪ್ರಧಾನವಿಧಿಯಿಂ ಕಾದಂಬರಿಗೋಷ್ಠಿಯೊಳ್ ೪೯*

ವ : ಮತ್ತಂ

*ಪದಸದನವಾಂಪ ವೇಳೆಯೊಳೆ ರಾಗದಿನಾಂ ಬರೆ ಕಾಮಮುರ್ಬೆ ತಾ*
*ನಸವಸದಿಂ ಕೊರಲ್ಗೆ ಕಲಕಾಂಚಿಯನೊಪ್ಪುವ ತಾರಹಾರಮಂ*
*ಮಿಸುಪ ನಿತಂಬಕಂದುಗೆಯನೊಳ್ ನಳಿತೋಳ್ಗಿರದಿಟ್ಟ ನಲ್ಮೆಯಿಂ*
*ಶಸಿಮುಖಿಯೆನ್ನನಪ್ಪಿ ಮನಮಂ ನಗಿಸಿರ್ದುದನೆಲ್ಲಿ ಕಾಣ್ಬೆನೋ ೫೦ (ಇವೆರಡು ವಿಭ್ರಮಂ)*

*ಸುದತೀರತ್ನಮೆ ಕಾದಲಂ ನೆಱೆಯೊಱಲ್ದಾಲಿಂಗನಂ ಮಾಡೆ ಮು*
*ಟ್ಟದಿರೆನ್ನಂ ತೊಲಗೆಂದು ಮೆಯ್ದೆಗೆವಿನಂ ನಿನ್ನೊಂದುಕಾದಲ್ಮೆಯಿಂ*
*ಮುದಮಂ ತಾಂ ಗುಡಿಗಟ್ಟಿ ಬಿತ್ತರಿಪವೋಲ್ ರೋಮಾಂಚನಂ ಮೆಯ್ಯೊಳಿ*
*ಬ್ಬದಿಗಂ ಮೂಡಿರೆ ಬಲ್ಮೆಯೇಕೆ ಸುಸಿಲಂಗೆಯ್ವಂದಮೀ ಕೈತವಂ ೫೧*

*ಪದೆದಮರ್ದಪ್ಪೆ ಚಪ್ಪಲರ್ದ ಪೆರ್ಮೊಲೆ ಪೀಱೆ ಪೊದಟ್ಟುಪೊಂಗಿ ಬೀ*
*ಗಿದ ಬೆಳರ್ವಾಯ್ ತಗುಳ್ದುಗಿಯೆ ನೀಳ್ದ ನಖವ್ರಣವೀಟ್ಟುಪೊಯ್ಯೆ ಪಾ*
*ಱಿದ ತಲೆ ತನ್ನೊಳೊಪ್ಪೆ ಸುರತಾಂತ್ಯದೊಳೆನ್ನಯ ಮುಂದೆ ನಿಂದು ಮೇ*
*ಲುದ ಜೊಳೆ ಬೀಸುತುಂ ಬೆವರನಾಱಿಸುವೋಪಳನೆಂದು ಕಾಣ್ಬೆನೋ ೫೨*

ವ : ಮತ್ತಮೋಷ್ಠಗ್ರಹಣಾದಿ ಸುಖಪೀಡಾವಿಭವಂ ಕುಟ್ಟಮಿತಂ

**ಲಕ್ಷ್ಮಂ**

*ಚುಂಬಿಸೆ ಬೇಗಿ ಬೆಳ್ಪಡರ್ದ ಬಾಯ್ದೆಱೆಯಾಳಿಸಿದಪ್ಪಿ ನೊತ್ತಿನಿಂ*
*ದಂ ಬಿಡೆ ಗುಜ್ಜುಗೊಂಡ ಮೊಲೆ ಪೋರ್ಕುಳಿಯಿಂದಮೆ ಪಂತಿದಪ್ಪಿ ತಾ*
*ಱುಂಬು ಟಿಯಿಂ ತೆರಳ್ದ ಕುರುಳುಣ್ಮೆ ಬೆಮರ್ ನಸು ಬಾನಲಾದ ಬೊ*
*ಟ್ಟೆಂಬಿವು ಕೂಟದೊಂದು ಸವಿಯಂ ಪಿಸುಣಾಡುವುವೀ ಲತಾಂಗಿಯಾ* ೫೩ (ಇವು ಮೂಱುಂ ಕುಟ್ಟಮಿತಂ)

ವ: ಇನ್ನಾಲಂಬನಾಲಂಕಾರಕ್ಕೆ

**ಸೂತ್ರಂ ೩೧**

*ಮೃದುವಸನ ಮಾಲ್ಯ ಭೂಷಣ*
*ಮದ ಚಂದನ ಪತ್ರಭಂಗ ಧೂಪಸ್ನಾನಂ*
*ಪದೆದಿರೆ ತಚ್ಚಿಹ್ನಾದ್ಯಂ*
*ಮುದದಾಲಂಬನದ ಮೆಱೆವಲಂಕಾರಂಗಳ್*

**ಲಕ್ಷ್ಯಂ**

*ಸುದತಿಯ ದಿವ್ಯಗಂಧತನು ಚಂದನಶಾಖೆಯೊಳಂಗಜಾಹಿಯಿ*
*ಕ್ಕಿದ ಪೆರೆಯಂತಿರುಟ್ಟ ದುಗುಲಂ ಕುಚಕೋಕಯುಗಂಗಳಡ್ಡಗ*
*ಟ್ಟಿದ ಬಿಸದಂತೆ ಹಾರಲತೆ ಕಣ್ಗೆ ಕರಂ ಸುಲಿಪಲ್ಲಕಾಂತಿಯೊ*
*ಪ್ಪಿದುದು ಸುಧಾಂಶುಬಿಂಬವೆಳಮುತ್ತನೆ ಮುಕ್ಕುಳಿಸಿರ್ದುದೆಂಬಿನಂ* ೫೪

ವ : ಅಂತುಮಲ್ಲದೆಯುಂ

*ಕಡೆದನೊ ಚಂದ್ರಕಾಂತಮಣಿಯಿಂ ಮದನಂ ಬಿಸಕಾಂಡಗರ್ಭದಿಂ*
*ಪಡೆದನೊ ಪದ್ಮಗರ್ಭನೆನೆ ಭೂಷಣವಸ್ತ್ರವಿಲೇಪನಾಂಶುಗಳ್*
*ಪಡೆಯೆ ವಿಲಾಸಮಂ ದಶನದೀಧಿತಿಯಿಂ ದರಹಾಸಲಕ್ಷ್ಮಿ ನೂ*
*ರ್ಮಡಿಸೆ ಬೆಡಂಗುವೆತ್ತುದು ನರೇಂದ್ರ ವಧೂ ಧವಳ ಪ್ರಸಾಧನಂ* ೫೫

ವ: ಇಂತಾಲಂಬನಾಂಕಾರಮಖಿಳ ಕಾವ್ಯಪ್ರಸಿದ್ಧಮಾದುದಱಿಂದಲ್ಲಿ ವಿಶೇಷಮನಱಿಗೆ –

ವ : ಇನ್ನು ತಟಸ್ಥಂ

**ಸೂತ್ರಂ ೩೨**

*ಸಸಿಯುದಯಂ ಮುಗಿಲ್ಮೊಟಗು ನಂದನಮೊಪ್ಪುವ ಚಂದನಂ ಲಸತ್*
*ಕುಸುಮ ವಸಂತಮಂತೆ ಋತುಭೃಂಗ ಪಿಕಾಳರವಂ ಕೊಳಂ ಬನಂ*
*ಮಿಸುಗುವ ಕಪ್ಪುರಂ ಶಿಶಿರಶೀತಜಲಂ ನಱುದಂಬುಲಂ ಸುಗೀ*
*ತ ಸರಸ ದೂತಿವಾಕ್ಪ್ರಭೃತಿ ಮುಂಪೆಸರ್ಗೊಂಡ ತಟಸ್ಥಮಲ್ಲದೇ*

**ಲಕ್ಷ್ಯಂ**

*ಆಟಂ ಭಾಜನೆ ಗಾಡಿಯೊಳ್ಪಸದನಂ ಬೆಳ್ದಿಂಗಳೊಳ್ಮಾತು ಕೊಂ*
*ಡಾಟಂ ಕತ್ತುರಿಕಪ್ಪುರಂ ನಗೆ ತೆಗಟ್ ಕೂಟಂ ಬಿಯಂ ಜವ್ವನಂ*
*ನೋಟಂ ತಂಬುಲಮಿಂಪು ಕಂಪು ವಿಭವಂ ಮೆಯ್ಮೇಳಮೆಂಬಿಂತಿವಂ*
*ಬೇಟಕ್ಕಾಗರಮೆಂಬೆನಣ್ಣ ಸುಸೀಲೇಂ ಪೇಟ್ ಪಾಗದೊಳ್ ತೀರ್ಗುಮೇ* ೫೬

ವ : ಮತ್ತಂ

*ಕುಳಿರ್ವೆಲರುಮಾಲಿನೀರುಂ*
*ತಳಿರ್ವಾಸುಂ ಚಂದ್ರಕಾಂತಮುಂ ಚಂದನಮುಂ*
*ಕೊಳನುಂ ನಂದನವನಮುಂ*
*ಕಳೆಯವೆ ಬೇಸಗೆಯೊಳೊಗೆದ ಬೇಟದ ಸೂಡಂ (ಇಂತು ತಟಸ್ಥಂ)* ೫೭

ವ : ಇಂತಾಲಂಬನಗುಣ ಚೇಷ್ಟಾಲಂಕಾರ ತಟಸ್ಥಂಗಳೆಂದುದ್ದೀಪನ ವಿಭಾವಮಂ ಪೇಟ್ದೆಂ. ಇನ್ನಾ ವಿಪ್ರಲಂಭಮಂ ಪೇಟ್ದೆಂ

ಸೂತ್ರ || ವಿಯೋಗಮೆ ವಿಪ್ರಲಂಭಂ

ವೃತ್ತಿ : ಅಲ್ಲಿ ನೋಯಿಸಲ್ಪಟ್ಟ ನಲ್ಲರಾಲಂಬನ ವಿಭಾವಮಂತೆ ನಂದನಕಾಸಾರ ಚಂದ್ರಿಕಾಶೀ ತಾಂಬು ತಾಂಬೂಲ ಕುಸುಮಶಯ್ಯಾದಿಯುದ್ದೀಪನ ವಿಭಾವಂ. ಅಂತೆ ಸಂತಾಪ ಕಾರ್ಶ್ಯ ಜಾಗರಪ್ರಲಾಪ ಕ್ಷಾಮನೇತ್ರತ್ವದೀನ ಸಂಚರಣಾನುಕರಣಾನುಕರಣಾಕೃತಿ ವಿಲೇಖನ ಸಂದೇಶ ಶೀತಸೇವನಾದಿಯನುಭಾವಂ. ಅಶ್ರುವಿವರ್ಣ ಸ್ತಂಭಕಂಪಾದಿ ಸಾತ್ವಿಕಂ. ಶಂಕೌತ್ಸುಕ್ಯ ಮದಗ್ಲಾನಿನಿದ್ರಾಸುಪ್ತಿಪ್ರಭೋದ ಚಿಂತಾಸೂಯಾಶ್ರಮ ನಿರ್ವೇದ ಮರಣೋನ್ಮಾದ ಜಡತಾವ್ಯಾಧ್ಯಪಸ್ಮಾರಾದಿ ವ್ಯಭಿಚಾರಿಗಳಕ್ಕುಮದು

**ಸೂತ್ರ ೩೩**

*ಪರಿಭಾವಿಸುವೊಡೆ ಪೂರ್ವಾ*
*ನುರಾಗ ಮಾನಾಖ್ಯಕಂ ಪ್ರವಾಸಾಖ್ಯಾನಂ*
*ಕರುಣಾತ್ಮಕಮೆಂದಿಂತವ*
*ಧರಿಸೆ ಚತುರ್ಭಂಗಿ ವಿಪ್ರಲಂಭದ ಭೇದಂ*

**ಸೂತ್ರಂ ೩೪**

*ನೋಡಿ ನುಡಿದೊಲ್ದು ಕೂಟಂ*
*ಕೂಡದ ಮನನೊಂದು ಚಲದೆ ತಿಳಿಯದ ನಲ್ಲರ್*
*ನಾಡತ್ತ ಪೋದಟಿದನೋ*
*ವಾಡಲಿದೇತಱದೆ ವಿಪ್ರಲಂಭಚತುಷ್ಕಂ*

ವ : ಅಲ್ಲಿ ಪೂರ್ವಾನುರಾಗಮೆಂಬುದಭಿಲಾಷೆಯದು ದೈವಪಾರವಶ್ಯ ಮೆಂದಿರ್ತೆಱಂ

**ಸೂತ್ರಂ ೩೫**

*ಸಮಸಂದು ನೋಡಿಯುಂ ನುಡಿ*
*ದು ಮನಂಗೊಳೆ ಕೊಂಡು ಕೂರ್ತು ತಮ್ಮೊಳ್*
*ಸಮನಿಸದೆ ಮರುಗುವಾ ಮರು*
*ಕಮುಮದು ಪೂರ್ವಾನುರಾಗಮೆನೆ ಪೆಸರ್ವಡೆಗುಂ*

*ಪೊಸಸುಸಿಲೊಳ್ ನೃಪಾತ್ಮಜೆಯೊಳಿಂತು ವರಂ ಪಡೆಯಲ್ಕೆ ಕೂರ್ತು ಪೂ*
*ವಸಗೆಸೆವಾಕೆಯಂ ಬರಿಪುದುಂ ನಭದಿಂದೆ ನಿಶಾಚರೇಶನೀ*
*ಕ್ಷಿಸಿ ಪಗೆ ಬಂದು ತನ್ನೃಪತನೂಜನನೊಯ್ದು ಬಿಸಿಟ್ಟು ಪೋಗೆ ತ*
*ನ್ನಸುವೆನಿಪೋಪಳಂ ನೆನೆದಟನವಂ ವನಾಂತದೊಳ್ ೫೮*

ವ : ಮತ್ತಂ

*ಪದೆದತ್ತಿರ್ವರ ಜೀವಮೊಂದೊಡಲೆ ಬೇಱೆಂಬಂ ತುಟಂ ಮಾಡಿದಂ*
*ಮದನಂಗಾವುದು ದೋಷಮುಂತೆ ನುಡಿಯಲ್ಕೇನಕ್ಕುಮೇ ಪಾಪಮಂ*
*ಬಿದಿಯೆಂಬಾಱಡಿಗಳ್ಗ ನಿಂದಮುಟಿವಾಯ್ತಿರ್ವರ್ಗಮಿನ್ನೊರ್ಮೆ ದೈ*
*ವದಿನೆತ್ತಾನುಮದಿಂದುಬಿಂಬಮುಖಿಯಂ ಕಾಣ್ಬೊಂದು ಸೈಪಕ್ಕುಮೇ (ಇದು ದೈವವಶಾಭಿಲಾಷೆ) ೫೯*

*ನೃಪಸುತೆಯಂ ತಾಂ ತನ್ನಂ*
*ನೃಪಸುತೆ ನೆಱೆ ನೋಡಿ ನೋಡಿ ತಂತಮ್ಮೊಳ್ ಕೂ*
*ರ್ತು ಪಡೆಯದೆ ಸುರತಮಂ ಬಿರ*
*ಯಿಪರಾದರ್ ಮೋಹಿಗಳ್ ಪರಾಧೀನತೆಯಿಂ ೬೦ (ಇದು ಪಾರವಶ್ಯಂ)*

ವ : ಇನ್ನಾ ಮಾನಾಖ್ಯ ವಿಪ್ರಲಂಭಂ

**ಸೂತ್ರಂ ೩೬**

*ಸ್ಫುರದೀರ್ಷ್ಯಾಪ್ರಣಯಮೆನು*
*ತ್ತೆರಟ್ಟೆಱಂ ಮಾನಮಲ್ಲಿ ತತ್ಪ್ರಣಯಾಖ್ಯಂ*
*ಪುರುಷನೊಳು ಸ್ತ್ರೀಯೊಳಮಿ*
*ರ್ವರೊಳಕ್ಕುಂ ಸ್ತ್ರೀಯರಲ್ಲದಿರಲೀರ್ಷ್ಯೆ ವಲಂ*

**ಲಕ್ಷ್ಯಂ**

*ಮುಳಿಸೆಂಬುದು ನೇಹದ ಮುಂ*
*ಬೆಳಸು ನೃಪಾ ಪೆಣ್ಣ ಜವ್ವನಂ ಸುರಧನುವೆಂ*
*ಬಳ ನುಡಿಯೊಡನೈದಲರ್ಗಣೆ*
*ಗಳಾಗಳೇಂ ನೆಲಸಿದುದೊ ಮಹೀಶನ ಮನದೊಳ್* ೬೧ (ಇದು ಪುರುಷಪ್ರಣಯಮಾನಂ)

*ಬಿಡದಿಂತೇಂ ಕಾರಣಂ ಕೆತ್ತಿದಪುವೆನಗೆ ಪೇಟಿಕ್ಕ ಮೆಯ್ದೋಱಲಿಂದಿ*
*ನ್ನೆಡಗಣ್ಣುಂ ತೋಳುಮೆನ್ನೀ ತೊಡೆಯುಮಿನಿಯನಾದೇಶಮಂ ಮಾಟ್ಟುವಿನ್ನೀ*
*ಗಡಮೆನ್ನೊಳ್ ಬೇಟಮಿನ್ನುಂ ಗಡ ಪರಿಪರಿದೀಟ್ಟಿಪ್ಪೆ ಕೊಳ್ವಾಟಮಿನ್ನುಂ*
*ಗಡ ಕೂಟಂ ಸಾಲ್ಗುಮೆಂದುಣ್ಮಿದ ಮನದಳಲಿಂ ಕಾಂತೆ ವಿಭ್ರಾಂತೆಯಾದಳ್* ೬೨ (ಇದು ಸದತ್ರೀ ಪ್ರಣಯಮಾನಂ)

*ತಿಳಿಪುವ ದೂತಿ ಗಡಿನ್ನರಿ*
*ದೆಳೆಯಳ್ ತಳಿರ್ವಾಸಿನೊಳ್ ಪ್ರಿಯಂ ಪೂವಸೆಯೊಳ್*
*ಬಲೆದ ವಿರಹಾಗ್ನಿಯಿಂದಿರೆ*
*ಮುಳಿದಾರ್ ಬರ್ದುಕಲ್ಕೆ ಬಲ್ಲರತನುವ ನಾಡೊಳ್* ೬೩ (ಇದು ಉಭಯಪ್ರಣಯಮಾನಂ)

*ಇನ್ನೆವರಂ ಸಖೀ ರಮಣನೆನ್ನವನಾಗಿರುತಿರ್ಪನಿಂದು ತಾ*
*ನೆನ್ನವನೆಂಬೆ ನುಣ್ಣೊಸಲೊಳೆಂದಿದಲಕ್ತಕಲಾಂಛನಂ ರತಾಂ*
*ಕಂ ನಿಮಿರ್ದಂಗದೊಳ್ ಮೆಱೆಯೆ ನೋಡುತೆ ಕಾಯ್ದು ನೂಂಕಿದೆಂ*
*ಮನ್ನಿಸದೆನ್ನ ಜೀವಮನೆ ನೂಂಕುವವೋಲ್ ಪ್ರಿಯನಂ ಕೃತಘ್ನೆಯಾಂ* ೬೪ (ಇದು ಈರ್ಷ್ಯಾಮಾನಂ)

ವ : ಇನ್ನಾ ಪ್ರವಾಸಾಖ್ಯ ವಿಪ್ರಲಂಬಂ

**ಸೂತ್ರಂ ೩೬**

*ಇದು ಕಾರ್ಯಶಾಪಸಂಭ್ರಮ*
*ದೊದವಿಂ ಪ್ರಾವಾಸಮಾಯ್ತು ಮೂದೆಱನವ ಜೊಳ್*
*ಮೊದಲೆರಡನ್ವರ್ಥಂಗಳ್*
*ಪದೆಪಿನ ಭಾವಾದಿಯಿಂದೆ ಸಂಭ್ರಮಮಕ್ಕುಂ*

ವ : ಅಲ್ಲಿ ಕಾರ್ಯಕ್ಕೆ

*ಇನಿಯನಗಲ್ದು ಪೋಗಿ ಪರದೇಶದೊಳಿರ್ದಪನಾನುಮಿಲ್ಲಿ ಮಾ*
*ವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳುಮಂತೆ ನೀನುಮೆ*
*ನ್ನನೆ ನಡೆನೋಡುತುಂ ನಭದೊಳಿರ್ದಪೆಯಪ್ಪುದಱಿಂದೆ ನಿನ್ನ ಬಾ*
*ನನುವಿಪೆನೆನ್ನ ಮೆಯ್ ಬಡವೋ ನಲ್ಲನ ಮೆಯ್ ಬಡವೋ ನಿಶಾಕರಾ* ೬೫

ವ :ಮತ್ತಂ

*ಎಳಮಿಂಚಿಲ್ಲಕ್ಕು ಮಾಖಂಡಲ ಜನಿತ ಧನುರ್ದಮಿಲ್ಲಕ್ಕು ಮಭ್ರಾ*
*ವಳಿಯಿಲ್ಲಕ್ಕುಂ ಕದಂಬಾನಿಲನೆಳಸುವೊಡಿಲ್ಲಕ್ಕು ಮುದ್ಯನ್ಮಯೂರೀ*
*ಕುಳಲೀಲಾ ತಾಂಡವಾಡಂಬರ ವಿಲಸನಮಿಲ್ಲಕ್ಕು ಮಂತಾಮಹೀ ಮಂ*
*ಡಳದತ್ತಲ್ ನಲ್ಲನಂತಲ್ಲದೊಡೆ ತಡೆದದೇಕಿರ್ಪನಿಂದಲ್ತೆ ಬರ್ಪಂ* ೬೬ *(ಇವೆರಡುಂ ಕಾರ್ಯಪ್ರವಾಸ ವಿಪ್ರಲಂಭಂ)*

*ಪಱುಗಳಿದಟ್ಟೆಯಿಂದೆ ಸುರತಾಮೃತಮಂ ಸವಿವುತ್ತೆ ತಳ್ತು ತ*
*ಣ್ಪು ಱೆಲೊಳಶೋಕೆಯೊಳ್ಗಳಿರ್ಗಳೊಟ್ಟಲೊಳೆನ್ನೊಡನಿರ್ದ ನಲ್ಲನಂ*
*ಘಟಿಲನೆ ಕಂಡ ಪಾಪಿ ಋಷಿಶಾಪಮೆ ತಾಂ ಪಾರದೇಶದತ್ತ ಕೊಂ*
*ಡೆಱೆದುದು ಕಾಣ್ಬುದಪ್ಪುವುದು ಕೂಡುವುದಿನ್ನೆನಗೆಂದು ಸಾರ್ಗುಮೋ* ೬೭ *(ಇದು ಶಾಪವಿಪ್ರಲಂಭಂ)*

ವ : ಮೇಘಸಂದೇಶದೊಳಿದುಂಟು

*ಸೀತೆ ಮಣಿಮುದ್ರೆಯಂ ಕಂ*
*ಡೇತಱದಿಂದಿರ್ದಳಂತೆ ಚೂಡಾಮಣಿಯಂ*
*ಸೀತಾಪತಿ ಕಂಡು ಮನೋ*
*ಜಾತಾಗ್ನಿಯಿನೆಯ್ದೆ ಬೆಂದು ಮಱುಗುತ್ತಿರ್ದಂ* ೬೮

*ಪರನೃಪನೆನ್ನ ಮಿತ್ರಪುರಮಂ ತವೆ ಮುತ್ತಿದನಂದು ಕೇಳ್ದು ಬೆ*
*ಚ್ಚರಮಿದೆ ಬಂದೆನಿತ್ತಲವನತ್ತ ಮದೀಯ ಪುರಪ್ರಭಾಗಮಂ*
*ಭರದೆ ತಱುಂಬಿದಂ ಗಡವನಂ ತಗುಳ್ದಟ್ಟುವೆನಾತ್ಮಕಾಂತೆ ಮೆ*
*ಯ್ಗಿರೆವಳೊ ಎನ್ನ ಜಾನದೊಳೆ ಸಾವಳೊ ನೋವಳೊ ಏನನೆಂಬಳೋ* ೬೯ *(ಇದು ಸಂಭ್ರಮವಿಪ್ರಲಂಭಂ)*

ವ : ಅಂತು ವಿಪ್ರಲಂಭಮೇೞುತೆಱಂ ಕರುಣಾತ್ಮಕ ವಿಪ್ರಲಂಭಮಂ ಕೆಲಂಬರ್ ಕಡೆಯ ವಸ್ಥೆಯೊಳೇಕರೂಪಮೆಂದೊಲ್ಲರ್ ಕೆಲರ್ ಕರುಣರಸಮೆಂದೊಲ್ಲರ್, ಕೆಲರಿಂ ತೊಲ್ವರದರ್ಕೆ

**ಸೂತ್ರ ೩೮**

*ಪರಮಪ್ರಿಯರೆತ್ತಾನುಂ*
*ಪರಲೋಕಪ್ರಾಪ್ತರಾದೊಡವರ ಪರೋಕ್ಷಾಂ*
*ತರದೊಳ್ ಮರುಗುವ ಮರುಕಂ*
*ಕರುಣಾತ್ಮಕ ವಿಪ್ರಲಂಭಮೆನೆ ಪೆಸರ್ವಡೆಗುಂ*

**ಲಕ್ಷ್ಯಂ**

*ಇವನಿಂತೀಕೆಗೆ ಗಂಡನೆಂದೊಡೆನಗೀಗಳ್ ರಾಜ್ಯಮಾದಂತೆ ತೋ*
*ಱುವುದೆತ್ತಾನುಮಗಲ್ದು ಪೋದೊಡವನಿನ್ನುಂ ಬರ್ಕುಮಾನೊರ್ಮೆ ಕೂ*
*ಡುವೆನೆಂಬಾಸೆಯೊಳಂತು ಮಾಱುವೆನದಿನ್ನಾವಾಸೆಯಿಂದೀಗಳಾ*
*ಱುವೆನಾರಂ ಬರಪಾರ್ವೆನೆಂತು ಕಟಿಪೆಂ ಪೊೞ್ತಿಂ ವಿಲೋಲೇಕ್ಷಣೇ ೭೦ (ಇದು ಕರುಣವಿಪ್ರಲಂಭಂ)*

ವ: ಇನ್ನವಱವಸ್ಥೆಗಳಂ ಪೇೞ್ವೆಂ

**ಸೂತ್ರಂ ೩೯**

*ನಯನರತಿ ಚಿಂತೆ ಸಂಕ*
*ಲ್ಪಯುತಂ ಜಾಗರತೆ ಕಾರ್ಶ್ಯಮರತಿಯಮಾನಂ*
*ಪ್ರಿಯೆಯ ವಿಮೋಹಂ ಮೂರ್ಛಾ*
*ಶ್ರಯಂ ಮರಣಮಿಂತವಸ್ಥೆ ದಶವಿಧಮಕ್ಕುಂ*

**ಸೂತ್ರಂ ೪೦**

*ಚಕ್ಷುಪ್ರೀತಿಯದಿನಿಯನ*
*ನೀಕ್ಷಿಪುದುೞ್ ನೆನೆವುದದೆ ಮನಸ್ಸಂಗಂ ಲೋ*
*ಲಾಕ್ಷಿಮನದಲ್ಲಿ ಸಂಕ*
*ಲ್ಪಕ್ಷೇಪದೆ ನೆರೆವುದದುವೆ ಸಂಕಲ್ಪಾಖ್ಯಂ*

**ಲಕ್ಷ್ಯಂ**

*ಕಡೆಗಣ್ಣಿಂ ಕಡೆಗೋಡಿವೋಗೆ ಪಿರಿದುಂ ಚೆಲ್ಲಂ ಕುಚದ್ವಂದ್ವದಿ*
*ಟ್ಟೆಡೆಯಿಂ ಸ್ವೇದಜಲಂ ತುಳುಂಕೆ ಜಘನಾಂತರ್ದೇಶದಿಂದಾವಗಂ*
*ಬಿಡದುಣ್ಮುತ್ತಿರೆ ಮನ್ಮಥದ್ರವಮನಂಗಾವೇಶದಿಂ ಕಾಲ್ ತಡಂ*
*ಬಡೆ ಬಂದಾಟಿಸಿ ನೋಡಿದಳ್ ಪದೆಪಿನಿಂ ಶ್ರೀವಿಕ್ರಮಾರ್ತಂಡನಂ ೭೧ (ಇದು ಚಕ್ಷುಃಪ್ರೀತಿ)*

*ನೆನೆವಳೆ ಬೇಱದೊಂದನೆಡೆಗೊಂಡುದು ಮುನ್ನಮೆ ನಿನ್ನ ಪಂಬಲಾ*
*ಮನಮನದಂತೆ ನೋಡುವಳೆ ಚಿತ್ರಿಸೆ ಬಂದುದು ನಿನ್ನರೂಪು ಕಾ*
*ಮಿನಿಯೆರಡಚ್ಚಿಯೊಳ್ ನೆಲನುಮಾಗಸಮುಂ ದೆಸೆಯುಂ ನಿನತ್ತು ರೂ*
*ಪನೆ ತಲೆದೊಪ್ಪಿ ತೋಱುವುದು ನೀರೆಗೆ ನಿನ್ನಯ ಮಾಯೆಯೇಂ ನೃಪಾ* ೭೨ (ಇದು ಮನಸ್ಸಂಗಂ)

*ಹೃದಯೊದೊಳಪ್ಪಿ ತನ್ನ ಮನದೊಳ್ ಮಧುರಾಧರ ಮೂಡಿ ಸಾರ್ದ್ರ ಚಿ*
*ತ್ತದೊಳೆರ್ದೆಗೊಳ್ವ ಚುಂಬನಮನಾಗಿಸಿ ಬೇಟದಳುರ್ಕೆಯಿಂದೆ ಚೇ*
*ತದೊಳೆ ಲತಾಂಗಿ ನಿನ್ನನೊಡಗೂಡಿ ಸುಖಾಮೃತ ವೀಂಟಿದಪ್ಪಳಂ*
*ತೊದವಿದಭಾವಿತಾತ್ಮೆ ನೆಱೆ ನೋವನದೆಲ್ಲಿಯುಮೇಕೆ ತಾಳ್ದಿದಳ್* ೭೩

ವ : ಮತ್ತಂ

*ಮೃಗಮದಗಂಧಿ ಸೆಜ್ಜೆವನೆಯಂಚೆಯ ತುಪ್ಪುೞತಳ್ಪದೊಳ್ ಮನಂ*
*ಬುಗೆ ಪಟದಲ್ಲಿ ನಿನ್ನೆಸೆವ ರೂಪನೆ ಚಿತ್ರಿಸಿ ನೋಡಿನೋಡಿ ಕಯ್*
*ಮಿಗೆ ಕಡುವೇಟದಟ್ಟೆಯಿನದಂ ಸಲೆ ಚುಂಬಿಪ ಮುದ್ದುಗೆಯ್ವು ತಾಂ*
*ಬಿಗಿಬಿಗಿದಪ್ಪುವಟ್ಟೆ ಜೊಳೆ ನೂಂಕಿದಳಂದಿನ ರಾತ್ರಿಯಂ ನೃಪಾ* ೭೪ (ಇದು ಸಂಕಲ್ಪಂ)

**ಸೂತ್ರಂ ೪೧**

*ನೆನೆದೊಱಗದದುವೆ ಜಾಗರ*
*ವಿನಿಯನನುಱೆ ಬಯಸಿ ಬಡಬಡಾಗಿರೆ ಕಾರ್ಶ್ಯಂ*
*ವನಿತೆ ವಿಷಯಕ್ಕೆ ಮೆಯ್ಗೊಡ*
*ದನುವ ರತಿಯೆ ಲಜ್ಜೆ ವಿರಹದಳೆದುದಮಾನಂ*

**ಲಕ್ಷ್ಯಂ**

*ಕನಸಿನೊಳೆನ್ನ ವಲ್ಲಭನನಿಂದೊಡಗೂಡಿದೆನೆಂದು ಪೇೞ್ವ ಕಾ*
*ಮಿನಿಯರುದಾತ್ತೆಯರ್ ಕೆಲರದೇಂ ಕೃತಪುಣ್ಯೆಯರಕ್ಕ ದುಃಖಭಾ*
*ಜನೆಗೆನಗೆನ್ನ ವಲ್ಲಭನಗಲ್ಕೆಯೊಳಾಗದು ನಿದ್ರೆಯೆಂದೊಡಾ*
*ಕನಸೆನಗೆಲ್ಲಿತೆಂತೆನಗೆ ವಲ್ಲಭನೊಳ್ ನೆರೆವಾಸೆಯೆಲ್ಲಿತೋ* ೭೫

ವ : ಮತ್ತಂ

*ಪತಿಚಿಂತಾವಿದ್ಧೆ ನಿದ್ರಾವಿರಹಿತೆಯಿರುಳೆಯ್ತುರ್ಪುದುಂ ಸುಪ್ತಪಾರಾ*
*ವತಮಂ ಬಂದೆತ್ತುವಳ್ ಹಂಸೆಗಳೆರಡೆ ವೆಯೊಂದಾಗಲೀಯಳ್ ನವಿಲ್ವಾ*

*ಐತಿಯಂ ಕಣ್ಮುಚ್ಚಲೀಯಳ್ ಸಲಪುವ ಗಿಳಿಯಂ ತೂಂಕಡಂ ಗಾಣಲೀಯಳ್*
*ಕತೆಯಂ ಪೇೞೆಂದವಳ್ ಸಾರಿಕೆ ಯುಮನಿನಿಸಂಗೆಯ್ದು ಕಣ್ಮುಚ್ಚಲೀಯಳ್೭೭ (ಇವೆರಡುಂ ಜಾಗರಂ)*

**ಲಕ್ಷ್ಯಂ**

*ನಡುನಡೆಪಿತ್ತು ತನ್ನ ನೆನೆ ಮೆಯ್ ಬಡವಾದುದು ಲೋಚನಾಂಶುಗಳ್*
*ಬಿಡೆ ತೊಡರ್ದಂತೆ ಗಂಡಯುಗಳಂ ಬಿಳಿದಾದುವು ತೋಳ್ಗಳೊಳ್ ವರಂ*
*ಬಡೆದವೋಲೆಯ್ದೆ ಸುಯ್ಸರಳವಾದುದು ಭಾವರಸಪ್ರವಾಹದೊ*
*ಳ್ಗಡಣೆಸಿದಂತೆ ಬಾಷ್ಪಜಲಸಂತತಿ ಕಾಟ್ಬುರಮಾದುದಾಕೆಯಾ       ೭೭*

ವ : ಮತ್ತಂ

*ಸುದತಿ ಲತಾಂಗವೇಕೆ ಬಡವಾದುದಿದೆಂದಪೆ ಮುನ್ನಮೈಕ್ಯಭಾ*
*ವದೊಳಣುಭೇದಮಿಲ್ಲೆನಿಸಿ ಮತ್ಪ್ರಿಯನಿರ್ದೊಡೆ ದೊಡ್ಡಿತಾಗಿ ತೋ*
*ರ್ಪುದು ಮೆನಗೀಗಳರ್ಧವೊಡವೋದುದು ನಲ್ಲನೊಳಿತ್ತಲರ್ದಮಿ*
*ರ್ದುದು ತನುವೊಂದನರ್ಧಿಸಿದೊಡೇಂ ಬಡವಾಗದೆ ದೊಡ್ಡಿತಕ್ಕುಮೇ          ೭೮ (ಇವೆರಡುಂ ಕಾರ್ಶ್ಯಂ)*

*ಗಿಳಿಗಿನ್ನುಂ ಕುಟುಕಿಕ್ಕೆನೆಂಬಳೆಲೆ ನೀನಾರೋಗಿಸೆಂದಂದು ಕೋ*
*ಕಿಳಮಿನ್ನುಂ ತಳಿರ್ಗಚ್ಚದೆಂಬಳೆಲೆಯಂ ಮೆಲ್ಲೆಂದೊಡೇಟ್ಮಜ್ಜನಂ*
*ಗೊಳಲೆಂದಂದೆಲರಿಂದೆ ಮೆಯ್ ನಡುಗಿತೆಂಬಳ್ ಚಂದನೋದ್ವರ್ತಮೀ*
*ಗಳದೇಕಿಲ್ಲೆನೆ ಪಾವು ಕಾವುದೆನೆ ಕೇಳ್ದಂಜಿರ್ದೆನೆ ಂಬಳ್ ಸಖೀ       ೭೯ (ಇದು ಆರತಿ)*

*ನೆರವಳ್ತಂಗಿಯನಟ್ಟೆ ತಾನೆ ಬರಲೊಲ್ಲಂ ಲಜ್ಜೆಯಿಂದೋಪನಂ*
*ಕರೆವೆಂ ವೈಶಿಕವೆಂದಪಂ ಸಖಿ ಶರಣ್ಬೊಕ್ಕೆಂ ಗಡಾ ನಲ್ಲನಂ*
*ಬರಿಸೆನ್ನಲ್ಲಿಗೆ ತೋಱ ಮಲ್ಲಿಗೆ ಎಲೇ ಬೆಳ್ದಿಂಗಳೇ ನಿನ್ನನಾ*
*ನೆರೆವೆಂ ಕೋಗಿಲೆ ನಿನ್ನ ಕಾಲ್ಪಿಡಿದಪೆಂ ತೆಂಗಾಳಿ ತೊೞ್ತಾದಪೆಂ       ೮೦ (ಇದು ಲಜ್ಜಾತ್ಯಾಗಂ)*

**ಸೂತ್ರಂ ೪೨**

*ವಿರಹೋನ್ಮಾದದದೆ ಮೋಹಂ*
*ಬಿರಯಿಸೆ ಮೆಯ್ಮಱೆದುದದುವೆ ಮೂರ್ಛೆಯೆನಿಕ್ಕುಂ*
*ಮರಣೋದ್ಯೋಗಂ ಮರಣಂ*
*ಬರೆ ತನಗದು ಕಡೆಯವಸ್ಥೆ ಮರಣಮೆನಿಕ್ಕುಂ*

**ಲಕ್ಷ್ಯಂ**

*ನಿಜಕೇಳೀ ಗೃಹದೊಳ್ ಬೆಡಂಗೆಸೆವ ಭಿತ್ತಿವ್ರಾತದೊಳ್ ಚಿತ್ರಮಂ*
*ಗಜಕುಂಭಸ್ತನೆ ನೀನೆಗೆತ್ತು ದಿಟದಿಂ ಮುದ್ದಾಡಿ ಮಾತಾಡಿಸ*
*ಕ್ಕಜವೇನಿತ್ತಪರೆಂದು ತೊಟ್ಟಿಚಿತರುತ್ತುಂ ತಾಂ ಕಾಣದಂ*
*ಗಜರೂಪಂ ಪೊಱವೋಗದಂತೆ ಪಡಿಯಂ ಸಾರ್ಚಿಂಬಳೇಂ ಭ್ರಾಂತೆಯೋ* ೮೧

ವ : ಮತ್ತಂ

*ತಳರದೆ ತನ್ನ ಕಣ್ಣ ಮೊದಲೊಳ್ ಸುೞಿವಾಕೆಯ ರೂಹುಗಂಡದ*
*ರ್ಕೆಳಸಿದೊಡಾಕೆಗೆತ್ತು ರಸಚಿತ್ರದ ಪೆಂಡಿರನಾಕೆಗೆತ್ತು ಪು*
*ತ್ತಳಿಗಳನಾಕೆಗೆತ್ತೆಲಗೆ ಬಾರೆನುತಂ ನಳಿತೋಳನೆತ್ತಿ ಕೋ*
*ಮಳ ಕರಕಂಜದಿಂದೆೞವಿ ನೋಡಿದನಾ ರತಿರಾಗದೋಹಳಂ* ೮೨ ಇವೆರಡು ಮೋಹಂ (ಮೋಹೋನ್ಮಾದಂ)

*ಅಲರ್ಗಣ್ಣಿಂ ಪೂವಿನಂಬಂ ಸಮೆದನೊ ಮದನಂ ಕೊಂಡುಮೇಣ್ ಪ್ರಾಣಮಂ ಕೋ*
*ಗಿಲೆಯೆಲ್ಲಂ ಕೂಡಿ ಕೈಕೊಂಡುವೊ ಕಳರವಮಂ ವಕ್ತ್ರಚಂದ್ರಾಂಶುವಂ ಪೆ*
*ಙ್ಗೊಲೆಗೆಯ್ದುಂ ಚಂದ್ರಮಂ ಕೊಡನೊ ಖಲನುಳಿದಿಂತೇಕೆ ಪೆಣ್ ನೋಡಳೋರಂ*
*ತೆಲಗೇ ಮಾತಾಡಳೇಕೆಮ್ಮಯ ಸಖಿಮುಖದಿಂ ಹಾಸಮಂ ಸೂಸಳೆಮ್ಮೊಳ್* ೮೩

ವ : ಮತ್ತಂ

*ನಸುಬಿಸುಪೇಱೆ ಮೆಯ್ ಮಗುೞೆ ಕೆತ್ತುವ ತಾಣಮೆ ಕೆತ್ತೆ ಮಂದಮಾ*
*ದುಸಿರ್ಗಳೆ ನಾಸಿಕಾಮುಕುಳದಿಂದೆನಸುಂ ಪೊಱಪೊಣ್ಮೆ ತಳ್ತು ಸಂ*
*ಧಿಸಿದೆವೆ ಬಿರ್ಚೆ ಕಣ್ಮಲರ್ಗಳುಳ್ಳಲರುತ್ತಿರೆ ಜಾನಕೀ ಎನು*
*ತ್ತುಸಿರ್ದಿನಿಸಿರ್ದನಾ ರಘುಕುಲಾಂಬರಚಂಡಮರೀಚಿ ಮೂರ್ಛೆಯೊಲ್* ೮೪ (ಇವೆರಡುಂ ಮೂರ್ಛಾವಸ್ಥೆ)

*ನಾರಿಯ ಕೊರಲ್ಗೆ ನೀಂ ಮಣಿ*
*ಹಾರಂಬೊಲ್ ಮೆಱೆವುತಿರ್ದೆ ನೀಂ ತೊಲಗಿರೆ ತ*
*ನ್ನಾರಿಯ ಕೊರಲ್ಗೆ ತಾಂ ಮಣಿ*
*ಹಾರಂಬೋಲ್ ನಿಂದುದಾಕೆಯಸು ವಸುಧೇಶಾ* ೮೫ (ಇದು ಮರಣಂ)

ವ : ಇದಂ ರಣರಣಕಮೆಂಬರರೆಬರ್

*ಮೊಗಮಂ ಚುಂಬಿಸಿ ಮುದ್ದು ಗೆಯ್ದು ತೊಲಗಲ್ವೇಡೆಂದು ವಸ್ತ್ರಾಂಚಲಂ*
*ಬಿಗಿದಳ್ ಬಾಗಿಲೊಳಡ್ಡವಿಟ್ಟು ಕರುಣಂ ಬರ್ಪಂತೆ ಸಾರ್ದಪ್ಪಿದಳ್*
*ಮೊಗಮಂ ನೋಡದೆ ಪೋಪೆ ಪಾಪಿಯೆನುತುಂ ಕಣ್ಣೀರ್ಗಳಂ ತುಂಬಿದಳ್*
*ಮೃಗಶಾಬೇಕ್ಷಣೆ ಮುನ್ನೆ ಬಿಟ್ಟಳಸುವಂ ಬಿಟ್ಟಳ್ ಬೞಿಕ್ಕೋಪನಂ* ೮೬ (ಇದು ರಣರಣಕಂ)

**ಸೂತ್ರಂ ೪೩**

*ಇಂತಿದುವೆ ವಿಪ್ರಲಂಭಮ*
*ನಾಂತಿನಿಯರವಸ್ಥೆಗಳ್ ಮತಾಂತರದಿಂ ಮ*
*ತ್ತಂತೆ ಗುಣಕೀರ್ತನಂ ಸಲೆ*
*ಸಂತಾಪಂ ಗಮನಮೆಂದಿವನ್ವರ್ಥಂಗಳ್*

**ಲಕ್ಷ್ಯಂ**

*ಮದನನ ಕೈದುವೆಲ್ಲಿದನನಂಗನ ಕಯ್ಪಿಡಿಯೆಲ್ಲಿದಂ ವಿಳಾ*
*ಸದ ಮೊದಲೆಲ್ಲಿದಂ ಸೊಬಗಿನಾಗರನೆಲ್ಲಿದನೆಲ್ಲಿದಂ ವಿನೋ*
*ದದ ಕಣಿಯೆಲ್ಲಿದಂ ಚದುರಗೊಟ್ಟಿಗನೆಲ್ಲಿದನಿಚ್ಚೆಯಾಣ್ಮನೆ*
*ಲ್ಲಿದನೆರ್ದೆಗಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ ೮೭ (ಇದು ಗುಣಕೀರ್ತನಂ)*

*ಪಾಸುವ ಪಲ್ಲವಾಸ್ತುರುಣಮೊಟ್ಟುವ ಬಾಲಮೃಣಾಳಸಂಕುಲಂ*
*ಸೂಸುವ ಚಂದ್ರಕಾಂತಜಲಮೊತ್ತುವ ಶೀತಳಿಕಾಕದಂಬಕಂ*
*ಬೀಸುವ ಪುಷ್ಪವೀಜನವುದಿರ್ಚುವ ಕಪ್ಪುರವಚ್ಚವಾಗಳುಂ*
*ಪೂಸುವ ಚಂದನಂ ಬಿಸುಪನಾರಿಸಲಾಱವು ಸತ್ಯಭಾಮೆಯಾ ೮೮*

ವ : ಮತ್ತಂ

*ಚಿತ್ತಂಬೊಕ್ಕಿರ್ದೆಯೆಂತ್ಕೆ ಹರಿ ಕುಳಿರ್ವ ಕರಸ್ಪರ್ಶದಿಂದಿಂದುತಾಪಂ*
*ಬೆತ್ತಂ ಮೆಯ್ಸೋಂಕೆ ಮಂದಾನಿಲನುರಿವನದರ್ಕಾಳಿಯರ್ ದೂರದಿಂ ಸೂ*
*ಸುತಿರ್ಪರ್ ತೋಯಮಂ ಜೀರ್ಕೊಳವಿಯೊಳೆ ಮನೋಜಾತನಾರ್ದಾರ್ದಿಸಲ್ಕಾ*
*ರ್ದೆತ್ತುಂಗೋಲಿಕ್ಕುವಂ ಬಣ್ಣಿಸುವೊಡಳವೆ ಸತ್ರಾಜಿತೀದೇಹದಾಹಂ ೮೯ (ಇವೆರಡುಂ ಸಂತಾಪಂ)*

*ಕಡುಗತ್ತಲೆಯೊಳ್ ಪ್ರಿಯನಿ*
*ರ್ದೆಡೆಗಾಗಿಯೆ ಪೋಗಲೆಂದು ಮನೆಯಂ ಪೋಱಮ*
*ಟ್ಟಡಿಯಿಡಲಣ್ಮದೆ ಮಱುಗುವ*
*ಮಡದಿಗೆ ಬಗೆ ತೀಱೆ ಮಿಂಚು ಮಿಂಚಿದುದಾಗಳ್ ೯೦*

ವ : ಮತ್ತಂ

*ಕಳವಳಿಸಿದಪಳ್ ಬಾಯಟಿ*
*ದಳಱಿದಪಳ್ ಬೀದಿಬೀದಿಯೊಳೆ ನಿನ್ನಂ ಕೋ*

*ಮಳೆ ಪಿಡಿಯಲೆಂದು ಪಾರ್ದ*
*ವ್ವಳಿಸಿದಪಳ್ ನೀನೆಯವಳ್ಗೆ ಕರುಣಿಸಲಾಗಾ   ೬೧ (ಇವೆರಡುಂ ಗಮನಂ)*

*ಪರಿಣಾಮವನಂತಂ ವ್ಯವ*
*ಹರಿಸುವುದವಱವಱವಸ್ಥೆ ನೆಗಟ್ಟುವನಂತಂ*
*ಪರಿಭಾವಿಸುವೊಡೆ ರಸವಿ*
*ಸ್ತರಮಂ ವಿವರಿಸುವೆನೆಂಬನಾವನುಮೊಳನೇ   ೬೨*

ವ : ಈಯವಸ್ಥೆಗಳ್ ಸ್ತ್ರೀಯರೊಳೆ ಅಪ್ಪುವೆನವೇಡ. ಉಚಿತ ವಿಧಿಯಿಂ ಪುರುಷರೊಳ ಮಪ್ಪುವು. ವಾಗ್ವೃತ್ತಿ ಶೃಂಗಾರಮೆಂದೊಡನುಭಾವಂ ವಸ್ತ್ರಭೂಷಣ ಗಂಧಮಾಲ್ಯಾನು ಲೇಪನರೂಪನೇಪಥ್ಯ ಶೃಂಗಾರಮೆಂದೊಡುದ್ದೀಪನ ವಿಭಾವಂ ಕ್ರಿಯಾತ್ಮಕ ಶೃಂಗಾರ ಮೆಂದೊಡದುವುಮನುಭಾವಂ, ಸಂಕೀರ್ಣ ಶೃಂಗಾರಮೆಂದೊಡದು ವಿಭಾವಾನು ಭಾವಂಗಳ ನೆರವಿ, ಶೃಂಗಾರವೆಂದೊಡದು ರಸಸಂಕರಂ, ವಿಭಾವಾನುಭಾವಂಗಳನೆ ಈ ಪೆಸಱೆಂದೊಡದುವುಂ ತಾವನಂತಕಂಗಳಿನಿತಱಿಂ ನೆಱೆಯವು. ಅಲ್ಲಿ ವಿಭಾವಾದಿ ಗಳಾ ರಸಪೋಷಕಂಗಳಲ್ಲದೆ ತಾವೆ ರಸಂಗಳಲ್ತು. ಮಿಕ್ಕ ರಸಂಗಳ್ ವಾಗ್ರೂಪಕ್ರಿಯಾತ್ಮಕ ಮೆಂದು ಮೂಱುಂದೆಱನೆಂದೊಡವು ವಿಭಾವಾನು ಭಾವಂಗಳಲ್ಲದೆ ಪಿಂತೆ ಪೇೞ್ದ ಚಾರ್ಯರಾರುಮಿಂತೆ ನಿರೂಪಿಸಿದುದಿಲ್ಲಮದಱಿಂ ವಿದ್ವಜ್ಜನಂಗಳೀ ಮಾಟ್ಕೆಯಿಂ ಪೇೞೆಂದು ಬೆಸಸಲೊಡಮಿಂತೊಡರ್ಚಿದೆಂ

*ಇದು ಶತೇಂದ್ರ ಮುನೀಂದ್ರ ವಂದಿತಾರ್ಹತ್ಪರಮೇಶ್ವರ ಪಾದಾರವಿಂದ*
*ಮಂದಮಕರಂದಾನಂದಿತ ಭೃಂಗಾಯಮಾನ ಕವಿಸಾಳ್ವ ವಿರಚಿತಮಪ್ಪ*
*ರಸರತ್ನಾಕರದೊಳ್ ಶೃಂಗಾರ ಪ್ರಪಂಚಂ*

**ಪ್ರಥಮ ಪ್ರಕರಣಂ**

## ನವರಸ ಪ್ರಪಂಚ ವಿವರಣಂ

**ದ್ವಿತೀಯ ಪ್ರಕರಣಂ**

**ಸೂತ್ರಂ ೪೪**

*ಮಿಗೆ ಹಾಸಮೆ ಹಾಸ್ಯರಸಂ*
*ನೆಗಟ್ಟುಂ ಪರಿಹಾಸಕಾದಿಯಾಲಂಬನಮು*
*ರ್ವೊಗೆದವರ ವಿಕೃತ ವೇಷಾ*
*ದಿಗಳುದ್ದೀಪನವಿಭಾವಮಪ್ಪುದೆನಿಪ್ಪರ್*

**ಸೂತ್ರಂ ೪೫**

*ಅನುಭಾವಂ ತಿಳಿವೊಡದ*
*ರ್ಱನುಭಾವಕರಕ್ಷಿ ವಿಕಸನಾದಿ ವಿವರ್ಣ*
*ಸ್ವನಾದಿ ಸಾತ್ವಿಕಭಾವಂ*
*ಘನಮತಿ ಹರ್ಷಾದಿ ನೆಗಟ್ದಿ ಸಂಚಾರಿ ವಲಂ*

ವೃತ್ತಿ : ಪರಿಹಾಸಕ ದೇಶ ಕಾಲ ವಯೋ ವರ್ಣ ವಿಪರೀತಾದಿಯಾಲಂಬನ ವಿಭಾವಂ, ಪರಿಹಾಸಕಾದಿಗಳ ಕೇಶಬಂಧನಮಸದ್ಭೂಷಣ ಪ್ರಲಾಪ ನರ್ತನ ಮಾನ್ಯ ಗತ್ಯಾದ್ಯನು ಕರಮಿಮಾದಿಯಾಗಿ ಯುದ್ದೀಪನವಿಭಾವಂ ನಾಸೌಷ್ಠ ಕಪೋಲಸ್ಪಂದನ ದೃಷ್ಟಿ ವ್ಯಾಕೋಚ ನಾಕುಂಚನಮುಖರಾಗಪಾರ್ಶ್ವಗ್ರಹಣಾದಿಯನುಭಾವಂ ಸ್ವೇದಾಶ್ರು ವಿವರ್ಣಸ್ವರಭೇದಾದಿ ಸಾತ್ವಿಕಭಾವಂ ನಿದ್ರಾವಹಿತ್ಥತಂದ್ರೀತ್ರಪಾಲಾಸ್ಯದಿ ವ್ಯಭಿಚಾರಿ ಭಾವಂ. ಇವಱಿಂ ಹಾಸ್ಯ ಸ್ಥಾಯಿ ಸ್ವಾದ್ಯಮಾನಮಾಗೆ ಹಾಸ್ಯರಸಂ.

**ಸೂತ್ರಂ ೪೬**

*ಕ್ರಮದಿಂದನುಭಾವಮದು*
*ತ್ತಮ ಮಧ್ಯಮಯುತ ಜಘನ್ಯದಿಂ ಮೂದೆಱನು*
*ತ್ತಮಮಿರ್ತೆಱಂ ಸ್ಮಿತಂ ಹಸಿ*
*ತಮೆಂದು ಚತುರಾದ ಹಾಸ್ಯರಸಕಱಿವವರಿಂ*

**ಸೂತ್ರ ೪೭**

*ಕೃತಗಂಡವಿಕಾಸಂ ತಾಂ*
*ಸ್ಮಿತ ಮುಗುಳ್ನಗೆಯನುಳ್ಳದದು ಹಸಿತಂ ರಾ*
*ಜಿತ ವಿಹಸಿತಮುಪಹಸಿತ*
*ದ್ವಿತಯಂ ಮಧ್ಯಮಮೆನಿಪ್ಪ ಪೆಸರನುಭಾವಂ*

**ಸೂತ್ರ ೪೮**

*ಮೃದುರವಮೆ ವಿಹಸಿತಂ ಕೊರ*
*ಲದಿರ್ವುದೆಯುಪಹಸಿತಮುರುಶಿರಃಕಂಪಾಶ್ರು*
*ಪ್ರದಮಪಹಸಿತಂ ತನುಚಲಿ*
*ಪುದುಮತಿಹಸಿತಂ ಜಘನ್ಯವೀ ಪೇಟ್ದೆರಡುಂ*

**ಲಕ್ಷ್ಯಂ**

*ಶ್ರೀ ತನ್ನಂದದ ರೂಪು ಕೌಸ್ತುಭದೊಳಚ್ಚೊತ್ತಿರ್ದವೋಲ್ ತೋಱೆ ಕಂ*
*ಡೇತರ್ಕೀಕೆ ಮದೀಯವಾಸದೆಡೆಗೈತಂದಿರ್ಪಳೆಂದೀರ್ಷೆಯಿಂ*

*ದಾ ತಾಮ್ರಾಕ್ಷಿ ನಿರೀಕ್ಷಿಸುತ್ತುಮಿರೆ ತನ್ಮುಗ್ಧತ್ವಮಂ ಕಂಡು ಸಂ*
*ಜಾತಾಂ ತಸ್ಮಿತನಾದ ಕೃಷ್ಣನೆಮಗೀಗಾನಂದಸಂದೋಹಮಂ*  ೯೩ (ಇದು ಸ್ಮಿತಂ)

*ಚದುರನ ಜಾಣ್ಣುಡಿಗಿನಿಯೊಳ್*
*ಮುದಮಂ ತಲೆದಿಂಪನೀವ ನಸುನಗೆಗುಡೆ ಪೋ*
*ಲ್ತುದು ಚೆಲ್ವಿಂ ಬಾಯ್ದಾಳಿಂ*
*ಬದ ಪಣ್ಣರೆಬಿರಿದು ಬಿತ್ತು ತೋಱುವ ತೆಱದಿಂ* ೯೪ (ಇದು ಹಸಿತಂ)

*ಗಾವಿಲನುಜ಼ಿ ಬಿಣ್ಪೊಱೆವೊ*
*ತ್ತಾ ವಧುವಂ ನೋಡುತಲ್ಲಿ ಬೆಳ್ಳಾಗಿರೆ ಕಂ*
*ಡಾ ವಧು ನಗೆ ನಗುವಂತಾ*
*ಯ್ತಾ ವೀಣಾಮಧುರನಾದಮಂ ಮೃದುನಾದಂ* ೯೫ (ಇದು ವಿಹಸಿತಂ)

*ಬಿಂಗಿಯ ಕುಣಿತಮನೀಕ್ಷಿಸಿ*
*ಯಂಗನೆ ನಗೆಯುಗುಳ್ವ ತಚ್ಛಿರಃಕಂಪದೆ ಕಂ*
*ಪಿಂಗೆಳಸಿ ಮುಡಿಗೆ ಮುಸುಱಿದ*
*ಭೃಂಗಂಗಳ್ ನೆಗೆದ ಪೀಲಿಗೊಡೆಯನೆ ತೋರ್ಕುಂ*  ೯೬ (ಇದು ಉಪಹಸಿತಂ)

*ಕಿವಿಯಂ ಮಂಟಸಿ ಮಂಟವಲ್ಲಿಱಿದು ಕಣ್ಣಂ ಬಿಟ್ಟು ವಕ್ರಾಂಗಿ ರಾ*
*ಜವಿನೋದಂ ಬಿಱುನಕ್ಕು ನಕ್ಕು ಕುಕಿಲುತ್ತುಂ ಜರ್ಗನಾಡುತ್ತೆ ತೋ*
*ರ್ಪ ವಿಕಾರಂ ಸಭೆಗಾಗಳೇಂ ಪಡೆದುದೋ ವಕ್ತ್ರಪ್ರಕಾಶೋದಿತಾ*
*ರವಮಂ ಕಂಠದೆ ಕಂಪನಾಶ್ರುಜಲಮಂ ವಿದ್ವಜ್ಜ ನಾಧಾರನಾ*  ೯೭ (ಇದು ಅಪಹಸಿತಂ)

*ಕುಳ್ಳಿದ್ದು ಮಿಳಿರ್ವ ಮೆಳೆಯೊಳ್*
*ಪಳ್ಳದ ಕೇದಗೆಗೆ ಪಾಯ್ದು ಪತ್ತಿದ ಕೆಯ್ಯಂ*
*ಮುಳ್ಳುರ್ಚೆ ತೆಱೆದು ಪಲ್ಲಂ*
*ಘೊಳ್ಳನೆ ನಗಿಸಿದುದು ಕಟಕಮಂ ಮರ್ಕಟಕಂ*  ೯೮ (ಇದು ಅತಿಹಸಿತಂ)

**ಸೂತ್ರಂ ೪೯**

*ಇಂತಾದನುಭಾವಂ ದ್ವಿವಿ*
*ಧಂ ತನ್ನಿರವಿಂಗೆ ತಾನೆ ನಗೆ ಪೆಱರಂ ಕಂ*
*ಡಂತು ನಗೆಮಾರ್ಗದಿಂ ಪೆಸ*
*ರಂತಾತ್ಮಸ್ಥಂ ಪರಸ್ಥಮೆಂದಿರ್ತೆಱದಿಂ*

**ಲಕ್ಷ್ಯಂ**

*ತೊಟ್ಟಹಿಯನಿಟ್ಟು ಬೂದಿಯ*
*ನುಟ್ಟ ಜಿನವನೀಶನೆಯ್ದೆತನ್ನಿರವಂ ತಾಂ*
*ದಿಟ್ಟಿಸಿ ಮನದೊಳ್ ನಕ್ಕಂ*
*ಬೆಟ್ಟದ ಮಗಳಕ್ಷಿಗಿಸಿದನೀಗುಮೆನುತ್ತುಂ* ೯೯

ವ : ಇದು ಆತ್ಮಸ್ಥಂ, ಪಿಂತೆ ಪೇೞ್ದುವು ಪರಸ್ಥಂ, ಇಂತು ಹಾಸ್ಯರಸಂ ಪನ್ನೆರಡ್ತೆಱಂ

**ಸೂತ್ರಂ ೫೦**

*ಕರುಣಂ ಶೋಕದಿನಕ್ಕುಂ*
*ಮರಣಂ ಗತನಾದ ಬಂಧುವಾಲಂಬನಮಿ*
*ನ್ನುರುಬಂಧ್ವಾಕ್ರಂದನಮುಖ*
*ಭರದುದ್ದೀಪನ ವಿಭಾವಮಾ ರಸಕಕ್ಕುಂ*

**ಸೂತ್ರಂ ೫೧**

*ರುದಿತ ವಿಲಾಪ ಕ್ಲೇಶಾ*
*ದಿ ದಲನುಭಾವಂ ವಿವರ್ಣವಶ್ರುಸ್ತಂಭಾ*
*ದಿ ದಲಾ ಸಾತ್ವಿಕಮಾಲ*
*ಸ್ಯದೀನತೋನ್ಮಾದಮಾದಿ ಸಂಚರಿಯೆ ತಾಂ*

ವೃತ್ತಿ : ಇಷ್ಟವಿಯೋಗಾನಿಷ್ಟಸಂಯೋಗಾದ್ಯಾಲಂಬನವಿಭಾವಂ, ಬಂಧುಗಳಟ್ಕೆ ಮೊದಲಾದು ವುದ್ದೀಪನವಿಭಾವಂ ದೈವೋಪಾಲಂಭ ನಿಶ್ವಾಸತನುತ್ವ ಮುಖಶೋಷಣ ಭೂಲುಠನ ಮೂರ್ಛಾದಿಯನುಭಾವಂ ಸ್ವರ ಭೇದಾಶ್ರು ಸ್ತಂಭವಿವರ್ಣ ಕಂಪ ಪ್ರಳಯಾದಿ ಸಾತ್ವಿಕಭಾವಂ ದುಃಖಾಮಯ ನಿರ್ವೇದ ಗ್ಲಾನಿ ಶಂಕೌತ್ಸುಕ್ಯ ಮೋಹ ಶ್ರಮ ತ್ರಾಸ ವಿಷಾದ ದೈನ್ಯಾಮಯ ಜಡತೋನ್ಮಾದಾಪಸ್ಮಾರಾಲಸ್ಯ ಮರಣ ಪ್ರಭೃತಿ ವ್ಯಭಿಚಾರಿ ಭಾವಂ ಇವಱಿಂ ಶೋಕಸ್ಥಾಯಿ ಚರ್ವ್ಯಮಾಣಮಾಗೆ ಕರುಣರಸಂ

**ಲಕ್ಷ್ಯಂ**

*ದೆಸೆಗಳ್ ಮಾರ್ದನಿವೋಗೆ ಕೇಳ್ದರೆರ್ದೆ ಬಾಳಂ ಬೀಸಿದಂತಾಗೆ ತೆ*
*ಳ್ವಸಿಱಿಂ ತೊಪ್ಪನೆ ಮೋದಿ ಬಾಯಟೆದು ಹಾ ಎಂದಟ್ಟು ಬಾಷ್ಪಾಂಬು ಪೂ*
*ರಿಸೆ ಪುಯ್ಯಲ್ಬುವ ಸೀತೆಯಂ ಹಹಹ ನಿಸ್ತ್ರಿಂಶಂ ದಶಾಸ್ಯ ವಿಗು*
*ರ್ವಿಸಿ ನೋಡುತ್ತುಮದೆಂತು ನಿಷ್ಕರುಣದಿಂದುಯ್ಯಲ್ ಮನಂದಂದನೋ* ೧೦೦

*ಬಳಯಿಸೆ ಬಾಸುಱಂ ಬಸಿಜೊಳೆಯ್ದೆ ಕರಾಂಗುಲಿಗಳ್ ಕಪೋಲದೊಳ್*
*ಬಳಯಿಸೆ ಬಾನಲಂ ಸುರಿವ ಬಾಷ್ಪಜಲಂ ಕರುಷೋತ್ಥಹಾರವಂ*

*ಬಳಯಿಸೆ ಬಾಯಬತ್ತುಗೆಯನಿಂತೆರ್ದೆಗೆಟ್ಟಟುತುಂ ಮೃಣಾಳ ಕೋ*
*ಮಳತನುಬಿಟ್ಟಿಳಂದು ಜಿತಸೇನೆ ನೃಪಾಲ ಪದಾಬ್ಜಮೂಲದೊಳ್ ೧೦೧*

*ಊಡಿದೆನೋದಲಿತ್ತೆನೊಡಕಲ್ಚುದು ಮಣ್ಣನ ಕೂಸುದಂದೆನಾಂ*
*ಬೇಡೆನೆ ಮೀಱ ಕಳ್ಳರೊಡನಾಡಿಯೆ ಪೆತ್ತ ಬಸಿರ್ಗೆ ಸಂತಸಂ*
*ಮಾಡಿದೆಯೆಂದಿದೇಂ ಮಗನೆ ನುಣ್ಣನೆ ನುಣ್ಮೊಗದಲ್ಲಿ ಮೀಸೆಗಳ್*
*ಮೂಡದ ಮುನ್ನ ನಿನ್ನ ಪೆಗಲೊಳ್ ಪೊಸಶೂಲಮಿದೇಕೆ ಮೂಡಿತೋ* ೧೦೨ (ಇವು ಮೂಱುಂ ಕರುಣರಸಂ)

**ಸೂತ್ರಂ ೫೧**

*ಪ್ರಭವಿಪುದುತ್ಸಾಹ ಸ್ಥಾ*
*ಯಿಭಾವದಿಂ ವೀರರಸಮೆ ಮೂದೆಱನಕ್ಕುಂ*
*ಅಭಿಗತ ದಾನಾದಿ ಜಯ*
*ಪ್ರಭಾವದಿಂ ಸುಕವಿನಿಕರಮಾರ್ಗಕ್ರಮದೊಳ್*

**ಸೂತ್ರಂ ೫೨**

*ನುತುಪಾತ್ರ ಶತ್ರುದೀನರ್*
*ವಿತತಾಲಂಬನ ವಿಭಾವಮುಕ್ಕುಂ ದಾನ*
*ಸ್ತುತಿ ರಣಭೇರಿಧ್ವನಿ ದೀ*
*ನತೋಕ್ತಿಯುದ್ದೀಪನಂ ವಿಭಾವಮದಕ್ಕುಂ*

**ಸೂತ್ರಂ ೫೪**

*ವಸುಶಸ್ತ್ರಸಂಗ್ರಹತ್ವಂ*
*ಪ್ರಸಾದಮನುಭಾವಮೆಸೆವ ಪುಳಕಾದಿಯೆ ಭಾ*
*ವಿಸೆ ಸಾತ್ವಿಕಭಾವಂ ಹ*
*ರ್ಷಸೋಗ್ರಧೃತ್ಯಾದಿ ನೆಗಟ್ದ ಸಂಚಾರಿ ವಲಂ*

ವೃತ್ತಿ : ಪಾತ್ರಪ್ರತಿನಾಯಕದೀನಾದಿಯಾಲಂಬನವಿಭಾವಂ ದಾನಸ್ತೋತ್ರ ಫಲ ವ್ಯಾವರ್ಣನ ತತ್ಪಾತ್ರವ್ರತಶೀಲಾದಿ ಗುಣಾದಿಯುಂ ರಣಭೇರೀಧ್ವನಿತದ್ರಿಪು ನಯನವಿವೇಕ ಬಲಶಕ್ತಿ ಪ್ರಧಾನಪ್ರಭಾವಪ್ರತಾಪ ವಿಕ್ರಮಾಧಿಕ್ಷೇಪಾದಿಯುಂ ದೀನತೋಕ್ತ್ಯಾದಿಯುಮುದ್ದೀಪನವಿಭಾವಂ ಕ್ರಮದಿಂ ವಿತ್ತಸಂಗ್ರಹತ್ವ ತ್ರಿಕರಣ ಶುದ್ಧತ್ವ ವಿವೇಕತ್ಯಾಗಾದಿಯುಂ ಶಸ್ತ್ರಸಾಮಗ್ರೀ ವೀರಾಲಂಕಾರ ಸ್ಥೈರ್ಯ ಧೈರ್ಯ ಗಾಂಭೀರ್ಯ ವಿಶಾರದತ್ವಾದಿಯುಂ ಕೃಪಾಭಯವಚನಪ್ರಸಾದಾದಿಯುಮನುಭಾವಂ ಅಶ್ರುಪುಲಕಾದಿಯೆ ಸಾತ್ವಿಕಭಾವಂ ಹರ್ಷಮತಿಶ್ರುತಿಗರ್ವಾಮರ್ಷೋಗ್ರಧೃತ್ಯಾದಿಗಳ್ ವ್ಯಭಿಚಾರಿಭಾವಂ ಇವಱಿನುತ್ಸಾಹ ಸ್ಥಾಯಿ ಭಾವಂ ಚರ್ವ್ಯಮಾಣಮಾಗೆ ವೀರರಸಂ

**ಲಕ್ಷ್ಯಂ**

*ಉದಯಾಸ್ತೋನ್ನತಶೈಲಸೇತುಹಿಮವತ್ಕುತ್ಕೀಲಪರ್ಯಂತ ಸಂ*
*ಪದೆಯಂ ವಾರ್ಧಿತರತ್ತರಂಗನಿನದತ್ಕಾಂಚೀಕಲಾಪಾಂಚಿತಾ*
*ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ*
*ರ್ಚಿದ ಗೆಲ್ಲಂ ಭುವನೈಕರಾಮ ಮಹಿಪಂಗಕ್ಕುಂ ಪೆಱರ್ಗಕ್ಕುಮೆ (ಇದು ದಾನವೀರಂ) ೧೦೩*

*ಘನದೋರ್ದರ್ಪನಜೇಯನುಗ್ರತರ ನಾನಾ ಸೈನ್ಯಸಂಸೇವ್ಯನೆ*
*ತ್ತಿ ನರೇಶಂ ತವೆ ಮುತ್ತೆ ಶತ್ರುಪುರಮಂ ತತ್ಕಾಂತೆಯರ್ ಘೋಳ್ಳೆನು*
*ತ್ತೆನಸುಂ ಬಂದೆರಡೋಲೆಯೆಮ್ಮ ಕಿವಿಯೊಳ್ ತಟ್ಟಿರ್ಪುದಂ ಮಾಟ್ಟುದೆಂ*
*ದೆನೆ ಕಾರುಣ್ಯದೆ ಕಾಯ್ದನಂತನಿಬರಂ ತದ್ದೇಶಮಂ ಕೋಶಮಂ ೧೦೪ (ಇದು ದಯಾವೀರಂ)*

*ಕ್ಷಿತಿಯೊಳರಾತಿಭೂಪತಿಗಳಂ ತವೆಕೊಂದು ಸಮಂತು ವಿಪ್ರಸಂ*
*ತತಿಗಖಿಳಾವ ನೀತಳಮನಿತ್ತು ನೆಗಟ್ಟಿದನಲ್ತೆ ವಿಕ್ರಮೋ*
*ನ್ನತಿಯನದೊಂದು ದಾನಗುಣದುನ್ನತಿಯಂ ಭುವನಕ್ಕೆ ಭಸ್ಮಸಾ*
*ತ್ಕೃತರಿಪುಪಾತ್ರಸಾತ್ಕೃತಜಗದ್ವಳಯಂ ಜಮದಗ್ನಿ ನಂದನಂ ೧೦೫ (ಇದು ಉಭಯವೀರಂ)*

**ಸೂತ್ರಂ ೫೫**

*ಪೊರೆಗುಂ ಕ್ರೋಧವೆ ರೌದ್ರಂ*
*ಸ್ಫುರದಾಲಂಬನಮೆ ಮತ್ಸರ ದ್ವೇಷಂ ನಿ*
*ಷ್ಠುರವಚನ ಚೇಷ್ಟೆಗಳ್ ತಾ*
*ಮಿರದುದ್ದೀಪನವಿಭಾವಮಾರಸಕಕ್ಕುಂ*

**ಸೂತ್ರಂ ೫೬**

*ಭ್ರುಕುಟಿನಯನಾರುಣಾದಿ*
*ಪ್ರಕಟನಮನುಭಾವಮಾವಿವರ್ಣ ಸ್ವೇದಾ*
*ದಿಕಮಕ್ಕುಂ ಸಾತ್ವಿಕಮೀ*
*ರ್ಷ್ಯೆ ಕೋಪಮುಗ್ರಾದಿ ನೆಗಟ್ಟಿ ಸಂಚಾರಿ ವಲಂ*

ವೃತ್ತಿ: ಆಲಂಬನವಿಭಾವಂ ಮಾತ್ಸರ್ಯ ದ್ವೇಷಮೆಂದಿರ್ತೆಱಂ ದಾರಾಪ ಹಾರದೇಶ ಚೌರ್ಯಾಭಿಜನಕರ್ಮನಿಂದೆ ಅಸತ್ಯವಚನ ಸತ್ಯಾಧಿಕ್ಷೇಪೋಪಹಾಸ ಸತ್ವಾಪ್ರ್ಷದ್ರೋಹಂಗ ಳುದ್ದೀಪನವಿಭಾವಂಗಳ್ ಭ್ರುಕುಟಿನಯನರಾಗದಂತೌಷ್ಠಪೀಡನ ಗಂಡಸ್ಫುರಣ ಹಸ್ತಾಗ್ರ ನಿಷ್ಪೇಷಣ ತಾಡನ ಪಾತನ ಪೀಡನಪ್ರಹರಣಾಪಹರಣ ಶಸ್ತ್ರಸಂಪಾತರುದಿತಾ ಕರ್ಷಣಚ್ಛೇದನಾದಿಯನುಭಾವಂ ಉಗ್ರಾವೇಗೋನ್ಮಾದ ವಿಭೋಧಾಮರ್ಷ ಚಾಪ ಲ್ಯಾದಿ ವ್ಯಭಿಚಾರಿಭಾವಂ ಇವಱಿಂ ಕ್ರೋಧಂ ಚರ್ವ್ಯಮಾಣ ಮಾಗೆ ರೌದ್ರರಸಂ

**ಲಕ್ಷ್ಯಂ**

*ಕುಡಿವೆಂ ದುಶ್ಯಾಸನೋರಸ್ಥಲಮನಗಲೆ ಪೋೞ್ದುರ್ದು ಕೆನ್ನೆತ್ತರಂ ಪೋ*
*ಗುಡಿವೆಂ ಪಿಂಗಾಕ್ಷನೂರುದ್ವಯಮನುರು ಗದಾಘಾತದಿಂ ನುಚ್ಚುನೂಱಾ*
*ಗೊಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ ನಂಬು ನಂಬೆನ್ನ ಕಣ್ಣಿಂ*
*ಕಿಡಿಯುಂ ಕೆಂಡಂಗಳುಂ ಸೂಸಿದಪುವ ನಿತುಮಂ ನಂಬುಪಂಕೇಜವಕ್ತ್ರೇ* ೧೦೬ (ಇದು ಮಾತ್ಸರ್ಯ ರೌದ್ರಂ)

*ಸ್ಫುಟಕೋಪಾಟೋಪನೇತ್ರಸ್ಫುರದರುಣತರತ್ತಾರ ವಿಸ್ತಾರ ನಾಸಾ*
*ಪುಟನಾದಷ್ಟೌಷ್ಠನುದ್ಯದ್ ಭ್ರುಕುಟಿಕುಟಿಲಭಾಳಸ್ಥಳಂ ಸ್ವೇದ ಬಿಂದೂ*
*ತ್ಕಟಗಂಡಸ್ಥಾನನುಜ್ಜೃಂಭಿತಭುಜಶಿಖರಂ ಗದ್ಗದೀಭೂತನಾದೋ*
*ತ್ಕಟಕಂಠಂ ಭೈರವಾಡೇಂಬರಮನಿ ಟಿಪಿದಂ ಯುದ್ಧದೊಳ್ ಸಾರ್ವಭೌಮಂ* ೧೦೭

*ತಳಮಂ ಮಾಱುದ್ದಿ ಧಾತ್ರೀತಳದೊಳರಿಮಹೀನಾಥ ವಿಖ್ಯಾತ ಚಾತು*
*ರ್ಬಳಮಂ ಬಂದೈಸುವಂ ಕಂಗಳೊಳ್ ಕಲುಷದಿಂ ಪೀರ್ವವೋಲ್ ನೋಡಿ ಬಾಹಾ*
*ಬಳದಿಂ ಕಾಲಾಳನಾಳಿಂ ಸದೆದು ತುರುಗಮಂ ತತ್ತುರಂಗೌಘದಿಂ ಪೊ*
*ಯ್ದುಳವಿಂದಾ ದಂತಿಯಂ ದಂತಿಯೊಳ್ ಬಡಿದು ಪೇಸೇಟಿ*
*ಕೊಂದಂ ಮುಕುಂದಂ* ೧೦೮

*ಮದಗಜವೆರಡಱ ಬಾಲದ*
*ಮೊದಲಂ ಪಿಡಿದೆತ್ತಿ ಪೊಯ್ದು ನುರ್ಗೊತ್ತಿದೊಡಾ*
*ಸ್ಯದಿನುಗುವ ರಕ್ತಮುರಿಯೆನೆ*
*ತಿದಿಯೊತ್ತುವ ಕಮ್ಮಱಂಬೊಲಿರ್ದಂ ಭೀಮಂ (ಇದು ರೌದ್ರಂ)* ೧೦೯

**ಸೂತ್ರಂ ೫೭**

*ಕೃತವಿಸ್ಮಯಜಾತಮದ*
*ದ್ಭುತಮಾಲಂಬನವಿಭಾವಮತಿಚಿತ್ರ ಚಮ*
*ತ್ಕೃತಿ ತದ್ವದಭಿನಯಸ್ತೋ*
*ತ್ರತೆಯುದ್ದೀಪನವಿಭಾವಮಾರಸಕಕ್ಕುಂ*

**ಸೂತ್ರಂ ೫೮**

*ಅಕ್ಷಿಮುಖವಿಕಸನಾದಿಯೆ*
*ಲಕ್ಷಿಪೊಡನುಭಾವಮೆಯ್ದೆ ಪುಳಕಾದಿಯೆ ತಾ*
*ನೀಕ್ಷಿಸಿ ಸಾತ್ವಿಕಮುರುಹ*
*ರ್ಷಾಕ್ಷಮಸಂವೇಗಮಾದಿಸಂಚಾರಿ ವಲಂ*

ವೃತ್ತಿ : ಅತಿಚಿತ್ರಾದಿ ದಿವ್ಯದರ್ಶನೇಪ್ಸಿತಮನೋರಥಾವಾಪ್ತಿ ದೇವ ಕುಲಾದಿ ಗಮನ ಮುಪವನ ಸಭಾಮಾಯಾ ವಿಮಾನೇಂದ್ರ ಜಾಲಾತಿಶಯ ಚಿತ್ರ ಕರ್ಮಾದಿ ಯಾಲಂಬನ ವಿಭಾವಂ ತದ್ವದಭಿನಯಸ್ತೋತ್ರವ್ಯಾವರ್ಣನ ಚಿಂತಾದಿ ಯುದ್ದೀಪನ ವಿಭಾವಂ ನಯನವಿಸ್ತಾರಾ ನಿಮಿಷಪ್ರೇಕ್ಷಣ ಸಾಧುವಾದ ದೇಹಾಂಗುಲಿಭ್ರಮಣಾದಿ ಯನುಭಾವಂ. ರೋಮಾಂಚಾಶ್ರುಸ್ವೇದಾದಿ ಸಾತ್ವಿಕಭಾವಂ ಹರ್ಷಾವೇಗಜಡತಾದಿ ವ್ಯಭಿಚಾರಿ ಭಾವಮಿವಱಿಂ ವಿಸ್ಮಯಸ್ಥಾಯಿಯನುಭೂಯ ಮಾನಮೊದೊಡದ್ಭುತರಸಂ.

**ಲಕ್ಷ್ಯಂ**

*ಮನಮುಂ ದಿಟ್ಟಿಯುಮೆಯ್ದದಂಬುನಿಧಿಯಂ ಮುಂ ದಾಂಟಿದಂ ದಾಂಟಿ ತ*
*ದ್ವನಪಾಲರ್ಕಳನಿಕ್ಕಿ ಕೂಡೆ ಬನಮಂ ಕಿಟ್ಟಿತ್ತಿದಂ ಕಿಟ್ಟುಮೊ*
*ರ್ವನೆ ಪಾಟೀಟ್ವಿನಮೊಂದೆ ಕೊಳ್ಳಿಯೊಳೆ ಸುಟ್ಟಂ ಲಂಕೆಯಂ ಚೋದ್ಯಮೆಂ*
*ದೆನಸುಂ ವಿಸ್ಮಯಮುತ್ತು ಮಾರುತಿಯನಾ ಲಂಕೇಶ್ವರಂ ಮೆಚ್ಚಿದಂ ೧೧೦*

*ಅತಿಸೂಕ್ಷ್ಮೇಕ್ಷಣನೆಂತುಮಂಧನಸತೀಸೌಂದರ್ಯದೊಳ್ ವಿಕ್ರಮಾ*
*ನ್ವಿತನೆಂತುಂ ಪೆಟವಂ ಮಹಾಜಿಮುಖದೊಲ್ ನಿರ್ಣೀತಸಮ್ಯಗ್‌ಬಹು*
*ಶ್ರುತನೆಂದುಂ ಬಧಿರಂ ಕರಂ ಪರಪರಿವಾರಂಗಳೊಳ್ ನೋೞ್ಪೊಡ*
*ದ್ಭುತಮಾಶ್ಚರ್ಯಮಭೂತಪೂರ್ವಮೆಸಕಂ ಶ್ರೀಗಂಡಮಾರ್ತಂಡನಾ ೧೧೧*

ವ : ಮತ್ತಂ

*ಬೇಱೊಂದದ್ಭುತರಸಮಂ*
*ಬೀಱುತ್ತು ಮನೇಕವಿಧದ ಫಲಪರಿಣತಿಯಿಂ*
*ದಾಱುಂ ಋತಗಳುಮೊಡನೆಯೆ*
*ತೋಱಿದುವು ತಪಃಪ್ರಭಾವದಿಂದ ತನ್ಮುನಿಯಾ ೧೧೨ (ಇವದ್ಭುತರಸಂ)*

**ಸೂತ್ರಂ ೪೯**

*ಭಯದೆ ಭಯಾನಕರಸಮಾ*
*ರಯೆ ರಿಪು ಸರ್ಪಾದಿ ಪೆಂಪಿನಾಲಂಬನಮಾ*
*ಭಯಹೇತು ಗರ್ಜಿತಾದಿಯೆ*
*ನಯುದುದ್ದೀಪನವಿಭಾವಮಾ ರಸಕಕ್ಕುಂ*

**ಸೂತ್ರಂ ೫೦**

*ಕಂಪಸ್ವೇದಾದಿಯದ*
*ಕ್ಕಾಂಪನುಭಾವಂ ಕರಂ ವಿವರ್ಣಾದಿಯೆ ಮ*

*ತ್ತಂ ಪುದಿದ ಸಾತ್ವಿಕಂ ತ್ರಾ*
*ಸಂ ಪರಿ ದೈನ್ಯಭ್ರಮಾದಿ ಸಂಚಾರಿಯೆ ತಾಂ*

ವೃತ್ತಿ : ರಿಪು ಸರ್ಪಪಿಶಾಚಭೂತಾದಿಶೂನ್ಯಗೃಹಾರಣ್ಯ ಗಮನಾದಿ ವ್ಯಾಲ ಮೃಗಾದಿಯಾ ಲಂಬನವಿಭಾವಂ. ತದ್ವಿಕೃತಸ್ವರಶ್ರವಣ ತದಾಲೋಚನ ಸ್ವಜನವಧಬಂ ಧಾದಿದರ್ಶನ ಶ್ರವಣಮುದ್ದೀಪನವಿಭಾವಂ, ಕರಕಂಪಚಲದೃಷ್ಟಿ ನಿರೀಕ್ಷಣ ಹೃದಯ ಪಾದಸ್ಪಂದಶು ಷ್ಕೌಷ್ಠಕಂಠತ್ವಮನುಭಾವಂ, ಮುಖ ವೈವರ್ಣ ಸ್ವರ ಭೇದಾದಿ ಸಾತ್ವಿಕಭಾವಂ, ಶಂಕಾಪ ಸ್ಮಾರ ಮರಣ ತ್ರಾಸ ಚಾಪಲ್ಯಾವೇಗ ದೈನ್ಯ ಮೋಹಾದಿ ವ್ಯಭಿಚಾರಿಭಾವಮನಱಿಂ ಸ್ವಾದ್ಯಮಾನಮಾದ ಭಯಸ್ಥಾಯಿಯೆ ಭಯಾನಕರಸಂ.

ವಿಚಾರಂ : ಸ್ತ್ರೀಯರ್ಗಂ ನೀಚಪ್ರಕೃತಿಯನುಳ್ಳರ್ಗಂ ಭಯಂ ಸ್ವಭಾವಂ ಧೀರೋದಾತ್ತಾದ್ಯುತ್ತ ಮರ್ಗೆ ಭಯಂಕೃತಕಮೆನಿಪ್ಪುದವರ್ಗುರುಮುನೀಶ್ವರಾದಿಗಳಲ್ಲಿ ಕರಕಂಪನಗದ್ಗದ ಸ್ವರಾದಿಗಳಿಂ ಮಾಟ್ಪ ಭಯಂ ಕೃತಕಂ, ಅಂತಾದೊಡವರ್ಗಮೆಲ್ಲಾ ರಸಂಗಳುಮಿಂತು ಕೃತಕಂಗಳಕ್ಕೆ ಬೆಲೆವೆಣ್ಣ ರತಿಯೆಂತೆಂದೊಡಂತಾಗದು ನೃಪನ ಮೃದುಚೇಷ್ಟೆಗಳಿಂ ವಿನೀತಪ್ರಕೃತಿಯೆಂದು ಗುರು ತಿಳಿದನದು ಸಫಳಮಾದುದು, ಅವಳ್ ತೋರ್ಪ ರತಿದನನಿಮಿತ್ತಮಲ್ಲದೆ ಸಾಜಮಲ್ಲೆಂದು ಚದುರ ಕಾದಲನದಂ ತಿಳಿವನದಾ ತೆಱಂ. ಪ್ರಜಾಪಲನಾರ್ಥದಿನರಸುಗಳ್ ಕ್ರೋಧ ವಿಸ್ಮಯಂಗಳಂ ತೋರ್ಪರವುಂ ವ್ಯಭಿಚಾರಿ ಯಲ್ಲದೆ ಸ್ಥಾಯಿಯಲ್ತು.

**ಲಕ್ಷ್ಯಂ**

*ಮಕರಂ ಬಾಯ್ದೆಱೆದಂದದಿಂ ತೆಱೆದಬಾಯ್ ಕೊಂಕಿರ್ದಕೂರ್ದಾಡೆನೆ*
*ಕ್ಕ ಕದಂಪೆತ್ತಿದ ಪುರ್ವು ಪತ್ತಿದ ಬಸಿಱ್ ಪೋತಂದ ಕಣ್ಣುದ್ಭ್ರಮೆ*
*ಘಕಠೋರಧ್ವನಿಗೇಳ್ದ ಕೇಸುರಿವೊಲಿರ್ದಾಭೀಳ ಕೇಶಾಳಿ ಸ*
*ರ್ಪಕನದ್ಭೂ ಷಣ ಭೀಷಣಂ ಭಯದಮಾಯ್ತಾ ರಾಕ್ಷಸೀರೂಪಕಂ ೧೧೩*

*ಬೆರಲಂ ಕರ್ಚುವ ಪುತ್ತಂ*
*ಪರಿದೇಱುವ ಕಯ್ದುವಿಕ್ಕಿ ಪೊಡಮಡುವ ಭಯ*
*ಜ್ವರದಿಂ ನಡುಗುವ ಭೀರುಗ*
*ಳರೆಬರ್ ಕನ್ನಡಿಸಿದರ್ ಭಯಾನಕರಸಮಂ ೧೧೪ (ಇದು ಭಯಾನಕಂ)*

**ಸುತ್ರಂ ೬೧**

*ಒದವಿರ್ದೊಂದು ಜುಗುಪ್ಸೆಯಿಂದೆ ಸಲೆ ಭೀಭತ್ಸಂ ಪೊದಟ್ಗುಂ ಬೞೆ*
*ಕ್ಕದು ತಾನೆಯ್ದೆ ಜುಗುಪ್ಸಿತೇಕ್ಷಣ ವಿರಕ್ತಿದ್ವಂದ್ವದಿಂ ದ್ವಂದಮಾ*
*ಯ್ತುದಿತಾಲಂಬನಮಾ ಜುಗುಪ್ಸಿತೆಗೆ ದುರ್ಗಂಧಾದಿಯುದ್ದೀಪನಂ*
*ಪುದಿಗುಂ ತದ್ರಸದೇೞ್ಗೆಯೆಂಬುದು ರಸಜ್ಞರ್ಪೇೞ್ದ ಮಾರ್ಗಕ್ರಮಂ*

**ಸೂತ್ರಂ ೬೨**

*ಮೂಗಂ ಮುಚ್ಚುವುದದು ಮೊದ*
*ಲಾಗೊರೆಯಲ್ ತದ್ರಸಾನುಭಾವಮದಂಗಂ*
*ತೂಗುವುದಾದಿಯೆ ಸಾತ್ವಿಕ*
*ಮೇಗಂ ನಿರ್ವೇಗಮಾದಿ ಸಂಚಾರಿವಲಂ*

ವೃತ್ತಿ : ಹೃದ್ಯಮಲ್ಲದ ಛರ್ದಿ ವ್ರಣ ಕುಷ್ಠಾದಿ ಜುಗುಪ್ಸಿತ ಶರೀರ ದರ್ಶನ ಶ್ರವಣಾದಿಯಾಲಂಬನ ವಿಭಾವಂ, ಪೂತಿಗಂಧೆಕ್ರಿಮಿಕೀಟಾದಿಯುದ್ದೀಪನವಿಭಾವಂ, ಶರೀರಸಂಕೋಚನಂನಾ ಸಾಮುಖಾದಿ ವಿಕೂಣನಾಚ್ಛಾದನಂ ನಿಷ್ಠೀವಮೊಗಡಿಕೆ ಇವು ಮೊದಲಾದುವನುಭಾವಂ, ಕಂಪವೈವರ್ಣ್ಯಸ್ವರಭೇದಾದಿ ಸಾತ್ವಿಕಭಾವಂ, ಮೋಹಾಪಸ್ಮಾ ರೋಗ್ರಗದಾದಿ ವ್ಯಭಿಚಾರಿ ಭಾವಂ, ವಿರಕ್ತಿ ನಿರ್ವೇದಮತಿ ಧೃತ್ಯಾದಿ ವ್ಯಭಿಚಾರಿಭಾವಂ ; ಇವಱಿಂ ಚರ್ವ್ಯಮಾಣ ಮಾದ ಜುಗುಪ್ಸೆಯೆ ಭೀಭತ್ಸರಸಂ

**ಲಕ್ಷ್ಯಂ**

*ಮಱೆದಾಗುಳಿಸಲ್ ಬಾಯಂ*
*ತೆಱೆದೊಡೆ ದುರುದುರುಸುತಿರ್ಪ ಮದ್ಯದ ಕುಱೆಯುಂ*
*ಮಱೆಯಿ ಸುಗುಮವನಬಾಯೆಂ*
*ತೆಱಗುವೆನೆಮ್ಮಜ್ಜಿ ಪೋಗೆ ನೂಂಕುವಳೆನ್ನಂ ೧೧೫ ( ಇದು ಜುಗುಪ್ಸಿ ತಭೀಭತ್ಸಂ)*

ವ : ಮತ್ತಂ

*ಪರಿವರುಣಜಲದಿನುಣ್ಮುವ*
*ಕರುಳಿಂ ಚಿಮಿಚಿಮಿಸುತಿರ್ಪ ಕೋಟ್ಕೆದುಳಿಂ ಸಂ*
*ಗರರಂಗಮಾವಗಂ ಕೊ*
*ಕ್ಕರತೆಯನೊಡರಿಸದದಾರ ಕಣ್ಗಂ ಮನಕಂ ೧೧೬ ( ಇದು ಜುಗುಪ್ಸಿ ತೇಕ್ಷಣ ಬೀಭತ್ಸಂ)*

*ಅಡಗಿನ ತೋಲ ನೆತ್ತರ ಮಿದುಳ್ಗಳ ಶಲ್ಯದ ಪುಂಜಮೊತ್ತಿ ಬಂ*
*ದಡಸುವ ವಾತಪಿತ್ತಕಫದೋಷಸಮೂಹದ ಪತ್ತಿ ನಿಲ್ವುದೆಂ*
*ದೊಡೆ ಪೆಱತೇಂ ಕ್ರಿಮಿವ್ರಜದ ಮೂತ್ರಪುರೀಷದ ಕೊಂಡಮೆಂದುಮೀ*
*ಯೊಡಲಿದಱಂದಮಂ ಬಗೆದು ಭಾವಿಸಿ ಪೇಸದುದೇಕೆ ಜೀವನೇ ೧೧೭*

ವ : ಮತ್ತಂ

*ನರಕದ ನೆರೆಮನೆಯೊಡಲೆಂ*
*ಬರ ಮಾತಂತಿರ್ಕೆ ನರಕಮೇಱುಮನೊಂದಾ*
*ಗಿರಿಪ ಬಗೆಯಿಂ ವಿಧಾತ್ರಂ*
*ವಿರಚಿಸಿದಂ ಸಪ್ತಧಾತುಮಯಮೆನಿಪೊಡಲಂ ೧೧೮*

ವ: ಮತ್ತಂ

*ನಿಧಿದುಸ್ತರ ಜನ್ಮಾಂಭೋ*
*ನಿಧಿ ಕರ್ಮಕ್ಷಯವಿರೋಧಮವರೋಧಂ ಶ್ರೀ*
*ವಧುಕುಲಟಾವಧುವೆಂಬೊಂ*
*ದಧಮತೆ ತಳ್ತತ್ತು ಚಕ್ರವರ್ತಿಯ ಮನದೊಳ್ ೧೧೯ (ಇವು ಮೂಱುಂ ವಿರಕ್ತಿಭೀಭತ್ಸಂ)*

**ಸೂತ್ರಂ ೬೩**

*ಶಮಭಾವಪ್ರಭವಂ ಶಾಂ*
*ತಮಕ್ಕುಮಂತಾ ಶಮತ್ವಮುಂ ವರ್ತಿಸುಗುಂ*
*ಸಮನಿಸಿ ಸಮ್ಯಗ್ಜ್ಞಾನಂ*
*ತಮಮಂ ರಾಗಮುಮನಲೆದು ತೊಲಗಿಸೆ ಮನದೊಳ್*

**ಸೂತ್ರಂ ೬೪**

*ಶಿವಪದಮೆ ಮತ್ತದರ್ಕೊ*
*ಪ್ಪುವುದಾಲಂಬನವಿಭಾವಮಾ ಮೋಕ್ಷಾರ್ಥಿ*
*ಪ್ರವಚನಸಾರಮೆ ಮಿಗೆ ಕೇ*
*ಳ್ವವರ್ಗುದ್ದೀಪನವಿಭಾವಮಾರ್ಯರ ಮತದಿಂ*

**ಸೂತ್ರಂ ೬೫**

*ಪಗೆಕೆಳೆಯುಂ ಸರಿಗಾಮ್ಬುದೆ*
*ನೆಗಟ್ದನುಭಾವಂ ಪೊದಟ್ದ ಪುಳಕಸ್ತಂಭಾ*
*ದಿಗಳವು ಸಾತ್ವಿಕಭಾವಂ*
*ಸೊಗಯಿಪಮತ್ಯಾದಿ ಸಂದ ಸಂಚಾರಿವಲಂ*

ವೃತ್ತಿ : ಮೋಕ್ಷಪದಮೆ ಆಲಂಬನವಿಭಾವಂ, ಸದ್ಗುರು ನಿರೂಪಶ್ರವಣ ವೈರಾಗ್ಯ ಸಂಸಾರ ಭೀರುತ್ವ ತತ್ವಜ್ಞಾನ ವೀತರಾಗ ಪರಿಶೀಲನ ಪರಮೇಶ್ವರಾನುಗ್ರಹಾದಿ ಯುದ್ದೀಪನ ವಿಭಾವಂ, ಸಮರಸೀಭಾವ ಯಮ ನಿಯಮಾಧ್ಯಾತ್ಮಶಾಸ್ತ್ರಚಿಂತನಾದಿ ಅನುಭಾವಂ, ಸ್ತಂಭನಾನಂದಾಶ್ರು ಪುಳಕಾದಿ ಸಾತ್ವಿಕಭಾವಂ, ಧೃತಿ ಸ್ಮೃತಿ ಮತಿ ನಿರ್ವೇದಾದಿ ವ್ಯಭಿಚಾರಿಭಾವಂ ; ಇವಱಿಂ ಸ್ವಾದ್ಯಮಾನಮಾದ ಶಮಸ್ಥಾಯಿಯೆ ಶಾಂತರಸಂ.

**ಲಕ್ಷ್ಯಂ**

*ಮನಮಂ ಮುಟ್ಟೈಸಿ ಮಧ್ಯಂದಿನದ ಬಿಸಿಲೆ ಬೆಳ್ದಿಂಗಳಂತಾಗೆ ತನ್ನಿಂ*
*ತನುವಂ ಬೇರ್ಕೆಯ್ದು ಬಾಹ್ಯೇಂದ್ರಿಯಮನುೞಿದ ಕಯ್ಯಿಕ್ಕೆ ನಿರ್ವಾ*
*ಣ ನಿವಾಸಕ್ಕೊರ್ವನಂತರ್ಮುಖನಭಿಮುಖನಾದಿತ್ಯಬಿಂಬಕ್ಕೆ ಯೋಗೀಂ*
*ದ್ರನ ತಂದ್ರಂ ನಿರ್ನಿಮೇಷಂ ನಗನಿಕಟಹಟದ್ರತ್ನಕೂಟಂಬೊಲಿರ್ದಂ ೧೨೦*

ವ : ಮತ್ತಂ

*ಗಿಡಿಗಿಡಿ ಜಂತ್ರಮಾಯ್ತೊಡಲೊಡಲ್ವಿಡಿದಿರ್ದಖಿಳೇಂದ್ರಿಯಂಗಳುಂ*
*ಮಿಡುಕದೆ ಪೋದುವಂತವಱ ಪೋಗಿನೊಳಾಯ್ತು ಮನಕ್ಕೆ ಸೌಖ್ಯಮಾ*
*ಗಡಣೆಪ ಸೌಖ್ಯದಿಂ ನೆಲಸಿದತ್ತು ಶುಭಾನ್ವಿತಮಪ್ಪ ಜಾನಮಂ*
*ತೊಡರಿಪ ಜಾನದೊಂದೆಸಕದಿಂ ಪಱಿ ಪಟ್ಟುವು ಪಾಪಪಾಂಸುಗಳ್ ೧೨೧*

ವ : ಮತ್ತಂ

*ಒಱಲೆ ತಗುಳ್ದು ಪುತ್ತಿಡುವುದೆಯ್ದೆ ಮೃಗಾವಳಿ ಕೋಡ ತೀಂಟೆಗೀ*
*ಡಿಱಿವುವು ಪಕ್ಕಿ ಗೂಡಿಡುವುದಾವರಿಸಿರ್ದ ಲತೋತ್ಕರಂ ಪಗಂ*
*ಡಿಱಿವುವು ನಿಂದ ಪಾವನ ತಪೋವನದೊಳ್ ಪ್ರತಿಮಾ ನಿಯೋಗದೊಳ್*
*ನೆಱೆದಮಳಾಂತರಂಗನೆನಿಸಿರ್ದ ಮುನೀಂದ್ರನ ನಿಶ್ಚಲಾಂಗದೊಳ್ ೧೨೨*

ವ : ಮತ್ತಂ

*ಧಾರಾಭಿಷೇಕಮದುವೆ ತ*
*ಪೋರಾಜ್ಯಕ್ಕೆನಿಸೆ ಸುರಿವ ಮೞಿ ಘನರುತಿ ತೂ*
*ರ್ಯಾರವಮಾಗೆ ಮುನೀಶಂ*
*ಬೇರೂಱಿದ ಬಿಟಲ ತೆಱದೆ ಮರಮೊದಲಿರ್ದಂ ೧೨೩ (ಇದು ಶಾಂತರಸಂ)*

**ಶಾಂತರಸ ವಿಚಾರಂ**

ವ : ಶಾಂತರಸಂ ವಿಷಯ ಜುಗುಪ್ಸಾರೂಪತ್ವಮಾಗಿಯುಂ ಭೀಭತ್ಸದೊಳಂ ತರ್ಭಾವಮಲ್ತು. ಜುಗುಪ್ಸೆಯಿದರ್ಕೆ ವ್ಯಭಿಚಾರಿಯಪ್ಪುದಱಿಂದದುತಾಂ ಸ್ಥಾಯಿತ್ವ ಮನೆಯ್ದದು. ತಾನೆಂತೆಂದೊಡೆ ಶಾಂತರಸ ಪರಿಪೂರ್ಣತೆಯೊಳದು ನಿರ್ಮೂಲ ಮಪ್ಪುದಱಿಂ ವೀರದೊಳಂತರ್ಭಾವಮೆಂದೊಡದುವುಮಲ್ತು ; ವೀರರಸಮಭಿಮಾನ ರೂಪತ್ವಂ, ಶಾಂತರಸಮಹಂಕಾರೋಪಶಮೈಕ ರೂಪತ್ವಮದಱಿಂ ವೀರ ಶಾಂತಕ್ಕೇ ಕತ್ವಪರಿಕಲ್ಪನ ಮಾಗದು, ಅಂತಾದೊಡೆ ವೀರರೌದ್ರಕ್ಕಮೇಕತ್ವಮದಱಿಂ ಧರ್ಮ ವೀರಾದಿಗಳ ಚಿತ್ತವೃತ್ತಿವಿಶೇಷಂಗಳವು ಸರ್ವಾಹಂಕಾರಂಗಳ್ ಅಹಂಕಾರರಹಿತಂ ಶಾಂತರಸಂ. ಈ ಪಾಂಗಿಂ ಸ್ಥಾಪಿಸಿದೊಡೇನುಂ ವಿರೋಧಮಾಗದು. ಇಂತೊಂಬತ್ತು ರಸಂಗಳ್ ಬೇರ್ಪಡಿಸಲ್ಪಟ್ಟುವು ರಸಕಾರಣಂ.

**ಸೂತ್ರಂ ೬೬**

*ಶೃಂಗಾರದಿಂದೆ ಹಾಸ್ಯಂ*
*ಸಂಗಳಿಸಿದ ರೌದ್ರದಿಂದೆ ಕರುಣಂ ಸ್ಫುಟವೀ*
*ರಾಂಗದಿನದ್ಭುತಮಕ್ಕುಂ*
*ಪಿಂಗದೆ ಭೀಭತ್ಸುವಿಂ ಭಯಾನಕಮಕ್ಕುಂ*

**ಲಕ್ಷ್ಯಂ**

*ಮಿದುಳಿಂದಣ್ಪಿಕ್ಕಿ ಬಂಬಲ್ಗರುಳ ಪಿಣಿಲ ಪೂಮಾಲೆಯಂ ಸೂಡಿ ನೆತ್ತ*
*ರ್ಪುದಿದೆತ್ತಂ ತೋರ್ಪ ಪಂದೋವಲ ನಿಱಿವಿಡಿದುಟ್ಟಟ್ಟೆಯಿಂ ಶುಕ್ತಿಯೊಳ್ ತೀ*
*ವಿದ ಕೀಲಾಲಾಂಬುವಂ ಕಣ್ಣುಮು ಚಿಪದೆಪಿನಿದೀಂಟಿ ಪಾಱ್ಯೈಸಿ ಕೈಗ*
*ಣ್ಮಿದ ರಾಗೋದ್ರೇಕದಿಂದಾಡುವ ದನುಜೆ ಭಯಾಭ್ರಾಂತಿಯಂ ಮಾಡಲಾರ್ತಳ್* ೧೨೪

ವ : (ಇಲ್ಲಿ ಭೀಭತ್ಸದಿಂ ಪುಟ್ಟಿದುದು, ಇಂತುಟಿದುವನಱಿವುದು)

ಇನ್ನು ರಸಸಂಕರಂ

**ಸೂತ್ರಂ ೬೭**

*ಮುಸುಕಿನ ಭಂಗಿಯುಂ ನಡೆವ ಗಾಡಿಯುಮೊಪ್ಪಿರೆ ನೀನೆಗೆತ್ತು ಸಂ*
*ಕಿಸಿದಿರುಳೊರ್ವನಂ ಪಿಡಿದೊಡಾತನಿದೇನೆನೆ ನೋಡಿ ಬಿಟ್ಟು ಲ*
*ಜ್ಜಿಸಿ ಬರೆ ಕಂಡು ಮೇಳದೊಡನಾಡಿಗಳೆನ್ನ ಮರುಳ್ತನಕ್ಕೆ ಜೋ*
*ಡಿಸಿ ನಗುವಂತಟಾದುದು ಮನಃಪ್ರಿಯ ನೀಂ ಮುನಿದಿರ್ದ ದೂಸಱಿಂ (ಇಲ್ಲಿ ಶೃಗಾರಹಾಸರಸಂಗಳ ಸಂಕರಂ)*

ಇನ್ನು ವಿರುದ್ಧರಸಂಗಳ್

**ಸೂತ್ರಂ ೬೮**

*ಕರುಣಾರಸಕ್ಕೆ ವೀರಂ*
*ದೊರೆಕೊಳೆ ಶೃಂಗಾರರಸಕೆ ಬೀಭತ್ಸಂ ರೌ*
*ದ್ರರಸಕ್ಕಮದ್ಭುತಂ ವೀ*
*ರರಸಕ್ಕೆ ಭಯಾನಕಂ ವಿರೋಧಿಗಳಕ್ಕುಂ*

ವ : ಇದು ನಾಗವರ್ಮನ ಮತಂ. ಮತ್ತಂ

**ಸೂತ್ರಂ ೬೯**

*ಬೆರಸದವೊಲಿರ್ಕೆ ಶೃಂಗಾ*
*ರರಸಂ ಬೀಭತ್ಸದೊಳ್ ಭಯಂ ರೌದ್ರದೊಳಂ*
*ಕರುಣಾರಸದೊಳ್ ವೀರಂ*
*ಪರಿಹಾಸದೊಳದ್ಭುತಂ ವಿರೋಧಿಗಳಕ್ಕುಂ*

ವ : ಇದು ಉದಯಾದಿತ್ಯನ ಮತಂ. ಮತ್ತಂ

ಗಣೇಶ್ವರಾಗ್ನಿಕೃತ ಸಾಹಿತ್ಯಸಂಜೀವನದಲ್ಲಿ ಶೃಂಗಾರರಸಕ್ಕೆ ವೀರರೌದ್ರ ಭೀಭತ್ಸ ಕರುಣಾ ಶಾಂತಂಗಳರಿಗಳ್, ಹಾಸ್ಯಕ್ಕೆ ಕುರುಣಾಭಯಾನಕಂ ರಿಪು, ಕರುಣಕ್ಕೆ ಹಾಸ್ಯಶೃಂಗ ಅರರೌದ್ರಶಾಂತಾದಿ ವಿರೋಧಂ, ಭಯಾನಕಕ್ಕೆ ವೀರವಮಿತ್ರಂ, ರೌದ್ರಕ್ಕೆ ಹಾಸ್ಯಾದ್ಭುತಂ ಶಾಂತಂ ಶೃಂಗಾರಂ ಶತ್ರು, ವೀರಕ್ಕ ಭಯಾನಕಂ ಪಗೆ, ಬೀಭತ್ಸುಗೆ ಶೃಂಗಾರಮರಿ, ಅದ್ಭುತಕ್ಕೆ ರೌದ್ರಂ ಭಯಾನಕಂ ಸಪತ್ನಂ, ಶಾಂತಕ್ಕೆ ಶೃಂಗಾರಂ ಮೆಚ್ಚದದಿಂತಱಿವುದು. (ಸಾಹಿತ್ಯಸಂಜೀವನ ಸಮ್ಮತಿಪದ್ಯಂಗಳ್)

ಗಣೇಶ್ವರಾಗ್ನಿ ಕೃತ ಸಾಹಿತ್ಯ ಸಂಜೀವನದಲ್ಲಿ ಶೃಂಗಾರ ರಸಕ್ಕೆ ವೀರರೌದ್ರ ಬೀಭತ್ಸ ಕರುಣ ಶಾಂತಂಗಳ ರಿಗಳ್, ಹಾಸ್ಯಕ್ಕೆ ಕರುಣಭಯಾನಕಂ ರಿಪು, ಕರುಣಕ್ಕೆ ಹಾಸ್ಯ ಶೃಂಗಾರ ರೌದ್ರ ಶಾಂತಾದಿ ವಿರೋಧಂ, ಭಯಾನಕಕ್ಕೆ ವೀರ ವಾ ಮಿತ್ರ, ರೌದ್ರಕ್ಕೆ ಹಾಸ್ಯಾದ್ಭುತಂ ಶಾಂತಂ ಶೃಂಗಾರಂ ಶತ್ರು, ವೀರಕ್ಕೆ ಭಯಾನಕಂ ಪಗೆ, ಬೀಭತ್ಸಕ್ಕೆ ಶೃಂಗಾರಂ ಅರಿ, ಅದ್ಭುತಕ್ಕೆ ರೌದ್ರಂ ಭಯಾನಕಂ ಸತತ್ನಂ, ಶಾಂತಕ್ಕೆ ಶೃಂಗಾರ ಮೆಚ್ಚದದು ಇಂತರಿವುದು. (ಸಾಹಿತ್ಯ ಸಂಜೀವನ ಸಮ್ಮತಿ ಪದ್ಯಂಗಳ್)

**ಸೂತ್ರಂ ೭೦**

*ವೀರಂ ಬೀಭತ್ಸ ರೌದ್ರಂ ನಿಜದೆ ಕರುಣ ಶಾಂತಂಗಳಿಂತೆಯ್ದೆ ತಾಂ ಶೃಂ*
*ಗಾರಕ್ಕಂ ವೈರಮಕ್ಕುಂ ಕರುಮ ಭಯಮಿವುಂ ಹಾಸ್ಯಕಂ ವೈರಮಾ ಶೃಂ*
*ಗಾರಂ ಹಾಸ್ಯಂ ಬಟಿಕ್ಕಂ ಪರಿಕಿಸೆ ಸಲೆ ರೌದ್ರಂ ವಲಂ ಶಾಂತಮಿಂತುಂ*
*ಕಾರುಣ್ಯಕ್ಕಂ ಹಿತಂ ತಾನೆನಿಸದು ಭಯಕಂ ವೈರವಾ ವೀರವೆಂದುಂ*

**ಸೂತ್ರಂ ೭೧**

*ಶಾಂತಂ ಹಾಸ್ಯಾದ್ಭುತಂ ರೌದ್ರಕೆ ಪಗೆ ಭಯಮುಂ ಮತ್ತೆ ಶೃಂಗಾರಮುಂದಲ್*
*ಶಾಂತಂ ವೀರಕ್ಕ ಮಿತ್ರಂ ಭಯಮುಱೆ ವಿಲಸದ್ರೌದ್ರವಂತದ್ಭುತಕ್ಕಂ*
*ಎಂತುಂ ವೈರಂ ಸಬೀಭತ್ಸುಗೆಯರಿಯೆನಿಕುಂ ನಾಡೆ ಶೃಂಗಾರಮೇಗಂ*
*ಶಾಂತಕ್ಕಂ ಮೆಚ್ಚಿದೆಲ್ಲರ್ ಬೆಸಸುವರುಱೆ ಶೃಂಗಾರಮಂ ಬುದ್ಧಿವಂತರ್ (ಇದು ಸಾಹಿತ್ಯ ಸಂಜೀವನ ಮತಂ)*

**ಲಕ್ಷ್ಯಂ**

*ಕರಜಕ್ಷತಗಳಿತಸ್ತ್ರಾ*
*ನರಕ್ತ ಕರ್ದಮಿತ ವಿಗ್ರಹಂ ಸವ್ರಣಿತಾ*

*ಧರಜಾತ ಪೂತಿಗಂಧಂ*
*ತರುಣೀಮುಖಮೆನಗೆ ಪಡೆದುದೊದವಿದಲಂಪಂ* ೧೨೫ (ಇದು ದೋಷಂ)

**ಸೂತ್ರಂ ೬೨**

*ಎರಡುಂ ವಿರುದ್ಧ ರಸಮೊಡ*
*ವೆರಸಿರೆ ತದನಂತರಸ್ಥಮೊಂದನ್ಯರಸಂ*
*ಪರಿಪುಷ್ಟಮಾಗೆಯುಂ ವ್ಯಧಿ*
*ಕರಣಂ ಮೇಣ್ ಸಮಮುಗಾಗಯುಂ ನಿರ್ದೋಷಂ*

**ಲಕ್ಷ್ಯಂ**

*ಅರುಣಜಲಾವಲಿಪ್ತಿ ಪೊಸಕಂಕುಮದಂತಿರೆ ಕರ್ಣಲಗ್ನ ತೋ*
*ಮರಮವತಂಸದಂತಿರೆ ನಖವ್ರಣರಾಜಿಯ ಭೂಷಣಾಳಿಯಂ*
*ತಿರೆ ಮಿದುಳುಣ್ಮೆ ಪುಷ್ಪ ಕೃತ ಶೇಖರದಂತಿರೆ ಕೊಂಡು ಪೋದರ*
*ಚ್ಚರಸಿಯರಣ್ಮೆ ಬಿಟ್ಟಿ ಭಟರಂ ಕೊನೆಮೀಸೆಯ ಚೆನ್ನ ಪೊಂಗರಂ* ೧೨೬

ವ : ಇಲ್ಲಿ ವಿರುದ್ಧಂಗಳಾದ ಶೃಂಗಾರಭೀಭತ್ಸರಸಂಗಳ ನಡುವೆವೀರರಸಂ ಪೊಕ್ಕು ಪುಷ್ಟಿಯಾದುದು

*ಭಯದಿಂ ಕರ್ಚಿದುದೊಂದು ಪುಲ್ಮುಗಿದ ಕಯ್ಬಿಟ್ಟಿರ್ದ ಕೇಶಂಗಳುಂ*
*ನಯನಾಂಭಃಪ್ಲವಮೋಡುವಲ್ಲಿ ಪಿರಿದುಂ ಕಾರುಣ್ಯಮಂ ಮಾಡೆ ವೈ*
*ರಿಯನಾಗಳ್ ನಗುವಂತುಟಿರ್ದುದು ಕನತ್ಖಡ್ಗಂ ವಿನಿರ್ಭಿನ್ನ ಕುಂ*
*ಭಯುಗದ್ವಿಣ್ನೃಪ ಕುಂಭಿಕುಂಭಯುಗಳಂ ಶ್ರೀವಿಕ್ರಮಾರ್ತಾಂಡನಾ* ೧೨೭

ವ : ಇಲ್ಲಿ ವ್ಯಧಿಕರಣಮಾದುದಱಿಂ ನಿರ್ದೇಷಂ

**ಸ್ಥಾಯಿ ವ್ಯಭಿಚಾರಿ ವಿಚಾರಂ**

ವ : ನಾಟಕಾದ್ಯಭಿನಯವ್ಯಾಪಾರದೊಳಾವಿಷ್ಕೃತಮಾಗಿ ತೋರ್ಪರಸಂಗಳಾತ್ಮಂಗ ಳೆನಿಸುವಾ ಚಿತ್ತವೃತ್ತಿಗಳ್ ಸಾಮಾಜಿಕರ ಚಿತ್ತಮಂ ಭಾವಿಪುದಱಿಂ ಭಾವಂಗಳೆನಿಕುಂ, ಮನೋವೃತ್ತಿಗಳಾದುದಱಿಂ ಸ್ಥಾಯಿಗಳುಂ ವ್ಯಭಿಚಾರಿಗಳುಂ ಭಾವಂಗಳೆನಿಪುವಲ್ಲಿ ಸ್ಥಾಯಿಗಳೊಂಭತ್ತು, ಅವುಂ ಮುಂದೆ ಪೇೞ್ ಪಟ್ಟುವು. ಸಂಚಾರಿಗಳ್ ಮೂವತ್ತು ಮೂಱವುಂ ಕಡೆಯ ಪ್ರಕರಣದೊಳ್ ಪೇೞ್ಪಡುವುವು.

ಪುಟ್ಟಿದ ಜೀವಂ ಶಕ್ತಿರೂಪದಿಂ ಪೇೞ್ದೀ ಜ್ಞಾನಗೃಹೀತನಾಗಿರ್ಪನವಾವು ವೆಂದೊಡೆ -ದುಃಖದ್ವೇಷಿ ಸುಖಾಸ್ವಾದನಲಂಪಟನಾಗಿರ್ಪುದು ರತಿ, ಆಂ ಭೋಗಿ ತಾಂ ದುಃಖಿಯೆಂದು ನಗುವಂದಮಂ ಮಾೞ್ಪುದು ಹಾಸಂ ತನ್ನ ಸುಖೋತ್ಕರ್ಷೆಗೆ ವಿಪತ್ತು ಬರ್ಪುದೆಂದು ಶೋಕಿಪುದೆ ಶೋಕಂ, ಅಪಾಯಮಂ ಕುಟಿತು ಕೋಪಿಪುದೆ ಕ್ರೋಧಂ, ಅಪಾಯಹೇತುವಂ ಪರಿಪರಿಪೆಡೆಯೊಳುತ್ಸಾಹಂ ಮಾೞ್ಪುದುತ್ಸಾಹಂ, ಅಪಾಯದತ್ತಣಿಂ ಬೆದಱುವುದು ಭಯಂ, ತಾಂ ಗೆಯ್ವ ಕಜ್ಜಮೊಳ್ಳಿತಲ್ತೆಂದು ಪೇಸುವುದು ಜುಗುಪ್ಸೆ, ತನ್ನಿಂ ಪೆಱರಿಂದಾದ ಕಾರ್ಯ ವೈಚಿತ್ರ್ಯಾದಿ

ದರ್ಶನಾದಿಯಿಂ ವಿಸ್ಮಯಿಪುದು ವಿಸ್ಮಯಂ, ತಾಂ ಬಿಡುವುದಱೊಳ್ ವೈರಾಗ್ಯಪರನಾಗಿ ಶಾಂತತ್ವಮಂ ಭಜಿಪುದು ಶಮಂ. ಈ ಪೇೞ್ದ ಚಿತ್ತವೃತ್ತಿಗಳಿಂ ಶೂನ್ಯಮಾದ ಜೀವನಿಲ್ಲ. ಮತ್ತಲ್ಲಿ ಕೆಲಂಬರ ಚಿತ್ತವೃತ್ತಿಗಳ್ ಗಳ್ ವಿಷಯದಲ್ಲಿ ನಿಯೋಜಿಸಲ್ಪಟ್ಟುವಾಗಿರ್ಪುವು, ಕೆಲವು ಪುರುಷಾರ್ಥದೊಳು ಪಯ್ತುಕಂಗಳಾಗಿರ್ಪುವು, ಮತ್ತೆ ಕೆಲವು ಮತ್ತೊಂದು ಪ್ರಕಾರಮಾಗಿರ್ಪುವಿಂತೆಂಬ ಚಿತ್ತವೃತ್ತಿ ವಿಭಾಗದಿಂದುತ್ತಮಮಧ್ಯಮಾಧಮಪ್ರಕೃತಿಗಳೆಂಬೀ ವ್ಯವಹಾರಂಗಳಾದು ವಿನ್ನಾಮತ್ಯಾದಿ ವ್ಯಭಿಚಾರಿಗಳುಂ ಚಿತ್ತವೃತ್ತಿ ವಿಶೇಷಂಗಳುಚಿತವಿಭಾವದಿಂದೆ ಭಾವಂಗಳಾಗಿ ಜನ್ಮಮಧ್ಯ ದೊಳಿರ್ಪುದಱಿಂ ವ್ಯಭಿಚಾರಿಗಳಾದುವೆಂತೆಂದೊಡೆ ರಸಾಯನಂಗುಡಿ ದವಂಗಾಲಸ್ಯ ಗ್ಲಾನಿ ಶ್ರಮಾದಿಗಳಾಗವು, ಎತ್ತಾನುಂ ಮೇಣ್ ವಿಭಾವಬಲದಿಂ ದೊರೆಕೊಂಡುದಾದೊಡೆ ವಿಭಾವಂಗಳ್ ಕೆಟ್ಟೊಡೆ ತಾವುಂ ಕಿಡುವುವು. ಅವೇ ಸಂಸ್ಕಾರವಿಶೇಷದಿಂ ರತ್ಯಾದಿಗಳ್ ಪತ್ತಿರ್ಪಂತೆ ತಾವಿರಲರಿಯವು. ರತ್ಯಾದಿಗಳ್ ಸಂಪಾದಿತ ಸ್ವಕರ್ತವ್ಯಂಗಳಾಗಿ ವಿಭಾವಂಗಳ್ ಕೆಟ್ಟೊಡಂ ತಾವುಂ ಕೆಟ್ಟುದಱಂತಿರ್ದುಂ, ಸಂಸ್ಕಾರವಿಶೇಷದಿಂದೆ ಪ್ರಾಣಭೂಮಿಯಪತ್ತುಗೆಗುಂದವು. ಅವಸ್ಥಾಂತರ ವಿಷಯ ರತ್ಯಾದ್ಯಖಂಡಮಾದುದಱಿಂ ಸ್ಥಾಯಿಯಾದುದದೆಂತೆನೆ ಕಾಬಲದೇವಾರ್ಧ ಚಕ್ರಿಸಕಲ ಚಕ್ರವರ್ತಿಗಳೆಂದುಂ ಪದಿನಾಱು ತೊಂಬತ್ತಾಱುಸಾಸಿರ್ವರ್ ಪೆಂಡವಾಸದೊಳ್ ಮಾೞ್ಪರತಿಯ ವಿಚ್ಛಿನ್ನಮದಱಿಂ ಸ್ಥಿರಮಾದು ದಱಿಂ ಸ್ಥಾಯಿಗಳೆನಿಪ್ಪವು. ಮತ್ತಮಾ ಸ್ಥಾಯಿರೂಪ ಚಿತ್ತವೃತ್ತಿಗಳೆಂಬ ಸೂತ್ರಂಗಳೊಳ್ ಪೋಣಿಸಿದಂತೆ ಮತ್ತುದಯಾಸ್ತಮಯ ವೈಚಿತ್ಯ್ರಶತಸಹಸ್ರಧರ್ಮಂಗಳಂ ಪಡೆಯಲ್ಪಟ್ಟು ವಾಗಿ ಸ್ಥಾಯಿಗಳಂ ನಾನಾ ಪ್ರಕಾರವಾಗಿ ರಂಜಿಸುತ್ತೆ ಸಂಚಾರಿಪುದಱಿಂ ಸಂಚಾರಿಗಳೆಂದು ಪೇೞಲ್ಪಟ್ಟುವು.

ಮತ್ತಮೀತಂ ಗ್ಲಾನನಾದನೆಂದೊಡೇ ತಱಿಂದೆಂದದರ್ಕೆ ಹೇತುಪ್ರಶ್ನೆಯಂ ಮಾೞ್ಪರದು ಮುನ್ನಿಲ್ಲದೆಡೆಯೊಳ್ ಬಂದುದಱಿಂ ರಾಮಚಂದ್ರನುತ್ಸಾಹಶಕ್ತಿಯುಳ್ಳವ ನಾಗಿರ್ದನೆಂ ದೊಡಾರುಂ ಹೇತುಪ್ರಶ್ನೆಯಂ ಮಾಡರಾತಂಗದು ಸ್ಥಾಯಿಯಾಗಿರ್ದುದಱಿಂ ಇವಾ ವ್ಯಭಿಚಾರಿಗಳ್ಗಂ ಸ್ಥಾಯಿಗಳ್ಗಂ ದೃಷ್ಟಾಂತಂಗಳ್. ಅದು ಕಾರಣದಿಂ ರತ್ಯಾದಿಕಂಗಳ್ ವಿಭಾವಾದಿಯಿಂದುದ್ಬೋಧಂಕಂಗಳಾಗಿ ತಮ್ಮ ಸ್ವರೂಪೋಪರಂಜಕತ್ವದಿಂದುಚಿತಾನು ಚಿತತ್ವಮಂ ತಳೆವುವು, ವಿಭಾವಾಭಾವದಿಂ ಕೆಟ್ಟೊಡಂ ಸರ್ವಜೀವಂಗಳೊಳ್ ವಾಸನಾ ರೂಪದಿಂದಿರ್ಪುದಱಿಂ ಸ್ಥಾಯಿಗಳಾ ಮಾೞ್ಕೆಯಿಂ ವಿಭಾವಾಭಾವದಿಂ ವ್ಯಭಿಚಾರಿಗಳ್ ನಾಮಮಾತ್ರಮಿಲ್ಲದೆ ಪೋಪುವಪ್ಪುದಱಿಂ ವ್ಯಭಿಚಾರಿಗಳಾದುವು, ಸ್ಥಾಯಿಗಳು ಮೊರ್ಮೊರ್ಮೆ ವ್ಯಭಿಚಾರಿಗಳಪ್ಪುವದೆಂತೆಂದೊಡೆ ರಾವಣಾದಿಗಳೊಳನ್ಯೋ ನ್ಯಾನು ರಾಗಭಾವದಿಂದಾದ ರತಿ ವ್ಯಭಿಚಾರಿಯಪ್ಪುದು. ಗುರುಪ್ರಿಯತಮ ಪರಿಜನಂಗಳಲ್ಲಿ ಯಥಾಕ್ರಮದಿಂ ನೆಗೞ್ದ ವೀರ ಶೃಂಗಾರ ರೋಷಂಗಳ್ ವ್ಯಭಿಚಾರಿಗಳಪ್ಪುವು. ಈ ಪ್ರಕಾರದಿಂ ಭಾವಾಂತರಂಗಳುಮಂ ಯೋಚಿಸಿಕೊಳ್ವುದು. ಅಲ್ಲಿ ಶಮಕ್ಕೊಂದೆಡೆ ಯೊಳಮ ಪ್ರಾಧಾನ್ಯಮಿಲ್ಲ. ವ್ಯಭಿಚಾರಿಯಿಲ್ಲಪ್ಪುದಱಿಂ ರತ್ಯದಿಗಳಲ್ಲಿ ಪಿರಿದುಂ ಸ್ಥಾಯಿತ್ವ ಮಾದುದಱಿಂ ಸ್ಥಾಯಿಯಪ್ಪುದು.

*ಇದು ಶತೇಂದ್ರ ಮುನೀಂದ್ರವಂದಿತಾರ್ಹತ್ಪರಮೇಶ್ವರ ಪಾದಾರವಿಂದ*
*ಮಂದಮಕರಂದಾನಂದಿತ ಭೃಂಗಾಯಮಾನ ಕವಿಸಾಳ್ವ ವಿರಚಿತಮಪ್ಪ*
*ರಸರತ್ನಾಕರದೊಳ್ ನವರಸಪ್ರಪಂಚವಿವರಣಂ*

**ದ್ವಿತೀಯ ಪ್ರಕರಣಂ**

# ನಾಯಕ ನಾಯಿಕಾ ವಿವರಣಂ

**ತೃತೀಯ ಪ್ರಕರಣಂ**

**ಸೂತ್ರಂ ೭೩**

*ಇಂಬಾಗಿ ನವರಸಕ್ಕಾ*
*ಲಂಬನಮಕ್ಕುಂ ಪೊದಟ್ದಿ ನಾಯಕರುಂ ನು*
*ಣ್ಪಿಂಬಿಡಿದ ನಾಯಿಕಾ ನಿಕು*
*ರುಂಬಮುಮಂತವರ ತೆಱನನುಱೆ ಬಿಚ್ಚಳಿಪೆಂ*

*ವ : ನಾಯಕಸಾಧಾರಣ ಲಕ್ಷಣಂ*

**ಸೂತ್ರಂ ೭೪**

*ಕ್ಷಿತಿವಿನುತಕುಲೀನತೆ ಶೌ*
*ಚತೆ ಮಾನತೆ ಯೌವನತೆ ದೃಢತ್ವಂ ಮಾಧು*
*ರ್ಯತೆ ಧೀರತೆ ಜನದನುರಾ*
*ಗತೆ ಉತ್ಸಾಹತೆಯೆ ಸಾಜಮಾದ ಸಮತ್ವಂ*

**ಸೂತ್ರಂ ೭೫**

*ಪ್ರಕಟಪ್ರತಾಪಿ ಶಾಸ್ತ್ರಾ*
*ರ್ಥಕಾರಿ ಕಡುಚಾಗಿ ವಿನಯ ಧರ್ಮಂ ಸದ್ಬು*
*ದ್ಧಿಕಲಾವೇತ್ತೃ ಪ್ರಾಜ್ಞಂ*
*ಸುಕರಂ ಪ್ರಿಯವಾದಿ ವಾಗ್ಮಿ ನಾಯಕನಕ್ಕುಂ*

ವ : ಮತ್ತಮಲ್ಲಿ

**ಸೂತ್ರಂ ೭೬**

*ಧೀರೋದಾತ್ತ ಲಲಿತರೀ*
*ಧಾರಿಣಿಯೊಳ್ ನೆಗಟ್ದಿ ಧೀರ ಶಾಂತೋದ್ಧತರೆಂ*
*ದಾರಯೆ ಪೇಟ್ದೀ ಗುಣಯುತ*
*ರೋರಂತಿರೆ ನಾಲ್ವರಾದರೆಂತೆನೆ ಪೇಟ್ವೆಂ*

**ಸೂತ್ರಂ ೭೭**

*ಕ್ಷಮೆಯುಳ್ಳಂ ಗಂಭೀರನ*
*ಸಮಸತ್ವಂ ಸತ್ಯ ಪಾಬ್ಧಿಯ ವಿಕತ್ಥನನ*
*ಚ್ಚಮನಂ ನಿರಹಂಕೃತನು*
*ತ್ತಮ ಧೀರೋದಾತ್ತನಾಯಕಾಖ್ಯಮನಾಳ್ಗುಂ*

**ಲಕ್ಷ್ಯಂ**

*ಪ್ರಾಕೃತನಲ್ಲನೀ ದಶರಥಾಗ್ರತನೂಭವನೇಕವಾಕ್ಯನಾ*
*ಶಾಕರಿಕರ್ಣಚಾಮರಯಶಂ ಚರಮಾಂಗನನಂತವೀರ್ಯನಿ*
*ಕ್ಷ್ವಾಕು ಕುಲಾಮೃತಾರ್ಣವಸುಧಾಕಿರಣಂ ರಣಮೇರುಲೋಕಲುಂ*
*ಟಾಕನಿಧಾಘತಾಪಶರವರ್ಷಣ ಮೇಘನುದಾತ್ತ ರಾಘವಂ ೧೨೮*

ವ : ಮತ್ತಂ

*ಗಗನಚರ ಪ್ರಚಂಡಬಲವೆತ್ತಿ ಬರುತ್ತಿರೆ ಕಾಳೆಗಕ್ಕೆದಂ*
*ಬಗೆದನೆ ಜಾನಕೀಮುಖಸರೋರುಹದೊಳ್ ನೆಲಸಿರ್ದ ದೃಷ್ಟಿಯಂ*
*ತೆಗೆದನೆ ಕಾಲದಂಡಮುಮನೇಟಿಪ ತನ್ನ ಶರಾಸನಕ್ಕೆ ಮೆ*
*ಲ್ಲಗೆ ಕರಶಾಖೆಯಂ ರಘುತನೂಭವನೊಯ್ದು ನದೇನುದಾತ್ತನೋ ೧೨೯ (ಇವಂ ಧೀರೋದಾತ್ತನಾಯಕಂ)*

**ಸೂತ್ರಂ ೭೮**

*ವಸುಮತಿಯೊಳ್ ಸಚಿವಾಯ*
*ತ್ತ ಸಿದ್ಧಿ ನಿಶ್ಚಿಂತನೆಯ್ದೆ ಸುಖಿ ಮೃದು ಭೋಗ*
*ಪ್ರಸರಂ ಕಲಾಪ್ರಿಯಂ ಪೆಂ*
*ಪೆಸೆದಿರ್ಪಾ ಧೀರಲಲಿತನಾಯಕನಕ್ಕುಂ*

**ಲಕ್ಷ್ಯಂ**

*ಕ್ಷಿತಿತಲಮಂ ಪ್ರಧಾನಮುಖದಿಂ ಪ್ರತಿಪಾಲಿಸುತಿರ್ದು ಭಸ್ಮಸಾ*
*ತ್ಕೃತರಿಪುವರ್ಗನಾಗಿ ಮೃದು ಸತ್ಸುಖಿ ಚಿಂತೆಯನೆಯ್ದೆ ನೀಗಿ ವಿ*
*ಶ್ರುತ ಬಹುನೃತ್ಯಗೀತನುತವಾದ್ಯಕಲಾಪ್ರಿಯನೆಲ್ಲ ಭೋಗದಿಂ*
*ಪ್ರತಿದಿವಸಂ ಪ್ರಮೋದನನೆಸೆದಂ ಧೃತನಿರ್ಮಳಧರ್ಮನಾ ನೃಪಂ ೧೩೦ (ಇವಂ ಧೀರಲಲಿತ ನಾಯಕರಂ)*

**ಸೂತ್ರಂ ೭೯**

*ರಸಿಕಂ ಮೃದು ಶುಚಿ ಸುಖಿ ಸು*
*ಪ್ರಸನ್ನ ನುರುಬಂಧುರಂ ದ್ವಿಜಂ ಮೇಣ್ ವಣಿಜಂ*
*ಎಸೆವ ವಿಲಾಸ ವಿವೇಕ ವಿ*
*ಲಸಿತಂ ನುತಧೀರಶಾಂತನಾಯಕನಕ್ಕುಂ*

**ಲಕ್ಷ್ಯಂ**

*ಧರೆಯೊಳ್ ಸಂದಧಿರಾಜವೈಭವದೆ ಬರ್ಪಂ ಸುಪ್ರಸನ್ನಂ ಸುಖೋ*
*ತ್ಕರನಾದಂ ಶುಚಿ ವಿಪ್ರವಂಶಮಣಿ ಸಾಕ್ಷಾತ್ಕಾಮನೆಂದಾತನಂ*
*ಪುರಮಾರ್ಗಾಗತನಂ ಪ್ರಗಲ್ಭೆಯರಲಂಪಿಂ ತೋಱೆ ಕಣ್ಣಾರ್ವಿನಂ*
*ನರನಾಥಾತ್ಮಚೆ ನೋಡಿ ಪುತ್ಥಳಿವೆಡಂಗಂ ಪೆತ್ತಳಾ ತಾಣದೊಳ್ ೧೨೧ (ಇವಂ ಧೀರಲಲಿತ ನಾಯಕಂ)*

**ಸೂತ್ರಂ ೮೦**

*ಧೀರೋದ್ಧತ ನೇತೃವಹಂ*
*ಕಾರಿ ವಿಕತ್ಥನನೆ ವಂಚಕಂ ಚಂಡಂ ಮಾ*
*ಯಾರತನುದ್ವೃತಂ ವ್ಯಭಿ*
*ಚಾರಿಮನಂ ನೆಗಟ್ದ ಮತ್ಸರಗ್ರಸ್ತನವಂ*

**ಲಕ್ಷ್ಯಂ**

*ಎನಗೆಂ ಬಲ್ಲಾಳ್ಗಡಂ ಮಾನವನಭಿಭವಮಂ ಕೇಳಲಾದತ್ತವಂಗಾ*
*ಳ್ತನಮಂ ಪೂಣ್ದೆನ್ನೊಳಂ ದಾಯಿಗತನಮುನಿವಂ ತೋರ್ಕೆ ದೋರ್ದಂಡಕಂಡೂ*
*ಯನಮಂ ಚಂಡಾಸಿಸಂಘಟ್ಟದಿನೊಗೆವುರಿಯಿಂ ಮಟ್ಗಿಪೆಂಮೂಱುಕಣ್ಣಾ*
*ತನುವೆನ್ನೊಳ್ ಮೀಱೆ ಮಾಱೇಂತೊಡೆ ಪಡೆಯದೆ ಸಂತ್ರಾಸಮಂ ಚಂದ್ರಹಾಸಂ ೧೨೨ (ಇವಂ ಧೀರೋದ್ಧತನಾಯಕಂ)*

**ಸೂತ್ರಂ ೮೧**
*ನಾಯಕರೆಲ್ಲಾ ರಸಕಂ*
*ನಾಯಕರಕ್ಕುಂ ಸ್ವರೂಪಭೇದದಿನಂತಾ*
*ನಾಯಕರೆ ಸಿಂಗರದೊಳಿರೆ*
*ವಾಯಮೆ ನಾಲ್ದೆಱನನೊರ್ವರೊರ್ವರ್ ತಳೆವರ್*

ವ : ಅಲ್ಲಿ

**ಸೂತ್ರಂ ೮೨**

*ಅನತಿಶಯನಾಯಕಾಖ್ಯರೊ*
*ಳನುಕೂಲಂ ದಕ್ಷಿಣಾತ್ಮಕಂ ಕುಟಿಲಂ ಧೃ*
*ಷ್ಟನೆನಿಪ್ಪ ನಾಲ್ಕು ಭೇದಂ*
*ಜನಿಯಿಸುಗುಮವಂ ಕ್ರಮೋಕ್ತಿಯಿಂದಂ ಪೇೞ್ವೆಂ*

**ಸೂತ್ರಂ ೮೩**

*ನುತಶೀಲನೇಕಪತ್ನೀ*
*ವ್ರತನಮಳಂ ನಿಯಮಿತಾತ್ಮನನುಕೂಲಂ ಹೃ*
*ತ್ಸ್ಥಿತಿದೋಱದೆ ಚದುರಿಂ ಸಮ*
*ರತಿಯಂ ಪಲಸತಿಯರ್ಗೆಸಗೆ ದಕ್ಷಿಣನೆನಿಕುಂ*

**ಲಕ್ಷ್ಯಂ**

*ಕೆಳದೀ ಮಜ್ಜೀವಿತಾಧೀಶ್ವರನ ಗುಣಮನೇನೆಂದದಂ ಪೇೞ್ವೆನೊಂದಂ*
*ತಿಳಿ ಮದ್ವೈವಾಹಸಂಬಂಧದ ಸಮಯದೊಳಂದೇಕಪತ್ನೀವ್ರತಂ ನಿ*
*ಶ್ಚಳಿತಂ ನೋಡಂದುತೊಟ್ಟಿಂದುವರಮದನೆ ದಲ್ ಭಾವಿಸುತಿರ್ಪನವ್ಯಾ*
*ಕುಳಚಿತ್ತಂ ಜನ್ಮಜನ್ಮಾಂತರದೊಳಮೆನಗಂತಾತನಕ್ಕೆಂದಳೊರ್ವಳ್ ೧೩೩ (ಇವನನುಕೂಲ ನಾಯಕಂ)*

*ನೋಟದಿನೊರ್ವಳಂ ನಗೆಯಿನೊರ್ವಳನೊಳ್ನುಡಿಯಿಂದಮೊರ್ವಳಂ*
*ಬೇಟದಿನೊರ್ವಳಂ ಪಿಡಿಯುತೊರ್ವಳನೋಕುಳಿವೊಯ್ದು ತೊರ್ವಳಂ*
*ಆಟದೊಳೊರ್ವಳಂ ಜಳಕೆ ಮೆಯ್ಗೊಡುತೊರ್ವಳನೊಂದೆ ಮಾೞ್ಕೆಯಿಂ*
*ದಾಟದೊಳೆಯ್ದೆ ತೃಪ್ತಿವಡಿಸಿರ್ದನವಂ ಗುಣರತ್ನಭೂಷಣಂ ೧೩೪ (ಇವಂ ದಕ್ಷಿಣನಾಯಕಂ)*

**ಸೂತ್ರಂ ೮೪**
*ಪುಸಿಗಂ ಧೂರ್ತಂ ಮಿಗೆ ವಿಗ*
*ಡ ಸಿಂಗರಂ ನೆಗೞ್ದಿ ಕುಟಿಲನಕ್ಕುಂ ಧೃಷ್ಟಂ*
*ಎಸೆಗುಮಪರಾಧಿ ನಾಣಿಲಿ*
*ಪಸರಿಪ ಬೋಸರಿಗನಂತವಂ ಗತಮಾನಂ*

**ಲಕ್ಷ್ಯಂ**

*ಎನಗೀ ನಿನ್ನ ವಿಕಾರಮಂ ನವನಖವ್ಯಾಪಾರಮಂ ವಂಚಿಸ*
*ಲ್ಕೆನಿಸಂ ನೀಂ ಪುಸಿವೆೞ್ದು ಮುಚ್ಚಿದೆಯದರ್ಕಾಂ ಬಲ್ಲೆನೇ ನಿನ್ನ ನಾ*
*ಯ್ತನಮಂ ನಂಬದಿರೆಂದು ದೂಱುವವೊಲಿರ್ಪನ್ಯಾಂಗನಾಸಂಗ ಸಂ*
*ಜನಿತಾಮೋದಮನೆಂತು ನೀಂ ಪುಸಿವೆ ಮೇಣೆಂತೆಂತದಂ ಮುಚ್ಚುವೈ ೧೩೫ (ಇವಂ ಕುಟಿಲನಾಯಕಂ)*

*ದೊರೆಗಿಡೆ ಬಾಯ್ಗೆ ಬಂದುದನೆ ಬಯ್ವೆನದಂ ಬಗೆಗೊಳ್ಳದೀ ಮುಖಾಂ*
*ಬುರುಹಮನೊಲ್ದು ಚುಂಬಿಸುವನೋವದೆ ಬೆಟ್ಟಿತುವೊಯ್ವೆ ನೊತ್ತುವಂ*
*ಕರಮನದರ್ತು ಕಾಯ್ದೊದೆವೆನಾಗಳೆ ಕಾಲ್ಪಿಡಿದಿರ್ಪನಿಂತು ನಿ*
*ಷ್ಕರುಣದಿನಾನವಂಗೆ ಮೊಗದೊಳ್ ಮುನಿಸಂ ತಳೆವೆಂ ತಳೋದರೀ ೧೨೬ (ಇವಂ ಧೃಷ್ಟನಾಯಕಂ)*

ವ : ಇವರ್ ನಾಲ್ವರುಂ ಶೃಂಗಾರನಾಯಕರ್

**ಸೂತ್ರಂ ೮೫**

*ಇಂತೀರೆಣ್ಬರವರ್ಗುಣ*
*ವಾಂತುತ್ತಮ ಮಧ್ಯಮಂ ಜಘನ್ಯಾಹ್ವಯದಿಂ*
*ಸಂತರ್ ತ್ರಿವಿಧಂ ಬರ್ಕೆ*
*ನ್ನಂತಾ ನಾಯಕರೆ ಗಣಿಸೆ ನಾಲ್ವತ್ತೆಣ್ಬರ್*

**ಸೂತ್ರಂ ೮೬**

*ಕಮನೀಯವಾಣಿ ಗೂಢೋ*
*ಕ್ತಮಂತ್ರನತಿಚತುರನಖಿಳಕರ್ಮವಿಭೇದಂ*
*ಪ್ರಮದಾಕೋಪೋಪಾತ್ತ*
*ಕ್ರಮಪರನೆನಿಸುವನೆ ನರ್ಮಸಖನೆನಿಸಿರ್ಕುಂ*

**ಸೂತ್ರಂ ೮೭**

*ವಿವಿಧ ವಿನೋದಾಶ್ರಯನೆನಿ*
*ಪವಂಗೆ ನಾಲ್ವರ್ ಸಹಾಯರಾಗಲೆವೇಟ್ಕುಂ*
*ಭವನವಿನೂತ್ನರೆನಾಗರಿ*
*ಕವಿಟವಿದೂಷಕ ಸುಪೀಠಮರ್ದಕರೆನಿಕುಂ*

**ಸೂತ್ರಂ ೮೮**

*ಸರಸೋಪವಚನದೊಳ್ ನಾ*
*ಗರಿಕಂ ಚತುರೋಕ್ತಿಯೊಳ್ ವಿಟ್ವಂ ಹಾಸ್ಯೋಕ್ತ್ಯಂ*
*ತರದೊಳ್ ವಿದೂಷಕಂ ಗ್ರಾ*
*ಮ್ಯರೀತಿಯೊಳ್ ನುಡಿಯೆ ಪೀಠಮರ್ದಕನೆನಿಕುಂ*

ವ : ಮತಾಂತರದಿಂ ವಿಟ ಚೇಟ ವಿದೂಷಕ ಪೀಠಮರ್ದಕರೆಂದುಮವರಂ ಪೇೞ್ದರರೆಬರ್ ಪೀಠಮರ್ದಕ ವಿಟ ಚೇಟ ವಿದೂಷಕರೆಂದು ಮುಂಪೇೞ್ದವರಲ್ಲಿ ರಾಜನಿಂದಣಮೆ ಕಿಱಿದಾದ ಗುಣವಂತಂ ತನ್ನೃಪನ ಪೀಠಮನಱೆವುತ್ತೊತ್ತಿಕುಳ್ಳಿ ರ್ಪುದಱಿಂ ಪೀಠ ಮರ್ದಕಂ, ಕಾಮವಿದ್ಯೆವೊಂದಱೊಳ್ ನಿಪುಣಂ ವಿಟಂ, ನಾಯಕ ನಾಯಿಕಾಸಂಧಾನ ಕುಶಲ ಪ್ರೌಢಂ ಚೇಟಂ, ಅವರಂ ಹರ್ಷದೆ ನಗಿಸುವಂ ವಿದೂಷಕಂ. ಈ ನಾಲ್ವರುಂ ನರ್ಮಸಖರೆನಿಕ್ಕು. ನರ್ಮಸಖನೆಂದು ಶೃಂಗಾರಕೇಳಿ ಮಿತ್ರಂ, ಇದರ್ಕೆ ಸಮ್ಮತಿ ಶ್ಲೋಕಂ.

**ಸಂಸ್ಕೃತಂ**

*ಕಿಂಚಿದೂನಃ ಪೀಠಮರ್ದ ಏಕವಿದ್ಯೋ ವಿಟಸ್ಸ್ಮೃತಃ*
*ಸಂಧಾನಕುಶಲಶ್ಚೇಟೋ ಹಾಸ್ಯಪ್ರಾಯೋ ವಿದೂಷಕಃ*

ವ : ಇಂತೆಂಬರಾ ಸಖರ ವಾಗಾದಿಪ್ರೌಢಿಯಖಿಳವಿಭೇದಂ ಕನ್ನಡದೊಳ್ ನಾಗರಿಕಾದಿ ಚತುಷ್ಟಯಮಂ ಪೇೞ್ವರದನಱೆಗೆ ನಗರವಾರ್ತಾವಿಶೇಷಮನಱಿದರಸಂಗೆ ಚತುರ ವಚನದಿಂ ಸೂಚಿಪನದಱಿಂ ನಾಗರಿಕನೆನಿಪಂ

**ಲಕ್ಷ್ಯಂ**

*ನಸುದೊಡೆದೋರ್ಪ ಪಟ್ಟಣಿಗೆಯೊಳ್ ನಿಱಿ ಕತ್ತುರಿ ಬೊಟ್ಟು ಕಟ್ಟೆ ಬಿ*
*ಟ್ಟೆಸೆವ ಕುರುಳ್ ಮೊಗಕ್ಕೆ ಪಿರಿದೊಪ್ಪುವ ಬಿಂಕದ ಸಂಕದೋಲೆ ಕು*
*ಪ್ಪಸದಳಮಾದ ಸಣ್ಣಬಳಿ ಕೆನ್ನೆಯ ಪೀಲಿಯನಾಂತ ಚೊಲ್ಲೆಯಂ*
*ಮಿಸುಗುವದೋರೆವಲ್ ಕರಮೆಮಾಸರಮಾದುದು ದೇಸೆಗಾರ್ತಿಯಾ* ೧೨೭ *(ಇದು ನಾಗರಿಕವಚನಂ)*

ವ : ಇಂತು ಟೆದುವನಱಿದುಕೊಳ್ವುದು. ಇನ್ನು ನಾಯಕ ವಿಕಲ್ಪಮಂ ಪೇೞ್ವೆಂ

**ಸೂತ್ರಂ ೮೯**

*ಪ್ರಕಟತರ ನಾಯಿಕೆಯರಾ*
*ಸ್ವಕೀಯೆ ಪರಿಕೀಯೆ ಪಣ್ಯೆಯೆನೆ ಮೂಱುತೆಱಂ*
*ಸ್ವಕೀಯೆ ಪರಿಭಾವಿಸೆ ಮು*
*ಗ್ಧ ಕವಿಗಳಿಂ ಮಧ್ಯೆ ತತ್ಪ್ರಗಲ್ಭೆಯುಮೆನಿಕುಂ*

**ಸೂತ್ರಂ ೯೦**

*ಕ್ರಮದಿಂ ದ್ವಾದಶವರ್ಷ*
*ಪ್ರಮಾಣದೊಳ್ ಮುಗ್ಧೆ ಮಧ್ಯೆ ತದ್ದ್ವಿ ಗುಣದೊಳಾ*
*ಸಮಕಟ್ಟಿಂ ತದ್ದ್ವಿ ಗುಣ*
*ಪ್ರಮಿತಾಬ್ದದೊಳಾ ಪ್ರಗಲ್ಭೆ ಯೆನೆ ಪೆಸರ್ವಡೆಗುಂ*

ವ : ಮತ್ತಂ

**ಸೂತ್ರಂ ೬೧**

*ನವವಯಮೆಯ್ದೆ ಲಜ್ಜೆ ನವಕಾಮಮಿವುಂ ಸುಸಿಲಲ್ಲಿ ವಕ್ತ್ರಮಂ*
*ಸವನಿಸದಾಕೆಮುಗ್ಧೆ ನಡುಜವ್ವನಮೊಪ್ಪುವ ಕಾಮಮೋಹಮುಂ*
*ತವೆ ಸುಸಿಲಿಂ ಪೊದಟ್ಟಿವಳೆ ಮಧ್ಯೆ ವಯೋಧಿಕೆ ತೀವ್ರಕಾಮದಿಂ*
*ಬವರಿಪಳಾ ಪ್ರಗಲ್ಭೆ ವರಮೂರ್ಛಿತೆ ತತ್ಕಲೆವಲ್ಲಳಲ್ಲವೇ*

**ಲಕ್ಷ್ಯಂ**

*ಪದಯಿಸೆ ಸೋಂಕಿ ಶಂಕೆಗಿಡೆ ಮೇಳಿಸಿ ಮೆಯ್ಪಿಡೆ ತಳ್ತು ತೋಳ ತ*
*ಟ್ಪಿದರ್ಗೊಳೆ ಮೆಲ್ಲನಪ್ಪಿ ಮೊಗಮಿತ್ತೊಡೆ ಚುಂಬಿಸಿ ಸೋಲ್ತು ನಾಣನೊ*
*ಕ್ಕುದನಱಿದಿಚ್ಚೆಗಾರ್ತನದನಲ್ಕೆಗಳಿಂ ನುಡಿದಿಂತಲಂಪಿನು*
*ಬ್ಬದಿಗಮನಾ ಲತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್ ೧೨೮*

ವ : ಮತ್ತಂ

*ಇನಿಯನಗಲ್ದೊಡಂ ಸುರತದೊಳ್ಸೆರೆವುಜ್ಜುಗದಿಂದಮಿರ್ಪುದಾ*
*ತನೊಳೊಡನಿರ್ದೊಡಂದೆನಗೆ ಪೋಪುದು ಲಜ್ಜೆಯೊಳಿರ್ದು ಪೊೞ್ತು ನ*
*ಲ್ಲನೊಳಿರಲೀಯದೆಂತುಮೆನಗೆನ್ನ ಮನಂ ಬಸಮಲ್ಲದೆಂದು ಕಾ*
*ಮಿನಿ ಕುದಿವಳ್ ವಿಯೋಗದೊಳಮಾತನ ಯೋಗದೊಳಂ ನಿರಂತರಂ ೧೨೯ (ಇವಳ್ ಮುಗ್ಧೆ)*

*ಬಗೆಯೊಳ್ ಪೊಣ್ಮಿದಲಂಪು ಕಾತರತೆಯಂ ತಂದೀಯೆ ಮೆಯ್ಮೆಯ್ಗೆ ಸಂ*
*ದುಗಳೇನಪ್ಪೊಡಮಿಲ್ಲದಂತಮರ್ವಿನಂ ತಟ್ಟಪ್ಪಿ ಬಾಯ್ಗೊ ಟದೊಳ್*
*ಮಿಗೆ ಪೀರ್ವಂತೆ ಮನೋನುರಾಗರಸಮಂ ಮೆಯ್ವೆರ್ಚೆ ಕಾದಲ್ಮೆಕ*
*ಯ್ಮಿಗುವನ್ನಂ ನೆರೆದರ್ ಮನಃಪ್ರಿಯತಮರ್ ನಾನಾರತಕ್ರೀಡೆಯಿಂ ೧೪೦*

ವ : ಮತ್ತಂ

*ಇನಿಸಂ ತನ್ನನಗಲ್ದೊಡಂದೆ ಮರಣಾವಸ್ಥಾಂತರಂ ಪುಟ್ಟೆ ತೊ*
*ಟ್ಟನೆ ಕಂಡಂದು ಭಯಾಕುಳಂ ಪದೆಪಿನಿಂ ಮಾತಾಡೆಯುಂ ನಾಡೆ ಕೆ*
*ಮ್ಮನೆ ಬರ್ಕುಂ ಕಲಹಂ ಮನಕ್ಕೆ ತಣಿವಿಲ್ಲೆಂದುಂ ಸುಸಿಲ್ಗೆಂದೊಡಾಂ*
*ತನಗೇನೆಂದಪೆನಕ್ಕೆ ಕೂರ್ಪವರೊಳಿನ್ನೆಲ್ಲಿತ್ತೊ ಸೌಖ್ಯಾವಹಂ ೧೪೧ (ಇವಳ್ ಮಧ್ಯೆ)*

*ಕುಟಿಲಾ ನೀಳಾಲಕಂಗಳ್ ನಿಮಿರ್ದಿರೆ ಬೆಳರ್ವಾಯ್ ನಾಡೆಯುಂ ಬೀಗೆರಾಗೋ*
*ತ್ಕಟದೇಹಂ ರಾಗಮುಂ ಪೆಳ್ಪನೆ ಪಿಟಿದವೊಲಿಂಬಾಗೆ ನೀಳ್ದೋಳಲಂಪಿಂ*

*ವಿಟವೃತ್ತಂ ಮೆಯ್ಯೊಳೆತ್ತಂ ಪಸರಿಸಿರೆ ವಿಟಂ ಬೀಸೆ ನಿಂದಿರ್ದಳೊರ್ವಳ್*
*ಸ್ಫುಟತೋರೋಮಧ್ಯೆ ಭಿನ್ನಾಳಕೆಯ ವಟುತಟಗ್ರಂಥಿನಿರ್ಗ್ರಂಥಿಯಿಂದಂ ೧೪೨*

ವ : ಮತ್ತಂ

*ಅಳಕಂ ತುಂಬಿವೊಲಾಡೆ ತುಂಬಿದ ಕುಚಂ ಚಕ್ರಾಂಕದಂತಾಡೆ ಕ*
*ಣ್ಣೆಳಮೀನಾಟಮನಾಡೆ ಮುದ್ದುಮೊಗಮಂಭೋಜಾತದಂತಾಡೆ ನೀರ್*
*ತಿಳಿನೀರಂತೊಲೆದಾಡೆ ನೂಪುರಮರಾಳೋನ್ಮಾದವಾದ್ಯಕ್ಕೆ ಪೂ*
*ಗೊಳನೆರ್ದಾಡುವವೋಲದೇಂ ಮೆಱೆದಳೊ ನಾನಾ ರತ ಪ್ರೌಢಿಯಿಂ ೧೪೩ (ಇವಳ್ ಪ್ರಗಲ್ಭೆ)*

ವ : ಅಲ್ಲಿ

**ಸೂತ್ರಂ ೯೨**

*ಧೀರೆಯೆನಿಕ್ಕುಂ ಧೈರ್ಯದೆ*
*ಧೀರಾಧೀರೆಯೆ ಪೊದಟ್ಟಿ ಧೈರ್ಯಾಧೈರ್ಯಾ*
*ಧಾರದಿನಧೈರ್ಯದಿಂದಮ*
*ಧೀರೆಯೆ ತನ್ಮಧ್ಯೆಯುಂ ಪ್ರಗಲ್ಭೆಯುಮಕ್ಕುಂ*

ವ : ಮತ್ತಂ

**ಸೂತ್ರಂ ೯೩**

*ನಗೆವೆರಸಿರ್ದ ತೊಂಡುನುಡಿಯಿಂ ತಗುಳ್ವಳ್ ಸಲೆ ಧೀರೆ ದೋಷಿಯಂ*
*ಮಿಗೆ ಖತಿಯಾಂತು ಕೊಂಕುನುಡಿಯಿಂ ಪೊದಟ್ಟಿಶ್ರುವಿನಿಂ ಸ ದೋಷಿಯಂ*
*ತಗುಳ್ವಳ್ ಮಧ್ಯೆಯೆಂಬ ಪೆಸರಾಂತು ಭಯಾಖ್ಯೆ ಕೃತಾಪರಾಧಿಯಂ*
*ತಗುಳದೆ ಮಾಣ್ಬಳೆಯ್ದೆ ಬಿಱುಮಾತಿನ ಜಾಲದಿನಸ್ತಧೀರೆ ತಾಂ*

**ಲಕ್ಷ್ಯಂ**

*ಪೊಸಬನಿದಾವನಾದಪುದು ಕಂಡಱಿದಂತೆವೊಲೆಲ್ಲಿ ಕಂಡೆವೀ*
*ರಸಿಕನನೆಂದು ಕಂಡ ತೆಱನಲ್ಲಿದು ತಾಂ ಬಱಿದೇಕೆ ಬಂದನೀ*
*ಬಿಸಿಲೊಳದೇಕೆ ಮೆಯ್ಯುರಿಸಿನಂ ಪಿರಿದಕ್ಕಟ ತಟ್ಟಿ ಬಾಸುಱಿಂ*
*ಪಸಿಯವುನೊಂದನೆಂದು ನುಡಿದಳ್ ತಡೆದೊಯ್ಯನೆ ಬಂದ ನಲ್ಲನಂ ೧೪೪ (ಇವಳ್ ಮಧ್ಯಾಖ್ಯೆ ಧೀರೆ)*

*ಮುಳಿವೆಂ ತಾನಾರ್ಗೆ ತನ್ನಂ ತಿಳಿಪುವ ಪಿರಿದುಂ ದಂದುಗಂ ಬೇಡವಿನ್ನಾಂ*
*ಮುಳಿಯೆಂ ನಿನ್ನಾಣೆ ನಿನ್ನೀ ನವ ನಖಹತಿಯಂ ಕುಂಕುಮಾರ್ದ್ರಾಂಕಿತೋರ*

*ಸ್ಥಳಮಂ ಬೆಳ್ವೇಱೆ ಸೊಪ್ಪಾದಧರಮನಿನಿತುಂ ಕಂಡು ಕಂಡಿನ್ನು ನಿನ್ನೊಳ್*
*ಮುಳಿಸಿನ್ನೇಂ ಲಲ್ಲೆಯಿನ್ನೇಂ ಪುರುಡುಗಳೆನುತುಂ ತೀವಿದಳ್ ಕಣ್ಣ ನೀರಂ ೧೪೫ (ಇವಳ್ ಮಧ್ಯಾಖ್ಯೆ ಧೀರಾಧೀರೆ)*

*ಎಲೆ ಮೃಗನೇತ್ರೆ ಬೇಡ ಮುಳಿಸೆಂಬೆಯಿದೇಂ ಸಖಿಯಿತ್ತಲಾರೊ ಯೆಂ*
*ಜಲಿಸಿದ ಬಾಯ ತೀವ್ರ ನಖಪಾತದ ಬಾಸುಳ ಮೆಯ್ಯ ದುಷ್ಟನಂ*
*ಖಲನನಿದೆಂತು ನೋೞ್ಪೆನಿವನಂ ತಡೆವಂದಮಿದೇಕೆ ಪೋಕೆ ತ*
*ನನ್ನೊಲವನವಳ್ಗೆ ತೋರ್ಕೆ ಬಿಡುಗೆಂದುೞಿದಳ್ ದಯೆಗೆಟ್ಟು ನಲ್ಲನಂ (ಇವಳ್ ಮಧ್ಯಾಖ್ಯಾಧೀರೆ) ೧೪೬*

**ಸೂತ್ರಂ ೬೪**

*ಮುಳಿದುೞೆ ಚಿಂತಿಸುತ್ತೆ ಕೃತದೋಷಿಯನೊಂದದಳುಂ ಬೞಿಕ್ಕವಂ*
*ತಿಳಿಪುತೆ ಬಂದೊಡಂ ಮನಮನೀಯದಳುಂ ಸಲೆ ಧೀರೆ ಹಾಸ್ಯಮ*
*ಗ್ಗಳಿಸಿದ ಕೊಂಕುವಾತಿನುಭಯಾಖ್ಯೆಯೆ ತೋಱುವಳಾ ಸದೋಷಿಯೊಳ್*
*ತಿಳಿಪುವನಂ ಪ್ರಗಲ್ಭೆವೆಸರೊಪ್ಪಿದ ಧೀರೆಯೆ ಜರ್ವಿ ಪೊಯ್ವಳೆ*

**ಲಕ್ಷ್ಯಂ**

*ಬೆರಲಂ ಮೂಗಿನ ಮೇಲಿ*
*ಟ್ಟುರುಕೋಪದೆ ಸಾಪರಾಧಿಯಂ ವಲ್ಲಭನಂ*
*ತರುಣಿಯಣಂ ಪೊರ್ದದೆ ನಿಂ*
*ದಿರವೇಂ ಕನ್ನಡಿಸಿದತ್ತೊ ಧೈರ್ಯದ ಪೆಂಪಂ ೧೪೭*

ವ : ಮತ್ತಂ

*ವಿನಯೋಪಚಾರವಚನಮು*
*ಮನುಕೂಲಾಚರಣಮುಂ ವಿಭಿನ್ನಾಸನಮುಂ*
*ಇನಿಯಂಗೞಿಪದೆ ಸುರತ*
*ಕ್ಕೆನಿತೊದವುವಳಲ್ತು ಮುಳಿದಳೆಂಬೊಂದಿರವಂ ೧೪೮ (ಇವಳ್ ಪ್ರಗಲ್ಭೆವೆಸರ ಧೀರೆ)*

*ಎಱಗಿದೊಡಾರ್ಗೆ ತಾನಸಮಸೌಖ್ಯಮನೀಗುಮೆ ಅಂತೆ ನೀನದ*
*ಕ್ಕೆಱಗುವೆ ಕೆಮ್ಮನೆಮ್ಮಡಿಗೆ ಬಲ್ಲೆನಿದೆಲ್ಲವನೆಟ್ಟು ಪೋಗು ನಿ*
*ನ್ನೆಱಕಮದೆತ್ತಲಿರ್ದುದಿರದತ್ತಱಗೆನ್ನಮನಕ್ಕೆ ಕೋಪಮಂ*
*ನೆಱೆಯಿಸಬೇಡ ಪೋಗೆನುತವಳ್ ನಗೆಯಿಂದ ಕೊಱಚಾಡಿ ಕಾಡಿದಳ್ (ಇವಳ್ ಪ್ರಗಲ್ಭೆವೆಸರ ಧೀರಾಧೀರೆ) ೧೪೯*

*ಪುರ್ವಿಂದಪರಾಧಿಯನುೞೆ*
*ಜರ್ವುತೆ ಕಳಕಾಂಚಿಯಿಂದೆ ಬಂಧಿಸಿ ಕಾಯ್ಪಿಂ*

*ದುರ್ವಿಂ ಬಯ್ದೊದೆದು ಸದೆವಳ್*
*ಸರ್ವರ್ ಕೆಳದಿಯರೆ ಪಾಱಿವೇಟ್ಟಿನಮಿನಿಯಳ್* ೧೫೦

ವ : ಮತ್ತಂ

*ಸ್ಮರನಲರಂಬಿನೇಱುಗಳ ಬಾದಣದಿಂ ಪೊಱಮಟ್ಟು ಪೋದುದೋ*
*ಸುರಿ ಸುರಿಬಾಷ್ಪದಿಂತೊಳೆದು ಪೋದುದೊ ಸುಯ್ಯೆಲರಿಂದೆ ಪಾಱಿತೋ*
*ವಿರಹ ಕೃಶಾನುವಿಂದಮುಱಿ ಬೆಂದುದೊ ಧೈರ್ಯಮೊಡರ್ಚೆ ಚಿತ್ತದೊಳ್*
*ವೆರಸಿ ಮದೀಯಕಾಂತನೆಡೆಗೈದಿತೊ ಕೇಳ್ ಸಖಿ ಕಾಣೆನೆನ್ನೊಳೇಂ (ಇವಳ್ ಪ್ರಗಲ್ಭಾಧೀರೆ)* ೧೫೧

**ಸೂತ್ರಂ ೬೫**

*ಪ್ರಿಯನಿಷ್ಪದೆ ಜ್ಯೇಷ್ಠೆಯುಮ*
*ಪ್ರಿಯದಿಂದೆ ಕನಿಷ್ಠೆಯಕ್ಕು ಮೀಯಱುವರುಮಾ*
*ರಯೆ ತಾಂ ಪ್ರತ್ಯೇಕಂ ಮು*
*ಗ್ಧೆಯನೊರ್ವಳನಿಲ್ಲಿ ಕೂಡೆ ಪದಿಮೂಱು ತೆಱಂ*

ವ : ಜ್ಯೇಷ್ಠೆ ಕನಿಷ್ಠೆಗೆ

**ಲಕ್ಷ್ಯಂ**

*ಪಿಂತನೆ ಬಂದಿರ್ವರ್ ನಿಜ*
*ಕಾಂತೆಯರುಂ ಲೀಲೆಯಿಂದಮಿರೆ ಕಾಂತಂ ತಾ*
*ನಂತೊರ್ವಳ ಕಣ್ಮುಚ್ಚಿಯೆ*
*ಸಂತಸದಿಂದೊರ್ವಳಧರಪಾನಂಗೆಯ್ದಂ* ೧೫೨

*ಎಲೆ ಮೃಗನೇತ್ರೆ ನೋಡು ನವಿಲಾಟಮನಾ ಸಹಕಾರಗುಚ್ಛಕೋ*
*ಮಳಿಕೆಯನುದ್ಧ ಮಧ್ಪ ಮರಲೀಲೆಯನೆಂದು ವನಾಂತರಾಳದೊಳ್*
*ಚಳಮತಿ ಮಾಡಿ ವಲ್ಲಭೆಯನನ್ಯವಿಟೀಮುಖ ಚುಂಬನೇಪ್ಸಿತಾ*
*ಕುಳನಭಿವಾಂಛೆಯುಂ ನೆಱೆಯೆ ತೀರ್ಚಿದನೇನುಚಿತಪ್ರವೀಣನೋ* ೧೫೩

ವ : ಇಲ್ಲಿಯಧರಪಾನಕ್ಕೆ ಬಂದವಳ್ ಜ್ಯೇಷ್ಠೆ, ಚುಂಬನಕ್ಕೆ ಬಂದವಂ ಕುಟಿಲ ನಾಯಕಂ

**ಸೂತ್ರಂ ೬೬**

*ಇನ್ನಾ ಪರಕೀಯೆಯೆ ತಾಂ*
*ಕನ್ನಿಕೆ ಮೆಱೆವೂಢೆಯೆಂದುಮಿರ್ತೆಱನಕ್ಕುಂ*

*ಕನ್ನಿಕೆ ವಿವಾಹವಾಗದ*
*ಳುನ್ನತದೆ ವಿವಾಹವಾದಳೂಢೆಯೆನಿಕ್ಕುಂ*

**ಲಕ್ಷ್ಯಂ**

*ಸುರಭಿಸ್ವೀಕೃತಿ ಗೀತರಕ್ತಿ ಮಣಿಭೂಷಾಪೇಕ್ಷೆ ತಾಂಬೂಲ ರಾ*
*ಗರಸಾಪೇಕ್ಷೆ ಕಟಾಕ್ಷವೀಕ್ಷಣೆ ರತಿವ್ಯಾಪಾರಮೆಂಬೀ ಮಹೋ*
*ದ್ಧುರ ಪಂಚೇಂದ್ರಿಯದರ್ಪಮೊತ್ತರಿಸೆ ಕಯ್ಯಿಕ್ಕಿ ಪೊರ್ಡಿಂತೀ ತನೂ*
*ದರಿ ಸಾಲ್ವಳ್ ತಳೆಯಲ್ ಸ್ವಯಂವರ ವರಪ್ರಸ್ಥಾನಮಾಂಗಲ್ಯಮಂ* *೧೫೪ (ಇವಳ್ ಕನ್ನಿಕೆ)*

*ತಿಳಕಮನೋಸರಿಸುವ ಕ*
*ಜ್ಜಳಜಳಮಂ ತೊಡೆವ ಕುರುಳನೊತ್ತುವ ನೆವದಿಂ*
*ದೆಳಸಿ ಕಿಱಿಕಿಱಿದು ಪೊಸ ಮದ*
*ವಳಿಗೆಯ ಸಾಧ್ವಸಮನರಸನೊಯ್ಯನೆ ಕಳೆದಂ* *೧೫೫ (ಇವಳ್ ಊಢಾನಾಯಿಕೆ)*

**ಸೂತ್ರಂ ೯೭**

*ನೆಱೆಯೆ ಪರಕೀಯೆ ತಾನಿ*
*ರ್ತೆಱನೆಂಬುದನಱಿಯೆ ಪೇೞ್ದೆ ನಿನ್ನಱಿಗೆ ಬುಧರ್*
*ಕುಱಿಪಂ ಪಣ್ಯೆಗೆ ಗುಣಗಣ*
*ದೆಱಕಂ ಸಾಮಾನ್ಯಮಪ್ಪುದಱಿನೊಂದೆ ತೆಱಂ*

**ಲಕ್ಷ್ಯಂ**

*ಮುಳಿವ ಕನಲ್ವ ಕಂಟಿಸುವ ಕಾಡುವ ಬೇಡುವ ಮೇಕುದೋರ್ಪ ಸಾ*
*ರ್ದೆಳಸುವಟಿಲ್ವಗೆಲ್ವ ಬಗೆದೋರ್ಪ ಮನಂಗುಡದಿರ್ಪ ಕೈತವಂ*
*ಗಳೊಳಿವಳಾಗವಂ ಹರೆಯಮಿಲ್ಲದೆ ಮೋಹಿಸುತಿರ್ಪವಳಿನ್ನಿವಳ್*
*ಮೊಳೆಯೊಳೆ ಕೊಂದು ಕೂಗಿದಪಳೇಟೆಲೆವೋದೊಡೆ ಬಾಟಲೀವಳೇ* *೧೫೬ (ಇವಳ್ ಪಣ್ಯೆ)*

**ಸೂತ್ರಂ ೯೮**

*ಇಂತಱಿಯೆ ಪೇೞ್ದ ಪದಿನಾ*
*ಱುಂ ತೆಱದಾ ವಧುಗಳೊಳಗೆಯೋರೋರ್ವರವ*
*ಸ್ಥಾಂತರಮದೆಂಟು ಭೇದಮ*
*ದೆಂತೆನೆ ತಱಿಸಂದು ಪೇೞ್ವೆನೆನ್ನಱಿವನಿತಂ*

**ಸೂತ್ರಂ ೯೯**

*ಸುಕವಿಗಳಿಂ ಸ್ವಾಧೀನಪ*
*ತಿಕೆ ಗತಭರ್ತಾರಿಕೆಯಭಿಸಂಧಿತೆಯಭಿಸಾ*
*ರಿಕೆ ವಿರಹೋತ್ಕಂಠಿತೆ ವಾ*
*ಸಕಸಜ್ಜಿಕೆ ವಿಪ್ರಲಬ್ಧೆ ಖಂಡಿತೆಯೆನಿಕುಂ*

**ಸೂತ್ರಂ ೧೦೦**

*ಸತತಂ ಸ್ವಾಧೀನಪತಿಕೆ*
*ಪತಿಯಂ ಸ್ವಾಧೀನಮಾಗಿ ತಡೆದಂಗನೆ ತಾಂ*
*ಗತಭರ್ತಾರಿಕೆಯೆನಿಕುಂ*
*ಪತಿ ಪರದೇಶಸ್ಥನಾಗೆ ಮಱುಗುವ ನಲ್ಲಳ್*

**ಲಕ್ಷ್ಯಂ**

*ಪೊಲ್ಲಮೆಗಂಡವರ್ ಮುಳಿದು ತಮ್ಮಯ ತೊಟ್ಟಿರನೆಂತುಮಾಱ್ಪೊಡಂ*
*ಸಲ್ಲದೆ ಲೋಗರಂ ಬೆಸಸು ನಿನ್ನಯೆ ವಾಮಪದಪ್ರಘಾತಮಂ*
*ನಲ್ಲಳೆ ಕೋಪದಿಂದೆನಗೆ ನೀಂ ದಯೆಗೆಯ್ದೊಡೆ ನೋಗುಮೆಂದೆ ನೀ*
*ಮೆಲ್ಲಡಿಯೆನ್ನ ಮೆಯ್ಯ ಪುಳಕಂಗಳಿನೆನ್ನ ಕುರುಳ್ಗಳೊತ್ತಿನಿಂ* *೧೫೭ (ಇವಳ್ ಸ್ವಾಧೀನಪತಿಕೆ)*

*ಘನಸಮಯಕ್ಕೆ ಬರ್ಪನೆನೆ ತಾಂ ಬರವಾಱುತುಮಿರ್ಪುದೆಂದು ಮೆ*
*ಲ್ಲನೆ ಪಲವಂದದಿಂ ನಿಲಿಸಿ ಮತ್ಪತಿ ಪೋಗೆ ಬಟಿಕ್ಕಮೇನೊ ತೊ*
*ಟ್ಟನೆ ನಭದೊಳ್ ಕಱಂಗಿ ಮುಗಿಲುಂ ನೆಗೆದಿರ್ದುವು ನಲ್ಲನೇಕೆ ಬಾ*
*ರನೊ ಮಿಗೆ ತಟ್ಟುಕೇಗಿದಪುದೆನ್ನೆರ್ದೆ ಪವ್ವನೆ ಪಾಱೆಕೇಕಿಗಳ್* *೧೫೮ (ಇವಳ್ ಗತಭರ್ತಾರಿಕೆ)*

**ಸೂತ್ರಂ ೧೦೧**

*ಅಡಿಗೆಱಗಿದಿನಿಯನಂ ಕಿಡೆ*
*ನುಡಿದಟ್ಟೆ ಬಟಿಕ್ಕೆ ನೋವಳಭಿಸಂಧಿತೆ ಪೇ*
*ರಡವಿಯಿರುಳ್ ಪಗಲೆನ್ನದೆ*
*ಬಿಡದೆಯ್ದುಗುಮೋಪನಲ್ಲಿಗಭಿಸಾರಿಕೆ ತಾಂ*

**ಲಕ್ಷ್ಯಂ**

*ವಿನಮಿತನಾದ ನಲ್ಲನುಮನೊಲ್ಲದೆ ಚೇಟಿಯರಾಗಳಕ್ಕ ನೀಂ*
*ಮುನಿಸನೆ ಮಾಣ್ಬುದೆಂದೊಡದುವಂ ಬಗೆಗೊಳ್ಳದೆ ಮಾಣ್ದು ಮತ್ತೆ ತಾಂ*
*ಮುನಿಸನೆ ತಾಳ್ದಿದೆಂ ಮುನಿಸೆ ತಾಪನಿಬಂಧನಮಾದುದಲ್ಲದಿಂ*
*ದೆನಗೆ ಲತಾಂತಮೀ ಮಲಯಜಂ ಸಸಿ ತುಂಬಿಗಳುಂತು ಕಾಯ್ದುಮೇ (ಇವಳ್ ಅಭಿಸಂಧಿತೆ)       ೧೫೯*

*ಬಱಸಿಡಿಲೇೞ್ಗೆ ಸುತ್ತಿಱಿವ ಕತ್ತಲೆ ಕಾರ್ಮುಗಿಲೊಡ್ಡು ಬಂದು ಬಂ*
*ದೆಱಗುವ ಬಲ್ಲಿತಪ್ಪ ಸರಿ ಕಣ್ಗಳೊಳುಳ್ಕುವ ಮಿಂಚು ಮಾಣದ*
*ಬ್ಬುಱೆ ಗಜಱುತ್ತುಮಿರ್ಪ ಘನಘರ್ಜನೆಯೆಂಬಿವು ಕಾತರತ್ವಮಂ*
*ಮಱೆಯಿಸಲೆಂದುಮಾಱವು ನಿಜೇಶ್ವರನಲ್ಲಿಗೆ ಪೋಪ ನಲ್ಲಳಾ   ೧೬೦ (ಇವಳ್ ಅಭಿಸಾರಿಕೆ)*

**ಸೂತ್ರಂ ೧೦೧**

*ವಿರಹೋತ್ಕಂಠಿತೆ ಪತಿ ತಡೆ*
*ದಿರವಿಂಗತಿದುಃಖಿಯಾದವಳ್ ತನ್ನಂ ಮಂ*
*ದಿರಮಂ ವಾಸಕಸಜ್ಜಿಕೆ*
*ಪುರುಷನ ಬರವಱಿದು ಸಿಂಗರಂಗೆಯಲಕ್ಕುಂ*

**ಲಕ್ಷ್ಯಂ**

*ಇನಿಯಂ ಬಾರದೆ ನಿಂದನೇಕೆ ಗಡ ಪೊೞ್ತುಂ ಪೋದುದಿಂತೆಂದು ಕಾ*
*ಮಿನಿ ತನ್ನಾಸೆ ನಿರಾಸೆಯಾಗೆ ಬಿಸುಸುಯ್ದೆೞ್ಚತ್ತುರ್ಬೆ ಬೇಸತ್ತು ಕ*
*ಣ್ಬನಿಯಂ ಸೂಸಿ ಕನಲ್ದು ತೊಟ್ಟ ತೊಡವಂ ಬೀಸಾಡಿ ಪೂಮಾಲೆಯಂ*
*ಮುನಿಸಿಂದಂ ಪಱಿದಿಟ್ಟು ಕಾಂತೆಸೊಡರಂ ನಿರ್ವೇದದಿಂ ಬೀಸಿದಳ್ (ಇವಳ್ ವಿರಹೋತ್ಕಂಠಿತೆ)  ೧೬೧*

*ಮನೆಯುಮನೆಯ್ದೆ ತನ್ನುಮನಲಂಕರಿಸಿರ್ದು ನಿಜ ಪ್ರಿಯೋಪಗೂ*
*ಹನ ದೃಢಗಾಢಕರ್ದಮವಿಲೇಪನಮೆಂದು ವಧೂಟಿಗಂಧಪಾ*
*ವನಮೃಗನಾಭಿಚರ್ಚನಮನೊಲ್ಲದೆ ಮಾಣ್ದಳದಂತೆ ಕಾಂತೆ ಕಾಂ*
*ತನೊಳೊಡಗೂಡದಿರ್ಪಳವಲೇಪನೆನಿಪ್ಪುದು ತಕ್ಕುದೆನ್ನಿರೇ        ೧೬೨ (ಇವಳ್ ವಾಸಕಸಜ್ಜಿಕೆ)*

**ಸೂತ್ರಂ ೧೦೨**

*ಬೆಸಸಿದೆಡೆಗೆಯ್ದಿ ಪಡೆಯದೆ*
*ರಸಿಕನನತಿ ದುಃಖಿ ವಿಪ್ರಲಬ್ಧೆಯೆ ನಲ್ಲಂ*
*ಸುಸಿಲಂಕಮನನ್ಯೆಯಿನಾಂ*
*ತೆಸೆದಿರೆ ಕಂಡೀರ್ಷ್ಯೆಗೆಯ್ವ ಪೆಣ್ ಖಂಡಿತೆ ತಾಂ*

**ಲಕ್ಷ್ಯಂ**

*ನೂತವಿಹಂಗ ಸಂಕುಳ ಸಮುನ್ನತನಾದಮನೆಯ್ದೆ ಕೇಳ್ದು ಕಾ*
*ಮಾತುರೆ ನಲ್ಲನಾಯೆಡೆಯೊಳಿರ್ದನೆಗೊತ್ತಿರದೆಯ್ದೆ ಬಂದು ಸಂ*
*ಕೇತನ ಮಾಧವೀಸದನದೊಳ್ ನಿಜಕಾಂತನ ರೂಹುಗಾಣದು*
*ತ್ಪಾತವಿಷಾದೆ ಬೆಚ್ಚನುಸಿರ್ದೊತ್ತಿದಳೊಯ್ಯನೆ ಕಣ್ಣ ನೀರ್ಗಳಂ ೧೬೩ (ಇವಳ್ ವಿಪ್ರಲಬ್ಧೆ)*

*ಇನಿತಂ ನಂಬೆಲೆ ಮನ್ಮನೋರಮಣಿ ನಿನ್ನೆನ್ನಂದಮಂ ನೋಟ್ಪೊ ಡೀ*
*ತನು ಬೇಱಲ್ಲದೆ ಜೀವಮೊಂದೆ ತಮಗೆಂಬೀ ಮಾತೆ ಕೇಳೀಗಳೋ*
*ಪನೆ ಪೋ ನಿಶ್ಚಯಮಾದುದಲ್ಲದೊಡೆ ನಿನ್ನೀ ಮೆಯ್ಯೊಳೊಂದಿರ್ದ ನೂ*
*ತನರಕ್ತಾರ್ದ್ರನಖಕ್ಷತವ್ಯಥೆಗೆ ಪೇೞೆನ್ನೀ ಮನಂ ನೋಗುಮೇ ೧೬೪ (ಇವಳ್ ಖಂಡಿತೆ)*

ವ : ಮತ್ತಮಿಂತು ನೂಱೆಪ್ಪತ್ತೆಂಟು ತೆಱದ ಭೇದದ ನಾಯಿಕೆಯರಲ್ಲಿ ಪ್ರತ್ಯೇಕಮಾಗಿ ಮೂದೆಱನಕ್ಕುಮದೆಂತೆಂದೊಡೆ

**ಸೂತ್ರಂ ೧೦೪**

*ಕ್ರಮದಿಂದೆ ವಚನಕೋಪ*
*ಪ್ರಮೋದದಿಂ ಪ್ರಕೃತಿಗುಣವಿಭೇದಿನಱಿಗು*
*ತ್ತಮ ನಾಯಿಕೆಯಂ ನೆಱೆ ಮ*
*ಧ್ಯಮ ನಾಯಿಕೆಯುಂ ಜಘನ್ಯತರ ನಾಯಿಕೆಯುಂ*

**ಸೂತ್ರಂ ೧೦೫**

*ಮೃದುವಾಕ್ಕೋಪಪ್ರಸಾದಂ ಸಹಜಮೆನಿಸಿದಾ ಕಾಂತೆ ತಾನುತ್ತಮಾಖ್ಯಾ*
*ಸ್ಪದೆ ರಕ್ತಾರಕ್ತಮಾಗಲ್ಕುಳಿಸು ವಿಷಮಸಂಧಾನಮಿನ್ನುಳ್ಳವಳ್ ಮಾ*
*ರ್ಗದೊಳಕ್ಕುಂ ಮಧ್ಯಮಾಖ್ಯೋನ್ನತೆಮುಳಿಸದೆ ಕಾಯ್ದುಂದು ಕೂರ್ಪೊಂ*
*ದಿದಿರ್ಗೊಂಡಾತ್ಮೇಶನಂ ಮೇಳಿಸುವ ಚಪಳೆಕೇಸ್ ತಾಂ ಜಘನ್ಯಾಖ್ಯೆಯಲ್ತೇ ೧೬೫*

**ಲಕ್ಷ್ಯಂ**

*ಮನ್ಮನದಾಣ್ಮನೆ ನಿನ್ನಯ*
*ಸನ್ಮಾನಂ ಜಾಣ್ಮೆ ಜವ್ವನಂ ಸಿರಿ ವಿಭವಂ*
*ಮನ್ಮಥರೂಪತೆ ಸೊಬಗುಂ*
*ಸನ್ಮಾಧುರ್ಯತೆಯನೆನಗೆ ಪುಟ್ಟಿಪುವನಿಶಂ ೧೬೫*
*(ಇದುತ್ತಮ ನಾಯಿಕಾ ವಚನಂ)*

ಬಿನದಮದೆಂದನಂದಮೆರ್ದೆಗೊಳ್ವಪಚಾರಮದೆಂದಿನಂದಮಿಂ
ಪಿನ ನುಡಿಯೆಂದಿನಂದವಱಿಪೋಡದ ನೋಟಮದೆಂದಿನಂದಮೆಂ
ಬಿನಮಿರದಾಗಳುಂ ಬಿಡದ ಸುಯ್ಯೆಲರ್ಗೊಯ್ಯನೆ ಬಂದು ಮೆ
ಲ್ಲನೆ ಪೆಱಪಿಂಗುವಾಱಡಿಯ ದೂ ಱಿದುದೋಪನೊಳಾದ ಕೋಪಮಂ ೧೬೬
(ಇದುತ್ತಮ ನಾಯಿಕಾ ಕೋಪಂ)

ಮುಳಿಸೇಂ ಕಾರಣಮೆನ್ನೊಳಿಲ್ಲ ಮತಿವಾಕ್ಕಾರುಣ್ಯದಿಂದೋಪ ನ
ಲ್ಲಳೆ ನೀಂ ನಿನ್ನಯೆ ತೊಟ್ಟನಿಂತು ಬೆಸಸಲ್ ಪೋತಕ್ಕುದೇ ಮಾಣ್ಬುದೀ
ಕಳುಷಾಲಾಪಮನೆಂದು ಕಾಲ್ವಿಡಿದನಂ ಕೂರ್ತೆತ್ತಿ ಬಾಷ್ಪಾಂಬುಕ
ಜ್ಜಳಪಂಕಾಂಕಿತಸಾರ್ದ್ರವೃತ್ತಕುಚದೊಳ್ ತಳ್ತಪ್ಪಿದಳ್ ಕಾಂತನಂ ೧೬೭
(ಇದುತ್ತಮ ನಾಯಿಕಾ ಪ್ರಸಾದಂ)

ಮನದೊಳ್ ಕಪಟಮನಱಿಯದೆ
ನಿನಗೊಲ್ದಳನೆನ್ನನಿಂತು ತೊಟ್ತೆಂಬವೊಲೊ
ಯ್ಯನೆ ನೆಗಟ್ದಿಪೆ ನಿನ್ನೀ ಬಾ
ಯ್ತನಮಂ ಮಾಣ್ಮಾಣದಂದು ಪೊಸಪರಿ ಮಾಟ್ಪೆಂ ೧೬೮
(ಇದು ಮಧ್ಯಮ ನಾಯಿಕಾ ವಚನಂ)

ಅರುಣಿಮನೇತ್ರಮಧ್ಭ್ರು ಕುಟಿಭಂಗಮತಿಸ್ಫುರಿತಾಧರಂ ನಿರಂ
ತರಮತಿಕಂಪಿತ ಸ್ತನತನೂದರಮುದ್ಗತ ಘರ್ಮಬಿಂದು ನಿ
ರ್ಭರ ಸರಸೋಕ್ತಿಯಾಕುಳತೆಯೊಳ್ ರಮಣಂಗೆ ಪೊದಟ್ದು ಚೆಲ್ವನಾ
ಳ್ದಿರೆ ಮುನಿದಳ್ ಮನಂಬುಗೆ ವಿನೂತನ ಸದ್ರಸಭಂಗಭೀತಿಯಿಂ ೧೬೯
(ಇದು ಮಧ್ಯಮ ನಾಯಿಕಾ ಕೋಪಂ)

ನಡುಗೆ ಪಯೋಧರಂ ಪೊಡರೆ ಬಾಯ್ದೆಱೆ ಮಿಳ್ಳಿಸೆ ಪುರ್ವು ಕೆಂಪನಾ
ೞ್ದೊಡರಿಸೆ ಕಣ್ಗಳುಣ್ಮೆ ಬೆಮರಾದಮೆ ಕಂಡು ಭಯಾರ್ತಮೂರ್ತಿ ಕಾ
ಲ್ವಿಡಿಯೆ ಕೃತಾಪರಾಧಿ ನಿಜನೂಪುರದೊಳ್ ತೊಡರ್ದೊಳ್ಗುರುಳ್ಗಳಂ
ಬಿಡಿಸುವ ಕೈತದಿಂ ಮೆಱೆದಳಾ ವಿಭುಗಂ ವಧು ತನ್ನ ನಲ್ಮೆಯಂ ೧೭೦
(ಇದು ಮಧ್ಯಮ ನಾಯಿಕಾ ಪ್ರಸಾದಂ)

ಸುಡು ಸುಡು ಪೋಗೆನೆಂಬೆನಿರಬಾರದು ಪೋದೊಡೆ ನೋಡೆನೆಂಬೆನಂ
ದೊಡೆ ನಯನಂಗಳಂತಿರವು ನೋಡಿದೊಡಂ ನಗದಿರ್ಪೆನೆಂಬೆನಂ
ದೊಡೆ ನಗೆ ನಿಲ್ಲದಾ ನಗೆಯೊಳಾನವನೊಳ್ ಪುದುವಾಱೆನೆಂಬೆನಂ
ದೊಡೆ ಬಗೆ ಮೇಲೆವಾಯ್ದೆಳಸಿ ತಾನೆ ಕಡಂಗುವುದೇವೆನಾಂ ಸಖೀ ೧೭೧
(ಇದು ಜಘನ್ಯ ನಾಯಿಕಾ ವಚನಂ)

*ನುಡಿದೊಡೆ ಚುನ್ನಮಂ ನುಡಿದಳೆಂದಪೆ ನಾಣಿಲಿ ಮಾಣಲಾಗದೇ*
*ತುಡುಗುಣಿಗೆಯ್ತಮಂ ನಿನಗೆ ಮಾಣ್ದೊಡೆ ಸತ್ತಪೆ ನಿನ್ನನೆಂತು ಸೈ*
*ತಿಡುವೆನೊ ಸಂದ ಜೋಡಗನೆ ಎಂದು ಕರಂ ಮುಳಿಸಿಂ ಕನಲ್ತು ಕ*
*ಣ್ಕಿಡೆ ಕಡುಕೆಯ್ದು ಸೊಪ್ಪುಸೊವಡಪ್ಪಿನೆಗಂ ಬಡಿದಳ್ ನಿಜೇಶನಂ ೧೭೨*
*(ಇದು ಜಘನ್ಯ. ನಾಯಿಕಾ ಕೋಪಂ)*

*ಮುಳಿದಿರೆ ನಲ್ಲನೋಪಳ ಪದಾಂಬುರುಹಕ್ಕೆ ವಿನಮ್ರನಾಗೆ ಚಾ*
*ಪಳ ಮೊಱೆಯಲ್ತು ನೀನೆನಗೆ ಮುಟ್ಟದೆ ಪೋಗೆನೆ ಪೋಗೆ ಕಂಡು ಸಂ*
*ಚಳಮತಿ ನಿಂದು ಸೈರಿಸದೆ ಬೆಂಬೞಿಯಿಂ ಪರಿದೆಯ್ದೆ ಮೇಲುದಂ*
*ಸೆಳೆದೊಡೆ ನಲ್ಲನೊಲ್ಲದಿರೆ ಕಾಲ್ವಿಡಿದೊಯ್ದುಳತಿಪ್ರಮೋದದಿಂ ೧೭೩*
*(ಇದು ಜಘನ್ಯ. ನಾಯಿಕಾ ಪ್ರಸಾದಂ)*

**ಸೂತ್ರಂ ೧೦೬**

*ನೀನಱಿದೆಣಿಸುವೊಡಾದುದು*
*ಮೂನೂಱೆಂಬತ್ತುನಾಲ್ಕು ಭೇದಂ ಪೆಸರ್ವೆ*
*ತ್ತಾ ನಾಯಿಕಾವಿಕಲ್ಪಂ*
*ಭೂನುತ ಕವಿ ನಿಕರ ರಚಿತ ಕಾವ್ಯಾದಿಗಳೊಳ್*

ವ : ಮತ್ತಮಿದೊಂದು ಮತದಿನಿಂತಾದುದವಱ ಗುಣಗಣಮನೋವೃತ್ತಿ ಚೇಷ್ಟಾದಿಗಳಿಂ ನಾಯಿಕಾಭೇದಮಗಣಿತಮವರ್ಗೆ

**ಸೂತ್ರಂ ೧೦೭**

*ನುತಸಖಿ ಲಿಂಗಿನಿ ಧಾತ್ರಿಕೆ*
*ಪ್ರತಿವೇಶಿನಿ ದಾಸಿ ಚಾರು ಶಿಲ್ಪಿನಿ ಕಾಂ*
*ತೆ ತರದೆ ದೂತಿಯರಕ್ಕುಂ*
*ಸತತಂ ಸ್ವಾಧೀನೆಯಾದಿಗಿವರೆ ಸಹಾಯರ್*

ವ : ಇದಕ್ಕೆ ಸಮ್ಮತಿವಚನಂ

**ಶ್ಲೋಕ :** *ದೂತೀ ದಾಸೀ ಸಖೀ ಚೈವ ಧಾತ್ರೇಯೀ ಪ್ರಾತಿವೇಶಿನೀ*
*ಯೋಗಿನೀ ಶಿಲ್ಪಿನೀ ಸಾ ಚ ಸಹಾಯಾಷ್ಟಪ್ರಕೀರ್ತಿತಾಃ*

**ಸೂತ್ರಂ ೧೦೮**

*ಇವರಂ ಪ್ರಿಯನಿರ್ದೇಡೆಗಾ*
*ಯುವತಿಯರಟ್ಟುವರೊಱಲ್ದು ಕಾರ್ಯನಿಮಿತ್ತಂ*
*ಇವರಂ ಕಳುಪದೆ ಸಲೆ ತಾ*
*ನೆ ವಲ್ಲಭನ ಬಟಿಗೆ ಪೋಪಳಭಿಸಾರಿಕೆ ದಲ್*

ವ : ಇಂತಪ್ಪ ನಾಯಿಕೆಯರ್ಗೆ ಸಖಿಯರೇೞು ಮಂದಿಯವರವರ ಗುಣಬುದ್ಧಿ ಸಂಧಾನ ಕೌಶಲ್ಯ ನುಡಿಗಳನಂತಮದಱಿಂ ಸಖ ಸಖೀ ವಚನಂಗಳಖಿಳ ಕಾರ್ಯದೊಳ್ ಸುಲಭಂ

**ಲಕ್ಷ್ಯಂ**

*ಎನಗೇಕಾದುದೊ ಬೆಂದರೂಪೆಸೆವ ರೂಪಿಂಗೇಕೆ ಪಾೞೂದ ಜ*
*ವ್ವನಮೀ ಜವ್ವನದಲ್ಲಿ ಕೂರದನ ಬೇಟಂ ಬೇಟದೊಳ್ ಕಾಯ್ವ ಚಂ*
*ದ್ರನ ಕಾಟಂ ಕಟಿಪಿಂದಮಾವುದೆನಗಿನ್ನೇನೆಂದೊಡಾನೆಂದೆನಂ*
*ಗನೆ ನೀಂ ಗರ್ವಿಸಿದಪ್ಪೆಯೆಂದು ಬಗೆದೋಱಂ ನಲ್ಲನೇನೊಲ್ಲನೇ ೧೭೪*

ವ : ಇಂತಱಿವುದು

*ಇದು ಶತೇಂದ್ರ ಮುನೀಂದ್ರವಂದಿತಾರ್ಹತ್ಪರಮೇಶ್ವರ ಪಾದಾರವಿಂದ ಮಂದ*
*ಮಕರಂದಾನಂದಿತ ಭೃಂಗಾಯಮಾನ ಕವಿಸಾಳ್ವ ವಿರಚಿತಮಪ್ಪ*
*ರಸರತ್ನಾಕರದೊಳ್ ನಾಯಕ ನಾಯಿಕಾ ವಿವರಣಂ*

**ತೃತೀಯ ಪ್ರಕರಣಂ**

## ವ್ಯಭಿಚಾರಿಭಾವ ವಿವರಣಂ

**ಚತುರ್ಥ ಪ್ರಕರಣಂ**

*ಶ್ರಿಯಂ ರಸವತ್ಕವಿತಾ*
*ಶ್ರೀಯಂ ತಳೆದಿಂದುಕುಂದಕರ್ಪೂರಯಶ*
*ಶ್ರೀಯಂ ಪೆತ್ತಂ ಭವ್ಯ*
*ಪ್ರಾಯಂ ಪರಹಿತದೆ ಬಾೞ್ಗನೀ ಕವಿಸಾಳ್ವಂ*

ವ : ವಿದ್ಯಾನಾಥನ ಭಾವೋದಯ ಭಾವಶಾಂತಿ ಭಾವಸಂಧಿ ಭಾವಶಬಲತ್ವ ಭಾವಸ್ಥಿತಿಗಳ್ಗೆ

**ಸೂತ್ರಂ ೧೦೯**

*ಪಸರಿಪ ಭಾವದುದಯ ಶಾಂ*
*ತಿ ಸಂಧಿ ಶಬಲತೆಗಳೆಂದು ಪರಿವರ್ತಿಸುಗುಂ*
*ಪೆಸರದಱುದಯದೆ ಶಾಂತಿಯಿ*
*ನೆಸೆವೆರಡಱ ಸಂಧಿಯಿಂ ಬಹುತ್ವದೆ ಸಿದ್ಧಂ*

**ಲಕ್ಷ್ಯಂ**

*ಪರಿವಿಡಿಗೆಯ್ಯೆ ತೊಂಡುಗಿಳಿ ತಂದೆಯ ತಾಯ ಸಮೀಪದೊಳ್ ತನೂ*
*ದರಿಯ ರತೋಪಯುಕ್ತ ರುತಮಂ ವಿನತಾನನೆ ನಾಣ್ಚೆ ತಾಳತ*
*ತ್ವರಶಿಶು ನರ್ತನಪ್ರಹತಕಂಕಣಝುಂಕೃತಹಸ್ತತೂರ್ಯ ನಿ*
*ರ್ಭರ ರವದಿಂದದಂ ಮಱಸಿದಳ್ ಗಡ ಮುಗ್ಧೆಯದೇಂ ವಿದಗ್ಧೆಯೋ* ೧೭೫
*(ಇಲ್ಲಿ ಲಜ್ಜಾಭಾವೋದಯಂ)*

*ಸತಿ ಕೇಳ್ ನೀಂ ರತಿ ನಲ್ಲನೊಪ್ಪುವಲರ್ವಿಲ್ಲಂ ಪ್ರೇಮದಿಂ ಶರ್ಕರಾ*
*ಮೃತದೊಳ್ಗೂಟದವೋಲ್ ನಿಮತ್ತು ಸವಿಗೂಟಂ ಪಿಂಗೆ ಕಾಮಾಗ್ನಿಗಾ*
*ಹುತಿಯಪ್ಪಂದಮದಲ್ತೆ ಗಾವಿಲರ ಕೃತ್ಯಂ ಕಾಲ್ಗೆ ಬಿದ್ದಿರ್ದ ಭೂ*
*ಪತಿಯಂ ಮೇಳಿಸು ಬೇಡ ಕೋಪಮೆನೆ ಕೇಳ್ದೊಲ್ಲಪ್ಪಿದಳ್ ಕಾಂತನಂ* ೧೭೬
*(ಇಲ್ಲಿ ಭಾವಶಾಂತಿ)*

*ಇದಿರೊಳ್ ಪುಲಿ ಗರ್ಜಿಸಿ ನಿಲೆ*
*ಬೆದಱೆ ಕರಂ ಶಬರಿ ಬರಿಯನಪ್ಪಲೊಡಂ ಕೋ*
*ಪದಿನಲರ್ದುದೊಂದು ಕಣ್ ರಾ*
*ಗದಿನಲರ್ದುದದೊಂದು ಕಣ್ ವನೇಚರಪತಿಯಾ* ೧೭೭
*(ಇಲ್ಲಿ ರೋಷಹರ್ಷದ ಸಂಧಿ)*

ವ : ಮತ್ತಂ

*ನಂದನನೊಸಗೆಯುಮಾ ಮಕ*
*ರಂದಕನೆಳಸಿರದೆ ಬಿಟ್ಟು ಪೋದೊಂದಟಲುಂ*
*ಕುಂದದೊಡವೆರಸೆ ಸತಿ ಕಾ*
*ಳಿಂದಿಯ ಸುರಿನದಿಯ ಕೂಡಲಂ ಪೋಲ್ತಿರ್ದಳ್* ೧೭೮
*(ಇಲ್ಲಿ ಹರ್ಷವಿಷಾದ ಸಂಧಿ)*
*(ಇವು ಭಾವಸಂಧಿಗಳ್)*

*ಎಲರಿಂದೆಬ್ಬಿತ್ತು ಲೀಲಾವತಿ ನಿಜಪತಿಯಂ ಮಂಚದೊಳ್ ಕಾಣದಾಗಳ್*
*ಚಲೆಯಾದಳ್ ಮೂರ್ಛೆವೋದಳ್ ಮಱೆದಳೊಱಗಿದಳ್ ಕಂದಿದಳ್*
*ಕುಂದಿದಳ್ ಕೋ*
*ಟಲೆಗೊಂಡಳ್ ಸಾವುಗಂಡಳ್ ಕಳವಳಿಸಿದಳಾಸತ್ತಳಟ್ಟಿಳ್ ಬೆಮರ್ತಳ್*
*ನೆಲೆಯಿಂದಂ ಬಿಟ್ಟಿಳೆಟ್ಟಿಳ್ ವಿರಹದುರಿಯ ಸಂತಾಪವಿಭ್ರಾಂತಿಯಿಂದಂ        ೧೭೯*

(ಇಲ್ಲಿ ಬೋಧೆ ಮತಿ ಚಪಲತೆ ಮೋಹಂ ಜಡತೆ ನಿದ್ರೆ ಗ್ಲಾನಿ ಮೊದಲಾದ ಸಂಚಾರಿ ಗಳಪ್ಪುದಱಿಂ ಭಾವಶಬಲತ್ವಂ)

ವ : ಭಾವದ ನಿಲವೇ ಭಾವಸ್ಥಿತಿ

**ಲಕ್ಷ್ಯಂ**

*ತಣಿವುಂಟೇ ಪೆಱದೊಂದಪೂರ್ವರಸಮಂ ಕೆಯ್ಗೊಟ್ಟುಮೇ ಮತ್ತಮಾ*
*ವುಣಿಸಾ ತಂಬುಲಮಾ ವಿದಗ್ಧಗಣಿಕಾಸಂಭೋಗಮಾ ವಸ್ತ್ರ ಭೂ*
*ಷಣ ಮಾಲ್ಯಾದಿಗಳಿಂದೆ ಪಂಬಲಿಪೆ ನಿಚ್ಚಮೀ ಪಿಷ್ಟ ಪೇ*
*ಷಣಮೀ ಚರ್ವಿತ ಚರ್ವಣಂ ಸುಖಮದೇಂ ನಿನ್ನಂ ಮರುಳ್ಮಾಡಿತೋ          ೧೮೦*
*(ವಿತರ್ಕದ ಸ್ಥಿತಿ)*

ವ : ಇಂತೈದುವಿಧಂ ವ್ಯಭಿಚಾರಿಗಳ್ ಪ್ರತ್ಯೇಕಮೆಂದಱಿವುದು. ಇನ್ನಾ ವ್ಯಭಿಚಾರಿಗಳಂ ಪೇೞ್ವೆಂ

**ಸೂತ್ರಂ ೧೧೦**

*ಮತಿ ಲಜ್ಜಾವೇಗ ಶಂಕಾ ಮರಣ ಚಪಲತಾ ಹರ್ಷ ನಿರ್ವೇದ ದೈನ್ಯ*
*ಸ್ಮೃತಿ ಮೋಹಾಲಸ್ಯಗರ್ವ ಶ್ರಮ ಮದ ಜಡತಾ ಗ್ಲಾನಿ ಸಂಸುಪ್ತಿ ನಿದ್ರಾ*
*ಧೃತಿ ತರ್ಕೋನ್ಮಾದ ಬೋಧಾಮಯ ಭಯ ಸವಿಷಾದೋತ್ಸುಕಾಮರ್ಷ ಚಿಂತಾ*
*ಸತತಾಸೂಯಾವಹಿತ್ಥೋಗ್ರ ಕವಿಲಸದಪಸ್ಮಾರಕಾಖ್ಯಾನದಿಂದಂ*

**ಸೂತ್ರಂ ೧೧೧**

*ಸಮನಿಸಿ ಗಣಿಸಿದ ಮೂವ*
*ತ್ತುಮೂಱು ಸಂಚಾರಿಭಾವತತಿಗಾಂ ಪೇೞ್ವೆಂ*
*ಕ್ರಮದೆ ವಿಭಾವಮನನುಭಾ*
*ವಮನೊಪ್ಪುವ **ಹೇಮಚಂದ್ರಸೂರಿ**ಯ ಮತದಿಂ*

**ಸೂತ್ರಂ ೧೧೨**

*ನೆಗಟ್ಟಿ ವಿಭಾವಂ ವ್ಯಭಿಚಾ*
*ರಿಗೆ ಕಾರಣಮಾಯ್ತು ಕಾರ್ಯಮನುಭಾವಂ ಸೈ*
*ತೊಗೆದನುಭಾವದೆ ಸಂಚಾ*
*ರಿಗಳಂ ವರ್ಣಿಸಿದರಾದ್ಯರೆಂತೆನೆ ಪೇೞ್ವೆಂ*

ವ : ಅಲ್ಲಿಯಾದಿಮಾರ್ಗದಿಂ ವ್ಯಭಿಚಾರಿ ಮೂವತ್ತುಮೂಱುಂ ಸಂದುದು ಬೇಱಿಲ್ಲಂ. ದಂಭಂ ಗರ್ವದೊಳವಹಿತ್ಥದೊಳುದ್ವೇಗಂ ನಿರ್ವೇದದಲ್ಲಿ ಕ್ಷುತ್ತೃಷ್ಣಾದಿ ಗ್ಲಾನಿಯೊಳಂತ ರ್ಭಾವಮಂತೆ ಪೆಱತೊಳವೆಂದೊಡಮೀ ಮೂವತ್ತುಮೂಱ ಱೊಳವರ್ಪುವು. ಅಲ್ಲಿ ಲಕ್ಷಣಮಂ ವಾಕ್ಯಮಾಗೆ ವಿಭಾವಾನುಭಾವಂಗಳಂ ಪೇೞ್ದುದನಱಿಗೆ

**ಕ್ರಮಲಕ್ಷಣಂ**

ವ : ಅರ್ಥನಿಶ್ಚಯಮೇ ಮತಿ

**ಸೂತ್ರಂ ೧೧೩**

*ಶ್ರುತಚಿಂತನಾನಯಾದ್ಯು*
*ನ್ನತಬುದ್ಧಿಪದಾರ್ಥಬೋಧೆಯೆ ವಿಭಾವಂ ತ*
*ನ್ಮತಿಗೆ ಸಲೆ ಸಂದೆಗಮನ*
*ಟ್ಟೆ ತತ್ವಮಂ ತಿಳಿದ ನಿಲವೆ ಸಂದನುಭಾವಂ*

***ಲಕ್ಷ್ಯಂ***

*ಕಿಡಲೆಂದಿರ್ಪುದು ದೇಹಮೆಲ್ಲ ತೆಱದಿಂ ಕೇಡಿಲ್ಲ ಜೀವಕ್ಕೆ ಮ*
*ತ್ತೊಡಲಜ್ಞಾನಿ ಸುಬೋಧದೃಗ್ಬಳಮೆ ಮೆಯ್ ಜೀವಕ್ಕೆ ದೋಷಂಗಳಿ*
*ರ್ಪೆಡೆ ದೇಹಂ ಗುಣರತ್ನಮಿರ್ಪ ನಿಳಯಂ ಜೀವಂ ದಲೆಂದಿಂತು ನೋ*
*ೞ್ಪೊಡಮನ್ಯೋನ್ಯವಿರುದ್ಧಮೆಂತು ತನುವಂ ನೀಂನಚ್ಚಿದೈ ಜೀವನೇ ೧೮೧*

ವ : ಮತ್ತಂ

*ಅಮರೇಂದ್ರೋನ್ನತಿ ಖೇಚರೇಂದ್ರವಿಭವಂ ಭೋಗೀಂದ್ರಭೋಗಂ ಮಹೇಂ*
*ದ್ರಮಹೈಶ್ವರ್ಯಮಿವೆಲ್ಲಮಧ್ರುವಮಿವಂ ಬೇೞ್ಪಂತು ಬೇಡೊಲ್ಲೆನು*
*ತ್ತಮದೀಕ್ಷಾವಿಧಿಯಂ ಸಮಾಧಿಮರಣಂ ಕರ್ಮಕ್ಷಯಂ ಬೋಧಿಲಾ*
*ಭಮಮೋಘಂ ದೊರೆಕೊಳ್ವುದಕ್ಕೆಮಗೆ ಮುಕ್ತಿಶ್ರೀವಧೂವಲ್ಲಭಾ ೧೮೨*
*(ಇದು ಮತಿ)*

ವ : ಮತ್ತೀ ಚಿತ್ತಸಂಕೋಚಮೆ ಲಜ್ಜೆ

**ಸೂತ್ರಂ ೧೧೪**

*ಛಲ ಭಂಗಮಕಾರ್ಯಕರಣ*
*ಮಲಂಪ್ಯರಂ ಮಿಗುವುದಾದಿಯೆ ವಿಭಾವಂ ತಾಂ*
*ಸಲೆ ಲಜ್ಜೆಗೆ ವೈವರ್ಣ್ಯಂ*
*ತಲೆಗುತ್ತಿಳಿವರೆವುದಾದಿ ನೆಗಟ್ದನುಭಾವಂ*

**ಲಕ್ಷ್ಯಂ**

*ನವವಧು ನಲ್ಲನಿತ್ತಧರನೀಲತೆಯಂ ಮುಕುರಾಂಗದಲ್ಲಿ ನೋ*
*ಡುವ ಪದದಲ್ಲಿ ನೋಡುತದನಾತನೆ ನಿಂದಿರೆ ಪಿಂತೆ ಬಂದು ಕಂ*
*ಡವನತಕಂಠಿ ಕಯ್ಪಿಡಿಯನೊಳ್ಪುಗುರಿಂ ಬೆರಟುತ್ತೆ ಬೆಳ್ಮೊಗಂ*
*ಸವನಿಸೆ ಕಾಲ್ಬೆರಲ್ ಬರೆಯೆ ಭೂಮಿಯನಿರ್ದಳದೊಂದು ಚೆಲ್ವಿನಿಂ೧೮೩*
*(ಇದು ಲಜ್ಜೆ)*

ವ : ಸಂಭ್ರಮಮೆ ಆವೇಗಂ

**ಸೂತ್ರಂ ೧೧೫**

*ವಾತಾಗ್ನಿ ವರ್ಷಗಜಮು*
*ತ್ಪಾತಂ ಪ್ರಿಯವಿಪ್ರಿಯ ಶ್ರವಣತಾವ್ಯಸನಂ*
*ಈ ತೆಱದೆ ವಿಭಾವಂ ವಿ*
*ಖ್ಯಾತಾವೇಗಕ್ಕೆ ಪೇಟ್ಟೆನನುಭಾವಮುಮಂ*

**ಸೂತ್ರಂ ೧೧೬**

*ಮುಸುಕು ಪೊಗೆ ಸುತ್ತು ಪೊದಕೆಗ*
*ಳಸದೃಶದೊಲವಿಕೆ ವಿಚಿತ್ರಪುಳಕವಿಲಾಸ*
*ಪ್ರಸರಂ ಸನ್ನಾಹಮುಮಿಂ*
*ತೆಸೆವಾವೇಗಕ್ಕೆ ತರದೆಯನುಭಾವಂಗಳ್*

**ಲಕ್ಷ್ಯಂ**

*ಕಾಟ್ಕಿಚ್ಚು ತಗುಟೆತನ್ನೊಳ್*
*ಕೋಟ್ಕುಟ್ಟಿ ವನದ್ವಿಪೇಂದ್ರಚಯವತಿಭಯದಿಂ*
*ನೀಟ್ಕರಿಸಿ ನಿಲ್ಲದಲ್ಲಿಯೆ*

*ನಾಟ್ಕಿಡೆ ಪೋಪಂತುಪೋದು ದಾನಗತಟದೊಳ್* *೧೮೪*
*(ಇದಗ್ನಿಯಿಂದಾದಾವೇಗಂ)*

*ಗುಡಿಗಟ್ಟುವ ಕಡೆಯಿಕ್ಕುವ*
*ಸೊಡರ್ವೆಳಗುವ ತೋರಣಂದಗುಳ್ಚುವ ಚಳೆಯಂ*
*ಗುಡುವ ಸಿರಿಗಂಪುವಡೆವಲ*
*ರ್ದೊಡರ್ಚುವಮರಿಯರ ಕೆಯ್ತುಮಚ್ಚರಿದಜೊಳ್* *೧೮೫*
*(ಇದು ಸ್ವಾಮ್ಯಾವೇಗಂ)*

*ಏಳಿದಗೆಯ್ಯಲಿನೆಮ್ಮೊ*
*ಳ್ಳಾಳನುಮೊಳ್ಗುದುರೆಯಂ ರಥಮುಮಂ ರಿಪುಹೃ*
*ದ್ವ್ಯಾಳಮುಮಂ ಸಮಕಟ್ಟೆಂ*
*ಕಾಳೆಗಕಂ ಪೋಗಿ ತಡೆದುಮಿರ್ಪೊಡಯುಕ್ತಂ* *೧೮೬*
*(ಇದು ವ್ಯಸನಾವೇಗಂ)*

ವ : ಇನ್ನುಟಿದುವನಿಂತಱಿವುದು. ಶಂಕಿಪುದೆ ಶಂಕೆ

**ಸೂತ್ರಂ ೧೧೬**

*ಪರದಾರಾದಿವಿರುದ್ಧಾ*
*ಚರಣಂ ಶಂಕೆಗೆ ವಿಭಾವಮೆಡಬಲನೋಟಂ*
*ಸ್ವರಮುಖವರ್ಣವಿಭೇದಂ*
*ವರಮುಖಕಂಠೌಷ್ಠಶೋಷಮಿವನುಭಾವಂ*

**ಲಕ್ಷ್ಯಂ**

*ಮೊಲೆವಿಣ್ಪಿಂ ಬಳ್ಕುತುಂ ಮೆಲ್ಲನೆ ಪದವಿಡುತುಮ ನೀಟ್ದಪಾಂಗಂಗಳಿಂದಿ*
*ರ್ಕೆಲನಂ ನೋಡುತ್ತುಮೆತ್ತಂ ಸುಟಿವ ನೆಟಲನಾರಯ್ವುತುಂ ದೂರದಿಂ ಕೇ*
*ಳ್ದುಲಿಪಂ ಕರ್ಣಾವತಂಸಕ್ಕೆಳಸುವಳಿಗಳಂ ಸೋವಿ ನಿಂದಾಲಿಸುತ್ತುಂ*
*ಚಲವೇಣೀಭಾರದಿಂದೋಸರಿಸುವ ಮುಸುಕಂ ಸಾರ್ಚುತುಂ ಪಾಣ್ಬೆ ಪೋದಳ್*
*(ಇದು ಶಂಕೆ)* *೧೮೭*

ವ : ಮ್ರಿಯಮಾಣತ್ವಮೆ ಮೃತಿ

ವಿಚಾರಂ : ಮರಣದ ಪೂರ್ವಾವಸ್ಥೆಯೇ ಮರಣಂ, ಮೇಲೆ ಅನುಭಾವಮಿಲ್ಲ.

**ಸೂತ್ರಂ ೧೧೮**

*ಉರಗಾದ್ಯಭಿಘಾತಂ ಮೇಣ್*
*ಜ್ವರಾದಿರೋಗಂ ಮೃತಿಗೆ ವಿಭಾವಂ ಪೂರ್ವ*
*ಕ್ಕುರುಹಿಕ್ಕಾ ಫೇನಂಗಳ್*
*ಶರೀರಕಂಪಂ ಕೃಶತ್ವಮಿಂತನುಭಾವಂ*

ವ : ಮತ್ತಂ ದಾಹಾಂಗಭಂಗಜಡತಾದಿಯುಮಕ್ಕುಂ ಇನ್ನಾ ವ್ಯಾಧಿಗೆ ಶ್ವಾಸಾಂಗಭಂಗಾಕ್ಷಿ ಮೀಳನಹಿಕ್ಕದಿಯನುಭಾವಂ

**ಲಕ್ಷ್ಯಂ**

*ನೊರೆ ಬಾಯಿಂ ಪೊಱಸೂಸೆಕುಂಬಱಿನ ಚಕ್ರಂಬೋಲ್ ಭರಂಗೆಯ್ದು ಕಣ್*
*ತಿರುಗುತ್ತೊಂದಿರೆ ಪೆತ್ತ ಜೀಕೋಳವಿವೋಲ್ ಮೂಗೊತ್ತೆ ರಕ್ತಾಂಬುವಂ*
*ಬರಿವೊಯ್ಲುರ್ವೆ ನಿಮಿರ್ಚೆ ಬಿಕ್ಕುಳಿಕೆ ಮೆಯ್ ಮುಯ್ವಾಗೆ ಕಂಪಕ್ಕೆ ದಲ್*
*ಕುರುರಾಯಂ ಗದೆವೊಯ್ಲುನಿಂದಿಳೆಗೆ ಬಿಟ್ಟಿಂ ಬೆಟ್ಟು ಬಿಟ್ಟಿಂದದಿಂ* ೧೮೭
*(ಇದು ಮರಣಂ)*

ವ : ಸಾಕ್ಷಾನ್ಮೃತಿಗೆ

*ಅರೆ ಮುಗಿದಿರ್ದ ಕಣ್ಮಲರ್ಗಳುಂ ನಿಮಿರ್ದೆತ್ತಿದ ಕೂನುಗಯ್ಯುಮಾ*
*ಸುರದರೆಗರ್ಚಿದೌಂಡುವೆರಸನ್ಯಭಟಾಳಿಶರಪ್ರಹಾರ ಜ*
*ರ್ಝರಿತ ಶರೀರನಾಗಿ ನವಲೋಹಿತವಾರ್ಧಿಯೊಳಟ್ಟೆ ಬಿಟ್ಟಿನಂ*
*ಕುರುಪತಿ ನೋಡಿ ಕಂಡನಭಿಮನ್ಯುಕುಮಾರನನಾಜಿರಂಗದೊಳ್* ೧೮೮
*(ಇಲ್ಲಿ ನಿರ್ವಿಕಾರಮನುಭಾವಶೂನ್ಯಂ)*

ವ : ಚಿತ್ತಂ ಚಲಿಪುದೆ ಚಾಪಲ್ಯಂ

**ಸೂತ್ರಂ ೧೧೯**

*ರಾಗ ದ್ವೇಷೇರ್ಷ್ಯಾದಿ ವಿ*
*ಭಾಗಂ ಚಪಲತೆಗೆ ನೆಱೆ ವಿಭಾವಂ ಬಿಱುವಾ*
*ತಾಗಳ್ ಬಯ್ವುದು ಝಂಪೋ*
*ದ್ಯೋಗಂ ಕಟ್ಟುವುದು ಮೊದಲಿವನುಭಾವಂಗಳ್*

**ಲಕ್ಷ್ಯಂ**

*ಮನದನ್ನಂ ಮುನಿಸಂ ಕಳಲ್ಚೆ ಬರುತಿರ್ಪೊಂದಂದಮಂ ಕಂಡು ಕಾ*
*ಮಿನಿ ಪೊನ್ನುಯ್ಯಲನಾಡುತುಂ ಕೆಳದಿಯಂ ನುಣ್ಪಿಂದೆ ಬಯ್ವುತ್ತೆ ಕೆ*
*ಮ್ಮನೆ ಸುಯ್ಗೆಯ್ದುವ ಭೃಂಗಮಂ ಪಿಡಿದ ಲೀಲಾಪದ್ಮದಿಂ ಪೊಯ್ವುತೋ*
*ಪನನೇಂ ನೋಡದವೋಲಿರುತ್ತೆ ಚಪಳತ್ವಸ್ವಾಂತಮಂ ತಾಳ್ದಿದಳ್ ೧೮೯*

ವ : ಮತ್ತಂ

*ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ*
*ರವ ಝುಂಕಾರಿತ ಚಾರು ವಾಮಚರಣಾಘಾತಂ ಚಲದ್ಭ್ರೂಲತಾ*
*ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧಾರಂ ಚಕ್ರಿಗಿ*
*ತ್ತುವಲಂಪಂ ಪ್ರಣಯಪ್ರಕೋಪಸುರತಪ್ರಾರಂಭದೊಳ್ ಕಾಂತೆಯಾ*
*(ಇದು ಚಪಲತೆ) ೧೯೦*

ವ : ಚೇತಃಪ್ರಸಾದಂ ಹರ್ಷಂ

**ಸೂತ್ರಂ ೧೨೦**

*ಭೋಗಾದಿ ಲಾಭ ಪತಿ ಬಂ*
*ಧ್ವಾಗಮಭರ್ತೃಪ್ರಸಾದಮಾದಿ ವಿಭಾವಂ*
*ಆಗಳ್ ಮುಖಪ್ರಸಾದಸು*
*ಯೋಗಂ ಪುಳಕಾದಿ ಹರ್ಷಕಾದನುಭಾವಂ*

**ಲಕ್ಷ್ಯಂ**

*ಕಡವಲರ್ದಂತ ಕಂಟಕಿತಮಾಗಿರೆ ಮೆಯ್ ಸರುಜಂ ರಸಾಯನಂ*
*ಬಡೆದವೊಲಾಗೆ ತಾಂ ಪೊದೆದ ಮೇಲುದಱಿಂ ಗುಡಿಯಂ ತೊಡರ್ಚಿದಾಂ*
*ಗುಡಿವಿಡೆ ಹರ್ಷಮೊಂದು ಪೊಱೆಯೇಱಿದನಿತ್ತ ಜಿತಂಜಯಂ ಮನ*
*ಕ್ಕೊಡರಿಸದಾರ್ಗೆ ರಾಗದೊದವಂ ಪಿರಿದುಮ ಪ್ರಿಯಬಂಧುಸಂಗಮಂ*
*(ಇದು ಹರ್ಷಂ) ೧೯೧*

ವ : ಸ್ವಾವಮಾನರೂಪಂ ನಿರ್ವೇದಂ

**ಸೂತ್ರಂ ೧೨೧**

*ರೋಗಂ ದರಿದ್ರ ಮಿತ್ರ ವಿ*
*ಯೋಗಂ ನಾನಾವಮಾನನಾದಿ ವಿಭಾವಂ*

*ಮೇಗಂ ನಿರ್ವೇದಂ ಕೇ*
*ಡಾಗಳ್ ಸುಯ್ ಘೋಷಮಿತಿವನುಭಾವಂಗಳ್*

**ಲಕ್ಷ್ಯಂ**

*ಜರೆ ಬಂದೊಟ್ಟೈಸೆ ಮಾಣ್ದಿರ್ದಳಿಪೆನಗಿದೆ ಮುಂ ಸಾಲದೇ ಕಾಲರಾಜಂ*
*ಬರೆಯುಂ ಮಾಣ್ದಿರ್ಪೆನೇ ನಿಶ್ಚೈಸಿ ತನುವ ನೀನೊಪ್ಪುಕೊಳ್ ಮುನ್ನಮಿನ್ನುಂ*
*ಕರಣೀಯಂ ನಿನ್ನ ವಾಕ್ಯಂ ನಿಜಮತಮೆ ಮತಂ ಮೆಚ್ಚಿದಂತೆನ್ನ ನೀಂ ಸಂ*
*ಸರಣಾಂಭೋರಾಶಿಯಿಂದಂ ಪೊಱಮಡಿಸೆನಗಂ ನೀನೆ ಹಸ್ತಾವಲಂಬಂ* ೧೯೨

ವ : ಮತ್ತಂ

*ಕಷ್ಟಂ ದುಃಖಾನಲ ಸಂ*
*ಪ್ಲುಷ್ಟಂ ಚೆಃ ಗತಿಚತುಷ್ಟಯಂ ಪ್ರಾಣಿಗೆ ಸಂ*
*ತುಷ್ಟತೆಯನೆಯ್ದೆ ಪಡೆಗುಮ*
*ಭೀಷ್ಟಪ್ರದಮೊಂದೆ ನೋಡೆ ಮುಕ್ತಿಸ್ಥಾನಂ* ೧೯೩

ವ : ಮತ್ತಂ

*ಪರಿಜನಪಳವತ್ಕ್ಷೇತ್ರೋ*
*ತ್ಕರಬಂಧುಜನಾಳಿ ಭವನಮಹಿಳಾವಳಿಯಿಂ*
*ಬುರುತರಪವರ್ಗಚಿಂತಾ*
*ಪರಿಣತನಪವರ್ಗಚಿಂತೆಯಂ ಮಾಡುಗುಮೇ* ೧೯೪
*(ಇದು ನಿರ್ವೇದಂ)*

ವ : *ಅನೌಜಸ್ಯಮೇ ದೈನ್ಯಂ*

***ಸೂತ್ರಂ ೧೨೨***

*ಆದಂ ಹೃತ್ತಪದೌರ್ಗ*
*ತ್ಯಾದಿಯೆ ದೈನ್ಯಕ್ಕೆ ವಿಭಾವಮಂತಾಮುಸುಕಿಂ*
*ಬಾದಮೃಜಾತ್ಯಾಗಂ ಮೆ*
*ಯ್ಗಾದುನ್ನತಭಾರದೈನ್ಯವಾಗನುಭಾವಂ*

ವ : ಇಲ್ಲಿ ಆದಿಶಬ್ದಮಿಲ್ಲೆಂದೆನಬೇಡ

**ಲಕ್ಷ್ಯಂ**

*ನಿನ್ನಯ ಕೂಟಮಂ ಬಯಸಿ ಪೆತ್ತವಳೆಂತುಮೊಡಂಬಡಳ್ ದಿಟಂ*
*ನಿನ್ನ ಮನಕ್ಕೆ ಮಾದುದದು ದೈವಕೃತಂ ದೊರೆಕೊಂಡುದಾದೊಡಂ*
*ಮನ್ನಿಪುದೆನ್ನ ಕಾರಣದಿನಿತ್ತಣ ಪಂಬಲನೀಕೆ ಮಾಡದಂ*
*ತಿನ್ನಡೆಯಿಪ್ಪುದೊಂದೆ ತೆಱನಪ್ಪುದಿದಂ ಸೆಱಗೊಡ್ಡಿ ಬೇಡಿದೆಂ* ೧೯೫
*(ಇದು ದೈನ್ಯಂ)*

ವ : ಸ್ಮರಣಮೆ ಸ್ಮೃತಿ

**ಸೂತ್ರಂ ೧೨೩**

*ವಿತತ ಸುಖ ದುಃಖ ಹೇತು*
*ಸ್ಮೃತಿ ಸದೃಶಾರ್ಥೇಕ್ಷಣಾದಿಯೆ ವಿಭಾವಂ ತಾಂ*
*ಸ್ಮೃತಿಗೆಸೆಗುಂ ತಲೆನಡುಕಂ*
*ಗತಿಶೂನ್ಯಾಲೋಕನಾದಿ ಮೆಱೆವನುಭಾವಂ*

**ಲಕ್ಷ್ಯಂ**

*ಮನಕಂ ಪಕ್ಕಲ್ಲದ ನೆಲೆ*
*ಗಿನಿಸಾನುಂ ಮೆಚ್ಚೆ ಕರ್ಣನಂ ನೋಡಿ ನರಂ*
*ನೆನೆದಂ ತನ್ನೊಳ್ತಾಗಿದ್ದ*
*ಪಿನಾಕಪಾಣಿಯ ಕಿರಾತತನು ಸೌಷ್ಠವಮಂ* ೧೯೬
*(ಇದು ಸ್ಮೃತಿ)*

ವ : ಚಿತ್ತಮೂಢತ್ವಂ ಮೋಹಂ

**ಸೂತ್ರಂ ೧೨೪**

*ಭಯ ಮತ್ಸರ ವೈರ ಪಿಶಾ*
*ಚಯೋಗಮುಖ್ಯಂ ವಿಭಾವಮಾ ಮೋಹಕ್ಕಾ*
*ರಯೆ ತನುಘೂರ್ಣನ ಸರ್ವೇಂ*
*ದ್ರಿಯಮೋಹಂ ಭ್ರಮಣಮಾದಿ ನೆಗೞ್ದನುಭಾವಂ*

**ಲಕ್ಷ್ಯಂ**

*ಉಸಿರೆಲರೊಯ್ಯನೊಯ್ಯನೊಳಸಾರ್ದಡಗುತ್ತಿರೆ ಲೋಚನದ್ವಯಂ*
*ನಸು ಮುಗುಳ್ದಶ್ರು ಪೊಣ್ಮದಿರೆ ಹಸ್ತಪದಂಗಳುಮಿರ್ದುವಿರ್ದವೋಲ್*

*ಮಿಸುಕದೆ ಪೋಗುಗೆಟ್ಟಿರೆ ತದಂತರದೊಳ್ ಬಿಡದಾ ಮನಂ ವಿಡಂ*
*ಬಿಸಿದುದು ಮರ್ಛೆಯಾರುಮನದಿರ್ಪುದು ಪುತ್ರವಿಯೋಗವಿಕ್ಲಬಂ ೧೯೭*

ವ : ಮತ್ತಂ

*ಉರಿಗಣ್ಣಿಂ ನನೆವಿಲ್ಲನಂ ತಿಸುಳಿ ಸುಟ್ಟಂದಾಗಳೆಯ್ತುಂದು ತತ್*
*ಸ್ಮರದೇಹಾಕೃತಿಯಿಂದೆ ಭಸ್ಮಮಿರೆ ಕಂಡಾಲಿಂಗಿಸಲ್ ಬೀಟಿ ಶೋ*
*ಕ ರಸಾವೇಶದೆ ಮೂರ್ಛೆವೆತ್ತು ರತಿ ತಾಂ ಪಂಚೇಂದ್ರಿಯೋನ್ಮೋಹದಿಂ*
*ದಿರೆ ಲೇಸಾದುದಿದೀಕೆಟ್ಟಿಱು ವಿಷಂ ತಾವೆಂದರಾ ಪ್ರೇಕ್ಷಕರ್ ೧೯೮*
*(ಇದು ಮೋಹಂ)*

ವ : ಸುಖಜನ್ಮದಿಂ ಮೋಹಮುಂಟು

*ನಲ್ಲರ ಕೂಟದೊಂದುಪರಿಯಂ ಪರಿಭಾವಿಸುತಿರ್ಪ ಕಾಂತೆಯರ್*
*ಬಲ್ಲಿದರಕ್ಕ ಬಂದು ಪತಿ ಸೋಂಕೆ ಮನಂ ಮರುಳಾಗಿ ಲೀಲೆಯಿಂ*
*ದೆಲ್ಲಿಗೆ ಪೋದೆನೇನನೊಸೆದಾಡಿದೆನೇನೆನುತಿರ್ದೆನೆಂಬುದಂ*
*ಬಲ್ಲೊಡೆ ಕಾಮನಾಣೆ ರತಿಯಾಣೆ ವಸಂತಕನಾಣೆ ಕೇಳ್ ಸಖೀ ೧೯೯*

ವ : ಮತ್ತಂ

*ತೆಱಪರಿದೋಪನಪ್ಪಿದೊಡೆ ಮೆಯ್ಮಱೆವಪ್ಪು ಸಡಿಲ್ದುದರ್ಕೆ ಮೆ*
*ಯ್ಮಱೆವಪೊದಟ್ಟಿ ಬಾಯುರಿಗೆ ಮೆಯ್ಮಱೆವಂತದು ಮೆಲ್ಲಿತಾಗೆ ಮೆ*
*ಯ್ಮಱೆವ ಜವಂಗೆಡಿಸಿ ಮೆಯ್ಮಱೆವಾಸನಪಲ್ಲಟಕ್ಕೆ ಮೆ*
*ಯ್ಮಱೆವೆಡೆ ಸಾವ ಪುಟ್ಟುವೆಡೆಯಾದುದವಳ್ಗೆ ರತಾತಿರೇಕದೊಳ್*
*(ಇದು ಮೋಹಂ) ೨೦೦*

ವ : ಪುರುಷಾರ್ಥದಲ್ಲಿಯನಾದರಮೆ ಆಲಸ್ಯಂ

**ಸೂತ್ರಂ ೧೨೫**

*ಶ್ರಮ ರೋಗ ಗರ್ವ ವಹನಾ*
*ದ್ಯುಮದಲ್ತೆ ವಿಭಾವಮಕ್ಕುಂ ಆಲಸ್ಯಕೆ ತಂ*
*ದ್ರಮಖಿಳಕರ್ಮದ್ವೇಷಾ*
*ಕ್ರಮನಿದ್ರಾಶಯನಮಿಂತಿವನುಭಾವಂಗಳ್*

**ಲಕ್ಷ್ಯಂ**

*ಮೊಲೆಗೆ ವಿಚಿತ್ರಪತ್ರಲತೆ ದುರ್ವಹಮೆಂಬ ವಿಲೋಚನಕ್ಕೆ ಕ*
*ಜ್ಜಲರುಚಿ ಭಾರಮೆಂಬ ತನುಲೇಖೆಗೆ ಚಂದನದಣ್ಪು ಬಿಣ್ಣಿತೆಂ*
*ಬಲಸಪದಕ್ಕಲಕ್ತಕರಸಂ ಪೊಜೆಯೆಂಬಿನಿತೊಂದು ಚಿತ್ತಮಂ*
*ಲಲಿತೆಗೆ ದೇವಕೀವನಿತೆಗಾದುದು ಕೃಷ್ಣನ ಗರ್ಭದೇಟ್ಗೆಯೊಳ್* ೧೦೦

ವ : ಮತ್ತಂ

*ಅಸಿತಪಯೋಧರಾನನಮುಪಾತ್ತ ವಿಜೃಂಭಣಮುನ್ಮುಖಂ ಸಮು*
*ಲ್ಲಸಿತ ಜಡತ್ವಮುಚ್ಚ್ವಸಿತ ಬಂಧುರಗಂಧಸಮೀರಣಂ ಮನ*
*ಕ್ಕೆಸೆದುದು ಕಾರುಮಂ ಪೊಸಬಸಂತಮುಮಂ ನೆಜೆ ಪೋಲ್ತುದೊಲ್ದು ಭಾ*
*ವಿಸೆ ಮದವನ್ಮರಾಳಮೃದುಯಾನೆಯ ನಿರ್ಭರಗರ್ಭವಿಭ್ರಮಂ* ೧೦೧
*(ಇಂತಾಲಸ್ಯಂ)*

ವ : ಪರರನವಜ್ಞೆ ಗೆಯ್ವುದೇ ಗರ್ವಂ

**ಸೂತ್ರಂ ೧೨೮**

*ಕುಲ ವಿಭವ ರೂಪ ಯವ್ವನ*
*ಬಲ ವಿದ್ಯಾಪ್ರಭೃತಿಗರ್ವಕೆ ವಿಭಾವಂ ಕಾ*
*ಯ್ದುಲಿಪು ಪರಿಹಾಸ ರೋಷಂ*
*ಸಲೆ ಲೋಚನಗಾತ್ರವಿಕೃತಿಯಿಂತನುಭಾವಂ*

**ಲಕ್ಷ್ಯಂ**

*ಇರದೆಂಟುಂ ದಿಗ್ಗಜಂಗಳ್ ನೆರೆದಿರದಿದಿರೊಳ್ ತಾಂಗೆಯುಂ ಮಂದರಕ್ಷ್ಮಾ*
*ಧರದೊಳ್ ಕಯ್ಗೂಡಿ ಬಂದದ್ರಿಗಳ್ ಗಜಘಟಾರೂಪದಿಂ ತಾಂಗೆಯುಂ ಮ*
*ತ್ಕರಿ ತಾಂಗಲ್ ತಾಂಗಿ ಸೋಲ್ಗುಂ ಪೆಱಪೆಱವು ಘಟಾಬಂಧ ಮೇ ಭಂಡಮೆಂಬೊಂ*
*ದು ರಣೋತ್ಸಾಹಂ ಮನಕ್ಕುಬ್ಬರಿಸಿರೆ ಸಮರಾಟೋಪಮಂ ತಾಳ್ದಿ ನಿಂದಂ* ೧೦೨
*(ಇದು ಗರ್ವಂ)*

ವ : ಮತ್ತಂ

*ಅವನೇ ನಾನುಂ ಸ್ಮರಂ ನೀಂ ಮುಳಿದನಿತುವರಂ ಬೇಟ್ಪುದೇ ದರ್ಪಕಂ ನ*
*ಚ್ಚುವ ಪುಷ್ಪಾಸ್ತ್ರಂಗಳಂ ಕಾಮನೆ ಪೊರೆದ ಪಿಕಾನೀಕಮಂ ಕಂತು ಕೊಂಡಾ*
*ಡುವ ಚಂಚಚ್ಚಂದ್ರನಂ ಮಾರ್ಮಲೆದು ಗೆಲಲಿವೇ ಸಾಲವೇ ದೇವಿ ಯೆನ್ನೀ*

*ಧವಳಾಪಾಂಗಂಗಳೆನ್ನೀ ಮೃದುಕಳರವಮೆನ್ನೀ ಲಸದ್ವಕ್ತ್ರಚಂದ್ರಂ* *೨೦೪*
*(ಗರ್ವಂ)*

ವ : ಮನಶ್ಶರೀರಖೇದಂ ಶ್ರಮಂ

**ಸೂತ್ರಂ ೧೨೭**

*ಸುರತಾದಿ ವ್ಯಾಪಾರಂ*
*ಪೊರೆದ ವಿಭಾವಂ ವಿಕೂಣಿತಾಸ್ಯಂ ಮೆಯ್ಯುಮ*
*ಕರದಿಂದೊತ್ತುವುದುಂ ಮೇಣ್*
*ದೊರೆಕೊಳ್ಗುಂ ತಚ್ಛ್ರಮಕ್ಕೆ ನೆಗಟ್ದನುಭಾವಂ*

**ಲಕ್ಷ್ಯಂ**

*ತಳೆದ ರತಶ್ರಮಂಗಳೆಯಲಿಂಗದಿರ್ದೊಂಗಲಮರ್ಚೆ ನಿಂದುತ*
*ಣ್ಗೊಳಗೆಲದೊಳ್ ಮಡಲ್ತತಳಿರುಯ್ಯಲನೊಯ್ಯನೆ ಬಂದು ಪತ್ತಿಕೋ*
*ಮಳತನುವಿತ್ತು ನುಣ್ದೊಡೆಗಳಂ ಬಗೆಯೊಳ್ ಪೊಸವೇಟದಟ್ತೆಯಿಂ*
*ಬಳಯಿಸುತೆನ್ನ ಕೈಯೊಳಿರದೊತ್ತಿಸಿಕೊಂಬಳನೆಂದು ಕಾಣ್ಬೆನೋ* *೨೦೫*

ವ : ಮತ್ತಂ

*ಪೊಡರ್ವುತ್ತುಂಗಸ್ತನಂ ಕೊಂಕಟೆದು ನಿಮಿರ್ದ ನೀಳಾಳಕಂ ಜೋಲ್ದಬಂಬ*
*ಲ್ಮುಡಿ ಸೊಪ್ಪಾಗಿರ್ದ ಬಿಂಬಾಧರಮಣಿ ನಸುಗಂದಿರ್ದ ಕರ್ಣೋತ್ಪಳಂ ಕೆಂ*
*ಪಡರ್ದಾಲೋಲೇಕ್ಷಣಂ ಕಂಪಿಸುವ ತನು ರತಶ್ರಾಂತಿಯಿಂದಂ ಬೆಡಂಗಂ*
*ಕುಡೆ ನೆಮ್ಮಿರ್ದೋಪನಂ ಮೆಯ್ವೆಮರನೆಲರೊಳೊಲ್ದಾರಿಸುತ್ತಿರ್ದಳೊರ್ವಳ್* *೨೦೬*
*(ಇವು ಶ್ರಮಂ)*

ವ : ಆನಂದ ಸಮ್ಮೋಹ ಯೋಗಂ ಮದಂ

**ಸೂತ್ರಂ ೧೨೮**

*ಮದಿರೋಪಯೋಗದಿಂ ಪೆಂ*
*ಪೊದವಿದ ಪಲವಂದಮದೆ ವಿಭಾವಂ ಮದಕು*
*ಣ್ಮಿದ ನಗೆ ಪಾಡು ತೊದಳ್ನುಡಿ*
*ಪದುಳಿಸಿ ನಡೆಯದುದು ಮೊದಲವನುಭಾವಂಗಳ್*

ವ : ಮತ್ತಮಲ್ಲಿ ಸ್ವಾಪಕಿಂಚಿದಾಕುಲಬಾಷ್ಪರೋಮೋದ್ಗಮಾದಿಯುತ್ತ ಮರ್ಗಕ್ಕುಂ, ಹಾಸ್ಯಗೀತ ಸ್ರಸ್ತಾಕುಲಭುಜಕ್ಷೇಪ ಕುಟಿಲಗತಿ ಬಂಧಾದಿ ಮಧ್ಯಮರ್ಗಕ್ಕುಂ, ಅಸ್ಮರಣ ಘೂರ್ಣನ ಸ್ಖಲದ್ಗತಿರುದಿತ ಛರ್ದಿತ ಹೀನಸ್ವರಾದಿಯ ಧಮರ್ಗನುಭಾವ ಮುತ್ತಮನ ಮದಂ ಮಧ್ಯಮಂಗಕ್ಕುಂ, ಮಧ್ಯಮನ ಮದಮಧಮಂಗಕ್ಕುಂ, ಅಧಮನ ಮದಂ ತನ್ನಲ್ಲಿಯೇ

**ಲಕ್ಷ್ಯಂ**

*ಮದದಿಂದುಣ್ಮಿದ ಪಾಟಳಸಿಚ್ಛವಿಯ ವಕ್ತ್ರಂ ಘೂರ್ಣಿತಾಕ್ಷಿದ್ವಯಂ*
*ಪದೆಪಂ ಬೀಱೆ ಲತಾಂಗಿ ತನ್ನೊ ಳೆ ತೊದಳ್ಮಾತಾಡುತುಂ ಪಾಡುತೊಂ*
*ದಿದತನ್ನೊಂದೆ ನೆಬಲ್ಗೆ ಬೆರ್ಚಿತೊಲಗೊತ್ತುಂ ಮುಗ್ಗುತುಂ ಬಯ್ದು ನೂಂ*
*ಕದಿರೆಂದಿಂಗದಿರ್ಗಂಡು ನಕ್ಕು ನಲಿದಳ್ ಕಾದಂಬರೀಗೋಷ್ಠಿಯೊಳ್ ೧೦೭*

ವ : ಮತ್ತಂ

*ಮದಿರಾಪಾನವಿಕಾರದೊ*
*ಳೊದವಿರೆ ಮೂಗ್ದೋಕ್ತಿ ಕಣ್ಗೆ ಬರೆ ಗಾಡಿ ಕದ*
*ಕ್ಕದಿಸೆ ಮೊಲೆ ನಡುಗೆ ನಡು ಮಿಳಿ*
*ರ್ದದಿರೆ ಕುರುಳ್ ಸುದತಿ ಜತಿಗೆ ಮೆಟ್ಟಿದಳೊರ್ವಳ್ ೧೦೮*
*(ಇವು ಮದಂ)*

ವ : ಅರ್ಥಾಪ್ರತಿಪತ್ತಿಯೇ ಜಾಡ್ಯಂ

**ಸೂತ್ರಂ ೧೨೯**

*ರೋಗಾದಿ ಹಿತಾಹಿತ ಸಂ*
*ಯೋಗಂ ಪ್ರೇಕ್ಷಾದಿ ಜಡತೆಗೆ ವಿಭಾವಂ ಚೆ*
*ಲ್ವಾಗವೆಯಿಕ್ಕದೆ ನೋಡುವು*
*ದೇಗಂ ನುಡಿಯಿಲ್ಲದಿರ್ಪುದಿಂತನುಭಾವಂ*

**ಲಕ್ಷ್ಯಂ**

*ಇನಿಯನ ಪಟ್ಟೆ ಸಾರ್ದಬಳೆ ಬೆರ್ಚದೆ ಮೆಲ್ಲುಲಿಯಾಲಿಸಾಲಿಸಾ*
*ತನುಮನಲಂಪಿನಿಂದೆಳಸಿ ನೋಡುವಳಿಚ್ಚೆಗೆ ಮೆಯ್ಯನೀವುದೆಂ*
*ದೆನೆಯೆನೆ ಕೇಳ್ದು ಕೇಳ್ದವನನೀಕ್ಷಿಸುತುಂ ಮಱೆದೆಲ್ಲವಂ ಬೞಿ*
*ಕ್ಕನಿಮಿಷದೃಷ್ಟಿವೆತ್ತಳಿರದೀ ತೆಱದೋದಿಪೆವೀಕುಮಾರಿಯಂ ೧೦೯*
*(ಇದು ಜಡತೆ)*

ವ : ಬಲಾಪಚಯಂ ಗ್ಲಾನಿ

**ಸೂತ್ರಂ ೧೩೦**

*ಗ್ಲಾನಿಗುದಧ್ವಲಂಘನಮನಃಪರಿತಾಪಜರೋಪವಾಸಮು*
*ತ್ಪಾನವಿನಿದ್ರೆ ರೋಗ ಸುರತಂ ಕ್ಷುಧೆ ಪೆತ್ತ ತಪಂ ತೃಷಾದಿ ಮಾ*
*ತೇನೊ ವಿಭಾವಮಂಗಶಿಥಿಲಂ ಕುಟಿಕಣ್ ನಡುಕಂ ಕಪೋಲವಾ*
*ಗ್ದೀನಗತಿಸ್ವಭಾವಮನುಭಾವಮಿವಲ್ತೆ ವಿವರ್ಣಕಾದಿಗಳ್*

ವ : ಅಲ್ಲಿ ತಪದಿನಾದ ಬಲಾಪಚಯಕ್ಕೆ

*ಬರಿಯೊಳ್ ಪತ್ತಿರ್ದ ಕಂಕಾಳಿಕೆ ಪೆಡತಲೆಯೊಳ್ ಪೊಕ್ಕ ಕಣ್ತೋರ್ಪಕೆಯ್ಕಾ*
*ಲ್ಸೆರೆ ಪಾತಾಳಕ್ಕೆ ಪೋತಂದೊಣವಸಿರುಡುಗಿರ್ದೊಂದುರಂ ಪೂಣ್ದ ಬಾಯ್ ಬೆ*
*ಕ್ಕರಿವೋಗಿರ್ದೊಂದು ಬಾನಂಗುಳಿ ಗಿಡಿಗಿಡಿಜಂತ್ರಬೊಲಾಗಿರ್ದ ಮೆಯ್ ನ*
*ಲ್ಸಿರಿ ಚಿದ್ರೂಪಕ್ಕೆ ಪಕ್ಕಾಗಿರೆ ಚರಿಗೆಗುಡಲ್ ಬಂದನೊರ್ವಂ ಮುನೀಂದ್ರಂ    ೨೧೦*
*(ಇದು ಗ್ಲಾನಿ)*

ವ : ನಿದ್ರಾಗಾಢಾವಸ್ಥೆಯೆ ಸುಪ್ತಿ

**ಸೂತ್ರಂ ೧೩೧**

*ಮಿಗೆ ತೀವ್ರದ ನಿದ್ರೆಯೆ ಸು*
*ಪ್ತಿಗೆ ನೆಗಳ್ದಿ ವಿಭಾವಮಕ್ಕುಮಖಿಳಸ್ವಪ್ನಂ*
*ನೆಗಳ್ದಂಗವಿಕಾರಂ ಕ*
*ಯ್ಮಿಗೆ ಕನವರಿಸುವುದು ಮೊದಲಿವನುಭಾವಂಗಳ್*

**ಲಕ್ಷ್ಯಂ**

*ಸುದತಿ ರತಾಂತಸೌಖ್ಯಮನಧೀಶನ ದೇಹದೊಳೊಂದಿಪೋಗಲೀ*
*ಯದೆ ಪಿಡಿದಂದದಿಂ ತೊಡೆಯ ತೋಳ ತೊಡರ್ಪುಗಳೊಪ್ಪೆ ನಾಡೆಯುಂ*
*ಪದೆದಮರ್ದಪ್ಪಿದಂತರಮದೊಪ್ಪಿರೆ ಬಂದು ಸುಷುಪ್ತಿಚಿತ್ತಮಂ*
*ಪುದಿಯೆ ಮಹೀಪನಿರ್ದನಿನಿಸಂ ನಿಜಯೋಗದೆ ಯೋಗಿಯಿರ್ಪವೋಲ್        ೨೧೧*

ವ : ಮತ್ತಂ

*ಇನಿಯನಗಲ್ದು ಬೇರ್ನೆಲೆಗೆ ಪೋದೊಡೆ ಪಂಬಲನಾಂತು ಚಿತ್ತದೊಳ್*
*ಕನಕಲತಾಂಗಿ ತನ್ನ ಶಯನಸ್ಥಳದೊಳ್ ಮುಸುಕಿಟ್ಟು ನಲ್ಲನಂ*

*ಕನಸಿನೊಳಪ್ಪಿಕೊಂಡಧರಸೇವನೆಗೊಪ್ಪಿಸಿ ಮುಂದುಗಾಣದಾ*
*ಮನೆಯೊಳಗಿರ್ಪನೆಂದು ಸೊಡರ್ವತ್ತಿಸಿ ನೋಡಿದಳೊಂದು ಜಾವಮಂ* *೨೧೨*
*(ಇವು ಸುಪ್ತಿ)*

ವ : ಮನಃಸಮ್ಮೀಳನಂ ನಿದ್ರೆ

**ಸೂತ್ರಂ ೧೩೨**

*ಕ್ಲಮಚಿಂತಾಲಸ್ಯಮದ*
*ಶ್ರಮಸ್ವಭಾವಾದಿನಿದ್ರೆಗೆ ವಿಭಾವಂ ಜೃಂ*
*ಭಮತಿಜಡಶ್ವಾಸಂ ದೃ*
*ಙ್ನ ಮೀಳನಂ ತೂಂಕಡಿಕೆಯಿವನುಭಾವಂಗಳ್*

**ಲಕ್ಷ್ಯಂ**

*ಬಳೆದನುರಾಗದೆನ್ನ ಮನಮೆತ್ತೆಳದತ್ತಿರದಿತ್ತು ಪುಷ್ಪಕೋ*
*ಮಳತನುವುಮ ಪೊದಟ್ಟ ಮನಮುಂ ಸುರತಾಬ್ಧಿಯನೀಸಿ ಪತ್ತೆ ಸಾ*
*ರ್ದಳಸಿರದೊಯ್ಯನೊಯ್ಯ ನರೆಮುಚ್ಚುವ ದೃಷ್ಟಿ ವಿಜೃಂಭಮೊಪ್ಪಿ ಕ*
*ಣ್ಗೊಳಿಸಿರೆ ತೋಳತಟ್ಟದೊಳೆ ತಳ್ತೊರಗಿರ್ದಳನೆಂದು ಕಾಣ್ಬೆನೋ೨೧೩*
*(ಇದು ನಿದ್ರೆ)*

ವ : ಸಂತೋಷಮೇ ಧೃತಿ

**ಸೂತ್ರಂ ೧೩೩**

*ನುತಬೋಧೆ ಬಹುಶ್ರುತವಾ*
*ಸುತಪಸ್ಸೇವಾಪ್ತಭಕ್ತಿ ಲಾಭಾದಿಗಳುಂ*
*ಧೃತಿಗೆ ವಿಭಾವಂ ಸುಖಮೊದ*
*ವೆ ತಳೆವುದಟಿವೋದನನೆನೆಯದಿರವನುಭಾವಂ*

**ಲಕ್ಷ್ಯಂ**

*ಸಿರಿವೆಣ್ಣಂ ದೂವದೊಟ್ಟಿಂಗೆಣೆಯೆನೆ ಬಗೆದಂ ಮತ್ತಮೀವಿಶ್ವವಿಶ್ವಂ*
*ಭರೆಯಂ ಮೃತ್ಪಿಂಡಮಾತ್ರಾಂತರಮೆನೆ ಬಗೆದಂ ಜೈನದೀಕ್ಷಾವ್ಯಪೇಕ್ಷಾ*
*ತುರನಾತ್ಮೀಯಾಂಗಮಂ ಕಲ್ಮರನೆನೆ ಬಗೆದಂ ಲಬ್ಧಲಬ್ಧಿಪ್ರವೇಶಂ*
*ಧರಣೀಶಂ ವರ್ಜಿತಾಶಂ ಪರಮಸುಖವಶಂ ಕಾವ್ಯಕರ್ಣಾವತಂಸಂ* *೨೧೪*

ವ : ಮತ್ತಂ

*ತಡೆಯದೆ ನಿನಗಪ್ಪುದನೀ*
*ಗಡೆ ಬಗೆ ಮೆಳ್ಪಡದಿರೆಂಬುದನಿಮಿತ್ತಂ ತಾಂ*
*ನುಡಿದಿರ್ ಮೂದಲಿಸಿದಿರಿಂ*
*ತಡೆವೆನೆ ಕಟ್ಟಿದುದೆ ಸುರಗಿ ಮೆಟ್ಟಿದುದೆ ಕಳಂ ೨೧೫*

*ಪಱಿದಾತ್ಮಪ್ರಿಯದಾರದಾರಕ ಸುಹೃತ್ ಸಂಬಂಧಬಂಧಂಗಳಂ*
*ಮುಱಿದುರ್ವೀವಲಯಾಧಿರಾಜ ಸುಖಸೇವಾರಂಭಣಸ್ತಂಭಮಂ*
*ಮೆಱೆದುದ್ಭೂತವಿರಕ್ತವೃತ್ತಿಮದಲೀಲಾವೇಗ ಸಂಯೋಗಮಂ*
*ಪೊಱಮಟ್ಟತ್ತು ತಪೋವನಕ್ಕೆ ತದಿಳಾಪಾಳೋದ್ಧುರಂ ಸಿಂಧುರಂ೨೧೬*
*(ಇವು ಧೃತಿ)*

ವ : ಈ ವಸ್ತುವೀ ತೆಱನೆಂದು ವಿಚಾರಿಪುದು ವಿತರ್ಕಂ
**ಸೂತ್ರಂ ೧೩೪**

*ಸಂದೇಹ ವಿಮರ್ಶ ಜ್ಞಾ*
*ನಂ ದಲ್ ಮುಖ್ಯಂ ವಿತರ್ಕಕಾದ ವಿಭಾವಂ*
*ಸಂದ ಶಿರಃಕಂಪಂ ತಱ*
*ಸಂದುಱೆ ಕುಡುವುರ್ವು ಜರ್ವಿವನುಭಾವಂಗಳ್*

ವ : ಮತ್ತಂ ಕಾರ್ಯಸಾಧನ ಸಮೂಹಮಂ ಮರಳಿ ಮರಳಿ ಗ್ರಹಿಸುವುದುಂ ಬಿಡುವುದುಂ ಅನುಭಾವಂ

**ಲಕ್ಷ್ಯಂ**

*ಧನುವುಂ ಕರ್ಬಿನ ಬಿಲ್ ಗಡಂ ಗೊಲೆಯುಮುಂ ನೀರೇಜಸೂತ್ರಂ ಗಡಂ*
*ನನೆಗಳ್ ಬಾಣಚಯಂ ಗಡಂ ತಾಂ ಮತ್ತಂ ಮನಂಗೊಂಡು ಕಾ*
*ಯ್ದನುವಿಂದಾರ್ದಿಸುತಿರ್ಪ ನುರ್ಚಿದೆಡೆಯೊಳ್ ಪುಣ್ಣೆತ್ತರಿಂ ತೀವಿತಿ*
*ಲ್ಲೆನಸುಂ ಮನ್ಮಥಶಸ್ತ್ರವಿದ್ಯೆಯಿದು ದಲ್ ಬೇಱೊಂದು ಶಿಕ್ಷಾಕ್ರಮಂ ೨೧೭*

ವ : ಮತ್ತಂ

*ಅವತಂಸಂ ಮೋಕ್ಷಲಕ್ಷ್ಮೀಯುವತಿಯನೊಲಿಸಲ್ ಸಾಲ್ವುದೇ ದಿವ್ಯಭಾಷಾ*
*ರ್ಣವಗರ್ಭಾವಾಸದೊಳ್ ಪುಟ್ಟಿದುವೆ ಭವವಿಷಾವೇಶವಿಧ್ವಂಸನಂಗೆ*
*ಯ್ದುವಿಮೋಹಧ್ವಾಂತಮಂ ತೂಳ್ದಿದುವೆ ಬಗೆವೊಡೆಂ ಬಾಱ್ತೆ ಪಾಷಾಣರೂಪಂ*
*ನವರತ್ನಂ ಮನ್ಮನೋಮುದ್ರಿಕೆಯೊಳವಿಚಲಂ ನಿಲ್ಕೆ ರತ್ನತ್ರಯಂಗಳ್ ೨೧೮*

ವ : ಅಂತುಮಲ್ಲದೆಯುಂ

*ಭೋಗಿಪೆನೆನ್ನ ಜವ್ವನಮನೀ ಧನಮಂ ತವೆ ನನ್ನಿಯಿಂ ಕುಚಾ*
*ಭೋಗಭರಾನತಾಂಗಿಯರೊಳನ್ನೆಗಮತ್ತಜನಂ ತಗುಳ್ವೆನೆಂ*
*ದಾಗಿಯುಮೆಂತು ನಿನ್ನ ಮೊಲಗಟ್ಟಿಲೆಗಾಂ ಬೆಱಗಾದೆನೆಂದು ಪೇ*
*ೞೇಗಳೊ ಬೈಗೆಯೋ ಪೊಗಸೊ ನಾಳೆಯೊ ನಾಡಿದೊ ನಿನ್ನ ಜೀವಿತಂ* ೧೧೯
*(ಇವು ವಿತರ್ಕಂ)*

ವ : ಚಿತ್ತವಿಪ್ಲವಮೆ ಉನ್ಮಾದಂ

**ಸೂತ್ರಂ ೧೩೫**

*ಧನ ರಮಣ ವಿಯೋಗ ಗ್ರಹ*
*ಘನರುತಿಮುಖ್ಯಂ ವಿಭಾವಮುನ್ಮಾದಕ್ಕೆ*
*ನ್ನನಿಮಿತ್ತಸ್ಮಿತರುದಿತಾ*
*ತ್ತನೃತ್ಯಗೀತೋತ್ಕಟಾದಿ ನೆಗಟ್ದನುಭಾವಂ*

ವ : ಮತ್ತಂ ಬೀೞ್ವುದೇೞ್ವುದು ಕುಳ್ಳಿರ್ಪುದು ಬಾಯ್ಗೆ ಬಂದುದನೆಂಬುದು ಪಾಯ್ವುದುಘೇ ಯೆಂಬುದು ಬೂದಿಯಿಂದೊಕ್ಕಮಾಲೆಯಿಂ ಬೀದಿಗಪ್ಪಡದಿಂ ಘಟಕಂಠದಿಂ ಸಿಂಗರಿಸಿ ಕೊಂಬುದುಮಕ್ಕುಂ. ಈ ಪೇೞ್ದನುಭಾವವಿಭಾವಂಗ ಳೊಂದೆರಡೊಡಂಬಡುವಂತೆ ವರ್ಣಿಪುದಲ್ಲದೆಲ್ಲಮಿರವೇೞ್ಕುಮೆಂಬುದಿಲ್ಲಂ

**ಲಕ್ಷ್ಯಂ**

*ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯನಿಶ್ವಾಸೆಯಂ*
*ತಳಿರೇ ತಾವರೆಯೇ ಮದಾಳಿಕುಳಮೇ ಕನ್ನೈದಿಲೇ ಮತ್ತಕೋ*
*ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗಕುಂ*
*ತಳೆಯಂ ಕೈರವನೇತ್ರೆಯಂ ಪಿಕ ರವ ಪ್ರಖ್ಯಾತೆಯಂ ಸೀತೆಯಂ* ೧೨೦
*(ಇದು ಉನ್ಮಾದಂ)*

ವ : ವಿನಿದ್ರೆಯೇ ಬೋಧೆ

**ಸೂತ್ರಂ ೧೩೬**

*ಕನಸು ಕನವರಿಕೆ ಪಸಿವುರೆ*
*ದನಿ ಸೋಂಕುಗಳಾದಿಬೋಧೆಗೆ ವಿಭಾವಂ ದಲ್*

*ತನುಕಂಠವಲನ ದೃಙ್ಮ*
*ರ್ದನ ಜೃಂಭಣಮುಕ್ತ ಶಯನಮಿಂತನುಭಾವಂ*

**ಲಕ್ಷ್ಯಂ**

*ತೆರೆವೊಯ್ಲಿಂದಾದ ತುಂತುರ್ವನಿ ನಿಜತನುವಂ ತೀವೆ ನಿದ್ರಾಂಗನಾನಿ*
*ರ್ಭರಸಂಭೋಗಾಂತ್ಯದೊಳ್ ಪೊಣ್ಮಿದ ಬೆಮರ್ವನಿಯಂ ಪೋಲೆ ವಾರಾಶಿಧೀರ*
*ಸ್ವರಮಂ ತಳ್ಪೊಯ್ವಜೇಂದ್ರಾದ್ಯಮರಜಯಜಯಧ್ವಾನ ದಿಂದಾಗಳೆಚ್ಚೊ*
*ದರದಿಂ ಕುಳ್ಳಿರ್ದನಾಲೋಕನಕೃತವಿಬುಧಾನಂದಕಂದಂ ಮುಕುಂದಂ ೨೨೧*

ವ : ಮತ್ತಂ

*ಗೃಹದೀರ್ಘಿಕೆಯಿಂದೆಟ್ಟಿ*
*ತ್ತು ಹಂಸರುತಿ ಮಧುರ ಮಧುಕರೀ ಝಂಕಾರಂ*
*ಬಹು ವಿಧ ಗೀತ ರಸಾಮೃತ*
*ಲಹರಿಗಳಿತ್ತುವು ಸುಖಪ್ರಬೋಧಮನಾಗಳ್ ೨೨೨*
*(ಇವು ಬೋಧೆ)*

ವ : ಮನಸ್ತಾಪಮೇ ಆಮಯಂ

**ಸೂತ್ರಂ ೧೩೭**

*ವಿರಹಾಭಿಲಾಷೆ ದೋಷಾ*
*ತಿರೇಕಮುಖ್ಯಂ ವಿಭಾವಮಾಮಯಕಕ್ಕುಂ*
*ಉರಿವ ತನು ವದನ ಶೋಷಣ*
*ಶರೀರ ವೀಕ್ಷೇಪಕಾದಿ ನೆಗಟ್ದನುಭಾವಂ*

**ಲಕ್ಷ್ಯಂ**

*ಆಳುರ್ದಲರಂಬುಗಿಚ್ಚು ನಿಜಕೋಮಳದೇಹಮನೆಯ್ದೆ ಪರ್ವೆ ತ*
*ಣ್ಗೊಳದ ಮೃಣಾಳಮಂ ತೆಗೆದು ಬೆಂಗದಿರ್ಗಿತ್ತವೊಲಾಗೆ ನೊಂದು ಬೆಂ*
*ದಳದಳಿಪಾಲಿ ನೀರ್ಕುದಿಯೆ ಚಂದನದಣ್ಕೆಯೆ ಬೆಂಕೆಯಾಗೆ ತಾಂ*
*ತಳಿರಲರ್ವಾಸಿನೊಳ್ ಪೊರಳುತಿರ್ದಳದೊರ್ವನ ಬೇಟದೇಳ್ಗೆಯಿಂ೨೨೩*
*(ಇದಾಮಯಂ)*

ವ : ಚಿತ್ತಚಮತ್ಕಾರಮೆ ಭಯಂ. ಅದು ತ್ರಾಸ ಭೇದಂ

**ಸೂತ್ರಂ ೧೩೮**

*ವ್ಯಾಳ ಮೃಗ ರಾಕ್ಷಸಾಶನಿ*
*ಶೈಳಾವನಿಕಂಪಮಾದಿಯೆ ಭಯಕ್ಕೆ ವಿಭಾ*
*ವಾಳಿಯೆ ಪುಳಕೋತ್ಕಂಪ ವಿ*
*ಶಾಳಸ್ತಂಭಪ್ರಮೂರ್ಛೆಯಿಂತನುಭಾವಂ*

**ಲಕ್ಷ್ಯಂ**

*ಕಿಡಿಯಂ ಕಣ್ಗಲೆ ಸೂಸೆ ದಾಡೆ ಕುಡಿಮಿಂಚಂ ಬೀಱೆ ಧೀರಸ್ವರಂ*
*ಸಿಡಿಲಂ ಮೇಳಿಸೆ ಬಂದು ಸಿಂಗಮಿಭಕುಂಭಂಬೊಯ್ದುದಂ ಕಾಣುತುಂ*
*ನಡುಕಂ ಕಯ್ಮಿಗೆ ಬೀಯದಂ ಭರದೆ ನೋಡುತ್ತೊಂದು ಪಾೞ್ಬಾವಿಯೊಳ್*
*ಕೆಡೆದಾಗಳ್ ಮರವಟ್ಟು ಮೂರ್ಛೆವಡೆದಿರ್ದಂ ಭೀತಿಯೇಗೆಯ್ಯದೋ* ೨೨೪
*(ಇದು ಭಯಂ)*

ವ : ಮನಃಪೀಡೆಯೇ ವಿಷಾದಂ

**ಸೂತ್ರಂ ೧೩೯**

*ತನ್ನೆಸೆವ ಕಾರ್ಯಭಂಗಂ*
*ತನ್ನಾಶಂ ತಾಂ ವಿಷಾದಕೆ ವಿಭಾವಂ ಸಂ*
*ಪನ್ನ ಸಹಾಯಾನ್ವೇಷಣ*
*ವಿನ್ನೊಪ್ಪುವುಪಾಯಚಿಂತೆಯಿಂತನುಭಾವಂ*

ವ : ಮತ್ತಂ ವಿಘೂರ್ಣನಸಂಭ್ರಮಾದಿಯುಮಕ್ಕುಂ. ಉತ್ತಮ ಮಧ್ಯ ಮರ್ಗ್ಗದಂ ಪೇೞ್ವುದು. ಮುಖಜಿಹ್ವಾಶೋಷಣಾಶ್ರು ವಿಕೃತ ಸ್ವನ ನಿದ್ರಾನಾಶಶ್ವಸಿತ ಧ್ಯಾನಾದ್ಯನುಭಾವದಿಂದ ಮಧಮರ್ಗ್ಗೆ ವರ್ಣಿಪುದು

**ಲಕ್ಷ್ಯಂ**

*ಇಂಬೞಿದೆನ್ನನೊಯ್ದು ನೆರಪಲ್ ಸಖಿಯಿಲ್ಲಭಿಮಾನಮೆಂಬ ರೋ*
*ಗಂ ಬಲವಂತಮಾದಪುದು ನಲ್ಲನೆ ಕಟ್ಟಭಿಮಾನಿ ನಾಣ ಕಾ*
*ಪುಂ ಬಿಡದೀಗಳೀಗಳಿನ ಜವ್ವನಮುಂ ಬೞಿಕಿಲ್ಲ ಕಾಲನಂ*
*ನಂಬಲೆಬಾರದೆಂದಬಲೆ ಚಿಂತಿಸಿ ದೂಱಿಸಿ ತಾಂ ಪಲುಂಬಿದಳ್* ೨೨೫
*(ಇದು ವಿಷಾದಂ)*

ವ : ಕಾಲಾಕ್ಷಮತ್ವಮೆ ಔತ್ಸುಕ್ಯಂ

**ಸೂತ್ರಂ ೧೪೦**

*ಕನದಿಷ್ಟಸ್ಮರಣವಿಲೋ*
*ಕನಾದಿಯೆ ವಿಭಾವಮುತ್ಸುಕಕೆ ರಣರಣಕಂ*
*ಜನಿತಶ್ವಸಿತೋಚ್ಛ್ವಸಿತಂ*
*ಮನದ ಬಯಲ್ದೆಸೆಯ ನೋಟಮಿಂತನುಭಾವಂ*

**ಲಕ್ಷ್ಯಂ**

*ಇವಳವಲೋಕನಾಕುಳಿತೆ ಮೆಯ್ಯುಱಿಯಳ್ ಪರಿವಾಗಳಿಂತೆ ಬ*
*ಳ್ಕುವ ನಡು ಮಧ್ಯರಕ್ಕುಡಿಗುಮೆಂದು ಘನಸ್ತನಯುಗ್ಮಮಂಜಿದಂ*
*ತೆವೊಲೆನಸುಂ ಕದಕ್ಕದಿಸೆ ಸೋರ್ಮುಡಿಯುಂ ಭರಭೀತಿಯಿಂದೆ ಸೂ*
*ಸುವ ತೆಱದಿಂದೆ ಮಾಲೆಯನುಗುತ್ತಿರೆ ಬಂದಳದೊಂದು ಲೀಲೆಯಿಂ೨೨೬*

ವ : ಮತ್ತಂ

*ನೋಡುವಲಂಪಿನಿಂ ನೆಱೆಯೆ ಕಯ್ಗೆಯಲುಂ ಮಱೆದೊಂದೆ ಕಣ್ಣನು*
*ಣ್ಗಾಡಿಗೆಯೊಂದೆ ಕರ್ಣದ ಕನನ್ಮಣಿಕುಂಡಲಮೊಂದೆ ಕೆಯ್ಯ ಪೊಂ*
*ಜೂಡಗಮೊಂದೆ ಕಾಲ ಮಿಸುಪಂದುಗೆಯೊಪ್ಪಿರೆ ಬಂದೊಡಂದು ಜೋ*
*ಡಾಡಿದುದರ್ಧನಾರಿಯಿವಳೆಂದು ಸಖೀಜನಮೆಯ್ದೆ ನಾರಿಯಂ ೨೨೭*
*(ಇವು ಔತ್ಸುಕ್ಯಂ)*

ವ : ಪ್ರತಿಚಿಕೀರ್ಷೆಯೇ ಅಮರ್ಷಂ

**ಸೂತ್ರಂ ೧೪೧**

*ಕುಲವಿದ್ಯೈಶ್ವರ್ಯಾದಿಯಿ*
*ನೊಲಿದಾಕ್ಷೇಪಾದಿಯಾಯಮರ್ಷ ವಿಭಾವಂ*
*ವಿಲಸದುಪಾಯಾನ್ವೇಷಣ*
*ಮೊಲೆವ ಶಿರಂ ಧ್ಯಾನಗರ್ವಮಿಂತನುಭಾವಂ*

**ಲಕ್ಷ್ಯಂ**

*ಉಱದೆನ್ನಂ ಮಾಯೆಯಿಂ ಬಂಚಿಸಿ ಮಹಿಜೆಯನೆಂತೊಯ್ದನೊಯ್ದಂದದಿಂ ಪೊ*
*ಚ್ಚಱದಿನ್ನುಂ ತೋರ್ಕೆಸಂಗ್ರಾಮದೊಳೆಡೆಗಾಡಿದಾ ತೋಳ್ಗಳಿರ್ಪತ್ತುಮಂ ಕಣ್*

*ಪೊಱಪಾಯ್ತುರ್ವನ್ನೆಗಂ ಪಂದಲೆಗಳನೆರ್ದೆಯಂ ಮೆಟ್ಟಿ ಜೀರೇಟ್ಟಿನಂ ಬೇ*
*ರ್ವಱಿವನ್ನಂ ಕಿಟ್ಟುಕಿಟ್ಟಿಪ್ಪಳಿಸಿ ನೆಲದೊಳೋರೊರ್ಮೆ ಮಾಱುದ್ದಿ ತೋರ್ಪಂ ೧೧೮*

*ಏನೇನೊ ಮದನುಜರುಮೆನ*
*ಗಾನತರುಣಮಾಗದಿರ್ದರುನ್ಮದಮವರ್ಗಂ*
*ತೇನೇತಜೊಳಾಯ್ತುದನಿನಿ*
*ಸಾನುಂ ಬೇಗದೊಳೆ ಕಳೆದು ತೋಱೆನೆ ರಣದೊಳ್ ೧೧೯*
*(ಇವಾಮರ್ಷಂ)*

ವ : ಧ್ಯಾನಮೆ ಚಿಂತೆ

ವಿಚಾರಂ : ಇದು ಸ್ಮೃತಿಯಿಂ ವ್ಯತಿರಿಕ್ತಮನುಭೂತವಸ್ತುಸ್ಮರಣಮೇ ಸ್ಮೃತಿಯದಂ ಬಿಡದೆ ಧ್ಯಾನಿಪುದು ಚಿಂತೆ. ಮತ್ತಂ ವಿತರ್ಕದಿಂದ ಚಿಂತೆ ಬೇಱೆ. ಚಿಂತೆಯಿಂ ಬಟಿಕಾದೊಡ ಮೊರ್ಮೆ ವಿತರ್ಕಮಪ್ಪುದು. ವಿತರ್ಕದಿಂ ಬಟಿಕ್ಕಾದೊಡಮೊರ್ಮೆ ಚಿಂತೆಯಪ್ಪುದು.

**ಸೂತ್ರಂ ೧೪೨**

*ದಾರಿದ್ರ್ಯ ಮಿಷ್ಟವಸ್ತ್ವ ಜ*
*ಹಾರಾದಿ ವಿಭಾವಮಲ್ತೆ ತಾಪಂ ಕಾರ್ಶ್ಯಂ*
*ಭೂರಿಕರಶೋಷಮುಖಶೂ*
*ನ್ಯೋರು ಮನಃಪ್ರಭೃತಿ ಚಿಂತೆಗಾದನುಭಾವಂ*

**ಲಕ್ಷ್ಯಂ**

*ದೂರಿಸಿ ಸುಯ್ದು ಹಸ್ತತಳಮಂ ಕದಪಿಂಗಿರದೊಯ್ದು ಧಾತ್ರನಂ*
*ಬೇರದೆ ಬಯ್ದು ಕಣ್ಬನಿಯಿನಂಶುಕಮಂ ನೆರೆ ತೊಯ್ದು ತೊಯ್ದದಂ*
*ಸೈರಿಸಳೆಂದು ಕಾಯ್ದು ನೆಱಗೊಂಡಿರೆ ಪೂಗಣೆಯಯ್ದುಮೊರ್ವನಿ*
*ನ್ನಾರಿದನಿಂಬುಕೆಯ್ದು ಕುಡುವನ್ನರೆನುತ್ತೆನಸುಂ ಪಲುಂಬಿದಳ್ ೧೨೦*

ವ : ಮತ್ತಂ

*ಎರೆವ ಮರಲ್ವ ಲಲ್ಲಯಿಪ ಕಾಲ್ವಿಡಿಯೆಂಬುದನಿಂಬುಕೆಯ್ವುಲಂ*
*ಕರಣವಿಳಾಸಮಂ ಮೆಱೆವ ಮೇಳಿಸುವಂದಿನ ರೂಪು ಶಾಸನಂ*
*ಬರೆದುದು ಬರ್ಚಿಸಿತ್ತಮರ್ದುದುಟ್ಟು ದಳುಂಕಿದುದುರ್ಚಿ ಸೊಂಕು ಬೇ*
*ರ್ವರಿದುದು ಬೆಚ್ಚುದಚ್ಚಿಱಿದುದೆನ್ನೆರ್ದೆಯೊಳ್ ಲಲಿತಾಂಗದೇವನಾ ೨೨೧*
*(ಇವು ಚಿಂತೆ)*

ವ : ಅಕ್ಷಮೆಯೇ ಅಸೂಯೆ

**ಸೂತ್ರಂ ೧೪೩**

*ಪರ ಸಕಲೈಶ್ವರ್ಯ ಸ್ತೋ*
*ತ್ರ ರವಮಸೂಯೆಗೆ ವಿಭಾವಮನುಭಾವಂ ತ*
*ತ್ಪರನಿಂದಾ ಭ್ರುಕುಟಿಮುಖಂ*
*ಪಿರಿದೀರ್ಷ್ಯಾಳೋಕನೋಕ್ತಿ ದೋಷಾದಿ ವಲಂ*

**ಲಕ್ಷ್ಯಂ**

*ನಡೆದುದಿಳೇಶನೊಳ್ ತೊಡಱದನ್ನೆಗಮಾತನ ಗಂಡಗರ್ವಮಿ*
*ನ್ನಡೆಗುಮೆ ರಾಮನಂಬು ಪೆಱನಂ ನಡೆ ಕಾಲ್ನಡೆಗೆಟ್ಟು ನಿಲ್ಕುಮೀ*
*ನುಡಿ ತಡಮಲ್ತು ನಾಳೆಯೆ ರಣಾಂಗಣದೊಳ್ ನಡೆ ನೋಡು ನೀಂ ಮರು*
*ಳ್ವಡೆಯೊಡಗೂಡಿ ತಾಂಡವಮನಾಡುವ ರಾವಣನಟ್ಟೆಯಾಟಮಂ೨೨೨*

ವ : ಮತ್ತಂ

*ದನುಜರನಾ ಮುರಾರಿ ಗೆಲೆ ಕಾದುವ ಕಾಲದೊಳಾನದೇಕೆ ಪು*
*ಟ್ಟೆನೊ ಗಡಮಂದು ಪುಟ್ಟಿದೊಡೆ ದೈತ್ಯಕುಲಕ್ಕೆ ಕಳಂಕಮಾಗಲೀ*
*ವೆನೆ ದನುಜಾರಿಯೆಂಬ ಪೆಸರಂ ಸಲಲೀವೆನೆ ಕಾದಿ ಪೋಗಲೀ*
*ವೆನೆ ತಲದೋಱಲೀವೆನೆ ಮುಕುಂದನನೆಂದುರಿದಂ ಪರಾಂತಕಂ ೨೨೩*

ವ : ಮತ್ತಂ

*ಕಾಬ್ಬುರಮಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ*
*ಮಾಬ್ಬಿನೆಗಂ ಜಲಕ್ಕನಿರೆ ಪೇಱದೆ ಕೆಮ್ಮನೊಱಂಟುವೇಬ್ಬು ಚೀ*
*ನೋಬ್ಬುದೆ ಮುಯ್ಯುನಾಕೃತಿಗೆ ಪಂಚಿಕೆವೇಬ್ಬುದದರ್ಕೆ ಟಿಪ್ಪಣಂ*
*ಬೇಬ್ಬುದು ಟೀಕೆವೇಬ್ಬುದೆನೆ ಪೇಬ್ಬವನುಂ ಕವಿಯೆಂಬ ಲೆಕ್ಕಮೇ ೨೨೪*
*(ಇವು ಅಸೂಯೆ)*

ವ : ಆಕಾರಗುಪ್ತಿಯೇ ಅವಹಿತ್ಥಂ

**ಸೂತ್ರಂ ೧೪೪**

*ಅವಹಿತ್ಥಂ ಭಯರಾಗಾ*
*ದಿ ವಿಭಾವದೆ ಮಱೆಸುವುದೆ ವಲಂ ಮತ್ತಿನ ಮಾ*

*ತು ವಿಳೋಕನಮಿಲ್ಲದ ಧೈ*
*ರ್ಯವೆಯುೞೆಯನುಭಾವಮಿಂತಿದರ್ಕನುಮತದಿಂ*

**ಲಕ್ಷ್ಯಂ**

*ಮಸೆದಟ್ಟಿಂ ಪ್ರಿಯಾನನಮನೀಕ್ಷಿಸಲುದ್ಯತೆಯಾಗಿ ತಾನೆ ಲ*
*ಜ್ಜಿಸಿ ತಲೆವಾಗಿ ಕಂಡುದ ಮಣಿಕುಟ್ಟಿಮದೊಳ್ ನೆಱೆನೋಡಿದ ಮತ್ತೆ ಮಾ*
*ನಸದೊಳಗಿಟ್ಟೊಡಂ ನವಸುಖಾನುಭವಕ್ಕರೆಮುಚ್ಚೆ ಕಣ್ಗಳಂ*
*ಪಸರಿಪ ಹೋಮಧೂಮಲತೆಗಂದು ಶಶಿಪ್ರಭೆ ದೂಱನೇಱಿಪಳ್ ೨೩೫*
*(ಇದು ಅವಹಿತ್ಥಂ)*

ವ : ಚಂಡತ್ವಮೆ ಉಗ್ರಂ

**ಸೂತ್ರಂ ೧೪೫**

*ಖಲಚೌರ್ಯದ್ರೋಹಾಸ*
*ತ್ಪ್ರಲಾಪಮುಖ್ಯಂ ವಿಭಾವಮುಗ್ರಕ್ಕೆ ವಲಂ*
*ಕೊಲೆ ಬಂಧನ ತಾಡನಮಿವು*
*ಸಲೆ ನಿರ್ಭರ್ತ್ಸನಮಿವಾದಿ ತತ್ತ್ವನುಭಾವಂ*

**ಲಕ್ಷ್ಯಂ**

*ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡ ಜೂದಿಂ*
*ಗಿದು ಪಾಂಚಾಳೀಪ್ರಪಂಚಕ್ಕಿದು ಕುಹಕಸಭಾಳೋಕನಭ್ರಾಂತಿಗೆಂದೋ*
*ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕೆನ್ನೆಯಂ ನೆತ್ತಿಯಂ ಮಾ*
*ಱದಿವ್ಯೆದುಂ ದುರ್ನಯಕ್ಕೆಯ್ದೆಡೆಯನುರು ಗದಾ ದಂಡದಿಂ ಭೀಮಸೇನಂ ೨೩೬*

ವ : ಮತ್ತಂ

*ಸಂದುಗ್ರಾಹಿತರಕ್ತದಿಂದೆ ಕೆಸರಾದತ್ತೀ ಧರಾಚಕ್ರವಿ*
*ನ್ನೆಂದಿಂಗಾಱುವುದೊಟ್ಟಿದಟ್ಟೆಗಳ ಪರ್ಬೆಟ್ಟಂಗಳಿಂಬಟ್ಟೆಯಿ*
*ನ್ನೆಂದಿಂಗಪ್ಪುದೊ ಮಾರಿಗಂ ಪಸಿವದಿನ್ನೆಂದಪ್ಪುದೆಂಬಂದದಿಂ*
*ಕೊಂದಂ ಸೇವಣಸೈನ್ಯಮಂ ಸಮರದೊಳ್ ಬಲ್ಲಾಳಭೂಪಾಲಕಂ ೨೩೭*
*(ಇವು ಉಗ್ರಂ)*

ವ : ಆವೇಶರೂಪಮಪಸ್ಮಾರಂ

**ಸೂತ್ರಂ ೧೪೯**

*ವಸಣಂ ಶೂನ್ಯಗೃಹಂ ವನಂ ನೆಗಟ್ದ ಯಕ್ಷಂ ದೇವನುಂ ಬ್ರಹ್ಮರಾ*
*ಕ್ಷಸನಾ ಧಾತುವಿಷಮ್ಯತಾಶುಚಿತೆಗಳ್ ಭೂತಂ ಪಿಶಾಚಾದಿ ಭಾ*
*ವಿಸೆ ಪೆಂಪಿಂದೆ ವಿಭಾವಮಕ್ಕು ಮನುಭಾವಂ ತಾನಪಸ್ಮಾರಕ*
*ಕ್ಕೆಸೆಗುಂ ಬಾಯ್ನೊರೆ ಕಂಪಿತಂ ರುದಿತಮೋಟಂ ಸ್ವೇದಮಿಂತಾದುವುಂ*

**ಲಕ್ಷ್ಯಂ**

*ಎಲೆ ಎಲೆ ಮಂತ್ರವಾದಿಗಳಿರಾ ಪರದೇಸಿಯ ಕಂದನೀತನೀ*
*ಮಲಯಪಥ ಪ್ರದೇಶದೊಳ್ ಪೆತ್ತೆನಿದಂ ತಲೆಗಾವುದೀತನಂ*
*ಬಲೆಯುತಟುತ್ತೆ ಬೊಬ್ಬಿಡುತೆ ಬಾಯ್ನೊರೆ ಸೂಸುತೆ ಬೀೞುತೋಡುತುಂ*
*ಪಲವು ವಿಕಾರಮಂ ತಳೆದಳೇವೆನೆನುತ್ತಜೆ ಬಿಟ್ಟಿಳುರ್ವಿಯೊಳ್ ೨೩೮*
*(ಇದು ಅಪಸ್ಮಾರಂ)*

**ವ್ಯಭಿ(ಸಂ)ಚಾರಿಭಾವಂ ಸಮಾಪ್ತಂ**

ವ : ಇಂ ರಸಾಭಾಸಭಾವಾಭಾಸಂಗಳಂ ಪೇೞ್ವೆಂ

**ಸೂತ್ರಂ ೧೫೦**

*ನೆಗಟ್ದ ನಿರಿಂದ್ರಿಯದೊಳ್ ತಿ*
*ರ್ಯಗಾದಿಯೊಳ್ ಪುದಿದ ವಿವಿಧರಸಭಾವಂಗಳ್*
*ಬಗೆವೊಡವಾಭಾಸಂಗಳ್ ಪೆಂ*
*ಪೊಗೆದ ವಿಭಾವಾನುಭಾವದಾರೋಪಿತದಿಂ*

ವ : ಅಲ್ಲಿ ನಿರಿಂದ್ರಿಯಕ್ಕೆ

**ಲಕ್ಷ್ಯಂ**

*ಕಳಸಂ ಪದ್ಮಾಕರಂ ಕನ್ನಡಿ ಹಿಮರುಚಿ ಕಾಮಾಗ್ನಿ ಹೋಮಾಗ್ನಿ ಪುಂಸ್ಕೋ*
*ಕಿಳನಾದಂ ವೇದನಾದಂ ಕುಡಿ ಗುಡಿ ಮಧು ಮೌಹೂರ್ತಿಕಂ ಪೂತವಲ್ಲೀ*
*ಕುಳವೆಲ್ಲಂ ನಿಬ್ಬಣಂ ಬಂದಬಲೆಯರೆನೆ ಚೂತಂಗಮೀ ಮಲ್ಲಿಕಾಕೋ*
*ಮಳೆಗಂ ಕೊಂಡಾಡಿ ಕೆಯ್ನೀರೆ ಱೆದನತನು ಲಾವಣ್ಯಪುಣ್ಯಾಂಬುವಿಂದಂ ೨೩೯*

ವ : ಮತ್ತಂ

*ಪಗಲೆಂದುಂ ತಲೆದೋಱಲಣ್ಮಳಿಸಿಸುಂಚಂದ್ರಂಗೆ ಕೂರ್ತಂತೆ ಪ*
*ತ್ತುಗೆಗುಂದಳ್ ನಿಶೆಯಪ್ಪುದುಂ ಪರಿದು ದುಗ್ಧಾಂಬೋಧಿಯೊಳ್ ಕೂಡುವಳ್*
*ನಗುವಳ್ ನೆಯ್ದಿಲೊಳೆಯ್ದೆ ಚುಂಬಿಪ ಚಕೋರಂಗಳ್ಗಳಲ್ವಾಸೆಯಿಂ*
*ಪುಗುವಳ್ ಕೌಮುದಿಯೆಂಬ ಪೊಚ್ಚಪೊಸವೆಣ್ಣೇನೆಂಬ ನಾಚಿಕ್ಕೆಡೆಯೋ* ೧೪೦
*(ಇವು ನಿರಿಂದ್ರಿಯ ಸಂಭೋಗಂ)*

*ಇನನಂ ಕಾಣದೆ ಸಂಚಲ*
*ತನುವಪರಾಶಾಪ್ರಪಂಚವಿರಹಿತೆ ಸಂಧ್ಯಾಂ*
*ಗನೆ ನೋಡೆ ನೋಡೆ ಕರಗಿದ*
*ಳನುರಕ್ತೆ ವಿಯೋಗವೇಗಮಂ ಸೈರಿಪಳೇ* ೧೪೧
*(ಇದು ನಿರಿಂದ್ರಿಯ ವಿಪ್ರಲಂಭಂ)*

ವ : ಇವು ರಸಾಭಾಸಂಗಳ್, ದೋಷಮಲ್ತು

*ಘನಮಾಲೆ ಸಮುದ್ರನ ಸಿರಿ*
*ಯಿನಾದ ಗರ್ಭದೆ ಜಡಪ್ರಕೃತಿವೆತ್ತಪಳೆಂ*
*ತೆನೆ ತನುಮಧ್ಯೆಯರೇಂ ಗ*
*ರ್ಭನಿರ್ಭರಾವಸ್ಥೆಯಿಂ ಪಟುತೆವಡೆದಪರೇ* ೧೪೨
*(ಇದು ಆಲಸ್ಯಭಾವಾಭಾಸಂ)*

*ಆನಿರ್ದ ಬನದೊಳುಟಿದುವ*
*ನೇನಂ ನೃಪ ನೋಟ್ಪೆ ಬರ್ಪುದೆಂಬಂದದಿನಂ*
*ದೇನುಲಿದುದೊ ಪಿಕಮಧುರ*
*ಧ್ವಾನದಿನಾರಕ್ತಕೋರಕಂ ಸಹಕಾರಂ* ೧೪೩
*(ಇದು ಗರ್ವಭಾವಾಭಾಸಂ)*

*ಅಂಬುಜನಾಳಮೆಂಬ ಪೆಣೆದಾವಣಿಯಂ ಪಱಿದಾವಲೆಂಬ ಭಾ*
*ಳ್ಗಂಬಮನೊತ್ತಿಕಿಟ್ಟು ಲತೆಯೆಂಬ ತುರಂಗಮುಮಂ ಪೊರಳ್ಚಿ ಧೌ*
*ತಾಂಬುತರಂಗಮೆಂಬ ಪರಿಕಾರನನಟ್ಟಿ ಮದಾಳಿಯೆಂಬ ಗುಂ*
*ಡಂ ಬಳಿದಿಟ್ಟು ಪಾಯ್ದುದು ಸಮೀರಣವಾರಣವಾ ಪ್ರದೇಶದೊಳ್* ೧೪೪
*(ಇದು ಉಗ್ರಭಾವಾಭಾಸಂ)*

ವ : ಇವು ನಿರಿಂದ್ರಿಯ ಭಾವಾಭಾಸಂಗಳ್

*ಉಗುಬುತ್ತುಂ ಸಿಡಿಲೆಂಬ ತೋರಗಿಡಿಯಂ ಕಾಲೂರಿ ಭೂಭಾಗದೊಳ್*
*ಗಗನಾಭೋಗಮನೆಯ್ದಿ ನೀಳ್ದ ಘನ ವೇಣೀಬಂಧಮಂ ಸಾರ್ಚಿ ಮಿಂ*
*ಚುಗಳೆಂಬುಳ್ಕುವ ದಾಡೆಗಳ್ ಪೊಳೆಯೆ ಚಂದ್ರಾದಿತ್ಯರಂ ನುಂಗಿ ಬೇ*
*ಸಗೆಯಂ ಬೆರ್ಚಿಸಿ ಘರ್ಜಿಸುತ್ತುಮೊಗೆದಂ ಕಾರೆಂಬ ಕಾಳಾಸುರಂ     ೧೪೫*
*(ಇದು ನಿರಿಂದ್ರಿಯರೌದ್ರರಸಮೌಗ್ರ್ಯ ವ್ಯಭಿಚಾರಿ)*

*ಎಳವೆಱೆ ದಾಡೆ ಕೆಂದಳಿರೆ ನಾಲಗೆ ಮಾಮರದಳ್ಳೆಗೊಂಬಿನೊಳ್*
*ಮಿಳಿರ್ವೆಳವಳ್ಳಿ ಬಾಲಮಲರ್ದೊಂಗಲೆ ಕೇಸರಮೆಂಬಿನಂ ಮನಂ*
*ಗೊಳೆ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ*
*ಗೊಳಿಸಿದುದುದ್ಧಕೀರ ಮದಕೋಕಿಳಗರ್ಜಿತತರ್ಜಿತಂಗಳಿಂ     ೧೪೬*

ವ : ಇದು ನಿರಿಂದ್ರಿಯಭಯಾನಕರಸಮೌಗ್ರ್ಯಾದಿ ವ್ಯಭಿಚಾರಿಯಿಂತು ನಿರಿಂದ್ರಿಯಾನ್ಯರ ಸಭಾವಂಗಳನಱಿವುದು.

ವ : ಇನ್ನು ತಿರ್ಯಗ್ಗತಕ್ಕೆ

*ಪಸಿದೊಡೆ ಸಲ್ಲಕೀಕಿಸಲಯಂಗಳನೊಯ್ಯನೆ ನೀಡಿ ತೀಂಟೆ ತಾಮ*
*ಮಸೆಪಿರೆ ಕೋಡನಿಟ್ಟೊರಸಿ ನೀರ್ಗೆಳಸಿರ್ದೊಡೆ ತಂದು ನೀರನೂ*
*ಡಿಸಿ ನಸೆಯಿಬ್ಬೆಯಾದೊಡೊಡಗೂಡಿ ಬಟಲ್ದೊಡೆ ಕರ್ಣವಾತಮಂ*
*ಪಸರಿಸಿ ತನ್ನ ಕೆಯ್ಪಿಡಿಯವೋಲ್ ಪಿಡಿಯಂ ಪಿಡಿದಿರ್ದುದೊಂದಿಭಂ     ೧೪೭*

ವ : ಮತ್ತಂ

*ಪರಿಪರಿತಂದು ಮೆಯ್ಗುಳೆರಡಿಲ್ಲೆನೆ ಪಕ್ಕದಿನಪ್ಪಿ ಕಣ್ಗಳಿಂ*
*ಸುರಿಯೆ ಮುದಶ್ರುಮಂದಲೆಯತುಪ್ಪ ಟನೊಯ್ಯನೆ ಕರ್ಚಿ ಚಂಚುವಿಂ*
*ಸರಸಿಜಪತ್ರಕೋಟಿಯ ಕುಸುಂಕಱೆ ನತ್ತೆಳದೊಯ್ದು ಕಾಂತದೊಳ್*
*ನೆರೆದು ರಥಾಂಗಕಾಂತೆಯೆರ್ದೆಯಾಱಿದುದಾದಮೆ ಸುಪ್ರಭಾತದೊಳ್     ೧೪೮*
*(ಇದು ತಿರ್ಯಕ್ ಸಂಭೋಗ ಶೃಂಗಾರಾಭಾಸಂ)*

*ನಲ್ಲರಗಲ್ಕೆ ಯಿಲ್ಲದೆಡೆಯಸ್ತಮಯಕ್ಕೆ ದಿನಾಧಿನಾಯಕಂ*
*ಸಲ್ಲದ ತಾಣವಂಗಜಶರಾಶನಿ ಪೊಯ್ಯದ ದೇಶಮುಳ್ಳೊಡಂ*
*ತಲ್ಲಿಯೆ ಮಾಟ್ಕೆ ಮಜ್ಜನನಮಂ ಬಿದಿಯೆಂದು ರಥಾಂಗಕಾಂತೆ ಹೃ*
*ದ್ವಲ್ಲಭವಿಪ್ರಲಬ್ಧೆ ಬಗೆಗೆಟ್ಟು ಪೊರಳ್ದುದು ಪದ್ಮಪತ್ರದೊಳ್  ೧೪೯*

*ಬಿಸರುಹಸಖನಸ್ತಾದ್ರೀಂದ್ರಮಂ ಪೊರ್ದೆ ಪೋದಯ್*
*ಬೆಸೆದಿನಿಯನೆ ನೀನುಂ ತನ್ನಂ ಬೆಂಬೆನ್ನೊ ಳೆನ್ನೀ*
*ಯಸುವುಮಿರದೆ ಪೋಗಲ್ಕಿರ್ದುದೆಂದಿಂತೊಱಲ್ದುಂ*

*ಕುಸುಮಶರಶಲಾಕಾಕೀಲಿತಾಂಗಂ ರಥಾಂಗಂ*
*(ಇದು ತಿರ್ಯಗ್ವಿಪ್ರಲಂಭ ಶೃಂಗಾರಾಭಾಸಂ)*

*ಅಱುತೆರ್ದೆಯಾಱೆ ಪೀರ್ದುಮಿನಿಯಳ್ಗಿನಿದೆಂದಿರದೀಂಟವೇೞ್ದುಮ*
*ೞ್ಕಱುಮಱುವಂತೆ ಮುಕ್ಕುಳಿಸಿ ತಂದೆಱೆಗುಮ ಕೆಳೆವಕ್ಕಿಯೆಲ್ಲವಂ*
*ನೆಱೆ ಬಱೆಯಟ್ಟಿ ನಲ್ಲುಣಿಸನೂಡಿಯುಮಾಮ್ರದ ತೋರವಣ್ಗಳಿಂ*
*ದಱಿಸಿದುದಂತುಗಾಣದೆರ್ದೆನೊಂದು ಶುಕಂ ಮಧುಸಮ್ಮದೋತ್ಸುಕಂ ೧೫೧*
*(ಇದು ಔತ್ಸುಕ್ಯಂ)*

*ಗಿಡುಗಂ ಕೊಂದುದೊ ಬೇಡರಿಟ್ಟ ಬಲೆಯೊಳ್ ಮೇಣ್ ಬಿೞ್ದುದೋ ಪಕ್ಕಮೇ*
*ನುಡಿದತ್ತೋ ಪಿಡಿದನ್ಯಸಾರಿಕೆ ರತವ್ಯಾಪಾರಕೆಂದೊಯ್ದುಳೋ*
*ತಡೆದಂ ಮತ್ಪ್ರಿಯನೆಂದು ನೊಂದು ತಳಿರ್ಗಳ್ ನಾಂಬನ್ನೆಗಂ ದುಃಖದಿಂ*
*ಗಡ ಕೀರಪ್ರಿಯಕಾಂತೆ ಸುಯ್ದು ಸುರಿದಳ್ ಭೋರೆಂದು ಬಾಷ್ಪಾಂಬುವಂ ೧೫೨*
*(ಇದು ವಿತರ್ಕಚಿಂತಾಸಂಧಿ)*

ವ : ಮತ್ತಂ

*ನೆರೆವನ್ನಂ ರವಿ ನಿಲ್ಲದಸ್ತಗಿರಿಯಂ ಸಾರ್ದಂ ಪ್ರಿಯಂ ಪೋಗಲಾ*
*ತುರನಾಗಿರ್ದನೆನುತ್ತ ಮತ್ತಿನನನಿತ್ತಾತ್ಮೇಶನಂ ನೋಡಿ ಕೋ*
*ಪರಸಾವೇಶಮನೊಂದು ಶೋಕರಸಮಂ ಮತ್ತೊಂದು ಕಣ್ ಕಯ್ಕೊಳು*
*ತ್ತಿರೆ ಕಯ್ಕೊಂಡುದು ಚಕ್ರವಾಕವಧು ಕಣ್ಗೆತ್ತಂ ನಟೀಲೀಲೆಯಂ ೧೫೩*
*(ಇದು ತಿರ್ಯಗ್ಭಾವಸಂಧಿ)*

**ಇಂತಿವೆಲ್ಲಂ ಭಾವಾಭಾಸಂ**

ವ : ಆದಿಶಬ್ದದಿಂ ರಜನೀ ರಜನೀಪತಿಸಂಭೋಗಕ್ಕೆ

*ಪರೆದಿರೆ ತಿಮಿರಕಚಂ ನೆರೆ*
*ದಿರೆ ಭಗಣಸ್ವೇದಜಲಕಣೌಘಂ ರಾಗಂ*
*ಬೊರೆದಿರೆ ಚಕೋರನಯನಂ*
*ಕರಮೆಸೆದಳ್ ನೆರೆದು ರಜನಿ ರಜನೀಪತಿಯೊಳ್ ೧೫೪*

ವ : ಮತ್ತಂ

*ಪೊಸಮಕರಂದಮೆಂಬ ಬೆಮರುಣ್ಮಿರೆ ತೆಂಬೆಲರೆಂಬ ಸುಯ್ಯೆಲರ್*
*ಪಸರಿಸೆ ಗುಚ್ಛಮೆಂಬ ಮೊಲೆ ಚಪ್ಪಲರ್ದೊಪ್ಪೆ ಸಿತಾಬ್ಜಮೆಂಬ ಕಣ್*

*ಮಿಸುಪ ಪರಾಗಮೆಂಬ ನಸುಗೆಂಪಿನೊಳೊಂದಿರೆ ನೋಡೆ ಕಣ್ಗೆಶೋ*
*ಭಿಸಿದಳಲಂಪಿನಿಂ ನೆರೆದು ನಂದನಲಕ್ಷ್ಮಿ ವಸಂತಕಾಂತನೊಳ್* ೨೫೫

**ಇಂತಿವು ರಸಾಭಾಸಂಗಳ್**

*ಅಮೃತದ ಖಂಡಶರ್ಕರೆಯ ಕೂಟಮುಮೊಲ್ದಳ ಕೂಟಮುಂ ಸಮಾ*
*ನಮೆಯೊಲವಿಲ್ಲದಳ್ಗೆ ವಿಟನೇಟವಿಟಂ ಬರೆ ಕೂಟಮಿಂಪಸೀ*
*ಗುಮೆ ಬೆಲೆಗೊಂಡನಾ ಬೆಲೆಗೆ ಮೆಯ್ದೆರೆಯೋಯ್ತೆ ನಗಿತ್ತೆನೆಂಬ ಕೂ*
*ಟಮನದನೊಂದು ಕೂಟಮೆನಲಕ್ಕುಮೆ ನಂಜಿನ ಕಾಲಕೂಟಮಂ* ೨೫೬
*(ಇದುವುಮೇಕತ್ರಾನುರಾಗದಿಂ ರಸಾಭಾಸಮಪ್ಪುದು)*

ವ : ಇಂತು ತುಂದಿಲ ಮೈಥುನಂ, ನೀಚ ಶಬರ ಚೇಟೀಚೇಟ ಪರಮ ದರಿದ್ರಾದಿಗಳ್ ನೆಗಟ್ದಿ ಕೊಟೆ ಸುಸಿಲೆಲ್ಲಂ ರಸಾಭಾಸಂಗಳೆಂದಱಿವುದು.

ಸಮಾಸೋಕ್ತಿಯರ್ಥಾಂತರನ್ಯಾಸಂ, ರೂಪಕಮುತ್ಪ್ರೇಕ್ಷಾದಿಗಳೀ ರಸಭಾವಾ ಭಾಸಕ್ಕೆ ಜೀವಿತಂ.

**ಇನ್ನು ಸಾತ್ವಿಕವಿಚಾರಂ**

ಲೇಸಾದ ಸತ್ವಗುಣೋತ್ಕರ್ಷಣದಿಂ ಪ್ರಾಣಸ್ವರೂಪಮಾದ ವಸ್ತುವೆ ಸತ್ವಂ, ಅಲ್ಲಿ ಪುಟ್ಟಿದುವೇ ಸಾತ್ವಿಕಂಗಳವು ಪ್ರಾಣಭೂಮಿಪ್ರಸೃತ ರತ್ಯಾದಿಗಳನಱಿಯುವ ವೃತ್ತಿಗಳನುಳ್ಳುವು. ಬಾಹ್ಯ ಜಡರೂಪಪಂಚಭೂತಾತ್ಮಕಂಗಳಾದ ಅಶ್ರು ಸ್ವೇದಾದಿಗಳೇ ಕಾರಣಂಗಳವಱಿಂ ತಾವುಂ ವಿಲಕ್ಷಣಂಗಳಪ್ಪುವು. ಅತ್ಯಂತರಸೀಭವಿಸಿದ ರತ್ಯಾದಿಗಳ ವಿಭಾವಂಗಳಿಂ ಪುಟ್ಟಿದುವನು ಭಾವಂಗಳಿಂ ಗಮ್ಯಮಾನಮಾನಂಗಳಾಗಿ ಭಾವಂಗಳೆಂದಱಿಯಿಸಿಕೊಳ್ಳುವು. ಮತ್ತ ಮಾತ್ಮಸ್ಥಿತಮಾದ ಪಂಚಭೂತದೊಳ್ ಪೃಥ್ವೀಪ್ರಧಾನಮಾದ ಪ್ರಾಣದೊಳ್ ಚಿತ್ತವೃತ್ತಿಗಳ್ ಬೆರಸಲೊಡನಾತ್ಮನಚಲನಾಗಿರ್ಪನದೇ ಸ್ತಂಭ ಸಾತ್ವಿಕ ಭಾವಂ. ಜಲಪ್ರಧಾನ ಮಾದ ಪ್ರಾಣದಲ್ಲಿ ಸ್ವಾಂತಂಗಳ್ ಪ್ರವರ್ತಿಪುದು, ಅಶ್ರುಭಾವ ಮಕ್ಕು. ತೇಜಃ ಪ್ರಧಾನಮಾದ ಪ್ರಾಣದಲ್ಲಿ ಹೃದ್ವರ್ತನಮಿರೆ ವೈವರ್ಣ್ಯಮಕ್ಕುಂ. ಆಕಾಶಪ್ರಧಾನಮಾದ ಪ್ರಾಣದಲ್ಲಿ ಹೃದ್ವರ್ತನಮಿರೆ ಲಯಸಾತ್ವಿಕಮಕ್ಕುಂ. ವಾಯು ಪ್ರಧಾನಮಾದ ಪ್ರಾಣದಲ್ಲಿ ಚೇತಃಸಂಧಾನಮಾಗೆ ಮಂದ ಮಧ್ಯೋತ್ಕೃಷ್ಟವೇಗಂಗಳಿಂ ರೋಮಾಂಚ ಕಂಪ ಸ್ವರಭೇದತ್ರಿತಯಮಕ್ಕುಂ. ಈ ಬಾಹ್ಯ ಸಾತ್ವಿಕಂಗಳ್ಗಂತರಂಗದ ಸಾತ್ವಿಕಂಗಳ್ ಕಾರಣ ಮಾದುದಱಿಂದೀ ಪೆಸರ್ಗಳಂ ತಾವುಂ ತಳೆದುವು.

**(ಭರತಮತಮಿದು)**

ಬಾಹ್ಯಂಗಳಾದ ಅಶ್ರುಸಂಭಾದಿಗಳ್ ಶರೀರಧರ್ಮಂಗಳ್ ಅಂತರಂಗ ಸಾತ್ವಿಕಂಗಳ್ ಸಂದನುಭಾವಂಗಳದಱಿಂದಮನುಭಾವಂಗಳೊಡವೆರೆಸಿರ್ಪುವು. ಇವು ಹೃದ್ಗತಮಾದ ಸಾತ್ವಿಕಂಗಳುಮಂ ರತ್ಯಾದಿಸ್ಥಾಯಿಗಳುಮಂ ಮತ್ಯಾದಿ ವ್ಯಭಿಚಾರಿಗಳು ಮನಱಿಪ್ಪುವಾ ಸ್ಥಾಯಿಭಾವಮೊಂಬತ್ತು, ಸಾತ್ವಿಕಭಾವಮೆಂಟು, ಸಂಚಾರಿಭಾವಂ ಮೂವತ್ತುಮೂಱು, ಇಂತಯ್ವತ್ತು ಭಾವಂ.

ವಿಭಾವಬಲದಿಂದಾ ಮೆಯ್ಯುವಿರುರ್ವಿದುದೇ ಪುಳಕಂ, ಕಣ್ಬನಿ ತೋಱಿದುದೇ ಅಶ್ರು, ಬೆಮರ್ತುದೇ ಸ್ವೇದಂ, ಮಱವಟ್ಟುದೇ ಸ್ತಂಭಂ, ಮೆಯ್ಮಱೆದುದೇ ಲಯಂ, ಪಲ್ಲಟಿಸಿದುದೇ ಸ್ವರಭೇದಂ, ನಡುಗುವುದೇ ಕಂಪಂ, ಮತ್ತೊಂದು ಬಣ್ಣಮಾದುದೇ ವೈವರ್ಣ್ಯಂ

ಇಂತು ಚಿತ್ತತ್ವದಿನೆಲ್ಲಾರಸಂಗಳ್ಗಪ್ಪುವಿವಂ ವ್ಯಭಿಚಾರಿಗಳನನುಭಾವಂಗಳೊಡನೆಯೆ **ಹೇಮಚಂದ್ರಾಚಾರ್ಯರ್** ಪೇೞ್ದರ್, ಅಂತೆಗೆಯ್ದಂ

ವ : ಮತ್ತಂ ಸಾತ್ವಿಕಭಾವಮೆಂಟು ಪ್ರಕಾರಕ್ಕಂ ಕಾವ್ಯಮಾರ್ಗದೊಳುದಾ ಹರಣ ಮುಖದೊಳ ಱಿದುಕೊಳ್ಗೆ. ಶೃಂಗಾರದೊಳಳವಟ್ಟುದನುದಾಹರಿಪೆಂ

**ಸೂತ್ರಂ ೧೪೮**

*ಪುಲಕಾಶ್ರು ಸ್ತಂಭ ಸ್ವೇ*
*ದ ಲಯ ಸ್ವರಭೇದ ಕಂಪ ವೈವರ್ಣ್ಯಂಗಳ್*
*ಸಲೆ ಸಾತ್ವಿಭಾವಂಗಳ್*
*ವಿಲಸಿತ ಕವಿಮಾರ್ಗದಿಂದಮೆಂಟು ತೆಱಂಗಳ್*

**ಲಕ್ಷ್ಯಂ**

*ಇನಿಯಂ ಸೋಂಕಲೊಡಂ ಝಂ*
*ಮನೆ ಕಡವಲರ್ದಂತೆ ಕಾಂತೆ ತಾಳ್ದಿದ ರೋಮಾಂ*
*ಚನಕೆ ತನಿವೇಟವಳ್ಳಿಯ*
*ನನೆಗಂಗಜನೀಯನೆಂತೊ ಕಂಟಕವೆಸರಂ ೫೭*
*(ಇದು ಪುಳಕಂ)*

*ಸುರಿದಬಲೆ ಕಣ್ಣ ನೀರ್ಗಳ*
*ಸರಿಯಂ ಸ್ತನಮಂಡಳಂಗಳೊಳ್ ವಿರಹಮಹಾ*
*ಜ್ವರಜನಿತಪುಳಕ ಸಸ್ಯಾಂ*
*ಕುರಂಗಳಂ ಬೆಳೆಯಿಪಳ್ ನಭೋಲಕ್ಷ್ಮಿಯವೋಲ್ ೫೮*
*(ಇದು ಅಶ್ರು)*

*ಇನಿಯನ ಕೆಂದಳಂದ ತಳಮನೊಯ್ಯನೆ ಸೋಂಕೆ ಪೊದಟ್ಟ ನಾಣ ಪೆಂ*
*ಪಿನೊಳಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬೆ*
*ಚ್ಚನೆ ಬಸಿಯುತ್ತುಮಿಂದು ಕರಸಂಕುಳಮೊಯ್ಯನವುಂಕಿ ಸೋಂಕೆ ಸೋಂ*
*ಕಿನೊಳೊಱೆವಿಂದುದ ಕಾಂತಮಣಿಪುತ್ರಿಕೆಯಂದದಿನೊಪ್ಪೆ ತೋಱಿಳ್ ೧೫೯*
*(ಇದು ಸ್ವೇದಂ)*

ವ : ಮತ್ತಂ

ನಸುದೆಱೆದಿರ್ದ ಬಾಯ್ ನಿಮಿರ್ದ ಗೋಣೆಮೆಯಿಕ್ಕದ ದಿಟ್ಟಿ ರಯ್ಯನೊಂ
ದೆಸೆಗೊಱಗಿರ್ದ ಮೆಯ್ ಜಘನದಲ್ಲಿಯ ಕಯ್ ಮರವಟ್ಟ ಚೇಷ್ಟೆ ಕ
ಣ್ಗೆಸೆದಿರೆ ಸುಯ್ಯಪೆಂಪಟಿದು ಚಿತ್ರದ ಪೆಣ್ಣವೊಲಾಗಿ ಬಾಗಿಲೊಳ್
ಸಸಿಮುಖಿ ನಿಂದು ನೋಟ್ಪ ಳಿನಿಯಂ ತಡೆದೊಯ್ಯನೆ ಬರ್ಪ ಬಟ್ಟೆಯಂ ೧೯೦
(ಇದು ಸ್ತಂಭಂ)

ಮಿಗೆ ಸುರತಾಮೃತಂಗುಡಿದು ತನ್ನೊಳೆ ತಾಂ ಲಯಮಾಯ್ತೊ ಇಂಪಿನೊ
ಳ್ಪೊಗೆದಧರಸ್ಥ ಸಾರದೊಡನೆನ್ನಯ ಹೃದ್ಗುಹೆವೊಕ್ಕಡಂಗಿತೋ
ಬಗೆವೊಡೆ ಘರ್ಮವಾರಿಯೊಡನೇಂ ಪೊಱಸಾರ್ದುದೊ ಕಾಣೆನೋಪನೊಳ್
ಬಗೆಯ ವಿಕಾರಮಂ ತನುಗೆ ಚಂದನದಣ್ಕೆವೊಲಾದಮೊಪ್ಪಿದಳ್ ೯೧೧
(ಇದು ಲಯಂ)

ಸ್ಮರನಸಿಯಳ ಬೀಣೆಯ ನುಂ
ಚರವೆನೆ ಸತಿ ಪಾಡುತಿರ್ಪುದುಂ ಮನದನ್ನಂ
ಬರೆ ಬಂದುದೆಯ್ದೆ ಕಾಮಾ
ತುರೆಗೆ ಮನಂಗೊಳ್ವ ಗದ್ಗದಸ್ವರಮಾಗಳ್ ೧೯೧
(ಇದು ಸ್ವರಭೇದಂ)

ಲಲನೆ ನಿಜೇಶ್ವರನಂ ಕಾ
ಣಲೊಡಂ ಕಟ್ಟಿದಿರೊಳೊದವೆ ಭಯಮಾದಳ್ ತೆಂ
ಬೆಲರಿಂದಲ್ಲಾಡುವ ಕೋ
ಮಲ ಲತಿಕಾಲೀಲೆಯಂ ತಳೋದರಿ ತಳೆದಳ್ ೧೯೨
(ಇದು ಕಂಪಂ)

ಇನಿಯನ ವಿಯೋಗದಿಂದಾ
ದ ನಿನ್ನ ಬಡತನಮನಱಿವುದರಿದಾಯ್ತೆನಸುಂ
ಘನತರಚಂದ್ರಕಳಾಬಿಸ
ವನದಂತಿರೆ ನಿನ್ನೊಳಾದುದೀ ವೈವರ್ಣ್ಯಂ ೧೯೪
(ಇದು ವೈವರ್ಣ್ಯಂ)

ಇಂದುವರಮಾರುಮೀ ತೆಱ
ದಿಂದಂ ಕನ್ನಡದೊಳಾರ್ಯರಾಯೆಂಬಿನಮೊ
ಳ್ಪಿಂದೆ ವಿವರಿಸಿದುದಿಲ್ಲೆನೆ
ಚಂದದೆ ಬಿಚ್ಚಳಿಸಿ ರಚಿಸಿದಂ ಕವಿಸಾಳ್ವಂ ೧೯೫

*ಈ ಕೃತಿ ಕವಿ ಕೃತ ನುತ ಕವಿ*
*ತಾ ಕಾಂತೆಗೆ ತಾನೆ ನವರಸಂ ಸಲೆ ರಸರ*
*ತ್ನಾಕರಮಿಳೆ ಶಶಿ ರವಿ ರ*
*ತ್ನಾಕರಮಿರ್ಪನ್ನೆಗಂ ಜಯಿಕ್ಕುರ್ವರೆಯೊಳ್ ೧೬೬*

*ಇದು ಶತೇಂದ್ರ ಮುನೀಂದ್ರವಂದಿತಾರ್ಹತ್ಪರಮೇಶ್ವರ ಪಾದಾರವಿಂದ ಮಂದ*
*ಮಕರಂದಾನಂದಿತ ಭೃಂಗಾಯಮಾನ ಕವಿಸಾಳ್ವ ವಿರಚಿತಮಪ್ಪ*
*ರಸರತ್ನಾಕರದೊಳ್ ವ್ಯಭಿಚಾರಿಭಾವ ವಿವರಣಂ*

**ಚತುರ್ಥ ಪ್ರಕರಣಂ**

# ನೇಮಿನಾಥ ಚರಿತೆ

## ಅಱಿವುದು ಧರ್ಮಮಂ ಕಾವ್ಯಧರ್ಮಮುಮಂ

ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ರೂಪಿಸಿ, ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಸಾಹಿತ್ಯ ಜೈನಸಾಹಿತ್ಯ ಸಂಪುಟಗಳ ಯೋಜನೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮಹತ್ವಪೂರ್ಣವಾದದ್ದು. ೨೦೦೬ರ ಶ್ರವಣಬೆಳಗೊಳದ ಐತಿಹಾಸಿಕ ಗೊಮ್ಮಟ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಈ ಸಮಗ್ರ ಕನ್ನಡ ಜೈನಸಾಹಿತ್ಯ ಸಂಪುಟಗಳ ಯೋಜನೆಯನ್ನು ರೂಪಿಸಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರ್ಕಾರವು ಈಗಾಗಲೇ ಸಮಗ್ರ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಸಂಪುಟಗಳನ್ನು ಹೊರತಂದಿದ್ದು, ಈಗ ಸಮಗ್ರ ಜೈನಸಾಹಿತ್ಯ ಸಂಪುಟಗಳ ಪ್ರಕಟಣೆಯ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯದ ಬಹಳ ಮಹತ್ವದ ಶರೀರವೊಂದನ್ನು ಪೂರ್ಣಗೊಳಿಸುತ್ತಿದೆ. ಈ ಸಮಗ್ರ ಜೈನಸಾಹಿತ್ಯ ಸಂಪುಟದ ಯೋಜನೆಯನ್ನು ೨೦೦೬ ರ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಭಾಗವಾಗಿ ಕರ್ನಾಟಕ ಸರ್ಕಾರ ಅಂಗೀಕರಿಸಿ ಸಾರಸ್ವತ ಮಹಾಮಸ್ತಕಾಭಿಷೇಕ ಮಾಡಿದ ಪುಣ್ಯಕ್ಕೆ ಪಾತ್ರವಾಗಿದೆ. ಈ ಯೋಜನೆಯ ಮಹತ್ವವನ್ನು ಮನಗಂಡು ಉದಾರವಾದ ಆರ್ಥಿಕ ನೆರವು ನೀಡಿದ ಆಗಿನ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎನ್. ಧರ್ಮಸಿಂಗ್ ಅವರಿಗೂ ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರಿಗೂ ಸನ್ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಎಚ್.ಡಿ. ರೇವಣ್ಣ ಅವರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದು ಚಾಲನೆಗೊಂಡ ಯೋಜನೆಗೆ ಮತ್ತೆ ಜೀವ ತುಂಬಿದ ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿಶೇಷ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪ್ರಸ್ತಾಪವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ ಪರಿಷತ್ತಿನ ಸದಸ್ಯರಾದ ಡಾ. ಎಂ.ಆರ್. ತಂಗಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಲ್. ಹನುಮಂತಯ್ಯ, ಶ್ರೀ ಹಸನಬ್ಬ ಅವರ ನೆರವನ್ನು ವಿಶೇಷವಾಗಿ ಸ್ಮರಿಸುತ್ತೇನೆ. ಕನ್ನಡದ ಹಿರಿಯ ಸಾಹಿತಿಗಳಾದ ಮತ್ತು ಜೈನಸಾಹಿತ್ಯದಲ್ಲಿ ವಿಶೇಷ ಪಾಂಡಿತ್ಯವುಳ್ಳ ಡಾ. ಹಂಪ. ನಾಗರಾಜಯ್ಯ ಮತ್ತು ಡಾ. ಕಮಲಾ ಹಂಪನಾ ಅವರು ಈ ಸಂಪುಟಗಳ ರೂಪರೇಷೆಯಿಂದ ತೊಡಗಿ ಕರ್ನಾಟಕ ಸರಕಾರಕ್ಕೆ ಇದರ ಮಹತ್ವವನ್ನು ಮನವರಿಕೆ ಮಾಡಿಕೊಡುವವರೆಗೆ ವಿಶೇಷವಾದ ಕಾಳಜಿ ವಹಿಸಿ ಸಹಕರಿಸಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯ ಆರಂಭವಾಗುವುದೇ ಜೈನ ಸಾಹಿತ್ಯ ಕೃತಿಗಳ ಮೂಲಕ. ಆದಿಕವಿ ಪಂಪನ **ವಿಕ್ರಮಾರ್ಜುನ ವಿಜಯ** ಮತ್ತು **ಆದಿಪುರಾಣ**ಗಳು ಕನ್ನಡ ಸಾಹಿತ್ಯದ ಮೊತ್ತಮೊದಲ ಮಹಾಕಾವ್ಯಗಳು. ಶಿವಕೋಟ್ಯಾಚಾರ್ಯನ **ವೊಡ್ಡಾರಾಧನೆ** ಕನ್ನಡದ ಮೊತ್ತಮೊದಲ ಉಪಲಬ್ಧ ಗದ್ಯ ಗ್ರಂಥ. ಸಂಸ್ಕೃತವೇ ಸಾಹಿತ್ಯನಿರ್ಮಾಣದ ಪ್ರಧಾನ ಭಾಷೆಯಾಗಿದ್ದ ಭಾರತ ದೇಶದಲ್ಲಿ ಕನ್ನಡದಂತಹ ಪ್ರಾದೇಶಿಕ ಭಾಷೆಯಲ್ಲಿ ಕಾವ್ಯರಚನೆ ಮಾಡುವ ಮೂಲಕ ಜೈನಕವಿಗಳು, ಪ್ರಾದೇಶಿಕ ಸಾಹಿತ್ಯ ನಿರ್ಮಾಣಕ್ಕೆ ನಾಂದಿ ಹಾಡಿದರು. ಆದಿಕವಿ ಪಂಪ **ಇದು ನಿಚ್ಚಂ ಪೊಸತು ಅರ್ಣವಂಬೋಲ್ ಅತಿ ಗಂಭೀರಂ ಕವಿತ್ವಂ** ಎಂದು ಹೇಳಿದ್ದಾನೆ. ಪಂಪಕವಿಯು ಆದಿಪುರಾಣದಲ್ಲಿ ಆದಿನಾಥನ ಭವಾವಳಿಗಳನ್ನು ಮತ್ತು ಆತನ ಮಕ್ಕಳಾದ ಭರತ ಬಾಹುಬಲಿಯರು ರಾಜ್ಯದ ಒಡೆತನಕ್ಕಾಗಿ ಪರಸ್ಪರ ಎದುರಾಳಿಗಳಾಗುವ ಸನ್ನೀವೇಶವನ್ನು ಚಿತ್ರಿಸಿದ್ದಾರೆ. ಅಣ್ಣ ತಮ್ಮಂದಿರ ನಡುವೆ ಮುಖಾಮುಖಿ ಯುದ್ಧದಲ್ಲಿ ಅಣ್ಣ ಭರತ ಸೋಲುತ್ತಾನೆ, ತಮ್ಮ ಬಾಹುಬಲಿ ಗೆಲ್ಲುತ್ತಾನೆ. ಆದರೆ ಈ ರೀತಿ ಗೆದ್ದ ಬಾಹುಬಲಿಯು ರಾಜ್ಯದ ಒಡೆತನವನ್ನು ನಿರಾಕರಿಸಿ ವೈರಾಗ್ಯಪರನಾಗಿ ಪ್ರತಿಮಾ ಯೋಗದಲ್ಲಿ ನಿಂತು ಗೊಮ್ಮಟನಾಗುತ್ತಾನೆ. ಅಂತಹ ವೈರಾಗ್ಯದ ಪ್ರತಿಮೆಯಾದ ಗೊಮ್ಮಟನ ಮಹಾಮಸ್ತಕಾಭಿಷೇಕದ ನೆನಪಿಗಾಗಿ ಕನ್ನಡ ಸಾಹಿತ್ಯದ ಗೊಮ್ಮಟ ಸದೃಶ ಜೈನಕೃತಿಗಳನ್ನು ಮತ್ತೆ ಹೊಸದಾಗಿ ಶುಭ್ರಗೊಳಿಸಿ ಸಾಹಿತ್ಯ ಮತ್ತು ಶಾಸ್ತ್ರದ ವಿಭಿನ್ನ ಅರ್ಚನೆಗಳ ಮೂಲಕ ಅವುಗಳಿಗೆ ಪ್ರಕಟಣೆಯ ಅಭಿಷೇಕವನ್ನು ಮಾಡಲಾಗಿದೆ.

ಆದಿಕವಿ ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ **ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ** ಎಂದು ಹೇಳಿಕೊಂಡಿದ್ದಾನೆ. ಹೀಗಾಗಿ ಪ್ರಾಚೀನ ಕಾವ್ಯಗಳಲ್ಲಿ ಲೌಕಿಕ ಮತ್ತು ಆಗಮಿಕ ಎನ್ನುವ ಕಾವ್ಯ ಮತ್ತು ಪುರಾಣಗಳ ನಿರ್ಮಾಣದ ಒಂದು ಪರಂಪರೆ ಕಾಣಿಸಿಕೊಳ್ಳುತ್ತದೆ. ಪಂಪನಿಂದ ತೊಡಗಿ ಪೊನ್ನ ರನ್ನರಿಂದ ಮುಂದುವರಿದು ಮುಂದಿನ ಕವಿಗಳಲ್ಲಿ ಆಗಮಿಕ ಕಾವ್ಯಗಳಾದ ತೀರ್ಥಂಕರರ ಪುರಾಣ ಕೃತಿಗಳ ನಿರ್ಮಾಣ ಒಂದು ನೋಂಪಿಯಂತೆ ಕಾಣಸಿಗುತ್ತದೆ. ಇನ್ನೊಂದು ಕಡೆ ನಯಸೇನ, ಜನ್ನ, ಬ್ರಹ್ಮಶಿವ, ವೃತ್ತವಿಲಾಸರಂತಹ ಕವಿಗಳು ಲೌಕಿಕ ಕಥೆಗಳಿಗೆ ಜೈನ ಆವರಣವನ್ನು ನಿರ್ಮಾಣ ಮಾಡಿ ಲೌಕಿಕ - ಧಾರ್ಮಿಕಗಳನ್ನು ಒಂದುಗೂಡಿಸುವ ವಿಶಿಷ್ಟ ಕಲೆಗಾರಿಕೆಯನ್ನು ಮೆರೆಯುತ್ತಾರೆ. ಹೀಗೆ ೨೪ ತೀರ್ಥಂಕರರ ಪುರಾಣಕಾವ್ಯ ಒಂದು ಧಾರೆಯಾದರೆ ಚರಿತ್ರೆ ಲೌಕಿಕಕಥೆ ನೀತಿಕಥೆಗಳ ಮೂಲಕ ಸಮಕಾಲೀನ ಬದುಕಿಗೆ ಸ್ಪಂದಿಸಿದ ವೈವಿಧ್ಯಮಯ ಕಾವ್ಯಪರಂಪರೆ ಪ್ರಾಚೀನ ಜೈನಸಾಹಿತ್ಯದ ಇನ್ನೊಂದು ಮುಖ್ಯಧಾರೆಯಾಗಿದೆ. ಇದರೊಂದಿಗೆ ಗದ್ಯಸಾಹಿತ್ಯದ ದೃಷ್ಟಿಯಿಂದ ಶಿವಕೋಟ್ಯಾಚಾರ್ಯನ **ವೊಡ್ಡಾರಾಧನೆ** ಮತ್ತು ಚಾವುಂಡರಾಯನ **ಚಾವುಂಡರಾಯ ಪುರಾಣ** ಇನ್ನೊಂದು ಪರಂಪರೆಯನ್ನು ಕಟ್ಟಿಕೊಡುತ್ತದೆ. ಒಂದು ಕಡೆ ಜೈನಧರ್ಮದ ಚೌಕಟ್ಟಿನ ಒಳಗಡೆ ಕತೆಗಳು ಮಾಧ್ಯಮವಾಗಿ ಬಳಕೆಯಾದರೆ, ಇನ್ನೊಂದೆಡೆ ಜೈನ ಧರ್ಮದ ಮೇಲ್ಮೈಗಾಗಿ ಸಾಧನೆ ಮಾಡಿದ ಸಾಂಸ್ಕೃತಿಕ ವ್ಯಕ್ತಿಯ ಸುತ್ತ ಕಥನವೊಂದು ನಿರ್ಮಾಣವಾಗುತ್ತದೆ. ಇವುಗಳ ನಡುವೆ ಇಮ್ಮಡಿ ನಾಗವರ್ಮನಂತಹ ಶಾಸ್ತ್ರಕಾರನು ಭಾಷೆ ಮತ್ತು ಕಾವ್ಯಲಕ್ಷಣಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ರಚಿಸಿದ್ದಾನೆ. ಮಧ್ಯಯುಗೀನ ಕಾಲದಲ್ಲಿ ರತ್ನಾಕರವರ್ಣಿಯಂತಹ ಕವಿಯು ಸಾಂಗತ್ಯದಲ್ಲಿ **ಭರತೇಶವೈಭವ** ಕಾವ್ಯ ರಚಿಸಿ ಜೈನಕಾವ್ಯಗಳ ಆಶಯದ ಸಾಂಸ್ಕೃತಿಕ ಪಲ್ಲಟವನ್ನು ದಾಖಲಿಸುತ್ತಾನೆ. ೧೮೦೦ ರ ಕಾಲಕ್ಕೆ ಬರುವ ದೇವಚಂದ್ರನ **ರಾಜಾವಳಿ ಕಥೆ**ಯು ಆಧುನಿಕ ಕನ್ನಡ ಪೂರ್ವದ ಕಥಾರಚನೆಯ ಅರುಣೋದಯದ ಹೆಜ್ಜೆಯಾಗಿ ಮುಖ್ಯವಾದ ಕೃತಿಯಾಗಿದೆ.

ಒಂದು ಅಂದಾಜಿನ ಪ್ರಕಾರ ಸುಮಾರು ४೫೦ ಜೈನಕವಿಗಳು ೫೨೦ ಕ್ಕೂ ಹೆಚ್ಚಿನ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸುಮಾರು ಅರ್ಧದಷ್ಟು ಕೃತಿಗಳು ಲಭ್ಯವೆಂದು ನಾವು ಭಾವಿಸಿದರೂ ಇವುಗಳ ಪ್ರಮಾಣ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗಣನೀಯ ಎನ್ನಿಸುತ್ತದೆ. ಮಹಾಕಾವ್ಯದಿಂದ ತೊಡಗಿ ಮುಕ್ತಕದ ವರೆಗೆ, ಗಣಿತಶಾಸ್ತ್ರದಿಂದ ಹಿಡಿದು ಸೂಪಶಾಸ್ತ್ರದ ವರೆಗೆ, ಜನಪದ ಕಥೆಯಿಂದ ಆರಂಭಿಸಿ ವಿಡಂಬನ ಸಾಹಿತ್ಯದ ವರೆಗೆ ಕನ್ನಡ ಜೈನಸಾಹಿತ್ಯದ ಹರಹು ವ್ಯಾಪಿಸಿಕೊಂಡಿದೆ.

ಪಂಪಕವಿಯು ತನ್ನ ಕಾವ್ಯದಲ್ಲಿ ಮಾರ್ಗ ಮತ್ತು ದೇಸಿಗಳ ಕುರಿತು ಮಾತನಾಡುತ್ತಾನೆ. ಕನ್ನಡ ಜೈನಸಾಹಿತ್ಯದ ಬಗ್ಗೆ ಹೇಳುವಾಗ ಜೈನ ಪುರಾಣಗಳ ಪರಿಭಾಷೆ ಮತ್ತು ಪರಿಮಾಣಗಳು ಮಾರ್ಗವಾದರೆ, ಇತಿಹಾಸ, ಸಮಾಜ, ಲೌಕಿಕ ಪ್ರಪಂಚ ದೇಶಿಯಾಗುತ್ತದೆ. ಪಂಪನ ಕಾವ್ಯಗಳ ನಾಣ್ನುಡಿಯಿಂದ ತೊಡಗಿ, ವಡ್ಡಾರಾಧನೆ ಕತೆಗಳ ಗ್ರಾಮೀಣ ಬದುಕಿನಿಂದ ಮುಂದುವರಿದು, ನಯಸೇನನ ಧರ್ಮಾಮೃತದ ಕಥೆಗಳ ಮಾಲೋಪಮೆಗಳಿಂದ ಹಾದು ಬಂದು ರತ್ನಾಕರನ ಭರತೇಶ ವೈಭವದ ನುಡಿಗಟ್ಟುಗಳ ವರೆಗೆ ಕನ್ನಡದ ನಿಜವಾದ ದೇಸಿಯನ್ನು ಜೈನಸಾಹಿತ್ಯ ನಿರ್ಮಿಸಿಕೊಂಡಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಂಪೂಕಾವ್ಯ ಪ್ರಕಾರ ಜೈನರಿಂದ ಆರಂಭವಾಯಿತು. ಸಾಂಗತ್ಯಕಾವ್ಯ ಪ್ರಕಾರಕ್ಕೆ ನಾಂದಿ ಹಾಡಿದವರು ಜೈನಕವಿಗಳು. ಗದ್ಯವನ್ನು ಮೊದಲು ಮಾಡಿದವರು ಜೈನ ಕಥೆಗಾರರು. ಕಾವ್ಯಶಾಸ್ತ್ರ, ಛಂದಸ್ಸು, ವ್ಯಾಕರಣ, ಸೂಪಶಾಸ್ತ್ರದಂತಹ ಶಾಸ್ತ್ರ ಪಾಂಡಿತ್ಯವನ್ನು ಕನ್ನಡದಲ್ಲಿ ಕಟ್ಟಿಕೊಟ್ಟವರು ಜೈನರು. ಹೀಗೆ ಕನ್ನಡದ ವಿದ್ವತ್ತು, ವಿವೇಕ ಮತ್ತು ವಿಸ್ಮಯ ಕನ್ನಡ ಸಾಹಿತ್ಯದಲ್ಲಿ ಜೈನ ಕವಿಗಳಿಂದ ಅಪೂರ್ವವಾಗಿ ನಿರ್ಮಾಣವಾಗಿದೆ ಮತ್ತು ಪ್ರಸಾರವಾಗಿದೆ.

ಈ ಹಿನ್ನೆಲೆಯಲ್ಲಿ ಸಮಗ್ರ ಕನ್ನಡ ಸಾಹಿತ್ಯ ಯೋಜನೆಯನ್ನು ನಿಗದಿತ ಕಾರ್ಯವಿಧಾನದ ಮೂಲಕ ರೂಪಿಸಿಕೊಂಡು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕೆಂದು ನಾವು ತೀರ್ಮಾನಿಸಿಕೊಂಡೆವು ಇದಕ್ಕಾಗಿ ಈ ಕ್ಷೇತ್ರದಲ್ಲಿ ನುರಿತ ನಾಡಿನ ಹಿರಿಯರನ್ನೊಳಗೊಂಡ ಉನ್ನತ ಸಲಹಾ ಸಮಿತಿ ಹಾಗೂ ಸಂಪನ್ಮೂಲ ವಿದ್ವಾಂಸರನ್ನು ಈ ಬೃಹತ್ ಯೋಜನೆಯ ವ್ಯಾಪ್ತಿಗೆ ಒಳಗೊಳ್ಳಲು ಬಯಸಲಾಯಿತು. ಅದರಂತೆ ನಾಡಿನ ಗಣ್ಯ ವಿದ್ವಾಂಸರು ಈ ಬೃಹತ್ ಯೋಜನೆಯಲ್ಲಿ ಪಾಲ್ಗೊಂಡರೆಂಬುದು ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿ.

ಸಮಗ್ರ ಕನ್ನಡ ಜೈನ ಸಾಹಿತ್ಯ ಸಂಪುಟದ ಯೋಜನೆಯ ಉನ್ನತ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ. ಜವರೇಗೌಡ, ಡಾ. ಜಿ.ಎಸ್. ಶಿವರುದ್ರಪ್ಪ. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಡಾ. ಹಂಪ. ನಾಗರಾಜಯ್ಯ, ಡಾ. ಕಮಲಾ ಹಂಪನಾ, ಡಾ. ಚಂದ್ರಶೇಖರ ಕಂಬಾರ, ಡಾ. ಎಂ.ಎಂ. ಕಲಬುರ್ಗಿ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಎಂ.ಜಿ. ಬಿರಾದಾರ ಮತ್ತು ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರು, ಕರ್ನಾಟಕ ಸರ್ಕಾರದ ಕಂದಾಯ ಮತ್ತು ಮುಜರಾಯಿ ಇಲಾಖೆಯ ಕಾರ್ಯದರ್ಶಿಗಳು ತಮ್ಮ ಸೂಚನೆ ಸಲಹೆಗಳಿಂದ ಈ ಸಂಪುಟಗಳ ಸ್ವರೂಪ ಮತ್ತು ಅನುಷ್ಠಾನಗಳ ಎಲ್ಲಾ ಹಂತಗಳಲ್ಲಿಯೂ ಮಾರ್ಗದರ್ಶನ ಕೊಟ್ಟಿದ್ದಾರೆ. ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರು ಸಮಿತಿಯ ಸಂಚಾಲಕರಾಗಿ ಇಡೀ ಯೋಜನೆಯ ಅನುಷ್ಠಾನದ ಕೆಲಸವನ್ನು ಹೆಜ್ಜೆ ಹೆಜ್ಜೆಗೂ ಸಮರ್ಥವಾಗಿ ನಿರ್ವಹಿಸಿದ್ದಾರೆ. ಕುಲಸಚಿವರಾದ ಪ್ರೊ. ಕರೀಗೌಡ ಬೀಚನಹಳ್ಳಿ ಅವರು ಯೋಜನೆಯ ಆಡಳಿತಾತ್ಮಕ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಡೆಸಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಜೈನಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಂ. ಉಷಾ ಅವರು ಈ ಯೋಜನೆಯನ್ನು ರೂಪಿಸುವಲ್ಲಿ ವಿಶೇಷವಾಗಿ ಸಹಕರಿಸಿದ್ದಾರೆ.

ವಿಶ್ವವಿದ್ಯಾಲಯವು ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಪ್ರಕಟಣ ಸ್ವರೂಪವನ್ನು ಸ್ಥೂಲವಾಗಿ ಹೀಗೆ ಗುರುತಿಸಿಕೊಳ್ಳಲಾಯಿತು. ಇದು ಡೆಮ್ಮಿ ೧/೮ ಆಕಾರದ ಸುಮಾರು ಇಪ್ಪತ್ತು ಸಂಪುಟಗಳಿಂದ ಕೂಡಿರಬೇಕು. ಪ್ರತಿ ಸಂಪುಟವೂ ಅಂದಾಜು ೬೦೦ ಪುಟಗಳಾಗಿರಬೇಕು. ಸಂಪುಟದ ಸಂಪಾದಕರು ಆಯಾ ಸಂಪುಟಕ್ಕೆ ಸೂಕ್ತವಾದ ಕವಿ ಕಾವ್ಯ ಪರಿಚಯ, ಚಾರಿತ್ರಿಕ ಹಾಗೂ ಸಾಹಿತ್ಯಿಕ ಮಹತ್ವ ಇತ್ಯಾದಿ ವಿವರಗಳನ್ನು ಒಳಗೊಂಡ ಪ್ರಸ್ತಾವನೆ ಬರೆಯಬೇಕೆಂದು ನಿರ್ಣಯಿಸಲಾಯಿತು. ಸಂಪುಟಗಳು ಜನಪ್ರಿಯ ಆವೃತ್ತಿ ಆಗಿರುವುದರಿಂದ ಪಠ್ಯಗಳಲ್ಲಿ ಪಾಠಾಂತರಗಳಲ್ಲಿ ನೀಡಬೇಕಾಗಿಲ್ಲ. ಪ್ರತಿಯೊಬ್ಬ ಕವಿಯ ಸಮಗ್ರ ಕಾವ್ಯವನ್ನು ಒಂದು ಸಂಪುಟದಲ್ಲಿ ತರುವುದೆಂದು ಸಮಿತಿ ತೀರ್ಮಾನಿಸಿತು. ವಸ್ತು ವಿಷಯಕ್ಕೆ ಅನುಗುಣವಾಗಿ ಬೇರೆ ಬೇರೆ ಎರಡೆರಡು ಕಾವ್ಯಗಳನ್ನು ಒಂದೇ ಸಂಪುಟದಲ್ಲಿ ಅಳವಡಿಸುವುದು ಸೂಕ್ತವೆಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಈಗಾಗಲೇ ಸಂಪಾದನೆಗೊಂಡು, ಪ್ರಕಟವಾಗಿರುವ ಕಾವ್ಯಗಳನ್ನು ಮೊದಲ ಹಂತದಲ್ಲಿ ತೆಗೆದುಕೊಳ್ಳುವುದೆಂದೂ ಅಪೂರ್ವ ಕೃತಿಗಳನ್ನು ಈ ಮಾಲೆಯಲ್ಲಿ ಸೇರಿಸಿಕೊಳ್ಳುವುದೆಂದೂ ನಿಶ್ಚಯಿಸಲಾಯಿತು. ಪಂಪ, ಪನ್ನ, ರನ್ನ, ಜನ್ನ, ನಾಗವರ್ಮ, ನಯಸೇನ, ಸಾಳ್ವ ಮುಂತಾದವರ ಕಾವ್ಯಗಳು ಈಗಾಗಲೇ ಮುದ್ರಣಗೊಂಡಿವೆ. ಆದರೂ ಪಾಠಕ್ಲೇಶ ಅರ್ಥಕ್ಲೇಶಗಳು ಹೇಗೋ ಉಳಿದುಬಿಟ್ಟಿವೆ. ಆದುದರಿಂದ ಎಲ್ಲ ಮುದ್ರಿತ ಪಾಠಗಳನ್ನು ಗಮನಿಸಿ ಈ ಎಲ್ಲ ಕ್ಲೇಶಗಳನ್ನು ನಿವಾರಿಸಿ ಸರ್ವಪ್ರತಿಪಾಠಗಳನ್ನು

ಇಟ್ಟುಕೊಳ್ಳುವುದು ಅಗತ್ಯವೆಂದು ಸಮಿತಿ ಭಾವಿಸಿತು. ಗ್ರಂಥದ ಕೊನೆಗೆ ಶಬ್ದಾರ್ಥಕೋಶ, ಪಾರಿಭಾಷಿಕಕೋಶ, ಸಹಾಯಕ ಸಾಹಿತ್ಯ ನೀಡುವುದು ಅಗತ್ಯವೆಂದು ಸಂಪಾದಕರಿಗೆ ಬಿನ್ನವಿಸಿಕೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಇಪ್ಪತ್ತು ಸಂಪುಟಗಳು ನಿಮ್ಮ ಎದುರಿಗಿವೆ. ಶ್ರಮಸಾಧ್ಯವಾದ ಇಂಥ ಕಾವ್ಯಗಳನ್ನು ಸಂಪಾದಿಸಿಕೊಟ್ಟ ಕನ್ನಡದ ಹಿರಿಯ ವಿದ್ವಾಂಸರಾದ ಎಲ್ಲ ಸಂಪಾದಕರಿಗೆ ಕೃತಜ್ಞತೆ ಹೇಳುವುದು ಮಾತ್ರ ಈಗ ನಮಗೆ ಸಾಧ್ಯವಾಗಿದೆ.

ಹದಿನೈದನೆಯ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಜೈನಧರ್ಮವು ಪ್ರಾದೇಶಿಕವಾಗಿ ಸ್ಥಳೀಯ ಅರಸುಮನೆತನಗಳ ಆಶ್ರಯವನ್ನು ಪಡೆಯುವುದರೊಂದಿಗೆ, ಮಧ್ಯಯುಗೀನ ಕಾಲಘಟ್ಟದ ಕರ್ನಾಟಕದ ಆಶಯಗಳಿಗನುಗುಣವಾಗಿ ಬದಲಾವಣೆಗಳಿಗೆ ಒಳಗಾಯಿತು. ಇಂತಹ ಸನ್ನಿವೇಶದಲ್ಲಿ ಹೆಚ್ಚು ಹೆಚ್ಚು ಪ್ರಾದೇಶಿಕ ಕವಿಗಳು ಹುಟ್ಟಿಕೊಂಡು ಜೈನಧರ್ಮದ ಪುರಾಣ ಕಾವ್ಯಗಳನ್ನು ಜನಪ್ರಿಯ ಛಂದೋರೂಪಗಳಲ್ಲಿ ಮತ್ತು ದೇಸಿ ಶೈಲಿಯಲ್ಲಿ ಮಧ್ಯಮ ವರ್ಗದ ಜನರಿಗೆ ತಲುಪಿಸುವ ಕಾರ್ಯವನ್ನು ಸಮರ್ಥವಾಗಿ ಮಾಡಿದರು. ಪಶ್ಚಿಮಘಟ್ಟದ ತಪ್ಪಲಿನ ಮಲೆನಾಡಿನ ಸೆರಗಿನ ನಗಿರೆಯ ಸಾಳ್ವವಂಶದ ಅರಸನ ಆಶ್ರಮದಲ್ಲಿ ಕಾವ್ಯರಚನೆ ಮಾಡಿದ ಸಾಳ್ವಕವಿ ಇಂತಹ ಒಂದು ಮಾದರಿ. ನೇಮಿನಾಥ ಚರಿತೆ, ರಸರತ್ನಾಕರಂ, ಶಾರದಾವಿಲಾಸಂ ಮತ್ತು ವೈದ್ಯಸಾಂಗತ್ಯವೆಂಬ ನಾಲ್ಕು ಕೃತಿಗಳ ಕರ್ತೃ ಸಾಳ್ವಕವಿ. ಪಾಂಡಿತ್ಯವನ್ನು ಸಂಪಾದಿಸಿಕೊಂಡು ಅದನ್ನು ಆಸಕ್ತ ಓದುಗ ವರ್ಗಕ್ಕೆ ಮುಟ್ಟಿಸುವ ಶ್ರದ್ಧಾಪೂರ್ವಕ ಪ್ರಯತ್ನ ಮಾಡಿದವನು ಕವಿ ಸಾಳ್ವ.

ಸಾಳ್ವಭಾರತ ಎಂದು ಜನಪ್ರಿಯವಾಗಿ ಕರೆಯಲಾಗುವ **ನೇಮಿನಾಥ ಚರಿತೆ**ಯ ಆಯ್ಕೆ ಹದಿನೈದನೆಯ ಶತಮಾನದ ಮಧ್ಯಯುಗೀನ ಕನ್ನಡ ಸಾಹಿತ್ಯದ ಜನಮುಖಿ, ರಸಮುಖಿ ಮತ್ತು ಭಕ್ತಿಮುಖಿ ಧಾರೆಗಳಿಗೆ ಅನುಗುಣವಾಗಿದೆ. ಕನ್ನಡದ ಚಂಪೂಕಾವ್ಯ ಪರಂಪರೆಯಲ್ಲಿ ಕಾಣಿಸಿಕೊಂಡ ನೇಮಿನಾಥ ಪುರಾಣವು ಮಧ್ಯಯುಗೀನ ಕಾಲದಲ್ಲಿ ಸಾಳ್ವ, ಮೂರನೆಯ ಮಂಗರಸ, ಬ್ರಹ್ಮಣಾಂಕರಲ್ಲಿ ವರ್ಣಕ ಕಾವ್ಯಗಳಾಗಿ ಮತ್ತು ಜನಪದ ಸಾಹಿತ್ಯದಲ್ಲಿ ಕಥನಗೀತೆಗಳ ಹಾಗೂ ಬಿಡಿಹಾಡುಗಳ ರೂಪದಲ್ಲಿ ಕಾಣಿಸಿ ಕೊಂಡಿದೆ. ಭಾರತ ಕತೆ ಮತ್ತು ಭಾಗವತ ಕತೆಯ ಮಿಶ್ರಣ ಇರುವ ಶ್ರೀಕೃಷ್ಣಕೇಂದ್ರಿತ ಹರಿಕಥೆಯ ಪ್ರಧಾನ ಆಶಯವುಳ್ಳ ಈ ಕಥಾವಸ್ತು, ಜೈನಧರ್ಮದ ಪರಿವೇಶದಲ್ಲಿ ನೇಮಿಜಿನನ ಕಥನವಾಗಿ ಜನಪ್ರಿಯವಾಗಿದೆ. ಯಕ್ಷಗಾನದ ಬಹುತೇಕ ಪ್ರಸಂಗಗಳ ಕಥಾವಸ್ತು ಭಾರತ ಮತ್ತು ಕೃಷ್ಣಸಂಬಂಧಿಯಾಗಿರುವುದನ್ನು ಗಮನಿಸಿದರೆ- ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ಜನಪದ ಜೈನರಸಿಕರು ನೇಮಿನಾಥನ ಕಾವ್ಯದಿಂದ ಆಕರ್ಷಿತವಾಗಿರುವುದು ಸಹಜವೇ ಆಗಿದೆ. ಸಾಳ್ವಭಾರತದ ಬೆನ್ನಿಗೇ ಬಂದ ರತ್ನಾಕರ ಕವಿಯ 'ಭರತೇಶ ವೈಭವ' ಕಾವ್ಯದ ವಸ್ತು ಮತ್ತು ನಿರ್ವಹಣೆಯಲ್ಲಿ ಇಲ್ಲಿ ಗಮನಿಸಬೇಕು. ಲೌಕಿಕ ರಸವಾದ ಶೃಂಗಾರ, ಆಧ್ಯಾತ್ಮಿಕರಸವಾದ ಭಕ್ತಿ ಏಕಕಾಲಕ್ಕೆ ನಿಜವಾಗುವ ವಿಶಿಷ್ಟ ಬಗೆಯನ್ನು ರತ್ನಾಕರನ ಕಾವ್ಯದಲ್ಲಿ ಕಾಣಬಹುದು. ನಿಜವಾದ ಅರ್ಥದಲ್ಲಿ ಮೂಡಬಿದಿರಿಗೆ ಸಾಕಷ್ಟು ಸಮೀಪದಲ್ಲಿದ್ದ ನಗಿರೆಯ ಸಾಳ್ವಕವಿ ಇದನ್ನು ಮೊದಲ ಬಾರಿ ಎನ್ನುವಂತೆ ಜೈನ ಕಾವ್ಯದ ಚೌಕಟ್ಟಿನಲ್ಲಿ ಪ್ರತಿಪಾದನೆ ಮಾಡಿದ್ದಾನೆ. ಈ ವಿಚಾರಕ್ಕೆ ಪೂರಕವಾಗಿ ಸಾಳ್ವನ **ರಸರತ್ನಾಕರ**ವನ್ನು ಗಮನಿಸಬಹುದು. ಅಲಂಕಾರ ಗ್ರಂಥವಾದ 'ರಸರತ್ನಾಕರ' ಭಾರತೀಯ ಕಾವ್ಯಮೀಮಾಂಸೆಯ ರಸಪ್ರಸ್ಥಾನವನ್ನು ಉತ್ಸಾಹದಿಂದ ಹಾಗೂ ಉದಾಹರಣೆಗಳಿಂದ ವಿವರವಾಗಿ ನಿರೂಪಿಸುವ ಕನ್ನಡ ಲಕ್ಷಣಗ್ರಂಥ. ಈ ಕೃತಿಯಲ್ಲಿ ಶೃಂಗಾರ ರಸವನ್ನು ಪೂರ್ಣ ಪ್ರಮಾಣದಲ್ಲಿ ವಿವರಿಸುವ ಸಾಳ್ವನ ಉತ್ಸಾಹ ಮತ್ತು ಆಸಕ್ತಿಯನ್ನು ಗಮನಿಸಬೇಕು. ಸಾಳ್ವನ **ಶಾರದಾವಿಲಾಸಂ** ಕೃತಿ ಈಗ ನಮಗೆ ದೊರೆಯುತ್ತಿರುವ ಭಾಗದಲ್ಲಿ ಧ್ವನಿಪ್ರಕರಣಕ್ಕೆ ಮಾತ್ರ ಸೀಮಿತವಾಗಿದೆ. ರಸತತ್ತ್ವಕ್ಕೆ ಪೂರಕವಾದ ಧ್ವನಿತತ್ತ್ವ ಇರುವ ಕಾರಣ ಸಾಳ್ವನ ಈ ಎರಡೂ ಕೃತಿಗಳನ್ನು ಅವನ ಕಾವ್ಯನಿರ್ಮಾಣ ಮತ್ತು ಕಾವ್ಯತತ್ತ್ವದ ಆಶಯದ ಭಾಗವಾಗಿ ಪರಿಗಣಿಸಬೇಕು.

'ನೇಮಿನಾಥ ಚರಿತೆ' ಕಾವ್ಯದಲ್ಲಿ ಸಾಳ್ವ ಬಳಸುವ ಛಂದೋಬಂಧಗಳು ಪೂರ್ಣವಾಗಿ ದೇಸಿಮಟ್ಟುಗಳೇ. ಷಟ್ಪದಿ ಛಂದಸ್ಸಿನಲ್ಲಿರುವ ಈ ಕಾವ್ಯದಲ್ಲಿ ಬಹುತೇಕ ಕಾವ್ಯಭಾಗ ಭಾಮಿನಿ ಷಟ್ಪದಿಯಲ್ಲಿಯೂ ಉಳಿದ ಕೆಲವುಭಾಗ ವಾರ್ಧಕ ಮತ್ತು ಪರಿವರ್ಧಿನಿ ಷಟ್ಪದಿಗಳಲ್ಲಿಯೂ

ರಚನೆಯಾಗಿದೆ. ಆತನ **ವೈದ್ಯಸಾಂಗತ್ಯ** ಎಂಬ ಗ್ರಂಥ ಸಾಂಗತ್ಯ ದೇಸಿಮಟ್ಟಿನಲ್ಲಿ ರಚಿತವಾಗಿದೆ. ಹೀಗೆ ಷಟ್ಪದಿ-ಸಾಂಗತ್ಯದಂಥ ಕನ್ನಡ ಛಂದೋಬಂಧ ಗಳಲ್ಲಿ ಶೃಂಗಾರ - ಭಕ್ತಿ ಭಾವಗಳನ್ನು ನಾಟಕೀಯ ಶೈಲಿಯಲ್ಲಿ ಅಭಿವ್ಯಕ್ತಿಸಿದವನು ಸಾಳ್ವಕವಿ. ಇವನು ಜನಸಾಮಾನ್ಯರ ಆಸಕ್ತಿ ಮತ್ತು ಅಗತ್ಯಗಳನ್ನು ಬಲ್ಲವನಾಗಿದ್ದನು. ಹೀಗೆ ಶಾಸ್ತ್ರಾಭ್ಯಾಸವನ್ನು ಮತ್ತು ಕಾವ್ಯಾಭ್ಯಾಸವನ್ನು ಜತೆಜತೆಗೆ ಸರಿದೂಗಿಸುತ್ತ, ಜೈನಧರ್ಮದ ಸ್ಥೂಲ ಪರಿವೇಶವನ್ನು ಇಟ್ಟುಕೊಂಡು ಸ್ಥಳೀಯ ಸಂಸ್ಕೃತಿಯೊಂದಿಗೆ ಸಂವಹನ ಮಾಡುತ್ತ, ಪ್ರಾದೇಶಿಕ ಪ್ರತಿಭೆಯ ಉತ್ತಮ ನಿದರ್ಶನವಾಗಿ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಕವಿಸಾಳ್ವನು ಸ್ಥಾನ ಪಡೆಯುತ್ತಾನೆ.

ಗೇರುಸೊಪ್ಪೆ ಜಲಪಾತದ ಭೋರ್ಗರೆತ ಹಾಗೂ ಮಲೆನಾಡಿನ ಕಾಡಿನ ಮರ್ಮರಗಳ ನಡುವೆ ಜೈನಕಾವ್ಯಗಳ ಅಭ್ಯಾಸ ಮತ್ತು ಲಕ್ಷಣ ಗ್ರಂಥಗಳ ಪಠಣ ನಡೆಸುತ್ತ ಉಲ್ಲಾಸದ ಆಹ್ಲಾದದ ಆವರಣವನ್ನು ನಿರ್ಮಾಣಮಾಡಿ ತನ್ನ ಸರಳ ಆಕರ್ಷಕ ಕೃತಿಗಳ ಮೂಲಕ ಜಿನಧರ್ಮ ಮತ್ತು ಕಾವ್ಯಧರ್ಮದ ಸೆಲೆಯನ್ನು ಬತ್ತದಂತೆ ಉಳಿಸಿದ ಸಾಳ್ವಕವಿ ಜಿನಧರ್ಮದ ಜನಮುಖಿಧಾರೆಯ ಪ್ರಾತಿನಿಧಿಕ ಕವಿಯಾಗಿ ನಮಗೆ ಮುಖ್ಯನಾಗುತ್ತಾನೆ.

ಸಾಳ್ವಕವಿಯ ನೇಮಿನಾಥಚರಿತೆ, ರಸರತ್ನಾಕರಂ ಮತ್ತು ಶಾರದಾವಿಲಸಾಸಂ ಕೃತಿಗಳನ್ನು ಕನ್ನಡದ ಹಿರಿಯ ಪ್ರಾಧ್ಯಾಪಕರೂ ಜೈನ ಸಂಸ್ಕೃತಿಯ ಅಧ್ಯಯನಶೀಲರೂ ಆದ ಡಾ. ಎಂ.ಎ. ಜಯಚಂದ್ರನು ಪರಿಶ್ರಮ ಮತ್ತು ಪ್ರೀತಿಯಿಂದ ಸಂಪಾದಿಸಿಕೊಟ್ಟಿದ್ದಾರೆ. ಕನ್ನಡ ಜನಪದ ಕತೆಗಳನ್ನು ಆರಂಭದ ಕಾಲಕ್ಕೆ ಸಂಪಾದನೆ ಮಾಡಿಕೊಟ್ಟಿರುವ ಡಾ. ಎಂ.ಎ. ಜಯಚಂದ್ರ ಅವರು ಜನಪದ ಮತ್ತು ಜಿನಪದ ಸಾಹಿತ್ಯ ಅಧ್ಯಯನಗಳಲ್ಲಿ ವಿಶೇಷ ಪರಿಣತಿ ಉಳ್ಳವರು. ಆದ್ದರಿಂದಲೇ ದೇಸಿ ಸಂಸ್ಕೃತಿಯ ವಿನ್ಯಾಸವುಳ್ಳ ಸಾಳ್ವನ ಕೃತಿಗಳನ್ನು ಅವರು ಸಂಪಾದಿಸಿರುವುದು ಔಚಿತ್ಯಪೂರ್ಣವಾಗಿದೆ. ಸಾಳ್ವನ ಕಾವ್ಯ ಮತ್ತು ಶಾಸ್ತ್ರ ಗ್ರಂಥಗಳನ್ನು ಜತೆಜತೆಗೆ ಇರಿಸಿ ಕನ್ನಡ ಜೈನಸಾಹಿತ್ಯದ ಇನ್ನೊಂದು ಮಗ್ಗುಲಿನ ಕಡೆಗೆ ಅವರು ನಮ್ಮ ಗಮನವನ್ನು ಸೆಳೆದಿದ್ದಾರೆ. ಡಾ.ಎಂ.ಎ.ಜಯಚಂದ್ರ ಅವರ ಅಚ್ಚುಕಟ್ಟಾದ ಸಂಪಾದನೆಗಳ ಸಾಧನೆಗಾಗಿ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಬಿ.ಎ. ವಿವೇಕ ರೈ**
ಕುಲಪತಿ

## ಸಂಪಾದಕರ ನುಡಿ

**'ನೇಮಿನಾಥ ಚರಿತೆ'**ಯನ್ನು ಏಕೈಕ ಓಲೆಗರಿ ಪ್ರತಿಯಿಂದ ಸಿದ್ಧಪಡಿಸಿ, ೧೯೭೬ರಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಮೂಲಕ, 'ಸಾಳ್ವಭಾರತ' ಎಂಬ ಹೆಸರಿನಿಂದ ಪ್ರೊ.ಹಂಪ.ನಾಗರಾಜಯ್ಯನವರು ಮೊದಲಬಾರಿಗೆ ಪ್ರಕಟಿಸಿದರು. ಅಂದಿನಿಂದ ಇಂದಿನವರೆಗೂ ಉತ್ತಮ ಸಂಪ್ರತಿಗಳು ದೊರೆಯದೆ ಇರುವುದರಿಂದ ಶಾಸ್ತ್ರೀಯವಾಗಿ ಗ್ರಂಥ ಸಂಪಾದನೆ ಮಾಡಲು ಸಾಧ್ಯವಾಗಿಲ್ಲ. ಜನಪ್ರಿಯವಾಗಿರುವ 'ಸಾಳ್ವಭಾರತ' ಎಂಬ ಹೆಸರು ಕೃತಿಯಲ್ಲಿ ಎಲ್ಲೂ ಉಕ್ತವಾಗಿರುವುದರಿಂದ, ಆ ಹೆಸರನ್ನು ಕೈಬಿಟ್ಟು, ಕವಿಯ ಆಶಯದಂತೆ 'ನೇಮಿನಾಥ ಚರಿತೆ' ಎಂಬ ಹೆಸರನ್ನು ಇಲ್ಲಿ ಬಳಸಲಾಗಿದೆ.

೧೯೭೬ರ ಮುದ್ರಣದಲ್ಲಿ ಕೃತಿಯನ್ನು ಪರ್ವವಾಗಿ ವಿಂಗಡಿಸಿರಲಿಲ್ಲ. ಈಗ ವಿಂಗಡಿಸಲಾಗಿದೆ. ಹಿಂದಿನ ಮುದ್ರಣದಲ್ಲಿ ೬೩ ಮತ್ತು ೬೪ ನೇ ಸಂಧಿಗಳಿಗೆ ಕ್ರಮವಾಗಿ ೬೪ ಮತ್ತು ೬೫ನೇ ಸಂಖ್ಯೆಯಲ್ಲಿ ನೀಡಿದ್ದರಿಂದ, ೬೩ನೇ ಸಂಧಿ ನಷ್ಟವಾಗಿದೆ ಎಂದೂ, ಗ್ರಂಥದಲ್ಲಿ ಒಟ್ಟು ೬೫ ಸಂಧಿಗಳಿವೆಯೆಂಬ ಭ್ರಮೆಯನ್ನು ಉಂಟುಮಾಡಿತ್ತು. ಈಗ ಆ ದೋಷವನ್ನು ಸರಿಪಡಿಸಲಾಗಿದೆ. ಷಟ್ಪದಿಯ ೩ ಮತ್ತು ೬ನೇ ಪಾದಗಳ ಕೊನೆಯ ಅಕ್ಷರಕ್ಕೆ ಗುರುವಿನ ಸ್ಥಾನವಿದ್ದರೂ, ಮುದ್ರಣದಲ್ಲಿ ಅನಾವಶ್ಯಕವಾಗಿ ದೀರ್ಘವಾಗಿ ತೋರಿಸಲಾಗಿತ್ತು. ಅವುಗಳನ್ನು

ಹ್ರಸ್ವಗೊಳಿಸಿ ಸರಿಪಡಿಸಲಾಗಿದೆ. ಅನೇಕ ಕಡೆಯಿದ್ದ ಕಾಗುಣಿತದ ತಪ್ಪುಗಳನ್ನು ಮತ್ತು ಮುದ್ರಣದ ದೋಷಗಳನ್ನು ಸಾಧ್ಯವಾದಷ್ಟು ಈ ಆವೃತ್ತಿಯಲ್ಲಿ ಸರಿಪಡಿಸಲಾಗಿದೆ.

ಪ್ರೊ. ಹಂಪನಾ ಅವರು ತಮ್ಮ ಗ್ರಂಥದಲ್ಲಿ ನೀಡಿದ್ದ 'ಜೈನಾಚಾರ್ಯರು' ಮತ್ತು 'ಪಾರಿಭಾಷಿಕ ಶಬ್ದಗಳು' ಎಂಬ ಅನುಬಂಧಗಳನ್ನು ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಸಾಳ್ವಕವಿಯ ಈ ಕಾವ್ಯದ ಆದ್ಯ ಸಂಪಾದಕರಾದ ಪ್ರೊ.ಹಂಪನಾ ಅವರಿಗೆ ನಾನು ಆಭಾರಿಯಾಗಿದ್ದೇನೆ.

**'ರಸರತ್ನಾಕರಂ'** ಎಂಬ ಕೃತಿಯನ್ನು ೧೯೩೨ರಲ್ಲಿ ಶ್ರೀ ಎ.ವೆಂಕಟರಾವ್ ಮತ್ತು ಶ್ರಿ ಎಚ್. ಶೇಷ ಅಯ್ಯಂಗಾರ್ ಅವರ ಸಂಪಾದಕತ್ವದಲ್ಲಿ, ಮದ್ರಾಸು ವಿಶ್ವವಿದ್ಯಾಲಯದ ಕಡೆಯಿಂದ ಪ್ರಕಟವಾಗಿತ್ತು. ಅನಂತರ ಇತರು ಮೂರು ಪ್ರತಿಗಳ ಸಹಾಯದಿಂದ ಪ್ರೊ. ಎಚ್.ಕೆ. ನರಸಿಂಹೇಗೌಡರು ಪಾಠಾಂತರಗಳೊಂದಿಗೆ ಈ ಕೃತಿಯನ್ನು ಸಂಪಾದಿಸಿದರು. ಇದು ೧೯೭೨ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕಡೆಯಿಂದ ಪ್ರಕಟವಾಯಿತು. ಇದನ್ನು ಆಧರಿಸಿ ಈ ಜನಪ್ರಿಯ ಆವೃತ್ತಿಯನ್ನು ಸಿದ್ಧಪಡಿಸಲಾಗಿದೆ. ಈ ಕೃತಿಯ ಆದ್ಯ ಸಂಪಾದಿತ ರತ್ನತ್ರಯರಿಗೆ ನಾನು ಆಭಾರಿಯಾಗಿದ್ದೇನೆ.

ಸಾಳ್ವಕವಿಯ **'ಶಾರದಾವಿಲಾಸಂ'** ಎಂಬ ಉಪಲಬ್ಧ ಅಪೂರ್ಣ ಕೃತಿಯನ್ನು ಹಿಂದೆಲ್ಲ 'ರಸರತ್ನಾಕರಂ' ಕೃತಿಯ ಅನುಬಂಧವಾಗಿಯೇ ಅಚ್ಚು ಮಾಡಲಾಗುತ್ತಿತ್ತು. ಆದರೆ ಓದುಗರ ಗಮನವನ್ನು ವಿಶೇಷವಾಗಿ ಸೆಳೆಯುವುದಕ್ಕಾಗಿ ಕವಿಯ ಮೂರನೆಯ ಕೃತಿಯ ರೂಪದಲ್ಲಿ ಪ್ರತ್ಯೇಕವಾಗಿ ಇಲ್ಲಿ ಮುದ್ರಿಸಲಾಗಿದೆ.

ಸಮಗ್ರ ಕನ್ನಡ ಜೈನ ಸಾಹಿತ್ಯದಲ್ಲಿ ಪ್ರಕಟಿಸುವ ಹೊಣೆಹೊತ್ತಿರುವ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಅವರು, ಈ 'ಸಾಳ್ವ ಸಂಪುಟ'ವನ್ನು ಸಿದ್ಧಪಡಿಸಿ ಕೊಡಲು ಸದಾವಕಾಶ ನೀಡಿದ್ದಕ್ಕಾಗಿ ಅವರಿಗೆ -

ಕಾಲಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತಾ, ಮುದ್ರಣದ ವ್ಯವಸ್ಥೆಯನ್ನು ತುಂಬ ಶ್ರದ್ಧೆಯಿಂದ ಮಾಡಿರುವ, ಉತ್ಸಾಹದ ಚಿಲುಮೆಯಂತಿರುವ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರಿಗೆ-

ವಿಶೇಷವಾಗಿ ಈ ಯೋಜನೆಯನ್ನು ಪಾಲ್ಗೊಳ್ಳಲು ಪ್ರೇರಣೆ ನೀಡಿ, ಸಹಾಯಕ ಸಾಮಗ್ರಿಗಳನ್ನು ಒದಗಿಸಿ ಪ್ರೋತ್ಸಾಹಿಸಿದ ಆತ್ಮೀಯರೂ ಹಿರಿಯರೂ ಆದ ಡಾ.ಹಂಪ. ನಾಗರಾಜಯ್ಯ ಅವರಿಗೆ -

ಅಕ್ಷರ ಜೋಡಣೆ ಮಾಡಿಕೊಟ್ಟು ಶೀಘ್ರವಾಗಿ ಅಂದ ಚಂದವಾಗಿ ಗ್ರಂಥವನ್ನು ಮುದ್ರಿಸಿರುವ ಬೆಂಗಳೂರಿನ ಲಕ್ಷ್ಮಿ ಮುದ್ರಣಾಲಯದ ಮಾಲೀಕರಿಗೆ-

ನನ್ನ ಅನಂತಾನಂತ ವಂದನೆಗಳು.

**ಡಾ. ಎಂ.ಎ. ಜಯಚಂದ್ರ**

# ಪ್ರಸ್ತಾವನೆ

ಸಾಳುವ ವಂಶಜರು ಕನ್ನಡ ಸಾಹಿತ್ಯ, ಸಂಸ್ಕೃತಿ ಹಾಗೂ ವಿಶೇಷಾಗಿ ಜೈನ ಧರ್ಮಕ್ಕೆ ಮಹತ್ತರ ಸೇವೆಯನ್ನು ಸಲ್ಲಿಸಿದ್ದಾರೆ. ಇಂಥ ಸಾಳುವ ವಂಶ ಗಗನಾಂಗಣದಲ್ಲಿ ಮೂಡಿಬಂದ ತೇಜಸ್ವಿ ದಿನಕರ, ಸಾಳ್ವಕವಿ. ಈ ಸಾಳ್ವಮಲ್ಲ ಮತ್ತು ಸಾಳ್ವದೇವ ಎಂಬ ಇಬ್ಬರು ಪ್ರಭಾವಶಾಲಿ ರಾಜರ ಕಾಳದಲ್ಲಿದ್ದು, ಅವರಿಂದ ರಾಜಮನ್ನಣೆ ಪಡೆದವನು. ಈ ಕವಿಗೆ ಆಶ್ರಯನೀಡಿದ ಅರಸರ ಬಗ್ಗೆ ವಿಪುಲ ಮಾಹಿತಿಗಳು ಶಾಸನಗಳು ಹಾಗೂ ಸಾಹಿತ್ಯಕೃತಿಗಳಿಂದ ದೊರೆಯುತ್ತವೆ. ಅವುಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಅವಲೋಕಿಸಬಹುದಾಗಿದೆ.

ತೌಳವ-ಹೈವ-ಕೊಂಕಣ ಪ್ರದೇಶದ ರಾಜಧಾನಿ ನಗಿರೆ ನಗರ. ಈ ನಗರಕ್ಕೆ ಗೇರುಸೊಪ್ಪೆ, ಕ್ಷೇಮಪುರ, ಭಲ್ಲಾತಕೀಪುರ ಎಂಬ ಹೆಸರುಗಳಿದ್ದವು. ಇದು 'ವಸುಧೆ ಕೀರ್ತಿಪ' ನಗರವಾಗಿತ್ತು. ಇಲ್ಲಿ ಎಪ್ಪತ್ತೆರಡು ಜಿನಬಸದಿಗಳಿದ್ದವು. ಅಲ್ಲದೆ ಸಮಂತಭದ್ರ ಪೀಠವೊಂದಿತ್ತು. ಆ ನಗರವನ್ನು ಸಾಳ್ವಕವಿ ಹೀಗೆ ಬಣ್ಣಿಸಿದ್ದಾನೆ -

*ಜಿನಸಮಯ ವಾರಾಶಿಚಂದ್ರರು | ಜಿನರ ಪೂಜೆಗೆ ಶಕ್ರರೆಲ್ಲರು |*
*ವಿನುತ ದಾನಕ್ಕೆಲ್ಲರು ಶ್ರೇಯಾಂಸರೆನಿಸುವರು ||*
*ಅನಘವೃತ್ತರು ಸಾಳ್ವರಾಜೇಂ | ದ್ರನ ನಗಿರ ನಗರದೊಳಗಾ ಧನ*
*ದನನಿಳಿಪ ಧನಪಾಲರಗಣಿತ ಭವ್ಯರೊಪ್ಪಿದರು || (೧-೨೨ ||*

ಆ ಸಾಳ್ವರಾಜೇಂದ್ರನನ್ನು ಸಾಳ್ವಮಲ್ಲ, ಸಾಳ್ವಮಲ್ಲರಾಯ, ಮಲ್ಲಿರಾಯ, ಸಾಳ್ವಮಲ್ಲೇಶ, ಮಲ್ಲಿಭೂಪಾಲ - ಎಂದು ಮೊದಲಾದ ಹೆಸರುಗಳಿಂದ ಗುರುತಿಸಲಾಗಿದೆ. ಈತನನ್ನು ನಾನಾ ಬಗೆಯಲ್ಲಿ ಶಿಲಾಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ಪ್ರಶಂಸಿವೆ. ಈತನಿಗೆ ಕಠಾರಿ ತ್ರಿನೇತ್ರ, ತ್ರಿಣಯನಪಟಭಲ್ಲ, ಭಾವಜ್ಞ ಚಕ್ರೇಶ್ವರ, ರತ್ನತ್ರಯಾರಾಧಕ, ಜಿನಧರ್ಮಧ್ವಜ ಸ್ಥಾಪನಾಚಾರ್ಯ, ಜಿನರಥಯಾತ್ರಾ ಪ್ರವರ್ತಕ ಮೊದಲಾದ ಬಿರುದುಗಳಿದ್ದುವೆಂದು ತಿಳಿದು ಬರುತ್ತದೆ. ಶಾಸನವೊಂದರಲ್ಲಿ ಈತನನ್ನು ಚಾಗದಲ್ಲಿ ಬಲಿ, ಕರ್ಣ, ಭೋಜರಾಜ, ಮಾಂಧಾಂತರಿಗಿಂತ ದೊಡ್ಡವನೆಂದು ಬಣ್ಣಿಸಲಾಗಿದೆ. ಈತನ 'ಕೀರ್ತಿ ಡಿಂಡಿಮ' ವನ್ನು ಸಾರುವ ಮತ್ತೊಂದು ಶಾಸನಪದ್ಯ ಹೀಗಿದೆ-

*ಪರಮಜಿನೇಂದ್ರಭಕ್ತಿಗೆ ಸದುಕ್ತಿಗೆ ಚಾಗಕೆ ಭೋಗಕಾತನೊಳ್*
*ಸಿರಿಗೆ ಪರಾಕ್ರಮಕ್ಕೆ ಕಡು ನನ್ನಿಗೆ ಸತ್ಕಳೆಗಂ ತ್ರಿಲೋಕದೊಳ್*
*ಸರಿದೊರೆ ಪಾಡುತೋಡು ಪಡಿಪಾಸಟಿ ಈಡೆಣೆ ಇಲ್ಲೆನುತ್ತಹಂ*
*ಕರಿಸಿ ಪೊಗಳ್ದು ಬಾಜಿಸಿತು ಸಾಳುವ ಕೀರ್ತಿ ಡಿಂಡಿಮಂ ||*

ಈತನನ್ನು 'ಕಾಳಗದಲ್ಲಿ ಶಕ್ರಸುತನ್, ಈವೆಡೆಯಲ್ಲಿ ಇನಸೂನು, ಮೇದಿನೀ ಪಾಳನದಲ್ಲಿ ರಾಮನು' ಎಂದು ಹೊಗಳುತಿದ್ದರು. ಇವನನ್ನು ಸಾಳ್ವಕವಿಯು, ತನ್ನ ನೇಮಿನಾಥ ಚರಿತೆಯಲ್ಲಿ ಹೀಗೆ ಸ್ಮರಿಸಿದ್ದಾನೆ -

*ಪ್ರಣುತನಾ ತ್ರಿಭುವನ ಕಠಾರಿ | ತ್ರಿಣಯನಂ ಸಮ್ಯಕ್ತ್ವ ಚೂಡಾ |*
*ಮಣಿ ವಿಮಲ ಜಿನದೇವರಥಯಾತ್ರಾ ಪ್ರಭಾವಕನು |*
*ಗುಣವಿಧಾನಂ ತ್ಯಾಗವಿದ್ಯೆಯೊ | ಳೆಣೆಯದಾರ್ಯೆ ಜಗದ ಗುರುವೆನೆ |*
*ಫಣಿಪಭೋಗದ ಸಾಳ್ವಮಲ್ಲ ನರೇಂದ್ರನದನಾಳ್ವ || (೧-೧೯)*

ಅಲ್ಲದೆ ಕವಿಯು ತನ್ನ 'ಶಾರದಾವಿಲಾಸ' ಎಂಬ ಅಲಂಕಾರ ಗ್ರಂಥದ ಸೂತ್ರಗಳಿಗೆ ನೀಡಿರುವ ೩-೪ ಲಕ್ಷ್ಯ ಪದ್ಯಗಳಲ್ಲಿ ಸಾಳ್ವಮಲ್ಲ ನರೇಂದ್ರನನ್ನು ಸ್ಮರಿಸಿ, ಅವನ ಗುಣಗಾನ ಮಾಡಿದ್ದಾನೆ. ಅಲ್ಲಿಯ ಒಂದೆರಡು ಪದ್ಯಗಳು ಹೀಗಿವೆ -

ನಿರುಪಮ ಸಾಳುವಮಲ್ಲನ

ವರಗುಣಮಂ ಪೊಗಳ್ವೆನೆಂಬನಾವಂ? ರತ್ನಾ _

ಕರಜಲಮಂ ಕರತಳದಿಂ

ಭರದಿಂದಂ ತೀವಿ ತೀರ್ಚಲಾಪನ್ನನವಂ || (ಪದ್ಯ ೫೧)

ವರಸಾಳ್ವಮಲ್ಲನಿಂ ಸಂ
ಗರದೊಳ್ ಜಯಲಕ್ಷ್ಮಿ ಚಾರುತರವಚದಿಂ ಸ್ವೀ ||
ಕರಿಸಲ್ಪಟ್ಟಳದೇಂ ತ
ತ್ಕರಿಕಂಧರವದ್ರಿಕುಹರದಿಂ ಸ್ವೀಕರಿಕುಂ || (ಪದ್ಯ ೫೫)

ಇಂಥ ಸಾಳ್ವಮಲ್ಲನು, "ಶ್ರೀ ಪಂಡಿತಾಚಾರ್ಯ ಪದಾಬ್ಜ" ಭ್ರಮರನೂ ಸಾಹಸಿಯೂ, ಮಹತ್ವಾಕಾಂಕ್ಷಿಯೂ ಆಗಿದ್ದನು. ಇವನು ಹೊನ್ನಾವರದಿಂದ ರಾಜ್ಯವಾಳುತ್ತಿದ್ದನು. ಈತನ ಪಟ್ಟದ ಕವಿಯಾಗಿದ್ದವನು ಸಾಳ್ವಕವಿ.

ಸಾಳ್ವ ರಾಜೇಂದ್ರನ ಸೋದರಳಿಯನೇ ಸಾಳ್ವದೇವ. ಈತನಿಗೆ ಸಾಳ್ವದೇವರಸ, ಸಾಳುವ ದೇವರಾಯ, ದೇವರಸ, ದೇವರಸ ಒಡೆಯ ಮೊದಲಾದ ಹೆಸರುಗಳಿದ್ದುವು. ಈ 'ಅಳಿಯ'ನನ್ನು ಕವಿ ತನ್ನ ನೇಮಿನಾಥ ಚರಿತೆಯಲ್ಲಿ ಹೀಗೆ ಚಿತ್ರಿಸಿದ್ದಾನೆ -

ಅಳಿಯನೊಂದೊಡೆ ಅಳಿಯನೇ ಚಲ | ವಳಿಯ ಚಾಗವನಳಿಯ ಪಾಳಯ |
ನಳಿಯ ಪಂಥವನಳಿಯ ಪೆರ್ಮೆಯನಳಿಯ ಧರ್ಮವನು ||
ಅಳಿಯ ಮಾನ್ಯರನಳಿಯ ನೆನೆಸುವ | ಸುಲಭ ಸಾಳುವಮಲ್ಲ ಭುವರ |
ನಳಿಯ ದೇವೇಂದ್ರನೆ ಸುರಾಜ್ಯವನಾಳ್ವ ಕಾಲದಲಿ || (೧-೩೧)

**ಸಾಳ್ವಕವಿಯ ಕಾಲ**

ಉಬಲಬ್ಧಸಾಳ್ವಕವಿಯ ಗ್ರಂಥಗಳಲ್ಲಿ ಕೃತಿ ರಚನೆಯ ಕಾಲದಲ್ಲಿ ಸೂಚಿಸುವ ಪದ್ಯಗಳಿಲ್ಲ. ಕವಿ ಚರಿತೆಯಕಾರರು ಸಾಳ್ವನ ಕಾಲವನ್ನು ಸುಮಾರು ೧೫೫೦ ಎಂದು ತಿಳಿಸಿದ್ದಾರೆ. ಆದರೆ ಡಾ. ಹಂಪ ನಾಗರಾಜಯ್ಯ ಅವರು ತಮ್ಮ ಇತ್ತೀಚಿನ ಶೋಧನೆಯಿಂದ ಸಾಳ್ವಕವಿಯ ಕಾಲವನ್ನು ಕ್ರಿ.ಶ. ೧೪೮೫ ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಈ ಸಂಬಂಧವಾಗಿ ಅವರ ವಿವರವಾದ ಅಭಿಪ್ರಾಯ ಹೀಗಿದೆ -

"ಸಾಳ್ವಕವಿಗೆ ಆಶ್ರಯಕೊಟ್ಟವರು ನಗಿರೆಯ ದೊರೆಗಳಾದ ಸಾಳ್ವಮಲ್ಲ ಮತ್ತು ಸಾಳ್ವದೇವರು. ಸಾಳ್ವದೇವರಸರ ರಾಜ್ಯಾಡಳಿತ ೧೪೯೯ಕ್ಕೆ ಮುಗಿಯಿತೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ಕವಿಯ ಕಾಲದ ಪರಮಾವಧಿ ಗಡುವು ಈ ೧೪೯೯ನೆಯ ಇಸವಿಯನ್ನು ದಾಟುವಂತಿಲ್ಲ. ಸಾಳ್ವಕವಿಯ ಕಾವ್ಯದಲ್ಲಿ ಸಾಳ್ವಮಲ್ಲ ಹಾಗೂ ಸಾಳ್ವದೇವ - ಈ ಇಬ್ಬರ ಬಗೆಗೂ ಪ್ರಶಂಸಾತ್ಮಕ ಪದ್ಯಗಳಿವೆ. ಸಾಳ್ವಮಲ್ಲನು ದೊರೆಯಾಗಿ ಸಿಂಹಾಸನಸ್ಥಿತನಾಗಿರುವಾಗ ಮತ್ತು ಸಾಳ್ವದೇವನು ಯುವರಾಜನಾಗಿ ವಿಜೃಂಭಿಸುತ್ತಿದ್ದಾಗ ಸಾಳ್ವಭಾರತ ರಚನೆಯಾದಂತೆ ಸಬಲ ಆಧಾರಗಳಿಂದ ತಿಳಿದು ಬರುತ್ತದೆ. ಮುಖ್ಯವಾಗಿ ಸಾಳ್ವಮಲ್ಲನ ಸೋದರಳಿಯನಾದ ಸಾಳ್ವದೇವನನ್ನು

ಸಾಳ್ವಕವಿ 'ಅಳಿಯ ಶ್ರೇಷ್ಠ'ನೆಂದು ವಿಶ್ಲೇಷಿಸಿ ಬರೆದಿರುವ ೧-೩೧ನೆಯ ಪದ್ಯವನ್ನು ಗಮನಿಸಬೇಕು; ಇದು ಸಾಳ್ವ ಕವಿಯ ಕಾಲ ನಿರ್ಧಾರದಲ್ಲಿ ಅತ್ಯಂತ ಪ್ರಮುಖವಾದ ಪದ್ಯ.

"ಸಾಳ್ವಮಲ್ಲನು ದೊರೆಯಾಗಿದ್ದ ಕಾಲದಲ್ಲಿ ಕೃತಿ ರಚನೆಯಾಗಿದ್ದರೆ ಸಾಳ್ವದೇವನನ್ನು 'ಇನ್ನು ದೊರೆಯಾಗಿರುವನೆಂಬ' ವರ್ತಮಾನಾರ್ಥದ ಪದ್ಯಗಳನ್ನು ಮತ್ತು ಸಾಳ್ವದೇವನು ಅಳಿಯ ಹಾಗೂ ಯುವರಾಜ ಸ್ಥಾನದಲ್ಲಿರುವ ವಿವರಣೆಯ ಪದ್ಯಗಳನ್ನು ಮಾತ್ರ ಕವಿ ಬರೆಯುತ್ತಿದ್ದ(ನೆ?). ಕೇವಲ ಸಾಳ್ವದೇವನ ಪ್ರಭುತ್ವದ ಉದ್ಘೋಷವಿರುತ್ತಿತ್ತು. ಇನ್ನು ೧-೩೧ನೆಯ ಪದ್ಯಕ್ಕೆ ಮಹತ್ವವಿರುವುದಕ್ಕೆ ಕಾರಣ ೧೮೪೧ರ ಮತ್ತು ೧೫೮೪ರ ಕೆಲವು ಶಾಸನಗಳಲ್ಲಿ ಸಾಳ್ವದೇವನಿಗೆ ಇದೇ ವಿಶೇಷಗಳಿವೆ. ಆತ ಗೋವೆಯ ಸೇನಾಪತಿಯನ್ನು ಸೋಲಿಸಿದ್ದು ಈ ತೇದಿಯಲ್ಲೇ. ಹೀಗಾಗಿ ಈ ಇಸವಿ ಆತನ ಜೀವಿತದ ಉಚ್ಛ್ರಾಯದ ಅವಧಿ. 'ಸಾಳುವ ಮಲ್ಲ ಭುವರನಳಿಯ ದೇವೇಂದ್ರನೆ ಸುರಾಜ್ಯವನಾಳ್ವ ಕಾಲದಲಿ' (೧-೩೧) ಎಂದೂ, 'ಸೂರಸ ಸಾಳುವದೇವ ಭೂಪತಿ | ನಿರವಿಸಿದನೇಕೆನಲು ಮುನ್ನವೆ | ವಿರಚಿಸಲು ಬೆಸಸಿದನು ಸಾಳುವಮಲ್ಲನದರಿಂದ' (೧-೩೫) ಎಂದೂ ಸಾಳ್ವಕವಿ ಸ್ಪಷ್ಟವಾಗಿ ಸಾರಿದ್ದಾನೆ.

"ಅಂದರೆ ಈ ಕಾವ್ಯ ಆಗಷ್ಟೇ ದೊರೆಯಾದ ಹೊಸತರಲ್ಲಿ ಮುಗಿದಿದೆ. ಈ ಅಂತರ ಬಾಹ್ಯ ಪ್ರಮಾಣಗಳ ಆಧಾರದಿಂದ ಸಾಳ್ವಕವಯ ಕಾವ್ಯ ರಚನೆಯಾದದ್ದು ಈ ೧೫೮೫ರಲ್ಲೇ ಎಂದು ನಿರ್ಧರಿಸಬಹುದು. ಹೀಗೆ ಸಾಳ್ವಕವಿಯ ಕಾಲವನ್ನು ೧೫೮೫ ಎಂದು ತೀರ್ಮಾನಿಸುವುದಕ್ಕೆ ಮತ್ತಾವ ಅಡ್ಡಿ ಆತಂಕಗಳು ಕಂಡು ಬರುವುದಿಲ್ಲ."

ಇದೇ ಸಂದರ್ಭದಲ್ಲಿ ಕವಿಯ ಮತ್ತೊಂದು ಕೃತಿಯಾದ 'ಶಾರದಾವಿಲಾಸಂ' ಎಂಬ ಅಲಂಕಾರ ಗ್ರಂಥದ ೩-೪ ಲಕ್ಷ್ಯ ಪದಗಳಲ್ಲಿ ಕೇವಲ ಸಾಳ್ವಮಲ್ಲನ ಪ್ರಶಂಸಾ ಪದ್ಯಗಳಿರುವುದನ್ನು ಗಮನಿಸಬಹುದಾಗಿದೆ. ಇವು ಸಹ ಡಾ || ಹಂಪನಾ ಅವರು ಮಾಡಿರುವ ಕವಿಯ ಕಾಲ ನಿರ್ಣಯವನ್ನು ಪುಷ್ಟಿಕರಿಸುತ್ತವೆ.

**ಸಾಳ್ವಕವಿ ಸ್ಮರಿಸಿರುವ ಆಚಾರ್ಯರು**

ಕನ್ನಡ ಜೈನ ಕವಿಗಳಲ್ಲಿ ಬಹುಶಃ ಸಾಳ್ವಕವಿಯೇ ಹೆಚ್ಚು ಜನ ಪ್ರಾಚೀನ ಹಾಗೂ ನೂತನ ಆಚಾರ್ಯರನ್ನು - ಹನ್ನೊಂದು ಪದ್ಯಗಳಲ್ಲಿ (೧-೧೩ ರಿಂದ ೨೩) - ಸ್ಮರಿಸಿದ್ದಾನೆ. ಅನೇಕ ನೂತನರನ್ನು ಆತನ ಸಮಕಾಲೀನ ಕವಿಗಳೂ ನೆನೆದಿರುವುದನ್ನು ಗಮನಿಸಬಹುದಾಗಿದೆ. ಸಾಳ್ವಕವಿ ಸ್ತುತಿಸಿರುವ ಆಚಾರ್ಯರ್ ಪಟ್ಟಿ ಹೀಗಿದೆ -

"ಗೃಧ್ರಪಿಂಛಾಚಾರ್ಯ, ಮಯೂರ ಪಿಂಛಾಚಾರ್ಯ, 'ಶ್ರುತ ಪಂಚಮಿಯೊಳಾಶ್ಚರ್ಯ ಪುಸ್ತಕಗೈದರುಹದ್ಬಲಿ', ಶ್ರೀ ಪುಷ್ಪದಂತ, ಭೂತಬಲಿ, ಕುಂಡಕುಂದಾಚಾರ್ಯ, ಉಮಾಸ್ವಾತಿ, ಸಮಂತಭದ್ರ ಸ್ವಾಮಿ, ಕವಿ ಪರಮೇಷ್ಠಿ, ವಿದ್ಯಾಸ್ವಾಮಿ, ಪೂಜ್ಯಪಾದಸ್ವಾಮಿ, ವೀರಸೇನಾ ಚಾರ್ಯ, ಜಿನಸೇನ, ನೇಮಿಚಂದ್ರ, ರಾಮಸೇನ, ಅಕಳಂಕದೇವರು, ಅನಂತವೀರ್ಯ, ವಿದ್ಯಾನಂದ, ಮಾಣಿಕನಂದಿ ಭಟ್ಟಾರಕ, ಪ್ರಭೇಂದು (ಪ್ರಭಾಚಂದ್ರ), ರಾಮಚಂದ್ರ, ವಾಸವೇಂದು (ದೇವಚಂದ್ರ), ಗುಣಭದ್ರದೇವರು, ಮಾಘನಂದಿ, 'ಮಂಡಲದ ವರ-ರಾಜಗುರು-ಗುಣ ಸೌಂದರೆನಿಸುವ ಚಾರುಕೀಪತಿ ಪಂಡಿತಾಚಾರ್ಯ', 'ಮಂಡಲೇಶ್ವರ ನಂದಿತ ವಿಶಾಲಕೀರ್ತಿ', 'ದೇಶಿಗಣ ವಿಜಯಕೀರ್ತಿಗಳ ಶಿಷ್ಯರಾದ, ಜಾತರೂಪರಾದ, ಕಲಿಕಾಲ ಜಿನರೆನೆ ಸೊಗಯಿಪ ಎನ್ನಯ ಗುರು...... ಶ್ರುತುಕೀರ್ತಿ ದೇವರು', ಮಹೀಭೂಷಣ ಮುನಿ, ಪಾಲಾದಿ ದೇವರು, ಮೇರುನಂದಿ, ಅಣುವ್ರತರಾದ ಸಮಂತಭದ್ರ, ಪಾಲಕೀರ್ತಿ, 'ಮದ್ಗುರು' ಧರ್ಮಚಂದ್ರ". ಇವರುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅನುಬಂಧದಲ್ಲಿನ 'ಜೈನಾಚಾರ್ಯರು' ಎಂಬುದರಲ್ಲಿ ನೀಡಲಾಗಿದೆ.

ಮೇಲಿನ ಪಟ್ಟಿಯನ್ನು ಗಮನಿಸಿದಾಗ, ಶ್ರುತುಕೀರ್ತಿ ಮತ್ತು ಧರ್ಮಚಂದ್ರರು, ಸಾಳ್ವಕವಿಯ ಗುರುವಾಗಿದ್ದರೆಂದು ಅರಿಯಬಹುದಾಗಿದೆ. ಸಾಳ್ವಕವಿಯು ಸಾಳ್ವಮಲ್ಲನ ಆಸ್ಥಾನದಲ್ಲಿ 'ಪಟ್ಟದ ಕವಿ' ಯಾಗಿದ್ದನು. ರಾಜ್ಯಸಭೆಯಲ್ಲಿ ಮಾನ್ಯನಾಗಿದ್ದನು. ಸತ್ಕವಿಗಳ ಸಮೂಹದಲ್ಲಿ ಪೂಜ್ಯನಾಗಿದ್ದನು. ವಿನೇಯನೂ ವಾತ್ಸಲ್ಯಮಯಿಯೂ, ಜಿನಭಕ್ತನೂ ಆಗಿದ್ದನು.

**ಸಾಳ್ವಕವಿಯ ಕೃತಿಗಳು :**

ನೇಮಿನಾಥ ಚರಿತೆ (ಸಾಳ್ವಭಾರತ), ರಸರತ್ನಾಕರಂ, ಶಾರದಾವಿಲಾಸಂ ಮತ್ತು ವೈದ್ಯಸಾಂಗತ್ಯ - ಇವು ನಾಲ್ಕು ಸಾಳ್ವಕವಿಯ ರಚನೆಗಳು. ನೇಮಿನಾಥ ಚರಿತೆ ಷಟ್ಪದಿ ಛಂದಸ್ಸಿನಲ್ಲಿರುವ ದೊಡ್ಡ ಕಾವ್ಯ ಗ್ರಂಥ. ರಸರತ್ನಾಕರ ಮತ್ತು ಶಾರದಾವಿಲಾಸ ಇವೆರಡು ಚಂಪೂ ಶೈಲಿಯಲ್ಲಿರುವ ಅಲಂಕಾರ ಗ್ರಂಥಗಳು. ವೈದ್ಯ ಸಾಂಗತ್ಯವು ಹೆಸರೇ ಸೂಚಿಸುವಂತೆ ಸಾಂಗತ್ಯ ಛಂದಸ್ಸಿನಲ್ಲಿರುವ ವೈದ್ಯ ವಿಷಯದ ಗ್ರಂಥ. ಸಾಳ್ವನ ಕೃತಿಗಳಲ್ಲಿ ಛಂದಸ್ಸಿನ ವೈವಿಧ್ಯವನ್ನೂ ವಸ್ತು ವೈವಿಧ್ಯವನ್ನು ಗುರುತಿಸಬಹುದಾಗಿದೆ.

**ನೇಮಿನಾಥ ಚರಿತೆ (ಸಾಳ್ವಭಾರತ):**

ಈ ಕಾವ್ಯದ ಕಥಾನಾಯಕ ನೇಮಿನಾಥ. ಈತ ೨೪ ಜನ ತೀರ್ಥಂಕರರಲ್ಲಿ ೨೨ನೆಯವನು. ಈ ತೀರ್ಥಂಕರನ ಬಗ್ಗೆ ಕನ್ನಡದಲ್ಲಿ ಹೆಚ್ಚಾಗಿ ಕಾವ್ಯಗಳು ರಚನೆಗೊಂಡಿರುವುದೊಂದು ವಿಶೇಷ. ಅಲ್ಲದೆ ಜಾನಪದ ಬಿಡಿ ಬಿಡಿ ಗೀತೆಗಳಲ್ಲಿ ಹಾಗೂ ಕಥನಗೀತೆಗಳಲ್ಲಿ ಈ ದೇವನ ಪ್ರಸ್ತಾಪ ಕಂಡುಬರುತ್ತದೆ.

ತಿಲೋಯಪಣ್ಣತ್ತಿ, ನಾಯಾಧಮ್ಮ ಕಹಾಮೋ, ವಜ್ಜೀಸಣಾಕಲ್ಪ ಮೊದಲಾದ ಪ್ರಾಚೀನ ಪಾಕೃತಿ ಗ್ರಂಥಗಳಲ್ಲಿ ಪ್ರಾಸಂಗಿಕವಾಗಿ ಕೇವಲ ನೇಮಿತೀರ್ಥಂಕರನ ಕಥೆ ಬರುವುದು. ಈ ಮೂಲಕಥೆಗೆ ಆ ತೀರ್ಥಂಕರನ ಕಾಲದ ನಾರಾಯಣ (ಕೃಷ್ಣ) ಪ್ರತಿನಾರಾಯಣ (ಜರಾಸಂಧ) ಮೊದಲಾದವರ ಕಥೆಯೂ ಸೇರಿಕೊಂಡು ದೊಡ್ಡ ಪುರಾಣ ಕಾವ್ಯವಾಗಿ ಬೆಳೆದುಬಂದಿದೆ.

ಕ್ರಿ.ಶ. ೭೮೪ ರಲ್ಲಿದ್ದ ಪುನ್ನಾಟ ಸಂಘದ ಜಿನಸೇನಾಚಾರ್ಯನ 'ಹರಿವಂಶ'ವು ಸಂಸ್ಕೃತದಲ್ಲಿ ಬಂದ ನೇಮಿತೀರ್ಥಂಕರನನ್ನು ಕುರಿತ ಸ್ವತಂತ್ರ ರೂಪದ ಕಾವ್ಯ. ಈ 'ಹರಿವಂಶ' ಕಾವ್ಯ ಮತ್ತು ಗುಣಭದ್ರಾಚಾರ್ಯನ (ಕ್ರಿ.ಶ. ೮೯೯) ಉತ್ತರ ಪುರಾಣದಲ್ಲಿ ಅಂತರ್ಗತವಾಗಿರುವ ನೇಮಿನಾಥ ಪುರಾಣ - ಇವೆರಡು ಮುಂದೆ ಕನ್ನಡದಲ್ಲಿ ರಚನೆಗೊಂಡ ನೇಮಿನಾಥ ಪುರಾಣಗಳಿಗೆ ಮೂಲ ಆಕರ ಗ್ರಂಥಗಳಾಗಿವೆ.

ಕ್ರಿ.ಶ.ಸು. ೯೭೩ ರಲ್ಲಿದ್ದ ಚಾವುಂಡರಾಯನು ತನ್ನ ಚಾವುಂಡರಾಯ ಪುರಾಣ (ತ್ರಿಷಷ್ಟಿ ಶಲಾಕಾ ಪುರುಷ ಚರಿತೆ)ಯಲ್ಲಿ ನೇಮಿ ತೀರ್ಥಂಕರನ ಕಥೆಯನ್ನು ಕೇವಲ ಒಂಬತ್ತು ಪುಟಗಳಲ್ಲಿ 'ಶುದ್ಧ ಗದ್ಯ'ದಲ್ಲಿ ಹೇಳಿದ್ದಾನೆ.

ಕ್ರಿ.ಶ. ೧೧೫೦ ರಲ್ಲಿ ಕರ್ಣಪಾರ್ಯನು 'ನೇಮಿನಾಥ ಪುರಾಣ'ವನ್ನು ರಚಿಸಿದ್ದಾನೆ. ಇದರಲ್ಲಿ - ಕೇವಲ ಶ್ವೇತಾಂಬರ ಕಥಾ ಪರಂಪರೆಯ ನೇಮಿನಾಥ ಪೂರ್ವ ಭವಾವಳಿಯಲ್ಲಿ ಮಾತ್ರ ಕಂಡುಬರುತ್ತಿದ್ದ ವಿಂಧ್ಯಕ - ವಾಗುರೆಯ ಕಥೆಯು - ಈ ಕೃತಿಯಲ್ಲಿ ಕಂಡು ಬರುತ್ತದೆ. ಇದೊಂದು ಗಮನಾರ್ಹ ಅಂಶವಾಗಿದೆ.

ಅನಂತರ ಕ್ರಿ.ಶ. ೧೧೮೦ ರಲ್ಲಿ ಕವಿ ನೇಮಿಚಂದ್ರನು ನೇಮಿಚಂದ್ರನು ಕಾವ್ಯಲೇಪನದಿಂದ ಕೂಡಿರುವ ಅರ್ಧನೇಮಿನಾಥ ಪುರಾಣವನ್ನು; ಕ್ರಿ.ಶ. ೧೨೦೦ರಲ್ಲಿದ್ದ ಬಂಧುವರ್ಮನು ಹರಿವಂಶಾಭ್ಯುದಯವನ್ನು; ಕ್ರಿ.ಶ. ೧೨೫೪ರಲ್ಲಿದ್ದ ಮಹಾಬಲಿಯು ನೇಮಿನಾಥ ಪುರಾಣವನ್ನು ಚಂಪೂ ಶೈಲಿಯಲ್ಲಿ ವಸ್ತುಕವಾಗಿ ಬರೆದಿದ್ದಾರೆ.

ನೇಮಿನಾಥನನ್ನು ಕುರಿತ ವರ್ಣಕ ಕಾವ್ಯಗಳಲ್ಲಿ ಸಾಳ್ವಕವಿಯ (೧೪೮೫) ನೇಮಿನಾಥ ಚರಿತೆಯೇ (ಸಾಳ್ವ ಭಾರತವೆ) ಮೊದಲನೆಯದು. ಅನಂತರ ೩ನೇ ಮಂಗರಸನು ( ) ಸಾಂಗತ್ಯದಲ್ಲಿ ನೇಮಿಜಿನೇಶ ಸಂಗತಿಯನ್ನು ರಚಿಸಿದರೆ, ಭಾಮಿನೀ ಷಟ್ಪದಿಯಲ್ಲಿ ಬ್ರಹ್ಮಣಾಂಕನು (ಚಂದ್ರಸಾಗರ ವರ್ಣಿಯು) ಸುಮಾರು ಕ್ರಿ.ಶ. ೧೮೦೦ ರಲ್ಲಿ 'ಜಿನಭಾರತ'ವನ್ನು ಬರೆದಿದ್ದಾನೆ.

ಸಾಳ್ವಕವಿ ತನಗಿಂತ ಮೊದಲಿದ್ದ ಕವಿಪುಂಗವರಿಂದ ಪ್ರಭಾವಿತನಾಗಿದ್ದಾನೆ, ಹಾಗೆಯೇ ತನ್ನ ನಂತರದ ಕವಿಗಳ ಮೇಲೂ ಪ್ರಭಾವ ಬೀರಿದ್ದಾನೆ.

ಸಾಳ್ವನ 'ನೇಮಿನಾಥ ಚರಿತೆ'ಯು 'ಸಾಳ್ವಭಾರತ' ಎಂಬ ಹೆಸರಿನಿಂದ ಜನಪ್ರಿಯವಾಗಿದೆ. ಇದು ಚಂದ್ರನ ಷೋಡಶ ಕಲೆಯಂತೆ ಷೋಡಷ ಪರ್ವಗಳಿಂದ ಕೂಡಿದ ಷಟ್ಪದಿ ಪ್ರಕಾರದ ದೊಡ್ಡ ಕಾವ್ಯ. ೧೬ ಪರ್ವಗಳಲ್ಲಿ ೬೪ ಸಂಧಿಗಳು ಸೇರಿಕೊಂಡಿವೆ. ೨೪, ೨೫, ೨೬ ಮತ್ತು ೬೨ ನೇ ಸಂಧಿಯಲ್ಲಿ ವಾರ್ಧಕ ಷಟ್ಪದಿಯೂ; ೬೩ನೇ ಸಂಧಿಯಲ್ಲಿ ಪರಿವರ್ಧಿನಿ ಷಟ್ಪದಿಯೂ ; ೬೦ನೇ ಸಂಧಿಯಲ್ಲಿ ಬರುವ ಜಿನಾಷ್ಟಕವು ಕಂದ ಪದ್ಯದಲ್ಲೂ, ೬೪ನೇ ಸಂಧಿಯ ಅಂತ್ಯದಲ್ಲಿ ಬರುವ ಧ್ಯಾನ ಪ್ರಕ್ರಿಯೆಯನ್ನು ವಿವರಿಸುವ ಭಾಗ ಗದ್ಯದಲ್ಲೂ ಮತ್ತು ಉಳಿದೆಲ್ಲ ೫೯ ಸಂಧಿಗಳು ಭಾಮಿನಿ ಷಟ್ಪದಿಯಲ್ಲಿವೆ. ಕವಿ ವಿಸ್ತಾರ ಪ್ರಿಯನು, ಆತನಲ್ಲಿ ಕಥೆಗಿಂತ ವರ್ಣನೆ ಮುಂದು. ಆತನ ಈ ವರ್ಣಕ ಕಬ್ಬವನ್ನು ವರ ಗುಮ್ಮಟಾರ್ಯರು ಉದಾರದಿಂದ ಅವಧಾರಿಸಿದರಂತೆ!

*ಧಾರುಣೀಸುತರಭಯಸೂರಿ ಕು* | *ಮಾರರುತ್ತಮರಾಗಮ ತ್ರಯ* |
*ಸಾರ ಸರ್ವಜ್ಞರು ವಿನೇಯ ನೃಪಾಲವಂದಿತರು* ||
*ಆರಯಲ್ ಪ್ರತಿವಾದಿಗಜ ಕಂ* | *ಠೀರವರು ವರ* ***ಗುಮ್ಮಟಾರ್ಯರು*** **|**
*ದಾರರವಧಾರಿಸಿದರೆನಲೀ ಕೃತಿಯೆ ಸುಕೃತಿಯಲೆ* || *(೧-೪೩)*

ಸಾಳ್ವನ ಶಬ್ದ ಭಂಡಾರ ಸಮೃದ್ಧವಾದುದು. ಅದರಲ್ಲಿ ಅನೇಕ ಅಪರೂಪದ ಶಬ್ಧಗಳ ಸಂಗ್ರಹವಿದೆ. ಇವುಗಳ ಕಡೆ ಡಾ || ಹಂಪ. ನಾಗರಾಜಯ್ಯ ಅವರು ವಿದ್ವಾಂಸರ ಗಮನವನ್ನು ಮೊಟ್ಟಮೊದಲಿಗೆ ಸೆಳೆದಿದ್ದಾರೆ. ಅಂಥ ಕೆಲವು ಶಬ್ದರತ್ನಗಳು ಹೀಗಿವೆ -

ಪ್ರಾಕೃತದ 'ವಡಪ್ಪಂ'ನಿಂದ ಬಂದಿರುವ ಬಡಹ (=ನಿರಂತರ ಮಳೆ, ೨೧-೬), ಕಿಱುಳೆ (=ಹಸುಳೆ, ೨೧-೪೨, ೪೩, ೫೨), ಬೆಱಟೆ (=ಬೆರಣಿ, ૩೧-೬೭), ಹೀರ (=ಹೀರಕ, ವಜ್ರ ೨೧-೬೮), ಪಟೀರ (=ಶ್ರೀಗಂಧ, ಮನ್ಮಥ, ೨೧-೬೮), ಪೊರೆಜೆ (=ಹೊರಜೆ, ಹಗ್ಗ ೨೬-೨೧), ಮಾಸರಿಕೆ (=ಮಾಧುರ್ಯ, ೨೯-೩೧),ಮೂಕಿ (೩೫-೬೦), ಉಂತೆ (ಅವ್ಯಯ) (=ಸುಮ್ಮನೆ, ನಿಷ್ಕಾರಣವಾಗಿ, ೨೬-೨೭), ಕೆವುಡು (=ಕಿವುಡು, ೩-೨೬), ಪಲ್ಲಮರಿ (=ಆನಮರಿ, ೨೪-೮೧), ಅರದ (=ರಥ, ೨೫-೭), ಪತ್ತಿ (=೧ ರಥ, ೧ ಆನೆ, ೩ ಕುದುರೆ, ೫ ಕಾಲಾಳುಗಳ ಮೊತ್ತ, ೨೪-೩೦), ರೊಕ್ಕ (=ದುಡ್ಡು, ೧೭-೫೯), ರುಚಕ(=ಸುಂದರ), ಹಗ್ಗಿ (=ಅಗ್ನಿ, ೬೨-೧೦) ಇತ್ಯಾದಿ.

ಸಾಳ್ವಕವಿ ತನ್ನ ಕಾವ್ಯದ ಒಂದು ಕಡೆ ಪ್ರಾಸಂಗಿಕವಾಗಿ, "ಚಿತ್ತವ ಜಕ್ಕುಲಿಸದ ಕವಿತ್ವ.... ಒಪ್ಪದು" (೩-೧೧) - ಕವಿತ್ವ ಒಪ್ಪಿಗೆಯಾಗಬೇಕಾದರೆ ಅದು ಮನಸ್ಸನ್ನು ಆಕರ್ಷಿಸಬೇಕು, ಉಲ್ಲಾಸಗೊಳಿಸಬೇಕು - ಎಂದಿದ್ದಾನೆ. ಬಗೆಯನ್ನು ಜಕ್ಕುಲಿಸುವ ಅಂಥ ಅನೇಕ ಚಿತ್ರಗಳು ಕಾವ್ಯದ ಉದ್ದಕ್ಕೂ ದೊರೆಯುತ್ತವೆ. ಅವುಗಳಲ್ಲಿ ಕೆಲವು ಹೀಗಿವೆ-

ಬಾಲಕೃಷ್ಣನ ಲೀಲೆಯನ್ನು ಮುಗಿಸಿಬಿಡುತ್ತೇನೆಂದು ಚಾಣೂರನು ತನ್ನೊಡಯನಿಗೆ ಭರವಸೆ ನೀಡುವ ಚಿತ್ರಣ ಇಂತಿದೆ -

*ಒಡೆಯ ಚಿತ್ತೈಸೊಂದೆ ಪೆಟ್ಟಿಗೆ*
*ಕುಡಿದ ಬಜೆಯನು ಕಾರಿಸುವೆ ನೀ*
*ನಡೆಯೆನಲು ಚಾಣೂರನದು ಲೇಸೆನುತ ಹರಿಸೇರೆ* ||

ಇಲ್ಲಿ 'ಕುಡಿದ ಬಜೆಯನು ಕಾರಿಸುವೆ' ಎಂಬ ಮಾತು ಅರ್ಥಪೂರ್ಣವಾಗಿ, ಧ್ವನಿರಮ್ಯವಾಗಿ, ಜಾನಪದ ಸೊಗಡಿನೊಂದಿಗೆ ಮೂಡಿಬಂದಿದೆ.

ದ್ರುಪದ ದ್ರೋಣರ ಯುದ್ಧದಲ್ಲಿ ದ್ರುಪದನು ದ್ರೋಣರನ್ನು ಮೂದಲಿಸುವ ರೀತಿ, ಮಾತಿನ ಮೊನಚಿನಿಂದ ಎಷ್ಟು ಮೋಹಕವಾಗಿದೆ ನೋಡಿ-

*ಮರುಳ ಹಾರುವ ನಿನಗಕಟ ಸಂ | ಗರದ ಗಸಣಿಯಿದೇಕೆ, ಗಲ್ಲವ |*
*ಮುರಿದು ಮಕ್ಕಳನೋದಿಸುವ ಮರವೋ ಕ್ಷುದಾರ್ಥದಲಿ ||*
*ತಿರಿದು ಭಿಕ್ಷೆಯ ಪದವೊಡಿದು ಭೂ | ಸುರರ ಕೇರಿಯೊ, ಯಜ್ಞಶಾಲೆಯೊ |*
*ಕರೆದು ದಾನಂಗೊಡುವೆಡೆಯೊ ಮಗುಳೆಂದನಾ ದ್ರುಪದ || (೫೩-೮)*

ಸಾಳ್ವನ ಚಿತ್ರಕ ಶಕ್ತಿಗೆ ಸೂರ್ಯೋದಯದ ಈ ಪ್ರಕೃತಿ ಚಿತ್ರಣವೂ ಒಂದು ಉತ್ತಮ ಉದಾಹರಣೆಯಾಗಿದೆ -

*ಮೂಡವೆಣ್ಣೊಲಿದಿಟ್ಟ ಚೆಲುವಿಗೆ | ರೂಢಿಸಿದ ಕುಂಕುಮದ ಬೊಟ್ಟೋ |*
*ಮೂಡಣಾನೆಯ ಫಣೆಯ ಸಿಂಧೂರದ ಸರಿಘಾಟಿಕೆಯೊ ||*
*ಮೂಡವೆಟ್ಟದ ತುದಿಯ ರನ್ನದ | ಕೋಡುಗಲ್ಲೋ ಯೆನಿಸಿ ನೇಸರು |*
*ಮೂಡಲೀರ್ವರವೊಡ್ಡು ನಿಂದುದು ಮುನ್ನಿನಂದದಲಿ || (೫೩-೧)*

ದ್ರೌಪದಿಯ ಆಗಮನದಲ್ಲಿ ವೇತ್ರಧಾರಿಗಳು ಉಗ್ಘಡಿಸಿದ ರೀತಿ ಹೀಗಿದೆ -

*ತೊಲಗೆಲವೊ ಹೂಗೋಲ ರಾಯನ | ಚೆಲುವಿಕೆಯ ಭಂಡಾರ ಬರುತದೆ |*
*ತೊಲಗೆಲವೊ ನೀರೆಯರ ಸೃಷ್ಟಿಗೆ ಕಳಸ ಬರುತಲಿದೆ ||*
*ತೊಲತೊಲಗೊ ಪಾಂಚಾಲ ರಾಯನ | ಕುಲತಿಲಕ ಬರುತ್ತದೆಯೆನುತ ಮಿಗೆ |*
*ನೆಲನನುಗ್ಘಡಿಸುತ್ತ ನಡೆದರು ವೇತ್ರಧಾರಿಗಳು ||| (೩೬-೪೧)*

ಸರೋವರವನ್ನು ಪ್ರವೇಶಿಸಿದ ಕೌರವನನ್ನು ಹೊರಕ್ಕೆಬ್ಬಿಸಲು ಭೀಮನು ಅಬ್ಬರಿಸುವ ಮಾತುಗಳು ಕಾವ್ಯದಲ್ಲಿ ಸೊಗಸಾಗಿ ಬಂದಿವೆ. ಅಂಥವುಗಳಲ್ಲಿ ಒಂದು ವಿಶೇಷಪದ್ಯ ಹೀಗಿದೆ -

*ಮುಳಿದು ಬಂದೊಡೆ ಕೊಲುವೆ, ಕೈದುವ | ನಿಳುಹಿ ಬಂದೊಡೆ ಕಾವೆನಗ್ರಜ |*
*ನಿಳೆಯ ನಿತ್ತಪೆನೆಂದೊಡಗ್ರಜನೆಂದು ವಂದಿಸುವೆ ||*
*ತಳೆದವೈ ಜಿನದೀಕ್ಷೆಯುಮನೆನ | ಲೊಲಿದು ಬಂದು ನಮೋಸ್ತು ಮಾಡುವೆ |*
*ನುಳಿದ ಕಾರ್ಯವನರಿಯೆನಿವರೊಳಗೊಂದ ಹಿಡಿಯೆಂದ || (೫೮-೧೦)*

ಇಲ್ಲಿ ಭೀಮನ ಬಹುಮುಖದ ಪರಿಚಯವಾಗುತ್ತದೆ. ಅವನ ಶೌರ್ಯ, ಅವನ ಕ್ಷಾತ್ರಧರ್ಮ, ಸನ್ನಡತೆಯ ಹಿರಿಯರಲ್ಲಿ ಅವನಿಗಿರುವ ಗೌರವ ಮತ್ತು ಜಿನಮುನಿಗಳಲ್ಲಿ ಅವನಿಗಿರುವ ಭಕ್ತಿ - ಇವೆಲ್ಲವು ಒಂದೇ ಪದ್ಯದಲ್ಲಿ ಚಿತ್ತಾಕರ್ಷಕವಾಗಿ ಅಭಿವ್ಯಕ್ತಗೊಂಡಿದೆ. ದೀಕ್ಷಿತನಾದರೆ ನಮೋಸ್ತು ಮಾಡುವೆ ಎಂಬ ಭಾವ, ಜೈನ ಮಹಾಭಾರತದ ಭೀಮನಿಗೆ ಮಾತ್ರ ಸಾಧ್ಯವಾಗುವಂಥದು.

ನೇಮಿನಾಥನ ಬದುಕಿನಲ್ಲಿ ಆತನ ವೈರಾಗ್ಯೋದಯದ ಸಂದರ್ಭ ಬಹು ಮಹತ್ವವಾದುದು. ಅದು ಶ್ರೀಕೃಷ್ಣನಿಗೆ ರಾಜಕೀಯ ತಂತ್ರವಾದರೆ, ಶ್ರೀನೇಮಿಜಿನನಿಗೆ ಅಹಿಂಸಾ ತತ್ತ್ವವನ್ನು ಪ್ರತಿಪಾದಿಸುವ ಪ್ರಸಂಗವಾಗಿದೆ. ಅದನ್ನು ಸಾಳ್ವಕವಿ ಹೀಗೆ ಚಿತ್ರಿಸಿದ್ದಾನೆ.-

ಕೃಷ್ಣ, ಬಲರಾಮ, ನೇಮಿ ಮೊದಲಾದವರೆಲ್ಲ ವನವಿಹಾರಕ್ಕೆ ಹೋಗುತ್ತಾರೆ. ಅಲ್ಲಿ ಕೊಳದಲ್ಲಿ ಬಿನದದೋಕುಳಿ ಆಡುತ್ತಾರೆ. ಅಲ್ಲಿ ನೇಮಿಕುಮಾರನನ್ನು ಸಾವಿರ ಎಸಳಿನ ತಾವರೆಯ ನಡುವೆ ಇರಿಸಿ, ಅವನ ಮೇಲೆ ಚಂದನರಸವನ್ನು ಸುರಿಸಿ, 'ಚಂದ್ರಜಿನೇಶ'ನ ಹಾಗೆ ಕಾಣುವ ಆತನನ್ನು ಒಲವಿನಿಂದ ವಂದಿಸುತ್ತಾರೆ. ಓಕುಳಿಯನಂತರ ತಾನುಟ್ಟುದನ್ನು, ಕೃಷ್ಣನ ಸಂಕೇತದಂತೆ, ಸತ್ಯಭಾಮೆಯ ಕೈಗೆ ನೀಡುವಾಗ, ಆಕೆ ಕೈಯನ್ನು ಹಿಂತೆಗೆದುಕೊಂಡು, "ನಾನು ಕೃಷ್ಣನ ರೂಢಿಸಿದ ಹಿರಿಯರಸಿಯಲ್ಲೆನೆ, ನಿನ್ನ ಮೈಲಿಗೆಯ ಪಾಡಳಿದು ಪಿಡಿವೆನೆ?" ಎಂದು ಚುಚ್ಚು ನುಡಿಯುತ್ತಾಳೆ. ಆಗ ಅಲ್ಲೆಯಿದ್ದ ಪ್ರೌಢೆ ರುಕ್ಮಿಣಿಯು, ಆ ಬಟ್ಟೆಯನ್ನು ತಾನು ತೆಗೆದುಕೊಂಡು, "ಕೆಟ್ಟಾಡಬಹುದೇ ಅಕ್ಕ..." ಜಿನನ ಜನ್ಮಸ್ನಾನ ಪರಿಪಾವನ ಜಲವನು ಇಂದ್ರಾದ್ಯರಾಂಪರು ಮನಮೊಸೆದು ಮಸ್ತಕದೊಳು.... ಅಮರರು ಜಿನಗೆ ಬೆಸಕೆಯಿವರು" - ಎನ್ನುತ್ತಾಳೆ. ಆಗ -

*ರುಗುಮಿಣಿಯ ನುಡಿಗೇಳಿ ಮನದೊಳು ಚಿಗುರೆ ಮುನಿಸೆಲೆ ಭೀಷ್ಮಜೆಯೆ*
*ಕೇಳು ಗಡ ಪೂತಿನಿ ಮುಖ್ಯರನು ಬಾಲ್ಯದಲಿ ಬಡಿದಂತೆ |*
*ನಗವನೆತ್ತಿದವೊಲು, ಹರಿಯು ಪನ್ನಗನ ಪಕ್ಕೆಯನೇರಿ ಶಾರ್ಙ್ಗವ*
*ಬಿಗಿದು ಶಂಖವನೂದಿದವೊಲತಿ ಬಲರು ಅದಾರು ಎನಲು || ೫೮-೬೦)*

*ಅರೆ ಮರುಳಲಾ ಅಕ್ಕ ಕೇಳೀ ನರರ ಸತ್ವವಿದೇನು, ಈ ಭೂ*
*ಧರನು ಗರ್ಭಕ್ಕೊಗೆಯದತ್ತರುದಿಂಗಳೆಂಬುದು |*
*ಸುರಪತಿಯ ಸಿಂಹಾಸನವ ತಾವರೆಯೆಲೆಯ ನೀರಂತೆ ನಡುಗಿಸಿ*
*ದುರು ಮಹಿಮನಲ್ಲವೆ ವಿಚಾರಿಸಿ ಕೇಳು ಹೇಳುವೆನು || ೫೮-೬೧)*

– ಹೀಗೆ ವಾಗ್ವಾದದನಂತರ ಎಲ್ಲರು ನಗರಕ್ಕೆ ಹಿಂದಿರುಗುತ್ತಾರೆ. ಆದರೆ ಸತ್ಯಭಾಮೆಯ ಗರ್ವವಚನದಿಂದ ನೇಮೀಶನಿಗೆ ಇನಿಸು ಮುನಿಸಲಾಯಿತು. ಅವನು ನೇರವಾಗಿ ಆಯುಧಾಗಾರಕ್ಕೆ ಆಗಮಿಸಿ, ಅಹಿಶಯ್ಯೆಯನ್ನು ಏರಿ, ಎಡಗೈಯಿಂದ ಶಾರ್ಙ್ಗವನ್ನೇರಿಸಿ, 'ಆಗಳೆ ಚೀರಿಸಿದನಾ ಪಾಂಚಜನ್ಯದ ಮೂಗಿನಲಿ'. ಆ ಧ್ವನಿಗೆ 'ದಿಗಿಭವು ಹಾರಿಬಿದ್ದವು, ನಡುಗುತಿರ್ದುದು ಮೂರು ಲೋಕವು'. ಆಗ 'ಬಲನು ದುರ್ಬಲನಾಗಿ ಮಿಗೆ ನೇಗಿಲನು ಹಿಡಿದನು'. ಕಂಸಾರಿ ಚಿಂತೆಯಲಿ ಮುಳುಗಿದನು. ಕಾವಲುಗಾರರು ನಡೆದ ಘಟನೆಯನ್ನು ಬಿನ್ನಹ ಮಾಡಿದರು. ಆಗ ಕೃಷ್ಣ ಏಕಾಂತದಲ್ಲಿ ಬಲರಾಮನೊಂದಿಗೆ, "ಕೇಳಗ್ರಜನೆ, ನಮ್ಮನುಜ ಇಂದ್ರವಂದ್ಯನು ಅನಂತ ವೀರ್ಯ, ವಸುಂಧರೆಗೆ ಕ್ರಮದಿಂದರಸು ಬೇಕೆಂದು ಮದ್ರಾಜ್ಯವನು ಸೆಳೆದಡೆ ಕಾವನಾರು?" – ಎಂದು ಪ್ರಶ್ನಿಸುತ್ತಾನೆ.

*"ಎಲೆ ಮುರಾಂತಕ, ಅರಿಯದವರಂತೊಳರಲೇತಕೆ?*
*ಕಲ್ಪ ತರುವಿರೆ, ಕೊಳೆತ ಕಡ್ಡಿಗೆ ಬಯಸುವರೆ?*
*ವರಮುಕ್ತಿ ಸಾಮ್ರಾಜ್ಯ ಲಲನೆಯೊಕ್ಕತನುವುಳಿದು*

*ನಮ್ಮೆಳಗೆ - ಜಾರೆಗೆ - ಮೋಹಿಸುವ*
*ಕಟ್ಟಳಿಮನವು ತೀರ್ಥಂಕರರಿಗಿರಿದು "*

– ಎಂದು ಬಲರಾಮ ಸಮಾಧಾನ ಮಾಡುತ್ತಾನೆ. ಆದರೆ ಕೃಷ್ಣ ಹಿಂದಿನ ಅನೇಕ ತೀರ್ಥಂಕರರು ಚಕ್ರವರ್ತಿಗಳಾಗಿರುವುದನ್ನು ನೆನಪಿಸುತ್ತಾನೆ. ಆಗ ಬಲರಾಮನು -

*ಅವರಿಗಾ ಲಕ್ಷ್ಮಿಗಳು ಪುಣ್ಯದ ತವಕದಿಂದ ಒಲಿತಂದವಲ್ಲದೆ*
*ಅವರು ತಜ್ಜನ್ಮದಲಿ ಕಾಮಿಸಿ ಪಡೆದುದಿಲ್ಲ.*

– ಎಂದು ನಿಜಸ್ಥಿತಿಯನ್ನು ತಿಳಿಸುತ್ತಾನೆ. ಆದರೂ ಬಲನುಕ್ತಿಗೆ ಜನಾರ್ಧನನು ಸಮಾಧಾನಗೊಳ್ಳದೆ "ಕುವರಗತಿ ವೈರಾಗ್ಯವನು" ಉಂಟು ಮಾಡಬೇಕೆಂದು ನಿರ್ಧರಿಸುತ್ತಾನೆ. ತನ್ನೀ ಯೋಜನೆಯ ಅಂಗನಾಗಿ ಮಹಾರಾಜ ಸಮುದ್ರವಿಜಯನಾದಿಯಾಗಿ ಎಲ್ಲರನ್ನು ನೇಮಿಕುಮಾರನ ವಿವಾಹಕ್ಕೆ ಒಪ್ಪಿಸುತ್ತಾನೆ. ಉಗ್ರಸೇನನ ಪುತ್ರಿ ರಾಜೀಮತಿಯನ್ನು ಗೊತ್ತು ಮಾಡುತ್ತಾನೆ. ವಿವಾಹ ಮಂಟಪ ಸಿದ್ಧಗೊಂಡಿತು. ಅಂದದ ಅಲಂಕರಾವಾಯಿತು. ಸಂಭ್ರಮದಿಂದ ದಿಬ್ಬಣ ಹೊರಟಿತು. ಉದ್ವಾಹಗೇಹದ ಸನಿಹದಲ್ಲೆ -

*ಅಂತಕನ ಬಾಯಂತೆ ಕಂಟಕವಾದ ಗೇರೆಯದೊಳಗೆ ಮೃಗಗಳ |*
*ಸಂತತಿಯು ಕಡು ಹಸಿದು ಗೋಳಿಡುತಿರ್ದುದು ಎಡೆಬಿಡದೆ ||*

ದಯಾಪರನಾದ ನೇಮಿಕುಮಾರನು ಆನೆಯನ್ನು ನಿಲ್ಲಿಸಿ, "ಅಗಣಿತ ಮೃಗಗಣದ ವನದಿ ಸದೆದು ತಂದವರಾರು? ಘೊಳಿಟ್ಟೊದರುತವೆ, ಕಡು ಹಸಿದುದೇಕೆ?"- ಎಂದು ಶಬರರನ್ನು ವಿಚಾರಿಸುತ್ತಾನೆ. ಅವರು ಹರಿಯು ಮುಂಕಲಿಸಿದಂದಿ ಹೇಳುತ್ತಾರೆ -

*ದೇವ ನಿಮ್ಮಯ ಮದುವೆಗೆಂದಖಿಳಾವನೀಜನ ಬಂದುದದರಿಂ |*
*ದೇವರರ್ತಿಯನೀಕ್ಷಿಸುತ್ತಿರೆ, ಮೃಗಗಳನು ಕಡಿದು ||*
*ತೀವಿ ನೆತ್ತರ ಪೊಳೆಯ ನೆರೆ ಮಾಂಸಾವಳಿಯನರಿದಟ್ಟು ಕೆಲಬರಿ*
*ಗೀ ವಿಧದ ಭೋಜನಕೆ ತರಿಸಿದನೆಂದನಾ ವ್ಯಾಧ || (೫೯-೧೭ ||*

*ಕೊಂದುಮಾಡುವ ಧರ್ಮದಂತೆಮಗಿಂದು ಬಂದುದು ಮದುವೆ, ನೊಳವನು*
*ತಿಂದು ತಪಗೆಟ್ಟಂತೆ, ಈ ಜೀವಂಗಳನು ಕೊಲಿಸಿ ||*
*ಬೆಂದ ಮದುವೆಯ ಲೇನು ಫಲವಾ ಸೌಂದರ್ಯರೇಂ ಸುಖವೆನಿತ್ತಪ*
*ಳೆಂದು ಪೇಸಿದನು ಅರಿದನು ಅವಧಿಯಿನ್ ಅಗಳದರ ಇರಿವ || (೫೯-೧೮)*

*ಪಲಬರುಂಡು ಬಿಸುಟ್ಟು ಪುಲ್ಲಿಗೆನಿಳೆಗೆಳಸಿದಪೆ ನಾನೆನುತ ಹರಿ*
*ಯಳಿಮನದ ಶಂಕೆಯನು ತಳೆದೀ ಕೃತಕವೊಡ್ಡಿದನೆ?*
*ಇಳೆಯ ಲೋಭವದೇನ ಮಾಡದು ? ಹುಳು ನೆಯಿದ ಬಲೆಯೊಳಗೆ ಸಿಲುಕುಗು*
*ನೊಳವನಲ್ಲದೆ, ಭದ್ರಗಜ ಸಿಲುಕುವುದೆ ಹೇಳೆಂದ || (೫೯-೧೯)*

ಮನದಲ್ಲಿ ಧರೆ ನನ್ನದೆಂದು ಭಾವಿಸುವ ತಿರುಕನಿಗೂ ದುರ್ಗತಿ ಸಂಭವಿಸುವುದು. ಅಂಥದರಲ್ಲಿ ಇಳೆ ತನ್ನದೆಂದು ಮನಃಪೂರ್ವಕವಾಗಿ ಭಾವಿಸುವವನು ಮೇಲೇಳಬಲ್ಲನೆ ? ಕುಸಿದು ಕೆಳಗೆ ಬೀಳನೆ? ಎಂದು, 'ರಾಜ್ಯ ವಿರಕ್ತಿಯನ್ನು ಮನದೊಳಗೆ ಭಾವಿಸಿದ.'

"ಮೃಗತತಿಯನು ಅಡವಿಗೆ ಬಿಡಿಸಿ, ವಿವಾಹ ಕಾರ್ಯವನ್ನು ನೆರವೇರಿಸುವ" - ಎಂದ ತಂದೆಗೆ, "ದುರ್ಗತಿಗೆ ಕಾರಣವಾದ ಮದುವೆಯಲೇನು ಫಲ?... ತಳೆವೆನುತ್ತಮ ಮೋಕ್ಷ ಲಕ್ಷ್ಮೀ ಲಲನೆಯೊಳು ಪರಿಣಯವನು" ಎಂದು ತಿಳಿಸಿದೊಡನೆಯೆ, 'ಪುರಜನದ ಪರಿಜನದ ಚಿತ್ತದ ಸರಸ ವಿರಸವಾದುದು'.

ತಂದೆ-ತಾಯಿ, ಬಂಧು-ಬಳಗ ಎಲ್ಲವನ್ನು ಕರೆಯಿಸಿ, "ಇನಿತು ನೋಯಲದೇಕೆ? ಮೋಕ್ಷಾಂಗನೆಗೆ ಮೆಚ್ಚಿದ ಮನವು, ಮಿಕ್ಕ ವನಿತೆಯರಿಗೆ ಎಳಸುವುದೆ?" ಎಂದು ಕೇಳಿದುದಲ್ಲದೆ, ಚತುರ್ಗತಿಯಲ್ಲಿರುವ ದುಃಖವನ್ನು ಅವರಿಗೆ ಮನವರಿಕೆ ಮಾಡಿಸಿ, ಅವರೆಲ್ಲರ ಅನುಮತಿ ಪಡೆದು, ಎಲ್ಲವನ್ನು ತೊರೆದು, ಸ್ವಯಂ ದೀಕ್ಷಿತನಾದನು.

'ನೇಮಿನಾಥ ಚರಿತೆ'ಯಲ್ಲಿ ವಿಂಧ್ಯಕ-ವಾಗುರೆಯ, ನಂದಿಯ, ಸೂರದತ್ತ-ಸುದತ್ತ ವರ್ತಕರ, ಚಾರುದತ್ತನ, ಕಾಮನ ಹಾಗೂ ಕೌರವ ಪಾಂಡವರ ಕಥೆಗಳು ಬರುತ್ತವೆ. ಇಲ್ಲಿ ಬರುವ ಕೃಷ್ಣ - ಜರಾಸಂಧನ (ನಾರಾಯಣ - ಪ್ರತಿನಾರಾಯಣರ) ಮಹಾಯುದ್ಧದಲ್ಲಿ ಕೌರವ ಪಾಂಡವರ ಯುದ್ಧವೂ ಸೇರಿ ಹೋಗಿದೆ. ಇದೊಂದು ಮಧ್ಯಮ ವರ್ಗದ ಕಾವ್ಯ. ಈ ಕಾವ್ಯದ ಉದ್ದಕ್ಕೂ ಗಾದೆ ಮಾತುಗಳು, ಜಾಣ್ಣುಡಿಗಳು, ಜೀವನ ಮೌಲ್ಯವನ್ನು ಪ್ರತಿಪಾದಿಸುವ ಸೂಕ್ತಿಗಳು ಹೇಳರವಾಗಿ ಲಭಿಸುತ್ತವೆ. ಅಂಥ ಕೆಲವು ಸೂಕ್ತಿಗಳು ಹೀಗಿವೆ -

ಕಾಲ ಲಬ್ಧಿಯ ಮಹಿಮೆ ಕಡು ಬಡವೆ? (೧೦-೭೭), ಕೋಪದಿ ಕೆಡದವರಾರ್? (೬೪-೬), ಧರ್ಮವನು ನಂಬಿದವಗೆ ಕೇಡುಂಟೆ (೭-೮), ಪವಿತ್ರ ದಾನದಿನೇನು ಸಮನಿಸದೋ ? (೬೦-೧೦), ಭೂಪರ ಮಾತು ಸಕ್ಕರೆ ಮನವು ಕತ್ತರಿ (೧೫-೬), ಮುನಿಸು ಮುನಿಗಪಮಾನ (೩೮-೩೬), ಯಾರು ಮಾರಾಧಿಸದೆ ಸೌಖ್ಯವು ಬಯಸಿದಡೆ ಬಹುದೆ? (೩-೩೨), ವಿಷವಮೃತವಾಗದೆ ಶುಭೋದಯದಿ ?! (೨೮-೧೨), ಧರೆಯೊಳಾರ್ ಒಳಕೊಂಬರೈ ದುರ್ನಯ ವಿದಗ್ಧರನು (೫೫-೫), ಮುಂಗೈಯ ಕಂಕಣಕೇಕೆ ಕನ್ನಡಿ ? (೫೬-೫೬).

**ರಸರತ್ನಾಕರಂ :**

ಇದೊಂದು ಅಲಂಕಾರ ಗ್ರಂಥ. ಇದ್ಲ್ಲಿ ನಾಲ್ಕು ಪ್ರಕರಣಗಳಿವೆ. ಸೂತ್ರ ಮತ್ತ ವೃತ್ತಿಯ ರೂಪದಲ್ಲಿದೆ. ಅಲ್ಲಲ್ಲಿ ವಚನಗಳಿವೆ. ಪ್ರಾಚೀನ ಕನ್ನಡ ಗ್ರಂಥಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾನೆ. "ರಸಮಿಲ್ಲದ ಕಾವ್ಯಂ ನೀರಸಮ್, ಅದಱಿಂ ಕೃತಿಗೆ ರಸಮೆ ಸಾರಂ" ಎಂದಿದ್ದಾನೆ. ಶೃಂಗಾರ ಪ್ರಪಂಚ ವಿವರಣಂ, ನವರಸ ಪ್ರಪಂಚಂ, ನಾಯಕ ನಾಯಿಕಾ ವಿವರಣಂ, ವ್ಯಭಿಚಾರ ಭಾವ ವಿವರಣಂ - ಎಂಬ ನಾಲ್ಕು ಪ್ರಕರಣಗಳಲ್ಲಿರುವ ಮುಖ್ಯಾಂಶಗಳನ್ನು ಶ್ರೀ ಎಚ್.ಕೆ. ನರಸಿಂಹೇಗೌಡರು ಹೀಗೆ ಸಂಗ್ರಹಿಸಿದ್ದಾರೆ. -

"ಭಾವ, ವಿಭಾವ, ಅನುಭಾವ, ಸಂಚಾರಿಭಾವ ಇವುಗಳಿಂದ ರಸೋತ್ಪತ್ತಿಯಾಗುತ್ತ ದೆಂದು ಹೇಳಿ ಗ್ರಂಥವನ್ನು ಆರಂಭಿಸಿದ್ದಾನೆ. ಅನಂತರ ವಿಭಾವಾದಿಗಳ ವಿವರಣೆಯನ್ನು ಕೊಡುತ್ತಾನೆ. ರಾಗ ಅಭಿನಯವನ್ನೊಳಗೊಂಡ ಸ್ಥಾಯಿ ವ್ಯಭಿಚಾರಿ ಲಕ್ಷಣವುಳ್ಳ ಚಿತ್ತವೃತ್ತಿ ಭಾವವೆನಿಸುತ್ತದೆ. ಈ ಚಿತ್ತವೃತ್ತಿಗಳು ಸ್ಥಾಯೀಭಾವಗಳನ್ನು ಉದ್ಬೋಧಗೊಳಿಸುವುದರಿಂದ ಸಾಮಾಜಿಕನು ಅನುಭವಿಸುವುದರಿಂದ ಅನುಭಾವವೆನಿಸುತ್ತದೆ. ಸ್ಥಾಯಿ, ವ್ಯಭಿಚಾರಿಭಾವಗಳಿಗೆ ವಿವರಣೆ ಕೊಟ್ಟು, ರಸ ವಿಭಾವಾದಿಗಳಿಂದ ಅಭಿವ್ಯಕ್ತವಾಗುತ್ತದೆಯೇ ಹೊರತು ಅವುಗಳ ಕಾರ್ಯವಲ್ಲವೆಂದೂ, ವಿಭಾವಾದಿ ವ್ಯಭಿಚಾರಿಭಾವಗಳಿಂದ ರಸ ಅಭಿವ್ಯಕ್ತವಾಗಬೇಕೇ ಹೊರತು "ಒಂದೊಂದಱಿಂದಾದೊಡದುಂ ವ್ಯಭಿಚಾರಮಪ್ಪುದು" ಎಂದು ಹೇಳುತ್ತಾನೆ. ಸೂತ್ರ ೩, ೪, ೫, ೬ರಲ್ಲಿ ರಸಹುಟ್ಟುವ ಬಗೆ, ರಸಜ್ಞಾನದ ಪ್ರಕಾರ, ಭಾವ ವಿಭಾವಾನುಭಾವಗಳ ಸ್ವರೂಪ ವಿವರಣೆ, ಸ್ಥಾಯಿ, ಸಾತ್ವಿಕ, ವ್ಯಭಿಚಾರಿಗಳ ಸ್ವರೂಪ ವಿವರಣೆ, ಸಭಾಸದರಲ್ಲಿ ರಸೋತ್ಪತ್ತಿಯಾಗುವ

ಬಗೆಯನ್ನು ಕುರಿತು ಹೇಳಿದ್ದಾನೆ. ರತಿ, ಪರಿಹಾಸ, ಶೋಕ, ಉತ್ಸಾಹ, ಪ್ರಕೋಪ, ವಿಸ್ಮಯ, ಭಯ, ಜುಗುಪ್ಸೆ, ಶ್ರಮವೆಂದು ಒಂಬತ್ತು ಸ್ಥಾಯಿ ಭಾವಗಳು. ಪುಲಕಾಶ್ರು ಸ್ವೇದ ಸ್ಥಂಭ ಲಯ ಸ್ವರ ಭೇದ ಕಂಪ ವೈವರ್ಣ್ಯಂಗಳ್ ಎಂಬುದಾಗಿ ಎಂಟು ಸಾತ್ವಿಕಭಾವಗಳು. 'ಭ್ರುಕುಟಿ ಮುಖರಾಗ ಲೋಚನ', 'ವಿಕೃತ್ಯಧರ ಕಂಪನಾತ್ತಕರ ಚರಣನ್ಯಾಸಕ ವಾಗಾದ್ಯಂಗ ಕ್ರಿಯೆ', ಸುಕವಿಗಳಿಂದ ಅನುಭಾವವೆಂದು ಹೇಳಲ್ಪಡುತ್ತದೆ, ಮತ್ತು ಮತಿ, ಲಜ್ಜೆ, ವೇಗ, ಶಂಕೆ ಮೊದಲಾದ ಮೂವತ್ತುಮೂರು ವ್ಯಭಿಚಾರಿಭಾವಗಳಿವೆ. ಶೃಂಗಾರ, ಹಾಸ್ಯ, ಕರುಣ, ವೀರ, ರೌದ್ರ, ಅದ್ಭುತ, ಭಯಾನಕ, ಬೀಭತ್ಸ ಮತ್ತು ಶಾಂತರಸವೆಂದು ನವರಸಗಳಿವೆ. ಈ ನವರಸಗಳೆಲ್ಲವನ್ನು ವರ್ಣಿಸಿ ಅವುಗಳಿಗೆ ಅಧಿದೇವತೆಗಳಾವುವು ಎಂಬುದನ್ನು ಪ್ರಸ್ತಾಪಿಸಿದ್ದಾನೆ.

ಶೃಂಗಾರ ರಸದಲ್ಲಿ ಎರಡು ಬಗೆ ೧. ಸಂಭೋಗ ಶೃಂಗಾರ ೨. ವಿಪ್ರಲಂಬ ಶೃಂಗಾರ. ಶೃಂಗಾರ ರಸದ ಆಲಂಬನ ಉದ್ದೀಪನ ವಿಭಾವಗಳು. ಶೃಂಗಾರ ರಸದ ಅನುಭಾವ, ಸಾತ್ವಿಕ ಭಾವ, ವ್ಯಭಿಚಾರಿ ಭಾವಗಳು, ಅಲ್ಲದೆ, ಶೃಂಗಾರ ರಸದ ಅವಸ್ಥೆಗಳನ್ನು ಹೇಳಿ ಲಕ್ಷ್ಯಪದಗಳೊಡನೆ ಉದಾಹರಿಸಿ

*ಪರಿಣಾಮವನಂತಂ ವ್ಯವ*
*ಹರಿಸುವುದವಱವಸ್ಥೆ ನೆಗಟ್ಟುವನಂತಂ*
*ಪರಿಭಾವಿಸುವೊಡೆ ರಸವಿ*
*ಸ್ತರಮಂ ವಿವರಿಸುವೆನೆಂಬನಾವನುಮೊಳನೇ*

ಎಂದು ಹೇಳಿದ್ದಾನೆ. ಅಂತಿಮವಾಗಿ ಈ ಎಲ್ಲಾ ಅವಸ್ಥೆಗಳು ಕೇವಲ ಸ್ತ್ರೀಯರಲ್ಲಿ ಮಾತ್ರ ಉಂಟಾಗುತ್ತವೆ ಎನ್ನುವುದು ಸರಿಯಲ್ಲ. ಉಚಿತ ವಿಧಿಯಿಂದ ಪುರುಷರಲ್ಲಿಯೂ ಉಂಟಾಗುತ್ತವೆ ಎಂದು ಹೇಳಿದ್ದಾನೆ.

ಶೃಂಗಾರ ರಸವನ್ನು ಒಂದು ಅಧ್ಯಾಯದಲ್ಲಿ ಪೂರ್ತಿಯಾಗಿ ವಿವರಿಸಿದ ನಂತರ, ಎರಡನೆಯ ಅಧ್ಯಾಯದಲ್ಲಿ ಹಾಸ್ಯರಸ, ಕರುಣರಸ, ವೀರರಸ, ರೌದ್ರರಸ, ಅದ್ಭುತರಸ, ಭಯಾನಕರಸ, ಬೀಭತ್ಸರಸ, ಶಾಂತರಸ ಇವುಗಳ ಲಕ್ಷಣ, ಇವುಗಳ ಭಾವಕಥನ, ತದನುಭಾವ ಸಾತ್ವಿಕಭಾವಕಥನ ಮತ್ತು ಈ ರಸಗಳ ವಿವರಣೆ ಮತ್ತು ವಿಭೇದಗಳನ್ನು ಲಕ್ಷ್ಯಪದ್ಯಗಳೊಂದಿಗೆ ಉದಾಹರಿಸುತ್ತಾನೆ. "ಶಾಂತರಸಂ ವಿಷಯ ಜಗುಪ್ಸಾರೂಪತ್ವಮಾಗಿಯುಂ ಬೀಭತ್ಸ ದೊಳಂತರ್ಭಾವಮಲ್ತು, ಜುಗುಪ್ಸೆ ಇದರ್ಕೆ ವ್ಯಭಿಚಾರಿಯಪ್ಪುದೆಱಿಂದದು ತಾಂ ಸ್ಥಾಯಿತ್ವ ಮನೆಯ್ದುದು. ತಾನೆಂತೆಂದೊಡೆ; ಶಾಂತರಸ ಪರಿಪೂರ್ಣತೆಯೊಳದು ನಿರ್ಮೂಲಮಪ್ಪುದಱಿಂ; (ಧರ್ಮ) ವೀರದೊಳಂತರ್ಭಾವ ಮೆಂದೊಡದುವುಮಲ್ತು. ವೀರರಸಮಭಿಮಾನ ರೂಪತ್ವಂ, ಶಾಂತರಸಮಹಂಕಾರೋಪಶಮೈಕ ರೂಪತ್ವಂ. ಅದಱಿಂ ವೀರಶಾಂತಕ್ಕೇಕತ್ವಪರಿಕಲ್ಪನಮಾಗದು. ಅಂತಾದೊಡೆ ವೀರ ರೌದ್ರಕ್ಕಮೇಕತ್ವಮಪ್ಪುದಱಿಂ ಧರ್ಮವೀರಾದಿಗಳ ಚಿತ್ತವೃತ್ತಿ ವಿಶೇಷಂಗಳವು ಸರ್ವಾಹಂಕಾರಂಗಳ್, ಅಹಂಕಾರ ರಹಿತಂ ಶಾಂತರಸಂ, ಈ ಪಾಂಗಿಂ ಸ್ಥಾಪಿಸಿದೊಡೇನುಂ ವಿರೋಧಮಾಗದು." ಹೀಗೆ ಒಂಭತ್ತು ರಸಗಳು ಬೇರ್ಪಡಿಸಲ್ಪಟ್ಟಿವೆ. ಶೃಂಗಾರದಿಂದ ಹಾಸ್ಯ, ರೌದ್ರದಿಂದ ಕರುಣ, ವೀರದಿಂದ ಅದ್ಭುತ ಮತ್ತು ಬೀಭತ್ಸದಿಂದ ಭಯಾನಕ ರಸಗಳು ಹುಟ್ಟಿಕೊಳ್ಳುತ್ತವೆ. ಅಲ್ಲದೆ,

*ಕರುಣರಸಕ್ಕೆ ವೀರಂ*
*ದೊರೆಕೊಳೆ ಶೃಂಗಾರರಸಕ್ಕೆ ಬೀಭತ್ಸಂ ರೌ*
*ದ್ರರಸಕ್ಕಮದ್ಭುತಂ ವೀ*
*ರ ರಸಕ್ಕೆ ಭಯಾನಕಂ ವಿರೋಧಿಗಳಕ್ಕುಂ*

ಎಂದು, ರಸಸಂಕರ ಮತ್ತು ವಿರುದ್ಧರಸಗಳನ್ನು ಕುರಿತು ಪ್ರಸ್ತಾಪಿಸಿದ್ದಾನೆ. ನಾಗವರ್ಮನು ಕಾವ್ಯಾವಲೋಕನದಲ್ಲಿ ಕರುಣರಸಕ್ಕೆ ಮಿಗೆ ಹಾಸ್ಯರಸಂ….. ನಿರೋಧಮಕ್ಕುಂ ಎಂದಿರುವುದರಿಂದ ಇಲ್ಲಿ ನಾಗವರ್ಮನ ಮತವನ್ನು ಅನುಸರಿಸಿದ್ದಾನೆ.

*ಬೆರೆಸದವೊಲಿರ್ಕೆ ಶೃಂಗಾ*
*ರರಸಂ ಬೀಭತ್ಸದೊಳ್ ಭಯಂ ರೌದ್ರದೊಳಂ*
*ಕರುಣಂ ರಸದೊಳ್ ವೀರಂ*
*ಪರಿಹಾಸದೊಳದ್ಭುತಂ ವಿರೋಧವಿದೆಂದುಂ*

ಇದು ಕವಿಕಾಮನ ಶೃಂಗಾರರತ್ನಾಕರದಲ್ಲಿರುವುದರಿಂದ ಕವಿಕಾಮನ ಮತವಾಗಿರುತ್ತದೆ.

ಮತ್ತು ಗಣೇಶ್ವರಾಜ್ಞಿಕೃತ ಸಾಹಿತ್ಯ ಸಂಜೀವನದಲ್ಲಿ. "ಶೃಂಗಾರಕ್ಕೆ ವೀರ ರೌದ್ರ ಬೀಭತ್ಸ ಕರುಣಾಶಾಂತಗಳರಿಗಳ್, ಹಾಸ್ಯಕ್ಕೆ ಕರುಣ ಭಯನಾಕಂ ರಿಪು; ಕರುಣಕ್ಕೆ ಹಾಸ್ಯ, ಶೃಂಗಾರ ರೌದ್ರ ಶಾಂತಂ(ಗಳ್) ವಿರೋಧಿ; ಭಯಾನಕಕ್ಕೆ ವೀರವಮಿತ್ರಂ ರೌದ್ರಕ್ಕೆ ಹಾಸ್ಯಾದ್ಭುತಂ ಶಾಂತಂ (ಶೃಂಗಾರಂ) ಶತ್ರು; ವೀರಕ್ಕೆ ಭಯಾನಕಂ ಪಗೆ; ಅದ್ಭುತಕ್ಕೆ ರೌದ್ರಂ ಸಪತ್ನಂ; ಬೀಭುತ್ಸಗೆ ಶೃಂಗಾರಮರಿ; ಶಾಂತಕ್ಕೆ ಶೃಂಗಾರ ಮೆಚ್ಚದದಿಂತಱಿವುದು" ಎಂದು ಹೇಳಿ ಸಾಹಿತ್ಯ ಸಂಜೀವನದ ಸಮ್ಮತಿ ಪದ್ಯಗಳನ್ನು ಉದಾಹರಿಸಿ ವಿರುದ್ಧ ರಸಗಳ ಮತಾಂತರವನ್ನು ಪ್ರಸ್ತಾಪಿಸುತ್ತಾನೆ. ಕೊನೆಯದಾಗಿ 'ನವರಸ ಪ್ರಪಂಚಂ' ಎಂಬ ಈ ಪ್ರಕರಣದಲ್ಲಿ, ವಿರುದ್ಧರಸ ಸಮಾವೇಶ ದೋಷ ಲಕ್ಷ್ಯ, ವಿರುದ್ಧರಸ ಸಮಾವೇಶ ದೋಷಾಭಾವಲಕ್ಷಣಂ ಮತ್ತು ಸ್ಥಾಯಿ ವ್ಯಭಿಚಾರಿ ಭಾವವಿಚಾರಗಳನ್ನು ಕುರಿತು ವಿವರಿಸುತ್ತಾನೆ.

'ನಾಯಕ ನಾಯಿಕಾ ವಿವರಣಂ' ಎಂಬ ಮೂರನೆಯ ಪ್ರಕರಣದಲ್ಲಿ "ಇಂಬಾಗಿ ನವರಸಕ್ಕಾಲಂಬನಮಕ್ಕುಂ ಪೊದಳ್ದ ನಾಯಕರುಂ ನುಣ್ಪಿಂಬಿಡಿದ ನಾಯಿಕಾ ನಿಕುರುಂಬ ಮುಮಂತವರ ತೆಱನನು ಟೆ ಬಿಚ್ಚಳಿಪೆಂ" ಎಂದು ಹೇಳಿ ನಾಯಕ ನಾಯಿಕೆಯರ ಸಾಧಾರಣ ಲಕ್ಷಣ ಹಾಗೂ ನಾಯಕ ನಾಯಿಕೆಯರ ಎಲ್ಲಾ ಭೇದಗಳನ್ನು ಪ್ರಸ್ತಾಪಿಸಿ, ಪ್ರತಿಯೊಂದು ಭೇದವನ್ನೂ ಲಕ್ಷ್ಯ ಪದ್ಯಗಳೊಡನೆ ಉದಾಹರಿಸಿದ್ದಾನೆ.

'ವ್ಯಭಿಚಾರಿಭಾವ ವಿವರಣಂ' ಎಂಬ ನಾಲ್ಕನೆಯ ಪ್ರಕರಣದಲ್ಲಿ ಭಾವೋದಯ, ಭಾವಶಾಂತಿ, ಭಾವಸಂಧಿ ಮತ್ತು ಭಾವಶಬಲತ್ವ ಸ್ಥಿತಿಗಳಿಗೆ ವಿದ್ಯಾನಾಥನ ಮಾರ್ಗವನ್ನು ಅನುಸರಿಸಿದ್ದಾನೆ. ಮತ್ತು "ಸಮನಿಸಿ ಗಣಿಸಿದ ಮೂವತ್ತು ಮೂಱು ಸಂಚಾರಿ ಭಾವತತಿಗಾಂ ಪೇೞ್ವೆಂ ಕ್ರಮದೆ ವಿಭಾವಮನನುಭಾವಮನೊಪ್ಪುವ ಹೇಮಚಂದ್ರ ಸೂರಿಯ ಮತದಿಂ" ಎಂದು ಹೇಳಿ ವಿಭಾವಾದಿಗಳ ವಿವರಣೆಯನ್ನು ಕೊಟ್ಟು ವ್ಯಭಿಚಾರಿ ಭಾವಗಳ ನ್ಯೂನಾತಿರೇಕ ವಿಚಾರವನ್ನು ಲಕ್ಷ್ಯಪದ್ಯಗಳೊಡನೆ ವಿವರಿಸಿದ್ದಾನೆ."

**ಶಾರದಾವಿಲಾಸಂ :**

ಇದು ಸಾಳ್ವಕವಿಯ ಮತ್ತೊಂದು ಅಲಂಕಾರ ಗ್ರಂಥ. ಪೂರ್ಣವಾಗಿ ದೊರಕಿಲ್ಲ. ಕೇವಲ ಧ್ವನಿ ಪ್ರಕರಣದ ದ್ವಿತೀಯ ಪರಿಚ್ಛೇದ ಮಾತ್ರ ಲಭ್ಯವಾಗಿದೆ. ಇದರ ಆರಂಭದಲ್ಲೇ ಕಾವ್ಯ, ಧ್ವನಿ, ವಾಚಕಂ, ಲಕ್ಷಣಂ ಹಾಗೂ ಶಬ್ದ ಮತ್ತು ಅರ್ಥಮೂಲದ ವ್ಯಂಜಕಂ - ಇವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ, ಅವುಗಳ ನಾನಾ ಪ್ರಭೇದಗಳನ್ನು ತಿಳಿಸಿ, ಅವುಗಳಿಗೆ ಪ್ರಾಚೀನ ಕಾವ್ಯಗಳ ಉದಾಹರಣೆಗಳನ್ನು ೬೧ ಪದ್ಯಗಳಲ್ಲಿ ನೀಡಲಾಗಿದೆ.

**ವೈದ್ಯ ಸಾಂಗತ್ಯ :**

ಇದು ಸಾಳ್ವಕವಿಯ ವೈದ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಸಾಂಗತ್ಯ ಛಂದಸ್ಸಿನಲ್ಲಿದೆ. ಪ್ರಾಚೀನ ಕಾಲದಿಂದಲೂ ಜೈನರಿಗೂ ವೈದ್ಯಶಾಸ್ತ್ರಕ್ಕೂ ನಿಕಟವಾದ ಸಂಬಂಧವಿದೆ. ಆ ಪರಂಪರೆಯಲ್ಲಿ ಬಂದ ಗ್ರಂಥ - ಸಾಳ್ವನ ವೈದ್ಯ ಸಾಂಗತ್ಯ.

ಕಾವ್ಯ, ಅಲಂಕಾರ ಮತ್ತು ವೈದ್ಯ ವಿಷಯಗಳಲ್ಲಿ ಕೃತಿ ರಚನೆಮಾಡಿರುವ ಸಾಳ್ವಕವಿಯ ಆಚಾರ್ಯ ಕೃತಿ - ಸಾಳ್ವಭಾರತ ಎಂಬ ಪ್ರಸಿದ್ಧಿ ಹೊಂದಿರುವ 'ನೇಮಿನಾಥ ಚರಿತೆ'ಯೇ ಆಗಿದೆ. ಇದು ಮಧ್ಯಮ ವರ್ಗದ ಕಾವ್ಯ. ಆದರೂ ಕನ್ನಡದ ಇತರ ನೇಮಿನಾಥ ಕಥಾ ಕಾವ್ಯಗಳೊಂದಿಗೆ ತೌಲನಿಕ ಅಧ್ಯಯನ ನಡೆಸಬಹುದಾಗಿದೆ. ವಸ್ತುಕವಾಗಿದ್ದ ನೇಮಿ ತೀರ್ಥಂಕರನ ಕಥೆಯನ್ನು ವರ್ಣಕಕ್ಕೆ ತಿರುಗಿಸಿದ ಪ್ರಥಮ ಕೀರ್ತಿ ಸಾಳ್ವಕವಿಗೆ ಸಲ್ಲುತ್ತದೆ.

## ಆದಿ ಪರ್ವ (ಸಂಧಿ ೧)

**ಸಂಧಿ ೧**

ಶ್ರೀಮದಮರಾಧೀಶ ವಂಧಿತ | ನೇಮಿನಾಥ ಚರಿತ್ರವನು ಪು |
ಣ್ಯಾಮೃತವನಾಲಿಪರ ಕರ್ಣರಸಾಯನವನುಸುರುವೆ || ಪಲ್ಲ ||

ಶ್ರೀದಿವಿಜ ನರ ನಾಗಪತಿನುತ | ಪಾದಯುಗನಪಘಾತ... |
....................
...ಯಾಂಬುಧಿ ಸಮವಶ್ರುತಿವಿ | ಭೋದಯಂ ಕಲ್ಯಾಣಪಂಚಕ |
ನಾದ ನೇಮಿಜಿನೇಂದ್ರನೀಗೆಮಗಮೃತ ಸಂಪದವ || ೧ ||

ಅಷ್ಟ ಕರ್ಮವನುಱೆ ಕೆಡಿಸಿ ಸುಗು | ಣಾಷ್ಟಕಮನಾಂತೇಕ ಸಮಯದೊ |
ಳಷ್ಟಮಾವನಿಯಗ್ರ ತನುವಾತದೊಳೆ ಸಲೆ ನೆಲಸಿ ||
ತುಷ್ಟರಾ ಛಾಯಾಪ್ರತುಮೆವೊಲು | ಶಿಷ್ಟರೂಪಾ [ರೂಪರೀ] ಗೆಮ |
ಗಿಷ್ಟಸಿದ್ಧಗುಣಾಷ್ಟಕಮನಾ ಸಿದ್ಧರನುಪಮರು || ೨ ||

ತರದಿನೆಂಟೆಂಟಾವ ಬೋಧ ಸು | ದರುಷನಂ ಪನ್ನೆರಡು ಪದಿಮೂ |
ರುರು ತಪಂ ಚಾರಿತ್ರಮೈದುಂ ಸತ್ವವೆಂದೆಂಬ ||
ಪರಮ ಪಂಚಾಚಾರದೊಳೆ ಭ | ವ್ಯರನುಮೊಡನೆಯಿದಿಪ ಸದಾಚಾ |
ರ್ಯರೆ ವಲಂ ಶಿಕ್ಷಿಸುಗೆ ದಯೆಯಿಂದೆಮ್ಮ ನಾತೆಱದಿ || ೩ ||

ನಿನಗೆ ಕೇಳ್ನಿದ್ರೋಱಷಿ ಸಕಲ | ಜ್ಞನೆ ಸದಾಪ್ತನುಭಯಪರಿಗ್ರಹ |
ವನೆ ತೊಱೆದು ರತ್ನತ್ರಯೋತ್ತಮ ವೃತ್ತನೆಸಗುರು |
ಸುನಯಯುತಮಪಹಿಂಸಮವಿರು | ದ್ಧನುತ ಶಾಸ್ತ್ರಮೆ ಶಾಸ್ತ್ರಮೆಂದು ಱೆ |
ವಿನೆಗಮೋದಿಸಿದಮಳದೇಶಕವೋದಿಸುಗೆ ನಮ್ಮ || ೪ ||

ಸರ್ವ ಜೀವ ದಯಾಂಬುಧಿಗಳ | ಸರ್ವ ಸಂಗರು ಮೌನ ನಿರತರು |
ಸರ್ವಸುವ್ರತಶೀಲ ಗುಣಮಣಿ ಹಾರ ಭೂಷಣರು |
ಸರ್ವಸಂಧ್ಯಾಕಾಲಯೋಗರು | ಸರ್ವ ಚಾರಿತ್ರಮನೆ ಸಾಧಿಪ |
ಸರ್ವ ಸಾಧುಗಳೀಗೆಮಗೆ ನಿರ್ಮ್ಮಲ ಚರಿತ್ರವನು || ೫ ||

ಸಕಲತತ್ತ್ವ ಸುವಸ್ತು ಭಾಷಾ | ತ್ಮಕ ವಿವೃತ ಕಾಲತ್ರಯಮಹಿಂ |
ಸಕ ಮತಾಲೋಷ್ಠಪುಟಕರ್ಮಸುಸಪ್ತ ಭಂಗಿಯುತ |
ಸಕಲ ಬೋಧನ ದಿವ್ಯವಾಗ್ವಧಿ | ನಿಕರ ಶರನಿಧಿ ಚರಮತನು ಬೋ |
ಧಕರೆನಿಪ **ವರದತ್ತ ಗಣಧರ**ರೀಗೆಮಗೆ ಮತಿಯ || ೬ ||

ಕರ್ಮ ವಿಪಿನ ದವಾಗ್ನಿ ಸಜ್ಜನ | ಕರ್ಮಮಪಹಿಂಸಂ ಸಮಸ್ತ ಬು |
ಧರ್ಮ್ಮದದಿ ಧರಿಯಿಸುವ ರತ್ನತ್ರಯ ಸುರತ್ನ ಗಿರಿ ||
ಪೆರ್ಮೆವಡೆದುದನಾದ್ಯನಂತಮ | ದೊರ್ಮೆಯಿಂ ಧಾರ್ಮಿಕರನಾ ಜಿನ |
ಧರ್ಮಮದೆ ತಾಂ ದಾಟಿಸುಗೆ ಕುಂದದೆ ಭವಸಮುದ್ರವನು || ೭ ||

ಮರಕತ ಚ್ಛವಿ ದೇಹರುಚಿಸಿ | ತ್ಕರ ವಿಧೃತ ಚೂತ ಸ್ತಬತೆ ಜ (?)
ಕರಣದಿಂ ತನುಜಾತಮಸ್ತಕ ನಿಹಿತವಾಮಕರೆ ||
ಪರಮಜಿನಪದ ಭಕ್ತೆ ವರ ಕೇ | ಸರಿಸುವಾಹಿನಿ ಮಾಡುಗೀ ಬಂ |
ಧುರಕೃತಿಗೆ **ಕೂಷ್ಮಾಂಡಿಯಕ್ಷಿ** ನಿರಂತರಾಯವನು || ೮ ||

ತನುರುಚಿಯೆ ವೈಢೂರ್ಯಕಾಂತಿಯ | ನನುಕರಿಸಿ ಬಲಗೈಯೊಳೊಪ್ಪಿರೆ |
ವನಜವೇಡಯ ಮೆಱದಿರೆ ಮಾತುಳುಂಗ ಫಲ ||
ಜಿನರಥಮನಿರೆನೆಡಿಯಿಪೊಡೆ | ಮುಖ್ಯವೆಗಡೆನ್ನ ಮನೋ ರಥ (?)
ಮನೋಳ್ಪಮಂ **ಸರ್ವಾಹ್ಣಯಕ್ಷ**ನೆ ನಡೆಯಿಸುಗು ಮುದದಿ || ೯ ||

ವಿತತ ಗುಣಗಣನಿಳಯ ವರಜಿನ | ಪತಿ ಮುಖಾಂಬುಜಜನ್ಮೆ ಚಿನ್ಮಯೆ |
ಸತತ ಸಕಲಕಲಾ ಪ್ರವೀಣೆ ಜಗತ್ರಿತಯ ವಂದ್ಯೇ ||
ಗತದುರಿತೆ ಸುಗತಪ್ರದಾಯಿನಿ | ನುತ ಧವಲತರವರ್ಣೆ **ವರ ಭಾ ||**
**ರತಿ** ಮದೀಯಾನನಸುರಂಗದೊಳೊಲಿದು ನರ್ತಿಸುವೆ || ೧೦ ||

ವಾಣಿ ಪರಮಬ್ರಹ್ಮನೊಪ್ಪುವ | ರಾಣಿ ಚರಣದ್ವಿತಯ ನತಿಗೀ |
ರ್ವಾಣಿ 'ಕರ್ಮಲತಾ' ಕೃಪಾಣಿ ವಿನೀಲ ಘನವೇಣಿ ||
ತ್ರಾಣಿ ರಕ್ಷಿಸು…….ಗುಣ | ಶ್ರೇಣಿ ಸದ್ವರಪಾಣಿ ನುತ ಕ |
ಲ್ಯಾಣಿ ಮನ್ಮುಖ ಕಮಲದೊಳು ನೆಲೆಗೊಳ್ಗೆಸಂತಸಿ || ೧೧ ||

ಇಳೆಪೊಗಳ್ವ ಗುಣದತಿಶಯದ ಕೇ | ವಳಿಗಳೆಸೆವನುಬದ್ಧ ಕೇ |
ವಳಿಗಳ ವಿಮಲಶ್ರುತಕೇವಳಿಗಳೀರೈದು ಪೂರ್ವರನು ||
ತಳೆದು ಪನ್ನೊಂದಂಗವಾಂತು | ಜ್ವಳಿಪ ಪ್ರಥಮಾಂಗಮನೆ ಧರಿಯಿಸಿದ |
ಮಳರಹಿತರಡಿದಾವರೆಗಳನು ವಂದಿಸುವೆನೊಲಿದು || ೧೨ ||

ಆರ್ಯನುತ……..ಸುರಗಿರಿ | ಧೈರ್ಯರೆನಿಸಿದ **ಗೃದ್ಧಪಿಂಚ್ಛಾ** |
**ಚಾರ್ಯ**ರಮಳಮಯಾದ ಪಿಂಚ್ಛಾಚಾರ್ಯರಡಿಗೆಱಗಿ ||
ಧೈರ್ಯಮನಗಿನ್ನೆಲ್ಲೆನಿಪ ತಾ | ತ್ಪರ್ಯದಿಂ ಶ್ರುತ ಪಂಚಮಿಯೊಳಾ |
ಶ್ಚರ್ಯಪುಸ್ತಕಗೈದರ**ರುಹದ್ವಲಿಗಳಿ**ಗೆಱಗುವೆ || ೧೩ ||

ಮೀನ ಕೇತನ ಮದವಳಿದವರ | ……..ನರ ಶ್ರೀ **ಪುಷ್ಪದಂತರ |**
ನೂನ ಗುಣಯುತ **ಭೂತಬಲಿ ಜಿನಚಂದ್ರಮುನಿ**ವರರ ||
ಭೂನುತರ ಪದಕಮಲ ವನವೀ | ದೀನಯದೆ ನಮಿಯಿಸುವ ನನ್ನಯ |
ಮಾನಸಾಬ್ಜಾಕರದೊಳುಳ್ವಲದಿರ್ಕೆ ಸಂತಸದಿ || ೧೪ ||

ಕ್ಷಮೆಗೆ ನಾಲ್ವೆರಲಧಿಕ ತಮ್ಮಾ | ಕ್ಷಮೆಯೆನಿಪವೊಲಿಳೆಯನಂಘ್ರಿಗ |
ಳಮರ ದಿಸೆಪಾ **ಕುಂಡಕುಂದಾಚಾರ್ಯ**ರಂಘ್ರಿಗಳ ||
ಕ್ರಮ**ದುಮಾಸ್ವಾತಿ** ತ್ರಿವಿದ್ಯಾ | ರಮಣರಾ ತತ್ವಾರ್ಥಸೂತ್ರವ |
ಸಮೆದರಾ ಪಜ್ಜಳಿಸುವಡಿಗಡಿಗಡಿಗೆ ವಂದಿಸುವೆ || ೧೫ ||

ಶ್ರೀಮದಮಳ **ಸಮಂತ ಭದ್ರ** | ಸ್ವಾಮಿ **ಕವಿಪರಮೇಷ್ಠಿ ವಿದ್ಯಾ |**
**ಸ್ವಾಮಿ** ಪಂಚ**ತ್ಪೂಜ್ಯಪಾದಸ್ವಾಮಿ** ಚರಣಗಳ ||
ಆ ಮಹಾಪತ್ತಡರೆ ಭವ್ಯ | ಸ್ತೋಮಮುವನುದ್ಧರಿಸಿದುರುಗುಣ |
ಧಾಮರೆಲ್ಲಾಚಾರ್ಯರಡಿಗಳನೊಲಿದು ವಂದಿಸುವೆ || ೧೬ ||

**ವೀರಸೇನಾಚಾರ್ಯ**ರೊಪ್ಪುವ | ಸೂರಿ **ಜಿನಸೇನ**ರ ಜಿನಾಗಮ |
ಸಾರ ಸಿದ್ಧಾಂತಿಗಳೆನಿಪ ವರ**ನೇಮಿಚಂದ್ರ**ಮರ ||
ಮಾರಮದಹರ **ರಾಮಸೇನರು |** ದಾರಗಣದ**ಕಳಂಕ ದೇವರ |**
ಚಾರುಸುಗುಣಾ**ನಂತವೀರ್ಯರ** ಪದಕೆ ನಮೋಯೆಂಬೆ || ೧೭ ||

ಸಂದ **ವಿದ್ಯಾನಂದ ಮಾಣಿಕ | ನಂದಿ ಭಟ್ಟಾರಕ**ರ ಮೆಱೆವ **ಪ್ರ |**
**ಭೇಂದು**ಗಳ ವರ**ರಾಮಚಂದ್ರ**ರ **ವಾಸವೇಂದು**ಗಳ |
ಕುಂದದಾ **ಗುಣಭದ್ರದೇವ**ರ | ವಂದಿಸುರತರು **ಮಾಘನಂದಿಗ |**
ಳಂದದಡಿಯುಗ ವೆಳಗುಗೆ ತೊಳಗಿ ಮನ್ಮನವ || ೧೮ ||

ಮಂಡಲದ ವರರಾಜಗುರುಗಣ | ಸೌಂದರೆನಿಸುವ **ಚಾರುಕೀರುತಿ |**
**ಪಂಡಿತಾಚಾರ್ಯರ** ಪದಂಗಳನಳ್ತಿಯಿಂ ನಮಿಸಿ |
ಮಂಡಲೇಶ್ವರ ವಂದಿತರ ನೆಱೆ | ಹಿಂಡುವಾದಿ ಪ್ರಥಮ ವಚನವ |
ಖಂಡ ಪರಶು ವಿಶಾಲ ಕೀರ್ತಿಗಳಂಘ್ರಿಗೆಱುಗುವೆನು || ೧೯ ||

ನೆಗಳದೇಶೀಗಣ **ವಿಜಯಕೀ | ರ್ತಿ**ಗಗಳ ತನುಜರ ಜಾತರೂಪರ |
ವಿಗತ ಬಾಹ್ಯಾಭ್ಯಂತರ ಗ್ರಂಥರ ದಯಾಪರರ ||
ಮಿಗೆ ಮೆಱೆವ ಕಲಿಕಾಲ ಜಿನರೆನೆ | ಸೊಗಯಿಪೆನ್ನಯ ಗುರುಗಳಾ ಪದ |
ಯುಗಕೆ ಭಕ್ತಿಯೊಳೆಱಪೆನಾ**ಶ್ರುತಕೀರ್ತಿ ದೇವರ**ನು || ೨೦ ||

ಪ್ರಣುತಗುಣಿಗಳ ಜಾತರೂಪಾ | ಗ್ರಣಿಗಳತ್ಯುತ್ತಮರ **ಮಹಿಭೂ |**
**ಷಣಮುನಿಯ ಪಾಲಾದಿದೇವರ ಮೇರುನಂದಿ**ಗಳ ||
ಪಣೆದಣುವ್ರತರಾಗಿಯುಂ ವರ | ಗುಣಧರಪ್ರಾಯರೆ ದಲೆನಿಸುವ |
ಗುಣಸಮುದ್ರ **ಸಮಂತಭದ್ರ**ರ ಚರಣಕೆರಗುವೆನು || ೨೧ ||

ನಟ್ಟಡವಿಯೊಳು ಹಾವುಹುಲಿಕಲಿ | ಜೆಟ್ಟಿಗಂಗಳ ನೆರವಿಯೊಳು ಕಡು |
ಬೆಟ್ಟ ಬೇಸಗೆ ಮಾಗಿಮಳೆಗಾಲದೊಳು ಪರ್ವದಲಿ ||
ನೆಟ್ಟನೋರ್ವನೆ ಬೈಗಿನಿಂ ರವಿ | ಪುಟ್ಟುವಂನಿಗ ಜಾನ ಜಪವಳ |
ವಟ್ಟು ನಿಲುವಾ **ಪಾಲಕೀರ್ತಿ** ನಮೋಸ್ತು [ಗೆ] ಱಗುವೆನು || ೨೨ ||

ವರ್ತಮಾನ ಸಮಸ್ತ ಜಿನಮುನಿ | ಪೋತ್ತಮರ್ಗೆ ನಮೋಸ್ತು ಜಿನಮತ |
ವರ್ತಿಗಳ ನೂತನ ಪುರಾತನ ಕವಿತತಿಗೆ ನಮಿಪೆ |
ಪೆತ್ತ ಮದ್ಗುರು **ಧರ್ಮಚಂದ್ರ** ಋ | ಧೋತ್ತಮರ ಪದಕೆಱಗಿ ಸೂರಿಸು |
ವೃತ್ತರೆಲ್ಲರನಳ್ತಿಯಿಂ ಬಲಬಂದು ವಂದಿಸುವೆ || ೨೩ ||

ಮಿಸುಪ ಜಂಬೂದ್ವೀಪಮೇರುವಿ | ನೆಸೆವ ತೆಂಕಣ ಭರತದಾರ್ಯೆಯೊ |
ಳೆಸೆವ ತೌಳವ ಹೈವ ಕೊಂಕಣ ದೇಶದಧಿನಾಥ |
ವಸುಧೆ ಕೀರ್ತಿಪ ನಗಿರ ನಗರವ | ನೊಸೆದು ರಾಜ್ಯಂ ಗೆಯ್ದರೆಲ್ಲರೊ |
ಳಸದೃಶಂ ಸಮ್ಯಕ್ತ್ವ ಚೂಡಾಮಣಿಯದಾರೆನಲು || ೨೪ ||

ವನಜಮುಖಿಯಾ ಲಕ್ಷ್ಮಿಯುದರದಿ | ಜನಿಸಿದುನ್ನತನಮಲ ಜಿನಮತ |
ವನಧಿವರ್ಧನಚಂದ್ರನಭಿನವನಿಂಬನಿನತೇಜ ||
ಜನನುತ ಮಹಾಮಂಡಲೇಶ್ವರ | ನನುಪಮಿತ ಗುಣಧಾಮನೀಭೂ |
ವನಿತೆಯನು ಪಡೆದಾಳು **ಭೈರವರಾಯ**ನಂದೆಸದ || ೨೫ ||

ಖ್ಯಾತೆ ಪಟ್ಟದರಾಣಿಯಭಿನವ | ಸೀತೆಯೆನಿಸಿದ ನಾಗಲಾಂಬಿಕೆ |
ಯಾತನೂಭವ ನವಮನೋಭವ ಸಂಗನೃಪವೆರಸಿ ||
ಪ್ರೀತಿಯಿಂ ಪಲಕಾಲವಾ ರಘು | ಜಾತನೆನೆ ಧರ್ಮಾರ್ಥಕಾಮವ |
ನೋತು ಸಾಧಿಸಿ ಭೈರವೇಶ್ವರನರಸುಗೆಯಿದನದ || ೧೬ ||

ಆ ನರಾಧಿಪನನುಜನಿಳೆ ಪೊಗ | ಳ್ವಾ ನಗಿರನಗರವನು ಕೂರ್ತುಮ |
ನೋನುರಾಗದಿ **ಚಿಕ್ಕಭೈರವನೃಪತಿ** ಪಾಲಿಸಿದ ||
ಆ ನೃಪನ ಚಿಕ್ಕಂಮ ಪಡೆದಳು | ಮಾನನಿಧಿ **ಮಲಿದೇವಿ**ಯನು ವಸು |
ದಾನಮೇರುವೆನಿಪ್ಪ ಪುತ್ರನನಾತನಾರೆನಲು || ೧೭ ||

ಕುವಲಯಪ್ರಿಯ ವಂಶಬಯ್ಯ ನೃ | ಪವರನಂಗನೆ **ಶಂಕರಾಂಬಿಕೆ |**
ಅವರಗರ್ಭಸುಧಾಂಬುನಿಧಿ ಸಂಭವಸುಧಾಕಿರಣ ||
ಕವಿಸರೋವರ ರಾಜಹಂಸ | ಪ್ರವರ ಜಿನಧರ್ಮಧ್ವಜಂ ಪ್ರಾ |
ಭವದ ದಕ್ಷಿಣ ಸಿದ್ಧಸಿಂಹಾಸನ | ನರಾಧೀಶ || ೧೮ ||

ಪ್ರಣುತನಾ ತ್ರಿಭುವನ ಕರಾರಿ | ತ್ರಿಣಯನಂ ಸಮ್ಯಕ್ತ್ವ ಚೂಡಾ |
ಮಣಿ ವಿಮಲ ಜಿನದೇನರಥಯಾತ್ರಾಪ್ರಭಾವಕನು ||
ಗುಣವಿಧಾನಂ ತ್ಯಾಗವಿದ್ಯೆಯೊ | ಳೆಣೆಯದಾರ್ಶ್ಯೆ ಜಗದ ಗುರುವೆನೆ |
ಫಣಿಪಭೋಗದ **ಸಾಳ್ವಮಲ್ಲ** ನರೇಂದ್ರನದನಾಳ್ವಾ || ೧೯ ||

ಪ್ರಕಟಹರಧರಣಿ ಪ್ರಸುತಾ | ಧಿಕಬಿರುದ ಮುಕ್ಕಣ್ಣ ಕಾದಂ |
ಬಕನೆನಿಸುವಾ **ಶಾಂತದಂಡಾಧೀಶ**ನರ್ಧಾಂ [ಗಿ] ||
ವಿಕಚ ಸರಸಿಜವದನೆ ಲೋಲಾಂ | ಬಿಕೆಯೆನಿಪ ಮಲಿದೇವಿಯಾತ್ಮಜ |
ನಕೃತಕ **ಶ್ರೀಸಾಳ್ವದೇವ ನೃಪಾಲ**ನೊಪ್ಪಿದನು || ೨೦ ||

ಅಳಿಯನೆಂದೊಡೆ ಅಳಿಯನೇ ಚಲ | ವಳಿಯ ಚಾಗವನಳಿಯ ಪಾಳಿಯ |
ನಳಿಯ ಪಂಥವನಳಿಯ ಪೆರ್ಮೆಯನಳಿಯ ಧರ್ಮವನು |
ಅಳಿಯ ಮಾನ್ಯರನಲಿಯನೆನೆಸುವ | ಸುಲಭ ಸಾಳುವ ಮಲ್ಲಭೂವರ |
ನಳಿಯ **ದೇವೇಂದ್ರನೆ** ಸುರಾಜ್ಯವನಾಳ್ವ ಕಾಲದಲಿ || ೨೧ ||

ಜಿನಸಮಯವಾರಾಶಿಚಂದ್ರರು | ಜಿನರ ಪೂಜೆಗೆ ಶಕ್ರರೆಲ್ಲರು |
ವಿನುತ ದಾನಕ್ಕೆಲ್ಲರುಂ ಶ್ರೇಯಾಂಸರೆನಿಸುವರು ||
ಅನಘವೃತ್ತರು ಸಾಳ್ವರಾಜೇಂ | ದ್ರನ ನಗಿರ ನಗರದೊಳಗಾ ಧನ |
ದನನಿಳಿಪ ಧನಪಾಲರಗಣಿತ ಭವ್ಯರೊಪ್ಪಿದರು || ೨೨ ||

ಸೃಷ್ಟಿಗಾತನೆ ವಿವಿಧ ವಿದ್ಯೆಗೆ | ನೆಟ್ಟನೋರ್ವನೆ ಸಾರ್ವಭೌಮನು |
ದಿಟ್ಟನೆನಿಸಿದ ಸಾಳ್ವಮಲ್ಲ ನರೇಂದ್ರನಾನವನಾ ||
ಪಟ್ಟದಾ ಕವಿಯೆಂದೊಡೆಣ್ದೆ ಸೆ | ಮುಟ್ಟೆ ಪಸರಿಪುದರಿದೆ ಗುಣವಳ |
ವಟ್ಟ ನಿರ್ಮಲ ಕೀರ್ತಿಯಾತನ **ಸುಕವಿಸಾಳುವನ** || ೩೩ ||

ರಾಜಸಭೆಯೊಳು ಮಾನ್ಯ ಸತ್ಕವಿ | ರಾಜಿಯೊಳು ಮಿಗೆ ಪೂಜ್ಯನುರುಜಿನ |
ರಾಜ ಪದನಿಧಿ ದೀಪವರ್ತಿವಿನೇಯ ವಾತ್ಸಲ್ಯ ||
ಸಾಜ ಕವಿ ಕರ್ಣಾಟ ಲಕ್ಷಣ | ದೋಜೆಗನು**ಕವಿ ಸಾಳ್ವನಿಂ** ಜಿನ |
ರಾಜ ಚರಿತೆಯ ಭಾಮಿನೀ ಷಟ್ಪದಿಯಲುಸುರೆಂದು || ೩೪ ||

ಸುರಸ ಸಾಳುವ ದೇವಭೂಪತಿ | ನಿರವಿಸಿದನೇಕೆನಲು ಮುನ್ನವೆ |
ವಿರಚಿಸಲು ಬೆಸಸಿದನು ಸಾಳುವ ಮಲ್ಲನದಱಿಂದ ||
ಹರುಷದಿಂ ಜೀವೆಂದು ವಿದ್ವಾಂ | ಸರುಗಳನುಮತದಿಂದ ಪೇಳ್ವೆನು |
ಪರಮ **ನೇಮೀಶ್ವರ ಚರಿತ್ರವನಿಂತು** ಭಕುತಿಯಲಿ || ೩೫ ||

ಶರಧಿಯನು ತೋಳ್ವಲದೋಳಿಸುವೊ | ಡುರವಣಿಪ ಮರುಳಂತೆ ದುರ್ಬಲ |
ನಿರದೆ ನಾಂ ಹರಿವಂಶ ಕುರುವಂಶಾರ್ಣವವನೆನ್ನ |
ದುರುಳಮತಿಯ ಸಹಾಯದಿಂದು | ತ್ತರಿಸ ಬಗೆದನು ಸಂಸರಣ ಸಂ |
ಹರಣ ಕಾರಣವಿದೆ ದಲೆಂದಱಿದೆಸಗದವನಾರೊ || ೩೬ ||

ನೀರಜನ ಚಿನ್ಮಯನ ಜಿನಪನ | ಚಾರುಕಥೆ ಸತ್ಕಥೆಯದಂ ಮನ |
ವಾರೆ ಬೀ……………… ||
ಜಾರ ಚೋರವಿಟಾದಿ ಕಥೆಗಳು | ಸಾರಕಥೆಗಳೆ ಪೇಳ್ದ ಕವಿಯಘ |
ಬೀರುವೆಯನದನರ್ತಿ ಬಡುವರ ಬಗೆಗೆ ಬೆಱಗಾದೆ || ೩೭ ||

ಒಂದು ವೇಳೆಯೊಳೊಮ್ಮೆ ಜಿನಜಿನ | ಎಂದವನೆ ಕೃತಪುಣ್ಯನೆಂದೊಡೆ |
ಕುಂದದಾವಗಮಾ ಜಿನೇಂದ್ರಕಥಾ ಪ್ರಸಂಗವನೆ |
ಚಂದದಿಂ ಭಾವಿಸುವ ಚಂದದೊ | ಳೊಂದಿಸುವ ಬಾಜಿಸುವ ಪರಮಾ |
ನಂದವೆಯಿದುವ ಕಬ್ಬಿಗನವೊಲು ಧನ್ಯನವನಾರೋ || ೩೮ ||

ಪಡೆದು ಸಮ್ಯಗ್ದೃಷ್ಟಿಯೊಳು ಪು | ಟ್ಟಿದಕವಿತ್ವವು ಚಂದ್ರನೊಳು ಪು |
ಟ್ಟಿದ ಸುಧಾ ಕಿರಣಂಗಳಂತತಿ ಸೇವ್ಯ ಸುಖದಮುದು ||
ಪುದಿದ ಮಿಥ್ಯಾ ದೃಷ್ಟಿಯೊಳು ಪು | ಟ್ಟಿದ ಕವಿತೆ ಕಿಂಪಾಕದೊಳು ಪು |
ಟ್ಟಿದ ಫಲದವೊಲು ಸೇವಿಪರ್ಗೆ ಪಾಕದೊಳು ಹಿತಕರವೆ || ೩೯ ||

ಪಣದ ಲಾಭದಿ ಕೀರ್ತಿಪೂಜಾ | ಪ್ರಣಯದಿಂ ಹಿತವೞಿಯದೊಪ್ಪುವ |
ಗುಣವನೊಕ್ಕರೆ ಕಾಸುವೀಸವನೀವ ಮಾನವನ ||
ಗುಣದ ಕಣಿ ದೇವೇಂದ್ರ ಚಿಂತಾ | ಮಣಿಯೆನುತ ಕಾಲ್ಗೆಡದು ಬೇಳಾ |
ದೆಣಿಕೆ ಸಾಕೆಂದನಘ ಚರಿತೆಯನುಸುರಲೊಡರಿಸಿದೆ || ೪೦ ||

**ನೇಮಿನಾಥ ಚರಿತ್ರ**ವೀ ಕೃತಿ | ನಾಮಮದಱಧಿನಾಥನೊಪ್ಪುವ |
ನೇಮಿಜಿನನೀ ಪುಣ್ಯಕತೆಯ ಸುಧಾರಸವನೀಂಟಿ ||
ಪ್ರೇಮವಾದರಿಸುವರೆ ಭವ್ಯ | ಸ್ತೋಮಮಿದು ಜಿನಭಕ್ತ ಸುಕವಿ |
ಪ್ರೇಮ ಶತವೀ **ಸಾಳ್ವಕೃತ**ವೆನೆ ಮೆಚ್ಚದವರಾರೊ || ೪೧ ||

ಪಳಿವನಲ್ಲದೆ ಮೆಚ್ಚನೆಂದುಂ | ಮಳಿನ ದುರ್ಜನನಾ ಮಹಾಕವಿ |
ಗಳ ಕವಿತ್ವಮನೊಳ್ಳಿದರೆ ಕೇಳಾಯೆನಿಪ್ಪುದನು ||
ಇಳಿಯೊಳವಗದು ಸಹಜವೆಂತೆನೆ | ತಿಳಿದ ಜೊನ್ನಕೆ ಜೊನ್ನವಕ್ಕಿಗ |
ಳೆಳಸುವಂತೆಳಸುವುದೆ ಕೆರಳದೆ ರಾತ್ರಿಜಾಗರನು || ೪೨ ||

ಧಾರಣೀ ಸುತರಭಯಸೂರಿಕು | ಮಾರರುತ್ತಮರಾಗಮತ್ರಯ |
ಸಾರ ಸರ್ವಜ್ಞರು ವಿನೇಯ ನೃಪಾಲವಂದಿತರು ||
ಆರಯಲ್ ಪ್ರತಿವಾದಿಗಜಕಂ | ಠೀರವರು **ವರಗುಮ್ಮಟಾರ್ಯ**ರು |
ದಾರರವಧಾರಿಸಿದರೆನಲೀ ಕೃತಿಯೆ ಸುಕೃತಿಯಲೆ || ೪೩ ||

ನವರಸದ ನೆಲೆಮಧುರಭಾವದ | ತವದಲಂಕಾರಂಗಳಿಂದೊ |
ಪ್ಪುವ ವಿಮಲಲಿತಾಂಗ ಮೃದುಪದರಚನೆ ನೆಱೆಮೆಱೆವ ||
ವಿವಿಧ ಗುಣಗಣನಿಳಯೆ ಸೊಬಗಿನ | ಸವಿಯ ಸೈವಳೆಗಱೆವ ಮತ್ಕೃತಿ |
ಚದುರರ ಮನವನಿರ್ಕುಳಿ ಗೊಳುವುದಚ್ಚರಿಯೆ || ೪೪ ||

ಱಟಕುಳಕ್ಷತಲತ್ವರೇಫೋ | ಜ್ವಳರಾಕಱ ಪ್ರಾಸ ಭೇದಂ |
ಗಳ ಸ್ವರವ್ಯಂಜನ ವಿಭಕ್ತಿ ಸಮಾಸ ಶಿಥಿಲಗಳ ||
ಪಱಿಯನೇನುಂ ಪಾಡುಗವಿತೆಗ | ಳೊಳು ವಿಚಾರಸ ಸಲ್ಲವೆಂಬ |
ಗ್ಗಳದ ಪಟಗಬ್ಬಿಗರ [ಪೇೞ್ಕೆಯ] ತೆಱದಿ ವಿರಚಿಸದೆ || ೪೫ ||

ಕೊಲಿಸಿದಾತನೆ ದೇವ ಕೊಂದ | ಗ್ಗಳಿಕೆಯಿಂದವೆ ಪುಣ್ಯಪುರುಷರು |
ಪಲವು ಮಾತೇನ್ನೈವರೊಡವುಟ್ಟಿದರು ಸನ್ನತರು ||
ಲಲನೆಯೋರ್ವಳನಾಳ್ದರೆಂಬೀ | ಪೊಲೆನುಡಿಗೆ ಕಿವಿಗುಡದೆ ಸಜ್ಜನ |
ರೊಲಿದು ಚಿತ್ತೈಸೂದು ಜಿನಪಾವನ ಚರಿತ್ರವನು || ೪೬ ||

ಆದಿಪರ್ವಸದನ್ವಯವು ಪೆಂ | ಪಾದ ವಸುದೇವಪ್ರಯುತ ಕೃ |
ಷ್ಣೋದಯಾಖ್ಯೆಯು ಕಂಸಮರ್ದನವಭ್ಯುದಯ ಪರ್ವ ||
ಓದುವಾ ಪ್ರದ್ಯುಮ್ನವೀಂದ್ರಕೃ | ತಾದರದ ಕಲ್ಯಾಣ ಪಾಮಡವ |
ಜೂದಿನಾರಣ್ಯವು ಜಗಳದುದ್ಯೋಗ ಪರ್ವವಿದು || ೪೭ ||

ನೆರೆದಯುದ್ಧವು ಚಕ್ರಪರ್ವವು | ವರಸುದೀಕ್ಷಾ ಪರ್ವ ಭಾಭಾ |
ಸುರತ್ರಿಲೋಕ ಸಭಾಹ್ವಯವು ನಿರ್ವಾಣ ಪರ್ವವಿವು ||
ಪರಮ ನೇಮಿ ಸುಧಾಕರನ ವಿ | ಸ್ಫುರಿತ ಷೋಡಷ ಕಳೆಗಳೆನೆ ತ |
ಚ್ಚರಿತೆಯಲಿ ತತ್ಕ್ರಮದಿ **ಷೋಡಷ ಪರ್ವ**ವೊಪ್ಪುವವು || ೪೮ ||

ವಿಪುಳ ಗಿರಿಯೊಳು……………. | …………………….. |
…………..ದಾಶ್ರೇಣಿಕನು ಮೈಯಿಕ್ಕಿ ಕೈಮುಗಿದು ||
ಅಪದುರಿತನಿಂ ನೇಮಿನಾಥ [ನ] | [ನುಪಮ] ಚರಿತವನರಿವವೊಲು ನಿರ |
ವಿಪುದೆನಲು **ಗೌತಮ ಗಣಾಧಿ**ಪರಿಂತು ಪೇಳ್ದಪರು || ೪೯ ||

ಎಲೆಮಗಧನೃಪ ಕೇಳು ಕಡೆಮೊದ | ಲಳಿದ ಗಗನದ ನಡುವೆ ಪಿರಿದುಂ |
ಬಳಸಿದಾ ವಾಯುತ್ರಿತಯದೊಳರ್ದ್ಧಮದ್ದಳೆಯ ||
ತಲೆಯ ಮೇಗಡೆ ನಿಲಿಸಿದಿಡಿಮ | ದ್ದಳೆಯೆನಲದಸ್ತಿರ್ಯಗೂರ್ಧ್ವೋ |
ಜ್ವಳ ವಿಭೇದದಿ ಮೂಜಗಂ ಷಡ್ದ್ರವ್ಯಭರಿತವದು || ೫೦ ||

ಬಗೆದಱಿವೊಡೀರೇಳು ರಜ್ಜುವ | ನೊಗೆದ ಮೂರುಂ ಲೋಕದೊಳು ಪೆ |
ರ್ಮೆಗೆ ತವರ್ಮನೆಯಾದ ಮಧ್ಯಮಲೋಕಮಧ್ಯದಲಿ ||
ಸೊಗಯಿಪುದು ತಾಂ ಲಕ್ಷ ಯೋಜನ | ದಗಲವದು ಲವಣಾಬ್ಧಿ ಚಕ್ರದೊ |
ಳಗೆ ಮೆರೆವುದಾ ಜಂಬೂದ್ವೀಪವಿಳೇಶ ಕೇಳೆಂದ || ೫೧ ||

ಬಳಸಿ ತದ್ವಿಗುಣ ದ್ವಿಗುಣದು | ಜ್ಜಳಿಸಿ ಶರನಿಧಿ ದ್ವೀಪವವು ಕೈ |
ಗಳಿಯಸಂಖ್ಯಾತಂ ಸ್ವಯಂಭೂರಮಣ ಪರ್ಯಂತ ||
ಚಳಿಸದಿಪ್ಪವು ನಾಡು ನಗರದಿ | ಕುಳದಿ ಮೆಱೆದಾ ಜಂಬುದೀಪಕ |
ಮಳದ ಕರ್ಣಿಕೆಯಂತೆ ಮೇರುಮಹೀಂದ್ರವೊಪ್ಪುವುವು || ೫೨ ||

ಜನಪ ಕೇಳಲೆ ಸಾಸಿರದ ಯೋ | ಜನವನಿಳೆಯೊಳನಟ್ಟು ವೃತ್ತದಿ |
ಕನಕಗಿರಿಯಾ ತೊಂಬತೊಂಬತು ಸಾವಿರವನೇಳು ||
ವನಚತುಷ್ಕ ಚತುಷ್ಕ ಮೇಖಲೆ | ಜಿನಭವನ ಪದಿನಾರು ಸುರತರು |
ವನಮಿಷರ ತಿಂತಿಣಿ ನಿರಂತರದಲ್ಲಿ ಶೋಭಿಸುವುದು || ೫೩ ||

ಜಿನರ ಜನ್ಮಸ್ಥಾನ ಭವ ಪಾ | ವನ ಜಲವೆ ನಿರ್ಜರಜಲಂ ಶಿಲೆ |
ಕನಕಮಣಿ ಪಕ್ಕಾಡುವವರಿಂದ್ರಾದಿ ಸುರನಿಕರ ||
ವನದ ತರು ಸುರತರು ರವಿಂದುಗ | ಳನುದಿನಂ ಬಲಬಪ್ಪರೆನೆ ತಳೆ |
ದನುಪಮಾದ್ರಿಯನುಪಮಿಸುವ ಕವೀಂದ್ರನವರಾರೊ || ೫೪ ||

ಅದರ ಪೂರ್ವಾಪರದೊಳೆಸೆದಿ | ಪ್ಪುದು ವಿದೇಹಮಿದೆರಡುಮವ ಜೊಲ |
ಗುದಯಿಸಿರ್ಪುದು ನೋಡೆ ಮೂವತ್ತೆರಡು ನಾಡುಗಳು ||
ಪದೆದಿಹುದು ಜಿನಸಮವಶ್ರುತಿತಾ | ನೊದವಿಹುದು ಜಿನ ಧರ್ಮಮೊಂದ |
ಲ್ಲದೆ ಕುಧರ್ಮದ ವಾರ್ತೆಯಲ್ಲಿಲ್ಲೆಂದನಾ ಮುನಿಪ || ೫೫ ||

ಅದರೊಳಪರ ವಿದೇಹದೊಳು ಪೆಂ | ಪೊದವಿಹುದು ಶೀತೋದೆಯೆಂಬಾ |
ನದಿಯದಱ ಬಡಗಣತಡಿಯ ನಾಡೆಂಟಱೊಳು ಮೆಱೆವ ||
ನದಿ ಸರೋಜ ಸುಗಂಧಿಬನ ಮೃಗ | ಮದ ಸುಗಂಧಿ ಮಹಾವಿಪಿನ ಗಜ |
ಮದ ಸುಗಂಧಿಯೆನಿಪ್ಪ ಗಂಧಿಳ ವಿಷಯವೆಸೆದಿಹುದು || ೫೬ ||

ಅಲರ್ದ ತಾವರೆಗೆರೆಗಳಿಂ ಕಂ | ಮಲರ್ದವೂದೋಂಟಂಗಳಿಂ ಕ |
ತ್ತಲಿಸಿ ಬೆಲದೆಳೆ ನಂದನಂಗಳಿನೂರು ಕೇರಿಗಳಿಂ ||
ಬೆಳೆದ ಕಮ್ಮಂಗಳವೆಪೊಲದಿಂ | ಪಿಳಿದರೊಮ್ಮನೆ ರಸವೊಗುವ ಕಡು |
ಬೆಳೆದ ಕಬ್ಬಿನ ಕೆಯಿಗಳಿಂ ಸೊಗಯಿಸುವುದಾ ವಿಷಯ || ೫೭ ||

ಕರಿಗಳಿಲ್ಲದ ಕಾಡು ಮಾಣಿಕ | ದುರುಳಿಯಿಲ್ಲದ ಬೆಟ್ಟ ಚಂದನ |
ತರುಗಳಿಲ್ಲದರಣ್ಯವಂಚೆಗಳಿಲ್ಲದ ಬೆಂಚೆ ||
ಪರುಷವಿಲ್ಲದ ಭೂಮಿ ಮುತ್ತಿನ | ನೆರವಿಯಿಲ್ಲದ ಮಣಲು ಹೊಂದಾ |
ವರೆಗಳಿಲ್ಲದ ತಿಳಿಗೊಳಂಗಳವಿಲ್ಲ ಮತ್ತಲ್ಲಿ || ೫೮ ||

ಯೆಡೆಗಿಡಿದು ಚೆಂದೆಂಗಿನೆಳಗಾ | ಯೊಡೆದು ಝೋರೆನೆ ಪೊಸರ್ವ ಪೊನಲಿಂ |
ಕಡುವೆಳೆದ ರಸದಾಳಿಗಬ್ಬುಗಳೆಲೆಯ ಬಾಯಿಧಾರೆ ||
ಅಡಸಿ.....ನಾಂತು ಕಾಳ್ಬುರ | ವಿಡುವ ತನಿರಸದಿಂದ ಬೆಳೆವುವು |
ಬಿಡದೆ ತದ್ವಿಷಯದೊಳು ಸೊಂಪಿನ ಗಂಧಸಾಲಿಗಳು || ೫೯ ||

ಬಡತನವು ಕರ್ಕಶತೆಯಲ್ಲಿಯ | ಮಡದಿಯರ ನಡುವಿನೊಳು ಮೊಲೆಯೊಳು |
ಮಡಿವೆಸರು ಮರುಗದೊಳು ಪಳಿವೆಸರೊಂದು ವಸನದೊಳು ||
ಪಿಡಿಯೆನಿಪ್ಪುದು ಕರಿಣಿಯೊಳು ಮು | ಕ್ಕೊಡೆಯೆನಿಪ್ಪುದು ಜಿನಪತಿಯ ಮು |
ಕ್ಕೊಡೆಯೊಳಲ್ಲದೆ ನೋಳ್ಪೊಡಿಲ್ಲಾ ಮೆಱೆವ ನಾಡೊಳಗೆ || ೬೦ ||

ದೇವಪಶುವಾ ವಿಷಯದೊಳಗೊಂ | ಡಾವಿನೊಂದೇ ಮೊಲೆಯ ತಿಕ್ಕನೆ |
ತೀವಿ ಕುಡಿದಾ ಕಾಮಧೇನುವದೆನಿಸಿಕೊಂಡುದೆನೆ ||
ಗಾವರಿಸಿ ಪಾಮರಿಯರರಗಿಳಿ | ಸೋವುತಿರೆ ಚೆಲ್ವಿಕೆಯನೀಕ್ಷಿಸಿ |
ದೇವಕಾಂತೆಯರೆವೆ ಮಿಸುಕರೆನೆ ಪೊಗಳ್ವರಾರದನು || ೬೧ ||

ತುಂಬುದಿಂಗಳು ಮೊಗದ ನಸುನಗೆ | ಯೆಂಬ ಬಾಂದೊಱೆದೆರೆವೊಯಿದು ನಿಡು |
ಗಂ ಬೆಳಗು ಜೊನ್ನದೊಳು ಮುಳುಗಿಸಿ ತಮ್ಮ ಲಾವಣ್ಯ ||
ಯೆಂಬ ಪನಿನೀರೆಱೆದು ಚೆನ್ನದ | ಕುಂಭದಲಿ ಕಂಪಿಂಪು ತಂಪೆಸೆ |
ವಂಬುವೆ ಱೆವರು ಪಥಿಕರಿಗೆ ಅಱವಟಿಗೆ ರತಿಯಾರು || ೬೨ ||

|| ಅಂತು ಸಂಧಿ ೧ ಕ್ಕಂ ಮಂಗಳಮಹಾ ||

# ಆದಿ ಪರ್ವ (ಸಂಧಿ ೨-೩)

**ಸಂಧಿ ೨**

ಸಿಂಹಪುರವರ್ಣನೆ ನೃಪಾಲಕ | ಸಿಂಹನರುಹದ್ದಾಸ ಭೂಪತಿ |
ಸಿಂಹಮಧ್ಯೆ ಲತಾಂಗಿ ಜಿನದತ್ತೆಯು ಸುಖದಲಿಹರೂ || ಪಲ್ಲ ||

ಇಂತು ಮೆಱೆದಾ ದೇಶಲಕ್ಷ್ಮೀ | ಕಾಂತಮುಖಮಂಡಲವೆನಿಪ್ಪುದು |
ಚಿಂತೆಯೆಂಬ ಗಜಕ್ಕೆ ಸಿಂಹವೆನಿಪ್ಪ ಸಿಂಹಪುರ |
ಕಂತುವಿನ ನೆಲೆವೀಡು ಸೊಬಗಿನ | ಸಂತತಿಯ ತಾಯ್ವೀಡು ಲಕ್ಷ್ಮಿಯ |
ಸಂತಸದ ಬಾಳ್ವೀಡೆನಿಸಿ ಶೋಭಿಪುದು ಸೊಬಗಾಗಿ || ೧ ||

ಅಳಿಗುರುಳ ತಾವರೆಮೊಗದ ಪೊಳೆವ | ರಳುಗಂಗಳ ಸೋಗೆದುರುಬಿನ |
ಗಿಳಿನುಡಿಯ ಪೊಣರ್ವಕ್ಕಿ ಮೊಲೆಗಳ ಕೆಂಪುದಳಿರಡಿಯ ||
ಸೆಲೆ ನಡುವ ಪೊಂಬಾಳೆದೊಡೆಗಳ | ಕಳರುತಿಸ್ವನದೆಲರ ಸುಯ್ಯಾ |
ಪೊಳಲ ಪೊರವಲಯದಲಿ ನಂದನಲಕ್ಷ್ಮಿ ಶೋಭಿಪಳು || ೨ ||

ಮೆಱೆಯಲತಿಲಾವಣ್ಯವಾರಿಯ | ನೆಱೆದು ಸಲಹಿದ ಮಲ್ಲಿಕಾಲತೆ |
ಕಱೆದು ಚಂದ್ರನ ಜೊನ್ನರಸದಿಂ ಬೆಳಸಿದಿಮ್ಮಾವು ||
ನೆಱೆ ಬಸಂತನೆ ಮದನರಸಕೆಂ | ದೆಱಕವೋವಿದ ಚೆಂದಳಿರ ನನೆ |
ದುಱುಗಲೊದವಿಶೋಕೆಗಳು ಬನದೊಳು ವಿರಾಜಿಪವು || ೩ ||

ನಳನಳಿಸುವ ತಮಾಲಲತೆವನೆ | ಯೊಳಗಶೋಕಲತಾಲತಾಲಯ |
ದೊಳಗೆ ದ್ರಾಕ್ಷಾಮಂಡಪಂಗಳೊಳಿಟ್ಟ ಕಮ್ಮರಲ ||
ತಳಿರ ಪಸೆಗಳ ಮೇಲೆ ಕರ್ಪುರ | ಗಳಹದಿಗಳೊಳು ಪೊರಳ ನೆರೆವ |
ಗ್ಗಲ ವಿರಹಿಗಳು ದಂಪತಿಗಳಲ್ಲಲ್ಲಿ ನೆರದಿಹುದು || ೪ ||

ಅಲರ್ದ ತಾವರೆವಂಡನುದುರಿಸಿ | ಕೊಳನ ಹೊಂದೆರೆಯೆತ್ತಿಮಿಂದೇ |
ಳೆಲೆಯ ವಾಳೆಯ ಕರ್ಪುರದ ಧೂಳಾಟಗಳನಾಡಿ |
ಬಳಲಿ ಬಂದಾ ಲತೆವನೆಯೊಳು | ಜ್ಜಳಿಪ ನಲ್ಲರನಪ್ಪಿ ನಂದನ |
ದೊಳಗೆ ಸುಳಿದಾಡುವುದು ಬಾಲಕನಂದದೊಂದೆಲರು || ೫ ||

ವಾರಿನಿಧಿ ಮುನಿ ಕುಡಿದ ಕಪಿ ಕ | ಯ್ಯಾರೆ ಕಟ್ಟಿದ ಕುಂದುಗಳೆವೊಡೆ |
ಸೇರಿತೀ ಪುರಸಿರಿಯನೆನೆ ಜಳಖಾತಿಕೆಯು ಬಳಸಿ ||
ಮೇರುನವನೇ ಪಟ್ಟೆವೊಯ್ದಾ | ವಾರಿರುಹಭವನಾ ಪುರಶ್ರೀ |
ಚಾರು ತೆರೆ ಸುತ್ತಿಟ್ಟವೆನೆ ಹೊಂಗೋಂಟೆರಂಜಿಪುದು || ೬ ||

ಪರನೃಪರು ಕಪ್ಪಗಳು ತಹದುದ | ಕರಿಘಟೆಯ ವಾಜಿಗಳ ರತ್ನಾ |
ಭರಣ ಪೀಟಿಕೆಗಳ ದುಕೂಳಾಂಬರದ ದಿಂಡುಗಳ ||
ಭರದಿ ಮೊಳಗುವ ವಾದ್ಯಗಳ ಸುಭ | ಟರ ನೆರವಿಯಂಡಳದ ಸಂದಳಿ |
ತರತರದೆ ತತ್ಪುರದ ಬೀದಿಯೊಳಿಂಬುದುಂಬಿಹುದು || ೭ ||

ಪಡಿಯಱರ ತಂಬುಲಿಗ ಕಬ್ಬಿಗ | ಪಡೆವಳರೆ ಸೆಜ್ಜವಳ ಗಂಧಿಗ |
ಮಡಿವಳರ ಕಾಲುರಿಚ ಪೊಳಲಿಚ ದಡಿಗ ಬಗೆಕಾಱ ||
ನಡೆವಣಿಗ ಗೋಳೈಲ ಸೂಳೈ | ತಡಪವಳ ಬಳೆಗಾಱ ಕಮ್ಮಱ |
ನುಡಿಗ ಕುಂಬಱ ಕಂಚುಗಾರರ ಕೇರಿ ಮೆ ಱೆದಿಹವು || ೮ ||

ರೂಢಿವಡೆದ ನೃಪಾಲಕರ ನೆಲೆ | ಮಾಡ ಚೆನ್ನದ ಚೆನ್ನ ಕನ್ಯಾ |
ಮಾಡವೊಪ್ಪುವಮಾತ್ಯ ಮುಖ್ಯರ ಪಾಲ್ಸೊತೆಯ ಮಾಡ ||
ಗಾಡಿಕಾತಿಯರೆನಿಪ ಗಣಿಕಾ | ಮಾಡವಿವು ಚೆಲುವಿಕೆಯನೀವುವು |
ನೋಡುವರ ಕಂಗಳಿಗೆ ಪೊಳಲಾ ಕೇರಕೇರಿಯೊಳು || ೯ ||

ರತಿಯ ಜ ಱೆದವರು ಚೆಲುವಿನಿಂ ಸರ | ಸತಿಯ ನಗುವರು ಜಾಣೆಯಿಂ ಪಾ |
ರ್ವತಿಯ ಪಳಿವರು ಮೈಮೆಯಿಂ ಸಿರಿಯೇಳಿಪರು ಸೊಬಗಿಂ ||
ಅತಿನಿಡಿಯ ಕಂಗುಡಿಯ ಹೊಯಿಲಿಂ | ಮತಿಗೆಡಿಪ ಬೆಲೆವೆಣ್ಗಳೊಪ್ಪಿದ |
ರತುನಗಳ ನೆಲೆಯುಪ್ಪರಿಗೆ ತರತರದಿ ಮೆಱೆದಿಹುದು || ೧೦ ||

ರಂಭೆಯುಯ್ಯಲ ತೂಗುವೂರ್ವಶಿ | ಪೊಂಬಡಿಗವಿಡಿವರುಣನಟ್ಟಿದ |
ಕೆಂಬರಲ ತೊಡುದೇವಿ ಮನಸಿಜನಿತ್ತರಳ ಮುಡಿಗೆ ||
ತುಂಬು ಬೆಳ್ಳಾನೆಯ ಸುರಾಧಿಪ | ನೆಂಬನೊತ್ತೆಗೆ ತಂದು ಹೊಱಗಹ |
ನೆಂಬ ಮಾತುಗಳಿಲ್ಲದಿಲ್ಲ ಸೂಳೆಗೇರಿಯೊಳು || ೧೧ ||

ಮಾಲೆಗಟ್ಟುತೆ ನೋಟಕರ ಕಣ್ | ಮಾಲೆಗಟ್ಟುವರೊರ್ಮೆ ತುಂಬಿಯ |
ಮಾಲೆಮಾಲೆಯ ಕಾಣಗುಡದಿರೆ ತಮ್ಮ ನಱುಸುಯ್ಯ ||
ಮಾಲೆಮಾಲೆಯ ತೋ ಱೆಕಟ್ಟಿದ | ಮಾಲೆಯನೆ ವಿಟಮಾಲೆಗತಿ ಸ |
ಲ್ಲೀಲೆಯಿಂ ಮಾಱುವರದಲ್ಲಿಯ ಮಾಲೆಗಾರ್ತಿಯರು || ೧೨ ||

ಬಟ್ಟಚಂದಿರಕಾಂತದಾ ಕಾ | ಲಿಟ್ಟು ಮೃಗಮದ ಕರ್ಪೂರದಪುದಿ |
ವಿಟ್ಟು ಚಂದನ ತುಂಡುವಿಡಿದರೆವವರ ನಗೆಮೊಗವ ||
ನೆಟ್ಟನಿಂದುವೆಯೆಂದು ಕಲುನೀ | ರಿಟ್ಟುಬರೆ ಪದಗಾಣಗುಡದಿರೆ |
ಚಿಟ್ಟು ಮೊಲೆ ಬಳಲುವರನಿಬರ | ಘಟ್ಟಿವಳ್ತಿಯರು || ೧೩ ||

ಕುಂಚಗಾಱರ ಹಸರದಿಂ ಕುಡಿ | ಮಿಂಚುಗಳು ಬಳೆಗಾಱವಸರದೆ |
ಗೊಂಚಲಿಪ ಕರಿಮುಗಿಲುಗಳು ಪಲರನ್ನ ಪಸರಗಳಿಂ ||
ಪಂಚಳಿಪ ಸುರಧನುಗಳೆನಿಸಿ ಪ | ಳಂಚುವಂತಿರೆ ಬೀದಿಯೊಳು ಪೊಸಕಾ |
ರೆಂಚದರ ನಾದಪುದೆನುತ ತೇಗುವವು ಕೇಕಿಗಳು || ೧೪ ||

ಬಳ್ಳಿವೆಸೆದೆಳೆವೇಳು ನೆಲೆಗಳ | ಬಳ್ಳಿವಾಡದ ರನ್ನ ದೀಧಿತಿ |
ಮಿಳ್ಳಿಸುವ ಗೋಪುರದ ಮಾನಸ್ತಂಭ ತೋರಣದ ||
ತಳ್ಳಳಿಪ ಮಣಿಲಂಬಣದ ಮುಗಿ | ಲಳ್ಳಿಱಿವ ಮಣಿಗಳ ಸಗಳ ಚೆಲು |
ವಳ್ಳಿತೆನೆ ಪೊಂಬಸದಿಗಳೆ ಆ ಪೊಳಲೊಳೆಸೆದಿಹುವು || ೧೫ ||

ಸಂತಸದಿ ಪೊಣ್ಮಿದುದು ದನಿದನಿ | ಚಿಂತನೆಯೆ ಚಿಂತನೆಯೆ ತಾಂ ಸಿ |
ದ್ಧಾಂತವಾ ಸಿದ್ಧಾಂತ ವೇದಿಗಳಖಿಲ ಮುನಿವರರು ||
ಅಂತೆಸೆವೆ ಮುನಿಪಾದದೊಳ್ | ಭೂಕಾಂತ ಕೋಟಿ ಪ್ರಣತಿ ನತಿಸುವ |
ಕಾಂತ ಭವ್ಯರ ಜಿನರ ಚೈತ್ಯಾಲಯದೊಳೆಸೆದಿಹರು || ೧೬ ||

ಪುರ ಸರೋವರದೊಳಗೆ ಪಳುಕಿನ | ಪಿರಿಯ ಕೋಟೆಯ ತೆನೆಗಳೆಸಳೆನೆ |
ವರ ಸುವರ್ಣೋತ್ತುಂಗ ಸೌಧಮೆ ಕರ್ಣಿಕೆಯದಾಗೆ ||
ಅರುಣ ಮಣಿಮಾಲೆಯ ಬಳಸು ಕೇ | ಸರವೆಣಿಸೆ ರಾಜಾಲಯ ಶ್ರೀ |
ಶಿರಸರೋರುಹವೆನಿಸಿತರಮನೆ ಕಾಂತಿಜಲದೊಳಗೆ || ೧೭ ||

ಸಾಲೆಸೆವ ಪಲತೆಐದ ವಾಜಿಯ | ಸಾಲೆ ಆನೆಯ ಸಾಲೆ ಪಿಡಿಗಳ |
ಸಾಲೆ ಕಲಭದ ಸಾಲೆ ಒಂಟೆಯ ಸಾಲೆ ಓಗಲದ |
ಸಾಲೆ ನಾಟಕ ಸಾಲೆ ಭೋಜನ | ಸಾಲೆ ಮಂಥಣ ಸಾಲೆಯಾಯುಧ |
ಶಾಲೆ ಮೊದಲಾದಖಿಳ ಭವನದಿನೆಸೆವುದರಮನೆಯ || ೧೮ ||

ಚಂದಿರನ ರಥವಖಿಲ ಜಗದಾ | ನಂದಹರ್ಮ್ಯದ ವಜ್ರಶಿಖರವ |
ನೊಂದು ದಿನ ಪಾಯ್ದೊಡೆದ ಕಲೆಕಱೆಯಾಗಿ ಬಿದುವಿನೊಳು ||
ಇಂದುವದೆ ರವಿ ತೆಂಕ ಬಡಗಲು | ಒಂದಿ ನಡೆಯೆಂದಾ ಗೃಹೇಂದಿರೆ |
ಅಂದು ಕೈಬೀಸುವವೊಲಾದದು ಗೆಜ್ಜೆವಳಯಿಗೆಯು || ೧೯ ||

ಆ ಪೊಳಲನೊಸೆದಾಳ್ವನಾತನ | ರೂಪಿಗಂಗಜ ದಾಸನಾವಗ |
ಕೂಪದಾಸನು ಪೂರ್ವಕೃತ ಪುಣ್ಯವೆ ಸುತೇಜಕ್ಕೆ ||
ಆ ಪದುಮಸಖ ದಾಸ ಶಾಂತತೆ | ಗೀ ಪದುಮರಿಪು ದಾಸನೆನಿಸಿಯೆ |
ಭೂಪನರಹದ್ದಾಸನೆನಿಸಿದನೆಂದನಾ ಮುನಿಪ || ೨೦ ||

ಅವನ ಕೀರ್ತಿಸುಧಾಂಬು ನಿಧಿಯೊಳು | ಹಿಮಕರನೆ ನೊರೆ ಬಾಂದೊಱೆಯೆ ತೆರೆ |
ಹಿಮ ಶಿಖರಿ ಹರಗಿರಿ ಕುಱೆವೆ ಬೆಳ್ವಾನೆ ನೀರಾನೆ ||
ಕವಿದತಾರೆಯೆ ಮೀನುಗಳು ದಿಗು | ನಿವಹದಂತೆಮೆ ಮೇರೆ ಮೂಱಿಂ |
ಭುವನಮದೆ ಗುಂಪೆನಿಸಿ ರಂಜಿಸುತಿರ್ಪುದನವರತ || ೨೧ ||

ಪೊಡವಿಯೊಳು ಸಿರಿನೃಪರ ಹಿಂಡನು | ಬಿಡದೆ ಸುಡುವಾ ನೃಪನ ತೇಜದ |
ಕಿಡಿಗಳೈದುರಿ ಸಿಡಿದು ತಾವೈದೆಡೆಗಳೊಳು ಸಿಲುಕಿ |
ಮೃಡನ ಕಂಣುರಿ ಚಂಡಕಿರಣನು | ಸಿಡಿಲುಗಿಚ್ಚುದವಾಗ್ನಿ ಪೀರುವ |
ವಡಬ ಸಿಖಿಯೆಂದಾದವಂದಿಂದೀ ಧರೀತ್ರಿಯೊಳು || ೨೨ ||

ಧುರದೊಳರುಹದ್ದಾಸರಾಯನ | ವರ ಕೃಪಾಣನ ಪೊಗರು ಪೊಗರಿ |
ಲ್ಲರಿ ನೃಪಾಲರ ಶಿರವನೊಡೆವೊಯಿದೆತ್ತೆ ಮತ್ತವರ ||
ಬರೆದ ಪಣೆಯಕ್ಕರಗಳವೆ ಮಿಗೆ | ನೆರೆದು ಪತ್ತಿದುವಕ್ಕು ಮಲ್ಲದೊ |
ಡಿರದವರ ನೊಸಲಕ್ಕರಂಗಳು ಮಾಯವಾದಪುದೆ || ೨೩ ||

ಜಿನಪದಾಂಬುಜಪೂಜೆಗವನೋ | ರ್ವನೆ ವಲಂ ಜಿನದಾಸನಾಗಿರೆ |
ಜಿನನೆಕೊಟ್ಟಾ ಪುಣ್ಯಲಕ್ಷ್ಮಿಯೆನಿಪ್ಪಳಾ ನೃಪನ ||
ವನಿತೆವರ ಜಿನದತ್ತೆಯೆಂಬಳು | ವಿನುತ ಸೌಭಾಗ್ಯದ ಸುಶೀಲದಿ |
ವನಜಗಂಧಿನಿ ಮನದಮಾಣಿಕವೆನಿಸಿ ರಂಜಿಪಳು || ೨೪ ||

ನನೆಗಣೆಯನೊಲಿದರ್ಚಿಸುವ ಮೋ | ಹನದ ಸಿರಿಯೋ ಕಬ್ಬುವಿಲುಗಾ |
ಱನೆ ನಲುವಿನಾರಾಧಿಸುವ ಮಂತ್ರಾದಿದೇವತೆಯೊ ||
ಮನಸಿಜನೆ ಪೂಜಿಸುವ ಕಡುಪೆಂ | ಪಿನ ವಿಜಯಲಕ್ಷ್ಮಿಯೊಯೆನಿಸಿಕಾಂ |
ತನ ಮನಮೆ ತಾನಾಗಿ ಸುಖದಿರುತಿಪ್ಪಳನವರತ || ೨೫ ||

|| ಅಂತು ಸಂಧಿ ೨೮ಕ್ಕಂ ಮಂಗಳ ಮಹಾಶ್ರೀ ||

**ಸಂಧಿ ೩**

ಇತ್ತಲರುಹದ್ದಾಸನಾ ಜಿನ | ದತ್ತೆ ವಿಶ್ರುತೆ ಪುತ್ರದೋಹಳೆ |
ಪೆತ್ತಳಪರಾಜಿತ ಕುಮಾರನನಘ ವಿದೂರನನೂ || ಪಲ್ಲ ||

ಒಂದುದಿನ ಜಿನದತ್ತೆ ವರಜಿನ | ಮಂದಿರಕೆ ಪೋತಂದು ಪೂಜೆಯ |
ನಂದದಿಂ ನೆಱೆ ಮಾಡಿ ಚಂದ್ರಪ್ರಭ ಜಿನೇಂದ್ರಂಗೆ ||
ವಂದಿಸಿದ ತದನಂತರಂ ನಿಜ | ಮಂದಿರಕೆ ಬಪ್ಪಾಗಳಾದಪು |
ದಂದು ಮಧ್ಯಾಹ್ನಿಕದ ಸನ್ನೆಯ ಸಂಕದಿಂಚರವು || ೧ ||

ಇದು ಮಹಾಮುನಿಚರ್ಯಕಾಲವು | ಇದುವೆ ಪಾತ್ರಕ್ಷೇತ್ರ ಶುದ್ಧಿಯೊ |
ಖೊದವಿ ಪುಣ್ಯದ ಬಿತ್ತ ಬಿತ್ತುವ ಯೋಗ್ಯ ಕಾಲವಲಾ ||
ಇದು ಸುಗತಿ ಬೆಳಸಾಂಪ ಪೊಳ್ತಂ | ದದನೆ ಬಗೆವುತೆ ಭಕ್ತಿಯಿಂ ವಿಭ |
ವದೊಳು ರಾಯನ ರಾಣಿ ಪೊಗುತರುತಿರ್ದಳರಮನೆಯ || ೨ ||

ಅರಸಿ ಬಾಗಿಲುವಾಡದಲಿ ಮಿಗೆ | ಹರುಷದಲಿ ನಿಂದಿರ್ಪುದುಂ ಕೇ |
ಸರಿಯುಮಾನೆಯ ಮರಿಯುವೇಣನ ಕರುವು ಪೆರ್ಬುಲಿಯು ||
ಉರಗಶಿಶುವುಂ ನವಿಲುಮಂಜರೆ | ಬರೆ ಸಮೇಳದೆ ಕೂಡೆ ಮುನಿಪತಿ |
ಚರಿಗೆ ಗೊಟ್ಟನರಣ್ಯದಿಂದಾ ರಾಜವೀಥಿಯೊಳು || ೩ ||

ಪೆಗಲಮೇಗಿರೆ ಬಲದ ಕೈ ಗುಂ | ಡಿಗೆಯ ಪಿಡಿದಿರೆ ವಾಮಕರವಾ |
ನೊಗನ ಪವಣಿನ ನೆಲದೊಳಾಡೆ ದಯಾವಿಳೋಕನವು ||
ದಿಗುವಸನರಡಿಗಳು ನೆಲನಮೊ | ಯ್ಯಗೆ ಪುದಿವುತಿರೆ ಚಂದ್ರಗತಿಯಿಂ |
ಸುಗುಣಭೂಷಣ ಕುಕ್ಕುಟಾಸನ ದೇವನೇಳ್ತಂದ || ೪ ||

ಕಚ್ಚೆಗಟ್ಟದೆ ಕೈದುವಿಡಿಯದೆ | ಕೆಚ್ಚೆದೆಯ ಮನಸಿಜನ ತಪಸಿನ |
ಕಿಚ್ಚಿನಿಂದುರುಪಿದೆ ಮಹಾಮೋಹಾಸುರನ ಮುಸುಡ ||

ನುಚ್ಚುಗಟ್ಟಿದೆ ದುರಿತ ವಿಪಿನಕೆ | ಮಚ್ಚಕೊಂಡೇ ವಿನೇಯ ಸುರತರು |
ಮೆಚ್ಚದಿಪ್ಪಳೆ ನನ್ನ ವ್ರತ ಶ್ರೀ ಮಹಾಮುನಿಪ || ೫ ||

ಎಂದು ಕೀರ್ತಿಪ ವಂದಿಗಳಿಗರ | ವಿಂದಮುಖಿ ಮಣಿದೊಡವನೀವುತೆ |
ಸಂದಮುನಿಪದನಿಧಿಗೆ ತಾನುರುದೀಪವರ್ತಿಯೆನೆ ||
ಬಂದೆರಗಿ ಗುರುಭಕ್ತಿಯಿಂ ಫಲ | ಚಂದದರ್ಚನೆಯಿಂದೆ ಪೂಜಿಸಿ |
ಬಂದಿಸಲು ಪರಸಿದರು ಬಿನ್ನೈಸಲು ನಿರೂಪಿಪರು || ೬ ||

ನಿಲಿಸಬೇಕೆನೆ ನಿನ್ನರಸನಾ | ಗಲಿ ತನೂಭವನುಳ್ಳೊಡಾಗಲಿ |
ನಿಲಿಸಿದಡೆ ನಿಂದಪೆವೆನುತ ಮಲಧಾರಿ ಮುನಿಹಂಸ ||
ಸಲೆ ಪರಸಿ ಬಿಜಯಂಗೆಯಲು ತಳ | ಮಳಗೊಳುತೆ ದಾನಾಂತರಾಯವು |
ಪಳಿಯಿಸಿತ್ತೆನೆ ಪುತ್ರಲಾಭವು ನಿನಗೆ ಸಮನಿಪುದೆ || ೭ ||

ಎನುತ ದುಗುಡುವ ತಳೆದು ತಳರ್ದರ | ಮನೆಗೆ ಪೊಗುತಂದಾತ್ಮ ಶಯ್ಯಾ |
ಕನಕ ಮಂಚಸ್ಥಿತ ಮರಳೀ ತೂಲ ತಪ್ಪದೊಳು ||
ದ್ಯುನದಿ ಫೇನಸಮಾನ ಪಟಬಂ | ಧನಿಯೊಳೊಲ್ಲದೆ ಕೆಲವಣೆಯೊಳಿ |
ರ್ದನುವದಿಸಿ ಕೇಳೆಂದಳಾ ಕಳಭಾಷಿಣಿಗೆ ರಮಣಿ || ೮ ||

ಪಾಡುತವೆ ತಾಯ್ಮೆಚ್ಚುತಿರೆ ಶ್ರುತಿ | ಗೂಡಿ ಮಱದುಂಬಿಗಳು ನನ್ನೊಡ |
ನಾಡಿದೀ ಕಿಱುಹುಲ್ಲೆ ಮೋಹದ ಶಿಶುಗೆ ತನಿಮೊಲೆಯ ||
ವೂಡುತಿದೆ ಅರಸಂಚೆ ಮಱ ಕಡೆ | ದಾಡುತವೆ ತಾಯೊಡನೆ ತಾಯಿ ಹೊಂ |
ಗೂಡಿನೊಳು ಮರಿಗಿಳಿಯನೋದಿಸುತಿರೆ ಸರಾಗದಲಿ || ೯ ||

ನನ್ನ ಸರಿಹರೆಯದ ರಮಣಿಯರು | ಹೊನ್ನ ಸಸಿಹೊಂಬೊಂಬೆ ರನ್ನದ |
ಚೆನ್ನ ಕನ್ನಡಿಯೆನಿಪ ಮಕ್ಕಳ ನೋಡಿ ಬಾಡುವರು ||
ಮನ್ನಿಪರು ತೆಗೆದಪ್ಪಿ ಮುದ್ದಿಸಿ | ಯುನ್ನತದ ಮೊಲೆಯೂಡಿ ತಣಿವರು |
ಮುನ್ನ ನೆಱ ನೋಂತವರ ಪುಣ್ಯವ ನೋಡೆಲೇ ರಮಣಿ || ೧೦ ||

ಮಕ್ಕಳಿಲ್ಲದ ಮಡದಿ ಮೋಹದ | ಸೊಕ್ಕಮಾಡದ ಸೋಂಕು ಚಿತ್ತವ |
ಜಕ್ಕುಲಿಸದ ಕವಿತ್ವ ಚಂದಿರನಿಲ್ಲದೊಂದಿರಳು ||
ತಕ್ಕರಿಲ್ಲದ ಸಭೆ ಮದಾಂಬುವ | ನುಕ್ಕದಿಭವರಸಿಲ್ಲದುರುವರೆ |
ಮಿಕ್ಕ ಮಾತೇನೊಪ್ಪದೆಂದಳು ರಾಯನರ್ಧಾಂಗಿ || ೧೧ ||

ಕಿಱುಶಿಶುವ ಮೈದೊಳೆದು ಮಿಗೆ ತೂ | ಪಿಱದು ದುಗುಲವ ಪೊದಸಿ ರನ್ನದ |
ಮಿಱುಪ ತೊಟ್ಟಿಲೊಳಿಟ್ಟು ಸೊಡರ್ವಕ್ಕಿನ……. ||

ಯೆ ಱಿಯ ಜೋ ಜೋ ಕಂದ ಜೋ ಜೋ | ಕಱುವೆ ಜೋ ಜೋ ಯೆಂದು ಪಾಡುವ |
ಮೆ ಱೆವ ದಾದಿಗೆ ಮೆಚ್ಚುಗೊಡುವ ಸೈಪದೆಂದಹುದೊ || ೧೨ ||

ಅಳುವ ಕಂದನ ದನಿಯ ಕೇಳುತೆ | ಮೊಲೆ ತೊರೆಯೆ ತೆಗೆದಪ್ಪಿ ಮುದ್ದಿಸಿ |
ಮೊಲೆಯ ನೋಡಿದೊಡುಣುತೆ ತನ್ನೆಡಗೈಯ ಕೊನೆವೆರಳಿಂ ||
ಬಲದ ಮೊಲೆದುದಿಯವುಂಕಿ ಕಡೆಗಂ | ಣಲಿ ಮೊಗವನಿರೆ ನೋಡಿ ಮೊಳೆನಗೆ |
ವೆಳಗನುಗುಳುತೆ ನಲಿವ ಕಂದನನೆಂದು ಪಡೆದಪೆನೂ || ೧೩ ||

ಗೆಜ್ಜೆಗಳು ಘಲಘಲಿಪೆ ಮೆಲ್ಲನೆ | ಪಜ್ಜೆಯಿಡೆ ಕೈ ಪಱಿಯಿನಾಡಿಸಿ |
ಗುಜ್ಜ ಮೆಟ್ಟುತೆ ನಾಣ್ಚಿ ಹೊಂಗುತೆ ಬಂದು ನಿ ಱಿವಿಡಿದು ||
ಅಜ್ಜ ಅಜ್ಜಪ್ಪಪ್ಪ ಅಮ್ಮೆಮ್ಮುಂ | ಬುಜ್ಜುಗದ ಸುಕುಮಾರಕನ ಮಿಗೆ |
ಪಜ್ಜಳಿಪ ಮೊಗನೋಡಿ ಮುದ್ದಿಪ ಸಯಿಪದೆಂದಹುದೊ || ೧೪ ||

ಎಂದು ಪುತ್ರವಿದೋಹದ ಪೂ | ರ್ಣೇಂದು ಮುಖಿ ಜಿನದತ್ತೆ ಚಿಂತಿಸಿ |
ಸಂದ ಕಳಭಾಷಿಣಿ ಕಳಾದರಿಯೆಂಬ ಕೆಳದಿಯರು ||
ಯಿಂದುವನು ಮುಂಪಡೆದುದೊಂದಿರು | ಳೊಂದಿರುಳು ಮೆಲ್ಲನೆ ಪಡೆದುದೆಂ |
ಬಂದವಲ್ಲದೆ ಪುಣ್ಯವತಿ ಸುತಲಾಭ ನಿನಗರಿದೆ || ೧೫ ||

ಎಂಬ ಸಮಯದೊಳರಸನರಸಿಯ | ಪಂಬಲಿಪ ಮನದಳನಾಱಿಪೆ |
ನೆಂಬ ಬಗೆಯಿಂ ಸತಿಯ ದುಗುಡವನೆಪ್ಪ ಕತ್ತಲೆಯ ||
ತುಂಬಿಸುವ ಮಣಿ ಜೋತಿ ಬಂದಪು | ದೆಂಬವೊಲು ಮಣಿಭೂಷಣದ್ಯುತಿ |
ಮುಂಬರಿವುತಿರೆ ಬಂದನಾಕೆಯ ಹರಣ ಬಂದಂತೆ || ೧೬ ||

ಬರೆ ರಮಣಿ ಇರದೇಳೆ ಕೈವಿಡಿ | ದರಸನಾ ಸಿರಿಮಂಚನವನಲಂ |
ಕರಿಸಿಯರಸಿಯ ಹೊಳೆವ ಹೊಂಜೆಳೆ ಮೈದಡವಿ ತಳದಿಂ ||
ಸಿರಿಮೊಗವು ಬಾಡಿದೆ ಕಟಾಕ್ಷದೊ | ಳರಳ ಸರಳೆಡೆಯಾಡದಿವೆ ಸುಯಿ |
ಸರಳವಾಗಿದೆಯೆನೆ ಕಳಾಧರಿಯೆಂದಳರಸಂಗೆ || ೧೭ ||

ಅರಸಿತಾ ಮಲಧಾರಿದೇವರ | ಚರಿಗೆ ನಿಲಿಸಲೆ ಬಂದಿಸಿರೆ ನಿ |
ನ್ನರಸನಾಗಲಿಯುಳ್ಳೊಡಾತ್ಮಜನಾಗಲೆಲೆ ಮಗಳೆ ||
ಚರಿಗೆ ನಿಲಿಸಲೆ ನಿಲ್ವೆವೆನುತವೆ | ಪರಸಿ ಬಿಜಯಂಗೈಯೆ ಚಿತ್ತೈ |
ಸರಸ ಚಿಂತಿಸಿ ಪುತ್ರದೋಹಳೆಯದಳೇ ಕುವರಿ || ೧೮ ||

ಎನೆಮನೋಹರಿ ಕೇಳ ನಿನ್ನೀ | ನೆನೆದ ಕಾರ್ಯವದೆನ್ನದದು ವೆಂ |
ತೆನೆ ಮಹೀ ಭಾರತದಲಿ ಬಳಲಿದ ತೊಳಪೊಱಿಯಾಪ ||

ತನಯನುದಯಿಪುದೆನ್ನ ಪುಣ್ಯವು | ನಿನಗೆ ಸಂತಸದೇಳ್ಗೆ ಇದ ನೆ |
ಟ್ಟನೆ ತಿಳಿದು ನಾಂ ಬಂದೆ ಚಿಂತಿಸಬೇಡ ಕೇಳೆಂದ || ೧೯ ||

ವಿಮಲಮತಿಗಳು ನಮ್ಮ ವಂಶೋ | ತ್ತಮರು ನೆರೆಯಷ್ಟಾಂಗ ಸುನಿಮಿ |
ತ್ತಮನೆ ಬಲ್ಲವರವರನಾ ಪೊಡವಟ್ಟು ಬೆಸಗೊಳಲು ||
ರಮಣಿಯೆನ್ನೆದನೆಯ ಭವದೊಳು | ಸಮವಶ್ರುತಿ ಪತಿ ನೇಮಿಜಿನನ |
ಪ್ಪಮಲನುದಯಿಪ ನಿನ್ನ ಗ ರ್ಭದೊಳೆಂದರೆಲೆ ಕಾಂತೆ || ೨೦ ||

ದೊಪ್ಪನವನಿಯ ಹೊಯ್ದ ಕೈಯದು | ತಪ್ಪಿದೊಡೆ ಬೆಟ್ಟೆಚ್ಚ ಕೋಲದು |
ತಪ್ಪಿದೊಡಮೇಂ ಜಿನಮುನಿಯ ನುಡಿ ತಪ್ಪುವುದೆಯಿಂದ ||
ಬಪ್ಪರಾ ಮಲಧಾರಿಗಳು ನಿಲ | ದಿಪ್ಪರೀ ತೆಱನಾಗಿ ನೀನಿಂ |
ದಿರ್ಪೆಯೆಂಬುದನಱಿಪಿ ತಿಳಿದಾಂ ಬಂದನೆಲೆ ರಮಣಿ || ೨೧ ||

ರಾಯನೊಳು ನುಡಿ ಮೊದಲೆ ಕಿವಿಗೆ ರ | ಸಾಯನವು ಬಳಿಕಾಕೆಗೀಸ್ತವ |
ನೀಯನುದಯಿಪನೆಂಬನುಡಿ ಕಿವಿಸೋಂಕದಾ ಮೊದಲೆ ||
ಮಾಯವಾದುದು ಮನದ ದುಗುಡವು | ಸೀಯನುಣ್ಬುವ ಕಬ್ಬು ಪಣ್ಗಳ
ತಾಯಿಗಂಪಿನ ಮರುಗ ಹೂಗಳ ತಳೆದ ತೆಱನಾಯ್ತು || ೨೨ ||

ಆಗಳಾ ವಧು ತನ್ನ ಸಂತಸ | ಸಾಗರದ ಪಾಲ್ದೆರೆಯನರಸನ |
ಮೇಗೆತುಳುಕಿದಳೆನೆ ವದನದರಹಾಸ ಚಂದ್ರಿಕೆಯ ||
ಹೂಗಣೆಯ ಹರವರಿಯನುಗುಳುವ | ಸೋಗೆಗಂಗಳ ಬೆಳಗ ಹಸರಿಸಿ |
ರಾಗರಸದೊಳು ಮೂಡಿಮುಳುಗಾಡಿದಳು ಜಿನದತ್ತೆ || ೨೩ ||

ಇತ್ತಲರುಹದ್ದಾಸ ಭೂವರ | ನೆತ್ತಿಕೊಂಡಷ್ಟಾಹ್ನಿಕವನಿಂ |
ತತ್ತಿಲಿಂದನ ಮಾಡಲಾಱನೆನಿಪ್ಪಮಹಿಮೆಗಳಿಂ ||
ತತ್ತದುಚಿತ ವಿಧಾನದಿಂ ಭ | ವ್ಯೋತ್ತಮರ ತಿಂಥಿಣಿಯೊಳಾ ಸುಚ |
ರಿತ್ತನಾ ಜಿನಪುಂಗವನ ಪಾದಗಳ ಪೂಜಿಸಿದ || ೨೪ ||

ಅರಸ ಕೇಳಾ ನೃಪನರಸಿ ಗುಣ | ಸರಸಿಯಯಿದುಂ ಶುದ್ಧಿಯಿಂ ಜಿನ |
ವರರ ಪೂಜಕದಿಂ ಕರೆದು ಕುಂಭಕದೆ ಪೀಠದೊಳು ||
ಇರಿಸಿ ಸಮ್ಮುಖಗೊಳಿಸಿ ನೀರಸ | ದುರುವಿಮಲ ತರುರಸದಿ ಗೋರಸ |
ಭರಿತದಿಂದಭಿಷೇಕಗಳ ಮುಂ ಮಾಡಿಸಿದ ಬಳಿಕ || ೨೫ ||

ದೆಸೆ ಕಿವುಡುಗೊಳೆ ಮೊಳಗೆ ವಾದ್ಯ | ಪ್ರಸರವಾ ಜಯಜಯ ನಿನಾದನೊ |
ಳೊಸೆದು ಕುಸುಮಾಂಜಳಿಗಱಿದು ಮಂತ್ರೋಚ್ಚಾರಣೆವೆರಸಿ ||

ಬಿಸರುಹುದ ಕಿಂಜಲ್ಕ ಪುಂಜದಿ | ಸಸಿಯ ಪುಡಿಯುಂ ಮಲಯಜದನೀ |
ರಸದೆಸೆವ ತೀರ್ಥಾಂಬುವಿಂದರ್ಚಿಸಿದಳರುಹನನು || ೧೬ ||

ಮಗಮಗಿಪ ಕರ್ಪೂರಕುಂಕುಮ | ದಗರು ಚಂದನ ಕರ್ದಮದಿ ಮೊ |
ಲ್ಲೆಗಳ ಮುಗುಳುಗಳೆನಿಪ ಕಳಮಾಕ್ಷತೆಯ ಪುಂಜಗಳಿಂ ||
ಸೊಗಯಿಪಂಬುಜ ಜಾಜಿ ಸೇವಂ | ತಿಗೆ ಸುರಯಿ ಕಲುಹಾರ ಹೊಂಗೇ |
ದಗೆಯ ಹೂವಿಂದರ್ಚಿಸಿದಳಾ ಭೂವರನಾ ರಾಣಿ || ೧೭ ||

ರಸಭರಿತ ಪಕ್ವಾನ್ನದಿಂ ಪಾ | ಯಸದಿ ಶಾಲ್ಯೋದನದಿ ಶಾಕ |
ಪ್ರಸರದಿಂ ತಿಳಿದುಪ್ಪ ಶರ್ಕರೆಯಿಂ ಮೆಱೆವ ಚರುವಿಂ ||
ದೆಸೆದೆಸೆಗೆ ಪಸರಿಸುವ ಪೊಸವೆಳೆ | ಗೆಸೆವ ಕರ್ಪುರ ದೀಪದಿಂ ಪೂ |
ಜಿಸಿದಳಾ ತೃಪ್ತನ ವಿಬೋಧ ಜ್ಯೋತಿಯಡಿಗಳನು || ೧೮ ||

ನೀಳರತ್ನದ ಘಟದಿರದೆ ಮುರಿ | ದೇಳೆದುಂಬಿಯ ಬಂಬಲನುಮಿಗೆ |
ಕೋಳುಗೊಂಡುಜ್ವಳಿಪ ಕಂಪಿನಧೂಪಧೂಮಗಳಿಂ ||
ಬಾಳೆನೇ ಱಳು ಕೌಂಗು ಚೆಂದೆಂ | ಗೀಳೆ ಮಾದಲ ನಿಂಬಿಬಕ್ಕೆರ |
ಸಾಳ ಫಲದಿಂದಮೃತಫಲದಿಂ ಪದವನರ್ಚಿಪಳು || ೧೯ ||

ವಿಕಚನಂದ್ಯಾವರ್ತದಿಂ ಸ್ವ | ಸ್ತಿಕದಿ ದಧಿಯುಂ ವಾರಿಗಂಧಾ |
ಧಿಕದಿ ಶಾಢಲ ಶೋಭೆಯಿಂದುಜ್ವಲಿಸುವರ್ಘ್ಯಗಳಿಂ ||
ಮುಕುರ ಮುಕ್ಕೊಡೆ ಕಳಸ ಚಾಮರ | ನಿಕರ ಮಣಿಮಯ ಮಂಗಳದಿ ತೀ |
ರ್ಥಕರ ಚಂದ್ರಪ್ರಭನ ಚರಣವನರ್ಚಿಸಿದಳೊಲಿದು || ೨೦ ||

ಶಾಂತಿಧಾರೆಯನಿತ್ತು ಕುಸುಮದ | ಸಂತತಿಯ ಸುರಿದೆಱಗಿ ನುತಿಯಿಸಿ |
ಸಂತಸದೆ ಜಪಗೈದು ಬಳಿಯಂ ಕೈಗಳನು ಮುಗಿದು ||
ಅಂತಕಾಂತಕ ಜಿನಪತಿಗೆ ಗುಣ | ವಂತೆ ರೇಚಕದಿಂದ ನೀಡುಂ |
ಚಿಂತಿಸಿದಳಂತ್ಯೋಪಚಾರವನರಸ ಕೇಳೆಂದ | ೨೧ ||

ನಾರಿ ಗುರುಪಂಚಕವನಿರೆ ಕ | ರ್ಯಾರೆ ಪೂಜಿಸಿ ಕಣ್ತಣಿಯೆ ಪೂ |
ಜಾರಚನೆಗಳ ನೋಡಿ ಸಂತಸದುಬ್ಬುತಿರೆ ಮನವು ||
ಅಂತಕಾಂತಕ ಜಿನಪತಿಗೆ ಗುಣ | ವಂತೆ ರೇಚಕದಿಂದ ನೀಡುಂ |
ಚಿಂತಿಸಿದಳಂತ್ಯೋಪಚಾರವನರಸ ಕೇಳೆಂದ || ೨೧ ||

ನಾರಿ ಗುರುಪಂಚಕವನಿರೆ ಕ | ರ್ಯಾರೆ ಪೂಜಿಸಿ ಕಣ್ತಣಿಯೆ ಪೂ |
ಜಾರಚನೆಗಳ ನೋಡಿ ಸಂತಸದುಬ್ಬುತಿರೆ ಮನವು ||

ಚಾರುಗುಣಿ ಜಿನದತ್ತೆ ಸುಖವಿ | ಸ್ತಾರಿಯಿಂತಿರುತಿರ್ದಳೀಪರಿ |
ಯಾರುಮಾರಾಧಿಸದೆ ಸೌಖ್ಯವು ಬಯಸಿದಡೆ ಬಹುದೆ || ೩೧ ||

ಮೃಗನಯನೆಗೊಂದುದಿನ ಮೊಗದೊಳು | ನೆಗೆದುದೊಪ್ಪುವ ಮೊಡವಿ ನಿಡುದೋ |
ಳುಗಳ ಮೊದಲೊಳು ಮಗಮಗಿಸಿದುದದೊಂದು ಪೊಸಗಂಪು ||
ಜಗದ ಹೆಂಗಳ ಮಾಣಿಕವು ಸಿರಿ | ಮಿಗುವ ಮಾಣಿಕಗಂಡಳೆಂಬುದ |
ಬಗೆದು ಸಖಿ ಸೆಳೆಗೊಟ್ಟಳಾಕೆಗದೇ ಕಳಾವಿದೆಯೊ || ೩೩ ||

ಮುಂಬಯಸಿ ಕೈಗೈದ ಸೊಬಗಿನ | ಕೆಂಬಲರ ಮೈವಟ್ಟೆ ಕೆಂಬಲು |
ತುಂಬುಗುಂಕುಮ ತಿವಿರು ಚೆಂದುಟಿಯುಟ್ಟರುಣವಸನ ||
ಕೆಂಬೆಳಗು ಗುಡೆ ರಾಗ ಸಿರಿನನೆ | ಯಂಬು ವಿಡಿದಂಜಿಸುವ ಬೆಡಗಿನ |
ತುಂಬು ಜವ್ವನೆ ನಾಲ್ಕು ನೀರನು ಮಿಂದಳೊಲವಿಂದ || ೩೪ ||

ತೊಳಪ ಮುತ್ತಿನ ಬೊಂಬೆನ ಜಿದಿಂ | ಗಳ ತಿರುಳ ಪುತ್ಥಳಿಯು ಮಿಂಚಿನ |
ಬೆಳಗು ನೆಲೆಮೈಯಾಂದುದೆಂಬ ಪೊಗಳೆದಿಂಬಾಗಿ ||
ಮಳಯಜದ ಮಲ್ಲಿಗೆಯ ಮುತ್ತಿನ | ತೆಳುದುಗುಲ ಸುಲಿಪಲ್ಲ ನಿಡುಗಂ |
ಗಳ ಬೆಳಗು ದೆಸೆಮುಸುಕುತಿರೆ ಕೈಗೆಯಿದಳಾರಾಣಿ || ೩೫ ||

ಕಾಂಚನದ ಸೆಳೆಮಂಚದೊಳುರಾ | ಯಂಚೆದುಪ್ಪುಳ ತಲ್ಪದೊಳು ಕುಡು |
ಮಿಂಚನುಗುಳುವ ಬಿಳಿಯ ವಸನದ ಬಿಗಿದು ಹಚ್ಚಿಡಿಸಿ |
ಸಂಚಳಿಪ ಪರಿಮಳದ ತುಂಬಿಗ | ಳಿಂಚರದ ಪಾರಿವದ ಪುರುಳಿಯ |
ನುಣ್ಚರದ ತಾಯ್ವನೆಯೆನಿಸಿದುದು ಸೆಜ್ಜೆವನೆಯೆಂದ || ೩೬ ||

ಅಂತು ಬೆಳುವಸದನವನಳ್ತಿಯೊ | ಳಾಂತು ಕಾಂತನ ಸೂಳೆವಂದಾ |
ಕಂತು ಕೇಳಿ ಸುಖಸುಧಾರಸ ಕಡಲೊಳೋಲಾಡೆ ||
ಕಾಂತೆಯೊಳು ವಸುಜಿಂಗೆ ಬಂದುದು | ಸಂತಸದ ಸುಸಮಾಧಿವಡೆದು ಸು
ಕಾಂತ ಚಿಂತಾಗತಿಚರೋತ್ತಮ ಹಂಸವತಿ ಜವದಿ || ೩೭ ||

ಸುಸಿಲನುಂಡು ಬಳಲ್ದು ಕಾಂತನೊ | ಳಸಿಯಳಿರೆ ಸುಖಸುಕ್ತಿಯಿಂ ಚೆಂ |
ಬಿಸಿಲಿನಂ ಪಾಲ್ಗಡಲನುರುಮದಗಜವನಿಬರಿಹವ ||
ಮಿಸುಪ ಸುರತರು ಪುಷ್ಪಮಾಲೆಯ | ನೆನೆವ ಸಿರಿಯನು ಕನಸಿನೊಳು ನಿ |
ಟ್ಟಿಸಿದಳಾ ಬೆಳಗಪ್ಪ ಜಾವದೊಳರಸನರ್ಧಾಂಗಿ || ೩೮ ||

ತಿಳಿದುದಾಕೆಯ ನಿದ್ರೆ ವರದೇ | ಗುಲದ ಸಂಖಥ ಶರಧಿಗಾಣಿಯ |
ರುಲಿವ ಮಂಗಳಗೀತನಾದದಿನೇಳ್ದು ತತ್ಕ್ರಿಯೆಯ ||

ತಳೆದು ಜಿನರಂ ಬಂದಿಸಿರೆ ನಿ | ರ್ಮಳನ ಸೇಸೆಯ ಗಂಧ ಜಲವನು |
ಘಳಿಲನಾಗ ಪುರೋಹಿತೋತ್ತಮ ತಂದನೊಲವಿಂದ || ೩೯ ||

ಆಗಳಾ ಜಿನದತ್ತೆ ಕಾಣುತೆ | ಬೇಗದಿದಿರೇಳ್ದಳ್ತಿಯಿಂ ತಲೆ |
ವಾಗಿ ಪಾವನ ಜಿನನ ಗಂಧೋದಕವ ಮಸ್ತಕದ ||
ಮೇಗೆ ತಳಿದಾ ಸೇಸೆಯನು ಚೆಲು | ವಾಗಿ ಮುಡಿದೊಲಿದಿತ್ತು ಗಂಧಮ |
ನಾ ಗುಣದ ಕಣಿ ಕಂಡ ಕನಸನು ಪೇಳ್ದಳಾತಂಗೆ || ೪೦ ||

ಕ್ರಮದಿ ಪೇಳ್ದುದ ಕೇಳ್ದು ತಿಳಿದಾ | ದ್ಯುಮಣಿ ತನ್ನಿಭ ತೇಜನಂಬುಧಿ |
ಸಮ ಗಭೀರ ಮದೇಭಸಮನುತದಾನಪತಿಹರಿಯ ||
ಸಮಪರಾಕ್ರಮಿ ಸುರತರೂದ್ಗಮ | ಸಮಲಲಿತ ತನ್ನ ಸನ್ನುತೆಯೆ ಸಿರಿ |
ಸಮ ಸುಭಾಗ್ಯನೆನಿಪ್ಪ ಕಂದನ ಪಡೆವೆ ನೀನೆಂದ || ೪೧ ||

ಈ ಹದದಿ ತತ್ಫಲವ ಪೇಳ್ದ ಪು | ರೋಹಿತಗೆ ಮಣಿಕುಂಡಳೋತ್ತಮ |
ಬಾಹುಪುರಿ ಮೊದಲಾದ ಭೂಷಣವಿತ್ತು ಬೀಳ್ಕೊಟ್ಟು ||
ಆ ಹರುಷದಿಂ ಜಿನರ ಪೂಜೋ | ತ್ಸಾಹದಿಂದ ನೆಱದಿರೆ ಇರಲು ಬಳಿ |
ಕಾಹಿಮಾಂಶುನಿಭಾಸ್ಯೆಗಾದದು ಗರ್ಭದುರ್ಬರವ || ೪೨ ||

ಬೆಳೆಬೆಳೆಯೆ ಮೊಲೆಗಂಡು ಪುರುಡಿಸಿ | ಬೆಳೆದುದೆನೆ ನಡು ಬೆಳೆಯೆ ತಾವು |
ಮ್ಮಳಿಸಿ ಮೊಗದೊಳು ಕಂದನಾಂತವೊ ನೆರೆಗಱುವತನದಿ ||
ಲಲನೆ ತನುಜಾಲಾಭದಿಂ ಮುಂ | ತಳೆದೆದೆಯ ಕಂದೊಡುವೆಡೆಯೆನಲು |
ಕಳೆದುದಾಕೆಯ ಕುಂಚ…….ನೀಳಮಣಿರುಚಿಯ || ೪೩ ||

ಕಾಂತನಾಯಕಮಣಿಯಲೀಲೆಯ | ನಾಂತ ಹಾರದ ಭಾವದೇಳ್ಗೆಯ |
ನಾಂತಕಾವ್ಯದ ತತ್ತ್ವ ನಿಶ್ಚಯವಾಂತ ನುತಮತಿಯ ||
ಅಂತಗರ್ಭವನಾಂತು ವರಜಿನ | ಕಾಂತ ಪೂಜಾದಾನ ಶಾಸ್ತ್ರದ |
ಚಿಂತನೆಯ ಬಯಕೆಯನೆ ಸಲಿಸುತಲಿರ್ದು ಶುಭದಿನದಿ || ೪೪ ||

ತುಂಬೆ ನವಮಾಸವು ಸುರತ್ನದ | ಬೊಂಬೆ ಚಿಂತಾಮಣಿಯ ಕನ್ನಡಿ |
ತುಂಬುದಿಂಗಳಲತೆನಮೇರುವ ದೀಪಭಾನುವನು ||
ತಾಂಬಯಸಿ ಪಡೆದಂತೆ ಪಡೆದಳ | ಳಂಬವೆಸೆವ ಸುಲಕ್ಷಣಾಂಗನ |
ನಂಬುಜಾನನೆ ಪುತ್ರನನು ಸತ್ಕುಲ ಪವಿತ್ರನನು || ೪೫ ||

ಜಾತಕರ್ಮೋತ್ಸವವ ವಿಭವಸ | ಮೇತವರುಹದ್ವಾಸನಾಗಿಸಿ |
ಭೂತಳವನಿಷ್ಟಾರ್ಥದಾನದಿ ತೃಪ್ತಿ ವಡೆಸಿರ್ದು ||

ವೀತರಾಗ ಸಮಾರ್ಚನೆಗಳನು | ಪ್ರೀತಿಯಿಂ ಮಾಡಿಸಿ ಕರಂ ವಿ ||
ಖ್ಯಾತಿಪರಾಜಿತನೆನಿಪ ಪೆಸರಿಟ್ಟನಾತ್ಮಜಗೆ || ೪೬ ||

|| ಅಂತು ಸಂಧಿ ೩ ಕ್ಕಂ ಮಂಗಲಮಹಾ ||

## ಆದಿ ಪರ್ವ (ಸಂಧಿ ೪)

**ಸಂಧಿ ೪**

ಸಿಸುತನಮನುತ್ತರಿಸಿ ಮುಕ್ತಿಗೆ | ನೆಸೆಯೆ ಪಿತೃಹರಿನೋವನಾರಿಸ |
ನೊಸೆದು ಚಾರಣಯುಗವನಪರಾಜಿತ ನೃಪತಿ ಕಂಡಾ || ಪಲ್ಲ ||

ಮೇಲೆನಿಪ ಹರುಷಾಂಬುಧಿಯ ಕೆನೆ | ವಾಲ ತಾಯ್ತುಂದೆಗಳಿಗೂಡಿಸಿ |
ಲೀಲೆಯಿಂ ತಾ ತಾಯ ಮೊಲೆವಾಲುಂಬನೊಲವಿಂದ ||
ಭೂಲಲನೆಯನು ಸುಖದಿಂದ ತನ್ನಯ | ತೋಳಲೊಱಗಿಸಿ ತೊಟ್ಟಿಲೊಳಗಾ |
ಬಾಲನೊಱಗುವನಳ್ತಿಯಿಂ ಜೋಗುಳೆಯನಾಲಿಸುತ || ೧ ||

ಸುರಪತಿಯ ನಂದನದೊಳಗೆ ಸುರ | ತರುವಿನೆಳಸಸಿ ನೂತ ರತ್ನಾ |
ಕರವು ಇಂಗಡಲೊಳಗೆ ಸಿಂಗದ ಸಿಸು ಕುಲಾದ್ರಿಯೊಳು ||
ತರದಿ ಬೆಳೆವಂದದಲಿ ತನ್ನೊಡ | ನಿರೆಬೆಳೆಯೆ ವಿತರಣ ಸುತೇಜ |
ಸ್ಫುರಣೆ ವಿಕ್ರಾಂತವು ಬೆಳೆವನಾ ಕೃಪಾ ಸದನದೊಳು || ೨ ||

ಆ ಕುಮಾರಕನೊಯ್ಯನೊಯ್ಯನೆ | ಲೋಕದೊಳು ವರ್ತಿಸುವ ಸಿಸುಗಳ |
ನೇಕಲೀಲಾನುತ ವಿನೋದವನೊಂದು ನುರಾಗಿ ||
ಆಕೆಯಳ್ತಿಯ ಸಲಿಸಿ ಶಿಶುತೆಯ | ನೂಕಿ ಸಿತಪಕ್ಷದೊಳು ಬೆಳೆವ ಸು |
ಧಾಕರನವೊಲು ಕಳೆಗಳೊಡವೆಳೆಯಲು ಬೆಳೆವನಾತ || ೩ ||

ತರ್ಕದೊಳು ಭಾಳಾಕ್ಷ ಶಾಬ್ದಿಕ | ಚಕ್ರವರ್ತಿ ಸದಾಗಮದ ಶಾ |
ಸ್ತ್ರಕ್ಕೆ ತಾಂ ಸರ್ವಜ್ಞ ಸದಲಂಕಾರ ಮಾರ್ತಂಡ ||
ಲೆಕ್ಕಗಣಿತಾಚಾರ್ಯನುತ ಚಂ | ದಕ್ಕೆ ಜನ್ಮಕ್ಷೇತ್ರ ಸುಕವಿ |
ತ್ವಕ್ಕೆ ಚತುರಾನನನೆನಿಪ್ಪ ಪೊಗಳ್ತೆಗಿಂಬಾದ || ೪ ||

ಭರತಲಕ್ಷಣಲಕ್ಷ್ಯ ಶಿಕ್ಷಾ | ಗುರುಪುರಾಣ ಚರಿತ್ರ ಸೀಮಾ |
ಪುರುಷನಾಟಕ ಸಾರ್ವಭೌಮ ಸಮಸ್ತ ಕಲೆಗಳಿಗೆ ||

ಪರಮ ಪಂಡಿತನಸ್ತ್ರ ಶಸ್ತ್ರದ | ಪುರುಡಿಗರ ಸುಗಜಾಶ್ವರೋಹಣ |
ಭರವಿರಚಿಯೆನಿಪ್ಪ ಬಿಜ್ಜೆಯ ಕಲಿತನಾ ಕುವರ || ೫ ||

ಹೊನ್ನ ಬಣ್ಣದ ಮೈವೆಳಗು ಸಸಿ | ಯೆನ್ನ ಮೊಗದೊಳು ಮೊಳೆವ ಮೀಸೆಯ |
ಚೆನ್ನ ಮಾಣಿಕದುಟಿ ಬಗಸೆಗ[ಣ್] ತಿಂಗಳರೆನೊಸಲು ||
ಉನ್ನತದ ಭುಜಯುಗಲ ಪೇರೆದೆ | ಹೊನ್ನ ಸೆಳೆನಡು ಬಾಳೆದೊಡೆ ಮೆರೆ |
ದೆನ್ನರಂ ಸೋಲಿಸುವ ಜವ್ವನವಾಂತನಾಕುವರ || ೬ ||

ಅರಸನಪರಾಜಿತ ಕುಮಾರನ | ಕರ ವಿಮಲ ಪಲ್ಲವವ ಕನ್ಯಾ |
ಕರಲಸಿತ ಕಿಸಲಯದೊಳೊಂದಿಸು ಒಂದು ಬಗೆದಂದು ||
ಅರಿಮಥನಸುತೆ ಪ್ರೀತಿಮತಿ ಸೌಂ | ದರಿವೆರಸು ಬಲಬರುತ ನೃಪಾತ್ಮಜೆ |
ಯರನು ಸುಮುಹೂರ್ತದೊಳು ಕುವರಗೆ ಮದುವೆ ನಿಲಿಸಿದನು || ೭ ||

ನಿಲೆದಿಗಂತದೊಳಾನಕ ಸ್ವನ | ನಿಲೆಮಹೋತ್ಸವಪುರದೊಳೆಲ್ಲಿಯು |
ನಿಲೆ ನಿಮಿರ್ದ ಗುಡಿ ತೋರಣಧ್ವಜ ಕೇರಿಕೇರಿಯೊಳು ||
ಪಲವು ಮಂಗಳದೋದು ಗಾಯಕ | ರುಲಿವೆರಸು ಗಣಿಕಾಳಿ ನರ್ತನ |
ನಿಲೆನೃಪಾಂಗಣದೊಳು ಮದುವೆನಿಂದನು ಕುಮಾರಕನು || ೮ ||

ಕುರುಳ ಬೆಳಗಿಂ ನೇವರಿಪ ಕ | ಸ್ತುರಿಯ ತಿಲಕವ ತಿದ್ದುವಾಕೆಯ |
ಕೊರಳಹಾರವ ಸೈತು ಮಾಡುವ ಕಾಂಚಿಯನು ಬಲಿವ ||
ಕರದ ಕಂಕಣಗೀಲನೊತ್ತುವ | ಭರದ ನೆವದಿಂ ಪ್ರೀತಿಮತಿ ಸೌಂ |
ದರಿಯ ಸಾಧ್ವಸದೊಡನೆ ಲಜ್ಜೆಯನೋಡಿಸಿದ ಕುವರ || ೯ ||

ಯುವತಿಯನು ನೋಡಿಸಲು ನೋಳ್ಪನು | ತವಕದನುವರಿದಪ್ಪಿ ಮೊಗಗೊಡೆ |
ಪವಣಱಿದು ಚುಂಬಿಸುತೆಯಿಂದುಟಿ ಸುಧೆಯನೊಸೆದೀಂಟಿ ||
ಜವದ ಜಾಣುಮೆಯ ಱಿದು ಸೂಳ್ಗಳು | ಸವಿಯ ಮುಂದಿಡೆ ಮೆಱೆಪ ಮೈಗುಡೆ |
ಸವಿಸುಸಿಲ ಸುಖರಸದೊಳೋಲಾಡಿಸಿದನಾ ಕುವರ || ೧೦ ||

ಅರಮನೆಯೊಳಾ ಕುವರನೋಲಗ | ದರಸಿಯರ ಮುಡಿಯಿಂ ಕೆಡೆದ ಕಂ |
ಮಲರ ಮಾಲೆಗೆ ಕತ್ತುರಿಯ ಪುಡಿಗುದುರುಗುಪ್ಪರಕೆ ||
ಸುರಿವ ಕುಂಕುಮರಜಕೆ ತುಂಬಿಗ | ಳಿರೆ ತಿರುಗುತಿರೆ ಕಾವ ತಿಱನೆ |
ತಿರುಗುವುರುಚಕ್ರದವೊಲಿಪ್ಪುದದೊಂದು ಸೊಬಗಿನಲಿ || ೧೧ ||

ಒಂದು ದಿನವಾ ಕ್ಷತ್ರಿಯೊತ್ತಮ | ನಂದು ದುಂದುಭಿ ಮೊಳಗೆ ಸಬ್ಬರ |
ಸಂದಣಿಯೊಳಪರಾಜಿತಕುಮಾರಂಗೆ ಭುಜಬಲಗೆ ||

ಸಂದಯುವರಾಜತೆಯ ಕೊಟ್ಟೊಲ | ವಿಂದ ಮದನಗೆ ಪಟ್ಟಗಟ್ಟುವ |
ಚಂದದಿಂ ಕಟ್ಟಿದನು ಕೊರಲಲಿ ಕಂಠಮಾಲೆಯನು || ೧೨ ||

ಧರೆಯಭಾರವನಾ ಕುಮಾರನೊ | ಳಿರಿಸಿಯರುಹದ್ದಾಸ ವಿಭುಪಂ |
ಜರದೊಳಿರದರೆ ನುಸುಳುವರಗಿಳಿಯೊಂದು ಹರುಷದಲಿ ||
ಇರುತಮಿರಲರನೆಂಬ ಸುಧೆವಳ | ಸುರಿವ ಪಾವನ ಮೇಘವೆನೆ ಚೆ |
ಚ್ಚರಮೆ ಬಂದುದು ವಿಮಲವಾಹನಜಿನ ಸಮವಸರಣ || ೧೩ ||

ವಂದನಂ ಭಕ್ತಿಯೊಳಿರೆಯಶೋ | ನಂದದರುಹದ್ದಾಸ ಭೂಪನ |
ನಂದು ಕರಕೊಂಡ್ಯೆದೆಲ್ಯೆದಿತು ಪುತ್ರ ಮಿತ್ರಾದಿ ||
ಸಂದಣಿಸಿ ತಜ್ಜಿನರನರ್ಚಿಸಿ | ಚಂದದಿಂ ಕೀರ್ತಿಸಿಯೆರಗಿ ಮುದ |
ದಿಂದ ಧರ್ಮದ ಕೇಳ್ದು ಸಂಸೃತಿಗರಸ ಪೇಸಿದನು || ೧೪ ||

ಧರೆಯನಾತ್ಮಜಗಿತ್ತನೈನೂ | ರ್ವರು ನೃಪಾಲರುವೆರಸಿ ಸುತಪ |
ಸ್ಸಿರಿಯೊಳೊಂದಿದನರಸನಾ ಜಿನದತ್ತೆ ಪುರುಡಿಸಿದ ||
ಪರಿಯೊಳತಿ ಸಂಯಮದೊಳೊಂದಿದ | ಳರಮಗನು ಸುಶ್ರಾವಕವ್ರತ |
ನಿರುತನಾಗಿರುತಿರ್ದನಾ ನಿಜ ರಾಜ್ಯ ಚಕ್ರದೊಳು || ೧೫ ||

ಹರಿಮಹಾವವನಾಣೆಯೆಂದೊಡೆ | ಹರಿಯಲಮ್ಮದು ಉರಿವ ಕಿಚ್ಚದು |
ಉರಿಯಲಮ್ಮದು ಗಾಳಿಮೇಲುದ ಸೆಳೆಯಲಮ್ಮದದು ||
ತರುಣಿಯರು ನವರತ್ನ ಭೂಷಣ | ಭರದಿ ಬೆಟ್ಟೆಯ ಪೋಪರೆನಲು |
ಚ್ಚರಿಯೆನಿಸಿತಪರಾಜಿತ ಮಹಾರಾಯನರಸುತನ || ೧೬ ||

ಅಂತವರಿಗಾ ಸಗ್ಗವನು ಕಯ | ಯಾಂತವರಿಗಿಷ್ಟಾರ್ಥವನು ನಿಜ |
ಕಾಂತೆಯರಿಗಾ ಕಾಮಸಾಮ್ರಾಜ್ಯವನು ಪಾಲಿಸುತ ||
ಸ್ವಾಂತದೊಳು ವರಪಂಚಗುರುಪದ | ಮಂ ತಳೆದು ಮಿಗೆರಾಜ್ಯಲಕ್ಷ್ಮೀ |
ಕಾಂತನಾಗಿರುತ್ತಿರ್ದನನ್ನೆಗಮಿತ್ತ ಕೇಳೆಂದ || ೧೭ ||

ವಿಮಲವಾಹನ ಜಿನನುಮೊಡವಿ | ರ್ದಮಳನರುಹದ್ದಾಸಮುನಿಯಂ |
ಭ್ರಮರನೆರದೊಂದಾಗಿ ತುಂಬಿಯ ಹೂವನೆರೆಬಿಟ್ಟು ||
ನಿಮಿರ್ದ ಪಾದರಿವೂಗೆರಗಿದಂ | ತಮಳರೀರ್ವರು ಮುಂದೆ ಸಮಯದೊ |
ಳಮರ್ದರಮೃದ ಶ್ರೀಯನೆಲೆ ಧರಣೀಶ ಕೇಳೆಂದ || ೧೮ ||

ಸುರಪನಾ ನಿರ್ವಾಣಪೂಜೆಗೆ | ಭರದಿ ವೋಪಾನಕನಿನಾದಮ |
ನರಸ ಕೇಳಿದುದೇನೆನಲು ದೇವರ ಪಿತೃವೂ ಜಿನರು ||

ಇರದೆ ಮುಕ್ತಿಗೆ ವೋಗೆ ಪೂಜಿಸ | ಪರಿವಮರವಱಿಯೆನಲು ಮೂರ್ಖೆಗೆ |
ಸರಿದನಾ ವಿಭು ಗುರುವಿಯೋಗವದಾರ ನೋಯಿಸದೊ || ೧೯ ||

ಅವನಿಪತಿಕಿಱಿದಾನು ವೊತ್ತಿನೊ | ಳೆವೆದೆಱೆದು ಬಿಸುಸುಯ್ದು ಮದ್ಗುರು |
ಕವಡಿಕೆಯ ಮಣಿಯೆಂದೆ ಕೊಟ್ಟುರು ಶಿರೋಮಣಿಯ ||
ಅವಧರಿಸಿದನು ತಾನೆನಿಪ್ಪವೊ | ಳವನಿ ಭರದೊಳಗೆನ್ನ ನೊಂದಿಸಿ |
ಶಿವಸಿರಿಯನಪ್ಪುವುದು ತಮಗದು ಗುಣವೆ ಹೇಳೆಂದ || ೨೦ ||

ಆವಜನ್ಮದೊಳಾವ ದೇಶದೊ | ಳಾವಕಾಲದೊಳಾಗಿಸಿದನಾ |
ನಾವ ತಪಸಿನ ಫಲದೆ ಪಡೆದೆನೊ ನನ್ನ ತಂದೆಯನು ||
ದೇವನನು ಇನ್ನಕ್ಕಟಾ ನಾ | ನಾವಜನ್ಮಕೆ ಕಾಣ್ಬೆನೆನಲು ನ |
ಭೋವಚನಮಿನ್ನೈದು ಜನ್ಮಕೆ ಕಾಣ್ಬೆ ನೀನೆನಲು || ೨೧ ||

ಏನ ಹೇಳುವೆನರಸ ಭೂವರ | ನಾನುಡಿಯ ಕಿವಿಯಾರೆ ಕೇಳಿಯು |
ಮಾನಿತರು ಮಂತ್ರಿಗಳು ಬೋಧಿಸಿಯುಂ ಕಿವಿಯ ಕೊಡದೆ ||
ನಾನವರನಿನ್ನೊರ್ಮೆ ಕಂಡತಿ | ಸಾನುರಾಗದೊಳೆಱಗಿದಲ್ಲದೆ |
ಯೇನುವಾಹಾರವನು ಕೊಳೆನೆನುತ್ತ ತರಿಸಂದ || ೨೨ ||

ಸುರಪನಾಸನ ಕಂಪದಿಂದಱಿ | ದರಸನಿರವಿಗೆ ನಸುನಗುತ ತಾಂ |
ನಿರವಿಸಲು ಸುಗ್ಗಿಯರಿಪಱಮೆಯ ಮಱಿಗೆ ಕೆಂಜಾಜಿ ||
ಅರಳುದೋರಿದ ತೆರ [ದಿ ಭೂಪ] ನ | ವರರನಾಪರಿ ಸಮವಸರಣದೊ |
ಳಿರಿಸಿತೋ ಱಿದನಾ ಧನದನೇನಿಂದ್ರಜಾಲಿಗನೊ || ೨೩ ||

ಪುಣ್ಯವುಳ್ಳವನಾವಕಾರ್ಯವ | ನೆಣ್ಣಿದೊಡೆ ಕೈ ಸಾರಿಬಪ್ಪುದು |
ತಿಣ್ಣವೇ ಕೃತಪುಣ್ಯನಾವೆಂದರಸನಂದವರ ||
ಕಣ್ಣ ದಣಿವಿನ ನೋಡಿ ಭಕ್ತಿಯ | ತಿಣ್ಣದಿಂ ತಲೆವಾಗಿ ಪರಕೆಯ |
ತಣ್ಣನಾಂತು ಮಗುಳ್ದು ಪುರದೊಳು ಸುಖದೊಳಿರುತಿರ್ದ || ೨೪ ||

ನನೆಯನಳಿಕುಲಧೂಪಧೂಮವ | ನೆನಸು ಸಂಪಗೆಯಲರದೀಪವ |
ವಿನುತ ಚೂತಫಲಾವಳಿಗಳನು ಅಸುಕೆದಳಿರಲರ ||
ಪನಿವೆರಸು ತಂಗಾಳಿಕೊಡೆ ಚಂ | ದನ ಸುಗಂಧವ ತಂದುದಾ ಪಾ |
ಲ್ಗುನದ ನಂದೀಶ್ವರವು ಜಿನಪೂಜಕನ ಲೀಲೆಯಲಿ || ೨೫ ||

ಓಡಿದುದು ತನಿಮಾಗಿ ಹಂಸೆಗ | ಳಾಡಿದುವು ನೀರ್ದಾಣದೊಳು ಅಳಿ |
ಪಾಡಿದವು ತಾವರೆಗಳೊಳು ವನಕರಿಮ್ಮೃಣಾಲವನು ||

ನೀಡಿದುದು ಪಿಡಿಗಂದು ಮರಿಗಿಳಿ | ಯೂಡಿದವು ಮಿಗೆ ನೀರಭೋಗಿಗ |
ಳಾಡಿದರು ನಂದನದೊಳಗೆ ತಳಿರಲರ ಪಸೆಗಳೊಳು || ೧೬ ||

ಅಂತುಬಂದಾಪರ್ವದೊಳು ಭೂ | ಕಾಂತನೊಲವಿಂ ಪ್ರೀತಿಮತಿ ನಿಜ |
ಕಾಂತೆವೆರಸಿದ ಪೆಂಡವಾಸದ ತಂಡಸಹವಾಗಿ ||
ಕಾಂತನಂದನದೊಳಗೆ ನಿಜ ಪಿತೃ | ಮಂತಗುಳ್ಚಿದ ಪೊಂಬೆಸದ ಚೆಲು |
ವಾಂತ ತ್ರಿಭುವನ ತಿಲಕವೆಂಬಾ ಬಸದಿಗೇಳ್ತಂದ || ೧೭ ||

ಮೆಱೆವ ವಿಭವ ಸಮೇತವಾ ನಾ | ಡೆಱೆಯ ಚೈತ್ಯಾಲಯಮನೆಯಿದುತ |
ಕಿಱಿದು ದೂರದಿ ವಾಹನವನಿಳಿದಡಿಗಳಂ ತೊಳೆದು ||
ಮಿಱುಪ ರನ್ನದ ತೋರಣಂಗಳ | ನಱಿದು ನೋಡುತೆನುಸುಳಿಫಲನೆಲೆ |
ನೆಱೆವ ಬೆಳ್ಳಿಯ ಗೋಪುರ ದ್ವಾರದೊಳರಸನಂದು || ೧೮ ||

ಜಿನರ್ಗೆವಂದಿಸಿ ಪೋಪಬರ್ಪಾ | ವಿನುತಭವ್ಯರ ಸಂದಣಿಯ ನಂ |
ದೆನಸು ಮೆಚ್ಚುತೆ ಮುಂದೆ ನಡೆದಾ ಮೂಱುಕೋಟೆಗಳಿಂ ||
ಘನತರದ ಹನ್ನೆರಡು ಗೋಪುರ | ದನುವಿನಿಂ ನೀರ್ವೂವಿಡುದು ರೈ |
ಯೆನೆ ಮೆಱೆವ ನಾಲ್ದೆಸೆಯೊಳಿರ್ದರಗೆಱೆಯ ಸೊಬಗಿಂದ || ೧೯ ||

ಮಿಸುಪ ಪೀಠತ್ರಯದ ಮೇಗಡೆ | ಯೆಸೆವನಾಲ್ದೆಸೆಯಲ್ಲಿ ಮಿಗೆ ರಾ |
ಜಿಸುವ ತುದಿ ಮೊದಲಲ್ಲಿ ಜಿನಬಿಂಬಂಗಳಿಂ ಮೆಱೆವ ||
ಪೊಸತೆನಿಪ ವೈಢೂರ್ಯದಾ ನಿ | ಟ್ಟಿಸುವ ವರದುರ್ಮಾನವಂ ಸ್ತಂ |
ಭಿಸುವ ಮಾನಸ್ತಂಭವನು ನೃಪಹಂಸನೆರ್ದೆಗೊಂಡ || ೨೦ ||

ಮುಂದೆ ಪೋಗುತ ಅರಸನತ್ಯಾ | ನಂದದಿಂ ಪಲರನ್ನ ದೊಪ್ಪುವ |
ಸಂದ ಜಿನವರಸಿದ್ಧಬಿಂಬಸ್ತೂಪೆಯನು ನೋಡಿ ||
ಅಂದುನಮಿಸುತ್ತೊಳಗೆ ಪೋಗುತ | ಸೌಂದರರದ ಹರಿನೀಳ ನರ್ತನ |
ಮಂದಿರದೊಳಾ ಮೋಹವೀರನ ವಿಜಯವಭಿನಯಿಪ || ೨೧ ||

ನಚ್ಚಣಿಯರನು ನೋಡುತಯತದ | ಬಿಚ್ಚಳಿಪ ಚೆಂಬನ್ನ ಸೊಬಗಿನ |
ಚೊಚ್ಚವಾದಾ ಸಿದ್ಧಮಂಡಪವೆಯಿದಿಯಾಗಮದಿ ||
ಬೆಚ್ಚುಭಯ ಸಂಗವನುಳಿದು ನೆಱೆ | ನಿಚ್ಚಿತದಿ ರುದ್ದಿಗಳನಾಂತರ |
ನಿಚ್ಚಿಸುವ ಜಿನಮುನಿಗಳನು ಮೆಚ್ಚಿದನರಸನ || ೨೨ ||

ತಕ್ಕೆಡೆಗಳೊಳಗಿರ್ದು ಪ್ರಾಕೃತ | ಸಕ್ಕದದರ ಸಲೆಶಾಸ್ತ್ರಮಂ ಕಡು |
ಚೊಕ್ಕಳಿಕೆಯಂ ಕೇಳ್ದ ಪೇಳ್ವ ವಿನೇಯತತಿಗೊಲಿದು ||

ಮೊಕ್ಕಳಮೆ ತಿಳಿಯಿಸುವ ತತ್ವದ | ನಿಕ್ಕುವಮನಾ ಮುನಿಪರೆಂಬರ |
ವಕ್ಕೆ ಕಿವಿಗೊಡುತೆಯಿದೆ ಮೆಚ್ಚುತಲೈದಿದನು ಭೂಪ || ೩೩ ||

ಪಳುಕಿನೆಸೆವಾ ಕಳಸಮಂಡಪ | ದೊಳಗೆ ಚೆಂದಳಿರಿಂದ ಕರಮಂ |
ಗಳವೆಯಕ್ಷತೆಯಿಂದ ಮಾದಲವಣ್ಣಳಿಂ ದಧಿಯಂ ||
ಬೆಳೆದದೂರ್ವೆನಮಲ ಸೂತ್ರಂ | ಗಳಿನ ನವರತ್ನ ಕಾಂಚನವೋ |
ವಿಲಸಿತದ ಮಾಲೆಗಳಿನೆಸೆವುದನೀಕ್ಷಿಸಿದನರಸ || ೩೪ ||

ಸಂದತೀರ್ಥೋದಕದಿ ನೆಱೆತ | ಳ್ತೊಂದಿದೆಲ್ಲಾ ಗಂಧದಿಂಮೆ ಱೆ |
ವಂದದೊಪ್ಪುವ ಪಲವು ಕಳಸದ ರಚನೆಯನು ಕಂಡು ||
ಕುಂದದಾನಂದವನು ತಳೆವುತೆ | ಮುಂದೆ ಗೋಮೇಧಿಕದಿ ಸವೆದು ಱೆ |
ಚಂದವಾದಾಸ್ನಪನ ಮಂಡಪವೈದಿದನು ಭೂಪ || ೩೫ ||

ಪಲವು ತೆರನಭಿಷೇಕಪೂಜಾ | ಮಲತರದ್ರವ್ಯಂಗಳೀದು |
ಜ್ವಳಿಪರತ್ನಸ್ನಪನ ಪೀಠದೊಳಿರಿಸಿ ಜಿನವರರ ||
ವಿಲಸಿತದ ಬಿಂಬಂಗಳಿಂಗ | ಗ್ಗಳದೆ ಮಾಳ್ಪಭಿಷೇಕಪೂಜೆಯ |
ನೊಲೆಯದೀಕ್ಷಿಸಿ ವಂದಿಸಿದನಪರಾಜಿತಾಧೀಶ || ೩೬ ||

ಮೊಳಗುವೆಲ್ಲಾ ವಾದ್ಯರವದೊಳು | ಬಳೆದ ಭವ್ಯರ ಜಯ ಜಯ ಧ್ವನಿ |
ಗಳನು ಲಾಲಿಸಿ ತಾನೆ ಜಿನಜನ್ಮಾಭಿಷೇಕವಿದು ||
ಇಳೆಯೆಱೆಯನಂತೆಂದು ಬಗೆವುತ | ತೊಳಗಿ ಬೆಳಗುವ ವಿಮಳ ವಸತಿಯ |
ಬಳಿಗೆ ಭಕ್ತಿಯ ರಸಮೆ ಪೊಂಪುಳಿವಡೆಯೆ ನಡೆತಂದ || ೩೭ ||

ಅರಗೆಱೆಯೊಳೀಸಾಡುತಿರ್ದ | ಚ್ಚರಸಿಯರೊಯೆನೆ ನೀಳರತ್ನ |
ಸ್ಫುರಿತಮಣಿಕುಟ್ಟಿಮದಿ ಬಿಂಬಿಪ ಸಾಲಭಂಜಿಕೆಯ ||
ನೆರವಿ ಮೆರೆದಿರೆ ಶೇಷನೆಂ ಪಲ | ಶರೀರದಿಂ ಪಲವೆಡೆಯೊಳಿರ್ದನೊ |
ಪಿರಿದು ಕಾಂತಿಯೊಯೆನೆ ತೊಳಗಿದವು ಕುಳಿಸಗಂಬಗಳು || ೩೮ ||

ಕುಳಿರ್ಗದಿರುಗಳ ಪಳಿಪಳುಕಿನ | ತಳತಳಿಪ ಭಿತ್ತಿಗಳೊಳೆಡೆಗೆಡೆ |
ಗಿಳಿದು ಪರ್ಬುವ ನಳನಳಿಪ ಲತೆಯೆನಿಪಸುರುಗಲ್ಲ ||
ಬೆಳೆದ ರುಚಿವೀಱುವಗವಾಕ್ಷದಿ | ತೊಳಪ ಬಹುರತ್ನಂಗಳಿಂದು |
ಜ್ವಳಿಸಿ ಮೆಱೆದಾ ಶಿಖರಬದ್ಧದಿನೆಸೆದುದಾ ಬಸದಿ || ೩೯ ||

ಹೊನ್ನರನ್ನದ ಚುಂಚುಲೋವೆಗ | ಳಿಂನೆ ಱೆದ ಕೆಂಬೆಳಗನಿಂ ಬಿಡು |
ವುನ್ನತದ ಮಾಣಿಕದ ಕಳಸಾಳಿವಳಿಗಳಿಂ ಸಿಮಿರ್ದ |

ಚೆನ್ನ ಪಲವುಂ ಧ್ವಜಪತಾಕೆಯಿ | ನೆನ್ನರುಂ ಕೊಂಡಾಡುವಳ್ವನು |
ಮುನ್ನಮಾಂತೆಸೆವದಱ ಮುಖಮಂಡಪಕೆ ನಡೆತಂದ || ೪೦ ||

ರಂಗವಲ್ಲಿಯಿಂದ್ಯೆದು ರನ್ನದ | ರಂಗಿಸಿದ ಪುಡಿಗಳ ಚದುರಿನಿಂ |
ಪಿಂಗದಾನಱುವೂವಲಿಗಳಿಂ ಚೆನ್ನಬೆಳ್ಳಿಗಳ ||
ತುಂಗಘಟದೊಳ್ವಹಿಪ ಸಿಲ್ವದ | ಶಾಂಗಮುಖ್ಯದ ನಱುವೊಗೆಗಳಿಂ |
ತೊಂಗಲಿಪ ಸರಘಂಟೆಯಿಂ ಮೆಱೆವುದನರಸ ಕಂಡ || ೪೧ ||

ಕಳಸ ಕನ್ನಡಿಗಿಂಡಿ ವಿಜ್ಜನ | ಪೊಳೆವ ಸತ್ತಿಗೆ ಚವಲವಿನ ಜೊಳು |
ಬೆಳೆದ ರನ್ನದ ಸುಪ್ರತಿಷ್ಠಧ್ವಜಗಳೊಡವೆರಸಿ ||
ತೊಳಗುವೆಂಟುಂ ಮಂಗಳವನೆರ್ದೆ | ಗೊಳುತ ಪಳುಕಿನ ಗಂಧಕುಟಿಯೊಳು |
ಜ್ವಲಿಪ ಪೀಠತ್ರಯದೊಳೆಸೆವಾ ಜಿನರನೀಕ್ಷಿದ || ೪೨ ||

ಎನಸುವೀಕ್ಷಿಸುವರ್ಗೆ ಪುಣ್ಯದ | ಪೊನಲನೆಯಿದಿ ತುಳುಂಕುವಾಂತಾ |
ತನಿವೆಳಗಿನಿಂ ತೊಳತೊಳಪ ಶಶಿಕಾಂತ ಮಯವಾದ ||
ವಿನುತ ಚಂದ್ರಪ್ರಭಜಿನೇಂದ್ರರ | ನನುಪಮಿತ ಸಲ್ಲಕ್ಷಣಾಂಗರ |
ನನಘರಂ ತತ್ಪ್ರಾತಿಹಾರ್ಯಾಷ್ಟಕದಿ ರಂಜಿಪರ || ೪೩ ||

ಪರಮಹರುಷದಿ ಕಂಡು ಸಾಕ್ಷಾ | ದ್ವರ ಜಿನೇಶ್ವರರೆಂದು ವಸತಿಯ |
ನುರು ಸಮವಶ್ರುತಿಯೆಂದು ಗಣಧರರೆಂದು ಮುನಿವರರ ||
ಮೆರೆದ ಭವ್ಯಾವಳಿಗಳನು ಬಿ | ತ್ತರದ ತ್ರಿಜಗದ ಸಭೆಗೆ... |
........................ || ೪೪ ||

ಬಳಿಕ ಸಾಷ್ಟಾಂಗಪ್ರಣಾಮದಿ | ಪುಳಕಿತಾಂಗನು ನೆಗಳ್ದ ಮನದ |
ಗ್ಗಳದಿ ಪೂಜಿಸಿಯಭವನಡಿದಾವರೆಗಳನು ನಲಿದು ||
ಚಳಿಸದೀಕ್ಷಿಸುತಿದಿರಿನೊಳು ಕೈ | ಗಳನು ಮುಗಿದಾ ನೊಸಲಿನೊಳು ಸಂ |
ಗೊಲಿಸಿ ಜಯ ಜಯದೇವದೇವೋತ್ತಮನೆಯೆನುತಿರ್ದ || ೪೫ ||

ಜಯ ಮನೋಜಮದೇಭಸಿಂಹನೆ | ಜಯ ದುರಿತ ಕಾಂತಾರದಾವನೆ |
ಜಯ ದಯಾರಸ ಸಿಂಧು ಜಯ ಜಯ ಭವ್ಯ ಜನಬಂಧು ||
ಜಯ ಜಯ ತ್ರಿಭುವನ ಲಲಾಮನೆ | ಜಯ ಜಯ ಶ್ರೀ ಮುಕ್ತಿ ಕಾಂತನೆ |
ಜಯ ಜಯ ಶ್ರೀ ಚಂದ್ರ ಜಿನಯೆಂದೆರಗಿದಾ ಬಳಿಯ || ೪೬ ||

ಇಂದ್ರನಮರಾದ್ರಿಯನು ಬಲಗೊಂ | ಬಂದದಿಂ ಬಲಗೊಂಡುನಿಲೆ ಮುಗಿ |
ಲಿಂದಿಳಿವತಾರೆಗಳೆರಡೊ ತಳ್ತಮಳಮಿಂಚುಗಳೊ ||

ಚಂದ್ರ ಸೂರ್ಯರೋ ಜವಳಿ ಖಚರರೊ | ಎಂದರಸನೀಕ್ಷಿಸುತಿರಲು ಭೋ |
ರೆಂದು ಚಾರಣ ಮುನಿಗಳೀರ್ವರು ಬಂದರೊಲವಿಂದೆ || ೪೭ ||

ಯತಿಪತಿಗಳಂಘ್ರಿಗಳನಪರಾ | ಜಿತನೃಪತಿ ನಿಜಮಕುಟಮಣಿದೀ |
ಧಿತಿಗಳಿಂದರ್ಚಿಸಿಯುಚಿತ ಪೀಠದೊಳು ಕುಳ್ಳಿರಿಸಿ ||
ಅತಿಶಯದಿ ಪರಿಮಳಿಸುವಾಚ್ಛಾ | ದಿತಕುಸುಮವನು ಕಣ್ಣರಿಯದೊಡೆ |
ಚತುರತುಂಬಿಯ ಮೂಗರಿದ ತೆಱನಾದುದರಸಂಗೆ || ೪೮ ||

ಮೋಹವಶದಿಂ ಕಂಗಳ ಱಿಯದೊ | ಡಾ ಹೃದಯವರಿದುದು ಮುನೀಶ್ವರ |
ನೂಹಿಸುವನೊಳಗೊಳಗೆ ಬರುನೋಟವನೆ ಪಸರಿಸುವ ||
ಮೋಹವಿಂತೇಕಿವರೊಳೆನಗೆಂ | ಬಾ ಹದನನ ಱಿವಡೆ ಬಗೆದು ಜಿತ |
ಮೋಹಿಗಳನಾ ಚತುರನೆಳೆನಗೆ ತೊಳಗಲಿಂತೆಂದ || ೫೦ ||

ಫುಲ್ಲಶರವಿಜಯಿಗಳ ನಿಮ್ಮನ | ದೆಲ್ಲಿ ಕಂಡೆನೊ ಕಂಡಱಿದ ಪರಿ |
ಯಲ್ಲಿ ಬಗೆಗಾದಪುದು ಬೆಸಸುವುದೀ ಹದನನೆನಲು ||
ಅಲ್ಲಿಯವರೊಳು ಮುಖ್ಯ ಮುನಿಗಳು | ಪಲ್ಲಕಾಂತಿ ಸುಧಾಕಿರಣವನು |
ಚೆಲ್ಲುತಿರಲಿಂತೆಂದರೆಲೆ ಭೂಪಾಲ ಕೇಳೆಂದ || ೫೧ ||

|| ಅಂತು ಸಂಧಿ ೪ಕ್ಕಂ ಮಂಗಲಮಹಾ ||

## ಆದಿ ಪರ್ವ (ಸಂಧಿ ೫)

**ಸಂಧಿ ೫**

ಕೇಳು ಶ್ರೇಣಿಕ ಮಂಡಲೇಶ್ವರ | ಹೇಳಿದಪರಾರಾಜಿತೋವರ್ವೀ |
ಪಾಲಗಾ ಚಾರಣರು ವಿಂಥತನಾದ ಭವದಿರವ || ಪ ||

ಎಲೆ ಧರಿತ್ರೀ ಪಾಲ ಕೇಳ್ಳೈ | ತಿಳಿದು ಮೇರುವ ತೆಂಕದೆಸೆಯ |
ಗ್ಗಲಿಪ ಭರತಕ್ಷೇತ್ರದಾರ್ಯಾಖಂಡದೊಳಗೆಸೆವ ||
ಸಲೆಮಗಧ ವಿಷಯದೊಳು ಪೆರ್ಮೆಯ | ಪೊಳಲು ಶೋಭಿಪ ರಾಜಗೃಹದ |
ಗ್ಗಳಿಪ ನಿರುತಿಯ ದೆಸೆಯ ವಿಪುಳಾಚಲನಿತಂಬದೊಳು || ೧ ||

ದೆಸೆಯನುಣ್ಣನೆನುಂಗಿ ಸೂರ್ಯನ | ಹೊಸೆದು ಮುಕ್ಕಿ ತೊರಾಡುಸಿರಹಸ |
ರಿಸಿ ನಿಮಿರ್ಚಿತೊ ಕಾರಕಾದಂಬಿನಿಯ ನೆಲೆಮನೆಯೊ ||

ಕುಸುಮಯಸ್ತಲ ಹೃದಯವೆನಲ | ರ್ವಿಸಿಪುದಿಯ ನೆೞೆದಂಧಕಾರದಿ |
ನೆಸೆದು ಮುಗಿಲುಚ್ಚಳಿಸಿ ನೆಗೆದಿಹುದೊಂದು ಪೇರಡವಿ || ೧ ||

ಎಲವ ಮುತ್ತುಗಹಾಲೆಯರನೇ | ರಿಲು ಕಡವ ಪೆಗ್ಗೋಳಿಯಾಲವು |
ಬೆಳಲು ಮೋರಟ ಪೆರ್ವಿದಿರಸುಕೆಯರನೆಲ್ಲಿ ಬೆಳುನೆಲ್ಲಿ |
ಹಲಸು ಕೊಡಸಿಗೆ ಮಾವುತೋೞೆಮಾ | ವುಲಿಯ ಕಣಗಿಲು ಕಕ್ಕೆ ವಿಕ್ಕೆಯ |
ನಿಲೆಕದಳಿ ಹಾದರಿಯ ಮರ ಮೊದಲಾದವುರ್ವಿಹವು || ೩ ||

ಮರೆಯನುಣ್ಣನೆ ನೊಣೆವ ಜರದಜ | ಗರದ ಹರವರಿಕರಿಯ ತುಂತುವ |
ಹರಿವ ಹಾವಳಿ ತುಂಗಸಿಂಗವ ನುಂಗಿಬಾಯ್ದೆಗೆವ ||
ಶರಭಗಳ ಕಾಲಾಟವಾ ಕೇ | ಸರಿ ಶರಭಗಳತಿಂದು ತೇಗುವ |
ಪಿರಿಯ ಭೇರುಂಡಗಳ ತಲೆವೊಲನೆನೆಸಿತಾ ವಿಪಿನ || ೪ ||

ಆ ವನದೊಳಿರುತಿಪ್ಪುದದು ಶಬ | ರಾವಳಿಯ ಬಲುಸಿಬಿರವದರೊಳು |
ತೀವಿದಿಭ ಕುಂಭಜಸುಮೌಕ್ತಿಕ ರಾಶಿ ಜೇನಯ್ಯ ||
ಬಾವಿನೆತ್ತರ ಕೆೞೆಪಸಿಯ ತೊವ | ಲೋವರಿಗಳಾ ಚಾಮರದ ಬಲು |
ಕಾವನವು ಮೆರೆದಿಹುದು ಸಿಂಹದಹಲ್ಲ ತೋರಣದಿ || ೫ ||

ಕೆದರುದಲೆ ಕೆಮ್ಮೀಸೆ ಕಿಸುಗಣು | ಬೆದಱುನೋಟವು ಕಾರೊಡಲುವುಡೆ |
ಪುದಿದ ತಳಿರುಡೆ ಸುರಗಿ ಪುಲಿವಾಲದಲಿ ವಿರಚಿಸಿದ ||
ಹದುರುಗಂಕಣ ಖಡೆಯ ಪೆಂಡೆಯ | ದೊದವಿನಿಂ ನಿಗ್ಗವದ ಬಡಿಕೊ |
ಲ್ವದವಡೆದ ಬಿಲ್ಲಂಬು ಬಲೆವಿಡಿದಿಹರು ಬೀಯದರು || ೬ ||

ಕಾರಿರುಲ ಕತ್ತಲೆಯ ತಿರುಳಿಂ | ವಾರಿರುಹಭವನೊಲಿದು ನಿರ್ಮಿಸಿ |
ನಾರಿಯರುರೂಹುಗಳನಂಜಿನರಜದಿ ಪುಟವಿಟ್ಟ ||
ಕಾರಮಿಂಚುಮನವರ ಕಣ್ಣೊಳು | ಸೇರಿಸಿದನೆನೆ ಗಾಡಿಯರು ಕಾಂ |
ತಾರಚರ್ಯರು ಮೆೞೆದರಲ್ಲಿ ಪುಳಿಂದರೊಗ್ಗಿನಲಿ || ೭ ||

ಹೀಲಿಗಳನೊಲಿದುಟ್ಟು ತಳಿರಿನ | ಮೇಲುದಿಟ್ಟಸುಕೆಗಳ ಮೊಲ್ಲೆಯ |
ಮಾಲೆಗಳ ತಲೆಸುವುಡಿಹೊಂಗರಿವೂವಿನೆಸಲುಗಳ ||
ಓಲೆಗಳನಿಕ್ಕಿವಿಯೊಳಿಕ್ಕಿ ವಿ | ಶಾಲ ಗುಂಜಾಭರಣವಾಂತಾ |
ಲೀಲೆಯಿಂ ಶಬರಿಯರೆಸೆದರಾ ಪೆಕ್ಕಣದೊಳಂದು || ೮ ||

ಪಿಡಿದಶೋಕೆಯ ಬಿಲ್ಲು ಚೆಂದಳಿ | ರುಡಿಗೆ ಕೆಂಗೞೆಗೋಲ ಹೊದೆಯೆಳೆ |
ಮಿಡಿಯರಕ್ಕೆ ಗಳರಳ ಕಂಕಣ ಖಡೆಯ ತೋಳಬಳೆ ||

ಕಡುಗಲಿಯ ಮೈಮಾಂದಳಿರಕೈ | ಪೊಡೆಹಲವು ಹೂಗಳ ಮಕುಟದಲ |
ವಡೆಮೆಟೆವನಾ ವಿಂಧ್ಯದೊಳು ವಿಂಧ್ಯಕವನೆಚ್ಚರನು || ೯ ||

ತಳಪಗಂಗಳ ನಗೆಮೊಗದ ಚೆಂ | ದಳಿದುಟಿಯ ನಳಿತೋಳ ಸೆಳೆನಡು |
ಬಲುಮೊಲೆಯ ನುಣ್ದೊಡೆಯ ನೇರಿಲಪಣ್ಣನೆಂಣೆಯಲಿ ||
ಎಳಸಿ ತೊಯ್ದಂತಪ್ಪ ಮೈಯು | ಜ್ಜುಳಿಸುವಾನೆಯ ಮುತ್ತುದೊಡವಿನ |
ಚೆಲುವೆ ವಾಗುರಿ ಮಡದಿಯಾ ವಿಂಧ್ಯಕಗೆ ಕೇಳೆಂದ || ೧೦ ||

ಉಡಿಸುವನು ಚಂದನದ ತಳಿರನು | ಕರಿಶಿರದ ಮುತ್ತಿನ ತೊಡಿಗೆಯನು |
ತೊಡಿಸುವನು ಸುರಹೊನ್ನೆ ಸಂಪಗೆ ಮೊಲ್ಲೆಯರಲುಗಳ ||
ಮುಡಿಸುವನು ವಾಗುರಿಯ ಚೆಲುವಿನ | ಮುಡಿಯೊಳಿಭ ಮದನಾಗ ಕೇಸರ |
ವಿಡಿದ ತಿಲಕವನಿಟ್ಟು ಕೈಪಿಡಿಯಂತೆ ನೋಡುವನು || ೧೧ ||

ಅವಳ ಬಿಂಬಾಧರದ ಸುಧೆಯನು | ಸವಿದು ಬನದೊಳಗಾವ ಪಣ್ಗಳ |
ಸವಿಯ ಮೆಚ್ಚನು ಅವಳ ಸವಿಸುಸಿಲಿನ ಸುಖವ ಮೆಚ್ಚಿ |
ದಿವಿಜ ಲೋಕದ ನೆನಹನೀ..... | ಕವಡಿಕೆಗೆ ಬಗೆಯನು ಮರುಳ್ದವ |
ನವಳನಲ್ಲದೆ ಕಣ್ಗೊಲನು ಸಿಬಿರದೊಳು ಶಬರಿಯರ || ೧೨ ||

ಅಲ್ಲಿಯಾತನಕೂಡೆ ತಟ್ಟೆಯ | ಬಿಲ್ಲುಗಳನಾ ಪೊಂಗುವಿಲುಗಳ |
ಬಲ್ಲಿತೆನಿಪಾ ನಾಳಿವಿಲ್ಲುಗಳಂತೆ ಸಿಂಗಾಡಿ ||
ಬಿಲ್ಲುಗಳ ನೇಣಿಲ್ಲುಗಳ ಪದ | ವಿಲ್ಲುಗಲನೆಡೆಗೆಡೆಗೆ ಸೀವಳಿ |
ಬಿಲ್ಲುಗಳ ಪಿಡಿದಾ ನಿಶಾಟರು ನೆರೆದುದವನೊಡನೆ || ೧೩ ||

ಪರಿಸಬೋಳೆಯ ಕೋಲೆಸೆವ ಹೆಟೆ | ಸರಳೊಡನೆ ಮುಮ್ಮೊನೆಯಕಣೆ ಬಿ |
ತ್ತರದ ಭಲ್ಲೆಯ ಮಾಟದಿ ಸುಸಂಪಗೆಯ ಮುಗುಳಂಬು ||
ದೊರೆವಡೆದ ಕಣಗಿಲ ಪುಳುಂಬವು | ತರದಿ ವಿದಿರೆಲೆ ಸರವಿ ವಂತಿ |
ಳ್ತಿರಿಸಿದಾ ಬತ್ತಳಿಕೆಗಳು ನೆರೆದಿರ್ದುವವರಲ್ಲಿ || ೧೪ ||

ಇಟ್ಟಕಬ್ಬುನಕೋಲು...ವಿಡಿ | ದಿಟ್ಟ ಚಕ್ರವು ಪಿಂಡಿವಾಳವು |
ತೊಟ್ಟಿಡುವ ಬಡಿಕೋಲಿರಿವ ಬಲುಪೊಂದಿ ಪೋಟೆಗಳು ||
ನೆಟ್ಟನೀ ಕೈದುಗಳನಾಂತಾ | ದಿಟ್ಟರುಟೆ ದನಿಗೈವಕೊಂಬಳ |
ವಟ್ಟುಮೆರೆವಾ ಕಾಳೆ ಸನ್ನೆಗಳೆಸೆದುದವರೊಡನೆ || ೧೫ ||

ಹುಲಿಗ ಕೆಂಗುವ ಕಪ್ಪರೆಯ ಜಾ | ಲಲಿವ ತೋ.... ಳಗಡ್ಡ ಜಾಯಿಲೆ |
ಹುಲಿದಲೆಗ ಕಣ್ಣುವ ಮುಗಿಲ ಪುತ್ತಳಿ ನವಿಲು ಮಿತ್ತ ||

ಒಲೆವ ಸುಂಟರುಗಾಳಿ ಭದ್ರನು | ಮಲೆವ ಶೂದ್ರಿಕ ಶೂರಸಿಂಗನು |
ಕಲಿಹನುಮನೆಂದೆಂಬ ನಾಯಿಗಳು ನೆರೆದವವನೊಡನೆ || ೧೬ ||

ನರಿಗೊಲುವ ಮೊಲಗುಲಿಕ ಚೆನ್ನಿಗ | ಬರಗಲವ್ವಳ ಜುಂಜ ಚುಂಚನು |
ಬರಿ....ಮುಕ್ಕನು ಕಡವು ಗಡಿಕನು ಪಂದಿಮಾರಿಗಳೂ ||
ಹರಿಣ ಕೇಸರಿ ಹುಲ್ಲೆಬಾಕನು | ಮರೆಗುಟಿಕ ಹುಲಿದೊಳ್ಗ ಕಾಲನು |
ಕರಿಯ ಜೋಗಿಯೆನಿಪ್ಪ ನಾಯಿಗಳು ನೆರೆದುವವನೊಡನೆ || ೧೭ ||

ಕಣ್ಣಿವಲೆ ಹೊಡೆವಲೆ ಹೊಸೆದಕಾ | ಲ್ಗಣ್ಣಿವಲೆ ತಳ್ಳುವಲೆ ಪುರಿಯೊ |
ಕ್ಕಣ್ಣಿವಲೆ ಹಾಸುವಲೆ ಬೀಸುವಲೆಯೆ ತಟ್ಟಿವಲೇ ||
ತಿಣ್ಣವಲೆ ಜೋಡುವಲೆ ಹೊಸೆದಿ | ಕಣ್ಣಿವಲೆ ಚಕ್ರವಲೆ ಮಿಗಿ ಮು |
ಕ್ಕಣ್ಣವಲೆ ಪೇರ್ವಲೆಯ ಪೊ ಟೆಗಳು ವಿಂಧಕನಕೂಡೆ || ೧೮ ||

ಎರಳೆವಲೆ ಹಂದಿವಲೆ ಹೊಯ್ವಲೆ | ಹರಹುವಲೆಗಳೆಳೆವಲೆ ಹುಡಿಕೆವಲೆ |
ಮರೆವಲೆಗಳಾಗೂಡುವಲೆ ಜಲ್ಲೆವಲೆ ಕೊಲ್ಲಿವಲೆ ||
ಕರಿಯ ಜವಿವಲೆ ಮುಸುಕುವಲೆ ಬಿ | ತ್ತರದ ನೇಣ್ವಲೆ ಮೊಕರವಲೆ ಬೇ |
ಡರಸಿರದೊಳೊಪ್ಪಿದುದು ವಿಂಧ್ಯಕನಿಕ್ಕೆಲದೊಳಲ್ಲಿ || ೧೯ ||

ಗಿಡುಗಸಾಳುವಕುಯ್ಯ ಓರಣ | ಕಡುಲಗಡುವೆಸರವಣ ಜುಗಳ |
ನೊಡನೆ ತೋಡನುಹುಲಣಜುಯಿ ಹಕ್ಕಿಗಳನವರೂ ||
ಪಿಡಿದು ಮುಂಗೈಗದ್ದುಗೆಯೊಳಿ | ಕ್ಕೆಲದೊಳೊಲೆವಾ ಸೋವುಗಟ್ಟೆಗೆ |
ಸಡಗರದಿ ಸೌರಂಭವೆಸೆದುದು ವಿಂಧ್ಯಕನ ಕೂಡೆ || ೨೦ ||

ಕರಿನಿದೀಹದ ಹುಲಿಯೆರಳೆನವಿ | ಲರಗಿಳಿಗಳಾ ಕುಳುವ ಲಾವಿಗೆ |
ಪುರುಳಿಯೆಱಲಾವಿಗೆ ಬು ಟಿಲೆಕಕ್ಕಟಗವುಜು ಬೆಳುವ ||
ಹರಡೆ ಚೆಲುಮಿಲಿಗನು ಚೆಲುವೆಗಿಜು | ಗಿರಳೆ ಕಮ್ಮರನಸಗ ಕೊಟ್ಟುಳೆ |
ಹೊರಸು ಹೊಡೆಗಳೆಂಬ ಪಕ್ಕಿಗಳವರೊಪ್ಪಿದವು || ೨೧ ||

ಪಿಕ್ಕುಳಿಕ ಚೆಂಬೋತ ಗೀಜಗ | ಕುಕ್ಕು ಕೋಗಿಲೆ ಕಾಮುರುಳೆ ಬೆ |
ಳ್ಳಕ್ಕಿಯೆಲಗೊಲೆ ಹುಲ್ಲಭಂದಿಗಳಿಬ್ಬ ನಿರ್ಮುಳುಕ ||
ಚೊಕ್ಕಿಗನು ಹುಡಿಕೀಲು ಹಾ | ಲ್ವಕ್ಕಿ ಕೋಗಿಲೆ ಕೋಟದೇವನ |
ಕುಕ್ಕುಮಾಯಿಯ ಕೆಂಡವಕ್ಕಿಗಳವರೊಳೊಪ್ಪಿದುದು || ೨೨ ||

ಅರೆಹೊರಸುತಿಟ್ಟೀವ ಮಣಿಗನು | ಗರುಡಕೊಣತನು ಮೇಣಟೀವನು |
ಗರಗೆ ತೊಂಡಲು ಗಱಳಬಿಳಿಯಾಗಱಗ ಮುಕ್ಕುಟುಕಾ ||

ಮರಕುಟುಗ ಕಟ್ಟುಱುಕ ಹಂಸೆಲೆ | ಪರಿಯಾಪರ್ದುರೆ ಪರ್ದುಚೆಂಬ |
ರ್ದುರುತರದ ಹಡೆಹದು ಪೆರುವರ್ದವರೊಳೊಪ್ಪಿದವು || ೧೩ ||

ಪೊಲನನೆಲ್ಲರುಮೈದಿ ಬಿಲ್ಲರ | ನಿಲಿಸಿ ಕಳಿವನು ಕಟ್ಟಿ ಮರಮೆ |
ಟ್ಟೊಲೆಯದೇರಿಯೆ ಸಾತೆಯನು ನಿಂದುಳಿಗಳನು ಕಟ್ಟಿ ||
ಸಲೆಬಳಸಿ ಹಜ್ಜೆಯನಱಿದು ಲೆಲೆ | ಲೆಲೆಯೆನುತೆ ಹರಕೊಳಿಸಿ ಸೋವುತ |
ರುಲಿದು ಸನ್ನೆಯ ಹಾಡೆಹಳುವನು ಜಡಿದರವರಂದು || ೧೪ ||

ಬಡಗಲೆರ್ದವು ಹುಲ್ಲೆ ತೆಂಕಣ | ಕಡೆಯ ಬಿಲ್ಲಾಳೆಚ್ಚಱಿಕೆ ನೆಱಿ |
ಪಡುವಣಿಂಬರುತೆವೆ ಮಿಗವು ಮೂಡಣವರಾಂತೆಸಿರೈ ||
ತಡೆಯ ದೊಡ್ಡಾಪಂದಿ ಮಿಗಗಳ | ನಿಡುವಲೆಯ ನೋಡ್ಕೈದೆ ತೋಹುಗ |
ರೆಡೆಗವಂ ಸೋವುಗರು ಜಡಿತರೆ ವಿಂಧ್ಯಕನು ಕಡುಗಿ || ೧೫ ||

ಭರದ ಮುಷ್ಟಿಯ ಬಿಲ್ಲೊಳಡಗಿತೊ | ಶರಿರವೆನೆ ತಳ ಸಂಚದೊರ್ಮೈ |
ಇರವಿನಿಂ ನೆಱಿನಿಂದು ಕೂರ್ಗಣೆವಿಳುಕನಾಯತದಿ ||
ತಿರುವಿನೆಡೆಯೊಳು ತೊಡಚಿ ರೌದ್ರದೆ | ಬರೆ ಸೆಳೆದು ಮಿಗೆ ಕರ್ಣ ಪೂರಕೆ |
ಪೊರ ಮೃಗಕುಳವನಾವದ್ಯ ವಿಂಧಕನು || ೧೬ ||

ಮುರಿದ ಕೊರಲುಱಿ ನೆಗೆದಮೈ ಬಿಗಿ | ದುರವಳುಂಬದೆ ನಟ್ಟ ಕಣು ಕಿವಿ |
ಯೆರಡು ಮುಂಗಾಲೆತ್ತಿ ಪಿಂಗಾಲೈದೆ ಹಿಮ್ಮೆಟ್ಟಿ ||
ಭರದಿ ದಾಟಿ ಕುರುಂಗನಿರೆ ವನ | ಚರನೆ ಸಲುತಲೆ ಪಱಿಯೆ ಬಳಿಕೊಂ |
ದೆರಡು ಮೂರನು ದಾಂಟುತೊಡಲಡಿಗೆಡೆದುದವನಿಯೊಳು || ೧೭ ||

ಎಂಬೆನೆಂತೋ ನಮೋ ಜಿನಾಯ ಪು | ಳುಂಬಮವನೆಸೆ ತಾಗೆ ಗರ್ಭವು |
ತುಂಬಿದೆರಲೆಯನೊಡಲ ಶಿಶುವುಚ್ಚಳಿಸಿ ಬಿರ್ದುಗಿಲೆ ||
ಕಂಬನಿಯನೊಗುತಾ ಮಱಿಯಮ | ಯ್ಯಂಬನದು ನಕ್ಕುತ್ತ ಮೋಹದಿ |
ನಂಬಿಸುತ್ತಸುವುಳಿದುದಯ್ಯೋ ವಿಮೋಹ ಕಷ್ಟವಲ || ೧೮ ||

ಕರುಳ ಬಂಬಲು ಸೂಸೆ ಘಾಯದಿ | ಸುರಿಯಕಟವಾಯಿಂದ ನೊರೆ ಪೊಱ |
ಗಿರೆ ವದನದಿಂ ಚಿಮ್ಮೆ ಬಿದ್ದಾ ಹರಿಣನಂ ಕಂಡು ||
ಹರಿಣಿ ಕರವುತೆ ಕಂಬನಿಯನೆರ್ದೆ | ಗರಗಿ ತನ್ನನೆ ಮ ಱಿದು ಘಾಯವ |
ನೊರಸಿ ಮೊಗದೊಳು ಮೊಗವನಿಟ್ಟುದು ಬಿಟ್ಟುದೊಡನಸುವ || ೧೯ ||

ಪ್ರಳಯ ರುದ್ರನಕಾಯ್ದುವಡಬಾ | ನಳನ ತೀವ್ರತೆ ಸಿಡಿಲ ಕಡುಪ |
ಗ್ಗಳದಿನೊಡಗೂಸಿರ್ದು ಪುಲಿಯೊಡಲಿಟ್ಟುದೋಯೆನಿಸಿ ||

ಪೆಳಱಿಸುವ ರೌದ್ರೋತ್ಕಟದ ಮೈ | ದಳೆದು ಜವ್ವನದೊಡೆಗಳೋಯೆನೆ |
ಹೊಳವ ಪಲ್ಗಳ ಪಡೆದಗುರುವಿಸಿ....ಶಾರ್ದೂಲ || ೩೦ ||

ಕಿಡಿಯನೊಗುವೆರಡಕ್ಷಿ ಕಿತ್ತುವ | ನಿಡುಗಿವಿಗಳುಂ ತೆಱದ ಹಲ್ಗಳು |
ದಡಿದ ಮಂಡೆಯ ಮೇಲೆ ಮಿಡುಕುವ ಬಾಲವಾಯತದಿ ||
ಪೊಡರ್ವ ಮೈ ಪುದಿಗೆರ್ದ ಮುಂಗಾ | ಲೆಡೆವಿಡದೆ ಘುಡುಘುಡಿಪರವದು |
ಗ್ಱಡವೆಸೆಯೆ ಪೆರ್ವುಲಿಯಗುರ್ವಿಸಿದತ್ತು ಬೇಂಟೆಯಲಿ || ೩೧ ||

ಬೆದಱಿ ಶಬರಿಯರಪ್ಪಿದರು ಬೀ | ಯದರನರೆಬರು ಮರನನೇ ಱಿದ |
ರೊದಗಿದರು ಹಿಂದಕ್ಕೆ ಕೆಲರಾತನ ಬಳಿಗೆ ಕೆಲರು ||
ಪುದಿದರರೆಬರು ಕೊಂಬು ಸನ್ನೆಯ | ನೊದಱಿಸಿದರರೆಬರು ಪಿಡಿದ ಚಾ |
ಪದ ಸರಳಿನೊಡತನವನುಳಿದರು ಕಂಡನೀ ಹದನ || ೩೨ ||

ಕಡುಗಲಿಯು ವಿಂಧ್ಯಕನು ಕಾಣುತೆ | ಸಡಿಫಡಂ ಜಡಿ ರೋಡದಿರಿಮೊ |
ಗ್ಗೊಡೆಯದಿರಿ ಅರ್ದಸೆಯಿಱೈ ಯಿಕ್ಕಡಿಗಡೆಯಿಮೆನುತ ||
ಬಿಡಿಸೆ ನಾಯ್ಗಳನಾಗಳೌಮುಂ | ಗುಡಿಯೊಳಟ್ಟಿದುವೊದಗಿದವು ಮಿಗೆ |
ತುಡುಕಿದವು ಮುಸುಕಿದವು ಕಂಗೆಡಿಸಿದವು ಪೆರ್ಬೂಲಿಯ || ೩೩ ||

ಎಡಬಲದೊಳೌವ್ವಳಿಪ ನಾಯ್ಗಳ | ಗಡಣವನು ನೆಱೆ ಪೊಡೆದುದೌಂಕಿದು |
ದಡಸಿ ಸಿಕ್ಕಿದುದೊತ್ತಿ ಸಟ್ಟನೆ ಸೀಳಿತಿಕ್ಕೆಲಕೆ ||
ಕೆಡಹಿದುದು ಬಿಲ್ಲರ ನೆರವಿಯೊ | ಕ್ಕಡಗುದಿಂದುದು ರಕುತಗುಡಿದುದು |
ಕೆಡದುದಾ ವಾಗುರೆಯೆಱಿಯನೊಂದಂಬಿನೇ ಱಿಂದ || ೩೪ ||

ಬುಳ್ಳನಂ ಹೊಳ್ಳಿಸಿತು ನೆಱೆಚಿನ | ಬಳ್ಳನಲ್ಲೆಯನ್ನೈದೆ ಬಗಿದುದು |
ಬಳ್ಳಿಗರುಳುಚ್ಚಿದುದು ದಿಬ್ಬನ ನಿಬ್ಬರಿಯನೊಡೆದು ||
ಕೊಳ್ಳಿವಣ್ಣನ ಬಣ್ಣಗೆಡಿಸಿದು | ದಳ್ಳಿಱಿದುದಾಕಾಟವನು ಮಗ |
ಕೊಳ್ಳದೊಳಗೆಂದುಲಿವ ಬೇಡರ ನೆರವಿ ಸಂಧಿಸಿತು || ೩೫ ||

ಕಲಿಯೆನಿಪ ವಿಂಧ್ಯಕನ ಭಯದಲಿ | ನೆಲಮಱೆಯೊಳೊಂದಾದಿ ಶೂಕರ |
ನಲಸದಾದಿಕ್ಪಾಲಕರ ಮಱೆಗೊಂಡು ಗಜವೆಂಟು ||
ಜಳಜನಾಭನ ಹೊತ್ತು ಗರುಡನು | ಸಲೆಸಸಿಯ ಮಱೆಗೊಂಡು ಮೃಗವೊಂ |
ದುಳಿದುದೆಂದೊಡೆ ಅವನ ಕೃಪೆಯನದೇವ ಬಣ್ಣಿಸುವೆ || ೩೬ ||

ಕುಂದದೀ ಪರಿ ಬೇಂಟೆಯಾಡುತ | ಒಂದು ದಿನವೆಲ್ಲರನುಳಿದು ಕಲಿ |
ವಿಂಧ್ಯಕನು ವಾಗುರೆವೆರಸಿ ತೊಳಲುತಿರೆ ಕಲುನೆಲೆಯ ||

ನಿಂದ ವಿಮಳಾಮಲಮತಿಗಳೊಂ | ದಂದಗಾಣುತೆ ಬೇಗ ತಿರುವಾ |
ಯ್ಗೊಂದು ಬೋಳೆಯ ಕೋಲ ಹೂಡುತಲಾಕೆಗಿಂತೆಂದ || ೩೭ ||

ನಿಂದೆರಡು ಬಲುಪುರುಷಮೃಗಗಳ | ನೊಂದೆಕಾಲಲಿ ತರುವುಳಿದು ಕೆಡೆ |
ವಂದದಿಂ ಪಡಲೆಸುವೆ ವಾಗುರೆ ನೋಡು ಮೆಚ್ಚುಂಟೆ ||
ಎಂದಡವಳುರೆ ನೋಡಿ ಬೇಗದಿ | ಬಂದು ಪಿಡಿದೆಸುವಂಬ ಸೆಳೆದಕ |
ಟೆಂದು ನಡ ನಡ ನಡುಗಿದಳು ಭೂಪಾಲ ಕೇಳೆಂದ || ೩೮ ||

ಕೋಲನುಗಿದೆಯೊ ನನ್ನ ಕಿವಿಯೆರ | ಡೋಲೆದೆಗೆದೆಯೊಲಕಟಕಟ ನೀಂ |
ಖೂಳನೈ ನರಮೃಗವಲ್ಲ ಕಣಾ ಗುರುಗಳವರು ||
ಕೋಲವರ ತಾಗುವುದೇ ಸೂರ್ಯ | ಜ್ವಾಲೆತಾಗದು ಸಿಂಹ ಶರಭವು |
ಕಾಲನೊತ್ತುವವೆಂದೊಡವ ಱಿಂಬಲುಹೆ ನೀ ನಂಬು || ೩೯ ||

ಎನಲಿವರ ನೀನಱಿದ ತೆರನೆಂ | ತೆನಲು ಚಮರೀಬಾಲ ಗಜಕೊಂ |
ಬನುತ ಮೌಕ್ತಿಕದಂತ ಜೇನೆಯಿ ಪುಲಿಯುಗುರುಗಳನು ||
ಜನಕೆ ಮಾರುತೆ ಹೋಗಿ ಕಂಡೆನು | ಜನಪನಿವರನು ರಾಜಗೃಹ ಪ |
ತ್ತನ ವೃಷಭನು ಸುಭಕ್ತಿಯೊಳೆರಗಿ ಪೂಜಿಸಿದ || ೪೦ ||

ಯೆಂಬ ನುಡಿಕವಿಸವಿಗೊಡಲು ಬಿ | ಲ್ಲಂಬ ಬಿಸುಟನು ಸುಗತಿದಾಣಮ |
ನಿಂಬಱಿದು ತಾನೇಱುವಂತೇ ಱಿದನು ಬಲುಗುಂಡ ||
ತುಂಬಿ ತಾವರೆಗೆಱಗುವಂತಿರ | ಳುಂಬವೆಱಗಿ ಬಳಿಕ್ಕೆ ಮುನಿಪಾ |
ದಾಂಬುಜದ ಕೆಲದಲ್ಲಿ ಮೈಯಿಕ್ಕಿರ್ದ ಭಕ್ತಿಯಲಿ || ೪೧ ||

ಇರಿನಿಶಾಟನ ಕಾಲಲಬ್ಧಿಯ | ಭರವಱಿದು ಕೈಯೆತ್ತಿಕೊಂಡಾ |
ಗುರುಗಳಮಳ ದಯಾಮೃತವನೆಱಿದವನ ಹೊಲೆದೊಳೆದು ||
ಹರಸಿದರು ನೀಂ ಬೇಡನೇ ಮಹಾ | ಪುರುಷಕಣಾ ಮಗನೆ ಮಳಿನಾಂ |
ಬರದಿ ಕಟ್ಟಿದ ಮಾಣಿಕವೆ ಕೇಳೆಂದನಾ ಮುನಿಪ || ೪೨ ||

ಎಂದೊಡಾಗಲು ವಾಗುರಿಗೆ ಜೀ | ಯಂದು ನಿಮ್ಮೀ ಕಾಲುಗಳ ಕಡು |
ಚಂದದಲಿ ಪೂಜಿಸಿಯೆರಗಿದಾ ವೃಷಭದತ್ತಂಗೆ ||
ಸಂದಣಿಸಿದಾ ಸೆಟ್ಟಿಗಳಿಗೇ | ನೆಂದು ಪೇಳಿರಿ ರಾಜಗೃಹದೊಳೆ |
ಗೆಂದೊಡೆಂದರು ಮಗುಳೆ ಧರ್ಮವ ಹೇಳಿದೇಯೆನಲು || ೪೩ ||

ಧರ್ಮದಿಂದೇನಹುದು ಗುರುಗಳೆ | ವರ್ಮದಿಂದುಣಲುಡಲಹುದು ಸ |
ದ್ಧರ್ಮದಿಂಗಿಟ್ಟಾಯುವುತ್ತಮ ಜಾತಿಕುಲವಹುದು ||

ಧರ್ಮದಿಂ ನೀನೆಂದ ರಾಯನ | ನೂರ್ಮಡಿಯ ಸರಿಯಪ್ಪುದೆನಲಾ |
ಧರ್ಮವನೆ ಹೇಳೆನ್ನ ಗಂಡಂಗೆಂದೊಡೆಂದಪರು || ೪೪ ||

ಕೊಲೆಯನುಳಿ ಹುಸಿಯದಿರು ಕಳವಿನ | ಹೊಲಬಮರಿ ಪರವಧುಗಳನು ಹಂ |
ಬಲಿಸಬೇಡತಿಕಾಂಕ್ಷೆಯನು ಮಾಣೆಂದು ವಿಮಳಮತಿ ||
ಸಲೆ ಮಹಾವ್ರತಿ ಐದಣುವ್ರತ | ಗಳನೊಸೆದು ಕುಡೆ ವಿಂಧ್ಯಕನಮನ |
ವೊಲಿದು ನಲಿದು ಮಹಾಪ್ರಸಾದವೆನುತ್ತ ಕೈಕೊಂಡ || ೪೫ ||

ಕಳ್ಳನುಣ್ಣದಿರಣ್ಣ ಮಾಂಸವ | ಕೊಳ್ಳದಿರು ಜೇನಯ್ಯುಗುಡಿಯದಿ |
ರ್ಮೆಲ್ಲದಿರುಗಡಲರ್ತಿ ಮೊದಲಾದುದ್ಯೆದು ಮರದ ಫಲವ ||
ಒಳ್ಳಿದನು ಜಿನನೆನಗೆ ದೇವನು | ಒಳ್ಳಿದರು ಜಿನಮುನಿಯೆ ಗುರುಗಳ |
ದೊಳ್ಳಿತದು ಜಿನಮತವೆ ಮತವೆಂದ್ಯೆದೆ ನಂಬೆನಲು || ೪೬ ||

ಹಸಿದವಗೆ ಅಮೃತಾನ್ನಭೋಜನ | ವೊಸೆದುಕೊಡೆ ಕೊಂಡಂತೆ ದೈವದ |
ಗಸಣಿ ಮುನ್ನಿಲ್ಲದಗೆ ಸದ್ಗುರು ಕೊಟ್ಟ ಧರ್ಮವದು ||
ಸಸಿನೆ ಸಂತಸಗೊಡುತೆ ನಿಂದುದು | ಬಿಸಿಯ ಕರ್ಬುನವುಂಡನೀರವೋ |
ಲೆಸೆದುದಾ ಸಮ್ಯಕ್ತ್ವವರಡಿಗೆಱಗಿ ಬೀಳ್ಕೊಂಡ || ೪೭ ||

ಹೆಂಡತಿಯ ಮಾತುಗಳ ಕೇಳಿದ | ಗಂಡಕೆಡುವನೆನಿಪ್ಪ ಮಾತಿಗೆ |
ಖಂಡನವ ಬರೆದಳು ಪುಳಿಂದಿ ಹಿತೋಪದೇಶದಲಿ ||
ಹೆಂಡತಿಯೆ ಗುರುವಾದಳಾಗಲು | ಗಂಡಗಮೃತವ ಕೊಡುವ ಗುರುಗಳ |
ತಂಡವನು ಮುನ್ನಱಿದು ತಿಳುಪಿದ ಕತದಿ ಕೇಳರಸ || ೪೮ ||

ವ್ರತವ ಪಾಲಿಪಬಗೆಯವಗೆ ಪು | ಟ್ಟಿತು ಫಣಿಗೆ ಮಾಣಿಕ್ಯ ಹಂದಿಗೆ |
ನುತ ಮೌಕ್ತಿಕ ಪುಟ್ಟಿದಂತಿರೆ ತೊಗಲೆಲುವು ರಗುತ ||
ಹತ ಶರೀರಗಳಿಲ್ಲದಲ್ಲಿಯೆ | ಸ್ಥಿತಿವಡೆದು ಗಿಳಿಗಿಳಿಕರ್ದುಂಕದ |
ಹಿತ ಫಲಂಗಳನುಂಡು ತಿಳಿನೀರ್ಗೊಂಡು ಸುಖಿವಿಹರು || ೪೯ ||

ಕೊಲೆಯೆ ಮಲ ಆ ಮಲವೆಪೊಲೆ ಆ | ಪೊಲೆಯನುಳ್ಳನೆ ಪೊಲೆಯನವನಿಂ |
ಪೊಲೆಯೆ ನೋಡಲು ಸಾರ್ಥಕತೆವಡೆದಮಲನಿರ್ದೊಡಲು ||
ಸಲೆಪವಿತ್ರತೆ ತಳೆದುದಲ್ಲದೆ | ಕೊಳೆಯೊಡಲದೇಂ ಶುಚಿಯೊ ವಿಂಧ್ಯಕ |
ಮಲರಹಿತ ವರ್ತನೆಯನುತ್ತಮನಾದನೆಲೆ ಭೂಪ || ೫೦ ||

ತಂದೆತಾಯ್ಗಳುಮೃಗಗಳಾದವು | ಬಂಧು ಬಳಗವು ಖಗಗಳಾದುವು |
ತಂದು ಕೊಟ್ಟವರಾದರಾಮೃಗಗಳು ಕಿರಾತಂಗೆ ||

ಎಂದೊಡಿನ್ನೆಲ್ಲಿಯದು ಮಾಂಸದ | ದಂದುಗವು ನಿಮಗಿನ್ನೆನುತ ಪು |
ಳಿಂದಿಯರುವಾಗುರಿಯ ಚಿತ್ತವ ನಿಂದುನುಡಿಸಿದರು || ೫೧ ||

ಕಂಡೆನಲ ಕೈದೊಡನೆಯವನಿ | ತ್ತಂಡವನು ಎಸುವಂಬನಾನೆಳ |
ಕೊಂಡಫಲವೇನೆನುತೆ ಕಣ್ಣೆರ್ದಂದು ಬಿಸುಸುಯ್ದು ||
ಗಂಡನಾ ಕೈ ಬಾಯ ಮಂತ್ರಿಸಿ | ದಿಂಡೆಗರು ಕಟ್ಟಿದರು ಬಳಿಕಿಂ |
ಗಂಡನೇಂ ಗಂಡನೊಯೆನುತೆ ಮತ್ತೊಂದನೆಣಿಸಿದಳು || ೫೨ ||

ಗಂಡಾನಾವುದನಮ್ಮ ಕೇಳಿರೆ | ಕೊಂಡುದೇ ಮೊರೆಬಿಟ್ಟು ದೇಹಗೆ |
ಹೆಂಡತಿಗೆಯಿದು ಗುಣವಲಾಯೆಂದೆಂದೆಗದಡುಹರು ||
ಖಂಡದಾಸೆಗೆ ಬಯಸುವೆನೆ ಬೆಸ | ಗೊಂಡಡೊಂದನು ಪೇಳೆನಲ್ಲದೆ |
ಗಂಡ ನಡೆದುದೆ ಮಾರ್ಗವೆಂದಿರುತಿರ್ದಳನ್ನೆವರ || ೫೩ ||

ಒಂದುದಿನ ಕಡುಹಸಿದುಪಣ್ಗಳ | ನೊಂದೆಡೆಯೊಳುಂ ಕಾಣದರಸುತ |
ಬಂದುಕಂಡಾ ತುಂಬಿದರಪಣ್ಗೊಯ್ಯೆಪೊಳಲೊಳಗೆ ||
ಅಂದು ಬಿರ್ದಾ ಹಣ್ಣದೆಗೆದಪೆ | ನೆಂದು ಕೈದುಡುಕುವುದು ಜಿನಜಿನ |
ತಿಂದುದಹಿ ವಿಂಧ್ಯಕನ ಕಳಿವವನಾರೊ ಕಾಲವನು || ೫೪ ||

ಆ ಗುರುಗಳಂದ್ಯೆದು ಮಂತ್ರವ | ನಾಗ ಜಪಿಸುತೆ ಚಿತ್ತದೊಳು ಲೇ |
ಸಾಗಿ ಜಿನಪದ ಭಕ್ತಿಯಲ್ಲದೆ ಪೆಱವ ಪೊಱಗಿಕ್ಕಿ ||
ಬೇಗತನುವನು ಬಿಸುಡೆಶೋಕಿಸಿ | ವಾಗುರಿಕೆ ಬಿಗಿಯಪ್ಪಿ ಗಂಡನ |
ಮೇಗೆ ಮೂರ್ಛಿಸಿಯಿರ್ದಳೊಂದರೆ ಜಾವಪರ್ಯಂತ || ೫೫ ||

ಮೋಹದಿಂದಾ ಮೂರ್ಛೆವೋಗರು | ಮೋಹದಿಂದಾ ಮರಣವಯಿದರು |
ಮೋಹದಿಂದಾರ್ಕೆಡರು ವಾಗುರಿಕಣ್ತೆಱೆದು ಬಳಿಕ ||
ಈ ಹರಣವಿನ್ನೇಕೆನುತ ಕಾ | ಳಾಹಿಯಾಬಾಯೊಳಗೆ ಕೈಯನು |
ಮೋಹಿ ವಿಷದುಬ್ಬೆಗದಿನುಳಿದಳು ತನ್ನ ಕಾರೊಡಲ || ೫೬ ||

|| ಅಂತು ಸಂಧಿ ೫೯ಂ ಮಂಗಲ ಮಹಾ ||

**ಸಂಧಿ ೬**

ವಿಂಧ್ಯಕನೆ ಇಭಕೇತು ವಾಗೊಲ | ವಿಂದೆ ಕಮಲಪ್ರಭೆ ಮಗಧವರ |
ಸೌಂದರಿಯರೊಳು ಕೂಡಿರುತ ಧೀವರಗೆ ಮೋಹಿಸಿದ || ಪ ||

ಪದೆದ ಪೂರ್ವ ವಿದೇಹ ಸೀತಾ | ನದಿಯ ಬಡಗಣ ಪುಷ್ಕಳಾವತಿ |
ವಿದಿತ ವಿಷಯದ ಪುಂಡರೀಕಿಣಿಯೆಂಬ ಪೊಳಲರಸ ||
ತ್ರಿದಶಪತಿಸಮ ನಾಗದತ್ತನು | ಮುದಿತ ಸತ್ಪ್ರಿಯಕಾರಿಣಿಯೆ ಪ |
ಟ್ಟದ ಮಡದಿವೆರಸರಸುಗೆಯ್ಯುತ್ತಿರ್ದನಳ್ತಿಯಲಿ || ೧ ||

ಅದಱೊಳಭಿಕುಲ ತಿಲಕನಾ ವಿ | ತ್ತದಗೆ ಕುಋ ಗಡನೀಧ ಧನಿಕನು |
ವಿದಿತ ವೈಶ್ಯೋತ್ತಮನು ರಾಜಶ್ರೇಷ್ಠಿ ಇಭದತ್ತ ||
ಮದವಳಿಕೆ ವಸುದತ್ತೆ ಭೂತಂ | ಗೊದವಿಹಳು ಮದನಂಗೆ ರತಿ ಬಲ |
ದೊದವಿದಂದದಿ ನಾಗದತ್ತ ನರೇಂದ್ರನನುಜಾತೆ || ೨ ||

ಅವರ್ಗೆಮೆ ಱವಿಭಕೇತುವೆಂಬೊ | ಪ್ಪುವ ಕುಮಾರಕನಾದ ವಿಂಧ್ಯಕ |
ನವನ ವಾಗುರೆ ಆ ಪೊಳಲ ಮಿಂಗುಲಿಗೆ ಮಗನಾಗಿ ||
ಹವಣಿಸುವ ಧೀವಳನೆನಿಸಿ ಯ | ತ್ತವನು ಬೆಳೆದಪನಿತ್ತಲಿಭಕೇ |
ತು ವನದಷ್ಕರಿಸುವನು ಚೆಲುವಿನಲಿ || ೩ || (?)

ಬಂಧು ಬಳಗದ ಚಿತ್ತಹರುಷವ | ನಂದು ಬೆಳಸುತ ತಂದೆ ತಾಯಾ |
ನಂದವನು ಬೆಳೆಯಿಸುತ ತನ್ನೊಡನಖಿಳ ವಿದ್ಯೆಗಳ ||
ಚಂದದಿಂ ಬೆಳಯಿಸುತೆ ಯುವತೀ | ವೃಂದವನು ರಾಗವನು ಬೆಳೆಸುತ |
ಲಂದು ಮೆಱೆವಿಭಕೇತು ಬೆಳೆದನೇಳ್ಗೆಯಲಿ || ೪ ||

ತುಂಗಕುಚಯುಗ ಪೊಳೆಪೊಳೆವ ಕ | ಣ್ಮಂಗಲನು ಪೊಸಗಾಡಿವಲೆಯೊಳು |
ಪಿಂಗದಿರೆ ಸಿಕ್ಕಿಪನು ಮೊಲೆವೆಣೆವಕ್ಕಿಗಳ ಪಿಡಿವ ||
ಅಂಗನೆಯರ ಮನೋಮೃಗವಗಂ | ಡಂಗದಲಿ ಕೋಳೊಂಬ ಚೆಲ್ವಿಕೆ |
ಯಂಗಜನುಮುಂ ಪೋದ ಭವದ ಪುಳಿಂದನೆನಲೆಸೆದ || ೫ ||

ಪೊಂಬುಗರಿ ಮೊಲೆ ಹೊಳೆವ ನಳಿ ತೋ | ಳ್ತುಂಬಿದಿಂಗಳ ಪಳಿವ ನಗೆಮೊಗ |
ಕೆಂಬಲರು ದುಟಿ ಸೋಗೆಗಣು ನುಣ್ಡೊಡೆ ಲತಾ ಮಧ್ಯ ||

ತುಂಬಿ ತುಳ್ಕುವ ಜವ್ವನವು ಪೊಂ | ಬೊಂಬೆಗಾಯಿತೆನಿಪಾತ್ಮಜೆಯ ಚೆ |
ಲ್ವಂ ಬಿಡದೆ ಪಿತೃ ನಾಗದತ್ತನರೇಂದ್ರ ನೀಕ್ಷಿಸಿದ || ೭ ||

ಕರಸಿದನು ಧರೆಯರಸುಮಕ್ಕಳ | ನೆರವಿಯನು ನವರತ್ನಮಯದಿಂ |
ವಿರಚಿಸದನೋಳ್ಪಿಂ ಸ್ವಯಂವರಸಾಲೆಯನು ಕೂಡೆ ||
ಸಿರಿಯ ಸಿಂಗರಿಸಿದ ತೆಱದಿ ಸಿಂ | ಗರಿಸಿ ಕಮಲಪ್ರಭೆಕುಮಾರಿಯ |
ನಿರಿಸಿ ಪಲ್ಲಕ್ಕಿಯೊಳು ತೋ ಱಿಸುತಿರ್ದನೆಲ್ಲರನು || ೭ ||

ಬೇಡ ಬೇಡನೆ ಜನಕನೊಡನಾ | ಗಾಡಿವೆತ್ತಿಭಕೇತು ವೊಂದೆಡೆ |
ನೋಡುತಿರೆ ಪಲವೂಗಳಿರೆಯುಂ ಬಿರಿವ ಮಲ್ಲಿಗೆಗೆ ||
ಪಾಡುವಳಿ ಬಂದೆಱಗುವಂದದಿ | ನಾಡೆ ಕುವರಿಯ ಕಣ್ಣೆಱಗಿದುವು |
ರೂಢಿವಡೆದಿಭಕೇತುವಿನ ಮೇಲರಸ ಕೇಳೆಂದ || ೮ ||

ನಿಟ್ಟಿಸುವ ಬಹುರಾಜಪುತ್ರರ | ದಿಟ್ಟಿಮಾಲೆಯ ಸೂಡಿದಳು ತಾಂ |
ತೊಟ್ಟನಿದಿರ್ರೈತಂದು ರಾಗದಿ ವೈಶ್ಯಪುತ್ರಂಗೆ ||
ನೆಟ್ಟನಾ ಮಣಿಮಾಲೆಯಿಕ್ಕಿದ | ಳೊಟ್ಟಯಿಸುತಿರೆ ಮಂಗಳಾನಕ |
ವಿಟ್ಟ ಸುಮುಹೂರ್ತದಿ ಮದುವೆನಿಂದನು ಕುಮಾರಿತಿಯ || ೯ ||

ಅಳಿಯನಳಿಯನು ಧರ್ಮಮುಮನೆಂ | ದೆಳಸಿ ರಾಗದಿ ಕಂಠಮಾಲೆಯ |
ಗಳಕೆ ಕಟ್ಟಿದ ಕೊಟ್ಟನಾ ಯುವರಾಜ ಪದವಿಯನು ||
ಬಳುವಳಿಯ ಮಾತೇನೊ ಯಾಚಕ | ಕುಳಕೆ ಹಯ ಗಜ ರತ್ನರಾಶಿಯ |
ನೊಲಿದು ಕೊಟ್ಟನು ಪುಂಡರೀಕಿಣಿಯರಸ ಕೇಳೆಂದ || ೧೦ ||

ಕಿವಿ ಸವಿಯ ತನಿಲಲ್ಲೆ ನುಡಿ ಕಣು | ಸವಿಯ ಹೊಸ ಜವ್ವನದ ಸಿರಿ ಬಾಯ್ |
ಸವಿಯ ಚುಂಬನದಿಂಬು ನಾಸಿಕೆ ಸವಿಯ ತನಿಗಂಪು ||
ಲವಲವಿಪ ಮೈ ಸವಿಯ ತಕ್ಕೆಯು | ತವದ ಮನ ಸವಿ ಮಚ್ಚು ಬೆಚ್ಚವು |
ಸವಿಸುಸಿಲೊಳಿಭಕೇತು ಕಮಲಪ್ರಭೆಯ ಸಮರತದಿ || ೧೧ ||

ನೇತ್ರಸೌಖ್ಯಮನೊಂದು ದಿನವಾ | ಪಾತ್ರ ಚೂಡಾಮಣಿಯೆನಿಪ ನಿಜ |
ಪುತ್ರಿ ಮಗಧ ಸವುಂದರಿಯ ಸೊಬಗಾದ ನೃತ್ಯವನು ||
ಸೂತ್ರಿಸಿದವೊಲಡಱಿವಡೀ ತೂ | ರ್ಯತ್ರಯತ್ರಿಣಯನನೆ ಬಲ್ಲನು |
ಧಾತ್ರಿಯೊಳಗೆಂದಸ ತೋಱಿಸೆ ಕಂಡನಿಭಕೇತು || ೧೨ ||

ನೋಡಬಂದ ವಸಂತನಿಚ್ಚೆಯ | ನಾಡಿ ಮೆಚ್ಚಿಪ ಮಾಧವೀ ಲತೆ |
ನಾಡೆ ನಲಿನಲಿದಾಡಿದಂತಾಡಿದಳು ಸುಕುಮಾರಿ ||

ಆಡುವಾಗಳು ಹೂವಿನಂಬೆಡೆ | ಯಾಡುತಿರ್ದವು ಕುವರ ಕುವರಿಯ |
ಗಾಡಿವಿಡಿದಿಕ್ಕಡೆಗೆ ಹೇಳಿಕೆ ಕೇಳಿಕೆಯೊಳಂದು || ೧೩ ||

ನಚ್ಚಣಿಯೆ ನರ್ತನದಿ ಮೆಚ್ಚಿಪ | ಮೆಚ್ಚು ಕುವರನ ಮನವನೀತನ |
ಮೆಚ್ಚಿನಾಯದ ಜಾಣುನುಡಿಯಾ ಕುವರಿಯಳ್ಳೆರ್ದೆಯ ||
ಮೆಚ್ಚಿಸಿತು ಕೇಳಿಕೆ ಮುಗಿಯೆ ಮಿಗೆ | ಮೆಚ್ಚಿದನುರಾಗದಲಿ ಮಾವಗೆ |
ಚೊಚ್ಚನಿರೆ ಕೈಮುಗಿದು ಕಳುಹಿಸಿಕೊಂಡನರಮನೆಗೆ || ೧೪ |

ಅತ್ತಲಾಕೆಯ ಹೃದಯದೊಳಗ | ಚೊತ್ತಿತಾತನ ಜಾಣ್ಮೆ ಕಣ್ಣೊಳು |
ಮುಚ್ಚಿಸಿತು ಸವಿಗಾಡಿ ಹೊಸಮಸೆಯರಲ ಸರಳುಗಳ ||
ಹೊತ್ತು ಹೊಮ್ಮಿ ಱಿಯಲಿ ಬರುತೆ ತೊನೆ | ವುತ್ತೆ ಧೊಪ್ಪನೆ ಶಯ್ಯೆಯೊಳು ಘನ |
ವೃತ್ತಕುಚೆ ಬಿರ್ದಳು ಪೊರಳ್ದಳು ಕಾಮತಾಪದಲಿ || ೧೫ ||

ಕಳವಳಿಸಿದಳು ತುಂಬಿದಳು ತಳ | ಮಳಿಸಳುತ ತಳ್ಳಂಕಗೊಂಡು |
ಮ್ಮಳಿಸಿದಳು ಕಂದಿದಳು ಕುಂದಿದಳು ಸ್ವನೂದಿದಳು ||
ತಳಮಳಗುಗೊಂಡಳು ಕುಸಿದು ಕು | ಪ್ಪಳಿಸಿದಳು ಬಿಡದಾತನನೆ ಪಂ |
ಬಲಿಸಿದಳು ಮೈಮರೆದಳುಳಿದಳು ಸಯ್ಯಿರಲನಾಕೆ || ೧೬ ||

ಸಡಿಲಿಸಿದರಾಭರಣ ಮೊಲೆಕ | ಟ್ಟುಡುಗೆಗಳನೊಳುದುಗುಲವನು ಮ |
ತ್ತುಡಿಸಿದರು ಕೆಲಬರು ಕೆಲಂಬರು ದಿಟ್ಟಿಯಿಳುಹಿದರು ||
ಮಡದಿಗಕ್ಕಟ ಗಾಳಿ ಸೋಂಕೆಂ | ದೊಡನೆ ಮಂತ್ರಿಸಿ ರಕ್ಕೆಯನು ತಂ |
ದೆಡದ ತೋಳಿಗೆ ಕಟ್ಟಿದಳು ತೂಪಿಱಿದಳೋರ್ವ ಸಖಿ || ೧೭ ||

ಏಕೆ ಬೇಳಾದಪಿರಿ ಮಕರ ಪ | ತಾಕ ಗ್ರಹ ಸೋಂಕಿದುದೆ ದಿಟ ನ |
ಮ್ನೀಕುಮಾರಿತಿಗೆಂದು ಕೋವಿದೆ ಪತ್ತೆಸಾರ್ತಂದು ||
ಆಕೆಯುನ್ನತ ಕುಚದ ಮೇಗೆ ಪ | ತಾಕ ಹಸ್ತವನಿಳುಪಿ ಕಂಡ ಱ |
ದಾಕೆಗಳಿನಾಗಿಸಿದಳಾ ಶಿಶಿರೋಪಚಾರವನು || ೧೮ ||

ಕಿಱಿದು ಪೊತ್ತಿನ ಮೇಲಬಳೆ ಕ | ಣ್ದೆಱೆಯೆ ಕೊಂಡೂಯ್ದಿದರು ಕುವರಿಯ |
ನುಱಿವನಂದನದಿಂದು ಶಿಲಾತಲದಿ ಮೆಱಿವ ||
ಕೆಱೆಯ ತಡಿಯ ಲತಾಗೃಹದ ಹೂ | ದುಱುಗಲೊಳುವಸೆಯಗ್ರದಲಿ ತಂ |
ದೊಱಗಿಸಿದರುಳ್ಳರಲ ಬಿಜ್ಜಣಿಗೆಯಲಿ ಬೀಸಿದರು || ೧೯ ||

ಪಚ್ಚೆಕರ್ಪುರವಚ್ಚೆಗಳನು ತೊ | ಡರ್ಚಿದಳು ತಂದೋರ್ವ ಸಖಿಯದು |
ಕಿಚ್ಚೆ ಪತ್ತಿದ ತೆಱದುರಿಯೆ ಮತ್ತೋರ್ವ ಸಖಿ ತಂದು ||

ಅಚ್ಚ ಮುತ್ತಿನ ತೊಡವನಿಡೆ ಬಗೆ | ಬೆಚ್ಚಿ ಪನ್ನೀರೆ ಚಿಯಲೋರ್ವಳು |
ಬೆಚ್ಚನೆಯ ಮಣಿ ಚುಯಿಗರೆದುದುಳಿದುದು ಬಳಿಕ ನೂಲು || ೧೦ ||

ಉದಿದವಲರ್ಗಳ ಹಾಸುಗಳು ಸೀ | ಕರಿವಡೆದು ವೆಲೆದಳಿರ ಪೊದಕೆಗ |
ಳೆರಡುಗಚಿಸೀಳಿದವು ಪರಿಮಳಕೆಐಪ ಪಐಮೆಗಳ ||
ಸುರಿದ ಚಂದನ ದಣ್ಮಯದಿ ಕ | ತ್ತುರಿಯೆನಲು ಕರಿಕಾಯಿತು ಸುಯ್ಯೆಲ |
ರುರಿಗೆ ನಳಿನಟಿಲೆಂದು ಮುಚಿದವು ತಳಿರ ಬಿಜ್ಜಣಿಗೆ || ೧೧ ||

ನಾಡೆ ನಲಿದಿಪ್ಪತ್ತು ಗಳಿಗೆಯ | ನಾಡಿದಳು ಮಿಕ್ಕುರುಳನಂಗಜ |
ನಾಡಿಸಿದವೊಲು ಬನದೊಳಾಡಿದಳತನು ನಾಟಕವ ||
ನೋಡಿ ಬಾಳುವಳಿಂದುವನುತೇಂ | ಕಾಡುವಳು ತಂಗಾಳಿಗಳ... |
ಪಾಡಿಗಲಸುವಳಂಜುವಳು ಶುಕಪಿಕದ ಮೆಲು ಸರಕೆ || ೧೧ ||

ಮನಸಿಜಗ್ರಹ ವಿಶ್ವ ಮಾಂತ್ರಿಕ | ನೆನೆಸಿದಿಭಕೇತುವ ತೆರನನೊ |
ಯ್ಯನೆ ತಿಳಿದು ನಾನೀಗ ಬಹೆನೆಂಬಾಳಿಯಿನಿಮಾತು ||
ಮನದ ಗಂಧೆಯ ತು ಚಿಸಿದಂತಾ | ವನಿತೆಗಾದುದನಿಂಗಿತದಿನಚಿ |
ದನುವಡೆದು ಪೋತಂದರೀರ್ವರು ಸಖಿಯರವನಾಗ || ೧೩ ||

ಆಕುಮಾರಿಯ ಕಣುಸವಿಯ ಚೆಲು | ವಾಕೃತಿಯನಾ ನರ್ತನೋಚಿತ |
ರೇಖೆಗಳನಳವಡಿಸಿ ಪಟದಲಿ ಬರೆದು ಕಣ್ತೆಐದು ||
ಆ ಕುವರನೇಕಾಂತದಲಿ ಕಾ | ಮಾಕುಳಿತ ಮನವದನೆ ತಾನವ |
ಛೋಕಿಸುತ ಕಲೆದಿರುಳನಾ ಬೆಳಗಪ್ಪ ಜಾವದೊಳು || ೧೪ ||

ನೋಡು ನೋಡುತಲಿನಿತು ಕಣ್ಣವೆ | ಗೂಡೆ ಕನಸಿನೊಳವಳ ವಿರಹವ |
ನೋಡಿತಾನವಳಾಗಿ ಬೆಚ್ಚನೆಸುಯಿದುಯೆವೆದೆಚಿದು ||
ಗಾಡಿಯೆಚಿಯಳಯೆಂದು ಪಟವನು | ನೋಡಿಮಿಗೆ ತೆಗೆದಪ್ಪಿ ಸವಿವಾಯ್ |
ಗೂಡಿದನು ಮನಸಿಜನ ಮಾಯೆಯನಾರೊ ಮಿಗುವವರು || ೧೫ ||

ಆ ಸಮಯದೊಳ್ಬಂದು ನಿಂದು ವಿ | ಳಾಸಿನಿಯರವನಿರವನೀಕ್ಷಿಸಿ |
ಲೇಸು ಲೇಸೆಂಗಜಗೆ ಪರಪಂಚಿಲ್ಲವಿವರೊಡನೆ ||
ಆ ಸುದತಿಗೀ ಕುವರಗಳೆದವೊ | ಲೀ ಸೊಬಗು ಜಾಣವನಗಳೊಡ |
ನೀ ಸಮಪ್ರವಿಣೆಯವ ಪಡೆದಸಹುರಾಸ್ಯನಹುದೆಂದು || ೧೬ ||

ಮೆಚ್ಚುತವೆಯಿಂಗಿತದಿ ನೆಚಿಯ ಚಿ | ದಿಚ್ಚೆ ಕಾತಿಯರವನ ಮೈಗೆ ತೊ |
ಡರ್ಚಿದರುಕುವರಿಗೆ ಸವೆದಕೋಮಳ ಮೃಣಾಳಗಳ ||

ಹಚ್ಚವನು ಹೂವಿನ ಹೊದಕೆಯನು | ಹಚ್ಚಿದರು ಕುವರನ ಕಿವಿಯೊಳವ |
ಗಚ್ಚುಗವನವ ನೆದೆಯ ಮಾತನು ಕದ್ದು ಮರಳಿದರು || ೧೭

ಸಂತಯಿಸಿದರು ಬಂದು ಕುವರಿಯ | ನಿಂತಿವೆಲ್ಲವನಱಿಪಿ ಕಮಲದ |
ಕಾಂತನುದಯಂಗೈಯೆ ಚಂದಿನಿ ಚದುರಿಕೆಯರೆನಿಪ ||
ಮಂತಣದ ಕೆಳದಿಯರ ತದ್ವೃ | ತ್ತಾಂತವನು ಮನವರಿದು ವಸುಧಾ |
ಕಾಂತಗತಿಸವಿವಡಿಸಿ ನುಡಿದೆಂದುದನೆಯೆನಿಸಿದರು || ೧೮ ||

ಕರೆದುಮೌಹೂರ್ತಿಕರನುತ್ಸವ | ಬೆರಸಿ ಸುಮೂರ್ತದಲಿ ಮಗಧಸುಂ |
ದರಿಯನಿಭಕೇತುಗೆ ವಿವಾಹ ವಿಧಾನದಿಂ ಕೊಟ್ಟು ||
ಧರಣಿಪತಿ ಬಳಿಕವರನೀಕ್ಷಿಸಿ | ಹರುಷವೆಯಿದಿದನಿತ್ತಲವರೀ |
ರ್ವರು ಮನೋಭವರಾಗರಸದೊಳು ಮೂಡಿ ಮುಳುಗಿದರು || ೧೯ ||

ಬೇಟದಲಿ ಮಿಗೆ ಹಸಿದವರ್ಗೆ ಬಾ | ಯ್ಯೂಟವಾದುದು ನಾಟಿದುದು |
...................................... ||
ಚಾಟುತನವೆದೆಗೊಳಿಸೆ ಮನಸಿಜ | ನಾಟಕಿಯ ಪ್ರಿಯಸೂತ್ರಧಾರಕ |
ನಾಟಿಪನು ರತಿ ಚಿತ್ರ ಬಂಧದ ಕರಣ ಲೀಲೆಯಲಿ || ೨೦ ||

ಅತ್ತಲಾಕೆಯೊಳೀ ಕುವರನಿರ | ಲಿತ್ತಲೀ ಕಮಲ ಪ್ರಭೆಯನೇ |
ತ್ರತ್ರಿಭಾಗದೊಳೊಂದಿದುದು ಹೊಸ ಸಂಜೆಯೆಂಬುದನು ||
ಚಿತ್ತ ಜನ ಸಮರೂಪನಾಳಿಯ | ರಿತ್ತ ನುಡಿಯಿಂದಱಿದು ತನ್ನಯ |
ಚಿತ್ತದನ್ನಳ ಬಳಿಗೆ ಬಂದನು ಗಾಡಿ ಕೈಗೇಳಿ || ೨೧ ||

ಅಱಿದು ನಳಿನ ಪ್ರಭೆಯ ಚಿತ್ತವ | ನೆಱಕದಿಂ ಮೈ ಸೋಂಕೆ ಪತಿಮಡ |
ಲಿಱಿದು ಹಬ್ಬಿದ ಮುಳಿಸು ಹುಬ್ಬಿನಗೆಂಟು ಗಣ್ಗೆಂಪು ||
ತೆಱಪಱಿದ ಸಖಿಯಂತೆ ಪೋದವು | ಯೆಱೆಯಗೊತ್ತಿನೊಳಿರದೆ ಪುರುಡಿಂ |
ನೆಱೆದ ಸೀಯನ ರಾಗರಸ ಪೊಂಪುಳಿವಡೆದುದವರ || ೨೨ ||

ತೊರೆದ ತವಕವು ತವದ ಪುಳಕಾಂ | ಕುರಗಳೊಱದದ ಬೆಮರಬೀಯದ |
ಪಿರಿದುರಾಗರಸಾಂಬು ನಿಧಿಯೊಳು ಮುಳುಗಿದಾ ಮನವು ||
ಮರಳಿ ಮೂಡದನಸುಮುಗಿದ ಕಂ | ಣರಳದು ಸುರೆಲರೋಟ ನಿಲ್ಲದ |
ಪರಿಯಲೊಂದಿರುತಿರ್ದರಾ ದಂಪತಿಗಳೊಲವಿಂದ || ೨೩ ||

ಒಂದು ದಿನವಾ ನಾಗದತ್ತ ನ | ರೇಂದ್ರನಾತ್ಮಜನಿಲ್ಲದೊಡೆವೇಂ |
ಕಂದನೆನಗೀಯಳಿಯನೆಂದಿಭಕೇತುಗವನಿಯನು ||

ಅಂದುಕೊಟ್ಟಿಭಕೇತು ಭೂಪನ | ತಂದೆಬೆರಸು ಸುದೀಕ್ಷೆಗೊಂಡನು |
ಸಂದ ಸುವ್ರತ ಮುನಿಗಳಲ್ಲಿ ವಿರಕ್ತಿ ಭರದಿಂದ || ೩೫ ||

ನೂತನಾಂಗಜ ರೂಪನಿತ್ತಿಭ | ಕೇತುನೃಪನಾ ಲಕ್ಷ್ಮಿಗಾಗರ |
ಭೂತಲದ ಸೌಭಾಗ್ಯ ಜನ್ಮಕ್ಷೇತ್ರಮೆಂದೆಂಬ ||
ಖ್ಯಾತಪುರವರ ಪುಂಡರೀಕಿಣಿ | ಗೋತುತಾನಧಿರಾಜ ಪದವಿಯ |
ನಾಂತು ತನ್ನಿಂ ಧರ್ಮಪರರಿಲ್ಲೆನಿಸಿ ಸುಖವಿರ್ದ || ೩೬ ||

ಯೆರಗುವೆನು ಜಿನ ಪದಕೆ ತನ್ನಡಿ | ಗೆಱಗಿಪನು ನಾಡೆರೆಯರನು ಜಿನ |
ರು ಱಿವ ಗಂಧೋದಕಕೆ ಕೈಯೊಡ್ಡುವನು ಸಬ್ಬರನು ||
ಸೆಱಗನೊಡ್ಡಿಪ ತನ್ನ ಚಾಗದ | ನೆಱವಣಿಗೆಗೆಡರಂ ನಯವು ಖಳ |
ರಱಗುಲಿಗಳಿಲ್ಲಾ ನೃಪಾಲಕನಾಳ್ವ ರಾಜ್ಯದಲಿ || ೩೭ ||

ಅರಸನಿಂತು ಪೊಗಳ್ತೆ ಗಿಂಬಾ | ಗಿರುತಮಿರೆ ಮತ್ತೊಂದುದಿನ ಸೌಂ |
ದರದಿದೊಡ್ಡೋಲಗದೊಳೊಪ್ಪಿರೆ ಸಿಂಹ ಶಾಬಕವ ||
ಕರಿಯ ನೆತ್ತಿಯ ಮುತ್ತನಾ ಕ | ತ್ತುರಿಮಿಗವನು ಱಿಕಾಣಿಕೆಯ ನಿ |
ತ್ತರದೆಱಗಿ ಕೈಮುಗಿದು ದೂರದಿ ನಿಂದ ಧೀವಳನು || ೩೭ ||

ನಿಂದ ಧೀವಳನಾನನವ ನೃಪ | ಚಂದ್ರನೀಕ್ಷಿಸಿ ಯಾರೊಳಂತಾ |
ನೆಂದುವೀಪರಿ ಮೂಡದಾ ಮೋಹವನು ನೆಱಿಮಾಡಿ ||
ಅಂದು ಸೇನಾಪತಿಪದವಿ ಗೋ | ಟೆಂದು ಹರಣವು ತನಗವಂಗೆಂ |
ಬಂದದಲಿ ಪಲಕಾಲರಾಜ್ಯಂಗೈದನೆಲೆ ಭೂಪ || ೩೮ ||

|| ಅಂತು ಸಂಧಿ ೬ಕ್ಕಂ ಮಂಗಲ ಮಹಾ ||

**ಸಂಧಿ ೭**

ಚಂಡಭುಜನಿಭಕೇತು ದೀಕ್ಷೆಯ | ಕೊಂಡು ನಡೆದಾ ಸ್ವರ್ಗ ಸೌಖ್ಯವ |
ನುಂಡು ಚಿಂತಾಗತಿ ವಿಯಚ್ಚರ ರಾಯನಾಗಿರ್ದ || ಪ ||

ಕೇಳು ಮಗದಾಧೀಶ ತದ್ಭೂ | ಪಾಲಶೇಖರನೊಂದುದಿನನೊ |
ಡ್ಡೋಲಗದೊಳಿರೆ ದೇವ ಬಿನ್ನಹ ಮಂದರಸ್ಥ ಗುರು ||
ಬಾಳುವೆಮ್ಮಯ ಬನಕೆ ಬರೆ ಸ | ಮ್ಮೇಳಿಸಿತು ಷಡುರುತುವೆನುತ ಕುಸು |
ಮಾಳಿ ಕಿಸಲಯ ಫಲಗಳನು ವನಪಾಲ ತಂದಿತ್ತ || ೧ ||

ಇಳಿದು ನೃಪನೇಳಡಿಯನಾ ದೆಸೆ | ಗೆಳಸಿ ನಡೆದು ನಮಸ್ಕರಿಸಿ ಮನ |
ಚಳಿಸದಿತ್ತನು ಋಷಿ ನಿವೇದಕಗಂಗಚಿತ್ತವನು ||
ತಳುವದಾ ಕಮಲಪ್ರಭೆಯುವೆರ | ಸಳವಿಗಳಿದಾ ಭಕ್ತಿಯಲಿ ಬಲ |
ಗೊಳುತೆ ಬಂದಾ ಮುನಿಪದವ ಪೂಜಿಸಿ ತುಳಿಲ್ಗೈದು || ೧ ||

ಪರಕೆಗೊಂಡನು ಕಿವಿಗುಡಿತೆಯಲಿ | ಗುರುನಿರೂಪಿತ ಧರ್ಮಸುಧೆಯನು |
ಹರುಷದೀಂಟಿ ಬಳಿಕ್ಕರಸ ಮುಕುಳಿತ ಕರನುಮಾಗಿ ||
ಗುರುವೆ ಪೇಳತಿ ಸುತರೊಳಿಲ್ಲದ | ಪಿರಿದೊಲುಮೆಯಿದಿವಳನ ಮೇ |
ಲಿರುತು ಮಿಗೆಯೇ ಕೊಂದಡವಧಿಜ್ಞಾನಿಯಿಂತೆಂದ || ೩ ||

ಅರಸ ಕೇಳ್ಕೈ ಚಿತ್ರವಲೆ ಸಂ | ಸರಣವಿದು ಹಿಂಭವದೊಳಗೆ ಜೀವಂ |
ಡರಕುಲಗ್ರಣಿ ವಿಂಧ್ಯಕನೆನೀಂ ನಿನ್ನ ಕುಲವನಿತೆ ||
ತರಳೆವಾಗುರೆಯೆಂಬಳಿದಿವರ | ಕುಲಜನಾದಳು ಗುರುಗಳಿಗೆ.... |
ಸರಳ ನೀಂ ತೊಟ್ಟರನ ಕೇಳಿದೆಯೆಂದರೆಲ್ಲವನು || ೪ ||

ಎಲೆಮಗಧ ನೃಪಕೇಳ್ ಕಲಿಧೀ | ವಳನ ಮೇಲಿಭಕೇತು ನೃಪನಿಂ |
ನೊಲುಮೆಯಿಂದಱಂದಾದುದೆಂದರು ಮಂದರಸ್ಥ ಮುನಿ ||
ತಿಳಿದು ಕೇಳಪರಾಜಿತೋರ್ವೀ | ಲಲನೆಯಾಣ್ಮನೆಯೆಂದು ಚಾರಣ |
ರೊಲಿದು ಪೇಳ್ದಪರೆಂದರವರಿತ್ತರಸ ನಿಂತೆಂದ || ೫ ||

ಆರಯಲುವಾರಾರ ಮೂತ್ರ | ದ್ವಾರ ಜನ್ಮ ಕ್ಷೇತ್ರದೊಳಗಾ |
ರಾರ ಶುಕ್ಲ ಶೋಣಿತವೆ ಬಿತ್ತಾಗಿಯಱಿಯಮೆಯಿಂ ||
ಆರಳೋಳೆಯ ನುಂಡು ಬೆಳೆದಾ | ರಾರ ಕೊಳೆವಸುರಿಂದೆ ಬಂದಾ |
ರಾರ ಸುತಸತಿಯೆನಿಸಿ ಕೊಂಡೆನೊ ಜಿನ ಜಿನಾಯೆಂದ || ೬ ||

ಆವಜೀವವನಾದ ರೂಪಿನೊ | ಳಾವತೆಱದಿಂ ಕೊಂದೆನೋ ಮೇ |
ಣಾವ ತೆಱದಿಂದಾವ ರೂಪಿನೊಳಾರಕೈಯಿಂದ ||
ಸಾವುಗಂಡೆನು ಅಕ್ಕಾಟಾ ಜಿನ | ದೇವನಿನ್ನಯಮತವನಱಿಯದ |
ಜೀವಗಳು ಸಂಸಾರಸುಖದಿಂ ನೋವುದಚ್ಚರಿಯೆ || ೭ ||

ಕಷ್ಟವಲ ಸಂಸಾರವಿದು ತಾ | ನಿಷ್ಟವಾಗಿದೆಯರಿಮೆಯೇಪರಿ |
ವೇಷ್ಟಸಿರ್ದುದರಿಂದೆ ಸಂಸೃತಿ ಜೀವಗಳಿಗಕಟ ||
ಕಷ್ಟ ಕುಲಜಂಗೆನಗೆ ಪೇಳ್ದಾ | ಶಿಷ್ಟ ಮುನಿವಾಕ್ಯವನೆ ನಂಬಿದೊ |
ಡಿಷ್ಟ ಕಾದೆನು ಧರ್ಮವನು ನಂಬಿದಗೆ ಕೇಡುಂಟೆ || ೮ ||

ಎಂದುಮಿಗೆ ನಿರ್ವೇಗ ಪರಭರ | ದಿಂದೆ ರನುಜ ಸುಕೇತುವಿಂಗೆ ವ |
ಸುಂಧರೆಯ ನಿರದಿತ್ತು ದೀಕ್ಷೆಯನಾಂತನಿಭಕೇತು ||
ಅಂದು ತನ್ಮುನಿವರ ಸಮಕ್ಷದೊ | ಳಿಂದುಮುಖಿಕಮಲಪ್ರಭೆಯು ತಪ |
ದೊಂದಿಗಳು ಪುರುಷಪ್ರಣದಿಂದರಸ ಕೇಳೆಂದ || ೯ ||

ಬಳಿಯನಾ ಧೀವಳನಣುವ್ರತ | ಗಳ ಸುಗುಣ ಶಿಕ್ಷಾವ್ರತಂಗಳ |
ತಳೆದು ಸದ್ಭಾವದೊಳವನೆ ನಡುಪುತ್ತಲಿರಲಿತ್ತ ||
ಇಳೆಪೊಗಳುವುಗ್ರೋಗ್ರ ತಪದಿಂ | ಬೆಳೆದು ಘೋರ ಪರೀಷಹಂಗಳ |
ಕಳಿದು ತನ್ನನೆ ಪಿಡಿದನಾ ಯಿಭಕೇತು ಯತಿನಾಥ || ೧೦ ||

ಮಳೆಯದಿನ ಮರ ಮೊದಲಮಾಗಿಯ | ಚಳಿಯದಿನದಲಿ ಬೆಳ್ಳವಾಸವ |
ಕಲುನೆಲೆಯ ಬೇಸಗೆಯೊಳಿರ್ದು ಸಮಾಧಿಯುಮ ಮುಡುಪಿ ||
ಘಳಿಲನಾ ಸೌಧರ್ಮ ಕಲ್ಪೋ | ಜ್ವಲ ವಿಮಾನಶ್ರೀ ನಿಳಯದೊಳು |
ತೊಳಪ ಲಳಿತಶ್ರೀ ದಿವಿಜನಾದಪನೆಲೆ ನೃಪತಿ || ೧೧ ||

ಸುಪ್ರಭ ವಿಮಾನದೊಳು ನೆಟೆಕಮ | ಲಪ್ರಭೆಯುಮಾ ಕಲ್ಪದೊಳು ವಿಮ |
ಲಪ್ರಭಾಮರನಾದಳಾ ಧೀವಳನು ತದ್ವ್ರತದ ||
ಸುಪ್ರಭಾವದೆ ತನುವುಳಿದು ವಿ | ದ್ಯುತ್ಪ್ರಭಾ ಸುವಿಮಾನದಲ್ಲಿ ಸು |
ರಪ್ರಭಾಮರನಾದನೆಂದನು ಭೂಪತಿಗೆ ಮುನಿಪ || ೧೨ ||

ತಲೆದಮಳು ವಾಸಿನೊಳು ನಿದ್ರೆಯ | ತಿಳಿದನಂದದಿ ತುಂಬು ಜವ್ವನ |
ವಿಳಸಿತನು ಸಹಜಾತಮಾಲ್ಯಾಭರಣ ವಸ್ತ್ರಯುತ ||
ತೊಳ ತೊಳಪ ತನುಕಾಂತಿಯೆತ್ತಲು | ಬೆಳಗೆ ಮಣಿಮಯ ಬಿತ್ತಿಗಳನು |
ಜ್ವಳಿಸುತುದಯಿಸಲೊಡನೆ ತೆಱದವು ರನ್ನ ಗಡವುಗಳು || ೧೩ ||

ತರದಿ ಚಿನ್ನದ ಗುಡಿಗಳಿರದು | ಪ್ಪರಿಸಿದವುಗಳಗಳನೆ ಸುರಿದವು |
ಸುರತರುವಿನರಳುಗಳ ಮಳೆ ಸುರಿದುದು ಸುರಭಿ ವ್ರಾತ ||
ಸುರರ ದುಂದುಭಿ ಮೊಳಗಿದವು ಬಿ | ತ್ತರದಿ ಜಯಜಯ ನಂದವರ್ಧ |
ಸ್ವರವ ವಾದವು ಬಳಸಿತಮರನ ದೇವ ಪರಿವಾರ || ೧೪ ||

ಮಂಗಲೋಪಮಕರಣದಿಂ ದೇ | ವಾಂಗನೆಯರಿರೆ ಮುಸುಕೆ ದಿವಿಜನು |
ಕಂಗೊಳುತವಿಳೋಕವಾವಧಿದಾವದು ವಿಮಾನ ||
ಅಂಗ ಸೌರಂಭವೇನೆನಗೆ ದಿ | ವ್ಯಾಂಗ ವೆತ್ತಣದಿಂದೆ ಮನದೊಳು |
ಪಿಂಗದಿಹ ಸಂತಸವಿದೇನೆಂದೈದೆ ಬೆರಷಗಾದ || ೧೫ ||

ದೆಸೆದೆಸೆಗೆ ಮಣಿಕಾಂತಿಯಂ ಪಸ | ರಿಸುವ ಸೌಧಾದಿಗಳನೊಲ್ದೀ |
ಕ್ಷಿಸುತ ಚೋದ್ಯಂಬುಡುತೆ ವಪದದೊಳಗವಯುದಯಿಸಲು ||
ಒಸದು ತನ್ನಿಮ್ಮೈಯ ತೆರನನು | ಸಸಿನೆ ತಿಳಿದಿದು ಜೈನಧರ್ಮೋದೊ |
ಳೆಸಗಿದವರಿಗಿದರಿದೆಯೆಂದನು ತನ್ನ ಮನದೊಳಗೆ || ೧೭ ||

ಮಿಱುಪರತ್ನ ವಿಮಾನದೊಳಗರ | ಗೆಱೆಯ ಜಿನವಸತಿಗಳ ಸುರತರು |
ತುಱುಗಿದುದ್ಯಾನದ ಮಿಸುಪ ಮಣಿ ಕೃತಕ ಪರ್ವತದ |
ಮೆ ಱೆವ ಸಿರಿಯನು ದಿವ್ಯಕಾಂತಿಯ | ರುಱುವ ಸೊಬಗನು ಚಾತುರಂಗದೆ |
ನೆ ಱೆದ ಬಲವನು ಕಂಡು ಧರ್ಮದ ಫಲವಿದೆಂದಱಿತ || ೧೭ ||

ಭಾವಕಿಯರಾಗಳು ಮಹತ್ತರ | ದೇವಿಯರುಮಿಗೆ ಹರಸಿನೊಸಲೊಳು |
ತೀವಿಮುತ್ತಿನ ಸೇಸೆಯಿಕ್ಕಿದರೀ ವಿಮಾನಕ್ಕೆ |
ದೇವನಾದೈ ಕುಸುಮಲಲಿತಕ | ಳೇವರನು ಮಾದರ ಱೆನಾಗಿರ |
ಲೋವೊ ಲಲಿತಶ್ರೀವೆಸರು ನಿನಗೆಂದರೆನಲೊಡನೆ || ೧೮ ||

ಪಾಡೆಸುರಗಾಯಕಿಯರು ಱೆಕೊಂ | ಡಾಡೆ ಮಂಗಳ ಪಾಠಕರು ನಲಿ |
ದಾಡೆ ಮೇಳದೊಳೊಂದಿನಚ್ಚಣಿಯರು ಮುದದಿ ದಿವಿಜ ||
ಕೂಡಿರುತಮಿರೆ ದೇವಚಿತ್ತೈ | ಸಾಡಲೇಂ ವರಜಿನ ತಪವನೀ |
ಮಾಡಿದಿಂದಿನ ಫಲವಿದೆಂದಮರಾಳಿ ಯೊಪ್ಪಿದುದು || ೧೯ ||

ವರಮಹತ್ತರ ದೇವಿಯರು ಸುರ | ತರುಜ ಸದ್ದ್ರವ್ಯಂಗಳಿಂ ಬಂ |
ಧುರದ ಕೃತ್ರಿಮವಸತಿಯೊಳು ಜಿನಪೂಜೆಮಾಡೆನಲು ||
ಪರಮ ಭಕ್ತಿಯೊಳದನೆ ಮಾಡುತ | ಸುರಪನತಿ ಸಂತುಷ್ಟ ಮನನಾ |
ಗಿರುತ ಮಿರ್ದನು ತತ್ತ ಕಾಂಚನವರ್ಣ ಲಲಿತಾಂಗ || ೨೦ ||

ರೋಗ ನಿದ್ರಾಲಸ್ಯ ಶೋಕವ | ನೀಗಿ ಮುಪ್ಪು ವಿಶಾದವಿಲ್ಲದೆ |
ಸೋಗೆಗಣ್ಣೆವೆ ಮಿಸುಕದಣಿಮಾದ್ಯಷ್ಟಗುಣವಾಂತು ||
ಸಾಗರ ದ್ವಿತಯೋಪಮಾಯುಸ | ರಾಗದಿಚ್ಛಾಸಿರ ವರುಷಕೊ |
ರ್ಮಾಗ ಸಂಕಲ್ಪಾಮೃತಾಹಾರವನುಮೆಸೆದನವರ || ೨೧ ||

ಮಾಸವೊಂದಕ್ಕೊಮ್ಮೆ ಸುರಭಿ | ಶ್ವಾಸವೀವನು ಮೈಯತನಿಗಂ |
ಪೊಸರಿಸದಮರಿಯರ ರಸವೀ ಮೈಗೂಟಲಂಪಟನು ||
ಆ ಸುರದ್ರುಮ ಕುಸುಮಶೇಖರ | ಭಾಷಿ ಲಲಿತ ಶ್ರೀ ಸುರನು ಸಂ |
ತೋಷದಲಿ ಸುರಲೋಕ ಸುಖಗಳನುಣುತೆ ಸುಖಮಿರ್ದು || ೨೨ ||

ಒರ್ಮೆ ನಂದನ ವನದೊಳಗೆ ಓ | ರೊರ್ಮೆ ಸರಸಿಯೊಳೊರ್ಮೆಪುಳಿರೊಳ |
ಗೊರ್ಮೆ ಕೃತಕಾಚಳದೊಳೊರ್ಮೆ ಸುರತ್ನ ಹರ್ಮ್ಯದೊಳು ||
ಒರ್ಮೆ ಗೀತದೊಳೊರ್ಮೆ ವಾದ್ಯದೊ | ಳೊರ್ಮೆ ನೃತ್ಯದೊಳೊರ್ಮೆ ಸಭೆಯೊಳ |
ಗೊರ್ಮೆ ಮನಮೊಸೆದಮರವಧುಗಳೊಳೊಲಿದು ಕ್ರೀಡಿಸಿದ || ೧೩ ||

ಕಡೆದು ಕೆತ್ತಿಸಿದಂತೆಸೆವ ಹೊಂ | ಗೊಡಮೊಲೆಯ ಹೊಂಜಳೆನಡುವ ನು |
ಣ್ದೊಡೆಯ ತಿದ್ದದೆ ಕೊಂಕಿನೀಳ್ದಸಿದಾದ ಪುರ್ಬುಗಳ |
ತೊಡೆಯದಲತಗೆ ರಸವೊಗುವಕೇ | ಸಡಿಗಳೆಚ್ಚದೆ ಕರ್ಗಿದೆವೆಗಂ |
ಗುಡಿಯಮರಿಯರು ಸುರನ ಮೆಚ್ಚಿಪರತನುಕೇಳಿಯಲಿ || ೧೪ ||

ವಿಭವದಿಂ ಕಮಲಪ್ರಭ ಸುರ | ಪ್ರಭನಿಳಿಂಪರೊಳೊಂದಿತಾಂಪೂ |
ರ್ವಭವ ಜಾತ ಸ್ನೇಹದಿಂದಾ ಲಲಿತ ಸಿರಿದೇವ ||
ಶುಭದೊಳೊಂದಿರುತಿಪ್ಪಿನಿಂಪಿ | ರ್ದುಭಯ ಸಾಗರದಾಯುವೊಳುಕೇ |
ಳ್ವಿಭವೆ ಯಿನ್ನಱುದಿಂಗಳಾಯುವೆ ಮಿಕ್ಕುದೆಂಬುಂದು || ೧೫ ||

ಬಾಡಿದುದು ಮುಡಿದಮರಕುಜದರ | ಳೋಡಿದುದು ಭೂಷಣದ ಕಾಂತಿಯ |
ಕೂಡೆ ಮೈವೆಳಗಾದುದಾಗಳಿ ಪೋಯಿತು ತನುಗಂಪು ||
ನಾಡೆದಿವಿಜನಿವಾಗೆ ತನುವಿನ | ಕೇಡನಱಿದಲ್ಲಿಯ ದಿನಾರ್ಚನೆ |
ಮಾಡುತಿರೆಯಿರೆ ನುಂಗಿದುದುಯಮರಾಸುರವಿದುವ || ೧೬ ||

ವಿನುತ ಲಲಿತಶ್ರೀಸುರನ ತನು | ಘನದ ಸಿರಿವೊಲುಕೊರಗೆ ಕಡುಪೆಂ |
ಪಿನವಿಭವದಾ ಪುಷ್ಕಳಾರ್ಧದ ಪಡುವ ಮಂದರದ ||
ಘನವಿದೇಹದ ಸೀತೆತೊರೆ ಬಡ | ಗಣತಡಿಯ ಗಂಧಿಳವಿಷಯವೊ |
ಪ್ಪೆನಿಪ ಸಗ್ಗದ ಸಿರಿಗೆ ನಾಲ್ವೆರಲಧಿಕವೆನಿಸಿಹುದು || ೧೭ ||

ಆ ವಿಷಯದ ಮಧ್ಯದೊಳಗೆಸೆವ ಸ | ರೋವರದ ನಡುವುಳ್ಳಳರ್ದ ಬಿಳು |
ದಾವರೆಯವೊಲು ಬಾನನಡುವಣ ಚಂದ್ರಬಿಂಬವೆನೆ ||
ಓ ಓ ಪುಣ್ಯದ ಪುಂಜದಂದದಿ | ತೀವಿ ಬೆಳ್ಪಂಗೆಡೆದು ಸೊಗಯಿಪು |
ವಿಮಲ ವಿಜಯಾರ್ಧ ಪರ್ವತವದಱ ಸಿರಿಪಿರಿದು || ೧೮ ||

ತಳರ್ವ ಬೀಜಾದರಿಯರಾನನ | ಪೊಳೆಯೆ ತನ್ನೊಳು ಬೆಟ್ಟದಾವತಿ |
ಗಳ ಬೆಡಂಗನು ಚರಣದಲಿತಗೆರಸದಿ ಚೆಂದಳಿರ ||
ವಿಳಸನವ ನವರಕ್ಷಿಗಳ ಬೆಳ್ | ವೆಳಗಿನಿಂ ಸರಭ್ರದಲಿ ಮಾ |
ರ್ಪೊಳೆವ ಮಿಂಚಿನ ಭಂಗಿಯನು ತಳೆದೆಸೆದುದಾ ಶೈಲ || ೧೯ ||

ಗಿರಿಯ ಸಿರಿಯನು ನೋಳ್ಪಬಿಜ್ಜಾ | ಧರರ ರನ್ನ ವಿಮಾನ ಬಾನೊಳು |
ನೆರೆದು ಮಾರ್ಪೊಳೆದಲ್ಲಿ ರನ್ನದ ಹಾಸಜೆಯ ಪೋಲೆ ||
ಚರಿಸಿ ಕಲು ತೇಲಿದುದೆನುತ ಬೆಂ | ಬರಿವ ಮುಗುಧೆಯರರೆಬರಲ್ಲಿಯೆ |
ಚರಿಪ ಚೆಲುವಿನ ಸಗ್ಗಿಗರ ನೆಱವಿಯನು ನಗಿಸಿದರು || ೩೦ ||

ಜನಪನಂಗಜ ವೀರರನು ಗೆಲ | ದನುಪಮಿತ ಬಿರುದಾವಳಿಯನಿಂ |
ಪಿನಲಿ ಪಾಡುವ ನಾಟ್ಯವಾಡುವ ವೀಣೆಯಲಿನುಡಿಪ ||
ದನಿಯನಾಗಿರಿ ವರದೊಳಾಡುವ | ಘನಕುಚದ ಖಚರಿಯರ ಹೃಸ್ತಿಕ |
ಮನಸಿಜನು ತಲೆಯೆತ್ತಲಮ್ಮನು ಕೇಳಿ ಕಡುನಾಚಿ || ೩೧ ||

ಪಾಱುವವೊ ತಾರಾಚಳಾಗ್ರದ | ಚಾ ಱ ಶಿಖರಗಳೆಂಬವೊಲುಮಿಗೆ |
ಪಾಱುತಿಹರು ವಿಯಚ್ಚರರು ತದುಭಯತದಿದನದ ||
ಸಾಱಕುಸುಮ ಪರಾಗವೆಲರಿಂ | ಪಾಱ ಸಗ್ಗದ ಪೊಕ್ಕ ಕತದಿಂ |
ಪಾಱಜಾತಾದಿಗಳರಳು ಕೆಂಪಾದುದೇ ವೊಗಳ್ವೆ || ೩೨ ||

ಪಾಡುವಂತಳಿಗೀತದಿಂ ಮಾ | ತಾಡುವಂತರಗಳಿರವದಿ ನಡೆ |
ದಾಡುವಂತರಸಂಚಿಗತಿಯಿಂ ಸುಯಿದವೊಲೆಲರಿಂ ||
ನೋಡುವಂತರಳಿದ ಕುಸುಮದಿಂ | ದಾಡುವಂತಿರೆ ನವಿಲ ನೃತ್ಯದಿ |
ನಾಡೆ ತದ್ವನಲಕ್ಷ್ಮಿಯೆಸೆದಳು ಖಚರ ನಿಚಯದಲಿ || ೩೩ ||

ಎರಡು ಪಕ್ಕದ ಬನಗಳಾಸಿರಿ | ಗೆರಡು ಪಕ್ಕಗಳೆರಡು ವಿಜ್ಜಾ |
ಧರರ ಶ್ರೇಢಿಯ ಸೌಧಗಳು ಗಿರಿಗಿಟ್ಟ ತತ್ತಿಗಳು ||
ಭರದೆ ಪಾಱದೆ ತತ್ತಿಗಳ ಕಾ | ದಿರುತಿಹುದೊಯೆನೆ ಮೆ ಱವುದದ ಱ |
ತ್ತರವರ ಶ್ರೇಢಿಯೊಳು ಸೊಬಗನು ಪೆತ್ತಮನೆಯೆನಿಸಿ || ೩೪ ||

ಪೊಳೆವ ಜಳಕಾತಿಕೆಯ ಬಳಸಿಂ | ದೊಳಗೆ ಬಳಸಿದ ಪೊನ್ನಕೋಟೆಗ |
ಳೊಳಗೆಸೆವ ಮಣಿಖಚಿತ ಗೋಪುರ ಹರ್ಮ್ಯದೀಧಿತಿಯಿಂ ||
ತೊಳಗಿ ಬೆಳಗುವ ಸೂರ್ಯಮಂಡಲ | ವಿಲಸಿತದಿನಾ ಸೂರ್ಯಪುರಮು |
ಜ್ವಳಿಪ ದಂತದನಾಳ್ವ ಸೂರ್ಯಪ್ರಭ ಖಗಾಧೀಶಾ || ೩೫ ||

ಇರದೆ ಸೂರ್ಯಪ್ರಭನ ತೇಜದ | ಹರವರಿಗೆ ಬಿ ಱತೊಡೆ ಗಿರಿ ಗ |
ಹ್ವರದೊಳಗೆ ಕಾನನದೊಳಗೆ ಕತ್ತಲೆಯೊಳಡಗಿಹರು |
ತರುಣ ಸೂರ್ಯಪ್ರಭೆಗಗಿದು ಮೈ | ಗರೆದು ಗೂಗೆಳಂತೆ ಕಂಗೆ |
ಟ್ಟಿರುತಿಹರು ರಿಪುಖಚರರಾಯರು ಸಂದಿಗೊಂದಿಯಲಿ || ೩೬ ||

ಆ ಗಗನಚರಪತಿಯ ಕೀರ್ತಿ | ಜೋಗಿನಿಯಗೆಯಿಂಗಡಲೆ ಬಳಸಿದ |
ಜೋಗವಟ್ಟಿಗೆ ಜೊನ್ನ ಪೂಸಿದ ಬೂದಿ ಪೊಂಬೆಟ್ಟ ||
ಜೋಗದಂಡರವಿಂದು ವೋಲಗೆ | ಳಾಗೆ ತಾರಗೆ ಸಂಕಮಣಿದೊಡ |
ವಾಗೆ ತನ್ನಿಚ್ಛೆಯಲಿ ಮೂಜಗದೊಳಗೆ ತೊಳಲುವಳು || ೭ ||

ಏಣಲೋಚನೆಯಾ ಖಗೇಂದ್ರನ | ರಾಣಿ ಸೊಬಗಿನ ಸೌಂದರರದ ಕ |
ಟ್ಟಾಣಿ ಸುಗುಣ ಶ್ರೇಣಿದಾನತ್ರಾಣಿ ಜಾಗ್ಲೊಲೆಗೆ ||
ವಾಣಿ ಮೋಹನ ಮೂರ್ತಿ ಜಿತಗೀ | ರ್ವಾಣಿವಿಭವದ ಚೂಣಿ ಕಿಸಲಯ |
ಪಾಣಿಧಾರಿಣಿಯೊಳಗೆ ಧಾರಿಣಿಯೆಂಬಳೆಸೆದಿಹಳು || ೩೮ ||

ಅವಳ ಗರ್ಭಸುದಾಂಬುಧಿಯೊಳೊ | ಪ್ಪವ ಸುಧಾಕರನಾಗಿ ತಾಂ ಸಂ |
ಭವಿಸಿ ಲಲಿತಶ್ರೀ ಸುರನು ಚಿಂತಾಗತಿಯುಮಾದ ||
ದಿವದಿ ಬರುತಲ್ಲಿಯ ದಿವಿಜರೆ | ಲ್ಲವರ ಚೆಲುವನು ತನ್ನ ತನುವಿನೊ |
ಳವಿಚಳಂ ತಳೆದಂತೆ ತೊಳತೊಳಗಿ ಬೆಳಗುವನು || ೩೯ ||

ಶಿಶುತನವನುದ್ಧರಿಸಿ ವಿದ್ಯಾ | ಪ್ರಸರವನು ನೆರೆಕಲಿತುವೊಪ್ಪುವ |
ಮಿಸುನಿಯನು ಪುಟವಿಟ್ಟವೊಲು ಮೈವಣ್ಣ ತಳತಳಿಸೆ ||
ಒಸೆದುನೋಡುವ ಖಚರಕುವರಿಯ | ರೆಸಳುಗಂಗಳು ಮಾರ್ಪೊಳೆಯ ಕ |
ಣ್ಗೆಸೆದನಿಂದ್ರನೆತಾನೆನಿಸಿ ಚಿಂತಾಗತಿ ಕುಮಾರಕನು || ೪೦ ||

ತಾರಭೂಧರವನು ಖಗೇಂದ್ರಕು | ಮಾರ ತನ್ನಯ ತೇಜದಿಂ ವಿ |
ಸ್ತಾರ ರೋಹಣ ಗಿರಿಯಮಾಡುವ ರೋಹಣಾಚಲವ ||
ಕೀರುತಿಯ ಬೆಳುವೆಲಗಪಸರಿಸ | ಲೌರಸ್ಯೆಳವ ರಚಿಸುವನದೇಂ |
ಚಾರು ವಿದ್ಯಾಧರನು ಚಿಂತಾಗತಿ ಕುಮಾರಕನು || ೪೧ ||

ಮನಸಿಜನ ಪಡೆಮಸಗಿ ಹರುಬದಿ | ಜಿನನ ಸಭೆಯನು ಮುಸುಗಿದುದೊ ಯೆಂ |
ದೆನಿಸಿ ವಿದ್ಯಾಧರ ಕುಮಾರೀ ವೃಂದದೊಡವೆರಸಿ ||
ಜಿನರವಸದಿಯನೊಲಿದು ಬಲಗೊಂ | ಬನು ಪೊದಳ್ದಷ್ಟಾಹ್ನಿಕದೊಳಿಂ |
ದ್ರನೆ ವಲಂ ತಾನಾಗಿ ಪೂಜಿಸುವನು ಮಹೋತ್ಸವದಿ || ೪೨ ||

ಎಱುಗುವವರಲ್ಲದೆ ವಿಚಯಚ್ಚರ | ರೆಱೆಯರೆಲ್ಲರುವವಗೆ ಕೂರಸಿ |
ಯೊಱೆಯನುಚ್ಚುವರುಂಟೆ ಮನದಲಿ ಮುಳಿಸ ಮುಕ್ಕುಳಿಸಿ ||
ಬೆಱೆವ ಸಱೆಮಿಂಡಿಯರದಾರೆನೆ | ನೆ ಱೆದುನಿಚ್ಚಲು ಗಗನ ಚರಿಯರ |
ನಱೆದು ಹಾಡಿಸುವಾಡಿಸುವನೋದಿಸುವ ನಲವಿಂದ || ೪೩ ||

ಬಳಿಯನಾ ಕಮಲಪ್ರಭಾಚರ | ಸುಲಲಿತಾಮರದಿವಳ ಚರೋ |
ಜ್ವಳನಿಳಿಂಪನುಕ್ರಮದಿ ಬಂದಾತಂಗನುಜರಾಗಿ ||
ಕಲಿಮನೋಗತಿ ಚಪಲಗತಿಯೆಂ | ಬಲಘುಭುಜರಮಳಿನರು ತೋರುವ |
ಸುಲಲಿತಾಕ್ಷಿಗಳಂತೆ ತೋಳುಗಳಂತೆ ಶೋಭಿಪರು || ೪೪ ||

|| ಅಂತು ಸಂಧಿ ೭ಕ್ಕಂ ಮಂಗಲ ಮಹಾ ||

## ಆದಿ ಪರ್ವ (ಸಂಧಿ ೮)

**ಸಂಧಿ ೮**

ಪ್ರೀತಿಮತಿ ಕನ್ಯಾಸ್ವಯಂವರ | ವಾತನಪರಾಜಿತನ ದೀಕ್ಷಾ |
ಖ್ಯಾತಿಯವರಾ ಸ್ವರ್ಗದುರ್ಗವನಾಳ್ದರೆಂತೆನಲು || ಪ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ತನ್ನಧಿರಾಜ್ಯಸಿರಿಯ ವಿ |
ಶಾಲವನು ಭೋಗಿಪಡೆ ತನುವೊಂದೆಯ್ದದೇಂದರಸ ||
ತಾಳಿದನೊ ಬೇ ಱೆರಡೊಡನೆ ನೆ | ಮೇಳದಿಂದನುಜರುವೆರಸಿ ಮಹಿ |
ಯಾಳುತಿರಲಾ ಶ್ರೇಣಿಯೊಳರಿಂದಮರಪುರವನಾಳ್ವ || ೧ ||

ಎಸೆವರಿಂಜಯ ಗಗನ ಚರಪತಿ | ಗೆಸೆವರಸಿಯಾದಜಿತ ಸೇನೆಗೆ |
ಮೆಸೆವ ಕುವರೀ ಪ್ರೀತಿಮತಿಯೆಂಬಳು ಚೆಲವಿನಿಂದ ||
ಮಸುಳಿಪಳು ರತಿಯನು ಸುವಿದ್ಯಾ | ವಿಸರದಲಿ ಸರಸತಿಯನತಿ ನಾ |
ಚಿಸುವಳುರುಸಿರಿಯಿಂದೆ ಕಡ್ಡೆಗೆ ಬಗೆವಳಾ ಸಿರಿಯ || ೨ ||

ಮೂಡಣಿಂ ಪಡುವಣಿಗೆ ಪಾಱುವ | ಪ್ರೌಢೆಯಲ್ಲದೆ ಪಡುವಣಿಂದಾ |
ಮೂಡುಗಡೆಗಾ ತೆಂಕ ಬಡಗಲು ಬಡಗ ತೆಂಕಲಿವ |
ನಾಡೆ ಪಾಱುವೊಡಱಿಯೆನೆಂದು ವಿ | ಭಾಡಿಪಳು ಮಾರ್ತಂಡನುಮನೆನ |
ನಾಡಲೆಂಬಾಂಬಟ್ಟೆಗರ ಕವಡಿಕೆಗೆ ಕೈಕೊಳಲು || ೩ ||

ಖಗನ ಮಗಳ ಸುರೂಪ ಮಡಲೊಡ | ನೊಗೆದು ಕುಲಮದ ಜವ್ವನದ ಮದ |
ಮಿಗೆ ಸಿರಿಯಮದ ವಿಭವಮದ ಚಲಕುಲಕಲಾಮದವು ||
ಗಗನಗತಿ ವಿದ್ಯಾಮದದ ಪೆ | ರ್ಚ್ಚುಗೆಗೆ ಪೆರ್ಚ್ಚುಗೆಗೊಡಲು ಕೇಳಾ |
ಖಗಕುಮಾರರು ಹೂಗಣೆಗೆ ಮಾಱುವರು ತಮ್ಮೆದೆಯ || ೪ ||

ನೀಡು ಬಾಂಬರಿಯಾಟದೊಳಗೊಡ | ನಾಡಿ ಬಿಜ್ಜಾಧರರ ಮಕ್ಕಳ |
ನಾಡಿರೋಡಾಡಿಸುವಳೆಂಬುದ ಕೇಳಿ ತನುಜರಿಗೆ ||
ಬೇಡಿಯಿಟ್ಟು ವರವಳನುಭಯ | ಶ್ರೇಢಿಗಳ ಬಾಂಬಟ್ಟೆಗರು ಕಡು |
ಗಾಡಿಕಾತಿ ವಿಳಾಸವತಿಯನು ಭೂಪ ಕೇಳೆಂದ || ೫ ||

ಕೊಡದ ಕೂಸು ಸುವರ್ಣಕೀಲಣಿ | ಗಡಶಿರದ ಮಾಣಿಕವು ನಾಲಗೆ |
ಗುಡಿಯ ಸೋಂಕದಹಣ್ಣು ನಲ್ಲನ ಸೋಂಕದೆಳೆವೆಣ್ಣು |
ಕಡು ಬಸಂತನೊಳೊಲಿದು ನೆರೆಯದ | ಪೊಡರ್ವ ಲತೆ ಕಾಂತನೊಳು ನೆರೆಯದ |
ಮಡದಿಯಂಗ ಲತಾ ವಿಳಾಸವಿವೊಪ್ಪುವುದೆಯೆಂದ || ೬ ||

ತನುಜೆಯಾಗಸಗತಿಯ ವಿದ್ಯಾ | ಘನವ ತಿಳಿದುವರಿಂಜಯಾಧಿಪ |
ನನುವಡೆದು ವಿಜಯಾರ್ಧ್ದಪರ್ವತದಗ್ರವನದೊಳಗೆ ||
ಕನಕ ಮಣಿಖಚಿತ ಸ್ವಯಂವರ | ವಿನುತ ಸಾಲೆಯವಿಳೆಗಿದಚ್ಚರಿ |
ಯೆನಲು ಸವೆಯಿಸಿ ನೂಱಹತ್ತುಂ ಪಟ್ಟಣದೊಳುಳ್ಳ || ೭ ||

ವಿವಿಧ ಖೇಚರರಾಯರನು ಸ | ಬ್ಬವದಿ ಕರೆಯಿಸೆ ಬಂದುದಂದು |
ತ್ಸವದಿನಾಗಸವೀಥಿಯೊಳು ತುಱುಗಿರೆ ವಿಮಾನಗಳು ||
ನವರತುನಮಯಮಾದ ಮುಗಿಲೋ | ಭುವನಕಚ್ಚರಿಯೆನಿಸಿದವು ನೋ |
ಡುವರ ಕಣ್ಗೆ ಬಳಿಕ್ಕ ಸಾಲೆಯ ಬಳಸಿದರು ಬಂದು || ೮ ||

ವಿಪುಳಚಿಂತಾಗತಿ ಮನೋಗತಿ | ಚಪಳಗತಿ ಖಚರಾಧಿಪತಿಗಳು |
ಲಪನಕಾಂತಿಯ ಪಸರಿಸುತ ತಂತಮ್ಮ ವಿಭವದೊಳು ||
ಅಪರಿಮಿತ ಪುಣ್ಯೋನ್ನತರು ತ | ದ್ವಿಪಿನದೊಳು ಬಹುರಚನೆಯಿಂ ರಾ |
ಜಿಪ ಸ್ವಯಂವರ ಸಾಲೆವೊಕ್ಕುಚಿತಾಸನದೊಳಿರಲು || ೯ ||

ಗಗನಗತಿಯುದ್ಧದಲಿ ನನ್ನಯ | ಮಗಳ ಗೆಲಿದವನಳಿಯನಾ ಭಾ |
ಷೆಗಳದೆಂತೆನೆ ಪಾ ಱ ಮಂದರಗಿರಿಯ ತುದಿಯಿಂದ ||
ಮುಗುಳು ಮಾಲೆಯ ಕೆಡಪಿ ಬಳಿಕಾ | ನಗವ ಮೂವಳಸೊದಗಿ ಪಿಡಿವುದು |
ಖಗಪತಿಗಳಱಿಗೆಂದು ಘೋಷಣೆ ಸಾರಿದಂತರದಿ || ೧೦ ||

ನೋಟದಿಂ ಕುಚಭರದಿ ಮುಡಿಯ ಸ | ಘಾಟಿಕೆಯ ನಗೆಮೊ[ಗದ] ಭೂಷಣ |
ಕೋಟಿ ಮಿಂಚಿನ ಕೋಟಿ ಕಳಸದ | ಕೋಟಿ ನವಿಲಿನ ಕೋಟಿ ಚಂದ್ರರ |
ಕೋಟಿ ಸುರಧನುಗಳ ಬೆಡಂಗಾಯಿತಾಗಸದೊಳಾಗ || ೧೧ ||

ಸತ್ತಿಗೆಯ ಸಾಲುಗಳೆ ಹರಿಗೆಯ | ಮೊತ್ತ ಕಣ್ಬಳಗಸಿ ಬೆಳಗು ಚೆಲು |
ವೆತ್ತ ಭಾಳದ ತಿಲಕ ಕುಂಕುಮ ಮೈದಿವಿರು ಮೆ ಱೆಯೆ ||
ಬಿತ್ತರಿಪ ಬಿರಿದಿನ ಕಹಳೆ ಬೆರ | ಸೆತ್ತಿ ಬಂದಂಗಜನ ಫೌಜೆನೆ |
ವೃತ್ತ ಕುಚೆ ಬಂದಳು ಖಚರರೆದೆಗೆಡೆ ಸರಾಗದಲಿ || ೧೨ ||

ಬಂದು ಮುನ್ನರ್ಚೆಸಿದ ಗತಿಯು | ದ್ದೇಂದು ಕಾಂತದ ಶಿಲೆಯೊಳಿಕ್ಕೈ |
ಯಿಂದೆರಡು ಮಾಲೆಯ ಪಿಡಿದು ನಿಲೆ ಕಂಡರಿಂಜಯನು ||
ಮಂದರಕ್ಕೊಗೆದರುಹನರ್ಚಿಸಿ | ಯೆಂದವೊಲು ಮಾಲೆಯನು ತಂದವ |
ಗಿಂದು ವದನೆಯನಿಲ್ಲಿ ಕೈನೀರೆ ಱೆವೆ ನಾನೆಂದ || ೧೩ ||

ನನಗೆ ತನಗೆಂದಖಿಲಖೇಚರ | ತನುಜರಾ ಗತಿಯುದ್ಧಕಿಕ್ಕೆಲ |
ಕನುವಡೆದು ನಿಲೆ ಮುನ್ನಮನಮೊಸೆದನುಜರೊಡವೆರಸಿ ||
ವಿನುತ ಚಿಂತಾಗತಿಯುಮವಳೊ | ತ್ತಿನೊಳು ನಿಲೆ ನಿಂದುದು ಕುವರಿಯುಮ |
ವನ ಚೆಲುವಿನೊಳುಮನಸೋತಳರಸ ಕೇಳೆಂದ || ೧೪ ||

ನಸು ಮಗುಳ ಮೈ ಮುಂಚಿದೆಡಗಾ | ಲೆಸಪೊಱವಾಱೊಡು ಪಿಡಿದ ಮಡ |
ಕುಸುಮ ಮಾಲೆಯ ನೆತ್ತಿದಿಕ್ಕೈ ಮುಗಿಲನಿ ಱೆದಮೊಲೆ ||
ಯೆಸೆಯೆ ಪೂರ್ಣ ಮೊಗಂ ಖಚರಿಯಾ | ಗಸದ ಮಿಂಚಿನ ಬೊಂಬೆಯಂದದಿ |
ಮಿಸುಗಿ ಪಾ ಱೆ ಸುರಾದ್ರಿ ಚೈತ್ಯಾಲಯವ ಬಲಗೊಳಲು || ೧೫ ||

ಪಿಂದೆ ಬಿರ್ದುದು ನಿಖಿಲಖಚರರ | ಬಿಂದವಾ ಚಿಂತಾಗತಿಯುಮವ |
ಳಿಂದ ಮುಂದೇಳೆಂಟು ಹಜ್ಜೆಯನೊದಗಲೀ ವನವ ||
ನಿಂದು ನೋಡುವವಿನಿತು ಪೊತ್ತೊಲ | ವಿಂದೆನುತೆ ಮೇರುವ ಸಮೀಪದೊ |
ಳೊಂದಿದುದು ಮಿಂಬಟ್ಟೆಯೊಳು ಬಾಂಬಟ್ಟೆಗರ ನೆರವಿ || ೧೬ ||

ಸಂದ ಪಾಂಡುಕಶಿಲೆಯ ಮಿಗೆ ಬಲ | ವಂದಕೃತ್ರಿಮ ಜಿನಪ ಬಿಂಬವ |
ನಂದದಿಂದರ್ಚಿಸಿ ಖಗನು ಮಂದಾರ ಮಾಲೆಗಳಿಂ ||
ಚಂದ ಚಂದದಿ ನುತಿಸಿ ಪರಮಾ | ನಂದದಲಿ ಪುಳುಕಿಸಿ ಸುಭಕ್ತಿಯೊ |
ಳಂದು ಚಾಚಿದ ನೊಸಲನು ಜಿನರ ಮೆಲ್ಲಡಿಗೆ || ೧೭ ||

ಬಳಿಯನಾ ಜಿನ ದಿವ್ಯಗಂಧದ | ಜಲಸುಗಂಧಾಕ್ಷತೆ ಕುಸುಮಗಳ |
ನೊಲಿದು ದೇವರ್ಕಳು ಕೊಡಲು ಗೆಲಗೊಂಬವೊಲು ಕೊಂಡು ||
ತಳುವದಲ್ಲಿಂ ಬುಧವಳ ಕೈ | ಗಳಿದ ಮಾಲೆಯನಂದು ಪೇಳ್ವಂ |
ತಳವಿಯಲಿ ಚಿಟಿಕಿಸಿದನಿತು ಪೊತ್ತಿನೊಳುಪಿಡಿ ತಂದು || ೧೮ ||

ತನ್ನ ತಮ್ಮಂದಿರುವೆರಸಿ ತಾ | ಮುನ್ನಣಾಗತಿಯುದ್ಧ ಶಿಲೆಯೊಳು |
ಸನ್ನುತಂ ನೆಲೆ ಕಱೆದರಮರರು ಕುಸುಮಗಳ ಮಳೆಯ ||
ಅನ್ನ ನಿನ್ನನೆ ನಾಳೆ ನೀಂ ಸಂ | ಪನ್ನ ನೇಮಿಜಿನೇಂದ್ರನೆಂದವ |
ರುನ್ನತದಿ ಸುರರೊಂದೆ ಕೊರಲೊಳು ಘೋಷಿಸಿದರೊಲಿದು || ೧೯ ||

ಬೆಂಬಳಿಯಲಾ ಖಚರಸುತೆಯೆದೆ | ದುಂಬಿ ನಟ್ಟಲರಂಬಿನೊಳು ಕೆಲ |
ರಂಬ ಸರಗಟ್ಟಿಕ್ಕುವಂತಾ ಮಾಲೆಯಿಕ್ಕುತಿರೆ ||
ತುಂಬಿದನು ಪಾವಿಗೆ ಕೊರಳಕೊಡೆ | ನೆಂಬವೊಲು ಹಿಮ್ಮೆಟ್ಟಿ ನಿಲೆ |
ನೆಂಬುದಿದು...ಗತಿಯ ಬಗೆಯೆಂದು... || ೨೦ ||

... ... ಜನತಿ ದೊ | ರ್ವ್ವಲಚಪಲಗತಿಗಿಕ್ಕು ಮಾಲೆಯ |
ನೊಲಿದುರೂಢಿಯ ಗಾಡಿಕಾಱಂಗೆನಲು ಸಿಗ್ಗಾಗಿ ||
ಎಲೆ ಖಚರ ಸುತ ಜೊನ್ನವನು ಕ | ಣ್ಗೊಲಿದು ಮನಮೊಸೆದೀಂಟುವಂದದಿ |
ನೆಳೆಸುವುದೆ ಪೆಱತೊಂದನೊಪ್ಪುವ ಜೊನ್ನವಕ್ಕಿಯದು || ೨೧ ||
ಎಂದು ಮನದಲಿ ನೊಂದು ನೀನಿಂ | ತಂದು ನುಡಿವುದರೊಳೇಂ ಕುಂದೇ |
ಅಂದು ನಾ ಪೂಜಿಸಿದೆ ಜಿನಪತಿಯೊಂದು ಮೆಲ್ಲಡಿಯ ||
ಒಂದಡಿಯನರ್ಚ್ಚಿಸಲು ಮ ಱೆದದ | ಱೆಂದ ನಾನರೆನೋಂಪಿಯನು ನೋಂ |
ತೊಂದು ಪುಣ್ಯದ ಕೊಱತೆ ಕಾಣಾ ಎಂದಳಾ ಖಚರಿ || ೨೨ ||

ನಿನ್ನ ಪೆಸರದು ಸಾರ್ಥಕವು ತಾಂ | ನೆನ್ನೊಳಾದುದು ಆದೊಡೇನೆನೆ |
ಗಿನ್ನು ಜಿನವರಚರಣ ಚಿಂತಾಗತಿಯ ಗತಿಯೆಂದು ||
ಮುನ್ನೆ ಸವೆದಿರ್ದಾವಿವಾಹದ | ರನ್ನ ಮಂಟಪದಲ್ಲಿ ಖೇಚರಿ |
ತನ್ನ ತಾಂ ತಱೆಸಂದು ಕೈಯಿಕ್ಕಿರ್ದಳೆಲೆ ಭೂಪ || ೨೩ ||

ಆದೊಡಾತನೆ ಪುರುಷನಲ್ಲದೆ | ಪೋದಡೀತಪ ಹರುಷವೆಂದೊಲ |
ವಾದುದಾಕೆಗದೇಂ ಕೃತಾರ್ಥೆಯೋ ಅವಳೆದಯ ಮದನ ||
ಸೀದುಲಿದು ಕೈಗೊಡಲು ರತಿಯೊಡ | ವೋದನಾ ಸತಿ ತಂದೆ ತಾಯ್ಗಳ |
ನದದದೊಡಂಬಡಿಸಿ ಪಲಬರು ಕನ್ನೆಯರು ಬೆರಸಿ || ೨೪ ||

ಇರದೆ ಪೊಱಮಟ್ಟಳು ಬಗೆದಳೆ | ಸರಿಯ ತನ್ನಯ ಜವ್ವನದ ಸೌಂ |
ದರವ ಜಾಣ್ಮೆಯ ಕುಲದ ವಿದ್ಯಾವಿಭವದೇಳ್ತರವ ||
ವಿರತೆಯಿಂ ರಾಮಾರ್ಯಕೆಯರೊಳು | ಭರದ ದೀಕ್ಷೆಯನಾಂತಳಂಬರ |
ಚರಕುಮಾರಿಯೆನಿಪ್ಪುದನು ಚಿಂತಾಗತಿಯಮ ಱೆದು || ೨೫ ||

ಗಾಡಿಕಾತಿಯೆ ಒಸೆದು ಮಾಲೆಯ | ಸೂಡಬಂದರೆ ನಾನವಜ್ಞೆಯ |
ಮಾಡಿದೊಡೆ ತನ್ನೊಡಲಸುಖವನವಜ್ಞೆ ಮಾಡಿದಳು ||
ನೋಡ ಪೆಣ್ಣಭಿಮಾನವನು ರೋ | ಡಾಡಿದಳಲಾ ನನ್ನನೆಂದಿರ |
ದಾಡಿ ಚಿಂತಾಗತಿ ವಿರಕ್ತಿ ಶ್ರೀಯನಪ್ಪಿದನು || ೧೬ ||

ಪೆಂಡಿರಾಳ್ವಭಿಮಾನಿಯೊರ್ವನೆ | ಗಂಡರೊಳು ನಮ್ಮಣ್ಣ ಮುನ್ನಣ |
ಪೆಂಡಿಕಿಮ್ಮನುಗಂಡು ಮಾಡಿದನೆಂಬನಿತೆ ಪಥವ |
ಕಂಡೆವವನಿಂತನ್ನನೊಲಿವರೆ | ಪೆಂಡಿರೆ ಜೆಯಳ ಧೂವೆದೊತ್ತೆನೆ |
ಕಂಡೆನೆನ್ನನು ರಾಗದಿಂದುಜೆ ಚಪಳಗತಿ ತೊಜೆದ || ೧೭ ||

ಕಾಂತ ಖೇಚರಲಕ್ಷ್ಮಿಯಂ ತೃಣ | ದಂತೆ ಬಗೆದು ವಿವೇಕ ವಿದ್ಯಾ |
ಕಾಂತಚಿಂತಾಗತಿ ಮನೋಗತಿ ಚಪಳಗತಿ ಖಗರು ||
ಇಂತು ಮೂವರುಮಾ ತಪಶ್ರೀ | ಕಾಂತೆಯೋರ್ವಳನಪ್ಪಿದರು ಗುಣ |
ವಾಂತ ದಮವರ ಗುರುಗಳಡಿದಳಿರೊಂಬೆ ಪಸೆಯೊಳಗೆ || ೧೮ ||

ದಿಗುವಸನರವರಿಂತು ತಪದಿಂ | ನೆಗಳ್ದು ಸುಸಮಾಧಿಯಲಿ ಕ್ರಮದಿಂ ||
ದಗಲ್ದೊಡಲನಾಮೂಮರುಂ ಸುಮಹೇಂದ್ರಕಲ್ಪದೊಳು ||
ಬಗೆದು ಸಾಮಾನಿಕಸುರಾಹ್ವಯ | ವಗಲದಾಂತರು ಪೆಂಪಿನಣಿಮಾ |
ದಿಗಳನಾಳ್ದರು ತಾಳ್ದರಲ್ಲಿಯ ದಿವಿಜ ಸೌಖ್ಯವನು || ೧೯ ||

ಏಳುಪಕ್ಷಕ್ಕೊಮ್ಮೆ ಸುಯಿಲಿನ | ಮೇಳವಾಯುವೆ ಸಾಗರೋಪಮ |
ವೇಳು ಸಂಕಲ್ಪಾಮೃತಾಹಾರವು ತಮಗೆ ನೋಡೆ ||
ಏಳುಸಾವಿರ ವರುಷಕೊರ್ಮೆನೆ | ಪೇಳಲೆಂದುತ್ತಮರು ಮನ್ಮಥ |
ಕೇಳಿಯಲಿ ಮುಟ್ಟಿದೊಡೆ ತಣಿವರು ಸುರತ ಸುಖಶರಧಿ || ೨೦ ||

ಅಗ್ಗಳಿಪ ಸೌಖ್ಯವನು ಕಂಡಡೆ | ಸ್ವರ್ಗ ಸೌಖ್ಯವದೆಂಬರೆನಲಾ |
ಸ್ವರ್ಗಸೌಖ್ಯಮನಂತುಟೆಂತುಟದಂತುಟೆನಬಹುದೆ ||
ಸಗ್ಗದಂಬುಧಿ ಈಂಟಿ ಪುಣ್ಯದ | ಸುಗ್ಗಿ ಚಿಂತಾಗತಿ ಚರಾಹ್ವಯ |
ಸಗ್ಗಿಗನು ನೀನಾದೆ ಕೇಳಪರಾಜಿತಾಧೀಶ || ೨೧ ||

ಅತ್ತ ಜಂಬೂದ್ವೀಪಮೇರುಗೆ | ಪೆತ್ತ ಪೂರ್ವ ವಿದೇಹ ಶೀತಾ |
ಯತ್ತ ನದಿಯುತ್ತರದ ತಡಿಯಾ ಪುಷ್ಕಳಾವತಿಯ ||
ಮತ್ತೆಸೆವ ವಿಜಯಾರ್ಧ ಪರ್ವತ | ದುತ್ತರ ಶ್ರೇಣಿಯೊಳು ಜೈನರ |
ಮೊತ್ತದಿಂ ಜಿನಮಂದಿರದ ಸಂದಣಿಯಲೊಪ್ಪುವುದು || ೨೨ ||

ಜಿನಮತಾಂಬುಧಿವೆಚ್ಚಿಸುತ ದು | ರ್ಜನಖಗೇಂದ್ರರ ತೋಳುರಿಯ ತಂ |
ಣನೆ ತಣಿಸಿ ಸಜ್ಜನಹೃದಯ ಶಶಿಕಾಂತಯೊಸರಿಸುತ ||
ವಿನುತ ಕೀರಿತಿ ಜೊನ್ನವನು ಬೆ | ಳ್ಪನೆ ಕಱೆದು ನಿಜಕುಲ ಗಗನಚಂದ್ರನೆ |
ದಲೆನಿಸಿದ ಗಗನ ಚಂದ್ರ ಖಗೇಂದ್ರನದನಾಳ್ವ || ೩೩ ||

ಆ ವಿಯೆಚ್ಚರನಗ್ರ ಮಹಿಷಿ ಗು | ಣಾವಲಂಬನೆ ಗಗನ ಸೌಂದರ |
ದೇವಿಗಾ ನಾಲ್ಕನೆಯ ಕಲ್ಪದೊಳಾಯುತವೆ ಬಂದು ||
ಭಾವಗತಿಚರ ಚಪಲಗತಿಚರ | ದೇವರಾತ್ಮಜರಾದರೊಪ್ಪುವ |
ತಾವಮಿತ ಗಾಮಿಯುಮಮಿತತೇಜನುಮೆನಿಪರಾಗಿ || ೩೪ ||

ವಿನುತ ಖೇಚರ ರಾಜ್ಯಲಕ್ಷ್ಮಿಯ | ನನುದಿನಂ ಪ್ರಿಯದಿಂದಮೀರ್ವರು |
ಮನುಭವಿಸುತೊಲವಿಂದೆ ಮೇರುಗೆ ಪಾಱೆ ಪದಿನಾಱು ||
ಜಿನರಕೃತ್ರಿಮ ವಸದಿಗಳ ನೊ | ಳ್ಪಿನಲಿ ಬಲವಂದರುಹನರ್ಚಿಸಿ |
ಮನಮೊಸೆದು ಗಗನಗತಿ ಖಗರ ನಿರೀಕ್ಷಿಸುತ್ತಿರಲು || ೩೬ ||

ದೊರಕಿದಾ ಗತಿಯುದ್ಧದ ಭವ | ಸ್ಮರಣೆಯಿಂ ಚಿಂತಾಗತಿಯ ಭವ |
ದಿರವನಱೆವೊಡೆ ಪುಂಡರೀಕಿಣಿಗೆಯಿದಿ ಬಲವಂದು ||
ಪಿರಿದುಬಂದಿಸಿಯಾಸ್ವಯಂಪ್ರಭ | ರರುಹರಂ ಬೆಸಗೊಂಡು ಭವ ವಿ |
ಸ್ತರವಱೆದು ವೈರಾಗ್ಯದಲಿ ಜಿನರೂಪನೊಸೆದಾಂತು || ೩೭ ||

ಶ್ರೀ ಜಿನೇಶ್ವರ ತಪವ ಜಿನ ಪೇ | ಳ್ದೋಜೆಯಿಂ ನಡಪುತ್ತಿರಲು ಗುಣ |
ರಾಜಿಚಾರಣವೃದ್ಧಿಯಂ ಪಡೆದವರು ನಾವೀಗ ||
ಆಜವಂಜವವಱೆಪುವೊಡೆ ನಾ | ವೀ ಜವದಿನೈತಂದೆವೆಲೆಯಪ |
ರಾಜಿತನೆ ಕೇಳೆಂದಮಿತಗತಿ ಚಾರಣರು ನುಡಿದು || ೩೮ ||

ಇದು ನಿಮಿತ್ತದಿನಮ್ಮ ಮೇಲಾ | ದುದು ನರಾಧಿಪ ನಿನ್ನ ಮೋಹವು |
ಚದುರಿನಿಂ ಪಿಂದೈದು ಭವವನು ತಿಳಿದೆಯ್ಯೆ ಮತ್ತೆ ||
ವಿದಿತ ಭರತಕ್ಷೇತ್ರ ಹರಿವಂ | ಶದೊಳು ನೀವಿನ್ನೈದನೆಯ ಜ |
ನ್ಮದನೆಲೆಗೆ ವರನೇಮಿತೀರ್ಥಂಕರಹೆ ಎಲೆ ನೃಪತಿ || ೩೯ ||

ಎಂದುಮಿನ್ನು ಹಿತೋಪದೇಶಮ | ದೊಂದ ಕೇಳೈಪೇಳ್ದೊಡೀಂ ನಿನ |
ಗೊಂದೆತಿಂಗಳ ಬಾಳ್ಕೆ ಸಿಲ್ಕದಿರೀ ತೊಡರ್ಪಿನೊಳು ||
ತಂದ ಬುತ್ತಿಯನುಂಡು ಬಳಿಕ ಮ | ತ್ತೊಂದು ಪಯಣಕೆ ಸಂಬಳವ ಕೊಂ |
ಡಿಂದುವೆಯಿದುವ ಪಥಿಕನಂತಿರುವೆಂದನಾ ಮುನಿಪ || ೪೦ ||

ಜಾತರೂಪರು ಪೂರ್ವಭವಸಂ | ಜಾತಸಂಪ್ರೀತಿಯಲಿ ಬಂದೆನ |
ಗೀತೆರದಿ ತಿಳಿಪಿದಿರಿ ಭವವನು ದಿನ ಸಮೀಪವನು ||
ಬೀತುದಿಂದ್ರಿಯದಿಚ್ಛೆಯೇತಱ | ಮಾತೊಯಿಂತಡೆದೊಡೆ ಬಳಿಕೆನ |
ನ್ನಾತುಮಗೆ ನಾ ಹಗೆಯಲಾ ಮುನಿಹಂಸ ಕೇಳೆಂದ || ೪೧ ||

ಎನೆ ಮಹೀಪತಿ ಕೇಳು ಬಗೆ ತ | ಣ್ಣನೆ ತಣಿದು ಭೂಮಿಗೆ ಶಶಾಂಕಂ |
ಗಿನಗೆ ಗಾಳಿಗೆ ಮಳೆಗೆ ಪೂಲತೆಗಮಲ ಫಲತರುಗೆ ||
ಮುನಿಪನಿಮ್ಮನ್ನರ್ಗೆ ಪರಹಿತ | ಮನೆ ನಿಮಿರ್ಚುವುದೇ ಸ್ವಭಾವವು |
ನನಗೆ ದಯೆಯಿಂದಿಂತು ಗೆಯಿದಿರಿ ಧನ್ಯನಾನೆಂದ || ೪೨ ||

ಎನೆಮುನಿಪರತಿ ಮೆಚ್ಚಿ ಸಾಮಾ | ನ್ಯನೆ ಅನಂತ ಸುಖೈಕ ಭಾಗಿಗೆ |
ನನಗೆ ವೈರಾಗ್ಯವು ನಿಸರ್ಗವೆನುತ್ತ ಮಿಗೆ ಹರಸಿ ||
ಘನಪತಕ್ಕವರೀರ್ವರುಂ ಮಿಂ | ಚಿನ ಪಳಂಚಿನ ಪುತ್ಥಳಿಗಳೆಂ |
ದೆನಿಸಿ ಬಿಜಯಂಗೈಯೆ ನೃಪನಿಜಪುರವನೈ ತಂದ || ೪೩ ||

ಅರಮನೆಯ ನೆರೆಮನೆಯವೊಲುಬಗೆ | ದಿರದೆ ತಾಂ ಪ್ರೀತಿಂಕರಾತ್ಮಜ |
ನುರು ಭುಜಾಗ್ರದೊಳಿರಿಸಿ ತನ್ನಧಿರಾಜ್ಯಭಾರವನು ||
ಸುರಚಿರತ್ರಿಭುವನ ವಿಭೂಷಣ | ವರ ಚೈತ್ಯಾಲಯದ ಮುಂದ |
ಚ್ಚರಿಯೆನಲು ಮಂದರವ ವಿರಚಿಸಿದನು ಸುವರ್ಣದಲಿ || ೪೪ ||

ಚಂದದಲಿ ನವರತ್ನ ಕೀಲಣೆ | ಯಿಂದ ಕಲ್ಪಿಸಿ ಕುಜಗಳ |
ನಂದು ಹಾರದಿ ತಾರೆಗಳ ಮಣಿಗನ್ನಡಿಗಳಿಂದ ||
ಚಂದ್ರಸೂರ್ಯರ ಬಲಗೊಳಿಸಿ ದೇ | ವೇಂದ್ರನೆನೆ ಭೂಷಣದ ರತ್ನಗ |
ಳಿಂದೆ ನೇತ್ರಸಹಸ್ರ ತನು ತಾನಾಗಿ ಪೂಜಿಸಿದ || ೪೫ ||

ಇಂತಹರ್ನಿಶ ವೆಂಟುದಿನ ಪರಿ | ಯಂತ ಜಿನಗಭಿಷೇಕ ಪೂಜೆಗ |
ಳಂತರದಿ ನೆ ಱಿ ಮಾಡಿಯಜ್ಞಾಂತದೊಳು ತದ್ಗಿರಿಯ ||
ಸಂತಸದಿ ನೊಸೆದಿತ್ತು ಯಾಚಕ | ಸಂತತಿಗೆ ಕೈಮೆಱೆದು ಕೀರ್ತಿಗೆ |
ಕಾಂತನಪರಾಜಿತ ಮಹಾರಾಯನು ತೊಡರ್ದಿರದೆ || ೪೬ ||

ಘನವಿಭೂತಿಯನಾ ವಿಭೂತಿಯ | ದೆನೆ ಪರಿಗ್ರಹವನು ಪರಿಗ್ರಹ |
ವೆನೆ ಪುರವ ಯಮಪುರವದೆನೆ ನಾರಿಯನು ಮಾರಿಯೆನೆ ||
ತನುವನತಿ ತನುವೆನೆ ಯನುಜರನು | ತನುಜನರು ದನುಜರೆದೆಲೆನೆ ತೊ ಱೆ |
ದನು ಮೆಱೆದನು ವಿರಕ್ತಿಯನು ಭೂಪಾಲ ಕೇಳೆಂದ || ೪೭ ||

ಎಲ್ಲರನು ಸಂತೈಸಿ ಪುರದಿಂ | ಮೆಲ್ಲಗೈದಿ ತಪೋವನಮನಾ |
ಫುಲ್ಲ ಶರಜಿತರಮಲಗುಣ ಭಟ್ಟಾರಕರ ಬಳಿಯ ||
ಸಲ್ಲಲಿತ ಜಿನರೂಪನಾಂತುಗು | ಣೋಲ್ಲಸಿತನಾ ಸನ್ಯಸನ ವಿಧಿ |
ಯಲ್ಲಿ ತಾಂ ಪ್ರಾಯೋಪಗಮನದಿನಿರ್ದನಾ ಯತಿಪ || ೪೮ ||

ಪಂಚ ಬಾಣನ ವಿಕ್ಕಿ ಮುನ್ನಮೆ | ಪಂಚಗುರುಪದ ಭಜನೆಯೊಳಗೆ ಪ |
ಳಂಚಲೆಯಲಿಪ್ಪತ್ತೆರಡು ಕಡಲಾಯುವೊಡೆತನವ ||
ಸಂಚಯಿಪವೊಲಿಪ್ಪತ್ತೆರಡು ದಿ | ನಂ ಚಲಿಸದಿರ್ದಳಿದು ತನುವನು |
ಕಾಂಚನಾದ್ರಿಯ ಮೂಲದಿಂ ನೆಗೆದಾಱುರಜ್ಜುವಿನ || ೪೯ ||

ಪವಣಿನಚ್ಚುತ ಕಲ್ಪದೊಳು ಮಣಿ | ನಿವಹ ಕೂಟದುದಗ್ರ ರತ್ನ |
ಪರವರಕಲಶದ ಪಳಯಿಗೆಯ ಫಲಶೋಭೆಗೆಡೆಯದ ||
ದಿವಿಜವೃತ ಶಾಂತಕರ ವೆಂಬೊ | ಪ್ಪುವ ವಿಮಾನದೊಳಚ್ಚುತೇಂದ್ರನೆ |
ಸುವಿದಿತಂ ತಾನಾದ ನೆಲೆ ಭೂಪಾಲ ಕೇಳೆಂದ || ೫೦ ||

ಶರಧಿ ಪರಿಮಿತದಾಯುವಿಪ್ಪ | ತ್ತೆರಡು ನನೆದಂಬುಣಿಸುವಿಪ್ಪ |
ತ್ತೆರಡು ವರಷಕ್ಕೊಮ್ಮೆ ಸುಯಿಪನ್ನೊಂದು ತಿಂಗಳಿಗೆ ||
ದೊರೆವಡೆದ ಹಸ್ತತ್ರಿತಯ ಬಂ | ಧುರ ತನೂನ್ನತಿ ನೂಱಪದಿನೈ |
ದುರು ವಿಮಾನಗಳೊಡತನವು ತನಗಾಗೆ ಸುಖವುಂಬ || ೫೧ ||

ಮತ್ತೆ ತ್ರಾಯತ್ರಿಂಶಕರು ಮೂ | ವತ್ತ ಮೂವರು ಜೀಯೆನಿಪ್ಪರು |
ಹತ್ತು ಸಾವಿರ ಒಪ್ಪುವಾ ಸಾಮಾನಿಕಾಮರರು ||
ಮೂರ್ತಿರಕ್ಷಕ ದೇವರಾಯುಧ | ವರ್ತಿಗಳು ತಾಂ ನಾಲ್ಕು ಸಾಸಿರ |
ಸುತ್ತಿಹುದು ಸೇವಿಪರು ನಾಲ್ವರು ಲೋಕಪಾಲಕರು || ೫೨ ||

ಕರಿತುರಗ ರಥ ಸುರಪದಾತಿಯ | ನೆರವಿ ವಿನುತಗವೇಂದ್ರ ಗಂಧ |
ರ್ವರು ನಲಿವ ನರ್ತಕಿಯರೆಂ ಬೆಳಂಗ ಬಳಿನಿಕರ ||
ವರ ಮಹಾದೇವಿಯರು ತಾವೆ | ಣ್ಬರು ಚತುಃಷಷ್ಟಿಯು ವಿಶಿಷ್ಟಾ |
ಮರಿಯ ಪತ್ತೀರ್ವರುಚಿತ ವಿಳಾಸಿನೀಯವರ್ಗ || ೫೩ ||

ಮನಸಿಜಕ್ರೀಡಾ ಸುಖವನುರೆ | ನೆನೆದೊಡಾಗಳೆ ತೃಪ್ತನಾಗಿ |
ರ್ದನಿಮಿಷೋತ್ತಮ ಸೌಖ್ಯವುಂಡಾಯುವ ಕಡಲೆನಿಸೆ ||
ಎನಲದೇನಚ್ಚುತನೆ ತಾಂಭೋಂ | ಕನೆ ಪರಿಚ್ಯುತನಾದನೆನೆ ನು |
ಣ್ಣನೆ ನೊಣೆಯನೆ ಮಿಕ್ಕ ನರರನು ಕಾಲರಕ್ಕಸನು || ೫೪ ||

ಶರದದಂಬುದದಂತೆ ಮೆಲ್ಲನೆ | ಕೊರಗೆ ದೇವನ ದಿವ್ಯ ತನು ತಾ |
ನಿರದೆ ಬಂದೀ ಜಂಬು ದ್ವೀಪದ ದಕ್ಷಿಣದ ದೆಸೆಯ ||
ಭರತದಾರ್ಯೆಯೊಳೈದೆ ಶೋಭಾ | ಕರವೆನಿಪ ಕುರುಜಾಂಗಳವೆನಿ |
ಪ್ಪುರು ವಿಷಯದೊಳು ನೋಡೆಗಜಪುರವೆಂಬುದೆಸೆದಿಹುದು || ೫೫ ||

|| ಅಂತು ಸಂಧಿ ಲಕ್ಕಂ ಮಂಗಳ ಮಹಾ ||

## ಆದಿ ಪರ್ವ (ಸಂಧಿ ೬)

**ಸಂಧಿ ೬**

ದಿವದಿನಪರಾಜಿತ ಚರಾಮರ | ನವನಿಯೊಳು ಶ್ರೀಚಂದ್ರ ವಿಭುಗೊ |
ಪ್ಪುವ ತನೂಭವನಾಗಿಯಧಿರಾಜ್ಯದೊಳು ಸುಖಮಿರ್ದ || ಪ ||

ದಾನಗಂಧದಿ ಭದ್ರದಿಂ ಕರ | ಮಾನದಿಂಗಜ ಪರವು... ತೆಱ |
ದಾನೆ ಘುಟೆಗಳು ತೀವಿದದಱಿಂ ಗಜಪುರವು... ||
ಮಾನನಿಧಿ ಭವ್ಯನಿಧಿ ಸುಖನಿಧಿ | ದಾನನಿಧಿ ನೀತಿನಿಧಿ ಸಕಲ ಕ |
ಲಾನಿಧಿ ಶ್ರೀಚಂದ್ರವೆಸರ ನರೇಂದ್ರನದನಾಳ್ವ || ೧ ||

ಕರಿಮುಗಿಲರಿಪು ಮಿತ್ರ ಮುಖದೊಳ | ಗರಿಯ ಸಿರಿಯೊಳು ಮಿಂಚಿನವರ್ಗಳ |
ತರುಣಿಯರ ರಾಗದೊಳಗುರದೊಳಗಕ್ಷಿಯುಗಲದೊಳು ||
ಸುರಧನುವ ಬಲುಮೊಳಗಮಳೆಗಳ | ನಿರದೆ ಪರದೆ ಪಸರಿಸಿ ಕೀರ್ತಿಲತೆಯನು |
ಭರದಿ ಪರ್ವಿಪುದಾ ನರೇಂದ್ರನ ಖಳ್ಗ ಜೀಮೂತ || ೨ ||

ಆ ನರಾಧಿಪನಗ್ರ ಮಹಿಷೆಯೆ | ತಾನಲಾ ಸ್ತ್ರೀರತ್ನ ಪಙ್ಜೆಗ |
ಳಾನೆವದೊಳಾ ಪದ್ಮರಾಗವು ಉಗುರನೆವದಿ ಮುತ್ತು ||
ಮಾನಿನಿಯ ಪಲ್ಲಧರ ದಳಕೆಗ | ಳಾ ನೆವದಿ ವಜ್ರ ಪ್ರವಾಳಾ |
ನೂನ ನೀಳಸುರತ್ನವಿಹವೆನೆ ಪೊಗಳ್ವಡಸದಳವು || ೩ ||

ಪೆಸರಿನಿಂ ಶ್ರೀಮತಿ ಮಹಾಸತಿ | ಕುಸುಮ ಗಂಧಿನಿಯಂತವರ್ಗೊ |
ಳ್ವೆಸೆವ ಮುಂಪೇಳ್ದಚ್ಚುತೇಂದ್ರನೆ ಸುದಿನಲಗ್ನದೊಳು ||
ಒಸಗೆ ಮಸಗೆ ಸಮಸ್ತರಿಗೆ ಸಂ | ತಸವು ಜನಿಯಿಸಿ ಬಂದು ಜನಿಸಿದ |
ನಸದೃಷಂ ಶ್ರೀ ಸುಪ್ರತಿಷ್ಠ ವಿಶಿಷ್ಟ ನಾಮದಲಿ || ೪ ||

ಹಸುಳೆ ರೂಪಿನ ಕಲ್ಪವೃಕ್ಷವೋ | ಶಿಶುತೆವಡೆದ ವಸಂತನೋ[ಲು]ದ |
ಯಿಸಿದ ಸೂರ್ಯನೊ ಬಾಳಚಿಂತಾರತ್ನವೋ ಧರೆಗೆ ||
ಹೊಸಪರಿಜ... ನಾ ಲತಾಂಗಜ | ಮಿಸುನಿ ಬಿದಿಗೆಯ ಚಂದ್ರನಂದದ |
ಲೆಸೆದು ದಿನದಿನಕೇಳ್ಗೆವಡೆದನು ರಾಜ ಸುಕುಮಾರ || ೫ ||

ಕೆಸರ ಮೊಮ್ಮಗ ಅರಿದಲೆಗಮಿಗೆ | ಪೆಸರೊಳಜನೆಂದಾ ವಿಧಿಯ ದೂ |
ರಿಸಿಸದನ್ವಯ ನೆಯಿದೆ ಸುಮುಖ ಸುನಾಮನೆಂದೊಲಿದು ||
ಕುಸುಮ ಕೋಮಲ ಸುಪ್ರತಿಷ್ಠನ | ಮಿಸುಪ ಸಿರಿಮೊಗ ದಾವರೆಯೊಳು |
ಲ್ಲಸಿತ ಸೌರಭದಂತೆ ನಿಂದಾ ವಾಣಿ ಜಾಣೆಯಲೆ || ೬ ||

ಸರಸತಿಗೆ ಪುರುಡಿಸಿದ ತೆಱದಿಂ | ಸಿರಿಯುರವನಪ್ಪಿದೊಡೆ ಕೂರಸಿ |
ಗರಸಿಯಾದಳು ವೀರಸಿರಿಕುವರನಹೃದಯದೊಳಗೆ ||
ನೆರೆದಳಾ ಧೃತಿಲಕ್ಷ್ಮಿ ತೋಳೊಳು | ಬೆರಸಿದಳು ಜಯಲಕ್ಷ್ಮಿ ಕೂಡಿದ |
ಳುರು ವಿತರಣ ಶ್ರೀಮನೋಹರ ಕರಸರೋಜದೊಳು || ೭ ||

ಇಂಗಡಲ ನೆಱಿಮಿಂದು ನಿಱಿದು | ಟ್ಟಂಗದಿರ ತಾರೆಗಳ ಹಾರವ |
ಸಂಗೊಳಿಸಿ ತಿಂಗಳ ಮುಡಿದು ಬಾಂದೊಱೆಯ ನೀರ್ವೂವಿಂ ||
ತುಂಗ ಸುರತರು ಕುಸುಮ ವಿಸರದಿ | ಪಿಂಗದಾ ಸಿದ್ಧರಸ ವಿಮಲ ಪ |
ದಂಗಳನು ಪೂಜಿಪಳು ಜಸವೆಣು ಸುಪ್ರತಿಷ್ಠಕನ || ೮ ||

ಅರಿಗಳನು ಬಿಡು ನನ್ನವನ ತೋ | ಳ್ಗಿರುಜಯಾಂಗನೆಯಾಜಿಯೊಳಗ |
ಚ್ಚರಿಸಿಯರಿಗಾ ಮಾಲೆಗೊಳ್ಳಿಯೆನುತ್ತ ಕಡುವೀರ ||
ಸಿರಿಬರದಿ ಕಣುಸನ್ನೆ ಮಾಡಿದೊ | ಡಿರದೆ ಸೂಸುವ ಕಣ್ಣ ಬೆಳಗೆನೆ |
ಪಿರಿದು ಪೊಳೆದುದು ರಾಜಪುತ್ರನ ತೋಳು ನಿಡುವಾಳು || ೯ ||

ಒಸೆದವನ ಸವಿಗಾಡಿಯನು ನಿ | ಟ್ಟಸಿದ ಕಾಮಿನಿಯರು ಶಶಿಯತಂ |
ಬಿಸಿಲಿಗೆಳೆದಳಿರ್ವಂದರಕೆ ನಂದನ ವನಕೆ ಚಂದನಕೆ ||
ಎಸಳ ಪಸೆಗೋರಂತೆ ಪನ್ನೀ | ರೊಸರ್ಗೆ ಹೂವಿನ ಬಿಜ್ಜಣಿಗೆಗೊ |
ಪ್ಪಿಸದೆ ಪೋಪರ ತಮ್ಮ ತನುವನು ವಿರಹತಾಪದಲಿ || ೧೦ ||

ಹೊಚ್ಚ ಹೊಸಜವ್ವನದ [ಗಾಡಿಯ] | ನಿಚ್ಚೆಸಿ ಶ್ರೀಚಂದ್ರರಾಯನು |
ಮೆಚ್ಚಿ ಪರಿಣಯನವನು ಮಾಡಲು ಬಗೆದು ಹರಿವಂಶ ||
ನಿಚ್ಚಟ ಶ್ರೀಶೇಣನಾತ್ಮಜೆ | ಯೆಚ್ಚ ಚಂಪಕದಾಮ ಕೋಮಳೆ |
ಚೊಚಳೆಸುನಂದೆಯನು ಕುವರೆಗೆ ಮದುವೆ ನಿಲಿಸಿದನು || ೧೧ ||

ಒಂದೆ ಪಸೆಯೊಳು ಪಂಚಶತನೃಪ | ನಂದನೆಯರನು ಮದುವೆ ನಿಂದೊಲ |
ವಿಂದ ತಂದೆನೆಗೋತ ಮೋಹದ ಪಟ್ಟಮಾದೇವಿ ||
ನಂದೆ ನಯನಾನಂದೆ ಮಿಗೆ ತಾ | ನಂದೆ ಮಾನವ ಮದನನಿಂಪಿಗೆ |
ಸಂದು ಸೊಗಸಿನ ಸೊಕ್ಕನೂಡಿ ಸುನಂದೆಯೆನಿಸಿದಳು || ೧೨ ||

ವನಿತೆಯರ ಸೀಮಂತ ಮಣಿಯಾ | ನನಮಕಕ್ಕನೆ ನೋಡಿದಂದಿಂ |
ವನಜರಿಪು ಕಳೆಗುಂದಿ ಕಂದೆದೆಯಾಗಿ ಕಡಲಿಳಿವ ||
ಎನುತ ಹೊಂದಾವರೆಯವಳ ಚೆಲು | ವಿನ ಮೊಗವ ಹೋಲುವೊಡೆ ನೀರ್ವೊ |
ಕ್ಕನುದಿನಂ ತಪವಟ್ಟು ಜನವನು ಮಾಳ್ಪುದಳಿ ರವದಿ || ೧೩ ||

ನುಡಿದ ತಾವರೆ ಕಮ್ಮಲರುಗಳ | ಮುಡಿವ ತುಂಬಿಗಳುಂಬ ಹವಳದ |
ಕುಡಿಸು ಪರಿಮಳವಱಿವ ಸಂಪಗೆ ಕಂದರಿವ ಕುಮುದ ||
ನಡೆವ ಬಾಳೆಗಳುಡುವ ಪುಳಿಲೋ | ಗೊಡೆಯದೆಣೆವಕ್ಕಿಗಳು ರಾಯನ |
ಮಡದಿಯೊಳು ಚೆಲುವಾಗಿ ನಿಂದವದೊಂದು ಲೀಲೆಯಲಿ || ೧೪ ||

ಮೀಸಲಧರಾಮೃತದ ಸವಿಪೊಱ | ಸೂಸದೆಳೆ ಜವ್ವನದ ತನು ಸವಿ |
ಯಾಸುನಂದೆಯ ಮುನ್ನಱಿಯದೊಳು ಲಲ್ಲೆನುಸಿಯ ಸವಿ ||
ಆ ಸಮಯದೊಳು ನಿಮಿರ್ದಮೂಱುಸ | ವಾಸನೆಯ ಸವಿ ಚೆಲುವಿಕೆಯಸವಿ |
ಲೇಸೆನಿಸೆ ಪಂಚೇಂದ್ರಿಯವನೊಲಿಸಿದವು ನಿಜಪತಿಯ || ೧೫ |

ಕಂತು ಸನ್ನಿಭ ಸುಪ್ರತಿಷ್ಠಕ | ನಿಂತು ಸುಖದಿರಲೊಂದು ದಿನವಾ |
ಕಂತುಜಿತನುತ ಮಂದರಸ್ಥ ಜಿನೇಂದ್ರಸಮವಶೃತಿ ||
ಸಂತಸವನಿಳೆಗೀವು ತೈತರೆ | ಶಾಂತದಿಂ ಶ್ರೀ ಚಂದ್ರವಸುಧಾ |
ಕಾಂತನಲ್ಲಿಗೆ ಪೋಗಿ ಪೂಜಿಸಿ ಜಿನರ್ಗೆ ವಂದಿಸಿದ || ೧೬ ||

ಮುನಿ ನಿಕರವನು ತುಳಿಲು ಗೈದಾ | ಮನುಜಕೋಷ್ಠದೊಳಿರ್ದು ಧರ್ಮಮ |
ನನುಪಮಿತನಿರೆ ಕೇಳ್ದು ಸಂಸಾರಾದಿಗಿರದಗಿದು ||
ತನುಜಗೊಪ್ಪುವಸುಪ್ರತಿಷ್ಠೆಗೆ | ವಿನುತ ರಾಜ್ಯದ ಪಟ್ಟವನು ಕ |
ಟ್ಟೆನುತ ನೇಮಿಸಿದನು ನಿಜಾಪ್ತಪ್ರಧಾನರಿಗೆ ನೃಪತಿ || ೧೭ ||

ಅತ್ತಲವರು ಮಹೋತ್ಸವದಿ ಸುಮು | ಹೂರ್ತದಲಿಯಧಿರಾಜ ಪಟ್ಟವ |
ಬಿತ್ತರಿಸಿದರು ಸುಪ್ರತಿಷ್ಠ ಧರಾಧಿನಾಥಂಗೆ ||
ಇತ್ತಲಾ ಶ್ರೀಚಂದ್ರರಾಯನು | ಪೆತ್ತನಾ ಜಿನದೀಕ್ಷೆಯನು ಸ |
ದ್ವೃತ್ತನೈನೂರ್ವರು ನೃಪಾಲರ್ವರೆಸಿ ಗಣಧರರಿಂ || ೧೮ ||

ಪೞೆದು ಪೊಱಗೊಳಗಿಹತೊಡಪ್ಪನು | ನೆಱೆದು ಮೂಲೋತ್ತರಗುಣಗಳಲಿ |
ಮಿಱುಗುವಾ ಶ್ರೀಚಂದ್ರ ಜಿನಯೋಗಿಗಳನು ಕ್ರಮದಿ ||
ಪೞೆಗಡಿದು ಕೂರ್ಮಾಷ್ಟಕಾವನೆಸೆ | ವೞೆವೆ ಮೈಯಾಗಮೃತ ಲಕ್ಷ್ಮಿಗೆ |
ಎ ೞೆಯರಾಗಿರುತ್ತಿರ್ದರಿತ್ತಲು ಸುಪ್ರತಿಷ್ಠ ನೃಪ || ೧೯ ||

ಶಿರದೊಳಿರೆ ತನ್ನಾಣೆಯನು ಪೊರ | ದರಿನೃಪರ ಕಾಂತಾ ಕದಂಬದ |
ಶಿರವೊರದು ಸೀಮಂತವನು ಹಾರವನು ತಳ್ತಿರದೆ |
ಕೊರಳಿನೊಳು ಹಾರವವು ಳ್ತುವು | ಸಿರಿಯುದಾರದ ಮಹಿಮೆಯನು ಬಿ |
ತ್ತರಿಸಲರಿಯೆ ಗಜಾಂತ ಲಕ್ಷ್ಮಿಯನಾಳ್ದರೆನ್ನವರು || ೧೦ ||

ಮೇರುವಿನ ತಪ್ಪಲೊಳು ಮೆರೆವನ | ಮೇರುವುದಯಿಸಿದಂತೆ ನೃಪಕುಲ |
ಮೇರುವೆನಿಸಿದ ಸುಪ್ರತಿಷ್ಠನರೇಂದ್ರಗಾತ್ಮಜನು ||
ಚಾರುಗುಣಿವುದಯಿಸಿದಜನತಾ | ಧಾರ ವೀರನು ನೃಪನು ಲಕ್ಷ್ಮೀ |
ರಮಣಿಗೆ......ಸುವೃಷ್ಟಿಯೆಂಬವನು || ೧೧ ||

ಜಿನಪದಾಂಬುಜ ಭೃಂಗನವನೀ | ವಿನುತನಂಗಜ ರೂಪನಾಗಿರೆ |
ಜನವರಿಯೆ ಮೞೆವಾಸುದೃಕುಮಾರಕಂಗರಸ ||
ಮನವೊಲಿದು ಯುವರಾಜ್ಯ ಪದವಿಯ | ನನುನಯದಿ ಕೊಟ್ಟತಿಸುಖದಿ ನಿರು |
ತನುಪಮಿತಗುಣಿ ಸುಪ್ರತಿಷ್ಠ ನರೇಂದ್ರನೊಂದು ದಿನ || ೧೨ ||

ಮಿಸುನಿ ವೆಸದಿಂದೆಸೆವ ಸರ್ವಾ | ವಸರ ಮಂಡಪ ಮಧ್ಯದೊಳು ಚೆಲು |
ವೆಸೆವ ರನ್ನದ ಸಿಂಗವಣೆಯನಲಂಕರಿಸಿಯಿರಲು ||
ಸಸಿಮುಖಿಯಗಿಕ್ಕೆಲದೊಳಗೆ ನೃಪ | ನೆಸೆವ ಲಕ್ಷ್ಮಿಯ ದರ ಹಸಿತವೆನೆ |
ಮಿಸುಪ ಚವಲವಧಾಳಿಪರು ಕಂಕಣಝುಣತ್ಕೃತಿಯಿಂ || ೧೩ ||

ಹಿಂದೆ ಬಳಸಿರ್ದಂಗೆ ರಕ್ಷಕ | ರಿಂದೆ ಮುಂದೆಸೆವಡಪವಳನಿಂ |
ಪಿಂದೆ ಗಿಂಡಿಯಡವಕೆಯೊಡರಿಸುವಾಳವಟ್ಟಗಳ ||
ಚಂದದೂಳಿಗದವರೆಸೆಯೆ ಬಲ | ದೊಂದು ಗದ್ದುಗೆಯೊಳು ಕುವರನಿರೆ |
ಸಂದಮಾತ್ಯಕನೆಡದಲಿರೆ ಚೆಲುವಾದುದಾಸ್ಥಾನ || ೧೪ ||

ವರಕುಮಾರಕ ಬಂಧುವರ್ಗದ | ದೊರೆಗೊಳೊಪ್ಪುವ ಮಂತ್ರಿಗಳ ಬಲು |
ಕರಣಿಕರ ಮಂಡಳಿಕ ಮಾಸಾವಂತ ಮನ್ನೆಯರ ||
ವರಬುಧರ ಕವಿಗಮಕಿವಾದಿ | ಸ್ವರರ ವಾಗ್ಮಿಗಳೆಸೆವ ಬೈಕಾ |
ರರಸಿಕಾರರ ಭಟ್ಟ ನಟ್ಟವಿಗರ ವಿಡಾಯದಲಿ || ೧೫ ||

ಪರದ ಪಡೆಯಿಲ ಜೋಯಿಸಿಗ ತಳ | ವಱರ ವಾಮನ ಕುಬ್ಜ ಮೂಕ ಬ |
ಧಿರ ನಾಗರಿಕಾದಿಗಳ ಪರಿಹಾಸಕರ ಚರರ ||
ಪರಿಪರಿಯ ವಾದಕರ ಗಾಯಕ | ರುರುಸುಭಟ ಕೋಡಿಗಳ ಹೊರಗಿಹ |
ಕರಿತುರಗಗಳ ನೆರವಿ ನೃಪನೋಲಗದೊಳಿಪ್ಪಿದವು || ೧೬ ||

ತಳತಳಿಪ ನಗೆಮೊಗದ ಹೊಸಹೊಂ | ಚೆಳೆನಡುವ ನಳಿತೋಳ ಹೊಂಗೊಡ |
ಮೊಲೆಯ ಸಿಂಗರಗೆಯಿದ ವಾರಾಂಗನೆಯರೋರಣದಿ ||
ತೊಳತೊಳಗುತಿತ್ತರದಿ ಕಂಗುಡಿ | ಗಳಲಿ ಹೂಗಣೆಗೆದಱ ತಿರೆ ಪ |
ಜ್ಜಳಿಸುತಿರ್ದುದು ಸುಪ್ರತಿಷ್ಠ ನರೇಂದ್ರನೋಲಗವು || ೧೭ ||

ತೊಲಗುವೊತ್ತದಿರೊಗ್ಗಿನಿಲು ಹೊ | ಗ್ಗಲಭೆ ಬೇಡೆಲೆ ಪಾತಕರು ನೀ |
ವೊಲಿದು ಸೂಳಱದೋದಿಯೆಂದೋದಿಸಿಯವರನಿಲಿಸಿ ||
ಉಲಿವ ವೀಣಾವಾದ್ಯಗಳ ಜಾಣ್ | ಗಲೆಯ ಗಾಯಕಿ ಗಾಯಕರ ನೃಪ |
ತಿಲಕನಿರೆ ಕೇಳಿಸುವ ಕಟ್ಟಿಗೆಕಾಱರೊಪ್ಪಿದರು || ೧೮ ||

ಚರಣ ಕಮಲಕ್ಕೆರಗುವವನೀ | ಶ್ವರರನೊಪ್ಪುವ ಕೊರಳೊಲವಿನಿಂ |
ವರ ವಿಭುಧ ಸುಕವಿಗಳನೊಳು ನುಡಿಯಿಂದ ಬಂಧುಗಳ ||
ದರಹಸಿತದಿಂ ಪ್ರಜೆಗಳನು ಬಂ | ಧುರ ವಿಲೋಕನದಿಂದ ಮನ್ನಿಸು |
ತರಸಲೋಲಗದಿರವು ಚರಿಗೆಗೆ ಬರಲು ಚಾರಣರು || ೧೯ ||

ಇದಿರುಗೊಂಡುಚಿತಾಸನದೊಳಿರಿ | ಸಿದನಡಿಗಳಂ ತೊಳೆದು ಪೂಜಿಸಿ |
ಮುದದಿ ವಂದಿಸಿ ತನು ಹೃದಯವಾಗನ್ನ ಶುದ್ಧಿಗಳಿಂ ||
ಪುದಿದ ನವವಿಧ ಪುಣ್ಯದಿಂ ಕ್ಷಮೆ | ಸುದಯೆ ಭಕ್ತಿ ಜ್ಞಾನ ನಂಬುಗೆ |
ಪದೆದ ಶಕ್ತಿಯುದಾರಮೆಂಬೀ ಸಪ್ತಗುಣ ಸಹಿತ || ೨೦ ||

ಪೆತ್ತ ಹರುಷದಿ ನೃಪತಿಸಕಲನಿ | ವೃತ್ತಗುಚಿತಾಹಾರವನು ಕುಡೆ |
ಬಿತ್ತರಿಸಿ ಮಣಿಕನಕ ಕುಸುಮಾ ಸಾರಗಳು ಕರೆಯೆ ||
ಪಾತ್ರದಾತೃ ಸ್ತೋತ್ರರವದೊಡ | ನತ್ತ ಸುರದುಂದುಭಿ ನಿನಾದಗ |
ಳೊತ್ತರಿಸಿತಾಶ್ಚರ್ಯವೇ ಪಂಚಾಶ್ಚರ್ಯವವರ್ಗೆ || ೨೧ ||

ಪಡೆಯಬಹುದಾ ಕಲ್ಪವೃಕ್ಷವ | ಪಡೆಯಬಹುದಾ ಪರುಷವೇದಿಯ |
ಪಡೆಯಬಹುದು ನರೇಂದ್ರತೆಯನಮರೇಂದ್ರಪದವಿಯನು ||
ಪಡೆಯಬಹುದು ಸುಪಾತ್ರಮೊಂದನೆ | ಪಡೆಯಬಾರದು ಯೋಗ್ಯಕಾಲಕೆ |
ಪಡೆದವಗೆ ಕೈಸಾರದೊಡವೆಯದುಂಟೆ ಲೋಕದಲಿ || ೨೨ ||

ಪಡೆದಡೇನೋ ಹಣಮಪಾತ್ರವ | ಪಡೆಯದಿರ್ದೊಡೆ ಪಡೆದ ಹಣವನು |
ಸುಡಲಿ ಹಣವನು ಸೂಳೆ ಹಡೆಯಳೆ ಅಱುವೆ ಕಟ್ಟಿರದೆ ||
ಹಡೆದ ಹಣವಿಗೆ ಪಾತ್ರವೊಂದನೆ | ಹಡೆಯದುದೆ ಫಲವಱಿತು ಪಾತ್ರಕೆ |
ಕೊಡುವವನ ಪುಣ್ಯವನು ಪೊಗಳ್ವಡೆ ಶೇಷಗಸದಳವು || ೩೩ ||

ಕೊಟ್ಟು ಕೆಡಿಸಿದಿರಾ ಕುಪಾತ್ರಕೆ | ಕೊಟ್ಟೊಡವೆ ಹಾವಿಂಗೆ ಹಾಲೆಱ |
ಕೊಟ್ಟವೊಲು ಕಿಂಪಾಕಕುದಕವನೆಱದ ತೆಱನಹುದು ||
ನೆಟ್ಟನಱಿದು ಸುಪಾತ್ರಕೊಲವಿಂ | ಕೊಟ್ಟೊಡವೆ ಕಱಿಮೆಮ್ಮೆಗುಱುಮುಱ |
ವಿಟ್ಟವೊಲು ಬೆಳವೊಲಕೆ ಗೊಬ್ಬರವಿಟ್ಟವೊಲು ಸಫಲಾ || ೩೪ ||

ಎಂದು ವಿಬಧರು ಕೀರ್ತಿಸುತ್ತಿರೆ | ವಂದಿಗಳು ಕೈವಾರಿಸುತ್ತಿರೆ |
ಅಂದು ಮುನಿಪತಿ ಪರಸಿ ಬಿಜಯಂಗೈದ ನಂತರದಿ ||
ಬಂದು ಸತ್ಪಾತ್ರಕ್ಕೆ ಪುರಜನ | ಬಂಧು ಜನ ವಂದಿಜನಕಮರರು |
ತಂದು ಸುರಿದಾ ರತ್ನ ರಾಶಿಯನಿತ್ತನವನೀಶ || ೩೫ ||

ಅರಸನಿರುತೊಂದಿರುಳುನಯನಾ | ಭರಣ ನಾಟಕ ಸಾಲೆಯನು ಸಿಂ |
ಗರಿಸಿ ಕವಿಬುಧ ಭಾರತಿಕ ವಾಗ್ಗೇಯಕಾದಿಗಳ ||
ಕರಸಿಯಾಪ್ತ ಕುಮಾರ ಬಂಧೂ | ತ್ಕರವೆರಸಿಯುಚಿತಾಸನದಿ ಸ್ಯೆ |
ತಿರುತೆ ಕೇಳಿಕೆಗಂಡನೊಪ್ಪುವ ನಯನ ಸೌಂದರ್ಯ || ೩೬ ||

ಬೆಳಗಿದವು ಮಾಣಿಕದ ಪಂಜುಗ | ಳಳವಿ ನಿಂದಾವುಜ ಕಹಳೆ ಮ |
ದ್ದಳೆಯು ಪಾಂಗಸುವಾಸು ಕಿನ್ನರಿಯುಱುಮೆ ಜಂತ್ರಗಳು ||
ಕಲೆಯಱಿದ ಪೆಣ್ಮೇಳಗಾಣೆಯ | ರೊಲಿದು ಸಿಂಗರಗೆಯಿದು ನರ್ತಕಿ |
ತಿಳಕೆ ನೃಪಸುತೆ ನಯನ ಸುಂದರಿಯೊಡನೆ ಬಳಸಿದರು || ೩೭ ||

ರತಿಯೊ ಮೇಣ್ ಸುರಸತಿಯೋ ಮೇಣ್ ಪಾ | ರ್ವತಿಯೊ ಮೇಣ್ ಭಾರತಿಯೊ ಮೇಣ್ ಗುಣ |
ವತಿಶಯದರಸ ಚಿತ್ರವಾಯುವ ಪಡೆದುದೋ ಮೇಣಾ ||
ಚತುರ ಮುಖ ಪುಡಿ ಚೆನ್ನದಿಂ ನವ | ರತುನದಿಂ ನಿರ್ಮಿಸಿದನೋ ಯೆನ |
ಲತಿ ಚೆಲುವೆ ಸಿಂಗರಿಸಿ ರಂಗಂಬೊಕ್ಕಳೊಲವಿಂದ || ೩೮ ||

ಪಿಡಿವ ಜವನಿಕೆ ತೊಲಗಿದುದು ಮಣಿ | ದೊಡಿಗೆವೆಳಗಿನ ಜವನಿಕೆಯು ಮಿಗೆ |
ಸಡಗರಿಸಿತೆಣ್ದೆಸೆಗೆ ಜೊನ್ನದ ಜವನಿಕೆಯನೊರ್ಮೆ ||
ಪಿಡಿದವೊಲು ಕಣ್ಬೆಳಗು ಬೆಳಗಲು | ಪೊಡೆಯರಳ ಮಗನರಳ ಸರಳನೆ |
ಪಿಡಿದು ಸೂಸುವ ತೆರದಿ ಕುಸುಮಾಂಜಲಿಯ ಸೂಸಿದರು || ೩೯ ||

[ಆ]ಡುವರ ಬಲನಿಟ್ಟು ಎಡೆಕೈ | ಜೋಡಿಸಿರೆ ವಹಣಿಯಲಿ ನೊಸಲೊಳು |
ಕೂಡೆಮುಕುಳಿತ ಹಸ್ತ ಬಳಿಯಲಿ ಡೋಳಹಸ್ತವನು ||
ಮಾಡಿ ಅರುಹನ ನಿಲವಿನಿಂ ಕಡು | ಗಾಡಿ ನಚ್ಚಣಿ ನಿಂದು ಮೇಳದ |
ಜೋಡೊಡೆಯದಾಡಿಗಳು ಪುಷ್ಪಾಂಜಲಿಯ ಸಭೆ ಪೊಗಳೆ || ೪೦ ||

ಕರಣ ಮಂಡಲ ತಿರುಪು ರೌದ್ರ | ದ್ಯುರು ನಯನಗಳನುಳಿದು ಸೊಬಗೆ |
ಲ್ಲರಮುಖವ ಚಾಳೈಸುತಿರೆ ಮುಖಚಾಳಿಯನು ಕೊಂಡು ||
ಪರಿಪರಿಯ ನೇರುರುಪು ತಿರುಪುಗ | ಳರಿದೆನಿಸುವುದು ವಾದಗಳ ನೈ |
ಸರನ ಪೊಸಮನೆಯಂಬು ಹೊಳೆದಾಡಿದವೊಲಾಡಿದವು || ೪೧ ||

ಭೃಂಗ ಕುಂತಳೆ ತನ್ನ ನೊಸಲಲಿ | ಸಂಗೊಳಿಸಿದಾ ತಿಲಕ ಸರಿದರೆ |
ವುಂಗುಟದ ನಖದರ್ಪಣದೊಳಿರೆ ಕಂಡು ಮತ್ತೊಂದು ||
ಉಂಗುಟದಿ ತಿರ್ದಿದಳು ಕರಣವೆ | ಡಂಗಿ ಹೊಂಜಳೆ ಮೈಯಲವಣಿಮ |
ನಂಗೊಳಿಸಿದುದು ಚದುರ ಚದುರಾನನನ ರಂಗದೊಳು || ೪೨ ||

ನುತ ಚಮತ್ಕಾರವೆ ಚಮತ್ಕಾ | ರತೆವಡೆಯೆ ಕಡೆಕಟ್ಟು ಶೋಭಾ |
ಕೃತಿಗೆ ಕಡೆಕಟ್ಟಾಗಿ ಶಬ್ದದ ಮೈಯ ಮೈಯಾಗೆ ||
ಚತುರನರ್ತಕಿ ಶುದ್ಧಸಾಳಗ | ವಿತತ ಸೂಡಗಳಾಡೆ ಬಲಬಾ |
ಲತುಳೆ ಲೇಸಮ್ಮಮ್ಮ ಮಝು ಬಾಪೆಂದುದಾಸ್ಥಾನ || ೪೩ ||

ಅಂಗದೊಲಗಳವಡಿಸಿ ನೀತವ | ಹಿಂಗದಡಿಲೀ ತಾಳವನು ಹ |
ಸ್ತಂಗಳಲಿ ಮೆಱೆವರ್ಥವನು ಕಂಗಳಲಿ ಭಾವವನು ||
ಪಿಂಗದಾ ಭಾವುಕರಿಗೆಱೆಪುತೆ | ಅಂಗಹಾರವೆ ಭಾರತಿಗೆ ಮೆಱೆ |
ವಂಗ ಹಾರವೆಯೆನಿಸೆ ಮೂವತ್ತೆರಡನಱೆಪಿದಳು || ೪೪ ||

ಕರಣಗಳನಾ ಭಾರತಿಗಳಂ | ಕರಣವೆನೆ ನೂರೆಂಟನಾ ಸೌಂ |
ದರಕೆ ನಿಲವೆನೆ ನಿಲವನು ಱ ನೂರೆಂಟುನನುವದಿಸಿ ||
ಭರದ ಸಂಯುತ ಸಂಯುತೋಭಯ | ಕರ ಚತುಃ ಷಷ್ಟಿಯನೆ ಬಗೆಗ |
ಚ್ಚರಿವಡಿಸಿ ನರ್ಚಿಸಿದಳೆ ಱಯನ ಮೆಚ್ಚಿಸಿದಳಾಕೆ || ೪೫ ||

ಮೂಱುತೆಱದಾಚೆಬುಕ ಪುರ್ವಿ | ರಾಱುಗತಿ ದಿಟ್ಟಿಗಳು ಮೂವ |
ತ್ತಾಱುಕಣ್ಣೆವೆಯಾಲಿ ತಾನಕಗ್ರೀವೆಯೊಂಬತ್ತೂ ||
ನೀ ಱಯೊಪ್ಪುವ ಶಿರದ ತೆಱಪದಿ | ಮೂಱು ತೂರ್ಯತ್ರಯಲಲಾಮಗೆ |
ತೋಱದವುತಾವಳೆದು ತೂಗಿದ ಲಚ್ಚಣಿಸಿದಂತೆ || ೪೬ ||

ಮನದಿನುದಯಿಸಿ ಭಾವವೆಸೆವಾ | ನನದಿ ಹಾವವೆ ಪೊಣ್ಮೆ ಸಿತಲೋ |
ಚನದಿ ಬೆಳೆದ ವಿಲಾಸ ಮಕರೆಗಣ್ಮೆಪುರ್ವಿನಲಿ ||
ಜನಿಸಿ ವಿಭ್ರಮಮೊತ್ತರಿಸೆ ಮೋ | ಹನವಡೆದ ರಸಪೂರದೊಲು ರ |
ಯ್ಯನೆ ಸಭೆಯನೋಲಾಡಿಸುತೆ ನಲಿದಾಡಿಗಳು ಸೊಬಗಿ || ೪೭ ||

ಭಾರತಿಯ ಸಾತ್ಯಕಿಯ ಕೈಸಿಕಿ | ಯಾರು ಭಟೆಯ ಪೊದಳ್ದವೃತ್ತಿ ವಿ |
ಚಾರವನು ಗುಂಡಲದ ಲಾಸ್ಯದ ಜಾತಿಕೋಪುಗಳ ||
ಸಾರವಿದ್ಯೆಯ ಮೆಚ್ಚಿ ಮಿಗೆ ವಿ | ಸ್ತಾರ ಭರ ಕರ್ಪೂರ ವೀಳೆಯ |
[ಸಾರ] ವುಡುಗೊಱೆಯನೊಸೆದಿತ್ತನಿಳೆಪೊಗಳೆ || ೪೮ ||

|| ಅಂತು ಸಂಧಿ ೯ಕ್ಕಂ ಮಂಗಲ ಮಹಾ ||

## ಆದಿ ಪರ್ವ (ಸಂಧಿ ೧೦)

**ಸಂಧಿ ೧೦**

ಉಳುಕು ಬಿಳ್ದುದಕಂಡು ಸಂಸೃತಿ | ಗಳುಕಿ ವೈರಾಗ್ಯದಲಿ ಜಿನ ರೂ |
ಪಳವಡಲ್ಕಹಮಿಂದ್ರನಾದನು ಸುಪ್ರತಿಷ್ಠಯತಿ || ಪಲ್ಲ ||

ಕೇಳು ಮಾಗಧ ಮಂಡಲೇಶ್ವರ | ಹೇಳುವೆನು ವರಸುಪ್ರತಿಷ್ಠ ನೃ |
ಪಾಲ ನೀ ಪರಿಯಿರುಳ ಕಳೆವನು ನಿಚ್ಚಹರುಷದಲಿ ||
ಏಳುತರುಣೋದಯದಿ ಶುಚಿತೆಯ | ಮೇಳದಲಿ ಜಿನಪೂಜೆಗೆಯಿದು ಮ |
ಹೀಲಲನೆಯನು ಮನ್ನಿಪನು ತನ್ನರಸು ಗುಣದಿಂದ || ೧ ||

ಏಳು ನೆಲೆಗಳ ಹೊನ್ನ ಮಾಡದ | ಮೇಲುನೆಲೆಯೊಳು ತೂಗುಮಂಚದ |
ಮೇಲೆಸೆವ ರಾಯಂಚೆ ದುಪ್ಪುಳತಲ್ಪದೊಳು ನೃಪತಿ ||
ಲೀಲೆಯಿಂದೊಂದು ದಿನಮೆಱೆವಿರು | ಓೋಲಗದೊಳರ್ಧಾಸನದೊಳಾ |
ಲೋಲ ಲೋಚನೆ ಸತಿಸುನಂದಾ ದೇವಿವೆರಸಿರ್ದ || ೨ ||

ಇತ್ತರದ ಸಾಲೋಲಗದೊಳಿಹ | ವೃತ್ತ ಕುಚೆಯರ ಮುಡಿಯಿನುದುರುವ |
ಕತ್ತುರಿಯ ಪುಡಿಗಳಿಗೆ ಮೈಗಂಪಿಗೆ ನರುಸುಯಿಗೆ ||
ಮುತ್ತುವಳಿಗಳ ಗಾರವಕೆ ಬೇ | ಸತ್ತು ಲೀಲಾ ಕಮಲದಿಂ ಸೋ |
ವುತ್ತೆ [ಸುಂದರ] ಪೆಂಡವಾಸದ ತಂಡವೆಸೆದಿಹುದು || ೩ ||

ಬೆರಳು ನಾಲಗೆವೊಡೆದುದೋ ಯಿಂ | ಗೊರಲು ಬೆರಳೊಂದಾದುದೋ ಯೆನೆ |
ಸರದೊಡನೆ ಶ್ರುತಿಗೂಡಿ ಕಿವಿಗಳೊಳಂಚೆದುಪ್ಪುಳನು ||
ತಿರಿಪಿದಂತಿನಿದಾಗೆ ವೀಣೆಯ | ನರಸಿಯೋರ್ವಳು ನುಡಿಸುತಿರೆಮಿಗೆ |
ಹರುಷದಿಂದ ಸುನಂದೆಯೆಱೆಯನು ಕೇಳುತಿರಲೊಡನೆ || ೪ ||

ಬಾನಿ ನಿಪಗೊತ್ರಾದಿ ತೊಳಗುವ | ಮೀನೆನಿಪ ಮೈಗಣ್ಣ ತನುವೆಂ |
ಬಾನಿಮಿರ್ದನಿಳಾದ್ರಿಯಿಡೆ ಪರಿತಂದ ವಜ್ರವೆನೆ ||
ಮಾನಿನಿಯರೆವೆ ಮುಚ್ಚೆ ನೋಡುವ | ಮಾನವರ ಕಂಗಳ್ಗೆ ಬಿಳ್ದುದು |
ಆ ನೃಪತಿ ಬೆಂಬೀಳೆ ನಿರ್ವೇಗದಲಿ ಪೇರುಳುಕು || ೫ ||

ಅನಿತಱೊಳಗದು ಮಾಯವಾದುದು | ಮನುಜರಾಯುಂ ಶ್ರೀಯುಮೀಪಾಂ |
ಗೆನಿಪವೋಲ್ ನೃಪರತ್ನನುಲ್ಕಾಪಾತವನು ನೋಡಿ ||
ಜನವಿದೇಕೆಯೊ ಪೊಲ್ಲದೆಂಬುದು | ಮನದ ಮೋಹಧ್ವಾಂತವನು ಬೆ |
ಳ್ಳನೆ ಬೆಳಗುವಡೆ ಜೋತಿಯಾದುದದೆಂದು ತಱಿಸಂದ || ೬ ||

ತೊಟ್ಟು ಕಳಲಿದ ಹಣ್ಣು ತಿರುವಿಂ | ಬಿಟ್ಟ ಕಣೆ ನಿಟ್ಟಾಯು ಬೂದಿಯ |
ಬೊಟ್ಟು ಸಂಜೆಯಕೆಂಪು ಸರಿಸುರಚಾಪ ಮುಗಿಲೊಡ್ಡು ||
ತೊಟ್ಟ ತನುಮಾನವನ ಜವ್ವನ | ಬೆಟ್ಟದಿಂ ಬೀಳ್ವಬ್ಬಿ ಕೌಹುರ |
ನಿಷ್ಠೆಯೆಂದಿವನಚ್ಚುವವನನು ಮೆಚ್ಚುವಳೆ ಮುಕುತಿ || ೭ ||

ಮಡದಿ ಮಕ್ಕಳ ಧನಕನಕವು | ಗ್ಗಡದ ಸಿರಿಸಂಪದವು ತನ್ನನು |
ಬಿಡದೆ ಮೋಹಿಸೆ ತನ್ನದೆಂದಿರೆ ನರ್ಚುವಗೆ ತನ್ನ ||
ಒಡಲು ತನ್ನದೆ ತನ್ನದಾದೊಡೆ | ಕಡೆಯೊಳುಳಿವುದೆ ಪೆಱರ ಹಂಚಲಿ |
ಬಿಡು ವಿಚಾರಿಸೆ ತಾನೆ ತನಗಿನ್ನನ್ಯವಿಲ್ಲೆಂದ || ೮ ||

ಪದುಳವಿಲ್ಲದನಾದಿ ಸಂಸಾ | ರದೊಳಮರ್ಚಿದ ಪಾಪವಶದ |
ಗ್ಗದ ಕುಯೋನಿಗಳೊಳು ಜನಿಸೆ ಬಳೆದಳಿದು ಕರ್ಮದಲಿ ||
ಪುದುಗಿತರದಿಂದೊಮ್ಮೆದೆರಡುಮೂ | ಱೊದವಿ ನಾಲ್ಕೈದಿಂದ್ರಿಯವನುಳಿ |
ದುದಯಿಪಂದು ಸವುಜ್ಞೆ ಪಂಚೇಂದ್ರಿಯದೊಳಾತುಮನು || ೯ ||

ಉರಗ ಖಗ ಮೊಲ ಹಂದಿ ಕುಱಿ ನಾ | ಯ್ನರಿ ಬಸವ ಪೆರ್ಗತ್ತೆ ಪುಲಿ ಬಲು |
ಗರಡಿ ಕುದುರೆಗಳಂತೆ ಕರಿಹರಿ ಶರಭ ಭೇರುಂಡ ||
ವರಮತ್ಸ್ಯಾದಿಯೊಳು………..ಬೊ | ತ್ತರದ ದುಃಖವನುಂಡು ನೆರಪಿದ |
ದುರಿತದೊದವಿಂ ನರಕಕಿಳಿದೆತ್ತಾನು ಪುಣ್ಯದಲಿ || ೧೦ ||

ತಂದೆತಾಯ್ಗಳ ಶುಕ್ಲಶ್ರೋಣಿತ | ದಿಂದೆ ಪರಿಣಮಿಸಿದ್ದು ದಶದಿನ |
ದಿಂದು ಜೀವನು ಕಲಿಲವಾದವಜೊಳಗೆ ಮುಳುಗಿರುತ ||
ಮುಂದೆ ದಶದಶ ದಿವಸಕದುತರ | ದಿಂದೆ ಮಿಲಿತದಿ ಪುಟ್ಟಿಗೊಂಡುದ |
ಜೆಂದದಲಿ ಮಿಗೆ ಸಿಲುಕಿ ಸಿಡಿಮಿಡಿಗೊಳುತಿಹುದು ಜೀವ || ೧೧ ||

ತನುಪಿಸಿರವನು ಬಣ್ಣಿಸುವುಡೆರ | ಡನೆಯ ಮಾಸಕೆ ಬೊಬ್ಬುಳುಕೆ ಮೂ |
ಱನೆಯ ಮಾಸಕೆದಟ್ಟಿತದು ನಾಲ್ಕನೆಯ ತಿಂಗಳಿಗೆ ||
ಎನಲದೆಂತನಿ ಮಾಂಸವದು ಪ್ಯ | ದನೆಯ ತಿಂಗಳಿಗೈದು ಮೊಳೆಯೇ |
ನನುವರಿಯದದರಲ್ಲಿ ಸಂಸಾರಸ್ಥನಿರುತಿರ್ದ || ೧೨ ||

ತಿಂಗಳಾರನೆಯಂದು ನಖರೋ | ಮಂಗಳನು ತೊಲವಾಂತಬೀಭ |
ತ್ಸಾಂಗದೊಳು ಸಿಡಿಮಿಡಿಗೊಳುತ್ತೇಳನೆಯ ತಿಂಗಳಿಗೆ ||
ಹಿಂಗದಾ ಹೊಕ್ಕುಳಿನ ನಾಳದಿ | ನುಂಗಿರುತೆ ತಾಯುಂಡ ಲೋಳೆಯ |
ನೆಂಗಡೇನೆಂದಱಿಯದವನೆಂದಿರ್ದನೋ ಜಿನಪ || ೧೩ ||

ಚಲಿಸುತತ್ತಿತ್ತೆಂಟನೆಯ ತಿಂ | ಗಳಲಿ ಜನನಿಯ ಜಠರದಲಿ ಪಿಡಿ |
ದೆಳೆವ ಗರ್ಭಶ್ರಾವವಿಂತೊಳವಾದ ಕಂಟಕವ ||
ಕಳಿದು [ನವಮದ] ದಶಮದಾನೆಲೆ | ದಳೆದ ಮಾಸದೊಳ್ಯದೆ ಮುಂದಾ |
ನೊಳಱುವಾ ಬಾಧೆಗಳಿನವನೇ ತರದಿ ತೊಲಗಿದನೊ || ೧೪ ||

ಕುರುಡ ಕಿವುಡರು ಮೂಕ ಹೆಳವರು | ತರದಿ ವಾಮನ ಕುಬ್ಜರೆನೆ ವ |
ಚ್ಚರಿಯ ಹೀನಾದಿಕಟದೇಹಿಗಳುರಗನೋ ತೀ....... ||
ಹರಿಯನಿಧುಮಾಂಬುವೆಂಬೀ | ಪರಿಯನೆಯಿದದೆ ಅರಮೆ ಪುಣ್ಯದಿ |
ಬೆರಸಿ ನೀರನು ತಾನೆನಿಸಿಯೊಗೆವಂದು ಸಂಸಾರಿ || ೧೫ ||

ಜನನಿಯನು ಗೋಳಿಡಿಸಿ ಹೊಟ್ಟೆಯೊ | ಳೊನೆದು ಸಂಕಟಗೊಳುತಲದೆ ಸಾ |
ವೆನಿಸಿ ಬೆಂಬೀಳ್ದಡ್ಡ ಸಿಲುಕಿ ಬಳಿಕ ಶಸ್ತ್ರಗಳ ||
ಮೊನೆಗಳಿಂ ಕೊಱೆಯಿಸಿ ಕೊಳದೆ ಮೆ | ಲ್ಲನೆ ಚದುರೆಯಾ ಸೂಲಿಗಿತಿಯಿಂ |
ಜನಿಸಿ ಮಲತಲಿರೆ ಮಿಗೆ ನೋವನು ಆ ಜೀವ || ೧೬ ||

ಬಳಿಯನಾಮಾ ಸುಜ್ಜಿ ಬರೆ ಬಂ | ದಿಳಿದ ರಕ್ತದ ಮೂತ್ರದಾ ಹೊನ |
ಲೊಳಗೆ ತೇಂಕಾಡುತಿರಲವಳ ಹೊಕ್ಕುಳಿನ ಕುಡಿಯ ||
ಬಳಿಕರಿಯೆ ನಡನಡನೆ ನಡುಗುತ | ತಳಿಯೆ ಮತ್ತಾ ಬೆಚ್ಚುನೀರ್ಗಳ |
.............................. || ೧೭ ||

ನೆಱೆದ ಪಾಪವನಱೆಪುವಂದದಿ | ಮೊಱನೊಳೊರಕಂಬೆತ್ತು ಭಯವನು |
ಮಱೆಯ ಕನ್ನಡಿಪಂತೆ ಕತ್ತಿಯ ಕಾಪುವಡೆದೊಡನೆ ||
ನೆ ಱೆ ಬೊಗರಿ ಕೆಂಪುಗಳೆನಿಪ ಪಲ | ತೆಱದ ರೋಗಂಗಳಿದ ರಮೆವುಳಿ |
ದು ಱೆ ಹಸಿದು ಬೇಳಿಡುತ ಕೊಟ್ಟುದನುಂಡನಾ ಜೀವ || ೧೮ ||

ಸುಡುಸುಡೀ ಮನುಜತೆಯನೀಪರಿ | ಪಡೆದು ನಾಲ್ದೆಱನಾದ ದುಃಖವಿ |
ಮಡಿವಿನೆಗ ಮಿಡುಕುವನು ಮಾನುಷ್ಯವನು ಪುಣ್ಯದಲಿ ||
ಪಡೆದುದಕೆ ಜಿನದೀಕ್ಷೆಗೀ ಕೆಡು | ವೊಡಲನೊಡ್ಡಿ ನಿಜಾತ್ಮ ಗುಣದೊಳು |
ತೊಡುರ್ವುದೇ ಕರಣೀಯವೆಂದಾ ನೃಪತಿ ಭಾವಿಸಿದ || ೧೯ ||

ಎಂದು ಸರ್ವ ವಿರಕ್ತಿ ಭರದಿಂ | ದಂದಿನಿರುಳೋಲಗವ ಪರೆಯಿಸಿ |
ಮಂದರಾಚಳ ಧೈರ್ಯನೊಪ್ಪು ಸುಪ್ರತಿಷ್ಠ ನೃಪಂ ||
ಬಂದು ಹಗಲಿನೊಳಿಷ್ಟ ಮಂ [ತ] ಗ | ಳಂದೊರೆಯರಾದಖಿಳ ಪುರಜನ |
ವೃಂದವನು ಪರಿವಾರವನು ಕರೆಸಿದನು ಚಾವಡಿಗೆ || ೨೦ ||

ಕವಿಗಮಕಿಗಳ ವಾದಿವಾಗ್ಮಿಗ | ಳವನಿ ಪತಿಗಳ ರಾಜಪುತ್ರರ |
ವಿವಿಧ ವಾದಕ ಗಾಯಕರ ನಾನಾ ನಿಯೋಗಿಗಳ ||
ಹವಳದುಡಿಗಳ ಗಣಿಕೆಯರನ | ಟ್ಟುವರ ನಾಗರಿಕಾದಿಗಳ ಸ |
ಬ್ಬವದ ದೂತರ ಭಟರ ಸಿರಿಯಿಂದೆಸೆದುದಾಸ್ಥಾನ || ೨೧ ||

ಇನ್ನೆವರ ನಿಮ್ಮೆಲ್ಲರನು ನಾ | ಮನ್ನಿ [ಸಿ] ದೊಡಂ ಮನ್ನಿಸದೊಡಂ |
ನನ್ನ ಲೇಸನೆ ಕೊಂಡು ನಾನೆಂದುದು ಹಸಾದೆಂದು ||
ನನ್ನಿಯನೆ ಮೆಱೆದಿರಿ ನನಗೆ ಸಾ | ಕಿನ್ನು ರಾಜ್ಯ ಶ್ರೀಯ ಮೋಹವು |
ನನ್ನನೊಲಿಸಿ ವಿರಕ್ತಿಕಾಮಿನಿಯೊಲಿದಿರುವಳೆಂದ || ೨೨ ||

ಎನಲು ಸಭೆ ಚಿತ್ರದ ಸಭೆಯವೊಲು | ಮನದ ದುಗುಡದಲಿರ್ದು ಮತ್ತೊಂ |
ದಿನಿತು ಹೊತ್ತಿನಮೇಲೆ ಪೂರ್ವದ ಸುಕೃತ ಫಲದಿಂದ ||
ಜನಪ ನಿಮ್ಮಡಿಯೊಡೆಯನೆಮಗಹ | ತನವ ಪಡೆದೆವು ನಮ್ಮ ನೆಲೆ ತೊ |
ಟ್ಟನೆ ತೊಱೆವುದಿದು ಗುಣವೆ ಜೀಯೆಂದುದು ಸಭಾಸ್ತೋಮ || ೨೩ ||

ಮುಸುಡ ದುಗುಡವ ಬಿಸುಟು ಕಂಬನಿ | ಯೊಸರ ತಡೆದಿನ್ನೊಂದು ಮಾತನು |
ಸಸಿನೆ ಲಾಲಿಸಿ ಸರ್ವರು ಶ್ರೀ ಜಿನಪದಾಬ್ಜವನು ||
ಒಸೆದು ನಂಬಿದೊಡರಸನಹತಾ | ನೊಸೆದು ನಂ[ಬ] ದೊಡರಸನಾಳಹ |
ನುಸುರದಿರಿ ಸಂಸಾರಕಂಜಿದೆವೆಂದೆನಾ ಭೂಪ || ೨೪ ||

ಸ್ವಾಮಿಹಿತವರು ನೀವು ನಿಮ್ಮಾ | ಸ್ವಾಮಿಗಾವುದು ಹಿತವು ಅದನೇ |
ನೀವು ಸಾಧಿಸಿ ಕೊಡಲೆ ಬೇಹುದು ನಿಮ್ಮ ಧರ್ಮವಿದು ||
ಭೂಮಿಗಿನ್ನು ಷಡೇತಿ ಪೊರ್ದದ | ಸೀಮೆಯಲ್ಲಿ ಸುದೃಷ್ಟಿಯಿಂದವೆ |
ನೀವೆ ನಡೆಯಿಪುದೆಂದೊಡಂಬಡಿಸಿದನು ಸರ್ವರನು || ೧೫ ||

ಮಗನೆ ಪ್ರಜೆಗಳ ತಂದೆಯಾಗಿರು | ಪಗೆಗೆ ಜವನಾಗಿರು ಜಿನಾಗಮ |
ಗಗನಕಸ್ತಮಯೋಪವರ್ಜಿದಿನಾಧಿಪತಿಯಾಗು ||
ಮಿಗೆ ನೆರಪು ವರ್ಗತ್ರಯವನೀ | ನಗಲದಧಿರಾಜ್ಯವನು ತಳೆಯೆಂ |
ದೊಗೆದು ಪಟ್ಟವಕಟ್ಟಿದಸದೃಷ್ಟಿಗೆ ಮಹೋತ್ಸವದಿ || ೧೬ ||

ಬಂದುದಾ ಪ್ರಸ್ಥಾವದಲ್ಲಿ ಸ | ಮಂದರಸ್ಥ ಜಿನನಸಮಶ್ರುತಿ |
ಯಿಂದು ಮಂಡಲವಱಿನ ಬೆಳುದಿಂಗಳನು ಪಸರಿಸುತ ||
ಇಂದು ನಮ್ಮಯ ನಂದನದೊಳಗೆ | ಯೆಂದು ಗುಡಿಯನು ಕಟ್ಟಿ ಕೊಂಡೈ |
ತಂದು ಬಿನ್ನೈಸಿದನು ರಾಯಗೆ ಋಷಿ ನಿವೇದಕನು || ೧೭ ||

ಸಿಂಗಮಣೆಯಿಂದಿಳಿದು ಕೈಗಳ | ಸಂಗೊಳಿಸಿ ನೊಸಲಿನೊಳಗಾದೆಸೆ |
ಗಂಗೈಸಿಯೇಳಡಿಯ ನಡೆದೆರಗಿದನು ಭಕ್ತಿಯಲಿ ||
ಅಂಗ ಚಿತ್ತವನಾತಗಿತ್ತನು | ಸಂಗೊಳಿಸಿತಾ ನೆನೆದ ಕಾರ್ಯಜ |
ನಂಗಳಱಿಯಾನಂದ ಭೇರಿಯ ಪೊಡಸಿದಾ ಕ್ಷಣವೆ || ೧೮ ||

ಪುರಜನವು ಪರಿಜನವು ಬಂದೂ | ತ್ಕರವು ರಾಣೀವಾಸ ಮುಖ್ಯರು |
ಮೆರೆದು ಬಂದುದು ವಿವಿಧ ಪೂಜಾದ್ಯವ್ಯಕರರಾಗಿ ||
ಹರುಷದಿಂ ಪೊಱವಟ್ಟು ವಾದ್ಯದ | ಭರಸದಿಂ ಪಾಠಕರ ಕಳಕಳ |
ವಿರುತಿಯಿಂ ಜಯ ಜಯ ನಿನಾದದಿನರಸನೈತಂದ || ೧೯ ||

ಜಿನಸಭಾದೂರಾಂತರದೊಳೊ | ಯ್ಯನೆ ನೃಪತಿ ವಾಹನವನಿಳಿದೊ |
ಳ್ಪನಿಪ ಮಣಿಸೋಪಾನ ಪದಲೇಪೌಷಧಿಯ ಬೇಗ ||
ಅನಿಬರನುಮಿಪ್ಪತ್ತು ಸಾವಿರ | ಸುನಯ ಸೋಪಾನಗಳ ನೆಗೆಯಿಸಿ |
ವಿನುತ ಮಾನಸ್ತಂಭ ವಿಧಿಯೊಳರಸನೈತಂದ || ೨೦ ||

ವಿನುತ ವರಪ್ರಸಾದ ಚೈತ್ಯಾ | ವನಿಯ ಖಾತದ ಫಲವು ವಲ್ಲೀ |
ವನದನಂದನ ಕೇತನದ ಸುರಕುಜವನದ ಸಿರಿಯ ||
ಇನಿದೆಸೆವ ಸಂಗೀತಹರ್ಮ್ಯದ | ಘನವಿಭವ ಲಕ್ಷ್ಮೀಸುಮಂಡಪ |
ದನುಪಮಿತ ಪೀಠತ್ರಯದ ಚೆಲುವೀಕ್ಷಿಸಿದನರಸ || ೨೧ ||

ಅಸಮ ವೈಭವ ಶೋಭೆಗಳನೀ | ಕ್ಷಿಸುತ ಬಂದಾ ಗಂಧಕುಟಿವೊ |
ಕ್ಕಸಮ ಬಾಣಾರಿಯನು ಮೂಱುಂ ಸೂಳು ಬಲವಂದು ||
ಬಿಸೆದು ವಿವಿಧಾರ್ಚನೆಗಳಿಂದ | ರ್ಚಿಸಿ ಸುರೂಪಸ್ತವ ಗುಣಸ್ತವ |
ಅಸಿತ ಮುಖನಾ ಮುಕುಳಿತೋಭಯ ಹಸ್ತನೊಪ್ಪಿದನು || ೩೧ ||

ಎಲೆ ಜಿನೇಶ್ವರ ನಿನ್ನ ಭಕ್ತಿಯೆ | ತೊಲಗದಿಕ್ಕೆನಗನುದಿನವು ಸಂ |
ಚಳಿಸದೆದೆಯೊಳು ತಳೆಯೇ ಹೀನಾಧಿಕರದೆಂದೆನದೆ ||
ಸಲೆ ತ್ರಿಳೋಕಕ್ಕಧಿಪರನು ಮಾ | ಳ್ಪಲಘು ಗುಣವನು ತಾಳ್ದುದಱಿಂ |
ದೊಲಿದು ನಲಿದಾ ಭಕ್ತಿಯನೆ ದಂದಿಸುವೆನಳ್ತಿಯಲಿ || ೩೨ ||

ಜಿನಪ ನಿಮ್ಮಂಘ್ರಿಗಳನಱಿವಂ | ದಿನಿಸು ಸುನ್ನಣವೆನಗೆ ದೊರಕದೆ |
ತನುವನಂತವು ಕಳಿದವತಿದುಃಕವನು ಮಾಡುತಲಿ ||
ಎನಿತು ಪುಣ್ಯವದೆಂತುಟೋ ಯಿಂ | ದನುಪಮಿತನೆ ದಯಾಳು ನಿಮ್ಮಡಿ |
ಯನೆ ವಲಂ ಕಂಡಾರೆ ಕಂಡೆನು ಧನ್ಯ ನಾನೆಂದ || ೩೪ ||

ಎಲೆ ಕೃಪಾಬ್ಧಿಯ ನಾಥನಾಗಿಯೆ | ಪಲವು ದುರ್ಮಾರ್ಗದೊಳೆ ವರ್ತಿಸಿ |
ಪಲ ತೆಱದ ದುಃಖಕ್ಕೆ ಪಕ್ಕಾನಾದೆನಿಂದರುಹ ||
ಮಲರಹಿತ ನಿನ್ನೀಸನಾಥನೆ | ಸಲೆಯೆನಿಸಿದೆನಗೊಲಿದು ನಿನ್ನ |
ಗ್ಗಲಿಪ ಸನ್ಮಾರ್ಗವನೆ ದಯೆಗೈ ಸರ್ವ ಹಿತಕರನೆ || ೩೫ ||

ಪರಮಪಾವನ ಮೂರ್ತಿಕರುಣಾ | ಕರ ಜಗತ್ಪಿತೃ ನಿಮ್ಮಡಿಗಳಾಂ |
ಪಿರಿದು ಕರ್ಮಿದುರಾತ್ಮಕೀಟಕನಾದೊಡಂ ದೇವ ||
ಪೊರೆಯಲೇ ಬೇಡಿರ್ದುದೇ ಕೆಂ | ಬಿರವನುಸುರುವೆ ಚಿತ್ತೈಸು ಪು |
ತ್ರರನಳುಂಬಮೆ ರಕ್ಷಿಸುವುದಾ ತಂದೆಗುಪಕೃತಿಯೆ || ೩೬ ||

ದೇವರಾಜನ ಪೆರ್ಮೆಖೇಚರ | ದೇವನೇಳೆಯ ವಿಭವವುರಗರ |
ದೇವನುನ್ನತ ಭೋಗ ಮನುಜೇಶ್ವರನ ಈಶ್ವರಿಯ ||
ಆವಘನವಿದ ಬೇಡದೊಡೆ ಜಿನ | ದೇವ ನಿನ್ನಾಣೆನಗೆ ನಿರಘ ತ |
ಪೋವಿಧೃತ ಸುಜ್ಞಾನ ಲಾಭವೆ ದೊರಕಲೆಂದೊರೆದ || ೩೭ ||

ಸ್ತುತಿ ಶತ ಸಹಸ್ರಂಗಳಿಂ ವಿ | ಶ್ರುತನೊಲವಿನಿಂ ಜಿನಗೆವಂದಿಸಿ |
ನುತ ಚರಿತ ಜಿನಸೇನಯತಿಪತಿ ಪದಕೆ ಬಂದೆಱಗಿ ||
ಜತಿಪ ಜಿನದೀಕ್ಷೆಯನು ಕರುಣಿಪು | ದತುಳ ಗುಣಿಯೆಂದಱಿದು ಮಿಗೆ ರಾ |
ಜಿತ ದಿಗಂಬರನಾದನೈನೂರ್ವರು ನೃಪರು ವೆರಸಿ || ೩೮ ||

ತಳೆದನೊಪ್ಪುವ ಜಾತರೂಪನು | ಸಳೆ ಮಹಾವ್ರತಮುಖ್ಯವಾದು |
ಜ್ವಳಿಪ ಮೂಲಗುಣಂಗಳಿಂ ನೆಱೆದಾ ತ್ರಿಗುಪ್ತಿಯನು ||
ಚಳಿಸಿದಾಂತಿರುತಾ ಪ್ರಮಾದಂ | ಗಳನು ಪದಿನೈದನು ಕಳೆದು ನಿ |
ರ್ಮಲವೆನಿಪ ಸಂಯಮ ಸಮುನ್ನತನಾದನಾ ಮುನಿಪ || ೩೯ ||

ಸೋಗೆಗಳ ನರ್ತನಕೆ ನಟ್ಟುವ | ನಾಗಿ ಹಂಸೆಯ ಹಿಂಡನಳಱಿಪೊ |
ಡಾಗ ಸುರಚಾಪವನು ತೋಱುತ ಮುಗಿಲಹೊದರಿಂದ ||
ಬೌಗವಿಕ್ಕುತ ಬೌದನಿಗೆ ಶಾ | ರ್ಬೇಗದಿಂ ಬರೆ ಕಡವ ಕೇದಗೆ |
ಹೊಗಳೊಳು ಗಂಪೊಗುತ ಬಂದುದು ಪಶ್ಚಿಮಾನಿಳನು || ೪೦ ||

ಧರಣಿಗಿಂತೈ ತಂದ ಕಾರೊಳು | ಮರನ ಮೊದಲಲಿತಿರ್ದನಾಮುನಿ |
ವರನು ಮಿಂಚಿನ ತದಲಿಗೆಂಬಱ ಸಿಡಿಲ ಬಡಹಕ್ಕೆ ||
ಉರಗಗಳ ಜೊಂಪದವೊಳಿಲಿತಹ | ಭರದ ಸೋನೆಗೆ ಆಲಿಕಲುಗಳ |
ಸರಿಗೆ ಮೊಳಗಿನ ಮಳೆಗೆ ಕಲ್ಲ ಮರಾಳನಂತಿರ್ದ || ೪೧ ||

ಬೆಳುಮುಗಿಲನಡೆಗೊತ್ತಿಕಮ್ಮಂ | ಗಳವೆಗಳ ನಱುಗಂಪ ಪರಪುತ |
ನಳಿನಗಳ ಕೊರಗಿಸಿ ಮರಾಲ ವ್ರಜದ ತುಪ್ಪುಳನು ||
ಕಳೆದು ಸೋಗೆಯ ಹೀಲಿಯುದುರಿಸಿ | ಚಳಿಯ ಹೊರೆಯನು ಹೊತ್ತು ಪಡುವಣ |
ಹಳೆಯೆರಳ ಮುಱಿಯೊತ್ತಿ ಹರಿದುದು ಮೂಡಣೆಲರೆಂದು || ೪೨ ||

ಬಿಸಿಲೆ ಬೆಳುದಿಂಗಳು ದಿನೇಶನೆ | ಶಶಿಧರನ ಹಣೆಗಣ್ಣು ಕುಂಕುಮ |
ರಸ ತಿಲಕವೆನೆ ತಣ್ಣಸೇರಿದ ಮಾಗಿಯೊಳು ಮುನಿಪ ||
ಸಸಿದ ಭೂರವನೊಟ್ಟಿದಂದದಿ | ಮುಸುಕುವೈಕಿಲಿಗಡಿಗಡಿಗೆ ಬೆಂ |
ಪಿಸುವ ಸೀಕರಕಗಿಯ ದಿರ್ದನು ಬೆಳ್ಳ ವಾಸದಲಿ || ೪೩ ||

ಗಿರಿಶಿಖರ ಹೋಳಾಗಿ ರನ್ನವು | ಸುರಿಯೆ ಕಾಳ್ಗಿಚ್ಚೆತ್ತಲುಂ ಭೋ |
ರ್ಗರೆಯೆ ಮೇರುವೆ ಹಾರೆ ಕರಗಿ ಹೊಸ ಹೊನ್ನ ಹೊಳೆಹರಿಯೆ ||
ಧರೆ ಚರಾಚರ ವಸ್ತುವನು ಮಿಗೆ | ಹುರಿವ ಹಂಚಿನ ಕಾಯೆ ಜವನೆ |
ಚ್ಚುರಿ ಸರಳವೊಲು ಬಂದುದಂದು ನಿದಾಘದೊಂದೆನಲು || ೪೪ ||

ಅಂತು ಬಂದಾ ಗ್ರೀಷ್ಮದೊಳಗಾ | ಕಂತು ವಿಜಯನು ಕಾದ ಕರುವುನ |
ದಂತಿರರ್ವಿಸು ಉಪಳದೊಳು ಸೂರ್ಯಾಭಿಮುಖನಾಗಿ ||
ಶಾಂತ ರಸವ ತರಂಗಿಣಿಯೊಳ | ಳ್ದಂತೆ ತಣ್ಣನೆ ತಣಿದು ವಿಮಲ |
ಸ್ವಾಂತನಿರ್ದನು ಕಲುನೆಲೆಯನಾ ಸುಪ್ರತಿಷ್ಠ ಮುನಿ || ೪೫ ||

ಸಲೆಮುನೀಂದ್ರ ತಪಂ ತ್ರಿಕಾಲದ | ಗೆಲೆ ವಿಮಲ ಬೋಧಂ ತ್ರಿಲೋಕವ |
ಬಳಸೆ ದರುಶನವಾ ತ್ರಿದರುಶನಮುಮನದಸ್ಮರಿಸಿ ||
ಬಳಿಕನುಕ್ರಮದಿಂದ ತನ್ನೊಳು | ತಳದು ಹನ್ನೊಂದಂಗವನು ಸಂ |
ಚಳಿಸದಾ ಹದಿನಾಱು ಭಾವನೆಗಳನು ಭಾವಿಸಿದ || ೪೭ ||

ಕೊಡುವೆಡೆಲೆ ತೀರ್ಥಂಕರಪುಣ್ಯವ | ಕೊಡುವ ಜಿನಪನಗೆಂದು ಪಾಳಂ |
ಬಡುವ ತೆಱದಿಂ ಮೂಱು ತಿಂಗಳು ಸನ್ಯಸನಮಿರ್ದು ||
ಒಡಲುಳಿದು ಸರ್ವಾರ್ಥಸಿದ್ಧಿಯ | ಲಡಸಿ ನಿಂದುತ್ತರ ಜಯಂತಿಯ |
ಸಡಗರದ ಸುವಿಮಾನದೊಳಗಹಮಿಂದ್ರನಾಗಿರ್ದ || ೪೭ ||

ಧರಸಿದನು ಮೂವತ್ತಮೂರುಂ | ಶರಧಿಯುಪಮಾಯುಷ್ಯವನು ದೆಸೆ |
ಪರಿಮಳಿಸೆ ಹದಿನಾಱುವರೆ ತಿಂಗಳಿಗೆ ಸುಯಿಲಿಡುವ ||
ಸ್ಮರಿಸಿ ಮೂವತ ಮೂಱು ಸಾವಿರ | ವರುಷಕೋರ್ಮುಂಬನು ಸುಧೆಯನಂ |
ತುರು ಶರೀರವದೊಂದು ರತ್ನಿಪ್ರಮಿತನೊಪ್ಪಿದನು || ೪೮ ||

ವಿನುತ ಸುಖನಿಧಿ ನಿಷ್ಪ್ರವೀಚಾ | ರನು ಧೃತೋತ್ತಮ ಶುಕ್ಲಲೇಶ್ಯಾ |
ಮನನವಧಿ ಬೋಧಾವಗಾಹಿತ ಲೋಕನಾಳಿಕನು ||
ಅನುಪಮಿತನಕ್ಷಯಸುಖದ ಕೆಳೆ | ಯೆನಿಪ ಸುಖವನುಣುತ್ತಲಹಮಿಂ |
ದ್ರನು ಸಮಂತಿರುತಿರ್ದನೆಲೆ ಭೂಪಾಲ ಕೇಳೆಂದ || ೪೯ ||

ರತುನಮಯದುಪಪಾದ ಭವನದೊ | ಳತಿ ವಿಷದ ತನು ಸುಪ್ರತಿಷ್ಠಕ |
ಯತಿಪನಾ ಸಹಜಾತ ವಸ್ತ್ರಾಭರಣಯುತ ಜನಿಸಿ ||
ಗತನಖಾಶ್ರು ಸುರೋಮ ಕೇಶಲ | ಸಿತನು ಶುಕ್ಲ ಧ್ಯಾನನರುಹ |
ತ್ಪತಿಗೆ ಭಕ್ತಿಯಿನಲ್ಲಿಯೆ ವಂದಿಸುವನಹಮಿಂದ್ರ || ೫೦ ||

ವರ ಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀಜಾತ ಮದ ಮಧು |
ಕರಲಸಿತ ಜಿನಭಕ್ತ ಕವಿ ಸಾಳ್ವವಿರಚಿತವೆನಿಪ ||
ಪರಮ ನೇಮಿಜಿನೇಂದ್ರ ಪಾವನ | ಚರಿತೆಯೊಳು ನೆಱೆದಾದಿಪರ್ವವು |
ದೊರೆವಡೆದುದಾ ದೇವದೇವನ ನುತಭವಾವಳಿಯ || ೫೧ ||

|| ಆದಿಪರ್ವದೊಳು ಸಂಧಿ ೧೧ಕ್ಕಂ ಮಂಗಳ ಮಹಾ ||

**ಸಂಧಿ ೧೧**

ಕೇಳೆಲೇ ಮಾಗಧ ಧರಿತ್ರೀ | ಪಾಲ ನೇಮಿಸ್ವಾಮಿಯುದಯಿಸು |
ವಾ ಲಸದ್ವಂಶವನು ಮಧುರೋಕ್ತಿಯಲಿ ಪೇಳುವೆನು || ಪಲ್ಲ ||

ಇಳೆಯೊಳೊಲಿದು ವಸಂತವರ್ಣನೆ | ಗಳನು ಮಾಳ್ಪೊಡೆ ಬಗೆದು ವನವನು |
ಪಲ ತೆಱದಿ ವರ್ಣಿಸುವವೋಲಾ ನೇಮಿಜಿನಪತಿಯೆ ||
ಸುಲಭನೀ ಕೃತಿಗಧಿಪನಾದೊಡೆ | [ಒ]ಲವಿನಿಂದಾ ದೇವನುದಯಿಸು |
ವಲಘುವಂಶವನೆಯ್ದೆ ವರ್ಣಿಸ ತಕ್ಕುದೆಂದೆನಲು || ೧ ||

ಭರತದಾರ್ಯಯ ವತ್ಸ ವಿಷಯದ | ಲಿರುತಲಿಹ ಕೌಶಂಬಿ ನಗರ |
ಕ್ಕರಸು ಮಗಧ ನೃಪಾಲನಾತಗೆ ವೀತಶೋಕೆ ಸತಿ ||
ವರತನೂಭವನವರ್ಗೆ ರಘುವೆಂ | ಬುರು ಪರಾಕ್ರಮಿಯರಸುಗೈಯುತ |
ಹರುಷದಿಂದಿಹನಮರಪತಿಗೊರೆಯೆನಿಪ ಸಿರಿಯಿಂದ || ೨ ||

ಸಂದ ರಘುಜಂಗೆಣೆಯ ರಘುವಿಂ | ಗಂದು ಮಿತ್ರನು ಸುಮುಖ ವೈಶ್ಯನು |
ಮಂದರದ ಸಿರಿ ಪೊನ್ನರಾಶಿಯನಾಳ್ವನಿರಲಿಲ್ಲ ||
ವೊಂದು ದಿನವಾ ವೀರದತ್ತ ಸ | ವುಂದರದ ವನಮಾಲೆಯೆಂಬವ |
ಳಿಂದ ಹೊಸಮಸೆಯರಳ ಸರಳಿಗೆ ಮನವ ಮಾರಿದನು ||| ೩ ||

ಹರದನೆನಿಸಿದ ವೀರದತ್ತನ | ಬರಸಿ ಸುಮುಖನು ನಿಮ್ಮಯುಜ್ಜುಗ |
ದಿರವಿದೇನೆನಲೆಲ್ಲ ಲೇಸೆನೆ ನಸು ನಗುತಲಾತ ||
ಹರದ ಯಾಚಕೀರ್ವರುಂ ನಿ | ರ್ಭರಜಲಸ್ಥಲಯಾತ್ರೆಯನು ಮಿಗೆ |
ಚರಿಸೆ ಧನದನನಿಳಿಪ ಸಿರಿಯನು ಪಡೆಯದಿರದೆಂದ || ೪ ||

ಧನವು ದೊರಕದೆ ಬಡ್ಡಿದಪ್ಪಿದು | ದೆನಿಪವೊಲ್ ಮಿಗೆ ಭಂಡ ಮೊದಲಿನ |
ಧನವು ದೊರಕದೆ ದೂರ ಯಾತ್ರೆಯಲೇನು ಫಲವಹುದು ||
ಎಲೆ ಮಹಾಪೌರುಷದ ಕಣಿನೀಂ | ಧನವ ಕೋಟಿಯನೀವೆ ಭೈತ್ರವ |
ದನುವಡೆದುದದೆ ಬಡ್ಡಿ ನೂಱಕೆ ಹಣವೆ ಸಾಕೆಂದ || ೫ ||

ವೀರದತ್ತನು ಸುಮುಖನಾಡಿದ | ಸಾರವಚನವ ನಂಬಿ ಪಡಗಿನ |
ಭಾರವ ಱಿದುಪಚಿತಸುವಸ್ತುವ ತುಂಬಿ ಸಮಕಟ್ಟ ||

ಚಾರು ಸಾಯಂತ್ರಿಕರು ಸಹವಾ | ವಾರಿಧಿಯ ದೀಪಗಳನೆಯ್ದೀ |
ರಾಋ ಬರಿಸಂ ಬರೆಗ ಪರೆದಾಡುತ್ತಲವನಿರ್ದ || ೬ ||

ಇತ್ತಲಾ ಸುಮುಖರು ಸುವರ್ಣದ | ಪುತ್ತಳಿಯ ಚೆಲುವಡೆದ ಕರ್ಕಶ |
ವೃತ್ತಕುಚೆ ವನಮಾಳೆಯೊಳು ರತಿರಾಗಲಂಪಟನು ||
ಚಿತ್ತಜಕ್ರೀಡಾ ಸುಖಾಂಬುಧಿ | ಯುತ್ತರಿಸುತೆದೆ ಮೆಚ್ಚಿದಂದವಿ |
ರುತ್ತಮಿರ್ದನು ಪಗಲಿನೆಣೆವಕ್ಕಿಯವೊಲಾ ನೆಲೆಗೇಂ || ೭ ||

ಬಂದನಾ ಕೌಶಂಬಿ ನಗರ | ಕ್ಕಂದು ನಿರ್ಧನವಾಗಿ ಮಡದಿಯ |
ದಂದುಗದ ದುರ್ನಯವನಱಿದಾ ವೀರದತ್ತಾಖ್ಯಾ ||
ಬಂದು ಸುಮುಖನ ಬೇಡೆ ಹೊನ್ನನು | ತಂದೊಡಿತ್ತಪೆನಲ್ಲದೊಡೆ ಸೆಱೆ |
ಯೆಂದು ನೂಂಕಿಸೆ ಪುಯ್ಯಲಿಡೆ ಜನವೇನುವೆನ್ನದಿರೆ || ೮ ||

ಮನದೊಳಗೆ ಮಿಗೆ ನಾಣ್ಚಿ ನಿಃಶ | ಕ್ತನು ವಿಚಾರಿಸಿ ಮುನಿವುದೆಗ್ಗಂ |
ದನುವಡೆದು ಜಿನದೀಕ್ಷೆಗೊಂಡಾ ವೀರದತ್ತಯತಿ ||
ತನುವುಳಿದು ಸುಸಮಾಧಿಯಲಿ ಭೂ | ವಿನುತ ಸೌಧರ್ಮದೊಳು ವಿಭವದಿ |
ಜನಿಸಿ ಚಿತ್ರಾಂಗದ ದಿವಿಜನಾಗಿರ್ದನಿರಲಿತ್ತ || ೯ ||

ವಿದಿತ ರಘುನೃಪಸಖ ಸುಮುಖನಾ | ಸುದತಿ ವನಮಾಲೆಯೊಳು ಕಡುರಾ |
ಗದಲಿರಲು ಸಂಯಮಿಗಳೆಳ್ತರೆ ಚರಿಗೆಗೊಂದು ದಿನ ||
ವಿಧಿಸುಪೂರ್ವಕ ನಿಲಿಸಿ ಹರುಷದಿ | ಸದಮಲಾಹಾರವನು ಕೊಟ್ಟತಿ |
ಮುದದಿ ಧರ್ಮವ ಕೇಳಿ ತಮ್ಮನ್ಯಾಯಕಂಜಿದರು || ೧೦ ||

ಚತುರವಿಧ ದಾನಗಳ ವರಜಿನ | ಪತಿ ಮಹಾಪೂಜೆಗಳ ಮಿಗೆ ನೆಗ |
ಳುತ ಸುಸಂಯಮದಿಂದೆ ವರ್ತಿಸುತಿರೆ ಸಿಡಿಲು ಪೊಡೆದು ||
ಮೃತಿಯನಾಂತವರೀರ್ವರುಂ ಬಂ | ದತುಳ ಜಂಬೂ ದ್ವೀಪ ಭರತ |
ಸ್ಥಿತದ ವಿಜಯಾರ್ಧಾಚಳದ ಹರಿವರ್ಷ ವಿಷಯದೊಳು || ೧೧ ||

ಭೋಗಪುರವೆಂಬುದು ಪೊಳಲು ಬಹು | ಭೋಗಕಾಗರವದಱೊಡೆಯನಾ |
ಭೋಗಪೆಸರಿಂದಂ ಪ್ರಭಂಜನ ಖಚರನವನರಸಿ ||
ಹೂಗಣೆಯನಧಿದೇವಿಯೆನೆ ಸೊಬ | ಗಾಗಿಹಳು ಪೆಸರಿಂ ಮೃಕಂಡು ಸ |
ರಾಗದಿಂದವರ್ಗಗ್ರ ನಂದನನಾದನಾ ವೈಶ್ಯ || ೧೨ ||

ಸಿಂಗಕೇತುವೆನಿಪ್ಪ ನಾಮದಿ | ಪಿಂಗದಿರೆ ಸುಮುಖನು ಬಳಿಕ್ಕಾ |
ತುಂಗ ಕುಚಯಾ ವಿಷಯದೊಳು ವಿಶ್ವಾವಳೆಯ ಪುರವ ||

ಹಿಂಗದಾಳುವ ವಜ್ರಚಾಪ ಖ | ಗಂಗರಸಿಯೆನಿಸಿದ ಸುಮಾಲ್ಯೆಗೆ |
ಮಂಗಳಿಪ ಮಗಳಾಗಿ ವಿದ್ಯುನ್ಮಾಳೆಯೆನಿಸಿದಳು || ೧೩ ||

ಎಸೆವ ಕಡುಮಿಂಚನು ಮನೋಭವ | ಮಸದು ಪೊಂಗಿಸಿದಂತೆ ತನುರುಚಿ |
ಮಿಸುಗೆ ವಿದ್ಯುನ್ಮಾಲೆವೆಸರದು ಸಾರ್ಥವಾಗಿರಲು ||
ಮಿಸುಪ ಭೋಗ ಪುರೇಶ ತೇಜದಿ | ಬಿಸುಗದಿರ ಪಳಿವಂ ಪ್ರಭಂಜನ |
ನೊಸೆದು ತನುಜಗೆ ನಂಪಿನಿಂದಿರೆದಟ್ಟೆ ಕನ್ನೆಯನು || ೧೪ ||

ಕುಡೆ ಮಹೋತ್ಸವದಿಂದ ನಿಬ್ಬಣ | ಸಡಗರದಿ ಬರೆ ವಾದ್ಯರವ ಜಗ |
ದಡಕಿಲದಿರಿಸೆಮಿಗೆ ಸುಲಗ್ನದಿ ವಜ್ರಚಾಪಖಗ ||
ಪೊಡರ್ವ ವಿದ್ಯುನ್ಮಾಲೆ ಕನ್ನೆಯ | ನಡಸಿ ವಿಭವದಿ ಸಿಂಹಕೇತುಗೆ |
ಒಡನೆ ಕೈನೆರೆಯೆದನಾ ಮಂಗಳ ನಿನದವೊಗೆಯೆ || ೧೫ ||

ಆಶೆಯೊಳು ಮನಸಿಜನ ವಿಜಯ ಪ | ತಾಳಿಯೊಳು ಸವಿಸುಶಿಲ ಸುಧೆಯನ |
ನೇಕಪರಿಯಿಂದನುಭವಿಸುತಾ ಸಿಂಹಕೇತುಖಗ ||
ನಾಕಿಗರ ರತಿಸುಖದ ಪಳಿವನ | ದೇಕೆ ಮಿಟಿಮಿಟಿ ಸಗ್ಗವೆನುತ ವಿ |
ವೇಕ ವಿದ್ಯಾಧರನು ಪೂರ್ವಭದ ಪ್ರಣಯದಿಂದ || ೧೬ ||

ಒಂದುದಿನ ಒಪ್ಪುವ ಮನೋಹರ | ನಂದನದ ತಂಗೊಳದ ತಡಿಯರ |
ರಿಂದ ಮಂಟಪದರಳ ಪಸೆಯೊಳು ಕಾಮಕೇಳಿಯಲಿ ||
ಚಂದದಿಂ ದಂಪತಿಗಳಿರಲ | ತ್ತಂದು ಬಾನೊಳು ಸ್ವೈರಚಾರದಿ |
ಬಂದು ಕಂಡನು ವೀರದತ್ತ ಚರಾನಿಮಿಷನವರ || ೧೭ ||

ಕಂಗಳಲಿ ಕಿಡಿಯೊಗುತಲಾ ಚಿ | ತ್ರಾಂಗದಾಮರ ಪೂರ್ವಕೃತವೈ |
ರಂಗಳಿಂದರೀರ್ವರನು ಘರ್ಜಿಸುತ ಪಿಡಿದ್ಯೆದು ||
ಪೊಂಗಳನು ಬೇಹಾರಕಿತ್ತ | ತ್ತಂಗನೆಯನೆಳಕೊಂಡೆ ಚೆನಿಖಂ |
ಡಂಗಳನು ಕೊರೆಯದೆ ಬಿಡುವೆನೇ ನಿನ್ನನೆಲೆ ಸುಮುಖ || ೧೮ ||

ಎಂದು ಕೋಪದಲೊಯ್ಯುತಿರುಲ | ತ್ತಂದಿನಾ ಕೌಶಂಬಿ ಪುರಪತಿ |
ಸಂದ ಸುಮುಖನ ಸಖನು ರಘುಸಾಗರ ಧರ್ಮದಲಿ ||
ಸಂದು ದೇವತ್ತ್ವವನು ಪಡೆದಿರೆ | ತಂದು ತಾತನ ಪುಣ್ಯವೆನೆ ತಾಂ |
ಬಂದನಾ ಸಮಯದೊಳು ಸೂರ್ಯಪ್ರಭನಿಳಿಂಪೇಂದ್ರ || ೧೯ ||

ಅನಿಮಿಷೋತ್ತಮ ಇದಱ ತೆಱನೇ | ನೆನೆಯಲೇ ಸೂರ್ಯಪ್ರಭಾಮರ |
ಯೆನಲದೆಂ ಹಿಂಭವದ ವಧು ವನಮಾಲೆಯಿವಳಿತ್ತ ||

ಅನೃತ ವಿನಯದಿ ಹರದು ಗೈಯಲು | ಧನವ ನೆನಗಿತ್ತತ್ತಲಳಿಪಿದ |
ಜನವಱಿಯೆ ಖಳನಿವರನು ಮುರಿಯದಿರೆನೆಂದ || ೧೦ ||

ಎನಲೆಲೇ ಚಿತ್ರಾಮಗದಾಮರ | ಮನುಜ ಕೀಟಕವಿವರ ಕೊಲುವುದು |
ನಿನಗೆ ಸಾಹಸವಲ್ಲ ನರಹುಳುವೆವಗವಧ್ಯರವೆ ||
ಮುನಿದುವೇ ಮೃಗವೈರಿಕೊಲುವುದೆ | ವನದ ಹಂದಿಯನಂತುಮಲ್ಲದೆ |
ಮುನಿಸನುಪಶಮಿಪುದು ಮಹೋತ್ಕರಗುಣಿವಿದಱಿಯೆಂದ || ೧೧ ||

ಬಗೆದು ನೋಡುವ [ಡಾ]ರುವಾರಿಗೆ | ಹಗೆಗಳಲ್ಲಾರಾರು ಮತ್ತಾ |
ರಿಗೆ ಕೆಳೆಗಳಲ್ಲಖಿಳ ಜನ್ಮಾಂತರದ ಸಿಲುಕುಗಳಿಂ ||
ಒಗೆದ ರಾಗದ್ವೇಷದಿಂದಾ | ವಿಗೆಯ ಬೇಂಕೆಯೊಳೊಳಗೊಳಗಣು |
ಬ್ಬೆಗದಿ ಬೇವುದು ಹಿತವೆ ನೀನನಭಿಜ್ಞನೆಯೆಂದ || ೧೨ ||

ಎಂದ ಸೂರ್ಯಪ್ರಭನ ವಾಕ್ಪ್ರಭೆ | ಯಿಂದ ಹರದುದು ಮುನಿಸುಗತ್ತಲೆ |
ಅಂದು ಚಿತ್ರಾಂಗದ ತಿಳಿದು ನೀವೆಂದುದೇ ಹಿತವು ||
ಎಂದವರನಾತಂಗೆ ಕೊಟ್ಟೊಲ | ವಿಂದೆ ಪೋದಪನತ್ತಲಿತ್ತಲು |
ತಂದು ಕಾರಣವ ಱಿದು ಚಂಪಾಪುರದ ವನದೊಳಗೆ || ೧೩ ||

ಇರಿಸಿ ಸೂರ್ಯಪ್ರಭನು ಪೋದನ | ವರು ಬನದೊಳಿರಲಿತ್ತ ಚಂಪಾ |
ಪುರವರಂ ಶ್ರೀ ಚಂದ್ರಕೀರ್ತಿ ನೃಪತಿಮರಣಮೈದೆ ||
ವರ ಸಚಿವ ಮಂತ್ರಿಪ್ರಮುಖರಾ | ಧರೆಯನಾಳ್ವರಸಿಲ್ಲದಿರೆ ಸ |
ರ್ವರು ನೆರೆದು ಶೋಕವನುಳಿದು ಕಾರ್ಯವನು ನಿರ್ಧರಿಸಿ || ೧೪ ||

ಪಟ್ಟವರ್ಧನ ಗಜವ ನರ್ಚಿಸಿ | ಬಿಟ್ಟೊಡದು ನಿರ್ವ್ಯಾಜದಿಂದಲೆ |
ನೆಟ್ಟನಾ ವನವೆಯಿದಿ ತುಂಬಿದ ಪೊಂಗಲಶಜಲವ ||
ಪಟ್ಟ ನೀರೆಱದಾತ್ಮ ಹಸ್ತದಿ | ತೊಟ್ಟನವರೀರ್ವರಿಗೆ ಕೊರಳನು |
ಕೊಟ್ಟು ಕೊಂಡೈ ತಂದುದಾ ಪಟ್ಟಣಕೆ ಜನ ನಲಿಯೆ || ೧೫ ||

ಲೀಲೆಯಿಂ ಹರಿಕೇತು ವಿದ್ಯು | ನ್ಮಾಲೆಯೀರ್ವರನಿಳಿಪಿ ತಾ ಸಭೆ |
ಯೊಳಿಯುತ್ಸವದಿಂದ ರಾಜಾಂಗಣದೊಳಾಗಜವು ||
ಮೇಳಿಸಿರೆ ಗುಡಿತೋರಣ ಧ್ವಜ | ಪಾಳಿ ಮಂಗಲ ವಾದ್ಯರವದಿ |
ಗ್ಜಾಲವನು ಪಸರಿಸಲು ಬುಧಸಚಿವ ಪ್ರಮುಖರಂದು || ೧೬ ||

ಹರುಷದಿಂ ಪಟ್ಟಾಭಿಷೇಕವ | ನುರುವಿಭವದಿಂ ಮಾಡೆವಿಬುಧರು |
ಹರಸಿ ಸೇಸೆಯನಿಡಲು ಸರ್ಬರು ಕಾಣಿಕೆಯನಿಕ್ಕಿ ||

ಅರಸನಡಿಗೆರಗಿದರು ಸಚಿವರು | ಕರವ ಮುಗಿದೆಲೆರಾಯ ನಿಮ್ಮಡಿ |
ಯಿರವನಱಿಪುವುದೆಂದು ಬಿನ್ನೈಸಲು ತದವನೀಶ || ೧೭ ||

ದರಹಸಿತಮುಖನಾ ಪ್ರಧಾನಾ | ದ್ಯರ ಕಿವಿಗೆ ಸವಿಯಾಗಿ ನುಡಿದನು |
ಭರತದೀ ವಿಜಯಾರ್ಧ ಹರಿವರುಷದ ವಿಷಯದೊಳಗೆ ||
ಸುರಪುರದ ಸಮಭೋಗಪುರ ಖೇ | ಚರ ಮಹಾರಾಜಂ ಪ್ರಭಂಜನ |
ನರಸಿ ಸುರಸೆ ಮೃಕಂಡುವವರಾತ್ಮಜನು ತಾನೆಂದ || ೧೮ ||

ಎಂದ ತನ್ನೆಲ್ಲಾ ತೆಱನಮೊಲ | ವಿಂದೆ ಪೇಳಲು ಕೇಳ್ದು ಸಂತಸ |
ದಿಂದಲಾದೀಶ್ವರನ ಕಾಲದಿನಾದ ಹರಿವಂಶ ||
ನಂದ ಶೀತಲ ತೀರ್ಥಕರರು | ಳ್ಳಂದು ತನಕಿರ್ದಳಿದುದೀನ್ನೃಪ |
ನಿಂದು ಹರಿವರುಷಕ್ಕಧೀಶ್ವರನಾದ ಕಾರಣದಿ || ೧೯ ||

ಇವನ ವಂಶವೆ ತಾನು ಹರಿವಂ | ಶವು ಮೃಕಂಡುವ ತನುಜನದಱಿಂ |
ದಿವನ ಮಾರ್ಕಂಡೇಯನಾಗಿರಲೆಂದುದಂದೆಲ್ಲ ||
ಅವನಿಪತಿ ತಾನಾಗಿ ಈ ಜಗ | ಕಿವನ ಸರಿಯರಸಿಲ್ಲೆನಿಸಿ ರಾ |
ಜ್ಯವನು ಪಾಳಿಸುತಿರ್ದ ಮಾರ್ಕಾಂಡೇಯ ಭೂನಾಥ || ೨೦ ||

ವಿನುತ ಮಾಕಾಂಡೇಯ ಭೂಪನ | ತನುಜನಾ ಹಿಮಗಿರಿ ನೃಪನು ಭೂ |
ವನಿತೆಯೊಡತನವಾಳ್ದನಾತನ ಸುತನು ವಸುಗೀಯು ||
ಎನಿಪ ನರನಾಗಿರ್ದನಾ ಭೂ | ಪನುವಳಿಯಲಂತ್ಯೆದೆ ಹಲಬರು |
ವನತಿಶಯ ವಿಕ್ರಮರು ರಾಜ್ಯಂಗೈದರರಸುಗಳು || ೨೧ ||

ಮತ್ತಮಾವಂಶದೊಳಮಳನಿ | ಪ್ಪತ್ತನೆಯ ತೀರ್ಥೇಶನುದಿಸಿದ |
ನತ್ತ ಮುನಿಸುವ್ರತರು ಮುಕ್ತಿಗೆ ಸಂದ ಬೆಂಬಳಿಯ ||
ಮತ್ತೆ ತತ್ಕುಲದರಸುಗಳು ಪಲ | ರುತ್ತರಿಸಿ ಯಧಿರಾಜ್ಯ ಲಕ್ಷ್ಮಿಯ |
ನತ್ತ ವಸುವೆಂಬರಸನಾ ರಾಜ್ಯವನು ಪಾಲಿಸುತ || ೨೨ ||

ಪುದಿದ ಪರ್ವತ ನಾರದರ ಯ | ಜ್ಞದ ವಿವಾದದಲನೃತವನು ಪೇ |
ಳಿದ ಕತದಿ ದಿವ್ಯಂಪೊಡೆಯಲೇಳನೆಯ ನರಕಕ್ಕೆ ||
ಅದಯನಿಳಿದನು ತದ್ವಸುವಸುತ | ನುದಿತ ಸುವಸು ಬೃಹದ್ವಸುಗಳಾ |
ಳಿದರವರೊಳಾ ಸುವಸುವಿನ ಸಂತಾನ ಸಂಜಾತ || ೨೩ ||

ಕ್ಷತಮತಿ ಕ್ಷಿತಿನಾಥನಾತನ | ಸುತ ಬೃಹದ್ರತ ಭುಪನವನಿ |
ಸ್ತುತನು ರಾಜಗೃಹವನು ಪಾಲಿಸಿ ಪೋದನಂತವನ ||

ಸುತ ಜರಾಸಂಧನು ಪುರಾತನ | ವಿತತ ಪುಣ್ಯದಿ ಪಡೆದನತಿ ವಿ |
ಶ್ರುತ ತ್ರಿಖಂಡಾಧೀಶ ಪದವಿಯ ಚಕ್ರರತ್ನವನು || ೩೪ ||

ದೇವದಾನವ ಮಾನವರು ತನ | ಗಾವಗಂ ಬೆಸಕೆಱಗೆ ತನ್ನಮ |
ಹಾವಿಭೂತಿಯ ಮದದಿ ಧೀರೋದ್ಧತನು ತಾನಾಗಿ ||
ಆವ ಭೂಚರರಾಯನರೆನಗೆಣೆ | ಯಾವ ಖೇಚರರಾಯರಿದಿರಹ |
ರೀವಿಪುಲ ಭುಜಕೆನುತಲೇ ಜರಾಸಂಧನಿರುತಿಹನು || ೩೫ ||

ಇರೆ ಬೃಹದ್ವಸುವನ್ವಯದ ಪಲ | ಬರು ನೃಪಾಲರುಕಳಿದು ಪೋಗಲು |
ಧರೆಗಧೀಶ್ವರನುದಿಸಿದನು ಯದುವಾತನನ್ವಯವು ||
ಸ್ಫುರಿತ ಯಾದವ ವಂಶವೆನಿಸಿತು | ಧರೆಯೊಳಾ ಯದುನೃಪನ ತನುಜನು |
ನರಪತಿ ಕ್ಷಿತಿಪತಿ ತದುರ್ವರೆಯೊಳ್ದು ಸುಖಮಿರ್ದ || ೩೬ ||

ಕ್ಷಿತಿವಿನುತ ನರಪತಿ ನೃಪತಿ ನಿಜ | ಸುತಗೆ ಶೂರನೃಪಂಗೆ ಅಧಿರಾ |
ಜ್ಯತೆಯ ಯುವರಾಜತೆಯ ಕಿರಿಯ ಕುಮಾರ ವೀರಂಗೆ ||
ಚತುರನಿತ್ತು ಸುದೀಕ್ಷೆಗೊಳಲು | ನ್ನತ ಚರಮ ತನು ಶೂರಸೇನದಿ |
ಕ್ಷಿತಿಪನತಿ ವೈಭವದಿ ರಾಜ್ಯವನಾಳುತೊಂದು ದಿನ || ೩೭ ||

ಧರೆಯೊಳಾ ಸೂರ್ಯಪ್ರಭಾಮರ | ವರನಿನೀ ಹರಿವಂಶವಾಯ್ತೆಂ |
ದಱಿದು ತಾನಾತನ ಹೆಸರೊಳುರು ಸೂರ್ಯಪುರವೆಂಬ ||
ಪುರವನಮರಾವತಿಗೆ ತನ್ನಾ | ವೆರಳಧಿಕವೆನೆ ಬರ್ಮಹರ್ಷೋ |
ತ್ಕರದಿ ನಾನಾ ಶೋಭೆಯಿಂ ವಿರಚಿಸಿದನರ್ತಿಯಲಿ || ೩೮ ||

ಶೂರಸೇನ ನೃಪಾಲ ತಮ್ಮಗೆ | ವೀರಸೇನಗೆ ಮಧುರೆಯನು ಕೊ |
ಟ್ಟಾ ರುಚಿರತರ ಸೂರ್ಯಪುರದೊಳು ಶಕ್ರ ಸಮನಿಹನು ||
ವೀರಗಾ ಜಯೆಯೆಂಬರಸಿ ಗಾಂ | ಧಾರಿ ಶೂರನೃಪಂಗೆ ಕುಲವಧು |
ಮಾರಕೇಳಿ ವಿನೋದದಲಿ ಸುಖವಿರ್ದರವರಿರಲು || ೩೯ ||

ಕೃಷ್ಣವೇಣಿಗೆ ಪೆಂಪಿನಂಧಕ | ವೃಷ್ಣಿ ಗಾಂಧಾರಿಣಿಗೆ ನರಪತಿ |
ವೃಷ್ಣಿ ವೀರನ ಜಯೆಗುದಿಸಿದರು ಲಕ್ಷ್ಮಿಕುಲವನಿತೆ ||
ವಿಷ್ಣುಗಾದವೊಲಾದಳಂಧಕ | ವೃಷ್ಣಿಗರಸಿ ಸುಭದ್ರೆನರಪತಿ |
ವೃಷ್ಣಿಗಾ ಪದ್ಮಾವತಿಯು ಹರಗುಮೆ ದೊರಕಿದಂತೆ || ೪೦ ||

ಘನಸಮುದ್ರ ವಿಜಯನು ವಕ್ಷೋ | ಭನು ಬಳಿಕ್ಕಾಸ್ತಿಮಿತ ಸಾಗರ |
ಜನಪನಾ ಹಿಮವಂತನೊಪ್ಪುವ ವಿಜಯನಚಲ ನೃಪ ||

ವಿನುತ ಧಾರಣ ಪೂರಣರು ಪೆಂ | ಪೆನಿಸುವಭಿನಂದನನು ವಸುದೇ |
ವನು ಸುಭದ್ರೆಗೆ ಸುತರು ಕೊಂತಿಯು ಮಾದ್ರಿ ತನುಜೆಯರು || ೪೧ ||

ಗಿರಿಗಳಿರಲಾ ಮಣ್ಣಡಿಯೊಳೆಂ | ದಿರದೆ ಬಂದಾ ಕೂರ್ಮ ಶೇಷಂ |
ಬೆರಸಿ ದಿಗ್ಗಜರಾಜಿಯಂತೀರೈದು ನೃಪರೂಪ ||
ಧರಿಸಿದಂತೊಪ್ಪಿದರು ನಾಭಿಗೆ | ಸರಿಯೆನಿಸಿದ ಸಮುದ್ರವಿಜಯಂ |
ಗರಸಿ ಮರುದೇವಿಗೆ ಸುದೃಷ್ಟಿ ಶಿವದೇವಿಯೊಪ್ಪಿದಳು || ೪೨ ||

ಆ ಸಮುದ್ರವಿಜಯಾ ಧರಾಧಿಪ | ನಾ ಸಿರಿಗೆ ಸುರಪತಿಗೆ ಭೀರತೆ |
ನಾಸಮುದ್ರವು ಚೆಲುವಿಗೆಳೆವೆಂಡಿರು ನಡೆಗೆ ಬುಧರು ||
ನೇಸರುತ್ಕಟ ತೇಜದೇಳ್ಗೆಗ | ಮಾಸುರಾದ್ರಿ ಪೊದಳ್ದ ಜಾಗ |
ಕ್ಕಾ ಸುರದ್ರುಮ ಸೋಲ್ವುದೆಂಬ ಪೊಗಳ್ತೆಗಿಂಬಾದ || ೪೩ ||

ಸುರನೆ ಶಿವದೇವಿಯ ರಮಣನನು | ಜರಿಗೆ ವಸುದೇವಾಂಕ ನಣ್ಣಂ |
ದಿರಿಗೆ ಸೊಗಯಿಪರಾಧೃತೀಶ್ವರಿಯುಂ ಸ್ವಯಂಪ್ರಭೆಯುಂ ||
ವರ ಸುಸೀಮೆಯುಮಾ ಪ್ರಭಾವತಿ | ತರದಿ ಕಾಳಿಂದಿನಿಯು ಸುಪ್ರಭೆ |
ತರುಣಿ ಸೀತೆಯು ಪ್ರಿಯ ವಚನೆಯೆಂಬಗ್ರ ಮಹಿಷಿಯರು || ೪೪ ||

ತರಣಿಯಿಂ ಕಮಳಿಣಿಗೆ ನಗೆಮಿಗೆ | ಹರುಷ ಸೊಬಗು ಶ್ರೀಯು ಪುಟ್ಟಿದ |
ತೆಱದಿ ನರಪತಿವೃಷ್ಣಿಯಿಂ ಪದ್ಮಾವತೀಸತಿಗೆ ||
ತರದಿ ನೋಳ್ಪೆಸೆ ವುಗ್ರಸೇನನು | ದೊರೆಯನಾ ತ್ರೀದೇವಸೇನನು |
ವರಮಹಾಸೇನನು ಸುಗಾಂಧಾರಿಯರು ಜನಿಸಿದರು || ೪೫ ||

ಅತ್ತಲಾ ಮಧುರಾ ಪುರವನಾ | ಳುತ್ತಮಿರ್ದ ವೀರ ನೃಪತಿಯು |
ಇತ್ತಲೊಪ್ಪುವ ಸೂರ್ಯಪುರವರ ಶೂರ ಭೂಪತಿಯು ||
ಪೆತ್ತ ನರಪತಿ ವೃಷ್ಣಿಗಮ್ಮ | ತ್ತಿತ್ತಲಂಧಕವೃಷ್ಣಿಗಂ ಪದೆ |
ದಿತ್ತು ರಾಜ್ಯದ ಸುಪ್ರತಿಷ್ಠ ಯತೀಂದ್ರರಿಂದವರು || ೪೬ ||

ಸಕಲಜೀವಂಗಳಿಗೆ ಹಿತನುತ | ಸುಖವೆನಿಪ ಧರ್ಮವನು ಕೇಳ್ದಾ |
ವಿಕಟಸಂಸಾರಕ್ಕೆ ಪೇಸಿ ಜಿನೇಂದ್ರ ರೂಪಾಂತು |
ಪ್ರಕಟಗುಣಿಗಳು ನೆಗಳ್ದರಭಿಮತ | ಮಕರ ಕೇತನ ಸೂರ ಯತಿಪತಿ |
ಸಕಲ ಕರ್ಮವ ಕೆಡಿಸಿ ಮುಕ್ತಿಪ್ರಾಯೆಯನಪ್ಪಿದನು || ೪೭ ||

|| ಅಂತು ಸಂಧಿ ೧೧ಕ್ಕಂ ಮಂಗಳ ಮಹಾ ||

**ಸಂಧಿ ೧೨**

ವಿನುತ ಸೋಮಪ್ರಭನು ಶ್ರೇಯಾಂ | ಸನು ಮೊದಲು ಪಾಂಡವರು ಕೌರವ |
ರನಿಬರುಂ ಕಡೆಯಾದ ಕುರುವಂಶವನು ವರ್ಣಿಸುವೆ || ಪಲ್ಲ ||

ಶ್ರೀಮದಂಧಕವೃಷ್ಣಿ ಸುಗುಣೊ | ದ್ದಾಮನುರು ಖಚರೇಂದ್ರ ವಿಭವದಿ |
ಭೂಮಿವಿಶ್ರುತ ಸೂರ್ಯಪುರದೊಳಗರಸುಗೈಯುತಲಿ ||
ಕಾಮ ಸನ್ನಿಭನೊಂದು ದಿನ ಸು | ಪ್ರೇಮದಿಂದೊಡ್ಡೋಲಗದಲಿರ |
ಲಾ ಮಹಾ ಮಂತ್ರಿಗಳು ಬಂದರು ಹಸ್ತಿನಾಪುರಕೆ || ೧ ||

ಬಂದು ಕಾಣಿಕೆಯಿಕ್ಕಿ ಹರುಷದಿ | ವಂದಿಸಿಯೆ ತಕ್ಕೆಡೆಯೊಳಿರ್ದೋಲ |
ವಿಂದನಿತು ಪೊತ್ತಿಂದ ಮೇಲೆಲೆದೇವ ಬಿನ್ನಹವು ||
ಸಂದ ಕುರುವಂಶಾಮೃತಾರ್ಣವ | ಚಂದ್ರಗಾಂಗೇಯಾವನಿಪ ಪೋ |
ಗೆಂದು ಕಳುಹಲು ಬಂದೆವೆಂದರಮಾತ್ಯರಿನಿದಾಗಿ || ೨ ||

ಎನಲು ಭೂಪತಿ ಕೇಳು ಹರುಷಾ | ನನದಿ ನೀವೇಂ ಬಂದ ಕಾರ್ಯವ |
ನನುವದಿಸಿಯೆನೆ ಜೀಯಚಿತ್ರೈಸೆಮ್ಮರಸ ತಮ್ಮ ||
ತನುಜರಿಗೆ ರಿಪುದಂತಿ ಪಂಬಾ | ನನರಿಗೆರೆ ದಟ್ಟಿದನು ದೇವರ |
ತನುಜೆಯರನಭಿಜಿತಸುರಸ್ತ್ರೀಯರನೆಲೆ ಭೂಪ || ೩ ||

ಅವರ ಬಿನ್ನಹಗೇಳಿ ನಸುನಗು | ತವನಿಪತಿ ನಿಜಮಂತ್ರಿಗಳಲಪ |
ನವನು ನೋಡಲು ತಿಳಿದವರು ನಿಮ್ಮರಸನನ್ವಯವು ||
ಅವನಿಯಾವುದು ಹೇಳಿಮೆನೆ ಪೇ | ಳುವೆನೆನುತ ಗಂಭೀರವಚನದಿ |
ಕಿವಿಗೆ ಸವಿಗುಡೆ ಬಿಚ್ಚಳಿಸಿದನು ಮುಖ್ಯವನರೊಳಗೆ || ೪ ||

ಪುರುಜಿನೇಶ್ವರಕಾದಶಾಲದೊ | ಳೊರೆಯಲಾದಿಕ್ಷ್ವಾಕು ವಂಶವು |
ಪಿರಿದೆನಿಪಕುರುವಂಶ ಹರಿವಂಶೋಗ್ರ ವಂಶಾದಿ ||
ಇರುತಲಿಹವದರೊಳಗೆ ಕುರುಕಲ | ದರಸ ತಾಂ ಸೋಮ ಪ್ರಯಕ್ಷ್ಮಾ |
ವರ ನಿಜಾನುಜ ದಾನತೀರ್ಥಕರಾದ ಶ್ರೇಯಾಂಸಾ || ೫ ||

ಕೂಡಿಸುಖದಿಂದಿರ್ದರಿಳೆಯೊಳು | ರೂಢಿಸಿದ ಸೋಮ ಪ್ರಭಾಂಗಾ |
ಗಾಡಿ ತಡೆದಿಹ ಜಯಕುಮಾರಕನಾಗೆ ರಾಜ್ಯವನು ||

ಕೋಡದಿತ್ತಿಸುದೀಕ್ಷೆ ಗೊಂಡವ | ಲಾಡಲೇಂ ತಂದೆಗಳುಮೀರ್ವರು |
ಕೂಡೆ ನಿರ್ವಾಣಕ್ಕೆ ಸಂದರು ರಾಯ ಕೇಳೆಂದ || ೬ ||

ಭರತಚಕ್ರಿಗೆ ಜಯಕುಮಾರಕ | ವರನು ಸೇನಾಪತಿ ಪದವನಾಂ |
ತಿರದೆ ದೀಕ್ಷೆಯಕೊಂಡು ಮೋಕ್ಷಕೆ ಪೋದನನ್ವಯಕೆ ||
ಧರೆಯೊಳಾದುದು ಸೋಮವಂಶದ | ವೆಸರು ಬಳಿಕಾ ಕುಲದೊಳುದಯಿಸಿ |
ದರಸುಗಳು ಪಲಬರು ಕಳಿದ ತದನಂತರದೊಳಲ್ಲಿ || ೭ ||

ಜನಿಸಿದನು ತಾಂ ಹಸ್ತಿ ನೃಪನೆಂ | ಬನುಪಮನು ತಾಂ ಹಸ್ತಿನಾಪುರ |
ವನು ವಿನಿರ್ಮಿಸಿ ಕಳಿಯೆ ಬಳಿಕ ಪಲಂಬರರಸುಗಳು ||
ವಿನುತರದ ನಾಳ್ದಳಿಯೆ ತತ್ಕುಲ | ಜನಿತನಘರಿಪು ಶಾಂತಿತೀರ್ಥೇ |
ಶನು ಜನಿಸಿ ಕಲ್ಯಾಣ ಪಂಚಕನಾದ ಬೆಂಬಳಿಯ || ೮ ||

ಪೇಳುವೊಡೆ ಪಲ್ಲೋಪಮಾರ್ಧದ | ಕಾಲ ಸಲುತಿರೆ ಕುಂಥು ಜಿನಪತಿ |
ಕಾಲಹರ ಕರ್ಮಾರಿ ತತ್ಕುಲ ಜಾತಮುಕ್ತಿಯೊಳು ||
ಮೇಳಿಸಿದರಲ್ಲಿಂದ ಮೇಲದ | ನಾಳಿವಲ ಬರು ಪೋದರಲ್ಲಿಂ |
ಮೇಲೆ ಶಕ್ತಿತ್ರಯ ನಿಲಯ ಜನಿಸಿದನು ಶಕ್ತಿ ನೃಪ || ೯ ||

ಶಕ್ತಿನೃಪತಿಯ ಮಡದಿ ಜಿನಪದ | ಭಕ್ತಿ ಧಾರುಣಿಗಾತ್ಮಜಾತರು |
ಶಕ್ತರಾಗೆ ಪರಾಶರನು ಶಾಂತಾವನಿಪನೊಗೆಯೆ ||
ಪ್ರೋಕ್ತ ಶಾಂತ ನೃಪಂಗೆ ರಾಜ್ಯವ | ನುಕ್ತಿ ಯುಕ್ತಗೆ ಕೊಟ್ಟು ಬಳಿಕಾ |
ಶಕ್ತಿ ನೃಪತಿ ಪರಾಶರರು ಜಿನದೀಕ್ಷೆ ಧರಿಸಿದರು || ೧೦ ||

ಕ್ಷಿತಿಗಧೀಶ್ವರನಾಗಿ ಶಾಂತ ನೃ | ಪತಿ ಸುಖದಿನಿರಲೊಂದು ದಿನ ವಿ |
ಶ್ರುತಪುರ ಪೊಱಬನದೊಳೋರ್ವಳು ಖಚರಿ ಬಿಜ್ಜೆಗಳಿಂ ||
ಕೃತಕ ಪಳೆವಾಪಿಯ ಸವೆದು ನವ | ರತುನಮಯ ಭೂಷಣವನದರೊಳು |
ಚತುರೆ ಸಲೆ ಮಡಗಿಟ್ಟು ಕೆಲದಲಿ ನಿಂದಳುತಲಿರಲು || ೧೧ ||

ಏಕೆ ನೀನೀ ಬನದೊಳಂಗನೆ | ಶೋಕಿಸುವೆಯೆಂದಲ್ಲಿ ಬಂದು ವಿ |
ವೇಕಿ ಶಾಂತ ನೃಪಾಲನೆನೆಯೆನ್ನಾಭರಣವಲ್ಲಿ ||
ತೋಕಿ ಬಿದ್ದವು ತೆಗೆದು ಕೊಡುವರ | ನೀಕಡೆಯೊಳಾಂ ಕಾಣದತ್ತಪೆ |
ನೇ ಕುಮಾರಕ ನಿನ್ನ ಹದನೇನೆಂದಳಾ ಖಚರಿ || ೧೨ ||

ಸುದತಿಯನು ನೋಡುತಲೆ ನನೆಗಣೆ | ಗೆದೆಯನೊಪ್ಪಿಸಿದನು ನೃಪತಿ ಬಳಿ |
ಕದನು ತಾಂ ತೆಗೆತಂದು ಕೊಟ್ಟಪೆನೆಂದೊಡಾ ನಿನಗೆ ||

ಮದವಳಿಗೆಯಹೆನೆನೆ ಖಚರಿ ವಿಭು | ವಿದಱ ತೆಱನೆಲ್ಲವನು ಹೇಳುವೆ |
ಚದುರೆ ಪೇಳ್ದಪಳೊಪ್ಪುವೀ ವಿಜಯಾರ್ಧ ಪರ್ವತದ || ೧೩ ||

ದಕ್ಷಿಣ ಶ್ರೇಣಿಯೊಳಗೆಸೆವುದು | ವೀಕ್ಷಿಪೊಡೆ ಪೃಥ್ವೀತಿಲಕವದ |
ರಕ್ಷಿಪ ಮಹೀಧರ ವಿಯಚ್ಚರನಾತನರ್ಧಾಂಗಿ ||
ಲಕ್ಷಿಸೆ ಮನೋಹರಿಯವರುಗಳು | ಕುಕ್ಷಿ ಸಂಭವೆ ನಾನು ಕೇಳು ವಿ |
ಚಕ್ಷಣನೆ ಲಕ್ಷ್ಮೀಮತಿಯು ತಿಳಿಯೆಂದಳಾಖಚರಿ || ೧೪ ||

ಒಂದು ದಿನ ಶ್ರೀಪಂಚಮಿಯನೋಂ | ತಂದಿನುಪವಾಸದೊಳು ತುರಿತದಿ |
ಮಂದಿರಕೆ ಪರಿದೆಯಿದಿಯಲ್ಲಿಯ ಜಿನಪ್ರತಿಮೆಗಳನು ||
ಚಂದದಿಂದರ್ಚಿಸುತಿರಲುವಲ್ಲಿಗೆ | ಬಂದ ಚಾರಣರಡಿಗೆಱಗಿಯಾ |
ನಂದದಲಿ ಧರ್ಮವನು ಕೇಳೀ ಸಂಸ್ಕೃತಿಗೆ ಪೇಸಿ || ೧೫ ||

ಬಂದು ನೀರ್ವೆಗದ ಭರದಿ ನಿಜ | ಮಂದಿರಕೆ ತೆಱಪಱಿದು ನನ್ನಯ |
ತಂದೆತಾಯ್ಗಳ ಕಾಲ್ಪಿಡಿದು ನಾನೆಂದುದೆನಿಸುವೆನು ||
ಎಂದು ನಾನಾ ನಯದಿನಾಂತೊ ಱೆ | ವಂದವನು ಮಿಗೆ ಕೇಳ್ದು ಪರಮಾ |
ನಂದವೆಯಿದಿಮದೀಯ ಪಿತೃವೆಂತೆಂದ ನೆಲೆನೃಪತಿ || ೧೬ ||

ಮಗಳೆ ನೀಂ ತಾಯಾದೆನೆನಗೀ | ಸುಗುಣದಿಂ ಕೇಳಕ್ಕನಿಂ ದೀ |
ಕ್ಷೆಗೆ ಮೊಗಸಿದುದ ಲೇಸುನಾಂ ಜಿನದೀಕ್ಷೆಗೊಂಬುದಕೆ ||
ಬಗೆದಿಹೆನು ಸಂತಾನವೆನಗಿಂ | ತೊಗೆದುದಿಲ್ಲದಱಿಂದೆ ನೀನೆಲೆ |
ಸುಗಣಿಮಕ್ಕಳ ಪಡೆದು ಕೊಳು ಬಳಿಕ ದೀಕ್ಷೆಯನು || ೧೭ ||

ಎಂದು ಮಾತನು ನನ್ನಿಗೊಳಿಸಿದೆ | ತಂದೆಯೆಂದುದ ಮೀರಬಾರದು |
ಎಂದು ಸುಚರಿತ್ರಕ್ಕೆ ಪ್ರತಿಕೂಲರು ವಿಯಚ್ಚರರು ||
ಎಂದು ಭೂಚರ ರಾಯರೊಳ್ಪಿದ | ರೆಂದು ಭಾಷೆಯ ಕೊಂಡುಹುದುವಹೆ |
ನೆಂದು ನಾನರಸುತ್ತ ಬಂದೆನು ಶಾಂತ ಭೂಪಾಲ || ೧೮ ||

ನಿನ್ನ ಕುಲವನು ನಿನ್ನ ರೂಪನು | ನಿನ್ನ ಸುಚರಿತ್ರವನು ಕೇಳ್ದಾಂ |
ನಿನ್ನನೇ ಮನ ಬಯಸಿ ಬಂದೀಕೃತಕವೊಡ್ಡಿದೆನು |
ನನ್ನಿಯೆನಎ ಕೇಳ್ದೊಸೆದು ಕೂಪದ | ರನ್ನದೊಡವದು ತಕ್ಕ ಬಾಣದಿ |
ಸನ್ನುತನು ಪುಂಖಾನುಪುಂಖದುಳೆಚ್ಚುತೆಗೆದಿತ್ತ || ೧೯ ||

ಕುಡೆ ಖಗನ ಮಗಳೆಂದಳಿಂತಾಂ | ಪಡೆದ ಮಕ್ಕಳನಮರನದಿಯೊಳು |
ಬಿಡುವುದಕೆ ಕಡೆಯಲ್ಲಿ ನಾಂ ದೀಕ್ಷೆಯನು ಕೊಂಬುದಕೆ ||

ಕೊಡುವೊಡಂಬಡಿಕೆಯನೆನುತಲದ | ಪಡೆದು ಮತ್ತಿಂತೆಂದಳೆಲೆ ಕೊಡೆ |
ಗೊಡೆಯನೀನೀ ದಿನದೊಳೀ ಪೊತ್ತಿನಲಿ ವಿಭವದಲಿ || ೧೦ ||

ಗಂಗೆಯೇಳೌ ವನದೊಳಿರು ನಿನ | ಗಂಗೈಸಿ ವೋಲೀತಹೆನೆನುತಲಾ |
ಭೃಂಗಕುಂತಳೆ ಹೋಗಿ ತಂದೆಗಿದೆಲ್ಲವೆನು ತಿಳುಪಿ |
ಪಿಂಗದಾ ಲಕ್ಷ್ಮೀಪತಿಯು ಪೇ | ಳ್ದಂಗದಿಂದಾ ಕಾಲದೊಳು ಸುರ |
ಗಂಗೆಯೊಳು ಚೆಲುವಾಗಿ ಬಂದಳು ಜನವು ಬೆರಗಾಗೆ || ೧೧ ||

ಕಳಸ ಕನ್ನಡಿ ಕೊಡೆ ಗುಡಿಗಳ | ಗ್ಗಳಿಪ ಮಂಗಳ ವಾದ್ಯ ರಭಸದಿ |
ನಿಳೆನೆಚೆಯನೆಲ್ಲರು ಬೆರಸಿಯಿದಿರ್ಗೊಂಡು ಕರೆದಿರಲು ||
ಇಳೆಯೊಳಿನ್ನುಂ ಗಂಗೆ ಬಹಳೆಂ | ದಳಿ ಜನವು ಇದಿರ್ಗೊಳ್ವುದಂದಾ |
ಯೆಳೆಯಳಿಗೆ ಗಂಗಾಭಿಧಾನವು ಬಂದುದದಚೆಂದ || ೧೨ ||

ಅಂತು ಬಂದಾ ಗಂಗೆಯೊಡನಾ | ಶಾಂತ ನೃಪವರ ಮದುವೆ ನಿಂದು ಚೆ |
ಕಂತು ಕೇಳಿಯೊಳಿರುತಿರುತ ಕ್ರಮದೆಂಟು ಮಕ್ಕಳನು ||
ಶಾಂತೆ ಪಡೆದಾ ಗಂಗೆಯೊಳು ಬಿ | ಟ್ಟಂತೆ ತೋ ಚೆಸಿ ವಿಜ್ಜೆಗಳ ಕೈ |
ಗಾಂತು ಕೊಟ್ಟಾ ಪಿತೃಮಹೀಧರ ಖಗಗೆ ಕಳುಹಿದಳು || ೧೩ ||

ಮತ್ತಮೊಂಬತ್ತನೆಯ ಕಂದನ | ಪೆತ್ತು ಸತಿಯಾ ತೆಱದಿ ಬಿಡೆ ಭಯ |
ಮುತ್ತು ಶಿಶುವಿರೆ ಕಂಡು ಮರಳಲ್ಲಿಂದ ತಂದೋವೆ ||
ಪೆತ್ತನಾ ವಿಭು ಭೀಷ್ಮನಾಮವ | ನತ್ತ ಗಾಂಗೇಯಾಭಿಧಾನವು |
ಪತ್ತಿದುದು ಗಂಗಾತನೂಭವನಾದ ಕಾರಣದಿ || ೧೪ ||

ಬೆಳೆಬೆಳೆದು ಗಾಂಗೇಯ ನೃಪದೋ | ರ್ವ್ವಳಪರಾಕ್ರಮಿಯಾಗಿರಲು ರತಿ |
ಯಳಿದು ಗಂಗಾದೇವಿ ಭೀಷ್ಮಗೆ ತನ್ನ ಬಿಜ್ಜೆಗಳ ||
ಕಲಿಸಿ ಕೊಟ್ಟಾ ಶಾಂತನನುಮತ | ದೊಳು ಜಿನೋಕ್ತತಪಂ ಬಡೆದು ತನು
ವುಳಿದುವಚ್ಯುತಕಲ್ಪದೊಳು ಸಾಮಾನಿಕಾಮರನು || ೧೫ ||

ಎನಿಸಿ ಜನಿಸಿ ಪೊದಳ್ದ ಸುಖಗಳ | ನನುಭವಿಸುತಿರಲತ್ತಲಿತ್ತಲು |
ವಿನುತ ಶಾಂತನದೊಂದು ದಿನ ಮಂದಾಕಿನಿಗೆ ಬಂದು ||
ಜನಪ ಋಷಿಯಾಶ್ರಮವನೀಕ್ಷಿಸು | ವನಿತಚೊಳಗಲ್ಲಿರ್ದ ಚಂದ್ರಾ |
ನನೆಯ ಕನ್ನೆಯ ಚೆನ್ನೆಯೋರ್ವಳ ಕಂಡು ಮನಸೋತ || ೧೬ ||

ಬಟ್ಟಮೊಲೆಗಳ ಕೊರ್ವ್ವುಗಳ ನೇ | ರ್ಪಟ್ಟ ನಳಿತೋಳೊಲಹ ಸೊಬಗಳ |
ವಟ್ಟ ಜವ್ವನ ಮದದ ಹೊಗರನು ಮಂದಗತಿಗಳನು |

ನೆಟ್ಟನಾಂತ ತಳೋದರಿಯನುಜೆ | ದಿಟ್ಟಿಗೊಂಡವನಂದು ಕಾವನ |
ಪಟ್ಟದಾನೆಯ ಸಿಂಗರಿಸಿ ನಿಂದುದೊ ದಿಟದಿನೆಂದ || ೧೭ ||

ಅಱೆದು ವಸುವೆಂಬ ತಾಪಸ | ನುಱುವ ಮಗಳೆಂಬುದನು ವಿಧುಕುಲ |
ದೆಱೆಯ ಶಾಂತನು ಬೇಡಿಯಟ್ಟಿದೊಡಂದು ತಾಪಸನು ||
ಮಿಱುಪ ಹೊಸ ಜವ್ವನ ಮಗಳ ನಾ | ನಱುದು ಮುದುಪಗೆ ಕೊಡೆನೆನಿಪ ಬೇ |
ಸಱ ನುಡಿಯ ಕೇಳ್ದಾ ವಿರಹತಾಪದಲಿ ಮಱುಗುತಿರೆ || ೧೮ ||

ಸುರನದಿಯ ಸುತನಂದು ತಂದೆಯ | ವಿರಹ ವೇದನೆಯಱಿದು ಬಳಿಕಾ |
ಗೊರವನಲ್ಲಿಗೆ ಪೋಗಿ ಮಜ್ಜನಕಂಗೆ ಋಷಿ ನಿಮ್ಮ ||
ವರಸುತೆಯ ಕೊಡಿಮೆನಲು ನೀನೀ | ದೊರೆಯ ಮಗನಿರೆ ಕೊಟ್ಟ ಮಗಳಿಗೆ |
ಪೊರೆದ ಪುತ್ರರು ನಿನಗೆ ಕಿಂಕರರಾಗದಿರರೆಂದ || ೧೯ ||

ಎಂದ ಮಾತಿಗೆ ಭೀಷ್ಮನಕಟೀ | ಯೊಂದು ಜನ್ಮಕೆ ಮದುವೆಯಾದಡೆ |
ತಂದೆಯಾಣೆ ಮುನೀಶ ಕೊಡು ನಿಜಸುತೆಯ ಮತ್ಪಿತೃಗೆ ||
ಎಂದ ಪೂಣ್ಕೆಗೆ ಬೆದಱೆ ನೃಪತಪ | ದೊಂದದಿರು ಕೈವಿಡಿದು ಈಕೆಯ |
ಕಂದನಿಂ ರಾಜ್ಯವನು ನಡೆಯಿಸಿಕೊಂಡಿಹುದು ಎಂದ || ೨೦ ||

ನಿಲೆ ನುಡಿಯೆ ಗಾಂಗೇಯಗಾ ಋಷಿ | ಬಳಿಕ ತನುಜೆಯ ಸತ್ಯವತಿಯನು |
ಚಲಿಸದಾ ಶಾಂತಂಗೆ ಕುಡೆ ಸುಖದಿಂದಿರುತ ಸುಖದಿಂ ||
ಲಲನೆ ಪೆತ್ತಳು ಚಿತ್ರವೀರ್ಯನ | ನಲಘು ಭುಜದ ವಿಚಿತ್ರವೀರ್ಯನ |
ನಿಳೆಯೊಳತಿ ವಿಖ್ಯಾತರೀರ್ವರು ಬೆಳೆಯೆ ಶಾಂತ ನೃಪ || ೨೧ ||

ನನ್ನ ದೆಸೆಯಿಂ ತನುಜನಂಗಜ | ಸನ್ನಿಭಯ ವನಿತೆಯರ ತೊಱೆದನು |
ಇನ್ನೆನಗೆ ಸಾಕೆಂದು ರಾಜ್ಯ ಶ್ರೀವಿಮುಖನಾಗಿ ||
ಸನ್ನುತನು ಸಪ್ತಮಗುಣ ಸ್ಥಾ | ನೋನ್ನತಿಯನಾಂತಿರೆ ನದೀಸುತ |
ಸನ್ನಿಹಿತ ಸಾಮ್ರಾಜ್ಯ ಪದವನು ಚಿತ್ರವೀರ್ಯಂಗೆ || ೨೨ ||

ಕೊಟ್ಟು ಕೊಡೆ ವಿಚಿತ್ರವೀರ್ಯಂಗೆ | ಕೊಟ್ಟು ಯುವರಾಜ್ಯವನು ಕಾಂಕ್ಷೆಯ |
ಬಿಟ್ಟು ಅನುಜನ ಬಿಡದರಸುಗೈಸುತ್ತಲಾ ಭೀಷ್ಮ ||
ನೆಟ್ಟನಿರೆಯಂಬಾಲೆಯಂಬೆ ಸು | ದಿಟ್ಟೆಯಂಬಿಕೆಯೆಂಬ ಪೆಸರಳ |
ವಟ್ಟ ರಾಜಕುಮಾರಿತಿಯವರನು ವಿಚಿತ್ರವೀರ್ಯಂಗೆ || ೨೩ ||

ಪರಿಣಯವನುಂ ಮಾಡಿಸಿದನಾ | ಸುರನದಿಯ ಸುತನಾತನಾ ಮೂ |
ವರೊಳು ಪಿರಿದು ವಿಚಿತ್ರರತದಿಂ ಚಿತ್ರವೀರ್ಯನೃಪ ||

ಇರೆಲುವಂಬಾಲೆಗುಱೆಪುಟ್ಟುಂ | ಗುರುಡನಾ ಧೃತರಾಷ್ಟ್ರನಂಬೆಗೆ |
ವರತನೂಭವ ಪಾಂಡುವಂಬಿಕೆಗಾ ವಿದುರನಾದ || ೩೪ ||

ಪುತ್ರರಿಂತುದಯಿಸೆ ಬಳಿಕ್ಕಾ | ಚಿತ್ರವೀರ್ಯ ಕ್ಷಯದಿ ಮಡಿಯೆ ವಿ |
ಚಿತ್ರವೀರ್ಯನು ಪರನೃಪನ ಸಂಗ್ರಾಮದಿಂದಳಿಯೆ ||
ಧಾತ್ರಿಯೊಳಗಪ್ರಮತಿಮರೆಱೆಯನ | ಪುತ್ರರಾ ಕುರುವಂಶ ಗಗನ ಸು |
ಮಿತ್ರರಮಲಚರಿತ್ರರೆಂದಱುಹಿದನು ವಿಸ್ತರದಿ || ೩೫ ||

ಅರಸನಂಧಕವೃಷ್ಟಿ ಹರ್ಷೋ | ತ್ಕರುಷನಾದನು ಮಂತ್ರಿ ವಚನದಿ |
ಕುರುಕುಲಾಗ್ರಣಿಗಳಿಗೆ ಹೆಣ್ಣೀವುದಕೆ ಮಂತಣವೆ |
ಹಿರಿಯನಾರವರೊಳಗೆನಲು ಧರೆ | ಗರುಹನಾ ಧೃತರಾಷ್ಟ್ರನೆನೆ ಕೇ |
ಳ್ದರಸನಂಧಕನಾದೊಡಾಗಲಿ ಸಿರಿಯೆಕಣ್ಣೆಂದ || ೩೬ ||

ಅನುಜ ನರಪತಿ ವೃಷ್ಣಿಯನು ತ | ಜ್ಜನಪನಂಧಕ ವೃಷ್ಣಿ ಕರೆಯಿಸಿ |
ಅನುಮತದಿ ಗಾಂಧಾರಿಯನು ಧೃತರಾಷ್ಟ್ರಗಿತ್ತಪೆವು ||
ಎನುತಲುಡುಗೊ ಱೆಗೊಟ್ಟು ಮಂತ್ರಿಗ | ಳನು ಕಳುಪೆ ಬೀಳ್ಕೊಂಡವರು ಹ |
ಸ್ತಿನಪುರವನೈತಂದು ಭೀಷ್ಮರ ಕಂಡು ಶೌರ್ಯವನು || ೩೭ ||

ಬಿಚ್ಚಳಿಸಿದೊಡೆ ಹರುಷದಿಂ ನೃಪ | ಮೆಚ್ಚಿ ವಿಭವೋತ್ಸವದಿ ದೆಸೆಯನ |
ಮರ್ಚೆ ಮಂಗಳತೂರ್ಯರವ ಮಧುರಾಪುರಕೆ ಪೋಗಿ |
ಬೊಚ್ಚದೀ ಲಗ್ನದೊಳು ಸದುಬುಧ | ರುಚ್ಚರಿಪ ಮಂಗಲವಚದಿ ಮೈ |
ವೆಚ್ಚೆ ಧೃತರಾಷ್ಟ್ರಂಗೆ ಗಾಂಧಾರಿಗೆ ಸುಖಮಿರ್ದರವರತ್ತ || ೩೮ ||

ಹಸ್ತಿಕೋಟಿಘಟಾ ಪ್ರಭಾವದ | ಹಸ್ತಿನಾಪುರದೊಳಗೆ ಗುಣ ವಿ |
ನೃಸ್ತಚಿತ್ತನು ಬಾಂದೊಱೆಯಮಗನಿರುತಲೊಂದು ದಿನ ||
ಸಪ್ತಪಾಂಡುಗೆ ಕುಂತಿದೇವಿಯ | ನಸ್ತರಿಪು ಬೇಡಟ್ಟಿ ತತ್ಪಿತೃ |
ವಿಸ್ತರದ ಪಾಂಡುಪ್ರರೋಗಿಗೆ ಕುಡುವುದೆಂತೆನಲು || ೪೦ ||

ಬಂದರವರಾ ಸೂರ್ಯಪುರದಿಂ | ದಂದುವಂಧಕವೃಷ್ಣಿ ತಮಗೇ |
ನೆಂದ ತೆಱನನು ಮಂತ್ರಿಗಳು ಭೀಷ್ಮಂಗೆ ಬಿನ್ನೈಸೆ ||
ಇಂದುವದನೆಯ ಕುಂತಿದೇವಿಯ | ಸೌಂದರತೆಯನು ತುಂಬು ಜವ್ವನ |
ದಂದವನು ತಾಂ ಕೇಳುತಿರ್ದನು ಪಾಂಡುಸುಕುಮಾರ || ೪೧ ||

ಕುಂತಿದೇವಿಯ ರೂಪು ಮನಸಿಜ | ಕೊಂತದಂದದಿ ಪಾಂಡುರಾಯನ |
ಸ್ವಾಂತವನು ನಡೆನೋಯನೊಂದು ಮನೋಜತಾಪದಲಿ ||

ಕಾಂತತನುರುಚಿ ಬೆಂದು ಬೂದಿಯ | ಕಾಂತಿಯೆನೆ ಕಣ್ಗೆಸೆಯೆ ಬಳಿಕಾ |
ಕಾಂತು ಪಾಂಡುವ್ಯಾಧಿಯಿಂ ಸಾರ್ಥಕವೆಸರನಾಂತ || ೪೨ ||

ಮಾಯ್ದೊ ಪಾಂಡುನೃಪಂಗೆ ಹೂವಿನ | ಕೈದುಕಾಱನ ಬೇಟೆಯಿಂ ಚೆ |
ನ್ನೈದಿಲರಗೆ ಱಿನೀರತಂಬೆಲರಿಂಗದಿರು ಬೇಂಕೆ ||
ಎಯ್ದೆ ಮುಸುಕಿದ ಭೂಮಿಯಾಗಸ | ಕಾಯ್ದೆ ತೇಜೋಭೂತವಲ್ಲದೆ |
ಆಯ್ದು ಭುತವದಿಲ್ಲೆನಿಸೆ ಪೊರಳಿದನು ವಿರಹದಲಿ || ೪೩ ||

ಪಾಂಡುಭೂವರನಿಂತು ವನವನೆ | ಪುಂಡರೀಕಕ್ಕಿಕ್ಕೆ ಎಂಬ ವೊ |
ಲಂಡಲೆವ ಕಾಮಾಗ್ನಿಯಿಂ ಬನದೊಳಗೆ ತೊಳಲುತಿರೆ ||
ಚಂಡಕಿರಣವು ಸಲಲಱಿಯದು ಱಿ | ಮಂಡಳಿಸದಾ ಬನದ ಸಿರಿಯನು |
ಕಂಡನತ್ತೊಸೆದೊಂದು ದಿನವಾ ವಜ್ರಮಾಳಿ ಖಗ || ೪೪ ||

ವರಮನೋಹರಿಯೆಂಬ ನಲ್ಲಳು | ವೆರಸಿ ಬಂದು ವಸಂತವಾಸಲೆ |
ಸರ ಬನದೊಳೆಳೆದಳಿರ ಮಂಟಪದರಳ ಪಸೆಯೊಳಗೆ ||
ಸುರತ ಸುಖರಸವುಂಡು ತನ್ನಯ | ಬೆರಳಮಣಿಮುದ್ರಿಕೆಯನಾ ಖೇ |
ಚರನು ಮಱೆದೀಡಾಡಿ ಪೋಪುದುವಿತ್ತ ಪಾಂಡುನೃಪ || ೪೫ ||

ತೊಳಲುತಾಗಳು ಬಂದು ನಱುದಂ | ಬುಲದ ಗಂಧದ ಕತ್ತುರಿಯ ಪರಿ |
ಮಳವ ನೆರಳುಱಿ ತೋ ಱಿ ಕಂಡನು ಕಮ್ಮಲರ ಹಸೆಯ ||
ಕೆಲದೊಳಗೆ ಪೂಗೋಲ ಘಾಯದಿ | ಬಳೆದೆದೆಯ ವಿರಹಾಗ್ನಿಸಿಡಿಯು |
ಚ್ಚಳಿಸಿ ಬಿರ್ದಂತಿರ್ದ ಮಣಿಮುದ್ರಿಕೆಯನವನೀಶ || ೪೬ ||

ತೆಗೆದುಕೊಂಡುಂಗುರದ ರನ್ನದ | ಸುಗುಣವನು ನೆಱೆ ನೋಡುತಿರಲಾ |
ಖಗನು ಬೆರಳಿಂ ಕಾಣದದನಱಸುತ್ತಲಳುತಿರಲು |
ಮೊಗವನೋಡುತಲಿಂಗಿತದಿ ನೆ | ಟ್ಟಗೆ ತಿಳಿದು ಖಚರೇಂದ್ರ ನೀನೇಂ |
ಬೆಗಡುಗೊಳದಿರು ಇದೆ ಎನುತ ನೃಪನಿತ್ತನುಂಗುರವ || ೪೭ ||

ಕೊಡಲು ಹರುಷದಿ ವಜ್ರಮಾಳಿಯು | ಪೊಡವಿಪತಿಗತಿ ಮೆಚ್ಚಿ ನೀನಿಂ |
ತಡವಿಯೊಳು ಬಗೆಗೊಟ್ಟು ಬೆಳುಮೊಗವಾಗಿ ಬಡಪಟ್ಟು ||
ಕಡು ಬಿರ್ೈಸಿದೆಯೋತು ಸುರತವ | ಪಡೆಯದೀಪರಿ ನೋವೆಯಕ್ಕೆಂ |
ದೊಡಲಿನೊಳಗಣ ಮಾತನಾ ಭಾವಜ್ಞನಱಿದೆಂದ || ೪೮ ||

ಆದೊಡೆಲೆ ನೃಪ ಕಾಮರೂಪಕ | ಸಾಧನವೆನಿಪ್ಪುಂಗುರವು ನಿ |
ರ್ವಾದದಲಿ ಪಡೆಯಿಷ್ಟಕಾಮವ ನಾಲ್ಕೆರಡು ದಿವಸ ||

ಆದರದಿ ನಿನಗಿರಲೆನುತ ಕೊ | ಟ್ಟಾದಿವಿಜಮಾರ್ಗಕ್ಕೆ ಬೇಗದಿ |
ಪೋದನಿತ್ತರಸಾಯನಿಂ ಬಡೆದಂತೆ ನೃಪನಿರ್ದ || ೪೯ ||

ಮದನನಾಣತಿಗೊಂಡು ಕೊಂತಿಯ | ಮದನಕೇಳಿಗೆ ಪೋಪವೊಲು ರಾ |
ಗದಲಿ ಕುವರನು ಹಸ್ತಿನಾಪುರವೈದಿಯಲ್ಲಿಂದ ||
ಮದನಮುದ್ರಿಕೆಯಾಂತು ಖಗಪೇ | ಳಿದ ಸುಮಂತ್ರವ ಜಪಿಸಿ ಕಡು ಬೇ |
ಗದಿನದೃಶ್ಯದಿ ಬಾಂಬರಿಯೊಳಾ ಸೂರ್ಯಪುರವೈದೆ || ೫೦ ||

ಆಕೆಯಿಹ ಚೆಂಬೊನ್ನಮಾಡಕ | ನೇಕ ಸೊಕ್ಕಾನೆಗಳು ಬಳಸಿಹ |
ವೇಕೆನಲು ಗಂಡೆಂಬನೊಳವತ್ತೈದದಂದದಲಿ ||
ಆಕೆ ನಾಲುಕುನೀರಮಿಂದು ಸ | ಖೀ ಕದಂಬಕದೊಡನೆ ಮೀನಪ |
ತಾಕನರಸಿಯೊಲೆಯಿದೆ ಸಿಂಗರಗೆಯ್ದು ರಾತ್ರಿಯಲಿ || ೫೧ ||

ರಾಗರಸದಿಂ ಹರುಷಗೋಷ್ಠಿಯೊ | ಳಾಗಳಾ ವಧುವಿರಲು ಬಾನಿಂ |
ಬೇಗದಲಿ ಬಂದಾಕೆಯಿಹ ಮೇಗಣ ನೆಲೆಯ ಪೊಕ್ಕು ||
ನೀಗಿದನದೃಶ್ಯತೆಯ ಮಂತ್ರಿಸಿ | ಹೂಗಣೆಯಗೆಣೆರೂಪ ಕಣ್ಗೆನಿ |
ದಾಗೆ ನಿಂದನು ನೃಪತಿ ಸಖಿಯರು ಸೈವೆಱಗುಗೊಳಲು || ೫೨ ||

ಅವಳ ಕಣ್ಣುಗಳವನ ಗಾಡಿಯೊ | ಳವನ ದಿಟ್ಟಿಗಳವಳ ಚೆಲುವಿನೊ |
ಳವೆ ಮಿಸುಕಮಱೆದೆಯ್ದೆ ಸಿಲುಕಿದುದವಳವನ ಮನವು ||
ತವಕದಲಿ ತಳ್ಳಳಿಸಿದವು ಬಳಿ | ಕವಳ ಸಸಿಕಾಂತವು ಸಸಿಯ ಕಂ |
ಡವಯವದಿ ಬೆವರ್ವಂತೆ ರೊಮ್ಮನೆ ಬೆಮರಿ ತಲೆವಾಗೆ || ೫೩ ||

ಸುದತಿಗಾದಾ ಸಾತ್ವಿಕೋದಯ | ದೊದವನ ಱೆದಹ ಕಾರ್ಯವದ ತಾಂ |
ಮೊದಲೊದವೆ ತಪ್ಪೇನು ಕೊಂತಿಯ ಪುಣ್ಯಫಲವೈಸೆ ||
ಮದುರೆಯೊಳು ಗಾಂಧಾರಿದೇವಿಯ | ಮದುವೆಯಲಿ ಈ ಪಾಂಡುಕುವರನ |
ಹದನ ಬಲ್ಲೆವು ಸತಿಯ ಭಾಗ್ಯದಿ ಕಾಮಸಮನಾದ || ೫೪ ||

ಎಂದು ಕೊಂತಿಯ ಪ್ರಾಣ ಸಖಿಯರು | ಬಂದ ಪಾಂಡುಗೆ ಕೊಂತಿ ದೇವಿಗೆ |
ಸಂದಮಲ ಗಂಧರ್ವ ಕಲ್ಯಾಣವನು ಸಲೆ ಮಾಡಿ ||
ಅಂದವರನಾ ರನ್ನ ಮಂಚದೊ | ಳೊಂದಿದೊಳು ಮೃದು ತಲ್ಪದೊಳಗೊಲ |
ವಿಂದಲೊಡಗೂಡಿದರು ಸರಿದರು ಮೆಲ್ಲನಿರದತ್ತ || ೫೫ ||

ಎಸೆವ ಹೊಂಜೆಳೆ ಮೈಗಳೆರಡಱ | ಬೆಸುಗೆ ಸಡಿಲಿದು ಸಕ್ಕರೆಯ ಸವಿ |
ಯೊಸರ್ವ ಚೆಂದುಟಿಯುಣಿಸು ದಣಿಯದು ರೊಮ್ಮನೊಱೆತಪ್ಪ ||

ಬಿಸಿಯ ಬೆಮರಾಱಿದು ಕಡಂಗುವ | ಹಸಿಯ ಮೋಹವು ಹವಣಿಸದು ಮೇ |
ಳಿಸುವ ಪುಳಕವು ನಾಣ್ಬದಿರೆ ಸುಸಿಲುಂಡವರವರೊಲಿದು || ೫೬ ||

ಇಂತು ಸುರತಸುಖಾಂತದೊಳು ಮೊದ | ಲಂತೆ ಬೀಯದ ಬೇಟದಿಂ ವಿ |
ಭ್ರಾಂತರಿರುತಿರೆ ಸಖಿಯರಗಲಿಸೆ ತೊಲಗಿ ಕೊಂತಿಯನು ||
ಕಂತುವಂತಿರ ದೃಶ್ಯತೆಯ ನಿರ | ದಾಂತು ತಾರೆಗೆವಟ್ಟೆಯಲಿ ಬಂ |
ದೆಂ ತಡೆಯದಾ ನೃಪತಿ ನಿಜಪುರದೊಳಿರುತಿರಲು || ೫೭ ||

ಕೊಂತಿಗಾದುದು ಗರ್ಭಕ್ರಮದಿಂ | ಮಂತಣದ ಕೆಳದಿಯರು ಗೂಡದ |
ಲಂತು ನಡೆಯಿಸುತಿರಲು ಮಾಸವು ನೆ ಱೆಯೆ ನೆಱೆಯೆ ||
ಕೊಂತಿಕುವರನ ಪಡೆಯ ಮುನ್ನವೆ | ಚಿಂತಿಸಿಯೆ ಸವೆಯಿಸಿದ ಚೆನ್ನದ |
ಶಾಂತಮಂಜೂಷೆಯೊಳು ಬಾಲನನಿರಿಸಿ ಕೆಲದಲ್ಲಿ || ೫೮ ||

ಸುರಿದು ರನ್ನದ ಪುಂಜವನುಯೀ | ಯರಸು ಮಗಸಿದ ಸೋಮಕುಲಜನು |
ಸುರಿದ ರನ್ನವ ಕೊಂಡುಜತನದಲೋವಲೀ ಮಗನ ||
ಹರುಷದಲಿಯೆಂದದಱ ಕೆಲದಲಿ | ಬರೆದು ಮಂದಸ ಕುಶಲದಲಿ ಸಖಿ |
ಯರು ಜಗುನೆಯೊಳಗಿರಿಸಿ ಬರೆಪೊಯ್ತುತ್ತಲದು ಬೇಗ || ೫೯ ||

ಪರಿದು ಬಹುಮಂದಸನು ಚಂಪಾ | ಪುರದ ದೊರೆಯಂಬಿಗನು ತೆಗೆ ತಂ |
ದಿರದದಱ ಬಾಯ್ದೆಗೆದು ಕಂಡನು ಚೆಲುವ ಕಂದನನು ||
ತರುಣಿ ನಿನಗಿವ ಕಂದನಾಗಲಿ | ಪೊರೆವವೆನುತವೆ ರತ್ನಪುಂಜವ |
ನುರಿಯ ಕಂಡವೊಲೀಕ್ಷಿಸುತ ಬಗೆಬೆದಱೆಯಿಂತೆಂದ || ೬೦ ||

ಉರಿಯನುಗುಳುವ ರನ್ನಪುಂಜವ | ತರುಣತರಣಿಯ ಹೋಲ್ವಶಿಶುವನು |
ಧರಿಸಲಾಪರೆ ಮಡದಿ ಕೇಳಮ್ಮೊಡೆಯ ಸೂರ್ಯಂಗೆ ||
ವರತನೂಭವರಿಲ್ಲ ಕೊಟ್ಟೊಡೆ | ಹರುಷದಿಂದೋವುವರೆನುತ ಚೆ |
ಚ್ಚರದಿ ಕೊಂಡರಸಂಗೆ ಕೊಟ್ಟನು ಸೂತನೋತದನು || ೬೧ ||

ಅರಸ ಸೂರ್ಯನು ತನ್ನ ಹರುಷದಿ | ತೆಱೆಯೆ ಪೊಮ್ಮಂದಸಿನ ಮುಚ್ಚಳ |
ದುರುಶರಧಿಗುಱೆ ಕರ್ಣಧಾರಕನೆಂದಱೆಪುವಂತೆ ||
ಎರಡು ಕಿವಿಗಳ ಪಿಡಿದುಕೊಂಡೊಱ | ಗಿರೆ ಸುಲಕ್ಷಣ ಮೂರ್ತಿಗಂಡಿವ |
ನರಸುಮಗದಿಟ ನರಿಪೆಱೆವದೆಕೆ ಪರಿಯನೇನಂದ || ೬೨ ||

ಚೆನ್ನ ವಲಗೆಯ ನೋಡಿನೋಡಲು | ರನ್ನ ಪುಂಜವ ಕೊಂಡುವಿದು ಕುಲ |
ರನ್ನನನು ಮುದದೋವಲೆಂದಿರೆ ಮುನ್ನ ತನಗುಳ್ಳ ||

ರನ್ನವನು ಆ ರನ್ನವನುಗುಣ | ರನ್ನ ಪಾತ್ರ ತ್ಯಾಗಗೈದುಱ |
ತನ್ನ ಗರ್ಭಜನೆಂದೆ ರಾಧಾದೇವಿಗೊಲಿದಿತ್ತ || ೬೩ ||

ಕರ್ಣಧಾರಕನಾದ ಕತದಿಂ | ಕರ್ಣನೆಂದಾ ಸೂರ್ಯಪೆಸರಿಡೆ |
ಕರ್ಣನಾದನು ರಾಧೆಯಿಂ ರಾಧೇಯನೆನಿಸಿದನು ||
ಕರ್ಣದಲಿ ಪೆತ್ತಳು ಗಡೆಂಬೀ | ದುರ್ಣಯದ ನುಡಿಕೇಳುವವರಿಗೆ |
ಕರ್ಣಶೂಲೆಯನೀಯದಿಹುದೇ ಹುಸಿಯ ಹೊಸಶೂಲ || ೬೪ ||

ಮುನ್ನಣೇಂ ಪೊಲ್ಲಮೆಯೊ ಚಿಂತಾ | ರನ್ನವನು ಹಡೆದಿಡಿಕಿದಂದದಿ |
ಚೆನ್ನಕಂದನ ಪಡೆದು ಬಿಟ್ಟಾನೋವನೆಡೆಗೊತ್ತಿ ||
ಕನ್ನೆವೇಟದಲಾದ ವಿರಹವು | ಹನ್ನೆರಡು ತಿಂಗಳು ತನಕ ಪ್ರ |
ಚ್ಛನ್ನ ತಾಪವಮಿತು ಹೊಱಹೊಮ್ಮಿದುದು ಕೋಮಲೆಯ || ೬೫ ||

ತರುಣಿಯೊಡಲಿನ ಕಾವವೇಂಕೆಯ | ನುರುಹಿಮದು ತಂಗಾಳಿ ಭುಗಿಲೆಂ |
ದುರಿದ ಕಿಚ್ಚಿಗೆ ಕೊಳ್ಳಿಗಳನಿಟ್ಟಂತೆ ಮುಸುಕಿದವು ||
ಅರಳ ಕಣೆಗಳು ಕೂಡೆ ತುಪ್ಪವ | ನೆರೆದವೊಲು ತಿಳಿಜೊನ್ನ ಕಱೆಯಲು |
ಹರಿಣ ಲೋಚನೆ ಕಾಮವೇಂಕೆಯ ಬೊಂಬೆಯೆನಿಸಿದಳು || ೬೬ ||

ಬಳಿಕಲತ್ತಲು ರಾಧೆ ತಾಂ ಪೆ | ತ್ತಳು ವಿಕರ್ಣನ ಕರ್ಣನೊಡನ |
ಗ್ಗಳಿಸಿ ಬೆಳೆಯುತ್ತಿರ್ದನಿತ್ತಲು ಕೊಂತಿಯಾ ತೆಱನ ||
ತಿಳಿದನಂಧಕವೃಷ್ಟಿ ಪಾಂಡುಗೆ | ಘಳಿಲನಾ ಕುಂತಿಯ ಕೊಡುವೆವೆಂ |
ದೊಲಿದು ಹಸ್ತಿನಪುರಕೆ ಬಳಿಯಟ್ಟಿದನು ಮಂತ್ರಿಗಳ || ೬೭ ||

ತಿಳುಹಿಸಿದರಾ ಮಂತ್ರಿಗಳು ಮಂ | ಗಳದ ಕಾರ್ಯವನ ಱಿತು ಕೊಂತಿಯ |
ನೊಲಿದು ಬೇಡಿದೊಡೀಯದಾದದನು ಮಾವನಂದೆನಗೆ ||
ಘಳಿಲನಾ ಕುಂತಿಯನು ಮಾದ್ರಿಯ | ನೊಲಿದು ಕೊಟ್ಟೊಡೆ ತಹೆನೆನಲವ |
ರಿಳೆಯೆಱಿಯನೆಂದಂತೆ ಪಾಣಿಗ್ರಹಣಗೆಯಿಸಿದರು || ೬೮ ||

ಒಂದು ದಿನ ತನುಜರುವೆರಸಿ ಸುಖ | ದಿಂದಿರುತ ಮಂತ್ರಿಗಳ ಯೋಚನೆ |
ಯಿಂದಲಧಿರಾಜ್ಯವನು ಧರಿಸುವೊಡಿತ್ತ ಧೃತರಾಷ್ಟ್ರಾ ||
ಅಂಧಕನು ಪಾಂಡುವೆ ಕನಿಷ್ಟನು | ಚಂದವಲ್ಲೆಂದವನಿಯನು ತಾ |
ನಂದು ಭಾಗೆಯನಿಕ್ಕಿ ಕೊಟ್ಟನು ಸಿಂಧುನಂದನನು || ೬೯ ||

ಕುಡೆಸುಖದಿ ಪಾಂಡುನೃಪಣ್ಣನೊ | ಳಡಸಿದಿಚ್ಛೆಯೊಳಿರುತಲಿತ್ತಲು |
ಮಡದಿಯರೊಳನುರಾಗದಿಂದಿರುತೊಂದು ದಿನ ಕಿಱಿಯ ||

ಮಡದಿಸಹ ವನ ಕೇಳಿಗೆಯಿದಾ | ಕಡೆಯ ನೋಡಲು ಕಾಮಸುಖವನು |
ಪಡೆವುತಿಹ ಹರಿಣವನು ಹರಿಣಿಯನೆಚ್ಚು ಕೆಡಹಿದನು || ೭೦ ||

ಪೊಲ್ಲಕೆಯಿದೆಯಳರಸ ತಪ್ಪೇ | ನಿಲ್ಲದೀ ಜೀವಂಗಳನು ದಯೆ |
ಯಿಲ್ಲದಕಟಾ ಕೊಲುವರೇಯೆನೆ ಮದ್ರಿನೃಪನಂಜಿ ||
ಬಿಲ್ಲ ಬಿಸುಟುಜೆ ನೋವುತುರೆ ವನ | ದಲ್ಲಿಗೇಳ್ತಂದಪರು ವರಜಿನ |
ವಲ್ಲಭರು ಬರೆ ಕಾಣುತೀರ್ವರು ಮುದದಿನೆಱಗಿದರು || ೭೧ ||

ಎಲೆಮುನೀಶ್ವರ ಬೆಸಸು ನನಗ | ಗ್ಗಳದ ಮುನಿಸೇಕಾದುದಾಮೃಗ |
ಗಳೊಳು ನಿರ್ದಯೆಯಿಂದ ಕೊಂದೆನು ನೊಂದೆನೆನೆ ನೃಪತಿ ||
ತಿಳಿವೊಡೆರಳೆಯೆ ನಿನ್ನ ಪಿತೃವಧ | ರೊಳವ ಕೇಳ್ಕೆ ಕುರುಣೆಯೆಂಬುದು |
ಬೆಳೆದ ಗ್ರಾಮವು ವಟುವೆನಿಪ ಹಾರುವನದರೊಳಿಹನು || ೭೨ ||

ಅವನ ಹೆಂಡತಿಯಗ್ಗಿಲೆಯು ನೀ | ನವರ್ಗೆ ಮಧುಕನೆನಿಪ್ಪ ಸುತಮ |
ತ್ತವರ ಮತವನು ಬಿಟ್ಟು ನೀಂ ಜಿನಮತದೊಳೆಸಗುತಲಿ ||
ತವಕಿ ಸೂಳೆ ವಸಂತಮಾಲೆಯೊ | ಳವಿಚಲದಿನಿರೆ ಪಾರ್ವರಿಗಿದಂ |
ಗವೆ ಬಿಡೆನೆನೀಂ ಬಿಡದಿರಲು ನಿಮ್ಮಯ್ಯ ಕೋಪದಲಿ || ೭೩ ||

ಒಂದುದಿನ ನೀನವನೊಡನೆ ರಥ | ದೊಂದಿ ಬನದೊಳು ನಾಣರಿಯದಿರೆ |
ಬಂದು ಕಣ್ಬೊಲನಾಗೆ ನಿಮ್ಮೀರ್ವರನು ಬಾಳಿಂದ ||
ಕೊಂದಡಾ ಸುವ್ರತದ ಫಲದಿಂ | ದಿಂದು ನೀನರಸಾದೆ ವಟುವನು |
ನಂದವಿಪ್ರರು ಕಳೆಯಲಾರ್ತದಿ ಮಡಿದೆರಳೆಯಾದ || ೭೪ ||

ಜನಪ ಕೇಳ್ಕೆ ನಿನಗೆ ಭವಸಂ | ಜನಿತವೈರವು ಅದರ ಮೇಲಾ |
ಯ್ತೆನಲು ಸಂಸಾರಸ್ವರೂಪನರಿದವಧಿ ಬೋಧ ||
ಮುನಿಪರಿಂ ಧರ್ಮವ ತಿಳಿದುನಿರ್ಮ | ಳಿನದ ಮನದಿಂ ನಿಜಪುರಿಗೆ ಬಂ |
ದನುಪಮಿತ ಧರ್ಮವನಖಂಡಿತನಾಗಿ ಮಾಡುತಿರೆ || ೭೫ ||

ತಡೆಯದಚ್ಚುತ ಕಲ್ಪದಿಂ ಚುತಿ | ವಡೆದು ದೇವನು ಬಂದು ಪಾಂಡವ |
ಮಡದಿ ಕೊಂತಿಯ ಗರ್ಭದೊಳು ನಿಲೆ ತುಂಬಿ ನವಮಾಸ ||
ಪಡೆದಳಾ ಶುಭದಿನ ಮುಹೂರ್ತದೊ | ಳುಡುಪತಿಯನೀಂಗಡಲು ಹರುಷದಿ |
ಪಡೆದವೊಲು ವಿಶ್ರುತನನವನೀ ಸ್ತುತನನಾತ್ಮಜನ || ೭೬ ||

ಜಾತಕರ್ಮೋತ್ಸವವನತಿ ವಿ | ಖ್ಯಾತದಲಿ ನೆಱೆಮಾಡಿ ಪಾಂಡು ಮ |
ಹೀತಳಾಧಿಪನಾ ಯುಧಿಷ್ಠರನೆಂದು ಪೆಸರಿಟ್ಟ ||

ಆ ತೆಱರದ ಧರ್ಮವು ನಡೆಯುತಿರ | ಲೋತು ಪುಟ್ಟಿದ ಕತದಿನೆಲ್ಲರು |
ವಾತರುಣನೇ ಧರ್ಮನಂದನನೆಂದುದೊಲವಿಂದ || ೭೭ ||

ಮದವನರೆಬರು ದಾನವೆಂಬವೊ | ಲದಯಯೆಮಗಾಧರ್ಮ ಶಬ್ದವು |
ಪುದಿಯಲಾಧರ್ಮಕ್ಕೆಯಮಪರ್ಯಾಯವನೆಕೊಟ್ಟು ||
ಚದುರರಲ್ಲದ ಲೋಕವಿಂತೆಂ | ಬುದು ಬಳಿಕ್ಕಾ ಧರ್ಮನಂದನ |
ಬಿದಿಗೆಯಿಂದುವಿನಂತೆ ಕ್ರಮದಿಂ ಕಳೆವೆರಸಿ ಬೆಳೆದ || ೭೮ ||

ಮತ್ತಮತ್ತಿತ ಕಲ್ಪದಿಂ ದೇ | ವೋತ್ತಮನು ಬಂದೆಸೆವ ಕೊಂತಿಗೆ |
ಪುತ್ರನಾಗುತ ಮೂಲ ನಕ್ಷತ್ರದೊಳು ಜನಿಸಿದೊಡೆ ||
ಪೆತ್ತ ಚರಮಾಂಗನನು ತಾವೊಯಿ | ದತ್ತ ಭೀಮಪ್ರೇತವನದೊಳ |
ಗಿತ್ತು ಬಂದರು ಕರ್ಮವೇಗ್ಯೆಯದು ಜಗಜ್ಜನವ || ೭೯ ||

ಬಾಲಕನ ಪುಣ್ಯಾಧಿ ದೇವತೆ | ಭೀಳಸುಟ್ಟುಱು ಗಾಳಿ ರೂಪದಿ |
ಬೇಲಿಯಂತಾತನನು ರಕ್ಷಿಸಿಕೊಂಡಿರಲುವಿತ್ತ ||
ಕೇಳಿ ಪಾಂಡುನೃಪಾಲನಾಗಳು | ಕೋಳುಗೊಂಡೆರಳೆವೊಲು ನೊಂದು ಕ |
ರಾಳ ಪಿತೃವನವೆಯಿದಿ ನೋಡಲೆಲರೊಡನೆ || ೮೦ ||

ತಂದು ತನಯನ ಜಾತಕರ್ಮವ | ನಂದು ಮಾಡಿ ಬಳಿಕ್ಕ ನೃಪನೊಲ |
ವಿಂದ ಭೀಮಪ್ರೇತವನವೊಂದಿದ ಕತದಿ ಭೀಮ ||
ಎಂದು ನಿಶಿಯೊಳು ವಾಯುಕಾದುದ | ಱಿಂದ ವಾಯುಕುಮಾರನಾಗಿರ |
ಲೆಂದು ಪೆಸರಿಟ್ಟನು ವಿಧಿತಗುಣನಾಮವಿರಲೆಂದು || ೮೧ ||

ಗಾಳಿಯಾತ್ಮಜ ಭೀಮನೆಂಬರು | ಕೇಳಲಾದುದಿದೊಂದು ಸಟೆಯನು |
ಗಾಳಿಪೆತ್ತೊಡೆ ಪೆಱಲಿ ಅದು ತಾಯಂತೆ ಕಱುವೆಂಬ ||
ಪೇಳಿಕೆಯನೇನ ಱೆಯರೇ ಆ | ಗಾಳಿಮನುಜರ ಹೆತ್ತುದಾದೊಡೆ |
ಕೇಳು ಮುನ್ನೊಂದೆಡೆಯೊಳಲ್ಲದೆ ಕಾಣೆವಿಂದೆತ್ತ || ೮೨ ||

ಅರಸನಿಂದ್ರೋತ್ಸವ ವಿಧಾನವ | ನುರುತರದಿ ಮಾಡಿಸುತಿರಲು ತ |
ತ್ತರುಣಿ ಕೊಂತಿಯ ಗರ್ಭದೊಳಗಾದಿವದ ವರ ದಿವಿಜ ||
ಪೊರೆಯೆ ನವಮಾಸಾಂತ್ಯದೊಳು ಸಂ | ಗರವಿಜಯ ಚರಮಾಂಗನಾದ ಕು |
ವರನ ಪಡೆದಳು ಶುಭ ದಿವಸಲಗ್ನದೊಳು ಕೃತಪುಣ್ಯೆ || ೮೩ ||

ಅಸಮವಿಭವದಿ ಜಾತಕರ್ಮವ | ನೆಸಗಿ ಅರ್ಜುನನೆಂಬ ಪೆಂಪಿನ |
ಪೆಸರನಿಟ್ಟನು ಕೂಡೆಯಿಂದ್ರೋತ್ಸವದೊಳುದಯಿಸಿದ ||

ದೆಸೆಯಿನಿಂದ್ರಾತ್ಮಜ ನೆನಿಪಗುಣ | ವೆಸರನಿಟ್ಟನು ಪಾಂಡುನೃಪನಾ |
ಶಿಶುನಿಜಾಗ್ರಜರೊಡನೆ ಬೀರದ ತಿರುಳೆನಿಸಿ ಬೆಳೆದ || ೮೪ ||

ಇತ್ತ ಮದ್ರಿಯ ಬಸುರೊಳಾ ದಿವಿ | ಜೋತ್ತಮರು ದಿವದಾಯುರಂಬುಧಿ |
ಯುತ್ತರಿಸೆ ಬಂದೀರ್ವರುಂ ನೆಲೆಗೊಳೆ ಸರಾಗದಲಿ ||
ಪೆತ್ತಳಾ ನವಮಾಸ ತುಂಬಲು | ಮತ್ತರಿಪುಗಜ ಪಂಚತುಂಡರ |
ನುತ್ತಮರನಮಳುಗಳನಾ ಭೂವರನ ಕಿರಿಯರಸಿ || ೮೫ ||

ಅವನಿಪತಿಯಾ ಜಾತಕರ್ಮವ | ನವನಿಗುತ್ಸವವಾಗೆಸಗಿ ದಶ |
ದಿವದೊಳೊಪ್ಪುವ ನಕುಲ ಸಹದೇವಾಭಿಧಾನವನು ||
ಸವೆದು ಪರಮ ಜಿನೇಂದ್ರಪೂಜೋ | ತ್ಸವವನಾಶಿಸಿ ತನುಜ ರೈವರೊ |
ಳವಿಚಳದ ಸೌಭಾಗ್ಯಪರನಾಗಿದ್ದನಿರಲಿತ್ತ || ೮೬ ||

ಪಡೆದಳಾ ಧೃತರಾಷ್ಟ್ರರಾಯನ | ಮಡದಿಯಾ ಗಾಂಧಾರಿಭೂತಳ |
ದೊಡೆಯ ದುರ್ಯೋಧನ ನೃಪನ ದುಃಶಾಸನನ ಬಳಿಕ ||
ಪಡೆದಳಾ ದುರ್ಮರ್ಷಣನನು ೞ | ಹಡೆದಳಾ ದುರ್ಧರುಷನಾದಿಯ |
ಪಡೆದಳಾ ನೂರ್ವರನು ದುಸ್ಸಳೆಯೆಂಬಳನು ಕ್ರಮದಿಂ || ೮೭ ||

ಸೊಗಯಿಸುವ ಕಮಳಿನಿಯ ನೂಱೆಸ | ಳುಗಳ ಪಡದಂತಾತ್ಮಜರನಾ |
ಮೃಗನಯನೆ ಗಾಂಧಾರಿ ಪಡೆದಾ ನೂರ್ವರೇಳ್ಗೆಯಲಿ ||
ನೆಗಳ ವಿದ್ಯಾಹೃದ್ಯರಿರುತಿರೆ | ಮಗಳನಾ ದುಶ್ಶಲ್ಯೆಯನು ಪೆಂ |
ಪೊಗೆದ ಸಿಂಧುಮಹೀಶ ಸೈಂಧವಗಿತ್ತನಂಧನೃಪ || ೮೮ ||

ಬಾಲಕೇಳಿಯೊಳಂಧ ನೃಪನಾ | ಬಾಲಕರು ಪಾಂಡವತನೂಜರು |
ಲೀಲೆಯಿಂ[ದಲಿ] ನೂಱುಐದಾಟಗಳನಾಡುತಿರೆ ||
ಮೇಳಿಸಿದ ಮಾತ್ಸರ್ಯವದು ತಾಂ | ಬೂಲಕಾಲದಿನೊಡನೆ ಬಳೆಯಲು |
ಬಾಲರನು ಭೀಷ್ಮಾಂಧನೃಪ ರಂಜಿಸಿ ನಡೆಸುತಿಹರು || ೮೯ ||

|| ಅಂತು ಸಂಧಿ ೧೨ಕ್ಕಂ ಮಂಗಳಮಹಾ ||

**ಸಂಧಿ ೧೩**

ಸುಪ್ರತಿಷ್ಠ ಮುನೀಂದ್ರರಲ್ಲಿ ಜ | ಗ ಪ್ರಸಿದ್ಧನು ತನ್ನ ಭವವಸು |
ತಪ್ರವೇಕರಭವ ಪ್ರವೇಕರ ಭವವನಂದಕವೃಷ್ಣಿ ಕೇಳಿದನು || ಪಲ್ಲ ||

ಕೇಳಲೇ ಮಾಗಧ ಧರಿತ್ರೀ | ಪಾಲ ಅಂಧಕವೃಷ್ಟಿ ನೃಪತಿ ವಿ |
ಶಾಲ ಸುಖನಿರೆ ಗಂಧಮಾದನ ಗಿರಿಯ ಶಿಖರದಲಿ ||
ಕಾಲಹರನಾಯೋಗಿ ಯೋಗದಿ | ಮೇಳಿಸಿರಲಾ ಸುಪ್ರತಿಷ್ಠರು |
ಪೇಳಲೇನಾ ಜ್ಯೋತಿರಮರ ಸುದರುಶನನು ತನ್ನ || ೧ ||

ಲೀಲೆಯಿಂತೊಳಲುತಿರಲಲ್ಲಿಯೆ | ಕೀಲಿಸಿತು ಸುವಿಮಾನವಾಗಳು |
ನೂಲದಿಳೆಗಿಳಿತಂದು ಕಂಡತಿ ಕೋಪದಿಂದಾತ ||
ವ್ಯಾಲತರ ಗೋರೋಪಸರ್ಗವು | ಪೇಳಲೇನೆಸಗಿದೊಡಚಳಗೆ ವಿ |
ಶಾಲ ಕೇವಲ ಬೋಧವುದಯಿಸಿ ತಾಮುನೀಂದ್ರರಿಗೆ || ೨ ||

ಉದಯಿಸಲು ಕೇವಲ ಸುಪೂಜೆಗೆ | ತ್ರಿದಶಪತಿ ಸಪ್ತಾಂಗ ಸೈನಿಕ |
ಪದವಿಯಲಿ ಬರಲಿತ್ತಲಂಧಕವೃಷ್ಟಿಯುಂ ತನ್ನ ||
ಪದಪಿನಿಂ ಸತಿಸುತರ ಸಹ ಸ | ಮ್ಮುದದಿ ಬಂದಾ ಜಿನರ ಬಲಗೊಂ |
ಡೊದವಿದತಿ ಭಕ್ತಿಯಲಿ ಪೂಜಿಸಿ ನುತಿಸಿ ವಂದಿಸಿದ || ೩ ||

ಬಳಿಕ ತಂತಂ……. | … … ಲು ಆತನೆ ಸುದರುಶನ |
ನಳವಿಗಳಿದತಿಭಕ್ತಿಯಿಂ ಬಂದಳ್ತಿಯಿಂದೆಱಗಿ ||
ಮಲರಹಿತ ಜಯ ಜಯ ಮಹಾಗುಣ | ನಿಳಯ ಜಯ ಜಯ ದೇವ ಪತಿನತ |
ಚಲನ ಜಯ ಜಯ ಸುಪ್ರತಿಷ್ಠನೆ ಜಯಜಯೆನುತಿರ್ದ || ೪ ||

ಎಂದೊಡಂಧಕವೃಷ್ಣಿ ಕಂಡು ಜಿ | ನೇಂದ್ರ ಬೆಸಸಿ ಜ್ಯೋತಿರಮರನು |
ಬಂದು ಘೋರತರೋಪಸರ್ಗವನೇಕೆ ಮಾಡಿದನು ||
ಇಂದು ತಾನೀಗಳೆ ನಿಮಗೆ ಕೂ | ರ್ತಂದವೇನೆನೆ ತನ್ಮುನೀಶ್ವರ |
ರೆಂದರೆಲೆ ನೃಪ ನವಗವನೆ ಪರಮೋಪಕಾರಿಯಲ || ೫ ||

ಕನಕ ಪಾಷಾಣವನು ಪೀಡಿಸಿ | ಕನಕವನೆ ಮಾಡಿದೊಡವನೆ ನಿ |
ಷ್ಠನೆ ಅದನು ಕೇಳರಸಯಿತ್ತ ಕಳಿಂಗ ವಿಷಯದೊಳು ||

ವಿನುತ ಕಾಂಚೀಪುರದೊಳಿಹ ಪರ | ದನು ಸುದತ್ತನು ಸೂರದತ್ತನು
ಧನವಗಳಿಸುವ ಬುದ್ಧಿಯಿಂದವರೀರ್ವರೊಂದಾಗಿ || ೬ ||

ದೆಸೆದೆಸೆಗೆ ಪರದಾಡೆ ಗಳಿಸಿದ | ವಸುವೆರಸಿ ನಿಜಪುರವನೈತರು |
ತಸುಗೆ ವನದೊಳು ನಿಂದು ಸುಂಕವ ತೆಱುವೊಡು ಱೆ ಬೆದಱೆ ||
ಉಸುರ ಬಿಡಲಾರದೆ ಬಳಿಕ್ಕವ | ರಸುವ ಬಿಡುವಂತಾದನವನಿ |
ರ್ವಿಸುವ ಮೆಳೆಗಳ ಹೊದಱಳಡಗಿಸಿ ಹೊಕ್ಕರಾಲಯವ || ೭ ||

ಪುರವನವರತ್ತೈದಲಿತ್ತಾ | ಪುರದ ಶೌಂಡಿಕನೋರ್ವ ಮದ್ಯವ |
ಪಿರಿದು ಪೆಚ್ಚಿಪ ಸೊಕ್ಕು ಮದ್ದುಗಳರಸುತಾವನಕೆ ||
ಇರದೆ ಬಂದಾ ನಾರು ಬೇರನು | ಬರದಿನಗಳುತಲವರು ಮಡಗಿದ |
ವರರತುನ ಧನಗಳನು ಕಂಡವನೆತ್ತಿಕೊಂಡೊಯ್ಯೆ || ೮ ||

ಸೂರದತ್ತ ಸುದತ್ತರಾ ಕಾಂ | ತಾರದೊಳು ಪೂಳ್ದೊಡವೆಗಾಣದೆ |
ಭೋರೆನಲು ಬಿಸುಸುಯ್ದಡವಿ ಘೀಳಿಡಲು ಗೋಳಿಟ್ಟು ||
ಘೋರ ರೌದ್ರವನೆತ್ತಿಕೊಂಡವಿ | ಚಾರಿಗಳು ತಾಂ ತಮ್ಮನಂಬದೆ |
ಮಾರಿಮಸಗಿದ ತೆಱದಿನೀರ್ವರು ನೀನು ತಾನೆಂದು || ೯ ||

ಬಡಿಗಳಿಂ ಬಡಿದಾಡಿ ಮಂಡೆಗ | ಳೊಡೆದು ಕೈಕಾಲ್ಮುರಿದು ಭೋಂಕನೆ |
ಮಡಿದು ಮೊದಲಿನ ನರಕಕೀರ್ವರುಮಿಳಿದು ಹಣೆದಾಡಿ ||
ಅಡಸಿದಾಯುವ ಕಡಲನೊಂದನು | ಕಡಿದು ಬಂದೀ ಭೂಮಿಯೊಳು ಬೆಂ |
ಗೊಡದ ತಗರೆರಡಾಗಿ ತಮ್ಮೊಳು ವೈರದಿಂ ಕಾದಿ || ೧೦ ||

ಅಳಿದು ಗಂಗಾತೀರದಲಿ ಕಡು | ಬೆಳೆದ ಗೂಳಿಗಳಾಗಿ ಪೊರ್ದೊಡ |
ನಳಿದು ಸಮ್ಮೇದಾದ್ರಿಯೊಳು ಕೋಡಗಗಳೆರಡಾಗಿ ||
ಸಿಲೆಯೊಳಿರ್ದಿನಿತುದಕಕಾಗಿಯೆ | ಮುಳಿದು ತಮ್ಮೊಳು ಕಾದಿ ಗಾಯದ |
ಲಳಿದುದೊಂದು ಬಳಿಕ್ಕವಾನರನೊಂದು ಗಾಯದಲಿ || ೧೧ ||

ಮಿಗೆ ಹೊರಳುತಿರೆ ಸುರಗುರುವು [ತಾಂ] | ....................... |
ಗಗನದಿಂದಿಳಿತಂದು ಕಪಿಯಾಸನ್ನ ಭವ್ಯತೆಯ ||
ಒಗೆದವಧಿಯಿಂದರಿತು ತಜ್ಜೀ | ವಗೆ ಅಣುವ್ರತವಿತ್ತು ಉಣಿಸೊಡ |
ಲುಗಳ ತೊಱೆಯಿಸಿ ಪಂಚಮಂತ್ರ ದಯೆಗೆಯಿದು ಹೋಗೆ || ೧೨ ||

ಅದನೆ ಪಿಡಿದಾ ಕಪಿಯಳಿದು ತಾಂ | ಮೊದಲ ಸ್ವರ್ಗದೊಳುದಿಸಿ ಚಿತ್ರಾಂ |
ಗದ ನೆನಿಪ ಸುರನಾದನೆನೆ ಜಿನಮತದೊಳೆಸಗಿದಗೆ ||

ಸದುಗತಿಯದೇನರಿದೆ ಚಿತ್ರಾಂ | ಗದನೆ ಕಡೆಯೊಳು ಬಂದುವೀ ಭರ |
ತದ ವಿನೀತಾಖಂಡದೊಳಗೆ ಕಳಿಂಗ ವಿಷಯದೊಳು || ೧೩ ||

ನೆಗಳ ಕಾಂಚೀಪುರದ ಜಿತಸೇ | ನಗೆ ಸುಭದ್ರೆಗೆ ಪಟ್ಟಮಹಿಷಿಗೆ |
ಮಗ ಸುದಾತ್ತ ಸಮುದ್ರವಿಜಯ ಸುಮಂಡಲೇಶ್ವರನು ||
ಸುಗುಣಿ ತಾನಾಗಿರ್ದುಕಾರ್ಬರೆ | ನೆಗೆದ ಮೊಳಗಿನ ಧನಿಗೆ ನೆರೆದ |
ಚ್ಚುಗದಿ ಬನದೊಳು ಪೊರುವ ಶಾಖಾಮೃಗಗಳನು ಕಂಡ || ೧೪ ||

ನೋಡಲೊಡನೆ ಭವಸ್ಮರಣೆ ಮಿಗೆ | ಜೋಡಿಸಲು ಭವವ ಱಿದು ತೊಱೆದೀ |
ಡಾಡಿ ರಾಜ್ಯವನೆಯಿದೆ ಜಿನದೀಕ್ಷೆಯ ಧರಿಸಿ ನಡೆದು ||
ಕೂಡೆ ಸುಸಮಾಧಿಯಲಿ ಮುಡುಪಿದ | ರಾಡಲೇನಹಮಿಂದ್ರನಾದರು |
ರೂಢಿಯಿಪ್ಪತ್ತೆಂಟುಕಡಲಾಯುವ ಸುಖದಿನುಂಡು || ೧೫ ||

ಬಂದು ಪೌದನಪುರದ ಸುಸ್ಥಿರ | ನೆಂದೆನಿಪ ಭೂಪನ ಮಡದಿ ಪೆಸ |
ರಿಂದ ಲಕ್ಷ್ಮಣಿಯವರಿಗಾತ್ಮ ಜ ಸುಪ್ರತಿಷ್ಠನೃಪ ||
ಎಂದೊಗೆದು ವೈರಾಗ್ಯದಲಿ ತಪ | ದೊಂದಿ ಘಾತಿಯನಿಕ್ಕಿದೆವು ನಾ |
ವಂದಿನಾ ಕಲಿ ಸೂರದತ್ತನು ಭೂಪ ಕೇಳೆಂದ || ೧೬ ||

ಹರಣವಳಿದು ಸುದತ್ತಚರ ವಾ | ನರನು ಸಂಸೃತಿಗಡಲ ಸುಳಿಯೊಳು |
ತಿರಿತರುತಲಾ ಸಿಂಧುತೀರದ ಋಷಿ ಮೃಗಾಯಣಗೆ ||
ಗೊರವಿಸತಿ ಸುವಿಶಾಲೆಯೆಂಬಳ | ವರಿಗೆ ಗೌತಮನೆಂಬ ಸುತನಾ |
ಗಿರುತ ತಪವಿರ್ದನಾ ಪಂಚಾಗ್ನಿ ಮಧ್ಯದೊಳು || ೧೭ ||

ಪೊರೆದ ಸುತಪಸ್ಸಿರೆಯೆ ಕರ್ಮವ | ನುರುಪುವುದು ಕಡಿದೋಡಿಹುಳ್ಳಿಯ |
ನುರುಪಿದೊಡೆ ಹುಳು ಸಾವುದಲ್ಲದೆ ಸದೆಯನೆದೆಮೆಚ್ಚಿ ||
ಕರುಣಹೀನನು ಮಡಿದು ಜ್ಯೋತಿ | ಷ್ಕರೊಳು ಸುದರುಶನಾಖ್ಯನಾಗಿ |
ರ್ದಿರುತ ಪೂರ್ವದ ವೈರದಿಂದವನೀತನಿದು ಗೆಯಿದ || ೧೮ ||

ಎನೆ ಸುದರ್ಶನದೇವ ನಿಜಭವ | ವನು ತಿಳಿದು ಸುದರ್ಶನನಾದನು |
ವಿನುತ……………ಕೇಳ್ದು ಕೈಮುಗಿದು ||
ಜಿನಪ ಬೆಸಸೆನ್ನಯ ಭವವನೆಮ | ದೆನಲು ಕೇಳ್ಕೌಶಂಬಿ ವಿಷಯದ |
ವಿನುತ ಸಾಕೇತನವನಾಳ್ವನನಂತವೀರ್ಯ ನೃಪ || ೧೯ ||

ವರದನಿಹನು ಜಿನೇಂದ್ರದತ್ತನು | ಪುರದೊಳಲ್ಲಿ ಸುದಾನ ತತ್ಪರ |
ನುರು ಜಿನೇಶ್ವರ ನಿತ್ಯಪೂಜೆಗೆ ಹತ್ತು ಹೊಂಗಳನು ||

ನಿರುತ ಅಷ್ಟಮಿಗಿಪ್ಪತನುವದ | ಔರಡು ಮಡಿಯನಮಾಸೆಯಳಿಯದ |
ಔರಡು ಮಡಿಯನು ಹುಣ್ಣಿಮೆಯಲಿರುತಿಹನು ಸುಖದಿ || ೨೦ ||

ಒಂದು ದಿವಸ ಜಿನಾರ್ಚನೆಗೆ ಪೋ | ಪಂದು ಕತದಿ ಜಿನೇಂದ್ರದತ್ತನು |
ಯೆಂದಿನೀಪರಿ ದಾನದರ್ಥವ ಲೆಕ್ಕಗಳ ಮಾಡಿ ||
ಅಂದು ಹನ್ನೆರಡಬ್ದತನಕೊಲ | ವಿಂದೆ ಸಖನಹ ರುದ್ರದತ್ತನ |
ಮಂದಿರಕೆ ಕರೆಸಿದನು ಕೊಟ್ಟನು ಕೊಡುತಿರಿಂತೆಂದು || ೨೧ ||

ನಂಬಿವನಯಾತ್ರೆಗೆ ತೆರಳಿದನು | ಬೆಂಬಳಿಯಲಾ ಧನವನಾ ವಿ |
ಪ್ರಂ ಬಯಸಿ ದೇವಸ್ವವೆನ್ನದೆ ದುರ್ವ್ಯಸನಿ ತಿಂದು ||
ತಾಂ ಬಳಿಕ ಹಜೆಗೆಟ್ಟು ಕಳುತಿರ | ಲೆಂಬೆನೆಂತೋ ತಳಾರರವನ |
ಲುಂಬ ಬಿಡ[ದವನ]ಟ್ಟಿದರು ಪಾರ್ವನನು ಕೊಲಲಂಜಿ || ೨೨ ||

ವನವನೈದಿಯುಳೂಕ ಮುಖವೆಂ | ದೆನಿಪ ಶಬರರ ಶಿಬಿರವನು ಪೊ |
ಕ್ಕನು ಕಳನು ಕಂಕಾಳನೆನಿಸುವ ಬೇಡನಾಳಾಗಿ ||
ವಿನುತ ಸಾಕೇತನ ಪುರದ ಗೋ | ವನು ಕವರ್ತೆಗೊಳಲ್ಕವರು ತ |
ನನ್ನೆವಧಿಸಿದರು ಇಳಿದನವನೇಳನೆಯ ನರಕಕ್ಕೆ || ೨೩ ||

ಕುಡಿದನಾ ಮೂವತ್ತ ಮೂರಂ | ಕಡಲಿನಾಯುವ ದುಃಖದಿಂ ಪೆ |
ರ್ಗಡಲಿನಲ್ಲಿ ಮಹಾತಿಮಿಯು ತಾನಾಗಿ ಪಾಪವನು ||
ಪಡೆದಳಿದುದಾಱನೆಯ ನರಕದ | ಕಡಲನಿಪ್ಪತ್ತೆರಡ ದುಃಖದಿ |
ಕುಡಿದು ಬಂದಾ ಪಾರ್ವತಿ ಮಹಾಮತ್ಸ್ಯನಾಗೊಗೆದ || ೨೪ ||

ದುರಿತಭರದಳಿದೈದನೆಯ ಪೆ | ರ್ನರಕದೊಳು ಹದಿನೇಳು ಸಾಗರ |
ಪರಿಮಿತೋಪಮದಾಯುಮಂ ದುಃಖದಿ ಸವಿದು ಬಂದು ||
ಕರಿರಿಪುವು ತಾನಾಗಿ ಗಳಿಸಿದ | ದುರತದಿಂ ಪಂತ ಪ್ರಭೆಯೊಳ |
ಚ್ಚರಿಯ ದುಃಖದೊಳಾಯುಗಡಲೀರೈದನೀಸಿದನು || ೨೫ ||

ದಿಷ್ಟಿ ವಿಷಧರನಾಗಿ ಪಾಪದ | ಬೆಟ್ಟವನು ಹೊತ್ತಿಳಿದು ದುಃಖದಿ |
ನೆಟ್ಟ ನೇಳಬ್ದಿಯನು ಸುವಿದಾವಾಳುಕ ಪ್ರಭೆಯಿಂ ||
ದುಷ್ಟಮತಿ ಶಾರ್ದೂಲನಾಗಿಯೆ | ಹುಟ್ಟಿ ಧರೆಯೊಳು ದುರಿತದೊದವಿಂ |
ಬಿಟ್ಟೊಡಲಲೆರಡನೆಯ ನರಕಕ್ಕಿಳಿದು ದುಃಖದಲಿ || ೨೬ ||

ಕುಡಿದು ಮೂರು ಸಮುದ್ರದಾಯುವ | ನೊಡನೆ ಬಂದಿರದಿತ್ತ ಪರ್ದಾ |
ಗೊಡರಿಸಿದ ದುರಿತದಿ ಮಡಿದು ರತ್ನ ಪ್ರಭೆಯ ಪೊಕ್ಕು ||

ಕಡಲನೊಂದನೆ ದಾಂಟಿ ಬಂದೀ | ಪೊಡವಿಯೊಳ್ ಭೇರುಂಡನಾಗಿ |
ದ್ದೊಡಲ ಕುಯೋನಿಯೊಳು ತ್ರ್ಗಿ ತಿಱಿದು ಬಳಿಕ || ೧೭ ||

ಅಡಸಿದುಪಶಮ ಶೇಷದಿಂದೀ | ಪೊಡವಿಯೊಳು ಹಸ್ತಿನಪುರಕೆ ಜಯ |
ನೊಡೆಯನಾ ನಾಗರಿಯೊಳಗಿಹನಾ ಗೌತಮನ್ವಯನು ||
ಕಡು ಧನಿಕನು ಕಪಿಷ್ಟನಾತನ | ಮಡದಿ ಪೆಸರೊಳಸುಂದರಿಯು ದೊರೆ |
ವೊಡೆದವರಿಗಾ ರುದ್ರದತ್ತ ಚರನು ತನುಜನಾಗಿ || ೧೮ ||

ಜನದಿನಿ ಶ್ರೀಗೌತಮನು ತಾ | ನೆನಿಸಿ ಬೆಳೆವುತ್ತಿರಲು ಜನನೀ |
ಜನಕರೆಲ್ಲರುವಳಿದರಾತನಕರ್ಮವಿನ್ನೆಂತೋ ||
ತನಗೆ ಬಳಿಕಿರಲಿಂಬುಗಾಣದೆ | ಮನಮುಱುಗಿ ಮಲ್ಲೆಯವ ಸಾರ್ದುಣೆ |
ಸಮಪಡೆಯದಾ ತಿಪ್ಪೆಯೆಂಜಲನಾಯ್ದು ತಿನುತಿರಲು || ೧೯ ||

ಪುರುಷರೂಪಿನ ಹಂದಿಯಿವನೆಂ | ದಿರದೆ ಜನವೆಬ್ಬಟ್ಟೆ ಕಂಗೆ |
ಟ್ಟುರು ವಿಪಿನವನು ಹೊಕ್ಕು ಮೃಗವೆನೆ ಜೀವಿಸುತ್ತಿರಲು ||
ಗುರುಗಳೆಯಿದೆ ಸಮುದ್ರಸೇನರು | ಚರಿಗೆಯೇಳ್ತರೆ ವಿಪಿನದಿಂ ಭಾ |
ಸುರಪುರಕೆನೀ ಶ್ರೀಗೌತಮನು ಕಂಡನಂದವರ || ೨೦ ||

ಕರಬಡವನೆನ್ನಿಂದ ಮೆಂದತಿ | ಕರುಣದಿಂದಾ ಮುನಿಯ ಬೆನ್ನನೆ |
ಬರೆವಯೀ ಶ್ರವಣಾಖ್ಯವೈಶ್ಯನು ನಿಲಿಸಿ ಗುರುಗಳನು ||
ಗುರುಗಳವಧಿ ಜ್ಞಾನದಿಂ ನಿ | ರ್ಧರಿಸಿ ನೀ ಶ್ರೀಗೌತಮನು ಬಂ |
ಧುರದ ಧರ್ಮಕೆ ಬಹನೆನುತ ದಯೆಗೆಯ್ದಿರಿಸಿ ಹೋಗೆ || ೨೧ ||

ತವಗೆ ಬಡಿಸಿದ ನಲ್ಲುಣಿಸ ನೀ | ರವಗೆ ಕಳುಹಿದೊಡಿಂದು ಕಾಣದ |
ಸವಿಯುಣಿಸನೊಸೆದುಂಡು ಹರುಷದಿ ಮುನಿಯ ಬೆಂಬಿಡದೆ ||
ತವಕದಿಂ ನಿಮ್ಮತೆ ಮಾಡೆ | ನ್ನುವನೆನಲು ನಿಲ್ಲನ್ನೆವರವೆಂ |
ದವರವನ ಪಲದಿವಸವೀಪರಿ ಪೊರೆದರನುಪಮರು || ೨೨ ||

ಪಲದಿವಸವಿಂತಿರುತಲಾ ಗುರು | ಗಳ ನಿರೂಪದ ನಂಬಿ ನಡೆವುತ |
ತಳೆದ ಮರು ಜಿನದೀಕ್ಷೆಯನು ನಿರ್ಮಲರ ಸಂಸರ್ಗ ||
ಇಳೆಯೊಳಾರಿಗೆ ಹಿತವನೀಯದು | ಬಳಿಕ ಸಂಯಮದಿಂ ನಡೆದುಪ |
ಜ್ಜಳಿಪ ಪಲವೃದ್ಧಿಯನು ಗೌತಮ ಮುನಿವೆಸರನಾಂತ || ೨೩ ||

ಸಂದ ಬಳಿಕ ಸಮುದ್ರಸೇನ ಮು | ನೀಂದ್ರ ತಾನಹಮಿಂದ್ರನಾದನು |
ಮಂದರೋಪಮ ಧೈರ್ಯನೀ ಗೌತಮ ಮುನೀಶ್ವರನು ||

ಸಂದು ನವಗ್ರೈವೇಯಕದೊಳಹ | ಮಿಂದ್ರನಾದನು ಜಿನತಪದೊಳೊಲ |
ವಿಂದಗುರು ಪೇಳ್ದಂತೆ ನಡೆದವರಿಗರಿವೆ ಸದ್ಗತಿಯು || ೩೪ ||

ವಿನುತನಿಪ್ಪತ್ತೆಂಟು ಸಾಗರ | ವೆನಿಸಿದಾಯುವ ನತಿಸುಖದಿ ತಾ |
ನನುಭವಿಸಿ ಬಂದಿಲ್ಲಿ ನೀನಾದೆಯೆಲೆಭೂಪ ||
ಎನಲು ಅಂಧಕವೃಷ್ಣಿ ಹರುಷಾ | ನನನು ಜಿನಪತಿಗೆಱಗಿ ನನ್ನಯ |
ತನುಜರುದಿತ ಭವಂಗಳನು ತಿಳಿಯಿಪುದು ತನಗೆಂದು || ೩೫ ||

ಅರಸ ಕೇಳೀ ಭರತದಾರ್ಯೆಯೊ | ಳಿರುತಿಹುದು ತಾಂ ಮಲಯದೇಶದೊ |
ಳುರುನಗರಿ ಭದ್ರಿಳವದಕ್ಕಧಿನಾಥ ಮೇಘರಥ ||
ವರಸುಭದ್ರೆಯ ಮಡದಿ ನೃಪತಿಗೆ | ಸುರಸದೃಢರಥ ಪುತ್ರನು ವಣಿಗ್ |
ವರನು ಧನದೇವಾಂಕನಾಥನ ಮಡದಿ ನಂದಯಶೆ || ೩೬ ||

ತನುಜರಾ ಧನ ದೇವ ಧನಪಾ | ಲನುಬಳಿಕೆ ಜಿನದೇವ ಜಿನಪಾ |
ಲನುದಲರುಹದ್ದಾಸ ನರುಹದ್ದತ್ತ ಜಿನದಾಸ ||
ಎನಿಸುವಾ ಪ್ರಿಯಮಿತ್ರನೆಸೆವವ | ನನುಜ ಧರ್ಮರುಚೀಯು ಬಳಿಕವ |
ರನುಜೆಯರು ಪೆಂಪಿನ ಸುದರ್ಶನ ಜೇಷ್ಠೆಯೆಂಬವರು || ೩೭ ||

ಸುಖದಲಿರುತಿಹಲಾಪುರದ ವಿಪಿ | ನಕೆ ದಿಗಂಬರರೈತರಲು ಕಡು |
ಭಕುತಿಯಿಂದಾ ಮೇಘರಥ ಧನದೇವಸಹ ಹೋಗಿ ||
ಸಕಲಧರ್ಮವ ಕೇಳ್ದುವಿರತಿ | ಪ್ರಕಟನತಿ ನೃಪದೀಕ್ಷೆ [ಯನಾಂತು] |
..................................... || ೩೮ ||

ನಂದಯಶೆ ತನ್ನೀರ್ವರೊಪ್ಪುವ | ನಂದನೆಯರೊಡನಾರ್ಯಕೆಯರಿಂ |
ದಂದು ದೀಕ್ಷೆಯನಾಂತಳತ್ತಲು ಮೇಘರಥಯತಿಪ ||
ಸಂದ ಧನದೇವಾಖ್ಯಮುನಿಪನು | ಬಂದು………………. |
ಸಂದರಾತನ ದೇವಯತಿ ಸುತರಾದಮುನಿವರರು || ೩೯ ||

ಆಗಿರಿಯೊಳಮಳಿನರವರುತಾಂ | ಯೋಗದಿಂದಿರೆ ನಂದಯಶೆ ಬಂ |
ದಾಗುರುಗಳೊತ್ತಿನಲಿ ಕುಳ್ಳಿರ್ದೊಂದು ಮೋಹದಲಿ ||
ಆ ಗುರುಗಳಿಂ... ಜನವುಂ | ಮೇಘಣಾಭವದೊಳಗೆನಗೆ ಸುತ |
ರಾಗಲೆನೆ ತತ್ಸುತೆಯರವರೊಡವುಟ್ಟಿಧರೆಯಹೆವು || ೪೦ ||

ಎಂದು ತಾವು ನಿದಾನಿಸಿದರವ | ರಂದು ಸುಸಮಾಧಿಯಲಿ ಗುರುಗಳು |
ಸಂದು ಆನತಕಲ್ಪದೊಳು ಶಾಂತಕ ವಿಮಾನದಲಿ ||

ಬಂದವರು ದೇವರ್ಕಳಾದರು | ನಂದಯಶೆ ಮೊದಲಾದ ಮೂವರು |
ಕುಂದದತಿ ತಪಗೈದು ತತ್ಕಲ್ಪದಲಿ ಹುಟ್ಟಿಹರು || ೪೧ ||

ವಿನುತ ಸೌಖ್ಯವ ನುಂಡುವಂದೆಲೆ | ಜನಪ ನಂದಯಶೋ ವಧೂಚರ |
ನಿನಗರಸಿಯು ಸುಭದ್ರೆಯಾಗಲು ನಿನಗೆ ಆ ವಧುಗೆ ||
ವಿನುತರವರೊಂಬತ್ತು ಜೀವರು | ಘನಸಮುದ್ರವಿಜಯನು ಮೊದಲಾ |
ದನುಪಮರು ಸುತರಾದರೆಲೆ ಭೂಪಾಲ ಕೇಳೆಂದ || ೪೨ ||

ನಂದಯಶೆಯಾ ಪುತ್ರಿಯರು ದಿನ | ದಿಂದ ಬಂದೀ ಕೊಂತಿಮದ್ರಿಯ |
ರೆಂದೆನಿಸಿ ಪರಿಕೆಗಳ ಪಿರಿಯಾತನಾರೆನಲು ||
ಸಂದಕುರುಜಾಂಗಣ ವಿಷಯದೊಳ | ಗೊಂದಿ ನಿಂದ ಪಳಾಲ ಕೂಟವ |
ದೊಂದುಗ್ರಾಮದ ಸೋಮಶರ್ಮರೆನಿಪ್ಪ ವಿಪ್ರಂಗೆ || ೪೩ ||

ವನಿತೆಯಗ್ಗಿಲೆಯೆಂಬಳವರಿಗೆ | ತನುಜನಂದಿಯು ಪುಟ್ಟೆ ನಂದಿಯ |
ಜನನಿಜನಕರುಕಳಿಯೆ ಮಾವನು ದೇವಶರ್ಮಾಖ್ಯಾ ||
ಮನೆಯೊಳೋವಿದ ಮದುವೆ ಮಾಡುವೆ | ನೆನಲಉವರಾತ್ಮಜೆಯರಯ್ಯಗೆ |
ಮುನಿಯ ಕಿರಿಯಳ ಕೊಡುವೆನೆನಲಗ್ಗಿಲೆಯ ಪರಿತಂದು || ೪೪ ||

ತೆಱೆದ ಬಾಯ್ವೆರ್ಜಿಗಳೆದುಟಿ ಕುಸಿ | ಕಿಱಿದು ಚಪ್ಪಟೆಮೂಗುಕುಣಿ ಕ |
ಣ್ಣೊಱಲೆ ಮೊಗ ಹೊಱಪಲ್ಲು ಕುಸಿಗೊರಳುಬ್ಬಿನೆಗೆದುದವು ||
ಮುರಿದ ಬೆನ್ನ ಮದ್ದಳೆಯನಡು ಹೆ | ದುರುಚೆ ಗೈ ಸೆಳೆಕಾಲು ಕುಮ್ಮರಿ |
ಗೊರಲೆನಿಪ ನೀ ಮಗಳ ಕೊಡುವವಳೆದೆ ಗೊರಡುಕಲ್ಲೊ || ೪೫ ||

ಎಂದು ಈ ಮರುಳಂಗೆ ಕೊಡುವದ | ರಿಂದ ಕೊರಳಿಗೆ ಕಲ್ಲಕಟ್ಟಿ ಅ |
ದೊಂದು ಬಾವಿಯೊಳದ್ದುವೆನು ಈ ಮಗಳನೆನೆ ಬೆದಱೆ ||
ಎಂದನಾಂ ಸೋದರಿಗನಾದದ | ರಿಂದನೀ ಬೇಡೆನಲು ಕೊಡುವೆನೆ |
ಒಂದು ಸಟೆಯಾಡಿದೆನು ಬೆದರದಿರೆಂದನಾ ವಿಪ್ರಾ || ೪೬ ||

ಎಂದ ಮಾತನು ಕೇಳಿಮನದಲಿ | ನೊಂದು ತನ್ನ ಕುರೂಪು ತನ್ನನೆ |
ನಿಂದಿಸಲು ಸಿಗ್ಗಾಗಿದೇಶಾಂತರವೆ ತನಗೆಂದು ||
ನಂದಿ ಪೋಪಾಗಳು ಬಳಿಕ ಕರ | ತಂದು ಮಾಸಿದ ಮಂಡೆ ಹೊಳೆಯಲಿ |
ಮಿಂದುಬಾಯೆಂದೊಂದು ಬೆಂಣೆಯ ನೆತ್ತಿಗಿಕ್ಕಿಸಿದ || ೪೭ ||

ಅತ್ತೆ ಅತ್ತಿಗೆಗಳು ನನಗೆ ಬೇ | ಸತ್ತು ಎಂಜಲುಗೂಳನಲ್ಪವ |
ನಿತ್ತೊಡುಣಿಸುಂಟಲ್ಲದಿರ್ದೊಡುಪಾಸ ಬೀಳುವೆನು ||

ನೆತ್ತಿ ಬೆಂಣೆಯನೊಮ್ಮೆಯಾದೊಡೆ | ಒತ್ತಿದೆನೆ ಯೆಲೆ ಮಾವ ನಿಮ್ಮಯ |
ಪುತ್ರಿಯೋರ್ವಳ ಮದುವೆಯಹೆನೆಂಬಾಸೆಯಿಂದಿಹೆನು || ೪೮ ||

ಮಾವ ನಿಮ್ಮ ಕುಮಾರಿತಿಯರೊಳ | ಗಾವಳುಂ ನನ್ನೊಲ್ಲೆನೆಂದರು |
ಜೀವಿಸುವೆಯೆನೆ ಇನ್ನೆನುತ ಹೊಳೆಮೀಯ ಹೋಗುತಿರೆ ||
ತೀವಿಸಭೆ ಪೆಕ್ಕಣವ ನೋಡುವ | ಗಾವರವ ಕೇಳ್ದಲ್ಲಿ ಗೈದಿದ |
ನಾವಿಲೋಕನ ಚಿತ್ತನುರು ಮರ ನೇರಿ ನೋಡುತಿರೆ || ೪೯ ||

ಕರಗಿ ಮಂಡೆಯ ಬೆಣ್ಣೆತ್ರಸೆಕೊಳೆ | ವೆರಸಿಳಿದು ಕೆಳಗಿರ್ದತಕ್ಕವ |
ನುರದ ಮೇಲೊಂದೆರಡು ಹನಿಬೀಳಲ್ಕೆ ಮೇಗಂಡು ||
ಮರುಳ ನೋಡೆಂದಲ್ಲರುಂ ಚ | ಪ್ಪರಿಸಲಿಳಿದೋಡುತರಿಎ ಮಕ್ಕಳ |
ನೆರೆದು ಬೆಂಬತ್ತಿದರು ಕಲುಗುಂಡಿಡುತ ಮರುಳೆಂದು || ೫೦ ||

ಕಡುಬಳಲಿ ಕಾಲ್ಗೆಟ್ಟು ಬೆಟ್ಟವ | ನಡರ್ದು ಇನ್ನೀ ಬದುಕದೇತಕೆ |
ಸುಡಲೆನುತ ಶಿಖರಾಗ್ರದಿಂ ಕೆಳಬಿದ್ದಳಿವೆನೆಂದು ||
ನಡದು ಬಂದೆರಗೀಕ್ಷಿಸುವ ಪಿಂ | ದಡಿಯಿಡುವ ಮತ್ತೇಗಿ ನೋಡುವ |
ಪೊಡರ್ವನೆಳಲನು ತದ್ಗಿರಿಯ ಮೂಲದಲಿ ತವವಿರ್ದ || ೫೧ ||

ವರ ಮುನಿಗಳಾಶಂಕ ನಿರ್ನಾ | ಮರುವೆನಿಪವದ ಕಂಡು ತಮ್ಮಯ |
ಗುರುಗಳನು ದ್ರುಮಸೇನರವಧಿಜ್ಞಾನಿಗಳಿಗೆರಗಿ ||
ನರನ ನೆಳಲೊಂದ್ಯೆ ತರುತಲದೆ | ಮರಳುತದೆಯದ ಬೆಸಸಿಯೆನಲಾ |
ಪುರುಷ ಮೂರನೆ ಭವಕೆ ನಿಮ್ಮಯ ತಾತನಹವೆನಲು || ೫೨ ||

ಕೇಳುತವೆ ತದ್ಗಿಟಿಯನೇ ಟಿ ದ | ಯಾಳುಗಳು ನಂದಿಯನು ಕಡು ಸ |
ಮ್ಮೇಳದಲಿ ಕರಕೊಂಡು ದ್ರುಮಸೇನರ ಬಳಿಗೆ ತರಲು ||
ಹೇಳು ನಿನ್ನುಜ್ಜುಗವನೆನಲಿಂ | ಪೇಳಲೇಂ ಗುರುಗಳೆ ಮರಣ ಬಹ |
ಕಾಲವನೆ ಬಯಸುವೆನೆನಲದೇಕೆಂದರವರವನ || ೫೩ ||

ಕಂಡವರು ಮರುಳೆಂದು ನನ್ನನು | ಗುಂಡುಗೊಂಡಿಡಿತಹರೆ ಕೂಳನು |
ಕಂಡೆನಿಲ್ಲುಡಲಿಲ್ಲ ನೋಡೀ ನೆತ್ತಿ ಬಸುರುಗಳ ||
ಹೆಂಡಿರನು ಗಳಿಸುವೆನೆನಿಪನುಡಿ | ಭಂಡು ತಾನದರಿಂದೊಡಲ ಪಿಡಿ |
ಕೊಂಡಿಹುದು ಲೇಸಲ್ಲೆಂದನು ನಂದಿ ಮುನಿಪತಿಗೆ || ೫೪ ||

ಎನೆ ಮುನೀಶ್ವರರೆಂದರೆಲೆ ಪಾ | ರ್ವನೆ ನಿನಗೆ ಯೀಲೋಕವಶ್ಯದ |
ಘನವಿಭವ ದೊರಕೊಳುವ ಹೆಂಗಳು ಮೋಹಿಸುವ ಮಂತ್ರ ||

ನನಗೆ ಬಹುದದನೀಸಿಕೊಳು ಭೋಂ | ಕನೆ ಬಳಿಕ ನಮ್ಮಂತೆ ನಡೆಯೆಂ |
ದನುಪಮರು ಗುರು ಪಂಚಮಂತ್ರವನಿತ್ತು ದೀಕ್ಷೆಯನು || ೫೫ ||

ಕೊಟ್ಟೊಡಾತನುವವರ ಬಳಿಯಲಿ | ನೆಟ್ಟನಾ ಜಿನರೂಪನಾಂತಳ |
ವಟ್ಟು ತಪದಿಂ ನಡೆದು ತಾಂ ಪ್ರಾಯೋಪಗಮನದಲಿ ||
ಬಿಟ್ಟೊಡಲನಾ ನಂದಿ ಮುನಿಪತಿ | ತೊಟ್ಟನೆಮಹಾಶುಕ್ರ ಕಲ್ಪದಿ |
ಪುಟ್ಟಿಬಂದವನೊಂಬದಿಂಬರ ಕಂಡೆ ವಸುದೇವ || ೫೬ ||

ಎನೆ ಜಿನೇಶ್ವರ ವಚನದಿಂ ತಿಳಿ | ದನು ನಿರೂಪಿಸಲೀ ಭವಸ್ಥಿತಿ |
ಯನುಪರಮ ವೈರಾಗ್ಯದಿಂದ ಸಮುದ್ರ ವಿಜಯಂಗೆ ||
ವಿನುತ ರಾಜ್ಯವನಿತ್ತು ಬಳಿಕಾ | ಜಿನ ಸಮಕ್ಷದಿ ದೀಕ್ಷೆಯಂ ತಳೆ |
ದನಘನಾ ಮೋಕ್ಷಕ್ಕೆ ಅಂಧಕವೃಷ್ಟಿ ಮುನಿಪೋದ || ೫೭ ||

ವರಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀಜಾತಮದುಮಧು |
ಕರಲಸತ ಜಿನಭಕ್ತಿ ಕವಿಸಾಳುವ ರಚಿತವಾದ ||
ಪರಮ ನೇಮಿ ಜಿನೇಂದ್ರ ಪಾವನ | ಚರಿತೆಯೊಳಗೆರಡನೆಯದಿದು ತಾಂ |
[ಹರಿಯ ವಂಶದ] ಸ್ವಾಮಿಯನ್ವಯ ಪರ್ವವೇಳ್ಗೆಯಲಿ || ೫೮ ||

|| ಅನ್ವಯ ಪರ್ವದೊಳು ಸಂಧಿ ೧೩ಕ್ಕೆ ಮಂಗಲ ಮಹಾ ||

## ವಸುದೇವ ಪರ್ವ (ಸಂಧಿ ೧೪)

**ಸಂಧಿ ೧೪**

ಹರದ ಪೆಂಡಿರು ಕಂಡು ವೊಲ್ದೊಡೆ | ಪುರಜನದ ನುಡಿಗೇಳುತ ರಾಜ |
ನಿರಿಸೆ ವಿನೆಯದಿ ನಂದನದೊಳೊಸೆದಿರ್ದ ವಸುದೇವಾ || ಪಲ್ಲ ||

ಕೇಳು ಶ್ರೇಣಿಕ ಮಂಡಲೇಶ್ವರ | ಭೂಲಲನೆ ಕರ್ಕಶವು ಕಮಲನ |
ಬೀಳ ಪೃಷ್ಠವು ದಿಗಿಭಗಳು ಮಾತಂಗ ಜನ್ಮಗಳು ||
ವ್ಯಾಲ ವಿಷಧರ ಫಣಿಪನೆಂದು ವಿ | ಶಾಲ ಸುಗುಣ ಸಮುದ್ರವಿಜಯನೃ |
ಪಾಲಕನ ನಿಡುದೋಳನಪ್ಪಿ ಸಮೇಳದಿಂದಿಹಳು || ೧ ||

ಅನತಿಶಯ ವಿಭವದಲಿ ಭೂತಳ | ವನು ಸಮುದ್ರ ವಿಜಯ ಮಹಾರಾ |
ಯನು ನಿರಂತರ ಪಾಲಿಸುತ್ತಿರಲಿತ್ತಲಾನೃಪನ ||

ಅನುಜ ವಸುದೇವನ ಸುರೂಪತೆ | ಮನಸಿಜನನಾಳ್ಕಾಡಿದುದು ಜ |
ವ್ವನ ಒದಗಿದುದು ರಾಜ ವಿದ್ಯಾವಿಭವದೊಡನವಗೆ || ೨ ||

ನನೆಗೆ ನಗೆ ಮೊಳೆವಾಗ ಕಡುಗ | ಮ್ಮನೆಯ ಪರಿಮಲಸಾರುವಂತಾ |
ತನೆ ಚೆಲುವ ಮೂರ್ತಿಯೊಳು ಜವ್ವನ ಜನಿಪಕಾಲದಲಿ ||
ನನಗೆ ತನಗೆಂದಖಿಲ ಕಲೆಯಾ | ತನಲಿ ಮನೆಗಟ್ಟಿದವು ಭಟನದ |
ವಿನುತ ಕವಿಗಮಕಿ ಪ್ರಮುಖ ಬಳಸಿದುದು ಬಳಿಕವನ || ೩ ||

ಸರಿವರೆಯದರಮಕ್ಕಳಿಷ್ಟ ಸ | ಖರುವೆರಸಿ ಮೆರೆವಾ ವಸಂತದೊ |
ಳರಸನರ್ತಿಯಲ್ಲೈದೆ ವನಜಲಕೇಳಿಗಳನಾಳಿ ||
ಅರಳನನೆಗಳ ತಳಿರ ಮಿಡಿಗಳ | ಪರಿಪರಿಯ ತೊಡಿಗೆಗಳ ತೊಟ್ಟ |
ಚರಿಯನಂದನ ವನವೆ ಬಹವೊಲು ಕುವರನೈತಿಹನು || ೪ ||

ಎಸೆವ ಮಾಣಿಕದುಡಿಗೆಗಳ ಕೆಂ | ಬಿಸಿಲ ಬೀಱುತ ತರುಣ ತರಣಿಯೊ |
ಳೆಸೆದು ತೊಳಲುವನೊರ್ಮೆಯಂಗಡಿ ಬೀದಿ ಬೀದಿಯಲಿ ||
ಮಿಸುಪ ಮುತ್ತಿನ ತೊಡವೆಗಳು ತಂ | ಬಿಸಿಲ ಬೀಱುತ ಪೂರ್ಣ ಸಸಿವೋ |
ಲೆಸೆದು ತೂಳೆಲುವನೊರ್ಮೆ ಚಂದ್ರಮನೆನಿಸಿ ನೃಪತನುಜ || ೫ ||

ತೊಡೆದ ಕತ್ತುರಿಯಂಕೆಯಸುಕೆಯ | ಮುಡಿ ಮಿಸುನಿಗೇದಗೆಯೆಸಳ ಮಿಂ |
ಗುಡಿತಳಿರ ಕೈಪೊಡೆ ಬಿಗಿದ ರಸದಾಳಿಗೋಲ್ವಿಲ್ಲು ||
ಪಿಡಿದ ಹೂಗಣೆ ಕುಸುಮರಥ ಸಂ | ಗಡಿಗರೊಡನಂಗಜ ನೆನಿಸಿ ಫಲ |
ಮಡದಿಯರ ಚಿತ್ತದೊಳು ಪೊಳಲೊಳು ತೊಳಲುತಿಹನೊರ್ಮೆ || ೬ ||

ದಿಟ್ಟೆ ದೆಱದಂತೆಸೆವ ನೈದಿಲ | ನಿಟ್ಟೆಸಳ ತನುಕವಚ ಕುಡುವೆ ಱ |
ಯೊಟ್ಟೈಪ ವಜ್ರಾಂಕುಶವು ಮುನ್ನೈದೆ ಸಿಂಗರಿಸಿ ||
ನೆಟ್ಟನೈರಾವತವೆ ತಾನೆನೆ | ಪಟ್ಟದಂತಿಯನೇಱೆ ತನ್ನನೆ |
ನಿಟ್ಟಿಪರು ಸುರರಾಗ ಸುರಪತಿಯೆನಿಸಿ ತೊಳಲುವನು || ೭ ||

ಚಳನಯನ ಮೃದುವಾಲದೆಲೆ ಕಡು | ಬೆಳೆದ ಕಟಿ ಪೇರುರ ಮಯೂರೋ |
ಜ್ವಲಗಳಂ ನಿರ್ಮಾಂಸವದನಾಂಘ್ರಿಗಳು ವಜ್ರಖುರ ||
ತಳೆದಕಿಱಿಗಿವಿ ಸಣ್ಣ ನಡುವತಿ | ಬಳದ ಶದ್ರುವರುಚಿರವರ್ಣ ಸು |
ವಿಳಸಿತಾಶ್ವವದೊಂದು ಕಂಗಿಂಬಾಯ್ತು ನೃಪಸುತನ || ೮ ||

ತುರಗರತ್ನವು ದಾತನಿಚ್ಛೆಗೆ | ತರುಣಿಯಂತೊದಗುವುದು ಚೆಲುವಿನ |
ಹರಿಣನಂದದಿ ದಾಂಟುವುದು ನೆಱೆತಾಳಮದ್ದಳೆಯ ||

ಪರಿಪರಿಯ ಜತಿಗಳಿಗೆ ಕುಣಿವುದು | ತುರುಗಜಕ್ಕಡಿಗಾಡುವುದು ಕಿ |
ನ್ನರಿಯ ದನಿಗಳವಟ್ಟು ಕಿಂಕಿಣಿಯಲಿಯೆ ಮೆಟ್ಟುವುದು || ೯ ||

ಬೀದಿಗೇಳಿಕೆಯಾಡಿಸುವನ | ರ್ತಾದಿರಿಪ ಪಲತೆರದ ಪಾಠಕ |
ರೋದುತಿಹವರ ಗದ್ಯ ಪದ್ಯ ಪ್ರಬಂಧ ಬಿರುದುಗಳ ||
ವಾದಕರ ನಾಲಿಸುವ ಚತುರ ವಿ | ನೋದನುಚಿತ ತ್ಯಾಗವೀವುತ |
ಬೀದಿ ಬೀದಿಯೊಳೈದುತಿಹ ವಸುದೇವ ನೃಪನೊಮ್ಮೆ || ೧೦ ||

ಹರಿಹರಿದು ಬಂದಾ ಪುರುಸ್ತ್ರೀ | ಯರುಗಳೀಕ್ಷಿಪ ತೆಱವೆಯೊಳು ಸಿಂ |
ಗರಿಸಿ ಬೆಲೆವೆಣ್ಣುಗಳು ಸೊದೆಯುಪ್ಪರಿಗೆ ನೆಲೆಗಳೊಳು ||
ದೊರೆಗಳರಸಿಯರೆಸೆವ ಹೊನ್ನು | ಪ್ಪರಿಗೆಗಳ ಮಣಿಮಯಗವಾಕ್ಷಾಂ |
ತರದೊಳನೆ ವಸುದೇವ ಕುವರನೀಕ್ಷಿಪರು ನಲಿದು || ೧೧ ||

ನೋಡುವೊಂದಿಚ್ಛೆಯೊಳೆ ತೊಳ್ತಿರ | ಕೂಡೆ ತಾವುಂ ತೊಳ್ತಿರಾಗಿಯೆ |
ರೂಢಿವಡೆದರಸಿಯರು ಕೆಲಬರು ಮೈಲಿಗೆಯನುಟ್ಟು ||
ನಾಡೆಬೆನ್ನನೆ ಹರಿಹರಿದು ಮೊಗ | ಬಾಡಿ ಬಸವಳಿದುಃಪೆನುತ ಮಿಗೆ |
ನೋಡಿ ದಣಿಯರು ರಾಜಪುತ್ರನ ಚೆಲುವ ಮೂರ್ತಿಯನು || ೧೨ ||

ಮಡದಿಯೋರ್ವಳು ಬಹಭರಕೆ ಸೊ | ರ್ಮುಡಿ ಬಿಡಲು ಬಲದೋಳ ಮೊದಲಿನೊ |
ಲಡಸಿ ಮೇಲುದ ತೇಲುತಿರಲೆದೆಯಲ್ಲಿ ಕೆಂದಳವ ||
ಮಡಗಿ ತೊಂಗಲು ನಿಱಿಯನೆಡಗೈ | ಪಿಡಿದು ಬಡನಡು ಬಳುಕುತಿರೆ ನಾ |
ನಡೆನನೆಯೆ ಮೈಬೆಮರೆ ಬಂದೀಕ್ಷಿಸಿದಳರಸನನು || ೧೩ ||

ಚಂದದೋರ್ವಳು ಸಿಂಗರಿಸಿದಳ | ದೊಂದುದಿನ ನೃಪ ಬಹ ಸಮಯದೊಳ |
ಗೊಂದು ಕಿವಿಗೆಸೆವೋಲೆ ಒಂದೇ ಕಣ್ಗೆ ಕಜ್ಜುಳವು ||
ಒಂದೆ ಹಸ್ತಕೆ ಕಡಗವಂದುಗೆ | ಯೊಂದು ಪಾದದೊಳೆಸೆಯೆ ಅರೆವೆ |
ಣ್ಣೆಂದು ನಗುವರನಱಿಯದೈತಂದೀಕ್ಷಿಸಿದಳವನ || ೧೪ ||

ಎತ್ತ ಹೋಹಿರದೇನ ನೋಡುವಿ | ರಿತ್ತ ಬನ್ನಿಯೆನಿಪ್ಪ ಗಂಡನ |
ಮತ್ತೆ ಮಾವನ ಘರ್ಜನೆಯ ನುಡಿಕಿವಿಗುರಿಸದಿರಲು ||
ಅತ್ತೆ ಅತ್ತಿಗೆಗಳುವವರ ಜೌ | ವುತ್ತೆ ನೋಡವೊ ಬಾಗಿಲಲಿನ |
ಮ್ಮೊತ್ತಿನೊಳು ನೆಡಿನೋಡೆ ತಪ್ಪೇನೆಂದಳವರವರ || ೧೫ ||

ಅವನ ತನುಲಾವಣ್ಯ ನದಿಯೊಳು | ಯುವತಿಯರ ಕಣ್ಮೀಂಗಳೋಲಾ |
ಡುವವನಾರಥವಾಗಳಂಜಗನಿಕ್ಷುಚಾಪವನು ||

ತವಕದಿಂಗೊಲೆಯೊತ್ತಿ ಜೀವಡೆ | ದವಳಿವಳನೆನ್ನದೆ ಪುರಸ್ತ್ರೀ |
ನಿವಹವನು ಹೊಸಮಸೆಯ ಹೂಗಣೆಗಳಲಿ ಹೊಳಿದನು || ೧೬ ||

ಕಾವದೇವನ ಬಿಲ್ಲ ವಿದ್ಯೆಯ | ದಾವ ಗರುಡಿಯ ಶಿರವೊಯೆಸುವುದು |
ಹೂವಿನ್ನೈದಂಬ ತನು ತಾನಳಿವೆದೆಯ ಕಬ್ಬುವಿಲು ||
ದೇವದಾನವ ಮಾನವಾದಿಯ | ನೋವದೆಸುವೆನು ಘಾಯವಿಲ್ಲದ |
ನೋವಿನಲಿ ಕೊಲುತಿಹನಹರ್ನಿಶವೇನು ಭುಜಬಲನೊ || ೧೭ ||

ಕಾ[ವನದೇ]ನು ಚದುರನಲ್ಲವ | ಗಾವಿಲನದೆಂತೆನಲು ಕೆಮ್ಮನೆ |
ಹೂವಿನಂಬಿನಹೊ… … … ದಿಸಿದೆನೊ ||
ಆ ವಿಭುವಿನೊಡನ್ನೈದಿಟೀಕೆಯ | ಜೀವವೀ ಬರು ಹಾಹೆಯೆನು ತಾ |
ನಾವ ಕಾರಣವೆಚ್ಚನೆಂದಳದೋರ್ವಳುಬ್ಬೆಗದಿ || ೧೮ ||

ಹೃದಯದೊಳು ಬಿಗಿದಪ್ಪಿ ಸಲೆ ಚಿ | ತ್ತದೊಳೆಯಿಂದುಟಿಯೂಡಿ ತಮ್ಮಯ |
ಮದದೊಳಾತನ ಒಲಿದು ಚುಂಬಿಸಿ ಬೇಟೆಕಾತರದಿ ||
ಎದೆಯೊಳಗೆ ಸುರತಾಮೃತವನುಂ | ದೊದವಿ ಮೂರ್ಛಿಸಿ ನೋವುತಿಹರಾ |
ಸುದತಿಯರು ಕೆಲಕೆಲರು ತತ್ಪುರದೊಳಗಹರ್ನಿಶವು || ೧೯ ||

ಮನದೊಳಗೆ ಕನ್ನಿಕೆಯರೆಮಗೀ | ತನೆ ಮನಪ್ರಿಯನಾಗಲೆಂಬರಿ |
ವನೊಳಗಕ್ಕಟ ಕನ್ನೆವೇಟವ ಪಡೆಯದಾದೆವಲ ||
ಎನಿಪರರೆಬರು ತಮ್ಮ ತನಿಜ | ವ್ವನದ ಕಾಲದೊಳಿವನು ಕಣ್ಬೊಲ |
ನೆನಿಸದಾದನಲಾಯೆನುತ ಪಳವೆಯರು [ಚಿ]ಂತಿಪರು || ೨೦ ||

ಗರತಿಯರು ಮನೆವಾರ್ತೆಯನು ಮಱೆ | ದರು ತೊಱೆದರಾ ಮಕ್ಕಳನು ಗಂ |
ಡರ ಬಯಕೆ ಬ ಱಿಹಾಹೆಯಂದದಿ ತಿರುಗುಹರೊಳಗೆ ||
ಅರಸು ಮಗನನೆ ಕಣ್ಣು ಮನದೊಳ | ಗಿರಿಸಿಕೊಂಡದರಿಂದ ಗಂಡರ |
ಕರಕರಗೆ ಮೈಗೊಡುವರಂಗಜ ಕೇಳಿಗವರಂದು || ೨೧ ||

ಸ್ಮರಮಹಾಗ್ರಹಹಿಡಿದು ಮರುಳಾ | ದರು ನಿಖಿಲ ವನಿತೆಯರು ಮನದೊಳು |
ಹರಹಿಬಿತ್ತಿದ ತೆಱದಿ ಬೆಳೆದುದು ಖೇಟಮಡಲಿ ಱಿದು ||
ವರಗೃಹಸ್ಥರು ಗರತಿಯರ ಮನ | ದಿರವಱಿದು ಕೊಕ್ಕರಿಸಿದರು ಮೆ |
ಚ್ಚರು ಸೊಬಗನೆಂದೊತ್ತೆವೆಂಡಿರನುಳಿದರಾ ವಿಟರು || ೨೨ ||

ಕೊಡುವೆವೋಲಗ ಕಸುವನಲ್ಲದೆ | ಮಡದಿಗೊಡುವೆವೆಯೆನುತೆ ಕೈದುವ |
ಮಡಗಿದುದು ಪರಿವಾರಭಿಮಾನವದು ಪರಿದಾಡೆ ||

ಸುಡಲಿ ಪರಿದಾಡುವುದನೆನುತಂ | ಗಡಿಯ ಪಡಿಗೆತ್ತರುಹರದರೊ |
ಗ್ಗೊಡೆದರೊ ದಿನ ಹಂಬಲವನು ವಿಪ್ರರುಪೊಳಲಿನೊಳಗೆ || ೧೩ ||

ನೆರೆದು ಬಂದಿಂತೆಲ್ಲರುಂ ಭೂ | ವರ ಸಮುದ್ರವಿಜಯಗೆ ಕೈಮುಗಿ |
ದರಸುಗಳ ತಲೆರನ್ನ ಬಿನ್ನಪವಿನ್ನೆವರನಿಮ್ಮ ||
ಪುರದೊಳಗೆ ಗಾಳಿಯುವಿಸಲುವೆಂ | ಬೆರಡು ತಪ್ಪಿಸಿ ಬಾಧೆಯಿಲ್ಲದೆ |
ಹರುಷದಲಿ ಸುಖವಿರ್ದೆವಿನ್ನೆೈದುವೆವು ಪರನಾಡ || ೧೪ ||

ಎಂದ ಮಾತಿಗೆ ನೃಪತಿ ವಿಸ್ಮಯ | ದಿಂದಿದೇಂ ಕಾರಣವೆನಲು ವೇ |
ನೆಂದು ನುಡಿಯದೆ ಮೂಕರಂತೆಲ್ಲರುವಿರಲು ಮಂತ್ರಿ ||
ಎಂದನಲ್ಲದ ತಾಣದೊಳು ನೆಗೆ | ದೊಂದು ಹುಣ್ಣದು ಜೀಯ ಲೋಕದ |
ತಂದೆ ನಿಮ್ಮಡಿನಿವಗೆ ಬಿನ್ನೈಸಿದೊಡೆ ಪಡಿಯಲ್ಲ || ೧೫ ||

ಹೇಳಬಾರದ ಮಾತನವನಿಪ | ಹೇಳುವೆನು ಪುರವನಿತೆಯರು ಪೂ |
ಗೋಲ ಘಾಯದಿ ಹುಚ್ಚುಗೊಂಡೋಪರಮನೆಯಿಂ ತಮ್ಮ ||
ಬಾಳಕರ ಹಂಬಲ ಮರೆದರೆನೆ | ಹೇಳು ಹೇಳಾರಿಂದಲೆನೆ ಭೂ |
ಪಾಲ ಪರನಾರೀಸಹೋದರನವನ ದೆಸೆಯಿಂದ || ೧೬ ||

ಇದು ಮಹಾವಿಪರೀತ ತಿಳುಹಂ | ತಿದಱ ತೆಱನೆಲ್ಲವನೆನಲು ನವ |
ಮದನನೆನಿಸುವ ನಿಮ್ಮಡಿಗಳನುಜಾತ ವಸುದೇವ ||
ಮುದದಿ ಪೊಳಲೊಳಗಾಗಳುಂ ಚಲು | ವೊದವಿ ವಿಭವದಿ ತೊಳಲುತಿರೆ ನೋ |
ಡಿದವಧುಗಳಿಂತಹರು ಮುನ್ನೇಂ ನೋಂತನೋಯೆಂದ || ೧೭ ||

ಎನೆ ನೃಪಾಲಕ ಕೇಳಿ ತಾನೊಂ | ದಿನಿಸು ಪೊತ್ತಮ್ಮೇಲೆ ಗುಣನಿಧಿ |
ವಿನಯವಚನದಲವರನೆಲ್ಲರ ತಿಳುಪಿ ಬೀಳ್ಕೊಟ್ಟು ||
ಅನುಜನೆಂದಿನ ತೆಱದಿನೋಲಗ | ಕನುವಱಿದು ಬರೆ ಕಾಣುತವೆ ತ |
ಮ್ಮನಸಮೀಪಕೆ ಕರೆದು ಮೈದಡವಿದನು ಕೃಪೆಯಿಂದ || ೧೮ ||

ಕಂದಿತೇಕೈ ನಿನ್ನ ನಗೆಮೊಗ | ಚಂದಿರನು ಪುಟವಿಟ್ಟು ಮಿಸುನಿಯ |
ದೊಂದು ಬಣ್ಣದ ಚೆಲುವ ಮೈನಸುಬಾಡಿದುದು ತಮ್ಮಾ ||
ಎಂದಿನಂತಲ್ಲೆನಲು ದೇವರು | ಯಿಂದು ನಿಮ್ಮಡಿ ನನ್ನಮೇಗೊಲ |
ವಿಂದೆ ನೋಡಿದ ಮೋಹದೃಷ್ಟಿಗೆ ತೋಱಿತಿಂತೆಂದ || ೧೯ ||

ಜನದ ಕಣ್ಣಾಸರೊ ಬಿಸಿಲೊಳೊಂ | ದಿನಿಸುನೀನೆಂತೊಳಲುವೆಯೊ ಮನ್ |
ಮನವ ಸಂತಸ ಕಣ್ಣಪುಣ್ಯವೆನಿಪ್ಪನುಜ ನೀನು ||

ಇನಕಿರಣ ಹೊಲಮ್ಮೃದೆಮ್ಮೃಪ | ವನವ ಸಿಂಗರಿಸಿದ ವಸಂತನು |
ಮನಸಿಜನವೋಲ್ ಮಿಗೆ ಸುಖದಿ ಕಳಿಯಲ್ಲಿ ಬೇಸಗೆಯ || ೩೦ ||

ಕೃತಕ ಕನಕಾದ್ರಿಯೊಳಗಿಂದ್ರ | ಪ್ರತಿಮನೆನೆ ನಲಿದಾಡು ನಂದನ |
ಲತೆವನೆಯೊಳಿರುತಿರುವಸಂತನವೊಲು ಪಲವು ರತ್ನಾ ||
ಕೃತಸರೋವರದೊಳಗೆ ಓಲಾ | ಡುತ ನೃಪಾಲಮರಾಲನಂತಾ |
ಡುತಿರೆನಲು ಜೀಯೆಂದು ತಮ್ಮನನಪ್ಪಿ ಮುಂಡಾಡಿ || ೩೧ ||

ತೊಟ್ಟತೊಡುಗೆಯ ಪೊದೆದ ವಸನವ | ಕೊಟ್ಟು ಬೀಳ್ಕೊಡೆ ನಿಜಗೃಹದಿ ಪರಿ |
ಮೇಷ್ಟಿಸಿದ ಸುಖಮಯ ಪರಿಗ್ರಹವೆರಸಿ ಸಖರೊಡನೆ ||
ನೆಟ್ಟನಾ ವನಪಾಲರನು ಮುಂ | ದಿಟ್ಟುಕೊಂಡ್ಯೆತಂದು ಸುಖತರ |
ಗೋಷ್ಠಿಯಲಿ ಮೆಱೆದಿರ್ದನಾವಸುದೇವನಳ್ತಿಯಲಿ || ೩೨ ||

ಚಾಪಲಾಕ್ಷಿಯರೊಡನೆ ವನಕುಸು | ಮಾಪಚಯದೊಳಗೊರ್ಮೆ ಕೃತಕನ |
ಗೋಪಕೇಳಿಯೊಳೊರ್ಮೆ ಜಲಕೇಳಿಗಳಿನೋರೊರ್ಮೆ ||
ರೂಪವಿಕೃತಕಿಕುಬ್ಜವಾಮನ | ರಾಪಡೆದ ಮೂಕಾದಿಗಳ ನಾ |
ನಾಪರಿಯ ಬಿನದದಲಿ ಕ್ರೀಡಿಪನೊರ್ಮೆ ಸಖರೊಡನೆ || ೩೩ ||

ಪಚ್ಚೆಲೆಯ ಪಂದರೊಳಗಸುಕೆಯ | ಕೆಚ್ಚನೆಯ ತಳಿರುವೋವರಿಗಳೊಳು |
ನಿಚ್ಚಮಲ್ಲಿಗೆ ಮಂಟಪಂಗಳೊಳೊಕ್ಕು ಮಳಲಂತೆ ||
ಪಚ್ಚೆ ಕರ್ಪುರವಿಹುದು ಮೊಳಕಾ | ಲ್ಮುಚ್ಚುವುದು ನಡೆದೊಡೆ ಪರಿಮಳದಿ |
ಹೆಚ್ಚೆ ಸೂಸಿದ ಕತ್ತುರಿಯು ನೃಪನಾಡಿದಾಟಗಳಿಂ || ೩೪ ||

ಆಡಿಸುವನಾ ನಟ್ಟುವರ ನಲಿ | ದಾಡಿಸುವನಾ ಪಾತ್ರಗಳ ಕೊಂ |
ಡಾಸಿವುನಖಿಳಾರ್ತಿಗಳ ಮುಖದಿಂದ ತನ್ನೊಳ್ಪ ||
ಪಾಡಿಸುವನಾ ಗಾಣಿಗಾರರ | ನೋಡಿಸುವನೆಲ್ಲರಿಗೆ ಸೊಗಸನು |
ರೋಡಿಸುವನಾಜಾಗದಲಿ ಸುರತರುವನಾ ಕುವರ || ೩೫ ||

|| ಅಂತು ಸಂಧಿ ೧೪ ಕ್ಕಂ ಮಂಗಲಮಹಾ ||

**ಸಂಧಿ ೧೫**

ಮಸಣಗಿಚ್ಚಿನಲುರಿದನೆಂಬಾ | ಪುಸಿಯ ಬೆಳೆಯಿಸಿ ಪೋಗಿಕುವರನು |
ಯೆಸೆವ ಜಯಜಯ ಸೇನೆಯರನಾಂತನು ಸ್ವಯಂವರದಿ || ಪಲ್ಲ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ಶಿವದೇವಿಯರ್ಗೆ ಚಂಪಕ |
ಮಾಲೆಯೆಂಬಾ ಸಖಿಯ ಕೈಯಲಿ ರನ್ನವಟ್ಟದಲಿ ||
ಮೇಳಿಸಿದ ಕತ್ತುರಿಗೆಸಱಗಿಂ | ಪೇಳೆ ತತ್ವತಿ ಕಳುಹೆ ಕೊಂಡೊ |
ಯ್ದಾಳಿಯನು ವಸುದೇವ ನೀಕ್ಷಿಸಿ ಕರೆದು ನಸುನಗುತ || ೧ ||

ಸೆಳೆದು ಕೊಂಡಾ ಪರಿಮಳವನೀ | ಕೆಳೆಯರೆಲ್ಲರ ಮೇಲೆ ಚೆಲ್ಲಿ ವಿ |
ಕಳಗೊಳಿಸಿ ಮಿಗೆ ಮುಳಿದವಳು ನೀನಿನ್ನುಮಾಣೆಯಲ ||
ಖಳವಿಚಾರವಗಾಳುತನವನು | ಕಲಿತವರು ಮ ಱೆವರೆ ಸೆರೆಯಮನೆ |
ನೆಲೆಯಹೊನ್ನುಪ್ಪರಿಗೆಯಾದುದೆಯೆಂದಳುಬ್ಬೆಗದಿ || ೨ ||

ಎಲು ಬೆಕ್ಕಸಬಟ್ಟವಳನೊ | ಯ್ಯನೆ ಕುವರನೇಕಾಂತದಲಿ ನೀ |
ನೆನಗೆ ಪೇಳೀ ತೆಱನನೆಲ್ಲವನೆಂದವಳ ಕೈಗೆ ||
ಕನಕಮಣಿಯ ಕಡಿಗವಿಟ್ಟಿಂ | ಪಿನಲಿ ಕೇಳ್ದೊಡೆ ಪೇಳ್ದಲೆಲೆನವ |
ಮನಸಿಜನೆ ನೀನಳ್ತಿಯಿಂ ಪುರದೊಳಗೆ ತೊಳಲುತಿರೆ || ೩ ||

ಗರತಿಯರು ಗಣಿಕೆಯರುವೆನ್ನದೆ | ಬಿರಯಿಸಲು ನಿನಗಾ ತೆಱನನೀ |
ಪುರ ಜನವು ನಿಮ್ಮಣ್ಣಗರುಪಲು ನಣ್ಬಿನಿಂ ನಿನ್ನ ||
ಇರಿಸಿದನು ನಂದನದೊಳಗೆ ಕಾ | ದಿರಲು ದಾರುಕವಲ್ಲಭರನೊಡ |
ನಿರಿಸಿದನು ಬಹುಜನದ ಮಾತನು ಕೇಳಿದವರಾರೊ || ೪ ||

ಎಂದವಳು ಪೋಪುದು ಮನದೊಳಿಂ | ತೆಂದನಾವನ ಸಿರಿಸೊಬಗು ನೆಱೆ ಸ |
ವುಂದರತೆ ಲೋಕಕ್ಕೆ ಹರುಷ ವಿಷಾದಕಾರಿಯಲ ||
ಎಂದು ಬಗೆಯದ ಜನದ ಮಾತಿಗೆ | ದೊಂದಿನಿತು ತಪ್ಪಿಲ್ಲದೆನ್ನನು |
ನಂದನದಲುರೆ ಸೆರೆಯನೆಟ್ಟನೆ ಲೇಸುಲೇಸೆಂದ || ೫ ||

ಮಾತಿನಲಿ ಮೋಹಾಮೃತವ ಕಿವಿ | ಗೇತಱದಿ ತುಂಬಿದನು ಹಿತವೆಂ |
ಬಾತೆಱನನೆನಗರುಹಿ ಮನದೊಳಗೇನನೆಣಿಸಿದನು |

ತಾತನೆಂದೇ ತನ್ನನೊಲಿದನು | ಜಾತನಾನಕಟಕಟ ಭೂವರ |
ಮಾತು ಸಕ್ಕರೆ ಮನವು ಕತ್ತರಿಯೆಂಬುದಱಿಯೆನಲ || ೬ ||

ಇನ್ನು ಈತೆಱನಾಗಿಯಿರ್ದರೆ | ಬನ್ನವೆನಗಹುದೆಂದು ಹೋಹೆನೆ |
ನನ್ನ ಬಿಡರಾಕಾಪಿನವರೆಂದೊಂದುಪಾಯವನು ||
ತನ್ನೊಳಗೆ ನಿಶ್ಚಯಿಸಿ ಬೆರ್ನಾ | ಡೆನ್ನ ನಾಡೆಂದುಂಟೆ ನನಗು |
ತ್ಪನ್ನ ಕಾವ ವಸಂತ ಮಂದಾನಿಳರಿಗೆಂದಿರಲು || ೭ ||

ಇದು ವಸುಂಧರೆ ಇದು ನಭಂಗಣ | ವಿದು ದೆಸೆಗಳೆಂದಱಿಯಲರಿದೆನೆ |
ಪುದಿದು ಕೊರ್ವಿದ ಮರ್ವುಪರ್ವಿಯುಗುರ್ವಿವಿರುಳಿನಲು ||
ಒದವಿದಷ್ಟ ವಿಧಾರ್ಚನಾ ದ್ರ | ವ್ಯದ ಪುಡಿಕೆವೆರಸಾತ್ಮ ಸಖರೊಡ |
ನಧಟನಾ ವಸುದೇವನೊಂದು ತಮಾಲ ವನದೊಳಗೆ || ೮ ||

ಒಂದು ಜಾವವಸಿರಲೊಡನೆ ಪರಿ | ತಂದು ದಾರುಕವಲ್ಲಭರು ತಾ |
ವಂದು ಗಿಡುಮೆಳೆಯಱಸುತ್ತೈತಂದರಸನನು ಕಂಡು ||
ಇಂದುನೀಯಿರುಳಿಲ್ಲಿಗೇತಕೆ | ಬಂದಿರಡಿಗಳುನೋವವೆನೆತಾ |
ನಂದರಿದನವರೆನ್ನ ಮೇಗಾಪಿನವರೆಂಬುದನು || ೯ ||

ಬಂದನೆಲೆ ಹಿತವರಿದ ಹೆಣಬೇ | ವೊಂದು ಮಸಣದಲೊಂದು ವಿದ್ಯವ |
ನಿಂದು ಸಾಧಿಸ ಪೋಗಬೇಕೆನೆ ಜೀಯ ನಿಮ್ಮೊಡನೇ ||
ಬಂದಪೆವು ನಾವೀಗ ನಿಮ್ಮಡಿ | ಯೊಂದು ಸೇವೆಗೆ ವಿಮುಖರೇಯೆನ |
ಲೊಂದಿ ನಡೆದಾ ಪ್ರೇತ ಭೂಮಿಯ ಕಂಡನಾ ಭೂಪಾ || ೧೦ ||

ಹಸಿಯ ತಲೆಗಳ ಸಾಲುದೋರಣ | ಬಸೆಬಸಿವ ಹೆಣಬಣಬೆ ಬಾಳ್ವೆಣ |
ಮಿಸುಕೆ ಬಳಿಕುವ ಬಸಿದ ಬೊಮ್ಮನಸೂಲಗಳ ಪಂತಿ ||
ದೆಸೆದೆಸೆಗೆ ಪಸರಿಸುವ ಹೊಗೆ ಆ | ಗಸವ ಚುಂಬಿಪ ದೂವೆಗಿಚ್ಚ |
ರ್ಪಿಸುವ ಮಸಣದೊಳಾ ಕುಮಾರನಾ ಕಣ್ಗೆ ತೋರಿದವು || ೧೧ ||

ನಿಡುಚಿತಾಗ್ನಿಯ ಕೇಸುರಿಯೆ ಕೆಂ | ಜೆಡೆ ಹೊಗೆಯೆ ಕಲಿಚರ್ಮವಾಗಿರೆ |
ಕಡುಭಸಿತದಿಂ ಕರಕಪಾಲದಿ ತಲೆಯಮಾಲೆಗಳಿಂ ||
ಪೊಡರ್ವ ಶೂಲದಿ ಎಲುಬಿನೆಸಕದಿ | ಬಿಡದೆ ಸೇವಿಪ ಭೂತಗಣದಿಂ |
ಮೃಡನವೊಲು ಸುಡುಗಾಡು ಭೀಕರವಾಗಿ ತೋಱಿದುದು || ೧೨ ||

ಬಾಳು ಬಟ್ಟಲನೆತ್ತಿ ಬಹ ಕಂ | ಕಾಳಿ ಕತ್ತಿಯನೆಗಹಿ ತಹಮಾ |
ಕಾಳಿಯೀಡಿನ ಬಿಸಿಯ ಹೆಣನನು ತಿಂಬಶಾಕಿನಿಯು ||

ಶೂಲವನು ಹೊತ್ತೆತ್ತಿ ಬಲುವೇ | ತಾಳಗಳ ನಳಱಿಸುವ ಭೈರವಿ |
ಭಾಳಲೋಚನೆ ದುರ್ಗಿ ಮೊದಲಾಗರ್ವಿಸುವರಲಿ || ೧೩ ||

ಮರುಳ ಕೈವಱಿಗುಟ್ಟಿ ನಕ್ತಂ | ಚರ್ಯರುಂಚದಿಪಾಂಡೆ ಬೆಳು ಪಾ |
ದೆರಡು ತಲೆಯೋಡುಗಳ ತಾಳವನೊತ್ತ ಚಾಮುಂಡಿ ||
ನೆರದ ಭೂತದ ಮುಂದೆ ಬೇತಾ | ಳರು ಕುಣಿಯೆ ಜೆಟ್ಟಗನುಶೂಲದ |
ಪಿರಿಯ ಬೀರರು ಮೆಚ್ಚಿ ಹೆಣಗಳ ಚಾಗವಿಕ್ಕಿದರು || ೧೪ ||

ಹೊಕ್ಕು ಬೇವಿಡಿ ಹೆಣನನೊರ್ಮೆಯೆ | ಗುಳ್ಕೆನಲು ಬೇತಾಳ ನುಂಗಿ ಬ |
ಳಿಕ್ಕ ಹೊಟ್ಟೆಯ ಹೊಸದುಕೊಂಡು ಪೊರಳ್ದು ಶೂಲದಲಿ ||
ಸಿಕ್ಕಿದಾ ಬಾಳ್ವೆಣದ ತೊಡೆಗಳ | ಕುಕ್ಕಿ ನೆತ್ತರಕುಡಿದು ತಱಿದುಱಿ |
ಸೊಕ್ಕಿ ಪೆಕ್ಕಣವಾಡುತಿರ್ದುದದೊಂದು ತಾಣದಲಿ || ೧೫ ||

ಮಸಣವಿಂತು ಭಯಂಕರಿಸಲು | ಕ್ಷಿಸುತ ವಸುದೇವನು ನಡೆದು ಶಂ |
ಕಿಸದೆ ಬಂದೊಂದುರಿವ ಸಿದಿಗೆಯ ಸಾರ್ಕೆನಿಂದಿರ್ದು ||
ನಸು ಬೆದಱದಿರಿಯೆಂದು ಮಿಗೆ ಮಂ | ತ್ರಿಸಿ ವಿಭೂತಿಯ ನಿಟ್ಟವರ ನಂ |
ಬಿಸಿಯೆ ಸಾಧಿಪೆ ನಿಲ್ಲಿಯೇಕಾಂತದಲಿ ವಿದ್ಯೆಯನು || ೧೬ ||

ಎಂದವರನತ್ತೊಂದು ದೂರದಿ | ನಿಂದಿರೆಂದಿರಿಸಿದನು ಪೂಜಿಸು |
ವಂದವನೆ ತೋರಿಸಿ ನಿಜಾಭರಣಗಳ ಕಳೆದಿರಿಸಿ ||
ನಿಂದು ನಿಷ್ಕಾರಣದಲಣ್ಣನು | ನಂದನದೊಳಿಟ್ಟನು ಸೆರೆಯ ತಾ |
ನಿಂದು ಸೊಡಲೆಯ ಕಿಚ್ಚಿನಲಿ ಬಿದ್ದಳಿದೆನೆಂದೊದಱಿ || ೧೭ ||

ಉರಿವ ಸಿದಿಗೆಯೊಳೊಂದು ಸಬವನು | ಭರದಲಿಟ್ಟಡಿ ಪಜ್ಜೆಯಲ್ಲಿಗೆ |
ಹರಿದು ಹೋದಂದವನು ಕಾಣಿಸಿ ಕರಿ ನೆಳಲ ಮಱಿಯಿಂ ||
ಇರದೆ ವಿದ್ಯಾಲಂಘನೆಯೊಳಾ | ಚರಣಲಚ್ಚಣ ಗಾಣದಂದದಿ |
ತೆರಳಿ ಪೋದನು ಕುವರನತ್ತಲುವಿತ್ತರಿವರಾಗ || ೧೮ ||

ಅತಿಭಯಂಕರದನಿಯ ಕೇಳುತ | ದೃತಿಯಡಗಿ ಹರಿತಂದವರು ಬಲು |
ಚಿತೆಯೊಳಾ ರೂಹಳಿದುರಿವ ಶವಗಂಡು ಘೋಳಿಟ್ಟು ||
ಚಿತೆಯ ಕೆಲದೊಳು ರತ್ನ ಭೂಷಣ | ವಿತತಿಯನು ಕಂಡಲ್ಲಿ ಗೈದಿದ |
ಗತಿಯ ಹಜ್ಜೆಯ ಕಂಡು ಬಾಯ್ಬಿಟ್ಟೆತ್ತ ಹೊರಳಿದರು || ೧೯ ||

ಅನಿತರೊಳು ರವಿ ಮೂಡಲಾ ಕುವ | ರನ ವಿಭೂಷಣಗಳನು ಮರಗೊಂ |
ಬಿನಲಿ ಕಟ್ಟಿದ ಬರೆದ ಪಟವನು ಮುಂದೆ ತಂದಿಳುಪಿ ||

ಜನಪತಿಗೆ ಕುವರನ ಸಖರು ಕಾ | ಪಿನ ಭಟರು ಬಿನ್ನವಿಸಲಮ್ಮದ |
ವನಿಗೆ ಬೀಳಲು ನೋಡಿ ಬೆಂಬೀಳ್ದನು ಮಹೀಕಾಂತ || ೧೦ ||

ತಳಮಳಗುಗೊಂಡರಸ ತಮ್ಮನ | ಹೊಳೆವ ಭೂಷಣಗಳನು ಕಂಡಾ |
ಗಳೆ ಪಟವನೋದಿಸಲು ನಾಂಪಾದರಿಗನೆಂದೆಲ್ಲ ||
ಪೊಳಲ ಜನವುಯ್ಯಲ್ಬಿಡದು ಗಡ | ಪಳಿನುಡಿಯ ನಮ್ಮಗ್ರಜದ ಕಿವಿ |
ಗಳನು ತಾಗಿತು ನನ್ನದೆಸೆಯಿಂ ನಾ ದುರಾತ್ಮನಲ || ೧೧ ||

ಪರವನಿತೆಯೆರಿಗೆಱಗಿದೊಡೆ ನಾಂ | ವರ ಸಮುದ್ರವಿಜಯನ ತಮ್ಮನೆ |
ಪರಮಜಿನಪದ ಭಕ್ತನೇ ಅಕಟಕಟ ಬಸದಿಯಲಿ ||
ಗುರುಗಳಲಿ ಬಳಿಕೋದಿದೆ ನೆನೆ | ನೆ್ರಮೆ ಪಳಿಗೊಳಗಾದೆ ಬನದೊಳು |
ಧರೆಯಱಿಯೆ ಸೆಱೆಯಾದೆನೆಂನೀ ಬಾಳ್ಕೆಯೇಕೆಂದು || ೧೧ ||

ದೂವೆಯುರಿಯೊಳು ಬೀಳ್ದು ತನ್ನಯ | ಜೀವ ಗೆಡಿಸಿದೆನೆಂಬ ವಕ್ಷಣೆ |
ಯಾವಿಭವ ಕಿವಿಸೋಂಕಲೊಡನೊಱಗಿದನು ಮೂರ್ಛೆಯಲಿ ||
ತೀವಿದುದು ಸಭೆ ಬಳಿಕಲೊಱಗಿತು | ಭಾವಿಪೊಡೆ ಸಮ್ಮೋಹನಾಸ್ತ್ರವೆ |
ಆವರಿಸಿದುದೊ ವಿಷಯಗಾವಳಿ ಬೀಸಿದುದೊಯೆನಲು || ೧೩ ||

ಕೇಳಿದವರೆಲ್ಲರ ಬಸುರಿನೊಳು | ಬಾಳಸಿದ ತೆಱದಿನಾದು [ದೊಡನೆ] |
ಘೋಳೆನುತ ಶಿವದೇವಿ ಮೊದಲಾದವರು ಹೊರಳಿದರು ||
ಮೇಳಿಸಿಯೆ ಗುರುಹಿರಿಯರಾ ಭೂ | ಪಾಲವನು ಶಿಶಿರೋಪಚಾರದಿ |
ಬಾಳಿಸಿದರೆಚ್ಚಱಿಸಿದರು ಸಭೆಯನು ಬಳಿಕ್ಕಿವರು || ೧೪ ||

ಬೆಸನೆ ದಾರುಕವಲರ್ಭರ್ಕಳು | ಬಸಿವ ಕಣ್ಬನಿ ಗದ್ಗದ ಸ್ವನ |
ಉಸುರ ಪರಿವೆರಡಳ್ಕೆ ಒಯ್ಲೊಳು ಮುಸುಡ ಶೋಕವನು ||
ಪಸರಿಸಲು ತಮ್ಮಮನು ನೃಪವಂ | ಬೆಸಿದ ತೆಱನನು ಮರಣದಿರವನು |
ಉಸುರಲಂತಪ್ಪರವು ಘೋಳೆನೆ ನೃಪತಿ ಮರವಟ್ಟ || ೧೫ ||

ಗಾಳಿಯೆತ್ತಿದ ತುಪ್ಪುಳಾವೆಡೆ | ಬೀಳುವುದೆನಿಪ್ಪುದನು ಮೊದಲಾ |
ಪೇಳಬಲ್ಲರೆ ಕೆಡೆದ ಬಳಿಕೆಲೆ ಕಾಣ್ಬುದಾತೆಱದಿ ||
ಮೇಳಿಸಿದ ಕರ್ಮಾನುಕೂಲದಿ | ಬೀಳೆ ಸಾವನು ಕಾಣ್ಬರೆಲೆ ಭೂ |
ಪಾಲ ಸಂಸಾರ ಸ್ವರೂಪವನಱಿಯದೇ ನೀನು || ೧೬ ||

ಎಂದು ಸಂಯಮಿಗಳು ಹಿತೋಕ್ತಿಗ | ಳಿಂದ ನಾನಾ ನಯದ ತೋರ್ಕೆ ಗ |
ಳಿಂದ ಭೂಪಾಲನ ಮನದ ಶೋಕವನು ಬಿಡಿಸಿದರು ||

ಬಂಧುಗಳ ನೋವಾಱಿಸಿದರವ | ರಂದು ಬಳಿಕ ಸಮುದ್ರವಿಜಯ ನ |
ರೇಂದ್ರನಾ ಕ್ರಮದಿಂದಲಂತ್ಯ ಕ್ರಿಯೆಯನಾಗಿಸಿದ || ೧೭ ||

ಹರಣ ಕಣ್ಣಿಚ್ಚಿಂದ ಮನಸಿಜ | ನುರಿದೆನೆಂಬುದೆ ಸಠೆ ಮನೋಭವ |
ನುರಿದನಾ ವಸುದೇವ ಕುವರನ ಕೂಡದೇದಿಟವು ||
ಪುರವನಿತೆಯರು ಕಣ್ಣ ನೀರನು | ಸುರಿದು ಬೇಟದ ಬಿತ್ತನಕಟಾ |
ಪುರಿದನೇ ಬಿದಿಯೆಂದು ಬೆಚ್ಚನೆ ಸುಯಿದರಡಿಗಡಿಗೆ || ೧೮ ||

ಅತ್ತಲಾ ವಸುದೇವ ಧೀರೋ | ದಾತ್ತನತಿ ಭೀಕರ ವಿಪಿನಗಿರಿ |
ಯೊತ್ತು ನದಿ ಕಾಸಾರಪುರವೆನ್ನದೆಯಧೃಚ್ಚೆಯಲಿ ||
ಉತ್ತರಿಸಿ ತಾನೋರ್ವನೇ ಪೂ | ರ್ವಾತ್ತ ಪುಣ್ಯಸಹಾಯದಲಿ ರಿಪು |
ಮತ್ತ ಕರಿಹರಿ ಪಾಂಥಿಕ ಬ್ರಾಹ್ಮಣನ ವೇಷದಲಿ || ೧೯ ||

ಜವದಿನೈತರೆ ಕುಕ್ಕಟ ಗ್ರಾ | ಮವನು ಕುಂಬರನೋರ್ವನಲ್ಲಿ |
ಪ್ರವರನಂಗಸವುಂದರತೆಯನು ನೋಡಿ ಬೆಱಗಾಗಿ ||
ಎವೆಮಿಸುಕದೆಲೆ ವಿಪ್ರ ನೀವೆ | ತ್ತವತಱಿಪಿರೆನೆ ತೀರ್ಥಯಾತ್ರೆಯ |
ಬವಣಿಗರು ನಾವೆಂದಡವನಿಂತೆಂದ ದಯೆಯಿಂದ || ೨೦ ||

ಅರೆಗಳಿಗೆ ನೀವೆಮ್ಮ ಸಾಲೆಯ | ಲಿರಿಯೆನುತ ಕರಕೊಂಡು ಸಾಲೆಯ |
ಲಿರಿಸಿದನು ಪಾರ್ವರ ಮನೆಯಿಲಾ ಸ್ನಾನ ಭೋಜನಕೆ ||
ಪರಿಕರವನಿತ್ತನುವಡಿಸಿ ಬಂ | ಧುರವಚನದಿಂದ ಕೃತಕ ಪಾರ್ವನ |
ಕರುಣದಿಂದೊಯ್ದಾಗಿಸಿದನಾ ಸ್ನಾನ ಭೋಜನವ || ೨೧ ||

ಅವನಿಪತಿ ಮಿಂದುಂಡು ಬಿಸಿಲನು | ತವಿಸಿ ಅಲ್ಲಿಂ ತೆರಳಿ ಹೋಹಂ |
ದವಸರದಲಲ್ಲಲ್ಲಿ ಹುಟ್ಟಿತು ಸುದ್ದಿ ವಸುದೇವ ||
ತವಕಿ ಅಣ್ಣನ ಕೂಡೆ ಮುನಿದು | ರುವುತ ಸೊಡಲೆಗಿಚ್ಚೆನಲುರಿದನೆಂ |
ದವರವರು ಮಱುಗುವ ದನಿಯನಾಳಿಸಿದನಾ ನೃಪತಿ || ೨೨ ||

ಪಿಂದೆ ಬಂದೆನ್ನಱಸರೆನ್ನ ನಿ | ದೊಂದು ಸಂದೆಗ ಪೊಯಿತೆನುತ ಸಾ |
ನಂದದಲಿ ದೇಶಾಂತರವ ಮಿಗೆ ಚರಿಸಿ ಹೋಗುತಿರೆ ||
ಒಂದು ನಂದನದೊತ್ತಿನಲಿ ಪೋ | ಪೊಂದುದಯ ಕಾಲದಲಿ ದೂರದಿ |
ಸಂದಣಿಯ ಗುಡಿ ತೋರಣಂಗಳ ನೋಡುತೈ ತಂದ || ೨೩ ||

ಅರಸನೈತಂದೊಂದು ಕೆರೆಯೊಳು | ಕರಚರಣ ಮೊಗದೊಳೆದು ಸಂಜೆಯ |
ನಿರದೆ ಬಂಧಿಸ ಬಂದ ಗಂಧರ್ವಾರ್ಯನನು ಕಂಡು ||

ಪುರವಿದಾವುದಿದೇನು ಗುಡಿಯು | ಪ್ವರಿಸಿ ಮೆಱೆವಿದು ಪೇಳಿಮನೆ ಭೂ |
ಸುರನುದಾತ್ತನ ಚೆಲ್ವ ನೀಕ್ಷಿಸುತೆಂದನಿಂತೆಂದು || ೩೪ ||

ಪುರದಪೆಸರಿದು ವಿಜಯಖೇಟವು | ಪುರವರನು ಜಿತಶತ್ರುವಾ ನೃಪ |
ನರಸಿ ಸುಮ್ಮನೆ ಅವರ್ಗೆ ಜಯೆ ಜಯಸೇನೆಯೆಂಬವರೂ ||
ವರತನೂಭವೆಯವರೊಳಗ್ರಜೆ | ಸುರಸ ಗಾನದಿ ಚದುರೆ ನರ್ತಕಿ |
ಯರ ಶಿರೋಮಣಿ ಯಾಕೆಯಿಂದುವವರಾ ಸ್ವಯಂವರವು || ೩೫ ||

ನಾವವರ ಗಂಧರ್ವ ಗುರುಗಳು | ನೀವಿದಾರನೆ ತೀರ್ಥವಾಸಿಗ |
ಳಾವೆನಲು ನೀವೆಮ್ಮ ಪಂಕ್ತಿಯಲುಂಡುಯೆಲೆಪಾರ್ವ ||
ಈ ವಿನೋದವ ನೋಡಿ ಪೋಗೆನೆ | ನೀವು ಹೇಳಂತಾಗಲೆಂದುದ |
ರಾ ವಿಭುದನೊಡನೈದಿ ಮಜ್ಜನ ಭೋಜನಂ ಗೈದು || ೩೬ ||

ಸಿಂಗರಿಸಿ ನೆರೆತಂದುದಿತ್ತಲು | ಅಂಗ ವಂಗ ವರಾಟ ಲಾಟ ಕ |
ಳಿಂಗ ಮಾಳವ ಮಗಧ ಕರ್ನಾಟಕಾಂಧ್ರ ದೇಶಾದಿ ||
ತುಂಗ ವಿಕ್ರಮರವನಿ ಪತಿಗಳು | ಸಂಗಡಿಸಿ ತಂತಮ್ಮ ವಿಭವದಿ |
ಹಿಂಗದೈ ತಂದಾ ಸ್ವಯಂವರ ಸಾಲೆ ಬಳಸಿದವು || ೩೭ ||

ಜನಕನನುಮತದಿಂದಲಾ ನಿಜ | ತನುಜೆಯರು ಪುಷ್ಪಕ ವಿನುತ ರಥ |
ವನು ಬೆಡಂಗಿನಲಂಕರಿಸಿ ಲೋಚನೆ ಮರೀಚೆಗಳಿಂ ||
ನನೆ ಗಣೆಗಳಖಿಳಾವನೀಶರ | ಮನವ ಸೂಱೆಯಕೊಂಡು ವಸುದೇ |
ವನನದೊಂದೆಡೆ ಕಾಣುತಾಳ್ವೆಸಕೆರಗಿದವು ನಲಿದು || ೩೮ ||

ಪುತ್ರಿಯರ ಕಣ್ಗೆಱಗಿ ಪಿತೃ ಜಿತ | ಶತ್ರುರಾಯನು ಕಂಡೊಸೆಯೆ ನೃಪ |
ಪುತ್ರಿಯರು ಗಂಧರ್ವವಿದ್ಯಾಚಾರ್ಯನನುಮತದಿ ||
ಧಾತ್ರಿಗವತರಿಸಿದರು ರತ್ನವಿ | ಚಿತ್ರಶಾಲೆಯೊಳಿಕ್ಕಿದಾಸನ |
ನೇತ್ರ ವಿಭ್ರಮ ವೀಯಲೊಪ್ಪಿದರರದನಲಂಕರಿಸಿ || ೩೯ ||

ಅರಸನಗ್ರತನೂಜೆ ಜಯೆ ಭೂ | ಸುರನವೊಲುಸುತೆಗೂಡಿ ತನ್ನಯ |
ಕೊರಳಕಟ್ಟಳೆಗೊದಗೆ ದಂಡಿಗೆ ವಿಡಿದು ಮಿಡಿದೊಡನೆ ||
ವರ ಬಜಾವಣೆಗೈದು ಸಭೆ ಸೈ | ವೆರಗುಗೊಳಳಾಳಾಪಿಸುತ ಮಿಗೆ |
ಕರೆದು ತಂದಿರಿಸದಳು ರಾಗಾಧಿದೇವತೆಯಾ[ಕೆ] || ೪೦ ||

ಪವಣ ತ್ರಿಸ್ಥಾನದೊಳು ವಿನಿಬ | ಧ್ಧವನಿ ಬಧ್ಧ ದ್ವಿತೀಯ ಮಾರ್ಗದೊ |
ಳವದರಿಕೆ ಅನುಕಂಪ ನಾಸಿಕ ಗಧ್ಗವಾದಿಯಹ ||

ವಿವಿಧ ದೋಷವಿದೂರದಿಂದೈ | ತೆಅ (?)ದ ಸೂಡನು ಪಾಡಿ ಕೇಳ್ವರ |
ಕಿವಿಗಳೊಳು ಗಾನಾಮೃತವ ಪಿಂಡಿದಳು ಸಭೆಮೆಚ್ಚೆ || ೪೧ ||

ಪದೆದ ರಾಜಕುಮಾರಕರು ತೇ | ಲಿದರು ಸಂಗೀತಾಮೃತಾಬ್ಧಿಯೊ |
ಳೊದವಿ ವಸುದೇವನು ಜಯೆಯ ಕೈದಂಡಿಗೆಯ ಕೊಂಡು ||
ಮುದದಿ ಪಾಡಲು ಕೇಳ್ದು ತತಿಗು | ತ್ತಿದರರಸುಗಳು ಮೆಚ್ಚೆಜಯೆ ಸುವು |
ಡಿದಳು ಕುವರನ ಕೊರಳಿಗೊಪ್ಪುವ ರನ್ನಮಾಲೆಯನು || ೪೨ ||

ಕೊರ್ವಿದತಿರಾಗದಲಿ ಮಿಗೆ ಗಂ | ಧರ್ವಗುರು ಕೊಂಡಾಡೆ ಭೂಪನ |
ಉರ್ವರಿಸಿ ಜಯಸೇನೆ ರಂಗಂಬೊಕ್ಕು ನರ್ತಿಸಲಾ ||
ಉರ್ವಿಯರಸನು ಕೂಡೆನರ್ತಿಸೆ | ಸರ್ವರುಂ ಮೆಚ್ಚುತಿರೆ ಸೋಲ್ತಳು |
ಗರ್ವಿಸದೆ ಭೂವರಗೆ ರನ್ನದ ಮಾಲೆ ಸುವುಡಿದಳು || ೪೩ ||

ಮೊಳಗಿತುತ್ಸಾಹಾನಕವು ಮಿಗೆ | ತೊಲಗಿದರು ನೆರೆದರಸುಗಳು ಚೆಲು |
ವಳಿಯನನು ಸುತೆಯರನು ಸಲೆಮುಂದಿಟ್ಟುಕೊಂಡರಸ ||
ಪೊಳಲನರಮನೆಯ್ಯೆದೆ ಕನ್ನಡಿ | ಕಳಸ ಕೊಡೆ ಗುಡಿ ಮಂಗಳಸ್ವನ |
ಬಳಸಲುಚಿತಾಸನದೊಳಿರ್ದನು ಬಂಧು ಜನ ವೆರಸಿ || ೪೪ ||

ಅಳಿಯ ನಿಮ್ಮಯ ಕುಲವಿದಾವುದು | ತಿಳುಪಿಮೆನೆ ಪಾರ್ವನು ಕುಲದೊಳೆನೆ |
ಚೆಲುವ ಕನ್ನೆಯರೀರ್ವರನು ಸುಮುಹೂರ್ತದಲ್ಲಿ ನೃಪತಿ ||
ಕುಲದನುಕ್ರಮದಲಿ ವಿವಾಹವ | ನೊಲಿದು ವಸುದೇವಗೆ ನಿಮಿರ್ಚಿದ |
ನಿಳೆ ಪೊಗಳಲುತ್ಸವದಿನವರೊಡನರಸ ಸುಖಮಿರ್ದ || ೪೫ ||

ಅವನ ಬಾಯ್ದಂಬುಲವೆ ತಂಬುಲ | ವವನಮುಡಿವೂಗಳೆ ಮುಡಿವ ಪೂ |
ವವನ ತನು ಗಂಧ ಕತ್ತುರಿಯಂ ತನುಲೇಪ ||
ಅವನ ಬೇಳುಡೆಯುಡಿಗೆ ಜೀವನ | ವವನೆ ತವಗಾಗಿರ್ದು ಸುಸಿಲನು |
ಸವಿದರಾ ಸುಕುಮಾರಿಯರು ವಸುದೇವನೊಳು ಸುಖದಿ || ೪೬ ||

ಪಿರಿಯರಸಿಯೊಂದು ದಿನ ಮೇಳದ | ಲರಸನಿಂ ನೀ ವೀರವಿತರಣ |
ಸುರಸತನ ಕಡುಜಾಣ್ಮೆ ಚಾಟು ಕಲಾಪ್ರವೀಣೆಯಲ ||
ಪಿರಿದು ಧೈರ್ಯವಧೂ ಸುವಶ್ಯತೆ | ಅರಸು ಮಗಗಹುದಲ್ಲದಿದು ಪಾ |
ರ್ವರೊಳಿರದು ನಿನ್ನನ್ವಯ ಹೇಳೆಂದಳಾ ಕಾಂತೆ || ೪೭ ||

ಅತಿಚತುರೆ ಸುಸ್ಥಿರೆ ಸುಬುದ್ಧಿ ವಿ | ನುತ ಮಹಾಸತಿಯದಂದಜೆತು ಭೂ |
ಪತಿ ನಿಜಾನ್ವಯವನು ತಿಳಿಯೆ ಮುನ್ನೀರ್ದ ಬಂದಿರವ ||

ಸತಿಗಱಿಪಿ ಮುದದಿರುತಿರಲ್ಕಾ | ಸತಿ ಪಡೆದಳಕ್ರೂರನೆಂಬಾ |
ಸುತನನೀರ್ವರು ತಾಯಿಗಳೊವುತ ಸುಖದಲಿರುತಿಹರು || ೪೮ ||

|| ಅಂತು ಸಂಧಿ ೧೫ಕ್ಕಂ ಮಂಗಲಮಹಾ ||

## ವಸುದೇವ ಪರ್ವ (ಸಂಧಿ ೧೬)

**ಸಂಧಿ ೧೬**

ಕೇಳು ಮಗಧಾಧೀಶ ತದ್ಭೂ | ಪಾಲನನು ಖಗನೊಯ್ಯೆ ಬಿಡಿಸಿದ |
ಳಾ ಲತಾಂಗಿ ಪಳಂಚಿ ಶಾಲ್ಮಲಿದತ್ತೆಯದಟಿನಲಿ || ಪಲ್ಲ ||

ಒಱೆಯುಗಿದ ಕೂರಸಿಯ ಮೊನೆಯಿಂ | ದಱಸಿಯುಂಬುದೆ ಕ್ಷತ್ರಿಯರ ಗುಣ |
ನಿಱಿಮರೆಯ ಉಂಬುಣಿಸು ನಮಗಿದು ಧರ್ಮವಲ್ಲೆಂದು ||
ನೆಱಿಮನದೊಳೇವೈಸಿ ತೋಳಿನೊ | ಳೊರಗಿದಿನಿಯಳ ಕರ್ಣ ಪೂರದೊ |
ಳೆಱಯ ಕತ್ತುರಿರಸವನನೆ ಮೊನೆಯಿಂದ ಲೇಖಿಸಿದ || ೧ ||

ಒಂದು ಕಾರ್ಯ ನಿಮಿತ್ತ ಪೊಪೆನ | ದೊಂದೆಡೆಗೆ ಕೆಲವಾನು ದಿವಸಕೆ |
ಬಂದಪೆನು ಕಾಂತೆಯರು ಚಿಂತಿಸಬೇಡ ತನ್ನಾಣೆ ||
ಎಂದು ನಂಬುಗೆಯಕ್ಕರವ ಬರೆ | ದಂದಿನಿರುಳತಿ ತುಂಗಬಲನೊಡ |
ಲಿಂದಲಸು ಪೊಱವಡುವವೊಲು ಪೊಱವಟ್ಟನಲ್ಲಿಂದ || ೨ ||

ಆರುವಱಿಯದ ತೆಱದಿ ಹರಿಕುಲ | ಚಾರುಮಣಿ ಹೊಱವಂಟು ಹೊಳಲನು |
ಧೀರನಧಟಿಂ ಹೋಹುವಾಗಲದೊಂದು ತಾಣದಲಿ ||
ಘೋರತರ ವನವಿದ್ದುದೊಂದತಿ | ಕ್ರೂರ ಮೃಗಗಳ ತಾಯಿವನೆ ಕಾಂ |
ತಾರ ಚರರಾಡುಂಬೊಲನು ತಾನಾಗಿ ಭೀಕರದಿ || ೩ ||

ಅದುವೆ ಮಿಥ್ಯಾದೃಷ್ಟಿ ಜೀವದ | ಹೃದಯದಂದಲಂಧಕಾರವೆ |
ಪುದಿದಿಹುದು ತಕ್ಕವರವೊಲು ವಂಶಾವಳಿಗಳಿಂದ ||
ಸದನದಿಂದದಿ ನಿಮಿರ್ದ ಭದ್ರದಿ | ವಿದಿತ ಪತ್ರ ಲತಾವಳಿಗಳಿಂ |
ದಿದು ವಿದೇಹಕ್ಷೇತ್ರದಂತತಿ ಖಗಕುಲದಿನಿಹುದು || ೪ ||

ರದನಿಗಳ ಭೃಂಹಿತದಿ ಕಲಿ ಸಿಂ | ಗದ ಮಹಾಗರ್ಜನೆಗಳಿಂ ಕೊ |
ಬ್ಬಿದ ಹುಲಿಯನಿಷ್ಠುರರವದಿ ಕಾಳ್ಕೋಣಗಳು ಮಸಗಿ ||

ಸದೆವ ಕೋಡಿನ ಕೀಳನಾದದಿ | ಬಿದಿರಣೆಯ ಚಿತ್ಕಾರದಿಂ ಪ್ರಳೆ |
ಯದ ಸಿಡಿಲ್ಗಳ ಬಳಗದಾಗರ ವೆನಿಸಿತಾ ವಿಪಿನ || ೫ ||

ಪುಲಿದೊಗಲ ಪೊಟೆಜೇನುತುಪ್ಪದ | ನಳಿಗೆ ಮೇಣದಮುದ್ದೆ ಆನೆಯ |
ತಲೆಯ ಮುತ್ತಿನ ಪುಡಿಕೆ ಚಮರೀವಾಲುಗಳದಿಂಡು ||
ಪುಲಿಯ ಮಟೆ ಸಿಂಗದ ಕಱುಗಳೆ | ಕ್ಕಲನ ಕುರುಣೆಗಳಿಂತಿವನು ಕೊಂ |
ಡೊಲಿದು ಪೊಳಲಿಗೆ ಪೋಪ ಬೇಡರ ನೆರವಿಯೊಪ್ಪಿದುದು || ೬ ||

ತಳಪಗಂಗಳ ನಗೆಮೊಗದ ತೊಂ | ಗಲು ಗುರುಳ ಸುಲಿಪಲ್ಲ ನೀಲದ |
ಕಲಶವೆನಿಸುವ ಪೆರ್ಮೊಲೆಯ ನಳಿತೋಳ ಸೆಳ್ಳುಗುರ ||
ತಳುವಸುಱ ಸೆಲೆನಡುವನುಡ್ಡೊಡೆ | ಗಳ ಬೆಳೆದ ತನಿಜವ್ವನದ ಕಡು |
ಚೆಲು ಶಬರಿಯರು ಕಾಳರಾತ್ರಿಯ ಸಿರಿಗಳೆನಿಸಿದರು || ೭ ||

ಅರಸನೀಕ್ಷಿಸುತಲ್ಲಿ ಪೋಪವ | ಸರದೊಳಿರ್ದುದು ಮುಂದೆ ಜೊನ್ನದ |
ಹರಿವರಿಯೊ ಪಾಲ್ಗಡಲ ಮೂಲಸ್ಥಾನವು ಬನದ ||
ಸಿರಿಯನಗೆಗಣ್ಬೆಳಗು ನಿಂದುದೊ | ಪಿರಿಯ ಮುತ್ತಿನ ಬಿತ್ತು ನೀರೋ |
ಪರಿಕಿಸುವೊಡನೆ ತಿಳಿದ ಪೂಗೊಳನೊಂದು ಚೆಲುವಾಯ್ತು || ೮ ||

ಪಾಡುವುದು ಅಳಿರವದಿ ಕೈಗಳ | ನೀಡುವುದು ನಿಡುದೆರೆಗಳಿಂ ದೆಸೆ |
ನೋಡುವುದು ನೆಯ್ದಿಲುಗಳರಳಿಂ ಮಂದಹಾಸವನು ||
ಮಾಡುವುದು ತಾವರೆಯ ನಗೆಯಿಂ | ನೋಡಿ ಸೋಲ್ತಿರೆ ನೆರವರೊಳು ಮೆಯಿ |
ಗೂಡುವುದು ಕಾಸಾರವದು ಜೋಡೆಯರ ಬೆಡಗಿನಲಿ || ೯ ||

ತೀವಿದರಗೆಟೆವೊಕ್ಕುಕಲಿಸುವ | ದೇವಮಿಂದೀಸಾಡಿ ದಡದಲಿ |
ದೇವರನು ವಂದಿಸಿ ಅಶೋಕೆಯ ಹೊದರಲಿನಿಸಿರಲು ||
ಏವೊಗಳ್ವೆ ನಮಗಾಹಲಿರ್ದು ಸ | ರೋವರದಿನೊಂದಾನೆಯೆದ್ದುದು |
ಅವನದಿಯಿಂದಾನೆಮೀನೊಂದೆದ್ದವೊಲು ಭರದಿ || ೧೦ ||

ಮುಗಿಲು ಕೈಗಾಲ್ವೊಡೆದಂಜನ | ನಗವು ನಡೆಗಲ್ತುದುಯೆನಲು ಮಿಗೆ |
ನೆಗೆದು ನಿರ್ವೂವಟ್ಟೆಕೊಳುತೆ ಮೃಣಾಲ ಲತೆಗಳನು ||
ನಿಗಳವೆನಲೆಳಕೊಳುತಹೊಳೆಯೆನ | ಟೊಗುತ ಕೀಳ್ಮದ ಮೇಲು ಮದಗಳ |
ನೊಗೆದ ಪಿಂಗಲನ ನೇತ್ರಯನಡು ಬಂದುದೊಂದೆಡೆಗೆ || ೧೧ ||

ಹಿಂದೆ ಅಟ್ಟುವ ಸಿಂಹವಾದಿಯ | ಹಂದಿಯುಟ್ಟುವ ಗ್ರಾಮಸಿಂಹಗ |
ಳಂದವಾದವು ಗಂಧ ಗಾಳಿಗೆ ಆನೆಗಳ ಹಿಂಡು ||

ಒಂದು ಗಾಳಿಗೆ ತೇಲ್ವ ಮುಗಿಲುಗ | ಳಂದದಿಂದೋಡಿದವು ಬರಿ ಕೈ |
ಯಿಂದೆ ಪಿಡಿಯನು ಪಿಡಿದು ನಿಂದುದದೊಂದು ತಾಣದಲಿ || ೧೨ ||

ಆನೆ ಬಿನ್ನಣಿಯಪ್ಪುದೀ ಕ | ಟ್ಟಾನೆಯೆಂದು ಕುಮಾರನಾ ಮದ |
ದಾನೆಯನು ಬೆಂಬರಿದು ಮಿಗೆ ಸರದೋ ಟಿ ಕೇಳುತದು ||
ಏನನೆಂಬೆನು ಹರಿವ ಗಾಳಿಗ | ದೇನು ಗರಿಮೂಡಿದವೊಲಾ ಕ |
ಟ್ಟಾನೆ ಭೋರನೆ ಬಿಟ್ಟ ಕಣು ಬಿಗುಮೊಗದಿನಿದಿರಾಯ್ತು || ೧೩ ||

ಪಿಡಿದುದಧಿಯೆಂಬಾಸೆದೋರಿಸಿ | ಕೊಡುತೆ ಪುಷ್ಕರಣಕ್ಕೆ ತಳುವನು |
ತೊಡರ್ದು ನಿಗ್ಗವದೆಡೆಲಂಘ್ರಿಗಳೆಡೆಯಲೆಲರಂತೆ ||
ಒಡಲೆಡೆಯೊಲೊಲೆದಾಡೆ ಶೀಘ್ರದ | ಲೆಡಬಲಕೆ ರ್ದ್ದಿ ತಿರುಗಿ ಮದ |
ವುಡುಗ ಬಳಲಿಸಿ ಸಿಂಗದಂದದಿ ಬೆಂಗೆ ಲಂಘಸಿದ || ೧೪ ||

ತುಂಗ ಗಜವಶವಾಗಿ ಮುನ್ನಱು | ದಿಂಗಳೆಂಬವೊಲಿಚ್ಛೆಗೊದವಿ ಬೆ |
ಡಂಗಿನಿಂ ಪರಿದಾಡಿಲೊದೆವಧಟನ ಬಳಿಗೆ ಭರದಿ ||
ಬಾಂಗಡೆಯನಿಳಿತಂದೆಱಗಿ ನೃಪ | ಸಿಂಗ ಗಜವ ನಿರಂಕುಶದಿನಾ |
ಳ್ದಂಗವಿದು ಲೇಸೆನುತಲೀರ್ವರು ನೃಪನ ಪೊಗಳಿದರು || ೧೫ ||

ನೀವಿದಾರೆಂದವರನಾ ವಸು | ದೇವ ಬೆಸಗೊಳೆ ಮುಗಿದ ಕೈಯಿಂ |
ದೇವ ನಮ್ಮಾಣ್ಮನ ಬೆಸದಿನೀ ವನವ ಕಾದಿಹೆವು ||
ಈ ವನವನೀಸು ದಿನವಗಲದೆ | ನಾವು ಕಾದುದು ಸಫಲವಾದುದು |
ಜೀವಿಸಿದೆವೆನೆ ಕುವರನೇನೀ ತೆಱನಱುಹಿಯೆಂದ || ೧೬ ||

ಚದುರಕೇಳೀ ಭರತವಿಜಯಾ | ರ್ಧದಲಿ ತೆಂಕಶ್ರೇಣಿಯೊಳಗಿ |
ಪ್ಪುದು ನಗರವದು ಕುಂಜರಾವರ್ತವು ತದವನೀಶ ||
ವಿದಿತ ಖಗಪತಿಯಶನಿವೇಗನ | ಸುದತಿ ವಿದ್ಯದ್ವೇಗೆಯವರೊ |
ಪ್ಪಿದ ಕುವರಿ ಪೆಸರಿಂದೆ ಶಾಲ್ಮಲಿದತ್ತೆ ಕೇಳೆಂದ || ೧೭ ||

ಚಿತ್ತಯಿಸು ಭೂಪಾಲ ಆ ಸತಿ | ಚಿತ್ತಜನ ಮಂತ್ರಾಧಿದೇವತೆ |
ಪೆತ್ತ ಖಚರ ನೃಪಾತ್ಮರಮೆಚ್ಚಳು ಸುರೂಪಿನಲಿ ||
ವೃತ್ತಕುಚೆಯಂದಶನಿವೇಗನು | ಪತ್ತಿದವಧಿಜ್ಞಾನಿಗಳ ಮುನಿ |
ಪೋತ್ತಮರನಭಿನುತಿಸಿ ಕೇಳ್ದೊಡೆ ಪೇಳ್ದರಿಂತೆಂದು || ೧೮ ||

ಈವನದೊಳೀ ಕೊಳನ ಮಿಂದಿಂ | ದೀವನೀಭವವ ಸವ ಮಾಡಿದ |
ನಾವನಾತನೆ ಅಳಿಯನಹನಿನಗೆಂದೊಡಂದಿಂದ ||

ಕಾವಲಿಕ್ಕಿಹನೆಱೆಯನೆಮ್ಮನು | ಈವನದೊಳಿಂದೀ ಕುಮಾರಿಯ |
ಜೀವವೆಮ್ಮಯ ಪುಣ್ಯಬಹವೊಲು ಬಂದೆ ನೀನರಸ || ೧೯ ||

ಎಂದು ರನ್ನ ವಿಮಾನಮಿದೆ ನಲ | ವಿಂದೆ ವಿಜಯಂಗೈಯಿಮೆನೆ ನೃಪ |
ನಂದುರದ ನಿಷ್ಕಂಧದಿಂದ ವಿಮಾನಕವತರಿಸೆ ||
ಚಂದದಲಿ ಪಲದೇಶಪುರಗಳ | ಸೌಂದರತೆಯೀಕ್ಷಿಸುತ ಬರೆ ಭೋ |
ರೆಂದು ಬಾಂಬಟ್ಟೆಯಲಿ ಬಂದುದು ತತ್ಪುರದ ಬನಕೆ || ೨೦ ||

ಇರಿಸಿ ಬಹಿರುದ್ಯಾನದೊಳು ಭೂ | ವರನನವರೀರ್ವರು ಖಚರರಾ |
ಪುರವನೈದಿ ನಿಜೇಶಗೀತೆಱನಱಿಪೆ ಹರುಷದಲಿ ||
ಪುರವ ಗುಡಿ ತೋರಣದಿ ಮಿಗೆ ಸಿರಿ | ಗರಿಸಿ ಸಬ್ಬರಕಳುಹಿದ ಕುವರನ |
ಕರಸಿಕಾಣುತ ಓಲಗದನೇಳ್ದಪ್ಪಿದನು ಖಚರ || ೨೧ ||

ಅಶನಿವೇಗ ಖಗೇಂದ್ರ ನೊಲಿದೀ | ಕ್ಷಿಸುತಲಳಿಯನ ರೂಪ ಯೌವನ |
ವಸಮ ವಿಕ್ರಮವೆಂಬಿವನು ನೆಱೆಮೆಚ್ಚಿ ಹರುಷದಲಿ ||
ಒಸೆದು ಶುಭಲಗ್ನದಲಿ ಉತ್ಸವ | ವೆಸೆಯೆ ಶಾಲ್ಮಲಿದತ್ತೆಯನು ರಾ |
ಜಿಸುವ ವಸುದೇವಂಗೆ ಮದುವೆಯ ಮಾಡಿ ಸುಖಮಿರ್ದ || ೨೨ ||

ಅವನ ಚೆಲುವಿಕೆ ಸೆರೆವಿಡಿದುದು | ಅವಳ ಕಂಗಳನವನ ದಿಟ್ಟಿಗ |
ಳೆವೆಯನಿಡಮಱದೆಳಸಿದವು ಖೇಚರಿಯಗಾಡಿಯೊಳು ||
ತವಕಿಸುವ ತನುವೊಂದಱೊಳಗೊಂ | ದವಗಹಿಸಿತೆನೆ ಕೂಡೆ ಸುರತದ |
ಸವಿತವದೆ ಸಮಸುಖವನುಂಡರು ದಂಪತಿಗಳವರು || ೨೩ ||

ಒಂದೆ ಜೀವವದೆರಡು ತನುವೊಲು | ನಿಂದುದೆನಲವರಿರುತಿರಲು ಸತಿ |
ಒಂದುದಿನವೆಲೆಕಾಂತ ನನ್ನನು ತೊಲಗಿ ಚರಿಸದಿರು ||
ಎಂದೊಡಾ ವಸುದೇವನೇಕೆನ | ಲೊಂದಿ ಶಾಲ್ಮಲಿದತ್ತೆ ಪತಿ ಕೇ |
ಳೆಂದಳೆಮ್ಮಯ್ಯನ ಪಿತಾಮಹ ಶರಧಿ ಚಂದ್ರಂಗೆ || ೨೪ ||

ಜ್ವಲನವೇಗನುಮಶನಿವೇಗನು | ಚೆಲುವ ಮಕ್ಕಳು ಪುಟ್ಟೆ ಪಿರಿಯಂ |
ಗಿಳೆಯನಾ ಪ್ರಜ್ಞಪ್ತಿ ವಿದ್ಯೆ ಸಮೇತ ಪಿತನಿತ್ತು ||
ಒಲಿದನಾ ಜಿನದೀಕ್ಷೆಗಿತ್ತಲು | ಜ್ವಲನವೇಗಂಗಶನಿವೇಗನು |
ಸುಲಭನೆನವಂಗಾರ ವೇಗನು ಒಗೆದರಾತ್ಮಜರು || ೨೫ ||

ಇರುತಲೆಮ್ಮಜ್ಜನು ವಿಯಚ್ಚರ | ರರಸುತನದಿಂ ಸುಖಿಸಿ ಕಡೆಯೊಳು |
ವಿರತತೆಯ ನಾಂತಿರ್ವರಾತ್ಮಜರನು ಕರೆದು ತನ್ನ ||

ಧರಣಿಯಿದೆ ಪ್ರಜ್ಞಪ್ತಿಯಿದೆ ಯಿವ | ರೆರಡರೊಳಗಾರ್ಗಾವುದಿಷ್ಟವು |
ಧರಸಿಮೆನಲಂಗಾರವೇಗನು ವಿದ್ಯೆಯೆನು ಕೊಂಡ || ೧೬ ||

ಇಳೆಯನೆಮ್ಮಯ್ಯಶನಿವೇಗನು | ತಳೆದನಜ್ಜಮ ಜ್ವಲನವೇಗನು |
ತಳೆದನಾ ಜಿನರೂಪನಿತ್ತಲು ನಮ್ಮ ಪಿರಿಯಯ್ಯ ||
ತಲೆದನಮ್ಮಯ್ಯನ ವಸುಧೆಯನು | ಸೆಳೆದು ಕೊಂಡನು ತನ್ನವಿದ್ಯಾ |
ಬಲದಿನಾತಂಗಳುಕಿ ಮತ್ತಿತನೀ ಪುರದೊಳಿಹನು || ೧೭ ||

ಪೆತ್ತನೆನ್ನನು ಸುಖದಲಿರುತಿರ | ಲತ್ತಣಿಂದೆ ಜಿತೇಂದ್ರಿಯರು ಸದು |
ವೃತ್ತರಮಲರು ಚಾರಣರು ಬರೆ ಭಕ್ತಿಯಿಂದೆಱಗಿ ||
ಚಿತ್ತಶುದ್ಧದಿ ಧರ್ಮವನು ಕೇ | ಳ್ದುತ್ತಮನೆ ಪೇಳಿನ್ನೆನಗೆ ಪಿತೃ |
ದತ್ತ ರಾಜ್ಯವದಹುದೊ ಆಗದೋ ಎಂದು ಬೆಸಗೊಂಡ || ೧೮ ||

ಅರಸ ನಿನ್ನೀಮಗಳಿಗಾವನು | ಪುರುಷನಹ ಭೂಚರ ನರನ ಸುತ |
ನುರುಪರಾಕ್ರಮಿ ಆತನಿಂದಾ ರಾಜ್ಯವಹುದೆನಲು ||
ಹರುಷದಿಂದಾವಿಹೆವು ತತ್ಪೇ | ಚರನರಿತನಿದ ಗೂಢಚರರಿಂ |
ದರಸಕೇಳವನೆನಗೆ ಬೆದಱುವನೆಣಿಸನುಳಿದವರ || ೧೯ ||

ಇದು ನಿಮಿತ್ತದಿ ನನ್ನ ಬಿಡದಿರು | ಅದಯನವ ಕೊಲೆಗಂಜನೆಂದೊಡೆ |
ಸುದತಿ ಶಾಲ್ಮಲಿದತ್ತೆಯನು ನಸುನಗುತ ಬಿಗಿದಪ್ಪಿ ||
ಬೆದಱದಿರು ಮುನಿನುಡಿದ ನುಡಿ ತ | ಪ್ಪದು ಕಣಾ ಯೆಂದಿರುತಿರಲ್ಕಾ |
ಸುದತಿ ಪಡೆದಳನಾಧೃತನ ಭೂಪಾಲ ಕೇಳೆಂದ || ೨೦ ||

ಪೊಸಬಸಂತದಲೊಂದು ದಿನ ಮೋ | ಹಿಸುವ ಜಲವನ ಕೇಳಿಗಳನಿಂ |
ಪೆಸೆಯಲಾಡಿ ಬಳಲ್ದುಬಂಧುರ ಸಶ್ರಮಿಗಳಾಗಿ ||
ಮಿಸುನಿ ಮಾಡದ ತುದಿ ನೆಲೆಯೊಳಿಂ | ಬೆಸೆವ ನಿದ್ರೆಯೊಳೊರಗಿರಲ್ಕಾ |
ಗಸದೊಳಾಡುತ ಬಂದು ಕುವರನ ಕಂಡನಾ ಖಚರ || ೨೧ ||

ಎಸೆವ ಶಾಲ್ಮಲಿದತ್ತೆ ಯೊಳುದೋ | ಳ್ಬೆಸುಗೆಯನು ಮೆಲ್ಲಗೆ ಬಿಡಿಸಿ ಆ |
ಗಸಕೆ ವಸುದೇವನ ನೆಗೆದು ಕೊಂಡೈದು ಮಾಯೆಯಲಿ ||
ಮುಸುಕಿದನು ನಿದ್ರೆಯೊಳು ನಿದ್ರೆಯ | ನೆಸೆವ ತನ್ನ ವಿಮಾನದಲಿ |
... ... ... ... ... || ೨೨ ||

ಮಡದಿ ಗಂಡನ ಕಾಣದೇಳುತ | ಉಡುಗೆಯನು ಬಿಗಿದುಟ್ಟು ಮುಡಿಯನು |
ಸಡಿಲದಂದದಿಕಟ್ಟಿ ನಿಡುವಾಳ್ಮತ್ತ ಪರವಾಂತು ||

ಕಡು ಜವದಿ ಬೆನ್ನಟ್ಟಿದಳು ಕಂ | ಪಿಡಿದ ಚಂದನ ಒಯ್ವವನ ಬೆಂ |
ಬಿಡದೆ ಬೆನ್ನಟ್ಟುವ ಭುಜಂಗವೊಲವನ ವಹಿಲದಲಿ || ೩೩ ||

ಸ್ಮರನೆಸಲು ಭೋರೆಂದು ಹೂಗಣೆ | ಮೊರೆದು ಪರಿವಂತಾಗಸಕೆ ಖೇ |
ಚರಿಪರಿಯ ಭೋರ್ಗರೆವ ದನಿ ಬೆದರಿಸಿತು ಚಂದಿರನ ||
ತೆರಳಿಸಿತು ಬಿರುಗಾಳಿ ತಾರೆಯ | ನೆರವಿಯನು ಖೇಡೆಯದ ಕೆಂಬಿಸಿ |
ಲುರವಣಿಗೆ ನಿಡುವಾಳ ಮಿಂಚೆಗೆ ಖಚರನೆದೆಗೆಟ್ಟಾಗ || ೩೪ ||

ಬಱಸಿಡಿಲ ಖಲ್ಲುಲಿಯವೊಲು ಬೊ | ಬ್ಬಿಱಿದು ಬಿಡುಬಿಡು ತನ್ನ ಗಂಡನ |
ನಱಿಯೇ ಗಡ ನೀವೆನ್ನ ಪರಿಯನು ನಿನ್ನ ತೋಳುಗಳ ||
ಹಱಿಗಡಿದು ಬಿಸುಡುವೆನು ಕೊರಳನು | ಮುಱಿವೆ ನಾಯುಧವಿಲ್ಲದೆನ್ನೊಡ |
ನೊಱಗಿದನ ಕದ್ದೊಯ್ವುದಧಟೇಂ ಯೆಂದು ತಾಗಿದಳು || ೩೫ ||

ಹೊಡೆದಳಸಿಯಿಂದಾ ವಿಮಾನವ | ನೊಡೆದು ರನ್ನದಕೆಂಡ ಕಡಱಲು |
ನಡುಗಿ ವಸುದೇವನನು ಬಿಸುಟನು ಬೆದರಿ ಖಗನಿಳೆಗೆ ||
ಕಡುಭರದಲಾಯುಧವೆರಸಿ ಹರಿ | ದೆಡೆಯೊಳೋಪನನಾ ಖಚರಿ ಹೊಂ |
ಗೊಡಮೊಲೆಯಲಾಂತಪ್ಪಿ ಪುಳಕದ ಕೀಲನಿಕ್ಕಿದಳು || ೩೬ ||

ಆ ಸಮಯದೊಳಗಾದುದೊಂದಾ | ಕಾಶ ವಚನವು ನಿನ್ನ ಚಿತ್ತಾ |
ಧೀಶನನು ಮೋಹಿಸದೆ ನೀನಿಲ್ಲಿರಿಸಿ ಹೋಗದಱಿಂ |
ಲೇಸು ಕಿಱಿದುಂಟೆನಲು ಕೇಳುತ | ಲಾ ಸುದತಿಯಿದು ದೇವತಾ ಸಂ |
ಭಾಷೆಯೆಂದಱಿದಿನಯನನನು ಬಿಡಲಾರದೊನಲಿದಳು || ೩೭ ||

ದೇವವಚನವಲಂಘನೀಯವು | ಭಾವಿಸುವೊಡೆಂದಾ ಖಚರಿ ತ |
ನ್ನಾವಿರಾಜಿಪ ಪರ್ಣಲಘುವಿದ್ಯೆಗೆ ನಿರೂಪಿಸಲು ||
ಆ ವಿಯಚ್ಚರೆ ಪೇಳ್ದವೊಲು ವಸು | ದೇವನನು ಚಂಪಾಪುರದ ಸಿರಿ |
ದೇವಿದುದ್ಯಾನದೊಳಗಿಳುಹಿತು ಭೂಪ ಕೇಳೆಂದ || ೩೮ ||

ಅನುನಯದಿ ನಿದ್ರಪ್ರಬೋಧಿನಿ | ಎನಿಪ ವಿದ್ಯೆಯ ಎಚ್ಚಱಿಸಿ ಪೊ |
ಯ್ತನಿತರೊಳು ಕೊಳವಕ್ಕಿ ಬನದಕ್ಕಿಗಳು ಸರಗೈಯೆ ||
ಜನಪನೆಚ್ಚತ್ತೆದ್ದು ಕೆಲದಲಿ | ವನಿತಯಲ್ಲೊರಗಿದ್ದ ಸೌಧಾ |
ವನಿಯಿದಲ್ಲೆಂಟು ದೆಸೆ ಈಕ್ಷಿಸುವ ಸಮಯದಲಿ || ೩೯ ||

ಮಿಸುನಿ ಗೋಂಟೆಯ ಬಳಸಿನಿಂ ದೆಸೆ | ದೆಸೆಗೆ ತೊಳಗುವ ಮಣಿಗಳಸ ರಂ |
ಜಿಸುವ ಗೋಪುರ ಸೌಧಗಳ ಸಂತತಿಗಳಿಂ ಮೆಱೆವ ||

ವಸುಧೆಗಚ್ಚರಿಯೆನಿಪ ಪುರ ಕ | ಣ್ಗೆಸೆಯೆ ವಸುದೇವನು ಮನದೆಗೊಂ |
ಡೊಸೆದು ನಡದೈತಂದು ಕಂಡನದೊಂದು ಬಸದಿಯನು || ೪೦ ||

ವರ ಸಮಶ್ರುತಿ ತನ್ನ ಧರೆಗವ | ತರಿಸಿದುದೊಯೆನೆ ಮೆಱೆವ ವಸತಿಯ |
ನರಸನ್ನೈತಪ್ಪೆಡೆಯೊಳರಗೆಱೆಗಂಡು ಪುರುಷದಲಿ ||
ಕರ ಚರಣ ಮೊಗದೊಳೆದು ಪಲ ತಾ | ವರೆಯ ಪೂಗಳ ನಾಯ್ದು ಕೊಂಡಾ |
ಪರಮ ಜಿನಭವನವನು ಪೊಕ್ಕಲು ಸ್ತೋತ್ರ ಮುಖನಾಗಿ || ೪೧ ||

ಬಸದಿಯನು ಬಲವಂದೊಳಗೆ ಪೊ | ಕ್ಕಸಮ ಬಾಣಾರಿಯ ಸಮಕ್ಷದೊ |
ಳೊಸೆದು ಭಾಳಸ್ಥಳನಿಹಿತ ಮುಕುಳಿತಕರನುಮಾಗಿ ||
ವಿಸಮ ಮೋಹ ಮತಂಗ ಕೇಸರಿ | ಕುಸುಮ ಬಾಣನ ರೂಪಡಗೆ ಮ |
ರ್ದಿಸಿದ ಮೃಗಲಿ ಬೋಧ ಸಿಂಧುವೆ ಜಯಜಯಾಯೆಂದ || ೪೨ ||

ಅತಿಭಕುತಿಯಲಿ ಜಿನರ ದರುಶನ | ನುತಿಯನೊಡರಿಸಿ ಮುಕುತಿ ಶಾಂತಾ |
ಪತಿಯನುಚಿತ ವಿಧಾನ ಪೂರ್ವಕ ಪೂಜೆಯನು ಮಾಡಿ ||
ಸ್ತುತಿ ಶತ ಸಹಸ್ರಂಗಳಿಂ ಜಿನ | ಪತಿಗೆರಗಿ ನಿರ್ವಾಣ ಲಕ್ಷ್ಮೀ |
ಪತಿಯು ಮಾನಪ್ಪನ್ನಮುದ್ಧರಿಸೆನ್ನ ನೊಸೆದೆಂದ || ೪೩ ||

ಸಕಲ ಬೋಧನಗಂಧ ಗಂಧೋ | ದಕ ಪವಿತ್ರ ಸಮಸ್ತಕನು ಕಡು |
ಭಕುತಿಯಲಿ ವರಬೋಧ ಸಿಂಧುಮುನೀಂದ್ರರಡಿಗೆರಗಿ ||
ಪ್ರಕಟಧರ್ಮವ ಕುಂಜರಾವ | ರ್ತಕ ಪುರದಿ ತಾಂ ಬಂದ ವೃತ್ತಾಂ |
ತಕಮನವರಿಂದರಿದೆರಗಿ ಪೊರಮಟ್ಟನಲ್ಲಿಂದ || ೪೪ ||

ಮುಂದೆ ಪೋಪುದವಲ್ಲಿ ನಾನಾ | ಚಂದವಹ ಸಿಂಗರದಿ ಸಾಲೆಯ |
ದೊಂದು ಶೋಭಿಪುದದಱ ಮುಂದಣಪಟ್ಟಸಾಲೆಯಲಿ ||
ಸೌಂದರರದ ಗಂಧರ್ವ ವಿದ್ಯಾ | ಮಂದಿರನು ಸುಗ್ರೀವನೆಂಬವ |
ನೊಂದಿ ಪಲಬರು ರಾಜಸುತರಿಗೆ ವೀಣೆಗಲಿಸುತಿರೆ || ೪೫ ||

ಅರಸನಲ್ಲಿಗೆ ಪೋಗೆ ವೀಣೆಯ | ಗುರು ಕುಮಾರನ ನೋಡಿ ವಿನಯದಿ |
ಕರದುಕೊಂಡುಚಿತಾಸನದೊಳೊಲವಿಂದೆ ಕುಳ್ಳಿರಿಸಿ ||
ಅರಸುಮಗನ ಸುರೂಪ ಯೌವನ | ಪುರುಷಲಕ್ಷಣಗಂಡು ಪ್ರಾಕೃತ |
ಪುರುಷನಲ್ಲಿವನೆಂದು ಮನದಲಿ ಪಿರಿದು ಮೆಚ್ಚಿದನು || ೪೬ ||

|| ಅಂತು ಸಂಧಿ ೧೬ಕ್ಕಂ ಮಂಗಳ ಮಹಾ ||

**ಸಂಧಿ ೧೭**

ಅರಸಗೊಪ್ಪುವ ಚಾರುದತ್ತನ | ತೆರನ ಸಂಕ್ಷೇಪದಲಿ ವೀಣೆಯ |
ಗುರು ಖಚರಿ ಗಂಧರ್ವದತ್ತೆಯ ಋತದಿ ಪೇಳಿದನು || ಪದ ||

ಕೇಳು ಶ್ರೇಣಿಕ ಮಂಡಲೇಶ್ವರ | ಹೇಳುವೆನು ವಸುದೇವನೆಂದನು |
ಪೇಳಿಮೆಲೆ ಗಂಧರ್ವ ವಿದ್ಯಾಚಾರ್ಯ ನೃಪಸುತರು ||
ಮೇಳೈಸಿ ವೀಣೆಯನು ಕಲಿವ ಚ | ಡಾಳವೇನತ್ತಾರ ಸಖಿಯರೋ |
ಸಾಲುವೀಣೆಯ ನೊಯುದೆನೆನೇ ಪೇಳ್ದರಾ ತೆರನ || ೧ ||

ಅರಸ ಕೇಳೀ ಹರವು ಚಂಪಾ | ಪುರವಿದರಪತಿ ವಿಮಲವಾಹನ |
ಧರಣಿಪತಿಯವನರಸು ವರಧನು ಚಾರುದತ್ತಾಖ್ಯಾ ||
ದೊರೆವಡೆದ ಸಿರಿವಂತನಾತನ | ವರತನುಜೆಗಂಧರ್ವದತ್ತೆಯು |
ತರುಣಿಯರ ಸೀಮಂತಮಣಿ ಚೆಲುವಿನಲಿ ಭಾಗ್ಯದಲಿ || ೨ ||

ಚತುರೆ ವೀಣಾವಾದ್ಯದಲಿ ಭಾ | ರತಿಯ ಋದ್ಧಿಗೆ ಬಗೆಯಳವನೀ |
ಪತಿಸುತರಣಮೆಣಿಸಲ್ವಿದ್ಯೆಯಲಿ ರೂಪಿನಲಿ ||
ಚತುರ ವೀಣಾವಾದ್ಯದಲಿ ವಿ | ಶ್ರುತನದಾವನು ತನ್ನಗೆಲಿದನೆ |
ಪತಿಯು ತನಗೆಂಬಾ ಪ್ರತಿಜ್ಞೆಯ ನೃಪಾಲ ಕೇಳೆಂದ || ೩ ||

ಒಪ್ಪುವಾಕೆಯ ತಂದೆ ತಿಂಗಳು | ದಪ್ಪದೀ ವೀಣಾಸ್ವಯಂವರ |
ಒಪ್ಪಿಸುವನಖಿಳಾವನೀಶ ತನೂಭವರು ಸೋತು ||
ದರ್ಪಕನ ಪೂಗೋಲ ಘಾಯದಿ | ಕುಪ್ಪಳಿಸಿ ಹಿಂಗುವರೆಲೇ ಕಂ |
ದರ್ಪ ಸಮ ಕೇಳಿದು ನಿಮಿತ್ತವಿದೆಲ್ಲದಱಿಯೆಂದ || ೪ ||

ಹರದನಾತ್ಮಜೆಗೀ ಸೊಬಗು ಸೌಂ | ದರತೆ ವಿದ್ಯಾಗೌರವವು ಮಿಗೆ |
ದೊರಕಲಱಿಯದು ರಾಜಸುತೆಗಲ್ಲದೆಯಿದೇನೆಂದು ||
ಅರಸನದನೇ ತನ್ನ ಮನದೊಳು | ಪರಿಕಿಸುತ್ತಿರೆ ಯಿಂಗಿತದಿ ಕಂ |
ಡರಿದು ಸುಗ್ರೀವಾರ್ಯನೆಂದನು ಕುವರಗಾತೆಱನ || ೫ ||

ಅರಸ ಕೇಳ್ಕೆ ನೀನೆ ಮನದೊಳು | ಪರಿಕಿಪಂದದಲಾ ಕುಮಾರಿತಿ |
ಹರದನಾತ್ಮಜೆಯಲ್ಲ ವಿದ್ಯಾಧರಕುಮಾರಿಯೆನೆ ||

ಹರದ ಸುತೆಯೆನೆ ಬಂದ ತೆರದನು | ವಿರಿಚಿಸಲೆ ಬೇಳ್ಪುದುಮೆನಲು ಬಂ |
ಧುರಗಭೀರ ಮೃದೂಕ್ತಿಯಲ್ಲಿ ಪೇಳಿದನು ಯಿಂತೆಂದು || ೬ ||

ಜನವಿನುತನಾ ಭಾನುದತ್ತನ | ತನುಜ ನೇಸರ ಚಾರುದತ್ತನು |
ಧನದ ಪೆಂಪನು ಪೊಗಳಲೇಂ ಬಹುವಸ್ತು ವಿಸ್ತರನು ||
ವನಜಮುಖಿ ದೇವಿಲೆಯೆನಿಪಳಾ | ತನ ಜನನಿ ಪಲಕಾಲ ವಿದ್ಯಾ |
ಧನವನತಿಗಳಿಸಿದನು ಪೆರತೊಂದರಿಯನಾ ಪರದ || ೭ ||

ಕೆಳೆಯರಾ ಹರಿಶಂಕ ಗೋಮುಖ | ಕಲಿವರಾಹಕನಾಪರಂತಪ |
ಚೆಲುವನಹ ಮರುಭೂತಿಯೆಂಬವರವನ ತತ್ಪುರದ ||
ಅರಸನೊಪ್ಪುವ ಸಚಿವ ತನುಜರು | ಇರುತಿರಲು ಮತ್ತೊಂದು ದಿನವಾ |
ಪುರದ ಪೊರಗೆಸೆವಂಗಮಂದಿರವೆಂಬ ನಗರದೊಳಗೆ || ೮ ||

ಉರುಪಿಕರ್ಮಾಷ್ಟಕವನಿರೆ ಯಮ | ಧರಮುನೀಂದ್ರರು ಮುಕ್ತಿಗೈದರು |
ಪರಮ ಭಕ್ತಿಯಲಾಪ್ರದೇಶದ ಪೂಜಿಸಲೆ ಬಗೆದು ||
ವರ ವಿಮಲ ವಾಹನ ನೃಪಾಲನು | ನೆರಹಿ ಭವ್ಯರ ಯಾತ್ರೆಯನು ಮಿಗೆ |
ಹರುಷದಿಂದಾ ಭಾನುದತ್ತನು ಕೂಡಿಯೈದಿದರು || ೯ ||

ಪೋಗುತಿರಲಾ ಚಾರುದತ್ತನು | ಆಗಳ ನಿಜಸಖರು ಸಾಸೋಬ |
ಗಾಗಿ ಬೆಂಬಳಿ ಬರುತಿರಲು ಕಿರಿದಂತರದಿ ಕಂಡು ||
ರಾಗದಿಂದಾ ಭಾನುದತ್ತನು | ಹೂಗಣೆಯಗೆಣೆ ಮಗನೆ ಇವರೊಡ |
ನೀಗಳೂರಿಗೆ ಹೋಗುತ ……………… || ೧೦ ||

ಇಂಬುವಡೆದಾ ರಜತವಾಳುಕಿ | ಯೆಂಬ ನದಿಯುಪವನದ ಕುಸುಮ ತೊ |
ಡಂಬೆಗಳನಾಯ್ದುರುಹ ಪೂಜೆಗೆ ಕಳುಹಿ ಪೋಗೆನಲು ||
ನೀಂ ಬೆಸಸಿದಂತಾಗಲೆಂದು ಮ | ನಂಬಯಸಿ ಸಖರೊಡನೆ ರಾಗವ |
ಳುಂಬವಾಗಿರೆ ಪೋಗಿ ಕಂಡನು ನದಿಯ ಚೆಲುವಿಕೆಯ || ೧೧ ||

ವಿನುತ ಸಖರೊಡನೈದಿ ತನ್ನಡಿ | ಯನು ನಿರೀಕ್ಷಿಸಿ ಚಾರುದತ್ತನು |
ವನಜತಂಡದ ಬಂಡುವಿಂಡಿನ ಕೂಡೆ ರಾಯಂಚೆ ||
ಬಿನದದಿಂದೆಡೆಯಾಡುತಿಹ ಚೆಲು | ವನು ಗರುಡ ಗಾಂಧರ್ವ ಕಿನ್ನರ |
ನನುನಯದ ಕೇಳಿ ಪ್ರದೇಶವ ಕಂಡು ಮೆಚ್ಚಿದನು || ೧೨ ||

ಅದರತಡಿಯೊಳಗೊಂದಶೋಕೆಯ | ಸದನದೊಳು ಕಮ್ಮನೆಯ ಪೂವನೆ |
ಗುದುರುಗತ್ತುರಿ ಕಪ್ಪುರಕೆ ಕೆಲರುಗುಳ್ದ ತಂಬುಲಕೆ ||

ಮದವಳಿ ಝೇಂಕರಿಸುತಿರೆ ಮೇ | ಳದ ಕೆಳೆಯರಿಗೆ ಸುರತ ಗೃಹವೆಂ |
ದದನೆ ತೋರುತೆ ಮುಂದೆ ಪೋಪನಿತರೊಳದೊಂದೆಡೆಯ || ೧೩ ||

ಮರನ ಕೊಂಬಿನೊಳೋರ್ವ ಬಿಜ್ಜಾ | ಧರನು ಕಟ್ಟೆಸಿ ಕೊಂಡು ಪಿಡಿದೊ |
ತ್ತರವದೊತ್ತಿದವೊಲು ನುಡಿಯ ಸುರತಮಂಟಪವ ||
ಪಿರಿದು ನೋಡುತ್ತಿರಲು ಕಂಡ | ಚ್ಚರಿವಡುತ ಹರಿಶಂಖ ಮುಖ್ಯ ಸ |
ಖರಿಗೆ ಪೇಳ್ದನು ಖಗನ ಕಂಣೆರಗಿರ್ದ ತಾಣದಲಿ || ೧೪ ||

ಇರಲು ಬೇಕೇನಾನುವೆಂದೈ | ತರಲು ಪೂವಸೆಗೆಲದೊಳವವುಂ |
ನಿರಿಸಿದಸಿ ಖೇಡೆಯವಿರಲು ತೆಗೆಕೊಂಡು ನೋಡುತಿರೆ ||
ಹೊರೆಯೊಳಗೆ ಕಟ್ಟಿರ್ದಗಂಡನು | ಹರದಸುತ ಬಿಡೆಗುಳಿಗೆಯಿರೆ ಕಂ |
ಡುರು ಕಲಾವಿದನಪ್ಪುದರಿನಿಂತೆಂದನೆಲೆ ಭೂಪ || ೧೫ ||

ಗುಳಿಗೆಯಿದು ಆ ಖಗನ ಕಟ್ಟನು | ಕಳೆವ ಮದ್ದಾದಪುದೆನುತ ಅದ |
ಕಳೆದುಕೊಂಡಾ ಮರವನೇರಿ ವಿಯೆಚ್ಚರನ ಬಾಯ್ಗೆ ||
ಗುಳಿಗೆಯಿಕ್ಕಲು ಕಟ್ಟು ಬಿಟ್ಟಾ | ಗಳಿಗೆಯಲೆ ನೀನಾರೆನಲು ತಾ |
ನೊಲಿದು ಪುರಪಿತೃ ತನ್ನ ತೆರನೆಲ್ಲವನು ಪೇಳಿದನು || ೧೬ ||

ಹೇಳಲಾ ವಿದ್ಯಾಧರನು ಮಿಗೆ | ಕೇಳಿದನು ಪ್ರಾಣೋಪಕಾರಕೆ |
ಹೇಳದೆಲ್ಲಿಯುಮುಂಟೆ ಪ್ರತ್ಯುಪಕಾರಮೆನಗಿಂದು ||
ಮೇಳಿಸಿದ ದುಷ್ಕೃತಫಲದ ನೋಡೆ | ಜಾಳಿಸುವ ಮತ್ಸುಕೃತ ಪುಂಜವೆ |
ಹೇಳಲೆನ್ನೀ ವಾದಿಯೆಂದಿಂತೆಂದ ತನ್ನಿರವ || ೧೭ ||

ಉಸುರ್ವಡೀ ವಿಜಯಾರ್ಧ ದಕ್ಷಿಣ | ದೆಸೆಯೊಳಗೆ ಶಿವಮಂದಿರವು ಪೊಳ |
ಲೆಸೆವ ದೇಶ ಮಹೇಂದ್ರ ವಿಕ್ರಮಿತಂದೆತಾಯ್ವುತ್ಸೆ ||
ಪೆಸರ ಮಗನಾನಮಿತಗತಿ ತ | ನ್ನಸುವೆನಿಪ ವಲ್ಲಭೆಗೆಳಸಿ ಕೂ |
ರಿಸಿದರೆನ್ನೊಳು ಗೌರಿಮಂಡಸಿ ಖಂಡನೆಂಬವರು || ೧೮ ||

ಅವರು ಸಹವಾನಳ್ತಿಯಲಿ ಸಂ | ಭವ ಜಿನೇಶ್ವರ ತೀರ್ಥವಂದನೆ |
ಗವತರಿಸಿ ಮರಳುತ್ತ ಪೋಪಳು ವೆರಸಿನಾನಿಲ್ಲಿ ||
ಎವೆದೆರೆಯದೊರಗಿರಲು ತನ್ನಾ | ಯುವತಿಯನು ಅವರೊಯ್ದರೆನ್ನನು |
ಜವದಿ ಕೀಲಿಸಿಮೋದರೆಂದನು ಚಾರುದತ್ತಂಗೆ || ೧೯ ||

ಅಸುವನಿನ್ನೆಗೆ ಬಿಡುವಳಾವುದು | ಉಸುರಲಿನ್ನೆಡೆಯಿಲ್ಲ ನೀ ಕೊ |
ಟ್ಟಸುವಿದಾನಾ ಖಳರ ಬೆಂಬತ್ತುವೆನೆನುತ ತನ್ನ ||

ಮಸೆದ [ಕರವಾಳನು ಪಿಡಿದು] ಆ | ಗಸಕೆ ಪಾರಿದನತ್ತಲಿತ್ತಲು |
ಒಸೆದು ಕೊಂಡಾಡಿದರು ಮಿತ್ರರು ಚಾರುದತ್ತನನು || ೧೦ ||

ಮೆಟ್ಟಿದೆವು ವಿದ್ಯಾಧರಗೆ ಬಂ | ದಚ್ಚುಗುವ ಕಂಡೊಡಲೆ ನಿಂದಸು |
ವಿಚ್ಚದಂದದಲವನ ಪುಣ್ಯವೆ ಮೂರ್ತಿಯಾದಂತೆ ||
ನಿಚ್ಚಟನೆ ನೀನವನ ಬಂಧನ | ಬಿಚ್ಚುವೀಗಳಿಗೆಗಳ ಕಂಡುದೆ |
ಅಚ್ಚರಿಕಣಾಯೆಂದು ಕೊಂಡಾಡಿದರು ನಿಜಸಖರು || ೧೧ ||

ಅಲರ್ದಡವಿವೂಗಳನು ಬನದು | ಳ್ಳಲರನೆಲ್ಲವನಾಯ್ದು ಕಳುಹಿದ |
ನೊಲಿದು ತಂದೆಯ ದೇವಪೂಜೆಗೆ ಬಳಿಕ ನಿಜಪುರವ ||
ಕೆಳೆಗಳೆರೆಯನು ತನ್ನ ಮೇಳದ | ಕೆಳೆಯರೊಡನೈತಂದು ನಿಜಗೃಹ |
ದೊಳಗೆ ಸುಖದಿಂದಿರ್ದನಾ ಚಾತುರ್ಯ ಚತುರಾಸ್ಯ || ೧೨ ||

ಚಂದಮೊಗದೊಳು ಮೊಗೆವ ಮೀಸೆಯು | ಚಂದದೊಪ್ಪುವ ಚಾರುದತ್ತನ |
ನೊಂದು ದಿನವಾ ಭಾನುದತ್ತನು ದೇವಿಲೆಯು ತಮ್ಮ ||
ಕಂದನಾನನ ಚಂದ್ರಮನನಾ | ನಂದದಲಿ ನಡೆನೋಡಿ ದೇವಿಲೆ |
ಗೆಂದನೆಲೆ ನಿನ್ನಣ್ಣ ಸಿದ್ಧಾರ್ಥನ ಕುಮಾರಿಯನು || ೧೩ ||

ಯುವತಿ ಮಿತ್ರಾವಳಿಯ ನೆಮ್ಮಿ | ಕುವರನೊಳು ಪಾಣಿಗ್ರಹಣವನು |
ಸವುಣಿಸಲೆ ಬೇಕೆಂದು ಸುಮುಹೂರ್ತದಲಿ ಪೇಳಿದನು ||
ಅವರಿಗುದ್ವಾಹವನೊಡರ್ಚಿಸೆ | ವಿವಿಧ ವಿದ್ಯಾಭ್ಯಾಸಲಂಪಟ |
ನವಳೊಡನೆ ರತಿರಾಗದಂದಿರಲೊಲ್ಲದಿರಲರಿತು || ೧೪ ||

ಚಾರುದತ್ತಗೆ ಪೆಣ್ಣ ಸೌಖ್ಯದ | ಸಾರವರುವುದ ಮಾಡಬೇಕೆಂ |
ದಾರೈದು ದೇವಿಲೆಯ ಪುತ್ರನಕೆಳೆಯರಿಗೆ ಹೇಳೆ ||
ವಾರನಾರಿ ವಸಂತತಿಲಕೆಗೆ | ಭೂರಿವಸ್ತುವನಿತ್ತು ಕೆಳೆಯರು |
ಚಾರುದತ್ತನನೊಂದು ನೆವದಿಂದೊಯ್ದು ನೆರಪಿದರು || ೧೫ ||

ಮುರುಕಮೆಳೆನಗೆ ಸವಿಮುನಿಸು ಮೈ | ಮರೆಪು ಯೆಚ್ಚರು ಮೇಳವೈಸಿಕ |
ವಿರಹ ಮೋಹನಲಲ್ಲೆ ಚಲ್ಲವು ಹದುರು ಚದುರುಗಳು ||
ಬೆರಗು ಚುಂಬನ ವಪ್ಪು ಸೀತ್ಕೃತ | ವೆರಗ ಜಾಣ್ಣುಡಿ ನೋಟ ಬೇಟವು |
ನೆರೆ ಸೊಬಗಿಯೀ ಸೊಳೆವಿನ್ನಣದೋರೆ ಸಿಲುಕಿದನು || ೧೬ ||

ಮನೆಯ ಹಂಬಲ ಮರೆದ ಕೆಳೆಯರ | ನಿನಿಸು ನೆನಸನು ತಂದೆ ತಾಯ್ಗಳ |
ಕನಸಿನಿಂ ಕಂಡರಿಯನವಳಿಂದುಟಿಯುಣಿಸೆ ಉಳಿಸು ||

ತನಗೆನಿಸಿ ಒಡನುಂಡು ಒಂದೇ | ಮನವೆನಿಸಿ ನೆರೆ ಮಚ್ಚಮಚ್ಚಿದ |
ಳಿನಿಯಳಾತನನಲ್ಲ ದೀಕ್ಷಿಸಲುಳಿದ ನಲ್ಲರನು || ೧೭ ||

ಬೆಚ್ಚಿ ಮೈಸಡಿಲದೆ ಸುರತ ಸುಖ | ದಿಚ್ಚೆಯುಂ ಮೈಯರಿಯದೀರ್ವರು |
ಮರ್ಚಿರಲು ಮೆರೆವಾ ವಸಂತತಿಲಕೆಯ ತಾಯೆಂದು ||
ನಿಚ್ಚ ಸಾಸಿರ ಪೊಂಗಳೊತ್ತಗೆ | ಪೆಚ್ಚಿ ಪರ್ವಕೆ ಪತ್ತು ಸಾವಿರ |
ವಿಚ್ಚೆಯಿವಗುಳ್ಳಂನೆವರ ಸಲೆಕೊಟ್ಟು ಬಹುದೆಂದು || ೧೮ ||

ಕಳುಹೆ ಬಂದಾದೂತೆಯರು ದೇ | ವಿಲೆಗೆ ಪೇಳಲು ಮಗನನವಳಿರ |
ದೊಲಿಸಿದಳಲಾಯೆಂದು ಸಂತಸಮತ್ತು ಬೇಳ್ಪನಿತ ||
ಲಲನೆತನಯನ ವೆಚ್ಚಕೊಳ್ಳದ | ನಲಸದೀವುತಲಿರುತಿರಲು ಧನ |
ವಿಳಿದು ಪೋಪುದ ಕಂಡು ಕಂಡಾ ದೇವಿಲೆಯಗಂಡ || ೧೯ ||

ಕಾಕು ವ್ಯಸನವ ಮಗಗೆ ಕಲಿಸಿದ | ಳೀಕೆ ಧನವನು ಕೆಡಿಸುತಿಹಳಿಂ |
ನೇಕೆಮಗೆ ದಂದುಗವೆನುತ ಧನವರ್ಧ ಪೋಯ್ತೆನಲು ||
ಶೋಕಿಸದೆ ತಾ ಭಾನುದತ್ತ ವಿ | ವೇಕಿ ಜಿನದೀಕ್ಷೆಯನು ಕೊಂಡನು |
ಆಕೆ ನಿಜಸುಖವಳ್ತಿಗರ್ಥವನೀಬುತಿಂತಿರಲು || ೨೦ ||

ವರುಷ ಮೂವತ್ತೆರಡು ಕೋಟಿ | ಪ್ರಮಿತ ಧನವದು ಕರಗಿ ಪೋಗಲು |
..................................... ||
ಪರರ್ಗೆಮಾರಿದ ಧನವನಿಳು ಅರ | ವರಿಸದಾ ದೇವಿಲೆಯು [ಪೋದುದ] |
ನರಿದು ತನ್ನೊಳಗೆಂದಳಾ ಪಣ್ಯಾಂಗನೆಯ ತಾಯಿ || ೨೧ ||

ಹಣವು ತೀರಿದ ಬಳಿಕಲಾವನು | ಹೆಣನೆಯೀವಗಳವನ ಮೆಚ್ಚಿಹು |
ದೆಣಿಕೆಯಲ್ಲೆಂದೋವದೆಳೆನೀರಿನೊಳು ಪೊಕ್ಕೂಡಿ ||
ಗಣಿಕೆಯಟ್ಟಲು ಚಾರುದತ್ತನು | ಎಣಿಸದೊಲಿದು ವಸಂತತಿಲಕೆಯು |
ತಣಿಯ ಪೀರ್ದೊರಗಿದರು ಮೃದುಶಯ್ಯೆಯಲಿ ಮದಭರದಿ || ೨೨ ||

ನೆಟ್ಟನೊರಗಿದ ಚಾರುದತ್ತನ | ಕಟ್ಟಿಕೊಂಡಾ ಪೊಳಲ ಪೊರಗಣ |
ಬಟ್ಟೆಯೊಳು ಬಿಸುಡಿಸಿದಳಾ ರಾತ್ರಿಯೊಳು ಬಳಿಕವಗೆ ||
ಬಿಟ್ಟಹೋಗಲು ತಾಯಿ ಮೆಲ್ಲನೆ | ದಿಟ್ಟಿದೆರೆದು ವಸಂತ ತಿಲಕೆಯ |
ನಿಟ್ಟಿಸಿಯೆ ಕಾಣದೆ ವಿಕಲನಾದನು ವಣಿಗ್ವರನು || ೨೩ ||

ಏಳು ನೆಲೆಯುಪ್ಪರಿಗೆಯೆತ್ತೀ | ಕೀಳುದಿಪ್ಪೆಯಿದೆತ್ತ ಕರ್ಮವು |
ಮೇಳಿಸಿದ ಬೇಳಂಬವಲ್ಲದೆ ಬೇರೆ ಪೆರತಲ್ಲ ||

ಸೂಳೆ ಮೋಹವ ಮಾಡುವುದೆ ಗುಣ | ಸೂಳೆಯರ ತಾಯ್ದಿರಿಗಿದೇ ಗುಣ |
ಸೂಳೆಗೈದಂ ನಿಂದ ಖೂಳರು ಬೆರಗದಾರೆಂದ || ೩೪ ||

ಎಂದು ವಿಗತವಿಷಾದ ಚಿತ್ತದಿ | ಬಂದನಾ ನಿಜಗೃಹಕೆ ಬರಲೊಡ |
ನೆಂದರೀ ಬಹನಾರೆನಲು ವರಚಾರುದತ್ತನೆನೆ ||
ಮಂದಿರವ ಮಾರಿದಳು ದೇವಿಲೆ | ವಂದಿ ಸೊಸೆಸಹ ನಿಮ್ಮ ಮಾವನ |
ಮಂದಿರದೊಳಹಳೆನಲು ಕೇಳ್ದೈತಂದನಾ ಮನೆಗೆ || ೩೫ ||

ಜನನಿಯಡಿಗೆರಗಿದನು ಚಂದ್ರನ | ವನಧಿ ಕಂಡವೊಲಾಡಲಾಕೆಯು |
ವನಿತೆ ಮಿತ್ರಾವಳಿ ನಿಜಪ್ರಿಯ ನಂಗಧೂಳಿಯನು ||
ಮನ ಮುರುಕದಲಿ ಕಂಡೊಡೆನೆ ಮ | ಜ್ಜನವ ಮಾಡಿಸಿ ನಲ್ಲುಣಿಸಲಿ |
ಟ್ಟನುಪಮ ಸ್ನೇಹದಲಿ ಸಂತುಷ್ಟತೆಯ ಮಾಡಿದಳು || ೩೬ ||

ಎಂದು ಪೂಣ್ಕೆಯನಾಡುವಾಗಳು | ಬಂದನಾ ಸಿದ್ಧಾರ್ಥನೊಸೆದಿಂ |
ತೆಂದನೆಲೆ ಪದಿನೆಂಟುಕೋಟಿ ದ್ರವ್ಯವೆನ್ನಲಿದೆ ||
ಇಂದು ನೀಂ ತೆಗೆಕೊಂಡು ಮುನ್ನಿನ | ಚಂದದಲಿ ಎಲೆ ಅಳಿಯ ನಿಮ್ಮಯ |
ಮಂದಿರದೊಳಿರಿ ಎಂದು ಫಲವಂದದಲಿ ಪೇಳಿದನು || ೩೭ ||

ಬಡತನವು ಬಂದಾಗ ಬಂಧುಗ | ಳೊಡವೆಯನು ಕೈಕೊಂಡು ಬಾಳ್ವುದೆ |
ಸುಡುಸುಡಾ ಬದುಕುಮನೆನಲು ನಿಜಭಂಡ ಮೊದಲಿಂಗೆ ||
ಪಡೆದನವನೆನಲವುಷಧಂಗಳು | ಅಡವಿಯೊಳು ಗುಹೆಗಳೊಳು ರತ್ನವು |
ಕಡಲ ತಡಿ ಬನದಲ್ಲಿ ಚಂದನವಿಲ್ಲವೇಯೆಂದ || ೩೮ ||

ನೆರೆಸಕಲ ಕಲೆಗಳನು ಬಲ್ಲವ | ನೆರಗಿ ಬೀಳ್ಕೊಂಡನು ಜನನಿಯನು |
ಮರುಗುವಾ ಮಡದಿಯನು ಸಂತೈಸಿದನು ಮಾವಂಗೆ ||
ಎರಗಿ ಕಳುಹಿಸಿಕೊಂಡು ಧೈರ್ಯದ | ನೆರೆವಣಿಗೆಯಿಂ ತೆಂಕದಿಕ್ಕಿಂ |
ಗರುವ ಹರದನು ಚಾರುದತ್ತನು ನಡೆದನೊಲವಿನಲಿ || ೩೯ ||

ಅಳಿಯ ಪಯಣಂ ಬೋದನೇ ಬೆಂ | ಬಳಿಯಲಾ ಸಿದ್ಧಾರ್ಥಸೆಟ್ಟಿಯ |
ಘಳಿಲನೈತಂದೊಂದು ಗೂಡಿರಲೀರ್ವರುಂಟಾಗಿ ||
ಬೆಳೆದ ಭೀಮಾಟವಿಯೆಡೆಯೊಳು | ಜ್ವಳ ಸುಗಂಧ ದ್ರವ್ಯ ಮೂಲಿಕೆ |
ಗಳನರಸಿ ಹೊರಗಟ್ಟಿ ಹೊತ್ತು ಪಳಾಸಪುರವೈದೆ || ೪೦ ||

ಮಾರಿದಾ ಪೊಂಗಳಿಗೆ ಹತ್ತಿಯ | ಹೇರುಗಳ ತಂದಡಿವಿಯೊಳಗಿಡ |
ಲೂರಿ ಕಾಳ್ಗಿಚ್ಚದನು ನುಂಗಲು ಗುಹೆಗಳನು ಹೊಕ್ಕು ||

ಕೀರಿ ರನ್ನಂಗಳ ಪಡೆದು ಬರೆ | ತಾರಲೊತ್ತಿನ ಶಬರರಿಂದದು |
ಸೂರೆವೋದುದು ದ್ರವ್ಯವಾರಿಗೆ ಕೆಡದು ಕೇಳೆಂದ || ೪೧ ||

ಪಿರಿದು ಬಳಲಿಕೆಯುಂ ಪ್ರಿಯಂಗುನ | ಗರವ ಪೊಕ್ಕನು ವಾಸುದತ್ತನ |
ಪರದರೆರೆಯನ ಹಡಗುಗಾಹಿ ಸುರೇಂದ್ರದತ್ತಾಖ್ಯ ||
ಹರುಷದಿಂದವರೀರ್ವರನು ಕಂ | ಡಿರದೆ ವಿಸ್ಮಯ ಮುತ್ತು ಬಳಿಕೀ |
ರ್ವರನು ನಿಜ ಗೃಹಕೈದನತಿ ವಿಯನದಲಿ ಕೇಳೆಂದ || ೪೨ ||

ಸ್ನಾನಭೋಜನಗಳನು ಮಾಡಿಸಿ | ಏ ನಿಮಿತ್ತದಿ ಬಂದರಿವರೆಂ |
ಬಾನಿಬುದ್ಧಿಯನರಿದುಯೆನ್ನಯ ಧನವೆನಿತನನಿತ ||
ನೀನು ಕೊಳ್ಳೆನೆ ನನ್ನ ಧನವನು | ತಾನೆ ಒಲ್ಲದೆ ಬಂದೆನೆಂದಾ |
ಮಾನನಿಧಿ ಸಿದ್ಧಾರ್ಥಶೆಟ್ಟಿ ಸುರೇಂದ್ರದತ್ತಂಗೆ || ೪೩ ||

ಎನಲು ಬಳಿಕಾ ಚಾರುದತ್ತನು | ವನಧಿಯಾತ್ರೆಗೆ ನೆರೆಸಹಾಯರ |
ನೆನೆಗೆ ಸಂಬಂಧಿಸಿಕೊಡುವುದೆನೆ ಸುಮುಖವೆಂಬವನ ||
ವಿನುತನೊಪ್ಪಿಸಿ ಕೊಟ್ಟು ತಾಂ ಪೋ | ದನು ಬಳಿಕಲಾ ಚಾರುದತ್ತನ |
ಘನಕುಶಲಧೈರ್ಯಕ್ಕೆ ಮೆಚ್ಚಿದರಾ ಪಡಗಿನವರು || ೪೪ ||

ಮೆಚ್ಚಿದ ಶವಂದವನು ಕುಡೆಪಡೆ | ದಿಚ್ಛೆಯಿಂದಾ ಧನಕೆ ಬಂದವ |
ವೆಚ್ಚತಂ ಕೊಂಡಖಿಳ ದೀಪಂಗಳಲಿ |
ನಿಚ್ಚವುದಿದನ್ನೆರಡು ವರುಷಕೆ | ಬಿಚ್ಚತಂ ಬತ್ತೀಸ ಕೋಟಿ ಸ |
ಮುಚ್ಚಯದ ಧನವನು ಗಳಿಸಿದನು ಭೂಪಕೇಳೆಂದ || ೪೫ ||

ಪಡೆದ ಧನವಿಂ ನಿಮ್ಮಡಿಯ ಧನ | ಗೊಡುವ ಸರಕನು ಕೊಂಡು ತುಂಬಿಸಿ |
ಹಡಗ ನೇರಿಯೆ ಬರುತಿರಲು ಕಡಲದ್ದಳವು ತೋರೆ ||
ಪಡಗು ಮುಳುಗುವ ಸಮಯದಲಿ ಕಂ | ಗೆಡದೆ ಸಿದ್ಧಾರ್ಥನ ಕರೆದು ಸಂ |
ಗಡವೆರಡು ಎದೆವಲಗೆಯೇರಿದರರಸ ಕೇಳೆಂದ || ೪೬ ||

ಅನಿತರೊಳಗಾ ಪಡಗುಮುಳುಗಿತು | ವನಧಿಯೊಳು ಮೈವಳಿಯ ತೇಲುತ |
ಜನವದಿಲ್ಲದದೊಂದು ಕುರುವವಸಾರ್ದು ಮೂರುದಿನ ||
ವಿನುತನಿರ್ದನು ಚಾರುದತ್ತನು | ಅನಿಲ ವಸದಿಂದಂಬರಾವತಿ |
ಯೆನಿಪ ಪೊಳಲನು ಸಾರ್ದಿಳಿದನೆಲೆಭೂಪ ಕೇಳೆಂದ || ೪೭ ||

ನಿನ್ನವೊಲು ಸಿದ್ಧಾರ್ಥನೆಂಬವ | ಮೊನ್ನೆ ಬಂದನು ಚಂಪೆಯೊಳಗಿಹ |
ಚೆನ್ನವಿಭವದ ಭಾನುದತ್ತನ ಮೈದುನನು ಇಲ್ಲಿ ||

ತಾಂ ನಿಲ್ಲದೆ ಆ ಸಿಂಧು ದೇಶೋ | ತ್ಪನ್ನ ಶಂಬರಪುರಿಗೆ ಹೋದನು |
ತನ್ನ ಕಾರ್ಯ ನಿಮಿತ್ತವೆಂದುದು ತತ್ಪುರದ ಜನವು || ೪೮ ||

ನಾನು ಅವರಳಿಯನು ಎನಲ್ಕಾ | ಭಾನುದತ್ತನ ಅಲ್ಲಿ ನಿಲಿಸಿದ |
ದಾನಸಾಲಾಧ್ಯಕ್ಷ ನೈತಂದತಿ ವಿನಯದಿಂದ ||
ಭೂನುತನ ನೊಡಗೊಂಡು ಪೋಗಿ | ಸ್ನಾನ ಭೋಜನಗಳನು ಮಾಡಿಸಿ |
ತಾನು ಸಹವಾ ಶಂಬರ ಗ್ರಾಮಕ್ಕೆ ನಡೆತರಲು || ೪೯ ||

ಚಾರುದತ್ತನ ಕಾಣುತೊಪ್ಪುವ | ಚಾರುಗುಣಿ ಧನದತ್ತ ಸೆಟ್ಟಿಯು |
ಸಾರವಿನಯದಿ ನಿಜಗೃಹಕೆ ಕರಕೊಂಡುಣಿಸಿಗೆ ||
ಚಾರುದತ್ತನೆ ನಿಮ್ಮ ಪಿತೃ ಕೈ | ಯಾರೆಯಿರಿಸಿದ ಧನವು ನನ್ನಲಿ |
ಆರಯಲುಯಿದೆ ಎಂಟುಕೋಟಿಯು ತೆಗೆದುಕೊಳ್ಳೆಂದ || ೫೦ ||

ಮೊದಲು ಮೂವತ್ತೆರಡು ಕೋಟಿ | ಪ್ರಮಿತಧನವನು ಕೆಡಿಸಿ ನಿಮ್ಮಯ |
ಸದನದಲಿ ನಮ್ಮಯ್ಯನಿರಿಸಿದ ಧನವ ಕೊಂಬುದಕೆ ||
ಪಡೆದು ಬಂದೆನೆ ನಮ್ಮ ಬೊಪ್ಪನು | ಮೊದಲು ಮಾಡಿಸಿದೆಲ್ಲ ವಸತಿಗೆ |
ಬುಧ ಜನಕೆ ನೀ ನೊಲಿದ ತೆರದಲಿ ಮಾಡು ಧರ್ಮವನು || ೫೧ ||

ಎಂದು ನಿಚ್ಚಯಗೆಯಿದ ಪರಧನ | ಮುಂದೆ ಕೊರಳೊಳು ಜನವು ಪೊಗಳಲು |
ಅಂದು ವೀರ ಪ್ರಭನೆನಿಪ ವೆಂತರಸುರನು ಕೇಳಿ ||
ಇಂದುದಾತ್ತತೆಯನು ತಿಳಿವಿತಾ | ನೆಂದು ಜಿನಗೇಹಾಂಗಣಾಗ್ರದ |
ಮುಂದೆ ಹೊಟ್ಟೆಯ ಶೂಲೆಯೆತ್ತಿಯೆ ಮಿಗೆ ಹೊರಳುತಿರ್ದ || ೫೨ ||

ಮುಂದೆ ವೈಕುರವಣದೊಲೋರ್ವನು | ನಿಂದು ಪರಿಚಾರಕನಳುತ್ತಿರ |
ಲಂದು ಬಸದಿಗೆ ಪೊಡವಡಲು ಬಂದಾ ಪರದರೆರೆಯ ||
ಒಂದು ಪರಿಯಲಿ ಪೊರಳುವಾತನ | ದಂದುಗವ ನೋಡುತ್ತೆ ಜಿನರಿಗೆ |
ವಂದಿಸಿದನಿಂದೇಕೆ ಹೊರಳುವೆ ಹೇಳು ಹೇಳೆಂದ || ೫೩ ||

ಏನನೆಂಬೆ ಮಾಹತ್ಮ ! ತನ್ನೀ | ಬೇನೆಯನು ಸೈರಿಸುವಡರಿದೆನೆ |
ಏನು ಮದ್ದುಗಳೆಂದು ದೆಸೆಯಿಂದುಳ್ಳೊಡುಸುರೆನಲು ||
ದಾನಿಯಾದೊಡೆ ಪೇಳ್ವೆನೊಂದೆನ | ಮಾನವನ ಬರಿಯಡಗು ಶೇಕದಿ |
ಬೇನೆ ಮಾಣವುದಲ್ಲದಿರಿದಾಂ ಸಾವೆ ದಿಟವೆಂದ || ೫೪ ||

ಎನಿತು ಘನವಾದೊಡಮಿದೇನಪ | ಘನಮೆ ನುಕೆಡು ವೊಡವೆ ಯದೆಯೋ |
ರ್ವನ ವಿಪತ್ತನು ತೊಲಗಿಪುದು ಗಡವೀವುದೇನರಿದೆ ||

ಎನುತೆ ಮನದೊಳು ನೆನೆದು ನಿಂದೋ | ರ್ವನ ಸುರಗಿಯನು ಕೊಂಡು ಕಡು ಭೋಂ |
ಕನೆಯಿಱಿದು ತನ್ನಯ ಬರಿಯ ಕಂಡವನು ಕೊರೆದಿತ್ತ || ೫೫ ||

ಇತ್ತು ಪೋಗುತಿರಲ್ಕೆ ಗೋಪುರ | ದೊತ್ತಿನಲಿ ಮೂರ್ಚ್ಛಿಸಿ ಒಱಗಿದನು |
ದಾತ್ತವೈಶ್ಯನುಮಾಗಳಾ ರೋಗವು ತೊಲಗಿದಂತೆ ||
ಮತ್ತಮಾ ವೀರಪ್ರಭುವನು ಬಂ | ದೆತ್ತಿದನು ಸಂಜೀವನೌಷಧ |
ವಿತ್ತು ಕೈಮುಗಿದೆಂದನಾ ನಿಜರೂಪಮಱೆತೋಱೆ || ೫೬ ||

ಇಂದು ನಿನ್ನ ಪರೋಪಕಾರತೆ | ಯಂದವನು ತಾನೋಡಲೀತೆಱ |
ದಿಂದ ಮಾಡಿದೆ ನೀನೆವೀರನು ವಿತರಣೋನ್ನತನು ||
ಎಂದು ನುತಿಯಿಸಿ ರತ್ನವೃಷ್ಟಿಯ | ನಂದು ಕಱೆದವ ಪೋಗೆ ಬಳಿಕಾ |
ಬಂದ ರತ್ನವನಖಿಲ ಪಾತ್ರಕೆ ಕೊಟ್ಟು ಬಱಿಕೆಯಿಂದ || ೫೭ ||

ಸಂದುದೀತಗುದಾರಗುಣಯೆಂ | ದೊಂದೆ ಕೊರಳಲಿ ಜನವೆ ಪೊಗಳಲು |
ಬಂದ ಸಿದ್ಧಾರ್ಥನನು ಧನದತ್ತನ ಬಳಿಯಲಿರಿಸಿ ||
ಅಂದು ತಾನೇಕಾಂತದಲಿ ನಡೆ | ತಂದು ಹೇಮಾಂಗದ ವಿಷಯದೊಳು |
ಸಂದರಾಜಪುರದ ಸಮೀಪದ ತಾಪಸಾಶ್ರಮದ || ೫೮ ||

ಪೊಕ್ಕನಾ ಕಲಿ ಚಾರುದತ್ತನು | ತಕ್ಕತಾಪಸ ಪೂರ್ಣಯಕ್ಷನ |
ಅಕ್ಕರಿಂ ಕಂಡೊಂದಿ ಬರೆ ಶಿವಮಸ್ತುಯೆಂದೊಡನೆ ||
ಎಕ್ಕಟಿಗ ನೀ ನೆತ್ತಣಿಂದೇ | ತಕ್ಕೆ ಎತ್ತಲು ಪೋಪೆಯೆನೆ ಮುನಿ |
ರೊಕ್ಕದಾಸೆಗೆ ಪರದುಗ್ಗೈಯಲೆ ಪೋಪೆನಾನೆಂದೆ || ೫೯ ||

ಅಸಮ ಪೌರುಷನೀತನೆಂದಾ | ಋಷಿಯನರಿತು ತನ್ನಾಶ್ರಮಕೆ ಸಂ |
ತಸದಿನೊಡಗೊಂಡೈದಿ ಪಥದ ಬಳಲ್ಕೆಯನು ಕಳೆದು ||
ವಸುವಗಳಿಸುವುದರಿದೆ ನೀಂ ಚಿಂ | ತಿಸದಿರೊಂದಗ ನಿಕಟದೊಳಗದೆ |
ರಸದಬಾವಿಯು ನೀನುಮಾನುಂ ಹೋಗಿತಹ ರಸವ || ೬೦ ||

ಎಂದವನನೊಡಗೊಂಡು ಹೋದನು | ವಿಂಧ್ಯದೊಳು ನಡೆದೆಯಿದಿ ಕೂಪದ |
ಮುಂದೆ ನಿಂದೆಲೆ ಪರದ ಕೇಳಿದಗಾದು ನೀನಿಲ್ಲಿ ||
ನಿಂದಿರಾಂ ಬಾವಿಯ ನಿಳಿದು ತಹೆ | ನೆಂದಡಕ್ಕಟ ಭಕ್ತಿ ನಿಮಗಿ |
ಲ್ಲೊಂದನಿತು ಬೇಗದಲಿ ತಹೆನು ವಿಧಾನವೇನೆಂದ || ೬೧ ||

ಬೆದರದಿರು ಈ ನೇಣ ಪಿಡಿದಿಳಿ | ಹದುಳದಿಂ ನಿಲ್ಲೊಂದು ದಡದೊಳು |
ವಿದಿತಸಿದ್ಧರಸವನು ಕೈಮುಟ್ಟದೆ ಸೊರೆಯ ತುಂಬಿ ||

ಅದನು ಸೂಸದ ತೆರದ ಬಳ್ಳಿಗೆ | ಪುದುಗಿನೀಡಲು ಸೇದಿಕೊಂಬೆನು |
ಮುದದಿ ಹಗ್ಗವ ನಿಳಿಹಿ ನಿನ್ನನು ಸೇದಿತಹೆ ಬಳಿಕ || ೬೨ ||

ಎನಲದನು ಪೇಳ್ದಂತೆ ಬಾವಿಯ | ನನುವಿನಿಂದಿಳಿರಾ ರಸವನೊ |
ಯ್ಯನೆ ಮೊಗೆದು ನೀಡಿದೊಡೆ ತೆಗೆಕೊಂಡಿಳುಹೆ ಬಳ್ಳಿಯನು ||
ಅನಿತರೊಳು ಮುನ್ನಲ್ಲಿ ನೆರಳುವ | ಮನುಜನೊಬ್ಬನು ಕಂಡನಿನ್ನೇ |
ನನು ಹಿಡಿದು ನನ್ನಂತೆ ಕೆಡದಿರು ಬುದ್ಧಿಗೇಳೆಂದ || ೬೩ ||

ನೀನಿದಾರೈ ನಿನ್ನ ಬಂದಿರ | ವೇನೆನಲು ನಿನ್ನಂತೆ ಧನವನ |
ನೂನವನು ಪಡೆಯಲ್ಕೆ ಬರೆತಾಪಸನು ಬೇಳ್ಮಾಡಿ |
ಈ ನಿರಿಗೆಯಲಿ ರಸವನಿಡಿದೇ | ನಾನು ಪೋಪರೆ ಮಿಳಿಯ ಹಿಡಿದೆನು |
ನಾನು ಕಿರಿದಂತರದಿ ಮಿಳಿಯನು ಕೊಯಿದು ಕೆಡಹಿದನು || ೬೪ ||

ಮುರುಟಿದವು ರಸಸೋಂಕೆ ತನ್ನಯ | ಕರಚರಣ ತಾ ಸನ್ನವಾಗಿದೆ |
ಮರಣವೆನಗಾನಜಿದ ತೆರನನು ಪೇಳುವೆನು ಬೆಂದು ||
ಹರದಗೆಂದನು ಚಾರುದತ್ತನು | ಭರಗೆಡದೆ ನೀನೊಂದುಗುಂಡನು |
ಪಿರಿಯಬಳ್ಳಿಗೆ ಸೇದಿಕೊಡು ಬಳಿಕೆಲನ ನಂಬೆಂದ || ೬೫ ||

ಕೊಡಲು ಗುಂಡನು ಸೇದಿಕೊಳುತವ | ನೆಡೆಯೊಳಗೆ ಕಡಿಕೆಯಿದು ಹೋದನು |
ಕೆಡೆದುದಾ ಗುಂಡತ್ತ ನೀನಿಂದುಳಿದೆ ನಾನೆಂದು ||
ನುಡಿಯ ಕೇಳುತಲಿನ್ನು ನೀಂ ಬಾ | ಳ್ವೆಡೆಯುಪಾಯಾವುದುಂಟೆಲೆ ಪೇ |
ರುಡುವಿಳಿದು ಬಂದುಂಡುರಸವನು ಪೋಗುತದೆಯೆಂದ || ೬೬ ||

ಅದರ ಬಾಲವ ಪಿಡಿದು ಪೋಗೆನ | ಲದನು ನಂಬಿಯೆ ಮೊದಲು ಕೈಕಾ |
ಲುದಿರಿ ಸಾವಾತಂಗೆ ಪಂಚನಮಸ್ಕೃತಿಯ ಪೇಳೆ ||
ತ್ರಿದಶ ಪದವಿಗೆ ಪೋದನಿತ್ತಲು | ಬುದುಬುದನೆ ಪರಿತಂದು ರಸಗುಡಿ |
ದಧಟಿನಿಂ ಪೋಪುಡುವ ಬಾಲವ ಪಿಡಿದು ಮೇಗೊಗೆದ || ೬೭ ||

ಪೇರಡವಿನೊಳು ಭೀಳಭೂತ | ಕ್ರೂರಸತ್ವ ನಿಕಾಯದೊಳಗಾ |
ಚಾರುದತ್ತನು ಭರದಲತ್ತೊಂದೆಡೆಗೆ ಹೋಗುತಿರೆ ||
ಧೀರನಾ ಶ್ರೀಪುರವೆನಿಪ್ಪುದ | ಸೇರಿದೊಂದಂಗಡಿಯೊಳಗೆ ಮೈ |
ಯಾರೆ ತನ್ನ ಬಳಲ್ಕೆಗಳೆಯಲ್ಕಿರ್ದ ನಿರಲೊಡನೆ || ೬೮ ||

ಕಿರಿಯತಂದೆಯು ರುದ್ರದತ್ತನು | ನೆರೆದ ಕೆಳೆಯರುವೆರಸಿ ತನ್ನನೆ |
ಯರಸುತಲ್ಲಿಗೆ ಬರಲು ಕಾಣುತಲೆದ್ದಿದಿರೆ ನಡೆದು ||

ಯೆರಗಿದನು ತಾ ರುದ್ರದತ್ತಗೆ | ನೆರೆ ಕೆಳೆಯರಾಲಿಂಗಿಸಲುಮಾನ |
ತೆರಪು ನೆರೆಯದು ಹರುಷಕೆನೆ ಸಂತಸದಿನಪ್ಪಿದರು || ೭೯ ||

ಏತಕರಸುತ ಬಂದಿರೆನೆ ನಿಜ | ಮಾತೆಯುಂ ಮಡದಿಯು ಹರುಷ ರಸ |
ಬೀತುಚಿಂತಿಪದುಃಖವನು ನಾವೇನ ಸೈರಿಪೆವು ||
ಈ ತೆರದೆ ಬಂದಪೆವು ಪಲವುಂ | ಮಾತದೇನೊ ವಸಂತ ತಿಲಕೆಯು |
ಚಾತೆ ವಿರಹಾವಸ್ಥೆಯಂತಿಂತೆಂಬಕಸದಳವು || ೭೦ ||

ಹಲವು ಪರಿಯಿಂದವರು ಮೋಹದ | ಬಲೆಯ ಬೀಸಿದೊಡರ್ಥವನು ತಾಂ |
ಗಳಿಸಬೇಕೆಂಬಾಗ್ರಹದಲೆದೆಗಿಡದೆ ಬಿಡೆನುಡಿದು ||
ಕಲಿಯಿರಲು ಪ್ರಿಯದತ್ತನೆಂಬುವ | ನೊಲಿದು ಬಂದಾ ವೇಳೆಯಲಿ ತಾ |
ಬಳಲಿಕೆಯ ಪರಿಹರಿಸಿದನು ನಿಜಗೃಹದೊಳಂದವರ || ೭೧ ||

ಮಂದೆ ಮುಂದೈದಿದನು ಅನುಬರೊ | ಳೊಂದಿ ಗೂಡಿದಿರಿನಲಿ ಕಂಡನು |
ಒಂದು ತಾರಾಚಳವೆನಿಪ ಪರ್ವತವನಾ ಪರದ ||
ಅಂದದರ ತಪ್ಪಲೊಳಗಿರುತಿಹ | ಸಂದ ಪಾರಸಿಕರಮೆನಗೆ ತಾ |
ಬಂದು ಬಳಿಕಾ ರುದ್ರದತ್ತನು ಕಂಡನೋರ್ವನನು || ೭೨ ||

ಮುದದಿ ರತ್ನದ್ವೀಪಕೈದುವ | ಡದರಪಾಯವ ಕೇಳಿದೊಡೆ ಹೇ |
ಳಿದನು ಅಜಪಥದಲ್ಲದಿಲ್ಲೆಂದದರ ಜಾಣುಮೆಯ ||
ಎದೆಗದಡದಜಗಳನು ಮುನ್ನವೆ | ಹದಗೊಳಿಸಿ ಈ ರೀತಿಯಲಿನೀ |
ವೊದಗಿದೊಡೆ ನೀನೆಂದ ಕಾರ್ಯವದಹುದು ಹೋಗೆಂದ || ೭೩ ||

ಹಡಗನಡೆಯಿಪ ಪಾರಸಿಕನಾ | ನುಡಿಗಳಿಂದೆಲ್ಲವನರಿದು ಸಂ |
ಗಡಿಗರೊಡನಾ ಚಾರುದತ್ತಂಗರುಪೆ ಆ ತೆರನ ||
ದಡಿಗ ಕುರಿಗಳನೇಳನೇಳಾ | ಲೊಡನೆ ಕೊಂಡುರು ಕ್ರಮದಿತಿದ್ದಿದ |
ರೊಡನೆ ನಡೆದವಲತ್ತಲಾಶಾಶಕ್ತಿಯಂ ಬಡೆದೆ || ೭೪ ||

ಶರನಿಧಿಯ ಮಧ್ಯದಲ್ಲಿ ಮಿಗೆ ಸೋ | ಲ್ವೆರಲನಿತ್ತಗಲದಲಿ ಕೇರೆನೆ |
ಪರಿದು ಮುಗಿಲನೆ ಮುಟ್ಟುವೀ ಪರ್ವತದ ಪದವೆಮಗೆ ||
ಮರಣವಲ್ಲದೆಯಿಲ್ಲಿ ಬದುಕುವ | ಪರಿಯಿದಿಲ್ಲೆನೆ ರುದ್ರದತ್ತಾ |
ದ್ಯರಿಗೆ ಧೈರ್ಯದ ಮಾತನೊರೆದನು ಚಾರುದತ್ತಕನು || ೭೫ ||

ರಸದಕೂಪದೊಳೆನ್ನನಾ ತಾ | ಪಸನು ಕಪಟದಿ ಪೊಗಿಸೆ ಮುನ್ನಿಳಿ |
ದಸುವ ಬಿಡುವವನಿಂದ ಬದುಕಿದುದಿಲ್ಲವೇನಾನು ||

ಶಶಿಧರಗೆ ವಸವಲ್ಲ ಸಾಯದ | ರಸುವೆಳೆಯಲಿಕೆ ನೀವಿದಕೆ ಚಿಂ |
ತಿಸದಿರಾದರೆ ತಾನೆ ಹೋಹೆನು ನಿಲ್ಲಿ ನೀವೆಂದ || ೭೬ ||

ಎನಲು ನಿನ್ನನು ಕಳುಹಿ ನಾವೀ | ತನುವ ಹಿಡಿವೆವೆಯೆಂದುಧೈರ್ಯವ |
ಮನದೊಳಾಂತವರಿರಲು ಪಥವನು ನೋಡಿಬಹೆನಾನು ||
ಇನಿತು ಪೊತ್ತಿಲ್ಲಿರಿಯೆನುತಲವ | ರನು ನಿಲಿಸಿ ಜಿನಶರಣೆನುತ್ತಜ |
ವನು [ಕಲಿ ಚಾರುದತ್ತನು ಹತ್ತಿ ನಡೆದನು ಮೆಲ್ಲನೆ] || ೭೭ ||

ಸ್ಥಿರದೊಳೈದಿ ಬಳಿಕ್ಕ ಮೆಲ್ಲನೆ | ಮರಳಿ ಬರುತಿರೆ ಚಾರುದತ್ತನು |
ಪಿರಿದು ಪೊತ್ತೆಂದಡೆದನೆಂದರುವರು ಕುರಿಯನ್ನೇರಿ ||
ಬರುತಿರಲು ನಡುಪಥದಿ ಸಂಧಿಸಿ | ತಿರುಹ ಮರುಹಲು ತೆರವ ಕಾಣದ |
ಹರಣ ಹವ್ವನೆ ಹಾರಿಕಳವಳಗೊಂಬ ಪಥದಲ್ಲಿ || ೭೮ ||

ಎದೆಗಲಿಗನಾ ಚಾರುದತ್ತನು | ಬೆದರದಾಕುರಿಯೆರಡು ಹಿಂದಣ |
ಪದಗಳನು ಸ್ಥಿರಗೊಳಿಸಿ ಮುಂಗಾಲೇಳೆ ವಾಘೆಯವ ||
ಹದುಳದಿಂ ಪಿಡಿದೆತ್ತಿ ತಿರುಹಿದೊ - | ಡದುವಹಿಲದಲಿ ಕರ್ತೃವಿನ ಪು - |
ಣ್ಯದ ಸಹಾಯದಿ ತಿರುಗಿ ನಿಂದುದು ಬೆಕ್ಕು ಬಿದ್ದಂತೆ || ೭೯ ||

ಹೋಗುತ್ತಿದ್ದನು ಮುಂದಿವರು ತಲೆ | ದೂಗುತ್ತಿದ್ದರು ಹಿಂದೆ ತಿರುಹಿದ |
ಲಾಗುವೇಗವನವನ ಧೈರ್ಯವ ಮೆಚ್ಚಿ ಬೆಂಬಿಡಿದೆ ||
ಪೋಗಿ ಸಮತಳಗಂಡುಕುರಿಗಳ | ಮೇಗಣಿಂದಿಳಿದೊಂದು ತಣ್ಪಿಂ |
ಬಾಗಿಲಲ್ಲಿಯೆ ಚಾರುದತ್ತನು ಮೆಲ್ಲನೊರಗಿದನು || ೮೦ ||

ಒರಗಲಾ ಪಾರಸಿಕ ಪೇಳ್ದಾ | ತೆರದಿ ಕುರಿಗಳ ಕೊಂದಿವರು ಒಳ |
ಹೊರಗು ಮಾಡಿದಡಾತಗೆಚ್ಚರಸುತ್ತಲವರೊಳಗೆ ||
ಅರಗುಲಿಗಳಿರೆ ಪೊಗಲುತಾನೆ | ಚ್ಚರುತ ಕಂಡೀ ಹಿಂಸೆಗೆದೆಯಲಿ |
ಮರುಗಿದನು ಬಳಿಕವರವೊಲು ತಾನಲ್ಲಿ ಮೈಗರೆದ || ೮೧ ||

ಹಂದದಿವರಿರ ರನ್ನದೀಪದಿ | ಬಂದವಾ ಭೇರುಂಡ ಪಕ್ಷಿಗ |
ಳಂದು ತಾವೆಂಟಾಗಸದಿ ನೆರೆಮಾಂಸಪಿಂಡಗಳು ||
ಎಂದು ಬಗೆದೋರೊಂದನಾವೋ | ರೊಂದು ಕೊಂಡಾಗಸಕೆ ಪಾರಿದ - |
ವೊಂದು ಕಣ್ಣಿನ ಹಕ್ಕಿಹಿಡಿದುದು ಚಾರದತ್ತನನು || ೮೨ ||

ಒಂದು ಹಕ್ಕಿಗೆ ಮಾಂಸ ಸಿಕ್ಕದೆ | ದಂದುಗದ ಮಿಗೆತಳೆದು ಕಣ್ಗಿಂ - |
ಪಿಂದೆ ಪರಿಪರಿದೆರಗಿ ಚೆಲ್ಲಿಸಿ ಹಲವು ಹಕ್ಕಿಗಳ ||

ಬಂದಿದರ ಕಣ್ಣಿಲ್ಲದಾ ಕಡೆ | ಗೊಂದಿ ಉಜ್ಜುಗ ಮಾಡಿದೊಡೆ ಘೀ |
ರ್ರ್ರಂದು ಪಕ್ಕದಿ ಹೊಡೆದು ಬಡಿದಿರೆ ಬಿಟ್ಟುದಾ ಕುಟುಕ || ೮೩ ||

ತೊಡಬೆಯಟ್ಟಿದುದದನು ನೀರೊಳು | ಕೆಡೆದುದೆಯೆಂಬಾಗ ಕಟುಕನು |
ಹಿಡಿದುಕೊಂಬುದೆದೊರ್ಮೆ ಮತ್ತಾ ಖಗನು ಬಂದೆರಗೆ ||
ಬಿಡುವುದೀ ಕುಟುಕನುವಿಹಂಗಮು | ನಡಸಿ ಬೆನ್ನಟ್ಟುವುದು ಭೋರೆನೆ |
ಪಿಡಿವುದಿದನೀ ಪರಿಯಲೇ ಪಲಸೂಳನಾಡಿಸುತ || ೮೪ ||

ಬಳಲಿ ರತ್ನದ್ವೀಪದುಪಗಿರಿ | ಯೊಳ ಬಿಸುಟ್ಟುದು ಪೋಗೆತಾನಂ |
ತೊಳಗಣಿಂ ಪೊರವಟ್ಟುದೆಸೆಯನು ನೋಡುತಿರಲೊಂದು ||
ಕೊಳನಿರಲು ನೆರೆಮುಳುಗಿ ಮೈಯನು | ತೊಳೆದು ಮುಂದೈತರುತ ಕಂಡನು |
ಬೆಳೆದ ಚಾರಣ ಕೂಟ ಗಿರಿಯನು ಚಾರುದತ್ತಕನು || ೮೫ ||

ಆ ಗಿರಿಯ ತುದಿಯಲ್ಲಿ ಪ್ರತಿಮಾ | ಯೋಗವಿಹ ಚಾರಣರ ಚರಣಕೆ |
ಬಾಗಿದನು ಮಸ್ತಕವನತಿಭಕ್ತಿಯಲಿ ಬಲಗೊಂಡು ||
ಪೂಗಳನು ತಂದವರಡಿಯನಿಂ | ಬಾಗಿ ಪೂಜಿಸಿ ನುತಿಸಿ ಸಮ್ಮುಖ |
ವಾಗಿ ಕೈಮುಗಿದಿರಲು ಪರಸಿದರವರು ಕರುಣದಲಿ || ೮೬ ||

ಎಲೆಲೆ ಭವ್ಯೋತ್ತಮನೆ ನೀಂ ಕಡು | ಬಳಲಿದೈ ಸ್ಥಲ ಜಲ ಗಮನದಲಿ |
..........ತಾವು ನಿರೂಪಿಸ ನಿತರೊಳು ||
ಘುಲಘುಲಿಪ ಘಂಟಾರವದಿ ಬಾ | ನೊಳೆ ವಿಮಾನಂಗಳ ಹಲವು ಮಣಿ |
ವೆಳಗು ಸುರಧನುಗಳನು ಪಸರಿಸೆ ಬಂದನಾ ಖಚರ || ೮೭ ||

ಪಲದಿವಸವಾಯ್ತುಯ್ಯ ದೀಕ್ಷೆಯ | ತಳೆದು ತಾವೆಲ್ಲಿದ್ದಿರೆಂಬುದ |
ತಿಳಿದು ವಂದಿಸ ಬಂದು ಸಿಂಹಗ್ರೀವನವರಸುತ ||
ಮೊಳಗೆ ದುಂಧುಭಿಮಣಿ ವಿಮಾನದಿ | ನಿಳಿದು ಬಂದನುಜಯವೆರಸಿ ಮೂ |
ವಳಸ ಚರ ಬಲಗೊಂಡುಭಕ್ತಿಯಲೆರಗಿ ಪೂಜಿಸಿದ || ೮೮ ||

ಗುರು ಪದಾಂತಿಕದಲ್ಲಿ ಕುಳ್ಳಿ | ರ್ದುರುಸುಧರ್ಮವ ಕೇಳ್ದಖೇಚರ |
ರರಸನೊಪ್ಪುವ ಚಾರುದತ್ತನ ಮೊಗಸಸಿಯ ನೋಡಿ ||
ಹರುಷದಿಂದವರಾರೆನಲು ಸ | ದ್ಗುರು ನಿರೂಪಿಸಿದಪರು ಚಂಪಾ |
ಪುರದ ರಾಜಶ್ರೇಷ್ಠಿಯೀತನು ಚಾರುದತ್ತಕನು || ೮೯ ||

ಅಂದು ನಮ್ಮನು ರಜತವಾಳುಕಿ | ಯೆಂದೆನಿಪ ತೊರೆದಡಿಯೊಳೀತನು |
ಬಂದು ಬಂಧುವೆಯಾಗಿ ರಕ್ಷಿಸಿದನು ಕಣಾ ಮಗನೆ ||

ಇಂದು ನೀನೀತನನು ತಾನೆದ | ಲೆಂದು ಬಗೆಯೆನೆಲಾ ಖಚರ ಜೀ |
ಯೆಂದು ಕೈಮುಗಿದಪ್ಪಿದನು ವಿನಯದಲಿ ಹರದನನು || ೯೦ ||

ಚಾರದತ್ತನ ಕೂಡೆ ಖಚರ ಕು | ಮಾರ ಸಂಭಾಷಿಸುವ ಪದದೊಳು |
ಭೋರನಾನಾಕಡಿಕುಸುಮ ಶೇಖರನೆನಿಪ ದೇವ ||
ಭೂರಿ ಪರಿವಾರಾಮರರು ಸಹ | ಚಾರಣರ ಬಳಿಗೈದಿವಂದಿಸಿ |
ಚಾರುಗುಣಿ ಮನವೊಸೆದು ಕಂಡನು ಚಾರುದತ್ತನನು || ೯೧ ||

ಎನಗೆ ನೀನೇ ಗುರುವಲಾ ಭ | ವ್ಯನೆ ಮಹಾಗುಣಿ ಚಾರುದತ್ತನೆ |
ವಿನುತವೈನಾಂ ರಸದ ಬಾವಿಯ ಬಿದ್ದು ಸಾವಾಗ ||
ಕುನ್ನೈತಾಪಸನಿಂದ ನೀ ಬಂ | ದನಘ ಪಂಚನಮಸ್ಕೃತಿಯನೋ |
ಳ್ಪಿನಲಿ ಪೇಳಲು ತತ್ಫಲದಿನೀ ಪದವಿ ನನಗಾಯ್ತು || ೯೨ ||

ಎನಲು ಸಿಂಹಗ್ರೀವನುಂ ತಿಳಿ | ದನುಪಮವಲಾ ಪಂಚಪದವೆಂ |
ದನುನಯದಲಾ ಚಾರುದತ್ತನ ಗುಣಕೆ ಮಿಗೆ ಮೆಚ್ಚಿ ||
ಮುನಿಗಳಿಂ ಬೀಳ್ಕೊಂಡು ಆ ದೇ | ವನು ಬೆರಸಿ ಆ ಚಾರುದತ್ತನ |
ವಿನಯದಿಂ ಕರಕೊಂಡು ಹೋದನು ತನ್ನ ಪಟ್ಟಣಕೆ || ೯೩ ||

ಪಲವು ವಿದ್ಯಾಧರರ ಸುತೆಯರ | ನೊಲಿದು ಮದುವೆಮಾಡಿ ತನ್ನಯ |
ಹೊಲಲೊಳಗೆ ಆ ಚಾರುದತ್ತನೆ ತಂದೆ ತನಗೆಂದು ||
ಪಲವು ತೇಜವ ಮಾಡಿ ಪರದಗೆ | ಬಳಿಕ ದಿವಿಜನು ಕುಸುಮಶೇಖರ |
ನಳಿವಿಗಳದರ್ತಿಯಲಿ ದಿವ್ಯಾಭರಣ ಮೊದಲಾಗಿ || ೯೪ ||

ಮಿಸುಪ ಮೂವತ್ತಾರು ಕೋಟಿಸು | ವಸ್ತುವನಿತ್ತು ದೇವಲೋಕಕೆ |
ಕುಸುಮಶೇಖರ ದೇವ ಹೋಗಲು ರುದ್ರದತ್ತಾಗಿ ||
ಎಸೆವ ರತ್ನದ್ವೀಪದೊಳು ಪಲ | ದೆಸೆಯೊಳಿರಲವರರಸಿ ಖೇಚರ |
ಬೆಸಸೆ ತಂದರು ಚರರು ತನ್ನ ವಿಮಾನದಲಿ ಪುರಕೆ || ೯೫ ||

ಅರುವರುಂಬರೆ ಕಂಡು ವಿನಯವ | ಮೆರೆಯೆ ಖಗಪತಿ ಬಳಿಕ ಚಂಪಾ |
ಪುರಕೆ ಹರದನು ಹೋಗಬೇಕೆನೆ ತನ್ನ ತನುಜೆಯನು ||
ನೆರೆ ಚದುರೆ ಗಂಧರ್ವದತ್ತೆಯೆ | ನರಿದುಕೈಯಲಿ ಕೊಟ್ಟನಾ ಭೂ |
ಚರನೆ ಈಕೆಗೆ ಗಂಡನೆಂಬಾದೇಶವುಂಟೆಂದು || ೯೬ ||

ತನ್ನ ಮನೆಯೊಳಗುಳ್ಳ ಹೊನ್ನನು | ರನ್ನವನು ತುಂಬಿಸಿದ ಮತ್ತಾ |
ರನ್ನದೀಪದಲೈದನಿತ್ತನು ಪಲವಿಮಾನದಲಿ ||

ತನ್ನ ಸುತೆಯನು ಕೆಳದಿಯರು ಸಹ | ಸನ್ನುತನು ಆ ಚಾರುದತ್ತನ |
ಚೆನ್ನ ಪೆಂಡಿರುವೆರಸಿ ಪಯಣಂಗೊಳಿಸಿ ಕಳುಹಿದನು || ೯೭ ||

ಎಲೆ ಧರಿತ್ರೀ ಪಾಲ ಕೇಳೀ | ಪೊಳಲ ಮೇಘಾಗಸವೆ ಪೂತವೊ |
ಲೆಳಸಿ ಬಳಸಿದನಾ ವಿಮಾನಗಳಿಳಿಯೆ ಬೆರಗಾಗೆ ||
ಪೊಳಲನತಿ ವೈಭವದಿ ಪೊಕ್ಕನು | ಬಲಯುತನು ತಾಂ ಚಾರುದತ್ತನು |
ಚೆಲುವೆಯಾ ಗಂಧರ್ವದತ್ತೆಯ ತೆರನದರಿಯೆಂದ || ೯೮ ||

ಚಾರುದತ್ತನ ಸಾಹಸಕೆ ಮನ | ವಾರೆ ಮೆಚ್ಚಿದನಿತ್ತ ಸುಗ್ರೀ |
ವಾರಿಯನ ವೀಣಾ ಕಲೆಗೆ ತಲೆತೂಗಿ ಕಟ್ಟಿರ್ದ |
ತೋರಮುತ್ತಿನ ಕಂಠಮಾಲೆಯ | ಭೋರನಿತ್ತನು ಸಕಲ ವಿದ್ಯಾ |
ಧಾರನಾ ವಸುದೇವ ಕವಿತಾರಸಾಮೃತಾರ್ಣವನು || ೯೯ ||

|| ಅಂತು ಸಂಧಿ ೧೭ಕ್ಕಂ ಮಂಗಳ ಮಹಾ ||

## ವಸುದೇವ ಪರ್ವ (ಸಂಧಿ ೧೮)

**ಸಂಧಿ ೧೮**

ವನಿತೆಯನು ವಶಮಾಡಿ ನೀಲಾಂ | ಜನ ವಡೆದು ರೋಹಿಣಿಯ ಕತದಿಂ |
ವಿನುತ ವಸುದೇವನು ಸುಖದಿಶ್ಶೈಲೀಪುರವ ಪೊಕ್ಕ || ಪದ ||

ಕೇಳು ಮಗಧಾಧೀಶ ತದ್ಭೂ | ಪಾಲನಾ ವೀಣಾಕಳಾರ್ಯನ |
ಆಲಯದೊಳಾ ಸ್ನಾನ ಭೋಜನಗೈದು ಬಳಿಕವರ ||
ಕೇಳಿಯರಿದನು ತಾಂ ಸ್ವಯಂವರ | ನಾಳೆಯಹುದೆಂಬುದನು ಮಿಗೆ ಸಂ |
ಮೇಳದಲಿ ಗಾಂಧರ್ವ ವಿದ್ಯಾಚಾರ್ಯನಿಂತೆಂದ || ೧ ||

ನೆರೆದ ರಾಜ ಕುಮಾರಕರೆ | ಲ್ಲರನು ಚೆಲುವಿಂ ವೀಣೆಯಿಂದಾ |
ತರುಣಿ ಹಲವು ಸೂಳು ಸೋಲಿಸಿದಳು ಕುಮಾರಿತಿಗೆ ||
ಅರಸ ನೀನೇ ಪುರುಷನಾದಪೆ | ಅರಿಯ ಬಹುದಾದೇಶವಾಕೆಗೆ |
ಕರದು ತಂದುದು ನಿನ್ನನೆಲೆ ಭೂಪಾಲ ಕೇಳೆಂದ || ೨ ||

ಅಂದಿನಿರುಳನು ಕಳಿಯೆ ಮರುದಿನ | ಬಂದುದಖಿಳ ಧರಾಧಿನಾಥರ |
ವೃಂದವಾ ವೀಣಾ ಸ್ವಯಂವರ ಶಾಲೆಯನು ಪೊಕ್ಕು ||

ಎಂದಿನಂತುಚಿತಾಸನದೊಳಿರೆ | ಬಂದನಾ ವಸುದೇವನಾನನ |
ಚಂದಿರನನಾ ಚಾರುದತ್ತನು ಕಾಣುತಿದಿರೆದ್ದು || ೩ ||

ಕುವರಿ ಕುಳ್ಳಿಹ ತಾಣದೊತ್ತಿನ | ಲವನಿಪನನಿರಿಸಿದನು ನೋಡಿದ |
ನೆವೆಮಿಸುಕದಾತನ ಸುರೂಪನು ತನ್ನ ಮನದೊಳಗೆ ||
ಯುವತಿಯಾದೇಶದ ಪುರುಷನೀ | ಕುವರನಾಗಲೆ ಬೇಹುದೆನುತಿರೆ |
ಕುವರಿ ಹೊಂದೇರಿನಲಿ ಬಂದಳು ಕೆಳದಿಯರುವೆರಸಿ || ೪ ||

ಪರಿಮಳಕೆ ಬಂದೆರಪ ಪರಮೆಯ | ಪರಿವೊ ರಾಜಕುಮಾರಕರ ಕಂ |
ಣ್ಬರಿದು ಮುಸುರಿದ ಪರಿಯೊಯೆನೆ ಕಂಪಿಂಪನೊಳಕೊಂಡು ||
ಸ್ಮರನ ಮೋಹದಸ್ತ್ರವೀಪೆಣ್ | ಬರಿಜನಾಂತುರ ರತಿಯ ಭಾಗ್ಯದ |
ಸಿರಿಯೊ ಮೇಣ್ಗಂಧರ್ವದತ್ತೆ [ಯೊ ಎನುತ ಬೆರಗಾಗೆ] || ೫ ||

ತೇರಿನಿಂದವತರಿಸಿ ಬಂದಾ | ಚಾರುದತ್ತನ ಪಕ್ಕದಲಿ ಶೃಂ |
ಗಾರಲಕ್ಷ್ಮಿಯಲಂಕರಿಸಿ ವಸುದೇವನಿರೆ ಕಂಡು ||
ಆರೋ ಭೂಚರ ಖೇಚರರೊಳಿವ | ನೋರಗೆಯ ಚೆಲುವರನು... |
........................................ || ೬ ||

ಗುರುಕೊಡಲು ಮೇಳಿಸಿದ ವೀಣೆಯ | ನರಸಿ ತೆಗೆಕೊಂಡಾ ಶ್ರುತಿಯ ಕಿರು |
ವೆರಳಿನಲಿ ಮಿಡಿದೊಡನೆ ಟೇಪಿಯನೆತ್ತಿ ಸರಗಂಡು ||
ಹೊರೆಯ ಮಧುರದ ಷಟ್ಜ ಪಂಚಮ | ದೆರಡು ತಂತಿಯ ನಾರಯಿದು ನು |
ಣ್ಗೊರಲು ಬೆರಲೊಂದಾದುದೆನೆ ಬಾಜಿಸಿದಳಾಚದುರೆ || ೭ ||

ಮೆಚ್ಚಿದನು [ವಸುದೇವ ಮನದಲಿ ] | ಹುಚ್ಚುಗೊಂಡುದು ನೃಪರ ತಿಂಥಿಣಿ
ಅಚ್ಚರಿಯ ಗಂಧರ್ವದತ್ತೆಯ ವೀಣೆಯನು ಕೇಳಿ |
ಪೆಚ್ಚಿದವರುಂಟಾದಡೀಕೆಯ | ಮೆಚ್ಚಿಪುದು ವೀಣೆಯನೆನಲು ತಾ |
ನುಚ್ಚ ಸರದಲಿ ಸಾರಿಸಿದನಾ ಚಾರುದತ್ತಕನು || ೮ ||

ಕೆಲರು ತಲೆಗುತ್ತಿದರು ಅದರೊಳು | ಕೆಲರು ವೀಣೆಯ ನುಡಿಸಿ ಕುವರಿಯ |
ನೊಲಿಸಲರಿಯದೆ ಬಿನ್ನಗಿರೆ ಸುಗ್ರೀವಕಣ್ಗೆಟ್ಟೆ ||
ಕಲೆಯೆರೆಂದು ವಸುದೇವನಾಕೆಯ | ಪೊಳೆವ ವೀಣೆಯ ಕಂಡು ತಂತಿಯ |
ನೊಲಿಸಿ ಕೆಳಗಿರಿಸಿದನು ತರಿಸಿದನುಳಿದ ವೀಣೆಗಳ || ೯ ||

ಸೊರೆಗೆಸೆರೆಯಲಿ ತುಂಬಿನಲಿ ಕ | ತ್ತರಿಸಿದೆಡೆಯಲಿ ಬೆಳಹಿನಲಿ ಈ |
ಪರಿಯ ದೋಷವು ದಂಡಿನಲಿ ತರು ದೋಷನಾರಾಚ ||

ಹರಿದ ದೋಷವಿದೆಂದು ತಂತಿಗೆ | ಪಿರಿದುದೋಷವನೊರೆದು ವೀಣೆಯ |
ನರಸನೊಂದನು ತೆಗೆಯೆ ಸುಗ್ರೀವಾರ್ಯನಿಂತೆಂದ || ೧೦ ||

ಎಸೆವ ಕುರುಜಾಂಗಳ ವಿಷಯದೊಳ | ಗೆಸೆವ ಹಸ್ತಿನ ಪುರದರಸನೋ |
ಳ್ಪೆಸೆವ ಮೆಘರಥಾಖ್ಯ ಪದ್ಮಾವತಿಗೆ ವರಸುತರು ||
ಮಿಸುಪ ವಿಷ್ಣುಕುಮಾನೊಪ್ಪುವ | ಕುಸುಮಶರ ಸಮ ಪದ್ಮರಥನೊ |
ಪ್ಪೆಸೆವರಾಗಿರೆ ಮೇಘರಥ ಮೇಘದ ತವಿಲಕಂಡೊ || ೧೧ ||

ಪರಮ ವೈರಾಗ್ಯದಲಿ ತಪದೊಳು | ನೆರೆಯೆ ವಿಷ್ಣುಕುಮಾರನುಂ ಮಿಗೆ |
ಧರಿಸಿದನು ದೀಕ್ಷೆಯನು ಪದ್ಮರಥನುಗ್ರಪತಿಯಾಗಿ ||
ಇರಲು ಮತ್ತನವಂತಿ ವಿಷಯದ | ಲಿರುತಲಿಹುದುಜ್ಜಯಿನಿಯೆಂಬುದು |
ಪುರವದರ ಪೊರಬನದೊಳ್ಯೆನೂರ್ವರು ಮುನಿಗಳೊಡನೆ || ೧೨ ||

ಇರಲು ಯೋಗದಕಂಪನಾಚಾ | ರ್ಯರು ತದವನೀಪಾಲನಾಮುನಿ |
ಪರನು ಪೂಜಿಸಿ ಬರಲು ಬಂದರು ಕೂಡಮಾನ್ಯಕರು ||
ಪಿರಿಯ ಬಲಿಪುತ್ರನು ಬೃಹಸ್ಪತಿ | ಪಿರಿದು ವಿದ್ಯಾಜ್ಞಾನಿಗಳು ತಾ |
ವಿರದೆ ಗರ್ವದಿ ತರ್ಕಿಸಿದರಾ ಮುನಿವರರ ಕೂಡೆ || ೧೩ ||

ಯತಿಪತಿಯ ವಾಗಾಯುಧದಿ ಖಂ | ಡಿತ ಮತಿಗಳಾಗಿಯೆ ತಿರುಗಿ ಬಂ |
ದತಿ ನಿಶಿಯೊಳಾ ಗುರುಗಳನು ಕೊಲಬಂದನಾ ಬಲಿಯು ||
ಅತಿ ನಿಶಿಯೊಳಾ ಗುರುಗಳನು ಕೊಲಬಂದನಾ ಬಲಿಯು ||
ಅತಿ ನಿಶಿತ ಕಳ್ಗವ ನೆಗಪೆ ದೇ | ವತೆಗಳಿರೆ ಕೀಲಿಸಲು ಮಿಗೆ ನೋ |
ವುತಲು ಘೋಳಿಡೆ ಕೇಳಿಬಂದುದು ಪುರಜನವ್ರಾತ || ೧೪ ||

ವರವೃಷಭ ಕೇತು ಕ್ಷಿತೀಶನು | ಗುರುಪದವನೊಲಿದರ್ಚಿಸಿ ನಮ |
ಸ್ಕರಿಸಿ ಬಲಿಶುಂಕ್ರಾದಿಗಳನಾದೇಶವನು ಬಿಡಿಸಿ ||
ಇರದೆ ಕುರುಜಾಂಗಳ ವಿಷಯಕವ | ತರಿಸಿ ಪದ್ಮರಥಾವನೀಶನ |
ಚರಣವನು ಕಂಡಿರ್ದರೆಲೆ ಭೂಪಾಲ ಕೇಳೆಂದ || ೧೫ ||

ಬಲಿ ಬೃಹಸ್ಪತಿ ಶುಕ್ರನೆಂಬ | ಗ್ಗಲರು ಮಂತ್ರಿಗಳೋಲಗಿಸುತಿರೆ |
ಮಲೆವ ರಿಪು ದಂಡೆತ್ತಿಬರೆ ಬೆಸನಾಂತಿವರು ನಡೆದು ||
ಅಲಘು ಭುಜಬಲದಿಂದ ಮಂತ್ರದ | ಬಲದಿ ಅವರುಪಸಂಹರಿಸಿ ಬರೆ |
ಬಲಿಯ ಬಲುಮೆಗೆ ಪದ್ಮರಥನೃಪ ಮೆಚ್ಚಿ ಬೇಡೆಂದ || ೧೬ ||

ಏಳುದಿನವೇನರಸುತನವನು | ಪಾಲಿಸೆನೆ ನೃಪನಿತ್ತನೆನೆ ಭೂ |
ಪಾಲಕೇಳಿ ಮೆಚ್ಚಿ ನಿನ್ನಿಲ್ಲಿರಲಿ ನಾನೆಂದ ||
ವೇಳೆಗಾಂತಪೆಯೆಂದು ಬಲಿಸಂ | ಮೇಳದಿರೆ ಮತ್ತತ್ತಣಿಂ ಶುಭ |
ಶೀಲಗುಣಗಳಕಂಪನಾಚಾರ್ಯರು ಬಿಜಯಮಾಡಿ || ೧೭ ||

ವರಮುನಿಗಳಾ ಸೌಮ್ಯಗಿರಿಯೊಳು | ಪಿರಿಯ ಗುಹೆಯಲಿ ಪಂಚಶತುಮುನಿ |
ವರರು ಬೆರಸಿರೆಯೋಗದಲಿ ಅದನರಿಂದನೀ ಬಲಿಯು ||
ಪರಮ ಮುನಿಗಳ ಕೊಲಲೆ ಬಗೆದಾ | ಧರೆಯನರಸಿಂ ಪಡೆದು ಮಿಗೆ ಡಂ |
ಗುರವ ಹೂಯಿಸಿದ ಕೋಟಿ ಹೋಮವ ಮಾಡಿಸುವೆನೆಂದು || ೧೮ ||

ಪುರದೊಳಗೆ ತೆರಪಿಲ್ಲವೆಂದಾ | ಗಿರಿ ಗುಹೆಯುಪರಿಸರಕೆ ಚ |
ಪ್ಪರವನಿಕ್ಕಿಸಿ ಆ ಗುಹದ್ವಾರದಲಿ ಕಟ್ಟಿಗೆಯ ||
ಪಿರಿಯ ಬೆಟ್ಟವನೊಟ್ಟಿಸಿದನೆ | ಲ್ಲರ ನೆರಹಿ ಬೇಳ್ವವರ್ಗೆ ಬೇಡಿದ |
ಪರಿಯಲೀವುತ ಪಾಪಿಕೋಪದಿ ಹೋಮಿಸಿದನಂದು || ೧೯ ||

ನವಗೆ ಬಂದುಪಸರ್ಗಪೋಪ | ನ್ನೆವರ ಸನ್ಯಾಸದ ಸ್ಥಿತಿಯುಮೆಂ |
ದವನಿಧರ ಧೈರ್ಯರು ಮುನೀಶ್ವರರನಿಬರಿರಲಿತ್ತ ||
ಅವಧರಿಸಿ ದಕ್ಷಿಣ ಮಧುರೆಯೊಳು | ಶ್ರವಣ ನಕ್ಷತ್ರದ ಚಲನೆ ಗಂ |
ಡವಧಿ ಬೋಧದಿ ಪಿರಿಯ ಗುರುಗಳು | ಕಂಡರಾತೆರನ || ೨೦ ||

ಅರಿದವರ ಘೋರೋಪಸರ್ಗವ | ಪರಿಹರಿಸಿಮೆನೆ ವಿಷ್ಣುಮುನಿಗಳು |
ಪಿರಿದು ವಿಕ್ರಿಯೆಯೆಂಬ ಋದ್ಧಿ ಪ್ರಾಪ್ತರಪ್ಪುದರಿಂ ||
ಪುರಕೆ ಬಂದಾ ತಮ್ಮನಹ ಭೂ | ವರಗೆ ಪದ್ಮರಥಂಗೆ ನೀನೀ |
ಪರಿಯ ರಾಜ್ಯವ ಬಲಿಗೆಕೊಟ್ಟತಿಪಾಪಿಯಾದೆಯಲ || ೨೧ ||

ಮುನಿದು ಬಲಿಸೌಮ್ಯಾಚಲದೊಳಮ | ಳ್ಪಿನರಿ ಗೈನೋರ್ವರು ಮುನಿಗಳಿಗೆ |
ಘನತರದ ಘೋರೋಪಸರ್ಗವ ಮಾಡುತಿರ್ದಪನು ||
ಜನಪನಾದದಕಿದುಗುಣವೆ ಮೆ | ಚ್ಚಿನೊಳು ಮುನಿಸಿನೊಳಂ ವಿವೇಕವ |
ನಿನಿಸು ನೋಡದೆ ಗೈದ ಕಾರ್ಯದಿ ಕೇಡು ಬಹುದರಿದೆ || ೨೨ ||

ಎನಲು ನಡನಡನಡುಗಿ ಭೂಪತಿ | ಮುನಿಪನಡಿಯಲೆ ಬಿದ್ದು ಹೊರಳಿದ |
ನಿನಿತು ಮೇಲಣಿಕೆಯನು ನಾಬಲ್ಲೆನೆ ಜಡಾತ್ಮಕನು ||
ಎನಗೆ ಲೋಕಕೆ ಸಾಧು ಸಂಘಕೆ | ಎನಿತು ಬಂದೆರಡನು ಬಿಡಿಸುವೊಡೆ |
ಮುನಿಪ ನಾಳಿನ ಜಿನಪನೀದೆ ಸಮರ್ಥರಹುದೆಂದ || ೨೩ ||

ಆದೊಡವರುಪಸರ್ಗವನು ವಿ | ಚ್ಛೇದಿಪೆವು ನಾವೆನಲ್ಕೆ ಹ |
ಸಾದವೆಂದಾ ಪದ್ಮರಥನಾ ವಿಷ್ಣುಮುನಿವರರ ||
ಪಾದ ಪದ್ಮಕ್ಕೆರಗಿದ ನಾನಪ | ರಾಧಿಯಾದೆನಲಾಯೆನುತ್ತಿರೆ |
ವೋದನಾಮುನಿಯತ್ತ ವಾಮನರೂಪ ಕೈಕೊಂಡು || ೧೪ ||

ಹೊಸೆದು ಕಟ್ಟಿದಮುನ್ನ ಕಚ್ಚೆಯ | ಬೆಸುಗೆ ಶಿಖಿಗಳ ಗಂಟುಮಿಗೆ ಶೋ |
ಭಿಸುವ ಜನಿವಾರವು ಕರಂಡಕ ದಂಡು ಕುಂಡಲವು ||
ಬೀಸಿಗೊಡೆ ಬೆಟ್ಟಿನೊಳು ದರ್ಬೆಯು | ಯೆಸೆವ ಹೊಂಬಣ್ಣದ ಶರೀರದಿ |
ಮಿಸುಪ ವಾಮನ ರೂಪನಾಂತಾ ವಿಷ್ಣುಮುನಿಬಂದ || ೧೫ ||

ಬಂದು ಮಂತ್ರಾಕ್ಷತೆಯ ಕುಡೆ ಬಲಿ | ನಿಂದು ವಟುವಿನ ಚೆಲುವನೀಕ್ಷಿಸಿ |
ಬಂದು ಬಲಗೊಂಡೆರಗಿ ನಿಮಗೇಂ ಬೇಕು ಬೇಡಿಮನೆ ||
ಇಂದು ನೀ ಮಾದಾನಿಯಾದಪೆ | ಯೆಂದು ಕೇಳ್ದೈತಂದೆವೆಮ್ಮಡಿ |
ಯಂದ ಮೂರಡಿ ನೆಲನ ಕೊಡು ಜಪಗೈವುತಿಹೆವಲ್ಲಿ || ೧೬ ||

ಎನಲು ಧಾರಾಪೂರ್ವಕದಿ ಕೊಡು | ವನಿತರೊಳಗೆಲೆ ಬಲಿಯೆ ಈ ವಾ |
ಮನ ಕಪಟಿ ಮೂರಡಿ ನೆಲನನೆರೆದಾಗಳರಿದೆನಿದ ||
ಎನುತಿದಿರೆ ಬರೆ ತೊಲಗಿಸಲು ಕಡು | ಮೊನೆಬೆರಳ ದರ್ಭೆಯು ನಡಲು ಶುಕ್ರ |
ನನಯನ ವಡೆದತ್ತನಿಲೆ ನೆಲನಳದುಕೊಳ್ಳೆಂದ || ೧೭ ||

ಬೆಳೆದನಾ ವೈಕುವರ್ಣದಲರೆ | ಗಳಿಗೆಯೊಳು ಮುಗಿಲುಚ್ಚಳಿಸಿ ಮಿಂ |
ಗಳೆ ತನಗೆ ಕಣ್ಕಾಲ ಗೆಜ್ಜೆಗಳೆನಿಸಿ ಮೇಗೊಗೆದು ||
ಅಲೆದೊಡೊಂದಡಿ ಮೇರುತನಕ | ತ್ತಲೆದೊದೊಂದಡಿ ಮಾನುಷೋತ್ತರ |
ಕಳತೆಯಾದುದು ವಿಕ್ರಿಯೆಯನಾಂತಾತಿ ವಿಕ್ರಮನ || ೧೮ ||

ಬಳಿಕಲಿನ್ನೊಂದಡಿಗೆ ಭೂಮಿಯ | ತಳುವಡೀಯೆಂದೊಯ್ಯನಾಗಳು |
ಬಲಿಯೆದೆಯ ಮೇಲೊಂದಡಿಯನಿಟ್ಟಾಗುಹೆಯ ನಡುವೆ ||
ಚಲಿಸದಿರ್ದ ಮುನೀಶ್ವರರ್ಗೀ | ಖಳನು ಗೈದುಪಸರ್ಗವನು ಕ್ಷಣ |
ದೊಳಗೆ ಪರಿಹರಿಸಿದನು ಭೂನುತ ವಿಷ್ಣು ಮುನಿವರನು || ೧೯ ||

ಅಗ್ಗಳದ ಮುನಿಪರ್ಗೆ ಬಂದುಪ | ಸರ್ಗವನು ಹಿಂಗಿಸುವ ಬಗೆಯಿಂ |
ಭೊಗ್ಗನೀ ಬ್ರಹ್ಮಾಂಡವನು ವಡೆದುಚ್ಚಳಿಸೆ ಬೆಳೆದ ||
ಸಗ್ಗವುದುರುಗುವೆಂಬ ಭಯದಿಂ | ಸಗ್ಗಿಗರ ಬಲ್ಲಹ ಬೆದರಿ ನೀ |
ವೊಗ್ಗಿನಿಂ ಪೋಗೆಂದು ಗಂಧರ್ವಾಮರರ ಕಳುಹೆ || ೨೦ ||

ಬಂದು ವಿಷ್ಣು ಮುನೀಶನನು ಬಲ | ವಂದು ಪೂಜಿಸಿ ದೇವನಿಕರವು |
ಸಂದಣಿಸೆ ಸಾರಿಯೆಂಬ ಸುಘೋಷಯೆಂದೆಂಬ ||
ಸಂದ ವೀಣೆಯ ಕೊಂಡು ಬಾಜಿಸು | ವಂದು ಗಾಂಧಾರವದೆ ಸುಗ್ರಾ |
ಮಂದರಕೆ ತಮ್ಮನಿಯ ಪಾಡುತ ಬಾಜಿಸುವರೊಲಿದು || ೩೧ ||

ಅವರ ವೀಣಾವಾದನ ಸ್ತೋ | ತ್ರವನು ಮೆಚ್ಚಿದನಾ ಮುನಿಪನಾ |
ದಿವಿಜರೆಲ್ಲರು ಬೇಡಿಕೊಳೆವೈ ಕುರ್ವಣನುಳಿದು ||
ಅವರು ಬಿಜಯಂಗೈದರತ್ತಾ | ದಿವಿಜರಿತ್ತಲು ಪದ್ಮರಥಗೊ |
ಪ್ಪುವ ಸುಘೋಷೆಯೆನಿಪ್ಪ ವೀಣೆಯನರಸ ಕೇಳೆಂದ || ೩೨ ||

ಗುರುವಧೆಯನೆಣಿಸಿದ ಖಳರುಗಳು | ಶಿರವನರಿಯೆನೆ ಪದುಮರಥನಾ |
ಗುರುಗಳಾ ಉಪಸರ್ಗ ತೊಲಗಲು ಕೊಲೆಯ ಬಿಡಿಸಿದರು ||
ಪರಮದಯೆಯುಳ್ಳದುವೆ ಮಾರ್ಗವು | ಗುರುವೆ ಯೀ ಜಿನಧರ್ಮವೆನೆ ನೀವ್ |
ಕರುಣಿಸೆಂದರೆ ದಾಂತರಾ ಬಲಿ ಮುಖ್ಯರಿರದಂದು || ೩೩ ||

ಅದುಕಣಾ ನೀ ಪಿಡಿದ ವೀಣೆಯು | ಚದುರನ್ನೈ ನೀನೆನಲು ಭೂವರ |
ನದನು ಉಗುರ್ಗೊನೆಯಿಂದ ಕಳೆಯನು ಕೂಡೆ ನೇವರಿಸಿ |
ಚದುರ ನುಡಿಸಲು ಎಲೆಯ ಮೇಲಮ | ರದು ಸಭೆಯು ಬಿಡೆ ಕೆಳದಿಯರು ಮೇ |
ಲುದನಿಡಲು ಮೆರೆದರು ಸುದತಿ ತಲೆದೂಗಿದಳು ಮೆಚ್ಚಿದಳು || ೩೪ ||

ಇದು ಮನೋಜನ ಕಬ್ಬುವಿಲ್ಲುಲಿ | ಇದು ರತಿಯನೂಪುರದ ನುಣ್ಚರ |
ಇದುವೆ ನುಡಿವೆಣ್ಣಂಚೆಯಿಂಚರವಂಗಜನಮುಂದೆ ||
ಮುದದಿಪಾಡುವ ಮದವದಳಿಗೀ | ತರ ಮಧು ಸ್ವನವೆನಿಸಿ ಕಿವಿಯೊ |
ಕ್ಕದು ಕುಮಾರನ ಕೈಯವೀಣಾನಾದವಾ ಸಭೆಯ || ೩೫ ||

ಮೆಚ್ಚಿ ವಸುದೇವನ ಕೊರಳ್ಗೆ ತೊ | ಡರ್ಚಿದಳು ನವರತ್ನ ಮಾಲೆಯ |
ನಿಚ್ಚಯಿಸೆ ಗಂಧರ್ವದತ್ತೆ ವಿವಾಹವಿಧಿಯಿಂದ |
ನಿಚ್ಚ ರತಿರಾಗದಲಿ ಮಿಗೆ ಮೈ | ಬೆಚ್ಚಿ ಮನಸಿಜ ಕೇಳಿಯೊಳು ಮನ |
ಮೆಚ್ಚು ನೆಚ್ಚಿನ ನಲ್ಕೆಯಲಿ ಮನದನ್ನಳೀಸಿದಳು || ೩೬ ||

ತವದ ಕಾಮೋದ್ರೇಕದಲಿ ಕೂ | ಡುವ ಸಮಪ್ರಣಯಿಗಳ ನೀಡುಗ |
ಣ್ಣೆವೆಗಳರೆ ಮುಗಿವುತಿರೆ ಪುಳಕವುರೆ ವಾಮ್ಮನುಚ್ಚಳಿಸೆ ||
ಸವಿವ ಬಾಯುಗಿಯಡಗೆ ಮೈಮಿಗೆ | ಬೆವರೆ ಸೂಳೋಸರಿಸೆ ಕೆಡಪಿದ |
ಜವಳಿ ಜಂತ್ರದ ಬೊಂಬೆಯೆನಲೀರ್ವರು ಮರೆದರೊಡಲ || ೩೭ ||

(ಈ ೩೭ನೆಯ ಪದ್ಯವನ್ನು ಇನ್ನೊಮ್ಮೆ ಬರೆದು || ೩೮ || ಸಂಖ್ಯೆ ಕೊಟ್ಟಿದ್ದಾರೆ)

ಇಂತು ಕಾದಲ್ಕೆಯಲಿ ಪಲದಿನ | ಕಂತುಕೇಳಿಯಲಗಲದಿರುತ ವ |
ಸಂತ ಕಾಲದೊಳವರು ವನಜಲ ಕೇಳಿಗಳನಾಡಿ |
ಸಂತಸದಿ ಕೆಳದಿಯರು ವೆರಸಿ ವ | ಸಂತ ಮೋಹನವನದೊಳೆಸೆವ ಲ |
ತಾಂತ ಮಂಟಪದಲ್ಲಿ ಬಿನದದಿನಿರ್ದರಿರಲೊಡನೆ || ೩೯ ||

ತಾಳ ದಂಡಿಗೆ ವಾಸ ಮದ್ದಳೆ | ಕಾಳೆ ಹಾಡುವ ಸೆಳೆವ ಜೋಕೆಯ |
ಮೇಳವವರಿಂಚರವು ನಲ್ಲರ ಕಿವಿಗೆ ಸವಿಗೊಡಲು ||
ಕೇಳುತಾ ದಂಪತಿಗಳೊಂದೆಸೆ | ಮೇಳದಲಿದೆತ್ತಣದೆನುತ ಕ |
ಣ್ಣಾರೆ ನೋಡುತ್ತಿರಲುದಂತ್ವಂದಸುಕೆಯನೆಳಲೊಳಗೆ || ೪೦ ||

ಸವಿವಡೆದ ಶೃಂಗಾರ ರಸವ | ರ್ಣವು ಮನೋಜನ ದೇಹಕಾಂತಿಯೊ |
ಳವಗಹಿಸಿ ಮಿಗೆ ಕಾಮಹೋಮದ ಧೂಮಲೇಖೆಯೊಳು ||
ಅವತರಿಸಿ ಮರದುಂಬಿಗಳ ಬ | ಣ್ಣವ ಸೆಳೆದು ಕೊಂಡೊಂದು ಬೋಹನ |
ಯುವತಿಯಾಗಿಯೆ ನರ್ತಿಪುದೊಯೆನೆ ಕಣ್ಗೆ ತೋ [ರಿದುದು] || ೪೧ ||

ಹೊಲೆಯರೀ ಮೇಳದ ನಡುವೆಮಿಗೆ | ನಲಿವ ಚೆಲು ನಚ್ಚಣಿಯನಕಟೀ |
ಕುಲದೊಳಗೆ ಪುಟ್ಟಿಸಿದನಜನದನೆ ತಪ್ಪದಲ ||
ಲಲನೆಯರೊಳೀ ಚೆಲುವು ವಿದ್ಯಾ | ಕಲೆಯಿದಧಿಕವೆನುತ್ತ ರಸ ಕಂ |
ಗೊಳುತಿರಲು ಭೂವರನ ನೋಡುತ ಮೂರ್ಛಿಸಿದಳಾಕೆ || ೪೨ ||

ಅವಳನವರುಚಿತೋಪಚಾರದ | ಲೆವೆದೆರಸುತಿರಲರಸವೇಕಾ |
ಯ್ತುವಳಿಗಿಂತೆನಲವರೊಳೋರ್ವನು ಮುದುಪನಿಂತೆಂದ ||
ಅವನಿಪತಿ ಚಿತ್ತೈಸು ಯಿತ್ತೊ | ಪ್ಪುವ ಭರತ ವಿಜಯಾರ್ಧ ದಕ್ಷಿಣ |
ದವನಿಯೊಳಗಿಹ ವಿಜಯ ಪುರಮದನಾಳ್ವ ಖಚರೇಂದ್ರ || ೪೩ ||

ಪೆಸರಲೊಪ್ಪುವ ಸಿಂಹನಾದನು | ವಿಷಮ ವಿಕ್ರಮನಾತ್ಮನಾತ್ಮಜೆ |
ಕುಸುಮಶರನಧಿದೇವಿ ನೀಲಾಂಜನೆಯೆನಿಪಳೀಕೆ ||
ರಸಿಕೆಯಾಗಿರೆ ಬೇಡಿಯಟ್ಟುವ | ರೊಸೆದಖಿಳ ವಿದ್ಯಾಧರರ ಚೆ |
ಲ್ವೆಸೆವ ಕುವರರು ಬಳಿಕಿವಳ ತಾಯಂತೆಯೊಂದುದಿನ || ೪೪ ||

ಈ ಕುಮಾರಿಗೆ ಗಂಡನಾರು ವಿ | ವೇಕಿ ಪೇಳೆಂದೋರ್ವ ಬೋಧಾ |
ಲೋಕನನು ಬೆಸಗೊಂಡಡೀ ಬನದೊಳು ಪೊಲತಿಯಾಗಿ ||

ಆಕೆ ನರ್ತಿಸುತಾವನನು ತಾಂ | ಕೇಕರದಿ ನೋಡುತ ವಿಮೂರ್ಭಾ |
ವ್ಯಾಕುಲತೆಯಹಳವನೆ ಗಂಡನುಯೆಂದನಾ ಮುನಿಪ || ೪೫ ||

ಎಂದೊಡಾದೇಶವೆ ನೃಪಾಲಕ | ತಂದು ತೋರಿತು ನಿನ್ನನಾವದು |
ಗೆಂದವಳನೆಚ್ಚರಿಸಿ ದುಷ್ಕುಲರೂಪನೋಸರಿಸಿ ||
ಸಂದ ನಿಜರೂಪನು ಕುಮಾರಕ | ಗಂದು ತೋರುತ ಪಾರಿದಳು ನಭ |
ಕೊಂದು ಮಿಂಚಿನ ಬೊಂಬೆಯೆನಲವಳತ್ತಲಿತ್ತವರು || ೪೬ ||

ಹೊಳಲ ಪೊಕ್ಕರು ಚಾರುದತ್ತಗೆ | ತಿಳುಪಿದರು ಈ ತೆರನನೆಲ್ಲವ |
ನಳಿಯನನು ಕಳುಹೆಂದರಾ ಖಚರಪ್ರಧಾನಿಗಳು ||
ಒಲಿದರಸಿ ಗಂಧರ್ವದತ್ತೆಯು | ಕಳುಹೆ ಕಳುಹಿಸಿಕೊಂಡು ನೃಪನಾ |
ಗಲೆ ವಿಮಾನವನೇರಿ ವಿಜಯಪುರಕ್ಕೆ ಪೋತಂದ || ೪೭ ||

ವರ ವಿಭವದಿಂ ಸಿಹನಾದನು | ಕರೆದುಕೊಳೆ ಪುರವ್ಯೆದಿ ನಿಜಮಂ |
ದಿರದೊಳಾ ಸುಮುಹೂರ್ತದಲಿ ವಸುದೇವ ಭೂಪತಿಗೆ ||
ತರುಣಿ ನೀಲಾಂಜನೆಯ ವಿಭವದಿ | ಪರಿಣಯನವನು ಮಾಡೆ ಸುಖಸಾ |
ಗರದೊಳಾ ದಂಪತಿಗಳೋಲಾಡಿದರು ರಾಗದಲಿ || ೪೮ ||

ಪಲದಿವಸ ನೀಲಾಂಜನೆಯೊಳಿಂ | ತೊಲಿದಿರುತೆ ಬಳಿಕವರ ಕೈಯಲಿ |
ಕಳುಹಿಸಿಯೆ ಕೊಂಡತ್ತ ಭುಚರ ರಾಜ್ಯಕೇಳ್ತರುತ ||
ಬಳೆದ ವಿದ್ಯಾ ಬಲದಿ ನಭದಿಂ | ದಿಳಿದಿಳಿದು ನಾನಾನಗರಿಗಳೊ |
ಳಿಳೆಯೆರೆಯರುತ್ತಮ ಕುಮಾರಿಯೊಳು ಮದುವೆನಿಲುತ || ೪೯ ||

ಅರಸನಿಂತಂಬರ ಚರರ ಭೂ | ಚರರ ಸುತೆಯೆರ ಮದುವೆನಿಂದನು |
ಪರಿಗಣಿಸಿ ಅರುನೂರ ತೊಂಬತ್ತೆಣ್ಬರನುಕುಕ್ರಮದಿ ||
ಅರಸಿಯರನವರವರ ತಂದೆಯ | ರರಮನೆಗಳೊಳಗಿರಿಸಿ ತಾನ್ಯೆ |
ತರುತ ಕಂಡನು ಚಿತ್ರಶೋಭೆಯರಿಷ್ಟ ನಗರಿಯನು || ೫೦ ||

ಜನಪನಲ್ಲಿಗೆ ಪರ್ಣಲಘುವೆಂ | ದೆನಿಪ ವಿದ್ಯೆಯೆಲವತರಿಸಿ ವೋ |
ರ್ವನು ಕಂಡೀ ಪುರದೊಳೇನಿದು ಗುಡಿಪತಾಕೆಗಳಿಂ ||
ಕನಕ ಮಣಿಗಣ ರುಚಿಗಳಿಂ ನಭ | ವನು ಪಳಂಚುವ ಸಾಲೆವೆಸರೇ |
ನೆನೆ ಬಳಿಕ್ಕವನೆಂದನೀ ಪುರಪತಿ ಹಿರಣ್ಯಾಕ್ಷಾ || ೫೧ ||

ಸತಿ ಸುದತ್ತೆ ಅವರ್ಗೆ ಸುಕುಮಾ | ರಿತಿಯು ರೋಹಿಣಿಯೆಂಬಳಾ ಭೂ |
ನುತೆಯ ನೂತನ ರತಿಯ ಶೃಂಗಾರಸ್ವಯಂವರವು ||

ವಿತತ ದೇಶಾಧೀಶ ವಿಶ್ರುತ | ನುತ ಸಮುದ್ರ ವಿಜಯ ನೃಪನು ರಾ |
ಜಿತ ಜರಾಸಂಧನ ಕುಮಾರಕರಿಹರು ಕೇಳೆಂದ || ೫೧ ||

ಕೇಳುತವೆ ವಸುದೇವ ವಸುಧಾ | ಪಾಲನೈತರಲಾ ಸ್ವಯಂವರ |
ಶಾಲೆಯಲಿ ಕುಳ್ಳಿರ್ದ ವಿದಿತ ಸಮುದ್ರ ವಿಜಯಾದಿ ||
ಭೂಲಲನೆಯೋಪರನು ನೋಡುತ | ಲೀಲೆಯಿಂ ಪೊಂದೇರ ಮೇಲಾ |
ಲೋಲಲೋಚನೆ ಬಂದಳಂಗಜಲಕ್ಷ್ಮಿಯಂದದಲಿ || ೫೩ ||

ಪೊಳೆವಲಾವಣ್ಯಾಂಬು ನಿಧಿಯಲಿ | ಮುಳುಗೆ ಕಣ್ಮೀನ್ಗಳು ಕಟಾಕ್ಷದ |
ಬಳಬಳಿಯಲಂಗಜನ ಹೂಗಣೆಗಳನು ಹರಹುತಲಿ ||
ತಳೆದ ನಾನಾರತ್ನ ಭೂಷಣ | ಗಳಬೆಳಗ ಹಸರಿಸುತ ಸತಿ ಪರಿ |
ಮಳದ ಪುತ್ಥಳಿಯೆನಿಸಿ ಬಂದಳದೊಂದು ಲೀಲೆಯಲಿ || ೫೪ ||

ಅವಳ ಗಾಡಿಯನೀಕ್ಷಿಸುತಲ | ತ್ತವನಿಪತಿಗಳ ಸಭೆಯ ನೋಡುತ |
ವಿವಿಧ ವಾದಕರೋಳದೋರ್ವನ ಹೆಗಲ ಹರೆವೊಂದ ||
ತವಕಿಸದೆ ತೆಗಕೊಂಡು ತನ್ನೊ | ಪ್ಪುವ ಹೆಗಲಿನೊಳುಕೋದುತಾಂ ಪಾ |
ಣವ…………………………. || ೫೫ ||

ಪಲತೆರದ ತಾಳಗಳ ಜತಿಗಳ | ನಳವಡಿಸಿ ತುಡುಕಗಳ ಕತ್ತರ |
ಗಳನು ಮೂದೆರನಾದ ಲಯದಲಿ ಕುಡುಪಡರೆನುಡಿಸೆ ||
ಲಲನೆಯೊಳು ನಿಂದರಸುಗಳ ಕಂ | ಗಳನೆಳೆದು ಕಿವಿತಾವೆದ… |
ತ್ತೆಳಸಿ ನೋಡಿಸಿದವು ಚೆಲುವ ಪರೆಕಾರನನು ನಲಿದು || ೫೬ ||

ಲಲನೆಯಾತನ ವಾದ್ಯಕಲೆಯನು | ಚೆಲುವಿಕೆಯನತಿ ಭದ್ರಲಕ್ಷಣ |
ಗಳನು ಅಂಗನ್ಯಾಸವನು ಎವೆಯಿಕ್ಕಿದೀಕ್ಷಿಸುತ ||
ಮೊಳೆಯ ಹೊಂಜೆಳೆ ಮೈಯೊಳಾಗಲೆ | ಪುಳಕ ಸಸಿ ತನಿಮೋಹರಸ ಮನ |
ದೊಳಗೆ ಕಾಳ್ಪುರವಾಗೆ ಸಾರ್ದಳು ರೋಹಿಣೀ ದೇವಿ || ೫೭ ||

ಗಾಡಿಕಾತಿ ಸುರತ್ನಮಾಲೆಯ | ಸೂಡಿದಳು ವಸುದೇವಗುಜೆ ತಡ |
ಮಾಡದವರೀರ್ವರನು ರಥವೇರಿಸಿ ಸುಭಟಕೋಟಿ ||
ಕೂಡಿಕೊಂಡರಮನೆಗೆ ಹೋದರು | ನಾಡೆ ಮಂಗಲತೂರ್ಯಮೊಳಗಲು |
ಕೂಡೆ ನಿಜಮಂದಿರವನ್ನೈದೆ ಹಿರಣ್ಯ ಲೋಚನನು || ೫೮ ||

ಅಳಿಯನಾಕಾರವನು ನೃಪ ಕಂ | ಗೊಳುತಲುಚಿತಾಸನದೊಳಿರ್ದು ಸು |
ಕುಲಜನಲ್ಲದೆ ಚುಚ್ಚನಲ್ಲೆಂದಿಷ್ಟ ಮಂತ್ರಿಗಳ ||

ಕೆಳೆಯರಾಳೋಚನೆ ವಡೆದು ತ | ನ್ನೊಳೆ ಸರಾಗದಲಿರ್ದನತ್ತ ನೃ |
ಪಾಲರು ಚಕ್ರಿಸುತ [ರುಮಿಂ]ತೆಂದ [ರವ] ರೊಂದಾಗಿ || ೫೯ ||

ನರಿಯ[ಗೀ]ತಕೆ ಬಳ್ಳು ಮೆಚ್ಚಿದ | ತೆರದಿ ಬಾಲಕಿ ಮೇಲನರಿಯದೆ |
ಹರೆಯ ಗರಬರಗುಟ್ಟಿಸಿದ ಹಗೆರಾರನನು ಕಂಡು ||
ಕೊರಳಿಗಾಗಲೆ ಮಾಲೆಸೂಡಲು | ದುರುಳನವರ್ಹೈಯನು ಕುಲಕ್ರಮ |
ವರಿಯದಾಕೆಯ ಕೊಡುವನೇಯೆಂದುದು ನೃಪಸ್ತೋಮ || ೬೦ ||

ಕಳುಹಿದರು ದೂತನನು ಪೊಕ್ಕನು | ಪೊಳಲನಮ್ಮ……… |
…ನರಸಂಗರುಪೆ ಕರೆಯೆನೆ ಪೋಗಿ ಕೈಮುಗಿದು ||
ಇಳೆಯೆರೆಯನಪರಾಜಿತಾದ್ಯರು | ಬಲವದವನೀಶ್ವರರು ನನ್ನನು |
ಕಳುಹೆ ಬಂದೆನು ಚಿತ್ತೈಸೆ ಕೇಳೆನ್ನ ಬಿನ್ನಹವ || ೬೧ ||

ಧಾರವಟ್ಟಲ ತೆಱದಿ ನಿನ್ನ ಕು | ಮಾರಿ ಕಸವನೆ ಪಿಡಿಯೆ ನೀನವಿ |
ಚಾರಿಯಾದೈ ರಾಜಪುತ್ರ ಸಮಾಜವನು ಬಿಸುಟು ||
ಆರುವರಿಯದ ಹಱೆಯ ಹೊಲೆಯಕೆ | ಧಾರುಣೀಶ್ವರ ತನುಜೆಯನು ಕೈ |
ನೀರೆಱವೆನೆಂಬೀ ದುರಾಗ್ರಹ ಬೇಡ ಕೇಳೆಂದ || ೬೨ ||

ಕೊಡದಿರೀಯಜ್ಞಾತ ಕುಲಜಗೆ | ಕೊಡುವುದೆಮ್ಮರಸುಗಳೊಳೋರ್ವಗೆ |
ಕೊಡಲರಿಯದೊಡೆ ಸಂಗರಕ್ಕನುವಾಗು ಬೇಗದಲಿ ||
ಬಿಡುವರಲ್ಲ ಕುಮಾರಿಯನು ನಾ | ರೊಡೆಯರೆಂಬಾ ದೂತನಾ ಬಿಱು |
ನುಡಿಗೆ ಕದಡದೆ ನಸುನಗುತ ಭೂಪಾಲ ಕೇಳೆಂದ || ೬೩ ||

ಚರನೆ ಕೇಳ್ದೆ ನೀಂ ಸ್ವಯಂವರ | ಪರಿಣಯನವಿದು ಪೂರ್ವದಿಂ ಭೂ |
ವರೆ ಪರಂಪರೆಯಿಂದ ಬಂದುದದಿಂದು ಪೊಸತಲ್ಲ ||
ಅರಿಯರೇ ನಿಮ್ಮವರು ಕನ್ನಿಕೆ | ಯರು ಪುರಾತನ ಪುಣ್ಯ ಫಲವದು |
ವರನ ತೋರಿಸೆ ಮದುವೆಮಾಡುವುದರಸುಗುಣವೆಂದ || ೬೪ ||

ಮಾವನೊಳು ನುಡಿಗೇಳುತವೆ ವಸು | ದೇವನಾ ದೂತಂಗೆ ಪೇಳ್ದನು |
ನಾವು ಕೇಳ್ಕೆ ಹಱೆಯ ಹೊಲೆಯರೊಳೋರ್ವ ಬಡಬದಿಕ ||
ಭೂವರರ ಮಕ್ಕಳು ಸಮಸ್ತರು | ತಾವು ಬಲ್ಲಿದರದಕೆ ನೀನೇಂ ||
ದಾವಿಧದಿ ಕಾದುವೊಡೆ ಬರಹೇಳೆಂದು ಕಳುಹಿದನು || ೬೫ ||

ಕಳುಹೆ ದೂತನು ಹೋಗಿ ಹೇಳಲು | ಮುಳಿದು ಬಂದಾ ಸಂಗರದೊಳತಿ |
ಬಲರಖಿಲ ಧಾತ್ರೀಶರನಿಬರು ಬೇಗ ತಂತಮ್ಮ ||

ಬಲವೆರಸಿ ಪೌಜಾಗಿ ಸಮರಾಂ | ಗಳದೊಳಗೆ ಪೊಂಡೋಡಿ ನಿಲೆ ಕೈ |
ಗಳಿಯೆ ಮೊಳಗಿತು ಸೂಳಡರಿ ಸನ್ನಾಹ ಪುದುಭೇರಿ || ೬೬ ||

ಅಸನಿ ಮಸಗಿದ ತೆಱದಿನಾಯ್ತಾ | ಗಸದೊಳಗೆ ದೆಸೆಯಾನೆಗಳು ಭೃಂ |
ಹಿಸಿದ ತೆರನಾಯ್ತೆಂಟು ದೆಸೆಯೊಳು ಗಿರಿಗುಹೆಗಳಲ್ಲಿ ||
ಬಸಿವ ನಿರ್ಝರ ರವವೆನಿಸಿದುದು | ವಿಸಧಿಯಲಿ ಪೆರ್ದೆರೆಯೆನಿಸಿ ಘೂ |
ರ್ಣಿಸಿತು ಬನದಲಿ ಸಿಂಹನಾದವದೆನಿಸಿತಾ ಧ್ವನಿಯು || ೬೭ ||

ಅನಿತರೊಳು ಭೇರೀ ಗಂಭೀರ | ಸ್ವನವಕೇಳುತ ಬಲಸಹಿತಮಾ |
ವನುವೆರಸಿ ನಿಜಪುರವ ಪೊರವಟ್ಟೋಡಿ ವಸುದೇವ ||
ಇನಿತು ಸಮರಕೆ ನೀವು ಬಿಲುಗೊಂ | ಬನಿತು ಬೇಹುದೆ ಮಾವ ನೀವೆ |
ನ್ನನು ವರವ ನೋಡೆನುತ ರಥವೇರುತವೆ ಬಿಲುಗೊಂಡ || ೬೮ ||

ಪಿಡಿದು ಚಾಪವನೇರಿಸಿಯೆ ಜೇ | ವಡೆಯೆ ಜಗದಡಕಿಲು ಜರಿದುಗಿರಿ |
ಕೆಡೆದುರುಳಿದವು ಗಲಗಲನೆ ತಾರಕಿಗಳುದುರಿದವು ||
ಕಡಲು ತಾಯ್ಮೆಳಲುಬ್ಬರಿಸಿ ಧರೆ | ನಡುಗಿದುದು ಅನಿಮಿಷರ ಕಣ್ಣಿವೆ |
ಮಡಿದುದೆನೆ ತದ್ಬಳರವ ತೀವಿದುದು ಲೋಕವನು || ೬೯ ||

ತಿರುವಿಗಂಬನು ಹೂಡಿವಹಿಲದಿ | ಬರೆತೆಗೆದು ಬಿಡೆ ಕವಿವ ಸೇನಾ |
ಶರಧಿಯುನ್ನತ ಜೀವನವ ವಡವಾಗ್ನಿ ಕೋಟೆಯನೆ ||
ಸರಳು ಪೀರ್ದುವು ಚೆಲ್ಲಿದವು ಕರಿ | ತುರುಗ ನರ ರಪ್ಪೆಗಳು ಬಿಸುನೆ |
ತ್ತರ ಕಡಲೊಳೊಡ ಹಾಯಿಸಿ ವಸುದೇವನ ರಥವು ಪರಿಯೆ || ೭೦ ||

ಶರಸಹಸ್ರವ ಕಿವಿಯುಗುಳುವವೊ | ಬೆರಳೆ ಕಾಱಿತೊ ಕೋಟಿ ಕಣೆಗಳ |
ತಿರುವೆ ಬಾಣದ ಬಣಬೆಗಱದುದೊ ಚಕ್ರವೋ ಬಿಲ್ಲೊ ||
ಅರರೆ ಭಲ ಬಿಲ್ಲಾಳೆ ಮಝು ಭಾ | ಪುರೆಯೆನುತ ಈರ್ವಲದ ರಾಜಕು |
ವರರು ಬಣ್ಣಿಸಿ ಬಿಲ್ಲಬಿನ್ನಣದೋರಿದನು ನೃಪತಿ || ೭೧ ||

ಈತನಂದಿನ ಕಾಲರುದ್ರನೊ | ಈತನೇಂ ಕಲಿ ವೀರಭದ್ರನೊ |
ಈತನೇಂ ವಿಳಯದ ಜವನೊ ಪ್ರಳಯುಗ್ರ ಭೈರವನೊ ||
ಈತನೀ ಪರೆಕಾರನಲ್ಲಿವ | ಗಾಂತು ಬದುಕುವುದರಿದೆನುತ ರಣ |
ಭೀತಿಯಲಿ ಕೆಟ್ಟೋಡಿದುದು ನೆರೆದರಸುಗಳ ಸುತರು || ೭೨ ||

ಅತಿರಥರು ಮಹಾರಥರು ಸಮ | ರಥರತುಗಳಗಜಹಯ ಸೈನಿಕವು ತಾ |
ಗುತಲೆ ಹರಿಕುಲಗಗನ ಸೂರ್ಯನ ಕೋಲ ಖುರಪುಟಕೆ ||

ಹತವಡೆಯೆ ವರಚಕ್ರವರ್ತಿಯ | ಸುತನುವಪರಾಜಿತನು ಗಜಹಯ |
ತತಿ ಮಹಾಸೈನಿಕ ಸಮೇತನು ಕಂಡು ಮಸಗಿದನು || ೭೩ ||

ಅನಿತರೊಳಗೆ ಸಮುದ್ರವಿಜಯಾ | ವನಿಪನಾ ಪ್ರಳಯಾಂತಕನೆ ಕೋ |
ಣನನದಟನಿಂದೇರಿದಂತಾರೋಹಿಸಿದ ಗಜವ ||
ಜನಿತ ವೀರಾವೇಷದಲಿ ನೃಪ | ತನುಜರನು ತೇಲಿಸಿದ ವಸುದೇ |
ವನ ರಥಕ್ಕಿದಿರಾಗಿ ಬಂದುದು ಗಂಧ ಸಿಂಧುರವು || ೭೪ ||

ಥಳಥಳಿಪ ಬಹುರತ್ನಮಯವಹ | ಗುಳವದೇಂ ಕಾಂಚನದ ದಂಡದ |
ತತಿಯೊಳ್ಳೈದುಂ ರತ್ನಮಯ ಗರುಡಧ್ವಜದಿನೆಸೆವ ||
ತೊಳಪ ಪಲ್ಲವ ಸತ್ತಿಗೆಯ ತಣ | ನೆಳಲೊಳೀ ಗಜಕಂದರದೊಳಿ |
ದ್ದಳವಿಗೊಡುವವನಾರು ಬಲ್ಲಡೆ ಸೂತ ಹೇಳೆಂದ || ೭೫ ||

ಪರಬಲಾಂಬುಧಿ ವಡನಾಂಬು | ವರಿ ನೃಪತಿಗಿರಿವಜ್ರ ಸಾರೀ |
ಪುರವರೇಶನುನುತ ಸಮುದ್ರ ವಿಜಯ ಮಹಾರಾಯ ||
ಅರಸಕೇಳೆನೆ ಹರಿಕುಲದೊಳೊಗೆ | ದರಸುಗಳಿಗಲ್ಲದೆ ವಿಷಮ ಸಂ |
ಗರ ಪಟುತೆ ಈ ವಿಜಯಶೌರ್ಯವದಾರಿಗಹುದೆಂದ || ೭೬ ||

ಎನುತ ಚಾಪವನಿರಿಸೆ ವಸುದೇ | ವನು ಕೆಲಕೆ ಸಾರಥಿಯ ಕಂಡೀ |
ಅನುವರದೊಳಿದಿರಾಂತು ಬಿಲ್ಲನು ಬಿಸುಟುವಧಟಿದನು ||
ಎನೆ ಕುಮಾರಕನೆಂದ ಪಿರಿಯ | ಣ್ಣನು ಕಣಾ ನಾನೆಂತು ಪಿಡಿವೆನು |
ಧನುವನೆಂದನು ಒಳಗೊಳಗೆ ಕರಗಿದನು ಮೋಹದಲಿ || ೭೭ ||

ಎಂದೊಡಾ ಸಾರಥಿಯದಲ್ಲದೊ | ಡಿಂದು ಕೊರುವಿದ ವಿವಿಧ ವಿಷಯದ |
ಸಂದ ರಾಜಕುಮಾರಕರನೆದೆಗೆಡಿಪ ವಿಕ್ರಮವು ||
ಸೌಂದರೀ ಜನವಶ್ಯ ಮೂರ್ತಿಯ | ಬಂಧುರತೆ ನಿನಗಲ್ಲದುಳಿದರೊ |
ಳೊಂದಿಹುದೆ ಹರಿವಂಶ ಮಂಡನೆ ನೀನೆಯಹುದೆಂದ || ೭೮ ||

ಅನಿತರೊಳು ಲೇಖಿಸಿದ ಪತ್ರಿಕೆ | ಯನು ಕಣೆಯೊಳೊಂದಿಸೆಯೆ ಬಾಣಾ |
ಸನದಿ ಬರೆತೆಗದೆಚ್ಚನಾ ವಸುದೇವಾ ಭೂಪಾಲ ||
ಮನಸಿಜಾರಿಯ ಶೂಲವೇಂ ಭೋ | ರೆನುತ ಬಂದುದೊ………….. |
…ನಸಿ ಬಂದನು ಕಣಾ ತಾ ನೃಪನೋಲೆ ಧರಿಸಿದನು || ೭೯ ||

ಓದಿಸಿದನೋಲೆಯನು ತನ್ನೆದೆ | ನಾದುದಾದವಿ ಮೋಹರಸದಲಿ |
ಕೋದ ಹೊರಜಯ ಕಾಲನುಗಿದಾಗಜದ ಕಂದರದಿ ||

ಮೇದಿನಿಗೆ ಅವತರಿಸಿ ಅಣ್ಣನ | ಪಾದನೊಂದಪುದೆಂದು ರಥವಿಳಿ |
ದಾದರರದಿ ವಸುದೇವ ಪರಿತಂದೆರಗಿದನು ಪದಕೆ || ೮೦ ||

ಬಿಗಿಬಿಗಿದು ತಕ್ಕೈಸಿದನುರೇವಾಂ | ಮಿಗೆ ಪುಳಕವಾಂಕುರಿಸೆ ನನ್ನಯ |
ಬಗೆಯಲಿನ್ನೆಗೆಮಿರ್ದ ನೋವಿನ ಕೆಸಱುತೊಳೆದುದಲ ||
ಒಗೆದ ಹರುಷಾಮೃತ ರಸದಿ ನೀ | ನಗಲಿಯೀಪರಿಯಿರಬಹುದೆ ಯೆಂ |
ದಗಣಿತ ಪ್ರೇಮದಲಿ ಸಂತಸದಂತವೈದಿದರು || ೮೧ ||

ಅಱಿದು ಬಂದಣ್ಣಂದಿರಿಗೆ ಬಳಿ | ಕೆಱಗಿದನು ವಸುದೇವನೀಹದ |
ನಱಿದು ಹಿರಣ್ಯಲೋಚನನವರೊಡನೆ ಕೂಡಿ ||
ನೆಱೆ ಹರುಷರಸವೇ ಱಿದನುಯಿದ | ನಱಿದು ಚಕ್ರಿ ಕುಮಾರಕರು ಮಿ |
ಕ್ಕರಸುಗಳುಮವರೊಡನೆ ಕೂಡಿದರರಸಕೇಳೆಂದ || ೮೨ ||

ಪುರದೊಳಗೆ ಗುಡಿತೋರಣಗಳು | ಪ್ಪರಿಸಿದವು ಮದುಮಂಗಳಾನಕ |
ವಿರುತಿದೆಸೆಯನು ಚುಂಬಿಸಿತು ಬಳಿಕಾಹಿರಣ್ಯಾಕ್ಷಾ ||
ವರಸಮುದ್ರ ವಿಜಯ ನೃಪಾಲನು | ವೆರಸಿ ವಸುದೇವನು ಸಹಿತ [ಲಾ] |
ಪುರವ ಪೊಕ್ಕರಮನೆಯನೆಯಿದಿದರಂದು ಹರುಷದಲಿ || ೮೩ ||

ರೋಹಿಣಿಗೆ ವಸುದೇವ ವಿಭುಗು | ತ್ಸಾಹದಲಿ ಮದುವೆಯನು ಮಾಡಿಸಿ |
ಬಾಹುಬಲವಲ್ಲಿರಿಸಿಯವರ ಸಮುದ್ರ ವಿಜಯ ನೃಪ ||
ಸ್ನೇಹದಲ್ಲಿ ಹಿರಣ್ಯ ನಯನನು | ಊಹಿಸುವಡರಿದೆನಲು ವಸ್ತು ಸ |
ಮೂಹವನು ನೆರೆದರಸು ಮಕ್ಕಳಿಗಿತ್ತರುಡುಗೊಱೆಯ || ೮೪ ||

ಬಳಿಕಲೆಮ್ಮಯ ಪುರಕೆ ಬಪ್ಪದು | ತಳುವದೆಂದಾ ತಮ್ಮನನು ಆ |
ಪೊಳಲೊಳಿರಿಸಿ ಸಮಸ್ತ ರಾಜಕುಮಾರರನು ಕಳುಹಿ ||
ಬಳವದುತ್ಸಾಹದಲಿ ತನ್ನಯ | ಪೊಳಲನೈದಿ ಸಮುದ್ರ ವಿಜಯನು |
ಇಳೆಯೆಱೆಯನಿರುತಿರ್ದನೆಲೆ ಭೂಪಾಲ ಕೇಳೆಂದ || ೮೫ ||

ಇತ್ತಲಾ ವಸುದೇವ ನೃಪನಾ | ವೃತ್ತ ಕುಚೆಯೊಳು ಮದನ ಕೇಳಿಯೊ |
ಳೊತ್ತರಿಪ ಸುಖವುಣುತಲಿರುತಿರಲೊಂದು ರಾತ್ರಿಯಲಿ ||
ಚಿತ್ತ ವಿಭ್ರಮವೀವ ಸೌಧದ | ತುತ್ತತುದಿ ನೆಲೆಯಲ್ಲಿ ತನ್ನಯ |
ಚಿತ್ತ ವಲ್ಲಭೆವೆರಸು ಸುಖನಿದ್ರೆಯಲಿ ಒರಗಿರಲು || ೮೬ ||

ಜನಪನಿವನಾದೇಶ ಪುರುಷನು | ಮನಸಿಜೋಪಮನೆಂದಱಿದು ಭೋಂ |
ಕನೆ ವಿಯಚ್ಚರಿಯೆತ್ತಿಕೊಂಡಾಗಸ ಪಥವನಡರಿ ||

ಅನುಪಮತನಂಧಕಪುರದ ನಂ | ದನದೊಳಿರಿಸಿ ಖಗಂಗಳಿಪಿ ಲೇ |
ಸೆನುತ ಬಂದಾ ಪವನವೇಗ ವಿಯಚ್ಚರನು ವನಕೆ || ೮೭ ||

ಮಂಗಲೋತ್ಸವದಿಂದ ಪೊಳಲನು | ಸಿಂಗರಿಸಿ ವಸುದೇವನನುಗುಣ |
ತುಂಗನೊಡಗೊಂಡರಮನೆಯ ಪೊಕ್ಕತಿವಿಭವದಿಂದ ||
ಅಂಗಜನ ಸಮಗೊಲಿದು ತನ್ನಯ | ಸಿಂಗರದ ಸುತೆ ಬಾಲಚಂದ್ರೆಯ |
ಸಂಗಳಿಸಿ ಸುಮುಹೂರ್ತದಲಿ ಮಾಡಿದನು ಮದುವೆಯನು || ೮೮ ||

ಇತ್ತಲಾ ರೋಹಿಣಿ ಬಳಿಕ ಯ | ಚ್ಚತ್ತು ನಿಜಪತಿ ಕಾಣದಾ ಕುಲ |
ಮುತ್ತು ಮೂರ್ಛಿಸೆ ಅಱಿದುಬಂದಾ ಜನಕಗೆಚ್ಚಱಿಸೆ ||
ಎತ್ತ ಹೋದನಿದೇನೆನಲು ನೈ | ಮಿತ್ತಕರು ಕಂಡಱಿದು ತಿಳುಹಲು |
ಮತ್ತೆ ಬಹನೆಂಬಾಸೆಯಿಂ ಸುಖದಿದ್ದರವರತ್ತ || ೮೯ ||

ಪಲದಿವಸವವಳೊಡನೆ ರಾಗವು | ತೊಲಗದತಿರತಿ ಲೀಲೆಯಿಂದಿರು |
ತೊಲಿದು ಪೆಂಪಿನರಿಷ್ಟ ಪುರವನು ಪೊಗಲೆ ಬೇಕೆಂದು ||
ಕಳುಹಿಸಿಯೆ ಕೊಳೆ ಪವನವೇಗನು | ತಳುವದುತ್ತಮ ವಸ್ತುವಿತ್ತನು |
ಕಳುಹಿ ಪೋದನು ತತ್ಪುರಕೆ ಭೂಪಾಲ ಕೇಳೆಂದ || ೯೦ ||

ವರಹಿರಣ್ಯಾಕ್ಷಂಗೆ ಹರಿಕುಲ | ದರಸನೆಂದನು ನಾವು [ಶೌರೀ] |
ಪುರಕೆ ಪೋಗಲು ಬೇಹುದೆನೆ ರೋಹಿಣಿಗೆ ಬಳುವಳಿಯ ||
ಪರಿಪರಿಯ ವಸ್ತುಗಳನಳಿಯಂ | ಗಿರದೆ ಕೊಟ್ಟಾಪುರಕೆ ಕಳುಪುತ |
ಲಿರಲು ಬಂದುದು ಕರೆಸೆ ವಸುದೇವನ ಸತಿಯರೆಲ್ಲ || ೯೧ ||

ಕುಲವನಿತೆಯರು ಏಳುನೂರ್ವರು | ಲಲನೆಯರಿಗವರವರ ಸಖಿಯರು |
ಪಲಬರವರವರೂಳಿಗದ ಕಾಂತೆಯರು ಪಲಪಲರು ||
ಅಲರುವಿಲ್ಲನ ಫೌಜಬಹವೊಲು | ಬಳಸೆ ಪತಿಯನು ರಾಗರಸಪೊಂ |
ಪುಳಿವಡೆಯೆ ಅವರವರ ಜನಕರನ್ನೈದೆ ಬೀಳ್ಕೊಟ್ಟು || ೯೨ ||

ಸುರಸತಿಯರನು ತಮ್ಮತನು ಸೌಂ | ದರ್ಯದಲಿ ಗೆಲೆ ಬಳ್ಳಿ ಮಿಂಚಿನ |
ಹರವರಿಯ ಹಸರಿಸುತ ತೊಳಪ ಕಟಾಕ್ಷಮಾಲೆಗಳಿಂ ||
ನೆರೆದು ಬರೆ ಸುವಿಮಾನದಲಿ ವರ | ಪುರುಷನೊಡನೊಲವಿಂದ ಶೌರೀ |
ಪುರಕೆ ಬಿಜಯಂಗೈದನಾ ವಸುದೇವ ಭೂಪಾಲ || ೯೩ ||

ಅಷ್ಟಮಂಗಳದಿಂದೆ ಶೋಭಿಸಿ | ಪಟ್ಟಣವು ಬ್ರಹ್ಮಾಂಡ ಭಾಂಡವ |
ನೊಟ್ಟಯಿಸೆ ತೂರ್ಯಸ್ವನಂ ಸಾಮುದ್ರ ವಿಜಯನೃಪ ||

ನೆಟ್ಟನಿದಿರ್ಗೊಂಡೈದಿ ಬರೆ ಕಂ | ಡಿಟ್ಟಳದಿ ವಸುದೇವನೆಱಗಲು |
ಹೆಟ್ಟುಗೆಯ ದೂರದಿ ಪರಸಿದನು ಭೂಪಾಲ ಕೇಳೆಂದ || ೯೪ ||

ವರ ಗಜೇಂದ್ರಾರೂಢನಾದನು | ಧರಣಿಪತಿಯು ನಿಜಾನುಜರ್ಕಳು |
ನೆರೆದ ರಾಜನ್ಯಕವು ಕರಿಕಂಧರಗಳಡರಿದರು ||
ಅರಸಿಯರು ಸಹವಾಗಸದಲ | ಚ್ಚರಿಯ ರತ್ನ ವಿಮಾನದಲಿ ಅವ |
ತರಿಸಿ ವಸುದೇವನು ಬರಲು ಪುರವೈದಿದನು ನೃಪತಿ || ೯೫ ||

ಹೆಣ್ಣುಗಳ ನೆಱೆಮರುಳು ಮಾಡಿದ | ಅಣ್ಣ ತನ್ನನು ಚಾಳಯಿಸಿದರೆ |
ಅಣ್ಣನಾದೇಶವನು ತಾಂಚಾಳೈಸಿ ಮಿಗೆ ಪೋದ ||
ಅಣ್ಣವಳಿಯದೆ ಬಣ್ಣಗುಂದದೆ | ಹುಣ್ಣಮೆಯ ಶಶಿಯಂತೆ ಚೆಲುಚೆಲು |
ವೆಣ್ಣುಗಳು ಸಹ ಬಂದನೆಂದೀಕ್ಷಿಸಿತು ಪುರಜನವು || ೯೬ ||

ಅತಿವಿಭದಿಂದರಮನೆಯ ಪೊ | ಕ್ಕತುಳ ರಾಗದಿ ಪುಣ್ಯ ವನಿತಾ |
ತತಿಗಳೆದೆ ಶೇಷಾಕ್ಷತೆಯತಳೆದೈದೆ ಸುಖವಿರುತ ||
ಚತುರೆ ರೋಹಿಣಿಗಗ್ರ ಮಹಿಷಿ | ಸ್ಥಿತಿಯನಿತ್ತಿರಲಾಕೆ ಗುಡಿಗಟ್ಟಿಸಿದ |
ನತಿಬಲನು ಬಲಭದ್ರನುದ್ಧತ ವೈರಿಪುರ ರುದ್ರಾ || ೯೭ ||

ವಿವಿಧ ವಿಭವದಿ ಜಾತಕರ್ಮೋ | ತ್ಸವವ ಮಾಡಿಸಿ ಯಾದವ ಪ್ರಭು |
ನಿವಹನಿಷ್ಟಾರ್ಥದಲಿ ಜಗವನು ತೃಪ್ತಿಬಡಿಸಿದರು ||
ಭುವನ ವಿದಿತನತಿ ಪ್ರತಾಪ | ಪ್ರವರನಿರೆ ಹಲಧರನು ಸುಯಶೋ |
ಧವಳನಾದನು ಭಾರತೀ ನವರತ್ನ ಕುಂಡಲನು || ೯೫ ||

|| ಅಂತು ಸಂಧಿ ೧ಲಕ್ಕಂ ಮಂಗಲಂ ಮಹಾ ||

## ವಸುದೇವ ಪರ್ವ (ಸಂಧಿ ೧೯)

**ಸಂಧಿ ೧೯**

ವಿನುತನಾ ವಸುದೇವ ಕಂಸಗೆ | ಧನು ಸುವಿದ್ಯೆಯ ಕಲಿಸಿಚಕ್ರಿಯ |
ತನುಜೆಯನು ಕೊಡಿಸಿದನು ಮಧುರೆಯ ಪೊಕ್ಕನವನೊಡನೆ || ಪಲ್ಲ ||

ಕೇಳಲೇ ಮಾಗಧ ಧರಿತ್ರೀ | ಪಾಲಕನೆ ವಸುದೇವ ಸುಖ ಸಂ |
ಮೇಳದಿರುತಿರೆ ರೋಹಿಣೀ ದೇವಿಯ ಸ್ವಯಂವರದಿ ||

ಕೋಲುಖುರಪುಟಕಗಿದಖಿಲ ಭೂ | ಪಾಲ ತನುಜರು ಬಂದು ತದ್ಭೂ |
ಪಾಲನಲಿ ಬಿಲುವಿದ್ಯೆಯನು ಮಿಗೆ ಕಲಿವುತಿರಲೊಡನೆ || ೧ ||

ಬಂದನೋರ್ವನೆ ವಂಟಿ ಬಿಲ್ಲವ | ನಂದು ವಸುದೇವಂಗೆಱಗಲೇ |
ಬಂದೆಯೆಲ್ಲಿಗೆ ಪೋಪೆಯೆನೆ ಬಿಲುವಿದ್ಯೆಯನು ಕಲಿಯ ||
ಬಂದೆನೀ ವಿದ್ಯೆಯಲಿ ನಿಮ್ಮನೆ | ಒಂದೆ ಕೊರಳಲಿ ಧರೆ ಪೊಗಳಲದ |
ಱಿಂದಲಂಬಿಗ ಕಂಸನೆಂಬೆನು ಭೂಪ ಕೇಳೆಂದ || ೨ ||

ಕಿಸುನೆರೆಯ ಕಣ್ತೋರ ಭುಜಸೂ | ತ್ರಿಸಿದವೊಲು ಚಲುವಾದ ಅವಯವ |
ಮಿಸುನಿವಣ್ಣದ ಮೆಯಿಗವಾದಿಪಕಂಧರವು ಮೆಱೆವ ||
ಪೊಸಬನಿವ ನಂಬಿಗನೆನಿಸನೀ | ಕ್ಷಿಸಲು ರಾಜಕುಮಾರನಹುದೆಂ |
ದೊಸೆದು ಮನದಲಿ ನೆನೆದು ಮನ್ನಿಸಿ ವಿದ್ಯೆಗಳಿಸಿದನು || ೩ ||

ಧನು ವಿವಿಧ ಕಲೆಗಳನು ಕರುಣದಿ | ಜನಪ ಕಲಿಸಲು ಮಿಕ್ಕ ಭೂವರ |
ತನುಜರೇ ಗುರುವೆನಿಸಿ ವಸುದೇವಂಗೆ ಭಟನೆನಿಸಿ ||
ಧನು ಕಲಾವಿದನಾದನಾ ಕಂ | ಸನುಮಿರುತ್ತಿರಲತ್ತವೇದಾ |
ವನಿದರದ ತಟದಲ್ಲಿ ಪಾವನ ಪುರವನಾಳ್ವರಸ || ೪ ||

ಸಿಂಗವೆರಡನು ಸಾಕಿ ತೇರೊಳು | ಸಂಗೊಳಿಸಿದದಱಿಂದೆ ಪೆಸರಲಿ |
ಸಿಂಗರಥನೆನಿಸಿಪ್ಪನಖಿಲ ನೃಪಾಲ ರಥಹಯವು ||
ಸಿಂಗರಥ ಕಿದಿರಾಗಲಮ್ಮವು | ತುಂಗವಿಕ್ರಮದೆಲ್ಲರನು ಸಲೆ |
ಭಂಗಿಸಿರುತಿರೆ ಚಕ್ರವರ್ತಿಯು ಕೇಳ್ದು ಕಡು ಮುಳಿದು || ೫ ||

ಸೊಕ್ಕಿದಾತನವರ್ಗವನು ಮುರಿ | ದಿಕ್ಕುವಡೆ ವಸುದೇವನೋರ್ವನೆ |
ತಕ್ಕನೆಂಬುದ ಮುನ್ನರಿದ ದೆಸೆಯಿಂ ಜರಾಸಂಧ ||
ಚಕ್ರಿ ಶೌರೀಪುರಕೆ ಡಂಗುರ | ವಿಕ್ಕಿಸಿದನಾತನನು ಪಿಡಿತರೆ |
ದೊಕ್ಕನೀವೆನು ಬೇಡಿದಿಳೆಯನು ಪುತ್ರಿಯರನೆಂದು || ೬ ||

ಪಿಡಿಯಿಸಿದನಾ ಕಂಸನಿಂದಾ | ಪೊಡೆವ ಡಂಗುರವನು ಮೊನೆಗೆ ತಾಂ |
ನಡೆವ ಪದದೊಳು ಸಿಂಹಮಾತ್ರದಿ ಭಾವಿಸಿದ ಹಯವ ||
ನಡಗರಿಸಿ ಹೂಡಿದನು ತೇರಿಗೆ | ಕಡುಗಲಿಯು ವಸುದೇವ ದಂಡನು |
ನಡೆವ ಪದದೊಳು ತಮ್ಮನವಿಕ್ರಾಂತನೆಂದಱಿದು || ೭ ||

ಕೂಡಿಕೊಟ್ಟನು ತನ್ನ ಬಲವನು | ಝಾಡಿಸಿದ್ದ ಸಮುದ್ರ ವಿಜಯನು |
ಘಾಡದಲಿ ಪೌದನಪುರದ ಪೊಱವಳಯದಲಿವಿಟ್ಟು ||

ಕೂಡೆ ವಸುದೇವನು ಚರನನಾ | ನಾಡೆಱೆಯನೊತ್ತಿಗೆ ಕಳುಪೆ ತಳು |
ಮಾಡದಾತನು ತಾಳಹಸ್ತನ ಕಂಡು ಕೈಮುಗಿದ || ೮ ||

ಗಂಡಗರ್ವದಲಖಿಳ ಭೂಪರ | ಹಿಂಡನೊಡೆ ಸೋಲಿಸಿದ ವಿಕ್ರಮ |
ಸಾಂಡನೀಬನೆಂಬುದನು ಕೇಳ್ದೆಮ್ಮೊಡೆಯ ವಸುದೇವ ||
ಗಂಡುಗಲಿ ರಿಪುನೃಪ ತಿಮಿರ ಮಾ | ರ್ತಾಂಡಜಯ ಕೋದಂಡಯಾದವ |
ಚಂಡ ಬಲಯುತ ದಂಡ ಬಂದನು ನಿನ್ನ ಮೇಲೆಂದ || ೯ ||

ತೋಳತಿಮಿರವದುಳ್ಳಡೆಮ್ಮೊಳು | ಕಾಳಗವ ಮಾಡಲ್ಲದಿದ್ದರೆ |
ಹೇಳಿದಾ ಕಪ್ಪವನು ತೆತ್ತೀ ತಲೆಯನುಳುಹಿಕೊಳು ||
ಬೇಳುವಡೆಯದಿರೆಂದು ದೂತನು | ಹೇಳೆ ಸಿಂಹರಥನು ಮಸಗಿ ಕಡೆ |
ಗಾಲರುದ್ರನ ತೆಱದಿ ಘರ್ಜಿಸಿ ಚರನೊಳಿಂತೆಂದ || ೧೦ ||

ಎತ್ತಿನಡೆದಾನಹಿತಪುರವನು | ಮುತ್ತಿಕಪ್ಪವ ಕೊಂಬಿನೀಗಳು |
ಎತ್ತಿ ಬಂದರಸುಗಳ ತಲೆಗಳ ಕಪ್ಪವನು ಕೊಂಬೆ ||
ಇತ್ತು ಬದುಕುವನಲ್ಲ ನನ್ನಯ | ಕತ್ತಿಯೆಂಬಾ ಮಾತಿಗಕ್ಕಟ |
ತುತ್ತುಗಳು ನಿಮ್ಮವರು ಹೇಳೆಂದವನನಟ್ಟಿದನು || ೧೧ ||

ಕಳುಹೆ ಬಂದವನಾ ತೆಱನ ಬಿ | ಚ್ಚಳಿಸಿದನು ವಸುದೇವನಿತ್ತಲು |
ಇಳೆಯೆ ರುದ್ರನ ತೆಱದೆ ಕೋಪದಿ ಪುರವ ಹೊರವಂದು ||
ಬಲವೆರಸಿ ತಾನೊಡ್ಡಿ ನಿಲಲೀ | ಇಳೆಯ ನಡುಗಿಸಿ ಸಮರಭೇರಿಯು |
ಮೊಳಗೆಯಾದವ ಬಲವು ಮೊನೆದೋಱಿದುದು ಚೂಣಿಯಲಿ || ೧೨ ||

ನಿಲ್ಲದಾಗಳು ಸಿಂಹರಥನಾ | ಬಿಲ್ಲಪಡೆತಾಗಿದುದು ಬೇಗದಿ |
ಚೆಲ್ಲಿದೊಡೆ ತನ್ನಡ್ಡಣಾಯ್ತುರು ಕಾಳಗವ ಕೊಡಲು ||
ಅಲ್ಲಿ ಸಿಡಿಲುಗಳೆಱಗಿದಂದದಿ | ಬಲ್ಲಿದರ ಹರಿಗೆಗಳು ಮೊಳಗಲು |
ಚೆಲ್ಲವರಿದಿಱಿದಾಡಿದುದು ಯಾದವರ ಪರಿವಾರ || ೧೩ ||

ಬಿಸಿಯ ರಕುತದ ಕಡಲು ಹರಿದುದು | ಹಸಿಯ ತಲೆಯಟ್ಟುಗಳು ತೇಲಿದ |
ವಸಮ ವಿಕ್ರಮರಂದು ಬಱಿದಾಗಲ್ಕೆ ಸಿಂಹರಥ ||
ಮಸಗಿ ಹಯವನು ನೂಕೆ ಅದನಿ | ಟ್ಟೆಸುತ ಯಾದವ ವಾಜಿ ಬಲ ಕಂ |
ಟೆಸದೆ ತಾಗಿತು ಮಿಕ್ಕು ಹೊಕ್ಕುದು ಫೌಜನೊಡೆಗಲಸಿ || ೧೪ ||

ಭರದಗಾಳಿಗೆ ತೆರೆಗಳತ್ತಲು | ತೆರಳಿದಂದದಿ ತಾಳಹಸ್ತನ |
ತುರಗಗಳು ಓಡಿದವು ಬಳಿಕಾ ಗಜಘಟೆಗಳೆಡಗೆ ||

ಹರಿಕುಲಾಗ್ರಣಿಯಾನೆಗಳು ಬಹ | ಭರವ ಕಾಣುತ ಜಾಱಿದೊಡೆ ಸಂ |
ಗರಕೆ ತಾನಿದಿರಾದನಾ ರಥವೇಱಿ ಸಿಂಹರಥ || ೧೫ ||

ಸರಳ ಸೈವಳೆಗರೆದು ಕರಿಗಳ | ನುರುಳೆಯೆಸುತಿರೆ ಹರಿಕುಲಾಂಬರ |
ತರಣಿ ಕಾಣುತ ತನ್ನ ಗರುಡಧ್ವಜ ರಥವ ನೂಂಕೆ ||
ಭರದಿ ಮನದಿಂ ಬೇಗವಿದಿರತಿ | ಪರಿದು ಸಿಂಹಂಗಳಿಗಗಿಯದೀ |
ತುರಗವಾಂತೊಡೆ ತಾಳಹಸ್ತನು ಕಂಡು ಬೆಱಗಾದ || ೧೬ ||

ಸರಳಮಳೆಯನು ಬಳಿಕಲಾ ಸಿಂ | ಹರಥ ಕರೆದನು ಒಂದೇ ಕಣೆಯನು |
ತಿರುವಿನಿಂ ವಸುದೇವಬಿಡೆಬಹ ಸರಳುಗಳಕಡಿದು ||
ಹರಿದ ಕೂರಂಬುಗಳು ಸಿಂಹಗ | ಳೆರಡು ಜೊತ್ತಗೆಗಡಿಯೆ ಹರಿಗಳು |
ಹರಿದವತ್ತಿತ್ತಲು ಬಳಿಕ ಹೊಸರಥವ ಮೇಳಿಸಿದ || ೧೭ ||

ಅನಿತಱೊಳಗಾ ಕಂಸ ವಸುದೇ | ವನ ಪೊಱೆಗೆವಂದರಸ ಬಿನ್ನಹ |
ನಿನಗೆ ಸರಿಸನೆ ಈತನೀ ಬೆಸನೆನಗೆ ಪಾಲಿಸೆನೆ ||
ನಿನಗೆ ಕೊಟ್ಟೆನು ಜಯಿಸೆನಲು ಬಾ | ಳೆನುತ ತನ್ನಯರಥವನೂಕಿದ |
ನನುವರದೊಳಾಂತಳವಿಗೊಟ್ಟನು ತಾಳಹಸ್ತನೊಳು || ೧೮ ||

ಸಿಂಗರವನಿದಿರಾಗಿ ಸಾಯದೆ | ಹಿಂಗೆಲವೊ ಎಲೆಮುನಿದು ಕಂಸನು |
ಕೆಂಗಱೆಯ ಹೊಸಮಸೆಯ ಹೊಗರಂಬಿನಲವನಬಿಲ್ಲ ||
ತುಂಗಹಯಗಳ ಸಾರಥಿಯ ನೆ | ಚ್ಚಂಗದಿಂದಸುವೆಳದು ವಹಿಲದಿ |
ಸಿಂಗರಥವನು ಹಿಡಿದು ತಂದೊಪ್ಪಿಸಿದನೆಱೆಯಂಗೆ || ೧೯ ||

ಮೊಳಗಿದುದು ವಿಜಯಾನಕವು ಬೆಂ | ಬಳಿಯಭಯಘೋಷಣೆಯ ಮಾಡಿಸಿ |
ತಳುವದಾ ಪೌದನಪುರವ ಹೊಕ್ಕಮಳ ಮಣಿರುಚಿಯಿಂ ||
ತೊಳಪ ಜಿನಚೈತ್ಯಾಲಯಂಗಳ | ನಳವಿಗಳಿದತಿ ಭಕ್ತಿಯಲಿ ತಾ |
ನೊಲಿದು ಪೂಜಿಸಿ ಬೀಡನೆತ್ತಿದನತ್ತ ವಸುದೇವ || ೨೦ ||

ಇರದೆ ಕತಿಪಯ ಪಯಣದಿಂ ನಿಜ | ಪುರವನೈದಿ ಸಮುದ್ರ ವಿಜಯನ |
ಚರಣ ಕಮಲಕ್ಕೆಱಗಿಯೊಪ್ಪಿಸೆ ಸಿಂಹರಥನೃಪನ ||
ಅರಸನನುಜನನಂತೆ ಕಂಸನ | ಪಿರಿದು ಮೆಚ್ಚಿ ಬಳಿಕ್ಕಲೀತನ |
ಕರೆದುಕೊಂಡಾ ಚಕ್ರಿಗೊಪ್ಪಿಸೆನುತ್ತ ನೇಮಿಸಿದ || ೨೧ ||

ಜೀಯೆನುತಲಾ ರಾಜಗೃಹಕೆ ವಿ | ಡಾಯದಲಿ ಕತಿಪಯಬಲವು ಸಹ |
ರಾಯದಲ್ಲಣನೆಯಿದಿ ಚಕ್ರಿಯಕಂಡು ವಸುದೇವ ||

ಆಯೆಡೆಯೊಳಾ ಸಿಂಹರಥವನು | ಪಾಯದಲಿ ಒಪ್ಪಿಸಲು ವರ ಚ |
ಕ್ರಾಯುಧನು ಮಿಗೆ ಮೆಚ್ಚಿದನು ಭೂಪಾಲ ಕೇಳೆಂದ || ೨೨ ||

ಅತಿಸೊಬಗೆ ಜೀವಂಜಸೆಯೆನಿಪ | ಸುತೆಯನಿತ್ತಪೆ ಮದುವೆಯಾಗೆನ |
ಲತುಲ ಭುಜಬಲ ಕಂಸನೀತನು ಕಟ್ಟಿತಂದವನು ||
ಸುತೆಯನೀವೊಡೆ ಕೇಳಲೇ ಜನ | ಗತಿಯೆನಮ್ಮಯ ಕೋಲಮಗನತಿ |
ಮೆರನೀತಗೆ ಕೊಡುವುದೆಂದನು ಕೂರ್ತು ವಸುದೇವ || ೨೩ ||

ಎನೆ ಜರಾಸಂಧನನು ವಸುದೇ | ವನ ಗುಣಕೆ ಮೆಚ್ಚಿದನು ಪೆಱನಾ |
ವರ ಪರಾಕ್ರಮ ವೀರವಿತರಣಗಂಡು ಮೆಚ್ಚದವ ||
ಮನುಜನಲ್ಲೆಂದಾಡಿ ಬಳಿಕೀ | ತನ ಕುಲವದೇನಾರ ಮಗನೆನೆ |
ಜನಪ ಚಿತ್ತೈಸೆಂದು ಬಿನ್ನೈಸಿದನು ಕಲಿ ಕಂಸ || ೨೪ ||

ಇಳೆಯೊಳಾ ಕೌಸಂಬಿಯೊಳು ಮಿಂ | ಬುಲಿಗ ಕಪಿಲರಜಾದರೆಯು ಮಿಂ |
ಗುಲಿತಿ ಮಗ ತಾನವರಿಗಂಬಿಗ ಕಂಸನೆಂಬನೆನೆ ||
ಇಳೆಯೆಱೆಯನಿಂತೆಂದನೀ ಕಡು | ಗಲಿತನವು ಮಿಗೆ ಭದ್ರಮೂರ್ತಿಯು |
ಕುಲಜಗಲ್ಲದೆ ನೀಚಗಾಗದು ಕೇಳು ವಸುದೇವ || ೨೫ ||

ಎಂದು ದೂತರ ಕಳುಹಲಾ ಪೊಳ | ಲೊಂದಿಯಂಬಿಗಗೇರಿಯಲಿ ತಿಳಿ |
ದಂದು ಕಪಿಳರ ಜೋದರೆಯರನು ಕಂಡು ಕಂಸಂಗೆ ||
ತಂದೆ ತಾಯ್ಗಳು ನೀವೆ ಗಡ ನೀ | ವಿಂದೆ ಬಪ್ಪುದು ಚಕ್ರವರ್ತಿಯು |
ತಂದು ಕೊಡವೇಳ್ದೆಮ್ಮನಟ್ಟಿದನೆಂದರಾ ಚರರು || ೨೬ ||

ಎನವಲರು ಕಡುಬೆದರಿಯಿದು ಕಂ | ಸನ ದೆಸೆಯಿನಾದೂಳಿಗವು ಜೀ |
ವನಕೆ ಬಂದುದು ತವಗೆನುತ ಕಂಗೆಟ್ಟು ನವಗವನು ||
ತನುಜನಲ್ಲ ಯಮುನೆಯೊಳು ಕಂ | ಚಿನ ಸುಮಂದಸಿನೊಳಗೆ ಬರೆ ಭೋಂ |
ಕನೆ ಪಡೆದು ಕಾಂಸ್ಯೋದರರದಲಿರೆ ಕಂಸವೆಸರಿಟ್ಟು || ೨೭ ||

ನಡಪೆ ಬೆಳದುದ್ದಂಡ ತನದಲಿ | ನಡೆಯೆ ಖಳನನು ನಾವಳುಕಿ ಪೊರ |
ವಡಿಸಿದೆವುಯೆಂದಾ ರಜೋದರಿ ಮಂದಸನು ತೋರಿ ||
ನಡೆಯೆ ನೀವಂಜದಿರಿ ಕಡುಕಡು | ಬಡವರೆಂದೊಡಗೊಂಡು ವರನವ |
ರೊಡೆಯಚಕ್ರಿವೆಲ್ಲವನು ಪೇಳ್ದಿರಿಸಿ ಮಂದರಸನು || ೨೮ ||

ತರಿಸಿ ಅದನೋದಲ್ಕೆ ಕೆಲದಲಿ | ಬರಹವಿರಲೋದಿಸಿಯರಿದನೀ |
ತರುಣ ತನ್ನಯ ತಂಗಿ ಪದ್ಮಾವತಿಯ ಸುತನೆಂದು |

ಸ್ಫುರಿತ ರತ್ನವು ಕೆಸರಿಲಿರೆ ಬ | ಲ್ಲರು ಬಿಸುಡುವರೆಕಾಗೆ ಗೂಡೊಳು |
ಪೊರೆಯೆ ಕೋಗಿಲೆಗುಂಟೆ ನಿಂದೆಗಳೆಂದನಾ ಚಕ್ರಿ || ೧೯ ||

ತಿಳಿದನಾಗಳು ಕಂಸ ತನ್ನಯ | ಕುಲವ ಬಳಿಕಾ ಚಕ್ರಿ ನೀನೆನ |
ಗಳಿಯನೆಂತುಂ ಕುವರಿ ಜೀವಂಜಸೆಗೊಡೆಯ ನೀನೆ |
ನಲವಿನಿಂದಿಂತೆಂದು ಅಳಿಯನ | ಸಲಹಿದವರಿಗೆ ಬೇಳ್ವುದನು ಕೊ |
ಟ್ಟಳಿಯಗಾತ್ಮಜೆಯನು ಸುಲಗ್ನದಿ ಮದುವೆ ಮಾಡಿದನು || ೨೦ ||

ಅಳಿಯಗಗ್ಗಳ ವಸ್ತುವಾಹನ | ಗಳನು ಕೊಟ್ಟನು ನಿನ್ನ ಮೆಚ್ಚಿದ |
ಇಳೆಯ ಕೊಡುವೆನು ಬೇಡೆನಲು ಮಂದಾಕಿನಿಯೊಳೆನ್ನ ||
ಇಳಿಯ ಬಿಟ್ಟಾ ತಂದೆಯಾಳುವ | ಇಳೆಯ ಬೆಸಸೆನೆ ಕಂಸನೆದೆಯೊಳು |
ಬೆಳೆವ ರೌದ್ರವ ಕಂಡು ತಾನಿಂತೆಂದ ಮನದೊಳಗೆ || ೨೧ ||

ಕೊಡದಿಹನೆ ಆ ನೆಲನನೆನ್ನಯ | ನುಡಿಗೆ ಭಂಗವು ಕೊಟ್ಟೆನಾದೊಡೆ |
ಕೆಡಿಸದಿರನಿವ ತಂದೆಯಾಗಿರ್ದುಗ್ರಸೇನನನು ||
ಕಡಲಲುದಯಿಸಿದಗ್ನಿ ಕಡಲನು | ಕುಡಿವುದಲ್ಲದೆ ಕೆಡಿಸುವುದೆ ಮಗ |
ಹಡದ ತಂದೆಯನೆಂತು ಮುಳಿದೇಗೈವೆ ತಾನೆಂದ || ೨೨ ||

ಕೊಟ್ಟನಾದೇಶವನು ಕಂಸನು | ತುಷ್ಟನಾದನು ತಂದೆಗೀತಗೆ |
ಕಷ್ಟವೇತಜೆನಾದುದೆಂದೊಸೆದವಧಿ ಬೋಧಕರ ||
ನೆಟ್ಟನಾ ಮುನಿಹಂಸರಡಿಗಳ | ಲಿಟ್ಟು ನೊಸಲನು ಚಕ್ರವರ್ತಿಯು |
ಕೊಟ್ಟ... ದೇವನುಂ ಬೆಸಗೊಂಡಾರಾತೆಜನ || ೨೩ ||

ವರಹಿತಾಶ್ರಿಮ ಮುನಿಗಳವಧಿಯ | ನಿರದೆ ತಿಳಿದೆಂದರು ಮಹೀಪತಿ |
ಧರೆಯಲೊಪ್ಪುವ ಕಾಶಿಯಲಿ ತಾಪಸ ವಶಿಷ್ಠಾಖ್ಯ ||
ಭರದಿ ಪಂಚಾಗ್ನಿಯ ನಡುವೆ ತಪ | ವಿರುತಿರಲು ವರವೀರಭದ್ರರು |
ಪರಮಗುಣಭದ್ರರುಯೆನಿಪ ಜಿನಮುನಿಗಳೊಂದು ದಿನ || ೨೪ ||

ಬರುತ ಕಂಡಜ್ಞಾನ ತಪವಿದ | ರುದಿದುರಿತವನು ಸುಡಲರಿಯದೆನೆ |
ಪರಸುವನು ಪಿಡಿದೆತ್ತಿ ಪರಿತಂದಾ ವಶಿಷ್ಟಕನು ||
ಉರಿಯನುಗುಳುತಲೆನ್ನತಪದ | ಚ್ಚರಿಯ ತಪವಜ್ಞಾನ ತಪವೆಂ |
ದಿರಿ ಅದನು ನನಗೀಗ ತೋರಿಪುದಂದು ಕಡುಕೈದ || ೨೫ ||

ಎನಲವರು ಆ ತೆರನ ತೋರುವೆ | ವೆನುತ ಹಳ್ಳಿಯ ಹಾಳಲೊಳು ಬೇ |
ವನಿತು ಜೀವವ ತೋರೆಕಂಡು ವಶಿಷ್ಟನಘಕಂಜಿ ||

ಮನವೊಲಿದು ಕೊಡಲಿಯನು ಬಿಸುಟಾ | ಮುನಿವರರ ಕೈಯಲಿ ಸುದೀಕ್ಷೆಯ |
ನನುನಯದೆ ತಳೆದೆಸಗಿದನು ಭೂನಾಥ ಕೇಳೆಂದ || ೩೬ ||

ಪರಮತಪದಿಂದುದಯ ಗಿರಿಯೊಳ | ಗಿರೆ ತಪಸ್ಸಾಮರ್ಥ್ಯದಿಂದಾ |
ಗಿರಿಯ ವನದೇವತೆಗಳಿಂ ಬೆಸನೆಂದು ಬಂದೊಲಿಯೆ ||
ಧರಿಸಿ ಆ ದೇವತೆಗಳನು ಬಳಿ | ಕಿರದೆ ಮಧುರೆಯ ವಿಪಿನದೊಳಗೆ |
ಚ್ಚರಿಯೆನಿಪ ಮಾಸೋಪವಾಸದಿನಿರಿರಲೊಡನೆ || ೩೭ ||

ಅಱಿದು ಬಂದಾ ಮುನಿಯನರ್ಚಿಸಿ | ಯೆಱಗಿ ಬಳಿಕಾ ಉಗ್ರಸೇನನು |
ತುಱುಗಿದಾ ಭವ್ಯರ್ಗೆ ಪೇಳ್ದನು ಪಾರಣೆಯ ದಿವಸ ||
ಪೆಱರದಾರುಂ ನಿಲಿಸದಿರಿ ಸಿರಿ | ನೆಱೆಯಲಾನೇ ನಿಲಿಪೆನೆಂದಡಿ |
ಗೆಱಗಿ ಹೋದನು ತನ್ನಹೊಳಲಿಗೆ ಭೂಪಕೇಳೆಂದ || ೩೮ ||

ಬಳಿಕವರು ಪಾರಣೆಯದಿನವಾ | ಪೊಳಲಿಗಿರೆ ಭಾವರಿಯನಿಕ್ಕಲು
ಬಳದ ಮದಕರಿ ಸೊಕ್ಕಿ ಕಂಭವ ಮುಱಿದು ಹರಿದಾಡೆ ||
ಬಳಸಿದಾ ಕೋಳಾಹಲದಳಾ | ಇಳೆಯೆಱಿಯನಾ ಮುನಿಪರನು ತಾ |
ನಿಲಿಸ ಮರೆದೆನಲಾಭದಿಂದಾ ಮುನಿಬನಕೆ ಹೋದ || ೩೯ ||

ತಿಂಗಳುಪವಾಸವಾಚರಿಸಿ ಪುರ | ಕಂಗಯಿಸಿ ಬರೆ ಮತ್ತೆ ಚರಿಗೆಗೆ |
ಸಂಗೊಳಿಸತಾನ್ನಪನ ಸದನವು ಬೆಂದುದದರಿಂದ ||
ಹಿಂಗಿತಿವರಿಗೆ ಚರಿಗೆ ಮತ್ತೆ ಜಿ | ತಾಂಗಜರು ಬನವೈದಿ ಮತ್ತಂ |
ತಿಂಗಳನಶನವಿರ್ದು ಚರಿಗೆಗೆ ಬಂದನಾ ಮುನಿಪ || ೪೦ ||

ಅಂದು ಪೆಱನವನೀಶನೋರ್ವನು | ಬಂದೊಡಾವಿಭುವಿದಿರುಗೊಂಬಾ |
ದಂದುಗದಿ ಈ ಮುನಿಪರನು ನಿಲಿಸಲು ಮರೆಯೆ ಯತಿಪ ||
ಪಿಂದೆ ಮಗುಳುತ ಪಸಿವುನಿಚ್ಚಿಂ | ಬೆಂದು ಬಿಸಿನೊಳು ಕಡುಬಳಲಿಕಣು |
ನಂದಿನಾಲ್ವಟ್ಟೆಯಲಿ ಕೆವರನು ನೆಮ್ಮಿಯಿರಲೊಡನೆ || ೪೧ ||

ನೆರೆದು ನೋಳ್ಪವರೆಲ್ಲರುಂ ಈ | ಪರಮಗುರುಗಳನಾರು ನಿಲಿಸದ |
ಪರಿಯಲೀಪುರಜನಕೆ ಸಾರಿದ ತಾಂ ನಿಲಿಸಲೊಲ್ಲ ||
ಅರಸನಿವರೊಳಗೇನು ವೈರವೋ | ಕರ ಬಳಲಿದಪರಕಟಕಟ ಯೆಂ |
ಬರನುಡಿಯು ಕಿವಿಸೋಂಕಲಾ ಮುನಿಗಾದುದಕ್ಷಮೆಯು || ೪೨ ||

ಮುನಿಗೆ ಕೋಪವು ಪುಟ್ಟಿ ಮುನ್ನಿನ | ಬನದ ದೇವತೆಗಳು ಮುನಿಪ ಬೆಸ |
ನನು ಕೊಡುವುದೆಂದೆರೆಯಲುತ್ತರ ಜನ್ಮಕೆಮಗೊದಗಿ ||

ತನುವಿನಿಂದಸು ಬಿಡುವ ವೇಳ್ಯೆ | ದೆನೆ ಅದೃಶ್ಯದಿ ಪೋದವವು ಭೋಂ |
ಕನೆ ಮುಡುಪಿ ತನೃಪನ ಮಡದಿಯ ಗರ್ಭದೊಳು ಪೊರೆದ || ೪೩ ||

ಬಸುರಲಿಂತಾ ಜೀವನಿರಲಾ | ಶಶಿಮುಖಿಗೆ ಕಡುಕೆಟ್ಟ ಬಯಕೆಯ |
ಲಸುವ ಬಿಡುವಂತ್ಯೆದೆ ಬಡವಾಗಿರಲವಳ ಪತಿಯು ||
ಉಸುರು ನಿಮಗೇಂಬಯಕೆಯೆನಲದ | ನುಸುರದಿರೆ ನೀಂ ನಂಜದಳುಕದೆ |
ಕುಸಿದ ತಲೆಯನು ನೆಗೆದು ನಲ್ಲಳೆ ಹೇಳು ಹೇಳೆಂದ || ೪೪ ||

ಎಂದೊಡೆಲ್ಲರ ತೆಱಪು ಮಾಡಿಸಿ | ಎಂದಳೇನೆಂದುಸರ ಬಹುದೀ |
ಬೆಂದ ಬಯಕೆಯ ನಿನ್ನೆದೆಯನಲಗಿಂದಿಱಿಯೆ ಹರಿದು ||
ಬಂದನೆತ್ತರನೀಂಟ ಬೇಕೆಂ | ಬೊಂದು ಬಯಕೆಯು ಪುಟ್ಟಿತೆನಗಿದ |
ರಿಂದೆ ಸಾವೆನೆ ತಳವೆನೆಂದಳು ಭೂವರನ ರಾಣಿ || ೪೫ ||

ನನಗೆನೀನೆಮ್ಮುಳಿದವಳೆ ಜೀ | ವನಕೆ ಜೀವನವಾದವಳೆ ಮು |
ನ್ನಿನ ಭವದ ಹಗೆ ನಿನ್ನ ಗರ್ಭದೊಳೊಗೆದು ತಾನೆನಗೆ ||
ಮುನಿದ ದೆಸೆಯಿಂದೀ ಬಯಕೆಯಿದು | ನಿನಗೆ ಪುಟ್ಟಿತು ನಿನ್ನ ಬಯಕೆಯ |
ನನುನಯದಿ ತೀರ್ಚುವೆನು ನಲ್ಲಳೆ ನೋಯಬೇಡೆಂದ || ೪೬ ||

ಎಂದು ಮಂತ್ರಿಶಿರೋಮಣಿಯನೊಲ | ವಿಂದೆ ಕರೆದೀ ತೆಱನ ಪೇಳಲು |
ಮಂದರೋಪಮ ವೀರನೀವೆಂದಂತೆ ಪಗೆಪೊರೆದ ||
ಎಂದು ತನೃಪನಂತೆ ಲೆಪ್ಪದ | ಲೊಂದು ರೂಹನು ಮಾಡಿಸಿಯೆ ಮ |
ತ್ತೊಂದು ದಿನವಾನೃಪನ ಸಜ್ಜೆಯ ಮನೆಯಲಿರಿಸಿದನು || ೪೭ ||

ಬಂದು ತನ್ನೊಡತಿಯ ಬಳಿಗೆ ತಾ | ಯೆಂದೆ ಕೈಗಳ ಮುಗಿದು ನಿಮಗಾ |
ನಿಂದು ಬಯಕೆಯ ಸಲಿಸುವೆನು ಚಿತ್ತೈಸೆನುತ ಕರೆದು ||
ತಂದು ಯೆಱೆಯನ ರೂಪಗಾಣ್ಬಾ | ಗೆಂದನೋಪನ ನೋಡುತಿರೆವೊಡೆ |
ಬಂದಪುದೆಕ್ಕೈಯೆನುತ ವಸನವ ಮುಸುಕಿದನು ಮುಸುಡ || ೪೮ ||

ಸುರಗಿಯಿಂದಾ ಲೆಪ್ಪದರಸನ | ಉರವನಿಱಿದೀಂಟಿದಳು ಮಿಗೆ ನೆ |
ತ್ತರನು ಬಳಿಕಾ ಮೂರ್ತಿಮೂರ್ಛಿಸಿದಂತೆ ಬೆಂಬೀಳೆ ||
ಅರಸಿ ಮೋರೆಯೊಯೆಂದು ಮೂರ್ಛೆಯ | ಲೊರಗೆ ಲೆಪ್ಪದ ರೂಪನತ್ತೋ |
ಸರಸಿ ಅರಸನ ಕರೆಸಿ ಈಕೆಯ ಮೂರ್ಛೆತಿಳುಹಿದರು || ೪೯ ||

ಬದುಕಿದನು ನಮ್ಮೊಡೆಯ ನೀವೇಂ | ಬೆದರದಿರಿಯೆಂದಾ ನೃಪಾಲಕ |
ನೆದೆಗೆ ಲೇಪನವನೊಟ್ಟೆ ಪದ್ಮಾವತಿಯಸಂತೈಸಿ ||

ಪದಳುದಿಂದಿರಲೊಡನೆ ನವಮಾ | ಸದ ನೆಲೆಗೆ ಶಿಶುವುದಿಸಿ ತಂದೆಯು |
ವಿದಿತ ಮಂತ್ರಿಯು ಬಂದು ನೋಡುವ ಪದದೊಳಾ ಕುವರ || ೫೦ ||

ಅರಸಕೇಳ್ಳೈ ತಂದೆಯನು ಚೆ | ಚ್ಚರಮೆ ಕಾಣುತ ಕೋಪದಿಂ ಕ |
ಣ್ಣುರಿಯನುಗುಳುವ ತೆರ ಕಿಸು ಸಂಜಯನು ನಿಂದಿಸಲು ||
ಅರಸನಱಿದನು ಶತ್ರುವಿಂತೀ | ಪರಿಯುದಯಿಸಿದನೆಂಬುದು ಬಳಿ |
ಕಿರದೆ ಮಂತ್ರಿಯು ಕಾಂಸ್ಯ ಮಂಜೂಶೆಯನು ತರಿಸಿದನು || ೫೧ ||

ಜತನದಲಿ ಮಂದಸಿನೊಳರಿಸಿದ | ಪತಿಸುತನ ಕೆಲವಲಗೆಯಲಿ ಭೂ |
ನುತನ ತಾಯ್ತಂದಿರ ಪೆಸರನು ಬರೆಸಿ ಯಮುನೆಯಲಿ ||
ಮತಿಯುತನು ಬಿಡೆ ಬಂದ ಮಂದಸ | ನತಿ ಚಮತ್ಕಾರದಲಿ ಪಿಡಿದನು |
ಕ್ಷಿತಿಪ ಕೇಳಾ ವಾಗುಲಿಕನೆಂದೆಲ್ಲವನು ತಿಳುಪೆ || ೫೨ ||

ತಿಳಿದರಾ ವಸುದೇವ ಚಕ್ರಿಯು | ಬೆಳೆದ ಕಂಸನ ತೆಱನ ಮುನಿಪಗೆ |
ತುಳಿಲುಗೈದ್ಯೆತಂದು ನಿಜಮಂದಿರದೊಳಿರೆಕಂಸ ||
ಘಳಿಲನಾ ಮಧುರೆಗೆ ಪಯಣವನು | ತಿಳಿದು ವಸುದೇವನ ಬಳಿಗೆ ಬಂ |
ದಿಳೆಯೆರೆಯಗೆಱಗಿದ ಬಳಿಕಲಿಂತೆಂದನಾ ಭೂಪ || ೫೩ ||

ದೇವ ಬಿನ್ನಪ ನಿಮ್ಮಡಿಗಳ ಕೃ | ಪಾವಲೋಕನದಿಂದಮೆನಗೆಸ |
ವೀವಿಭುತ್ವ ಮದಾದುದೆಮ್ಮ ದೇಶ ಕೊಡಗೊಂಡು ||
ದೇವ ಬಿಜಯಂಗೈಯ ಬೇಕೆನ | ಲಾವು ಬಂದಪೆವೆನಲು ಸಂಭ್ರಮ |
ದೀವಿ ಪಯಣೋದ್ಯೋಗದಲಿ ಚಕ್ರಿಯ ಬಳಿಗೆ ಪೋದ || ೫೪ ||

ಹೋಗಿ ಬಿನ್ನಹ ಮಾಡಿ ಚಕ್ರಿಯು | ಮಾಗ ವಸುದೇವನು ಬೆರಸಿ ನೀಂ |
ಪೊಗಿ ಸುಖದಿರವೇಳ್ದು ನೇಮಿಸಿ ಕಳುಹಿಸಿಕೊಂಡು ||
ಪೋಗಿ ಮಧುರಾಪುರದಹೊರಗಿಂ | ಬಾಗಿ ಸೇನಾಪರಿವೃತನು ನಿಂ |
ದಾಗಳಟ್ಟಿದ ದೂತರನು ಕಲಿಕಂಸ ಭೂಪಾಲ || ೫೫ ||

ಉಗ್ರಸೇನನ ಕಂಡು ದೂತರು | ಭಾರ್ಗವನ ಸಮ ಕಂಸಭೂಪನ |
ನಾಗ್ರಹದಿ ತಾಂ ಬಾಳನಾಗಿರೆ ನದಿಯೊಳಗೆ ಬಿಸುಟ ||
ಅಗ್ಗಳದ ಪಾಪದ ಫಲದ ಸಾ | ಮಗ್ರಿ ನಿನಗಿಂದುದಯವಾದುದು |
ಭೋರ್ಗನೋಡೊಂದೆಡೆಗೆ ಬಲ್ಲದೊಡೆಮ್ಮೊಡೆಯನುಳುಹ || ೫೬ ||

ಎಂದು ಪೇಳುವ ಮುನ್ನ ಮುಳಿಸನು | ತಂದು ಗಜಹಯರಥ ಪದಾವತಿಯ |
ನೊಂದುಗೂಡಿಯೆ ಪುರವ ಪೊರವಟ್ಟೋಡಿ ನಿಲಲೊಡನೆ ||

ತಂದೆಯನು ಕಾಣುತಲೆ ಮಿಗೆ ಭುಗಿ | ಲೆಂದು ದೋಷಾವೇಶ ಕಂಸನ |
ನೊಂದೆ ನಾಗರ ಕಂಡ ಗರುಡನ ತೆಱದಲೆಱಗಿದನು || ೫೭ ||

ಸವರಿ ಹೊಕ್ಕನು ಕಡುಗದಲಿ ಮು | ತ್ತುವ ಬಲವನಿದಿರಾದ ತಂದೆಯ |
ತವಕದಲಿ ಕಟ್ಟಿದನು ಹರಿಕುಲ ಮಣಿಯು ಮುಂದಿಟ್ಟು ||
ಅವತರಿಸಿದನು ತತ್ಪುರಕೆ ಬಳಿ | ಕವನು ಪದ್ಮಾವತಿಯನಾಕೆಯ |
ಧವನೆನಿಸಿದಾ ಉಗ್ರಸೇನನಗೀರ್ವರನು ತಂದು || ೫೮ ||

ಪುರದ ಗೋಪುರದೊಳಗೆ ಅಸಿ ಪಂ | ಜರದೊಳಿಟ್ಟನು ಮೂಲಬಲವನು |
ಪಿರಿಯರನು ಮನ್ನಿಸಿ ಸುಖದಿ ರಾಜ್ಯವನು ಪಾಲಿಸುತ ||
ಎರೆದವರಿಗೆ ನೃಪಾಲ ರೂಪಿನ | ಸುರಕುಜವು ಮುಳಿದಹಿತನೃಪರಿಗೆ |
ಉರಿಯನುಗುಳುತ ಬಂದ ಜವನೆನಿಸಿರ್ದನಾ ಕಂಸ || ೫೯ ||

ಬಸುಱ ಬಂದಾ ಕಂದನಿವನೆ | ನ್ನಸುವ ಸೆಳೆವಾವೈರಿಯಿವನೆಂ |
ದೊಸೆದು ಮುಳಿದಾಡುವರ ನುಡಿಯಂತಿರಲಿ ಮೆಚ್ಚೆನದ ||
ಬಸುರ ಬಂದನೆ ತಾಯ್ಗೆ ತಂದೆಗೆ | ಮಸಗಿಯಸಿ ಪಂಜರದಲಿಕ್ಕನೆ |
ಶಿಶುವ ಹರಿದೀಡಾಡರೇ ಅವರರಸ ಕೇಳೆಂದ || ೬೦ ||

ಅರಸುತನ ತನಗಾದುದಕೆ ದು | ಷ್ಟರನು ಈಕ್ಷಿಸಿ ಸಜ್ಜನರುಗಳ |
ಪರಿದು ರಕ್ಷಿಸಿ ಬಂದು ಜನಕಾನಂದವನು ಮಾಡಿ ||
ಗುರುಹಿರಯರನು ಭಯ ಭಕುತಿಯಿಂ | ದೆರಗಿ ಪೂಜಿಸಿ ಮೂರು ವರ್ಗವ |
ನರಪಿ ಬಾಳದೆ ಮರುಳು ಮಾಣಿಕಗಂಡ ಪೋಲಿಹುದೆ || ೬೧ ||

ವರಶತೇಂದ್ರನ ಮಸ್ಯ ಜಿನಪತಿ | ಚರಣ ಸರಸೀ ಜಾತಮದಮಧು |
ಕರಲಸಿತ ಕವಿಸಾಳ್ವ ವಿರಚಿತ ಮೃದುಲಲಿತವಾದ ||
ಪರಮ ನೇಮೀಶ್ವರನ ಪಾವನ | ಚರಿತೆಯೊಳು ಮೂರನೆಯದೆನಿಸಿಯೆ |
ದೊರೆವಡೆದುದವನೀ ವಿಧಿತ ವಸುದೇವ ಪರ್ವವಿದು || ೬೨ ||

|| ವಸುದೇವ ಪರ್ವಕ್ಕಂ ಅಂತು ಸಂಧಿ ೧೯ ಕ್ಕಂ ಮಂಗಳಮಹಾ ||

**ಸಂಧಿ ೧೦**

ಕೆಣಕಿ ಜೀವಂಜಸೆಯ ದೆಸೆಯಿಂ | ಪ್ರಣತರತಿ ಮುಕ್ತಕರ ಕೈಯಲಿ |
ಅಣುಗರುರು ಭವ ವಱಿದರಾ ದೇವಕಿಯು ವಸುದೇವ || ಪದ್ಯ ||

ಕೇಳೆಲೇ ಶ್ರೇಣಿಕ ಧರಿತ್ರೀ | ಪಾಲ ಮಲಯಾವತಿ ವಿಷಯದೊಳು |
ಮೇಳಿಸಿಹುದು ದಶಾರ್ಣವವು ಪುರದೇವಸೇನಂಗೆ |
ಆ ಲಲಿತ ಧನದೇವಿ ಸತಿಗುಣ | ಲೋಲನತಿ ಮುಕ್ತಕನು ತನುಜನು |
ಬಾಲೆ ದೇವಕಿ ಪುತ್ರಿಯಿರಲತಿ ಮುಕ್ತಕ ಕುಮಾರ || ೧ ||

ಪರಮ ವೈರಾಗ್ಯದಲಿ ದೀಕ್ಷಾ | ವರರಮೆಯನಪ್ಪಿದನು ಇತ್ತಲು
ಹರಿಣಲೋಚನೆ ದೇವಕಿಯು ಸುಖದಿರುತಿರಲು ಕಂಸ ||
ಅರಿದನಾ ದೇವಕಿಯು ತನ್ನಯ | ಕಿರಿಯ ತಂದೆಯ ಕುವರಿಯೆಂಬುವ |
ವರನು ವಸುದೇವಗೆಯೆನುತ ಬಳಿಯಟ್ಟಿ ಕರಸಿದನು || ೨ ||

ಕರಸಿ ಹೆಂಗಳ ಮಾಣಿಕವನಿದು | ಗುರು ಪದಾಂಬುಜ ಪೂಜೆಯೆಂದತಿ |
ಹರುಷದಲಿ ವಸುದೇವ ನೃಪತಿಗೆ ತಾಂ ಸುಲಗ್ನದಲಿ ||
ಪರಿಣಯವವನು ಉತ್ಸವದಿ ಬಿ | ತ್ತರಿಸಿದನು ಮದುವೆಗೆ ಮೊದಲೆ ತಾಂ |
ಕರೆಸಿದನು ಬಲಭದ್ರನನು ಸುಖದಲಿ ಮಧುರೆಯೊಳಗೆ || ೩ ||

ಪರಮಭಕ್ತಿ ಪ್ರೀತಿಯಲಿ ಬೇ | ಱರಮನೆಯ ಮಾಡಿಸಿದ ನೀವೇ |
ಗುರುವು ತಾನೇ ಶಿಷ್ಯನೆಂದಾ ಕಂಸಭೂಪಾಲ ||
ಇರಿಸಿ ಕೊಂಡಿರೆ ದೇವಕಿಯು ಹಲ | ಧರನು ಸಹ ವಸುದೇವ ಭೂಪತಿ |
ಹರುಷದಿಂದಿರುತಿರಲೊಡನೆ ಭೂಪಾಲ ಕೇಳೆಂದ || ೪ ||

ದೇಶದೊಳಗೆ ವಿಹಾರಿಸುತ ಗುಣ | ರಾಶಿ ಅವಧಿಜ್ಞಾನ ನುತವಾ |
ರಾಶಿ ಭವ್ಯರ ಪುಣ್ಯ ಪುಂಜವಿಳಾಸಿ ಅಫಲತೆಗೆ ||
ಓಸರಿಸ ದುಚ್ಚೇದಿಸುವ ಸಖಿ | ಳಾಸಿತಿಂಗಳಿಗೊಂದುಣಿಸಿನುಪ |
ವಾಸಿ ಅತಿಮುಕ್ತಕ ಮುನೀಶ್ವರರಂದು ಭಾವರಿಗೆ || ೫ ||

ಬರಲು ಕಾಣುತ ದೇವಕಿಯು ನಿ | ರ್ಭರ ಸುಭಕ್ತಿಯಲಣ್ಣನಾದಾ |
ಪರಮ ಗುರುಗಳನಿದಿರಿಗೊಂಡುವಿಧಾನಪೂರ್ವಕದಿ ||

ಚರಿಗೆ ಮಾಡಿಸಿ ತುಂಗ ಪೀಠದೊ | ಳಿರಿಸಿ ಚರಣದ್ವಿತಯವನು ನಿಜ |
ಕರ ಕಮಲದಿಂದೊತ್ತುತಿರೆ ಜೀವಂಜಸೆಯು ಬಂದು || ೬ ||

ಭಾವ ಬಿಜಯಂಗೈದಿರೈ | ದೇವಕಿಯು ಮೈನೆರೆದಳನುಜೆಗೆ |
ನೀವುವುಡಗೊರೆದಂದುದೀ ಬತ್ತಲೆಯೆ ಇದುನುಡಲಿ ||
ಈವನಿತೆಯೆಂದು ಟೆ ನಗುತ ಮ | ತ್ತಾ ವನಿತೆಯಾ ರಕ್ತವಸ್ತ್ರದ |
ನಾವಿರಕ್ತರ ಮೊಗಕೆ ತೋಟಿಸಿ ರೋಡಿಸಿದಳಾಕೆ || ೭ ||

ಮುನಿಗಳೆಂದಟಿಯದೆ ಜರಾಸಂ | ಧನ ಕುಮಾರಿತಿ ನವಗೆ ಸೇನಾ |
ದುನಿಯೆನಿಪ ದೆಸೆಯಿಂದರೋಡಾಡುವುದು ಗುಣವಲ್ಲ ||
ಎನುತಲಾಮುನಿ ಅಲ್ಲಿರದೆ ಪೋ | ಪನಿತಟೊಳು ತಾನಡ್ಡನಿಂದವ |
ರನುಜೆ ದೇವಕಿನಾಣ್ಚೆ ಓಡುವ ಪರಿಯಲಾಡಿದಳು || ೮ ||

ಅವರ ವಾಚಾ ಸಮಿತಿಗವಳಾ | ಡುವ ನುಡಿಯೆ ಮಿತ್ತಾದುದೆನೆ ಕಾ |
ಡುವೆಯ ನಿನ್ನುದ್ದಂಡತನುವನು ತೋಟಿದವುನಮಗೆ ||
ಭುವನದೊಳಗುದ್ದಂಡನೆನಿಸುವ | ಕುವರನನು ದೇವಕಿ ಪಡೆವಳಾ |
ಕುವರನುದ್ದಂಡಿಕೆಯ ನೀ ನೋಡೆಂದನಾ ಮುನಿಪ || ೯ ||

ಎನಲು ನಿಮ್ಮಯ ತಂಗಿ ಪಡೆವಾ | ತನಯನುದ್ದಂಡಿಕೆಯದೇನದ |
ನನಗೆ ಹೇಳದೆ ಹೋಹಿರಾದರೆ ಹೋಗಗುಡೆನೆಂದು ||
ಮುನಿಸ ಬೆಳಯಿಸಿ ಕೀಟಿ ಕೇಳುವ | ವನಿತೆಗವರಾಡಿದರು ನಿನ್ನೋ |
ಪನನು ನಿನ್ನಯ್ಯನನು ಕೊಲುವುದ್ದಂಡನವನೆಂದು || ೧೦ ||

ನುಡಿದ ಮುನಿಪನ ನುಡಿಯೆ ಕಿವಿಗದು | ಸಿಡಿಲೆಱಗಿದಂತಾಗೆ ಮನದೊಳು |
ಕಡು ಬೆದಟಿ ಸಿಗ್ಗಾಗಿ ಬಳಿಕಾ ರಕ್ತವಸ್ತ್ರವನು ||
ಕೆಡಪಿ ಪೊಡವಿಯೊಳೊಡನೆ ಕೇ | ಸಡಿಯಲೊರಸಲು ನಾಡುನಿಯೆ ಕೊ |
ಳ್ಳೊಡೆಯನಹನೀ ಪೊಡವಿಗಾ ದೇವಕೆಯ ಸುತನೆಂದ || ೧೧ ||

ಎಂದು ಮುನಿಪತಿ ಪೋದನತ್ತಲು | ಬಂದುದಾಗಲೇ ಶೋಕ ರಸವೆಂ |
ಬಂದದಲಿ ಕಣ್ನೀರ ಪೊನಲನು ಸುರಿದುದುಗುಡದಲಿ ||
ಬಂದು ಸಜ್ಜೆಯಲೊಱಗಿದಳು ಕಡು | ನೊಂದಳಳಲಿದಳೊಳಗೊಳಗೆ ಮಿಗೆ |
ಬೆಂದಳುಸ್ಸೆಂದಳು ಹೊರಳಿದಳು ಕಂಸನರ್ಧಾಂಗಿ || ೧೨ ||

ಶಶಿವದನೆ ಮೈನೆರೆವುದೇತಕೆ | ಹಸಿದ ಮುನಿಪತಿ ಬರಲದೇತಕೆ |
ಸಸಿನಿರದೆ ನಾನಾಮಹಾವ್ರತಿಗಳ ಕೆಣಕಲೇಕೆ ||

ಬಸುರಿ ಕೆಚ್ಚನು ಬೆಳೆಯಿಸುವನುಡಿ | ಯಿಸುರಲೇಕವರೆಂದು ಜೀವಂ |
ಜಸೆಯಿದೆನ್ನಯ ಪೂರ್ವದುಷ್ಕೃತವೆಂದು ಹೊರಳಿದಳು || ೧೩ ||

ಬಂದನಾ ಸಮಯದಲಿ ಕಂಸನು | ಸೌಂದರ್ಯ ಮೊಗ ಚಂದಿರನ ಮೇ |
ಲೊಂದು ಮುಗಿಲಾಚ್ಛಾದಿಸಿದ ತೆಱನಾಗಿ ಕಳೆಗುಂದಿ ||
ಕಂದಿರಲು ಕಾಣುತವೆ ಮನದಲಿ | ನೊಂದು ಮಂಚವ ನೊಂದಿ ನೋವೇ |
ನೆಂದು ಕಂಬನಿದೊಡೆದು ಗಲ್ಲವ ಹಿಡಿದು ಕೇಳಿದನು || ೧೪ ||

ಶಿಶಿರ ಕಾಲದ ಕೋಗಿಲೆಯ ಒಲು | ಉಸುರದತಿ ಮೋನದಲಿ ಜೀವಂ |
ಜಸೆಯಿರಲು ಪಲವಂದದಿಂ ಲೀಲಯಿಸಿ ಪೇಳನಲು ||
ಉಸುರಿದಳು ದೇವಕಿಯ ಮನೆಗಾ | ಋಷಿಗಳೆಮ್ಮತಿ ಮುಕ್ತಕರು ಬರ |
ಲೊಸೆದೆಱಗಿ ನಾ ಭಾವನೆಂದತಿ ಸರಸವಾಡಿದೆನು || ೧೫ ||

ಸರಸವಾಡಿದರವರು ನನ್ನೊಳು | ವಿರಸವಾಡಿದರೇನ ಹೇಳುವೆ |
ನರಸ ತಮ್ಮಯ ತಂಗಿ ದೇವಕಿ ಬಿರಿದೊಡವಳಂತೆ ||
ಕರುಳುಗಡಿಕ ಗಡಾ ಮಗನು ನಿ | ಷ್ಠುರನು ಪಾಪಿದುರಾತ್ಮನೆಂದಾ |
ತೆರನನೆಲ್ಲವನರುಹಿದಳು ಮುನಿಯೆಂದುವೊಲುಪತಿಗೆ || ೧೭ ||

(ಇಲ್ಲಿ ಪದ್ಯ ೧೬ರ ಬದಲು ೧೭ ಸಂಖ್ಯೆ ಕೊಟ್ಟು, ಅದನ್ನೇ ಮುಂದುವರಿಸಿದ್ದಾರೆ.)

ನಡುಗಿದನು ಮನದೊಳಗೆ ಸವಣರ | ನುಡಿಯ ಬೆಟ್ಟವನೆಚ್ಚ ಬಾಣವು |
ನಡದೆ ಹುಸಿವುದೆ ಮಡದೀ ನೀ ಕಡುಪೊಲ್ಲ ಕೈದೆಯಲ ||
ಕಡಲನತಿ ಮಥನವನು ಮಾಡಲು | ಸುಡುವ ವಿಷವನು ಪೆರದೆ ಪಿರಿಯರ |
ಕೆಡೆ ನುಡಿದಡವರೆದೆ ಗದಡದಿರದಬಲೆ ಕೇಳೆಂದ || ೧೮ ||

ಎಂದು ಕಂಸನು ಧೈರ್ಯವುಳ್ಳುದ | ರಿಂದ ನೀನೇಂ ಬೆದರದಿರು ಯಿದ |
ನೊಂದುಪಾಯದಿ ಕಳೆವೆನೆಂದಾಕೆಯನು ಸಂತೈಸಿ ||
ಬಂದನಾ ವಸುದೇವನರಮನೆ | ಗೊಂದುದಿನ ವಸುದೇವನಂಘ್ರಿಗೆ |
ತಂದು ನೊಸಲನು ಎಂದಿನಂದದಿ ಭಯಭಕುತಿಗೈದ || ೧೯ ||

ತುಂಗಗುಣಿ ಚಿತ್ತೈಸು ತಮ್ಮಯ | ತಂಗಿ ದೇವಕಿ ಪ್ರಸವ ಕಾಲದ |
ಲಂಗಜೋಪಮ ಪುತ್ರರನು ಪಡೆಯಲು ತವರು ಮನೆಗೆ ||
ಹಿಂಗದೆನ್ನಯ ಮನೆಗೆ ಕಳುಹಿಸು | ಮಂಗಳೋತ್ಸವ ಮಾಡುವೆನು ಬದು |
ಕಿಂಗೆ ಫಲವಿದು ಬಂಧು ವಿನಯವು ಭೂಪ ಕೇಳೆಂದ || ೨೦ ||

ಎಂದೊಡಾ ವಸುದೇವನದು ಬೇ | ಡೆಂದೊಡಂ ಪ್ರಾರ್ಥಿಸಿ ಅದೇ ಬೇ |
ಕೆಂದೊಡಂಬಡಿಸಿದನು ಪಡೆದನು ಕಂಸನೃಪನದನು ||
ಇಂದುವದನೆಗೆ ದೇವಕಿಗೆಯಿದ | ರಂದವನು ವಿಸ್ತರಿಸಿ ಬೇರೆನ |
ಗೊಂದು ಬುದ್ಧಿಯೆ ಅಣ್ಣಪತಿ ಹೇಳ್ದಂತೆ ಬಹೆನೆನಲು || ೧೦ ||

ಕಂಸನೃಪನರಮನೆಗೆ ಹೋದನು | ಸಂಶಯವನೆರೆ ತಳೆದು ದೇವಕಿ |
ಯೇಂ ಸುಖವಿದಲ್ಲೆನುತಲತಿ ಮುಕ್ತಕ ಮುನೀಶ್ವರರು ||
ತಾಂ ಸೈರಿಸದೆ ನುಡಿದುದಕೆ ನಿ | ಸ್ತ್ರಿಂಶ ನೀಪರಿ ಪಡೆದ ನಿಮ್ಮ ಪ್ರ |
ಶಂಸೆ ಮಾಡಿ ವಿಜೇಶ ಕೇಳೆಂದಳು ನೃಪನ ರಾಣಿ || ೧೧ ||

ತಂದೆ ತಾಯ್ಗಸಿ ಪಂಜರದಿ ಮಿಗೆ | ಬಂಧಿಸಿದ ಪಾತಕನು ನನ್ನಯ |
ಕಂದನನು ಕೊಲ್ಲದೆ ಬಿಡುವನೇ ಕೆಟ್ಟೆವಿದರಿಂದ ||
ಎಂದ ಕಾಂತೆಯ ಕೂಡೆ ಆನಕ | ದುಂದುಭಿಯು ಇಂತೆಂದ ಜಿನಮುನಿ |
ಯೆಂದ ನುಡಿತಪ್ಪುವುದೆ ಕೊಲಲವಲರಿದೆಲೇ ರಮಣಿ || ೧೨ ||

ಎನುತಲಾ ದೇವಕಿ ವೆರಸೀ ಆ | ಮುನಿಪತಿಯ ಬಳಿಗೈದಿಪೂಜಿಸಿ |
ವಿನುತಿಗೈದತಿಮುಕ್ತಕ ಮಹಾಮುನಿಪ ಬಿನ್ನಹವು ||
ವನುಜಮುಖಿ ದೇವಕಿಯ ಬಸಿರೊಳು | ಜನಿಸುವಾತನದೆತ್ತಣಿಂ ಬಹ |
ನನುನಯದಿ ಚಿತ್ತೈಪುದಾತನ ಬಾಳ್ಕೆಯೊಂದಿರವ || ೧೪ ||

ಕೇಳೆಲೇ ವಸುದೇವ ಧರಣೀ | ಪಾಲ ಸೂರ್ಯವಿಷಯ ಮಧುರೆಯ |
ನಾಳುಗುತ್ತಮ ಶೂರಸೇನನೃಪಾಲನಾ ನೃಪನ ||
ಪಾಲನೆಯಲಿಹ ಭಾನುದತ್ತನು | ಶೀಲಗುಣಿ ವೈಶ್ಯೋತ್ತಮನು ಗುಣ |
ಜಾಲೆಯಮುನಾದತ್ತೆ ಆ ಪರದನಕುಲಾಂಗನೆಯು || ೧೫ ||

ಧಾರುಣಿಯೊಳುಸುಭಾನು ಭಾನಸು | ಕೀರಿತಿಯು ಕಲಿ ಭಾನುಶೇಣನು |
ಶೂರನಾಮನು ಶೂರದೇವನು ಶೂರದತ್ತಕನು ||
ಶೂರಸೇನನು ವೇಳುಮಂದಿ ಕು | ಮಾರರಿವರಾ ಭಾನುದತ್ತಗೆ |
ಚಾರುಧನ ಹನ್ನೆರಡು ಕೋಟಿಯನಾಳುತಿರಲೊಡನೆ || ೧೬ ||

ಆರ್ಯನುತರಾದಭಯನಂದ್ಯಾ | ಚಾರ್ಯರಾಪುರವನದೊಳಿರೆ ತಾಂ |
ಸೂರ್ಯತೇಜದ ಸೂರಸೇನ ನೃಪಾಲನದು ತನ್ನ ||
ಕಾರ್ಯವೆಂದೆಲ್ಲರು ವೆರಸಿಗುಣ | ವರ್ಯನೆನಿಸುವ ಭಾನುದತ್ತನು |
ಧೈರ್ಯದಿಂ ಬರೆ ಬಂದು ತನ್ಮುನಿ ಪದವನರ್ಚಿಸಿದ || ೧೭ ||

ಬಳಿಕ ಧರ್ಮವ ಕೇಳಿ ಸಂಶ್ರುತಿ | ಗಲುಕಿ ಭೂವರ ಶೂರಸೇನನು |
ಚಲಿಸದೊಪ್ಪುವ ಭಾನುದತ್ತನು ಆ ಮುನಿಯಬಳಿಯು ||
ತಳೆದರಾ ಜಿನರೂಪನಿತ್ತಲು | ತಳೆದವರಂಗನೆಯರೆನಿಸುವ |
ನಳಿನ ಮುಖ ಜಿನದತ್ತೆಯಮುನಾದತ್ತೆ ದೀಕ್ಷೆಯನು || ೧೮ ||

ಭಾನುದತ್ತ ಕುಮಾರದತ್ತ ಸು | ಭಾನುಮೊದಲಾದವರು ದುರವ್ಯಸ |
ನಾನುರಕ್ತರು ಕೆಡಿಸಿದರು ಪಿತೃಧನವನೂರೊಳಗೆ ||
ಏನು ಹರುವಿಲ್ಲದೆ ಕಳವಿ ಗೈ | ದಾನಿಮಿತ್ತದಿ ಪೊಳಲರಸನಾ |
ಭಾನುದತ್ತನು ಪುತ್ರರನು ನಾನೆಂತು ಕೊಲಿಸುವೆನು || ೧೯ ||

ಎಂದು ಪೊಳಲಿಂ ಹೊರವಡಿಸಿ ನಡೆ | ತಂದು ಉಜ್ಜನಿ ಪುರವನು ಕಂಡಿ |
ಅಂದಿನಿರುಳೊಳು ಪೊಗುತ ತಮ್ಮನ್ವಯಕಿರಲಿ ಓರ್ವ ||
ಎಂದು ತಮ್ಮನ ಶೂರಸೇನನ | ನಂದು ಸುಡುಗಾಡೊಳಗಿರಿಸಿಕಳ |
ಲೆಂದು ಪೋದಪರರುವರಾ ಪೊಳಲಾಳ್ವ ಭೂಪಾಲ || ೨೦ ||

ವೃಷಭಕೇತನ ನೃಪನ ವನಭಟ | ನಸಮ ವೀರದೃಢಪ್ರಹಾರಿಯು |
ವಸುಧೆಯೊಳಗೆ ಸಹಸ್ರ ಭಟನಾವಪ್ರಸಿರಿ ಮಡದಿ ||
ಎಸೆವ ವರಸುತ ವಜ್ರಮುಷ್ಟಿಯು | ಪೆಸರಿನಿಂದಾತನ ವನಿತೆ ರಾ |
ಜಿಸುವ ಕನಕಲತೆಯು ಸುಖದಿರಲರಸ ಕೇಳೆಂದ || ೨೧ ||

ವಿಮಲ ಚಂದ್ರಮ ವೈಶ್ಯನಾಥಗೆ | ವಿಮಳೆವಧು ಅವರಾತ್ಮಭವೆ ತಾಂ |
ಕಮಲಲೋಚನೆ ಮಂಗಿಯೆಂಬಳ ಕಂಡು ಕಡುಸೋಲ್ತು ||
ರಮಣಿಯನು ಮಿಗೆ ವಜ್ರಮುಷ್ಠಿಯು | ಭ್ರಮಿಸಿ ತಂದವರೊಡನೆ ಮದನಾ |
ಗಮ ರಹಸ್ಯವಿಲೋಲನಾಗಿರೆ ಬಂದುದು ವಸಂತ || ೨೨ ||

ಬರೆ ವಸಂತವು ತನ್ನೃಪಾಲಕ | ನಿರದೆ ವನಕೇಳಿಗೆ ತೆರಳೆ ಸಿಂ |
ಗರಿಸಿ ಕೊಂಡೆಲೆ ಮಂಗಿ ಬಾಯೆಂದಾ ಭಟೋತ್ತಮನು ||
ಅರಸನೊಡನತಿ ಬೇಗಹೋಗಲು | ತರುಣಿ ಪಸದನಗೊಂಡು ಹೂವಿನ |
ಸರವ ವಪ್ರಶ್ರೀಯೆನಿಸಿದತ್ತೆಯನು ಬೇಡಿದಳು || ೨೩ ||

ಸೊಸೆ ಕನಕಲತೆ ತನ್ನ ತಮ್ಮನ | ಶಿಶು ಅವಳ ಕಡೆಗಣಿಸಿ ಮಂಗಿಯು |
ಒಸೆದು ಮಗನನು ಮರುಳು ಮಾಡಿದಳೆಂದು ಮುಳಿಸಿನಲಿ ||
ಹಸಿದ ಹಾವನೆ ಮೊದಲೆ ಘಟದೊಳು | ಸಸಿನಿರಿಸಿ ಜತನದಿ ಮಡಕೆಯಲಿ |
ಕುಸುಮ ಮಾಲೆಯನಿರಿಸಿಹೆನು ತೇಕೊಂಡು ಮುಡಿಯೆನಲು || ೨೪ ||

ಮಡದಿ ಬೇಗ ವಸಂತ ಕೇಳಿಗೆ | ನಡೆಯ ಬೇಕೆಂದಪವಶದಿನರು |
ಮುಡಿಗೆ ಮುಡಿವೆನು ಕುಸುಮಮಾಲೆಯನೆಂದು ಕೊಡದೊಳಗೆ |
ತುಡುಕೆ ಕೈಯನು ಕೃಷ್ಣ ಸರ್ಪನು | ಕಡಿಯೆ ವಿಷಮೂರ್ಛೆಯಲಿ ಪೆಣನನಡವಿಯಲಿ || ೩೫ ||

ಏಕೆ ತಡದಳೋ ಮದನ ವಿಜಯ ಪ | ತಾಕೆಯೆನಿಸುವ ಮದುವೆನುತ ಮೋ |
ಹಾಕುಳದಿ ಕಲಿ ವಜ್ರಮುಷ್ಠಿಯು ಬೇಗ ನಡೆತಂದು ||
ಆಕೆಯನೆ ಅರಸುತ್ತ ಬರಲುತಾಯ್ | ಶೋಕಿಸುತ್ತಲಿದಿರೆದ್ದು ಬಂದಳು |
ಭೇಕವೈರಿಯು ತಿಂದುದಳಿದಳು ಮಂಗಿಯೆನಲೊಡನೆ || ೩೬ ||

ಮಂಗಿ ಹಾಹಾ ಮದನ ಕನಕಲ | ತಾಂಗಿ ಹಾಹಾ ಮೋಹರಸ ಸಂ |
ಸಂಗಿ ಹಾಹಾ ಕಾಮಕೇಳೀ ಕುಸುಮವಲ್ಲರಿಯ ||
ಭೃಂಗಿ ಹಾಹಾರಾರತಿ ಸಲಹಿದ ಕು | ರುಂಗಿ ಹಾಹಾಯೆಂದು ಶೋಕಿಸಿ |
ತುಂಗ ವಿಕ್ರಮ ಬಳಿಕಲಾ ಹೆಣನೆಲ್ಲಿ ತೋರೆಂದ || ೩೭ ||

ಅಡವಿಯೊಳಗದೆಯೆಂದಡಕಟಾ | ಹಡದತಾಯೇ ಹಗೆ ತನಗೆ ಯೆಂ |
ದೊಡನೆ ಖಡುಗವ ಜಡಪಿಸುತ ಕಲಿಕಾಳರಾತ್ರಿಯಲಿ ||
ಅಡವಿಗೈದಿದನರಸುತೋರ್ವನೆ | ಎಡೆಯೊಳುತ್ತಮ ಸಪ್ತವೃದ್ಧಿಯ |
ಪಡೆದು ಕಾಡೊಳುಯೋಗದಿಹ ಜಿನ ಮುನಿವರರಕಂಡ || ೩೮ ||

ಕಂಡು ಹರುಷದಿ ಧರ್ಮನಾತರ | ಪುಂಡರೀಕಾಂಘ್ರಿಯಲಿ ತನ್ನಯ |
ಮಂಡೆಯನು ಚಾಚಿದನು ಕಾಡೊಳಗರಸಿ ಮಂಗಿಯನು ||
ಕಂಡೆನಾದರೆ ಸಾಸಿರಂಬುಜ | ಷಂಡದಿಂ ನಿಮ್ಮಂಘ್ರಿಗಳ ಬಗೆ |
ಗೊಂಡು ಪೂಜಿಪೆನೆಂದನಾ ಕಲಿ ವಜ್ರಮುಷ್ಠಿ ಭಟ || ೩೯ ||

ಬಳಿಕಲಾ ಬನದೊಳಗೆ ಮನದು | ಮ್ಮಳದಲರಸುತದೊಂದು ಹಬ್ಬಿದ |
ಹಳುವದಲಿ ಬಿದ್ದಿರ್ದಮಂಗಿಯ ಕಂಡುನೆಗೆಕೊಂಡು ||
ತಳುವದಲ್ಲಿಂ ಮಗುಳ್ದು ಬರುತಾ | ಬಳಿಯಲಾ ಮುನಿವರರ ಚರಣಂ |
ಗಳ ಕೆಲದಲಿಳಿಪಿದನು ಮಂಗಿಯ ಸಭವನಾ ಭಟನು || ೪೦ ||

ಬಳಿಕ ಸರ್ವೌಷಧಿ ಸುವೃದ್ಧಿಯ | ತಳೆದ ಗುರುಗಳ ಸೋಂಕಿದೆಲರಾ |
ಗಳೆ ಅವನ ತನು ಸೋಂಕೆ ನಿರ್ವಿಷವಾಗಿ ಆ ಮಂಗಿ ||
ಘುಳಿಲನೆಚ್ಚಱಕಂಡು ಸಂತಸ | ದಳೆದು ಇವರಿಗೆ ಹರಸಿಕೊಂಡಾ |
ಫಲದಿ ಕಂಡೆನು ನಿನ್ನ ಬಂದುದು ಪ್ರಾಣ ನಿನಗೆಂದ || ೪೧ ||

ಎನುತ ಮಂಗಿಯನಪ್ಪಿ ನೀನೀ | ಮುನಿಪದಾಂತಿಕದಲ್ಲಿಯಿರು ನಾ |
ವನಜಗಳ ತಂದೀ ಮಹಾಪುರುಷರ ಪದಂಗಳನು ||
ಮನದಣಿಯೆ ಪೂಜಿಸುವೆನೆಂದಾ | ತನು ಸರೋವರ ದತ್ತಹೋಗಲು |
ಮುನಿಪನೊತ್ತಿನ ಹಳುವದೊಳಗಡಗಿರ್ದನಾ ಕಳ್ಳ || ೪೨ ||

ಶೂರಸೇನನು ತತ್ಪ್ರಪಂಚವಿ | ಚೌರವೆಲ್ಲವ ಕಂಡು ಬಳಿಕಾ |
ನಾರಿಯರು ಮನವರಿದ ಬಗೆಯಿಂ ಘಟದೊಳಡಗಿಸಿದ ||
ಚಾರುದೀಪವು ವೆರಸು ಮದನಾ | ಕಾರನಾಕೆಯ ಬಳಿಗೆ ಬಂದು ಘ |
ಟೋರು ದೀಪವ ತೋಱೆ ಕಂಡಳು ಮಂಗಿಯಾತನನು || ೪೩ ||

ಅವನ ಚೆಲುವನು ಕಂಡು ಕಂಡಾ | ಯುವತಿ ಮನಸೋತಳು ತಳುವದೆಲೆ |
ನವಮನೋಭವ ತನ್ನನೊಯಿನಿನಗೊಲಿದು ಬಹೆನೆನಲು ||
ಕುವಲಯಾಂಬಕಿ ನಿನ್ನ ಗಂಡನು | ಭುವನದೊಳು ನೆಱೆಗಂಡುಗಲಿ ಬಳಿ |
ಕವನು ಕೊಂದಪನೆಂದು ಬೆದಱುವೆ ನೆಂದನಾ ಚೋರ || ೪೪ ||

ಎನಲು ನಾನದಕೊಂದುಪಾಯವ | ನನುಗೊಳಿಸುವೆನು ಅವನ ಬಾಧೆಗೆ |
ಇನಿಸು ಬೆದರದಿರೆಂದು ನಂಬುಗೆ ಗೈದಸಮಯದಲಿ |
ವನಜಗಳ ಹೊರೆಗಟ್ಟಿ ತರಲವ | ನನಿತರೊಳಗಿವನಲ್ಲಿ ಅಡಿಗಿರೆ |
ವನಿತೆ ಪಿಡಿಯೆಂದಿತ್ತನಾ ಕೂರ್ವಾಳನಾ ಭಟ್ಟನು || ೪೫ ||

ಮಂದರಾಚಲದಂತೆ ಯೋಗದಿ | ನಿಂದ ಗುರುಗಳ ಪದದ ಕೆಲದಲಿ |
ಚಂದ ಚಂದದಿ ಕಮಲಗಳನರ್ಚಿಸಿಯೆರಗಲೊಡನೆ ||
ಕಂದೆದೆಯಳಾ ಖಡುಗವನು ನೆಗೆ | ತಂದು ಗಂಡನ ಕೊರಳಹೊಯ್ಯಲು |
ಬಂದು ಬೇಗದಿ ಶೂರಸೇನನು ಭೂಪ ಕೇಳೆಂದ || ೪೬ ||

ಅವನ ಕೊರಳಿಗೆ ಬೀಳುವಸಿಯನು | ತವಕದಲ್ಲಿ ಕಬ್ಬುನದ - ಗುದಿಯಲಿ |
ಸವರಿ ಬೀಸಲು ಅವಳ ಕೈಯಿಂ ಬಿದ್ದುದಾ ಖಡುಗ ||
ಯುವತಿ ಖಡುಗವು ಬಿದ್ದುದೇಕೆನ | ಲೆವೆ ಬೆದರೆ ಮರುಳಂಜಿಸಿದವೆನೆ |
ಅವಳ ಬೆದರದಿರೆನುತ ಮುನಿಪದಕೆರಗಿದವನೆದ್ದ || ೪೭ ||

ಹೆಗಲನೇರಿಸಿಕೊಂಡನವಳನು | ನೆಗಪಿ ಖಡುಗವ ಪಿಡಿದು ಮುನಿಪದ |
ಯುಗಕೆ ಪೊಡವಟ್ಟತ್ತ ಪೋದನು ವಜ್ರಮುಷ್ಟಿಭಟ ||
ಮೃಗನಯನೆ ಕಡಿವಾಗ ಖಡುಗವ | ನಗಲಿಪಾಗಳು ಶೂರಸೇನನ |
ಸೊಗಯಿಸುವ ಕೈ ಗಾಯವಾದುದು ಭೂಪಾ ಕೇಳೆಂದ || ೪೮ ||

ಪೆಂಡಿರನು ನೆರೆನಂಬಿದಾತನೆ | ಭಂಡನವನಭಿಮಾನಗೇಡಿಯು |
ಪಿಂಡಿರೆಲೆ ಸತ್ಪಥದ ಬಾಗಿಲಪಡಿಗೆ ಬೀಯಗವು ||
ಗಂಡುಗಲಿಯಹ ವಜ್ರಮುಷ್ಠಿಯು | ಹೆಂಡತಿಯೇ ಗೈದನಾ ವಧು |
ಗಂಡಗೊಡ್ಡಿದ ತಂತ್ರವನು ನೋಡೆಂದು ಬೆರಗಾದ || ೪೯ ||

ತುಡುಗುಣಿಯು ನಾಯೊಂದು ಎಲುವನು | ಕಡಿಯುತಿರಲೊಸದೊಡೆದು ನೆತ್ತರು |
ನಿಡುರಸನೆನಿನಿದಾಗಲದು ಸವಿಯೆಂದು ಬಿಡದಂತೆ ||
ಕಡು ಬೆಸನಿಗಾ ತೆರನು ದುರ್ಗುಣ | ಪಿಡಿದ ಕಾಂತೆಯರಿಂದ ಸುಖವನು |
ಪಡೆವೆನೆಂಬುದು ತನ್ನ ಲಾಂಪಟ್ಯದ ಮಹಿಮೆಯೆಂದ || ೫೦ ||

ಖಳನನೀ ಪರಿ ಕಾಲಲಬ್ಧಿಯೆ | ತಿಳುಹಿಸಿದುದನಿತರೊಳ್ ಬಂದರು |
ಕಳವು ಗೈದತಿ ಬಹಳವಸ್ತವ ಹೊಡೆದು ಕೊಂಡವರು ||
ಬಳಿಕಲೆಲ್ಲರು ಪಸುಗೆ ಮಾಡಿಯೆ | ತಳೆವನಿತರೊಳು ಭಾನು ಕಂಡನು |
ಚಳಿಸದೀಕ್ಷಿಸಿ ಶೂರಸೇನನ ಕೈಯ ಘಾಯವನು || ೫೧ ||

ತಮ್ಮಘಾಯವಿದೆನಿದರೀತೆರ | ನಮ್ಮೊಳುಸುರೆನಲೇನ ಹೇಳುವೆ |
ನಿಮ್ಮೊಳೀದನಿವರು ವರಣ್ಣಂದಿರು ಸುಖದಿ ಬದುಕಿ ||
ಅಮ್ಮನಯ್ಯೋ ಸ್ತ್ರೀಯರೊಳುಮನ | ನೆಮ್ಮಿಹುದು ಸುಖವಲ್ಲೆನುತ ಮನ |
ನಿಮ್ಮಳದಿ ಹೇಳಿದನು ಮಂಗಿಯ ತೆಱನನೆಲ್ಲವನು || ೫೨ ||

ಕಾಳ ಹಾವಿಗೆ ಕೊಟ್ಟ ದೇಹದ | ಶೂಲಕೊಪ್ಪಿಸಿ ಕಡು ತಳಾರನ |
ಬಾಳಿಗೀ ತಲೆಗೊಟ್ಟು ಚೌರ್ಯದಿಗಳಿಸಿ ಧನಗಳನು ||
ಬಾಲಕಿಯರೊಳು ಬಾಳ್ವೆವೆಂಬುದು | ಗಾಳುಕಂಡಿರೆ ಬಾಲೆಯರ ಮಿಗೆ |
ಥಾಳೆಯರ ನಾ ನಂಬಲರಿಯೆನುಕೊಂಬೆ ದೀಕ್ಷೆಯನು || ೫೩ ||

ಎಂದು ತಮ್ಮನು ತೋಱೆಯಲವನಂ | ಣಂದಿರರುವರುಮಂತೆಗೆಯಿದರು |
ತಂದವಿತ್ತವ ಮನೆಗೆ ಕಳುಹಿಸಿ ಧರ್ಮಗುರುಗಳಿಗೆ ||
ವಂದಿಸಿಯೆ ಜಿನದೀಕ್ಷೆಗೊಂಡರು | ಮಂದಿರದಲವರೇಳು ಮಂದಿಯ |
ಸೌಂದರಿಯರಾ ವಿತ್ತವನು ತಂದವನು ಮುಖದಿಂದ || ೫೪ ||

ಅಱಿಯದಱೆಯರು ದೀಕ್ಷೆಗೊಂಡಾ | ತೆಱನನುತ್ತಮ ಚಿತ್ತೆಯರು ಯಿ |
ನ್ನಱಿಯ ಕಂಡುಂ ತೊಱೆಯದಿದ್ದರೆ ಮಂಗಿಯಂತಹೆವು ||
ಪೆಱತದೇನೆಂದೇಳ್ವರುಂ ಮಿಗೆ | ತೊಱೆದು ಜಿನದತ್ತಾಜ್ಜಿಕೆಯರಲಿ |
ನೆಱೆತಪಸ್ಥೆಯರಾದರೆಲೆ ಭೂಪಾಲ ಕೇಳೆಂದ || ೫೫ ||

ಅತ್ತಲಿವರಾ ಸಪ್ತಋಷಿಯರು | ಉತ್ತರೋತ್ತರ ಸಂಯಮದಿ ನೆಗ |
ಳುತ್ತಲುಜ್ಜೈನಿಯನೆಯಿದಿ ಬರೆ ವಜ್ರಮುಷ್ಠಿಭಟ ||
ಮತ್ತವರಿಗಭಿವಂದಿಸಿಯೆನೋ | ದುತ್ತಲಸಿಧಾರಾವ್ರತದ ಮಿಗೆ |
ಪೆತ್ತಿರೇಂ ಹೊಸ ಹರೆಯದಲಿ ಚಿತ್ತೈಪುದಿದನೆಂದ || ೫೬ ||

ಎನಲು ಈಪರಿ ಪುರದಡವಿ[ಯಿರು] | ಳಿನಲಿ ಮಂಗಿಯೆನಿಪ್ಪಳಿಂದಾ |
ಯ್ತೆನುತಲಾಮುನಿ ಪೇಳ್ದು ತೋರಿಸಿ ಕೈಯಘಾಯವನು ||
ಅನಯದೀನದನೆಲ್ಲವನು ಮೆ | ಲ್ಲನೆ ನಿರುಪಿಸೆ ಕೇಳ್ದರಿದು ತಳೆ |
ದನು ಸುದೀಕ್ಷೆಯ ಧರ್ಮನಾಥರ ಬಳಿಯಲಾ ಸುಭಟ || ೫೭ ||

ಮೊದಲೆ ಪೇಳ್ದಾ ಅಜ್ಜಿಕೆಯರಾ | ಪದುಳದುಜ್ಜೈನಿಗೆ ಬರಲು ಅತಿ |
ಮುದದಿ ಮಂಗಿಯು ಕಂಡುವಂದಿಸಿ ಚಿಕ್ಕಹರಯದಲಿ ||
ವಿದಿತ ದೀಕ್ಷೆಯ ನಾಂತಿರಿದು ವಾ | ವುದರ ದೆಸೆಯಿಂದರಿಪಿಮೆನೆ ಪೇ |
ಳಿದರು ಈ ಪೊಳಲೊಳಗೆ ಇಹಳಾ ಮಂಗಿಯೆಂಬವಳು || ೫೮ ||

ಅವಳ ಪಾಪಾಚರಣವನು ಕಂ | ಡೆವಗೆ ಹೇಸಿದರೆಮ್ಮಗಂಡರು |
ಅವಿಚಳಿತ ಜಿನದೀಕ್ಷೆಗೊಳೆನಾವಾಮತೆ ಈ ರೂಪ ||
ಯುವತಿ ಕೇಳೆಂದೆಲ್ಲವನು ಮಿಗೆ | ವಿವರಿಸಲು ಬೆರಗಾಗಿ ತಾಂ ಗೈ |
ದವಗುಣಕೆ ಪೇಸಿದಳು ತಳೆದಳು ಮಂಗಿ ದೀಕ್ಷೆಯನು || ೫೯ ||

ಅರಸಕೇಳಾ ಸಪ್ತ ಋಷಿಯರು | ವರಸಮಾಧಿಯನುಳಿದು ದೇಹವ |
ನಿರದೆ ಸೌಧರ್ಮದೊಳು ತ್ರಾಯಸ್ತ್ರಿಂಶರಾಗಿರುತ ||
ಶರಧಿಯುಪಮಾಯುಷ್ಯದೊಂದನು | ಪರಿಹರಿಸಿಯೆರಡನೆಯ ದೀಪದೊ |
ಳುರುತರದ ಮೂಡಣ ಸುಮೇರುವ ಭರತ ವಿಷಯದಲಿ || ೬೦ ||

ವರ ರಜತಗಿರಿ ದಕ್ಷಿಣದಲ | ಚ್ಚರಿಯು ನಿತ್ಯಾಲೋಕಪುರವದ |
ರರಸನೊಪ್ಪುವ ಚಿತ್ರಮಾಳಿಕನವನರಸಿದೇವಿ ||
ಇರಲವರಿಗೆ ಸುಭಾನು ಚರಸುರ | ವರನು ಚಿತ್ರಾಮಗಧನೆನಿಪ ಬಂ |
ಧುರತನೂಭವನಾದನೆಲೆ ಭೂಪಾಲ ಕೇಳೆಂದ || ೬೧ ||

ಬಂದು ಜನಿಸಿದರುಳಿದರುವರೊಲ | ವಿಂದರಮಳುಗಳಾಗಿ ಯುವತಿಗೆ |
ಸಂದ ಗರುಡಧ್ವಜಗಡವಾಹನನು ಮಣಿಚೂಳ ||
ಅಂದು ಸುಮನಸ್ಪೂಳಗಗನಾ | ನಂದ ಗಗನಚರನು ಎನಿಪರೊಲ |
ವಿಂದ ಬಳೆದತಿ ಭುಜಬಲರು ವಿಶ್ರಾಂತಿಯಿಂದಿರಲು || ೬೨ ||

ತಿಳಿದೊಡಾ ಶ್ರೇಣಿಯೊಳಗಿಪ್ಪುದು | ಪೊಳಲು ಮೇಘಪುರವು ಧನಂಜಯ |
ಪೊಳಲಪತಿ ಲಕ್ಷ್ಮಿಯು ನೃಪನ ಸತಿಮಗಳು ಧನದೇವಿ ||
ಚೆಲುವೆ ಯೌವನೆಯಾಗಿರಲು ಸುಖ | ದೊಳು ಧನಂಜಯ ಖಚರಪತಿ ಪ |
ಜ್ಜಳಿಪ ಶೃಂಗಾರ ಸ್ವಯಂಬರವನು ನಿಮಿರ್ಚಿದನು || ೬೩ ||

ಅಲ್ಲಿಯಾರ್ಯಾ ಖಂಡದೊಳಗಿಹ | ರೆಲ್ಲ ಖೇಚರ ಭೂಚರರಸುತ |
ಅಲ್ಲಿಯೆಸದಿರಲತ್ತಲೆಸೆವಾನಂದ ಪುರವರನು ||
ಬಲ್ಲಿದನು ಹರಿಷೇಣಸುತ ಪೆಸ | ರಲ್ಲಿ ಹರಿವಾಹನನು ಯಿರಲಾ |
ಸಲ್ಲಲಿತೆಗೆವ ಮಾವನಾತ್ಮಜನಾದ ದೆಸೆಯಿಂದ || ೬೪ ||

ವರ ಧನಶ್ರೀ ಕಾಣುತಾತನ | ಕೊರಳಿಗಿಕ್ಕಿದಳಂದು ಮಾಲೆಯ |
ದುರುಳನಲ್ಲಿಯ ಪುಷ್ಪದಂತಸು ಕ್ರಿಯಾತ್ಮಜನು ||
ವರ ಸುದತ್ತಕನ್ಯೆದೆ ಕೋಪದ | ಭರದಿ ಹರಿವಾಹನನ ಗಂಟಲ |
ನರಿದು ತತ್ಕರ್ಣಿಕೆಯ ನೊಯಿದನು ಭೂಪಕೇಳೆಂದ || ೬೫ ||

ಕಾಂತೆಯಿಕ್ಕಿದ ಮಾಲೆಯದುವೆ ಕೃ | ತಾಂತ ನಿಕ್ಕಿದ ಪಾಶವಾದುದು |
ಕಾಂತ ಹರಿವಾಹನಗೆನುತ ಚಿತ್ರಾಂಗದಾದಿಗಳು ||
ಭ್ರಾಂತಿಯನು ನೆರೆತೊರೆದು ದೀಕ್ಷೆಯ | ನಾಂತರಲ್ಲಿಯ ತೀರ್ಥನಾಥ ಪ |
ದಾಂತಿಕದೊಳೆಸೆದಿರ್ಪ ಭೂತಾನಂದರೊಳು ಮುದದಿ || ೬೬ ||

ಬಳಿಕ ಸುಸಮಾಧಿಯಲ್ಲಿ ಕಾಯವ | ನುಳಿದು ಮಾಹೇಂದ್ರ ಪ್ರಕಲ್ಪದ |
ಜಲಧಿಯುಪಮಾಯುಷ್ಯವೇಳನು ಸುಖದಿನನುಭವಿಸಿ ||
ತಳೆದನಾ ಮಾನಿಕರು ಕಡೆಯಲಿ | ಗಲಿಸಿ ಕುರಜಾಂಗಳ ವಿಷಯದಿಭ |
ಪೊಳಲನಾಳುವ ಗಂಗದೇವನರಾಯ ಸೆಟ್ಟಿಯವ || ೬೭ ||

ಶ್ವೇತವಾಹನನಿಂದುಮತಿಗಂ | ನೂತ ಚಿತ್ರಾಂಗದ ಚರಾಮರ |
ನಾತ ನಾತ್ಮಜನಾಗಿ ಶಂಖನೆನಿಪ್ಪನಿರುತಿರಲು ||
ಖ್ಯಾತ ಗರುಡಧ್ವಜ ಚರಾದಿಗ | ಳೋತು ಗಂಗನೃಪಾಲ ನರಸಿಲಿ |
ನೂತನಂದಯಶೆಗೆ ಅಮಳುಗಳುಮಾಗಿ ಜನಿಸಿದರು || ೬೮ ||

ಅಂದು ತರದಿಂ ಗಂಗದೇವನು | ಮೆಂದು ಬಳಿಕಾಗಂಗಮಿತ್ರನು |
ನಂದಿವೊಪ್ಪುವನಂದಿಮಿತ್ರು ನಂದಿಷೇಣಾಖ್ಯ ||
ನಂದಿಘೋಷರೆನಿಪ್ಪರಾಗಿರೆ | ಹಿಂದಣಾಭವದೊಂದು ನೇಹದಿ |
ಬಂದುಶಂಖನೊಳೊಂದುಹರು ಭೂಪಾಲಕೇಳೆಂದ || ೬೯ ||

ಮತ್ತೆ ಪಡೆದಳು ನಂದಯಶೆ ತಾ | ಪುತ್ರನೋರ್ವನ ನಾಶಿಶುವ ನೋ |
ಡುತ್ತ ಕೋಪಾನಳನುದಿಸಿ ಆ ಶಿಶುವನಾಮಾತೆ ||
ಅತ್ತ ಬಿಸುಡಿಸುತಿರಲವಳ ಅನು | ಜೋತ್ತಮೆಯು ರೇವತಿವನಿತೆನಡ |
ಪುತ್ತಿರಲು ನಿರ್ನಾಮಿಕಾಹ್ವಯನಾಗಿ ಬೆಳೆಯುತಿರೆ || ೬೦ ||

ಅಱಿತು ಮೇಶ್ಯಕುಮಾರಶಂಖನು | ನೆಱೆವುತಿಹ ನಿರ್ನಾಮಿಕನನ |
ಕ್ಕಱುವಡೆದು ತಾನಡಿಗಿಗೆಸಂಪ್ರೀತಿ ಮಾಡುತಿರೆ ||
ನೆಱೆ ಬಸಂತದ ಬನದುಣಿಸಿನಲಿ | ಮೆಱೆವ ಗಂಗಾದಿಗಳು ನಂದನ |
ಕೆಱೆಯನೊಡನೈತಂದರೂಟಕೆ ಶಂಖನನು ಕರೆಸೆ || ೬೧ ||

ಬನಕೆ ಶಂಖನು ಪೋಗುತಿರೆ ಮು | ತ್ತಿನ ಸರವು ಹರಿದೊಗಲುತಾಂಬೆ |
ನ್ನನೆ ಬರುತ ನಿರ್ನಾಮಿಕನು ಬಿಡದಾಯ್ದುಕೊಳುತಿರಲು ||
ವಿನುತನದನೀಕ್ಷಿಸಿ ಸರಾಗವು | ಜನಿಸಿ ನಿರ್ನಾಮಿಕನನವನೊ |
ಯ್ಯನೆ ಗಜದ ಮೇಲೆತ್ತಿಕೊಂಡೈತಂದನೊಲವಿಂದ || ೬೨ ||

ಗಂಗಮುಖ್ಯರಕೂಡೆ ಶಂಖನು | ಸಂಗದಿಂ ಪಂತಿಯಲಿ ಉಣುತಿರೆ |
ಗಂಗನಬ್ಬೆಯು ನಂದಯಶೆಯಿವನಾರೆನುತಕಾಯ್ದು ||
ಪಿಂಗದೊದೆದೊಡೆ ಆಕೆಯೋಪನು | ಗಂಗಭೂಪತಿ ಕಂಡುವಿಸ್ಮಯ |
ಸಂಗೊಳಿಸಿ ಧ್ರುಮಶೇಣ ಮುನಿಪರ ಬಳಿಗೆ ಬಂದೆರಗಿ || ೬೩ ||

ನಂದಯಶೆ ನಿರ್ನಾಮಕನು ಗುಣ | ಸಿಂಧುಶಂಖನುವೆರಸಿ ಅವರನು |
ವಂದಿಸಲು ನೃಪನಂದನೀಕೆಗೆ ಈ ಕುಮಾರನಲಿ ||
ಕಂದದ್ವೈದೇಕಾದುದೆನಲವ | ರೆಂದರವಧಿ ಜ್ಞಾನದಿಂ ತಿಳಿ |
ದಿಂದಿನೀ ಮುನಿಸಲ್ಲವೆನೆ ಭೂಪಾಲ ಕೇಳೆಂದ || ೬೪ ||

ವರಸುರಾಷ್ಟ್ರವೆನಿಪ್ಪ ನಾಡೊಳು | ಸಿರಿನಗರಿ ಪುರ ಮೇಘರಥನೃಪ |
ನರಸಿ ಕಾಂಚನಮಾಲೆ ಅಮೃತರಸಾಯನಾಹ್ವಯನು ||
ದೊರೆವಡೆದ ಬಾಣಸಿಗನವರಿಗೆ | ಪಿರಿದು ಸವಿಯೆನೆ ಪಿಶಿತವನು ಸವೆ |
ದಿರದೆ ಭೋಜನಗೈಸಲು ಮೆಚ್ಚಿದನವಗೆ ನೃಪತಿ || ೬೫ ||

ಮೆಚ್ಚಿಕೊಟ್ಟನು ಹತ್ತು ಗ್ರಾಮವ | ನಿಚ್ಚೆಯಿಂ ಮತ್ತೊಂದು ದಿನ ನಿ |
ರ್ಮಚ್ಚರದಲಿ ಸುಧರ್ಮರೆಂಬ ದಿಗಂಬರರ ಪೊರ್ದಿ ||
ಚೊಚ್ಚ ಧರ್ಮವ ಕೇಳ್ದುಲಬ್ಧಿಯ | ದಚ್ಚರಿಯೆ ಸಂಸಾರಕಾಗಳೆ |
ಬೆಚ್ಚ ವೈರಾಗ್ಯದಲಿ ನೆರೆದನು ಮೇಘರಥ ನೃಪತಿ || ೬೬ ||

ವರ ತನುಜನಹ ಚಿತ್ರರಥಗಾ | ಧರೆಯ ಭಾರವ ಪೊರಿಸಿ ಮೂನೂ |
ರ್ವರು ನೃಪಾಲರುವೆರಸಿ ತನ್ಮುನಿಯಲ್ಲಿ ಜಿನರೂಪ ||
ಧರಿಸಿದನು ತಾನಿತ್ತಲಾ ಚಿ | ತ್ರರಥನುತ್ತಮ ಶ್ರಾವಕವ್ರತ |
ನಿರತನಾದನು ಕಾಲಲಬ್ಧಿಯ ಮಹಿಮೆ ಕಡು ಬಡವೆ || ೭೭ ||

ಕುವರನಮೃತರಸಾಯನಗೆ ಗ್ರಾ | ಮಮನದೊಂದನೆ ಕೊಟ್ಟು ತಾಮಿ |
ಕ್ಕವತೆಗೆದನಘ ಬೀರು ಆ ಬಾಣಸಿಯಿದೆಲ್ಲವನು ||
ವಿವರದಿಂದಾ ಗುರುಗಳೀನ | ಮ್ಮವಗೆ ಕಲಿಸಿದ ಬುದ್ಧಿಯೆಂದೊ |
ಪ್ಪುವ ಸುಧರ್ಮಮುನೀಂದ್ರರಲ್ಲಿಗೆ ಹೋಗಿ ವಂದಿಸಿದ || ೭೮ ||

ಅತಿಕಪಟ ಹೃದಯದಲಿ ಜೈನ | ವ್ರತವತಳೆದಿರ್ದೊಂದು ದಿನ ಆ |
ಯತಿಗಳನು ತದ್ರಾಜ ಮಂದಿರದೊಳು ಚರಿಗೆನಿಲಿಸಿ ||
ಯತಿಗಳಿಗೆ ವಿಷವಿಕ್ಕಿ ಕೊಂದಾ | ಯತಿಪನುರ್ಜಂತಾ ಚಳದೊಳ |
ಪ್ರತಿಮ ಚಿತ್ತದಿ ಬಿಸುಟನೊಡಲನು ಭೂಪ ಕೇಳೆಂದ || ೭೯ ||

ಯತಿಯನುತ್ತರೆಯೊಳಗಣಪರಾ | ಜಿತ ವಿಮಾನದೊಳೊಪ್ಪುವಹಮಿಂ |
ದ್ರತೆಯನಾ ಮೂವತ್ತ ಮೂರು ಸಮುದ್ರದಾಯುವನು ||
ಅತಿಸುಖದಲುಣತಿರ್ದರಿತ್ತಲು | ಯತಿವಧೆಯ ಮಾಡಿದನನಾ ಭೂ |
ಪತಿ ಪರಾಭವಿಸಿದೊಡೆ ದುಃಖದಿ ಮಡಿದು ಮೂರನೆಯ || ೮೦ ||

ನರಕಕಿಳಿದವನೇರುವ ವಾರಿಧಿ | ಪರಿಣಿತಾಯುವ ದುಃಖದಿಂದುಂ |
ಡಿರದೆ ಪಲವು ಕುಯೋನಿಯಲಿ ತಿರಿತಂದು ದುಃಖದಲಿ ||
ಅರಸ ಕೇಳೆತ್ತಾನು ಉಪಶಮ | ದೊರಕೆ ಬಂದೀ ಭರತದಾರ್ಯೆಯೊ |
ಳುರು ಮಲಯ ದೇಶದಲೆ ಗ್ರಾಮಪಲಾಶ ಕೂಟವನು || ೮೧ ||

ಯಕ್ಷದತ್ತ ನೆನಿಪ್ಪ ಗೌಡನ | ಯಕ್ಷದತ್ತೆಯ ಪಿರಿಯ ಮಗನಹ |
ಯಕ್ಷಿಗಳ ತಾಂ ಯಕ್ಷದತ್ತನೆನಿಪ್ಪನುಜನಾಗಿ ||
ಸುಕ್ಷಮೆಯಿನವ ಸಾನುಕಂಪನು | ಅಕ್ಷಮೆಯಿತಾಂನಿರಲು ಕಂಪನು |
ಪ್ರೇಕ್ಷಿಸುವೊದಿಂತೆಂಬ ಪೆಸರೆಂದಿರುತಲೊಂದುದಿನ || ೮೨ ||

ಹೊಲನ ನೋಡಲು ಹೋಗುತೀರ್ವರು | ಒಲಿದು ಭಂಡಿಯನೇರಿ ಪೋಪಾ |
ಬಳಿಯಲಿರೆ ಪೆರ್ಬಾವು ಕಾಣುತಸಾನುಕಂಪಲದ ||
ತೊಲಗಿಸೆನಲಾ ನಿಕೃಪನು ತಾಂ | ತೊಲಗಿಸದೆ ಭಂಡಿಯನು ಪರಿಯಿಸೆ |
ಛಳಿಲನಿಕ್ಕಡಿಯಾದುದದು ಭೂಪಾಲ ಕೇಳೆಂದ || ೮೩ ||

ಮಡಿದು ತಾನದು ಕರ್ಮಹಾನಿಯ | ಪಿಡಿದು ಇಲ್ಲಿಯ ಶ್ವೇತ ನಗರದ |
ಪೊಡವಿಪತಿವಾಸವ ವಸುಂಧರಿ ರಾಣಿ ಅಂತರ್ಗೆ ||
ಉಡುಪಮುಖಿ ನಂದಯಶೆ ವೆಸ | ರಿಡದ ಮಗಳಾಗಿರ್ದು ನಿನ್ನಯ |
ಮಡದಿಯಾದಳು ಸಂಸ್ಕೃತಿಯ ಚಿತ್ರವನದೇನೆಂಬೆ || ೮೪ ||

ನಿರನುಕಂಪನನತ್ತಳಾಗಳು | ಪಿರಿದು ಬೋಧಿಸೆ ಸಾನುಕಂಪನು |
ಕುರುಡು ಪೆರ್ಬಾವಿನ ಕೊಲೆಗೆ ಕೊಕ್ಕರಿಸಿ ಮತಾತ ||
ಕೊರಗಿ ಮಡಿದ್ಯೆತಂದು ನಿಮಗೀ | ಪರಿಯ ನಿರ್ನಾಮಿಕರು ಪುಟ್ಟಿದ |
ನರಸಿಗಿದು ಪೂರ್ವದ ವಿರುದ್ಧವು ಭೂಪ ಕೇಳೆಂದ || ೮೫ ||

ಗಂಗ ಭೂಪತಿ ಕೇಳಿ ಮನದೊಳು | ಸಂಗೊಳಿಸೆ ವೈರಾಗ್ಯನಾ ಮುನಿ |
ಪುಂಗವ ಸಮಕ್ಷಮದಲಿ ತಳೆದನು ಜಾತರೂಪತೆಯ ||
ಗಂಗ ಮುಖ್ಯ ಕುಮಾರರುವರು | ಸಂಗಡದೆ ನಿರ್ನಾಮಿಕನು ಗುಣ |
ತುಂಗ ಶಂಖನುವಾಂತರಾ ಜಿನರೂಪನೆಲೆ ಭೂಪ || ೮೬ ||

ಅತ್ತಲೆಸೆವಾ ನಂದಯಶೆ ಸುಚ | ರಿತ್ರೆ ರೇವತಿಯೀರ್ವರುಂ ತಾ |
ವುತ್ತಮ ತಪಸ್ಥೆಯರೆನಿಸಿಯಿರೆ ನಂದಯಶೆಯಂದು ||
ಮತ್ತಿಮಿವರೇ ಮರುಭವಗೆ ಸ | ತ್ಪುತ್ರರಾಗಲಿ ಯೆನಗೆನಲು ನೀ |
ಪೆತ್ತ ಮಕ್ಕಳ ನಡಪುವುದು ತನಗಾಗಲೆಂದನುಜೆ || ೮೭ ||

ಮಿಗೆ ನಿಧಾನಂ ಗೈದರೀರ್ವರು | ಸೊಗಯಿಪಾರಾಧನೆ ಸುಭಾವನೆ |
ನೆಗಳ್ದು ದೇಹವನೊಕ್ಕಿರೆ ಮಹಾಶುಕ್ಲಕಲ್ಪದೊಳು ||
ಬಗೆಯೆ ಷೋಡಷ ಸಾಗರೋಪಮ | ದಗಲದಾಯುವನುಂಡು ಸಗ್ಗದಿ |
ನಗಲಿ ನಂದಯಶೋಚರಾಮರ ದೇವಸೇನಂಗೆ || ೮೮ ||

ಬಂದು ನಂದನೆಯಾದಳೀ ಅರ | ವಿಂದಲೋಚನೆ ಈಕೆ ದೇವಕಿ |
ಬಂದು ರೇವತಿ ಮಳಯ ವಿಷಯದ ಭದ್ರಿಳದವೇಶ್ಯ ||
ಎಂದೆನಿಸುವ ಸುದೃಷ್ಟಿಗವಳೊಲ | ವಿಂದಗಳಕೆಯೆನಿಪ್ಪ ವಧುವೆನೆ |
ನಂದಳಾ ಬಲದೇವನಾದನು ಶಂಖಚರ ಸುರನು || ೮೯ ||

ಮುನ್ನ ತಪಗೈದರುವರುಂ ಸಂ | ಪನ್ನ ಸಮಾಧಿಯಲಿ ಮುಡುಪಿಯೆ |
ಉನ್ನತದ ಸೌಖ್ಯದ ಮಹಾ ಶುಕ್ಲದಲಿ ಹದಿನಾರು ||
ಚೆನ್ನ ಕಡಲಾಯುವನು ತೀರ್ಚೆಯೆ | ಸನ್ನುತೆಯ ನೆರೆ ಮೂರು ಸೂಳೊಳು |
ಬನ್ನರಮಣಿಗಳಾಗಿ ನಿಮಗುದಯಿಸುವರವರೆಂದ || ೯೦ ||

ಚರಮ ದೇಹಿಗಳವರೆನಿಪುದನು | ಸುರಪನರಿದಾ ಜ್ಞಾಪಿಸಲು ತಾ |
ನಿರದೆ ಬಂದಾ ನೈಗಮಾಮರನೈದೆ ಶಿಶುಗಳನು ||
ಹರದನಂಗನೆ ಗಳಿಕೆಯೆಂಬಾ | ತರುಣಿಗಿತ್ತೊಡೆ ನಡಪುತಿಹಳಾ |
ಸುರನು ಮಾಯಾಶಿಶುಗಳನು ದೇವಕಿಯಲಿರಿಸುವನು || ೬೧ ||

ಮಸಗಿ ಕಂಸನುಕೊಲುವ ಮಾಯಾ | ಶಿಶುವ ಪಾತಕನಿತ್ತಲತ್ತಲು |
ಮಿಸುಪ ನಿರ್ನಾಮಿಕನು ಹರಿವಿಕ್ರೀಡಿತವೆನಿಪ್ಪ ||
ಪೆಸರ ತಪದಿರುತಾಂ ಸ್ವಯಂಭುಕ | ವೆಸರ ಚಕ್ರಿಯ ವೈಭವವ ಕಂ |
ಡೊಸೆದು ಮುನಿಪ ನಿಧಾನಿಸಿದ ನಿಂತಕ್ಕೆ ತನಗೆಂದು || ೬೨ ||

ಮುಡುಪಿಯೆ ಮಹಾಶುಕ್ಲ ಕಲ್ಪದ | ಕಡಲಿನುಪಮಾಯುಷ್ಯ ಪದಿನಾ |
ರಡಗೆ ನಿರ್ನಾಮಿಕ ಚರಾಮರ ನಿಮ್ಮಗರ್ಭದೊಳು ||
ತೊಡಚಿ ಏಳೇ ತಿಂಗಳಿಗೆ ಈ | ಪೊಡವಿ ವಿಶ್ರುತನುದಯಿಸುವನು |
ಗ್ಗಡದ ಬಂಟಿನ ತುಂಟನಪ್ರತಿ ವೀರ್ಯನವನೆಂದ || ೬೩ ||

ಬೆಳೆವನತ್ತೊಂದೆಡೆಯಲಾತನು | ಬಳಿಕಲಾದಪನರ್ಧ ಚಕ್ರಿಯು |
ಕೊಲುವ ಪರಿ ಹುಸಿ ಕಂಸನಾತನನಾತನಿಂ ಕಂಸ ||
ಕೊಲಿಸಿ ಕೊಂಬನಿದಕ್ಕೆ ಸಂಶಯ | ದಳೆಯದಿರಿ ನೀವೆಂದು ಮುನಿಪತಿ |
ತಿಳುಹೆ ಮುನಿಪದಕೆರಗಿ ಬೀಳ್ಕೊಂಡವರು ಸುಖದಿರಲು || ೬೪ ||

|| ಅಂತು ಸಂಧಿ ೨೦ಕ್ಕಂ ಮಂಗಲಮಹಾ ||

## ಕೃಷ್ಣೋದಯ ಪರ್ವ (ಸಂಧಿ ೨೧)

**ಸಂಧಿ ೨೧**

ಅಂದು ದೇವಕಿಪಡೆಯೆ ಕೃಷ್ಣನು | ನಂದಗೋಪಿಯ ಮನೆಯ ಬೆಳೆವುತ |
ಬಂದ ಪೂತನಿ ಮುಖ್ಯರನು ಬಾಲ್ಯದಲಿ ಮರ್ದಿಸಿದ || ಪಲ್ಲ ||

ಕೇಳೆಲೇ ಮಾಗಧ ಧರಿತ್ರೀ | ಪಾಲದೇವಕಿ ಗರ್ಭದಳೆಯಲು |
ವ್ಯಾಳ ಕಂಸನು ಲೋಕರಂಜನೆಗುತ್ಸವವನೆಸಗಿ ||
ಬಾಲಕಿಗೆ……… | ಮೇಳದಿಂ ನವರತ್ನ ಖಚಿತವಿ |
ಶಾಲಸೂತಿಗೃಹವ ಸವೆಯಿಸಿ ಕರೆಸಿ ಯಿರಿಸಿದನು || ೧ ||

ತರುಣಿಯರು ಹಲಬರನು ಕಾದಿರ | ಲಿರಿಸಿಯಿರುತಿರೆ ಪೆತ್ತಳಾ ಸೌಂ |
ದರಿಯು ಜೀವಂಜಸೆ ಪೆಱೆಸೆ ಆ ಶಿಶುಗಲಮಳುಗಳ ||
ಭರದಿ ನೈಗಮದೇವ ಬಂದಾ | ದರದಿ ಮಾಯಾಶಿಶುಗಳನು ಸೈ |
ತಿರಿಸಿ ಚರಮಾಂಗರನು ಮುಂಪೇಳ್ದಲ್ಲಿಗವನೊಯಿದ || ೨ ||

ಇಲಿ ಉಲುಹುಗಳನರಿದು ಬೆಕ್ಕ | ವ್ವಳಿಸಿ ಬಹವೊಲು ಕಾಳುಕಾಳನೆ |
ಅಳುವ ಶಿಶುಗಳ ದನಿಯ ಕೇಳುತ ಬಂದು ಶಿಶುಗಳನು ||
ಖಳ ದುರಾತ್ಮಕ ಕಂಸ ತಾನಾ | ಗಳು (ಭರದಿಬಂ)ದತ್ತಲೊಯಿದತಿ |
ಮುಳಿದು ಶಿಲೆಯೊಳಸಗಸಗ ಒಯಿಲನು ಹೊಯಿದುಮಿಗೆ ಕೊಂದ || ೩ ||

ಮತ್ತಮೀಪರಿಯೆರಡು ಸೂಳನು | ಪೆತ್ತ ದೇವಕಿಯಾತ್ಮಭವರನು |
ಅತ್ತ ನೈಗಮ ದೇವನೊಯ್ಯಲು ಕೃತಕ ಶಿಶುಗಳನು ||
ಎತ್ತಿಕೊಂಡಾ ಕಂಸಕೊಂದನು | ಪುತ್ರನಳಿದಪರೆಂದು ದೇವಕಿ |
ಹೆತ್ತಮೊಟ್ಟೆಯ ಹೊಸದುಶೋಕಿಸಿ ಬಿದ್ದುಹೊರಳಿದಳು || ೪ ||

ಮುನಿನಿರೂಪದ ಬಲದಿ ತನ್ನಯ | ಮನವನೆತ್ತಾನುಂ ಬಲಿದು ತ |
ದ್ವನಿತೆಯರಲತಿಮುಕ್ತಕರ ವಚನವನು ಹುಸಿನೈದಿ ||
ಎನುತ ಕಂಸನು ಹರುಷದಿರಲಾ | ವನಜವದನೆಗೆ ಗರ್ಭ ಮೂಡಿತು ||
ಮುನಿವ ಕಂಸಗೆ ಮಿತ್ತು ಮೂಡಿದುದೆಂಬವೊಲು ಭರದಿ || ೫ ||

ಕಡುಮುಳಿದು ನಿಸ್ತ್ರಿಂಶ ಕಂಸನು | ಕುಡಿಯ ಮುಕ್ಕುವನೆಂಬ ತೆಱದಿಂ |
ಮಡದಿದೇವಕಿ ಬಯಸಿಮಂದಿಂಬಳವನನುತೇಜ ||
ಕೆಡುವುದೆಂಬುದನರುಪುವಂದದಿ | ಕಡುಗಿರಿಯ ಮುಗಿಲೇರಿ ಸುರಿದುದು |
ಬಡಹದಾ ಜೀವಂಜಸೆಯ ಕಣುನೀರೊಗುವ ತೆರದಿ || ೬ ||

ಭದ್ರಪದನಹನೆಂಬವೊಲು ತಾಂ | ಭದ್ರಪದವೊಂದಿರಲು ಕುವರನು |
ಕ್ಷುದ್ರರಿಗೆ ಲಯಕಾಲನೆಂಬವೊಲ್ಯೆದೆ ಕಾಲದೊಳು ||
ತದ್ರಿಪುವಿಗಷ್ಟಮದ ಶನಿಯೆನೆ | ರೌದ್ರಮಳೆಯೊಯ್ವಷ್ಟಮಿಯೊಳೆಸೆ |
ವರ್ಧಚಕ್ರಿಯು ತಾನೆನಿಪವೊಲರ್ಧ ರಾತ್ರಿಯಲಿ || ೭ ||

ವಿದಿತ ಶುಭರೋಹಿಣಿಯ ನಕ್ಷ | ತ್ರದೊಳು ಮುನ್ನವೆ ದೇವಕಿಯ ಗ |
ರ್ಭದಲಿ ನಿರ್ನಾಮಿಕಚರಾಮರನುದಯಿಸಿರಲಾಕೆ ||
ಪದುಳದೇಳೇ ತಿಂಗಳಿಗೆ ಸಸಿ | ವದನೆ ಪಡೆದಳು ಪುತ್ರನನು ಮೊಳ |
ಗಿದವು ಗಗನದೊಳಮರದುಂದುಭಿ ಮೊಳಗುಗಳು ಕೂಡೆ || ೮ ||

ಇಳೆ ತಮಾಲವ ರೋಹನಸ್ಥಳಿ | ಪೊಳೆವ ನೀಳಸುರತ್ನವನು ಕ |
ಜ್ಜಳವದೀಪಿಕೆ ಕಾಳರಾತ್ರಿ ಮಹಾತಮಮನಿರದೆ ||
ನಳಿನ ತುಂಬಿಯ ಮೃಗ ಮದಮ ಮೃಗಿ | ಜಲದಿ ವೇಗೆಯೆ ವಿಷವ ಪಡೆವಂ |
ತೆಳಸಿ ದೇವಕಿ ಕೃಷ್ಣನನು ಪಡೆದಳು ಜಗನ್ನುತನ || ೯ ||

ಪಡೆದು ಪತಿಗೆಂದಳು ಮೊದಲೆ ತಾಂ | ಪಡೆದ ಮಕ್ಕಳ ಕಾವು ತನ[ಕ್ಕೀ] |
ಗೊಡೆಯರಿಲ್ಲೆಂಬಂದವಾದುದು ಈ ಕುಮಾರಕನು ||
ಮಡಿಯದಂತೊಯ್ದಾರಿಗಾದೊಡೆ | ಕೊಡಿಮೆನಲು ವಸುದೇವನೃಪನಾ |
ನುಡಿವಿಡಿದು ಕುವರನೆ ನೆಗೆದುಕೊಂಡೋರ್ವನೊಯ್ಯುತಿರೆ || ೧೦ ||

ಏಕಕುಂಡಲನದನರಿತು ಸುವಿ | ವೇಕಿ ಬೆನ್ನನೆ ಬಂದೂ ತಮ್ಮಂ |
ಗೇಕಛತ್ರದರಾಜ್ಯವೆಂಬವೊಲ್ಕೈದೆ ಕೊಡೆವಿಡಿದು ||
ಆಕಡೆಗೆ ಹೋಗುತಿರೆ ಗೋಪುರ | ದಾಕದವು ಕಡುಬಲಿದಿರಲು ನಿ |
ರ್ವ್ಯಾಕುಲರಿಗಾಕುಲತೆ ತೋರಿದುದರಸ ಕೇಳೆಂದ || ೧೧ ||

ಚಿಂತೆ ನಿಮಗೇಕಾನಿರಲ್ಕೆಂ | ಬಂತೆ ಪುರುಷೋತ್ತಮನುದಾತ್ತನು |
ಸೀಂತನಾಗೋಪುರದೊಳಸಿ ಪಂಜರದ ನಡವಿರ್ದು ||
ಸ್ವಾಂತ ಕದಡಿರ್ದುಗ್ರಸೇನನು | ತಾಂ ತಿಳಿಯನೀ ಇರುಳೊಳೀ ಎಡೆ |
ಸೀಂತವನ ದೆಸೆಯಿಂದ ಬಿಡುವುದು ತನ್ನ ಬಂಧನವು || ೧೨ ||

ಎಂದು ಮಂಗಳ ವಚನದಲಿ ಆ | ಕಂದನನು ಹರಿಸಿದೊಡೆ ತನೃಪ |
ರಂದವನು ಬಗೆಗೊಂಬ ಪದದೊಳಗಾಕುಮಾರಕನ ||
ಒಂದೆ ಉಂಗುಟ ತಾಗೆ ಪಡಿಭೋ | ರೆಂದು ಬೀಯಗವುಳಿದು ತೆರೆದುದು |
ಸಂದ ಸುಜನಗೆ ಸಗ್ಗವಡಿದೆರೆವಂತೆ ಪುಣ್ಯದಲಿ || ೧೩ ||

ಬಾಗಿಲನು ಪೊರವಟ್ಟುಗಮನೋ | ದ್ಯೋಗಿಗಳು ಕಿರಿದಂತರವನಿರೆ |
ಪೋಗೆ ಕುವರನ ಪುಣ್ಯದಿಂ ಮಳೆ ಬೆಳಗೆ ಮಿಂಚುಗಳೆ ||
ಮೇಗೆ ಕೈದೀವಿಗೆಯ ಪಿಡಿದವೊ | ಲಾಗೆ ಕಡುಗತ್ತಲೆಯೊಳಗೆ ಆ |
ಭಾಗಧೇಯರು ನಡೆವ ಸಮಯದಲರಸ ಕೇಳೆಂದ || ೧೪ ||

ಎರಡು ಕೊಂಬಿನ ತುದಿಗಳಲಿತಾ | ನೆರಡು ರವಿಬಿಂಬಗಳನಿರಿಸಿದ |
ಪರಿಯ ಪಂಜನು ಹೊತ್ತು ಬೆಳಗುತಲವನ ಪುಣ್ಯವದೆ ||
ಪಿರಿಯ ವೃಷಭಾಕಾರದಲಿ ಬಂ | ದಿರದೆ ಪಥವನು ತೋರಿ ನಡೆವು |
ತ್ತಿರಲು ಬೆಂಬಳಿಯೆಯಿಂದುತಿದ್ದರು ಭೂಪ ಕೇಳೆಂದ || ೧೫ ||

ಕರಿಮುಗಿಲ ಪೇರ್ವಳೆಯೊ ಅಂಜನ | ಗಿರಿ ಕರಗಿ ಪರಿವಿರವೊ ಆ ದಿ |
ಕ್ಕರಿ ಮದಾಂಬುವೆವುಕ್ಕಿ ಪರಿದುದು ಗಗನವೆಂಬ ಮೃಗ ||
ಸುರಿದ ಕತ್ತುರಿದೊರೆಯೊ ಬಗೆಗ | ಚ್ಚರಿಯೆನಿಸಿ ನೆರೆಬಂದು ಮಿಗೆ ಭೋ |
ರ್ಗರೆಯುತಿರ್ದುದು ಮುಂದೆ ಯಮುನಾನದಿಯು ಗುರುವಾಗಿ || ೧೬ ||

ಬಂದುದೇ ವಿಘ್ನದ ಪರಂಪರೆ | ಯೆಂದು ನೆನೆವನಿತರೊಳು ಬಸವನು |
ಮುಂದೆ ಪುಗೆ ಪುರುಷೋತ್ತಮನ ಪುಣ್ಯದಲಿ ಕಾಳಿಂದಿ ||
ನಿಂದುದಿಬ್ಬಗೆಯಾಗಿ ಜಲಚರ | ವೃಂದವತಿ ಭಯವಶದಲಡಗಿದ |
ವಂದು ಹರಿ ವಸುದೇವರಾಚೆಯ ತಡಿಯನೈದಿದರು || ೧೭ ||

ಮಗನ ಪುಣ್ಯದ ದೆಸೆಯಿನಂದಾ | [ಜಗದೊಡೆಯನಾ] ನಿರೂಪವನು ಈ |
ಮಗಗೆ ಹೇಳುತ ಮೆಚ್ಚುತಾ ವಸುದೇವ ವಿಭುವಲ್ಲಿ ||
ನೆಗೆದ ಬನದಲಿ ಕೃಷ್ಣಯಕ್ಷಿಯ | ಸೊಗಯಿಸುವ ಗುಡಿಯೈದು ವನಿತರೊ |
ಳಗಲಿ ಹೋದುದದೃಶ್ಯದಿಂದಾ ಬಂದ ಬಲಬಸವ || ೧೮ ||

ಅದರ ಮುಂದೊಂದಂತರದಲಿ | ಪ್ಪುದು ನೆರೆದು ತುರುಪಟ್ಟ ಅದರೊಳು |
ವಿದಿತನಾ ಗೋಪರೊಳು ಪೆಂಪಿನ ನಂದಗೋಪಾಖ್ಯ ||
ಸುದತಿಯೆಸೆವ ಯಶೋಧೆಯಾತನ | ಮದವಳಿಗೆ ಸುಖದಿಂದಿರುತ ಬೇ |
ಡಿದರು ಪುತ್ರನನಾ ವನದೊಳಿಹ ಕೃಷ್ಣಯಕ್ಷಿಯನು || ೧೯ ||

ಹೆತ್ತಳಾ ವಧು ಹೆಣ್ಣ ಮಗಳನು | ಪುತ್ರನನು ಬೇಡಿದೊಡೆ ದೇವತೆ |
ಇತ್ತಳೇ ಹೆಟ್ಟುಗೆಯನಾಕೆಗೆ ಕೊಟ್ಟುಬಾಯೆನಲು ||
ಹೆತ್ತ ಶಿಶುವನು ಮೊಱದೊಳೊಱಗಿಸಿ | ಎತ್ತಿಕೊಂಡಾನಂದ ದೇವತೆ |
ಯತ್ತ ಬಂದನು ಮತ್ತದೋರ್ವನು ವೆರಸಿ ಆಯಿರಳು || ೨೦ ||

ಬಂದು ನಂದನು ಶಿಶುವ ದೇವಿಯ | ಮಂದಿರದ ಮುಂದಿಳುಹಿ ದೇವತೆ |
ಕಂದನನು ಬೇಡಿದಡೆ ಕೊಡುವರೆ ನಮಗೆ ಈ ಮಗಳ ||
ಅಂದಿದಕೆನಾ ಹರಸಿಕೊಂಡೆನೆ | ಕಂದನನು ಕೊಡುವಡೆಕೊಡಲ್ಲದ |
ಡಿಂದು ನೀನದನೊಪ್ಪುಗೊಳ್ಳೆಂದಿರಿಸಿ ಮಗಳಿದನು || ೨೧ ||

ಅನಿತಱೊಳು ವಸುದೇವ ಹಲಧರ | ವಿನುತ ಶಿಶುವನು ಸಲಹಲೀತನು |
ಎನುತಲಾಳೋಚಿಸಿಯೆ ಬಲನಾನಂದನಾತ್ಮಜೆಯ ||
ಅನುನಯದಿ ನೆಗೆಕೊಳಲು ವಸುದೇ | ವನು ಮೊಱದಲೊಱಗಿಸಿದನೀ ಕಂ |
ದನನು ಯಕ್ಷಿಯೆ ಕರೆದವೊಲು ಗೋಪನನು ಬರಹೇಳೆ || ೨೨ ||

ಹೆಟ್ಟುಗೆಯನೀನೊಲ್ಲೆನೆಂದರೆ | ಕೊಟ್ಟೆನೈ ನಿನಗೆಲೆಮಗನೆ ಕಡು |
ದಿಟ್ಟನೆನಿಸುವ ಮಗನ ನೀನೊಯ್ ಹಾಲು ಬೆಣ್ಣೆಯನು ||
ಕೊಟ್ಟು ಸಲಹೆನೆ ಕೇಳಿ ಹರುಷಂ | ಬಟ್ಟು ನೀಲದ ಪುತ್ಥಳಿಯ ದೊರೆ |
ವಟ್ಟ ಶಿಶುವನು ಕಂಡು ನಲಿವುತ ದೇವಿಗೆಬಿಗಿದನು || ೧೩ ||

ತನುಜನನು ನೆಗೆಕೊಂಡು ತನ್ನಯ | ಮನೆಗೆ ಬಂದು ಯಶೋಧೆ ಕೇಳೌ |
ನನಗೆ ದೇವತೆ ಪುಣ್ಯದಿಂ ಪ್ರತ್ಯಕ್ಷದಲಿ ಕರೆದು |
ತನಯನನು ಕೊಟ್ಟಳು ನಿರೀಕ್ಷಿಸು | ಎನುತ ಕೊಡೆ ನೆಗೆಕೊಂಡು ಮೊಲೆ ಜು |
ಮ್ಮನೆ ತೊರೆಯೆ ಹರುಷಾಂಬುಧಿಯಲೋಲಾಡಿದಪರವರು || ೧೪ ||

ಮೊಲೆಯಳೂಡುವಳೊಮ್ಮೆನಳಿತೋ | ಳಲಿ ಒರಗಿಸುವಳೊರ್ಮೆ ಮುದ್ದಿಸಿ |
ಚೆಲುವ ಮಗನನು ತೊಟ್ಟಿಲಲಿ ತೂಗುವಳದೋರೊರ್ಮೆ ||
ನಳಿನಲೋಚನ ಕಂದ ಜೋಜೋ | ಚೆಲುವ ಚೆನ್ನಿಗ ಕಬುವೆ ಜೋಜೋ |
ಅಳಿವಿರುಚಿತನು ಬೊಪ್ಪ ಜೋಜೋ ಎಂದು ಪಾಡಿದಳು || ೧೫ ||

ನೆರೆದು ಬಂದಾ ಗೋಪಿಯರು ತಾಮ | ದ ಸ್ಮರನ ತಂದೆಯೆನೆತ್ತಿ ಕೊಳುವತಿ |
ಹರುಷದಲಿ ಮೈದೊಡೆವ ಮೈದೊಳೆದೈದೆತೂಪಿರಿವ ||
ಉರಿವ ಸೊಡರ್ವಕ್ಕಿನ ತಿಲಕವನು | ವಿರಚಿಸುವ ಮೃದುವಸನದಲಿ ಸಿಂ |
ಗರಿಪ ಮುದ್ದಿಪ ಪಾಡಿತೂಗಿಪ ನಲಿವಿನಿಂದಿಹರು || ೧೬ ||

ನೋಡಿ ದಣಿಯರು ಗೋಪಿಯರು ತಾಂ | ನೂಡಿ ದಣಿಯರು ಗೋಪಿಯರು ಕೊಂ |
ಡಾಡಿ ದಣಿಯರು ಬಾಲಕೃಷ್ಣನ ಮುದ್ದುಗಯತವನು ||
ಬೇಡಿ ದಣಿಯರು ಮೆಲ್ಲನರೆ ಮುಂ | ದಾಡಿ ದಣಿಯರು ಬಾಯೆನುತ ಕೈ |
ನೀಡಿ ದಣಿಯರು ಪಡೆದವರ ಪುಣ್ಯವನದೇನೆಂಬೆ || ೧೭ ||

ಅಂದಿನಾ ಗಂಡರೊಳಗಾನಕ | ದುಂದುಭಿಯೆ ಕಡುಚೆಲುವನಾತನ |
ಕಂದನನೆ ಕಂದರ್ಪದೇವನ ಹಡೆವ ತಂದೆಯೆನೆ ||
ನಂದ ನಂದನನಂದವನು ಏ | ನೆಂದು ಪೇಳ್ವುದೊ ಗೋಪಕನ್ಯಾ |
ವೃಂದವಂಗಜ ಸುಖವನುಂಬುದು ಮುದ್ದಿಸುವನೆನವದಿ || ೧೮ ||

ಕೃಷ್ಣಯಕ್ಷಿಯು ಕೊಟ್ಟ ಕತದಿಂ | ಕೃಷ್ಣವರ್ಣವನಾಂತ ದೆಸೆಯಿಂ |
ಕೃಷ್ಣನೆಂದಾ ನಂದನಾನಂದದಲಿ ಪೆಸರಿಡಲು |
ಕೃಷ್ಣನಿರುತಿರಲಿತ್ತಲಿತ್ತಲು | ಕೃಷ್ಣ ಪಿತೃಬಲನಿರದೆ ನಂದನು |
ಕೃಷ್ಣಯಕ್ಷಿಗೆ ಕೊಟ್ಟ ಮಗಳನು ಕೊಂಡು ಮರಳಿದರು || ೧೯ ||

ಬಂದು ದೇವಕಿಗಱುಪಿ ಶಿಶುವನು | ತಂದು ಕೊಡೆಪಡೆದಾಕೆಯಿರೆ ತಾ |
ನಂದು ದೇವಕಿ ಪೆತ್ತಳೆಂಬುದ ಕೇಳಿ ಖಳಕಂಸ ||
ಬಂದು ಕೂಸನು ನೋಡಿ ಯೀಕೆಯ | ತಂದವನ ದೆಸೆಯಿಂದ ಬಾಧೆಯು |
ಬಂದಪುದು ತನಗೆಂದಳಿಕಿ ನೆಗ್ಗೊತ್ತಿದನು ಮೂಗ || ೩೦ ||

ದುರುಳನವಳ ಕುರೂಪು ಮಾಡಿಯೆ | ಮರಳಿದನು ಮನೆಗತ್ತಲಿತ್ತಾ |
ತರಳೆ ಬೆಳೆದು ಮಹಾಮುನೀಶರನೊಂದಿ ಹಿಂಭವವ |
ಗುರುಗಳಿಂ ಬೆಸಗೊಂಡು ತಿಳಿದತಿ | ವಿರತೆಯಾಗಿಯೆ ನಿಖಿಲ ತೀರ್ಥವ |
ನಿರದೆ ವಂದಿಸಿ ಬಂದು ವಿಂದ್ಯಾಚಲದೊಳಚಲಮತಿ || ೩೧ ||

ನಿಂದು ಭಾವದಲಖಿಲ ನೋಂಪಿಯ | ನಂದು ನೋಂತಿರೆ ಲುಬ್ಧಕರು ಪರಿ |
ತಂದು ಭಕ್ತಿಯಲೆರಗಿ ವನದೇವತೆಯೆನುತ ಭಜಿಸಿ ||
ಚಂದದಿಂ ಪೂಜಿಸಿದರಾಕೆಯ | ತಿಂದುದಲ್ಲಿಯೆ ಪುಲಿ ಶುಭಾವನೆ |
ಯಿಂದ ಮಡಿದಳು ದೇವನಾದಳು ಮೊದಲ ಸಗ್ಗದಲಿ || ೩೨ ||

ಅವಳ ಮೂಱುಂಗುಲಿಗಳುಳಿದಿರ | ಲವರದವನು ಪೂಜಿಸುತಿರಲು ಬಳಿ |
ಕವು ಕೊರಗೆ ಮುಕ್ಕವಲದಕ್ಕನುನಿರಿಸಿ ಲುಬ್ಧಕರು ||
ತವತವಗೆ ಪೂಜಿಸುವರಂದಿಂ | ವ್ಯವಹರಿಪುದಾ ಭ್ರಾಂತಿಯೆಳೆಯಲೆ |
ತವಕಿ ಕಂಸನು ಸುಖದಲಿರುತಿರಲರಸ ಕೇಳೆಂದ || ೩೩ ||

ಥಳಥಳನೆ ಹಗಲುಳುಕಿ ಬೀಳ್ದವು | ಫಲಫಲನೆ ಮುಗಿಲಂದಲೆತ್ತರ |
ಮಳೆಸುರಿದ ವೆಣ್ದೆಸೆಗೆ ಹೊಗೆದ ಉಡುಗಳ ಬಳಗವಲ್ಲಿ ||
ಸುಳಿದವೆದ್ದವು ಧೂಮಕೇತು ಗ | ಳಿಳೆ ನಡುಗಿದುದು ಮಧುರೆಯರಮನೆ |
ಯೊಳಗೆ ನೆಲಬಾಯ್ದೆಗೆದುದಡಿಗೆಡೆದುದು ಪಿರಿಯಮಾಡ || ೩೪ ||

ಸುರಧನುಗಳಾಗಸದಲಲ್ಲಿಯು | ತರತರದಿ ಮೂಡಿದವು ಕಂಸನ |
ಕರದ ಖಂಡೆಯ ಮುಱಿದು ಬಿದ್ದುದು ದೇವತಾ ಪ್ರತುಮೆ ||
ಸುರಿದವಶ್ರು ಜಲಂಗಳನು ಭೀ | ಕರತರ ಸ್ವರ ದೇವತಾ ಮಂ |
ದಿರದೊಳಾದುದು ಪುರಜನದ ಮನ ಬೆದರು ವಂದದಲಿ || ೩೫ ||

ವನಿತೆ ಜೀವಂಜಸೆಯು ಕಡುಗೆಡು | ನಗಸುಗಂಡಳವಳಿದು ಬೆಂಬಿ |
ದ್ದನಿತರೊಳಗಾ ಕಂಸನತಿ ಕಷ್ಟದ ಕನಸುಗಂಡು ||
ಮನವಳುಕಿ ಮುರಿದೇಳಲೊಡನಾ | ಕನಸನಾ ವಧು ಹೇಳಲುಮ್ಮಳ |
ಜನಿಸಿ ನೇಮಿತ್ತಿಕ ವರುಣನು ಕರೆದು ಕೇಳಿದನು || ೩೬ ||

ಕಂಡ ಕನಸು ತನ್ನ ಪುರದಲಿ | ತೊಂಡುವಲಿ ಉತ್ಪಾತವನುಮಂ |
ಕಂಡಿದೇನದ್ಭುತವೆನುತ ದೈವಜ್ಞನಾ ವರುಣ ||
ಕಂಡನಾಗಳೆ ಕಣ್ಣ ನೀರಿನ | ಹೊಂಡವನು ಹಸರಿಸುತ ನಿನಗು |
ದ್ದಂಡವೈರಿಯು ಪುಟ್ಟಿ ಬೆಳೆದಪನತ್ತಲೊಂದೆಡೆಯ || ೩೭ ||

ಎಂದೊಡಾತನ ಕಳುಹಿ ಆವೆಡೆ | ಯೊಂದಿಹನೊ ಹಗೆಯೆಂಬುದಱಿದೊಡೆ ||
ಮಿಂದು ಮಡಿಯುಟ್ಟೊಱಗಿದನು ಮಿಗೆ ದರ್ಭಶಯ್ಯೆಯಲಿ ||
ಬಂದವಾಹಿಂದನಭವದಲೊಲಿ | ತಂದ ದೇವತೆಯೆಂಟು ಬೆಸನೇ |
ನೆಂದು ಕಂಸನ ಕೇಳಿದವು ಭೂಪಾಲ ಕೇಳೆಂದ || ೩೮ ||

ದೇವಕಿಯ ಮಗನೆವಗೆ ಹಗೆಯವ | ನಾ ವೆಡೆಯಲಿಹನೆಂಬ ತೆಱನನು |
ನೀವಱಿಸಿ ಆತನನು ಕೊಲಿಯೆಂದೆಯೆ ನೇಮಿಸಲು ||
ಆವಗಹನವು ನರಹುಳುವ ಕೊಲ | ಲಾವುಮೆಲ್ಲರು ಬೇಕೆಯೆಂದಾ |
ದೇವತೆಗಳೆನೆ ಪೋಪೆನೋರ್ವಳೆಯೆಂದು ಪೂತನಿಯು || ೩೯ ||

ವಿಷವ ಮೊಲೆಗಳಿಗೂಡಿ ತನ್ನ | ವಿಸುವರೂಹನು ಮರಸಿ ಬಂದಾ |
ಬಿಸಜವದನೆ ಯಶೋಧೆ ನೀರಿಗೆ ಹೋದ ವೇಳೆಯಲಿ ||
ಹಸುಳೆ ಕೃಷ್ಣನು ತೊಟ್ಟಿಲೊಳಗಿರೆ | ನುಸುಳಿ ನಿಂದಾ ತಾಯ ರೂಪನು |
ಸಸಿನೆ ತಲೆದೊಳ ಪೊಕ್ಕು ಕಂದನೆ ಹಸಿದೆ ಬಾಯೆಂದು || ೪೦ ||

ಎತ್ತಿಕೊಂಡಾ ಮೊಲೆಯನೂಡಲು | ಒತ್ತಿಮೊಲೆಯುಂ ಬಂದದಲಿ ಕೆ |
ನ್ತೆತರನು ಹರಿ ಹೀರೆ ಅಸುವಳಿವಂತೆ ಮೊರೆಯಿಟ್ಟು ||
ಸತ್ತೆನಯ್ಯೋ ಎಂದು ಕೈಯಿಂ | ದೊತ್ತಿ ಬಾಯನು ಬಿಡಿಸಿ ಜಿಗುಳೆಯು |
ಪತ್ತಿದಂತಿರೆ ಬೆದರಿ ಪೂತನಿ ಪೋಯ್ತುದೃಶ್ಯದಲಿ || ೪೧ ||

ನೆಱೆ ವಿಭಂಗಜ್ಞಾನದಿ ಮು | ನ್ನಱಿದ ಪೂತನಿಯಂತೆ ಕೃಷ್ಣನು |
ಮೆಱೆವ ನಂದನ ಮನೆಯಲಿಹನೆಂದರಿದು ಮಾಕಾಳಿ ||
ನೆಱೆದ ಕಾಕಾಕಾರದಿಂ ಬಂ | ದೆಱಗೆ ಹೊಱ ಜಗಲಿಯಲಿ ಮಲಗಿದ |
ಕಿಱುಳೆ ಹೊಡದೊತ್ತಿದನು ನಖಮುಖ ಪಕ್ಕವೆದೆಮುರಿಯೆ || ೪೨ ||

ಮೊಱೆಯಿಡುವ ಬಿಱೆತೋಡಿತದು ಆ | ಕಿಱುಳೆ ಮೆಲ್ಲನೆ ತೆವಳಿ ಆಡುವ |
ಕಿಱುವರೆಯದಂದಂಗಳದೊಳಾಡುತಲು ಹರಿಯಿರಲು ||
ನೆಱೆ ಪೃಥುಳೆ ಎಂಬ ಸುರ ದೇವತೆ | ಅಱಿದು ಶಕಟಾಕಾರದಲಿ ಮೈ |

ಯಱಿಯದುಱೆ ಪರಿತಂದು ದೀಕ್ಷಿಸಿ | ಒದೆದನಾ ಕೃಷ್ಣ || ೪೩ ||

ಒದೆದಡದು ಹರಿ ಹಂಜೆನಲು ನು | ಗ್ಗಿದುದು ರಥವುಂ ಕಂಸನೃಪನು |
ರ್ವಿದ ಮನೋರಥವುಂ ಬಳಿಕದು ಹೋಗೆ ಭಯವಶ ದಿ ||
ಅದಟನೀ ಮಗನೆಂದು ವಿಸ್ಮಯ | ವೊದವಿ ಬಂದಾನಂದ ಗೋಪನು |
ಪದುಳದಲಿ ನೆಗೆದೊತ್ತಿ ಕೊಂಡೊಳಗೈದನಾ ಹರಿಯ || ೪೪ ||

ಗೋಪಿಕಂದನ ನೆತ್ತಿಕೊಂಡುಟೆ | ತೂಪಿಟೆದು ಸುಖದಲಿ ಕೆಲವು ದಿನ |
ವಾಪರಿಯಲಿರೆ ಬಂದಳಾ ಕೌಸಂಬಿಯೆಂಬಸುರೆ ||
ರೂಪಿನಿಂ ಬಲುಗೂಳಿಯಾಗಿಹ | ನೋಪರವದಿಂ ತಾಗೆ ಕೃಷ್ಣನು |
ಕೋಪದಿಂ ಕೊಂಬುಗಳ ಕಿತ್ತೊಡೆ ಬಡಿದು ತೆರಳಿಸಿದ || ೪೫ ||

ಬಿಡದೆ ಕೇಸರಿಯೆಂಬ ದೇವತೆ | ಕಡುವಿಗಡ ದುಷ್ಟಾಶ್ವರೂಪದಿ |
ಕಡೆಯಕಾಲದ ಸಿಡಿಲದನಿಯೆನೆ ನೆರೆಕೆರಳಿಬಂದು ||
ಪೊಡೆಯರಲನೊಡವಾಯೆ ಹಣೆಗ | ಣ್ಣೊಡೆಯೆ ತಿವಿದಡೆ ಕಾಟೆನೆತ್ತರ |
ಕೆಡೆದು ಬಿದ್ದೆದ್ದೋಡಿದುದು ಹರಿಯಧಟನೇನೆಂಬೆ || ೪೬ ||

ನೆರೆದು ತುಱು ಪಟ್ಟಿಯಪುಡಿದಗೋ | ವರು ಬಿಡದೆ ತುಱುಗಾತಿರ್ಯರು ಪೊಡೆ |
ಯರಲನಧಟನು ಕಂಡು ವಿಸ್ಮಯಗೊಳಲು ತಾಯ್ತುಂದೆ ||
ಹರುಷರಸದಲಿ ಮುಳುಗೆ ತನ್ನೊಡ | ವೆರಸಿ ಧೂಳಾಟಗಳನಾಡುವ |
ಸರಿವರೆಯದಾ ಗೋಪಕುವರರ ಕೂಡಿಕೊಂಡಲ್ಲಿ || ೪೭ ||

ಮನೆಮನೆಯನೂಳಪೊಕ್ಕು ಕೆನೆವಾ | ಲನು ಕಡೆದ ಬೆಣ್ಣೆಯನು ಸೆಳೆತಂ |
ದನುನಯದಿ ಕೊಡುವನು ಕೆಳೆಯರಿಗೆ ತಾನುಭುಂಜಿಸುವ ||
ಕನಲಿ ಗೋಪಿಯರಂಜಿಸಿದೊಡೊ | ಯ್ಯನೆಗನುತಲೋಡುವನು ಈಚೆಯ |
ಮನೆಯ ಹೋಗುವನು ಬಾಲಕೃಷ್ಣನದೊಂದು ಲೀಲೆಯಲಿ || ೪೮ ||

ಹಸುಳೆ ನೋಡಿವನಂಡೆಯೊಳಗಣ | ಹಸಿಯ ಹಾಲನು ಕುಡಿದವಳಗಣ |
ಬಿಸಿಯ ಹಾಲನು ಬೆಣ್ಣೆಸಹವೀಂಟಿದನು ನೆಲಹುಗಳ ||
ಮೊಸರನುಂಡನು ನಿನ್ನ ಕಂದನ | ಗಸಣಿ ಬಲುಹು ಯಶೋಧೆ ನೀನೂ |
ಡಿಸುವ ಮೊಲೆಯನೆಂದ್ಯೆದೆ ಗೋಪಿಯರೊದಟೆದರು ಬಂದು || ೪೯ ||

ಆರಿಗಕ್ಕಟ ಹುಟ್ಟೆ ತಾ ಬಳಿ | ಕಾರಿಗಿವ ಮುದ್ದಾಗಿ ಬಲುಹೊರಿ |
ಯೀರಿಯೀತನು ಬಂದು ಬಿಟ್ಟಾಬಸವನಾದನಲೆ ||
ಆರು ಬಾರಿಸಬಹುದು ನಿನ್ನ ಕು | ಮಾರಕನ ಲೂಟಿಯನು ನೀನೇ ವಿ |
ಚಾರಿಸೆಂದರು ನಂದಗೋಪಿಗೆ ಗೋಪವನಿತೆಯರು || ೫೦ ||

ಎಂದ ಮಾತಿಗೆ ಗೋಪಿಕೃಷ್ಣನ | ನಂದು ಕೋಪದಿ ಬೈದು ತೊಟ್ಟೆಳೆ |
ತಂದು ಕಡೆಗೋಲ್ವಳ್ಳಿಯಲಿ ಕೈಗಟ್ಟಿ ಕಂಬದಲಿ ||
ಬಂಧಿಸಿದಳಾ ತಾವರೆಯ ಭೂ | ಲೊಂದಱಿಂ ಕಲಭವನು ಬಂಧಿಸಿ |
ದಂದದಲಲಿ ತಾಯಾಜ್ಞೆಗೊಂದಱೆ ನಿಮಿಷವಲ್ಲಿರ್ದ || ೫೧ ||

ಮುಱಿದ ಕಂಬವ ಕೈಯ ಬಳ್ಳಿಯ | ಹಱಿದು ನಸುನಗುತೊಯ್ಯನೊಯ್ಯನೆ |
ಹೊಱಗೆ ಹೊಱವಟ್ಟಾಡುತಿಱಲರ್ಜುನೆಯೆನಿಪದೇವಿ ||
ನೆಱೆದಮಲು ಮತ್ತಿಯ ಮರದವೊಲು | ಕಿಱುಳೆ ಕೃಷ್ಣನನೌಕಿದೊಡೆ ಬೇ |
ರ್ಪಱಿಯೆ ಮರಮುಱಿಯೊದೆಯೆ ಓಡಿದಳಾಕೆ ಕಳವಳಿಸಿ || ೫೨ ||

ಬಾಲಕೃಷ್ಣನದೊಂದು ದಿನವಾ | ತಾಳ ಜಂಘಿನಿಯೆಂಬ ದೇವತೆ |
ತಾಳಮರಗಳ ತೆಱದಿ ಬಂದು ಫಲಂಗಳಿಂದಿಟ್ಟು ||
ಬಾಳಲಾಱದೆ ಹೋದಳೆನೆ ಕ | ಟ್ಬಾಳುಗಳ ದೇವನನು ಪುಣ್ಯವು |
ಮೇಳಿಸಿರಲಾರಳವೆ ಕೊಲುವೊಡೆ ಭೂಪ ಕೇಳೆಂದ || ೫೩ ||

ಬಡಿವನಲ್ಲಿಯ ಮಕ್ಕಳನು ತಲೆ | ಯೊಡೆವನರೆ ಬರಲವರ ತಾಯ್ದಿರು |
ಜಡಿದು ಜಂಕಿಸಿ ಪೊಡೆಯ ಬಂದೊಡೆ ಕಾಲುವಿಡಿವಂತೆ ||
ಅಡಿವಿಡಿದು ಪೊಡವಿಗೆ ಕೆಡಹಿತಾ | ಹಿಡಿದೆಳೆವನವರಳಲು ನಗುವನು |
ಕೆಡುಕನಾದನು ನಂದಗೋಪಿಯ ಕಂದನೆನಿಸಿದನು || ೫೪ ||

ನಂದಗೋಪಿಗೆ ಗೋಪಿಯರು ನೆಱ | ತಂದು ದೂಱನು ಹೇಳೆ ತುಂಟನು |
ಮಂದಿರದಲಿರೆ ದೂಱ ತಾರದೆ ಮಾಣೆನೆಂದಾಕೆ ||
ಕಂದನನು ಗೋವಳರ ಸಿಂಗರ | ತಂದದಲಿ ಸಿಂಗರಿಸಿ ತುಱುಗಾ |
ಯೆಂದು ಕಲುಹಲು ಕೃಷ್ಣಪೋದನದೊಂದುಲೀಲೆಯಲಿ || ೫೫ ||

ದನವ ಕಾವುತಲಡವಿಯಲಿ ಹಾ | ವನು ಹಿಡಿದು ತಹನೇಣೆನುತ ಹುಲಿ |
ಯನು ಹಿಡಿವ ಬೆಕ್ಕೆಂದು ಸಿಂಗವ ತಹನು ನಾಯೆಂದು ||
ವನಕರಿಗಳನು ಹಂದಿಗಳು ತಾ | ವೆನುತ ಹಿಡಿತಹನೆಲ್ಲ ಗೋವರ |
ತನುಜರೆದೆಗಿಡೆ ಕೃಷ್ಣನಾವನು ಕಾವನೀ ತೆಱದಿ || ೫೬ ||

ಒಂದು ದಿನವಾಗರ್ದಭಾಸುರೆ | ಯೆಂದೆನಿಪ ದೇವತೆ ಖರಸ್ವರ |
ದಿಂದ ಗರ್ಜಿಸಿ ಬಿಟ್ಟ ರಕ್ಕಸಗಣ್ಣಲಂಜಿಸುತ ||
ಬಂದು ಕತ್ತೆಯ ರೂಪಿನಿಂ ಪರಿ | ತಂದೊಡೋಡಿತು ಗೋವಳರು ಗೋ |
ವೃಂದ ಬೆಚ್ಚಿತು ಗಿರಿಗಳದಿರಿದವದಱ ಬಿಱುದನಿಗೆ || ೫೭ ||

ಪರಿದು ಬಹ ಬರಕಿತ್ತರದೆ ಪೆ | ರ್ಮರಗಳೌ ಬುಡಗೆಡೆಯೆ ಬಾಯನು |
ತೆರೆದು ನಿಡುಹಲ್ಲುಗಳ ತೋರುತಲಿದಿರೆ ನಡೆತರಲು ||
ಹರಿಯದಟಱ ಬಿಙುವಾಯ್ಗೆ ತನ್ನಯ | ಕರವ ಸಂಧಿಸಿ ನಾರ ಸೀಳಿದ |
ಪರಿಯಲೊಳೆ ಸೀಳಿದನು ಕೃಷ್ಣನು ತೋಳ ಬಲುಹಿನಲಿ || ೫೮ ||

ಸಿಂಗ ವಿಕ್ರೀಡಿತ ತಪಸ್ಸನು | ಕಂಗೆಡದೆ ಮುಮ್ಮಾಡಿದದರಿಂ |
ತುಂಗ ವಿಕ್ರಮನಾದನೀ ದೇವಕಿಯ ಸುಕುಮಾರ ||
ಭಂಗ ಬಡುವನೆ ತವಗೆ ಪೆರನಾ | ವಂಗೆ ಮತ್ತಾ ಕುವರನಿಂದವೆ |
ಭಂಗವಾಂತಾ ದೇವತಾಷ್ಟಕವೊಂದುಗೂಡಿದವು || ೫೯ ||

ದುರುಳ ಕಂಸಗೆ ಹಿಂಭವದೊಳಾ | ವಿರದೆ ಬೆಸನೇನೆಂದು ಪೇಳ್ದೊಡೆ |
ಮರುಭವಕೆ ಬಂದುಪಕರಿಸಿಯೆನೆ ಮಾತಕೊಟ್ಟೆವಲ ||
ಮರುಳುಗಳ ನುಡಿ ಸತ್ಯವಲ್ಲಂ | ಬರನುಡಿಗೆ ಎಡೆಬುಡದೆ ನಾ |
ವೆಲ್ಲರು ನೆಱೆದು ದೂರದಲಿ ಇನ್ನೊಂದುಜ್ಜುಗವಗೈವ || ೬೦ ||

ಎಂದು ತಾವೆಲ್ಲರು [ಮೊಡನೆ] ಬಂ | ದೊಂದುದಿನ ಗೋವಿಂದನಾಗೋ |
ವೃಂದವನು ಗೋವರ್ಧನಾಚಲದೊತ್ತಿನಲಿ ತಙುಬಿ ||
ನಿಂದು ಮೇಯಿಸುತಿರಲು ಮಿಗೆ ಭೋ | ರೆಂದು ಪ್ರಳಯದ ಪೆರ್ಮಳೆಯನಿರ |
ದಂದು ಕೆಱೆದವು ಗೋವಳರು ಕಡುಬೆದಱಿತೇಂಕಾಡೆ || ೬೧ ||

ಹೊಡೆದಡಗದಿದೆ ಸಿಡಿಲು ಹೊಳೆಹೊಳೆ | ದಡಗದಿದೆ ಕಡುಮಿಂಚು ಭೋರೆನೆ |
ಹಿಡಿದ ಮಳೆಯೆಡೆಗಡಿಯದಿದೆ ಹೊನಲೆಲ್ಲಿ ನೋಡಿದಡೆ ||
ಕಡಲು ಕವಿತಹ ತೆಱದಿ ಬರುತಿದೆ | ಮಡಿದೆವೀ ತುಙುವಾವುಯೆಂದೆದೆ |
ಗೆಡುತ ಕೃಷ್ಣಗೆ ಬಿನ್ನವಿಸಿದರು ಕಡುಗೋವಳರು ಬಂದು || ೬೨ ||

ಕಳವಳಿಸದಿರಿಯೆನುತಲಾ ಗೋ | ವಳರನಾದೊಮ್ಮಳಿಸಿ ಬಹುಗೋ |
ಕುಲವನೊಗ್ಗುಳಿ ಮಾಡಿ ಗೋವರ್ಧನಗಿರಿಯನಂದು ||
ಘುಳಿಲನುಂಗುಟದಿಂದಮೀಂಟಿದ | ಹೊಳೆವ ಹರುಳನು ಮೀಂಟುವಂದದಿ |
ತಳುವದೆತ್ತಿದನಾಂತನೊಂದೇ ಬೆರಲಲಬುಜಾಕ್ಷ || ೬೩ ||

ಕರಿಕಲುಭವದು ಬೆಟ್ಟದಾವರೆ | ಯರಲನಶ್ರಮದೆತ್ತಿದಂದದಿ |
ಬೆರಳು ತುದಿಯಲಿ ಕೊಡೆವಿಡಿದ ಗೋವರ್ಧನಾದ್ರಿಯನು ||
ಮುರಮಥನ ತುರುಗಾದನಾಗಳು | ಸುರಿದರಾ ದೇವತೆಗಳತಿ ಭೀ |
ಕರದ ಕೆಂಡದ ಮಳೆಗಳನು ಭೂಪಾಲ ಕೇಳೆಂದ || ೬೪ ||

ಏಳುದಿನ ಪರಿಯಂತ ಕುಂದದೆ | ಖೂಳ ದೇವತೆಗಳು ಮುಕುಂದನ |
ತೋಳಬಲ ಹಱಿಯದೆಸುರಿದಪಾಷಾಣವೃಷ್ಟಿಯನು ||
ಭಾಳ ಲೋಚನಗಿವನನಳುಕಿಪೊ | ಡಾಳುತನ ವಿಲ್ಲೆಂದು ಹೋದವು |
ಹೇಳಿದವು ಕಂಸಂಗೆ ನಿನ್ನಯ ಹಗೆಯ ಗೆಲಲರಿದು || ೬೫ ||

ಎಂದು ಪೋದವವತ್ತಲಿತ್ತಲು | ಬಂದು ಬಾನೊಳು ನಿಂದು ಸುರರೊಲ |
ವಿಂದ ದುಂದುಭಿವೊಯ್ದು ಹೂಮಳೆಗಱೆದು ಹೊಗಳಿದರು ||
ಅಂದುನಂದನ ನಂದನನನ್ಯೆ | ತಂದು ನೋಡುವರೆಲ್ಲರುಂ ತಾ |
ವೊಂದೆ ಕೊರಳಲಿ ಕೀರ್ತಿಸಿದರಧಟರ ಶಿರೋಮಣಿಯ || ೬೬ |

ನಂದಗೋಪಯಶೋಧೆಗಳು ಪರಿ | ತಂದು ಕುವರನ ಭುಜವನೀಕ್ಷಿಸಿ |
ಬಂದು ಕೀರ್ತಿಪ ದೇವಮಾನವರುಲಿವ ನೆಱೆಕೇಳಿ ||
ಸಂದ ಸಂತಸದಂತ ವಾಂತರು | ಅಂದು ಗೋವರ್ಧನ ಗಿರಿಯನಿಳೆ |
ಗೊಂದು ಬೆರಟಿಯ ನಿಳುಹುವಂತಿಳುಹಿದನು ಮುರವೈರಿ || ೬೭ ||

ಭೂರಿಗೋವೃಂದವನು ಗೋಪಕು | ಮಾರರನು ಯಾದವರ ಬಂಟಿನ |
ಮೇರೆಯನು ಮಿಗೆ ಕಾದನಲ್ಲದೆ ತಱುವ ಕಾದವನೆ ||
ಹಾರ ಹೀರ ಪಟೀರ ತಾರಾ | ಕ್ಷೀರ ನೀರಾಕರ ಸದೃಶ ವಿ |
ಸ್ತಾರಕೀರ್ತಿಯನಾಂತನಾ ಸುಕವೀಂದ್ರ ಭೂಷಣನು || ೬೮ ||

ವರಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀ ಜಾತ ನವ ಮಧು |
ಕರ ವಿರಾಜಿತ ಸುಕವಿನಾಳ್ವ ವಿರಚಿತವುಮಪ್ಪ ||
ಪರಮನೇಮಿ ಜಿನೇಂದ್ರ ಪಾವನ | ಚರಿತೆಯೊಳು ನಾಲ್ಕನೆಯದಿದು ಬಂ |
ಧುರವೆನಿಪ ಕೃಷ್ಣೋದಯಾಹ್ವಯ ಪರ್ವ ವಿಭ್ರಮವು || ೬೯ ||

|| ಕೃಷ್ಣೋದಯ ಪರ್ವಕ್ಕಂ ಅಂತು ಸಂಧಿ ೨೧ಕ್ಕಂ ಮಂಗಲ ಮಹಾ ||

**ಸಂಧಿ ೧೧**

ಉರಗಶಯ್ಯೆಯನೇರಿ ಕನಕಾಂ | ಬುರುಹ ಕಾಳಿಂಗನ ಮುರಿದು ಮದ |
ಕರಿಯ ಚಾಣೂರನನು ಕಂಸನ ಕೊಂದನಾ ಕೃಷ್ಣ || ಪಲ್ಲ ||

ಕೇಳು ಶ್ರೇಣಿಕ ಮಂಡಲೇಶ್ವರ | ಹೇಳುವೆನು ನಾರಾಯಣನ ನಿಡು |
ದೋಳಸತ್ವ ಕೇಳಿ ಲೋಕವೆ ನೆಱೆದು ಕೀರ್ತಿಪುದು ||
ಬಾಲೆಯರು ಕಿವಿವೇಟವನು ಮಿಗೆ | ತಾಳಿದರು ದೇವಕಿಯ ಮನದೊಳು |
ಮೇಳಿಸಿತು ನಿಜಪುತ್ರನನು ಕಾಣ್ಬೊಂದು ಕಾತರವು || ೧ ||

ಬನದಲಿರ್ದಾ ನವಿಲು ಮೇಘದ | ದನಿಗೆ ಸಂತಸ ಬಡುವವೊಲು ನಿಜ |
ತನುಜನಧಟನು ಧರೆಯೆ ಪೊಗಳಲು ಕೇಳಿ ಸಂತಸವು ||
ಜನಿಸಿ ದೇವಕಿ ಪೂತ್ರನನು ತಾ | ನನುನಯದಿ ನೋಳ್ಪುಜ್ಜುಗವನೋ |
ಪನೊಳೊಡಂಬಡೆ ಪೇಳ್ದಳಹುದೆನಿಸಿದಳು ಹಲಧರನ || ೨ ||

ದೇವಕಿಯ ಬಲದೇವ ಸಹ ವಸು | ದೇವನೃಪ ನಿಜ ಬಲವೆರಸಿ ಆ |
ದೇವಕಿಗೆ ಗೋಮುಖಿಯ ನೋಂಪಿಯೆನಿಪ್ಪನೆವವಿಟ್ಟು ||
ತಾವ್ವೈದಿಯಾ ಕೃಷ್ಣಯಕ್ಷಿಯ | ದೇವಭವನದೊಳಿರ್ದು ನಂದನ |
ನಾವಹಿಲದಲಿ ಕರಸೆ ಬಂದೆರಗಿದನು ಹರುಷದಲಿ || ೩ ||

ತುಱುವನೆಲ್ಲವತರಿಸು ಇಲ್ಲಿಯೆ | ಅಱಬಕಱೆಯಲು ಬೇಹುದೆನಿತಾ |
ನೆಱಗಿಜೀಯೆನಲುಡುಗೊರೆಯನಿತ್ತಾತನನು ಕಳುಹಿ ||
ಎಱೆಯದಂದಿನ ರಾತ್ರಿಯನು ಸುಖ | ದೆಱಕದಲಿ ಜಾಗರವಿರಲು ಅ |
ತ್ತಱಸಿ ಶಾಲ್ಮಲಿದತ್ತೆಯಯ್ಯ ವಿಯಚ್ಚರಾಧಿಪನು || ೪ ||

ಮೊದಲೆ ಪೇಳ್ದಂಗಾರವೆಗಳನು | ವಿದಿತ ವಸುದೇವನ ಸುತ ನೀನ |
ಪ್ಪುದು ತನಗೆ ಕಡುಪೀಡೆಯೆಂಬಾದೇಶವುಳ್ಳದರಿಂ ||
ಚದುರನೈಮಿತ್ತಿಕನ ಮುಖದಲಿ | ಪದುಮನಾಭನುಯಿಹನೆಲೆಯದರಿ |
ದದಯದಿಂ ಕೊಲಲೆಂದರಿಷ್ಟನ ಕರೆದು ಬೆಸಸಿದನು || ೫ ||

ಬೆಸಸಿ ಕಳುಹಲು ಖಚರ ಮಂತ್ರಿಯು | ಬಸವನಾಕಾರದಲಿ ಬಂದ |
ರ್ವಿಸಿ ಮುಕುಂದನ ತಾಗೆ ಗೋಣ್ಮುರಿಯೊತ್ತಿಸದೆ ಬಡಿಯೆ ||

ಅಸುಗೆಡುತ ಮಾಯಾವಿಯೋಡಿದ | ನೊಸೆದುಗೋಪನು ಸತಿಸುತರು ಸಹ |
ವೆಸೆವ ತುರುವನು ನಡಸಿ ವಸುದೇವನ ಬಳಿಗೆ ತಂದ || ೬ ||

ಮೆರೆವ ಯಕ್ಷಿಯ ಮುಂದೆ ಅಱುಬನು | ಕರೆದರಾನಂದಾಶ್ರು ಕಣ್ಣಿಂ |
ಕರೆಯೆ ದೇವಕಿಗಾಗ ಗೋಪಕುಮಾರಕರು ವೆರಸಿ ||
ತರುವ ಹೊಡತಂದಂಬುಜಾಕ್ಷನ | ನರಿತು ಬಲವಸುದೇವ ದೇವಕಿ |
ತುರುಗಿ ಕುಳ್ಳಿರ್ದವರ ಕರಕೊಂಡರು ಸಮೀಪಕ್ಕೆ || ೭ ||

ದೇವಕಿಯ ಕೆಂಬೆಳಗು ಜೊನ್ನವ | ದಾವರಿಸೆ ಹಲಿಯೆಸೆದನಾಗಳು |
ದೇವಗಂಗಾಶ್ರೋತ ಮುಸುಕಿದ ನೀಲಶಿಖರಿವೊಲು ||
ಆ ವಿಭುಗಳಕ್ಷಿಗಳು ಹಸರಿಸಿ | ತೀವೆ ಕಾಳಿಂದಿಯೊಳು ತೋರುವ |
ತಾವರೆಗಳೆನಿಸಿದವು ಕೃಷ್ಣನ ದಿವ್ಯ ದೇಹದೊಳು || ೮ ||

ನಂದಗೋಪಗೆ ಗೋಪಿಗವರಾ | ನಂದದುಡಗೋಱೆಗೊಟ್ಟು ಇವನಾ |
ರೆಂದು ದೇವಕಿಯರಿಯದಂತೆ ಯಶೋಧೆಯನು ಕೇಳೆ ||
ಕಂದನೆನಗೆನೆ ನಿನ್ನ ಕಂದನೆ | ಕಂದನೆನಗಿವನೆಂದು ಹರುಷಾ |
ನಂದದಲಿ ಕೈವಿಡಿದು ತೆಗೆದಪ್ಪಿದಳು ಮಾಧವನ || ೯ ||

ತೊರೆದ ಮೊಲೆವಾಲಿಂದ ದೇವಕಿ | ಹರಿಗೆ ಮಜ್ಜನಗೊಳಿಸಿದೊಡೆ ಕಂ |
ಣರಿಯದೆಡೆ ಕರುಳರಿಯದೇ ಯೆಂಬಂತೆ ಪುಳಕವನು ||
ಹರಿತಳೆಯಲದ ಮರಸಲಾ ಹಲ | ಧರನು ಓಕುಳಿಯೆಂದು ಕೊಡವಾ |
ಲ್ಸುರಿದು ಗೋಪಯಶೋಧೆಯರ ಕಂಗಟ್ಟಿದನು ಚದುರಿಂ || ೧೦ ||

ಬಳಿಕ ನವರತ್ನಾಭರಣದಿಂ | ಹಳದಿ ವಸನವಿಲೇಪನದಿ ಪರಿ |
ಮಳಿಪ ಕುಸುಮದ ಬಲನು ಸಿಂಗರಮಾಡಿ ತೆಗೆದಪ್ಪಿ ||
ನಳಿನನಾಭನದೊಂದು ಜಾವವು | ಬಲನ ಪಿತನಾಲಿಂಗಿಸಿದನಾ |
ಲಲನೆ ಕಂದನ ಮತ್ತೆ ತಕ್ಕೆಯಲಿಟ್ಟು ಸುಖಿಸಿದಳು || ೧೧ ||

ಎಲೆ ಯಶೋಧೆಯೆ ನಿನ್ನ ಕಂದನ | ಸಲಹಿಕೊಳು ಲೇಸಾಗಿಯೆಂದರ |
ಗಿಳಿಯವೊಲು ದೇವಕಿಯ ಮಡಿಯಲೇನೆಂಬೆನೆಲೆದೇವಿ ||
ಸಲಹುವಳು ಈ ಕೃಷ್ಣಯಕ್ಷಿಯೆ | ಒಲಿದು ಕೊಟ್ಟಾ ಕಂದನೆಂದದ |
ನೆಲಸದಾಡಿದಗೀತಗಾದ ವಿಪತ್ತ ಕೇಳೆಂದು || ೧೨ ||

ಮೊಲೆಯನೂಡುವ ನೆವದಿ ರಕ್ಕಸಿ | ಕೊಲಲು ಬಂದರೆ ಕೊಂದನೀ ಶಿಶು |
ಮೊಲೆಯನುಂಡಾಕೆಯನು ಜಗಲಿಯಲೊರಲುವೊಂದು ||

ಬಲುಹೆನಿಸಿದಾ ಕಾಗೆಯೆರಗಲು | ಚಲಿಸದೆಡಗೈಯಲಿ ಹಿಡಿದು ಕೊಲೆ |
ಕೆಲದು ಮಗ್ಗಿತು ಮಗನು ಹರೆದಾಡುವ ಹರೆಯದಲಿ || ೧೩ ||

ಮೇಲುವಾದುದದೊಂದು ಭಂಡಿಯು | ಬಾಲನೊಡೆದೊಡೆ ಚೂರ್ಣವಾದುದು |
ಗೂಳಿಕೆಲವುತ ಹೊರಲು ಬರೆ ಮುಳಿದೊತ್ತಿದನೂ ಗೋಣ ||
ಭೀಳ ಹಯ ಗರ್ಜಿಸಿ ತುಳಿಯ ಬರೆ | ಕಾಳನೂರಿಗೆ ಕಳುಹಿದನು ಸತಿ |
ಕೇಳು ಮತ್ತಿಯ ಮರಗಳವುಕಲು ಕಿತ್ತು ಕೆಡಹಿದನು || ೧೪ ||

ತಾಯೆ ಕೇಳೌ ತಾಳಮರನದು | ಕಾಯಮಳೆಗರದಳುಕಿ ಹೋದುದು |
ಮಾಯದೀ ಮಗ ಹೊಲದೊಳಗೆ ತುರುಗಾವುತಿರಲೊಂದು ||
ಬಾಯ ಬಿಡುತಿದಿರಾದ ಕತ್ತೆಯ | ಸಾಯ ಬಡಿದನು ಕಲುಮಳೆಯಲೀ |
ಸಾಯದಂತಾ ಬೆಟ್ಟವನು ಕಿತ್ತೇಳು ದಿನ ಹಿಡಿದ || ೧೫ ||

ತುಱುವನೀಪರಿ ಕಾಯ್ವನೆಂದಾ | [ತೆ]ಱನನೆಲ್ಲವ ನಂದಗೋಪಿಯು |
ಮೆಱೆವದೇವಕಿಗಾಡೆ ಬಲವಸುದೇವಮಿಗೆ ಕೇಳಿ ||
ನೆಱೆವ ಮಧುಸೂದನನು ಸತ್ವದ | ನೆಱವಿಯನು ನೆಱೆಮೆಚ್ಚಿ ಕಂಸನ |
ಬಿಱುಬಿಗಂಜುವನಲ್ಲೆನುತ ದೇವಕಿಯು ನಂಬಿದಳು || ೧೬ ||

ಕಂದನಾನನ ಚಂದ್ರಮನದೊಲ | ವಿಂದ ದೇವಕಿ ನೋಡುತಿರೆ ಬಲು |
ಹಿಂದಲೀಕೆಯನಿತ್ತಲೆಳ ತಂದರು ಅವರ ಕಳುಹಿ ||
ಸಂದ ಮಧುರೆಯನೈದಿ ತಮ್ಮಯ | ಮಂದಿರದೊಳಿರುತಿದ್ದರತಿನಲ |
ವಿಂದಲನ್ನೆಗ ಮತ್ತೆಲೇ ಭೂಪಾಲ ಕೇಳೆಂದ || ೧೭ ||

ಪ್ರಣುತ ವಿಜಯಾರ್ಧಾಚಲದ ದ | ಕ್ಷಿಣದ ರಥನೂಪುರವನಾಳುವ |
ಗುಣನಿಧಾನ ಸುಕೇತು ಖಚರಾಧಿಪನವನ ರಾಣಿ ||
ಗಣಿಯಿ ಪಾಡೆ ಪೆಸರಿಂ ಸ್ವಯಂಪ್ರಭೆ | ಯಣಿಯರಂ ಸ್ತ್ರೀರೂಪ ಚಿಂತಾ |
ಮಣಿಯೆನಿಪಳಾ ಸತ್ಯಭಾಮೆ ಅವರ್ಗೆ ಸುಕುಮಾರಿ || ೧೮ ||

ಕಿಱುವರೆಯದಲಿ ಸತ್ಯಭಾಮೆಯ | ನೆಱೆಚೆಲುವ ಕಂಡಾಕೆಯಯ್ಯನು |
ಉಱುವ ಮಗಳಿಗೆ ಗಂಡನಾರಹನೆಂದು ಕೇಳದೊಡೆ ||
ಅಱಿದು ಸಂಭಿನ್ನಾಖ್ಯನೆನಿಸುವ | ಮೆಱೆವ ದೈವಜ್ಞನು ನುಡಿದನಿಂ |
ತರಿವುದೀ ಭರತ ತ್ರಿಖಂಡಾಧೀಶನಿವಳೋಪ || ೧೯ ||

ಎಂದೊಡಾತನ ನಾವಱಿವುದೆಂ | ತೆಂದೊಡೆಲೆ ಖಚರೇಶ ನಿನ್ನಯ |
ಮಂದಿರದೊಳುದ್ಭವಿಸಿ ದೇವಾದಿಷ್ಟಿತಿಗಳಾದ ||

ಸಂದ ಸರ್ಪನ ತಳ್ಪ ಶಾಂರ್ಙವಿ | ದೊಂದು ಚಾಪವು ಪಾಂಚಜನ್ಯವಿ |
ದೊಂದು ಶಂಖವಗುರುವುವಡೆದಿದೆ ರಾಯ ಕೇಳೆಂದ || ೨೦ ||

ಅವನೇಱಿವನುರಗ ಶಯ್ಯೆಯ | ನಾವನೇಱಿಪಶಾಂರ್ಙ ಚಾಪವ |
ನಾವನೋರ್ವನು ಪಾಂಚಜನ್ಯವನೆಯಿದೆ ಪೂರಿಸುವ ||
ಆ ವಿಭುವೆ ಈ ಸತ್ಯೆಗಾಣ್ಮನು | ದೇವ ಚಿತ್ತೈಸೆನಲು ಬಲ್ಲರ |
ದೇವನಾತನ ಕಳುಹಿ ಮಂತ್ರಿಯ ಕರೆಸಿಯಿಂತೆಂದ || ೨೧ ||

ಉರಗ ಶಯ್ಯಾದಿ ತ್ರಯವನಾ | ದರದಿ ಮಧುರೆಗೆ ಕಳುಹಿಸುವ ಈ |
ಪುರದೊಳಪ್ರತಿ ವಿಕ್ರಮಮನು ವಸುದೇವನಿಹನು ಗಡ ||
ಅರಸು ಕಂಸಗಡಲ್ಲಿ ಇವನಾ | ಳ್ದರಸ ನಿಲ್ಲದೊಡುಳಿದ ದೇಶಕೆ |
ಭರದ ಬಳಿಕಟ್ಟುವವೆನಲು ಬಹುದೆಂದನಾ ಮಂತ್ರಿ || ೨೨ ||

ಕಳುಹೆ ಬಂದಾ ಮಂತ್ರಿ ಮಧುರೆಗೆ | ತಳುವದೈದಿ ಜಿನೇಂದ್ರ ವಸತಿಯ |
ಕೆಲದ ಪಟ್ಟಾಶ್ರಯದೊಳೀ ಮೂರನು ಸಮಂತಿರಿಸಿ ||
ಘಳಿಲನಾ ಕಂಸಂಗರಿಪಲಾ | ಗಲೆ ನಿಕಿಳ ಪುರಜನವೆರಸಿ ಕಂ |
ಗೊಳುತಿಹನು ಸಾಧಿಸಿದೊಡೇಂ ಫಲವರುಣ ಹೇಳೆಂದ || ೨೩ ||

ಕೇಳಲಾ ದೈವಜ್ಞನೆಂದನು | ಕೇಳರಸ ಸಾಮಾನ್ಯದಲ್ಲೀ |
ವ್ಯಾಳ ಫಣಿತಲ್ಪವನು ಶಾಂರ್ಙವ ಪಾಂಚಜನ್ಯವನು |
ಆಳಿದವನೇ ಅರ್ಧಚಕ್ರಿಯು | ಬಾಳುವನು ಸಿದ್ಧೋಕ್ತಿಯಿದುವೆನೆ |
ಕೇಳಿ ಶಂಖಾಕುಳಿತ ಚಿತ್ತನು ಮನದೊಳಿಂತೆಂದ || ೨೪ ||

ಹಗೆಯನರಸುವೊಡಿದು ಉಪಾಯವು | ಬಗೆವರೆಂದೂರೂರ್ಗೆ ಸಲೆ ಪೆಂ |
ಪೊಗೆದ ಡಂಗುರ ಸಾರಿಸಲು ತುರುಪಟ್ಟಿಯಲಿ ಕೇಳಿ ||
ಮಿಗೆ ಪರಾಕ್ರಮಿ ಕೃಷ್ಣನಾ ಹೆ | ಚ್ಚುಗೆಯ ಡಂಗುರವನು ಪಿಡಿಯೆ ಭೋ |
ರಗೆ ಚರರು ಬಂದುರಪಿದರು ಕಂಸಂಗದೆಲ್ಲವನು || ೨೫ ||

ಎಂದೊಡಾಸ್ಥಾಯಕೆಯೊಳರಿದವ | ರೆಂದರಾತನ ಸತ್ವ ಸಾಹಸ |
ದಂದವನು ಆ ಪೂತನಿ ಪ್ರಮುಖೆಯರ ಶಿಶುತನದಿ ||
ಕೊಂದುದನು ಗೋವರ್ಧನಾದ್ರಿಯ | ನಂದು ಕಿತ್ತೆತ್ತಿದ ತೆಱನ ಖಚ |
ರೇಂದ್ರ ವಿಂಧ್ಯಾ ವೃಷಭವನು ತೂಳಿದ ಪರಾಕ್ರಮದ || ೨೬ ||

ಆತನೇರುಗುಮೇರಿಸುಗುಮೇ | ಮಾತೊ ಪೂರಿಸುಗವನೆನಲು ಸಂ |
ಜಾತ ಕೋಪದಿ ಕೆರಳಿ ಕಂಸನು ಕಾಣ್ಬೆವಲೆನಾಳೆ ||

ಆತನಧಟನೆನುತ್ತ ಬಳಿಕ ನಿ | ನೂತವಸ್ತುವ ತಂದ ಖಚರ |
ವ್ರಾತವನು ಕರೆದಿಂದಿರುಳು ನೀನಿಂತು ಗೈಯೆಂದ || ೧೭ ||

ಉರುಗಶಯ್ಯಾದಿಗಳನತ್ಯಾ | ದರದಲಾರಾಧಿಸಿಯೆನಲು ಆ |
ಪರಿಯಲವರಾರಾಧಿಸಿರೆ ಮರುವಗಲು ನೆರೆತಂದ ||
ಅರಸು ಮಕ್ಕಳು ವೆರಸಿಕಂಸನು | ಭರದಿ ಬಂದೀಕ್ಷಿಸಲು ಕಂಗಳ |
ನೆರಡು ಕೈಯಲ್ಲಿ ಮುಚ್ಚಿದರುನೇನೆಂಬೆನದ್ಭುತವ || ೧೮ ||

ಕಿಡಿಗಳನು ಕಂಗಳಲಿ ಕೆದರುತ | ಪೆಡೆಗಳನು ಸಾಸಿರವ ಹರಹುತ |
ಪೊಡವಿಯನು ಕೋಪದಲಿ ಹೊಡವುತಜಪಶಲಾಖೆಗಲ ||
ಪಡಿಯ ನಾಲಗೆಗಳನು ನೀಡುತ | ಬಿಡದೆ ಭುಸ್ಸೆನೆ ಪೂತ್ಕರಿಸುತಡಿ |
ಗಡಿಗೆ ಕೋಪಾಟೋಪದಲಿ ಭೀಕರಿಸುತಾ ಶಯ್ಯೆ || ೧೯ ||

ನೋಡಿದರಸುಗಳಂಜಿ ಹೊರಗ | ಣೋಡಿದರು ಕಂಸಂಗೆ ಬಂದುದು |
ಹೇಡಿತನವಾ ಮಂತ್ರವಾದಿಗಳೊತ್ತಿನಲಿ ನಿಂದು ||
ನೋಡಲಮ್ಮದ ಶಯ್ಯೆಯನು ಮೊಗ | ಬಾಡಿದೇರುವ ಕಲಿಯ ಕರೆಯೆಂ |
ದಾಡೆ ಗರುಡಧ್ವಜನು ಬಂದನದೊಂದು ಲೀಲೆಯಲಿ || ೨೦ ||

ಉರಿವುರಿವ ವಿಷವಗ್ನಿಗುದಕವ | ಸುರಿದವೊಲು ತಣಿದುದು ಫಣೀಂದ್ರನು |
ಗರುಡನನು ಕಂಡುರುಗನಂತಾದನು ಜಗಜ್ಜನವು ||
ಬೆರಳಿನಿದ್ದುದು ಮೂಗಿನಲಿ ತಾ | ನಿರದೆ ಲೆಪ್ಪದ ಹಾವನೇರುವ |
ಪರಿಯಲೇರಿದನೇರಿ ಜಯವಧು ತನ್ನ ನಿಡುದೋಳ || ೨೧ ||

ಉರಗಶಯ್ಯೆಯನೇರುತವೆ ಭೀ | ಕರಿಪ ಶಾರ್ಙ್ಗವನೆಡದ ಕೈಯಲಿ |
ಕರ ಮಿರುಗುವೈವಾಯ ಶಂಖವ ಬಲದಕೈಯಿಂದ ||
ಹರಿನೆಗಪಿಯೇರಿಸಿದನದನತಿ | ಭರದಲಿದ………….ಭೀ |
ಕರರವದ ಕೋಲಾಹಲವನೇನೆಂದು ಪೇಳುವೆನು || ೨೨ ||

ನರರು ನಡನಡನಡುಗಿದರು ಖೇ | ಚರರು ಬಾನೊಳು ತೇಲಿದರು ಆ |
ಸುರರು ಬೆದರಿ ಪಾತಾಳಕಿಳಿದರು ಆಲಿವರಳುಗಳ ||
ಪರಿಯಲಾತಾರಗೆ ಉದುರಿದವು | ಶರದಿ ಹಲವೊಂದಾದ ಪರ್ಯೋ |
ಧರಿಸಿದ ಪಾಂಚಜನ್ಯದ ಭೀಕರಸ್ವರದಿ || ೨೩ ||

ಹರಿಯನಾ ಸಮಯದೊಳಗಾ ಖೇ | ಚರನ ಮಂತ್ರಿಯು ಮೂರುವಿದ್ಯವ |
ಪಿರಿದು ರಕ್ಷಿಪ ಯಕ್ಷರುಂ ಕ್ರಮದಿಂದ ಪೂಜಿಸಿಯೆ ||

ಅರಸ ಕೇಳಾ ಸತ್ಯಭಾಮೆಗೆ | ಪುರುಷ ನೀನಾದೇಶ ಪುರುಷನು |
ಉರಗಶಯ್ಯಾದಿಗಳು ನಿನ್ನವಿವೆಂದನಾ ಮಂತ್ರಿ || ೩೪ ||

ಎಂದು ತನ್ನ ಪೊಳಲ್ಗೆ ಪೋದಪ | ನಂದು ಬಲವಸುದೇವನಾ ಗೋ |
ವಿಂದನಾ ಪುಣ್ಯ ಪ್ರಭಾವಕೆ ಸಂತಸಂಬಡಲು ||
ನಂದನಂದನನಲ್ಲದಾನಕ | ದುಂದುಭಿಯ ಮಗನೀತನೆಂದು ಮು |
ಕುಂದನಾಕಾರವನು ಭಾವಿಸಿ ನೋಡಿದನು ಕಂಸ || ೩೫ ||

ಇವನಧಟು ಪಿರಿದಾದಪುದು ಇ | ನ್ನಿವನನೀಗಳು ಭಂಜಿಸುವ ಕಾ |
ರ್ಯವನು ಕಾಣಲೆ ಬೇಹುದೆಂಬ ಕುಬುದ್ಧಿಯೆಣಿಸುತಿರೆ ||
ಪ್ರವರನಾ ಮಧುರೆಯನು ಪೊರಮ | ಟ್ಟವಯವದಿ ಪೋಗುತಿರೆ ಕೃಷ್ಣನ |
ನೆವೆಯಿಡದೆ ನೋಡುತ್ತ ಬೆನ್ನನೆ ಪೋದ ಬಲಭದ್ರ || ೩೬ ||

ಬಳಿಗಳುಹು ತೊಂದರ್ದಠಾರಿಯ | ಲೊಲಿದು ಕಂಸನ ಕಪಟ ತಂತ್ರವ |
ಬಲವ ನೆಚ್ಚಲಿವೇಳ್ದು ನಿನ್ನ ಕುಮಾರನೊಳು ತನಗೆ ||
ನೆಲೆವಡೆದುದತಿ ಮೋಹ ಹಿಂಭವ | ದಲಿ ಸುಮಿತ್ರನೊಯೇನೊಯೆನೆನೀ |
ನಲಘಭುಜವೆಂದಂದೆ ಕೇಳಿದನೆಂದನಾ ನಂದ || ೩೭ ||

ಇಳೆಯಲಾರುಂ ಪಿಡಿಯಲಂದವ | ಶಿಲೆಯ ಬಲುಗಂಬವನು ಬಲಗೈ |
ಯಲಿ ಪಿಡಿದು ರ್ತ್ನಿ ತಿರುಹಿ ಬಿಡೆಬೀಳೆ ನೆಲನಡುಗೆ ||
ಪೊಳಲ ಜನದಿಂ ಪೂಜೆಗೊಂಡತಿ | ಬಲವೆ ನಿನ್ನ ಸಹಾಯವಿರುತಿರೆ |
ನಳಿನನಾಭಗೆ ಮರೆದರುಂಟೇ ಮೂಜಗದೊಳೆಂದ || ೩೮ ||

ಎನಲು ಮತ್ತೆ ಚತುರ್ಭುಜನೊ | ಯ್ಯನೆ ಕರೆದು ಕಿವಿಯಲ್ಲಿ ಪೇಳಿದ |
ನನುಜನೀ ದೇವಕಿ ಪಡೆದ ಮಗನೆಂದದೆಲ್ಲವನು ||
ಅನುನಯದಿ ಸೂಚಿಸಿದ…….ನಂ | ನನು ಸಸಿನೆ ಕೇಳ್ವಂತೆ ಈ ಕಂ |
ಸನು ಮಡಿದ ನಿನ್ನಿಂದ ಕೇಳಾದೇಶವುಂಟೆಂದ || ೩೯ ||

ಎಂದು ಶಿರಧರನನು ಕಳುಹೆ ಗೋ | ವಿಂದ ಸಹತುರಪಟ್ಟೆಪೊಕ್ಕಾ |
ನಂದನೊಲಿದು ಯಶೋಧೆಗಾತ್ಮಜನಧಿಕ ಸಾಹಸವ ||
ಚಂದದಿಂದೆಲ್ಲವನು ಪೇಳ್ದಡೆ | ಕಂದನಾ ಮೊಗನೋಡಿ ಮಿಗೆ ಬಾ |
ಳೆಂದು ಹರಸಿದರವರು ಸುಖದಿಂದಿರ್ದರಿರಲೊಡನೆ || ೪೦ ||

ಬಂದುದಾ ಕಂಸನ ಬೆಸನು ಆಗದ | ರಿಂದ ಗೋಪನನಗೆ ಮೊಗವು ಮಿಗೆ |
ಕಂದಿರಲು ನಿಮಗಿಂದು ಚಿಂತೆಯಿದೇತರಿಂದಾಯ್ತು ||

ಎಂದು ಶಾಂರ್ಙ್ಗಿಯ ಕೇಳೆ ನಾನೇ | ನೆಂದು ಹೇಳುವೆನಣ್ಣ ಕೊಲಬಗೆ |
ದೊಂದು ಬೆಸನಟ್ಟಿದನು ಕಂಸನೃಪಾಲನಿಂತೆಂದ || ೪೧ ||

ನೆಗೆದ ಜಗುನೆಯ ಕಮ್ಮಡುವಿನೊಳು | ಗೊಗೆದ ಹೊಂದಾವರೆಯದಕ್ಕೆಸ |
ಳುಗಳು ಸಾಸಿರವುಂಟು ಅದರತವೇಳ್ದು ಕಳುಹಿದನು ||
ಮಗನೆ ಕೇಳ್ಕೆ ಕಾಳಭುಜಗನು | ಅಗಲದದ ಕಾದಿಪ್ಪುದದನಾ |
ರ್ಪೊಗುವರೆಂದೆದೆಗೆಟ್ಟು ಚಿಂತೆಯನಾಂತೆ ತಾನೆಂದ || ೪೨ ||

ಎಂದೊಡದಕಿನ್ನೊಂದು ಕೈಯನು | ತಂದಪೆನೆ ನೀವೇಕೆ ಚಿಂತಿಪಿ |
ರೊಂದು ನೀರೊಳ್ಳೆಯನು ಬೆದರಿಸಿ ತಾವರೆಯ ತಹರೆ ||
ದಂದುಗವು ನಿನಗಿಲ್ಲೆನುತ ಅರ | ವಿಂದನಾಭನು ಗೋಪಕುವರರ |
ಸಂದಣಿಯಲೈತಂದು ಜಗುನೆಯ ಮಡುವನೊಳ ಪೊಕ್ಕ || ೪೩ ||

ಪೊಕ್ಕಡೊಡನೀಸಾಡುವಾಗೋ | ವರ್ಕಳಾ ಕೃಷ್ಣನನು ಯಮುನೆಯ |
ಉಕ್ಕುವಾ ಕಣ್ಣೀರೊಳೀಕ್ಷಿಸಿ ಕಾಣ್ಬುದರಿಂದಾಗಿ ||
ಇಕ್ಕೆಲನ ನೋಡುವರು ಬಳಿಕಾ | ಮಕ್ಕಳನು ದಿಡಕಿರಸಿ ತಾನೊಳ |
ಪೊಕ್ಕನಾ ಕಾಳಿಂಗನಾಗನ ಮಡುವ ವಹಿಲದಲಿ || ೪೪ ||

ಹೋಗುವ ಭರಕದು ವಿಷದ ಕಿಡಿಗಳ | ನುಗುಳುತಲೆ ಬಿಲದಿಂದ ಮೇಲಕೆ |
ನೆಗೆದು ಮಡುವಿನೊಳಿರಿಸಿ ಬಹ ಕೃಷ್ಣನೊಳು ಪೂತ್ಕರಿಸಿ ||
ಅಗಧರನು ಸಿಡಿಲಪ್ಪಳಿಸಿದಂ | ತೊಗೆದುಕೊಂಡಾ ಸರ್ಪನನು ಪೆಂ |
ಪೊಗೆದಡಂಬುಜವನೂ ಕಿತ್ತೆಡ ಕೈಯಲೆಳೆತಂದ || ೪೫ ||

ಗೋವಳರು ಗುಡಿಗಟ್ಟಿ ಸಂತಸ | ದೀವಿ ಬಂದಾ ಫಣಿಯ ಹೆಣವನು |
ತಾವರೆಯ ಪಿಡಿಕೊಂಡು ಬರೆಹರಿತಂದೆಗೊಪ್ಪಿಸಲು ||
ಆ ವಿಭುವಗವನ್ನೆದು ತಾವರೆ | ಹೂವಕೊಟ್ಟನು ಕೆಳಕೆ ಬಿಸುಟನು |
ಹಾವಿನಾ ದೇಹವನು ಕಂಸನು ಕಂಡು ಬೆರಗಾದ || ೪೬ ||

ನಂದುಗುಡುಗೊಟೆಗೊಟ್ಟು ಕಳುಹಿಸಿ | ಕಂದೆದೆಯ ವಿಭುವಹಿತನನು ಕೊಲು |
ವಂದಗಾಣದೆ ಕಡಿದು ದಂಡೆತ್ತಿರಿವೆನೇನೆರೆವ ||
ಬಂದಪರು ವಸುದೇವ ಬಲನಾ | ನಂದ ಸುತಗದರಿಂದ ಆತನ |
ಕೊಂದು ಕೂಗಲಿ ಮಲ್ಲರೆಂದಾಳೋಚಿಸಿದನಾತ || ೪೭ ||

ಪಜ್ಜಳಿಪ ಚಾಣೂರನುದ್ಧತ | ವಜ್ರಮುಷ್ಠಿಯು ಮಲ್ಲಕೇಸರಿ |
ವಜ್ರಜಂಘನೆನಿಪ್ಪ ಜಗಜಟ್ಟಿಗಳ ನೃಪ ಕರೆಸಿ ||

ಕಜ್ಜುವೊಂದಿದೆ ಹರಿಯ ಮುಸುಡನು | ಜಜ್ಜುಗುಟ್ಟಿಯೆ ನೆರತಿವಿದು ದೊಂ |
ದುಜ್ಜುಗದಿ ಕೊಲಬೇಹುದಹಿತರನೆಂದ ನೇಮಿಸಿದ || ೪೮ ||

ಬೆಸಸಬಹುದೇ ರಾಯ ನನಗೀ | ಬೆಸನನಕಟಾ ಚಂದ್ರಸೂರ್ಯರ |
ಹೊಸದು ಮುಕ್ಕದ್ರಿಗಳ ಕಿತ್ತಾಡಣ್ಣೆ ಕಲ್ಲುಗಳ ||
ವಿಸಧಿಯನು ಕುಡಿಯೆನಲು ಮಾಡೆಲೆ | ಹಸುಳೆಯನು ಗೋವಳನಮಗನನು |
ಶಿಶುವ ವಧೆಯ ಮಾಡಿದಡೆ ಚಾಣೂರಗೆ ಪರಾಕ್ರಮವೆ || ೪೯ ||

ಈಹದನ ನೆನಗರಿಯ ಬಂದುದು | ದ್ರೋಹಿಯನು ಕೂರಾನೆಗಿಕ್ಕಲೆ ||
ಬೇಹುದಾದೊಡೆ ರಾಯ ಚಿತ್ತೈಸೆನ್ನ ಭಾಷೆಯನು ||
ಮೋಹರಿಸಿ ಕಳದೊಳಗೆ ನಿಲೆಕರು | ಗಾಹಿಯೆಳೆ ಗೊರಳನು ಮುರಿಯಬಿಸು |
ಟಾಹಡೆದ ತಾಯ್ಗೀವೆ ಶೋಕವನೆಂದ ಚಾಣೂರ || ೫೦ ||

ಎನಲು ಹಗೆಯನು ಕೊಂದೆನೆಂದೇ | ಮನದ ರಾಜ್ಯವನಾಳಿ ಕಂಸಾ |
ವನಿಪನಾ ಜಟ್ಟಿಗಳಿಗಭಿಮತ ವಸ್ತುವನು ಕೊಟ್ಟು ||
ಮನೆಗೈದಿ ನಾಳಿನಲಿ ಕಾಳಗ | ವೆನುತಲವರನು ಕಳುಹಿ ಮಾರಿಯ |
ಮನೆಗೆ ಬಳಿಯಟ್ಟುವವೊಲಟ್ಟಿದನುರಗ ಶಯನಂಗೆ || ೫೧ ||

ಮತ್ತಮಾಸಮಯದಲಿ ದೇವರು | ಮತ್ತು ಗಜಮದವೇಟೆ ಕಂಬವ |
ಕಿತ್ತುದುಪ್ಪರಿಗೆಯ ಮುಱಿದುದಾಲಾಯಗುದುರೆಗಳ ||
ತುತ್ತಿದುದು ಹಲವಾನೆಗಳ ತವೆ | ಕುತ್ತಿದುದು ಬಿಸಟಂಬರಿವುತದೆ |
ಚಿತ್ತವಿಸು ಬಿನ್ನಹವಿದೆಂದನದೋರ್ವನರಸಂಗೆ || ೫೨ ||

ಅರಿಯರೆವೊಡಿದೊಂದು ನೀಗಳೆ | ನೆರೆವ ಬಂದುದು ತನಗೆನುತಮಿಗೆ |
ಹರುಷದಲಿ ಮಾವುತರನಿರದೇಕಾಂತದಲಿ ಕರೆದು ||
ಕರಿಪತಿಯ ಗೋಪುರದೊಳಗೆ ಕ | ಟ್ಟಿರಿಸೆ ನಾಳಿನ ಮಲ್ಲ ಗಾಳಗ |
ಹರಿವಹಾಗಳು ಬಿಟ್ಟವನ ಕೊಲಿಸೆಂದು ನೇಮಿಸಿದ || ೫೩ ||

ಕಳನು ಸಿಂಗರವಾಯ್ತು ಮರುಹಗ | ಲೊಳಗೆ ಸುತ್ತಣ ನೋಟಕರು ಸಂ |
ಗಳಿಸಿ ನೆರೆದುದು ಅತಿಬಲರ ಬಲುಮಲ್ಲಗಾಳಗವ ||
ಬಳಸಿ ನೋಡಲು ಸುರರು ಬಾನೊಳು | ಬಳಸಿದರು ಜವ ಪುರವನೇರುವ |
ವಿಳಸನದಿ ಕಾಂಚನದ ತಳ್ಪವನೇರಿದನು ಕಂಸ || ೫೪ ||

ಬಳಸಿದಾ ತಾರಗೆಯ ನಡುವು | ಜ್ವಳಿಪ ಚಂದ್ರಮನಂತೆ ಕಂಸನು |
ಲಲನೆ ಜೀವಂಜಸೆ ವಧೂತತಿವೆರಸಿ ರಂಜಿಸಲು ||

ಬಳಸಿದರು ಚೌಪಳಿಗೆಯನು ದೊರೆ | ಗಳು ಕಪಟತಂತ್ರದಲಿ ಕಳನನು |
ಬಳಸಿತಾ ನೃಪನಂಗ ರಕ್ಷಕರಸಿಯ ಮಸ್ತಕದಲಿ | ೫೫ ||

ಹೊಱವಳಸಿನಿಂ ಕುದುರೆ ಅದಱಿಂ | ಹೊಱವಳಸಿನಲಿ ಆನೆ ನಿಂದವು |
ಅಱಿದು ಈ ತಂತ್ರವನು ವಸುದೇವನು ಬಲನು ಕೂಡಿ ||
ತುಱುಗಿ ನಿಜಬಲವೆರಸಿ ನೋಡುವ | ತೆಱದಳೊಂದೆಡೆಯಿರ್ದಳಾಗೆಲೆ |
ಮಱವುತಾ ಚಾಣೂರ ಮುಖ್ಯರು ಬಂದರಬ್ಬರದಿ || ೫೬ ||

ಕಡು ನಿಡಿಯವಹ ಜಾಜುವೆಟ್ಟದ | ಲಡಿವಡೆದು ನಡೆತಂದವೋಯೆನೆ |
ಪೊಡಯಿಸುತಡವುಡೆಗಳ ಝಲ್ಲಿಯ ಗದೆಗಳನು ಹಿಡಿದು ||
ಪೊಡವಿಯೊಳರಡಿಗೊಮ್ಮೆ ಕುಸಿವವೊ | ಲಡಿಯಿಡುವ ಚಾಣೂರ ಮುಖ್ಯರು |
ನಡೆದು ಬಹ ಹವಣಿಯೆ ತದಾಸ್ಥಾನವನು ಮೆಚ್ಚಿಸಿತು || ೫೭ ||

ಅತ್ತಲಾ ಗೋವಳರು ಬಾಜಿಪ | ತಿತ್ತಿರಿಯ ಕೊಂಬುಗಳ ಕೊಳಲುಗ |
ಳಿತ್ತರದ ಕಂಕಲಿಯ ರುಂಜೆಯ ಎಕ್ಕಮದ್ದಳೆಯು ||
ಒತ್ತರಿಪ ದನಿಗೇಳುತಾ ಪುರು | ಷೋತ್ತಮನು ನಂದನು ಬೆರಸಿ ಬರು |
ತೊತ್ತಿನಲಿ ಮಡಿವಳನು ಪೊರಿಸಿದ ಮಡಿಗಳನು ಕಂಡ || ೫೮ ||

ಎಲವೋ ಮಡಿವಳ ನಿನ್ನ ತೊಳಹವು | ಚೆಲುವನಾದವು ನಮ್ಮ ಯಮುನೆಯ |
ಲಲುಬಿ ತೊಳೆದೊಡೆ ಕಪ್ಪಡವು ಬೇಳ್ಪಡಗಳಾಗದಿವೆ ||
ತೊಳೆದುಕೊಡು ನಾವುಟ್ಟುದನು ನೀ | ತೊಳೆದ ಫಲಿಗೆಯನೆಮ್ಮವರಿಗೀ |
ಗಳೆ ಕೊಡೆನೆ ಸೊಕ್ಕಿದಿರಿ ಗೋವರು ಕಾಲವಿಷಮವಲ || ೫೯ ||

ಭರದಲಾ ವಾದ್ಯದ ರವದಿನಗ | ಧರನು ಬರುತಿರೆ ಕಾಣುತವೆ ಅಂ |
ಬರವ ಚುಂಬಿಸ ಬೆಳೆದ ಕೈಟಭನೆಂಬ ಕಟ್ಟಾಣೆ ||
ಪರಿಕಿಪೊಡೆ ಮುನ್ನದುದೆ ರಕ್ಕಸ | ನೆರಡು ಕಟದಿಂ ಸುರಿವ ಮದನಿ |
ರ್ಜರದಿ ಗಿರಿಯೆನಿಪಧಟ ನಿಗಳವ ಕಳೆದರವರಲ್ಲಿ || ೬೦ ||

ನೊಸಲೊಳೆಂ ನಿಮಗುಂಟೆ ಕಂಗಳು | ನೊಸಲ ಕಣ್ಣವ ಕಂಸ ರಾಯನ |
ವಸನಗಳನೆಳದುಡುವಡಾರದೆ ತೊಗಲನುಟ್ಟನೆನೆ ||
ಸಸಿನೆ ಬಟ್ಟೆಯ ಹೋಗಿ ವಸ್ತ್ರದ | ಗಸಣಿ ನಿಮಗೇಕೆನಲು ಕೃಷ್ಣನು |
ನಸು ನಗುತಲಾ ವಸನಗಳ ನೆಳೆದಿತ್ತ ಗೋವರಿಗೆ || ೬೧ ||

ಹರಿಗೆ ಮುಳಿದಿದಿರೆತ್ತಿ ಬಹವನ | ಕರಿಯವೊಲು ಬರೆ ಕೈಗೆ ಕೈಯಿ |
ಕ್ಕಿರದೆ ತೆಗೆದನು ಕುಸುಕಿದನು ಎಳೆಗಳಿಲೆಗೀಳ್ವಂತೆ ||

ಕರಿಪತಿಯ ಕೊಂಬುಗಳ ಕಿತ್ತನು | ಭರದಿ ಅಪ್ಪಳಿಸಿದನು ಮಡಿದಾ |
ಕರಿಯ ಹಿಡಿದೆಳೆತಂದು ಬಿಸಟನು ತಳದಕೆಲದಲ್ಲಿ || ೬೨ ||

ಜನಪ ಕಮ್ಮರನಂಬು ಕಮ್ಮರ | ಗೆನಿಪವೊಲು ರದನವಿದೆ ರದನಿಯ |
ಹನನ ಕಾದುದು ಸೊಕ್ಕಿದದರಿಂದರಿಗಡಾಯೆನಲು ||
ಜನವು ಸೈವೆರಗಾಯ್ತು ಕಂಸನ | ಮನ ಬೆದರಿದುದು ಹೊಕ್ಕನಾಕಳ |
ನನು ಭುಜಸ್ಫಾಳನವ ಮಾಡಿದನವನಿಧರಧರನು || ೬೩ ||

ಕಡೆಯ ಕಾಲದ ಸಿಡಿಲರವದಂ | ತಡಸಿತಾ ದನಿ ಸಭೆಯ ಕಿವಿಗಳೊ |
ಲೊಡನೆ ಚಾಣೂರನು ಭೂಜಸ್ಫಾಳನವ ಮಾಡಿದೊಡೆ ||
ಬಿಡದೆ ಜಟ್ಟಿಗಳೆಲ್ಲರುಂ ಸಂ | ಗಡದೆ ತೋಳಲನೊದರೆ ಸಲುಕಿ |
ಚ್ಚಡಸಿತೋ ಪೆರ್ಬಿದಿರ ಮೆಳೆಗೆನೆ ಪರ್ವಿತಾ ರವವು || ೬೪ ||

ಹೂಡಿದನು ದಂಡೆಯನು ವಹಣಿಯ | ಮಾಡುತವೆ ಚಾಣೂರ ಮಲ್ಲನು |
ರೂಢಿಸಿದ ನೀಳಾದ್ರಿಯೊಳು ತೊಡರುವವೊಲಿದಿರೊದಗೆ ||
ಕೂಡೆ ದಂಡೆಯ ಹೂಡಿ ಹರಿತಡ | ಮಾಡದೊದಗುವ ವಹಿಲವನು ಸಭೆ |
ನೋಡಿ ಬೆರಗಾಗುತಿರೆ ಬಿನ್ನಣಗಳನು ತೋರಿದನು || ೬೫ ||

ಆಕ್ಕಟಾಯೆಳೆ ಶಿಶುವಮಸಗಿದ | ರಕ್ಕಸನ ಬಾಯ್ಗಿಕ್ಕಿದಿರಲಾ |
ಚಿಕ್ಕಮಗ ನಿತ್ತರಿಪನೇ ಚಾಣೂರಮಲ್ಲನೊಳು ||
ಮಕ್ಕಳಾಟಿಕೆಯೆಂದರನಿಬರು | ಸೊಕ್ಕಿದಾನೆಯ ಬಡಿದ ಗಿರಿಧರ |
ನುಕ್ಕು ದೊಡ್ಡಿತು ಜೈಸದಿರನಿವನೆಂದುದಲ್ಲಲ್ಲಿ || ೬೬ ||

ಒಡೆಯ ಚಿತ್ತೈಸೊಂದೆ ಪೆಟ್ಟಿಗೆ | ಕುಡಿದ ಬಜೆಯನು ಕಾರಿಸುವೆ ನೀ |
ನಡೆಯೆನಲು ಚಾಣೂರನದು ಲೇಸೆನುತ ಹರಿಸೇರೆ ||
ಪೊಡವಿಯೊರಡಿಗೊರ್ಮೆಯಿತ್ತ | ತ್ತೊಡನೊಡನೆ ತಲ್ಲಳಿಸುತಿರೆ ಕೈ |
ದುಡುಕುತಿರ್ದರು ಧಣುದರುರಿ ಜಗಜಟ್ಟಿ ಭಾಪ್ಪೆನುತ || ೬೭ ||

ತುಡುಕಿ ಯೆಡಗೈಯಿಂದ ಕೈಯನು | ಹಿಡಿದು ಕೃಷ್ಣನು ಜಡಿದು ನೋಡಲು |
ಕಡುಪಿನಿಂದಂತಕನೆ ಹಿಡಿದಂತಾಗಿ ಚಾಣೂರ ||
ಮಡಿದನೆಂದೇ ನಿರ್ಧರಿಸಿದನು | ತೊಡಹದಧಟನೆ ತಳೆದು ಯುದ್ಧಕೆ |
ತಡಹರಿಸಿ ಸಮ ಸತ್ತ್ವದಲ್ಲಿ ಫಣಿಶಯನು ಕಾದಿದನು || ೬೮ ||

ಪ್ರಳಯ ಕಾಲದ ಸಿಡಿಲುಗಳ ಕೈ | ಗಳಲಿ ಕಟ್ಬೊದಗಿನಲಿ ಜಂಝೂ |
ನಿಲನನಕ್ಷಿಗಳಲಿ ಕಲ್ಪಾನಳನ ಕೇಸರಿಯ ||

ಪೊಳೆವ ವಿಂಚಿನಳವಿಯನು ಮೈ | ಗಳಲಿ ದಿಗ್ಗಜಡಾಂಕೆಯನು ತೋ |
ಳೊಲು ನೆರೆದ ಕೆಸರಂಕಕಾರರು ತೋರಿದರು ಭರದಿ || ೭೯ ||

ಬೆದರುಗಾಗೆಯ ನೋಟಸಾಳುವ | ನೊದೆವು ಮೀಂಗಳ ಝಳಕೆ ಕೇಸರಿ |
ಯಧಟು ಶಾಖಾಮರಗದಲಂಘನ ತಗರತೆಗೆಮೆಟ್ಟು ||
ಚದುರ ನಲ್ಲರ ಬಂಧ ಫಣಿಗಳ | ಪುದಿವು ಮೇರುವಿ ಮಿಕ್ಕೆ ಸೊಕ್ಕಿದ |
ರದನಿಗಳ ಧೂಳಾಟವೊಪ್ಪಿದವವರ ಯುದ್ಧದಲಿ || ೮೦ ||

ತರದೆಸೆವ ಸಮಗಂಟೆ ಸಮ ಬಿ | ತ್ತರವು ಬೌಂಗಳ ಕಂದನಾದವು |
ಭರದ ವೊಡಲೇನಿಪ್ಪವು ಪತಾಯದಲಿ ಅರ್ಧಾಂಗ ||
ಪಿರಿದೆನಿಪ ಹೆಟ್ಟಾಂಗ ಸೀಸವು | ಬೆರಸಿದ ಗದೆ ರಯಕ ರವಾ |
ಳುರುವದೊಂದಿಗಳೆಂಬ ತಾನಕದಿಂದ ಕಾದಿದರು || ೮೧ ||

ಎಂದು ಘಂಟೆಯು ಹಾತು ಕುಂಟಿಯು | ನಿಂದೆ ಘಂಟೆಯು ಹಾತು ಭಾಣುಗ |
ಳೊಂದಿದಿಕ್ಕತ ಭಾವು ಮಂತರ ಮೋಹದಗಳೊಡನೆ ||
ಸಂದ ಕೊಕ್ಕಸಗುಂಡು ಗೋಣಿಯು | ವಿಂದೆ ಪಟ್ಟಸು ಚೇಣ ಪಟ್ಟಸು |
ವೆಂದೆನಿಪ ವಿಂದಾಣದಲಿ ಕಾದಿದರು ಜಟ್ಟಿಗಳು || ೮೨ ||

ಕೊಂತಮಾರಿಯು ಲಾಟಕಾ ಕೋ | ದಂತೆ ಉತ್ತರ ಡೊಕ್ಕರವು ನೆರೆ |
ಕೊಂತಮಾರವುಲಾಟಡೊಕ್ಕರ ಪೋಗು ಬಾಣುಗಳು ||
ಅಂತರಿಪ ನರಸಿಂಗ ಪಟ್ಟಸು | ಮುಂತಡರೆ ತಳಹತ್ತಗಳ ಹ |
ತ್ತಂತುಳಿಲ ವಿಂದಾಣದಲಿ ಹರಿ ಕಾದಿ ಬಳಲಿಸಿದ || ೮೩ ||

ಪಿಡಿದನಾ ಕಾಳಿಂಗ ನಾಗನ | ಹಿಡಿದವೊಲು ಚಾಣೂರ ಮಲ್ಲನ |
ನಿಡಿಯ ತೋಳನು ಕುಸುಕಿರಿದು ವಹಿಲದಲಿ ಹಿಂಗಾಲ ||
ಹಿಡಿದು ತ್ರ್ನಿ ತಿರು ತಿರುಹಿಯಿವ | ಕಡುಹಗುರವೊಲು ಗೋವರ್ಧನಾದ್ರಿಯ |
ಹಿಡಿದ ನೆಗಹಿದ ತೋಳಿಗೆಂದಪ್ಪಳಿಸಿದನು ಕೃಷ್ಣ || ೮೪ ||

ಬಳಿಕ ಕಂಸನು ಮುಳಿದು ಬೆಸಸಿದೊ | ಳಡವಿಗೊಟ್ಟಾ ವಜ್ರಜಂಘನ |
ಹಿಡಿದು ಹಿಂಡಿದ ಕೇಸರಿಯ ನರಿಯಂತೆ ಬಳಿದಿಕ್ಕಿ ||
ಉಳಿದ ಮಲ್ಲರನೆಲ್ಲರನು ಮಿಗೆ | ತುಳಿದೆ ನೆಕ್ಕಿಯ ಹೂವ ತುಳಿದಂ |
ತಳಲಿ ಕಂಸನು ನಿಜ ಬಲಕೆ ಕೈಬೀಸೆ ಹರಿಕಂಡ || ೮೫ ||

ಗಿಡುಗಲಂಘನದಿಂದ ತವಗವ | ನಡರೆ ಲಂಘಿಸಿ ಪೆಂಡವಾಸವು |
ಮಡದಿ ಜೀವಂಸೆಯು ಕೆಳಗಡೆ | ಕೆಡಪೆ ನೆತ್ತರ ಕಾರಿ ಕಂಸನು |
ಮಡಿದನೆದೆಗೆಟ್ಟೆಳುಹಿದುದು ಪರಿವಾರ ಕೈದುವನು || ೭೬ ||

ಉಪ್ಪರಿಗೆಯಿಂದಿಳಿದು ಬರೆ ತೆಗೆ | ದಪ್ಪಿದನು ವಸುದೇವನಹುದೋ |
ಬೊಪ್ಪಯೆಂದಾಲಿಂಗಿಸಿದ ಬಲದೇವ ಶಾಂರ್ಙ್ಗಯನು ||
ತಪ್ಪುವುದೊ ತಾಗುವುದೊ ಯೆಂದೆದೆ | ಕುಪ್ಪಳಿಪ ದೇವಕಿಯ ಚರಣಕೆ |
ದೊಪ್ಪನೆರಗೆಂದೊಯ್ದು ಸಂತಸವೆರಗಿಸಿದನೊಲಿದು || ೭೭ ||

ತಾಯ ಚರಣಕ್ಕರಗಿ ನನ್ನಯ | ತಾಯೆ ನಿಮ್ಮಯ ಮೊಲೆಯನುಂಡೋ |
ನೋಯದಡಿ ಬೆಳೆಯಲಿಕೆ ಕಂಟಕನಾದ ಪಾತಕನ ||
ಸಾಯವಡಿದೆನು ನೋವು ನಿಮಗೇ | ನಾಯಿತೋಯೆನೆ ಹರುಷಶೋಕವ |
ದಾ ಯುವತಿಯೊಡದೆಳೆಯೆ ಕಂಸಧ್ವಂಸಿಯಪ್ಪಿದಳು || ೭೮ ||

ಮಸಗಸಿಯ ಪಂಜರದೊಳಿನ್ನೆಗ | ಮಸುಗೆಡುತ ವಿರ್ದುಗ್ರಸೇನನ |
ನೆಸೆವ ಪದ್ಮಾವತಿಯ ಬಂಧನವನು ಕಳೆದು ತರಿಸಿ ||
ಅಸುರರಿಪುನಾ ಕಂಸನನು ತೋ | ರಿಸಲು ಕಂಡತಿ ದುಃಖವನೆ ಪು |
ಟ್ಟಿಸಿದೆ ಮಗನೇಯೆಂದು ಹಲುಬಿದರಾ ಮಗನಕಂಡು || ೭೯ ||

ಸಂತಯಿಸೆ ವಸುದೇವನಾಗಳು | ಕಾಂತೆ ದೇವಕಿ ತಂದೆ ತಾಯ್ಗೇ |
ರಂತೆ ಬಂದೆರಗಿದಳು ಮಗಳೇ ನಿನ್ನ ಮಗನಿರುಳು ||
ಸೀಂತಡುರೆ ಹರಸಿದೆವು ಬಂಧನ | ವಿಂತೊಲಗುಗೆಂದರಿದುಯೆನೆ ನಿ |
ಶ್ಚಿಂತದಲಿ ಕಂಸನ ಸಭನ ಸಂಸ್ಕರಿಸಿದರು ಬಳಿಕ || ೮೦ ||

ವರ ಮಧುರೆಯನು ಉಗ್ರಸೇನಂ | ಗಿರದೆ ಕೊಟ್ಟನು ನಂದಗೋಪಿಗೆ |
ಪಿರಿದು ವಸ್ತುವ ಪಲವು ಗ್ರಾಮವನಿತ್ತು ವಸುದೇವ ||
ಗಿರಿಧರನು ಬಲದೇವ ದೇವಕಿ | ವೆರಸಿ ಹರುಷೋತ್ಕರ್ಷದಿರ್ದನು |
ಪರಮ ಜಿನಪದ ಭಕ್ತ ಸತ್ಕವಿತಾ ಗುಣೋದಯನು || ೮೧ ||

|| ಅಂತು ಸಂಧಿ ೨೨ಕ್ಕಂ ಮಂಗಲ ಮಹಾ ||

**ಸಂಧಿ ೨೩**

ಮುರಮಥನ ಸಹವೆಲ್ಲ ಶೌರೀ | ಪುರದೊಳಿರುತಿರೆ ಚಕ್ರಿಯಧಟಿಂ |
ದಿರದೆ ಪೋದರು ಪಡೆದರಾ ದ್ವಾರಾವತೀಪುರವ || ಪದ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ಮುರಮಧು ಕೈಟಭರ |
ಮೇಳದಲಿ ನರಕಾಸುರನರಿಷ್ಟಾದ್ಯರೈತಂದು ||
ವ್ಯಾಳ ಕಂಸನ ಸಖರುಮಿಗೆ ಕೂ | ರಾಳುಗಳು ಮಾಧವಗೆ ಮುನಿದು ವಿ |
ಶಾಲ ಬಲಸಹ ಬಂದು ಮುತ್ತಿದರಂದು ಮಧುರೆಯನು || ೧ ||

ಪೊಡೆವ ರಣಭೇರಿಯ ಸ್ವರವು ಕಿವಿ | ದೊಡಚದದರಿಂ ಮುನ್ನೆ ಸಹಜದಿ |
ಕಡುಗಲಿಗಳೀ ಯಾದವರು ನಿಜಪುರವ ಪೊರವಟ್ಟು ||
ತಡೆಯದಿದಿರಿದಿರೊಡ್ಡೆ ಬಲವೆರ | ಡೊಡವೆ ಕಾದಿದುದು ಮಿಗೆ ಸಿಡಿ |
ಸಿಡಿದು ತಲೆಗಳು ನಭದಲಟ್ಟುಂಬರಿಯನಾಳುತಿರೆ || ೨ ||

ಇಱಿದು ತವಿಸುವ ರಾಕ್ಷಸರ ಬಲ | ದುಱುಬೆಗೀಗಳು ಗರುಡಧ್ವಜ ಬಲ |
ಹೊಱ ಸಿಡಿದುದನು ಕಂಡು ಬಲನೇರಿರ್ದ ಸಿಂಧುರದಿ ||
ವಿದಿತ ಶಾಂರ್ಙ್ಗಕೆ ಹೂಡಿ ಕಡೆಯನು | ಅದಯದಿಂದೆಸೆ ಮುರನ ತಲೆಹಾ |
ರಿದುದು ನಭದೊಳು ನೋಡುವಮರರ ಸಾಕ್ಷಿಗೊಳುವಂತೆ || ೩ ||

ಮುರಹರನು ಮಧುಕೈಟಭಾದಿಯ | ನರೆದು ಬಳಿಕಾ ಮುರನ ಗದೆಯನು |
ಪಿರಿಯ ಮಧುವಿನ ರಥವ ಕೈಟಭನುಗ್ರ ಖೇಟಕವ ||
ನರಕ ರಾಕ್ಷಸನಸಿತ ಕಡುಗವ | ನುರಿವರಿದು ಉಜ್ವಳಿಪ ಪಲ್ಲವ |
...................................................... || ೪ ||

ಬಂದು ಬಲನಾರಾಯಣರು ಸಾ | ನಂದದಲಿ ವಸುದೇವಗೆರಗಿದ |
ರಂದು ಬಳಿಕ ಹಿರಣ್ಯನಾಭನು ವೆರಗಿ ಸುಖವಿರುತ |
ಒಂದು ದಿನವಾ ಸ್ವರ್ಣನಾಭನು | ಬಂದು ಶುಭಲಗ್ನದಲಿ ಬಲಗೊಲ |
ವಿಂದ ತನ್ನೆಸೆವನುಜೆ ರೇವತಿಯನು ಮದುವೆಗೆಯಿದ || ೫ ||

ಬಳಿಕ ಕಳುಹಿಸಿಕೊಂಡು ತನ್ನಾ | ಇಳೆಗೆ ಪೋದನು ಇತ್ತಲಿವರ |
ಗ್ಗಳದ ಹರುಷದಲಿರುತಲಿರೆ ಮತ್ತೊಂದು ದಿನ ಬಲನು ||

ತಿಳಿದು ತಂದೆಗೆ ಬಿನ್ನಯಿಸಿದನು | ನಳಿನನಾಭನ ದೆಸೆಯನಾದುದು |
ಅಳಿವು ಕಂಸಗೆ ಮೀರಬಹುದೇ ವಿಧಿಯ ಸೂತ್ರವನು || ೬ ||

ಅಳಿಯನೆಂಬವ ನಳಿದನಾತ್ಮಜೆ | ಗಳನು ಘನ ಮೆಂಬುದನು ಚಕ್ರಿಯ |
ತಿಳಿದೆವಗೆ ಕಡುಮುಳಿಯದಿರ ನಿನ್ನಲ್ಲಿ ನಮಗೇನು ||
ಕೆಲಸವಿಲ್ಲ ಸಮುದ್ರ ವಿಜಯನ | ಬಳಿಗೆ ಹೋಹವಿದೆಲ್ಲವನು ನೆರೆ |
ತಿಳಿಯೆ ಬಿನ್ನೈಸುವವೆನಲು ಅಹುದೆಂದ ವಸುದೇವ || ೭ ||

ಅರಸ ಬಳಿಕಾ ಉಗ್ರಸೇನನ | ಕರಸಿ ಪಯಣವನರಿಪೆ ನಾನಿ |
ಲ್ಲಿರೆನು ನಿಮ್ಮೊಡವಪ್ಪೆನೆನೆ ಬೇರಿಲ್ಲಿ ಯಿರಿಮತ್ತೆ ||
ಕರಸಿ ಕೊಂಬೆವೆನುತ್ತ ತಾವೆ | ಲ್ಲರು ಉರಗ ಶಯ್ಯಾದಿ ವಸ್ತುವ |
ನಿರಸದಾ ದೇವಕಿಯು ರೇವತಿ ಸಹಿತ ತೆರಳಿದರು || ೮ ||

ತುರಗ ದಳಗಳು ಕರಿಘಟೆಯು ಅ | ಚ್ಚರಿಯ ರಥಗಳು ವಿವಿಧ ಸೇನೆಯು |
ನೆರೆದು ಶ್ರಮದಿಂ ನಡೆದು ಸೂರ್ಯಪುರ ಪ್ರವೇಶದಲಿ ||
ಇರಲು ಕೇಳ್ದು ಸಮುದ್ರವಿಜಯನು | ಹರುಷದಿಂ ಗುಡಿ ತೋರಣವ ನಿಜ |
ಪುರದೊಳಾಗಿಸಿ ಯಿದಿರುಗೊಂಡನು ಸಕಲ ವೈಭವದಿ || ೯ ||

ವಿನುತ ತನುಜರುವೆರಸಿ ವಸುದೇ | ವನು ನಿಜಾನುಜನಂಘ್ರಿಗೆರಗಲು |
ಮನವೊಲಿದು ತಮ್ಮನನು ಹರಸಿದನಪ್ಪಿದನು ಸುತರ ||
ಅನುಜ ನಡೆದಾನೆಯಲಿ ಬಲದೇ | ವನುಬಲದ ಹಸ್ತಿಯಲಿ ನಡುಗಡೆ |
ವನಜನಾಭನ ಮುಂದಿರಿಸಿಕೊಂಡೇರಿದನು ಗಜವ || ೧೦ ||

ದೆಸೆದೆಸೆಗಳನು ತೀವೆ ವಾದ್ಯ ರ | ಭಸವು ನರ್ತಿನಿಯರು ನಲಿದು ನ |
ರ್ತಿಸುತಿರಲು ಹರುಷದಿ ಸಮುದ್ರ ವಿಜಯ ಮಹಾರಾಯ ||
ಒಸೆದೆರಡು ಕಡೆಯಾನೆಗಳು ಜವ | ಳಿಸಿ ಬರಲು ಹರವೀತಿಯಲಿ ಈ |
ಕ್ಷಿಸುವ ಜನಗಳ ಕಣ್ಣ ಪುಣ್ಯದ ಪುಂಜವೆನಿಸಿದರು || ೧೧ ||

ಇವನೆ ದೇವಕಿಯಗ್ರತನುಜನು | ಇವನೆ ವಸುದೇವನ ಕುಮಾರನು |
ಇವನೆ ಪೂತನಿ ಮುಖ್ಯರನು ಶಿಶುತನದಿ ಕೊಂದವನು ||
ಇವನೆ ಗೋವರ್ಧನಗಿರಿಯ ನೆಗೆ | ದವನು ಇವನೇ ಕಂಸ ಮಥನನು |
ಇವನೆ ಕೃಷ್ಣನೆನುತ್ತ ನೋಡಿದುದಂದು ಪುರಜನವು || ೧೨ ||

ವರ ಸಮುದ್ರ ವಿಜಯ ನೃಪಾಲನು | ಸುರಪ ವೈಭವದಿಂದ ಚೆಲುವಾ |
ದರಮನೆಯನಿರೆ ಪೊಕ್ಕು ಹರಿ ವಸುದೇವ ಬಲಸಹಿತ ||

ಪರಮ ಜಿನ ಪೂಜೋತ್ಸವಮನ | ಚ್ಚರಿ ವಿಭವದಲಿ ಮಾಡಿ ಕವಿಮು |
ಖ್ಯರನು ಮನ್ನಿಸಿ ಪಾತ್ರದಾನವ ನೋಡಿ ಸುಖಮಿರ್ದ || ೧೩ ||

ಶ್ರೀವಿಶಿಷ್ಟ ಸಮುದ್ರ ವಿಜಯ ಮ | ಹಾ ವಿಭೂತ್ತಮನಲಿಯಲೀ ವಸು |
ದೇವ ಬಲನಾರಾಯಣರು ಸುಖದಿಂದಲಿರಲಿತ್ತ ||
ನೋವುತಿಹ ಜೀವಂಜಸೆಯು ಕಂ | ಸಾವನೀಶನ ಕೊಂದ ವೈರಿಯ |
ಜೀವವನು ತೆಗೆಯಿಸಿದೊಡಲ್ಲದೆ ಕಟ್ಟೆನೀ ಮುಡಿಯ || ೧೪ ||

ಎಂದು ವನಿತೆ ಪ್ರತಿಜ್ಞೆಯನು ತರಿ | ಸಂದು ಮಾವನ ಬೀಳುಕೊಂಡೈ |
ತಂದು ರಾಜಗೃಹವನು ಬಿಡುಮುಡಿ ಬರುಗಿವಿಯವೆರಸಿ ||
ತಂದೆ ಚಕ್ರಿಯ ಚರಣವನು ಭೋ | ರೆಂದು ಕಣ್ಣೀರಿಂದ ತೊಳೆದು |
ಸ್ವೈಂದು ಸುಯಿದತಿ ಹಳಗಿಸುತ್ತ ಬಿದ್ದತ್ತರಳೆರೆಜಾಲಾ || ೧೫ ||

ಇಂದಿದೇನೇನುತಲು ಜರಾ | ಸಂಧ ಚಕ್ರಿಯು ಮಗಳ ನಿಜಕರ |
ದಿಂದ ನೆಗದಶ್ರುಪ್ರವಾಹವನು ಸುಖದಿತೊಡೆದು ||
ನೊಂದಿದೇ ವೃತ್ತಾಂತವನು ಪೇ | ಳೆಂದೊಡೆತ್ತಾನುಂ ಕಿರಿದು ಪೊ |
ತ್ತಿಂದ ಮೇಲಿಂತೆಂದಳಾ ವಧು ಗದ್ಗದ ಸ್ವನದಿ || ೧೬ ||

ದೇವ ನಿನ್ನೊಡವುಟ್ಟಿದಳ ಪ | ದ್ಮಾವತಿಯ ಸುಕುಮಾರನನು ವಸು |
ದೇವನಾತ್ಮಜ ಕೃಷ್ಣ ಕೊಂದನಸಹ್ಯದಲಿ ನನಗೆ ||
ಈ ವಿಧಿಯ ಮಾಡಿದನೆನಲು ಕರು | ಣಾವಲೊಖನ ಚಕ್ರಿಯಲ ರು
ದ್ರಾವತಾರದಿ ಕಾಯ್ದುನಾಂತನು ಮಗಳ ನುಡಿಗೇಳಿ || ೧೭ ||

ಕುಲಗಿರಿಯಲಡಗುವನೊ ಶರಧಿಗ | ಳೊಳಗೆ ಹೋಗುವನೊ ನನ್ನ ಮಗಳಿಗೆ |
ಮೊಳೆವರೆಯದಲಿ ವಿಧವತೆಯನಿತ್ತನು ಭೂಮಿಯಲಿ ||
ಉಳಿಯ ಬಲ್ಲನೆ ಮೇಣ್ ಸುರಾಸುರ | ಗಳವಿಗೊಡಲೆನಗಾರ್ಪರೇ ಎಂ |
ದೊಳರಿ ಕಡೆಕಾಲದ ಚವನವೊಲ್ಗೈದೆ ಘರ್ಜಿಸಿದ || ೧೮ ||

ಜನಪನಾಗಳು ಕಾಲವಯನೆಂ | ದೆನಿಪ ತನ್ನಾತ್ಮಜನ ಕರೆದಿಂ |
ದಿನದಿನವೆ ಕಂಸನನು ಕೊಂದಮುಕುಂದನನು ಕೊಂದು ||
ಜನವಱಿಯಲಾತನ ತಲೆಯ ನಿ | ನ್ನನುಜೆಯಡಿ ಮೊದಲಲ್ಲಿ ಕೆಡಪೆಂ |
ದೆನುತ ನೇಮಿಸಿ ಪ್ರಬಲ ಸಹವಾಗ ಕಳುಹಿದನು || ೧೯ ||

ಕಳುಹೆ ಕ್ರಮದಿಂ ಸೂರ್ಯಪುರವನು | ಘಳಿಲನೈತಂದೊಡ್ಡನಿಲೆ ಕಡು |
ಮುಳಿದು ಕಂಸಧ್ವಂಸಿ ಪೊರಮಟ್ಟೋಡಿ ನಿಲಲೊಡನೆ ||

ತಳುವದಾ ಮಾಗಧ ಬಲವು ಬಂ | ದಳವಿಗೊಡೆ ಯಾದವ ಬಲವು ಕೈ |
ಗಳಿಯಲಂಬಿನ ಮಳೆಯ ಕಱೆದುದು ಧಱೆಗೆ ಪೊಸತೆನಿಸಿ || ೧೦ ||

ಅರುಣಜಲ ವಾರಿಧಿಯು ಸೇನಾ | ಶರಧಿಯೊಳು ಭೋರ್ಗರೆಯೆ ಮಗಧೇ |
ಶ್ವರನ ಬಲಬೆನ್ನಿಕ್ಕೆ ಅತಿರಥತತಿ ಮಹಾರಥವ ||
ಕರೆದುಕೊಂಡಾ ಕಾಲವಯ ಭೂ | ವರನು ಕೆಡೆಯರಿ ಕಡಿಯೆನುತ ಸಡ |
ಗರಿಸಿ ಹೊಕ್ಕನು ಯಾದವರ ಬಲದುಕ್ಕ ನಿಲಿಸಿದನು || ೧೧ ||

ಮಧುಮಥನನದ ಕಂಡು ಶಾಂರ್ಙ್ಗವ | ನಧಟಿನಿಂಗೊಲೆಯೆತ್ತಿ ಜೇವಡೆ |
ವುದು ಮುರಿದು ಮೊದಲೋಡುವಾ ಸೈನಿಕವ ಪೂಡಿದನು ||
ಹದುಳದಲಿ ತಾ ರಾಜಗೃಹವೈ | ದಿದನು ಚಕ್ರಾಯುಧನರಿದು ಕಳು |
ಹಿದನು ಅಪರಾಜಿತನೆನಿಪ ಅನುಜಾತನನು ಭರದಿ || ೧೧ ||

ವಿತತ ಬಲಗರ್ವದಲಿ ಅಪರಾ | ಜಿತನು ಶೌರೀಪುರ ಸಮೀಪದ |
ಲತುಳ ಬಲಸಹವೊಡ್ಡಿನಿಲೆ ಹಲಧರನು ನಗಧರನು ||
ಅತಿಬಲರು ನಿಜಬಲವೆರಸಿ ಕಾ | ಣುತ ಭರತಲೊಡ್ಡುವುದು ಅಪರಾ |
ಜಿತನು ಕೈವೀಸಿದನು ತತ್ತರಿದಾಡಿದರು ಭಟರು || ೧೩ ||

ಡೊಂಬಿವರಿದಿಱಿದಾಡಿಸೂತ್ರದ | ಬೊಂಬೆಯಂದದಿ ಕೆಡದರಥಟರು |
ಬೆಂಬಿಡದೆ ಬಲನಾನೆ ಬಿಸುಟಂಬರಿಯುತಿರೆ ಕಂಡು ||
ತಾಂಬೆಡಗುಗೊಂಡೋಡಿದನು ತ | ನ್ನಿಂಬಿಗಾತನದತ್ತಲಿತ್ತಲ |
ಲುಂಬ ಭಟ ಕೋಳಾಹಳದಿ ಮರಳಿದರು ನಿಜಪುರಕೇ || ೧೪ ||

ಅಂದಿನಿರುಳು ಸಮುದ್ರವಿಜಯ ನೃ | ಪೇಂದು ಮಂಥಣಸಾಲೆಯಲಿ ಸಲೆ |
ಸಂದ ವಸುದೇವಾದಿ ತಮ್ಮಂದಿರ ಬಲಾದಿಯಹ ||
ಚಂದದಾತ್ಮಜ ರಕ್ಷಿ ಕುಮುದಾ | ನಂದವನು ದರಹಸಿತ ಚಂದ್ರಿಕೆ |
ಯಿಂದ ಮಾಡುವ ಮಂತ್ರಿಗಳ ಮೊಗನೋಡುತಿಂತೆಂದ || ೧೫ ||

ಮುನಿದನೆನ್ನೊಳು ಸಾರ್ವಭೌಮನು | ತನುಜೆಯೋಪನು ತಂಗಿಯಾತ್ಮಜ |
ನೆನಿಪವನು ನಮ್ಮಾತನಿಂದಲೆ ಮಡಿದದೆಸೆಯಿಂದ ||
ತನುಜರನಜರು ಹಲವು ಕಾಳಗ | ವನು ನಿಮಿರ್ಚಿದರಿಂನಿದೇನೆಂ |
ಬನುವನಾಳೋಚಿಸಿಯೆನಗೆ ಹೇಳೆಂದನವನೀಶ || ೧೬ ||

ಧಾರಿಣೀಶ್ವರ ಸಕಲಶಾಸ್ತ್ರ ವಿ | ಚಾರಚತುರರು ನಿಮ್ಮಡಿಗಳಾ |
ಕ್ಷೀರನೀರ ವಿವೇಕತೆಯನರಸಂಚೆ ಬಲ್ಲಂತೆ ||

ಕೀರನೇಂ ಬಲ್ಲುದೆ ನಿಖಿಳಗುಣ | ಮೇರುದೇವರು ನಮ್ಮ ಬುದ್ಧಿಯ |
ನಾರಯಲು ಚಿತ್ತೈಸಿದಿರಿ ಅದಕೇನು ತಪ್ಪಲ್ಲ || ೧೭ ||

ದೇವ ಬಿನ್ನಹವಿದಱ ತೆಱನನು | ನಾವಱಿದುದಿದು ಚಕ್ರಿಯಳಿಯನ |
ಜೀವವನು ನಾವೆಳೆದ ದೆಸೆಯಿಂದಾದ ಬಲು ಜಗಳ ||
ಭಾವೆ ಜೀವಂಜಸೆಯ ಬಿಡುದಲೆ | ಆ ವಿಭುವಿಗಡಿಗಡಿಗೆ ರೌದ್ರವ |
ತೀವುತದೆ ನಮ್ಮೊಡನೆನುತ ಉದ್ವಾಹನಿಂತೆಂದ || ೧೮ ||

ಮಾತುಮಾತಿನ ಜಗಳವೇ ಅದ | ನೋತುತಿಳುಹಲು ಬಹುದು ಸಂಗರ |
ಭೀತನೇ ಹಗೆ ಚಕ್ರವರ್ತಿಯು ಆದೊಡಾವವಗೆ ||
ಸೋತವರೆ ಅಲ್ಲಲ್ಲ ನವಗವ | ನೇತಱದಿ ನೋಡಿದೊಡೆ ಪಿರಿಯನು |
ಈ ತೆಱದೊಳಿರೆ ರಾಜಕಾರ್ಯವು ರಾಯಕೇಳೆಂದ || ೧೯ ||

ಕಾದಿದಲ್ಲದೆ ಹೋಗನಾ ಹಗೆ | ಕಾದುವುದು ನಮಗರಿದುದಾದೊಡೆ |
ಕಾದ ಬಹುದೆವಗೆಂತೆನಲು ಆದೇಶ ಪುರುಷನಲ ||
ಮಾಧವನು ಅಂತಾದೊಡಂ ನಾ | ವಾದರಿಸಲೇ ಬೇಕು ತತ್ಕಾ |
ಲೋದಯವು ಬಪ್ಪನ್ನವೆಲೆ ಭೂಪಾಲ ಕೇಳೆಂದ || ೨೦ ||

ಕಿರಿದು ದೂರಾಂತರವನೈದುವ | ನೆಱೆ ಬಲಿಷ್ಠವೆನಿಪ್ಪ ದುರ್ಗವ |
ನಱಸಿಕೊಂಡಿಹವನ್ನೆವರವಿದೆ ಕಾರ್ಯವೆಂದೆನಲು ||
ಎಱೆಯನದನಹುದೆಂದೆನಲು ತಾ | ನಱಿದುಗೋವರ್ಧನನು ನಿಂದನು |
ಕಿಱಿಮಗನ ಬಿನ್ನಹವ ದೇವರು ಚಿತ್ತವಿಪುದೆಂದ || ೨೧ ||

ಓಡುವಾಳೋಚನೆಯ ಹಾರುವ | ರಾಡಿದೊಡೆ ಹಿರಿಯಯ್ಯ ನಿಮ್ಮಡಿ |
ಹೇಡಿಗೊಂಡವಲೊಪ್ಪುವುದೆ ಆ ಚಕ್ರಿತಾ ಬರಲಿ ||
ಆಡಲೇನಾತನನು ಕಂಸನ | ಕೂಡಿರಿಸುವನು ತೋಳ ಬಲುಹನು |
ನೋಡು ಸೋತರೆ ನಿನ್ನ ಮಗನೇ ರಾಯ ಕೇಳೆಂದ || ೨೨ ||

ಚಂದ್ರ ತಾರಾಬಲವು ತಮಗಾ | ದೊಂದು ದಿನದಲಿ ತನುಜರನುಜರ |
ಸೌಂದರೀ ಜನದಂಗರಕ್ಷರಮಾತ್ಯ ಮಂತ್ರಿಗಳ ||
ಸಂದಮನ್ನೆಯ ಮಕುಟ ಬದ್ಧರ | ವೃಂದದಖಿಲ ಬಲಪ್ರಮುಖ್ಯರ |
ಸಂದಣಿಯಲಾ ಪುರವ ಪೊರವಂದನು ನೃಪಾಲಕನು || ೨೩ ||

ಪುದಿದ ಜಲತೃಣಕಾಷ್ಠ ನಿಚಯಾ | ಸ್ಪದವೆನಿಪ ತಾಣಂಗಳೊಳು ನೃಪ |
ಹದುಳದಿಂ ಪಾಳೆಯವ ಬಿಡುತಲೆ ತೆಂಕಮುಖವಾಗಿ ||

ಒದಗಿ ಪೋಗುತಲತ್ತಲಾ ಮಾ | ಗಧನು ಜೀವಂಜಸೆಯ ಕಂಡಡೆ |
ಗದಡಿ ತನ್ನನುಜಾತನಪರಾಜಿತನ ಬೆಸಸಿದನು || ೩೪ ||

ಮುಱಿದು ಬಂದಾತನುಜರನುಜರ | ಜಱಿದು ಮತ್ತಪಹರಾಜಿತನ ತ |
ನ್ನನ್ನುಱುವ ತಮ್ಮನ ಕಳುಹಿ ಸಂಗಡ ಕಾಲವಯ ಬರಲು ||
ನೆಱೆದ ಸೇನಾವನದಿ ಸಹ ಬಂ | ದಱಿಸಿ ಶೌರಿಯ ಪುರದಲಿಲ್ಲೆನೆ |
ಅಱಿಸಿ ಕೊಳುತಾ ಬೆಂಬಲಿಯಲ್ಯೆ ತಂದರವರಂದು || ೩೫ ||

ಮುಂದೆ ಯದುಕುಲದರಸುಗಳು ಅ | ತ್ತೊಂದು ಬೀಡನು ಬಿಡಲು ತಾವುಂ
ಪಿಂದೆ ಬಂದು ತೊಡರ್ಚಿಕಾದುವರಿವರುತತ್ತಿಱಿಯೆ ||
ಒಂದು ಪಯಣಕೆ ಹಿಂದೆ ಹೋದರು | ಎಂದು ಈ ಪರಿ ಬೆನ್ನ ಬಿಡದಿರೆ |
ಬಂದರಿವರಾ ಊರ್ಜಯಂತಾಚಳದ ಹೊರೆಗಾಗಿ || ೩೬ ||

ಶರದಿ ಯೊತ್ತಿನಲಾ ಸಮುದ್ರದ | ಸಿರಿಯೆನಿಪ ನದಿಯಿಂ ಮನೋಹರ |
ತರಬನದಿ ಪದ್ಮಾವತೀ ವಿಷಯವು ವಿರಾಜಿಸಲು ||
ಇರಲಿದೆವಗಿಂ ಬೆಂದು ಯದುಕುಲ | ದರಸನಲ್ಲಿಯೆ ಬೀಡು ಬಿಟ್ಟಿರು |
ತಿರಲದತ್ತಲು ಸಾರ್ವಭೌಮನ ಸೇನೆಯೊದಗಿದುದು || ೩೭ ||

ನೆಲನಡುಗೆ ನಿಸ್ಸಾಳ ಕೋಟಿಗ | ಳುಲಿಗೆ ಸೇನಾಪದರಜವೆ ಬಾಂ |
ಬೊಳೆಯ ಪೂಳಲು ಬಂದ ಅಪರಾಜಿತ ನೃಪಾಲಕನ ||
ನಿಲಿಸಿ ಅರನೆಲೆಯೊಳುವುಳಿದ ಪೇ | ರ್ವಲವೆರಸಿ ಆ ಕಾಲವಯನೃಪ |
ನಳವಿಗೊಡೆ ಕಂಡಾಮುರಾಂತಕನೇಱಿದನು ರಥವ || ೩೮ ||

ಪಿಡಿದು ಶಾರ್ಙ್ಗವನೇರಿಸಿಯೇ ಜೇ | ವಡೆದು ಮಾರ್ಗಣೆ ಮಳೆಗಱೆದುಪಗೆ |
ವಡೆಯ ನೆತ್ತರ ಪೊನಲಿ ತೇಕಾಡಿಸಲು ಕಂಡು ||
ಕಡುಗುದುರೆ ಕೂರಾನೆಗಳ ದಳ | ದೊಡನೆ ಕಾಳವಯನು ಜಗಳವನು |
ಕೊಡಲು ಪಡಲಿಟ್ಟವು ಮುರಾರಿಯ ಕೋಲ ಖುರಪುಟಕೆ || ೩೯ ||

ಅತಿವಹಿಲದಲಿ ಮರಳಿ ಅಪರಾ | ಜಿತನೆಯಿದಿದನು ಕಾಲವಯನೀ |
ಕ್ಷಿತಿಪನಿದು ನೆಲೆಯಲ್ಲೆನುತ ಪಾಳೆಯವನೆತ್ತಿದನು ||
ವಿತತ ನಂದನ ನದಿಗಳಿಂ ರಾ | ಜಿತವೆನಿಸಿದಪರಾಬ್ಧಿ ವೇಲಾ |
ಪ್ರತಿಮವನವನು ಪೊಕ್ಕನಂದು ಸುಖಪ್ರಯಾಣದಲಿ || ೪೦ ||

ಅತ್ತಲಪರಾಜಿತ ಮಹೀಪತಿ | ವೊತ್ತಿ ಜಡಿದಾ ಕಾಲವಯನನು |
ಮತ್ತೆ ಏಳಕ್ಷೋಣಿಯೆ ಬಲವನು ಕರೆದುಕೊಂಡು ||

ಎತ್ತಿ ಬರುತಿರೆ ಯಾದವರ ಪು | ಣ್ಯೋತ್ತದಿಂದುಜ್ಜಂತ ಗಿರಿಯೊಳು |
ಪತ್ತಿದಧಿದೇವತೆಗಳ ಮುಂಬಿಟ್ಟ ಬೀಡಿನಲಿ || ೪೧ ||

ಪಲವು ಕೊಂಡಂಗಳನು ನಿರ್ಮಿಸಿ | ಕೆಲದಲಷ್ಟ ವಿಧಾರ್ಚನೆಗಳನು |
ಸಲಿಸಿ ಕಡುಮುಪ್ಪಿನವಳೋರ್ವಳೆ ಕುಂಡ ಕುಂಡದೊಳು ||
ಅಳುತಲೆಲ್ಲರ ಪೆಸರಿನಲಿ ಸುಳಿ | ಸುಳಿದು ಶೋಕಿಸುತಿರಲು ಮುಂಗುಡಿ |
ಯಲಿ ಬರುತಲಿಹ ಕಾಲವಯನದ ಕಂಡು ಬೆಱಗಾದ || ೪೨ ||

ಎಲೆ ಜರಾಜರ್ಜರೆಯೆ ಶೋಕಿಸ | ಕೆಲಸವೇನೀ ತೆಱವ ಪೇಳೆನೆ |
ಅಳುತಳುತ ಕೇಳಣ್ಣ ಮಗಧೇಶ್ವರನ ಭಯದಿಂದ ||
ಇಳೆಯೊಳಿರತೀರದೆ ಸಮಸ್ತರು | ಅಳದರೀ ಕೊಂಡಂಗಳಲಿ ಯದು |
ಕುಲದರಸುಗಳು ನಾಂ ಸಮುದ್ರ ವಿಜಯನದಾದಿಯನೇ ಕೇಳಿ || ೪೩ ||

ಹೇಳು ಹೇಳಿನ್ನೊಮ್ಮೆ ಯಾದವ | ರೋಳಿಯೆಲ್ಲವು ಇಲ್ಲಿ ಸುತ್ತುದೆ |
ಕಾಲವಯನೆಂಬವನ ಬಾಧೆಗೆ ಸಾಯದುಳಿದಪರೆ ||
ಕೇಳೆಲೇ ಸುಕುಮಾರ ಕಂಸನ | ಗೋಳು ತಾಗಿದುದಿಂದು ಹಾಯೆನೆ |
ಕೇಳಿ ಕೊನೆವೆರಳಿಂದ ಮೀಸೆಯ ತಿದ್ದಿದನು ನಲಿದು || ೪೪ ||

ಉರಿವ ಹೆಣಗಳ ಕಮಱನಾತವ | ನುರಿಯನಾಲಗೆ ಮುಗಿಲಮುಟ್ಟುವ |
ಪರಿಯನೆಲ್ಲವ ಹೆಸರುಗೊಂಡವಳಲುವದನು ತಿಳಿದು ||
ಹಿರಿಯಳೇ ಪರಿವಾರವೇನಾ | ಯ್ತರಿಪೆನಲು ಆಕಾಲವಯಗಾ |
ಜರತಿಯೆಂದಳು ಚಕ್ರಿಗಪರಾಧಿಗಳು ತಾವೆಂದು || ೪೫ ||

ನಾಡುಕೋಡನು ಸಾರಿದನು ಪಲ | ಕಾಡ ಕೂಡಿದವಾನೆಗಳು ನಿವ |
ಗಾಡಲೇನುಳಿದಾ ಪರಿಗ್ರಹವಿಲ್ಲಿ ಮಗ್ಗಿದುದು |
ರೂಢಿಗರುವೆನೆ ಕೇಳಿ ಹರುಷವ | ಕೂಡಿಕೊಂಡಪರಾಜಿತಂಗಿದ |
ನಾಡಿತಿರುಗಿತು ದಂಡು ಹಗೆಗಳು ಮಡಿದರೆಂದಱದು || ೪೬ ||

ಚಕ್ರವರ್ತಿಯ ಕಂಡು ನಿನ್ನಯ | ವಿಕ್ರಮಾಗ್ನಿಯ ಸಕಲ ದೆಸೆಗಳ |
ನಾಕ್ರಮಿಸಿ ಕೊಂಡಿಪ್ಪುದಾ ಬೇಂಕೆಯಲಿ ಬೆಂದವರು ||
ತಕ್ಕ ಹರಿವಂಶಜರದೆಲ್ಲರು | ನಿಕ್ಕುವಂ ತಾನೆಂದು ಪೇಳ್ದನ್ನ |
ಪರ್ಕಳಿಂ ತಿಳಿದಿರ್ದ ಸುಖದಲಿ ವರ ಜರಾಸಂಧ || ೪೭ ||

ತಿರುಗಿತಾ ನೃಪವರನ ದಂಡೆಂ | ದರಿದು ಹರುಷದಲಿತ್ತಲಿವರಿಂ |
ಗಿರಲು ದುರ್ಗವ ಸವೆಯಲೆಂದುದ್ವಾಹಮಂತ್ರಿಯನು ||

ಕರೆದು ಮಂಥಣಗೇಳಲೆಂದನು | ಹರಿಯಿರಲಿ ವರದರ್ಭ ಶಯನದೊ |
ಳಿರಲವನ ಪುಣ್ಯಧಿದೇವತೆಗಳ ಹದನ ಕಾಂಬ || ೪೮ ||

ಎನೆ ಸಮುದ್ರವಿಜಯನೊಡಂಬ | ಟ್ಟನುಪಮನನಚ್ಚುತನ ಕರೆದಾ |
ತನನು ಆ ತೆರದಿರಿಸಲೆಂಟುಂ ದಿನವು ಈ ಹರಿಯ ||
ಘನಸುಪುಣ್ಯೋದಯದಿನಾಯ್ತಾ | ಸರ ವಿಕಂಪವು ಸುರಪಗವಧಿಯಿ |
ನನುವಧಿಸೆ ನೇಮೀಶನುದಯಿಪ ಕುಲಜರೆಂದಱಿದ || ೪೯ ||

ಹರಿಕುಲದ ರಾಯರಿಗೆ ತೆಱಹನು | ಶರಧಿಯಲಿ ಮಾಡೆಂದು ನೈಗಮ |
ಸುರನ ಸುರಪತಿ ಬೆಸಸೆ ಬಂದುತ್ತುಂಗ ಹಯವೊಂದು ||
ಹರಿಯೆ ತಿಳುಹಲ್ಲಣಿಸಿ ಬಹುದದ | ನರವರಿಸದೇಱೆಂದು ಕನಸಿನ |
ಪರಿಯಲಱಿಪಲು ದರ್ಭಶಯ್ಯೆಯಿನೆದ್ದನಾ ಕೃಷ್ಣ || ೫೦ ||

ವನಜನಾಭನಮಾತ್ಯರಿಗೆ ಆ | ಕನಸನೊರೆದನಿತರೊಳೆ ಬಂದುದು |
ಇನಕಿರಣವನು ಪಳಿವ ಕಾಂತಿಯಲಿಂದ್ರ ಹಯಸಮನು ||
ಅನುಪಮಾಶ್ವವು ಮುಂದೆ ನಿಲೆ ಹರಿ | ಯನುವಿನಿಂದದ ನೇಱೆ ಮನವೆನೆ |
ವನಧಿಯಲಿ ಹಱಿದತ್ತು ನಾಲ್ವತ್ತೆಂಟು ಯೋಜನವ || ೫೧ ||

ಶರಧಿ ಹಿಂದಕೆ ತೆಗೆದು ನಿರುಂ | ಧರೆಯನಿತ್ತುದು ದ್ವಾರಮೆನೆ ಹರಿ |
ಹರಿಯನಿಳಿಯಲು ಮಾಯವಾಯ್ತಾ ಕುದುರೆ ಆದಿವಿಜ ||
ವರನಿಜಾಕೃತಿದೋಱೆ ಹೋದನು | ಸುರ ನಿವಾಸಕೆ ಇಂದ್ರ ಪೇಳ್ದಂ |
ತಿರದೆ ಧನದನು ರತ್ನಮಯದಿಂ ಪೊಳಲ ನಿರ್ಮಿಸಿದ || ೫೨ ||

ಪೊಳಲ ಸುತ್ತಲು ಕಲ್ಪತರು ನಿಭ | ಫಲ ಭರಿತ ತರು ನಿಭೃತನಂದನ |
ಬಳಸಿಹುದು ತಿಳಿಗೊಳಗಳಿಂ ಕೃತಕಾದ್ರಿ ಶೋಭೆಗಳಿಂ ||
ಅಳಿಗಳರಮನೆಗಳಿಗೆ ಭೋಜನ | ನಿಳಯ ವೊಲಗದ ಸುಗ್ಗಿ ಕೋಗಿಲೆ |
ಗಳಿಗೆ ನಾಟಕ ಸಾತಿ ಸಿಖಿ ಕುಳಕವಿಸಿ ಮೆರೆದಿಹುದು || ೫೩ ||

ಜಲಕುಸುಮನವ ಪಿಂಜರತಿ ಪರಿ | ಮಳಿತ ಜಲಖಾತಿಕೆಯ ಬಳಸಿಂ |
ತೊಳಗೆ ಮಿಸುನಿಯ ಕೋಂಟೆ ಹೊಳಲೊಳ ಹೊರಗೆ ಹೊಂಬಿಸಲ ||
ಬೆಳಗುತಿಪ್ಪುದು ಸೋಮಸೂರ್ಯೋ | ಜ್ವಲ ಸುವೀಥಿಗಳಖಿಳ ಗೋಪುರ |
ಥಳಥಳಿಪ ಸಾಲುಪ್ಪರಿಗೆ ಅಂಗಡಿಗಳೊಪ್ಪಿದವು || ೫೪ ||

ಎಲ್ಲಿ ನೋಡಿದಡಲ್ಲಿ ನಂದನ | ವೆಲ್ಲಿ ನೋಡಿದೊಡಲ್ಲಿ ತಿಳಿಗೊಳ |
ನೆಲ್ಲಿ ನೋಡಿದೊಡಲ್ಲಿ ಕಮ್ಮಂಗಳವೆ ಬೆಳೆದ ಹೊಲ ||

ಎಲ್ಲಿ ನೋಡಿದೊಡಲ್ಲಿ ನೃಪಗೃಹ | ವೆಲ್ಲಿ ನೋಡಿದೊಡಲ್ಲಿ ವಸತಿಗ |
ಳೆಲ್ಲಿ ನೋಡಿದೊಡಲ್ಲಿ ಕಣ್ಣಿಂಬಾದ ಶಿಲೆಯಿಹುದು || ೫೫ ||

ಹಲವು ಮಾತೇನದರ ಸೊಬಗಿನ | ಚೆಲುವಿಕೆಗೆ ಮಿಗೆ ನಾಣ್ಚಿ ಆಗಸ |
ವಲಗೆಯನು ಮಱೆಗೊಂಡುದಮರರ ಪಟ್ಟಣವುರಸೆಗೆ ||
ಸಲೆಯಿಳಿದುದುರಗರ ಭವನವೆನೆ | ಪಲ ಪರಿಯಲಿನ್ನದನೆ ಪೊಗಳ್ವುದು |
ಚಲವೊ ಗೆಲವೋ ಸಾಕದಂತಿರಲಾ ಪುರದ ನಡುವೆ || ೫೬ ||

ಸುತ್ತಲುಮ ಹನ್ನೆರಡು ಗಾವುದ | ವೆತ್ತಲುಂ ತನಗೆಂಬ ತಾಮದೊ |
ಳುತ್ತಮ ಶ್ರೀ ಜಿನರ ಮಣಿಮಯ ವಸತಿಗಳನಾಂತ ||
ತೆತ್ತಿಸಿದ ನವರತ್ನ ಕೋಟಿ ವಿ | ಚಿತ್ರಕೂಟೋತ್ತುಂಗ ಹರ್ಮ್ಯಾ |
ಅತ್ತದರಮನೆ ಮೂಱು ಮೂಜಗ ಬೆಲೆಯೆನಿಪವಲ್ಲಿ || ೫೭ ||

ದೇವ ನಿರ್ಮಿತವೆಂದರದ ನಿ | ನ್ನಾವ ಕವಿ ಬಣ್ಣಿಸಲು ಬಲ್ಲನು |
ಆ ವಯಿಶ್ರವಣನೆ ಅದಂ ದ್ವಾರಾವತಿಯೆಯೆಂದು ||
ಭಾವಿಸಿಯೆ ಪೆಸರಿಟ್ಟು ಮತ್ತಾ | ಭಾವಿ ತೀರ್ಥೇಶ್ವರನ ಪಿತೃವೆಂ |
ದಾ ವಿಶಿಷ್ಟಾಲಯದಲಿರಿಸಿ ಸಮುದ್ರ ವಿಜಯನನು || ೫೮ ||

ಬಲನ ಬಲದರಮನೆಗೆ ತಂದನು | ನಳಿನ ನಾಭನನೆಡದಲಿಹನಿಳೆ |
ಯದಲಿ ನೆಲೆಗೊಳಿಸಿದನು ಪಟ್ಟಂಗಟ್ಟಿದನು ಮುದದಿ ||
ಮೊಳಗೆ ಸುರದುಂದುಭಿಯು ಹೂವಿನ | ಮಳೆಗಱೆಯೆ ನೀನೀ ತ್ರಿಖಂಡಕೆ |
ತಲುವದರಸಾಗೆಂದು ಹರಸುತ ಹೋದನಾ ಧನದ || ೫೯ ||

ನುತ ಸಮುದ್ರ ವಿಜಯನು ದ್ವಾರಾ | ವತಿಯೊಳಗೆ ತನ್ನನುಜರಿಗೆ ಭೂ |
ಪತಿಗೆ ಮಂತ್ರಿ ಪ್ರಧಾನಾದ್ಯರಿಗೆ ಪುರಹರದರಿಗೆ |
ಚತುರ ಬುಧಕವಿಗಮಕಿ ಗಾಯಕ | ತತಿಗೆ ಪರಿವಾರಕೆ ನಟ ವಿಟ |
ಗ೯ತಿ ಮೆಱೆವ ಗಣಿಕಾದಿಗಳಿಗುಚಿತಾಶ್ರಯವನಿತ್ತ || ೬೦ ||

ಮುರಮಥನನಾಶ್ಚರ್ಯ ವೈಭವ | ದಿರುತಿರಾ ರಥನೂಪುರದ ಹೊಳ |
ಲರಸನೆನಿಪ ಸುಕೇತು ಖಗಪತಿಯಿವರ ತೆಱನಱಿತು ||
ವರನಿಜಾತ್ಮಜ ಸತ್ಯಭಾಮೆಯ | ಕರೆದು ತಂದನು ನಭದೊಳೆತ್ತಲು |
ನೆರೆದು ನಿಂದವು ವಿವಿಧ ರತ್ನವಿಮಾನ ಕೋಟಿಗಳು || ೬೧ ||

ದೆಸೆದೆಸೆಗೆ ಪಸರಿಸುವ ವಾದ್ಯ | ಪ್ರಸರದಲಿ ದ್ವಾರಾಪತಿಯ ರಾ |
ಜಿಸುವ ಚೆಲುವನು ನೋಡುತಿಳಿದಾ ಪುರವನೈತರಲು ||

ಒಸೆದುಯದುನೃಪರಿದಿರುಗೊಂಡಾ | ಅಸುರರಿಪು ಸದನಕ್ಕೆ ಮಿಗೆ ಸಂ |
ತಸದಿ ಕರೆತಂದರು ಸುಕೇತು ವಿಯಚ್ಚರಾಧಿಪನ || ೬೧ ||

ಶುಭಮುಹೂರ್ತದಲಿಳೆಗೆ ಪೊಸತೆನೆ | ವಿಭವದಿಂದಲಿ ಖಚರಪತಿ ಕೈ
ಟಭವಿಮರ್ದನನಾದ ಪುರುಷೋತ್ತಮಗೆ ನಿಜಸುತೆಯ ||
ತ್ರಿಭುವನದಲಿವಳನ್ನರತಿ ದು | ರ್ಲಭವೆನಿಪ ಚೆಲುವೆಯನು ಮಂಗಳ |
ರಭಸವೆಸೆಯಲು ತಾನೆ ಕೈನೀರೆಱೆದನೊಲವಿಂದ || ೬೩ ||

ವರ ಸಮುದ್ರ ವಿಜಯನು ಮೊದಲಾ | ದರಸುಗಳಿಗಕ್ರೂರ ಮುಖ್ಯರ |
ವರ ತನುಜರಿಗೆ ವಿನುತ ಶಿವದೇವ್ಯಾದಿವಧುಗಳಿಗೆ ||
ಪರಿಪರಿಯ ವಸ್ತ್ರಾಭರಣಗಳ | ತರತರದಿ ಕೊಟ್ಟಳ್ತಿಯಿಂ ಖೇ |
ಚರನು ಕಳುಹಿಸಿಕೊಂಡು ವಿಭವದಿ ನಭವನಡರಿದನು || ೬೪ ||

ಮೀಸಲಳಿಯದ ಕನ್ನೆ ಮೋಹದ | ಲಾ ಸೊಬಗಿಯಹ ಸತ್ಯಭಾಮೆಯು |
ವಾಸುದೇವನುಮೀರ್ವರುಂ ಸಮರಾಗ ಸಂಭ್ರಮದಿ ||
ಓಸರಿಸದಂಗಜ ಕಲಾ ವಿ | ನ್ಯಾಸದಿಂ ಸವಿಶುಶಿಲನುಮಡು ವಿ |
ಲಾಸಿಗಳು ನಾನಾ ವಿನೋದದಿ ಸುಖದಲಿರುತಿಹರು || ೬೫ ||

ಶ್ರೀಯರಸ ಶೃಂಗಾರ ರಸಕಥಿ | ನಾಯಕರು ಹರಿಯೆನಲು ಖೇಚರ |
ರಾಯ ಸುಕುಮಾರಿಯೊಳು ಸಕಲಕಲಾ ಪ್ರವೀಣೆಯೊಳು ||
ಕಾಯಜೋತ್ತಮ ಸೌಖ್ಯಸುಧೆಯನು | ಕಾಯಜನ ಪಿತ ಸವಿವುದರಿದೇ |
ಜೀಯೆನಿಪ ವಾಣೀಮುಖ ಶ್ರೀ ರತ್ನ ದರ್ಪಣನು || ೬೬ ||

ವರಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀಜಾತ ಮದ ಮಧು |
ಕರ ವಿಭಾಸಿ ವಿನೂತಕವಿ ಜಿನಭಕ್ತ ವಿರಚಿಸಿದ ||
ಪರಮ ನೇಮಿಜಿನೇಂದ್ರ ಪಾವನ | ಚರಿತೆಯೊಳಗೈದನೆಯದೆನಿಸಿಯೆ |
ದೊರೆವಡೆದುದಾ ಕಂಸಮರ್ದನ ಪರ್ವವಿಭ್ರಮವು || ೬೭ ||

|| ಅಂತು ಕಂಸಮರ್ದನ ಪರ್ವಕ್ಕಂ ಸಂಧಿ ೨೩ ಕ್ಕಂ ಮಂಗಳ ಮಹಾ ||

**ಸಂಧಿ ೧೪**

ದೇವಕೀ ನಂದನನು ಬ್ರಹ್ಮಪುತ್ರನನುದಿಗೆ |
ಕಾವನೈದಂಬಲೆಯೆ ದಂಡೆತ್ತಿ ನಡೆದುತಾ |
ನಾವನಿತೆರುಗುಮಿಣಿಯನುರ್ಕಿನಿಂ ತಳೆದು ತತ್ಪುರದನದೊಳಂದಿರ್ದನೈಯ್ಯ || ಪ ||

ಶ್ರೀ ರಮಣನಿಂತು ಸುಖದಿಂದೆ ವಿದ್ಯಾಧರ ಕು |
ಮಾರಿಯಂ ಸತ್ಯಭಾಮೆಯನೊಲಿದುಮದುವೆನಿಂ |
ದೋರಂತೆ ಸುಖದಿರ್ಪನೆಂದರಿದು ಪರಸಿ ಪೋಪುಜ್ಜುಗದಿನೊಂದು ದಿವಸ ||
ನಾರದಂ ನಭದಿನಿಳಿತಂದು ಹರಿಯಂ ಪರಸಿ |
ವಾರಿಜಾನನೆ ಸತ್ಯಭಾವೆಗಾಶೀರ್ವಚನ |
ಸಾರಮಂ ಕಂಡ ಪೋದನಾ ಸತಿಯ ಸದನಕ್ಕೆ ನಾಡೆ ಕಲಹಪ್ರಿಯನು || ೧ ||

ಆ ವನಿತೆಯಾಗಳಾ ಶೃಂಗಾರಸಾಲೆಯೊಳು |
ತೀವಿರ್ದ ಮೇಳದೆಳೆವೆಣ್ಬಳಗದೊಡನೆ ನಾ |
ನಾವಿಧದ ಮಣಿಭೂಷಣಾವಳಿಗಳಿಂ ಪರಿಮಳಾನುಲೇಪನ ವಸನದಿಂ ||
ಭಾವೆ ನೆರೆಸಿಂಗರಿಸಿಕೊಳ್ವನಾ ಕನ್ನಡಿಗಾಣ್ಬ |
ನೀವಿಯಂತದರಿಂ ಕಬರಿಬಂಧಮಂ ಕರೆದ |
ನೀವುವುಜ್ಜುಗದೆ ಯೌವನರೂಪ ಮದಗರ್ವದಿಂ ಮುನಿಯ ಮರದಿರ್ದಳೈ || ೨ ||

ಇದಿರೆದ್ದು ಬಂದರ್ಘ್ಯಪಾದ್ಯಮಂ ಕುಡದೆ ಸ |
ನ್ಮದದಿನಭಿವಂದಿಸದೆ ತಕ್ಕಾಸನವನಿಡದೆ |
ಮದವತ್ಸುರೂಪ ಯೌವನ ವಿಭ್ರಮೋದಯದಿನುರದಿರ್ದಳೆಂದು ಮುನಿಪ ||
ಪದುಳದಿಂ ಕ್ಷಮಿಸಲರಿಯದೆ ತನ್ನ ಚಿತ್ತದೊಳು |
ಮದಗಜಕೆ ದಂತ ಭಂಗಂ ರಾಜಪುತ್ರರ್ಗೆ |
ಕದನ ಭಂಗಂ ಮುನಿಗವಜ್ಞೆಯಾದುದೆ ಭಂಗವೆಂದು ಮುನಿದೆದ್ದನಿರದೆ || ೩ ||

ಮುನಿಮುನಿದುಪೋಗುವದೊಂದುಪಯಮಂ
ನೆನೆದನಾಕೆಯಗರ್ವಮಂ ನುರ್ಗಿಯಾಳ್ವ ಚೆಲು |
ವಿನ ಸವತಿಯೋರ್ವಳಂ ತರಿಪೆನೆಂದೆಲ್ಲ ದೇಶದೊಳುರುವ ಪೆಣ್ಣರಸುತ |
ವಿನುತ ಕೊಂಡಿಮಪುರವನೈದರಾಯಾಲಯಮ |
ನನುನಯದಿ ಪೊಕ್ಕನಾ ಸಮಯದೊಳು ಮುನಿಗೆ ಭೋ |
ರನೆ ಭೀಷ್ಮರೆದ್ದೆರಗಿ ತಕ್ಕಾಸನದೊಳಿರಿಸಿ ಕೈಮುಗಿದು ಕುಳ್ಳಿರ್ದನು || ೪ ||

ಆ ನಾರದಂಗೆ ಭೂಪನರಾಣಿ ಸಿರಿದೇವಿ |
ತಾನೆರಗಿ ಪರಕೆಗೊಂಡಂತರಂ ತತ್ಪುತ್ರಿ |
ಮೀನಾಕ್ಷಿ ರುಗುಮಿಣೀದೇವಿ ವಿನಯದಿ ಪೊಡವಡಲ್ಕೆ ನೋಡುತ ಮುನಿಪತ ||
ದಾನವಾರಿಯ ಪಟ್ಟದರಸಿಯಾಗೆಂದು ಸ |
ಮ್ಮಾನದಿಂ ಪರಸೆ ಕೇಳ್ದತಿ ಬೆಕ್ಕಸಂಬಟ್ಟೆ |
ದೇನೆಂದಿರಾ ದಾನವಾರಿಯೆಂದಾರೆಂದವರ್ಕೇಳೆ ಮುನಿ ಪೇಳ್ದನೈ || ೫ ||

ಸುರಪ ವಿರಚಿತಮದುಂ ದ್ವಾರಾವತಿಯೆನಿಪ್ಪ |
ಪುರವರನು ವಸುದೇವನಾತ್ಮಜನು ಸಿರಧರ |
ವರನನುಜನೆನಿಪ ನಾರಾಯಣನು ನೋಡೆ ಕಾರಣ ಪುರುಷನಸುರಾಂತಕಂ ||
ಭರದಿ ಕಾಳಿಂಗ ನಾಗನ ಮಡುಗಲಂಕಿದವ |
ನುರುಕಂಸನುಂ ಕಂಸ ಚಾಣೂರಮಲ್ಲ ಸಂ |
ಹರಣ ನೇಳ್ವಗಲಿಳಾಧರವನೊಂದೆ ಬೆರಳ್ಗೊಳಾಂತ ವಿಖ್ಯಾತನವನೈ || ೬ ||

ವಸುಮತಿಯೊಳಾಂತ ತ್ರಿಖಂಡ ಚಕ್ರೇಶ್ವರನು |
ಶಿಶುತನದೊಳಖಿಳ ದೈತ್ಯರ ನೊಕ್ಕಲಿಕ್ಕದವ |
ನುಸುರಲೇನಾತನಾಗ್ನೆಯೆನಿಸಿತು ಮೀರಿ ಬಾಳ್ವರ ಕಾಣೆನೀ ಮಹಿಯೊಳು ||
ಜಸವೆತ್ತು ಮೆರೆವಾ ಸಮುದ್ರವಿಜಯಕ್ಷ್ಮಾ ಪ |
ನೆಸೆವ ತೀರ್ಥಂಕರರ ಜನಕನಾ ಹರಿಗೆ ರಾ |
ಜಿಸುವ ಹಿರಯಯ್ಯನೆಂದೊಡೆ ಮತ್ತಮವನ ಸಿರಿಯೇಂ ಪಿಡಿದು ನೋಡೆಂದನೈ || ೭ ||

ಆತನೈಶ್ವರ್ಯಮಂ ಶೌರ್ಯಧೈರ್ಯಂಗಳಂ |
ಚಾತುರ್ಯಮಂ ಪೊಗಳನೆನ್ನಳವೆ ನೀನೀರ್ವ |
ರೋತಿ ನಿಮ್ಮ ಕುಮಾರಿ ರುಕುಮಿಣಿಯನಾತಂಗೀ ಕುಡುವುದೆಂದಾ ನಾರದಂ |
ಭೂತಳೇಶಂಗೆ ತತ್ಸತಿಗೆ ನಣ್ಪಿಂ ಪೇಳೆ |
ಮಾತೇನೋ ಶಿಶುಪಾಲಕಂಗಿತ್ತೆವೀಮಗಳ |
ನಾತನುಂ ನಿರ್ಬಣಂ ಬಂದಪನಿವಳಾ ಮದುವೆ ನಾಡದಿನೊಳೆಂದರವರೈ || ೮ ||

ಬೇಡ ಗಡ ಮರುಳಾಟಮೀ ಮಗಳ ಮದುವೆಯನು |
ಮಾಡುವುದೆ ಪುಸಿ ನಿಮ್ಮ ಶಿಶುಪಾಲಕಂಗೆ ಕೇ |
ಳಾಡಿದಂ ಮುನಿಪನಿಂತೆಂದು ನೋಯಲು ಬೇಡ ಮಾಧವಂಗೀ ಕನ್ನೆಯ ||
ನಾಡೆ ಕೊಡಿಮೆಂದಾಡೆ ಕೊಡುವುದನುಚಿತಮೆಂತು |
ಬೇಡುವುದೆ ಪೆರರ್ಗಿತ್ತ ಪೆಣ್ಣನೆಂದವರುಸುರೆ |
ಕೂಡೆ ಮುನಿದೆದ್ದನತ್ತಲಾ ಪೆಣ್ಣರೂಪಂ ಪಟದೊಳಾಂತು ಕೊಂಡೈದಿ || ೯ ||

ಆ ಸುಗುಮನ್ನೈದಿ ಬಾಂಬಟ್ಟೆಯಿಂ ಶಿಖಿಮುಂಜಿ |
ಭಾಸುರ ಕಮಂಡಲಂ ಯಜ್ಞೋಪವೀತವೆಸೆ |
ಆ ಸಭೆಯನೇಳ್ದಿದಿರುಗೊಂಡೆರಗಿ ವಿಷ್ಟತ |
ಕ್ಕಾಸನದೊಳಿರಿಸಿ ಬಿಜಯಂಗೈದರೇಂ ಮುನಿಪ |
ರೀಸು ಬರದೆನೆ ದೇವಋಷಿ ತೋರಿದಂ ಚಿತ್ರಪಟವನತಿ ಚತುರನಿಂದ್ಯೈ || ೧೦ ||

ಮಂಡನಂಬಡದೆಸೆವ ಪಟದರಸ ಚಿತ್ರವನು |
ತಂಡದೆಳೆ ತಿಂಗಳುರಉುವರಸಿಯೆನಿಸುವ ಚೆಲ್ವು |
ಗೊಂಡು ಮೋಹನವಾಂತು ಲಕ್ಷಣಂಬೆತ್ತು ಪಸದನಗೈದು ಕಡುಸೊಬಗಿನಿಂ ||
ಮಂಡಿಸುವ ಲಲಿತಾಂಗ ಮಗನಂತೆ ನುಡಿಯ ಬಗೆ |
ಗೊಂಡುನುಡಿಯದೆನಾಣ್ಚೆನಿಂದವೊಲ್ ತೋರ್ಪುದಂ |
ಕಂಡುಕಂಡ್ಯೆದೆ ಮನದಣಿಯದದರಂತೆ ತಾನುಂ ಚಿತ್ರವಾಗಿರ್ದನ್ನೈ || ೧೧ ||

ಇರೆನೋಳ್ಪನೆಂಬವನ ಬಗೆನೆಜೆಯದದರ ಸಿರಿ |
ಪಿರಿದೆಂದು ಚಿತ್ತದಲಿ ಬೆರಗಾಗಿರೆ ವಾಮ್ಮನು |
ಬ್ಬರಿಪ ಪುಳಕವನಾಂತು ನಿಜ ಶಿರಸ್ಕಂಪನ ನೆರೆನೋಡಿ ನಳಿನನಯನ ||
ಸ್ಮರಸತಿಯೊ ನಾಗವನಿತೆಯೊ ವನಶ್ರೀಯೊ ಪೇ |
ಳಿರದಿದಾವಳ ರೂಪಿದೆಂದು ಬೆಸಗೊಂಡನಾ ತಾವರೆಯ ಮೊಮ್ಮಗನನ್ನೈ || ೧೨ ||

ಅರಸನಿಂ ಕುಂದನಾಡಲು ಬಹುದೆ ಮೈಗೆಟ್ಟ |
ನರಸಿಯಂ ಮೊರೆಗೊಟ್ಟ ಹೆಣ್ಣನಾವಗ ಮಿರದೆ |
ತಿರಿತಿಂಬ ವನಮಡದಿಯಂ ಪಲರಸೂಗೆಯನು ಕಿವಿಯಿಲ್ಲದಂಗನೆಯನು ||
ಮರಗಿಡುಗಲೆಡೆಯೊಳುದಯಿಸಿದವರನೇಂ ಪೋಲಿ |
ಪರೆನೋಡಲಿನಿತೂಣಯಂದಳೆಯದಿರ್ದ ಸೌಂ |
ದರಿಗೆ ಸರಿಯಾರೊ ದೊರೆಯಾರೊ ಎನೆ ಮತ್ತಮವಳಾರೊ ಮುನಿ ಪೈಳೆಂದನ್ನೈ || ೧೩ ||

ಕೇಳಂಬುಜಾಂಬಕ ವಿದರ್ಭ ದೇಶದೊಳೆ ಪೆಂ |
ಪಾಲನೊಪ್ಪುವುದು ಕೊಂಡಿಮಪುರಮದಂ ಸೌಖ್ಯ |
ಜಾಳನತುಳಂ ಭೀಷ್ಮ ಭೂಪಾಲನಾಳ್ವನಾತನ ಪಟ್ಟದರಸಿ ಸುರಸೆ ||
ಬಾಲೆಮೀಂಗಣ್ಣವಳು ಶ್ರೀದೇವಿ ತತ್ಪುತ್ರ |
ನಾಲೋಕಿಪರ್ಗೆಮನಸಿಜನೆನಿಪ ರುಗ್ಮಣಂ |
ಬಾಲೆ ರುಗುಮಿಣೆಯವಂಗನುಜೆಯಾಗಿರುತಿರ್ಪಳವಳನೇವಣ್ಣಿಸುವೆನ್ನೈ || ೧೪ ||

ಏನೆಂಬೆ ನೀಕ್ಷಿಪರ ಕಣ್ಣಪುಣ್ಯದ ಸಿರಿಯ |
ನೇನೆಂಬೆನಲರಂಬನಧಿದೇವತೆಯ ಸೊಬಗ |

ನೇನೆಂಬೆನಂಗಜನ ಪಂಚಬಾಣಂಗಳೊಂದೊಡಲಿಟ್ಟು ನಿಂದುದೆನಿಪ ||
ಮಾನಿನಿಧಾನವನು ಭಾವಜನ ಮಚ್ಚು ಮ |
ದ್ದೇನಂಗವಾಂತುದೆನಿಸುವ ಹೆಂಗಳರಸಿಯನ |
ದೇನೆಂಬೆನೇನೆಂಬೆನಮನು ಮದನನ ಮಂತ್ರದೆಯಂ ರುಗುಮಿಣಿಯಾನ್ಯೈ || ೧೫ ||

ಅವಳ ಮೊಗದೊಳು ಸಸಿಯ ಕಡೆಗಂಗಳೋಳುನವ ಕು |
ಸುಮ ಶರತತಿಯನವಳ ಪುರುವಿನೊಳೆ ಸಬ್ಬವಡಿ |
ಕ್ಷವನುವನವಳಳಕದೊಳು ಭ್ರಮರಸಂಕುಳವನವಳೊಳ್ನುಡಿಯೊಳು ||
ಸವಿವೀರಿ ಗಳಪುವರಗಿಳಿಯನಾ ಚದುರಿನಿಂ |
ದವಳಿಂಚರದೊಳುಲಿವ ಕೋಗಿಲೆಯ ನಿರಿಸಿತಾ |
ನವಳಂಗದಲ್ಲಿ ನೆಲೆಮನೆಗಟ್ಟಿ ಬಾಳುತಿಹನನುದಿನಂ ಕಂದರ್ಪನ್ಯೈ || ೧೬ ||

ಮುಗಿದ ಭುಜಮಂ ಪಲಂಬಿಡೆದಳಿವ ಕದಳಿಯಂ |
ಮೃಗಪತಿಯ ಮಧ್ಯಮಂಗಿನಿಸಗಲ್ವಾ ಚಕ್ರ |
ಯುಗಲಮಂ ಮಾತಂಗಹಸ್ತಮಂ ಪಗಲಿನೊಳು ಕಂದುವಿಂದುವನಾಗಳೆ ||
ವಿಗೆ ಕೊರಗುವಳರ್ಗಣೆಯ ನಾರಡಿಯನಾ ಪೆಣ್ಣ |
ಸೊಗಸುವಡಿ ತೊಡೆನಡುಪೊದಳ್ವ ಮೊಲೆ ತೋಳ್ಗಳ್ಗೆ |
ನಗೆ ಮೊಗಕೆ ನೋಟಕಳಕಕ್ಕೆ ಸರಿಯೆಂದೊಡುವ ಮಾಹೀನವಾಗದಿರದ್ಯೈ || ೧೭ ||

ಅಡಿಯೊದೆಳೆದಳಿರೂರೊಳೆಸೆ ರಂಭಾಸ್ತಂಭ |
ದೊಡನೆ ನಡುವಿನೊಳು ಹರಿ ಮಧ್ಯಮೆದೆ ವದಕೆಯೊಳು |
ಬಿಡದಪೊಣವಕ್ಕಿನಲಿ ತೋಳೊಳಾ ಪಲ್ಲಮರಿವಲೆವ ಬರಿಕೈಮೊಗದೊಳು |
ಪೊಡರ್ವ ಪುಣ್ಣಮೆಯ ಬಿಡುವೀಕ್ಷಣದೊಳಲರಂಬು |
ಮಡದಿಯಿಂದುಟಿಯೊಳೆಲಪವಳಲತೆ ಕುರುಳೊಲಾ |
ರಡಿ ಕಬರಿಯೊಳು ಸೋಗೆ ತಾವುಪಮೆವೆತ್ತು ತೋರುತ್ತಿಪ್ಪುದೇವೇಳ್ವೆನ್ಯೈ || ೧೮ ||

ಅಳಿತುಳಿಯದಂಬೋಜವೆಲರಲೆಯದೆಳೆವಳ್ಳಿ |
ಕಳೆ ನೆರೆವ ಸಸಿಲೇಖೆಗಳಿಯದಿ ನಿವಂಣಿನಿಸು |
ಬಳಸೆಕೈಗುತ್ತದಿನಿದಾನವಾಸ್ವಾದಿಸದ ಸೊದೆಯ ತೀವಿದ ಪೊಂಗೊಡ ||
ಪೊಳೆವ ಕೀಣಣೆಗೊಳಿಸದುರುಮಾಣಿಕಂ ವಿಂದ |
ಗಳೆಯದೊಳು ಮುತ್ತು ಮದನನಮೀಸಲಳಿಯದಾ |
ಬೆಸಸೆನಿಸಿ ಸೊಗಯಿಪಳು ನವಯೌವನದಸೊಂಪು ಪೆಂಪಿನಿಂದಾಸುದತಿಯ್ಯೆ || ೧೯ ||

ಸರಿಗಾಣೆನೊರೆಗಾಣೆನವಳ ಚೆಲುವಿಕೆಗೆ ಭೂ |
ಚರ ಖೇಚರಾಮರೋಗವನಿತೆಯರೊಳರರೆ |

ಸಿರಿಸೊಬಗು ಚೆಲುವು ಜಿನಭಕ್ತಿಯೊಳು ಸೀತೆಯಂ ಪೊಗಳರಂದಿನಕಾಲಕೆ ||
ಧರಯೊಳಿವಳಾಕೆಗೈವಡಿ ಪೆಂಪನಾಂತಿಪ್ಪ |
ವರನಪ್ಪುದಕ್ಕೆ ನೀನೇ ಪಾಟಿಯಿಂತಲ್ಲದಿಲ್ಲ ಪೆರತೇನೆಂದನೈ || ೨೦ ||

ಇರುಳೆರೆಯನಂ ಪಾಲ್ಗಡಲು ಪಗಲೆಣೆವಕ್ಕಿ |
ತರುಣಿಯನು ಸರಸಿರುಹ ನೆನೆವಂತೆ ನೆನೆವಳಾ |
ತರಳೆ ನಿನ್ನನೆ ನಮ್ಮನುಡಿಗೇಳಿದಂದದಿ ನಿಂದಾದೂಸರಿಂ ಬಂದೆವೊ |
ಮುರವೈರಿ ತಳುವದೀಗಳೆ ಪೋಪುದತ್ತಲಾ |
ತರುಣಿಯನು ಯಮನಸುತ ಶಿಶುಪಾಲನೆಂಬ ಭೂ |
ವರನೊಳಿತ್ತರು ನಿಬ್ಬಣಂ ಬಂದುದಾ ಮದುವೆನಾಡಿದಿನೊಳೆಂದರವರೈ || ೨೧ ||

ಹರಿಯೆಂದು ಬೆದರುವನೊ ಹರನೆಂದು ಬೆಚ್ಚಿಪನೊ |
ಸರಸತಿಯ ಪತಿಯೆಂದು ಸೈರಿಪನೊ ಬಗೆಗೊಟ್ಟು |
ತರುಣಿಯರ ವಾರ್ತೆಯಲಿ ಕೇಳ್ವರೆಲ್ಲರಮರ್ಮಮಂ ಮದನನಿರಿಯದಿಹನೆ ||
ಹರಿಯೆರ್ದೆಯೊಳಾಮುನಿಯ ನುಡಿಯುಮಂಗಜನ ಪೊಳ |
ಪಲರ ಹೊಸಮಸೆಯ ಪೊಗರಂಬುಗಳುಮೊಡಮೊಡನೆ |
ಭರದಿ ನೆಲೆಗೊಂಡುವಲ್ಲಿಂಬಳಿಕೆ ಮುನಿ ಪರಸಿ ಗಗನಕವತರಿಸಿದಪನೈ || ೨೨ ||

ಯುವತಿಯರದೆಸೆಯಿಂದ ಬಂದ ಸವಿನುಡಿಗಳಂ |
ಕಿವಿಗೊಟ್ಟು ಕೇಳದವನಾರೊ ನಾರದನೆ ಬಂ |
ದವಳಂಕಮಾಲೆಗಳನೊಲಿದು ಬಣ್ಣಿಸೆ ಮನಂಗೊಟ್ಟು ಪಂಬಲಿಪುದರಿದೆ ||
ತವಕಿಸುವಬಿತ್ತು ಮುರ್ಬುವ ಪುಳಕವಾಹರಿಗೆ |
ಕಿವಿವೇಟದಿಂದಾಯ್ತು ಕಂಬೇಟದಿನ್ನೆಂತೋ |
ಪವಣಿಸುವನಾರೊರಗುಮಿಣಿಯ ಸೋಂಕಿಂದಾದ ಸುಖದಸುಗ್ಗಿಯ ಬೆಳೆಸನೈ || ೨೩ ||

ಪರೆಯಿಸದವನೋಲಗವ ಬಲನ ಮಂತ್ರಿಯಮತದೊ |
ಳೊರೆದ ಕಾರ್ಯಾಂತರವನರ್ಜನನನೊಡಗೊಂಡು |
ನಿರದೆ ದಂಡೆತ್ತಿ ಬರವೇಳೆಂದು ದಂಡನಾಥನೊಳರುಪಿ ಮಧುಸೂಧನ ||
ತುರಿತದಿಂ ಬಲಭದ್ರ ಪಾರ್ಥಸಾತ್ವಕಿಗಳಂ |
ಬೆರಸಿ ಪರಿದಾಶೇಮಂ ಪೊಕ್ಕುಗೊಂಡಿಮಾ |
ಪರಭಾಗ ಶುಷ್ಕನದಿಯೆಡೆಯನಂದನದಲ್ಲಿ ನಿಲಿಸಿದಂ ಮಣಿರಥವನು || ೨೪ ||

ಅಲ್ಲಿ ನರನುಂ ಸಾತ್ವಕಿಯುಮೆಂದರಾ ಹರಿಗೆ |
ನಿಲ್ಲದಾ ಪಟ್ಟಣಮನೊರ್ಮೆನೋಡಿಯು ಬರ್ಪೆ |
ವಿಲ್ಲಿರೆಂದಿಳಿದು ರಥದಿಂ ಮುಂದೆ ನಡೆಗೊಂಡು ಕಂಡರಾ ಬಿಟ್ಟಬೀಡ ||

ಎಲ್ಲಿ ನೋಡಿದಡಿಳೆಯೆ ಬೇಸಲೇಯೆಂಬವೋ |
ಲೆಲ್ಲಿಯುಂ ಪಸರಿಸಿದ ಸೈನ್ಯಮಂ ನೋಡುತ್ತೆ |
ಬಲ್ಲಿದರು ಪೋಗುತೆಡೆಯೊಳದೋರ್ವನಂ ಕಂಡಿದಾರದೈ ಪಡೆಯೆಂದರ್ರೈ || ೧೫ ||

ಎಂದೊಡೆಂದಮ್ಮಂಡಲಾಧಿಪತಿ ಯಮರಾಜ |
ನೆಂದೇಳ್ಗೆವೆತ್ತವನ ಬೀಡು ಮತ್ತಾ ನೃಪನ |
ನಂದನನು ಶಿಶುಪಾಲನವನ ಭುಜವಿಕ್ರಮವನಾರು ಬಣ್ಣಿಪರಾಂತೊಡೆ ||
ಒಂದು ನಿಮಿಷದೊಳೆ ತಿಸುಳಿಯನಾದೊಡಂತಿರವ |
ನಿಂದಲ್ಲದೆರಡು ದಿನವಾತನ ವಿವಾಹವೆಸೆ |
ವಿಂದುಮುಖಿ ರುಗುಮಿಣಿಯನಿತ್ತನಾಕೆಯ ತಂದೆ ಭೀಷ್ಮರದರಿಂ ಬಂದರ್ರೈ || ೧೬ ||

ಅವನ ನುಡಿಗೇಳ್ದು ನಸುನಗುತ ಪಟ್ಟಣವಪೊ |
ಕ್ಕವನಿಪರು ಜಿನಗೇಹದೊಳೀಗಳುಂ ಮಂದೂರ |
ದವಳೋಕಿಸುತ್ತೆ ಪೊರಮಡುತೆ ಸಾರ್ದಾಜಿನರ್ಗೆರಗೆ ಪೋಪವಸರದೊಳು ||
ತವಕದಿಂದರಸುವ ನಿಧಾನವಿಧಿರೇಳ್ದು ಬ |
ಪ್ಪವೊಲಿದಿರ ಬರುತಿರ್ದಳಾ ಜಿನಾರ್ಚನೆಗದಾ |
ಯುವತಿಯರ ಸೀಮಂತ ಮಣಿಯೆನಿಪ ರುಗುಮಿಣೀ ಮಹಾದೇವಿ ವೈಭವದೊಳ್ಳೈ || ೧೭ ||

ತೊಲಗೆಲವೊ ಮನಸಿಜಮದದಾನೆ ಬರುತಲದೆ |
ತೊಲಗಿರೆಲೆ ಮನ್ಮಥನ ಮಸದಲಗು ಬರುತಲದೆ |
ತೊಲಗಿರೆಲೆ ಮಕರಕೇತನ ಜಯಶ್ರೀ ಬರುತಲದೆ ವಿದರ್ಭಾಪತಿಯ ||
ಕುಲತಿಲಕ ಬರುತಲದೆ ತೊಲತೊಲಗಿಮೆಂಬ ಬ |
ಲ್ಲುಲಿಪೊಣ್ಮೆ ಪಡಿಯರತಿಯರೆ ಜಡಿವ ಕಳಕಳದಿ |
ಲಲನೆಯರ ಕಲಕಾಂಚಿಯಿಂಚರದಿನೇವುರದ ಝಣತ್ಕೃತದಿವೆಸೆಯೆ ಬಂದಳ್ಳೈ || ೧೮ ||

ತುಂಬಿರ್ದ ತಾರಕಾ ಮಧ್ಯದೊಳು ಚಂದ್ರಕಲೆ |
ತಾಂಬಾನೊಳ್ಳೈದುವವೊಳೆಲೆವರೆಯದಾಳಿ ಕ |
ದಂಬಕವ ನಡುವೆ ಪೊಸಮುತ್ತಡಸಿ ಮೆರೆವ ಪಲ್ಲಕ್ಕಿಯಲಿ ಮಂಡಿಸಿರ್ದು ||
ಬೆಂಬಿಡದೆ ಛತ್ರ ಚಾಮರನಿಚಯವೊಪ್ಪುತಿರೆ |
ತಂಬಿಸಿಲನುಗುಳ್ವನಗೆ ಮೊದಲಲಿತಾಂಗಿ ಚೆ |
ಲ್ವಿಂಬಂದು ಪೊರಗಿಳಿದು ಕಾಲ್ತೊಳೆದು ಜಿನಗೇಹಮಂ ಪೊಕ್ಕಳುತ್ಸವದೊಳು || ೧೯ ||

ತನುಮನೋವಚನ ಶುದ್ಧಿಯೊಳಿಂತು ಪೊಕ್ಕು ತ |
ಜ್ಜಿನಪತಿಗೆ ನುತಿಸಿ ಪೂಜಿಸಿ ಭಕ್ತಿಯಿಂ ಮಣಿದು |
ಮುನಿಗಳಿಗೆರಗಿ ನಿತ್ಯಂ ವ್ರತಂಗೊಡೆಂದಿನಂತೆ ಮತ್ತಾ ರುಗುಮಿಣೆ ||

ಜಿನ ಭವನದಿಂ ಮನೆಗೆ ಪೋಪ ಸಮಯದಲಿ ದೊ |
ಕ್ಕನೆ ನೋಡುತಿರ್ದ ಮಧ್ಯಮ ಪಾಂಡವಂ ಧೈರ್ಯ |
ಮನನೆತ್ತಿ ಪೆಗಲನೇರಿಸಿಯೆ ಕೊಂಡನೆಲ್ಲರುಂ ಕಂಗೆಡಲು ರುಗಮಿಣಿಯನು || ೨೦ ||

ಘೋಳೆಂದುದಾಸತಿಯ ಮೇಳದಬಲೆಯರು ಕೆಲ
ದಾಳುಗಳು ಕೇಳಿರದೆ ಪತ್ತಿಮುತ್ತಿದೊಡಿವರು |
ಬಾಳಲಿವರೇ ಪಾರ್ಥ ಸಾತ್ವಕಿಗಳವರ ನಿತ್ತೈತರುತೆ ಸತಿ ಬೆದರದ ||
ಬಾಳಮ್ಮ ಕೃಷ್ಣನೆಡೆಗೈವೆ ವೆಂದೊಯ್ಯುತಿರೆ |
ಕೋಳಾಹಳಂ ಮಸಗಿತೆಲ್ಲಿಯು ನಮ್ಮ ಭೂ
ಪಾಲವಂದನೆಯ ನೀರ್ವೊರೆಯಮಾನಸರು ಬಂದು ಕೊಂಡೊಯ್ದರೆಂದವರು || ೨೧ ||

ವನಜನಾಭಂಗೆ ರುಗುಮಿಣಿಯೊಯ್ಯೆವಾನರ್ಜು |
ನನು ಕದ್ದು ಕೊಂಡೊಯ್ದರೆನ ಬೇಡ ನಿಮ್ಮೊಳಾಂ |
ತನುವರಂಗೈದಲ್ಲದೇಂ ಪೋಗೆವೆಂದು ಸಿಂಹಾರವದಿ ಗರ್ಜಿಸುತ್ತ ||
ವನಿತೆಯಂ ತೋರಿಮತ್ತತ್ತ ಶಿಶುಪಾಲ ಭೂ |
ಪನ ಪಡೆಗೆ ಬಂದಂತೆ ಪೇಳ್ದರಿದಿರಾಂತರುಂ |
ಮುನಿದಿಕ್ಕಿ ವನಜಾಕ್ಷನಿರ್ದಬನಮಂ ಪೊಕ್ಕರೇಂ ಸಾಹಸಿಗರೋ ಧರೆಯೊಳು || ೨೨ ||

ಅಂತರುಗಮಿಣಿಯನುರ್ಕಿಂ ತಂದುಮಾ ಸಿರಿಯ |
ಕಾಂತನ ರವಕ್ಕಿಳುಪಿದಂ ನಾಡೆ ಶಿಶುಪಾಲಾ |
ನಾಂತಿರ್ದಗೆಲವೆಣ್ಣುಮಂ ವಿದರ್ಭೇಶ್ವರನೊಳಿರ್ದ ವಿಜಯಾಂಗನೆಯನು ||
ಸಂತಸದಿನರ್ಜುನನ ಸೆಳೆತಂದಿರಿಸುವಂತೆ |
ಕಾಂತೆಯಂ ನೋಡಿ ಪೂಗೋಲ ಬತ್ತಳಿಕೆಯಂ |
ಬಂತೆ ಸೊಗಯಿಪ ಚಿತ್ತವಾಂತು ಪುಳಕಿತಗಾತ್ರನಾದನಾ ಕಂಸಾರಿಯ್ಯೆ || ೨೩ ||

ಅವಳ ರೂಪೆಂದು ಪಟದಲಿ ಭರ್ಚಿಸರ್ದ ಚಿ |
ತ್ರವನಂದು ನೋಡಿ ಮುನಿ ಪೇಳ್ದ ಮಾತಂ ಕೇಳಿ |
ಲವಲವಿಕೆವೆತ್ತಂಗಜಾಸ್ತ್ರಗೆಡೆ ಗೊಟ್ಟವನೆ ದಿಟದಿಂದಲಾ ಪೆಣ್ಣನೆ ||
ಅವಲೋಕಿಸುತ್ತೆ ಸಾರಿರ್ಪಾಗಳಾ ತನಿಂ |
ನವಪು ಮೈಸರಕೆಗುರಿಯಪ್ಪು ದರಿದೇಬಗೆವೊ |
ಡವನೀಧರಧರನ ಕಣ್ಕೆಂಗಳವಳಂಗ ಲಾವಣ್ಯ ನದಿಯೊಳೆ ನಲಿದವ್ವೆ || ೨೪ ||

ಎಳೆಯಳಂಗಜ ಪಿತನ ನೀಳಚ್ಛವಿಯ ತನುವ |
ನೆಳಸಿನನೆಗಣೆಗರೆವದಿಟ್ಟಿಗುಡಿಯಿಂ ನೋಡು |
ವಳದೊರ್ಮೆ ನಾಣ್ಚಿತಲೆ ವಾಗುವಳದೊರ್ಮ ತನಿಮೋಹರಸದಿಂ ಪುಳಕವ ||

ತಳೆದ ತನ್ನಂಗಮನು ನೋಡುವಳದೊರ್ಮೆ ಸುಖ |
ದೊಳ ಭಾಗದೇಯರಿರುತಿರಲತ್ತ ಭೀಷ್ಮರಾ |
ಗಳಿದೆಲ್ಲಮಂ ಕೇಳಿ ನಾಡೆ ಕೋಪಾಟೋಪದಿಂದೆ ಕಿಡಿಕಿಡಿವೋದನ್ನೈ || ೩೫ ||

ಕೂಡಿದಂ ತನ್ನ ಪೆಂಗಿನ ತುರಂಗವನು ಮಿಗೆ |
ನೋಡಿದಂ ರುಗುಮಿಣಿಯ ತಂದೆನೆಸಿತಾಸಿಯುಮ |
ನಾಡಿದಂ ನಡೆಯ ಹೇಳೆನೆ ಮಂತ್ರಿಸ್ಸೈರಿಸಿಂದಿನದಿನಮನೆಂದು ನೃಪನ ||
ಬೇಡಿದಂ ತದ್ವಾರ್ತೆಯನು ಕೇಳಿ ರೌದ್ರದೊಳು |
ಮೂಡಿದಂ ಶಿಶುಪಾಲನತ್ತಲಿಂ ತೆಲ್ಲಮಂ |
ಮಾಡಿದಂ ಮಾಧವನು ನಾರದನಗೊಡ್ಡಾಟ ವೆಂದೆಂದು ಕೆಲರೆಂದರ್ರೈ || ೩೬ ||

ದೇವ ದಾನವರೆನ್ನೊಳಾಂತು ಬದುಕುವರಿಲ್ಲ |
ದಾವನೋ ತನಗಿತ್ತ ತನ್ನಿಕೆಯಳೆಳದೊಯ್ದು |
ಜೀವಿಸುವೆನೆಂದೊಡೆನ್ನಂಬುಳಿಯಗೊಡುವುದೆಯೆಂದು ಶಿಶುಪಾಲಭೂಪ ||
ಆ ವೇಳೆಯೊಳೆದಂಡ ನಡೆಯೆನಲು ಮಂತ್ರಿಗಳ |
ದೇವನೀಗಳು ಪೊತ್ತು ವೋಯ್ತು ನಾಳಿನ ದಿನವೆ |
ಗೋವಳಗೆ ಬದುಕುಂಟೆ ಸ್ಯೈರಿಸೆಂದಂದು ನಿಲಿಸಿದನು ಪಯಣದ ಭರವನ್ನೈ || ೩೭ ||

ಶಿಶುಪಾಲಕನ ಬೀಡಿನೊಳು ಭೀಷ್ಮಪುರದೊಳ |
ರ್ವಿಸುವ ಪಡೆಯೊಳಗಲಭೆ ಪೆರ್ಚೆಕಡಲೆರಡುಘೂ |
ರ್ನಿಸಿ ದಂತಿರಾಗದಲಿ ನಾಲ್ವರಿದನೆಂತು ಗೆಲಿದೆನ್ನನೆಂತೊಯ್ವರೆಂದು ||
ಹಸುಳೆ ನೆರೆ ಬೆದರಿ ಕಣ್ಬನಿಗರೆಯೆ ಕಂಡರಿದು |
ನಸುನಗುತಲಿತ್ತ ನೋಡೆಂದೊಂದು ವಜ್ರಮಂ |
ಪೊಸೆದು ತುದಿಬೆರಳಿಂದ ಪುಡಿಮಾಡಿ ತೋರಲಾಕಾಂತೆ ಮತ್ತಿಂತೆಂದಳು || ೩೮ ||

ಫಲುಗುಣನ ಮೊಗನೋಡುತೆಮ್ಮಣ್ಣ ರುಗುಮಣ |
ಕಲಹದಲಿ ಚೂಣಗೈದದೆ ಮಾಣನಾತನಂ |
ಕೊಲಲೆ ಬೇಡೆನೆ ಕೊಲ್ಲೆವಂಜಬೇಡೆಂದು ಮಾಧವನಭಯಮಂ ಮಾಡಲು ||
ಲಲನೆ ಸಂತಸದಿನಿರೆ ಬಂದುದಾ ಯಾದವರ |
ಬಲವಿಳೆಯ ಬೆಸಲೆಯಾದಂತೆ ವಾದ್ಯಧ್ವನಿಗೆ |
ನೆಲನದಿರೆ ವಸುದೇವ ನೃಪಸಹಿತ ಕೃಷ್ಣನಂ ಬಳಸಿ ಬೀಡಂ ಬಿಟ್ಟುದೈ || ೩೯ ||

ಹರಿಯಮನದನುರಾಗಮಂ ರುಗುಮಿಣಿಯ ಮನದ |
ಹರುಷಮಂ ಶಿಶುಪಾಲಕನ ಚಿತ್ತದಳಲುಮಂ |
ಪರಿವರ್ಣಿಸುವೆ ನೆಂದೊಡೆನ್ನಳವೆಯಾಗಳೋ ತಾವರೆಯನಂಟನಿರದೆ ||

ವರುಣದ್ದಿಗುವಾರ್ಧಿಯೊಳು ನೆರೆದನಾ ಶಿಶುಪಾಲ |
ನುರು ತೇಜವೈದೆ ನೀರೊಳು ನೆರೆವೊಲು ನಾಳೆ |
ಹರಿಯರಿಯ ರಕುತದಿಂತಹುದು ನೆಲನೆಂಬಂತೆ ಪಡುಗೆಂಪು ಪಸಿರಿಸಿದುದೈ || ೪೦ ||

ಅಂದಿನಿರುಳಿನಗುರ್ವ ನೇನೆಂಬೆನತ್ತ ಯಮ |
ನಂದನನ ಬೀಡಿನೊಳು ಭೀಷ್ಮರಾ ಪುರದೊಳರ |
ವಿಂದ ನಾಭನ ಪಾಳೆಯದೊಳೀಕ್ಷಿಸುವ ಕಂಗಳ ಹಬ್ಬ ವೆಂದದಿ ||
ಸಂದಣಿಸಿ ಮನ್ನಣೆಯ ವಾವಂತರಾನೆಗಳ |
ನೊಂದಾಗಿ ಘೋಳಾಯಿತರವಾಜೀಗಳನೇಳೆ |
ಯಿಂದೆ ಪಲತೆರನಾದ ಕೈದುಕಾರರು ಕೈದುಗಳನೈದೆ ಪೂಜಿಸಿದರೈ || ೪೧ ||

|| ಸಂಧಿ ೧೫ ಕ್ಕಂ ಮಂಗಳ ಮಹಾ ||

## ಅಭ್ಯುದಯ ಪರ್ವ (ಸಂಧಿ ೧೫)

**ಸಂಧಿ ೧೫**

ಅಸಮಾಯುಧನ ತಂದೆ ಸಂಗ್ರಾಮರಂಗದೊಳು |
ಶಿಶುಪಾಲನಂ ಕೊಂದು ರುಗುಮಿಣಿಗೆ ತಂದೆಯಾ |
ವಸುಧೆಯನೆ ಕೊಟ್ಟು ರುಗುಮಿಣಿದೇವಿಯನು ಮದುವೆ ನಿಂದಾ ಪೊಳಲೊಳಿರ್ದನೈ || ಪಲ್ಲ ||

ಕೇಳು ಮಗಧಾಧೀಶ ಪೂರ್ವಾದ್ರಿಯೆಂಬ ಹರ |
ಭಾಳಾಂಬಕವೆ ತೆರೆದುದೋ ಮೇಣು ರಾತ್ರಿಯನು |
ಕಾಲನೆಂದೆಂಬ ಹೋತೃವೇ ಹೋಮಿರಿದೊಡುಸಿವಕಿಚ್ಚೊ ಪಡುಗಡಲಬಿರ್ದು ||
ನಾಳೋಚಿಸದೆ ಉಪರಿಮಾಂಸುರಜ್ಜುಗಳಿಂದೆ |
ಮೇಲೆಸೆದಳೋ ಮೇಣು ಗನನ ಪಿಡಿಯನೆ ಮೂಡಿದುದು ರವಿ ಬಿಂಬವೈ || ೧ ||

ನೇಸರುದಯಿಸದ ಮುನ್ನವೆ ಚಾತುರಂಗ ಬಲ |
ವಾಸುರದೆ ಕೈದುಗೊಂಡುದು ರನ್ನ ದೇರ್ಗಳನಿ |
ಳೇಸರಾರೋಹಿಸಿದಳೆತ್ತಲುಂ ಸಮರಲಂಪಟರಿರಲು ಭೀಷ್ಮ ತನುಜ ||
ಭ್ಯಾಸವನು ತೋರುತ್ತ ವೀರರಸವನು ತಳೆದು |
ರೋಷಮಿಗೆ ಮಣಿರಥದಿ ಬಂದು ರುಗುಮಿಣದೇವ ತಂದೆಗಂಮಿಂತೆಂದನೈ || ೨ ||

ಕಡಲೇಳನೊಡಗಲಿಸಲೋ ಚಂದ್ರ ಸೂರ್ಯರನು |
ಪೊಡವಿಗಿಳುಪಲೊ ಕುಗೋರ್ವೀದರಂಗಳ ನೆತ್ತಿ |

ಪೊಡೆ ಚೆಂಡನಾಡಲೋ ದಿಗ್ಗಜಂಗಳನಿಗ್ಗವಂಗಿತ್ತು ತಂದಿರಿಸಲೊ ||
ಕೊಡುಬೆಸನನೀ ರಿಪುಗಳಂ ಗೆಲುವುದರಿದೆ ಕೇ |
ಳ್ಮಧ್ವ ನಡ್ಡ ಬಿದ್ದೊಡಂ ಕೈಕೊಳ್ಳದಾರ್ದಟ್ಟಿ |
ಕಡಿಖಂಡಮಂ ಮಾಡದಿರ್ದೊಡಿದು ಭುಜವೆ ನೋಡೆಂದು ಘೂರ್ಣಿಸಿದನೈ || ೩ ||

ಅತ್ತಲಾ ಶಿಶುಪಾಲ ಸಮಕಟ್ಟೆ ಬರೆಮಾಡಿ |
ತೆತ್ತಲುಂ ಸುರಚಾಪಗಪಗಲುಳುಕು ಬೀಳ್ದು ವಿಳೆ |
ನೆತ್ತರೋಸರಿದವು ಗಜತುರಗಗಳ ಕಂಗಳಲಿ ನೆಲನಡುಗಿದುದುವಹಿಲದಿ ||
ಎತ್ತಿ ಝಳಪಿಸಿಮಂಡಲಾಗ್ರ ತುಂಡಾಯ್ತು ತನ |
ಗೆತ್ತಿದಾ ಸತ್ತಿಗೆಯೆ ಬೀಳ್ದು ಕಳಸವು ಮುರಿದು |
ದೊತ್ತರಿಪ ಶಕುನ ಹಲವಾಗೆ ನಿಜರೋಷವಿಮ್ಮಡಿಸಿ ಯಿಂತೆಂದನೈ || ೪ ||

ಎನ್ನಭುಜಬಲವೆನ್ನ ಧೈರ್ಯವೆನ್ನಯ ವಿದ್ಯೆ |
ಯೆನ್ನ ಚತುರಂಗಬಲವೇಂ ಕುಂದೆ ನೋಡಲಿಂ |
ದೆನ್ನ ಮುಂದಪಶಕುವಾದಡಿವು ಕಡೆಗುಮೇ ಬಾಳ್ವರಾರೆನ್ನೊಳಾಂತ ||
ಮುನ್ನಮೆನಗಿತ್ತ ಪೆಣ್ಣೊಯ್ದವನ ಗೋಣನರಿ |
ದೆನ್ನ ಮನದಳಲಾರುವನ್ನವಿಕ್ಕದೆ ಸುಮ್ಮ |
ನಿನ್ನೆಡೆಯೊಳಾಂಬಡೆನೆನುತ್ತೆ ನಡೆಯಲ್ಕೆ ಕಲಿ ಯಮ ಭೂಪನಿಂತೆಂದನೈ || ೫ ||

ಬಿಡುಬಿಡಪಶಕುನವಿಂಗಳ ಗೈವುವೈದೆ ಪೇ |
ರಡವಿಯನು ಕಾಳ್ಗಿಚ್ಚು ಕವಿದು ಸುಡುವಾಗಳಾ |
ಎಡೆಯಲ್ಲಿ ವಾಯಸಂ ಕಟ್ಟಿದೊಡೆ ಸುಡದೆ ಮಾಣ್ಬದೆ ಕರುತ್ತಾನಿರಿದೊಡೆ ||
ಮಡಿಯದಿರಿ ಮಹಿತರೆಂದಾಣೆಯಿಡ ಬಲ್ಲುದೇ |
ಪಡಿಮಾತದೇನೊ ತರುವರಿ ವಿಷ್ಣುವೆನಗಿದರೆ |
ತೊಡಬೆ ವಸುದೇವನಡಗನು ಚೆಲ್ಲಿ ಪರ್ದಿಂಗೆ ಬಿರ್ದನಿಕ್ಕುವನೆಂದನೈ || ೬ ||

ನೆರೆದುನಿತ್ತಲು ನಿಖಿಲ ಸಾಮಂತ ಮಡಲೇ |
ಶ್ವರ ಮಕುಟಬದ್ಧ ನಾಯಕ ತಿಂಥಿಣೀ ಪೆಂಪಿ |
ನರದಂಗಳೊಳು ಪಾರ್ಥ ವಸುದೇವ ಸಾತ್ವಕಿಯು ತೊಳಬಾಳುತೋನೇವುತ ||
ಗಿರಿಧರನ ಬಳಸಿದರು ಮುನ್ನಮೇ ಬೀರಸಿಂ |
ಗರವನಚ್ಚುತನಾಂತು ತರುಣಿ ರುಗುಮಿಣಿವೆರಸಿ |
ವರವಜ್ರಮಯ ರಥವನಾರೋಹಿಸಿದ್ದನಾ ಸಮಯದೊಳಗೇನೆಂಬೆನೈ || ೭ ||

ಶಿಶುಪಾಲನಾಗಳಾಹವ ಭೇರಿಯಂ ಪೊಯಿಸೆ |
ದೆಸೆದೆಸೆಗೆ ಶರನಿಧಿಯ ತಾಯ್ಮಳಲು ಸೂಸಿತ |

ರ್ವಿಸಿ ಭೀಷ್ಮ ತೆರೆಪಿಲ್ಲೆನಿಸಿ ಧೂಳಿಯಾ |
ಗಸಕೆ ಗವಸಣಿಗೆಯಾದುದು ಸುರಾಸುರರು ಪಸ |
ರಿಸಲು ಸಂಗರ ಅಂಗಣಕೆ ಬಂದೊಡ್ಡಿ ನಿಲೆ ಯಾದವರು ಮೊದಲೆನೆಲೆಗೊಂಡರ್ರೈ || ೮ ||

ಬಿಸಸನದೊಳಾರ್ವಲಂ ಕದನಮಂ ಮಸೆಯೆ ಮಿಗೆ |
ಮಸೆದುವಾ ಭೂತಕೋಟಿಗಳ್ಳೈದೆ ದಾಡೆಗಳ |
ನಸಮ ಭುಜಬಲರ ಯುದ್ಧವನೀಕ್ಷಿಸುವರೆ ಬಗೆದಂದು ಮೇಲಾಗಸದೊಳು ||
ಬಿಸಜ ಸಂಭವ ಪುತ್ರನಮರನಿಚಯದ ಕೂಡೆ |
ನಸು ನಗುತ ನಿಂದನಾ ಚಾತುರಂಗ ಬಳಕ್ಕೆ |
ವಿಷಯ ಗಾಳಿಯ ತೆರದಿ ಶಿಶುಪಾಲ ಗೋಪಾಲರ್ರೈದೆ ಕೈವೀಸಲೊಡನೆ || ೯ ||

ಭರದಿಂದಿದಿರ್ಚಿದಿರ್ಚೋಡೋಡೆನುತ್ತೆ ಭೀ |
ಕರಿಸಿ ಪೊಡೆಕಡಿಕುತ್ತು ತರೆಯೆಂಬ ಬೊಬ್ಬೆಯಂ |
ದಿರದೆ ಬೀಲ್ವಡೆಯೊಳಡನಾಯಿತಬ್ಬರ ದಡ್ಡನಾಯಿತರೊಡನೆ ||
ತುರಗಗಳವಶ್ವ ಸಂಕುಳದೊಡನೆ ಗಜಘಟೆಯ |
ಕರಿಘಟೆಯೊಳುರು ರಥಾವಳಿ ರಥಸಮೂಹದೊಳು |
ಭರದಿಂದೆ ತತ್ತು ಕೈಮಾಡಿದುದು ಕೊಂಬು ಚಂಬಕತಾಳೆ ಚೀರುತಿರಲ್ಕೈ || ೧೦ ||

ಆಗಳೀರ್ವಳದೊಳೆಡೆ ವಿಡದೆ ಸುವಕಣೆಮುಗಿಲು |
ಮೇಗೊಡ್ಡಿ ಗರಿಗಾಳಿ ಮಳೆಗಾಳಿ ಸರಬೇಳಗು |
ಬೇಗದಿಂ ಸಂಚಳಿಪ ಕುಡಿಮಿಂಚು ಮಾರ್ಗಣದ ಮೊರಹುವಬ್ಬರದ ಮೊಳಗು ||
ತಾಗಿಸರ ಸರವುದುರ್ವ ಕಿಡಿಮಿಂಚುಬುಳು ಬೆಳ್ಳ |
ನಾಗಿ ಸುರಿವೆಲುವಾಲಿ ಕಲುಗಳಿಂತತಿ ಭಯದ |
ಮಾಗೆ ಘೋರೆನೆ ಕರೆದ ರಕ್ತಧಾರಾವೃಷ್ಟಿಯಾಯ್ತು ಸಂಗರ ಮಹಿಯೊಳು || ೧೧ ||

ಧರಣಿಗಿಳಿದರ್ಕ ಬಿಂಬಂಗಳಗಣಿತವಾಗಿ |
ತರತರದಿ ತಂತಮ್ಮೊಳುರ್ಕಿನಿಂ ಪೊಣರ್ವುವೆನ |
ಲುರಿಯುಗಳ್ವ ಬಣ್ಣವರಿಗೆಗಳುಮಂ ಪೊಳೆವ ಕಕ್ಕಡೆ ಖುಡುಗಕತ್ತಿಗಳನು ||
ಭರದಿನನು ಕೈದು ಪೊಯ್ದಾಡಿದರು ತೊಡೆಯುವಿದು |
ಕರವರಿದು ಗೋಣ್ಬರಿದು ತೋಳ್ಕಡಿದು ಬಸುರೊಡೆದು |
ಕರುಳುರ್ಚಿ ಶಿರಪಾರಿ ಕೆಡದರರೆ ಗಳಿಗೆಯೊಳು ಪರಿವರುಣ ಜಲಧಿಯೊಳಗೆ || ೧೨ ||

ಪಿರಿದೆಸೆವ ಲೋಹವಕ್ಕರೆಯ ಹಯತತಿಯನಂ |
ದಿರದ್ಯೆದು ಧಾರೆಯಿಂದೀರ್ರೈದು ಗತಿಯೊಳ |
ಚ್ಚರಿಪೆಚ್ಚೆ ಕೆಂದೂಳಿ ಬಾನಡರೆ ಖುರಪುಟಂ ಫಣಿಲೋಕಮಂ ಬೆದರಿಸೆ ||

ಭರದೆಸೆವ ಹೊಗರಂಬಿನಿಂದಿಡುವ ಸೆಲ್ಲೆಯದಿ |
ಶಿರವುಡಿಯೆ ಪೊಡೆವಲಾಡಿಯನಿರಿವ ಭಲ್ಲೆಯದಿ |
ಕರವೆತ್ತಿ ಕಡಿವ ಖಂಡೆಯದಿಂದೆ ಕಾದಿದರು ಗೋಳಾಯ್ತುರೆಡೆಯೊಳ್ಕೈಸೆ || ೧೩ ||

ಕರಮುಕ್ತವಾಯಂತ್ರ ಮುಕ್ತಮುಕ್ತಾಮುಕ್ತ |

ಬಿರುತೆರದ ಮೂಡೆರದ ಕೈದುಕಾರರು ಸಿಂಗ |
ವರಿಗಳೆನೆ ಕಡುಕೆಯಿದು ಹೊಣಿಸುಪಚಾರಿಸುತೆ ಮಾಗತಿ[ನಿ] ಚಿತ್ರಗತಿಯಿಂ ||
ತರದಿ ದಂಡಾದಂಡಿ ಕೂಡೆ ಖಡ್ಗಾಖಡ್ಗಿ |
ಭರದ ಮುಷ್ಟಾಮುಷ್ಟಿ ಕೂಡೆ ಕೇಶಾಕೇಶಿ |
ಪರಿದು ಹಾಣಾಹಾಣಿಯಂತೆ ಹೆಲ್ಲಾಹೆಲ್ಲಿ ಯುದ್ಧಮಾದುದು ಕೆಡೆದುದೈ || ೧೪ ||

ಇದುವೆಸುವ ಕಣೆನೋಡಲಿದು ತಿವಿವಸುರಗಿ ಮ |
ತ್ತಿದು ಕಡಿವ ಖುಡುಗಮಿದು ಬಿಸುವುಬ್ಬಣ ನನಿಕರ |
ವಿದುಪಾಯ್ವ ಸಬಳವಿದು ತಿರ್ರತಿರ್ರನೆ ತಿರುಗಿ ಭರದಿಡುವ ಪಾರು … ||
……………………………..ಲೋಳಿ |
ಇದುವೆತ್ತಿ ಪೊಡೆವಗದೆ ಇದುಹಣಿವ ಲವುಡಿತಾ |
ನಿದುವಿರಿವ ಭಲ್ಲೆಯವದೆಂದು ಬಗೆಯದೆ ಕಾದಿರಾವುತರು ಪಡವಿಟ್ಟುದೈ || ೧೫ ||

ನೀಲಾದ್ರಿ ಕೋಟೆಗಳು ಕೈಕಾಲ್ಗಳಂ ಪಡೆದು |
ಕಾಳಗವನ್ನೆದೆ ಮಾಡುವವೊ ಎನೆ ಕರಿಘಟಾ |
ಜಾಲಗಳು ಜೋಡಿಸುವ ಜೋದರಿಂದಿದಿರಾಗಿ ಕೈಯಿಕ್ಕಿ ಕೋಡುಗಟ್ಟಿ ||
ಭೀಳಾಸಿ ಮುಸುಲದೇರಿಂ ಜೋದರಸುಗೆಯಿಂ |
ಸೂಳ ಕಕ್ಕಡೆಗಳಿಡಿಲಾ ನೆತ್ತರಂ ಕಾರಿ |
ಕಾಲುಡಿದು ಕೈ ಹರಿದು ಕೋಡಳಿದು ಕೆಡದನಾ ಸಂಗ್ರಾಮ ಭೂಮಿಯೊಳಗೈ || ೧೬ ||

ಮಿಳಿರ್ವ ಪಳಯಿಗೆ ಸಿಂಧ ಧವಲಾತಪತ್ರ ಸಂ |
ಚಳಿಪ ಚಾಮರನಿಚಯದಿಂದೆ ಸಿಂಗರಿಸಿರ್ದ |
ಥಳಥಳಿಪ ಮಣಿರಥಾವಳಿಗಳು ಪಳಂಚಿದವು ಜೋಡಿಸುವ ಸಾರಥಿಗಳಿಂ ||
ತಳಿರ್ವಹಯಚಯದಿಂದೆ ರಾಜಪುತ್ರರು ತಮ್ಮೊ |
ಳಳವು ಮಿಗೆ ಕೈಮಾಡಿದರು ಬಿಲ್ಲ ಬಿಲ್ಮೆಯಿಂ |
ತೊಳಪಖುಡುಗದಕೊಂತ ಸಬಳ ಗದೆ ಶಕ್ತಿಗಳ ಮಸಕದಲಿ ಬರೆಗೈದರೈ || ೧೭ ||

ಸರಳಮಳೆಗಳ ಕರೆದು ಕೊಡೆಗುಡಿಗಳನು ಕಡಿದು |
ತುರಗಚಯವನು ಕೆಡಪಿ ಸಾರಥಿಯನಿಕ್ಕಿ ಬಿ |

ತ್ತರದ ತೇರಂನುಗ್ಗುಮಾಡಿನವರತುನಮಯ ಮಕುಟವನು ನುಚ್ಚುಗುಟ್ಟಿ ||
ಕರವಾಳನನುಗ್ಗೈದು ಧರೆಗಿಳಿದು ಖಳ್ಳಾತಾ |
ದೊರೆವಡೆಯ ತಳ್ತು ಹಾಣಾಹಾಣಿಯಿಂಕಾದಿ |
ಹರಿಯ ರಥಿಕರು ಮುರಿಯಲಿಕ್ಕಿದರು ರಿಪುವರೂಥಂಗಳನು ಸಂಗರದೊಳೈ || ೧೮ ||

ಅತ್ತಲಾ ಬಲವಂಕದೊಳು ವೇಣಾಧಾರಿನೃಪ |
ನೊತ್ತಿಕಾದುವ ಕೂರ್ಪನಿಕ್ಷಿಸುವ ಕೊಲೆಲೆ ಬಾ |
ಯೆತ್ತಿ ಗಜರುವ ಕಾಲನೆನೆ ಗರ್ಜಿಸುತ್ತೆ ಕಾಲಾಳನಾಳಿಂದಲಿಟ್ಟು |
ಬಿತ್ತರದ ಕುದುರೆಗಳಶ್ವಂಗಳಿಂ ಬಡಿದು |
ಮತ್ತಗಜ ಘಟೆಗಳಿಂದೊರಸಿ ಮತ್ತೇಭಮಂ |
ಮತ್ತೆ ಬಹುತೇರ್ಗಳಿಂ ಪೊಯ್ದೇಕ ಕಂಡಳಂ ನೆರೆಕೊಂದನೈ || ೧೯ ||

ಸಿಡಿಲುಗ್ರವೈದೆ ಸಿಡಿಲಿಂದೆ ವಡಬಾಗ್ನಿ ತಾಂ |
ಕಡುತೀವ್ರವಾ ಸಿಡಿಲಿನಿಂದೆ ವಡಬಾಗ್ನಿಯಿಂ |
ಮೃಡನ ಕಣ್ಗಿಚ್ಚು ತೀಕ್ಷ್ಣಂ ಸಿಡಿಲಿನಿಂದೆವಡಬಾಗ್ನಿಯಿಂ ಪರಿಭಾವಿಸೆ ||
ಮೃಡನ ಕಣ್ಗಿಚ್ಚೆಂದೆ ಕಡೆಯೆ ಸಿರಿ ನಿಷ್ಠುರಂ |
ಸಿಡಿಲಿಂದೆ ವಡಬಾಗ್ನಿಯಿಂ ಮೃಡನ ಕಣ್ಗಿಚ್ಚಿ |
ನೆಡೆವಿಡದ ಕಡೆಯಶಿಖಿಯಂದಧಿಕವಾಯ್ತು ಶೀರಾಯುಧನ ಕಾಯ್ಪಿನುರಿಯೈ || ೨೦ ||

ಅದೆ ಬಂದನಾ ಬಂದನಿದೆಬಂದನಿದೆಬಂದ |
ನದದೆಬಂದಂ ಬಂದನಿರಿದನುರಿತರಿದನಿ |
ತ್ತಿದಿವೆ ಬಂದಂ ಹೋಗನದೆಬಂದನೊತ್ತಿಪೊಡೆದಂ ಬಡಿದ ನಿಟ್ಟೊರಸಿದಂ |
ಕದನದೊಳು ವೀರಭದ್ರನೊಕಾಲ ಭೈರವನೊ |
ಅದಯೆ ಬಲಭದ್ರನೋ ಲಯಕಾಲ ರುದ್ರನೋ |
ಅದಯನೆಂದೋಡಿ ಕಾಡಂ ಕೂಡಿ ಹೇಡಿ ಪಡೆ ನಾಡೆ ನಗಿಸಿತು ಸುರರನೈ || ೨೧ ||

ಪರ ಬಲಾಂತಕ ಪಾರ್ಥನಿಟ್ಟಲೆಡವಂಕದಲಿ |
ನೆರೆದು ಬಂದೋಡಿದಾ ಭೀಷ್ಮಭೂಪನ ಬಲವ |
ನರವರಿಸದಿಸುವಲ್ಲಿ ಕರ್ಣಾಂತಪೂರಿಸಿದ ತಿರುವ ತೊಲಗದ ಕೈಗಳು ||
ಸರಳ ಮೂಡಿಗೆಯವಿದೆ ತೊಡುವ ಬೀಡಿಂ ತಂದು |
ಪರಿಭಾವಿಸಲು ಬಾರದಾಗಸಕೆ ಚೆಂಡೆನಿಸಿ |
ಯರಿ ಶಿರಗಳಾಡುತಿವೆಯೆಂದು ನೋಡುವ ಸುರರೆ ಬೆರಗಾಗಿ ಪೂಣ್ದೆಚ್ಚನೈ || ೨೨ ||

ಒಸೆದು ಜವನಿಟ್ಟ ಬಿಸುನೆತ್ತರರವಟ್ಟಿಗೈ |
ದುಸುರಲೇನಡಗಿ ನಾವಾರಿತಾನೆಂದು ಸಂ |

ತಸದೇರ ಬಾಯೆ ಬಾಯೊಡ್ಡಿ ರಕ್ತವನೀಂಟಿ ತನಿಯಿಡಗನಡಸಿತಿಂದು ||
ಬಸುರುನೆರೆ ಬೀಗೆ ರ್ಡ್ನೆ ತೇಗಿ ಬಾಳು ಬಾ |
ಳಸುರಾರಿ ಜಯಸು ಬಲ ಗೆಲು ಪಾರ್ಥಯೆಂದು ಸಂ |
ತಸದಿ ರಣಭೂಮಿಯೊಳು ಕುಣಿದಾಡುತಿರ್ದನಾ ಮರುಳು ಪಡೆತಂತಂದಲ್ಯೆ || ೧೩ ||

ಬಲವಿಂತು ನುಗ್ಗಾಗೆ ಕಂಡು ಕಡುಗಾಯ್ದಿನಿಂ |
ಬಲನೊಳಾಂತಂ ವೇಣುಧಾರಿ ಭೀಷ್ಮಂ ಕಿನಿಸಿ |
ಕಲಿಧನಂಜಯನೊಡನೆ ಸೆಣಸಿದನು ಗರಿಸನ್ನೆಗೆಯ್ದು ರುಗುಮಿಣ ಭೂವರ ||
ಮಲೆದು ಸಾತ್ವಕಿಯೊಳಿದಿರಾದ ನತಿರೌದ್ರದಿಂ |
ಕೊಲಲಿಳಿದ ಜವನಂತೆ ವಸುದೇವ ಭೂಪನೊಳು
ಕಲಿಜವಂ ತತ್ತನಾ ಶಿಶುಪಾಲನಚ್ಚುತನ ಹೊರಗೆ ನೂಂಕಿದರಥವನ್ನೆ || ೧೪ ||

ಕೆರಳಿ ಮದಗಜವ್ಮೆದೆ ಸೆಣಸಲ್ಕೆ ಸಿಂಗಮಂ |
ಕರೆವಂತೆ ಕಿಸುಗಣ್ಣಿ ಮೇಲರಿಯದರೆವಾವು |
ಗರುಡನಂ ಯುದ್ಧಕ್ಕೆ ಕರೆವಂತೆ ಹಸಿದು ಮಸಗಿದಮಾರಿಯನು ಕೊಬ್ಬಿನಿಂ ||
ಮರುಳನುರೆ ಕೈ ಬೀಸಿ ಕರೆವಂತೆ ಶಿಶುಪಾಲ |
ನುರವಣಿಸಿ ಕೈವೀಸಿ ಕರದನೇವೇಳ್ವೆ ನಗ |
ಧರನನಾಹವ ತೂರ್ಯವುಲಿಯೆ ಕೊಲ್ಬರಿವಳತೆಯಲಿ ನಿಂದನ್ನೆ || ೧೫ ||

ಕೇಳೆಲವೊ ಖೂಳ ಗೊಲ್ಲರ ಪಿರಿಯ ಹೇಳಿ ಕ |
ಟ್ಟಾಳಹುದು ಭಳರೆ ಗೋವೃಂದವನು ಕಾವಲ್ಲಿ |
ಹೇಳಲೇನವರ ಬಾಲವನೊತ್ತಿ ಮುರಿದು ಜಡಿದಂಜಿಸುವ ಕಡುಗಲಿಯಲೆ ||
ಆಳಿಯಲ್ಲವರ ಹಿಂದುಂ ಹಿಂದನೇ ಹರಿದು |
ಹಾಳೂರ ಹೊಲದ ಕಾಲಾಟದಗ್ಗಳನಹುದು |
ಕಾಳಗವೆ ನಿನಗೆಮ್ಮೊಳೆಂದು ರೋಡಾಡಿ ಮತ್ತಿಂತೆಂದನಾ ಭೂಪನ್ನೆ || ೧೬ ||

ಪಿಡಿಬಿಲ್ಲನೆಲೆ ಗೋವ ತೊಡುನಿನ್ನ ಶರವ ನೀಂ |
ಗಿಡುಮರದ ಹೊದರೊಳೆಡೆಯಾಡುತಿಹ ಹಕ್ಕಿಗಳ |
ಗಡಣವನು ತಟ್ಟುರ್ಚಲೆಸುವ ಬಲು ಬಿಲುಗಾರನಹುದಹುದು ನಿನ್ನಧಟನು |
ಬಿಡದೆ ಕೊಂಡಾಡುವರು ಕರುಗಾಹಿ ನಿನ್ನ ಸಂ |
ಗಡಿಗರೆಲ್ಲರು ನಿನ್ನ ಮಸಿವಣ್ಣದೀ ಚೆಲುವಿ |
ನೆಡೆಗೆ ಸೋಲ್ವರು ಗೊಲ್ಲತಿಯರು ಮೂಕೊರತಿ ಮೋಟಗೆ ಮೋಹಿಸುವ ತೆರದೊಳ್ಯೆ || ೧೭ ||

ಎನೆ ನಗುತ ಶಾಂರ್ಙ್ಗಮಂ ಶಾಂಙ್ಗಿತಳುವದೆ ಪಿಡಿಯೆ |
ಕಿನಿಸುದಳೆಯದೆ ತಿರುವನೆತ್ತಿ ಕೆಲಗೂರಿ ಸು

ಮ್ಮನೆ ನಿಂದು ಕೂರ್ಗಣೆಯನೋರೆ ಗಣ್ಣಿಂತಿರ್ದಿ ನೇವರಿಸಿ ತಿರುಹುತಿರಲು ||
ಘನ ನಾದದಂತೆ ಘರ್ಜಿಸಿ ಕಂಡು ಶಿಶುಪಾಲ |
ನನುವರದೊಳೊಡ್ಡಿ ನಿಂದೆಲಸರಿಯದಿಂತು ಕೆ |
ಮ್ಮನೆ ನಿಂದು ನೋಳ್ಪಪರಿ ಲೇಸು ಲೇಸೈ ನಿನ್ನ ವೀರವೇನಾಯ್ತೆಂದನೈ || ೧೮ ||

ಶಿಶುವೆಂದು ಮೊಲೆಯೂಡಬಂದ ಪೂತನಿಯೊಡಲ |
ಬಿಸಿ ನೆತ್ತರಂ ಪಾತಕನೆ ಬಂದವಾ |
ಯಸದ ಕೊರಳೊತ್ತಿದೊಡೆ ಕತ್ತೆಯಂ ಪೊಯ್ದೊಡೈತಹ ಬಂಡಿಯನು ಮುರಿದಡೆ ||
ಹೊಸಹಯವನೊಂದು ಪೆಟ್ಟಿಂ ತಿವಿದು ಮೆಲ್ಲನೆ |
ಬ್ಬಸಗೊಳಿಸಿದಡೆ ಕಾಡಕೋಣನಂದದಲಿ ಸೊ |
ಕ್ಕಸಿಯ ಮುಳುಮತ್ತಿಗಳನೊರಸಿದೊಡೆ ಸಂಗರಕೆ ವೀರನೇ ನೀನೆಂದನೈ || ೧೯ ||

ಹಳ್ಳದೊಳಗೊಳ್ಳೆಯನು ತುಳಿದು ಮತ್ತೊಂದು ಪೇ |
ರೊಳ್ಳೆಯಂ ನೆಮ್ಮೆಗುಳ್ಳೆಯನೂದಿ ಸಂಗಡದಿ |
ಜಳ್ಳೆ ಬಿಲ್ಲಿಲಿತೆಗೆದೊಡಾವೊ ಹುಲುಮೊರಡಿಯಂ ಕಿತ್ತು ಕೊಡೆವಿಡಿದು ನಿನ್ನ ||
ಹಳ್ಳಿ ಗೊಲ್ಲರು ಮೆಚ್ಚಿ ಕರುವಕಾದೊಡೆಕೂರ |
ಉಳ್ಳವೀರನೆ ದಿಟದಿ ಕೊಳಗುಳಕೆ ನೀನು ನಿ |
ನ್ನಳ್ಳೆಗಳನುರೆ ತರಿದು ಕುಣಿವ ಭೂತಾವಳಿಗೆ ನೆತ್ತರಂಕುಡಿಯಿಸುವನೈ || ೨೦ ||

ತಾಳಜಂಘಿನಿಯೆಂಬ ಖೂಳೆಯೋಡಿದ ಬರಿಯ |
ತಾಳಮರನಂ ಮುರಿದೊಡತ್ತ ಮತ್ತೊರ್ಮೆ ಹಳಿ |
ಗೂಳಿಯ ಪೆಳರು ಗೊಳಿಸಿದಡೆ ಕೆಸರಂಕಕಾರರನಿಕ್ಕಿದೊಡೆ ಕಂಸನ ||
ಜಾಳಾನೆಯಂ ಕೆಡಹಿದೊಡೆ ಮಹಾದ್ಭುತವಾಯ್ತೆ |
ಹೇಳಲರಿದಮ್ಮಮ್ಮ ನೀಂ ಮಹಾವೀರನೈ |
ಆಳಿಯಲ್ಲಲ್ಲ ಕೋಲಂ ತೋಟ್ಪೊಡರಿಯ ಬಹುದೆಂದು ಘರ್ಜಿಸಿದನವನೈ || ೨೧ ||

ಹಲವು ಮಾತೇನೊಂದೆ ಸಾಲದೇ ಪಾತಕದ |
ನೆಲೆನಿನಗೆ ತೋಳ್ತೋರವಾಯ್ತೆಂದು ತಾಯನ |
ಪ್ಪಲುಮನಂದರಬಹುದೆ ನಿನ್ನಧಟು ನಿನ್ನಮಾವನಮೇಲೆ ಸಲೆಸಂದುವೆ ||
ಕುಲಕೆ ಕೇಡಾಯಿತುಕೊಡಲಿಯ ಕಾವೆನಿಪಂತೆ |
ಚಲಿಸದಾ ತಾಯಕೂಡಣ ತಾಯ ಕೊಂದೆಯೀ |
ಕೊಲೆಯ ಹೊಲೆನೆಲನಿಪ್ಪನಂ ಹೋಹುದೆ ದುರಾತ್ಮಕನೆ ಹೊರಸಾರೆಂದನೈ || ೨೨ ||

ಭೂತು ಮಸಗಿದ ತೆರದಿ ನಿಂತು ಕಾಳ್ಗೆಡವುತಿ |
ರ್ಪಾತನೊಳು ಕೈ ಮಾಡದಿರ್ದನಾ ನಗಧರನು |

ನೀತಿಯನು ಭಾವಿಸುತ ಖಳನ ಕೆಡುನುಡಿಗಳಂ ಗಣಿಸುತ್ತೆ ಮುಮ್ಮಮವನ ||
ಮಾತೆಗಿತ್ತಾ ಭಾಷೆಗುತ್ತರಾಯಿಗಳೆಂದು |
ನಾ ತೆರನೆ ಪೇಳ್ವೆನಾ ಶಿಶುಪಾಲ ಭೂವರನು |
ಜಾತಕಾಲದೊಳೆ ನಿಟಿಲಾಕ್ಷಿಯನು ಪಡೆದುದೈಸಿರ್ದನದುಭುತವಾಗಲು || ೩೩ ||

ನೊಸಲಕಣ್ಣೀಶ್ವರನೆ ಕಪಟದಿಂದಿಳೆಗಿಳಿದು |
ಶಿಶುರೂಪಿನಿಂದಿರ್ದನೆಂಬಂತಿರರ್ವಿಸುವ |
ಹಸುಳೆಯಂ ಕಂಡು ಪಿರಿದಚ್ಚರಿಯನಾಂತುತಾಯದ್ರಿಯಂ ಯಮರಾಜನು ||
ಸಸಿನರಿವ ನೈಮಿತ್ತಿಕನಿದೇನರುಪಿಮೆನ |
ಉುಸುರಿದರು ತದೃಷ್ಟಿಯಾವನೋರ್ವನನು ನಿ |
ಟ್ಟಿಸುತದೃಶ್ಯಮದಪ್ಪುದಾತನಿಂದೀತಂಗೆ ಪಂಚತ್ವವಹುದೆಂದರೈ || ೩೪ ||

ಅವರ ನುಡಿಗೇಳ್ದೊಂದು ದಿನವದ್ರಿಯಂಕೂಡೆ |
ಜವನುಮಾಸುತನು ಸಹ ವಸುದೇವ ಭೂಪನೊ |
ಪ್ಪುವ ಮನೆಗೆ ಪೋಗಿಕೌಸ್ತುಭಧರನನಾಲೋಕಿಪುದು ಮಾತನಧಿಕನಯನ ||
ತವೆಮಾಯವಾದುದದುಗಂಡದ್ರಿಯರಿದು ದಾ |
ನವರಿಪುವಿನಡಿಗೆರಗಿ ಮತ್ಪುತ್ರನಪರಾಧ |
ನಿವಹಮಂ ಮಾಡಿದೊಡೆ ಬಗೆಯದಾತನ ಹರಣಮಂ ಕಾವುದೆಂದೆರೆದಳೈ || ೩೫ ||

ಎಂದಾದೊಡಂ ನಿಮ್ಮಕಂದನೆಮ್ಮೊಳು ತಪ್ಪಿ |
ದಂದಾಂ ಶತಾಪರಾಧವನು ಸೈರಿಸುವೆನೆಂ |
ದಂದಮನೆ ಪಿಡಿದುನೂರಮ್ಮಿರಿ ಕೆಡೆನುಡಿಗಳಧಿಕವಪ್ಪನ್ನವಿರ್ದ ||
ನಂದಗೋಪಿಯ ಕಂದನಿದು ಕಾರಣಂ ಕೂಡೆ |
ಕುಂದದದ್ರಿಯ ಪುತ್ರನಳಲೆ ಬಳ್ಗಿಸಿಕೋಪ |
ದಿಂದವಧಿಯಂ ಮೀರಿ ಬೈದಂತುಮಲ್ಲದೆಯುಮಾರ್ದೆಚ್ಚನಚ್ಚುತನನು || ೩೬ ||

ಎಸಲದಂ ಕಂಡು ಶಾರ್ಙ್ಗವಶಾರ್ಜಿಜೇವೊಡೆಯೆ |
ದೆಸೆ ಕಂಪಿಸಿದುದು ಗಿರಿಗಳು ಚೆಂಡ ಬಡಿದಂತೆ |
ವಸುಧೆಕಾಕಾಶದೆಡೆಯಾಡುತಿರ್ದವು ಬರ್ವ ಸರಳನಂಬಿಂದೆ ಕಡಿದು ||
ಹೊಸಮನೆಯ ಕೂರಂಬನೆಚ್ಚೊಡೇವೇಳ್ವೆನಾ |
ಗಸವೈದದೆನೆ ಬರಲು ಸರಳ ಪೇರ್ವಳೆಯನಾ |
ಶಿಶುಪಾಲನೆಚ್ಚು ಬರಿಕೆಯಿದು ಬೊಬ್ಬಿರಿದನಾಯೆನೆ ನೋಡುವಮರಪಡೆಯೈ || ೩೭ ||

ಶಿಶುಪಾಲ ನೆಚ್ಚಗ್ನಿ ಬಾಣಮಂ ಜಳ್ಳ ಸರ |
ವಿಸರದಿಂ ಸರ್ಪಾಸ್ತ್ರಮಂ ಗರುಡ ಬಾಣದಿಂ |

ಪಸಿರಿಸುವ ಗಿರಿವಿಷಕಮಂ ವಜ್ರನಾರಾಚದಿಂದೆಚ್ಚು ವೈಕುಂಠನು ||
ಮಸದ ಕಣೆಯಿಂಬೈದ ಬಾಯಂಪರಿಯಲೆಚ್ಚು |
ವಸುಧೆಗಿಳುಪಿದನವನ ಮಣಿಮಕುಟವೆರಸಿ ರಂ |
ಜಿಸುವ ಶಿರಮಂ ಪರಿಸಬೋಳೈಯಿಂದೆಸೆಯನಳ್ಳಿರಿದು ಜಯಪಟಹವು || ೩೮ ||

ನಲಿದುದು ನಾರದನ್ನೈದೆ ವೀಣೆಯನು ಬಾಜಿಸಿದ |
ನೊಲಿದು ಪೂಮಳೆ ಗರೆದರಮರರಚ್ಚುತಗೆ ಕಡು |
ಮುಳಿದಯಮನಂತೆ ಯಮನಿರಿದಾಡಿ ಯಮಪುರಿಗೆ ಪೋದವಸುದೇವನಿಂದ ||
ಬಲದೇವನೊಳು ವೇಣುಧಾರಿಯೆಚ್ಚಾಡಿ ಸುರ |
ಲಲನೆಯರಪ್ಪಿದನು ಭೀಷ್ಮರಾ ಪಾರ್ಥನೊಳು |
ಕಲಹವನು ನೆರೆಮಾಡಿ ನಾಕನಿಳಯವ ಪೊಕ್ಕನವನೀಶ ಕೇಳೆಂದನ್ನೈ || ೩೯ ||

ಕಲಿ ರುಗುಮಣನು ಸಾತ್ವಕಿಯಳೊತ್ತಿ ಕಾದಿದೋ |
ರ್ವಲದಿನಾತನ ಠಕ್ಕಯವ ಸತ್ತಿಗೆಯನೆಚ್ಚು |
ಕಳೆದು ಮಣಿಮಕುಟದಲಿ ತೆತ್ತಿಸಿದ ನೋದುಕೆಲಗರಿಯ ಹೊಸ ಮಸೆಯಕಣೆಯ ||
ಕೊಲಬಾರದೀ ಹಗೆಯ ಗೆಲುವುದೆಂತೆಂದ ಕಡು |
ಮುಳಿದು ಫಣಿಪಾಶದಿಂ ರುಗುಮಿಣನ ಕಟ್ಟಿದನು |
ನಳಿನಾಕ್ಷನಭಯ ಘೋಷಣೆ ಮಾಡಿಸಿದನರ್ಜುನಾದಿಗಳು ನಡೆನಡೆತಂದರೈ || ೪೦ ||

ಬಿಟ್ಟಬಾಯೊರೆವ ಕಂಬನಿಬಿಗಿದ ಕೊರಳಸೆರೆ |
ಕಟ್ಟಿವಣ್ಣಾಮೊರೆಯಾ ಹಾಹಾಯೆನಿಪ್ಪರವ |
ಮುಟ್ಟದಿಂದುಡುಗೆ ಪುಡಿಯೊಳು ನೆಲೆವ ನಿಡುಗೇಶ ಹೊಟ್ಟೆಯುರ ಬಾಯ್ಮಂಡೆಯ ||
ಕಟ್ಟಿಕೋ ಬಾಯ್ಕೆಗಳಳ್ಳೆ ವೈಲೆಡೆಗೆಡದ |
ನಿಟ್ಟಿಸಿರು ಕರುಣವನು ಬೀರೆ ಶಿಶುಪಾಲನೊಡೆ |
ಹುಟ್ಟಿದಬಲೆಯರು ನಿಬ್ಬಣದ ಪೆಣ್ಬಳಗವೈತಂದು ಸೋಂಕಿಸಿದರಿರದೈ || ೪೧ ||

ಇಂತು ಶೋಕಿಸುವವರನುಚಿತ ವಚನಾಮೃತದಿ |
ಸಂತೈಸಿ ಭೂಮಿಸಲುವೇಳ್ದ ನೀರ್ವರು ಮಹೀ |
ಕಾಂತರ ಕಳೇವರಮಳಿತ್ತಳಾ ರುಗುಮಿಣನಹಿಪಾಶಾದಿಂ ತೊಲಗಿಸಿ ||
ಕಾಂತೆ ರುಗುಮಿಣಿಯ ಸನ್ನಿಧಿಗೆ ಕರೆಕೊಂಡವರಿ |
ಗೆಂತು ಪೋಪುದು ದುಃಖವಂತು ಕರುಣದಿ ನುಡಿದು |
ಕಂತುಪಿತನಾ ಭೀಷ್ಮರಂ ದಹಿಸದಂತರದಿ ಪೊಕ್ಕನಾ ಪಟ್ಟಣವನು || ೪೨ ||

ಬಂದು ಮೌಹೀರ್ತಿಕರು ಪೇಳ್ದಾ ಮುಹೂರ್ತದೊಳು |
ದುಂದುಭಿಯು ಮೊಳಗೆ ಕೊಂಡಿಮನಗರದೊಳು ವಿಭವ |

ದಿಂದ ರುಗುಮಿಣಗೆ ಪಟ್ಟಂಗಟ್ಟಿ ಪಲವುದಿನಮಲ್ಲಿರ್ದು ವಾಸುದೇವ ||
ಒಂದು ಶುಭದಿನದಿ ರುಗುಮಿಣನೆ ಕೈ ನೀರೆರೆಯೆ |
ಸೌಂದರ್ಯನಾ ರುಗುಮಿಣಿಯ ಮದುವೆ ನಿಂದು ಗೋ |
ವಿಂದನೊರವಿಂದ ರುಗುಮಿಣಿಯೊಳನುರಾಗದಿಂ ಕಾಮಸುಖವಾಂತಿರ್ದನೈ || ४३ ||

|| ಅಂತು ಸಂಧಿ ೧೫ ಕ್ಕಂ ಮಂಗಲ ಮಹಾ ||

# ಅಭ್ಯುದಯ ಪರ್ವ (ಸಂಧಿ ೧೬)

**ಸಂಧಿ ೧೬**

ರುಗುಮಿಣಿಗೆ ಕಾಲ್ಗೆರಗಿ ಭಾವೆನಾಣ್ಚೆಯ ಮತ್ತೆ |
ರುಗುಮಿಣಿಯ ವಸ್ತ್ರಭೂಷಣ ತತಿಯನುಗಿದಳ |
ತ್ತಗಧರನು ಪಲರರಸಿಯರನುದ್ವಾಹ ವಿಧಿಯಿಂ ತಂದು ಸುಖಮಿರ್ದನು || ಪ ||

ಕೇಳುಮಗಧಾಧೀಶ ರುಗುಮಣಿಯು ರುಗುಮಿಣಿಯ |
ಮೇಳದಬಲೆಯರು ಸಹ ಪುರವ ಪೊರಮಟ್ಟು ಶಿಶು |
ಪಾಲವೈರಿಯು ಪಯಣಗತಿಯಿಂದ ವೈದಿದಂ ದ್ವಾರಾವತೀ ಪುರವನು ||
ಮೇಳಿಸಿದ ರೈವತೋದ್ಯಾನದಲಿ ಮಣಿಮಯ ವಿ |
ಶಾಲ ಸೌಧದಲಿ ರುಕ್ಮಿಣಿದೇವಿಯೊಡನೆ ಸಂ |
ಮೇಳದಿಂ……ರಥ್ಯಾದಲ್ಲಿರ್ದರೆಂದರವರು || ೧ ||

ಕನ್ನೆ ರುಗುಮಿಣಿ ದೇವಿಯಿದ್ದೆಡೆಗೆ…. |
ಚುನ್ನವಾಡುವರರೆಬರೆಮ್ಮೆರೆಯಳಿರ್ದೆಡೆಗೆ |
ಮುನ್ನ ಕಳುಹುವುದಕ್ಕ ನಡಿಗೆರಗಿ ಬರೆವೇಳು ಕಲಿಸಿಯೆಂದವರಾಡಲು ||
ಚೆನ್ನೆಯನು ಕಳುಹಿಸುವೆನೆಂದವರನಟ್ಟೆ ಕಡು |
ಗನ್ನ ಗತಕದ ಠೌಳಿಕಾರನೆಳೆಯಳೆ ಕೇಳ |
ನಿನ್ನಡಿಗೆ ನಿನ್ನಕ್ಕನಂ ಮಣಿಯಿಸುವೆನೆನ್ನನೆಂದೊಡಬಡಯಿಸದನು ನಗುತಲೈ || ೨ ||

ಹರಿಯ ಹೊಸಮಡದಿಯನು ಕಾಣ್ಬೆಚ್ಚೆಯಿಂದ ಸೌಂ |
ದರಿ ಸತ್ಯಭಾವೆ ತನ್ನರಮನೆಯ ಪೊಡವಟ್ಟು |
ಭರದಿ ಬಂದಾ ಸವತಿಯಿರ್ದ ನಂದನದ ಪೊರವಳಯದಲಿ ನಿಂದು ತನ್ನ ||
ತರುಣಿಯರನಟ್ಟಿ ಕೃಷ್ಣನ ಬಳಿಗೆ ಬಂದವರು |
ತರುಣಿಯರನಟ್ಟಿ ಕೃಷ್ಣನ ಬಳಿಗೆ ಬಂದವರು |

ಧರಣೀಶ ಕೇಳೆಮ್ಮ ದೇವಿ ನಿಮ್ಮರಸನಿಯನು |
ತರಿಸಿ ನೋಳ್ಪುಜ್ಜುಗದಿ ಬಂದು ಉದ್ಯಾನವನದಲ್ಲಿದ್ದರೆಂದರವರು || ೩ ||

ಶೃಂಗಾರವನೆ ನೆರೆಯ ಸಿಂಗರಿಸಿದಂತೆ ಪೊಳೆ |
ವಂಗಜನ ಬಾಣವನೆ ಮಸೆದೊಪ್ಪವಿಟ್ಟಂತೆ |
ಕಂಗೆಡ್ಡ ಮಾದ ಕಾಂತೆಯನ್ನೈದೆ ಪಸದನಂಗೊಳಿಸಿ ಲತೆವನೆಯೊಳಿರಿಸಿ ||
ಹೆಂಗಳಷ್ಟವಿಧಾರ್ಚನೆಯಮಾಡಿ ನಮಿಯಿಪ ಬೆ |
ಡಂಗ ಬೆಳೆಯಿಸಿ ಕೃಷ್ಣ ನಸುನಗುತ ಮರೆಯೊಳ |
ಡಂಗಿರಲು ಬಳಿಕ ಕಳುಹಿದ ದೂತಿಯರು ಕಂಡು ಮಗುಳ್ದಾಕೆಗಿಂತೆಂದರು || ४ ||

ಅಕ್ಕ ಕೇಳೆಲೆ ನಿನ್ನ ಪುಣ್ಯ ದೇವತೆಯಂತೆ |
ತಕ್ಕನಂದನದೊಳೋರ್ವಳು ದೇವತೆಯಕಂಡೆ |
ವಿಕ್ಕಲದೊಳಾ ದೇವತೆಯನರ್ಚಿಸುವ ಬರಂಬಡೆವವರ್ಗೆ ಲೆಕ್ಕವಿಲ್ಲ ||
ಮಿಕ್ಕಮಾತೇಂ ತೋರ್ಪೆವೀಗಳಿಳೆನೇ ಹರುಷ |
ದುಕ್ಕುತ್ತೆ ಶೋಭಿಸುವ ಫಲವಸ್ತುನಿಚಯದಿಂ |
ನಿಕ್ಕುವಂ ಬಂದು ಕಂಡಳು ಪೂಜಿಪಬಲೆ ಸಂದಣಿಯ ದೇವತೆಯನು || ೫ ||

ಸರತಿಯೋ ವನದೇವಿಯೋ ಮಹಾಲಕ್ಷ್ಮಿಯೋ |
ಗಿರಿಸುತೆಯೊ ಸಗ್ಗದಿಂದಿಳಿತಂದ ದೇವಿಯೋ |
ಪರಿಕಿಪೊಡೆ ನೀನೆನ್ನ ಪುಣ್ಯದಧಿದೇವಿಯೋ ಯೆಂದುಕೊಂಡಾಡಿಭಾವೆ ||
ಸರಸಿಯೊಳು ಮಿಂದು ಧೋತ್ರವನುಟ್ಟು ಬರೆಮೊದಲ |
ತರುಣಯರ ಪೊರಸರಿಯೆ ಕರಕಂಜವನು ಮುಗಿದು |
ಚರಣವನು ಫಲಕುಸುಮದಿಂ ಪೂಜೆಗೈದು ಸಾಷ್ಟಾಂಗಪ್ರಣತಿಗೈದಳು || ೬ ||

ಎಲೆದೇವಿ ಸವತಿಯರನೊತ್ತಿಯಾಳುವಿ ಪಲಂ |
ಲಲನೆಯರಿಗದರಿಂದೆ ನಮ್ಮವನ ಪೊಸಮಡದಿ |
ಗೊಲಿಯದಿರು ಹರಿಯೊಲುಮೆ ಯಾಗದಿರು ನನಗೆ ತೊತ್ತಾಗಿ ಬೆಸಕೈವುದು ||
ಒಲವಿನಿಂ ಕರುಣಿಸೆಂದಡಿಗೆರಗೆ ನಸುನಗುತ |
ನಳಿನಾಕ್ಷ ನೇಳ್ತಂದು ಸಂತಯಿಸಿ ರುಗುಮಿಣಿ |
ಸಲೆ ವಂದಿಸಿಯೆನಲು ಸಿಗ್ಗಾಗಿ ರುಗುಮಿಣಿಯ ವಸನ ಭೂಷಣವೆಳೆದಳ್ಳೈ || ೭ ||

ಸೆಳೆದು ಕೊಂಡನಿತುಮಂಬರ ಭೂಷಣಂಗಳಾ |
ಲಲನೆಯಂಗದೊಳು ಮತ್ತಿರುತಿರ್ದವದನಾಕೆ |
ಥಳಿಲನಿಕ್ಷಿಸಿ ಮತ್ತೆ ದೇವತೆಯೆಗೆತ್ತು ಶಂಕಿಸಿದಳಿದು ಚೋದ್ಯಮೆಂದು ||
ಥಳಥಳಿಪ ಹೊಸಹೊನ್ನ ಬೊಂಬೆಯಂತಿಹ ಪೆಣ್ಣ |

ನೆಳಸಿ ನಿಟ್ಟಿಸಿ ನಾಡೆ ಬೆರಗಾದನಾಗಳಾ |
ನಳಿನಾಕ್ಷನಾ ಭಾವೆ ನಾಣ್ಚಿಹರಿಯೊಳು ಮುಳಿದು ನಿಜನಿವಾಸಕೆ ಪೊದಳು || ೮ ||

ವಿನುತ ಸುಸಮಾಧಿಗುಪ್ತ ಮುನೀಶ್ವರರ್ಗೆ ಮು |
ನ್ನಿನ ಜನ್ಮದೊಳದೊಂದು ರಾತ್ರೆಯೊಳು ಮಾಗಿಯೊಳು |
ಘನಹಿಮದ ನದಿಯೊತ್ತಿನೊಳು ಕರಂ ಚಳಿಯ ಮಸಕದ ಬಾಧೆಗುಳಿಯನಕಟ ||
ಇನಿತರುವೆನಾಣ್ಗೆಲ್ಲ ಕಡು ಬಡವನೆಂದೈದೆ |
ಮನಮರುಗಿ ಪರುಗಲಂ ಮರೆಗಯಿದು ಕೊಚ್ಚೊಟ್ಟಿ |
ವನಿತೆ ತಾನೆಂತು ಮಾಡಿದ ಫಲಂ ಕೈಸಾರ್ದು ನಾಣ್ಗೆಡದೆ ಮರೆದಳೆಂದೈ || ೯ ||

ಭಂಡು ಮಾಡಿದೆ ನನ್ನ ನಿಂತ ನಿಮ್ಮಯ ಹರಿಯ |
ಹೆಂಡತಿಯ ದೆಸೆಯಿಂದಮೆಂದ ರುಗುಮಿಣಿ ಮುನಿಯೆ |
ಪುಂಡರೀಕಾಕ್ಷನಾಕೆಯ ಚರಣದಲ್ಲಿ ನೊಸಲಿಂಚಾಚಿ ಲಲ್ಲೆಗರೆಯೆ ||
ಗಂಡರಡಿಗೆರಗುವುದು ಪಿರಿದಲ್ಲ ಸವತಿ ಮುಂ |
ಕೊಡೆರಗಿದುದೆ ದೊಡ್ಡಿತೆಂದು ನೆರೆ ಸಂತಸಂ |
ಗೊಂಡಿರ್ದನಾರತಲೆವಾಗಿಸರು ಕಾಂತೆಯರು ಮತ್ತೊಂದು ವಾಸರದೊಳೂ || ೧೦ ||

ಹೊಳೆವ ಮಿಂಚಿನ ಬೊಂಬೆಯೊಂದು ಬಾಂಬಟ್ಟೆಯಿಂ |
ದಿಳಿದು ಬಂದುದೊಯೆನಿಸಿ ಬಂದ ನಾರದಮುನಿಗೆ |
ನಳಿನಾಕ್ಷನುಚಿತ ವಿನಯಂಗೈದು ನೀವು ಬಿಜೆಯಂಗೈದ ತೆರನನೆನಗೆ ||
ತಿಳಿಪಿಮೆನಲಿತ್ತ ವಿಜಯಾರ್ಧದುತ್ತರ ಶ್ರೇಢಿ |
ಯೊಳು ಮೆರೆವ ಜಂಬೂಪುರವನಾಳ್ವ ಜಾಂಬಮಂ |
ಸಲೆ ಗಗನ ಚರರಾಯನಾತನಂಗನೆ ಪೆಸರಿನಿಂ ಜಾಂಬುಷೇಣೆಯು || ೧೧ ||

ಅವರಸುತ ಜಂಬುಕುವರಾಖ್ಯನಾತನ ತಂಗಿ |
ಕುವಲಯದಳಾಕ್ಷಿ ಜಾಂಬಾವತಿಯೆನಿಪ್ಪಳಿರ |
ಲವಳನಂಬರಚರರು ಬೇಡೆಜಾಂಬವನು ಕೊಡದಿರೆಯುಮಾಶ್ರೇಢಿಯೊಳಗೆ ||
ಪವನವೇಗನ ವಧು ಶ್ಯಾಮಲೆಗೆ ತನುಜನೊ |
ಪ್ಪುವನೇಮಿಯಾಕುವರಿಗಾತ ಮಾವನ ತನುಜ |
ನವಳನಾತಂ ಬೇಡಿ ಪಡೆಯದದರಿಂದೆತ್ತಿ ಬಂದು ಕದನಂಗೈದನು || ೧೨ ||

ಅವನ ಮಾಕ್ಷಿಕ ವಿದ್ಯೆಯಿಂದ ಜಾಂಬವ ಪರಾ |
ಭವಿಸೆ ನೇಮಿಯ ಮಿತ್ರಯಕ್ಷಮಾಗಿಯುದರದೋ |
ಳವಿಚಳಂ ಪ್ರತಿವಿದ್ಯೆಯಿಂ ಗೆಲಿಯೆ ಜಂಬುಕುವರನುಕಂಡು ಮಾಮಕಸವು ||
ಬವರಕ್ಕೆ ಬಂದು ಕಲಿಯಕ್ಷ ಮಾಲಿಯ ತಾಗಿ |

ಅವನ ವಿದ್ಯಾಪ್ರಭಾವನ ಹಿತವಿದ್ಯೆಯಿಂ |
ತಪಿಸಿದೊಡೆ ಕಡುಸೋಲ್ತು ಯಕ್ಷಮಾಳಿನಿ ಖಗೇಶನಿರದಗಿದ ಪೋದನಂದ್ಯೈ || ೧೩ ||

ಎಲೆ ಜನಾರ್ದನ ನಿನ್ನ ಪುಣ್ಯವತಿ ಸುಲಭ ನೀ |
ನಲಘು ಭುಜಬಲನೊಪ್ಪುವಾ ಕನ್ನೆಗಾಣ್ಮನೀ |
ನಲೆ ತಡೆಯದುಜ್ಜುಗವ ಮಾಡೆಂದು ನಾರದಂ ನೀರದಪಥಕ್ಕೆ ಪೋಗಿ ||
ಬಲನೊಳಾಳೋಚಿಸಿಯೆ ದಂಡೆತ್ತಿ ನಡೆದು ನಿ |
ರ್ಮಲತಾರ ಭೂಧರದ ತಪ್ಪಲೊಳು ಬಿಟ್ಟತನ |
ಗಳವಲ್ಲದೆಂದರಿದು ಗರ್ಭಶಯನದೊಳಿರ್ದನಾ ವಿಷ್ಣು ಮೂರು ದಿನವೈ || ೧೪ ||

ಇರೆಹರಿಯ ನಾಲ್ಕನೆಯ ಭವದಲೊಡವುಟ್ಟಿದಾ |
ನಿರುಪಮನು ಯಕ್ಷಿಗಳನೆನಿಪ್ಪನು ಸಹಸ್ರಾರ |
ಸುರ ನಿಳಯದಲಿ ದೇವನಾಗಿರ್ದುವಿದನರಿದು ಸುರಸಮಿತಿ ವೆರಸಿಬಂದು ||
ವರಸಿಂಹವಾಹಿನಿಯು ಗರುಡವಾಹಿನಿಯುಮೆಂ |
ಬೆರಡು ವಿದ್ಯೆಯನೊಸೆದು ಬಲವಾಸುದೇವರ್ಗೆ |
ಹರುಷದಿಂ ಮಂತ್ರಪೂರ್ವಕವಿತ್ತು ಸಾಧನೋಪಾಯವನು ತಾ ನೆಗಳ್ದನ್ನೈ || ೧೫ ||

ಕ್ಷೀರಾಬ್ಧಿಯಂ ವಿಗುರ್ವಿಸಿಯದರ ಮಧ್ಯದೊಳು |
ಘೋರಾಹಿಶಯ್ಯೆಯಂ ಮಾಡಿಯದರೊಳು ಕೃಷ್ಣ |
ಶ್ರೀರಾಯುಧನನಿರಿಸಿ ಶಯ್ಯೆಮೆಂದಾ ಹಿರಿದು ಭವದಾ ಪ್ರಪಂಚವರಿಪಿ ||
ಭೋರನಾ ಸುರಲೋಕಮಂ ಪೊಕ್ಕನಿತ್ತಲಾ |
ನಾರಾಯಣಂ ಬಲನು ಮಾದೇವ ಪೇಳ್ದಂದ |
ದೋರಂತೆ ಕಾರ್ತಿಕದಲಷ್ಟಾಹ್ನಿಕಂಬರಂ ಜಪಗೈಯುತಿರಿರಲಯ್ಯಾ || ೧೬ ||

ಕಡಲಮಧ್ಯದ ಸರ್ಪಶಯ್ಯೆಯೊಳು ತಾವಿರಲು |
ಪಡೆದಡಹ ಬನದೊಳಗೆ ಪಾಳೆಯಂ ಬಿಟ್ಟಿರಲು |
ಪಡುವ ಮಡದಿಯರ ಸಶ್ರಮದಿಂದೆ ಸುಯಿದಸುಳಿಗಾಳಿಯೆನೆ ಬಿಂಕಮಾಗಿ ||
ಕಡಲೆರೆಯ ನಾಲವಟ್ಟದ ಚಲತ್ವವನನೆಗೆ |
ಪಡುವಣೆಲರಲೆದುದಾ ನೀಲದಾಗಮಲಕ್ಷ್ಮಿ |
ಕಡುಚೆಲುವಿನುಟ್ಟ ನೀಲಾಂಬರದ ಕಾಂತಿಯೆನೆ ಕಾರ್ಮುಗಿಲು ಪಸರಿಸಿದುದ್ಯೆ || ೧೭ ||

ಮೀರಿ ಮುಗಿಲಿದಿರೇರಿ ಶಿಖಿ ಪರುಷವೇರೆನನೆ |
ಏರೆ ಕುಂದವ್ರಜಕೆ ಕಡದಲರಸಿರಿಯ ಸೊಂ |
ಪೇರೆ ರವಿರುಚಿತಣ್ಣ ಸೆರೆಕೇತಕೀವನಂ ಸುಳಿಯೇರಿ ಭಯವಂಚೆಗೆ ||
ಏರಿ ಗೆಲವೆಣ್ಣಂಗ ಭವನನಿಡುದೋಳ್ದಲೆಯ |

ನೇರಿ ವಿರಹಿವ್ರಾತ ಕಳಲೇರಿ ಪೊಲನೆ ಪಸು |
ರೇರಿಸುರ ಹೊನ್ನೆಮಲ್ಲಿಗೆ ಸುರ ಬೀತಸಿರಿಯೇರಿ ಕಾರ್ಮುಕವೇರಿತ್ತೈ || ೧೮ ||

ನವಿಲುಗಳ ನರ್ತನವ ಜಾತಕದ ಮನದೊಳು |
ಕ್ಕುವ ಹರುಷ ರಸವನಾ ಕಾದಂಬಿನೀ ವನಿತೆ |
ಯುವಲೋಕಿಸುತ್ತು ಮಾನಂದಾಶ್ರುವಾರಿ ಕಂದೆರದಳೆನೆ ಮುಂಬನಿಗಳು ||
ಪವಣಿಸಿದೆ ಸುರಿಯೆ ಚಾತಕನಿಕರ ಕೊರಳೆತ್ತಿ |
ಯವಚರದೆ ಚಂಚುಪುಟವಂ ತೆರೆದು ನಲಿದೀಂಟಿ |
ದವು ಹಂಸೆ ಕಮಲಾಕರವ ಬಿಟ್ಟು ಪೊರ್ದಿದವು ಮಾನಸ ಸರೋವರವನ್ನೈ || ೧೯ ||

ಸರಸಿರುಹವಳಿಯಳಿ ಕದಂಬ ತರುವಂಸಿರ್ದು |
ದರಗಿಳಿಗಳುಳಿದು ಚೂತವನು ಪೆಂಪಿನರ |
ನೇರಿಲಳಿವಣ್ಣಗಳಿ ವಣ್ ನೊಂದಿದವು ಮೂಗುವಟ್ಟುದು ಕೋಗಿಲ ||
[ಪರಪುಟ್ಟ] ಮರಿಗಳುಂ ಗರಿವೈದು ಕಾಗೆಭೂ |
ಡಿರವನೊಲ್ಲದೆ ಪೋದವಾಪೋದಗೆಗಳದ್ರಿ |
ತರುಕೋಟರಂಗಳೊಳು ತತ್ತಿಯಿಕ್ಕಿದವು ಮನವಿಕ್ಕಿದುದು ಬಕವಕ್ಕಿಯು || ೨೦ ||

ಘನಘನ ಶರೀರದಿಂ ಗೀರ್ವಾಣ ಮಾರ್ಗಣಾ |
ಸನವೆಂಬ ಪೊರಜೆಯಿಂ ಮಿಂಚೆಂಬ ದಂತಕಾಂ |
ತಿನಿ ಕಾಯದಿಂದೆ ಝಂಝೂವಾತದಿಂ ಮೊಳಗು....ಘಂಟಯೊಲಿಂ ||
ಘನವಾದ ಭೃಂಹಿತದೆ ಮುದಿಸಿ ಕಾರಾನೆಭೋ |
ರನೆ ಸೀಕರಂಗರೆದು ಕೀಳದವನೊಕ್ಕುದೆಂ |
ದೆನೆ ಬಡಹ ಸುರಿಯೆ ಕಡಲಹಿಶಯ್ಯೆಯಲಿ ಪಡೆಯೆಕೊಡೆಯಾಗಲವರಿರ್ದರೆ || ೨೧ ||

ಜಾತಿಗಾದುದು ಲಕ್ಷ್ಮೀ ಗಗನದಿಂ ನೆರೆಯೆತಾ |
ಓತು ಓಡುವದಿಟ್ಟೆ ಬೆಳಗೊಯೆನೆ ಬೆಳ್ಮುಗಿಲು |
ಹೂತುದದನೀಕ್ಷಿಪಂದದಿ ತಾವರೆಗಳು ಮೊಗವೆತ್ತಿದವು ಹಂಸಕುಳದ ||
ಪ್ರೀತಿಯಾನಂದಾಂಶುವೆಂಬಂತೆ ಬೆಳುಸರಿಯು |
ಭೂತಳಕೆ ಭೋರ್ಗರೆಯೆ ಕುಂದಿದುದು ಕುಂದದರ |
ಳೇತರದು ಹರುಷವೆಂಬಂತೆ ನರ್ತನವನುಳಿದವು ಸರದದೊಳು ಸಿಕಿಗಳು || ೨೨ ||

ನಳಿನ [ನಾಭನ]ದೇವತೆಗಳಂದು ತಿಳಿವಂತೆ |
ಸಲಿಲಾಶ್ರಯೌ ನಭವು ತೀತಿಳಿದುವಾಕಳವೆ |
ಗಳಪಾಲ್ದೆನೆಗೆಗಿಳಿಗಳಾ ನಳಿನಿಗಾ ಭ್ರಮರವೊಂದೊಂದುವಂತೆ ||
ಚಳಿಸದಾ ನಾಲ್ಕು ತಿಂಗಳು ಜಪವುಗೈಯುತಿರ |

ಯೊಲಿದರ್ಗೆ ಬೆಸಸು ಬೆಸಸೆನುತ ಜಗವಂ ಬೆದರಿ |
ಪಲವಾಂತ ವೈಕುರ್ಣವು ತೋರಿತಾವಿದ್ಯೆಗಳು ಬಂದು ನಿಂದುವಿದಿರ್ರೈ || ೧೩ ||

ಗರುಡವಾಹಿನಿ ಸಿಂಹವಾಹಿನಿ ಸುವಿದ್ಯೆಗಳು |
ಪರಿವಾರ ದೇವತಾವೃತರಾಗಿ ಬರಲವನು |
ಹರುಷದಿಂ ಪೂಜೆಗೈದಾಂತು ತದ್ಭೂವರರು ಬಳಿಕ ಸಂಗರ ಭೇರಿಯ ||
ಭರದಿಂದೆ ಮೊಳಗಿಸಲಿ ವಿದ್ಯಾಧರ ಶ್ರೇಢಿ |
ಗಿರದೆ ಭೂಕಂಪಮಂ ಪಡೆದುದಾ ವಿದ್ಯೆ ಬಂ |
ಧುರ ವಿಮಾನಂಗಳಿಂ ಕೊಡಲೇರಿ ಜಂಬೂಪುರೋಪಾಂತಿಕರ ಪೊಕ್ಕರ್ರೈ || ೧೪ |

ಅನಿತರೊಳು ಬಂದು ಕಿನ್ನರ ಗೀತಪುರದಿಂದ |
ವಿನುತೆ ಶಾಲ್ಮಲಿದತ್ತೆಯಾತ್ಮ ಜನನಾಧೃತಂ |
ಅನುನಯದಿ ನಿಖಿಲ ಪರಿವಾರ ಪರಿವೃತನಾಗಿ ಹರಿಹರಗಳೊಡನೆ ಕೂಡಿ ||
ಇನಿತು ಕಜ್ಜಕ್ಕೆ ನೀವೇಳ್ತಪ್ಪುದೇ ನಿಮ್ಮ |
ಮನದಿಷ್ಟವನು ಹೇಳಿ ಕಳುಹಿದರೆ ಮಾಡೆನೇ |
ಯೆನಲನಾ ಧೃತಕುಮಾರಂಗವಂ ಮೆಚ್ಚಿ ಆಳೋಚನಾ ಪೂರ್ವಕದಲಿ || ೧೫ ||

ಕಳುಹಿದರು ದೂತರನು ಜಾಂಬವ ಖಗಾಧಿಪನ |
ಬಳಿಗೆ ಬಂದವರು ಕಾರ್ಯವನರುಪೆ ಮತ್ಸುತೆಗೆ |
ವಿಲಸಿತವಿಯಚ್ಚರ ಕುಮಾರಕರು ವರನಲ್ಲದೆನೆಗೆ ಸರಿಯಾದರೆಂದು ||
ಕಳೆದನವರನು ಮೃಗೇಂದ್ರನ ಮಗಳ ನರ ಬೇಡಿ |
ಕಳುಹಿತೆಂಬಂತೆನ್ನ ನಂದನೆಯನಿಂತು ಗೋ |
ವಳ ಬೇಡಿ ಕಳುಹುವನೆ ಎಂದು ಜಡಿಕೆಯಿದು ಬಂದಾಚರರ ನೂಕಿಸಿದನು || ೧೬ ||

ಚರರು ಬಂದೆಲೆ ದೇವ ರುಗುಮಿಣಿಯನಂದು ಭೀ |
ಷ್ಮರು ಕರೆದು ಕೊಟ್ಟರೀ ಪೆಣ್ಣೊಡುವ ಮಾವಂದಿ |
ರರಸಿಯರಿಗತಿ ಶೋಕರಸವಿತ್ತು ಬಳಿಕ ಶೃಂಗಾರರಸವನು ದೇವರು ||
ಧರಿಸ ಬೇಕಲ್ಲದುಂತೆಮ್ಮ ನಟ್ಟಿದೊಡೆ ಕೊಡು |
ವರೆ ಬರುದೆ ಕನ್ನಿಕೆಯನೆನಲು ನಗಧರನು ಹಲ |
ಧರನ ಮೊಗನೋಡಿ ನಸುನಗುತ ತಡೆದಿರದೆತ್ತಿ ಮುತ್ತಿದನು ತತ್ಪುರವನ್ನೈ || ೧೭ ||

ಪುರವ ಪೊರಮಟ್ಟು ಜಾಂಬವನೊಡ್ಡಿ ನಿಲಲೊಡನೆ |
ಮುರವೈರಿ ನಿಜ ಬಲಕೆ ಕೈವೀಸೆ ಜಾಂಬವನು |
ಮರದೆ ಕೈವೀಸೆ ತನ್ನಯ ಪಡೆಗೆ ತಕ್ಷಣವೆ ಬಿಲ್ಲಪಡೆ ಕಡುಮಸಕದಿಂ ||
ಸರಳ ಸೈವಳೆ ಗರೆದೊಡೆತ್ತಲುಂ ಕೊರಳು ಕ |

ತ್ತರಿಸಿ ಕಿಬ್ಬರಿಪರಿದು ಕರುಳರ್ಚೆ ಕರಚರಣ |
ವರಿದ ಖೇಚರಬಲಂ ಬರುಡಾಗಿ ಖಗಪತಿಯ ತುರಗದಳವಂದಾಂತವೈ || ೧೮ ||

ಗಿರಿಧರನ ತುರಗಗಳ ಒಡಹಾಯ್ಸಿ ಪೊಕ್ಕು ಸಂ |
ಗರರಂಗದೊಳು ಮುಳಿದು ಹೋಳಾಯ್ತುರಾರ್ಪಿನಿಂ |
ದೆರಡು ಕೈಯಲಿ ಕತ್ತಿಗಿತ್ತೆ ಸೆವರಿದರು ಕಾಲನ ಕುಮ್ಮರಿಯ ತೆರದಲಿ ||
ತುರಗದಳ ಪಡಲಿಡಲು ಖಳನ ಗಜಘಟೆಯ ನೀ |
ಕರಿ ಘಟೆಗಳಡೆಗೊತ್ತೆ ಜಾಂಬವಂ ಜವನಂತೆ |
ಕೆರಳಿ ತಾನಿದಿರಾಗಳೊಡನನಾ ಧೃತನಾಂತನಿದಿರಾಗಿಯಿಂತೆಂದನೈ || ೧೯ ||

ಎಲೆ ಮರುಳೆ ಖಗರಾಜ ನಿನ್ನ ಹವಣರಿಯದೀ |
ಹಲಧರಗೆ ನಗಧರಗೆ ಮಲತು ನಿಲುವುದೇ ನಿನ್ನ |
ತಲೆ ನಿನಗೆ ಬೇಡವೆ ಕೊಡು ನಿನ್ನ ಮಗಳಂ ತ್ರಿಖಂಡ ಚಕ್ರೇಶ್ವರಂಗೆ ||
ಕಲಹ ನಿನಗರಿದೆಂದೊಡುರಿಗೆ ತುಪ್ಪವನೆರದ |
ವೊಲು ಭುಗಿಲನುರಿದೇಳೆ ನನ್ನಯ ಸಹೋದರರಿ |
ಗಲಗಣಸು ನೀನೆ ವಸುದೇವನ ಕುಮಾರ ನಾನೆಂದರಿಯ ಎಂದಾಂತನೈ || ೨೦ ||

ಅವನ ವಿದ್ಯೆಗಳನಿತುಮನಿತು ಮನನಾ ಧೃತಂ |
ತವಿಸಿದನು ಪ್ರತಿವಿದ್ಯೆಯುಂ ಬಳಿಕ ಹೊಸಮಸೆಯ |
ಕವಲಂಬಿನಿಂ ಜಾಂಬವನ ಶಿರವನಿರುಹಿದನು ಜಂಬುಕುವರನು ಕಾಣುತ ||
ಬವರಕ್ಕೆ ಬಂದೊಡವನಂ ನಾಗಪಾಶದಿಂ |
ದವೆಕಟ್ಟಿ ತಂದು ವೈಕುಂಠಗಿರದೊಪ್ಪಿಸಿದ |
ನವನೀಶನಭಯ ಘೋಷಣೆಯ ಮಾಡಿಸಿ ಪೊಕ್ಕನಾ ಪೊಳಲಿನರಮನೆಯನು || ೨೧ ||

ಅರಮನೆಯಲರಸಿ ಜಾಂಬಾವತಿಯ ಕಾಣದಾ |
ಹರಿಯನಾ ಧೃತಗದಂ ಪೇಳೆ ತದ್ಧಾನಶಾ |
ಸುರವಿದ್ಯೆಯಿಂದಾಕೆ ಇರ್ದಿರವನರಿತು ಪ್ರಜ್ಞಪ್ತಿಯಿಂ ಸಲೆಸಾಧಿಸಿ ||
ಪುರುಷೋತ್ತಮಂಗೆ ಜಾಂಬಾವತಿಯನೊಪ್ಪಿಸಲು |
ಹರುಷ ವಚನದಲಾಕೆಯಳಲನಾರಿಸಿವಿಯ |
ಚ್ಚರನಂತ್ಯ ಕ್ರಿಯೆಯನಾಗಿಸಿ ಜಂಬುಕುವರಂಗೆ ಪಟ್ಟಗಟ್ಟಿದನಲ್ಲಿಯೈ || ೨೨ ||

ಹರಿ ಬಾಹುಮಥನ ದಂಡದಿ ಖಚರ ಸೈನ್ಯ ಸಾ |
ಗರವ ಮಥಿಸಲು ಶರಧಿಮಥನನೆಂಬುದು ಜನವು |
ಸಿರಿಯೆಂಬುದೈಶ್ವರ್ಯವುಳ್ಳ ಖಗಕನ್ನಿಕೆಯನಾ ಕೃತಕಸುಧೆಗಡಲಲಿ ||
ವರರತ್ನ ರತ್ನವಾಹನವೆರಸಿ ಖಚರಿಯಂ |

ತಿರೆ ಸುಧಾಬ್ಧಿಯೊಳವೆಲ್ಲವುಜನಿಸಿತೆಂಬರ |
ಚ್ಚರಿಯ ಹೋಲುವೆಯಲ್ಲದಾಡುವ ಜಗಜ್ಜನವನಾರು ತಿಳುಹಲು ಬಲ್ಲರೈ || ೩೩ ||

ಕ್ಷೀರವನು ಮಥಿಸೆ ಬೆಣ್ಣೆಯೆ ಬಹುದು ಪೆರನಿಲ್ಲ |
ನೀರ ಕಡೆದೊಡೆ ಬೆಣ್ಣೆ ಬಾರದಿಹವೆಂತಂತೆ |
ಮೇರುವನು ಕಿತ್ತಸಟೆಯಂತಿರಲಿ ಸುಧೆದೇವ ತರುರತ್ನ ಧೆನು ಗಜವು ||
ನೀರೇಜಬಂಧು ಶಶಿಲಕ್ಷ್ಮಿಯೆಂಬಿವು ಮಥಿಸೆ |
ವಾರಿಧಿಯೊಳಾಗುವೆನೆ ಮುನ್ನಿಲ್ಲವೇ ಸುರರು |
ನೀರ ಕುಡಿದಿಹರೆ ಅಂಧಕರರು ವರಾನೆಗಂಡರಿಕೆವೊಲು ನುಡಿವರದನ್ಯೆ || ೩೪ ||

ಇಳೆಯೆ ಬೆರಗಾಗೆ ಕೃತಕಾಬ್ಧಿಯೊಳು ನಾಲ್ಕುತಿಂ |
ಗಳನಿರ್ದು ಬರುತ ತದ್ವಿಧವಸ್ತುಗಳನಾಂತು |
ನಳಿನಾಕ್ಷನರ್ತಿಯಿಂ ದ್ವಾರಾವತಿಯನೈದಿ ಶುಭದಿನಮುಹೂರ್ತದೊಳಗೆ ||
ಲಲನೆ ಜಾಂಬಾವತಿಯ ಮದುವೆನಿಂದತಿರಾಗ |
ದೊಳೆ ಸುಖದಲಿರುತಿರಲು ಮತ್ತಮಾ ನಾರದನೆ |
ತಳುವದೈ ತರೆ ಹರಿವಿಧಾನ ಪೂರ್ವಕವಿರಿಸೆ ಬಂದ ಹದನೇನೆಂದನು || ೩೫ ||

ಗಿರಿನಗರಿ ಪಟ್ಟಣದ ರಾಷ್ಟ್ರವರ್ಧನರಾಜ |
ನರಸಿ ಜ್ಯೇಷ್ಠಾದೇವಿಗಾತ್ಮಜೆ ಸುಶೀಮೆಯೇ |
ಧರೆಯೊಳಗೆ ಕನ್ನೆಯರು ತಲೆರನ್ನವೆಂದರುಪಿ ನಾರದಂ ಪೋಗಲೊಡನೆ ||
ಪುರುಷೋತ್ತಮನು ಬರದಲೆತ್ತಿಪುರವನು ಮುತ್ತಿ |
ಧುರಕೇಳಿಯನು ನಾರದನೆ ನಭದಲಿರ್ದು ಭಾ |
ಪುರೆಯನಲು ಕಾದಿಆಕನ್ನೆಯಂ ತಂದು ಸುವಿವಾಹ ವಿಧಿಯಂತಳೆದನೈ || ೩೬ ||

ಇಂತು ಸಕಲಾವನೀಶ್ವರ ಕುಮಾರಕರು [ಮುಂ] |
[ಅಂ]ತಧಟನಿಂತರಿಸಿ ಪೆಂಪಿಂದೆ ರುಗುಮಿಣೀ |
ಕಾಂತನುದ್ವಾಹವಿಧಿಯಿಂದವರನಾಂತು ಸುಖದಿಂದ ಮನವೆಳಸಿದಂತೆ ||
ಕಂತು ಕೇಳಿ ಸುಖವನುಣುತ್ತಿದ್ದನಲ್ಲಿಗೊ |
ಳ್ವಾಂತುದಾ ಸುಕವಿಜಿನಭಕ್ತವಿರಚಿತಮಪ್ಪ |
ಕಂತುಹರ ನೇಮಿಚರಿತೆಯೊಳಾರನೆಯದಾದುದಭ್ಯದಯ ಪರ್ವಾಖ್ಯೆಯು || ೩೭ ||

|| ಅಂತು ಅಭ್ಯುದಯ ಪರ್ವಕ್ಕಂ ಸಂಧಿ ೧೬ಕ್ಕಂ ಮಂಗಲ ಮಹಾ ||

**ಸಂಧಿ ೧೭**

ಎಸೆವ ರುಗುಮಿಣಿ ಪಡೆದ ಕಂದನು | ಶಿಶುತನದಿ ಖಗಪತಿಯ ಪುರದಲಿ |
ಕುಸುಮ ಶರನಾಗಿರ್ದು ಯುವರಾಜತೆಯನಪ್ಪಿದನು || ಪಲ್ಲ ||

ಕೇಳೆಲೇ ಶ್ರೇಣಿಕ ಧರಿತ್ರೀ | ಪಾಲ ರುಗುಮಿಣಿಗಗ್ರ ಮಹಿಮೆ ವಿ |
ಶಾಲ ಪದವಿಯನಿತ್ತು [ಸಲಹಿದ ನೆಲ್ಲ] ವನಿತೆಯರ ||
ಮೇಳದಿರುಳೋಲಗದೊಳಗೆ ವನ | ಮಾಲಯತಿರಾಗದಲಿರಲು ಮಿಗೆ |
ಲೋಲಲೋಚನೆ ಬಂದಳಾ ರುಗುಮಿಣಿ ಮಹಾದೇವಿ || ೧ ||

ನಸುನಗೆಯ ಬೆಳದಿಂಗಳನು ಹೊಳೆ | ವೆಸಳುಗಂಗಳ ಬಳ್ಳಿಮಿಂಚನು |
ಮಿಸುಪ ತೊಡಿಗೆಯ ಬೆರಕೆವೆಳಗನು ಪಸರಿಸುತ ಬಂದು ||
ಬಿಸಜನೇಂತ್ರನ ಬಲದ ಭಾಗದೊ | ಳೆಸೆದು ನಿಲೆ ಸಖಿಯರಸ ಮೇಳದಿ |
ಶಶಿವದನೆಯಾ ಸತ್ಯಭಾವೆಯು ಬಂದಳೊಲವಿಂದ || ೨ ||

ಅರಸನಿದಿರಲಿ ನಿಂದು ಮಿಗೆ ಮ | ಚ್ಚರಿಸುತಿರೆ ರುಗುಮಿಣಿ ನಿರೀಕ್ಷಿಸಿ |
ಪುರುಷರೆಡಗಡೆ ಸತಿಗುಚಿತವೆಂದಾ ಕಡೆಗೆ ಬರಲು ||
ಹರಿಯದಂ ತಿಳಿದೇಕಿರೆಲೆ ಮ | ಚ್ಚರನಿವಗೆ ಮುನ್ನಾತ್ಮಜನ ಪೆ |
ತ್ತರಸಿ ಪಿರಿಯಳು ತತ್ಸುತನೆ ಯುವರಾಜನರಿಯೆಂದ || ೩ ||

ಲೇಸನಾಡಿದೆಯರಸ ಪೆತ್ತೊಡೆ | ವಾಸಿಯುಂಟೇ ನಿನ್ನವಳ ಕೇ |
ಳೋಸರಿಸದೆನೆ ನಸುನಗುತ ಹರಿಸತಿಯರರಿವಂತೆ ||
ಆ ಶಿಶುವ ಮುಂಪಡೆದಾಕೆಯ | ಕೇಶವನು ನೆರೆಮೆಟ್ಟಿ ಮುಂಪಡೆ |
ದಾ ಸುದತಿ ಮೊಲೆನೀರ ಮೀವಳು ಮಗನ ಮದುವೆಯಲಿ || ೪ ||

ಎನಲೊಡಂಬಟ್ಟರು ಮುರಾರಿಯ | ವನಿತೆಯರು ತಾವಿರ್ದರಿರುತರ |
ಲನುನಯದಿ ಕುರುರಾಯನಲ್ಲಿಗೆ ಬಂದು ಮುನ್ನಿರ್ದು ||
ಬಿನದದಿಂದೀ ವಾರ್ತೆಗೇಳ್ದಲೆ | ವನಜನಾಭನೆ ಪುರುಡನಿಕ್ಕಿದೆ |
ವನಿತೆಯರಿಗದು ಲೇಸೆನುತ ಸಮ್ಮೇಳದಿಂತೆಂದ || ೫ ||

ಎಲೆ ಮುರಾಂತಕ ಸತ್ಯರುಗ್ಮಿಣಿ | ಲಲನೆಯರೊಳಾವಾಕೆ ಮುನ್ನವೆ |
ಚೆಲುವ ಮಗನನು ಪಡೆವಳಾ ಕುವರಂಗೆ ನಾನೆನ್ನ ||

ಲಲನೆ ಪಡೆವಾ ಮಗಳ ಕೊಡುವೆನು | ಅಳಿಯನವನೆಂದಾಡಿ ತಂ ತ |
ಮ್ಮೊಳು ಬಯಲ ಬೀಯಗತನವನಿರವಿಸಿದರೊಂದು ದಿನ || ೭ ||

ನಾರಿರುಗುಮಿಣಿ ಮಿಂದುನಾಲುಕು | ನೀರನುಟ್ಟು ದುಕೂಲವನು ಘನ |
ಸಾರ ಚಂದನದಣ್ಕೆಯುಂ ಪೊಸಮುತ್ತು ದೊಡಿಗೆಗಳಿಂ ||
ತೋರ ಮಲ್ಲಿಗೆ ಮಾಲೆಯಿಂ ಸುಕು | ಮಾರಿ ಬೆಳ್ವಸವನಮನಾಂತಾ |
ವಾರಿಜಾಸನ ಸೂಳ್ಗೆ ವಂದಳದೊಂದು ಲೀಲೆಯಲಿ || ೭ ||

ಕಾಂಚನದ ಸೆಳೆ ಮಂಚದೊಳು ರಾ | ಯಂಚೆ ದುಪ್ಪುಳ ತಲ್ಪದೊಳು ಕುಡಿ |
ಮಿಂಚನುಗುಳು ದುಗುಲವನು ಪಚ್ಚಡಿಸಿ ಮಣಿದೀಪ ||
ಗೊಂಚಲಿಸೆ ಪರಿಮಳಕೆ ತುಂಬಿಪ | ಳಂಚುತಿರೆ ಜತಿಗೊಟ್ಟು ಪಾಲಿಪ |
ಮಿಂಚರಿಸೆ ನವರತ್ನ [ಮಯದಾ] ಗೃಹದೊಳೊಪ್ಪಿದರು || ೮ ||

ಬೇಟದಾತುರ ಬೆಚ್ಚ ಮೈಮನ | ನಾಟಿದಿಚ್ಚೆ ಜಗುಳ್ತರದ ಬಾ |
ಯ್ಗೂಟಮುಣ್ಮವ ಬೆಮರು ಮೂಡುವ ಪುಳಕ ಸವಿಗಳೆಯ ||
ಚಾಟುತನ ಸೂಲದರ್ವ ಜತಿಕೊಂ | ಡಾಟಕೂಜಿತ ಮೂರ್ಛೆಯಿಂಪಿನ |
ಕೂಟದೊಳು ಸಮರತಿಯು ನಿತ್ಯವು ತತ್ಪ್ರಣಯಿಗಳಿಗೆ || ೯ ||

ಸ್ಮರನ ಜನ್ಮಕ್ಷೇತ್ರವೆನಲೀ | ವರಸುಶೀಲನೆ ಮಣಿಪುದೋ ಮೃದು |
ತರದ ತಲ್ಪದೊಳಿರಿಸಿ ಪೊರಗಿ ಬೆಳಗಪ್ಪ ಜಾವದಲಿ ||
ತರಣಿ ಶಶಿವಾರಾಸಿ ಕರಿ ಝಷ | ಉರಿ ವಿಮಾನ ಸರೋವರಂಗಳ |
ಸರಸಿ ರುಗುಮಿಣಿ ಕನಸುಗಂಡಳು ಭೂಪ ಕೇಳೆಂದ || ೧೦ ||

ತಿಳಿದುದಾಕೆಯ ನಿದ್ರೆಗಾಣಿಯ | ರುಲಿದ ಮಂಗಲ ಸುಪ್ರಭಾತದ |
ಕಳ ನಿನದದಿಂದೆದ್ದು ನಿತ್ಯಕ್ರಿಯೆಯನನುಸರಸಿ ||
ಕಳ ಮರಾಳೀ ಯಾನದಿಂದಾ | ಲಲನೆ ಬಂದು ಮುಕುಂದನೊಡನೆ |
ಗ್ಗಳದಿ ರಾಗದಿ ಪೇಳೆ ಕನಸಿನ ಫಲವನಿಂತೆಂದ || ೧೧ ||

ತರಣಿಯಿಂ ತೇಜೋನಿಧಿಯು ಸಿತ | ಕರನಿನನುಪಮನ ಬುದ್ಧಿಯಿಂ ಚೇ |
ತ್ಸರದಿ ಕಲೆಯಿಂ ಭದ್ರವಪು ಮಕರ ಧ್ವಜನು ಮೀನಿಂ ||
ಉರಿಯಿನಪದುರತನು ವಿಮಾನದಿ | ವರವಿಯಚ್ಚರ ಸರಸಿಯಿಂ ಗುಣ |
ಸರಸಿ ಯೆನಿಸವ ಪುತ್ರ ನಿನಗಹನಬಲೆ ಕೇಳೆಂದ || ೧೨ ||

ಎಂದ ಗೋವಿಂದನ ನುಡಿಯ ನಾ | ನಂದದಿಂದಿರೆ ರುಗುಮಿಣಿಯು ಗ |
ರ್ಭಂದಳೆದಳಾ ಸತ್ಯಭಾಮೆಯು ಒಡನೊಡನೆ ತಳೆಯೆ ||

ಸಂದ ಪುರುದಿನ ಕೂಡೆ ಬೆಳೆದಪು | ದೆಂದು ಗರ್ಭವು ದೀರ್ವರಿಗೆ ತರಿ |
ಸಂದ ಭಾಗ್ಯಕೆ ಪುರುಡಿಸಿದೊಡೇನಹುದು ಧಾತ್ರಿಯಲಿ || ೧೩ ||

ಗಗನದಲಿ ಚರಿಯಿಸುವ ಬಯಕೆಯ | ರುಗುಮಿಣಿಗೆ ದೊರಕೊಳಲದಂ ತಿಳಿ |
ದಗಧರನು ನೆರೆ ಗರ್ಭಶಯ್ಯೆಯಲಿರಲು ದಿವಿಜೇಂದ್ರ ||
ಬಗೆದು ಚರಮಾಂಗನನು ನಡೆವಾ | ಸುಗುಣಿಯಳ್ತಿಯ ಸಲಿಸುವೊಡೆ ನೆ |
ಟ್ಟನೆ ಕಳುಹಿದನಾ ಚೆನ್ನ ರನ್ನ ವಿಮಾನ ಭರದಿಂ[ದ] || ೧೪ ||

ವೀರ ಮಾನದೊಳಚ್ಚುತನು ತ | ತ್ತರುಣಿಯು ಕೆಳದಿಯರು ಸಹವ |
ಚ್ಚರಿಯ ವಿಭವ ವಿನೋದದಿಂದೆಣ್ದೆಸೆಗೆ ಸಂಚರಿಸಿ ||
ಹರುಷದಿಂ ನಿಜ ನಿಳಯವನು ಪೋ | ಕ್ಕಿರುತ ನವಮಾಸವು ಬೆಳೆಯೆ ಬಂ |
ಧುರ ದಿವಸ ಶುಭಲಗ್ನದಲಿ ಪೆತ್ತಳು ಕುಮಾರನನು || ೧೫ ||

ಸುರಪಟಹ ಭಾಜಿಸಿತು ಪೂಮಳೆ | ಸುರಿದುದದರಿಂ ಮುನ್ನೆ ರುಗುಮಿಣಿ |
ಪುರುಷನೆಡೆಗಟ್ಟಿದಳು ಜಾತೋತ್ಸವವನದ ಕೇಳಿ ||
ಹರುಷದಿಂದ ಮೈ ವೆರ್ಚೆ ಪೇಳ್ದಾ | ತರುಣಿಯರಿಗುಚಿತವನು ಕುಡಲೊಡ |
ನಿರದೊಸಗೆ ಜೀಯೆನುತ ಬಂದರು ಭಾವೆಯಾಳಿಯರು || ೧೬ ||

ಕಂದನನು ಮೊಗನೋಡಿ ಪರಮಾ | ನಂದವಿಹಳಾ ರುಗುಮಿಣಿಯ ಸುಡು |
ಬೆಂದ ಸಂಸಾರದಲಿ ದುಃಖವ ತೆಗೆದ ಸುಖವುಂಟೆ ||
ಅಂದಿಗೈದೇ ದಿನವು ಮಿಗೆ ಭೋ | ರೆಂದು ಪರಿವ ವಿಮಾನ ನಭದಲಿ |
ನಿಂದೊಡರಿದಾ ಶಿಶುವನೊಯ್ದನು ಮಾಯೆಯಿಂದಸುರ || ೧೮ ||

ಮಸಗಿ ಬಂದ ಧೂಮ ಶಿಖಿಯಾ | ಗಸದೊಳಾ ಬಾಲಕನ ಹಗೆ ಕರು |
ಣಿಸದೆ ಕೊಂಡೊತ್ತೊಯ್ಯುತಿರೆ ಮತ್ತಿತ್ತ ರುಗುಮಿಣಿಯ ||
ಅಸುವಳಿದ ಸಬದಂತೆ ಮಿಗೆ ಮೂ | ರ್ಛಿಸಲು ಮಧುರಿಪುವದನರಿತು ಪರ |
ವಶತೆಪಡೆದನು ಸುತವಿಯೋಗವದಾರ ನೋಯಿಸದು || ೧೯ ||

ಇದನರಿದು ಬಲಭದ್ರನೈತಂ | ದೆದೆವೊಡೆದು ಮಾಧವಗೆ ರುಗುಮಿಣಿ |
ಗೊದವಿದತಿ ಶೈತ್ಯೋಪಚಾರದಿ ಚೇತರಣೆಗೊಳಿಸಿ ||
ಸುದತಿಕಂದನ ಮಗ್ಗುಲೊಳಗಿರಿ | ಸಿದಳು ಕಾಣದಿನೊಂದು ನಲ್ಲನ |
ಪದನ...........................ತೆ || ೨೦ ||

ಬಲನು ನಾರಾಯಣನು ಶೋಕಿಪ | ಲಲನೆಯರ ಕಳಕಳವನೊಯ್ಯನೆ |
ನಿಲಿಸಿ ರುಗುಮಿಣಿದೇವಿಯರ ಕಣ್ಬನಿದೊಡೆದು ವಿಷ್ಣು ||

ಬೆಳೆದ ಶೋಕಾನಳನ ಸಂಗಡ | ಘಳಿಲನುಬ್ಬಿತು ರೋಷಶಿಖಿ ಕಂ |
ಗಳಲಿ ಕಿಡಿಗುಟ್ಟುತ್ತ ಘರ್ಜಿಸಿ ಮತ್ತಮಿಂತೆಂದ || ೧೧ ||

ಮುಳಿದು ಕೊಂಡೊಯ್ದಿಡೆ ಜವನಗಂ | ಟಲಬಳೆಯ ಬಿಡಿಸುವೆನು ನನ್ನಯ |
ಚೆಲುವ ಮಗನನು ಕದ್ದು ಕೊಂಡಯ್ಯಾತನಿಹುದೆಲ್ಲಿ ||
ಕುಲಗಿರಿಯೊಳಾಗಸದೊಳೀ ಭೂ | ತಳದೊಳಡಗಿರುತಿರಲಿ ನಾಂ ತ |
ತ್ಫಳನನಿಕ್ಕುವೆನರಸಿ ತನುಜನ ತಹೆನು ಕೇಳೆಂದ || ೧೨ ||

ಶೋಕಿಸದಿರೀರೆಂಟು ವತ್ಸರ | ಕಾ ಕುಮಾರನೆ ಕಾಮನಾಗಿ ವಿ |
ವೇಕಿ ಚರಮಾಂಗನು ವಿಯಚ್ಚರ ಭೂಮಿಯಲಿ ಬೆಳೆದು |
ಲೋಕದಲಿ ಪೊಸತೆಂಬ ವಿದ್ಯಾ | ನೀಕವನು ನೆರೆಕಲ್ತು ಬಹನ |
ವ್ಯಾಕುಲದಿ ನಂಬೆಂದುದೊಂದಶರೀರ ವಾಕ್ಕೊಲಿದು || ೧೩ ||

ಸುರವಚನದಿಂದವರ ದುಃಖವು | ಪರಿಹರಿಸಿತಿತ್ತತ್ತ ಕುವರನ |
ನರವರಿಸದಾ ಭಾವದೊಳು ತಾಂ ವೀರಸೇನ ಮುನಿ ||
ದುರುಳ ನಿಮ್ಮದುವಾಗಿ ತನ್ನಯ | ತರುಣಿಯನು ಸೆಳೆಕೊಂಡೆ ನಿನ್ನಯ |
ಕೊರಳ ಮುರಿಯನೆ ಎಂದು ಧೂಮಪತಾಕ ಕಡುಗಾಯ್ದು || ೧೪ ||

ಒಡಲನುಗುರಿಂ ಸೀಳುವೆನೊ ಮೇಣ್ | ವಡಬ ಶಿಖಿಯೊಳಗಿಕ್ಕುವೆನೊ ಮೇಣು |
ಕಡಲಸುಳಿಯೊಲಗದುವೆನೊ ಮೇಣುಕಾಲ್ಪಿಡಿದುಬೀಸಿ |
ಇಡುವೆನೋ ಎಂದೈದುತಿರೆ ಪೇ | ರಡವಿಯೊಳು ಖದಿರದ ಮರಂಗಳ |
ಗಡಣದೊಳು ಸತ್ಕರ ಶಿಲೆಯನೀಕ್ಷಿಸಿದನದ್ಭುತವ || ೧೫ ||

ಎರಡು ಪೆರ್ಗುಂಡುಗಳು ತಮ್ಮೊಳ | ಗಿರದೆ ತಾಗುವವೆಡೆವಿಡದೆ ವೆಂ |
ತರರ ದೆಸೆಯಿಂದೇನಹೇಳುವೆನಾ ಕುಮಾರರನು ||
ಕರುಣವಿಲ್ಲದೆ ರಕ್ಕಸನು ಸತ್ | ಕರಶಿಲೆಯ ನಡುವಿಕ್ಕಿ ಪೋದನು |
ಪರಿಹರಿಸುವವರಾರೊ ಕರ್ಮ ಪ್ರೇರಣೆಯದೆಂದ || ೧೬ ||

ಶಿಶುವಿನಾ ಪುಣ್ಯವನದೇನೆಂ | ದುಸುರುವೆನು ಹಣಿದಾಡುವಾ ಶಿಲೆ |
ಮಿಸುಕಲಮ್ಮದೆ ಬೀಗಿ ನಿಂದವು ಬಿದ್ದು ಭೂತಳವೆ ||
ಕುಸುಮ ಶಯ್ಯೆಯದಾದುದಾ ರ | ಕ್ಕಸನು ಬಿಸುಟೊಡೆ ಪುಣ್ಯ ದೇವತೆ |
ಬಿಸುಡುವಳೆ ಮತ್ತಾ ಸಮಯದೊಳಗರಸ ಕೇಳೆಂದ || ೧೭ ||

ಎಸೆವ ವಿಜಯಾರ್ಧದಲಿ ತೆಂಕಣ | ದೆಸೆಯಲಿಹುದಾ ಮೇಘಕೂಟವು |
ಪೆಸರಿನಿಂ ಪೊಳಲಾಳ್ವ ಖಗಪತಿ ಕಾಳಶಂಬರನು ||

ಮಿಸುಪು ಕಾಂಚನ ಮಾಲೆವಧುಸಹ | ವಸೆದು ಬಾನೊಳು ಪೋಗುತಿರೆ ಕೀ |
ಲಿಸಿತು ರತ್ನವಿಮಾನನಿಂದುದು ಘಂಟಿಕಾ ನಿನದ || ೧೮ ||

ಶಿಶುವೊ ಚರಮಾಂಗನೊ ಮುನಿಯೊ ಜಿನ | ವಸತಿಯೋ ಗರ್ಭಿಣಿಯೊ ರಿಪು ವೋ |
ಮಿಸುಪದಿಲ್ಲಿ ವಿಮಾನವಂಗನೆ ನೋಡಿಬಹೆನೆಂದು ||
ಮಸೆದ ಬಾಳ್ವೇಡೆಯ ವೆರಸಿ ಲಾ | ಗಿಸಿ ಧರಾ ತಳಕಿಳಿದು ಕಂಡನು |
ಮಿಸುಕಲಮ್ಮದ ಗುಂಡುಗಳ ನಡುವಿರ್ದ ಬಾಲಕನ || ೧೯ ||

ಕಡೆದು ಜೀವಂಬೊಯ್ದ ನೀಲದ | ಕಡು ಚೆಲುವ ಪುತ್ಥಳಿಯೊಯೆನೆ ಚೆಲು |
ವಿಡಿದ ಶಿಶುವಿನ ಭದ್ರಲಕ್ಷಣ ಮೂರ್ತಿಯನು ಕಂಡು ||
ಬಡವನಲ್ಲಿವನರಸು ಮಗನೀ | ಎಡೆಗೆ ಪಗೆವನೆ ತಂದು ಬಿಸುಟನು |
ಮಡಿಯದದರಿಂ ಚರಮತನುವೆಂದರಿದನಾ ಖಚರ || ೨೦ ||

ಅರಿದು ಹರುಷೋತ್ಕರ್ಷದಿಂ ಮನ | ವೆರಗಿ ಬಾಲನನೆತ್ತಕೊಂಡೆವೆ |
ದೆರೆಯದದರಿಂ ಮುನ್ನ ತೆಗೆದು ವಿಮಾನವನು ಪೊಕ್ಕು ||
ಕಿರುವರೆಯ ದಳೆತಂದೆ ನೆಲೆನಿನ | ಗರುವ ಕಂದನನಕ್ಷಿಗಳನುರೆ |
ಸೆರೆವಿಡಿದ ಚೆನ್ನಿಗನ ಕೊಳ್ಳೆಂದಿತ್ತನಾ ಖಚರ || ೨೧ ||

ಬಡವ ನಿಧಿಗಂಡಂತೆ ಸುಖ ನೆನೆ | ದೊಡನೆ ಕೈಸಾರ್ದಂತೆ ಬಂಜೆಯೆ |
ಪಡೆದು ನೆರೆದಂತಕ್ಷಿ ಕಂಗುರುಡರ್ಗೆ ಬಂದಂತೆ ||
ನಾಡೆ ನಲಿನಲಿದಾಡಿ ನೆರೆ ಮು | ದ್ದಾಡಿ ಮಿಗೆ ಕೊಂಡಾಡಿ ಬಾಯ್ಬಾ |
ಯ್ದೂಡಿ ಜೋಗಳವಾಡಿ ಕಂದನ ನೋಡಿ ಬಾಡಿದಳು || ೨೧ ||

ಅರಿದನಿವರಿಗೆ ಪೂರ್ವಭವದೊಂ | ದೆರಕೆಮೆಂಬುದ ನಾತನೆಲೆ ಮನ |
ದೆರೆಯಳೇ ನಿನಗೀತನಾತ್ಮಜನಾಗಿರಲಿ ಸಲಹು ||
ಮರುಕದಿಂದೆನಲೆಲೆರಮಣ ನಿನ | ನೂರ್ವರು ಸುತರ್ಗೀವ |
ನೆರಗ ಬೇಕದರಿಂದೆನಗೆ ಬೇಕೆಂದಳಾ ಖಚರಿ || ೨೨ ||

ನನಗಿವನೆ ಯುವರಾಜ ನೀತನೆ | ನಿನಗೆ ಮಗನೆಂದ್ಯೆದೆ ನಿಲೆನುಡಿ |
ದನುಪಮನು ನಿಜಮೇಘಕೂಟದ ನಂದನದಲಿರ್ದು ||
ವನಿತೆ ಕಾಂಚನಮಾಲೆ ಪೆತ್ತಳು | ತನಯನನು ನೆರೆಗೂಢಗರ್ಭದ |
ಲೆನಿಸೆ ಗುಡಿತೋರಣದಿ ಪಟ್ಟಣಮ್ಯೆದೆ ಸೊಬಗಾಯ್ತು || ೨೪ ||

ಇದಿರುಗೊಂಡರು ಪಂಚಶತಸುತ | ರೊದರುತಿರೆ ಬಹುವಾದ್ಯಗಳು ಸ |
ನ್ಮುದದಿನರಮನೆಯ್ಯೆದಿತೊಂ ಪ್ರದ್ಯುಮ್ನವೆಸರಿಟ್ಟು ||

ಪದಪಿನಿಂ ಜಿನಪೂಜೆಯನು ಪೆಂ | [ಪೊದವೆ]ಮಾಡಿಸಿ ತನ್ನ ಮನೆಯ |
ಗ್ಗದ ಧನವ ಬರುಕೈದಿದಿನಾ ವಿತರಣ ವಿನೋದದಲಿ || ೩೫ ||

ಬಿನದದಿಂ ಮೊಲೆಯುಣುವ ತಾಯಾ | ನನವ ಕಿಗ್ಗಣ್ಣಿಂದ ನೋಡುತ |
ಕೊನೆವೆರಲಿನಿಂದೊಂದು ಕುಚಚೂಚಕವ ಪೊಸದೊರ್ಮೆ ||
ತನಿಮೊಲೆಯನುಂಬುದನುಳಿದು ಮೆ | ಲ್ಲನೆ ನಗುತ ನಲಿನಲಿವ ಕಂದ |
ರ್ಪನನು ಮುದ್ದಿಸಿ ತಣಿವ ಜನನಿಯ ಸೈಪನೇನೆಂಬೆ || ೩೬ ||

ನಗುವನೊಯ್ಯನೆ ಜಗದ ನೀರರ | ನಗುವವೊಲು ಪೊಡೆ ಮಗುಳ್ವನೊಡಲಿದು |
ಮುಗುಳದಿಂ ನೆಗೆಪೊತ್ತಯೆಂದಿಳೆಯನಪ್ಪಿಕೊಳುವಂತೆ ||
ನೆಗೆದು ನಿಲುವನು ಮುಕುತಿಯಲಿ ತಾಂ | ನೆಗೆದು ನಿಲುವವೊಲಡಿಯಿಡುವನೊ |
ಯ್ಯಗೆ ಸುಪಥಕಡಿಯಿಡುವವೊಲು ದರ್ಪಕ ಕುಮಾರಕನು || ೩೭ ||

ಬೆಳೆವನಾ ಸಿತಪಕ್ಷದಲಿ ತೊಳ | ತೊಳಪಶಶಿವೊಲು ಸಕಳ ಕಳೆಯೊಡ |
ವೆಳೆಯೆ ಬಾಲಶಶಾಂಕ ಕರಸಂಗಮದಿ ಶಶಿಕಾಂತ ||
ತಳುವದೊಸರ್ವವಂಗನೆಯರೆಸೆ | ವೆಳೆವದನ ಸೋಂಕಿಮೊಳೆರೆವಾಂಮನೆ |
ಕಳೆಯೊಸರ್ವರೆನಲಪ್ರತಿಮರೂಪನು ಧರಿತ್ರಿಯಲಿ || ೩೮ ||

ನಗೆಮೊಗದ ಬಿಂಬಾಧರದ ಮಿಂ | ಚೊಗುವ ಕಂಗಳ ಕೊನರ್ವ ಮೀಸೆಯ |
ನಗಶಿಖಿರ ಭುಜದಗಲುರದ ನಿಡುದೊಳ ಬಡನಡುವ ||
ಪೊಗರೊಗುವ ನುಣ್ದೊಡೆಯ ಮಿಗೆಮಗ | ಮಗಿಪತನುಪರಿಮಲದ ತನಿಸೊಬ |
ಗೊಗೆದ ಷಾಡ್ವಳವರ್ಣದೊಳ್ಪೆಸೆದುದು ಮನೋಜನೊಳು || ೩೯ ||

ಭೂಮಿಯೊಳು ಚೆಲುವನನು ಪೊಗಲ್ವೊಡೆ | ಕಾಮ ಸನ್ನಿಭ ರೂಪನೆಂಬರು |
ಕಾಮನಾ ಚೆಲ್ವಿಕೆಯನಂತಿಂತೆಂಬ ಕವಿಯಾರೊ ||
ಕಾಮನನು ಸುತ್ರಾಮನನು ರಘು | ನಾಮನನು ಪೊಗಳುವೊಡೆ ಪಡಿಯಿಡ |
ಲೀಮಹಿಯೆ ನಗದಿಹುದೆ ನೃಪಕೇಳೆಂದನಾ ಮುನಿಪ || ೪೦ ||

ಹಿಮಿಗಿರಿಯಲಿಹ ಸಿದ್ಧಕೂಡ | ಪ್ರವರ ಚೈತ್ಯಾಲಯಕೆ ನಡೆತಂ |
ದವಿಕೃತಕ ಜಿನಬಿಂಬಗಳನರ್ಚಿಸಿ ನರ್ತಿಸಿ ನುತಿಸಿ ||
ಅವನಿನುತನರುದಿಂಗಳಿರಲೊ | ಪ್ಪುವ ಗಗನಗಾಮಿನಿಯು ಮೊದಲಹ |
ವಿವಿಧ ವಿದ್ಯೆಯನಾಂತನಾ ಜಿನಯಕ್ಷಿಗಳು ಕೊಡಲು || ೪೧ ||

[ಪರಿಪರಿಯಿಂದೊಲಿ]ದು ಸುಖದಿಂ | ದಿರುತಿರಲು ಮಕರಧ್ವಜನು ವಂ |
ಬರಪುರದಪತಿಯಗ್ನಿರಾಜವಿಯಚ್ಚರಾಧಿಪನು ||

ಪಿರಿದು ಗರ್ವಿತನಾದನೆಂದೆ | ಲ್ಲರು ಕುಮಾರರು ನಿಜಬಲವು ಸಹ |
ವಿರದೆ ಖಗಪತಿ ಕೌಳಶಂಬರ ಮುತ್ತು ವನಿತರೊಳು || ೪೨ ||

ಆ ಸಮಯದೊಳು ದೇವ ಬಿನ್ನಹ | ವೀಸುಭರದಲಿ ನೀವು ನಡೆ ವೊಡ |
ದೇಸರವನವದೇವನೋ ದಾನವನೊ ನನ್ನಬಿಡು ||
ಸಾಸಿಯಾದಗ್ನಿಯನು ನಿಜ ಭೀ | ಳಾಸಿಜಲದಿಂ ನಂದಿಸದೊಡಿದು |
ಮೀಸೆಯೇ ಕೊಡು ಬೆಸನನೆಂದನು ಮೀನಕೇತನನು || ೪೩ ||

ತಂದೆ ನಮ್ಮಗ್ರಜರು ಸಹಸುಖ | ದಿಂದೆ ರಾಜ್ಯಾಲಯದೊಳಿಹುದೆನೆ |
ಕಂದನನು ಮೊಗನೋಡಿ ವಿಕ್ರಮಶಾಲಿಯಹುದೆಂದು ||
ಅಂದು ಬೆಸಸಲು ಪಡೆ ಬೆಸಸಿನಡೆ | ತಂದು ಭರದಲಿ ಗಗನ ಪುರವನು |
ಪೇಂದ್ರ ನಂದನ ಮುತ್ತಿಬಿಟ್ಟನು ಪೊಯಿಸಿ ಭೇರಿಯನು || ೪೪ ||

ಕಡುಮುಳಿಸಿನಿಂದಗ್ನಿರಾಜನು | ಪಡೆವೆರಸಿ ಸನ್ನಾಹ ಭೇರಿಯ |
ಪೊಡಸಿ ವಜ್ರಪ್ರಾಯರಥದೊಳು ಬಾಳಝಳಪಿಸುತ ||
ಕಡಲಿನಿಂ ವಡಬಾಗ್ನಿ ಮುಗಿಲಿಂ | ಸಿಡಿಲು ಮೃಡನಲಲಾಟ ನೇತ್ರದಿ |
ಕಿಡಿಗಡಣ ಪೊರಮಡುವೊಲು ಪೊರಮಟ್ಟನಾ ಪೊಳಲಿಂ || ೪೫ ||

ಧರೆಗೆ ಧುರ ಬಂದೊಡ್ಡಿ ನಿಲಲ | ಬ್ಬರಿಸಿ ಕೈ ವೀಸಿದಡೆ ನಿಜಬಲ |
ವೆರಸಿ ಕಾಲಾಳೊಳು ತುರಂಗಮ ತುರಗದೊಳು ಕರಿಯು ||
ಕರಿಯೊಳಾ ರಥ ರಥದೊಡನೆ ಸಂ | ಗರವ ಮಾಡಿ ಮನೋಜ ಸೈನ್ಯದ |
ಭರದಿ ಮಗ್ಗಿದುದೇನಂಬೆಯ ನಿಮಿಷ ಮಾತ್ರದಲಿ || ೪೬ ||

ಪಡೆ ಪಡಲು ಮುಳಿದಗ್ನಿ ವಿದ್ಯೆಯ | ಪಡೆಯ ಪಡೆದೊಡ್ಡಿ ದೊಡ ಮದರೇ |
ನ್ಮಡಿಯ ವಿದ್ಯಾಬಲವ ಬೆಸಸರತರಿದದನು ತವಿಸೆ ||
ಕಡೆಯ ಕಾಲದ ಸಿಡಿಲೆನಿಸಿ ಘುಡು | ಘುಡಿಸಿ ದರ್ಪಕ ನಿದಿರೆ ರಥವನು |
ನಡಸಿ ಸುರಿದನು ಹೊಸಮಸೆಯ ಬಿರುಸರಳ ಸೈವಳೆಯ || ೪೭ ||

ಪೂತು ಮಝು ಬಿಲ್ಲಾಳೆಮಿಗೆ ಖ | ದ್ಯೋತ ಮುಸುಕಿದೊಡದ್ರಿಗೆಂದವ |
ಭೀತಿಯುಂಟೇ ಎಂದು ಮುಸುಕುವ ಕಣೆಯಕಣೆಯಿಂದ ||
ಘಾತಿಸಿದ ನಂಗಜನು ವಿದ್ಯಾ | ವ್ರಾತ ಬಾಣಮನೆಸಲು ತತ್ಪ್ರತಿ |
ಘಾತ ವಿದ್ಯಾಸ್ತ್ರದಲಿ ಗೆಲಿದನು ರಿಪು ಖಗಾಧಿಪನ || ೪೮ ||

ಕಡುಪನಗ್ನಿಯನಟ್ಟಿ ಬಾಳ್ದಲೆ | ಪಿಡಿದಭಯಘೋಷಣೆಯ ಮಾಡಿಸಿ |
ದೊಡನೆ ತತ್ಪತ್ತನದ ಪೊಕ್ಕು ಸುವಸ್ತು ವಾಹನವ ||

ಸಡಗರದಿ ತೆಗೆದುಕೊಂಡು ವಹಿಲದಿ | ಮಡದಿರಿಗಿವರ ಮೇಘಕೂಟದ |
ಕಡೆವೊಳಲು ಹೊಕ್ಕಿರ್ದು ದೂದಟ್ಟಿದನು ಪುರವರ್ಗೆ || ೪೯ ||

ಪುರವನುರೆ ಸಿಂಗರಿಸಿ ಯೈನೂ | ರ್ವರು ಕುಮಾರರು ಪುರಜನವು ಸಹ |
ನೆರೆದಿದರು ಗೊಂಡತಿ ವಿಭವದಲಿ ಕಾಳಶಂಬರನು ||
ಇರದೆ ಪಿಡಿ ತಂದಗ್ನಿರಾಜ | ಸ್ಮರನು ತಂದೊಪ್ಪಿಸಿಯೆರಗಿಮಿಗೆ |
ಹರುಷದಿಂದಾಲಿಂಗಿಸಿದನಾತ್ಮಜನನಾ ಖಚರ || ೫೦ ||

ಪುರವನೊಳಪೊಗೆ ನೆಲೆನೆಲೆಗಳು | ಪ್ಪರಿಗೆಯಲಿ ಮನೆಮನೆಯ ಬಾಗಿಲ |
ಉರು ಮುದದಿನಾರೀ ಕದಂಬಕವೆವೆಯ ನಿಡುಮರೆಯ ||
ಸ್ಮರನ ಚೆಲುವಿನೊಳಿಟ್ಟದಿಟ್ಟಿಯ | ಮರಳಿಸದೆ ಹೂಗಣೆಗಳೇರಿಂ |
ಜರಿದೆದೆಯ ತಳ್ಳಂಕದಿಂ ಕಳೆ ಸೂಸೆ ಮೂರ್ಚೆಪರು || ೫೧ ||

ಅವನ ನೋಡಿದ ಪೆಣ್ಣೆ ಧನ್ಯಳು | ಅವನ ನುಡಿಗೇಳ್ದವಳೆ ಮಾನ್ಯಳು |
ಅವನ ಸೋಂಕಿದ ಗಾಳಿಸೋಂಕಿದ ನೀರೆಪುಣ್ಯವತಿ ||
ಅವನ ಕೂಡಿದ ಕಾಂತೆ ಸುಕೃತದ | ತವರುಮನೆಯೆಂದೆದೆಯೊರೆದು ಕ |
ಣ್ಣೆವ ಮಿಸುಕದೀಕ್ಷಿಪುದು ಪೌರಸ್ತ್ರೀ ಕದಂಬಕವು || ೫೨ ||

ಆಡುತಿಹನಚ್ಚಣಿಯರೊಪ್ಪುವ | ಗಾಡಿಕಾರನ ಕಾಮದೇವನ |
ನೋಡಿದಾಕ್ಷಣವೆದೆಯ ತಾಗಿದ ಪೂಗಣೆಯು ಚೆನ್ನೆ ||
ಮೂಡಿ ಮನ್ಮಥವಾರಿ ಮಿಗೆತು | ಳ್ಕಾಡಿ ಝುಮ್ಮಾನೆ ಬೆಮಿರಿನಾಣ್ಣೆ |
ಟ್ಟೋಡಿ ಮರೆದೊಂದೆಸೆಗೆ ಸರಿವರು ಕೇರಿಬೀದಿಯಲಿ || ೫೪ ||

ಅರಮನೆಗೆ ಕರೆದೊಯ್ದು ಸಲೆ ಕು | ಳ್ಳಿರಿಸಿ ಕಾಂಚನ ಪೀಠದಲಿ ಪರಿ |
ಪರಿಯ ವಾದ್ಯಗಳುಲಿಯೆ ತನ್ನಯ ಕೊರಳಕಂಠಿಕೆಯ ||
ಸ್ಮರನ ಕೊರಳಲಿ ಕಟ್ಟಿಮಂಗಲ | ವಿರುತಿಯಿಂ ಯುವರಾಜ ಪಟ್ಟವ |
ಹರುಷದಿಂ ಕಟ್ಟಿದನು ಸತ್ಕವಿ ಕಲ್ಪ ಭೂಜಂಗೆ || ೫೫ ||

|| ಅಂತು ಸಂಧಿ ೨೭ಕ್ಕಂ ಮಂಗಳ ಮಹಾ ||

**ಸಂಧಿ ೧೮**

ಪಂಚಬಾಣನು ಪೂರ್ವಕೃತ ಪು | ಣ್ಯಾಂಚಿತದಿ ಪರದೈದಿ ವಿದ್ಯಾ |
ಸಂಚಯಂಗಳನಾಂತನಾ ಕಬ್ಬಿಗರ ಕಲ್ಪತರು || ಪಲ್ಲ ||

ಕೇಳೆಲೇ ಶ್ರೇಣಿಕ ಧರಿತ್ರೀ | ಪಾಲಯವ್ವನವಾಂತ ಪೊಸವೂ |
ಗೋಲರಾಯಗೆ ತಂದೆಯುವರಾಜತ್ವವನೂ ಕೊಡಲು |
ಕಾಳ ಶಂಬರನಾತ್ಮ ಬವರದ | ತಾಳಲಾರದೆ ಕೊಲಲೆಳಸಿ ಸಂ |
ಮೇಳಗೊಂಡೈದಿದರು ಕಪಟದಲಿಕ್ಷು ಚಾಪವನು || ೧ ||

ಎಲೆ ಮನೋಭವ ಕೇಳರಸು ಮ | ಕ್ಕಳು ಪರಾಕ್ರಮ ಧೈರ್ಯದೆಸಕದಿ |
ಪಲವು ಚೋದ್ಯವನಖಿಲವಿದ್ಯೆಯ ಸಾಧಿಸದ ಮತ್ತೆ ||
ನೆಲಕೆ ಹೊರೆಯಾಗಿಲ್ಲಿಯಿರ್ದೇಂ | ಫಲವು ನಾವೆಲ್ಲರು ಸಮೇಳದಿ |
ಘಳಿಲನೊಂದೆಡೆಗೈದಿ ನೋಡುವವೊಂದಪೂರ್ವವನು || ೨ ||

ಎಂದೊಡವರಕುತಂತ್ರದೊಡನೆ | ಎಂದರಿಯದಣ್ಣಂದಿರಾವದ |
ನೆಂದುದೇ ಮತವೆಂದವರ ಬಳಿಯಲೈತಂದು ||
ಸಂದ ಪೆರ್ಮೆಯ ಸಿದ್ಧಕೂಟವ | ನೊಂದಿ ಜಿನಬಿಂಬಂಗಳನು ಜಯ |
ವೆಂದು ವಂದಿಸಿ ಕಂತುರಾಜನು ಸಂತಸವನಾಂತ || ೩ ||

ಇದರ ಮೇಲ್ನೆನೆಯಲ್ಲಿ ಫಣಿಕಾ | ದದೆ ಪಲವು ವಿದ್ಯೆಯನು ಸರ್ಪನ |
ಬೆದರಿಸಿಯೆ ತದ್ವಿದ್ಯೆಯಾಂಪವರುಂಟೆಯೆನೆ ಕೆಲರು |
ಅದನು ತಹೆನೆನೆ ವಜ್ರದಾದನು | ಮದನನೆಲ್ಲರನಿರಿಸಿ ತಾನೇ |
ರಿದನು ಶಿಖರವನೇನನೆಂಬೆನು ಕಂಡುದಹಿಪತಿಯು || ೪ ||

ವಿಷದ ಹೊಗೆದಿಸೆಗವಿಯೆ ಬುಸ್ಸೆನೆ | ರಸನೆಗಳ ಕುಣಿಯಿಸುತ ಪೆಡೆಗಳ |
ಪಸರದಲಿ ಘೂತ್ಕರಿಸಿ ಬಂದೆರಗಿದ ವಿಷಾಹಿಯನು ||
ಕುಸುಮಶರ ಪೊಡೆಯಲ್ಕೆ ಸಿಡಿಲ | ರ್ವಿಸಿಪೊಡೆದವೊಲು ಪೆಡೆಯುಡುಗಿ ತೋ |
ರಿಸಿತು ತನ್ನಯ ದೇವ ತನುವನು ಭೂಪ ಕೇಳೆಂದ || ೫ ||

ಚಿತ್ತವಿಸಿ ಕೇಳರಸ ಮುನ್ನೆ ಖ | ಗೊತ್ತಮನು ವಿಕ್ರಮನು ದೀಕ್ಷೆಗೆ |
ಚಿತ್ತವಿತ್ತೈದುವ ಸಮಯದಲಿ ತನ್ನ ವಿದ್ಯೆಗಳ ||

ಮೊತ್ತವನು ಕಾದಿರಲು ಪೇಳ್ದನು | ಬಿತ್ತರದ ಭುಜ ಬಲದಿ ನಿನ್ನೊಡ |
ನೊತ್ತಿದಧಂಟಿಂಗೀವುದೆನೆ ಕಾದಿರ್ದನಿನ್ನವರ || ೬ ||

ಏರಿ ಬಂದಿಲ್ಲಿಂದ ನೆತ್ತರ | ಕಾರಿ ಕೆಡೆದರು ಖಳರು ಖಚರರು |
ವೀರನೈನೀಂ ತೆಗೆದುಕೊಳು ಸಮವಿದ್ಯೆಯತಿವಿದ್ಯೆ ||
ಚಾರುಮಣಿವಿಷ್ಟರಮಕುಟ ಧವ | ಳೋರುಛತ್ರಿಕೆ ಚವರ ಪಾವುಗೆ |
ತೋರಿ ಪೇಳುವ ಕಾಮಚಾಂಡಳಿನಿಯೆನಿಪ್ಪವನು || ೭ ||

ಎನಲವಂ ಪಡೆದೆಲೆ ಸುರನೆ ನಾ | ನೆನೆದ ವೇಳೆಗೆ ಕೊಂಡು ಬಾ ನೀ |
ನನುವಿನಿಂದನ್ನವರಮಿಲ್ಲಿಯೆ ಕಾದಿಹುದೆಮೆಂದ ||
ಅನಿತರೊಳಗೈನೂರ್ವರಾ ಖಗ | ತನುಜರಂಗಜನಳಿದನಾ ಸ |
ರ್ಪನ ದಸೆಯಿನೆಂದುಬ್ಬಿತಿರಲೈತಂದನಾ ಮದನ || ೮ ||

ಬರಲುಬಿಗಿಯಪ್ಪಿದರು ಮಝು ವೀ | ರರ ಶಿರೋಮಣಿಯೆಂದು ಬರು ಬೋ |
ಸರಿಗರೆಲ್ಲಂ ಸ್ಮರನ [ಬಳಸಿನಿಂದುರುಖಡ್ಗವ] ||
ಇರದೆ ತೋರಲು ಬಗೆಯದದನ್ನೈ | ಸರನು ಪುಗೆಮೇಲ್ವಾಯ್ದು ಸೋತಾ |
ಸ್ಮರಗೆ ಪೀತಾಂಬರವ ಶಕ್ತಿಯನಿತ್ತನಾ ಶಿಖಿಯು || ೯ ||

ಕೊಲಲೆ ಬಗೆದಾ ಕಾಲಗುಹೆಯನು | ಕಾದ ಬಹುದೀ ರಾಕ್ಷಸನ ಕೂ |
ನಲಸದದ ಪೊಗೆ ಕಾಳ ರಕ್ಕಸ ಮಲ್ಲ ಯುದ್ಧಕ್ಕೆ ||
ಕಲಿತನದಿ ಬರೆ ದರ್ಪಕನು ಕೈ | ಚಳಕದಲಿ ತಿವಿಯಲ್ಕೆ ತಾವರೆ |
ಯೆಲೆಯ ನೀರನೆ ನಡುಗುತಿಳೆತದ್ವನಿಯ ಮಸಕದಲಿ || ೧೦ ||

ಮಾಧವನು ಚಾಣೂರನೊಡನೆಯೆ | ಕಾದ
ಡಾದರಿಸದೀ ಬಾಲಕನು ಕಾದುವುದೇ ಅರಿದೆಂದು ||
ಆ ದಿವಿಜರಾಡುತಿರೆ ಬಿಂಕದೀ | ರೌದ್ರಿರಕ್ಕಸಮಲ್ಲ ಸೋತು ಶು |
ಭೋದಯಗೆ ಗದೆವಿವಿಧ ವಿದ್ಯಾಭರಣಗಳನಿತ್ತ || ೧೧ ||

ತಗರವೊಲು ನೆರೆ ಮೇಘ ಪಾಷಾ | ಣಗಳೆರಡು ಹಣಿದಾಡುತಿಹವವ |
ನಿಗೆಯವರು ಕೊಲಬಗೆದು ತೋರಲುಮಧ್ಯದಲಿ ಹೋಗುತ ||
ಎರಡು ಹಸ್ತದಿ ಜಡಿಯೆ ಮೇಘಾ | ಸುರ ಬೆದರಿ ಮಣಿಕುಂಡಲವನಾ |
ಸ್ಮರಗೆ ಕೊಟ್ಟನು ವಿಷವಮೃತವಾಗದೆ ಶುಭೋದಯದಿ || ೧೨ ||

ತೋರ ಶೂಕರಗಿರಿಯನಂಗಜ | ನೇರಿ ಶೂಕರ ರೂಪಿನಸುರನು |
ಕೀರಿ ತಾಗಿದೊಡೆದೆಯೆ ನೆತ್ತರ ಕಾರಿ ನಿಜರೂಪ ||

ತೋರಿ ವರಜಯಘೋಷ ಶಂಖವ | ನೇರಿಸಿದ ಪೂವಿಲ್ಲನಿತ್ತೆಲೆ |
ಧೀರ ನಿನಗೆಣೆ ವೀರರೊಳೆಂದು ಪೊಗಳಿದನು || ೧೩ ||

ಶರಭಗಿರಿಯಲ್ಲಿ ಶರಭ ದೈತ್ಯನ | ಪರ ಶರಭ ಭೇರುಂಡ ಬೆದರಿಸಿ |
ವರಮಕುಟಕೇಯೂರ ಹಾರಾದ್ಯಖಿಲ ಭೂಷಣವೆ ||
ಧರಿಸಿ ಮರ್ಕಟಗಿರಿಯ ಮರ್ಕಟ | ನುರು ಪೆಸರ ರಕ್ಕಸನು ಮೆಚ್ಚಿಂ |
ಸ್ಮರಗೆ ಕೊಟ್ಟನು ಪಾದಸರ ಕಟಿಸೂತ್ರ ಕಂಟಿಕೆಯ || ೧೪ ||

ಉರಗ ಗಿರಿಯುರಗಾಸುರನು ಭಾ | ಸುರಕುಲಿಶ ಮುದ್ರೆಯನು ಕವಚವ |
ಸುರಗಿಯನು ಕುಡೆ ಪಡೆಯೆ ಮಾಲ್ಯಾಚಲವನೇರಿಸಲು ||
ಭರಧಿ ಮಾಲ್ಯಾಸುರನು ಮೆಚ್ಚಿಂ | ದರಲ ಪಸೆ ಪೂವಿನ ಮಕುಟ ಭಾ |
ಸುರತರೋದ್ಗಮಮಾಲೆ ಪಲವಾಭರಣಗಳನಿತ್ತ || ೧೫ ||

ಕಾಳ ಶಂಬರ ಪುತ್ರನಾ ಕರ | ವಾಳನರ್ಜುರ ಗಿರಿಯಸುರನಿಂ |
ವ್ಯಾಳಮಾತಂಗಾಚಲದ ಮಾತಂಗ ರಕ್ಕಸನಿಂ |
ಸ್ಥೂಲಗಜವನು ಖಚರ ಪಾದುಕ | ಲೀಲೆಯನು ಸಲೆ ಪಡೆದುದೋರ್ವಳ |
ಪಾಳಿ ಬರಲವರೆಂದ ಸರ್ಪಾವಾಸವನು ಪೊಕ್ಕ || ೧೬ ||

ಉರಗ ಶಯ್ಯೆಯ ಸೈನ್ಯರಕ್ಷತ್ರ | ಕರಮನಾಗೃಹ ಕಾರಿಣಿಯ ಕೇ |
ಸರಿಸುಪೀಠವ ಕಾಮನಾಮ ವಿಮಾನ ವೀಣೆಯನು ||
ಉರಗನಿಂ ಪಡೆದಂಗಭವನಾ | ತುರಗ ಗಿರಿಯೊಳು ತುರಗ ಮುಖವೀ |
ಕರ ನಿಶಾಚರನಿಂದೆ ಪಡೆದನು ತುಂಗ ತುರಗವನು || ೧೭ ||

ಮುಗುಳುಗಣೆಯಗೆ ವಜ್ರದಾಡಾ | ದಿಗಳು ಭೀಳ ಜಲಾಸುರನ ಪೆ |
ಚ್ಚುಗೆಯ ಕೊಳನನು ತೋರಲಾರುಂ ಪೊಗದ ಸುರಗೆರೆಯ ||
ಪುಗಲು ತದ್ದಾನವನಳುಕಿ ಕಾ | ಮಗೆ ಮಕರಕೇತನ ಮದನ ಚ |
ಕ್ರಗಳನಿತ್ತನು ಪೊಕ್ಕನಾ ಸ್ಫಟಿಕಾಸುರ ಶಿಲೆಯ || ೧೮ ||

ಪೊಳೆವ ಮನ್ಮಥ ಶಾಪವನು ಕಡೆ | ತಳೆದು ಮತ್ತಮನುಕ್ಷರಕ್ಷಕ |
ನಿಳಯದಲಿ ಕಂದರ್ಪ ಚಾಪವಮದರ ದಾವರ್ತ ||
ಸಿಳೆಯಸುರನಿಂ ಮಿಂಗುಡಿಯನ | ಗ್ಗಳಿಪ ಮೋಹನ ರಥವ ಪಡೆದಾ |
ಗಳೆ ಬಳಾಕಾಸುರನ ಗುಹೆಯನು ಪೊಕ್ಕನಲರಂಬ || ೧೯ ||

ಪುಲಿಯವೋಲರ್ವಿಸುವ ಕರ್ವಿನ | ಬಲು ಧನುವನವನಿಂ ಪಡೆದು ಮೈ |
ಗಲಿಯು ಗೋಳಾಂಗೂಲ ಪರ್ವತದಸುರನಿಂ ಮತ್ತೆ ||

ತೊಳಪ ಮುತ್ತಿನ ಛತ್ರ ಚಾಮರ | ಪೊಳೆವ ಮಕುಟವನಾಂತು ಬಂದಾ |
ಗಳೆ ಮನೋಜನನೇರಿಸಿದರವನರ್ಜುನಾದ್ರಿಯನು || ೧೦ ||

ಸಾಹಸದಿ ಮದ ತಾಪ ಶೋಷಣ | ಮೋಹನೋದ್ಧ ವಶೀಕರಣವೆಂ |
ಬೀಹೆಸರ ಕುಸುಮಾಸ್ತ್ರ ವೈದ್ಯನು ಪಡೆದನಲವಿಂದ ||
ಬಾಹು ವಿಜಯ ಕದಂಬ ಮುಖಿಯೆಂ | ಬೀ ಹಿರಿಯ ಕೂಪವನು ತೋರಿಸ |
ಲಾ ಹದದಿನೊಳಪೊಕ್ಕು ಪಡೆದನು ನಾಗಪಾಶವನು || ೧೧ ||

ಸ್ಮರ ಬರುತದ್ವದನದೊಳಗೆ ಖೇ | ಚರ ವಸಂತನ ಕೀಳಿಸಿಯೆ ಶಂ |
ಬರ ವಿಯಚ್ಚರ ಕಾದುಕೊಂಡಿರೆ ಕಂಡು ಕಟ್ಟುಬಿಡೆ ||
ಉರೆಯನುಗುಳುತ ತಾಗಿದಾ ಶಂ | ಬರನನಂಗಜನಿಕ್ಕೆ ನಿನ್ನಿಂ |
ಹರಣವುಳಿದುದು ನಾಂ ವಸಂತನನು ನಿನ್ನ ಸಖನೆಂದ || ೧೨ ||

ಎಂದು ತನ್ನೆಸೆವಿಂದ್ರ ಜಾಲ ಮ | ಹೇಂದ್ರ ಜಾಲವನೀಯೆ ಪಡೆದಥ |
ಟೆಂದೆ ಶಂಬರವೈರಿ ಬಂದು ಭುಜಂಗಗುಹೆ ವೊಕ್ಕು ||
ನಂದಕಾಯದ ರತ್ನವನು ಸಾ | ನಂದ ಕುಸುಮಚ್ಛತ್ರ ಚಾಮರ |
ವೃಂದವನು ಪರಕಾಮ ಮುದ್ರಿಕೆವಡೆದನಾ ಮದನ || ೧೩ ||

ಸಲೆ ಜಯಂತಾ ಚಲದಲತಿ ಶೀ | ತಲ ನದಿಯ ನಡುವಿರ್ದ ಪಳುಕಿನ | ಸ
ಶಿಲೆಯೊಳಗೆ ಕುಳ್ಳಿರ್ದು ಪಳುಕಿನ ಜಪಸರವ ಪಿಡಿದು ||
ಮಲರಹಿತ ಮುನಿಯೆಂದವೊಲು ಸಂ | ಚಳಿಸದಾ ದೇಶಾನುಕೂಲದಿ |
ತೊಳ ತೊಳಗೆ ಜಪಗೈವ ನೀತಿಯ ನೀಕ್ಷಿಸಿದನತನು || ೧೪ ||

ಅರರೆ ಚತುರಾಸ್ಯನೆ ಜಗದ ಸೌಂ | ದರಿಯರೆಲ್ಲರ ಮೋಹನದ ಸೌಂ |
ದರದ ಸೊಬಗಿನ ಸಾರಗಳ ನಾಯ್ದರಿಸಿ ಸಂಗ್ರಹಿಸಿ ||
ಒರೆಗಳೆದ ಪೊಂಬಣ್ಣವನು ತನಿ | ಪರಿಮಳವನೊಡಗೂಡಿ ತಾನೀ |
ತರುಣಿಯನು ನಿರ್ಮಿಸಿದನೋ ಎಂದೀಕ್ಷಿಸಿದನೊಲಿದು || ೧೫ ||

ಹೊಂಗಲಶ ಮೊಲೆ ಹೊಗರೊಗುವ ನೆರೆ | ದಿಂಗಳೊಲು ಮೊಗಹೊನ್ನ ಸೆಳೆನಡು |
ತುಂಗಕಟಿ ಪೊಂಬಾಳೆದೊಡೆ ಕೇಸಡಿ ಮುಕುರನಖ ||
ಅಂಗನೆಯ ನಳಿ ತೋಳುಗಳು ನಗೆ | ಗಂಗಳಲರ್ಗಣೆರೊಗುವ ನೋಟ ಲ |
ತಾಂಗ ರುಚಿ ಕಣ್ಮನವ ಸೋಲಿಸಿದವು ಮನೋಭವನ || ೧೬ ||

ಇವನೊ ಚೆಲುವಿನ ಕಾಮನೆಂಬವ | ನಿವನೊ ನಾನಾ ದೇಶ ವಲ್ಲಭ |
ನಿವನೋ ನನ್ನ ಜಯಂತ ಜನಕಂಗಳಿಯನೆಂದೆನುತ ||

ಯುವತಿ ನೋಡುವ ದಿಟ್ಟಿದರ್ಪಕ | ನವಯವದೊಳುರು ಮಲ್ಲಿಗೆಯ ಪ |
ಚ್ಚವ ತೊಡಿಸಿದುದು ಬೀಳ್ದುದಾಕೆಯ ಕೈಯ ಜಪರಸವು || ೧೭ ||

ಅವನ ಕಣ್ಣೊಳು ಮುಳುಗಿದಳೊ ಇವ | ಳವಳ ನಯನದೊಳಿದ್ದನೋ ಮೇ |
ಣಿವನೆನಿಸಿ ನಡೆನೋಡೆ ಮನವಮನ ಬೆಚ್ಚು ದಚ್ಚರಿದು ||
ಬೆವರ ಪನಿಗಳ ಕೊಂಡು ಮೈಯಲಿ | ನವಿರು ತಲೆಯೆತ್ತಿದವು ತಂತ |
ಮ್ಮವಯವವನೀಕ್ಷಿಸಿದರೀರ್ವರು ಮನದೆಡೆಗೆ ನೆಗೆದು || ೧೮ ||

ನನೆಗಳಿಗೆ ಸ್ವಾಮಿ ದ್ರೋಹಿಕೆ | ಜನಿಸಿತಂದಾ ಕೋಮಲಾಂಗಿಯ |
ಮನವನಿರಿದವುಂಕುವವು ಕಂದರ್ಪನೆದೆಯೊಳಗೆ ||
ಮನಸುವವುಟಚ್ಚು ಚ್ಚುವವು ಬೆ | ಚ್ಚನೆಯ ಮೈಯನು ಮಾಡಿಕಾಂತಾ |
ನವ ಶಶಿಯ ಹೊಂದಾವರೆಯ ಮುಗುಳಗಳನೀಕ್ಷಿಸಿತು || ೧೯ ||

ಬರೆಬಸಂತನು ತತ್ಸಮಯದೊಳ | ಗಿರದಲೇ ಸಖ ಸುರ ಸತಿಯ ಧಿ |
ಕ್ಕರಿಪ ಚೆಲುವಿಕೆದಳೆದ ಪೆಣ್ಣಾರಾರಮಗನೆನಲು ||
ಸ್ಮರನ ಕೇಳು ಜಯಂತ ವಿದ್ಯಾ | ಧರನ ಸುತೆ ರತಿ ದೇವಿ ನಿನ್ನ… |
……………………. ಯಸುನೀನೆಂದಾನಾ ಚೈತ್ರ || ೨೦ ||

ಪುರುಷದೊಳು ನಿನಗೆನಿಪ ಚೆಲು | ವರನು ಕಾಣೆನು ಪೆಂಡಿರೊಳಗೀ |
ದೊರೆಯ ನೀರೆಯರೆಲ್ಲಿಯುಂ ಪುಟ್ಟರು ವಿಧುಪ್ರಿಯನೆ ||
ಪುರುಷನಾಕೆಗೆ ನೀನೆ ನಿನಗಾ | ತರುಣಿಯೇ ಸಾದೃಶ್ಯವೆಂದವ |

ನೊರೆವ ಸಮಯದೊಳೈದಿ ಬಂದು ಜಯಂತ ನೊಂದಿದನು || ೨೧ ||

ಎಲೆ ಜಯಂತನೆ ಕೇಳು ಗಡ ನಿ | ನ್ನಳಿಯನೀತನೆ ಕಾಮನೆನೆ ಮನ |
ವೊಲಿದು ಖಚರಜಯಂತನುಕ್ತಿಯಿನರಿದು ಮನಸಿಜಗೆ ||
ಪಲ ತೆರೆ ಸದ್ವಸ್ತು ವಿದ್ಯಾ | ಬೆದರಿಸಿಯೆ ರತಿದೇವಿ ಮೊದಲಾ |
ದುದಿತವಿದ್ಯೆಯನಾಂತು ಬರೆ ಕಂಡರು ಖಗಾತ್ಮಜರು || ೨೨ ||

ಒಸೆದು ಚಿತ್ತೋದ್ಭವನನಾಲಿಂ | ಗಿಸಿದರುಳಿದರು ಮಾಳ್ಪ ವೈರವ |
ನಸಮ ಭುಜಬಲನಧಿಕ ಪುಣ್ಯನೆ ಮತ್ತೆ ಕೊಂಡಾಡಿ ||
ಮಿಸುಪ ಮಣಿದೀಪವನೆಲರು ನಂ | ದಿಸಲು ಬಲ್ಲುದೆಯೆಂದು ಮಿಗೆಸಂ |
ತಸದವೆಲ್ಲರು ವೆರಸಿ ನಿಜ ಪಟ್ಟಣವನೈದಿದರು || ೨೪ ||

ಸ್ಮರನು ವಿದ್ಯಾಮಯ ಕಿರೀಟ | ಸ್ಫುರಿತ ರತ್ನಾಭರಣವನು ತೊ |
ಟ್ಟರಳ ಸರಳನು ಪುಷ್ಪಛಾಪವನಾಂತು ರತಿವೆರಸಿ ||

ಬರುತಿರಲು ನರನಾರಿಯರು ಮಿಗೆ | ಹರುಷದಿಂದೀಕ್ಷಿಸುತ ರತಿಗಾ |
ಯ್ತರುಣಿಯರು ಪುರುಷರು ಮನೋಜಂಗೆ ಸೋಲ್ತದೇನೆಂಬೆ || ೩೫ ||

ಅರಮನೆಯನೈತಂದು ಮನ್ಮಥ | ನಿರದೆ ಜನನೀ ಜನಕರಡಿ ದಾ |
ವರೆಗೆರಗಿ ತೆಗೆದಪ್ಪಿ ಪುತ್ರನ ಭಾಗ್ಯದುನ್ನತಿಯ ||
ಪಿರಿದು ಮೆಟ್ಟಿದರಗ್ರಜರೊಳಾ | ದರಿದಿನಿರ್ದನು ಜಿನಪದಾಂಬುಜ |
ಸರಸಿರುಹಪಟ್ಟರಣ ಸತ್ಕವಿತಾ ಗುಣೋದಯನು || ೩೬ ||

|| ಅಂತು ಸಂಧಿ ೨ಲಕ್ಕಂ ಮಂಗಲ ಮಹಾ ||

## ಪ್ರದ್ಯುಮ್ನ ಪರ್ವ (ಸಂಧಿ ೨೯)

**ಸಂಧಿ ೨೯**

ಜೋಡೆಕಾಂಚನಮಾಲೆ ಕೃತಕವ | ಮಾಡೆ ಖಗಪತಿ ಕಾಮ ದೇವನ |
ಕೂಡೆ ಕಾದಲು ಬಂದು ನಾರದ ಮುನಿಯು ತಿಲುಹಿದನು || ಪಲ್ಲ ||

ಕೇಳೆಲೇ ಶ್ರೇಣಿಕ ಧರಿತ್ರೀ | ಪಾಲ ಚೆಲುವಿಂದೆಸೆವ ಕಾಂಚನ |
ಮಾಲೆಕಱುಸವಿಯಾಗಿ ಪಸದನವಾಂತು ಕೆಳದಿಯರ ||
ಮೇಳದಲಿ ಹೊನ್ನುಯ್ಯಲಾಡುತ | ಲೀಲೆಯಿಂದಿರೆ ಬಂದನಾ ಪೂ |
ಗೋಲರಾಯನು ಯಕ್ಷಿ ಕೊಟ್ಟಾ ಪಾವುಗೆಯ ಮೆಟ್ಟಿ || ೧ ||

ಮಿಸುಪ ಮಕುಟದಿ ಸುರಧನುಗಳೆ | ಣ್ದೆಸೆಯ ಚಿತ್ರಿಸೆ ಕುಂಡಲದ ಕೆಂ |
ಬಿಸಿಲು ಪಸರಿಸೆರಾರೆಗಳನವಮೌಕ್ತಿಕಾಭರಣ ||
ದೆಸೆದೆಸೆಗೆ ಪೊಸಸಂಜೆಯನು ಪಸ | ರಿಸೆ ಪೋದಸೆ ಪೀತಾಂಬರವು ನಿ |
ಟ್ಟಿಸುವರಕ್ಷಿಯ ಪುಣ್ಯವವೆನೆ ನಡೆತಂದನನಂಗಭವ || ೨ ||

ಅವನ ಚೆಲ್ವಿಕೆಗವನ ಜವ್ವನ | ಕವನ ಸಿಂಗರಕವನ ನಡೆನುಡಿ |
ಯವನ ಸೊಬಗಿಗೆ ಪಾಪಿ ಕಾಂಚನಮಾಲೆ ಸಲೆಸೋಲ್ತು ||
ಅವನನೀಕ್ಷಿಸಿ ಪೂಗಣೆಗೆ ಚಿ | ತ್ತವನೆ ಸವಿಗೊಟ್ಟಿರಲು ನನೆಗೋ |
ಲವನೆ ತಾಯೋಲಗದೊಂದಿನಿತಿರ್ದು ಮರಳಿದನು || ೩ ||

ಸಿತಗೆಗಾದುದು ಕಾಮದಾಹ | ಸ್ಥಿತಿಯೊಳಾರಣರಣಕವಾಗಳು |
ಚತುರೆ ನಿಜಸಖಿಸಜ್ಜೆಗೊಳಿಸಿ ಸಮಸ್ತರವನು ತೇದು ||

ಅತಿಶಯ ಜ್ವರವೇತರಿಂ ತೋ | ರಿತು ನನಗೆ ಪೇಳೆಂದು ಮುದ್ದಿಸಿ |
ನುತಿಸಿ ಮರ್ಮವ ಜಕ್ಕುಲಿಸಿ ಕೇಳಿದೋಡೆ ಪೇಳಿದಳು || ೪ ||

ಹರಣವಲ್ಲವೆ ನೀನೆನಗೆ ಸಖಿ | ಯೊರವೆ ನಾತೆರನೆಲ್ಲವನು ನಿನ |
ಗರಳ ಸರಳನು ನನ್ನ ಮಗನಲ್ಲಡಿವಿಯೊಳಗಿರಲು ||
ಅರಸ ಕಂಡೆನಗಿತ್ತೊಡಿನ್ನೆಗ | ಪೊರೆದೆ ನಿಡುದಿಟ ವೀಗಲವನ್ನೈ |
ಸರಗಳೆನ್ನೆದೆ ಉಚ್ಚಿದವು ಕೇಳೆಂದಳಾ ಕುಲಟೆ || ೫ ||

ಇಲ್ಲದುದ ನೀನುಸುರೆ ಹೆಂಗಳಿ | ಗುಳ್ಳುದೈ ಸತಿ ಕಾಮ ಮೋಹದಿ |
ತಳ್ಳಿವರಿವಾ ಬೇಟದಾತುವಾದಡದಕೇನು ||
ಚೆಲ್ಲೆಗಂಗಳ ಚದುರೆ ಕಾಮನ | ನಿಲ್ಲಿಗಾಂ ತಂದಪೆನು ಬಾಗಿಲೊ |
ಳಲ್ಲಿ ನಾನಿಹೆ ಪಿಡಿದು ನೀನೆರೆಯೆಂದಳಾ ಕೆಳದಿ || ೬ ||

ಎಂದವಳ ಸಂತೈಸಿ ವಹಿಲದಿ | ಬಂದಳಂಗರಾಜ ಜರದಲಿ |
ಬೆಂದಳಲೆ ನಮ್ಮಕ್ಕ ಕಾಂಚನಮಾಲೆ ನೀನೋಡೆ ||
ಬಂದುದಿಲ್ಲೇಕೆನಲು ಚತುರಿಕೆ | ಬಂದೆನಿದೆಯೆಂದೈದೆ ಬರೆ ಕರೆ |
ತಂದು ಬಾಗಿಲೊಳಿರ್ದು ನೋಡೆಂದೊಳಗೆ ಪೊಗಿಸಿದಳು || ೭ ||

ಕರುಣದಿಂದೇ ನಮ್ಮ ನಮಗೀ | ಜ್ವರ ವಿದೇತರಿನಾದುದೆನಲೈ |
ಸರದೆ ಬಾಯೆಂದವನ ಕರವನು ಪಿಡದುರದ ಮೇಲೆ ||
ಇರಿಸಿಕೊಂಡೆಲೆ ಮದನ ತನ್ನಯ | ಹರಣವೀಗಳೆ ಪೋಗುತಿದೆ ಪರಿ |
ಹರಿಸು ನಿನ್ನಿಂ ಬಂದ ಜರವೆನೆ ಬೆದಱಿ ಕೈದೆಗೆದ || ೮ ||

ಅನಿತರೊಳು ಹಾಯ್ದಪ್ಪಿಕೊಂಡಳು | ಮನಸಿಜನೆ ಬಿಟ್ಟೋಡಿದೊಡೆ ಜೀ |
ವನಮುನೀಗಳೆ ಬಿಡುವೆನನಲು ಣಮೋಽರಹಂತಾಣಂ ||
ಜನನಿ ನಿಮಗೇಂ ಗ್ರಹವು ಪಿಡಿದುದೊ | ಎನೆ ಮನೋಜಗ್ರಹವು ಪಿಡಿದುದು |
ನನಗೆ ನೀ ಸುತನಲ್ಲ ಕೇಳದ ಪ್ರಪಂಚವನು || ೯ ||

ಪಡೆದ ನಿನ್ನನದಾರೋ ಭೀಕರ | ದಡವಿಯಲ್ಲಿ ಬಿಸುಟಿರ್ದೊಡೆಮ್ಮುವ |
ನೊಡನೆ ತಂದೆನಗೀಯೆ ಸಾಕಿದೆನ್ನೈಸೆ ಮಗನಲ್ಲ ||
ಒಡಲ ಮಾತಿದು ನಂಬೆನಲು ಮನ | ನಡುಗಿ ಸಾಕಿದೊಡಮ್ಮನಲ್ಲವೆ |
ನುಡಿಯ ಬಹುದೇ ಜನನಿ ಕಷ್ಟವನೆಂದನಾ ಮದನ || ೧೦ ||

ಜನನಿಯೆಂಬಾ ನುಡಿಯ ಮಾಣೆಲೆ | ಮನಸಿಜನೆ ನಿನ್ನಾಣೆಯೀಕೆಯ |
ತನುಜನಲ್ಲದಕೇಕೆ ಸಂಶಯ ಬೇಡವಂದವಳ ||

ಮನದ ದೋಲಿಹ ಕೆಳದಿ ಪೇಳಲು | ಮನಗೊಡದೆ ಮನಸಿಜನಿರಲ್ಕಾ |
ಕನಕಮಾಲೆಯು ಕಂಡು ಮನದೊಳು ನೆನೆದಳಿಂತೆಂದು || ೧೧ ||

ಸ್ಮರನು ವಿದ್ಯಾಲಂಪಟನು ಚ | ಚ್ಚರದಿ ತನ್ನಯ ವಿದ್ಯೆಯನು ಕಡು |
ಹರುಷೆಯಹ ಮೇಲವನೊಲೆಗುಮೆಂಬಾಸೆಯಿಂ ಸಿತಗೆ ||
ನರಕಕೊಳಗಹನಲ್ಲನವ ಸತ್ | ಪುರುಷನೆಂದರಿಯಳಲೆ ವಿಷಯಾ |
ತುರರದೇಂ ಗಡ ಮುಂದುಗಾಣ್ಬರೆ ಭೂಪ ಕೇಳೆಂದ || ೧೨ ||

ಸ್ಮರನೆ ಕೇಳೆ ನಮ್ಮ ವಂಶದ | ಪುರುಷರಿಗೆ ಕೈ ಸಾರದದು ವ |
ಚ್ಚರಿಯ ಬೆಜ್ಜೆಯ ಕೊಡುವೆ ಸಾಧಿಸು ಸಾಧ್ಯಾವಾದಾಗ ||
ಅರಿದುಕೊಳು ನೀನೆನ್ನ ಪುತ್ರನೊ | ಪೆರನೊ ಎಂಬುದ ಸತ್ಯವಿದು ನಿ |
ನಿಷ್ಕರುಣಿಯಾಗದೆ ಬಳಿಕ ತನ್ನಸುವುಳುಹು ನೀನೆನಲು || ೧೩ ||

ಸತ್ಯವಿದ ನಂಬೆಂದು ನೀವೆನ | ಉತ್ತರವ ನಿನ್ನಾಡುವೆನೆಯದ |
ನಿತ್ತು ಕಳೆ ನೀವೆಂದವೊಲು ನೆಗಳುವೆನು ನಿಮಗಿಳಿವ ||
ಇತ್ತಪೆನೆ ಪುಸಿಯೆನಲು ಬಂಧಕಿ | ಚಿತ್ತಜನ ಮೊಗನೋಡಿ ತನಗಿದೆ |
ಇತ್ತನೆಂದೀ ಮಂತ್ರ ಪೂರ್ವಕವಿತ್ತಳದನಿರದೆ || ೧೪ ||

ಪೆಸರಿನಿಂ ಪ್ರಜ್ಞಪ್ತಿಯಿದನಾ | ನುಸುರಿದಂದದಿ ಸಿದ್ಧ ಕೂಟದ |
ಬಸದಿಯಲಿ ನೀಂ ಪಡೆದ ಬಹುದೆನೆ ಜೀಯೆನುತ ಪೋಗಿ ||
ಅಸನ ಧೈರ್ಯನು ಮಂತ್ರ ಪೂರ್ವಕ | ವಸಮ ಬಾಣನು ಜಪಿಸಲದು ಕೈ |
ವಸಕೆ ಬಂದುದು ಬರಲುಬಂದರು ಚಾರಣ ದ್ವಯರು || ೧೫ ||

ಗುರು ಪದಾಂಬುಜಕೆರಗಿ ವಿದ್ಯಾ | ಧರರಿಗೀ ಪ್ರಜ್ಞಪ್ತಿ ವಿದ್ಯೆಯು |
ದೊರಕದೆಂಬುದ ಕೇಳ್ದರಿದು ನಿಜನಿಲಯವನು ಪೊಕ್ಕು ||
ಇರೆ ಮನೋಭವನೀಗ ಬಹನಾ | ತುರದಿ ಮನದಣಿವಂದದಾತನ |
ನೆರೆವೆನೆಂಬಾ ಪಂಬಲನೆ ತಳೆದಿರ್ದಳಾ ಪಾಣ್ಬೆ || ೧೬ ||

ಬಂದೆನೆಂದರಿದಂಗಜನ ಕರ | ತಂದಳಾ ಚತುರಿಕೆಯು ಕೈ ಮುಗಿ |
ದೊಂದು ಕಡೆಯಲಿ ನಿಲ್ಲಿದೇನ್ನೈ ನಿನ್ನ ನೆರೆ ಸಲಹಿ ||
ಸಂದ ವಿದ್ಯೆಯ ಕೊಟ್ಟೆ ನೀನೇ | ನೆಂದುದನು ಗೈಯದೆ ತೊಲಗಿನಿಂ |
ದಂದವೇನೆಂದಳಸಿ ನುಡಿದಳು ವಿರಹವಿಹ್ವಲೆಯು || ೧೭ ||

ಸಲಹಿದದರಿಂ ಜನನಿ ವಿದ್ಯೆಯ | ಕಲಿಸಿದದರಿಂ ನೀವೇ ಗುರುವಿ |
ನ್ನೆಲೆಜನನಿ ಬಿಡು ಕೆಟ್ಟ ಪಂಬಲನೆಂಬ ನುಡಿಗೇಳಿ ||

ಪ್ರಳಯ ಭೈರವನಂತೆ ಕೋಪವ | ತಳೆದು ಘರ್ಜಿಸಿ ಹಾರಿ ಹೋಗೆಂ |
ದುಲಿಯೆ ಜೀಯೆಂದಂಗಜನು ಪೊರವಟ್ಟನಲ್ಲಿಂದ || ೧೮ ||

ಬಳಿಕವಳ ಕಾಮಾಗ್ನಿ ಕೋಪಾ | ನಳನಕೊರ್ವಿಸಿ ಪೊಗೆಮನದೊಳು |
ತಳೆದ ಜಾರತ್ವವನು ವಿವರಿಸಿ ಬರೆವವೊಲು ತನ್ನ ||
ಬಳೆಯ ಮುರಿಯಿಂ ತೋಳೊಳಗೆ ನೆಲೆ | ಮೊಲೆಗಳಲಿ ಕೊರಳಲಿ ಬರೆದು ಬಾ |
ಸುಳುವಡೆದು ಮುಸುಕಿಟ್ಟು ಮಲಗಿದಳರಸ ಕೇಳೆಂದ || ೧೯ ||

ಬಂದನಾ ಸಮಯದಲಿ ನಿಜಪತಿ | ಯಿಂದಿದೇನೆಲೆ ದುಗುಡವೇತರ |
ದಿಂದಲಾದುದು ಪೇಳೆನುತ ಮಂಚದಲಿ ಕುಳ್ಳಿರ್ದು ||
ಕಂಡಿತಾನನ ಚಂದ್ರನೆಂದೊಲ | ವಿಂದೆ ಕಣ್ಬನಿದೊಡೆದು ಮುದ್ದಿಸಿ |
ಯೆಂದೊಡೆಂದಳು ಪಾತಕಿಯು ಕೈತವವ ಗಂಟಿಕ್ಕಿ || ೨೦ ||

ಸುರಿವ ಕಣ್ಬನಿ ಗದ ಗದ್ಗದ ಸ್ವನ | ವೆರಸಿ ಭಸ್ಸೆನೆ ಸುಯಿದು ಚಿತ್ತೈ |
ಸರಸ ಕಾಡೊಳಗಾರ ಮಗನೆಂದರಿಯದೆಳೆ ಶಿಶುವ ||
ಪೊರೆಯವೇಳ್ದನಗಿತ್ತೆ ನೀನಾ | ತರುವರಿಯು ಕಡುಕೊಬ್ಬಿ ಜವ್ವನ |
ಭರದಿ ತನ್ನನೆ ಹಿಡಿದನೆಂದಳು ತೋರಿದಳು ಮೈಯ || ೨೧ ||

ಕರೆದಳಾ ಕೆಳದಿಯನು ಪೇಳೆನ | ಲರಸಗವಳಂಗಜನ ದೋಷವ |
ನೊರೆದಳಾಗಳೆ ರೋಷ ಶಿಖಿ ಪರ್ವಿದುದು ಖಚರನೊಳು ||
ಸ್ಮರನ ನಿನ್ನೋವುವೆನೆ ತುಂಟನ | ಕೊರಳ ಕೊಯಿಸುವೆನೆಂದು ಮುನಿದು |
ಬ್ಬರಿಸಿದನು ಪೆಂಡತಿಯ ಮಾತನು ಕೇಳದವರಾರು || ೨೨ ||

ಕರೆದನಾ ಸುತ ವಜ್ರದಾಡನ | ನಿರದೆ ಕಾಮನನಿಕ್ಕವೇಳ್ದನು |
ಮರಳಿ ಬಂದವನನುಜರೊಡನಾಳೊಚನೆಯ ಕೊಂಡು ||
ಸ್ಮರನ ನಿಕ್ಕುವ ಸಾಹಸಿಗರೀ | ಧರೆಯೊಳಿಲ್ಲೊಡಗೊಂಡು ಮುನ್ನಿನ |
ತೆರದಿ ಪೋಪೆವೆನುತ್ತ ಮದನನನೆಳೆದರೊಂದೆಸೆಗೆ || ೨೩ ||

ಪಳೆಯ ಬಾವಿಯ ಸವೆದು ಕೃತಕದಿ | ನಿಳಿದೊಡಂಗಜ ಸಿದ್ಧಿಯುಂಟೆನ |
ನಿಳಿಯದಿರು ನೀನೆಂದ ಕರ್ಣಪಿಶಾಚಿಯಿಂ ಮದನ ||
ಇಳಿಯಲೊಲ್ಲದೆ ವಿದ್ಯೆಯಂ ತಾ | ನಿಳಿದವೊಲು ರೂಪೊಂದ ನಿಳಿಯಿಸಿ |
ಘಳಿಲನಿರ್ದನದೃಶ್ಯದಿಂದಾಕಾಶ ಮಾರ್ಗದಲಿ || ೨೪ ||

ಇಳಿದನೆಂದೈನೂರ್ವರುಂ ಮಿಗೆ | ನಲಿದು ಪರ್ವತದೊರೆಯೆನಿಪ ಕಲು |
ಗಳಲಿ ಹೂಳಿದರದನು ಕಾಣುತ ಕಾಮನನುಮುನಿದು ||

ಕೊಲಲುಬಾರದ ಹಗೆಗಳಲೆ ಯೀ | ಖಳರೆನುತ ಫಣಿಪಾಶದಿಂ ಸಲೆ |
ಬಲಿದು ಕಟ್ಟಿದರೆಲ್ಲರನು ಸಿಡಿದೊಬ್ಬನೋಡಿದನು || ೧೫ ||

ಮೊರೆಯಿಡುತ ಬರಲಾತನಿಂದದ | ನರಿತು ಖೇಚರನೆತ್ತಿ ಬರೆಕೊರೆ |
ತರಿಕೆಡಹು ಕುತ್ತೆನುತ ಮದನನ ಕೃತಕ ಪರಿವಾರ ||
ತರುಬಿನಿಂದೊಡಹಾಯ್ಸಿ ಮಿಗೆ ಹೊ | ಕ್ಕಿರಿದು ಪಡಲಿಡಿಸುತ್ತ ಪಲವುಂ |
ತೆರದಿ ಕಾದುತ್ತಿರ್ದರಿತ್ತಲು ಭೂಪ ಕೇಳೆಂದ || ೧೬ ||

ಕುರುಪತಿಯ ಸುತೆಯುದಧಿಯನು ನಗ | ಧರನು ಭಾವೆಯ ಸೂನು ಭಾನುವಿ |
ನಿರೆ ಮದುವೆಯನು ಮಾಳ್ಪುದತ್ಯಾಸನ್ನವಾಗಿರಲು ||
ಸಿರಿಯದೇಕಿನ್ನೆನಗೇ ಸವತಿಗೆ | ಕುರುಳ ಕೊಡುವಂತಾದುದೆಂದೆದೆ |
ಗರಗಿ ರುಗುಮಿಣಿದೇವಿ ಚಿಂತಿಸುವಾ ಸಮಯದೊಳಗೆ || ೧೭ ||

ನಾರದನು ಬರಲೆರಗಿ ಕಂದನು | ಬಾರನೇಕೆಲೆ ಮುನಿಪನುಡಿದಶ |
ರೀರ ವಾಕ್ಯದ ಗುತ್ತು ಬಂದಿದೆಯೆಂದು ನೊಂದುಸುರೆ ||
ವಾರಿಜಾನನೆ ಚಿಂತೆಯುಳಿ ನರ | ಧಾರಿಣಿಯಲೆಲ್ಲಿ ದೊರ್ಡಂ ಸುಕು |
ಮಾರನನು ಮಾರನನು ತಹೆನೆಂದೆದ್ದನಾಗಸಕೆ || ೧೮ ||

ಭರದಿ ಪೂರ್ವವಿದೇಹದೊಳು ನೆರೆ | ಸಿರಿಯ ಪುರವದು ಪುಂಡರೀಕೆಯು |
ಯುರುಹ ಸೀಮಂದರ ತೀರ್ಥೇಶರ ಸಮವಶೃತಿಯ ||
ಇತಿ ಮನೋವೇಗದಲಿ ಪೊಕ್ಕನು | ಪುರನು ವಂದಿಸಲಲ್ಲಿ ಚಕ್ರೇ |
ಶ್ವರನು ದಶದನಮಾನ ಮುನಿಯಾರೆಂದ ಗಣಧರರ || ೧೯ ||

ಬೆಸಗೊಳಲು ಕೇಳರಸ ಭಾರತ | ವಿಷಯದಾ ನಾರದನು ದ್ವಾರಕಿ |
ಯಸುರರಿಪುವಿನ ಶಿಶುವಿಹುದನರಯಲ್ಕೆ ಬಂದನೆನೆ ||
ಶಿಸುವದೆಲ್ಲಿಹದೇನದೆಲ್ಲವ | ನುಸುರಿಮೆನೆ ಮಗದೋರ್ವಿಯಲಿ ಶೋ |
ಭಿಸುವ ಸಾಲಿಗ್ರಾಮದಲ್ಲಿಹನಗ್ಗಿಲೆಯ ಗಂಡ || ೨೦ ||

ಭೂಸುರನು ತಾಂ ಸೋಮಶರ್ಮಂ | ಗಾ ಸುತರು ಪೆಸರಗ್ನಿಭೂತಿಯು |
ಮಾಸರಿಕೆಯಾ ವಾಯುಭೂತಿಯ ಸತ್ಯವಾದವನು ||
ಬೀಸೆ ಜಿನಮುನಿ ನಂದಿವರ್ಧನ | ರೋಸರಿಸದದ ಪರಿಗಟಿಯೆ ಧೃತ |
ರೋಷಿಗಳು ತನ್ಮುನಿಯ ಕೊಲಲಿರುಳೈದಿದರು ಬನಕೆ || ೨೧ ||

ಖಡುಗವನು ಪಿಡೆದೆತ್ತಿ ಮುನಿಪನ | ಹೊಡೆವನಿತರೊಳು ಹೇಮಯಕ್ಷನು |
ಬಡದೆ ಕೀಲಿಸಿ ಸೋಮಶರ್ಮಗ್ಗಿಲೆಯರೈತಂದು ||

ಅಡಿಗೆರಗಿ ಎಲೆಮುನಿಪ ದಯೆಯಿಂ | ಬಿಡಿಸು ಮಕ್ಕಳ ಕೀಲಣೆಯ ನೆನ |
ಲಡವಿಯೊಳಗಿಹ ಹೇಮಯಕ್ಷನು ನುಡಿದನಿಂಕೆಂದು || ೩೧ ||

ಬಿಡುವೆನಿವರನು ಜೈನಧರ್ಮವ | ಪಿಡಿದೊಡನೆ ಮೇಣಲ್ಲದಿರ್ದೊಡೆ |
ಬಿಡೆನೆನಲು ಸುವ್ರತವನವರಾ ಮುನಿಗಳಿಂ ತಳೆದು |
ದೃಢದಿ ನಡಪುತ್ತಿರಲವರನಾ | ಹಡೆದ ತಾಯ್ತಂದೆಗಳು ಬಂದೆಲೆ |
ಜಡ ಮತಿಗಳಿರ ಯಕ್ಷನಾಜ್ಞೆಗೆ ನಾನುಪಾಯದಲಿ || ೩೩ ||

ಕೊಡಿಸಿದೆನು ಈ ಮತವ ಕೀಲಣೆ | ಬಿಡಿಸಿದೆನು ನೀವಿನ್ನಿದನು ಬಿಡಿ |
ನಡೆಯಿನಮ್ಮವೊನೆನಲು ಶಿಖಿಪವಮಾನಭೂತಿಗಳು ||
ಬಿಡುವೆವಿದರಿಂದಧಿಕಮತವು | ಳ್ಳೊಡೆ ಪಿಡಿವೆವದ ಬಡವ ಪುಣ್ಯದಿ |
ಕಡವರಂ ಬಡೆದಂತೆ ಪಡೆದೆವು ಶ್ರೀಜಿನಾಗಮವು || ೩೪ ||

ಎಂದವರು ಸದ್ಧರ್ಮವನೆ ಪಿಡಿ | ದೊಂದಿ ನಡೆವುತ್ತಿರಲಮಳಿನ |
ರ್ವಂದದಿಂ ಸದ್ಧರ್ಮವೈರದಿ ಮಡಿದು ನರಕದಲಿ ||
ಪೊಂದಿದರು ತದ್ವಿಪ್ರ ತನುಜರು | ಸಂದ ಸೌಧರ್ಮದಲಿ ಸುರಲೋಲ |
ವಿಂದಲುಂಡರು ಪಂಚಪಲ್ಯೋಪಮ ತದಾಯುವನು || ೩೫ ||

ಆ ಸುರರೇ ಸಾಕೇತ ಪುರುಜಿನ | ದಾಸಗಾಶ್ರೀ ಪ್ರಿಯೆಗೆ ಪುಟ್ಟಿದ |
ರೇಸುಪುಣ್ಯವೂ ಪೂರ್ಣಭದ್ರನ ಮಾಣಿಭದ್ರನೆನೆ ||
ಲೇಸುವಡಿದಮಳುಗಳಿರಲು ಜಿನ | ದಾಸಮಾಹೇಂದ್ರಾರ್ಯರಿಂ ಬಗೆ |
ಯೋಸರಿಸದಾಶಾಂಬರತ್ವವನಾಂತು ಸುಖಿಯಾದ || ೩೬ ||

ಕರವ ಮುಗಿದಾ ಪೂರ್ಣಭದ್ರನು | ಗುರುವೆ ತನ್ನಾಭವದ ತಂದೆಯ |
ಇರವ ಬೆಸಸೆನೆ ಅಗ್ನಿಭೂತಿಯು ವಾಯುಭೂತಿಯೆನೆ ||
ಪೊರೆದ ಕಾಲದ ಜೈನ ಧರ್ಮಾ | ಚರಣೆಯನು ಬಿಡಿಯೆನಲುವಿಂ ದಿ |
ಕ್ಕರಿಸಲವರಾ ಧರ್ಮವೈರದಿ ನಿಲಯದೊಳ ಪೊಕ್ಕು || ೩೭ ||

ಪಿರಿದು ದುಃಖಮನೈದು ಪಲ್ಯಂ | ಬರಸವಿದು ಬಂದೀ ಪೊಳಲೊಳ |
ಚ್ಚರಿಯ ನೋಡೈ ಕಾಕಜಂಘಮತಂಗನಾಗಿಹನು ||
ಪರಿಕಿಸುವೊಡಾ ಮನೆಯೊಳಗ್ಗಿಲೆ | ಕರಿಯ ಶುನಿಯಾಗಿಹಳೆನಲು ಮುನಿ |
ಗೆರಗಿ ಮಗುಳ್ದಾ ಪೂರ್ಣಭದ್ರನು ಬೋಧಿಸಿದನವರ || ೩೮ ||

ತಳೆದರವರುಪಶಮವನೊಡಲಿಂ | ಕಳೆದು ಬಂದಾ ಕಾಕ ಜಂಘನ |
ಸುಲಭ ನಂದೀಶ್ವರದ ದೀಪನಹ ಯಕ್ಷನಾದನಲೆ ||

ಅಳಿದು ಶುನಿ ಸಾಕೇತ ನಗರದ | ಚೆಲುವರಿಂ ಮಸುಪ್ರಭಾವತಿ |
ಗೊಲವನಾಂತ ಪ್ರಬುದ್ಧಿಯೆಂಬ ಕುಮಾರಿ ತಾನಾಗಿ || ೩೯ ||

ರತಿಗೆ ಹಾಹೆಯ ಕಟ್ಟುವಳು ತ | ನ್ನತಿಶಯದ ಚೆಲುವಿನಲಿಯೆನಿಸಿದ |
ಸುತೆಯನಾ ವಿಭುತಾಂ ಸ್ವಯಂವರ ವಿಧಿಯಲೀಯಲಿಕೆ ||
ಚತುರನೊಡ್ಡಿರಲಾ ಸ್ವಯಂವರ | ಕತಿದಯೆಯಿನಾ ಕಾಕಜಂಘ ಚ |
ರತೆವಡೆಯದಕ್ಷೇಶ ಬಂದಾಕೆಯನು ಬೋಧಿಸಿದ || ೪೦ ||

ಬೋಧಿಸಲು ಬಳಿಕಾ ಪ್ರಬುದ್ಧಿಗೆ | ಪೋದುದರಿಯಮೆ ವಿರತಿಯಂ ತಳೆ |
ದಾದರದಿ ಪ್ರಿಯದರುಶನೆಯರೆಂಬಾರ್ಯಿಕೆಯರಿಂದ |
ಮೇದಿನೀ ಸ್ತುತತಪದಿ ನಡೆದು ಸ | ಮಾಧಿ ಮರಣದಿ ತಾಂ ಪ್ರಥಮನಾ |
ಕಾಧಿಪನ ಮಣಿ ಚೂಳೆಯೆಂಬಾ ದೇವಿ ತಾನಾಗಿ || ೪೧ ||

ಪಿರಿದು ಸುಖವುಣುತಿರ್ದಳಿತ್ತಲು | ತರದಿ ಪೂರ್ಣನುಮಾಣಿ ಭದ್ರರು |
ಚರಿಸಿದರು ಸಪ್ತಮ ಗುಣಸ್ಥಾನದಲಿಳಿದು ತನುವ ||
ಇರದೆ ಸಾಮಾನಿಕ ಸುರತ್ವದ | ಧರಿಸಿದರು ಸೌಧರ್ಮ ಕಲ್ಪದೊ |
ಳುರು ಸುಖವನೊಂದಾಯುರವಸಾನದಲಿ ಬಂದಿಲ್ಲಿ || ೪೨ ||

ಇತ್ತ ಹಸ್ತಿನಪುರದ ವಿಶ್ವ ನೃ | ಪೋತ್ತಮಂಗಂ ರೂಪವತಿಗಂ |
ಪುತ್ರರಾದರು ಮಧುವು ಕೈಭಟರೆಂಬರಮಳುಗಳು ||
ಪುತ್ರರಿಗೆಯಧಿರಾಜ್ಯ ಯುವರಾ | ಜ್ಯತ್ವವನು ವಿಶ್ವೇಶನಿತ್ತನು |
ಪೆತ್ತನಾ ಶಾಂಬರತೆಯನು ಭೂಪಾಲ ಕೇಳೆಂದ || ೪೩ ||

ಮಧು ನೃಪತಿಯರಸಾಗಿರಲ್ಕಾ | ಮಧುರೆಯರಸಾ ವೀರಸೇನನು |
ಮಧುವೆನಿಪ ಚಂದ್ರಾಭೆಯೆಂಬಳ ಕೈಯುಪಾಯನವ ||
ಮಧುವಿಗಟ್ಟಲು ಬಂದ ವಧುವನೆ | ಮಧು ತನಗೆ ವಧು ಮಾಡಿಕೊಂಡನು |
ವಧುವ ನೆನೆದಾ ವೀರಸೇನನು ತಾಂ ಭ್ರಮಿತನಾದ || ೪೪ ||

ಬಂದನಾ ಹಸ್ತಿನಪುರಕೆ ಮರು | ಳೆಂದವಳ ಕೊಡದಟ್ಟಿದರೆ ಜನ |
ವೊಂದೆ ಕೊರಳಲಿ ಪಳಿಯೆ ಮದನೃಪ ಕೇಳ್ದು ಧೀ ಯೆಂದು ||
ಕಂದಗವನಿಯನಿತ್ತು ಪಾತಕ | ವೆಂದಳುಕಿ ವರವಿಮಲವಾಹನ |
ರೆಂದೆನಿಪ ಕೇವಲಿಗಳಿಂ ಜಿನರೂಪ ಧರಿಸಿದನು || ೪೫ ||

ತಳೆದ ನೊಡನೆಯೆ ಕೈಟಭನು ನಿ | ರ್ಮಲತಪವನುರೆ ನಡೆದು ಕಡೆಯೊಳು |
ಕಳೆದು ತಾವೀರ್ವರು ಮಹ ಶುಕ್ಲದೊಳಗಿಂದ್ರತೆಯ ||

ತಳೆದನಾ ಮಧುಯತಿ ಪ್ರತಿಂದ್ರತೆ | ತಳೆದನಾ ಕೈಟಭನು ಪದಿನಾ |
ರಳತೆ ಗಡಲಾಯುವನು ಸುಖದಿಂ ಪೀರ್ದು ಬಂದಿಲ್ಲಿ || ೪೬ ||

ಮಧುಚರನು ತತ್ಶಿಶುವು ಕೈಟಭ | ನುದಯಿಪನು ಹರಿಗೊಂದು ಪಕ್ಷಕೆ |
ಮಧುವನೆನೆದಾ ವೀರಸೇನನು ಮಡಿದು ನರಕದಲಿ ||
ಪುದಿದ ದುಃಖವನುಂಡು ತಿರಿಯಂ | ಚದಲಿ ತಿರಿದೆತ್ತಾನು ಮನುಜತೆ |
ಯೊದಗೆ ತಾಪಸನಾಗಿ ಮಡಿದಾ ಧೂಮಶಿಖಿಯೆಂಬ || ೪೭ ||

ಅಸುರನಾಗಿ ವಿಹಾರಿಸುತ್ತಾ | ಶಿಶುವ ಕಂಡಾಭವದ ವೈರದಿ |
ಮಸಗಿ ಬಂದೈದೇ ದಿನದ ಬಾಲಕನ ಪಿಡಿದೊಯಿದ ||
ಬಿಸುಟನಾ ತಸ್ಕರ ಶಿಲೆಯೊಳಾ | ಶಿಶುವನತ್ತಲು ಮೇಘ ಕೂಟದ |
ಲೆಸೆವ ಖಚರನು ಕಾಳಶಂಬರನೊಯಿದು ಸಲಹಿದನು || ೪೮ ||

ಚರಮ ತನುವಾ ಕುವರ ವಿದ್ಯಾ | ಧರರೊರಗ್ಗಳ ವಿದ್ಯೆಗಲಿತನು
ಸ್ಮರನಗಿತ್ತಾ ವೀರಸೇನನ ಮಡದಿ ಚಂದ್ರಾಭೆ ||
ತಿರಿದು ಬಂದಾ ಕಾಳಶಂಬರ | ಗರಸಿ ಕಾಂಚನ ಮಾಲೆಯಾಗಿಯೆ |
ಸ್ಮರನ ಸಾಕಿದಳೀಗಳಾತಗೆ ಸೋಲ್ತು ಮತ್ತಾಕೆ || ೪೯ ||

ಮದನನಿಂದಾ ಸುರತ ಸುಖತನ | ಗೊದವದಿರೆ ತನ್ನಂಗವನು ತಂ |
ದೆದೆಯವಳು ನೆರೆಸೀಳಿ ಕೊಂಡಂಗಜನ ದೋಷವನು ||
ಅದಯೆ ಪಿಸುಣಂ ಬೇಳ್ದೊಡಳಗರಿ | ಯದೆ ಮದನನೊಳು ಕಾಳಶಂಬರ |
ನಧಟಿನಿಂ ಕಾದುತ್ತಹನೆ ಭೂಪಾಲ ಕೇಳೆಂದ || ೫೦ ||

ಮುಗುಳುಗಣೆಯನು ಕಾಳಶಂಬರ | ಖಗನುಮಿರಿದಾಡುವ ತೆರನ ನೆ |
ಟ್ಟನಗೆ ತಿಳಿದುತತ್ಸ್ವಾಮಿಗಳ ಬೀಳ್ಕೊಂಡು ಶೀಘ್ರದಲಿ ||
ಗಗನಮಾರ್ಗದಿ ನಾರದನು ಬರ | ಲೊಗೆದವರ ಯುದ್ಧವದು ನಿಜದೃ |
ಷ್ಟಿಗೆ ಸೊಗಸುಗೊಡೆ ನೋಡುತಿರ್ದನು ಮುಗಿಲುವಟ್ಟೆಯಲಿ || ೫೧೧ ||

ಮೀನಕೇತನ ಕೃತಕ ಬಲವದ | ನೇನ ಹೇಳುವೆ ಕಾಳಶಂಬರ |
ನಾನೆ ಕುದುರೆ ರಥಾಶ್ವವನು ಪಡಿಲಿಡಿಸೆ ತತ್ಖಚರ ||
ಈ ನೆಲನು ತಾಂ ನೆರೆಯನೆಂಬತಿ | ಸೇನೆಯನು ವಿದ್ಯೆಯಲಿ ಪಡೆದಖಿ |
ಳಾನಕಧ್ವನಿ ಬೆಳೆಯೆ ಮುಸುಕಿದಂಗಜನ ಪಡೆಯ || ೫೨ ||

ಒಂದೆ ಹೂಗಣೆಯಿಂದ ತ್ರಿಜಗದ | ಸಂದ ವೀರರ ತನುಸಲೆಗೆ ವಂ |
ದಂದದಲಿ ಕಂದರ್ಪನೊ ಪಡೆ ತರಿದು ಕೆಡೆಪೆ ||

ನಿಂದದು ಕೋಪದಿ ನೋಡಿ ಚೌಪಕೆ | ತಂ ಕಣೆಯನು ಕಾಳಶಂಬರ |
ನಂದು ಕಲ್ಪದ ಮಳೆಯನಲು ಕೂರಂಬುಗಳ ಸುರಿದ || ೫೩ ||

ಕುಸುಮರನೊಂದಂಬಿನಿಂ ಖಂ | ಡಿಸಿನನಿತನು ಖಚರಪತಿ ತೊ |
ಟ್ಟಿಸಲು ಫಣಿಬಾಣವನು ಗರುಡಾಸ್ತ್ರದಲಿ ನಿಸಿಗೋಲ ||
ಬಿಸಿಲ ಶರಧಿಗಜೇಶುವನು ಪರಿ | ವಿಸಿದಿಂದೆಂಟಡಿಗಣೆಯ ತುಂ |
ಡಿಸಿದನಾ ಭೇರುಂಡ ಕಾಂಡದಿಸ ಸುರರು ಬೆರಗಾಗೆ || ೫೪ || ಸ

ಕಾಳಗವನೀಕ್ಷಿಸುವ ಕಾಂಚನ | ಮಾಲೆಯನು ಕಂಡಾಗಳೇಳ್ಗೆಯ |
ಕಾಳಶಂಬರನೆಲೆಗನೀಂ ಪ್ರಜ್ಞಪ್ತಿ ವಿದ್ಯೆಯನು ||
ಮೇಳಯಿಸು ಬಹುವಿದ್ಯೆಯಿಂ ಪೂ | ಗೋಲನನು ಗೆಲತೀರದಿದೆಯೆನೆ |
ಡಾಳೆಮಗ ನೆಂದಿತ್ತೆನಲೆ ಮುನ್ನೆಂದಳವಳೊಡನೆ || ೫೫ ||

ಮುಳಿದು ಕೊಲುವೆನು ಮುನ್ನೆ ಕಾಮನ | ಬಳಿಕ ನಿನ್ನನು ಹರಗಡಿವೆನೆಂ |
ದಳಲಿ ಖಂಡೆಯ ಖೇಡೆಯವನಾಂತಿಳೆಗೆ ಧುಮ್ಮಿಕ್ಕಿ ||
ತಳೆದು ಖಂಡೆಯ ಖೇಡೆಯವನಾ | ಗಳೆ ವಸಂತ ಪ್ರಿಯ ತುಡುಕಿ ಕೈ |
ಚಳಕದಲಿ ಕಡಿದಾಡುವನಿತರೊಳರಸ ಕೇಳೆಂದ || ೫೬ ||

ನಿಂದನೀರ್ವರ ಮಧ್ಯದಲಿ ನಭ | ದಿಂದೆ ನಾರದ ಬಂದು ತೊಲಗಿಸಿ |
ತಂದೆ ಮಕ್ಕಳಿಗೇಕೆ ಜಗಳವು ಹುಚ್ಚುರಲೆ ನೀವು ||
ಎಂದೊಡಂಗಜ ಮುನಿಗೆರಗಿ ನಾಂ | ತಂದೆಗೆರಡನು ಬಗೆದುದಿಲ್ಲದ |
ರಿಂದ ಬಂದುದು ನರರ ದಂಡಣೆಗಂಜಿದನು ಮುನಿಪ || ೫೭ ||

ಎನಲು ಕೇಳೆಲೆ ಕಾಳಶಂಬರ | ವನಿತೆಯರ ನುಡಿ ಸತ್ಯವೇ ಸ್ಮರ |
ನನಫ [ನಕಳಂಕನೀತ ತಪ್ಪೆಸಗಿದುದುಂಟೇನು] ||
ಕನಕ ಮಾಲೆಯ ನಮ್ಮೊಡನೆ ಹುಸಿ | ನಿನಗೆ ಬೇಡಿನ್ನುಳ್ಳದನೆ ಪೇ |
ಳೆನೆ ಕುಲಟೆ ತಲೆಗುತ್ತಿ ನೆಲನನು ಬರೆದಳುಂಗುಟದಿ || ೫೮ ||

ಪುಸಿಯಲೇಂ ಪ್ರದ್ಯುಮ್ನ ಪಾಪದ | ದೆಸೆಗೆ ಬಂದವನಲ್ಲ ಕರ್ಮದ |
ಗಸಣಿಯಿಂ ಪಾತಕವನೆಣಿಸಿದೆನರಸ ನೀನೆನಗೆ ||
ಬೆಸನು ಕತ್ತಿಯನಲ್ಲದೊಡೆ ನಾಂ | ಬಸದಿಯನು ಪೊಗದಿರೆನೆನಲು ನ |
ನ್ನಸಿಗೆ ನೀನಡಹಲ್ಲ ಬಲ್ಲುದ ಮಾಡು ಹೋಗೆಂದ || ೫೯ ||

ವಿರತೆಯಾದಳದತ್ತ ಖಗಪತಿ | ಹರಿಗೆ ಬಾಳನು ಬಿಸುಟನಕಟೌ |
ಸ್ಮರನೊಳಾನನ್ಯಾಯದಿಂ ಪ್ರಾಣಕ್ಕೆ ಮುನಿದೆನೆನೆ ||

ದುರಳ ನಾನರಿದೊಂದು ವಿದ್ಯೆಯ | ನರುಪುವುದರಿಂ ನಿಮ್ಮೊಡನೆ ಸಂ |
ಗರವ ಮಾಡಿದೆ ಕರುಣಿಸೆಂದಡಿಗೆರಗಿದನು ಪದಕೆ || ೬೦ ||

ತೆಗೆದು ತಕ್ಕೈಸಿದನು ಮದನನ | ಖಗಪತಿಯು ಸ್ಮರನಗ್ರ ಜಾತರ |
ಬಿಗಿದ ಫಣಿಪಾಶವ ಬಿಡಿಸಿ ಸಂತೈಸಿ ತಾವೆಲ್ಲ ||
ಅಗಲದರಮೆನೆ ವೊಕ್ಕು ಕೃಷ್ಣನ | ನಗರ ಸಿರಿಯಧಟರಸಿಯರ ಪೆ |
ರ್ಮೆಗಳನಿಂದಿನ ದಿನ ಮದುವೆಯಿಂತೆಂದನಾ ಮುನಿಪ || ೬೧ ||

ತಿಳಿಯೆ ಬಿತ್ತರಿಸಿದನು ಕಾಮನ | ಕಳುಹು ಬೇಗದಿನೆನಲು ಖಗನು |
ಮ್ಮಳಿಸುತಿರೆ ನಿಜ ತನುಜನಭಿಮಾನವು ತೊಲಗದಂತೆ ||
ಕಳುಹೆನಲು ಕಳುಹಿದನು ಜನನಿಗೆ | ತೊಳಪ ಹರಿಚಂದನದ ರತ್ನದ |
ಚೆಲುವ ಜಿನಬಿಂಬಂಗಳನು ಕೊಂಡತನು ಪೊರಮಟ್ಟ || ೬೨ ||

|| ಅಂತು ಸಂಧಿ ೧೯ಕ್ಕಂ ಮಂಗಲ ಮಹಾ ||

## ಪ್ರದ್ಯುಮ್ನ ಪರ್ವ (ಸಂಧಿ ೨೦)

**ಸಂಧಿ ೨೦**

ಮಕರ ಕೇತನನಂದು ಪಾಂಡವ | ನಿಕರ ಯಾದವ ತತಿಯ ವಿಂಧ್ಯಾ |
ವಿಕೃತದಿಂ ಭಂಗಿಸುತ ಪೊಕ್ಕನು ದ್ವಾರವತಿ ಪುರವ || ಪಲ್ಲ ||

ಕೇಳಲೇ ಶ್ರೇಣಿಕ ಧರಿತ್ರೀ | ಪಾಲಂ ಮನದಿಂ ಬೇಗದಲಿ ಮಣಿ |
ಜಾಲಕಾಮ ವಿಮಾನ ಭೋರನೆ ಗಗನದಲಿ ಬರಲು ||
ಭೀಳ ಸತ್ಕರ ಶಿಲೆಯಿದೆಲೆ ಪೂ | ಗೋಲ ನಿನ್ನನು ಪಂಚವಾಸರ |
ಬಾಳನನು ಪಗೆಬಿಸುಟ ತಾಣವಿದೆಂದನಾ ಮುನಿಪ || ೧ ||

ವಾರಿಜೋದ್ಭವ ಸೂನು ಕರ್ಮವ | ನಾರು ಬಾರಿಸಬಹುದೆನುತ ಬರೆ |
ಮಾರನತ್ತಲು ತೋರಣ ಧ್ವಜ ಮಾಟಕೂಟಗಳ ||
ಚಾರುಹರ್ಮ್ಯದ ಶೋಭೆ ಈ ಪೊಳ | ಲಾರದೆಂದೆದೆ ನಿನ್ನ ಮಾವನ |
ಕೌರವೇಂದ್ರನ ಹಸ್ತಿನಾಪುರವೆಂದನಾ ಮುನಿಪ || ೨ ||

ನೆರೆದುದಿದು ದಿಬ್ಬಣವು ಮುನ್ನಾ | ನೊರೆದ ವೋಲುದಧಿಯನು ಭಾನುಗೆ |
ಪರಿಣಯನ ವಿಧಿಯಿಂದ ಕೊಡಪೋಪುಜ್ಜುಗವಿದೆನಲು ||

ಅರೆಗಳಿಗೆಯೊಳ ಬಪ್ಪೆನುದಧಿಯ | ಸಿರಿಯವೀಕ್ಷಿಸಿ ಮುನಿಪ ನೀವಿ |
ಲ್ಲಿರಿಯೆನುತ್ತಿಳಿತಂದು ನಾಪಿತನಾದನಾ ಮದನ || ೩ ||

ಕುವರಿಯನು ಪಲುಸುಲಿಯಲಿಕೆ ಮಾ | ಧವನು ಮುದುಪನನೆನ್ನ ಕಳುಹಿದ |
ನವಸರಿಗ ಹೇಳೆಂದವನ ಮುಖದಿಂ ಕರೆಸಿಕೊಂಡು ||
ಯುವತಿಯಿರ್ದೆಡೆಗೈದೆ ನೆರೆಮು | ನ್ನವೆ ಕುಮಾರಿಯ ಪುರ್ಬುಗಳ ತಿ |
ದ್ದುವನ ಪಕ್ಕದೊಳಿರ್ದು ಕುವರಿಯ ಮೊಗವನೀಕ್ಷಿಸಿದ || ೪ ||

ಚಂದಗೆಟ್ಟುದದಿವನ ಕೃತಕದ | ಲೊಂದು ಹುಬ್ಬಿನ ನಿಲುವು ನೋಡಿದ |
ಸೌಂದರೀ ಜನವವನ ಬೈ ದಿಬ್ಬಟ್ಟೆತಾಂ ನಗುತ ||
ಸಂದ ಕಾವಂಗರಸಿಯಹ ತ | ಕ್ಕೆಂದು ವದನೆಯ ಚೆಲುವ ಕೆಡಿಸಿದ |
ನಂದವಾಗಿರೆಗೈವೆ ನಾನೆನಗುಂಟೆ ಮೆಚ್ಚೆಂದ || ೫ ||

ಸ್ಮರ ದಿವಾಕೀರ್ತಿಯು ಸಸಿನೆ ಸಿ | ಗರಿಸೆ ಹುಬ್ಬನು ಕಂಡು ವಧುಗಳು |
ಹರುಷದಿಂ ಕೊಂಡಾಡಿದರು ಮುದುಪನು ಚದುರನೆಂದು ||
ಸ್ಮರ ವಿಶಾರದ ಹರೆಯವಲ್ಲಂ | ಕುರಿಸಿತೇತಕೆ ಪುಳಕ ನೋಟದ |
ಪರಿ ಹೊಸತು ನಿನಗೆಂದು ನಕ್ಕೊಡೆ ನಗುತ ಕೈಯಾಂತ || ೬ ||

ಪೊಡವಿ ಪತಿಗಳಿಗೀವವೋಲುಡ | ತೊಡಲು ಕೊಟ್ಟರು ಬಿಸುಡಿಮಿದನಾಂ |
ಪಡೆಯದವನೇಯೆನಲು ಶತವೃದ್ಧನೆ ಕುಮಾರಿತಿಯ ||
ಕೊಡುವೆವಾಂಪೇಯೆಂದು ನಗುತಿರೆ | ಮಿಡಿಮೊಲೆಯ ಕುವರಿಯನು ಕೊಟ್ಟೊಡೆ |
ಬಿಡಬಹುದೆಂದುದಧಿಯನು ಕೊಂಡೆದ್ದನಾಗಸಕೆ || ೭ ||

ತರುಣಿಯರ ಘೋಳೆಂದಳುತ ಭೂ | ವರರು ಗಗನವ ನೋಡುತಿರ್ದರು |
ವರ ವಿಮಾನದಲಿಳುಹಲಳುತಾ ನಾರದನು ಕಂಡು ||
ಚರಣಕೆರಗಿದಳುದಧಿ ಕಾಮಂ | ಗರಸಿಯಾಗಂಜದಿರೆನುತ ಮುನಿ |
ಪರಸೆ ಬಿನ್ನಹವೆಂದಳಶ್ರುಜಲಂಗಳನೂ ಸುರಿದು || ೮ ||

ಪೆತ್ತರೆಂದು ಕಾಮಗೆಂದವ | ನೆತ್ತ ಹೋದನೊಯೆನ್ನ ಪಾಪದಿ |
ಸತ್ಯೆಯಾತ್ಮಜಗೀಯಲೊಡರಿಪವೆನ್ನ ಮತವಲ್ಲ ||
ಇತ್ತಲೀತನು ವೃದ್ಧನಾಪಿತ | ನೆತ್ತಿ ತಂದಪನೆಂದು ಬಾಯ್ಬಿ |
ಟ್ಟತ್ತು ಘಳಿಲನೆ ಬಿಳ್ದಳಲ್ಲಿಂ ಧರೆಗೆ ಸುಕುಮಾರಿ || ೯ ||

ಮಾನಿನಿಯನಡೆವೊಕ್ಕುತಂದು ವಿ | ಮಾನದೊಳಗಿರಿಸಿದನನನ್ಯಜ |
ನೇನು ಬೆದರದಿರೆಂದು ಮುನಿಮನಸಿಜನ ಮೊಗನೋಡೆ ||

ಮೀನಕೇತನನಾತ್ಮರೂಪನು | ತಾನು ತೋರಲು ನೋಡಿದಾ ಚಂ |
ದ್ರಾನನೆಯ ಕಂಬೆಳಗಿನಿಂ ಶಶಿಯಂತ ತನುವಿರ್ದ || ೧೦ ||

ಅಳಿದುದಾಕೆಯ ನೋವು ರಾಗವು | ಬಳೆದುದೆದೆಯಲಿ ಕಾಮಪುಟ್ಟಿದ |
ಬಳೆದ ವೃತ್ತಾಂತವನು ತಿಳುಹಿಸಿ ಮದನವಿಹನೆಂದು ||
ಗಳಪದಂದದಿ ಕಲಿಸಿ ಕುರುಕಲ | ತಿಲಕನೆಡೆಗೆಲೆ ಮಗನೆ ನಿನ್ನನು |
ಕಳುಹಿ ಬಹೆನೇಳೆಂದನಾಮುನಿ ತತ್ಕುಮಾರಿಯನು || ೧೧ ||

ಅಸಮಬಾಣನ ಚೆಲುವಿನಲಿ ಕೀ | ಲಿಸಿದ ದಿಟ್ಟಿಯ ತೆಗೆಯಲಾರದೆ |
ಹಸುಳೆ ತನುವಿಂದಸುವೆ ತೊಲಗುವ ಭಂಗಿಯಿಂ ತೊಲಗಿ ||
ವಸುಧೆಗಿಳಿದಾ ಮುನಿಯೊಡನೆ ಬರ | ಲೊಸೆದ ಕುರುಭೂಪಾದಿಗಳು ಸುರ |
ಋಷಿಗೆರಗಿಯುದಧಿಯನು ಕಂಡಾನಂದವೈದಿದರು || ೧೨ ||

ಮುನಿಪ ತದ್ವೃತ್ತಾಂತವನು ಪೇ | ಳೆನೆ ವಿಯಚ್ಚರನೋರ್ವನತ್ತೊ |
ಯ್ವನಿತರೊಳು ನಾವತ್ತಣಿಂ ಬರುತೀಕೆಯೆಂದರಿದು ||
ಸುನಯವನೆ ಪೇಳ್ವಾದನಿಂದೀ | ವನಿತೆಯನೆ ಕರೆತಂದೆವೆಂದಾ |
ಮುನಿ ಪರಸೆ ನಭವೇರಿ ಕಾಮವಿಮಾನವನು ಪೊಕ್ಕ || ೧೩ ||

ಮೊಳಗೆ ಮಂಗಳ ತೂರ್ಯನಿಸ್ವನ | ಕಳಸನೀರನು ತರಿಸಿ ಮಜ್ಜನ |
ಗೊಳಿಸಿ ಮಂಗಳ ವಸದನದಳಲವಡಿಸಿ ಕುವರಿಯನು ||
ತಳುವದೆಲ್ಲರು ನೆರೆದು ವೈಭವ | ದಲಿ ಲಸದ್ವಾರಾವತಿಗೆ ಭೂ |
ತಳವದಿಂಬಿಲ್ಲೆನಿಸಿ ನಿಬ್ಬಣ ನಡೆವ ಸಮಯದಲಿ || ೧೪ ||

ಈ ತೆರನ ಪೇಳೆಂದೊಡಂಗಜ | ಗೋತು ಮುನಿ ದುರ್ಯೋಧನನು ನಿಜ |
ಮಾತುಳನು ತಾನೀತನೀತು ಚಂಡಕರಸುತನು ||
ಈತನಹಿತ ಕೃತಾಂಶ ಕುಂಭಜ | ನೀತನರಿಬಿಲ್ಲೋಜನೆಂಬವ |
ನೀತ ದುಶ್ಯಾಸನನಿವರು ತಮ್ಮಂದಿರಾ ನೃಪನ || ೧೫ ||

ಈತ ಧರ್ಮಜನೀತನತಿ ಸ | ತ್ವಾತಿಶಯನನನಿಲಜನು ರಿಪು ಜೀ |
ಮೂತಕಲ್ಪಾನಿಲನೆನಿಪ ಕಲಿಪಾರ್ಥನೀತನಲೆ ||
ಆ ತೆರದಿ ನಿಖಿಳಾವನೀಶರ | ನಾತರದಿ ತೋರಿಸಲು ಮುನಿ ವಿ |
ಖ್ಯಾತರಥಟನು ನೋಡಿ ಬಹೆನೆಂದಂಗಭವನಿಳಿದ || ೧೬ ||

ಕೆದರುದಲೆ ಕೆಮ್ಮೀಸೆ ಕೆಂಗಣು | ಬೆದರುನೋಟವು ಹೆಗಲಬಲವಡೆ |
ಬದಿರ ಬಿಲುಗರಿಪರಿವ ಮೂರಂಬುಟ್ಟ ಪುಲಿದೊವಲು ||

ಕದಿರು ನೋಟದಮಿಂಡಿ ಬೇಡಿತಿ | ಪುದಿಯೆ ತನ್ನೊತ್ತಿನಲಿ ನಿಂದನು |
ಮದನನಾ ಬಟ್ಟೆಯಲಿ ಸಂದ ಪುಳಿಂದ ವೇಷದಲಿ || ೧೭ ||

ನೆಲ ಮೊಳಗುವಂತುಲಿಯೆ ವಾದ್ಯಗ | ಳಿಲೆ ಬೆಸಲೆಯಾದಂತೆ ಪೆರ್ಚಿದ |
ಬಲವೆರಸಿ ನಿಬ್ಬಣವು ಬರುತಿರೆ ಕೃತಕ ಲುಬ್ಧಕನು ||
ಘಳಿಲನೆಡೆಗಟ್ಟಿದನಿದೇನಿರೊ | ಬಲುಹೆ ಹೋಗದಿರನುಪ ಕೊಡಿಯೆಂ |
ದುಲಿದು ಘರ್ಜಿಸಿ ಮಿಕ್ಕು ಹೋದಡೆ ಘಾಸಿಯಹಿರೆಂದ || ೧೮ ||

ಕಡಲು ಮೇರೆಯ ಮೀರಿಬರೆ ಬರ | ಗುಡದುಗಡ ತೃಣವೆಂಬವೊಲು ನೀ |
ನಡಿಯನಿಡಗೊಡೆನೆಮ್ಮ ನಂಬಿಕಿರಾತ ನಿಮಗೇನು ||
ಹಿಡಿದುದೋ ಮರುಳಕಟ ನೋಡಿರೆ | ತಡೆವ ಮೋರೆಯನೆಂದು ಬಹಮುಂ |
ಗುಡಿಯವರು ಕೈವೊಯಿದು ನಕ್ಕರು ನಿಂದು ತಮ್ಮೊಳಗೇ || ೧೯ ||

ಅಲ್ಲಿ ಕೆಲರವನೀಶರೇನ್ನೈ | ಬಿಲ್ಲ ನೀನಿಲ್ಲಿಹೆನು ನಾ |
ನಿಲ್ಲಿಹೆನು ಪೊಂಗೊಡುವೆನೊಡೆಯಗೆ ಕೊಂಬೆನನುಪನೆನೆ ||
ಬಲ್ಲಿದರು ನಾವನುಪುಗೊಡುವೆಲೆ | ಪುಲ್ಲನಾಭನು ಬಡವನೇ ಕೊಂ |
ಡಲ್ಲದಡಿಯಿಡಗೊಡೆನು ಚಕ್ರಿಯ ಪಾದದಾಣೆಂದ || ೨೦ ||

ಎನಲವರು ಮಿಗೆ ನಗುತ ನಿನಗೇ | ನನುಪ ಹೇಳೆನಲುದಧಿಯನು ಕೊಡಿ |
ಯೆನೆ ಮುಕುಂದನ ಸೊಸೆಯ ಬೇಡಲು ಬಹುದೇನಾಂಹರಿಯ ||
ತನುಜನಲ್ಲವೆ ಅಹುದು ಪೆತ್ತಂ | ಮನಲೆ ರುಗುಮಿಣಿತಪ್ಪದೆನೆ ತುಂ |
ಟನ ಕೊರಳ ಮುರಿದಿಡಿಯೆನುತಲೊಡಹಾಯಿಸಿನೆಡೆಗೊಳಲು || ೨೧ ||

ಸ್ಮರಸಬರ ಕೂಗಿಡಲು ಬನದಿಂ | ದಿರುಳ ತಿರುಳಗಂಗಚ್ಚವಿಯ ಬೇ |
ಡರು ಪಿಡಿದನರುನಾಯಿ ಸಿಂಗದ ಪುಲಿಯ ಮರಿವೆರಸಿ ||
ಕರಿಯದಂತಹ ಬಡಿಗಳನ್ನು ಪರಿ | ಪರಿಯ ಬಿಲು ಸರಳುಗಳನಾಂತೀ |
ಧರೆಯೆ ತೆರಪಿಲ್ಲೆನಿಸಿ ಬರೆ ಕೈವೀಸಿದನು ಭರದಿ || ೨೨ ||

ಧರೆಗೆ ಪೊಸತೆನೆ ಕೂಕಿರಿದು ಭೋ | ರ್ಗರೆದರಂಬಿನ ಬಲುಮಳೆಯ ಬೇಡರು |
ನರೆ ನನೆದುದಾ ನಿಬ್ಬಣದ ನೆರವಿಗಳದೇನೆಂಬೆ ||
ಕರಿಗಳೊರಗಿದವಶ್ವ ತತಿ ಮೈ | ಮರೆದವರುಣ ಜಲಾಂಬು ನದಿಯಲಿ |
ಹರಿದವಾ ತೇರುಗಳು ನೀನೆನೆ ಮುಳುಕಿ ತಾಳುಗಳು || ೨೩ ||

ತರಣಿಸುತನದ ಕಂಡು ತಿರುವಿಗೆ | ಸರಳ ಸಂಧಿಸಿ ತೆಗೆಯಲೆಂಬೀ |
ಸ್ಮರನ ವಿದ್ಯಾಶಕ್ತಿಯೋ ತತ್‌ಕ್ಷಣದಿ ಕೀಲಿಸಲು ||

ಸ್ಫುರಣೆ ಗೆಟ್ಟವನಲ್ಲಿ ನಿಂದನು | ನರನನೀಕ್ಷಿಸಿ ಬಿಲುವಿಡಿಯೆ ಪುಲು |
ಸರಳ ತೊಡದಿರು ನೀನಧಟಗಡ ತೊಡುಮಹಾಸ್ತ್ರವನು || ೧೪ ||

ಎಂದೊಡುರಗಾಸ್ತ್ರವನು ಹೂಡಿದ | ನಿಂದ್ರಸುತ ಬರೆತೆಗೆಯೆ ಕೃತಕ ಪು |
ಳಿಂದ ಕೀಲಿಸಲೇನೆ ಹೇಳುವೆನಾಣೆ ಯಿಟ್ಟಂತೆ ||
ಸಂದು ಹಂದದೆ ನಿಂದನನಿಲಜ | ನಂದು ಬಡಿಗೊಂಡಟ್ಟಿ ಬರುತಿರ |
ಲಂದು ಕಲ್ಲಬಳಾರ ನಂದದಿ ನಿಂದನಿರ್ದಂತೆ || ೧೫ ||

ಗರಡಿಯಾಚಾರ್ಯನು ಪುರುಡಿಯ | ಮರೆದವೋಲಿರಿಸಿದನು ಗರುಡಿಗೆ |
ಗುರುವು ನೀನಹುದಲ್ಲದೊಡೆ ಕೈಮರೆದು ನಿನ್ನಂತೆ ||
ನರನು ಮೊದಲಹ ಕೋಲಮಕ್ಕಳು | ಧುರದೊಳಗೆ ಚದುರಂಗಗೊಡ್ಡಿದ |
ಕರುವಿನಂತಿರ ಬಲ್ಲರೇ ಹೇಳೆಂದನಾ ಮದನ || ೧೬ ||

ದರ್ಪಕನ ವಿದ್ಯಾ ಪ್ರಭಾವದಿ | ಲೆಪ್ಪದರಸುಗಳಾಗಿ ನೃಪತತಿ |
ಇಪ್ಪುದನು ಗಂಗಾತ್ಮಜನು ಕಂಡೆಲೆ ಸುಯೋಧನನೆ ||
ಚಪ್ಪರಿಸಲರಿದೀ ನಿಶಾಟನ | ನಿಪ್ಪಸರದಿಂ ಪಾಂಡವರಿಗಣಿ |
ದಪ್ಪಿತೆಂದರೆ ಸಾಮವೇ ಹಿತವೆಂದು ನಡೆತಂದ || ೧೭ ||

ಎಲೆ ಶಬರ ನಾಯಕನೆ ನೀಂ ಕಡು | ಗಲಿಯಬಹುದು ನಿನ್ನೊಡೆಯನೊತ್ತಿನೊ |
ಳೊಲಿದು ನೀನೆಂದನುಪೆ ಕೊಡುವೆವು ನಮ್ಮ ಕಳುಹೆನಲು ||
ಪಲವನುದಧಿಯನೇ ಕೊಡೀ ಸಂ | ಚಳಿಸಿದೊಡೆ ಬಿಡೆನೆನುತ ತನ್ನಯ |
ಬಲವನಾ ವಿಪಿನೋದರಕೆ ತೆರೆದಂತು ತೋರಿಸಿದ || ೧೮ ||

ಕಳೆದನೆಲ್ಲರ ಕೀಳನೆಯನಾ | ಗಳೆರುಧಿರವಾರಾಸಿ ಪೋದುದು |
ಮುಳುಗಿದುದಾ ಚತುರಂಗವೆದ್ದುದು ನಡೆದುದಾ ಪಡೆಯು ||
ಸಲೆ ವಿಮಾನವನತನು ವೈದಿದ | ನೆಲೆ ಮದನನಿರವದ್ಯ ಯುದ್ಧದ |
ಬಲುಮೆ ಲೇಸೆಂದೊಲಿದು ಕೊಂಡಾಡಿದನು ನಾರದನ || ೧೯ ||

ಅನಿತರೊಳು ಪೋಯ್ತಾ ವಿಮಾನವು | ಮುನಿಪ ತತ್ಪುರವಾರದೆನೆ ನಿಜ |
ಜನಕನೂರಿದು ಸುರಪ ನಿರ್ಮಿತವಿದುವೆದ್ವಾರವತಿ ||
ಅನತಿಶಯ ವೈಭವದ ಕಡುಚೆಲು | ವಿನ ತವರ್ಮನೆಯಿದು ಮನೋಭವ |
ವನಜನಾಭಗೆ ನಿನ್ನ ಬರವನು ಪೇಳ್ದು ಬಹೆನೆಂದ || ೨೦ ||

ಮುನಿಪನೀವಿರಿ ನಾನೆ ಪೋದಪೆ | ನೆನುತ ಧರೆಗವತರಿಸಿ ನಿಬ್ಬಣ |
ವನು ನಡೆಸಿತಹ ಮಂತ್ರಿಯಾಗಿಯೆ ಪಡೆವಡೆದು ಬರಲು ||

ವನಿತೆ ಸತ್ಯಯ ಮೋಹದಾನಂ | ದನವು ಪೊಗದಿರಿಮೆಂದು ಬನಗಾ |
ಹಿನವರಾಡಲು ಬಾರೆಲೈ ವನಪಾಲ ಕೇಳೆಂದ || ೩೧ ||

ಬಂದುದುದಧಿಯ ನಿಬ್ಬಣವು ಕರ | ತಂದೆ ನಾಂ ಭರವಸದಿ ಬರುತದೆ |
ಮುಂದೆ ನೀನ್ನಿಮ್ಮೊಡತಿಗೀ ಒಸಗೆಯನು ಹೇಳೆನಲು ||
ಮಂದಯಿಸದವ ಪೋಗೆ ನಂದನ | ಬೆಂದವನವೆನೆ ಮಾಡಿ ಕುದುರೆಯ |
ನೊಂದನೇರಿದ ಮುದುಪನಾಗಿಯೆ ಪೊಕ್ಕನಾ ಪೊಳಲ || ೩೨ ||

ಮದವಣಿಗನಾ ಭಾನು ಕಂಡೀ | ಕುದುರೆಗೇಂ ಬೆಲೆ ಹೇಳೆನಲು ಕೊ |
ಟ್ಟುದೆ ಬೆಲೆಯು ನೀವಿಸುವ ವತ್ತುವ ನೋಡಿಮೆಂದಿಳೆಯೆ ||
ಅದನೊಲಿದು ತಾನೇರಿಕೊಂಡ | ತ್ತೊದಗಿ ಗಂಜಳ ಕುಳಿಯೊಳಗೆ ಕೆಡ |
ಹಿದುದು ತಾಂ ಗಹಗಹಿಸಿ ನಕ್ಕನು ಕೃತಕ ಶತವೃದ್ಧ || ೩೩ ||

ಮದವಣಿಗನೀ ಚಕ್ರಿಯಾತ್ಮಜ | ಕುದುರೆಯಿಂ ಕೆಳಬಿರ್ದೊಡೇನೆಲೆ |
ಮುದುಪನಗುವೈ ಯೇನಲೆಲೆ ಕೆಳೆಯರಸುಮಕ್ಕಳಿರ ||
ಮುದುಪ ನಾನೇರಿದ ಕುದುರೆ ಕೆಡ | ಹಿದುದೆನಲು ಚಕ್ರಿಯ ಕುಮಾರಕ |
ನಧಟನಹುದಹುದೆಂದು ಕುದುರೆಯನೇರಿ ಪೊರಮಟ್ಟ || ೩೪ ||

ಬಳಿಕ ವಿಕಟಾಂಗದ ಮುನಿತ್ವದ | ತಳೆದು ಸತ್ಯಯ ಕೊಳನ ಪುಗಲಿ |
ತ್ತಿಳಿಯದಿರಿ ನಮ್ಮಮ್ಮಯಾ ಕುಡಿನೀರ ಬಾವಿಯೆನೆ ||
ಇಳಿದಡೇಂ ನಾನವರ ಮಗನೆನೆ | ಲಲನೆಯರು ಕೈವೊಯಿದು ನಕ್ಕರು |
ಚೆಲುವ ಮಗನೆಂದನಿತರೊಳು ಗುಂಡಿಗೆಯ ತುಂಬಿದನು || ೩೫ ||

ಕೆರೆಯು ಬರುಗೆರಯಾಗಲೀಕ್ಷಿಸಿ | ಮೊರೆಯಿಡುತ ಬೆಂಬತ್ತೆ ತೊತ್ತಿರು |
ಬರನೆ ನೀರಿದೆ ಕೊಳ್ಳಿಯೆಂದು ಕಮಂಡಲವ ಮರುಗೆ ||
ತೊರೆವರಿದುದದು ಬಾಳವೃದ್ಧರು | ಮೊರೆಯಿಡುತ ತೆಕ್ಕಾಡುತಿರ್ದರು |
ಹರಿಸಿದನು ಬೆನು ಮುರಿದು ವಾಮನ ರೂಪ ಕೈಕೊಂಡ || ೩೬ ||

ಪುರದ ರಮಣಿಯರೀಕ್ಷಿಸಿಯೆ ನೋ | ಡಿರೆ ವಿಕಾರದ ಹೇಸಿ ರೂಹಿನ |
ನರನನೆನೆ ಶಾಂತೆಯರ ಮೊಗದಲಿ ಮೀಸೆ ಸುಂಡಿಲನು ||
ಮೊರಗಿವಿಯ ಪೆರ್ಮೊಲೆಯ ಬೆನ್ನಲಿ | ವಿರಚಿಸಲು ಗಂಡರು ಬೆರಗು ಗೂಳೆ |
ಮೊರೆಯಿಡುತ ಬಾಲಕರು ಬೆದರಲು ಕೇರಿಕೇರಿಯಲಿ || ೩೭ ||

ಹಸಿದ ಹಾರುವನಾಗಿ ಭಾಮೆಯೊ | ಳಸನಮಂ ಪಡೆದುಣಿತ ಮದುವೆಗೆ |
ಶಶಿಮುಖಿಯ ರಟ್ಟನಿತನೆಲ್ಲವ ತಿನಲು ಭೂತವೆನೆ ||

ಕಿಸರುಗೊಂಡಿರಿ ನೀವೆನುತವಾ | ದಿಸಲು ಲೋಳೆಯ ಜಲಧಿಯಲಿ ತೇ |
ಲಿಸಿದನೆಲ್ಲರನುಪ್ಪರಿಗಿಯೇರಿದಳು ಹರಿಯರಸಿ || ೩೮ ||

ಒಂದು ತಗರನು ಕಟ್ಟಿಕೊಂಡು ಮು | ಕುಂದನಯ್ಯನ ಕಂಡೆರಗಿ ಜೀ |
ಯೊಂದು ತಗರನು ಬಿಡಿಸಿ ನೀವಿದ ಕರ್ತಿಕಾರರೆಲೆ ||
ಎಂದೊಡಿನಿಸಂ ನಕ್ಕು ಬಲುದಗ | ರೆಂದು ತಂದ್ಯೆ ನಮ್ಮ ಮೊಳಕಾ |
ಲೊಂದನೊಡ್ಡುವೆ ನಿನ್ನ ತಗರನು ಬಿಟ್ಟು ನೋಡೆಂದ || ೩೯ ||

ಧರೆಯೆ ವಂದಿಪ ಚಕ್ರಿಯಯ್ಯನ | ಚರಣವನು ಮುರಿಗುಟ್ಟಿದನು ಕೊ |
ಯ್ಕೊರಲನೆನಲಮ್ಮೆನೆನೆ ಬೆದರದಿರೀತನರಿದೇನು ||
ಹರಣಗೆಟ್ಟವು ಹಲವು ಮುನ್ನೆಂ | ದರಸನಾನಿಸೆ ಬಿಟ್ಟೊಡದು ಸಿಡಿ |
ಲೆರಗಿತೆನೆ ತಾಗಿದೊಡೆ ಮೂರ್ಛಿಸೆ ನಗುತ ಪೊರವಟ್ಟ || ೪೦ ||

ಹೇಸಿಕೆಯ ತನು ಬ್ರಹ್ಮಚಾರಿಯ | ವೇಷದಿಂ ಬರೆ ಪಸಿದುರುಗುಮಿಣಿ |
ಆ ಸಮಯದಲಿ ಬಂದೆರಗಿಯುಚಿತಾಸನೆದಲಿರಿಸಿ ||
ಸೂಸುವಾ ರಸಿಗೆಯನು ವಸನದ | ಲೋಸರಿಸಿ ಮೈದೊಳೆದು ಚರಿಗೆಯ |
ನಾಸುದತಿ ಮಾಡಿಸಲು ಕೊಂಡದನ್ಯೆದೆ ವರ್ಧಿಸಿದ || ೪೧ ||

ಕರವನೊಡ್ಡಿಯೆ ತೆಗೆತೆಗೆದು ಕೆಲ | ಕಿರಿಸಿದಳು ಛರ್ದಿಯನದೇಂ ಕೊ |
ಕ್ಕರಿಸಿದಳೆ ನಾಂ ಪಾಪಿಯಿತ್ತುದಪಥ್ಯವಾಯ್ತೆಂದು ||
ಕೊರಗುವಮ್ಮನ ಗುಣಕೆ ಮೆಚ್ಚಿದ | ನಿರದೆ ಬಿಜ್ಜೆಯ ಕಳುಹಿ ಕರೆಯಿಸೆ |
ಭರದಿ ನಾರದ ಬರಲೆರಗಿದಳು ಕೃಷ್ಣನರ್ಧಾಂಗಿ || ೪೨ ||

ಮುನಿಪ ಬಂದಿರಿ ಕಾಣೆನೆನ್ನಯ | ತನುಜ ರತ್ನವನೆಂದು ಚಿಂತಿಸೆ |
ವನಜನಾಭನ ರಾಣಿ ನಿನ್ನಯ ಕಂದನೀತನೆನೆ ||
ಮನಸಿಜನು ನಿಜರೂಪಿನಿಂ ಭೋ | ರೆನೆ ನಮಸ್ಕರಿಸಿದೊಡೆ ಸಂತಸ |
ವನಧಿಯೊಳಗೋಲಾಡಿ ಪುಳಕದ ಗುಡಿಯಕಟ್ಟಿದಳು || ೪೩ ||

ಚೆಂದಳವನೊಸಲೆಡೆಗೆ ತಂದೊಲ | ವಿಂದ ನೆಗೆದಪ್ಪಿದಳು ಪರಸುತ |
ಕಂದನನು ಮೂಜಗದ ಸಿರಿ ಕೈಸಾರ್ದ ತೆರವಾಗಿ ||
ಕುಂದದಾನಂದದಲಿ ತಾಂ ಬೇ | ರೊಂದು ಮೈವೆಚ್ಚಿದಳು ಸುತಸಹ |
ವೊಂದೆ ಪೀಠದೊಳಿರ್ದಳೀಕ್ಷಿಸಿ ದಣಿಯಳಾ ಜನನಿ || ೪೪ ||

ಬಳಿಕಲಾ ನಾರದನು ಜಿನರಿಂ | ತಿಳಿದವರ ಭವಗಳನು ಕಾಮನ |
ಬಲುಹನಾತರ ತಂದ ಬಂದಂದವನು ಬಿಚ್ಚಳಿಸಿ ||

ನಲಿದಳಾರುಗುಮಿಣಿಯು ಝುಮ್ಮನೆ | ಮೊಲೆ ತೊರೆಯಲೀ ಮಗನ ಚೆಲುವಿನ |
ಪಲವು ಬಾಲಕ್ರೀಡೆಗಾಂ ಪೊರಗಾದೆನೆನಲೊಡನೆ || ೪೫ ||

ಹಸುಳೆಯಾಗಿಯೆ ಮೊಲೆಯನುಂಡನು | ನಸುನಗೆಯ ತೋರಿದನು ಮಿಗೆತೊದ |
ಳಿಸಿದ ನಿಂತುಟನೇಕ ಬಾಲ್ಯ ವಿನೋದವನು ತೋರೆ ||
ಕುಸುಮ ಬಾಣನೆ ತನುಜ ಚಕ್ರಿಯೆ | ಒಸೆದ ಗಂಡನು ತನ್ನ ಭಾಗ್ಯಕೆ |
ವಸುಧೆಯೊಳಗೆಣೆಯಿಲ್ಲೆನುತ ಸಂತಸವನಪ್ಪಿದಳು || ೪೬ ||

ಬಳಿಕ ಹರಿಚಂದನದ ರತ್ನ | ಗಳ ಜಿನಪ್ರತುಮೆಗಳ ಭೂಷಣ |
ಗಳನು ಫಳಿಲನೆ ತರಿಸಿ ಕಾಣಿಕೆಕೊಟ್ಟ ಕಾಲ್ಗೆರಗೆ ||
ತಳೆದಳತಿ ವಿನಯದಲ್ಲಿ ಸಂತಸ | ವಳವಿಗಳಿದುದು ರುವುಮಿಣಿಗೆ ತಾಂ |
ಕಳುಹೆ ನಾರದನಡರಿದನು ನಭದಲಿ ವಿಮಾನವನು || ೪೭ ||

ಜನನಿಯೊತ್ತಿನೊಳಂಗ ಭವನಿರೆ | ಬಿನದದಿಂ ದೂತಿಯರು ಬರುತಿರೆ |
ಜನನಿ ಇವರಾರೆನಲು ಕರುಳನು ಬೀಡೆ ಬರುತಹರೆ ||
ತನುಜ ನೀನಗಲಿದ ಕತದಿನೆಂ | ದನಿತನರುಪಲು ಬಿಜ್ಜೆಯಿಂ ತಾ |
ವನಜ ಲೋಚನನಾದರವರೈತಂದು ಬೇಡಿದರು || ೪೮ ||

ಸತ್ಯಭಾಮೆಗೆ ಗರ್ವವಾದೊಡೆ | ತೊತ್ತಿರಿಗೆ ಸೊಕ್ಕುಗಳೆ ನೀವೇ |
ನೊತ್ತಿನೊಳೆ ಬೇಡುವರೆ ಕುರುಳನು ಬಾಯಕೊಳ್ಳೆಂದು ||
ನೆತ್ತಿಗೂದಲನರಿದವರ ಕೈ | ಗಿತ್ತುಕಳುಹಲು ಮೊರೆಯಿಡುತ ಬಂ |
ದಿತ್ತರರಸಿಯೆ ಗಂಡನಿಂ ಮಾಡಿಸಿದಳಿದನೆಂದು || ೪೯ ||

ಎಂದೊಡತಿ ಕೋಪದಲಿ ತಾನೇ | ಬಂದು ಮುಂದಲೆಯರಿದು ತಹೆ ತಡೆ |
ವಂದವನು ನೋಡುವೆನೆನುತ ಪೊರಮಟ್ಟು ಬರಬರಲು ||
ಮುಂದಣಾ ಚಾವಡಿಯೊಳಗೆ ಗೋ | ವಿಂದನೋಲಗಗೊಟ್ಟಿರಲು ಕಡು |
ಚಂದವೇ ನಿನಗೀ ಕೃತಕ ಹೇಳೆಂದಳಿಂದುಮುಖಿ || ೫೦ ||

ನಿನ್ನವಳ ಪಕ್ಕದಲಿ ಕುಳ್ಳಿ | ರ್ದೆನ್ನವರು ತಾ ಕುರುಳನೆಂದಡಿ |
ನನ್ನ ಮುಂದಿಂತಾಡುವಿರೆ ಎಂದವರ ಸದೆ ಬಡಿಸಿ ||
ಮನ್ನಿಸದೆ ದೂತಿಯರ ಕರುಳರಿ | ದೆನ್ನಬಳಿಗಟ್ಟುವರೆ ನನ್ನದು |
ನನ್ನಿಯೋ ಅನ್ನಿಯದೊ ನೀ ಹೇಳೆಂದಳಿಂದುಮುಖಿ || ೫೧ ||

ಎನಲು ಬೆರಗಾದನು ಮುರಾಂತಕ | ವನಿತೆಯಾ ದೂತಿಯರ ತೋರಿಸ |
ಲೆನಗಿದದುಭುತವಂಗನೇ ನೀಂಪೋಗು ನಾಂ ತರಿಸಿ ||

ನಿನಗೆ ಕಳುಹುವೆನೆಂದು ಭಾವೆಯ | ಮನೆಗೆ ಕಳುಹಿಸಿಯಾಪ್ತರನು ಪೋ |
ಗೆನಲು ರುಗುಮಿಣೀ ದೇವಿಯರ ಮಂದಿರಕೆ || ೫೧ ||

ಬರಲವರನಂಗಜನು ತಲೆಕೆಳ | ಗಿರಲು ಕಟ್ಟಿಸಿ ಕೇಳ್ದು ಹರಿಯ |
ಚ್ಚರಿವಡೆದು ಬಲಭದ್ರ ಹೋಗೆನೆ ಬರಲು ಕಾಣುತವೆ ||
ಪಿರಿಯ ಬೆಳ್ಳಿಯ ಬೆಟ್ಟವೆನೆ ಬಹ | ನರನಿದಾರೆನೆ ಮಗನೆ ನಿನ್ನಯ |
ಪಿರಿಯ ತಂದೆಯು ಸಿಂಹಶತಸಾಸಿರಬಳನು ಬಲನು || ೫೨ ||

ಎನಲೊಡನೆ ಬಲು ಸಿಂಹವಾಗಿಯೆ | ದನಿಗೊಡುತ ಹಲಧರನ ನುಂಗಿಯೇ |
ಕನಕ ಹರ್ಮ್ಯಾಗ್ರಕ್ಕೆ ಲಂಘಿಸಿ ಕುಳ್ಳಿರಲು ಕಂಡು ||
ಜನವು ಬೆಕ್ಕಸಬಟ್ಟು ಬೆದರಿದು | ದನಿತರೊಳು ವಿಷ್ಟಿಯೆ ಬಲಭ |
ದ್ರನನು ತದ್ರೂಪನು ಕಳೆದು ಮಾತೆಯ ಬಳಿಗೆ ಬಂದ || ೫೪ ||

ಜನನಿ ಕಾಮ ವಿಮಾನಗಗನದ | ಲನುವಿನಿಂದದೆ ಬೆದರದಂದದಿ |
ಬಿನದವನು ತೋರಿಸುವೆನೆಂದಾಕೆಯನು ನೆಗೆಕೊಂಡು ||
ಮನಸಿಜನು ಬಾನೊಳಗೆ ನಿಂದಾ | ಘನನಿನಾದದೆ ಘರ್ಜಿಸುತ ಪುರ |
ಜನವರಿವವೋಲೆಂದನಾ ರುಗುಮಿಣಿಯ ತೋರಿಸುತ || ೫೫ ||

ಅಂದು ಶಿಶುಪಾಲನಕೊರಳ ಕೊ | ಯ್ತಂದರೀ ರುಗುಮಿಣಿಯನೆಲೆ ಗೋ |
ವಿಂದ ಕೇಳ್ಕೈ ಶಂಬರಾಂತಕನೆಂಬ ಖೇಚರನು ||
ಇಂದು ನಿನ್ನಸುವೆನಿಸಿದವಳನೆ | ಸಂದೆಗವದೇನಿಲ್ಲದೊಯ್ದಪೆ |
ಬಂದು ಸೆಳೆಕೊಂಬಧಟರಿದರೊಳಗುಂಟೆ ಹೇಳೆಂದ || ೫೬ ||

ಪ್ರಳಯಕಾಲದ ರುದ್ರನೆನೆ ಹರಿ | ಮುಳಿದು ಬಲುವಿಡಿವಾಗಳೆಂದರು |
ತಿಳಿದ ಮಂತ್ರಿಗಳರಸ ಬಿನ್ನಹ ಹಗೆ ಬಡವನಲ್ಲ ||
ಬಲನ ನುಂಗಿದ ರುಗುಮಿಣಿಯನರ | ಗಳಿಗೆಯೊಳೆ ಬಾನ್ಗೊಯ್ದನರನೊಳು |
ಕಲಹರನವಗಾಗಸದೊಳರಿದೆನೆ ಕೃಷ್ಣನಿಂತೆಂದ || ೫೭ ||

ದುರಧರೆಗೆ ಬಂದೊಡ್ಡಿ ನಿಂದಡೆ | ಕೊರಳ ಕೊಯ್ಯದೆ ಮಾಣೆನೆಂದ |
ಬ್ಬರಿಸೆ ಜನನಿಯನಾ ವಿಮಾನಕೆ ಕಳುಹಿ ಲಜ್ಜೆಗಳಿಂ ||
ಸ್ಮರನು ಕೃತಕದ ಚಾತುರಂಗದ | ನೆರವಿಯಲಿ ನಿಸ್ಸಾಳ ಕೋಡಿಯ |
ಸರಭಸದಿ ಬಂದೊಡ್ಡಿ ನಿಂದನು ಸಮರಧರೆಯೊಳಗೆ || ೫೮ ||

ಬಂದುದನಿತರೊಳುದಧಿಯನು ಕರೆ | ತಂದ ನಿಬ್ಬಣ ಪಾಂಡವಾದಿಗ |
ಳಿಂದ ಛತ್ರದ ಚಾಮರದ ವಾದ್ಯಗಳ ಗಣಡದಲಿ ||

ಅಂದು ಪುರವಧುಗಳು ಕುರೂಪನು | ಬಂದು ಕಂಡವರೆಲ್ಲರಂ ಘೊ |
ಳ್ಳೆಂದು ನಗುತರಮೆನಯನ್ನೆತರಲೇನೆ ಹೇಳುವೆನು || ೫೯ ||

ಹರಿಧುರಕೆ ನಡೆಗೊಳಲ್ಮೊಡನೆಯೆ | ಕುರುಪತಿಯು ಪಾಂಡವರು ಮೊದಲಾ |
ದರಸುಗಳು ಸಬ್ಬರು ಭರದಿ ಬಂದೊಡ್ಡಿ ನಿಲಲೊಡನೆ ||
ಸ್ಮರನು ಕೈವೀಸಿದೊಡೆ ಕೃತಕದ | ಪಿರಿಯ ಬಲವೊಡವೆರಸಿ ಸುರಿದುದು |
ಸರಳ ಮಳೆಯನು ಯಾದವರ ಕೌರವರ ಬಲಮುಳುಗೆ || ೬೦ ||

ಕಡುಮಸಗಿ ಯಾದವರ ಪಡೆಯೆಸೆ | ಕಡಿದ ತಲೆಯಿದಿರಟ್ಟೆ ಕಚ್ಚುವ |
ಉಡಿದ ಕೈಕಾಲಾನೆ ಕುದುರೆಯ ಬಡಿದು ಕೆಡಹುವವು ||
ಒಡನೆ ತಲೆ ಚಿಗುರುವವು ನೆತ್ತರು | ಬಿಡಲು ಪನಿಯೊಂದಕ್ಕೆ ಭೂಮಿಯ |
ನೊಡೆದು ನೆಗೆವರು ಕೋಟಿ ಸುಭಟರು ಗೆಲವುದರಿದಾಯ್ತು || ೬೧ ||

ನರನು ಬಿಲುಗೊಂಡೊಂದು ದೆಸೆಯಲಿ | ಮರುತಿ ಬಡಿಗೊಂಡೊಂದು ಕಡೆಯಲಿ |
ತರಣಿಸುತ ಚಾಪವನು ತಿರುಹುತದೊಂದು ಮುಖದಲ್ಲಿ ||
ಎರಡು ಮೂರಡಿಯಿಡುತ ನಿಂದರು | ಕರಚರಣವನು ಮಿಸುಕಲಮ್ಮದೆ |
ಗರುಡಿಯೋಜನು ಪುರುಡಿಯನು ಮರದಂತೆ ನಿಂದಿರ್ದ || ೬೨ ||

ಬಲನು ಬಿಲ್ಪಿಡಿದಾಂತೆಸದೆ ನಿ | ರ್ಬಲನೆನಿಸೆ ಸೈಂಧವನು ಸೈಂಧವ |
ಶಿಲೆಯವೋಲಿರೆ ಶಲ್ಯಶಲ್ಯವ ತೆರದಿ ನೆಟ್ಟನಿರೆ ||
ಅಲರುವಿಲ್ಲನ ಬಿಜ್ಜೆಯಂಬಾ | ಗಲದ ಬಿನ್ನಣಿ ಸವೆದ ನರ ಪು |
ತ್ಥಳಿಗಳೆನಿಸಿದರಾಂತು ನಿಂದಖಿಳಾವನೀಶ್ವರರು || ೬೩ ||

ನಾರದರು ರುಗುಮಿಣಿಗೆ ಮದನನ | ವೀರವನು ವಿದ್ಯೆಯನು ತೋರೆ ಕು |
ಮಾರನನು ಕೊಂಡಾಡಿ ಕಡುಬೆರಗಾಗಿ ನೋಡುತಿರೆ ||
ವಾರಿಜಾಕ್ಷನ ತನ್ನವರ ಜಯ | ದೋರೆಯನು ನೆರೆಕಂಡು ವಹಿಲದಿ |
ಮಾರನಿದಿರಿಗೆ ಖಗಪತಿ ಧ್ವಜರಥವ ನೂಕಿದನು || ೬೪ ||

ನಳಿನಲೋಚನನಾರ್ದು ಶಾರ್ಙ್ಗವ | ಬಲಿದು ಜೇವೊಡೆಗೆಯ್ಯೆ ಲೋಕವ |
ನಳರಿಸುವ ದನಿಮಾಯವಾದುದು ಮದನ ನೆಚ್ಚಂಬು ||
ಬಲಗೊಳುಲಚ್ಚುತನ ಚರಣದ | ಕೆಲಕೆ ನಟ್ಟುದು ಹರಿಯ ಕಣೆಗಳ |
ಕಳಿಯಗೊಡದೆಡೆಗಡಿದು ಜಯಕೋದಂಡ ನಿಂತೆಂದ || ೬೫ ||

ಬಲನನುಂಗಿದ ಸಿಂಹಲೊಕ್ಕಿಯ | ಸೆಳೆಗೆ ತಾನಂಜುವುದೆ ನಮ್ಮನು |
ಹುಲು ಸರಳಲಂಜಿಸಲು ಶಿಶುಪಾಲನೊ ಮುರನೊ ಮಧುವೊ ||

ನಳಿನ ನಾಭನೆ ದಿವ್ಯ ಬಾಣಂ | ಗಳನು ತೊಡುತೊಡೆನಲ್ಕೆ ತೊಟ್ಟಿಸೆ |
ಫಳಿಲನವನೆಲ್ಲವನು ಪ್ರತಿ ವಿದ್ಯೆಯಲಿ ಖಂಡಿಸಿದ || ೬೬ ||

ನಡುಗಿದಳು ನಭದೊಳಗೆ ರುಗುಮಿಣಿ | ಕಡುಮುಳಿದ ಜವನಂತೆ ನಗಧರ |
ಪೊಡವಿಗಿಳಿದನು ಮಲ್ಲಗಾಳೆಗಕಂಗಜನುಮಿಳಿದು ||
ನಡೆದು ಬಂದೊದರಿಸಿ ಭುಜಂಗಳ | ತೊಡರುವನಿತರೊಳಧಿಕರೀರ್ವರ |
ನಡುವೆ ನಿಂದನು ನಾರದನು ಭೂಪಾಲ ಕೇಳೆಂದ || ೬೭ ||

ತಂದೆ ಮಕ್ಕಳಿಗೇಕೆ ಜಗಳ ಮು | ಕುಂದ ಹೇಳೆನೆ ನನ್ನ ಕಂದನ |
ತಂದಿರೇ ಮುನಿಪತಿಯೆಯೆನೆ ರುಗುಮಿಣಿಯೆ ನಚ್ಚು ತನ ||
ಮುಂದೆ ನಿಲಿಸಿ ಮನೋಜನಾಗಳೆ | ಬಂದು ವರಮಣಿ ಮಕುಟಕಾಂತಿಗ |
ಳಿಂದ ತಂದೆಯ ಚರಣಕಮಲವನರ್ಚಿಸಿದನೊಲಿದು || ೬೮ ||

ಪರಸಿ ದಿಕ್ಕರಿಕದ ಸಮಾನದ | ಕರದಿ ತನುಜನವೆತ್ತಿ ಹರುಷೋ |
ತ್ಕರುಷದಲಿ ಬಿಗಿದಪ್ಪಿ ಪಚ್ಚೆಯ ಬಣ್ಣದಿನಿರೂಹ ||
ಧರೆಯ ಗಂಡರೊಳೆಲ್ಲರೊಳು ನೀ | ರರ ಶಿರೋಮಣಿಯನು ನಿರೀಕ್ಷಿಸಿ |
ಶರಧಿ ರಾಕಾಚಂದ್ರನನು ಕಂಡಂತೆ ಪೆರ್ಚಿದನು || ೬೯ ||

ಕುಸುಮ ಕೋದಂಡವನು ಚಂದನ | ನಸಮ ಭುಜಬಲ ಸೌಂಧನನು ಸುರ |
ಋಷಿಯೆ ನಿಮ್ಮಡಿಯೆಂತು ತಂದಿರಿಯೆನಲು ನಾರದನು ||
ಸಸಿನೆ ವಿವರಿಸಿ ಪೇಳೆ ಮಿಗೆ ಸಂ | ತಸದಳೆದನಾ ವಿಷ್ಣು ಕಾಮನು |
ವಸುಧೆ ನೆರೆಯದೆ ನೆರೆದ ಮಾಯಾಬಲವನುಡುಗಿಸಿದ || ೭೦ ||

ಕಳೆದನೆಲ್ಲರ ಕೀಳನೆಯನಾ | ಗಳೆ ಬಲನ ಚರಣಕ್ಕೆರಗಿ ಮುನಿಗಳು |
ತಿಳುಪಿದಂದದಿ ಪಾಂಡವಾದಿ ಸುಬಂಧುಗಳನರ್ತಿಸಿ ||
ಉಳಿದವರ ಲಾಲಿಸುತ ಪುರವಧು | ಗಳ ವಿಕೃತಿಯನು ಬಿಡಿಸಿಯಾಚಕ |
ಕಳಕಳದ ಸಂಸ್ಥವದ ಮನ್ನಿಸುತಿರ್ದನೊಲವಿನಲಿ || ೭೧ ||

ಪೊಳಲು ಮುನ್ನವೆ ಸಿಂಗರಿಸಿದುದು | ನಳಿನನಾಭನು ನಾರದನನಾ |
ನಳಿನ ನೇತ್ರೆಯನಂಗಜನ ಮುಂದಿಟ್ಟುಕೊಂಡಂದು ||
ಒಲಿದು ಪಾಂಡವರಾಗಿ ನೃಪ ಸಂ | ಕುಲವೆರಸಿ ಪುರವೈದಿಯರಮನೆ |
ಯೊಳು ಮನೋಜಗೆ ಕಟ್ಟಿದನು ಯುವರಾಜ ಪಟ್ಟವನು || ೭೨ ||

ಫುಲ್ಲ ನೀನಿಲ್ಲಿಲ್ಲದಿರೆ ರವಿ | ಯಿಲ್ಲದಂಬರದಂತೆ ಚಂದ್ರಮ |
ನಿಲ್ಲದಿರುಳಂತಿರ್ದೆ ನಿನ್ನೆಗಮಿನ್ನು ನನ್ನಿಂದ ||

ಬಲ್ಲಿದರು ಸಂಪನ್ನ ಲಕ್ಷ್ಮೀ | ವಲ್ಲಭರು ಪೆರರಾರೆನುತ ಸಭೆ |
ಯಲ್ಲಿ ಸಂತೋಷದಲಿ ನುಡಿದನು ಪುಂಡರೀಕಾಕ್ಷ || ೭೩ ||

ನಿನಗೆ ಮುನ್ನೊಪ್ಪಿರ್ದ ಕೌರವ | ತನುಜೆಯುದಧಿಯ ಮದುವೆನಿಲ್ಲಿಂ |
ದಿನ ಮುಹೂರ್ತದೊಳೆನಲು ರತಿಯನು ತಾಂಗಳಿಸಿದಿರವ ||
ಜನಕಗೆಲ್ಲವನರುಹಿ ವಿದ್ಯೆಯಿ | ನಿನಿತು ಬೇಗದಿ ಕರಸಿ ಪೊರನಂ |
ದನದೊಳಹರೆಂದತನು ಬಿನ್ನೈಸಿದನು ನಿಜಪಿತಗೆ || ೭೪ ||

ಹರಿ ಸಮಸ್ತರು ವೆರಸಿ ಧರೆಗ | ಚ್ಚರಿಯಿದೆನಲಿದಿರ್ಗೊಳಲು ಬಂದರು |
ಹರುಷದಿಂದಾ ಕಾಳಶಂಬರ ವಜ್ರದಾಡಾದಿ ||
ವರವಸಂತ ಜಯಂತ ರತಿಸಹ | ಬರೆ ಯಥೋಚಿತ ವಿನಯದಿಂ ಸ |
ತ್ಕರಿಸಿ ನಿಜನಗರವನು ಪೊಕ್ಕರು ಸರ್ವಸಂಭ್ರಮದಿ || ೭೫ ||

ಜಲಚರಧ್ವಜ ರಥವ ದೇವತೆ | ಗಳು ಮನೋಜಗೆ ತಂದು ಮುಂದಿಡೆ |
ನಳಿನನಾಭನ ಮತದಿ ಮನ್ಮಥನಾ ರಥವನೇರಿ ||
ಕೆಲದೊಳಿರೆ ರತಿ ಕರುವುವಿಲ್ಲೈ | ದಲರ ಬಾಣವನಾಂತು ಮೌಕ್ತಿಕ |
ದಲರ ಶುಭ್ರದ ಸತ್ತಿಗೆಯನೆತ್ತಿದರು ಯಕ್ಷಿಗಳು || ೭೬ ||

ಅಂದು ಪಡೆದಾ ಚಾಮರಂಗಳ | ತಂದು ಢಾಳಿಪರವರೆ ತುರಗವು |
ಗಂಧಗಜವಿರದೊತ್ತಿನಲಿ ಬರೆ ಮಣಿವಿಮಾನವದು ||
ಚಂದದಿಂ ಬರೆ ಸಿಂಗವಣೆ ಪಲ | ವಂದದಾ ಶಯ್ಯಾದಿ ದಿವ್ಯಾ |
ವೃಂದವನು ಪೊತ್ತಿತ್ತರದಿ ಬರೆ ಪುರವನೈದಿದರು || ೭೭ ||

ನೆರೆದು ನರನಾರೀಜನವು ಸೌಂ | ದರಿದ ರತಿಯನು ಕಾಮದೇವನ |
ದೊರವಡೆದ ಚೆಲುವಿಕೆಯನಾ ವಿದ್ಯಾಸಮೂಹವನು ||
ಹರುಷದಿಂದೀಕ್ಷಿಸುತಿರಲು ಬಂ | ದರಮನೆಯ ಪೊಗುತಿರಲು ಪಾಡುತ |
ತರುಣಿ ರುಗುಮಿಣಿದಿರುಗೊಳೆ ರತಿಯೆರಗೆ ಪರಸಿದಳು || ೭೮ ||

ಅದೆ ಮುಹೂರ್ತದೊಳಾರತಿಗೆ ಮಾ | ಡಿದರು ಮಂಗಲ ಮಜ್ಜನವ ಕೋ |
ವಿದೆಯರಂಗಜಲಕ್ಷ್ಮಿಯನು ಪೂಜಿಸುವವೊಲುನಲಿದು ||
ಚದುರಿನಿಂ ಕೈಗೈಸಿದರು ಸ | ಮ್ಮದದಿ ರುಗುಮಿಣಿ ಕುರುಳ ತರಲ
ಟ್ಟಿದಳುಲ ಚೇಟಿ ಸುಕೇತು ನಂದನೆ ಪೇಳ್ದಳಿಂತೆಂದು || ೭೯ ||

ತನಗದೆಲ್ಲಿಯ ಮಗನು ಮಾಯಾ | ಜನಕನವ ನೆಂದೀಯದಿರೆ ತಂತ |
ನ್ಮನಿಯೆ ಕೃಷ್ಣನನುಜ್ಞೆಯನು ನಡೆತಂದವರ ಭವನ ||

ಜಿನರಿನರಿದಂದದಲಿ ಪೇಳ್ದೊಡೆ | ವನಿತೆ ಕುರುಳನು ತಿಳಿದು ಕೊಡಲಂ |
ಗನೆಯರದ ತಂದಿತ್ತರುತ್ಸವದಿಂದೆ ರುಗುಮಿಣಿಗೆ || ೮೦ ||

ಬಂದುದೆನ್ನಯ ವಾಸಕಿಸುರನು | ಕೆಂದಳದಿ ಮೈದಿವೆನೆ ತೆಗೆಯಂ |
ದಂದು ಸಕಲೋತ್ಸವದಿ ಕಂದರ್ಪನಕರೆದು ತಂದು ||
ಮಿಂದಳಾ ಮೊಲೆ ನೀರನತ್ಯಾ | ನಂದದಲಿ ಕೈಗೆಯಿಸಿ ಕಾಮನ |
ತಂದರೈದೆ ವಿವಾಹ ಸದನಕೆ ಪಾಡುತಬಲೆಯರು || ೮೧ ||

ರತಿಯನೊಲಿದು ಜಯಂತ ತರೆ ಕುರು | ಪತಿಯುದಧಿಯನು ತಂದಿರಿಸೆ ಸಂ |
ನ್ನುತ ಮುಹೂರ್ತದಿ ತೆರೆತೆಗೆಯೆ ಸೂಡಿದರು ಮಾಲೆಯನು ||
ರತಿರಮಣಗಾ ಸಮಯದಲಿ ಭೂ | ಪತಿಗಳಾತ್ಮಜೆಯರ ಕುಡಲು ತ |
ತ್ಸುತೆಯರನು ತಾನಾರು ಸಾಸಿರವನು ಮದವೆನಿಂದ || ೮೨ ||

ಪಾಡಿದರು ಶೋಭನವ ನಲಿನಲಿ | ದಾಡಿದರು ನರ್ತಕಿಯರುತ್ಸವ |
ಗೂಡಿ ಕೈವಾರಿಸಿತು ವಂದಿಗಳ ಬಳ ದಿಗುತಟವ ||
ಝೂಡಿಸಿತು ತೂರ್ಯಾರವವು ನೆರೆ | ಬೇಡಿದಂತೆ ಮುಕುಂದ ಚಾಗವ |
ಮಾಡಿದನು ಮನಸಿಜನ ಮದುವೆ ಪೊಗಳ್ತೆಗಿಂಬಾಯ್ತು || ೮೩ |||

ರತಿ ಮನೋಜನ ಮದವೆ ಲಕ್ಷ್ಮೀ | ಪತಿಕೃತಂಗಡ ಮೆಂದೊಡಿಂತದ |
ರತಿಶಯವನೇವಣ್ಣಿಪುದೊ ಕರಿ ತುರಗ ಭೂಷಣವ ||
ವಿತತ ದೇಶಾಧೀಶರಿಗೆ ಖಗ | ಪತಿಸುತರಿಗಾ ಕಾಲ ಶಂಬರ |
ಗತಿಮುದದಿ ಕೊಟ್ಟೆಲ್ಲರನು ಕಳುಹಿದನು ನಳಿನಾಕ್ಷ || ೮೪ ||

ಅವಳ ಕರಣೇಂದ್ರಿಯವು ಕಾವನೊ | ಳವಗಹಿಸಿದವು ಸವಿತವದೆ ಮ |
ತ್ತವನ ಸಕಲೇಂದ್ರಿಯವು ರತಿಯಲಿರತಿಯನಪ್ಪಿದನು ||
ಸವಿಗೆ ಸವಿಗೊಡೆ ಸೊಗಸು ಝುಮ್ಮೆಂ | ದವಯವವ ಜಕ್ಕುಲಿಸೆ ಕಳೆ ಚಿ |
ತ್ತವರ ಸಾಳಿಸೆ ಸುಶಿಲನುಂಡರು ಭೋಗಸಾಗರರು || ೮೫ ||

ರತಿ ರಹಸ್ಯವು ಕಾಮಶಾಸ್ತ್ರ | ಪ್ರತತಿಯೆಂಬಿವು ಲೋಕದೊಳಗಾ |
ರತಿಮನೋಜನ ಸುರತಕೇಳಿಯ ಟಿಪ್ಪಣಗಳೆನಲು ||
ರತಿ ಮನೋಜನ.... ದಂ | ಪತಿಗಳಂಗೂಟವನು ಬಣ್ಣಿಪ |
ಚತುರನಾರಂಗಜನಖಿಲ ವನಿತೆಯರೊಳಿಂತಿಹನು || ೮೬ ||

|| ಅಂತು ಸಂಧಿ ೩೦ ಕ್ಕಂ ಮಂಗಳಮಹಾ ||

**ಸಂಧಿ ೩೧**

ಶಂಭು ಕುವರನುವೆರಸಿ ಭೂನುತ | ಶಂಭರಾರಿ ಮತಂಗ ವೇಷದಿ |
ನಂಬಿಸಿಯೆ ಕರೆತಂದನಾ ರುಗ್ಮಣನನಂದನೆಯ || ಪಲ್ಲ ||

ಕೇಳು ಮಗಧಾಧೀಶ ನಾರದ | ಪೇಳಿದದರಿಂದಾ ಪ್ರತೀಂದ್ರನೆ |
ಬಾಳಪಾಳಾರಿಯ ಬಸುರಬಹನೊಂದು ಪಕ್ಷಕ್ಕೆ ||
ಜಾಳು ಮಾತಲ್ಲೆಂದರಿತು ವನ | ಮಾಲಿಯಿಂದಾ ಸತ್ಯ ಎಂದಿನ |
ಸೂಳು ತನಗೆಂದಿಯಿಸಿ ಕೊಂಡುದನರಿದನಾ ಮದನ || ೧ ||

ಜನನಿ ಕೇಳ್ ಪಿರಿಯಮ್ಮ ನೆಮ್ಮ | ಯ್ಯನಲಿ ಪಡೆದಂದಿನ ದಿನದ ಸೂ
ಳನು ನಿಮಗೆ ದೊರಕೊಳಿಸುವೆನು ಜನಿಯಿಸುವ ತದ್ದೇವ ||
ನನಗೆ ಪಲ ಜನ್ಮದ ಸಹೋದರ | ನೆನೆ ನಗುತ ರುಗ್ಮಿಣಿಯ ನನ್ನಯ |
ಮನವೆನಿಪ ಜಂಭಾವತಿಗೆ ದೊರೆಕೊಳಿಸು ನಂದನನೆ || ೨ ||

ಎನೆ ಹಸಾದೆಂದಿರುತಿಹಂದಿನ | ದಿನದೊಳಾ ಜಾಂಭಾವತಿಗೆ ಕೊ
ಟ್ಟನು ಮನೋಭವ ಕಾಮಮುದ್ರಿಕೆಯನು ಪಡೆದು ತರುಣಿ ||
ವನಜನಾಭನ ಸೂಳ್ಗೆ ಸತ್ಯೆಯ | ವಿನುತ ರೂಪಿಂ ಪೋಗಿ ನಿಗೆ ತ |
ಣ್ಣನೆ ತಣಿಯೆ ಸುಸಿಲುಂಡು ಮುದ್ರಿಕೆದೆಗೆಯೆ ಹರಿಕಂಡ || ೩ ||

ತರುಣಿ ನೀನೀ ಕೃತಕದಿಂ ಬಂ | ದಿರವಿದೇನೆನೆ ತತ್ಪ್ರಪಂಚಮ |
ನರುಪೆ ಮದನನ ಮಾಯೆಗಚ್ಚುತಮೆಚ್ಚಿನಗುತಿರಲು ||
ಎರೆದ ಸೂಳ್ಗಾ ಸತ್ಯಭಾಮೆಯು | ಬರುತ ಕೆಳದಿಯರಿಂದದರ ತೆರ |
ನರಿದು ಪುತ್ರಾಲಾಭಖೇದವನಾಂತು ತಿರುಗಿದಳು || ೪ ||

ಮರುದಿನದೊಳಾ ಭಾವೆ ಬಂದೇ | ನೆರೆಯ ನಿನ್ನೊಳ ಭಾಸಿಕೆಯು ತಾಂ |
ಕರುವ ಕಾವಂದಿಂದಿನಿಂದುದೆನುತ್ತ ಜರೆದುಸುರೆ ||
ಸೆರಗ ಹಿಡೆದೆಳದಪ್ಪಿ ಮುದ್ದಿಸಿ | ಕುರುಪ ಪಲ್ಲಟಗೈದ ಮದನನ |
ತೆರಪನೆಲ್ಲವ ಪೇಳುತಿಳುಪಿದನತಿ ವಿನಯದಿಂದಾ || ೫ ||

ಬಳಿಕ ಜಾಂಭಾವತಿಯ ಗ ರ್ಭವ | ತಳೆದು ನವಮಾಸಾಂತ್ಯದಲಿ ಪೆ |
ತ್ತಳು ಕುಮಾರನ ಜಾತಕರ್ಮೋತ್ಸವವನಚ್ಚುತನು ||

ಇಳೆಪೊಗಳೆ ಮಾಡಿದನು ಪೆಸರನು | ತಳೆದ ಶಂಭುಕುಮಾರ ಮಿರುಗುತೆ |
ಬಳೆದನಾ ಕ್ರಮದಿಂದ ಕಳೆಗಳು ತನ್ನೊಡನೆ ಬೆಳೆಯೆ || ೬ ||

ಸ್ಮರನು ಪೂರ್ವಭವ ಪ್ರಣಯದಿಂ | ಪಿರಿದು ವಿದ್ಯೆಯನನುಜಗಿತ್ತೀ |
ರ್ವರುಮೊಡನೆ ಸುಖದಿಂದಿರುತ್ತಿರಲೊಂದು ದಿವಸದಲಿ ||
ಹರಿಯ ದೆಸೆಯಿಂದೆನ್ನ ಕತದಿಂ | ಪಿರಿದು ನೋವಾಯ್ತಣ್ಣಗೆಂದಾ |
ದರದಿ ಪಾಗುಡಗೊಟ್ಟು ರುಗುಮಿಣಿ ಕಳುಹೆ ಮಂತ್ರಿಗಳು || ೭ ||

ಬಂದುರುಗುಮಣ ಭೂಪನೋಲಗ | ಮಂದಿರದಲಿರಲೆರಗೆ ಮಂತ್ರಿಗ |
ಳೊಂದಿ ಕಾಣಿಕೆಯಿಕ್ಕಿ ಪಾಗುಡಗೊಟ್ಟು ಬಿನ್ನಹವು ||
ಇಂದು ಮುಖಿ ದರ್ಪಕನ ಜನನಿ ನ | ಗೇಂದ್ರಧರನರ್ಧಾಂಗಿ ರುಗುಮಿಣಿ |
ಸಂದು ಬಂದು ಪ್ರೀತಿಯಿಂದಿಂತಟ್ಟಿದಳು ನಮ್ಮ || ೮ ||

ಮಾರನ ಪ್ರತಿ ವೀರಗತಿ ಭವ | ನಾರಗೀವುದುದೇವ ನಿಮ್ಮ ಕು |
ಮಾರಿಯನು ಸುಖಕಾರಿಯನು ಚೆಲುವಿನ ವಿದರ್ಭೆಯನು ||
ಚಾರುಗುಣಿ ರುಗುಮಿಣಿ ಮಹಾಸತಿ | ಭೋರನಿಂತೆಂದಟ್ಟೆ ಬಂದೆವು |
ಧಾರಿಣೀಶ್ವರ ಚಿತ್ತವಿಸಿ ಕೇಳೆನಲು ನಸುನಕ್ಕ || ೯ ||

ತಂದೆಯನು ಕೊಂದವಗೆ ಮೋಹಿಸಿ | ಹಿಂದೆ ಹತ್ತಿದಳೆಂದು ಹೆಣ್ಣ ಕೊ |
ಡೆಂದು ನಮ್ಮಯ ತಂಗಿಯಿಂದಟ್ಟುವುದುಚಿತವಹುದು ||
ಎಂದು ಮೊಗದೆಗೆಯಲ್ಕವರು ನೃಪ | ಹಿಂದಣಳಲನು ನೆನೆಯದೆನ್ನವ |
ರಂದು ನಡೆಕಾಮಂಗೆ ಕೊಡದಾರ್ಗಿತ್ತಪಿರಿ ಸುತೆಯ || ೧೦ ||

ಕೊಡಲೆ ಬೇಹುದು ಕಾಮಗಾಕೆಯ | ಕೊಡದೊಡಾತನು ಬಿಡನದೆಂತೆನೆ |
ಪೊಡವಿಯಲಿ ಸೋದರದ ಮಾವನ ಮಗಳ ಬಿಡಲದರಿಂ ||
ಕೊಡುವುದೇ ಕರಣೀಯಮೆನೆ ತಾಂ | ಕಡು ಮುಳಿದು ನಿವಗೀವ ದೆಸೆಯಿಂ |
ಕೊಡುವೆ ಮಾದಿಗಗೆಂದು ಕೋಪದಲವರ ಕಳುಹಿದನು || ೧೧ ||

ಮುಗುಳುಗಣೆಯನ ಶಂಭು ಕುವರನು | ರುಗುಮಿಣಿಯ ಸಾರಿರಲು ಕೊಂಡಿಮ |
ನಗರದಿಂ ಮಂತ್ರಿಗಳು ಬಂದೆಂದಂತೆ ಬಿನ್ನೈಸೆ ||
ನಗೆಮೊಗವು ಬಾಡಿದವು ಮನದೊಳು | ದುಗುಡ ಮೇಳಿಸೆ ಭೀಷ್ಮಜಗೆ ಮೆ |
ಲ್ಲಗೆ ತದೀಯಾತ್ಮಜರು ಪೊರವಟ್ಟರು ನೆವವನಿಟ್ಟು || ೧೨ ||

ಭರದಿ ಕಾಮ ವಿಮಾನವೇರಿದ | ರತಿಗಳಿಗೆಯೊಳಪೋಗಿ ಕೊಂಡಿಮ |
ಪುರದ ಬಹಿರುದ್ಯಾನ ದೇಶದೊಳಾ ವಿಮಾನವನು ||

ಇರಿಸಿ ಧರೆಗವತರಿಸಿ ಕೈಯಲಿ | ಧರಿಸಿದಾ ಸಂಬೋಳಿ ಗೋಲ್ವೆಗ |
ಳುರು ತೊಗಲ ಮಿಳಿವರೆಯೆ ಮಾದಿಗವರಿಜನಪ್ಪಿದನು || ೧೩ ||

ಪುರದ ಪರ್ವೀದಿಯಲಿ ಬರಲೀ | ರ್ವರ ಚೆಲುವಕಂಡವರು ಮೋಹಿಸ |
ಲರಮನೆಗೆ ಬಂದವರು ರುಗುಮಿಣಿಗೆರಗಿ ದೂರದಲಿ ||
ಅರಸನೀಕ್ಷಿಸಿ ಚೆಲುವರೆಂದಾ | ದರದಿ ನೀವಾರೆತ್ತಣಿಂ ಬಂ |
ದಿರಿಯೆನಲು ಕೈ ಮುಗಿದು ಬಿನ್ನಹವೆಂದರವರಿರದೆ || ೧೪ ||

ದ್ವಾರವತಿಪುರವದರರಸು ದೈ | ತ್ಯಾರಿಯಾತನ ಮನ್ನಣೆಯಲಾ |
ಊರ ಹೊರಗಿಹ ಮಾದೆಗರು ತಾವೆಲೆಯೆರೆಯ ನಿಜಸುತೆಯ |
ಮಾರಗೀಯೆನು ಮಾದಿಗಗೆ ಮನ | ವಾರೆ ಕೊಟ್ಟಪೆವೆಂದಿರಿ ಗಡಾ |
ಕಾರಣದಿ ಬಂದೆಮ್ಮಗೋರ್ವಗೆ ಕೊಡಿ ಮಹೀಕಾಂತ || ೧೫ ||

ಎನಲು ಮುನಿಯದೆ ನಸುನಗುತ ಎಲೆ | ದೊನೆದು ನೀವೆಂದಂತೆ ಕೂರದ |
ವನಮಗಗೆ ಕೊಡುವಂತರಿಂ ನಿಮಗೀವುದೊಳ್ಳಿತಲೆ ||
ಎನುತ ನಿಮ್ಮಿಂ ತೇಜವೀ ಕುಲ | ಜನಿತರಿಗೆ ದೊರಕುವುದೆ ಮೊದಲ |
ರ್ಜುನ ತರುವುತುದಿ ಚೂತವುಂಟೇ ಎಂದನವನೀಶ || ೧೬ ||

ಅರಸನಾದ್ವಾರಕಿಯ ಸಿರಿ ಗೋ | ಪುರದ ಬಾಗಿಲಕಾಪುಗೊಟ್ಟಿಹ |
ನಿರುತಿಹೆವು ನಾವಲ್ಲಿ ಚರಿಯಿಪ ನರರ ವಾಸನೆಗೆ ||
ನೆರೆದುದೆಮಗೀ ತೇಜ ಚಂದನ | ತರುವ ಪೊರ್ದಿದ ಕಾವರಂಗಳು |
ಪರಿಮಳಿಸವೇ ಕೊಡದೊಡಿರಿ ನಾಂಪೋಪೆವೆಂದರಿದೆ || ೧೭ ||

ಅರಮನೆಯ ಪೊರಮಟ್ಟು ತದ್ಭೂ | ವರನ ತನುಜೆಯು ಕನ್ನೆಮಾಡದೊ |
ಳಿರುತಿಹುದುನರಿದದನೆ ನೋಳ್ಪುದುಮಾಕೆ ನಡೆನೋಡೆ ||
ಸ್ಮರಮತಂಗಗೆ ಸೋಲ್ತುಳಾಗಳೆ | ಕರೆದು ಪ್ರಜ್ಞಪ್ತಿಯನು ಬೆಸಸಲು |
ನೆರೆದಲೆಯ ಮಾದಿಗಿಯಾಗಿಯೆ ಪೋದಳರಮನೆಗೆ || ೧೮ ||

ಮರಕತನ ಪುಡುಕೆಯಲನರ್ಘ್ಯದ | ಸಿರಿರತುನಗಳ ತೀವಿ ದೂರಾಂ |
ತರದೊಳರಸನ ಮುಂದಿರಿಸಿ ಕೈಮುಗಿದು ಮುಂಬಂದ ||
ತರುಣರೀರ್ವರು ನನ್ನ ಮಕ್ಕಳು | ನರಪತಿಯೆ ಈ ರತ್ನವನು ಕೊಳು |
ಕರುಣದಿಂ ಕುವರಿಯನು ಕೊಡುಯವರೊಳಗದೋರ್ವಂಗೆ || ೧೯ ||

ಎನಲು ಬೆಕ್ಕಸಬಟ್ಟು ಹೀನರೊ | ಳಿನಿತನರ್ಘ್ಯದ ರತ್ನವೆತ್ತಾ |
ಮನಸಿಜೋಪಮ ರೂಪರೆಂತೆಂದೆಲ್ಲರರಿವಂತೆ ||

ಜನಪನುಡಿವನಿತರೊಳ್ ರತ್ನವ | ನನುವಿನಿಂ ತೆಗೆದುಕೊಂಡುಮರಳಿದ |
ಳನಿತನಂಗಜಗರಿಪಳೊಳಪೊಕ್ಕನು ಕೊರವಿಯಾಗಿ || ೨೦ ||

ಎತ್ತಿಕೊಂಡಾ ಕೂಸು ತಳೆಯಲಿ | ಪೊತ್ತೊಗೂಡೆ ಮಲಿರ್ನ ವಸನದ |
ಸುತ್ತುಡಿಗೆ ತಲೆಜುಂಜುಸೊಗಯಿಸೆ ಕೊರವಿಯಾಂ ಬಂದೆ ||
ವೃತ್ತ ಕುಚೆಯರು ಕೇಳಿರರಿತನ | ಚಿತ್ತದಲಿ ನೆನೆದಪೆನೆ ಪೇಳ್ವೆನೆ |
ಚಿತ್ತದಲಿ ಬರಲವಳನು ವಿದರ್ಭಾದೇವಿ ಕರೆಸಿದಳು || ೨೧ ||

ಉಂಡಊಟದ ಪೇಳ್ವೆ ಪೆಂಗಳು | ಕಂಡ ಕನಸನು ಪೇಳ್ವೆನೆನಲೊಡ |
ಗೊಂಡು ಬೇರೇಕಾಂತದಲಿ ನಾಂನೆನೆದುದರಪೆನ [ಲು] ||
[ರುಂಡದಿ ಬೇ] ಗವಿಳುಹಿ ಗೂಡೆಯ | ಕಂಡು ದೇವಿಯ ನೆನೆದು ಕೇಳಲೆ |
ದುಂಡಿ ನೀಂ ನೆನೆದದುವೆ ಕೈವಶವಪ್ಪುದೆಂತೆನಲು || ೨೨ ||

ಮನಸಿಜೋಪಮ ಮಾದೆಗಗೆ ನೀಂ | ಮನಸ ತಂದಪೆಯೆನಲು ಪುಸಿಯೆನೆ |
ನನಗೆ ಮರೆಯೇ ತಾಯರಿಯದಾ ಮಾಯೆಯಿಲ್ಲರಸಿ ||
ನನಗೆ ಪೇಳ್ದಡೆ ಪ್ರಕಟಿಪೆನೆ ನೀಂ | ನೆನೆದುದಿದದಾವೆನಲು ನಾಚಿಕೆ |
ಜನಿಸಿ ತಲೆವಾಗಿದಳು ಮೆಲ್ಲನೆ ಸುಯಿದು ಲಲಿತಾಂಗಿ || ೨೩ ||

ನನೆಗಣೆಯನರ್ಧಾಂಗಿಯಹ ತ | ಕ್ಕಿನಿಯಳೇ ನೀನೀಗ ನೆನೆದಪೆ |
ನಿನಗವಗೆ ಸಂಘನೆಯೆಂತಹುದೆಂಬ ಯೋಚನೆಯ ||
ನಿನಗದೀಗಳೆಯಹುದು ಚಿಂತೆಯ | ಮನಸಿನಿಂ ತೆಗೆ ನನ್ನ ನುಡಿ ರಾ |
ಮನ ಶರವು ತಪ್ಪುವುದೆಯೆನೆ ಮನ್ನಿಸಿದಳಾಕೆಯನು || ೨೪ ||

ಉಳಿದನಾವೇಷವನು ಮನಸಿಜ | ತಳೆದನಾ ಮಾತಂಗರೂಪನು |
ಲಲನೆಯುಪ್ಪರಿಗೆಯ ಬಳಸಿನೊಳಗವಳ ನೀಕ್ಷಿಸುತ ||
ನಿಲೆಕುವರಿ ಕಟ್ಟೆಳಸೆ ಹೊಸ ಹೊಂ | ಗಲಶ ಮೊಲೆಯೊಳೆ ನಿನ್ನ ನೊಯ್ದಪೆ |
ನೊಲಿದು ಬಾಯೆನಲವಳೊಡಂಬಡಲೆತ್ತಿ ಕೊಂಡೊಯ್ದು || ೨೫ ||

ಸ್ಮರನು ಶಂಭುಕುವರನು ಮಾಕೆಯು | ವರವಿಮಾನವನೇರಿ ನಭದೊಳು |
ಭರದಿ ಬಂದಾ ದ್ವಾರವತಿಯುಪವನದೊಳವತರಿಸಿ ||
ತರಿಸಿ ವಿದ್ಯೆಗಳಿಂದ ವಸ್ತ್ರಾ | ಭರಣ ಕುಸುಮಾಗರುವಿನಿಂ ಸಿಂ |
ಗರಿಸಿದನು ಕೈಯಾರೆ ತಾನಾ ಚೆಲುವ ಕುವರಿಯನು || ೨೬ ||

ನನೆಗಣೆಗೆ ಮಾರಿಪೊಗಳಲೊಲೆಂ | ದನು ನಯದಿ ಮಣಿಮಾಲೆಯನು ಬೀ |
ವೆನೆ ನೆಗಳೆ ಕೈಗೆತ್ತಿ ಕಳುಹಿದೊಡಾಕೆ ಪೋಗುತಿರೆ ||

ಜನಿತ ವಿದ್ಯಾದೇವತೆಯರಾ | ಜನಿತೆ ಗಾಳಿಯರಾಗಿ ಬೆಳ್ಳಲೆ |
ಯನುಗಳಿಸಿ ಕೊಡೆವಿಡಿದು ಢಾಳಿಸಿದರು ಚವಲಗಳನು || ೧೭ ||

ಬೀವಕೊಳ್ಳಿರೆಯೆಂದು ವೀಣಾ | ರಾವದಿಂ ಪೊಳಲಂಗಡಿಯೊಳಾ |
ಬೀವುಗಾರ್ತಿ ಬರಲ್ಕೆ ಕಂಡಾಜನವು ಬೆರಗಾಗಿ ||
ಭೂವರರ ತನುಜೆಯರಿಗಿನಿತಿ | ಲ್ಲೀವಿ ಭವವೀ ಚೆಲುವುಮೀ ರ |
ತ್ನಾವೃತಾಭರಣಗಳಿವಳಿಗೇನೆಂದು ನೋಡಿದರು || ೧೮ ||

ಬೀವುಗಿತಿ ನಿನಗೇತರಿಂದಾ | ಯ್ತೀ ವಿಭವಮೆನೆ ಬೀವಮಾರಿದೊ |
ಡೀ ವಿಭವವಾಯ್ತೆಂದವಳ ಸಖಿ ನುಡಿಯೆ ಮೆಚ್ಚಿದರು ||
ಬೇವಿಗೆಂ ಬೆಲೆಗೊಂಬಳೊಂದೆಡೆ | ಹೂವಿನಂಬನು ಕೊಂಬಳೆಂಬುದು |
ಕಾವದೇವಗೆ ಮಾರಿಹೋಗೆಂದರು ಕೆಲರು ನಗುತ || ೧೯ ||

ಕೇರಿಕೇರಿಯೊಳಿಂತು ತಿರುಗುತ | ಮಾರನರಮನೆಗೊಯ್ದರಾ ವಿ |
ದ್ಯೋರುದೇವಿಯರಾಕೆ ಬಹುದನು ದೂರದಲಿ ಕಂಡು ||
ನಾರಿಯೋರ್ವಳು ಹರಿದೈದಿ ಶೃಂ | ಗಾರ ನಿಧಿಯೆನೆ ಬೀವುಗಾರ್ತಿಯು |
ದಾರ ಸಿರಿಯಲಿ ಬಹುದ ನೋಡೆಂದವಳು ದೂತರಿಗೆ || ೨೦ ||

ರತಿಯುದಧಿ ಮೊದಲಾದ ಮದನನ | ಸತಿಯರೈತಂದೀಕ್ಷಿಸಲು ಸ್ಮರ |
ಕೃತಕ ಮಾತಂಗಿಯು ವಧೂತತಿ ಬೀಸುಗೊಳ್ಳಿರೆನೆ ||
ರತಿಯು ಬೀವಿಗೆ ಬೆಲೆಯಿದೇನೆನೆ | ಚತುರ ಪೂಗಣೆಯೀವುದನೆ ಸ |
ನ್ನುತ ನಗುತ ಮತ್ತಾಕೆಗಿಂತೆಂದಳು ಪಿಕಾರವದಿ || ೨೧ ||

ನನೆಗಣೆಯ ಬೇಕಾದರೀ ಬೀ | ವನು ಕೆಡಿಸದಿರು ನಮ್ಮ ಕುಸುಮಾ |
ಸ್ತ್ರನ ಚೆಲುವನೀಕ್ಷಿಸಲು ನಿನಗೆದೆದುಂಬಿ ಬಹವೆನಲು ||
ವನಿತೆ ನನ್ನನ್ನು ತಂದ ಮಾತಂ | ಗನ ಚೆಲುವಿಕೆಯ ಮುಂದೆ ಕುಸುಮಾ |
ಸ್ತ್ರನು ದೊರೆಯನಲ್ಲೆನಲು ಗಹಗಹಿಸದರು ರಮಣಿಯರು || ೨೨ ||

ಅಕ್ಕ ಕೇಳೆಮ್ಮವನ ಕೃತಕ ವಿ | ದಕ್ಕು ಮುನ್ನಾಂಬಲ್ಲೆ ನೀಚರ |
ಮಕ್ಕಳೊಳಗೀ ಚೆಲುವಿ ಸಿರಿಯಂತಹುದೆ ಎಂದುದಧಿ ||
ನಿಕ್ಕುವಂ ತಾನೆನಲು ರುಗುಮಿಣಿ | ದೊಕ್ಕನಾಕೆಯ ಕರಸಿ ನೋಡಿದ |
ಳಕ್ಕರಿಂದವಳುಡುಗೆ ತೊಡುಗೆಯ ಚೆಲುವೆನೆಳೆಯಳನು || ೨೩ ||

ಬೆರಗುವಟ್ಟಳು ನೀನಿದಾರೆಲೆ | ಕಿರುಮಗಳೆಯೆನೆ ಮಾದಗಿತಿ ತಾ |
ನೆರೆಯನಟ್ಟಿದ ಬೀವುಗೊಟ್ಟೆನೆಲಣ್ಣ ರುಗುಮಿಣನು ||

ಜರೆದುದಕೆ ಮಗನಿಂತುಗೈದನೊ | ಅರಿಯ ಬಾರದೆನುತ್ತ ಕಂಡ |
ಕ್ಕರಿನೊಳವಳನು ಕೀರಿಗೇಳ್ದಡೆ ಪೇಳ್ದರಿಂತೆಂದು || ೩೪ ||

ಅರಸಿ ಕೊಂಡಿಮಪುರದ ರುಗುಮಿಣ | ನರಪತಿಯ ಸುತೆ ನಾಂ ವಿದರ್ಭೆಯ |
ಸ್ಮರ ಸಮಾನತಂಗನೋರ್ವನು ತಂದನಿಂತೆಂದು ||
ಇರದ ದೆಲ್ಲವ ಪೇಳಿ ಕಂಬನಿ | ತೊರೆದುಗುತ ಬಿಗಿದಪ್ಪಿ ಸತಿ ಕು |
ಳ್ಳಿರಿಸಿಕೊಂಡಳು ತೊಡೆಯ ಮೇಲಾ ಸೊಸೆಯನಳ್ತಿಯಲಿ || ೩೫ ||

ಮಗಳೆ ನನ್ನಿಂ ನಿನ್ನ ದೆಸೆಯಿಂ | ಮಿಗೆತವರು ಮನೆಗಾಯ್ತು ಕಡುದುಃ |
ಖಗಳನುತ್ತಿರೆ ಬಿಜ್ಜೆಗಳು ತದ್ವಾರ್ಥೆಯನು ಹೇಳೆ ||
ಮುಗುಳು ಗಣೆಯನು ಶಂಭುಕವರನು | ನಗುತ ಬಂದಡಿಗೆರಗಿ ಕುಳ್ಳಿರೆ |
ಮಗನೆ ತಂದೆಯ ಹೋಲು ಕಂದಯೆನಿಪ್ಪುದಾದುದಲೆ || ೩೬ ||

ಎಂದು ತನ್ನಿಂದಾದುದೆಲ್ಲವ | ಕಂದಗತಿ ನೋವಿಂದರುಪೆ ಬ |
ಲ್ಲಂದದಿಂ ಶ್ರೀಮತಿವೆರಸಿಯಣ್ಣನನು ಬರಿಸೆನಲು ||
ಅಂದೆ ನಾರದನನು ಕಳುಹೆ ಪಲ | ವಂದರಿಂದ ಮೊಡಂಬಡಿಸಿ ಕರೆ |
ದಂದನಾ ದಂಪತಿಗಳನು ಸುವಿಮಾನದೊಳು ಮುನಿಪ || ೩೭ ||

ಸಿರಿವರನು ರುಗುಮಿಣಿಯು ಭೂಮೀ | ಶರು ವೆರಸಿ ಶ್ರೀಮತಿಯ ರುಗುಮಿಣ |
ವರನನುತ್ಸವದಿಂದಿದಿರು ಗೊಂಡುಚಿತ ವಿನಯದಲಿ ||
ಪಿರಿದು ಹರಷಂಬಡಿಸಿ ಶುಭವಾ | ಸರದೊಳುತ್ತಮ ಲಗ್ನದೊಳಗೈ |
ಸರವಿದರ್ಭೆಯ ಮದುವೆಯಾದುದು ವಿವಿಧ ಮಂಗಳದಿ || ೩೮ ||

ಅರಸುಗಳು ಮತ್ತಾಗಳಿಚ್ಛಾ | ಸಿರ ಸುತೆಯರನು ಕುಡಲು ತಳೆದನು |
ಪರಿಯಣನ ವಿಧಿಯಿಂದ ಮನ್ಮಥರಾಜನುತ್ಸವದಿ ||
ಹರಿ ಸಮಸ್ತರಿಗುಚಿತ ವಿನಯಾ | ದರಣೆಯಿಂ ಕಳುಹಿಸಲಖಿಳ ಭೂ |
ವರರು ತಂತಿಮ್ಮಿಕ್ಕೆ ಗೈದಿದರರಸ ಕೇಳೆಂದ || ೩೯ ||

ವರಶತೇಂದ್ರ ನಮಸ್ಯ ಜಿನಪತಿ | ಚರಣ ಸರಸೀ ಜಾತ ನವ ಮಧು |
ಕರವಿರಾಜಿತ ಸುಕವಿ ಸಾಳುವ ವಿರಚಿತವುಮಪ್ಪ ||
ಪರಮನೇಮಿಜಿನೇಂದ್ರ ಪಾವನ | ಚರಿತೆಯೊಳಗೇಳನೆಯದಿದು ತಾಂ |
ದೊರೆವಡೆದುದವನೀಸ್ತುತ ಪ್ರದ್ಯುಮ್ನ ಪರ್ವವಿದು || ೪೦ ||

|| ಅಂತು ಪ್ರದ್ಯುಮ್ನ ಪರ್ವಕ್ಕಂ, ಸಂಧಿ ೩೧ ಕ್ಕಂ ಮಂಗಳಮಹಾ ||

**ಸಂಧಿ ೩೧**

ನೇಮಿ ಜಿನಗಭಾರ್ವ ತರಣೋದ್ಧಾಮ ಕಲ್ಯಾಣವನೊಲಿದು ಸು |
ತ್ರಾಮನಾಗಿಸಿ ಧನ್ಯನಾದನು ಭವ್ಯ ಬಾಂಧವನು || ಪಲ್ಲ ||

ಶ್ರೀ ಸಮುದ್ರ ವಿಜಯ ನರಾಧಿಪ | ನೇಸು ಪುಣ್ಯವ ಮಾಡಿದನೊ ಕುಸು |
ಮೇಶುವೇ ಮೊಮ್ಮಗನು ತನಗೆ ಬಲಾಚ್ಚುತರ ಜನಕ ||
ಲೇಸೊಗೆದ ಕಿರುದಮ್ಮ ತ್ರಿಜಗಾ | ಧೀಶ ನೇಮಿಯೆ ತನ್ನ ರಾಣೀ |
ವಾಸ ಗರ್ಭ ನಿವಾಸಿಯಹನೆನೆಲೇನ ಹೇಳುವೆನು || ೧ ||

ಕೇಳು ಶ್ರೇಣಿಕ ಮಂಡಳೇಶ್ವರ | ಹೇಳುವೆನು ಸುರತಿಂಥಿಣಿಗಳ ವಿ |
ಶಾಲತೆಯ ತಳೆದುರುಪು ಧರ್ಮಸಭೆಯಲಿ ನವರತುನ ||
ಮೇಳಿಸಿದ ಸಿಂಹಾಸನಸ್ಥಿತ | ನಾಳಿಸಿದ ವೈಭವದಿ ಸುಭಗುಣ |
ಶೀಲನಮರಾಧೀಶನಿರೆ ನಿಜಪೀಠ ಕಂಪಿಸಿತು || ೨ ||

ಅವಧಿಬೋಧದಿನರಿದು ತದ್ಭೂ | ಧವನ ರಾಣಿಯ ಗರ್ಭದೊಳಗುದು ||
ಭವಿಪ – ನಿನ್ನಿರುದಿಂಗಳಿಗೆ ಜಿನನೆಂದಲೇ ಧನದ ||
ಅವನಿಪನ ಭವನಾಂಗಣಕೆ ಮೂ | ರುವರೆ ಕೋಟಿಸುವಸುವ ತ್ರೈಕಾ |
ಲ್ಯವು ಕರೆಯಿ ಪದಿನೈದು ತಿಂಗಳುಯೆಂದು ನೇಮಿಸಿದ || ೩ ||

ಹಾಲು ಮದ್ದಾದವೊಲು ಭಕ್ತಿಯ | ಲೀಲೆಯುಳ್ಳ ಕುಬೇರನಿಂದ್ರನೆ |
ಪೇಳೆ ಮಿಗೆ ವಸುಧಾರೆಗರೆದದರಿಂದ ವಸುಮತಿಯು ||
ಭೂಲಲನೆಗಾ ರತ್ನಗರ್ಭೆಯು | ಮೇಲೆನಿಸಿದಾ ಪೆಸರೆರಡು ಸ |
ಮ್ಮೇಳವಾಯ್ತಾಶ್ಚರ್ಯ ಪಂಚಕವಾ ಪೊಳಲೊಳಂದು || ೪ ||

ದಿವಿಜಪತಿ ಬೆಸಸಿದಡೆ ಪಾವನ | ದಿವಿಜಗಂಗಾ ಮುಖ್ಯ ತೀರ್ಥಾಂ |
ಬುವನಮಲಮಣಿಕೋಟಿ ಘಟದಲಿ ತಂದುತತ್ಪುರಿಗೆ ||
ಸವೆದು ಮಜ್ಜನ ಮಂದಿರದೊಳೊ | ಪ್ಪುವ ಮಿಸುನಿಗೊಪ್ಪರಿಗೆ ದುಂಬಿವಿ |
ಭವದಿ ದೇವಸ್ತ್ರೀಯರಾ ಮಣಿಮಯದ ಪೀಠದಲಿ || ೫ ||

ಇರಿಸಿ ಶಿವದೇವಿಯರನಾ ಭೂ | ವರನನಮರಾಂಗನೆಯರತಿ ನಿ |
ರ್ಭರ ಸುಭಕ್ತಿಯಲಮರ ಸಮಿತಿಯ ಜಯಜಯಾರವದಿ ||

ಸುರರ ವಿವಿಧಾತೋದ್ಯರವದಿಂ | ಧರೆಯ ಮಂಗಳ ಮಜ್ಜನವಿದು |
ಚ್ಚರಿಯೆನಲು ಮಾಡಿಸಿದರೆಲೆ ಭೂಪಾಲ ಕೇಳೆಂದ || ೭ ||

ಸುರ ನಿವಾಸದ ದಿವ್ಯ | ವಸ್ತ್ರಾ | ಭರಣಕುಸುಮ ವಿಲೇಪನದಿ ಆ |
ಚ್ಚರಸೆಯರೆ ಪೂಜಿಸೆ ಅವರ ಮಂಗಲ ಸುಗೀತಗಳ ||
ಸುರಗಣಿಕೆಯರು ಮಾಡಿ ಇಪ್ಪ | ತ್ತೆರಡನೆಯ ತೀರ್ಥೇಶ್ವರನ ಪಡೆ |
ವುರು ಮಹಿಮೆರಿಗೆ ಮಂಗಳಾರತಿಯೆತ್ತಿದರು ನಲಿದು || ೭ ||

ಹರುಷದಲಿ ಶಿವದೇವಿಯೆನಲಂ | ಕರಿಸಿ ನಿಚ್ಚಲುಮೆಂದು ಹೇಮ |
ದ್ಗಿರಿಯು ಮೊದಲದಮಲ ಕುಲಗಿರಿಮಸ್ತಕದಲೆಸೆವ ||
ಸರಸಿ ಪದ್ಮಾದಿಗಳೊಳಿರುತಿಹ | ಸಿರಿಯ ಹ್ರೀ ಧೃತಿ ಕೀರ್ತಿ ಬುದ್ಧಿ | ಸ
ಸ್ಫುರಿತ ಲಕ್ಷ್ಮಿಗಳೆಂಬರುವರಮರಿಯರ ಬೆಸಸಿದನು || ೮ ||

ಮಿಸುಪ ರುಚಕಾಚಲದ ಕೃತ್ರಿಮ | ವಸತಿ ಪೂರ್ವ ದಿಶಾಷ್ಟಕೂಟದ |
ಲೆಸೆವ ವಿಜಯೆ ಸುವೈಜಯಂತೆ ಮೊದಲಾದ ||
ಪೆಸರ ದಿಗ್ವನಿತೆಯರನೆಣ್ಬರ | ಬೆಸವಿದನು ಜಗದಂಬಿಕೆಗೆ ರಾ |
ಜಿಸುವ ಭೃಂಗಾರವನು ಪಿಡಿದಿರಿಯೆಂದು ದಿವಿಜೇಂದ್ರ || ೯ ||

ಆ ಗಿರಿಯ ತೆಂಕಣದಿಸೆಯಲಿಂ | ಬಾಗಿವೆರೆಮೆರೆವೆಂಟು ಕೂಟದ |
ಲಾಗಲೊಪ್ಪುವ ಸುಪ್ರತಿಷ್ಠೆಯು ಸುಪ್ರಣಿಧಿಮುಖ್ಯ ||
ಸಾಗಿಸಿರ್ದ ದಿಗಂಗನಾಷ್ಟಕ | ವಾಗುಣೋನ್ನತೆಗೊಲಿದುಮಿಗೆ ಚೆಲು |
ವಾಗಿ ಮಂಗಲ ಮಣಿಮುಕುರವಿಡಿವೂಳಿಗವನಿತ್ತ || ೧೦ ||

ಬಳಿಯನಾ ಪರ್ವತದ ಪಡುವಣ | ಹೊಳೆವ ಮಣಿಕೂಟಾಷ್ಟಕದಲು |
ಜ್ವಳಿಪಿಳಾ ದೇವಿಯು ಸುರಾದೇವಿಯನು ಜಯ [ಕಾ ದಿ] ||
ಲಲಿತದಿಕ್ಕುವರಿಯನೆಣ್ಬರ | ನೊಲಿದು ತ್ರಿಜಗನ್ಮಂಗಳಗೆ ಮಂ |
ಗಳವ ಪಾಡುವ ಗಾಯಕಿಯರಾಗೆಂದು ನೇಮಿಸಿದ || ೧೧ ||

ವಿನುತ ತದ್ಗಿರಿಯುತ್ತರದ ದಿ | ಕ್ಕಿನ ರತುನಕೂಟಾಷ್ಟಕದಲನು |
ದಿನವೆ ಮೆರೆವಂಭೂಷೆಮತ್ತಾ ಮಿತ್ರಕೇಶಿಕೆಯು ||
ಎನಿಪ ದಿಗ್ಭಾಮಿನಿಯರನು ತ | ಜ್ಜಿನ ಜನನಿಗುತ್ಸವದಿ ಚಾಮರ |
ವನು ನಿಯೋಗಿಸೆಯೆಂದು ಶಕ್ರನು ನೇಮಿಸಿದನಂದು || ೧೨ ||

ಮತ್ತದರ ಪೂರ್ವೋತ್ತರದಲಿಹ | ಚಿತ್ರೆಕಾಂಚನ ಚೇತ್ರೆ ತ್ರಿಸರೆ ಗು |
ಣೋತ್ತ ಸುತ್ರಾಮಣಿಯೆನಿಸುವವಿದಿಕ್ಕುಮಾರಿಯರ ||

ಪೆತ್ತ ಹರಿಕುಲಶರಧಿ ಶಶಿಕರೆ | ಗೊತ್ತರಿಸಿ ಮಣಿದೀಪದಾರತಿ |
ಯೆತ್ತಿಯೆಂದು ನಿಯೋಜಿಸದನಾ ದೇವವಲ್ಲಭನು || ೧೩ ||

ತದವನಿದ್ರದ ತೆಂಕಪಡುವೊ | ಪ್ಪಿದ ಚತುಷ್ಕೂಟದ ವಿಜಯೆ ಆ |
ಪದದ ವಿಜಯಂತೆಯು ಜಯಂತಪರಾಜಿತೆಯುಮೆಂಬ ||
ವಿದಿಗಧೀಶ್ವರಿಯರನು ಸುಗುಣಾ | ಸ್ಪದೆಗಮಮಳಿನ ಗರ್ಭಶೋಧನೆ |
ಮೊದಲೆನಿಪ ತದ್ಗೂಢಕಾರ್ಯವ ನೆಸಗಲಿರಿಸಿದನು || ೧೪ ||

ಉಳಿದ ಗಿರಿಗಳೊಳಿಪ್ಪ ಮಾಳಿಕೆ | ಪೊಳೆವ ಮಾಳಿನಿ ಕನಕೆ ಮೊದಲಹ |
ಪಲವು ದೇವತೆಯರನು ಪುಣ್ಯದ ಪುಂಜಭೂಮಿಕೆಗೆ ||
ಜಳಕವನು ಲೇಪನ ವಿಭೂಷಣ | ವಿಳಸದಮೃತಾಹಾರ ಮೊದಲಹ |
ಹಲವು ಸೇವೆಗೆ ಯೋಜಿಸಲು ನೆರೆತಂದುದೋರಂತೆ || ೧೫ ||

ಥಳಥಳಿಪ ನಗೆಮೊಗದ ಬೆಳಗಿನ | ಬೆಳಪ ಜೊನ್ನವ ಹಸರಿಸುತ ನಿ |
ರ್ಮಲಿಪ ಭೂಷಣಕಾಂತಿಯಿಂ ಪಸರಿಸುತ ಸುರಧನುವ ||
ತೊಳಪ ಕಂಬೆಳಗಿಂದ ನೈದಿಲ | ಬಳಗವನು ನಾಲಿಡುತ ನೋಳ್ಪರ |
ಬೆಳೆದ ಕಂಗಳ ಹಬ್ಬವೆನೆಲಮರಿಯರು ಸೊಗಯಿಪರು || ೧೬ ||

ಅಡಿಯನೂಡದೆ ಕೆಚ್ಚನಿಹ ಕೇ | ಸಡಿಗಳೊತ್ತದೆ ನಿರಿವಿಡಿದ ಕುರು |
ಳಡಿದೆಸೆವದಸಿದಾಗಿ ಕೊಂಕಿದ ನಿಡಿಯ ಪುರ್ವುಗಳು ||
ಪೊಡರ್ವ ಕಜ್ಜಳ ವೆಚ್ಚದಸಿತ | ವಡೆದದಿಟ್ಟಿಗಳೊಪ್ಪೆ ಅನಿಮಿಷ |
ಮಡದಿಯರು ಕೆಲಸಕ್ಕೆ ಬಂದರದೊಂದು ಬೆಡಗಾಗಿ || ೧೭ ||

ಸುರಿವ ರತ್ನದ ದೃಷ್ಟಿಯೊಡನ | ಚ್ಚರಿಯಲೀ ಸ್ತ್ರೀರತ್ನ ವೃಷ್ಟಿಯೆ |
ಸುರಿದುದೆನೆ ನಭದಿಂದ ದೇವಸ್ತ್ರೀ ಕದಂಬಕವು ||
ಪರಿಪರಿಯ ಸಿಂಗಾರದಲಿ ನೋ | ಳ್ಪರ ಬಗೆಯನಿರ್ಕುಳಿಗೊಳುತ ಕೇ |
ಳ್ಪರ ಕಿವಿಗೆ ವಾಕ್ಸುಧೆಯ ಪಿಂಡುತ ಬಂದರರಮನೆಗೆ || ೧೮ ||

ಪುರವ ವರತನು ಸಹಜಗಂಧದಿ | ಪರಿಮಲದ ಕರಡಗೆವೊಲಾದುದು |
ನೆರೆದ ಪರಮೆಯ ಹಿಂಸು ನೀಲದ ಮುಚ್ಚಳಿನಿಸಿದುದು ||
ನೆರವನಿತೆಯರ ಕಾಣಿವೀನೃಪ | ನರಮನೆಯಲೆನೆ ಮಿಗೆ ಸುರಸ್ತ್ರೀ |
ಯರೆ ಜಗನ್ಮಾತೆಯನು ಭಕುತಿಯಲೆರಗಿ ಬಳಸಿದರು || ೧೯ ||

ಬಳಿಕ ನೀಲ ಸುರತ್ನದಂಗಳ | ದೊಳು ಕಮಲ ಪುಷ್ಪೋಪಹಾರವ |
ಸಲಿಸಿ ತಂತಮ್ಮಯ ನಿಯೋಗದಿನಿಸುವೆ ಸೊಕ್ಕದವೆ ||

ನಳಿನವಧುಲಕ್ಷ್ಮಿಯ ಕರದಲಿಹ | ವಿಳಸನವ – ನಿಳಿಪುತ್ತೆ ಮುತ್ತಿನ |
ಥಳಥಳಿಪ ಸತ್ತಿಗೆಯ ಪಿಡಿದಳು ದೇವಿಗಮರವಧು || ೨೦ ||

ಪರಮ ಭಾಗ್ಯೆಯ ಪುಣ್ಯಶರಧಿಯ | ತೆರೆಗಲೆನೆ ಚಾಮರಗಳಿರದಿ |
ತ್ತರದಲಾಡಿದ ವಮರಿಯರ ಕಂಕಣ ಝಣತ್ಕೃತಿಯಿಂ |
ದರಹಸಿತ ವದನಕ್ಕೆ ತಿಂಗಳ | ತಿರುಳ ತುಂಡನೆ ಪೊಳವುತಿರೆ ಸುರ |
ತರುಣಿಯೊಳು ಬೆಳ್ಳಿಲೆಯನು [ರು ಸಂತಸದಿ] ನೀಡಿದಳು || ೨೧ ||

ಅನುಪಮೆಯ ಮುಖಕಮಲಕೆಣೆಗಡ | ವನಜವೆಂದದ ತೋರ್ವವೊಲು ಕಾಂ |
ಚನದಡವಕೆಯ ಪಿಡಿದಳಾ ನಗೆಮೊಗದ ಕೆಳೆಗೋರ್ವ ||
ಅನಿಮಿಷಾಂಗನೆ ಮತ್ತಮಾಜಿನ | ಜನನಿಯಾನನ ಶಶಿಗೆ ನೆರೆ ಶಶಿ |
ಅನುನಯಕೆ ಬಂದಂತೆ ತೋರಿದಳಮರಿ ದರ್ಪಣವ || ೨೨ ||

ದೇವಕಾಮಿನಿಯೋರ್ವಳಾ ಶಿವ | ದೇವಿ ಯಕ್ಷ್ಗಗೆ ಕಜ್ಜಳವ ಪರಿ |
ಭಾವಿಸಿದ ನಿಡುಸೋಗೆಧೃಗುಪುತ್ರಿಕೆಯ ಸೋರ್ಮುಡಿಯ ||
ಭಾವವಾಗಿರೆ ಕರ್ಬುವಿಲ್ಗಳ | ನೇವರಿಪವೊಲು ಮತ್ತಲೋರ್ವಳು |
ದೇವಿ ಕುಡುವುರ್ವುಗಳ ತಿದ್ದಿದಳೊಂದು ಸೊಬಗಿನಲಿ || ೨೩ ||

ಮೊಗಸಸಿಗೆ ಮೃಗಲಾಂಛನದ ಚೆಲು | ವೊಗೆಯೆ ರಚಿಸುವ ತೆರದಿ ಬರೆದಳು |
ಮೃಗ ಮದದಿ ಕದಪಿನಲದೋರ್ವಳು ಪತ್ರಭಂಗವನು ||
ಸುಗುಣೆರನ್ನೆಯ ವಕ್ತ್ರ ಚಂದ್ರನ | ನಗಲದೊಲಗೀಸಲ್ಕೆ ವಂದಾ |
ಭಗಣಗಣವೆನೆ ಮುತ್ತಿನೋಲೆಯನಿಟ್ಟಳೋರ್ವಮರಿ || ೨೪ ||

ಹಾರವಿದು ನೀಹಾರ ಕೀರ್ತಿಗೆ | ಹಾರವಾಗಿದೆಯೆಂದು ಪೊಗಳ್ದಾ |
ಹಾರವಧಿ ಹಾರವನು ಅಮೃತಾಹಾರೆಯುರದೆಡೆಗೆ |
ಸೇರಿಸಿದಳ ಸ್ವಪ್ನವದು ಬಳಿ | ಕಾರಮಣಿಯರು ತಮತಮಗೆ ಕೈ |
ಯಾರೆ ನಾಕದ ರನ್ನದೊಡವನು ತೊಡಿಸಿದರು ನಲಿದು || ೨೫ ||

ನಿರಿವಿಡಿದು ದಿವ್ಯಾಂಬರವನಾ | ಯೆರೆಗಳಿಗೆ ತಾವುದಿಸಿ ಈ ಸತಿ |
ನಿರಿಯ ಹೋತುದೆ ಸಫಲವೆಂದರು ಯಕ್ಷಕರ್ದಮವ ||
ಮೆರೆಯೆ ವಿರಚಿಸಿ ಪರಮೆನೆರೆಪರಿ | ದೆರಪ ಸುರತರು ಕುಸುಮದಾಮಮು |
ತರುಬಿದರು ನೋಡಿದರು ಕೊಂಡಾಡಿದರು ಚೆಲುವಿಕೆಯ || ೨೬ ||

ಅಂಗರಕ್ಷೆಯ ದೇವಿಯರು ಪಲ | ವಂಗದಾಯುಧಗಳ ಹಿಡಿದ ವಿಮ |
ಲಾಂಗಿಯನು ಬಳಸಿದರು ಕಟ್ಟಿಗೆವಿಡಿದು ಓಲಗದ ||

ಅಂಗನೆಯರನು ಪಡಿಯರತಿಯರು | ಸಂಗೊಳಿಸಿ ಜಡಿಕೆಯಿದು ನಿಲಿಸಿದ |
ರಿಂಗೊರಳನುಣ್ಚರದಿ ಹೋಹೋ ಗಲಭೆ ಬೇಡೆಂದು || ೧೭ ||

ತೊಳಪ ವೀಣೆಯನಚ್ಚರಿಸಿಯೋ | ರ್ವಳು ಪಿಡಿದು ಬಾಜಿಸಲು ದಂಡಿಗ |
ತಳಿತುದೋಯೆನಿಸಿದುದು ಕೆಂದಳದೊಂದು ಕೆಂಪಿನಲಿ ||
ಬಳಸಿದೋಲಗದೊಳಗೆ ಅಮರ್ದಿನ | ಸಳಿ ಸುರಿದುದೆನೆ ರಾಗರಸ ಪೊಂ |
ಪುಳಿವೊಡೆದುದಾಯೆಂದು ದೇವಿಯು ಮೆಚ್ಚುವಂದದಲಿ || ೧೮ ||

ಕಾಂಚನವೆ ಪರಿಮಳಿಸಿತೆಂಬವೊ | ಲಿಂಚರದಿ ಸಂಗೀತ ರಸದಲಿ |
ಮಿಂಚು ಕವಿಗಳ ಪಲವು ರಸಗಬ್ಬವನು ಗಮಕದಲಿ ||
ಉಂಚದಲಿ ಮೆರೆದೋದಿ ಮಿಗೆ ರೋ | ಮಾಂಚನದ ದೇವಿಗೆ ಪಡೆದಳವ |
ಳೇಂ ಚದುರೆಯೋ ದೇವಪಾಠಕ ಸಭೆಯನೊಲಿಸಿದಳು || ೧೯ ||

ಅಚ್ಚರಿಸಿ ಚಿತ್ರೈಸೆನುತಲಾ | ಅಚ್ಚರಸಿಯರ ಮೇಳದಲಿ ಸುರ |
ನಚ್ಚಣಿಯು ಭೂಮಿಯನು ಮೆಟ್ಟದೆ ಮೆಟ್ಟುತಿರೆಜತಿಗೆ ||
ಇಚ್ಚೆಸುವರಚ್ಚೆಗಳ ಮೋಹದ | ಮಚ್ಚುಮದೊಡ್ಡಲಿಟ್ಟುದೆನೆ ಸತಿ |
ಮೆಚ್ಚೆ ಸಭೆಯಿಚ್ಛೈಸೆ ನಚ್ಚೆಸಿದಳು ಮನೋಹರದಿ || ೧೯ ||

ಅಚ್ಚರಿಸಿ ಚಿತ್ರೈಸೆನುತಲಾ | ಅಚ್ಚರಸಿಯರ ಮೇಳದಲಿ ಸುರ |
ನಚ್ಚಣಿಯು ಭೂಮಿಯನು ಮೆಟ್ಟದೆ ಮೆಟ್ಟುತಿರೆಜತಿಗೆ ||
ಇಚ್ಚೆಸುವರಚ್ಚೆಗಳ ಮೋಹದ | ಮಚ್ಚುಮದೊಡ್ಡಲಿಟ್ಟುದೆನೆ ಸತಿ |
ಮೆಚ್ಚೆ ಸಭೆಯಿಚ್ಛೈಸೆ ನಚ್ಚೆಸಿದಳು ಮನೋಹರದಿ || ೨೦ ||

ಭೂನುತೆಯ ಅವಸರವರಿದು ತಾಂ | ಸ್ನಾನವನು ಮಾಡಿಸುವ ಮರ್ದಿನ |
ಬೋನವನು ಸವೆವರ್ತಿಯಿಂದೆಡೆ ಮಾಡುವುಣಲಿಡುವ ||
ಏನು ಬೆಸನೆಂಬೊಯ್ಯನತಿ ಸುಯಿ | ಧಾನದಲಿ ಕೈಗೊಡುವ ಬಗೆ ಸಂ |
ಧಾನದಿಸುವೆಸಮುಪ್ಪಿದುದು ಸುರರಮಣಿಯೊಳರಂದು || ೨೧ ||

ಪಡಿಗವಿರಿಸುವ ಹಾವುಗೆಯ ಮೆ | ಲ್ಲಡಿಗಿಡುವ ಮಣಿಮಂಚವನು ಹ |
ಚ್ಚಡಿಪ ಪಾದವನೊತ್ತುವುಯ್ಯಲ ತೂಗುವೊರಗಿಸುವ ||
ಮುಡಿಯ ಹಿಕ್ಕುವ ಮಾಲೆಗಟ್ಟುವ | ಮಡಿವಳತಿವೊಲು ಸತಿಗೆ ಸಗ್ಗದ |
ಮಡಿಯ ನಡಯಿಸು ಈಸು ವ್ಯಸನೆಯೆವೆದೆರೆ ಹೆಂಗಳಲಿ || ೨೧ ||

ಕತ್ತುರಿಯ ಕೆಸರಿನಲಿ ಸಾರಿಸಿ | ಮುತ್ತಿನಲಿ ಕಡೆಯಿಕ್ಕಿ ಧೂಪವ |
ನೆತ್ತಿ ಸುರಕುಜ ಕುಸುಮದಲಿ ಪೂವಲಿಗೆದರಿಯಿತ್ತ ||

ಅತ್ತಲರುಹನ ಪೂಜೆಗಾಕೆಯ | ಚಿತ್ತವರಿದೆಡೆಮಾಡಿ ಸಂತಸ |
ವೊತ್ತರಿಸಿ ಕಂಣರಿದು ಸೇವೆಯ ಮಾಳ್ಪರಮರಿಯರು || ೩೩ ||

ಜಿನಜನನಿ ನೋಂತಂತೆ ನೋಂತಾ | ವನಿತೆ ಯಾವಳೊ ಸೇವಕಿಯರಾ |
ಅನಿಮಿಷಾಂಗನೆಯರು ಸುಧಾಶನ ಸಾರಭೂಜವನು ||
ಅನುದಿನವು ವಸ್ತ್ರಾಭರಣ ಲೇ | ಪನಕುಸುಮವುಡತೊಡಲು ಪೊನಲು |
ತನಗೆ ಸೂಡಲು ದಿವದಿ ಬಹವೆನಲೇನ ಹೇಳುವೆನು || ೩೪ ||

ಅಲಸದಿಂತರುದಿಂಗಳನು ಮೀ | ಲಲನೆಯರು ಶಿವದೇವಿಯನು ತಾಂ |
ತೊಲಗದತಿಭಕ್ತಿಯಲಿ ಸೇವೆಯ ಮಾಡುತಿರಲೊಡನೆ ||
ಸಲೆ ಜಿನಾರ್ಭಕನದ ತರಿಸುವೊಡೆ | ನೆಲೆವಡುವುದೆಂಬೊಂದು ಕಾಲದೋ |
ಳೊಲಿದಮರತರ ಗರ್ಭ ಶೋಧನೆಯೌಷಧಿಗಳಿಂದ || ೩೫ ||

ತಿಳಿಯೆ ಗರ್ಭವ ಶೋಧಿಸಿದರಾ | ಲಲನೆಯರು ಬಳಿಕಾ ಜಿನಾಂಬಿಕೆ |
ಪೊಳೆವ ಪುಣ್ಯದ ಪುಂಜವೆನೆ ತೊಳ ತೊಳಗಿ ಬೆಳಗಿದರು ||
ತಿಳಿದ ತನಿವಾಲಿನಲಿ ಮಿಗೆ ನಿ | ರ್ಮಳಿಸಿತೊಳೆದಾ ಮೌಕ್ತಿಕದ ಪು |
ತ್ಥಳಿಯೆನಿಸಿದಳು ಪಾವನೋದರಿ ತನುವೆಳಗಿನಿಂದ || ೩೬ ||

ಶರಧಿ ರತ್ನವನಾಂತು ರತ್ನಾ | ಕರವೆನಿಸಿದಂತಾ ಮಹಾತ್ಮನೆ |
ಪೊರೆವನೆಮಗಮ್ಮಿಂದ ಧನ್ಯನದಾರೆನುತ ನಲಿದು ||
ಶರಧಿ ವಿಜಯ ನೃಪಾನ ಭೂನುತ | ನರಸಿ ಶಿವದೇವಿಯರು ಸುಖದಿಂ |
ದಿರಲೊಡನೆ ಮತ್ತೊಂದು ದಿನ ಭೂಪಾಲ ಕೇಳೆಂದ || ೩೭ ||

ನಳನಳಿಪ ನವ ಚೂತಲತಿಕೆಗೆ | ಫಲಕೆ ಕಾರಣಮಾದ ಋತು ನಿ |
ರ್ಮಲ ವಸಂತವು ಸಾರ್ವವೊಲು ಋತುಸಮಯ ಸಾರಿದುದು ||
ಲಲನೆ ಮಾಣಿಕ ಗಂಡಳೆಂದತಿ | ಬಳೆದರಾಗದಿ ತಮತಮಗೆ ಕನ |
ಸಳಿದ ಮಡದಿಯರಳ್ತ ಬಡುವರು ಭೂಪ ಕೇಳೆಂದ || ೩೮ ||

ತರುಣಿರತ್ನ ಚತುರ್ಥದಿನದೊಳು | ಸುರಸತಿಯರೊಡನೆಂದಿನಂದದಿ |
ಪರಿಮಳಿತ ಪಾವನ ಜಲದ ಹೊಂಗೊಪ್ಪರಿಗೆಗಳಲಿ ||
ಅರೆದ ಕಮ್ಮನೆ [ಸುವಾಸನೆ]ಯಲಿ | ಮೆರೆವ ಮಜ್ಜನಶಾಲೆಯನು ಸೌಂ |
ದರಿ ಸಮೇಳದಿ ಪೊಕ್ಕು ರನ್ನದ ಮಣೆಯಲಿರಲೊಡನೆ || ೩೯ ||

ಪರಿಪರಿಯ ಕಮ್ಮೆಣ್ಣೆಯನು ಅ | ಚ್ಚರಸೆಯರು ತೆಗೆತಂದು ತಮ್ಮೊಳು |
ನಿರಿಯನುರೆ ಸಂವರಿಸಿ ಕಾಂಚಿಯಬಿಗಿದು ಸಿರಿಮುಡಿಯ ||

ಕುರುಳುಗಳು ಕುಣಿದಾಡೆ ಪೆರ್ಮೊಲೆ | ಯುರವಣಿಸೆ ಪಾಲಿಕೆಯಲುಗೆ ತೋ |
ಳೆರಡೊಲೆಯೆ ತಲೆ ಪೂಸಿದರು ಶಿವದೇವಿಗೊಲವಿನಲಿ || ೪೦ ||

ಸಿರಿಗೆ ಕರಿಗಳು ಪೊಂಗೊಡಂಗಳೊ | ಳಿರದೆ ಮಜ್ಜನಕೆರೆವವೊಲು ಸೌಂ |
ದರಿಗೆ ಪೊಂಗಳಸಗಳ ಪರಿಮಲ ಜಲವನನವರಿದು ||
ಹರುಷದಲಿ ಮಜ್ಜನಗೊಳಿಸಿದರು | ಸಿರಿಮುಡಿಯ ಹಿಂ[ಬದಿಗೆ ಬಿ]ಡಿಸಿದ |
ರಿರಿಸಿದರು ಮಣಿ ಪಾದುಕಂಗಳನರಸ ಕೇಳೆಂದ || ೪೧ ||

ಇರೆ ನೆನೆದ ನಿಡುಗೇಶ ಭಾರವ | ಮುರಿದು ನೆಗೆದಡೆಗೈವಿಡಿದು ಮಿಗೆ |
ಗುರುಕುಚಂಗಳು ನೂಂಕುವಂಶುಕವವುಂಕಿಕಕ್ಷದಲಿ ||
ಸುರತರುಣಿ ಕೈಗೊಡಲು ಬಲಗೈ | ಇರಿಸಿ ಮಣಿವಾವುಗೆಯ ಗೆಜ್ಜೆಯೆ |
ವಿರುತಿ ಕಬ್ಬಿನ ಬಿಲ್ಲು…ಗೆಳೆ ಬಂದಳಾ ದೇವಿ || ೪೨ ||

ಮುನ್ನವೇ ದಿವದಿಂದ ತಂದ ಮ | ಹೋನ್ನತಿಯ ವಸ್ತ್ರಾದಿಯಿರುತಿಹ |
ರನ್ನಮಯ ಸಿಂಗಾರ ಮಂಟಪ ರತ್ನ ಪೀಠದಲಿ ||
ಚೆನ್ನೆಯನು ಕಾಲೋಚಿತಕೆ ತ | ಕ್ಕನ್ನವಹ ವಸ್ತ್ರಾದಿಯಿಂ ಸುರ |
ಕನ್ನೆಯರು ಬೆಳುವಸದನಂಗೊಳಿಸಿದರು ಸೊಬಗಾಗಿ || ೪೩ ||

ಥಳಥಳಿಪ ನಖವೆಳಗುದುಗುಲದ | ಬೆಳಗು ಹರಿಚಂದನ ವಿಲೇಪದ |
ಬೆಳಗು ಹೊಸಮುತ್ತುಗಳ ತೊಡಿಗೆಯಬೆಳಗುಮುಡಿದರಲ ||
ಬೆಳಗು ಲೋಚನ ದೀಧಿತಿಯ ಬೆಳು | ವೆಳಗು ಸುಲಿಪಲ್ವೆಳಗುಮೆಳೆ ನಗೆ |
ವೆಳಗು ತನುವೆಳಗೆಸೆಯೆ ಬೆಳಗಿನ ದೇವಿಯೆನಿಸಿದಳು || ೪೪ ||

ಪೊಳೆವ ಮುತ್ತಿನ ಬೊಂಬೆಯೋ ತಿಂ | ಗಳ ತಿರುಳ ಪುತ್ರಿಕೆಯೊ ಕಪ್ಪುರ |
ವಳುಕಿನಲಿ ಬಿದಿಕಡೆದು ತಿದ್ದಿದ ಸಾಲಭಂಜಿಕೆಯೊ ||
ಪಳುಕಿನಲಿ ಮನಸಿಜ ಸಮೆದ ಪು | ತ್ಥಳಿಯೊಯೆನೆ ಬೆಳಗುವ ಸದನದ ತನಿ |
ವೆಳಗಿನಲಿ ಶಿವದೇವಿ ಬಂದಳು ಸೂಳ್ಗೆ ನಿಜಪತಿಯ || ೪೫ ||

ಘಸೃಣರಸ ಕಾರಣೆಯುಕತ್ತುರಿ | [ಕೆಸ]ರಸಾರನೆ ಕಪ್ಪುರದ ಕಡೆ |
ಕುಸುಮದಲಿ ಅಗರುವಿನ ಪೊಗೆ ತುಂಬಿಗಳ ಸೆರೆಪಿಡಿಯೆ ||
ಮಿಸುಪ ಮಾಣಿಕದೀಪಗಳೆ ತೋ | ರಿಸಿದವಳ ತತ್ಫಲವನು ಸುಖದಾ |
ವಸದ ವೆನಿಸುವ ಸಜ್ಜೆವನೆಯನು ಪೊಕ್ಕಳಾ ದೇವಿ || ೪೬ ||

ಸುರತರುವಿನೊಳು ಕಲ್ಪಲತೆ ತೊಡ | ರ್ದಿರವಿನಿಂ ಸ್ಮರಮಂ [ಡಪ ದಂ]ತೆ |
ವರ ಸಮುದ್ರ ವಿಜಯ ಮಹಾರಾಯನೊಳು ಶಿವದೇವಿ ||

ಸರಸ ಮೇಳದಲಿರಲನುತ್ತರೆ | ಯುರು ಜಯಂತ ವಿಮಾನದಲಿ ಮು |
ನ್ನೊರೆದ ಅಹಮಿಂದ್ರನೆ ನಿಜಾಯುವ ಕಡೆಯೊಳೈತಂದು || ೪೭ ||

ವಿದಿತ ಕಾರ್ತಿಕಮಾಸ ಸಿತಪ | ಕ್ಷದಲಿ ವರ ತಿಥಿಷಷ್ಠಿಯಲಿ ಬಂ |
ದೊ [ದವಿದ ನ]ಕ್ಷತ್ರೋತ್ತರಾಷಾಢದ ನಿಷಾಂತದಲಿ ||
ಸುದತಿ ಶಿವದೇವಿಯರ ಮುಖಕುಹ | ರದಲಿ ಪೊಕ್ಕತಿ ವಿಮಲತರ ಗ |
ರ್ಭದಲಿಯಿಪ್ಪತ್ತೆರಡನೆಯ ತೀರ್ಥೇಶ ನೆಲಸಿದನು || ೪೮ ||

ಸರಸಿಯಲಿವಿಧು ಬಿಂಬ ಬಿಂಬಿಸಿ | ದಿರವಿನಲಿ ತ್ರಿಜ್ಞಾನಧರ ಬಂ |
ಧುರ ವಿಮಲ ಗರ್ಭದಲಿ [ವಾಸಿಸು]ವುದು ಮಹಾದೇವಿ ||
ಹರುಷದಲಿ ಪವಡಿಸಿದಳಿರುಳೋ | ಸರಿಪ ಬೆಳಗಹ ಜಾವದಲಿ ಸೌಂ |
ದರಿ ಶುಭಸ್ವಪ್ನಂಗಳನು ಕಂಡಳು ಮನೋ ಮುದದಿ || ೪೯ ||

ತ್ರಿದಶವಧುಗಳು ಪಾಡುವುಪ್ಪವ | ಡದ ಸುಮಂಗಲರವವು ಕಿವಿಯೊಳು |
ಪುದಿಯಲುಪ್ಪವಡಿಸಿ ವಿಮಲ ನಿತ್ಯಕ್ರಿಯೆಯನೆ ನಡಪಿ ||
ಸುದತಿಯರ ತಲೆ ರನ್ನವತಿ ಹರು | ಷದಿ ನಿಜೇಶನ ಕೂಡೆ ಹರಿಪೀ |
ಠದಲಿ ಮಂಡಿಸಿ ಕಂಡ ಕನಸನು ಪೇಳ್ದಳಿಂತೆಂದು || ೫೦ ||

ಸುರಕರಿಯು ವೃಷಭೇಶ ಕೇಸರಿ | ಸಿರಿ ಲಸನ್ಮಾಲಾದ್ವಯವು ಶಶಿ |
ತರಣಿ ಮೀನದ್ವಿತಯ ಕಳಸಯುಗಲ ಸರಸಿಶರಧಿ ||
ಹರಿವಿನಿಷ್ಟರ ಸುರವಿಮಾನವು | ಉರಗ ಭವನವು ರತ್ನಪುಂಜವು |
ಉರಿವ ಶಿಖಿಯೆಂಬೀ ಕನಸು ಪದಿನಾರು ತೋರಿದವು || ೫೧ ||

ಎರೆಯ ಈ ಕನಸುಗಳ ಕಂಡೆವೆ | ದೆರೆದೆನಿವರ ಫಲಂಗಳನು ನನ |
ಗರುಪಿಮೆನೆ ಸಂತಸದಿ ಪುಳಕದ ಗುಡಿಯ ಕಟ್ಟಿದನು ||
ಅರಿರಮಣಿದಾನೇಬದಿಂ ಜಗ | ಕುರುವದಾನಿಯ ವೃಷಭನಿಂದರ |
ನೆರೆಯ ಅಘರಿಪು ಕರಿರಿಪು [ವಿನಿಂ] ದರಸಿ ಕೇಳೆಂದ || ೫೨ ||

ಸಿರಿಯನುಭಯ ಶ್ರೀಪತಿಯು ಭಾ | ಸುರ ಕುಸುಮಧಾಮದಿ ಜಗತ್ತ್ಯೇ |
ಖರನಮೃತ ರೋಚಿಯಿನಮೃತಪತಿಮಿತ್ರನಿಂ ಜಗಕೆ ||
ಪರಮ ಮಿತ್ರನು ಅನಿಮಿಷಂಗಳಿ | ಮರುತರಾನಿಮಿಷೇಂದ್ರ ವಂದ್ಯನು |
ಸುರುಚಿರೋದಕ ಪೂರ್ಣಕುಂಭದಿ ಸುಗುಣ ಪೂರ್ಣಮನು || ೫೩ ||

ಸರಸಿಯಿಂ ಸುಚರಿತ್ರ ಸರಸಿಯ | ಶರಧಿಯಿಂದೆ ದಯಾಶರಧಿ ಕೇ |
ಸರಿ ಸುಪೀಠದಿ ಮೂಜಗದ ಸಿಂಹಾಸನಾಧೀಶ ||

ಸುರವಿಮಾನದಿ ಸಮವಶೃತಿಗಧಿ | ವರನು ಭೋಗಿ ನಿವಾಸದಿಂದ |
ಚ್ಚರಿಯ ಭೋಗಾಸ್ಪದನೆಲೆ ವರವನಿತೆ ಕೇಳೆಂದ || ೫೪ ||

ಪೊಳೆವ ರನ್ನದ ಪುಂಜದಿಂ ನಿ | ರ್ಮಲಸುಗುಣ ಪಂಜನೊಪ್ಪುವು |
ಜ್ವಲದನಳ ಬೋಧಮೂರ್ತಿಯೆನಿಪ್ಪ ಸುಕುಮಾರ ||
ಲಲನೆ ನಮಗಹನೆನಲು ಸೋಗೆಯ | ಜಲದನಿನದದಿ ನಲಿವವೊಲು ನಲಿ |
ದಳುನಿಜೇಶನ ಮೃದುಮಧುರ ವಚನದಿ ಜಿನಾಂಬಿಕೆಯು || ೫೫ ||

ಲಲನೆಯರ ಮಾಣಿಕದ ಮನದಲಿ | ನೆಲಸೆ ಸಂತಸವಂಗದಲಿ ಸಲೆ |
ನೆಲಸೆವಿಮಳಿನ ಕಾಂತಿದಿಟ್ಟಿಯೊಳತಿಶಯ ವಿಳಾಸ ||
ನೆಲಸೆ ದಿವಿಜವ್ರಜಕೆ ಭಕ್ತಿಯು | ನೆಲಸೆ ಜನಕಂಗತಿ ಹರುಷರಸ |
ನೆಲಸೆ ಗರ್ಭದಲಿ ನೆಲಸಿದನಾ ಜಿನಾರ್ಭಕನು || ೫೬ ||

ವಿತತ ಲೋಕಾಲೋಕವನು ತ | ನ್ನತುಳ ಬೋಧದಲಳವಡಿಸಿ ಸಂ |
ಸ್ತುತನದೆಂದುಂ ಬಳಲನೆಂದುಂ ಸೂಚಿಸುವತೆರದಿ ||
ಸತಿ ನಿಧಾನದ ಗರ್ಭದೊಳು ಬೆಳೆ | ಯುತೆ ಜಗದ್ಗುರುವಿರ್ದುಮಾ ಸ |
ನ್ನುತೆಗೆ ಬಳಲಿಕೆದೊರದೆನತಿಶಯವಾಗಿ ನಿರುಪಮನ || ೫೭ ||

ಉದಿತಸ ಭುವನತ್ರಯ ಗುರುವು ಗ | ರ್ಭದೊಳಗಿರ್ದುಂ ಭಾರಪೀಡೆಯು |
ಸುದತಿಗಾಗದು ಮುಕುರದೊಳು ಕುಲಪರ್ವತದ [ಒಡ]ಲು ||
ಪುದಿದೊಡೇನದು ಭಾರಪೀಡೆಯ | ನೊದವಿಪುದೆ ಸರ್ವಜ್ಞವಿದ್ಧಾ |
ಸ್ವದದೊಳಲಸಿಕೆ ಜಡತೆಯುಂಟೇ ಭೂಪ ಕೇಳೆಂದ || ೫೮ || ಸ

ತೆಳುವಸುರು ಪೊರೆಯೇರದಾ ಹೊಂ | ಗಳಸ ಮೊಲೆ ತುದಿ ಕಂದದಾ ಬ |
ಳ್ವಳಿಕೆಗುಂದದು ಬಾಸೆ ತ್ರಿವಳಿಯವೇಕೆ ಮಸುಳಿಪವು ||
ಹೊಳೆವ ಮೊಗಬೆಳುಕರಿಸದೆನೆ ಕೋ | ಮಲೆ ತಳೆದ ಗರ್ಭವದು ವಸುಧಾ |
ತಳದೊಳತಿ ಸೋಜಿಗವು ಭಾವಿಸುವೊಡೆ ಜಿನಾಂಬಿಕೆಯ || ೫೯ ||

ಪುಟ್ಟುತವೆ ತ್ರಿಜ್ಞಾನಧರನು ತ್ರಿ | ವಿಷ್ಣಪಾಧಿಪನೆನಿಪುದು ಈ |
ಸೃಷ್ಟಿಗರಿಪುವ ತೆರದಿ ಜ.........ರ್ಮೆ ಬಲಗೊಳಲು ||
ನೆಟ್ಟನರಿವರು ಸಂದೆಗವ ನೆರೆ | ಯಟ್ಟೆ ನಿಖಿಳಾರ್ಥವನೆನಲು ಸಂ |
ತುಷ್ಟ ಚಿತ್ತೆಯ ಮಹಿಮೆಯನು ಬಣ್ಣಿಸುವೊಡಾರಳವೆ || ೬೦ ||

ಅರಸಗಾ ನಿಜ ದಿವ್ಯ ಕಾಂತೆಯೊ | ಳುರುತರಾಂಗಜ ಸುಖವ ಸಗ್ಗದ |
ಪರಿಯಲಾ ದೃಷ್ಟಿ ಪ್ರವೀಚಾರದಲಿ ಸೇವಿಪನು ||

ಸುರಪಕೃತ ವಿಭವಾತಿಶಯಮೆನೆ | ಪರಮನೀ ಗರ್ಭಾವತರಣ |
ಸ್ಫುರಿತ ಕಲ್ಯಾಣವನು ಬಣ್ಣಿಸ ಬಲ್ಲ ಕವಿ ಯಾರೊ || ೬೧ ||

|| ಅಂತು ಸಂಧಿ ೩೨ಕ್ಕಂ ಮಂಗಲಮಹಾ ||

## ಕಲ್ಯಾಣ ಪರ್ವ (ಸಂಧಿ ೩೩)

**ಸಂಧಿ ೩೩**

ಶ್ರೀಮದರಮರಾಧೀಶನೊಲವಿಂ | ನೇಮಿಜಿನ ಜನ್ಮಾಭಿಷೇಕ ಮ |
ಹಾಮಹಿಮೆಯನು ಮಾಡಿದನು ಸಮ್ಯಕ್ತ್ವ ಶೇಖರನು || ಪಲ್ಲ ||

ತೀವೆ ನವಮಾಸವು ಬಳಿಕ್ಕಾ | ಶ್ರಾವಣದ ಸಿತಪಕ್ಷ ಷಷ್ಠಿಯೊ |
ಳಾವರಿಸಿ ಮೆರೆವುತ್ತರಾಷಾಢದೊಳು ವಿಮಲತೆಯ ||
ಭಾವಿಸಿದ ಶುಭಯೋಗದೊಳಗಾ | ತಾವರೆಯ ಸಖನುದಯದಲಿ ಶಿವ |
ದೇವಿ ಪಡೆದಳು ಬಳಲದತಿ ಸೌಖ್ಯದಲಿ ಪುತ್ರನನು || ೧ ||

ಕಡುಮೆರೆವ ಪೂರ್ವಾಸೆ ಸೂರ್ಯನ | ಪಡೆವವೊಲು ಲೋಕಕ್ಕೆ ದೃಷ್ಟಿಯ |
ಪಡೆವವೊಲು ದೇವೇಂದ್ರ ಭಕ್ತಿ ಸುಲತೆಗಡರ್ಪುಮನು ||
ಪಡೆವವೊಲು ಶಿವದೇವಿ ಪುತ್ರನ | ಪಡೆದಳಾ ಸಮಯದಲಿ ದೆಸೆಗಳು |
ಕಡುಬೆಳಗಿದವು ಸೂರ್ಯನುದಯಿಸೆ ತಮತೆರಳಿದಂತೆ || ೨ ||

ಮಲರಹಿತನಾ ಕುವರನೆಂಬುದ | ತಿಳಿಪುವಂತೆ ಜಲಾಶಯಂಗಳು |
ತಿಳಿದವೆತ್ತಲು ಗಗನತಳ ನಿಮೇಘವಾದಪುದು ||
ಬೆಳೆದ ಕಲುಮುಳು ಧೂಳಡಗೆ ಪೊಗೆ | ಯಳಿದು ಬಲಮುರಿಯಾಗುರಿದುದಾ |
ಜ್ವಲನವೊಯ್ಯನೆ ಕಂಪು ತಂಪಿಂ ಸುಳಿದುದೊಂದೆಲರು || ೩ ||

ಒಂದುಗೂಡಿದವಾರು ಋತುಗಳು | ಎಂದೆನಿಪವೊಲು ತಳಿರಲರುತಾ |
ಯಿಂದ ಮರಗಿಡ ಬಳ್ಳಿಗಳು ನಳನಳಿಸಿ ಸೊಗಯಿಪವು ||
ಒಂದೆ ಕೊರಳಲಿ ಶುಕಪಿಕಾಳಿಗ | ಳಿಂದನಿಯ ನೀವವು ಸರದೊಳರ |
ವಿಂದ ಕುಮುದಗಳರಳಿಹವು ಹಗಲಿರುಳ ಕೆಳೆಗೊಳದೆ || ೪ ||

ಪುರಗೃಹಾಂಗಣವೆತ್ತಲುಂ ಪಿಂ | ಜರಿತ ಪಿಷ್ಟಾತಕಮೆ ಕಾಳ್ಪುರ |
ವರಿವ ಕುಂಕುಮ ರಸವೆ ಮತ್ತಾ ಬೀದಿ ಬೀದಿಯೊಳು ||

ತರತರದ ಪೂವಲಿಯೆ ಮುತ್ತಿನ | ಪರಿಪರಿಯ ರಂಗವಲಿ ರನ್ನದ |
ಪಿರಿಪಿರಿಯ ಗುಡಿ ತೋರಣ ಧ್ವಜರಾಜಿವೊಪ್ಪಿದವು || ೫ ||

ಒಸಗೆ ಮಸಗಿದ ತೆರದಿ ದೆಸೆದೆಸೆ | ಮುಸುಕಿದುದು ಬದ್ಧವಣಖುತಿ ಸಂ |
ತಸದೆ ಬಹ ಹೋಹುಜ್ಜುಗದ ಪುರಸತಿಯರಂದುಗೆಯ ||
ಮಿಸುಪದನಿ ಪಾಠಕರ ಗಾಯಕ | ರೆಸೆವ ರವವರಸಂಚೆ ಕೊಂಚೆ ಹ |
ರುಷದ ಶುಕಪಿಕ ಶಿಖಿ ಮದಾಳಿ ಸ್ವನಮೆ ಪುರದೊಳಗೆ || ೬ ||

ವರಸಮುದ್ರ ವಿಜಯ ನರಾಧಿಪ | ನರಮನೆಯಳೊಳಗಂ ಪೊರಗಮನು |
ಜರಸತಿಜಯರಚ್ಚುತನ ಪಿತನರಸಿಯರು ಬಲ ಹರಿಯ ||
ಅರಸಿಯರು ಅಕ್ರೂರ ಮುಖ್ಯರ | ಅರಸಿಯರು ಪ್ರದ್ಯುಮ್ನ ಭೂವರ |
ನರಸಿಯರು ಅಚ್ಚರಸೆಯರು ಮುಸುಕಿದರು ಹರುಷದಲಿ || ೭ ||

ಸೇಸೆಯಿಕ್ಕುವ ಪಾಗುಡಂಗೊಡು | ವೀ ಸಮಯದೊಳಗತ್ತ ನಾಕಾ |
ವಾಸದೊಳು ಸುರರೆರಗದೆರಗಿದವವರ ಮಕುಟಗಳು ||
ಆ ಸುರದ್ರುಮ ಕುಸುಮ ಕೊಯ್ಯದೆ | ಸೂಸಿದವು ಬಾಜಿಸದೆ ಮೊಳಗಿದ |
ವಾ ಸುರಾನಕವಾ ತ್ರಿಲೋಕಾಧೀಶನತಿಶಯದಿ || ೮ ||

ಉರಗ ಲೋಕದಲಮಳ ಶಂಖ | ಸ್ವರವು ವ್ಯಂತರ ಲೋಕದೊಳು ನಿ |
ರ್ಭರಸುಭೇರೀರವವು ಜೋತಿರ್ಲೋಕದಳು ಖಿಳ ||
ಕರಿರಿಪು………………. | ಪುರದೊಳಗೆ ಘಂಟಾ ವಿರುತಿಜಿನ |
ನರಡನೆಯ ಕಲ್ಯಾಣವೆಂದರುಹಿದವು ಭಾಜಿಸದೆ || ೯ ||

ಉರಗರೊಪ್ಪುವ ಭವನ ಲೋಕದಿ | ನಿರದೆ ನಂದನ ವನಗಳಿಂ ವ್ಯಂ |
ತರರು ಜ್ಯೋತಿರ್ಲೋಕದಿಂ ಜ್ಯೋತಿಷ್ಕರಾ ಸುರರು ||
ತರತರದ ಸಗ್ಗಂಗಳಿಂ ದರು ಮೆರೆವ ತಂತಮ್ಮ ಚಿನ್ನಾ |
ಭರಣ ವಿಭವ ಸಮೇತನಾಗಸ ತುಂಬಿ ನೆಲಸಿದರು || ೧೦ ||

ಅರುಹ ನಿಜ ಜನ್ಮಾವತರಣಕೆ | ನೆರೆಮೆನೆಗೆ ಬಹತೆರದಿ ತ್ರಿಜಗವು |
ನೆರೆದು ಬಂದುದು ನಿಮಿಷಕಾಗಸವಟ್ಟೆಯಲಿ ನಿಂದು ||
ಸುರಪತಿಯ ಬಹ ಬರವ ಪಾರು | ತ್ತಿರಲದತ್ತಲು ತ್ರಿಭುವನಾಧೀ |
ಶ್ವರನುದಯಿಸಿದ ಸಿಂಗವಣೆಯಿಂದಿಳಿಯೆನಿಪ ತೆರದಿ || ೧೧ ||

ಸುರಪಗಾಸನ ಕಂಪವಾದುದು | ಹರಿಯವಧಿಯಿಂ ನೋಡಿ ತೀರ್ಥಂ |
ಕರ ಕುಮಾರೋದಯ ಮಹಾಕಲ್ಯಾಣವೆಂದರಿದು ||

ಇರದೆ ಹರಿಪೀಠವನಿಳಿದು ನಿ | ರ್ಭರಸುಭಕ್ತಿಯಲೆರಗಿ ಮಂಗಳ |
ಪರಿಕರರು ಸಹವೈದೆ ಧರ್ಮೋದ್ಯೋಗಿ ಪೊರಮಟ್ಟ || ೧೨ ||

ಸಕಲ ಮಂಗಲಕರರು ಸಾಮಾ | ನಿಕರು ತ್ರಾಯತ್ರಿಂಶದಮರರು |
ನಿಖಿಳ ಪರಿಸಲ್ಲೋಕ ಪಾಲಕರಾತ್ಮರಕ್ಷಕರು ||
ಪ್ರಕಟ ಕಿಲ್ವಿಷಕಾಭಿಯೋಗ್ಯಾ | ಧಿಕವೆನಿಪ ಪರಿಜನವೆರಸಿ ಸೌ |
ಖ್ಯಕೆ ತವರ್ಮನೆಯೆನಿಪ ಸುರಪತಿ ಬಂದನರ್ತಿಯಲಿ || ೧೩ ||

ಕರಿತುರಗರಥನುತ ಪದಾತ್ಯು | ತ್ಕರ ವೃಷಭ ಗಂಧರ್ವ ನರ್ತಕಿ |
ವೆರಸಿ ಸಪ್ತಾನೀಕದಿಂ ಛತ್ರಾದಿ ವೈಭನದಿಂ ||
ವರಶಚೀವಧು ಸಹಿತ ಸಗ್ಗಿಗ | ರರಸನೈರಾವತವನೇರಿದ |
ನಿರದೆ ಭೇರಿಗಳುಲಿಯೆ ಬಂದನದೊಂದು ಲೀಲೆಯಲಿ || ೧೪ ||

ಸುರಪನಿಂತು ಚತುರ್ನಿಕಾಯಾ | ಮರಸಮೇತನು ನಡೆಯೆ ಭೂಷಣ |
ಸುರುಚಿ ಪಲ್ಲವದಿಂ ಘನಸ್ತನಗುಚ್ಛ ಪಂಕ್ತಿಗಳಿಂ ||
ಕುರುಳಳಿಗಳಿಂ ಕಂಬೆಳಗುವೆಂ | ಬರಳಿದರಳಿಂ ಕಲ್ಪವಲ್ಲೀ |
ಸ್ಫುರಿತ ವನವೆನೆ ಬಂದುದಂದಮರಾಂಗನಾ ಜನವು || ೧೫ ||

ದಿವಿಜರೊಳಹಂಕಾರದಲಿ ಉಳಿ | ದವರು ಅಹಮಿಂದ್ರರೆ ಉಳಿದ ಸ |
ಗ್ಗವನು ಕಾದಿರಿ ಮೇಲುನೋಟಕರವರೆ ಎನಿಸಿದರು ||
ದಿವಿಜ ಲೋಕದಲಾರು ಮೆಲ್ಲನೆ | ತವಕದಲಿ ನೆರದಿರಲೊಡನೆ ಗಗ |
ನವು ವಿಚಿತ್ರದ ಮೇಲುಗಟ್ಟೆನಿಸಿತು ವಸುಂಧರೆಗೆ || ೧೬ ||

ವಸುಧೆ ಧನದನು ಕರೆವ ರತ್ನ | ಪ್ರಸರಮಯವಾಗಸ ವಿಮಾನ |
ಪ್ರಸರಮಯ ಜಯ ಜೀಯನಂದಾ ರವಮಯವು ದೆಸೆಯ ||
ಮಿಸುಪರತ್ನ ವಿಭೂಷಣದ ಕೆಂ | ಬಿಸಿಲಮಯದಿನವೆಲರು ಪರಿಮಳ |
ವಿಸರಮಯವೆನೆ ಸಂದ ದೇವಾಗಮವು ಚೆಲುವಾಯ್ತು || ೧೭ ||

ವಿತತ ದೇವಾಗಮವು ದ್ವಾರಾ | ವತಿಯ ಮೇಗಾಗಸದೊಳಿರೆ ಪುರ |
ದತು ಜನವು ಸುರನಚ್ಚಣಿಯರಾಕಾಶನೃತ್ಯವನು ||
ತತವಿತತ ಘನಸುಶಿರ ಶಾರೀ | ರತೆಯ ಮೇಳದಿವಾಡುವದ ನೋ |
ಡುತೆ ಮಹಾವಿಸ್ಮಯವವಾಂತುದು ಭೂಪ ಕೇಳೆಂದ || ೧೮ ||

ಇವರು ನಾಕಜರಿವರು ವೆಂತರ | ರಿವರು ಭವವಾಮರರು ತುರುಗಿ |
ರ್ದಿವರು ಜ್ಯೋತಿಷ್ಯರು ತದೀಶಾನೇಂದ್ರನೀದೇವ ||

ಧವಳಗಜದಲಿ ಶಚಿವೆರಸಿ ಬ | ಪ್ಪವನೆ ಸೌಧರ್ಮೇಂದ್ರನೆಂದಾ |
ಭುವನಜನಕಮರಿಯರೆ ತೋರಿದರಂದು ತಮ ತಮಗೆ || ೧೯ ||

ಒಳಸರಿಯೆ ಹಿಂಭಾಗಮುಂಗಾ | ಳೊಳದೆರೆಯದಿಂಬಾಗೆ ಬರಿಕೈ |
ಬಲಧುರದಲಿರೆ ಒಲೆಯದಿರಿ ಕಿವಿಬಾಲಮಿಳ್ಳಿಸಿರೆ ||
ಚಳಿಸದಿರೆ ದಿಟ್ಟಿಯೊಳು ಚಿತ್ತವು | ಕುಳಿಸದಂಕುಶ ಕುಂಭದೊಳು ಮಾ |
ರ್ಪೊಳೆಯ ನಭದಿಂದವನಿಗಿಳಿತಂದುದು ದಿವಿಜಗಜವು || ೨೦ ||

ಬಂದುನಿಲೆ ಶಿವದೇವಿಯರಸನ | ಮಂದಿರದ ರಾಜಾಂಗಣದೊಳುದ |
ಯಂದ್ರ ಬೆಸಸಲು ಭಕ್ತಿಯುಕ್ತಿ ಶಚೀಮಹಾದೇವಿ ||
ಅಂದದೃಶ್ಯದಲಾ ಪ್ರಸವಮಣಿ | ಮಂದಿರವನೊಳಪೊಕ್ಕು ಹರುಷದಿ |
ಸೌಂದರಿಯ ಸಾರಿರ್ದ ಜಿನಶಿಶುಗಂಡು ಭಕ್ತಿಯಲಿ || ೨೧ ||

ತ್ರಿಪ್ರದಕ್ಷಿಣ ಬಂದು ಮಿಗೆ ತ್ರಿಜ | ಗಪ್ರಭುವಿನಡಿಗೆರಗಿ ನೀಳದ |
ಸುಪ್ರತುಮೆವೋಲೆಸೆವ ಚೆಲುವಿಕೆಗೀಕ್ಷಣವನಿತ್ತು ||
ಆ ಪ್ರಮದೆಗೊಂದಿಲ್ಲದಾ ಮಾ | ಯಾಪ್ರನಿದ್ರೆಯನಿತ್ತು ಕೆಲದಲ |
ತಿ ಪ್ರವೀಣೆಯು ಮಾಯದಾ ಶಿಶುವಿರಿಸಿ ಹರುಷದಲಿ || ೨೨ ||

ಬಳಿಕಲಾ ಪರಮೇಶ್ವರನ ಕೆಂ | ದಳಿಗಿಳಿಂ ತೆಗೆದೊತ್ತಿಕೊಂಡಳು |
ಮೊಳಗೆ ದುಂದುಭಿ ಪಾಡೆಮಂಗಳ ಗಾಯಕೀತತಿಯ ||
ನಲಿದಮರನಚ್ಚಣಿಯರಾಡಲು | ಬಳಸೆ ಜಯಜಯರವವು ಸುಗತಿಯ |
ಬೆಳೆಯಿದೆಂದಿಂದ್ರಾಣಿಯಿಂದ್ರನ ಕೈಗೆ ನೀಡಿದಳು || ೨೩ ||

ದಿಗಿಭ ಕರಸಮವಿಮಲ ನಿಜಕರ | ಯುಗವನೀಡಿ ಜಿನೇಂದ್ರ ಈ ಪರಿ |
ನೆಗೆವುದೆನ್ನನು ಅಮೃತ ಪದಕೆಂಬಂತು ಮೃದುತಳದಿ ||
ನೆಗೆದುಕೊಂಡನು ಮಕುಟವೆನೆ ನೆ | ತ್ತಿಗೆ ಜಿನಾಂಘ್ರಿಯ ಪಟ್ಟವೆನೆ ನೊಸ |
ಲಿಗೆ ಪದಕವೆನಲುರಕೆ ಸಾರ್ಚಿದನೊಲಿದು ಶಚಿಯರಸ || ೨೪ ||

ಜಿನಪದವಮೌದಾರಿಕಾಂಗವು | ತನುವಸೋಂಕಲು ರಾಗರಸವಧು |
ವನಧಿಯಾಯ್ತಾನಂದ ಬಾಷ್ಪವು ಪುಳಕಸಸಿಗಳನು ||
ಕೊನರಿಸಲು ದಿವ್ಯಾಂಬರದ ಪೆಂ | ಪೆನಿಪ ಗದ್ದುಗೆಯಿಕ್ಕಿ ಪರಮೇ |
ಶನನು ತನ್ನಯ ಬಲದತೊಡೆಯಲಿ ಕುಳ್ಳಿರಿಸಿಕೊಂಡ || ೨೫ ||

ಎಡಬಲದ ಗಜಗಳಲಿ ಮುತ್ತಿನ | ಕೊಡವಿಡಿದನೀಶಾನದಿಂದ್ರನು |
ಎಡೆವಿಡದೆ ಮಾಹೇಂದ್ರನೊಡನೆ ಸನತ್ಕುಮಾರೇಂದ್ರ ||

ಬಿಡದೆ ಚಾಮರವಿಕ್ಕುತಿರೆ ಬೆಂ | ಬಿಡದೆ ಶುಚಿಶಚಿಯಿರಲು ತನ್ನಯ |
ತೊಡೆಯಲಿರೆ ಜಿನನಿಂದ್ರನೇಂ ಧನ್ಯನೊ ತ್ರಿಲೋಕದಲಿ || ೧೬ ||

ಶರದದಭ್ರದ ತೆರದಮ್ಮೈಸ | ತ್ಕರಮೆ ಶೇಷವಿಶೇಷಮೆನೆ ಪು |
ಷ್ಕರವ ಹೋಲುವ ಪುಷ್ಕರವ ಪಲ್ಲವವೆ ಪಲ್ಲವದ ||
ದೊರೆಗೆ ಬರೆ ಮಧುಪಿಂಗಲಾಕ್ಷನು | ಶರಧಿ ಘೋಷದ ಭೃಂಹಿತದಿ ಸುರ |
ಕರಿ ತ್ರಿಲೋಕದ ಜನದ ಕಂಗಚ್ಚರಿಯ ತೋರಿಸಿತು || ೧೭ ||

ಧರಿಸೆ ಸುರಗಜಕಾಯ್ತು ಮೂವ | ತ್ತೆರಡು ಮೊಗ ಮೊಗಕೆಂಟು ಕೋಡ |
ಚ್ಚರಿಯ ಕೋಡೊಂದಕ್ಕೆ ಕೆರೆವೊಲದೊಂದು ಕೆರೆಗಬುಜ ||
ತರತರದಿ ಮೂವತ್ತೆರಡು ಮೂವ | ತ್ತೆರಡೆಸಳು ಒಂದಕ್ಕೆ ಮೂವ |
ತ್ತೆರಡು ಪಾತ್ರಗಳಾಡುವವು ಒಂದೊಂದೆಸಳ ಮೇಲೆ || ೧೮ ||

ಅದರ ವೈಕುರ್ವಣದ ಶಕ್ತಿಯ | ನದ ಜಿನ ಭಕ್ತಿಯನು ಇಂದ್ರನು |
ಹೃದಯ ಮೆಚ್ಚುವುದೆಂದೊಡಿನ್ನದನಾರೊ ಬಣ್ಣಿಪರು ||
ಪದುಮದೆಸಳವು ಕಂದಡಂದದಿ | ಮೃದುಪದದ ತಳನೋಯದಂದದಿ |
ತ್ರಿದಶ ನರ್ತಕಿಯರು ನಲಿದರಡಿ ಸೋಂಕದತಿ ಚತುರಿಂ || ೧೯ ||

ತೊಳಗುವೈರಾವತವು ಮೊದಲಾ | ದುಳಿದಮರ ವಾಹನವು ಸಬ್ಬರು |
ತಳರ್ವವೊಲು ದ್ವಾರಾವತಿಯಿನಾ | ಮೇರು ಪರಿಯಂತ ||
ತೊಳಪ ನೀಲಸುರತ್ನ ವೀಧಿಯ | ಥಳಿಲನಾಗಸದಲ್ಲಿ ನಿರ್ಮಿಸಿ |
ತಳುವದಿಂ ನಡೆಯೆಂದು ಕೈವೀಸಿದನು ದೇವೇಂದ್ರ || ೨೦ ||

ಮೊಳಗುತಿಹ ಸುರವಾದ್ಯಗಳೆ ತಾ | ಮೊಳಗು ನೀಲಸುವೀಥಿ ಮೇಘವು |
ಪೊಳೆವ ವರರತ್ನಾಂಶುಸುರಧನು ಕುಸುಮ ವೃಷ್ಟಿಗಳೆ ||
ಮಳೆಯೆನಿಸಿ ಜಿನಶಿಶುವೆ ಸುದತಿಯ | ಮೊಳೆಯೆನಿಸೆ ಪೌರರ್ಗೆ ಪುಣ್ಯದ |
ಬೆಳೆಯೆನಿಸಿ ಪೊರಕಾರ ವೊಲೆಸೆದುದು ದಿವಿಜ ಪಯಣ || ೨೧ ||

ಕಡೆಯುಮಿಲ್ಲದ ದೇವ ಸೈನ್ಯವು | ನಡೆಯೆ ಪೊಡವಿಯು ಪುಡಿವಡುವುದೆಂ |
ದೊಡರಿಸಿದನುಮರೇಂದ್ರ ನಾಗನಪಥವನೆಂಬವೊಲು ||
ಎಡದೊಳುರಗರು ಸಗ್ಗಿಗರು ಬಲ | ಗಡೆಯೊಳಾ ಜ್ಯೋತಿಷ್ಕತಲೆ ಹಿಂ |
ಗಡೆಬರಲು ಚೂಣಿಯಲಿ ನಡೆದುದು ವೆಂತರವ ಬಲವು || ೨೨ ||

ಖಗಕುಲದ ಚಾತುರ್ನಿಕಾಯವು | ನೆಗೆದು ಬೇರೊಂದಾದುದೆನೆ ಸಂ |
ದೆಗವ ಮಾಡಿದುದಾಗಸದಲಿ ಚತುರ್ನಿಕಾಯಕ್ಕೆ ||

ದೃಗು ಚಕೋರಗಗಳಮರ ಗಣಿತಾ | ಳಿಗಳ ಪೆರ್ಮೊಲೆ ಜಕ್ಕವಕ್ಕಿಗ |
ಳೊಗೆದ ಮುದಿ ನವಿಲುಗಳು ಕುಂತಳ ಭೃಂಗಸಂಕುಲವು || ೩೩ ||

ಜಲದಿ ಕಾತಿಕೆನದಿ ಸರೋವರ | ಕುಳಿಸವೇದಿನ ಗಾಳಿವನ ಸಂ |
ಕುಳವಿರಾಜಿತ ನಿಖಿಳದೇಶವೆ ಕೇರಿಮೇರುಗಿರಿ ||
ಪೊಳೆವ ರಾಜಾಲಯವು ವೃತ್ತದಿ | ಬಳಸಿ ತೋರ್ವಾಜಂಬುದ್ವೀಪವೆ |
ಪೊಳಲೆನಿಸಿದುದು ನೋಡುವಮರ ಕಣ್ಗೆಕೌತುಕದಿ || ೩೪ ||

ಜಿನನ ಪರಮೌದಾರಿಕಾಂಗದ | ಘನ ಸುಗಂಧದಿ ಮಿಗೆ ಹೊರಳಿ ಝೋ |
ರನೆ ಸುರಿವ ಮಂದಾರ ಕುಸುಮದ ಮಲಯ ಸೌರಭದಿ ||
ನನೆದು ತುಂಬಿಯ ಬಂಬಲಿನನು | ಣ್ದನಿಗಳಿಂ ಕೊಂಡಾಡಿ ಆಲಿಂ |
ಗನವ ಮಾಡೆ ಚತುರ್ನಿಕಾಯವನೋಲಿಸಿತೊಂದೆಲರು || ೩೫ ||

ತುರುಗಿ ನಡೆವ ಚತುರ್ನಿಕಾಯದ | ನೆರವಿಗಮರ ಸುವಾಹನಂಗಳ |
ನೆರವಿರ್ಕುಣಕಾಗಸವು ತೆರಪಿಲ್ಲೆನಿಸಿ ಬರಲು ||
ತೆರಪ ಬಿಡಿ ಪೊರೆಸಾರೆನುತ ಪಡಿ | ಯರ ಸುರರು ಹೊಂಗಟ್ಟೆ ಪಿಡಿದುರೆ |
[ಕರದಿ ಕೋಲ್ಗಳ] ಬಡಿದು ಸಮ್ಮುಖ ಬಿಡಿಸಿ ನಡೆಸಿದರು || ೩೬ ||

ನರ್ತಕಿಯರಾಟಗಳ ನೋಡಲು | ಮುತ್ತುತಿಹ ವೆಂತರರ ಜಡಿಕೈ |
ದತ್ತತೊಲಗಿಸಿ ಪಲತೆರದ ಸತ್ತಿಗೆಯ ನಭವಂಗೆ ||
ಮೊತ್ತವೆತ್ತಿಸಿ ಚಾಮರೇಂದ್ರರ | ನಿತ್ತರದಲೋರ್ಮೋದಲೆ ಚವಲವ |
ಬಿತ್ತರಿಸುವಂತೋಜೆಗೊಳಿಸಿದರಮರ ಪಡಿಯರರು || ೩೭ ||

ಒತ್ತಿ ಚೇರುವ ಪಾಠಕರ ಜಡಿ | ದೊತ್ತಿ ಸಂಗೀತಕ್ಕೆ ಮನ್ನಣೆ |
ಯಿತ್ತು ಗಾಂಧರ್ವರನು ಕೇಳಿಸುತಾ ಧ್ವಜಂಗಳನು ||
ಇತ್ತರದಿ ಸಾಲ್ಗೊಳಿಸಿ ದಿವಿಜರು | ಪೆತ್ತರತ್ನ ವಿಮಾನ ಕೋಟಿಯ |
ಸೂತ್ರಿಸಿದವೊಲು ನಡೆಸಿದರು ಸುರವೇತ್ರ ಪಾಣಿಗಳು || ೩೮ ||

ಅಡಿಗಡಿಗೆ ನೆಲನುಗ್ಘಡಿಸಿ ಬೆಂ | ಬಿಡದೆ ಜಿನಯಾತ್ರೆಯನು ಚೆಲುವಿಂ |
ನಡೆಸುತಿರೆ ವೈಕುರ್ವಣದ ಬೆಳ್ಳಾನೆ ಗಟ್ಟುವೊಡೆ ||
ನಿಡಿಯ ಕಂಬವು ಮೇರುವಲ್ಲದೆ | ತಡೆಯಬಲ್ಲವೆ ಪೆರವೆನಿಪವೊಲು |
ಸಡಗರದಿ ಹರಿನಡೆಸಿತಂದನು ಮೇರುವಿನ ಹೊರಗೆ || ೩೯ ||

ಬಂದ ಇಪ್ಪತ್ತೆರಡನೆಯ ಜಿನ | ನೆಂದು ಕುಡಿಗುಡಿಗಟ್ಟೆ ತಳಿರ್ಗಳ |
ಸುಂದರಾಂಗದಿ ಕುಸುಮರಜ ಪಿಷ್ಟಾತಕವ ಬೀರಿ ||

ಮಂದಮಾರುತನೆಲೆವ ಸೆಳೆಗೊಂ | ಬಂದ ನೃತ್ಯವನಾಡಿ ಮಂದರ |
ಕಂದರವು ಸೂಸಿದುದು ಕುಸುಮಾಂಜಲಿಯನಡಿಗಡಿಗೆ || ೪೦ ||

ಬಳಸಿದ ಮಹಾರ್ಣವ ಸರೋವರ | ದೊಳಗೆ ಜಂಬೂದ್ವೀಪ ಕಮಲದ |
ಹೊಳೆವ ಕರ್ಣಿಕೆಯಂತೆ ಮಂದರ ಶೈಲವಿಂಬಾಗಿ ||
ಬಳಸಿದಾ ಮೇಖಲೆ ಚತುಷ್ಕದಿ | ಬಳಸಿದುದು ವನಭದ್ರಸಾಲದಿ |
ಬೆಳೆದ ನಂದನ ಸೌಮನಸ ಪಾಂಡುಕದಿನೊಪ್ಪಿಹುದು || ೪೧ ||

ತರದಕೃತ್ರಿಮ ರತ್ನ ವಸತಿಗ | ಳುರು ಚತುರ್ವನದೊಳು ಚತುರ್ಮುಖ |
ವಿರುತಿಹವು ವೊಂದೊಂದು ಮತ್ತಾವನಗಳೆಡೆಗಳಲಿ ||
ಸುರರು ಸಗ್ಗದಲಾವ ಸುಖವಂ | ದಿರದೆ ಬಂದದರಲ್ಲಿ ಮನೆಗ |
ಟ್ಟಿರಲು ಸುರಗಿರಿಯೆನಿಸಿತೆನಲೇವೊಗಳ್ವೆ ನಾ ನಗವ || ೪೨ ||

ಮರಕೆ ಬಳ್ಳಿಗೆ ಗುಹೆಗೆ ಬೇಡರ | ನೆರವಿಗಾಶ್ರಯವಪ್ಪವಾ ಭೂ |
ಧರಗಳಲ್ಲದೆ ಕಲ್ಪತರುವಿಗೆ ಕಲ್ಪವಲ್ಲರಿಗೆ ||
ತರವಕೃತ್ರಿಮ ವಸತಿಗಳಿಗಮ | ರರ ನೆರವಿಗಾಶ್ರಯವೆನಿಸುವುದು ಸುರ |
ಗಿರಿಯಿದೊಂದಲ್ಲದುಂಟೆ ಎಂದನಮರೇಂದ್ರ || ೪೩ ||

ಹರಿಬಳಿಕ ಬಲಗೊಳುತ ಪಡುವಣ | ವರ ವಿದೇಹದ ಚೆಲುವಿಕೆಯಲು |
ತ್ತರದಲೈರಾವತವು ದಕ್ಷಿಣ ಭರತದಂದದಲಿ ||
ಕರಮೆಸೆದುದೆಂದಿಂದೆ ಮೂಡಣ | ವರ ವಿದೇಹದ ಸಿರಿಯನೀಕ್ಷಿಸಿ |
ಸುರಸಮಿತಿಗರುಪುತ್ತ ಬಂದನದೊಂದು ಲೀಲೆಯಲಿ || ೪೪ ||

ಅಂದು ಹೊಂಬೆಟ್ಟವನು ಹರಿಬಲ | ಬಂದು ನೆರೆದ ಚತುರ್ನಿಕಾಯವ |
ಮಂದರದ ಶಿಖರಕ್ಕೆ ನಡೆಯೆನಲಡರುತಿರಲಾಗ ||
ಚಂದವಹ ಚಿತ್ತಾರ ಹಾರವ | ನಂದು ಸುರಗಿರಿ ತಳೆದವೊಲು ತಾ |
ನೊಂದು ಚೆಲುವಾದತ್ತು ನೋಳ್ಪರ ಕಣ್ಗೆಕೌತುಕದಿ || ೪೫ ||

ಸುರಗಜೇಂದ್ರವು ಭದ್ರಶಾಲದೊ | ಳಿರದೆ ನಂದನದಲ್ಲಿ ನಿಲ್ಲದೆ |
ಉರಣಿಸಿ ಸೌಮನಸದೊಳು ತಡೆಯದೆ ಗಿರಿಯ ಮೇಲಡರಿ ||
ಭರದಿ ಪಾಂಡುಕ ವನದೊಳಗೆ ಕಡು | ಹರುಷದಲಿ ನಿಂದುದು ದಿಗಂತದೊ |
ಳಿರೆ ನಿಲಲು ಜಯ ಜಯ ರವದ ಕೊಡಖಿಳ ತೂರ್ಯರವ || ೪೬ ||

ಥಳಥಳಿಪ ಪಾಂಡುಕ ಶಿಲಾ ಸಂ | ಸ್ಥಲದದಟ್ಟಿತು ಎಂಟುಯೋಜನ |
ವಳೆಯೆ ತಾಂ ನೂರದರ ನೀಳವು ಅಗಲ ವೈವತ್ತು ||

ತೊಳತೊಳಗಿ ಬೆಳಪರ್ಧ ಚಂದ್ರನ | ವಿಲಸನವು ಮತ್ತದರೊಳಾ ಖಂ |
ಡಲ ವಿಕುರ್ವಣದಿಂದ ನಿರ್ಮಿಸೆ ಸ್ನಪನ ಮಂಟಪವ || ೪೭ ||

ಜಿನನ ಜನ್ಮಾಸ್ನಾನ ಮಂಟಪ | ವನು ಪೊಗಳುವಡೆ ಶೇಷನೇಂ ಬ |
ಲ್ಲನೆ ಜಿನಗೆ ಮೇರುವಿಗೆ ಸರಿದೊರೆಯುಳ್ಳೊಡದಕೆಣೆಯು ||
ಎನಿಪುದೊಂದೆಡೆಯುಂಟೆನಲು ಜಗ | ಕನುಪಮವಲಾ ವಿವಿಧ ರತ್ನದ |
ತನಿವೆಳಗೆ ದೆಸೆದೆಸೆಗೆ ಪಸರಿಸಿ ಮುಸುಕಿತಸದಳದಿ || ೪೮ ||

ತೊಳಗುವದರೊಳು ಕೋಣಕಲಶಂ | ಗಳು ಸುಮಣ ಭೃಂಗಾರಗಳ ಪ |
ಜ್ವಳಿಪ ದೀಪಂಗಳ ಸುಧೂಪಘಟಂಗಳೆಸಕದಲಿ ||
ಕಲಶ ಕನ್ನಡಿ ಆಲವಟ್ಟದ | ಚಲಪತಾಕೆ ಸುಪ್ರತಿಷ್ಠವು |
ಹೊಳೆವ ಕೊಡೆ ಭೃಂಗಾರವೊಪ್ಪಿದವಷ್ಟಮಂಗಲವು || ೪೯ ||

ತಳತಳಿಪ ನಗಪತಿಯು ಭಾಳ | ಸ್ಥಳವೆನಿಪ ಪಾಂಡುಕದೊಳಗೆ ಮಿಗೆ |
ತೊಳಪ ಕುಂಕುಮ ತಿಲಕಮೆನೆ ಮಾಣಿಕದ ಹರಿಪೀಠ ||
ಅಳವಡಲು ಅದರಿಕ್ಕೆಲದಲು | ಜ್ವಳಿಸಿದವು ಜಿನಗಭಿಷವವ ಸಂ |
ಗಳಿಸಲಿಂದ್ರರಿಗೇರಲಿಕ್ಕಿದ ಭದ್ರಪೀಠ ಯುಗ || ೫೦ ||

ವರವಿಧಾನದಿ ತ್ರಿಭುವನಾಧೀ | ಶ್ವರನನಾ ಸಿಂಹಾಸನದೊಳತಿ |
ಹರುಷದಲಿ ಪೂರ್ವಾಭಿಮುಖವಾಗಿರಿಸಿ ಕ್ರಮದಿಂದ ||
ಸುರಪಶಿಖಿಯಮನಿರುತಿ ವರುಣೋ | ನ್ಮರುತಧನದೇಶಾನ್ಮ ಫಣಿಶಶಿ |
ವರರೆನಿಪ ದಿಕ್ಪಾಲರನು ದಶದೆಸೆಯೊಳಿರಿಸಿದನು || ೫೧ ||

ತರದಿ ನೋಳ್ಪೆಸೆವಾರಣಾಚ್ಯುತ | ವರಪ್ರಭೃತಿನಾಕಿಗರ ಮತ್ತೆ ಚ |
ಮರ ಸುವೈರೋಚನರು ಮೊದಲಹ ಭವನವಾಸಿಗಳ ||
ತರಣಿ ಶಶಿ ಮೊದಲಾದ ಜೋತಿ | ಷ್ಕರನು ಸತ್ಪುರಷನು ಮಹಾ ಪುರು |
ಷರುಗಳಾದಿ ವ್ಯಂತರರನೊಳನಾಲ್ದೆಸೆಯೊಳಿರಿಸಿ || ೫೨ ||

ಬಳಿಕ ಸೌಧರ್ಮೇಂದ್ರನುಂ ನಿ | ರ್ಮಳಿಸುವೀಶಾನೇಂದ್ರನುಂ ಇ |
ಕ್ಕೆಲದ ಭದ್ರಾಸನವನೇರಿದರಭಿಷವೋತ್ಸುಕರು ||
ತಳುವದುತ್ತರ ದಕ್ಷಿಣಾನನ | ರುರುತರದ ಜಯಮಂಗಳಾನಕ |
ವಿರುತಿದೆಸೆಯ ಪಳಂಚಲೆಯೆ ವರಮಂತ್ರಮುಖರಂದು || ೫೩ ||

ಗಿರಿಪತಿಯ ನುತ ಕಂಠಮಾಲೆಯ | ವರರುಚಿರ ನಾಯಕ ಸುರತ್ನದ |
ಪರಿಯಲಿರೆ ಜಿನನುಪಮಣಿಗಳಿಂತ್ರಿಂದ್ರರೀರ್ವರಿರೆ ||

ಪರಮನುರು ಜನ್ಮಾಭಿಷೇಕಕೆ | ನೆರೆದ ನೀಲ ಘಟಾಳಿಕೋಟಿಗ |
ಳಿರವಿನಲಿ ನುತಧೂಪಧೂಮವು ಬಾಳಬಳಸಿದುದು || ೫೪ ||

ಜಲ ಸುಗಂಧಾಕ್ಷತೆ ಕುಸುಮ ಪ | ಜ್ಜಳಿಪ ಮುಖ್ಯಾಮಳಾರ್ಘ್ಯವ |
ನೊಲಿದು ಜಿನಜನ್ಮಾಭಿಷದ ನಾಂದೀವಿಧಿಯಲೆತ್ತಿ ||
ಪೊಳೆಯೆ ತಮ್ಮ ವಿಭೂಷಣದ ತನಿ | ವೆಳಗು ಮುನ್ನವೆ ಸುರತರುವ ಚೆಂ |
ದಳಿರು ಮಾಲೆಸುಚಂದನಾದಿಯಿನರ್ಚಿಸಿಯೆ ಮೆರೆವ || ೫೫ ||

ಪರಮ ಮಂಗಲ ಕಲಶಗಳ ಮು | ದ್ಧರಣ ಮಂತ್ರ ಸಂಪೂರ್ವಕವು ಸೌಂ |
ದರ ಕರಂಗಳಿನೆತ್ತಿಕೊಂಡಾ ತೀರ್ಥನಾಥಂಗೆ ||
ಪರಮ ಪಾವನ ತೀರ್ಥಜಲದಿಂ | ಸುರಪತಿಗಳತಿ ಮುಖ್ಯ ಮಂಗಳ |
ಸುರುಚಿರೋದಭಿಷೇಕ ಸುವಿಧಾನವನೊಡರ್ಚಿದರು || ೫೬ ||

ದಿವಿಜ ವೃಂದಾರಕರು ಹರುಷದಿ | ತವತವಗೆ ಮುಂದೊದಗಿ ತನಿಗಂ |
ಧವನಲರನಕ್ಷತೆಯ ಚರು ಮುಂತಾದವನು ನೀಡೆ ||
ಸುವಿಧಿಯಿಂ ಶಚಿಮುಖ್ಯರಮರೀ | ನಿವಹಮದ ಸಂಶುದ್ಧಿಗೈದೊ |
ಪ್ಪವಿನಮಭವಾರ್ಚನೆಗೆ ನೀಡುವರಾ ಸಮಯವರಿತು || ೫೭ ||

ಎಸೆವ ಪಂಚಮಗತಿಯ ರಾಜ್ಯಾ | ಭಿಷವನಕ್ಕಾ ಪಂಚಮಾಬ್ಧಿಯ |
ಮಿಸುಪ ಜಲಜಿನಗುಚಿತವೆಂದು ಶಚೀರಮಣ ಬೆಸಸೆ ||
ಮಿಸುನಿವೆಟ್ಟವೆ ನೀರ್ಮೋಗೆಯಲೆಂ | ದೊಸೆದು ನೀಡಿತೊ ಕಡಲಿಗೆರಡ |
ರ್ಮಿಸುವ ತೋಳ್ಗಳನೆನಿಸೆ ಸಾಲಿಟ್ಟುದು ದಿವಿಜವೃಂದ || ೫೮ ||

ಕೆಂಬಲರ ನೀಲದ ಪಳುಕಿ ನೊ | ಪ್ಪಂಬಡೆದ ಮುಖವೊಂದು ಯೋಜನ |
ದಿಂಬುದಳೆದೊಡಲೆಂಟು ಯೋಜನಮಾದುವೆಡೆ ಬಿಡದೆ ||
ತುಂಬಿದವು ಇಂಗಡಲೆ ಬರಿದಾ | ಯ್ತೆಂಬಿನೆಗ ಘಟಜಾತವಂದಿಂ |
ದಂಬುಧಿಯ ಘಟಜಾತನೀಂಟಿದವೆಂಬರರಿಯದರು || ೫೯ ||

ಸುಧೆಯ ಮಡುಗಳೆ ಎರಡು ಕಡೆಯಿಂ | ದೊದವಿ ಬಂದವೊಯೆನಲು ಬಹ ರ |
ನ್ನದ ಘಟಂಗಳ ಕೈಕೈಗೆ ಮಿಗೆ ಕೊಡುವ ಕೊಂಬೊಂದು ||
ಪದಪು ಕಂದುಕಕೇಳಿಯೆನೆ ತೋ | ರಿದುದುಯಿಂದ್ರನ ತೋಳ್ಗಳಂದೊ |
ಪ್ಪಿದವುಯೆಳನೀರ್ವೆತ್ತ ತೆಂಗಿನ ತೋಪುಗಳ ತೆರದಿ || ೬೦ ||

ತಳೆದ ವೈಕುವರ್ಣದ ತೋಳ್ಗಳು | ತಳೆದು ಘಟಪೇಟಕಗಳನು ಕಡು |
ಬೆಳೆದ ಜಯ ಜಯ ಘೋಷದಿಂದಭೀಷೇಕವನು ಮಾಡೆ ||

ತೊಳಪ ಜಿನಪಗೆ ಪೋಲ್ತು ಕಡುಕರ | ಗಿಳಿದುದೋ ನೀರಾಗಿ ಶಶಿಯೆನೆ |
ಪುಳಕುಗಳ ಕೊಡು ಮುಖದಿ ಸುರಿದವು ಸುಧೆಯ ಧಾರೆಗಳು || ೬೧ ||

ಪಲವು ಘಟಗಳನಾಂತ ಕೈಗಳು | ಪಲವು ಮಜ್ಜನಗೊಳಿಪ ಕೈಗಳು |
ಪಲವು ಕೈಗಳು ಸವೆದ ಕಲಶವನತ್ತ ಕೊಡುತಿಹವು ||
ಒಲಿದು ಜಿನಪಗೆ ಮುಗಿದ ಕೈಗಳು | ಪಲವು ಇಂದ್ರನ ಮೂರ್ತಿಯೊಳವೆಂ |
ನೆಲಸಿದವೊ ಜಿನಸ್ತವನ ಸಮಯವಿಧಾನದಲಿ ನಲಿದು || ೬೨ ||

ಸುರರದೆಲ್ಲರು ನಿರತರಹರೆನೆ | ಸುರಗಿರಿಯೆ ಮಜ್ಜನದ ಪೀಠವು |
ಸುರಪಮಜ್ಜನವಳ್ಳನಮೃತಾಂಬುಧಿಯೆ ನೀರ್ದೋಣಿಯು ||
ನೆರೆದ ಪರಿಚಾರಿಕೆಯರೆಲ್ಲರು | ಸುರವಧೂತತಿಯೆಂದೊಡೇನ |
ಚ್ಚರಿಯೊ ಜಿನಜನ್ಮಾಭಿಷೇಕಸ್ತವನ ಕಲ್ಯಾಣ || ೬೩ ||

ಸುರಚಿರೈರಾವತದ ಬರಿಕೈ | ಯಿರವಿನಿಂ ಧಾರಾ ಸಹಸ್ರವೆ |
ಸುರಿವುತದೆ ಬಿಡದಿಂದ್ರನೌತ್ಸುಕ್ಯದೆ ಜಿನಾರ್ಭಕನ ||
ಶಿರದ ಮೇಲಿಗೊಗೆದ ಶಿಶು ಸು | ಸ್ಥಿರತೆ ವಡೆದಿದೆಯೆಂದು ಕೆಲರಮ |
ರರುನೆನೆಯೆ ಪನಿಮೂಗಿನೊಳವರೆ ಸುಯಿದನೊರ್ಮೆ ಜಿನ || ೬೪ ||

ಪೇಳಲೇನಾ ಸುಯ್ಯ ಪೆಂಪಿನ | ಗಾಳಿಗಾಧ್ವಜಪಟವು ಪಟವನು |
ಮೇಳಿಸಿದ ಕೂಕಂಭವೆನೆ ಬಾನೆಂಬ ಕಡಲೊಳಗೆ ||
ತೇಲಿದವು ದಿವಿಜರ ವಿಮಾನಗ | ಳೋಳಿಕಡು ಜವದಿಂದವೆಲ್ಲಾ |
ಬಾಲಕನ ಸತ್ವಾತಿಶಯಮನದೇನ ಹೊಗಳುವೆನು || ೬೫ ||

ಪರಮನೆಳೆನೆತ್ತಿಯಲಿ ಸುಧೆ ಭೋ | ರ್ಗರೆವದನಿ ಆ ನಗದಿ ಮಿಗೆ ಭೋ |
ರ್ಗರೆದು ನಿರ್ಜರಕೋಟೆಯಾಗಿಯೆ ಬೀಳ್ದನೀ ಮತ್ತೆ ||
ಸುರರ ಜಯಜಯರವವುಮಿಗೆ ಭೋ | ರ್ಗರೆದು ಮೊಳಗುವ ಕೋಟಿ ವಾದ್ಯಗ |
ಳುರುತರಧ್ವನಿಯೊಡವೆಳೆದು ಬಳಸಿದುದುದಿಗುತಟವ || ೬೬ ||

ಶರದದಭ್ರವ ಮುಸುಕಿದೆಳೆ ಭಾ | ಸ್ಕರನವೊಲು ಜಿನನಿರ್ದ ಆ ಸೀ |
ಕರನೆಗೆದು ಬೇರೊಂದು ಜ್ಯೋತಿರ್ಲೋಕವೆನಿಸಿದುದು ||
ಸುರರಮಣಿಯರ ಮುಡಿಗೆ ಮಲ್ಲಿಗೆ | ಯರಲುಗಳವೊಲು ವಕ್ಷದೊಳು ಭಾ |
ಸುರ ಸುಮುಕ್ತಾಹಾರಗಳವೊಲು ನಿಂದು ರಂಜಿಸಿತು || ೬೭ ||

ಪುಣ್ಯಮೂರ್ತಿಯ ಪುಣ್ಯಮಜ್ಜನ | ಪುಣ್ಯ ಜಲ ಪರಿದಂದಿನಿಂದೀ |
ಪುಣ್ಯತೀರ್ಥವಿದೆಂದು ಪುಣ್ಯಕ್ಷೇತ್ರವಿದುವೆಂದು ||

ಪುಣ್ಯನದಿಯಿದು ಪುಣ್ಯ ವನವಿದು | ಪುಣ್ಯಗಿರಿಯಿದು ಪುಣ್ಯದರಿಯಿದು |
ಪುಣ್ಯ ಸರಸಿಯಿದೆಂಬುದಾದುದು ಜಂಬುದ್ವೀಪದಲಿ || ೭೮ ||

ಪರಮಜಿನ ದಿವ್ಯಾಂಗಗಂಧದಿ | ಪರಿಕಲಿಸಿ ತನಿಗೋರ್ವಿತುಂಬಿಯ |
ಸೆರೆವಿಡಿದು ಬೋಭೋರ್ರೆನುತಮಂದರದ ಕಂದರಕೆ ||
ಪಿರಿದು ನಿರ್ಜರವಾಗಿ ಪರಿವಾ | ಪರಮ ಪಾವನ ಗಂಧಜಲವನು |
ಶಿರದೊಳಾಂತುದು ತಮತಮಗೆ ಭಕ್ತಿಯಲಿ ಸುರನಿಕರ || ೭೯ ||

ಸವನಗಂಧಾಂಬು ಪ್ರವಾಹದಿ | ದಿವಿಜಗಜ ನೀರಾಟವಾಡಿಯೆ |
ದಿವಿಜರರಿಕೆಯ ಗಂಧಸಿಂಧುರವೆನಿಸಿದುದು ಮತ್ತೆ ||
ವಿವಿಧವಾಹನ ದೇವತೆಗಳಾ | ದಿವಿಜ ಬಲವು ಚತುರ್ನಿಕಾಯವು |
ಪವಣಿಗಳಿದ ಪವಿತ್ರತೆಯನಾಂತುದು ಸುಭಕ್ತಿಯಲಿ || ೮೦ ||

ದುರಿತ ವಹ್ನಿಯ ನಂದಿಸಲು ಭ | ವ್ಯರಸುಪುಣ್ಯದಲತೆಯ ಬೆಳೆಸಲು |
ಪರಮ ಜಿನಗಂಧೋದಕದ ಪನಿಯೊಂದೆ ಸಾಲ್ವುದಲ ||
ಆರರೆಯೆಂದತಿಸ್ತುತಿಸಿ ಸಗ್ಗಿಗ | ರರಸ ಶಿರದಲಿ ತಳಿದುಕೊಂಡನು |
ಸುರಸಮಿತಿ ಮಸ್ತಕಕೆ ತಳಿದನದೊಂದು ಲೀಲೆಯಲಿ || ೮೧ ||

ಬಳಿಕ ಪರಿಮಳ ಜಲದಿ ಗಂಧದಿ | ತೊಳಗುವಕ್ಷತದಿಂದ ಸುರತರು |
ಗಳ ಕುಸುಮದಿಂ ದಿವ್ಯಚರುವಿಂ ದೀಪಧೂಪಗಳಿಂ ||
ಫಲನಿಚಯದಿಂದರ್ಘ್ಯದಿಂ ಮಂ | ಗಲದಿಮಣಿಭೂಷಣದಿ ಬಗೆಯಿ |
ಕೋರ್ಳಿಪ ಸಂಗೀತದಿ ಜಿನೇಂದ್ರನ ಪೂಜಿಸಿದನಿಂದ್ರ || ೮೨ ||

ಬಳಿಕ ಸಮ್ಮುಖವಾಗಿ ಮಕುಟದಿ | ತಳೆದ ಮುಕುಲಿತ ಕರದಿ ದಿವಿಜಾ |
ವಳಿಗೆರಸು ಭಕ್ತಿಯಲಿ ಜಯಜಯ ತ್ರಿಭುವನಾರಾಧ್ಯ ||
ಮಲರಹಿತ ಜಯ ಜಯ ಪರಮ ಮಂ | ಗಳನೆ ಜಯಜಯ ಸುಗುಣಮಣಿಗಣ |
ಜಲಧಿ ಜಯವೆಂದು ಸಾಷ್ಟಾಂಗ ಪ್ರಣುತನಾದ || ೮೩ ||

ವಿನುತೆ ಶಚಿಶುಚಿವಸ್ತ್ರದಿಂ ಜಿನ | ತನುವ ಜಲಬಿಂದುವನೊರಸಿ ಕ |
ಮ್ಮನೆಯ ಚಂದನ ಲೇಪವನು ನಿರ್ಲೇಪಗಳವಡಿಸಿ ||
ಅನುಪಮಿತ ಹರಿವಂಶ ತಿಲಕಂ | ಗನುಗೊಳಿಸಿ ತಿಲಕವನು ಕಡುಚೆಲು |
ವೆನಿಪ ಕಟಿಸೂತ್ರವನು ಕಾಶ್ಯಪಗೋತ್ರಗಿಕ್ಕಿದಳು || ೮೪ ||

ತಳೆದ ಸಹಜಚ್ಛಿದ್ರ ಕರ್ಣಂ | ಗಳಿಗೆ ಮಣಿಮಾಂಗಾಯನಿಟ್ಟಳು |
ಅಲರೆಲೆಯ ಶಿಖಿಯಲಿ ತೊಡರ್ಚಿ ವಿಮುಕ್ತ ದೋಷಂಗೆ ||

ತೊಳಪ ಮುಕ್ತಾಭರಣಗಳ ಸಂ | ಗೊಲಿಸಿ ಬಳಿಕ ನಿರಂಜನನ ಕಂ |
ಗಳಿಗೆ ಅಂಜನರಂಜನೆಯ ನೊಡರಿಸಿದಳಾ ಶಚಿಯು || ೭೫ ||

ಚಿತತನುಶ್ರೀಯೊಂದಿ ಭೂಷಣ | ವೆನಿತು ಭೂಷಣವಾದವವು ಕಿವಿ |
ಗಿನಿಧನೀ ವಂದುಗೆಗಳಡಿಯಲಿವುಡಿಗೆ ಕಿಂಕಿಣಿಯು ||
ಕನದರುಣಮಣಿಕಟ ಕೇಯೂ | ರನುತ ಬಾಹುಯುಗಂಗಳೊಳು ಬೆರ |
ಳಿನಲಿ ಮುದ್ರಿಕೆ ಕೊರಳಿನಲಿ ಕಂಠಿಕೆಗಳೊಪ್ಪಿದವು || ೭೬ ||

ಪರಮ ಗುಣಭೂಷಣನ ಮಿಗೆ ಸಿಂ | ಗರಿಸಿ ನೋಡುವ ಬಯಕೆಯಿಂದಾ |
ಸುರಪ ಸಾಸಿರದಿಟ್ಟಗಳೆದೆವೆಯಿಕ್ಕಿದೀಕ್ಷಿಸುತ ||
ಹರುಷದಿಂದೈರಾವತವಲಂ | ಕರಿಸೆ ಶಚಿಸರ್ವಜ್ಞನನು ಸುರ |
ಗಿರಿಶಿಖರದಿಂ ತಂದು ಹಿಮಗಿರಿ ಶಿಖರಕೀವಂತೆ || ೭೭ ||

ಮೃದುತಳದಿ ತಂದೆತ್ತಿನೀಡಲು | ತ್ರಿದಶಪತಿ ಪೂರ್ವಕ್ರಮದಿ ತಳೆ |
ದೊದವಿದಾ ದ್ವಾರಾವತಿಗೆ ತತ್ಪಥದೊಳೊಲವಿಂದ ||
ಪುದಿದು ನೆರೆದ ಚತುರ್ನಿಕಾಯದ | ವಿದಿತ ಸಪ್ತಾನೀಕ ಸೈನ್ಯದ |
ಸದಿವ ನಾನಾವಾದ್ಯಗಳ ಕಳಕಳದಿ ಗಮಿಯಿಸಿದ || ೭೮ ||

ಮುಸುಕಿದಖಿಳ ವಿಮಾನತತಿಯೆ | ಣ್ದೆಸೆಯ ಬೆಳ್ಗೊಡೆ ಪಳಯಿಗೆಗಳಾ |
ಗಸವ ತುಂಬಿತು ದಿವದರಳ ಮಳೆ ನೆಲವ ತೀವಿದುದೊ ||
ಮಿಸುಪಮರ ಗಾನೆಯರ ಕೊರಳಿಂ | ರಸಮೊಸರ್ವ ಸಂಗೀತ ಕಿವಿಗಿಂ |
ಬೆಸೆಯೆ ದೇವರದೇವನನು ತಂದನು ಪುರಂದರನು || ೭೯ ||

ಹರಿ ಕಳುಹಲಾ ದೇವದೂತರು | ಹರಿದರುಪೆ ಪುರದಲ್ಲಿ ಶೋಭೆಯಿ |
ಪರಕಲಿಸೆನಲಿದಾ ಸಮುದ್ರ ವಿಜಯಮಹಾರಾಯ ||
ಹರಿಬಲಾದಿ ತನೂಜರನುಜರು | ಪುರಜನವು ಸಹವಿತತ ವಿಭವೋ |
ತ್ಕರದೆ ಬಂದಿದಿರ್ಗಂಡನೇಂ ಧನ್ಯನೋ ತದವನೀಶ || ೮೦ ||

ಬಂದು ಜಯಜಯ ಎಂಬ ತರತರ | ದಿಂದ ಅರ್ಘ್ಯವನೆತ್ತುತಿಹ ನಲ |
ವಿಂದ ಜಿನಗಭಿವಂದಿಸುವ ಮಂಗಲವ ಪಾಡುತಿಹ ||
ಸಂದ ಭಕ್ತಿಯಲಾ ಸುರಸ್ತ್ರೀ | ವೃಂದ ವಾರತಿಯೆತ್ತು ವೀ ಸೈ |
ಪಿಂದ ಪುರವನು ಪೊಕ್ಕುದವನಾ ಯಾತ್ರೆ ಚೆಲುವಾಗಿ || ೮೧ ||

ಮೊದಲೆ ಸುರಶಿಲ್ಪಿಗಳು ಸಲೆಮಾ | ಡಿದರತುನಮಯ ಮಂಟಪದ ಮ |
ಧ್ಯದ ಮೃಗೇಂದ್ರ ಸುಪೀಠದಲಿ ತ್ರಿಜಗಾಧಿಪನಿಂದ್ರ ||

ಪದುಳದಿಂ ಬಿಜಯಂಗೈಸೆ ಪೆ | ರ್ಚಿದ ಸಮುದ್ರ ವಿಜಯನೃಪತಿ ಜನ |
ವಿಧಿಚರನುಜರು ಕೃಷ್ಣ ಬಲದೇವಾದಿ ಯೊಡವೆರಸಿ || ೮೨ ||

ಪರಮ ಭಕ್ತಿಯಲರ್ಘ್ಯವೆತ್ತಿದ | ರಿರದೆ ಸರ್ವಾಂಗ ಪ್ರಣಾಮವ |
ವಿರಚಿಸಲು ಸಾಧರ್ಮಪತಿ ಜಿನನುಭಯ ಪಾರ್ಶ್ವದಲಿ ||
ಇರಸಿ ಅವರನು ಇಕ್ಕೆಲದಲಿ ಚ | ಮರರು ವೈರೋಚನರು ಅಭವಗೆ |
ಹರುಷದಲಿ ಚಾಮರವನಿಕ್ಕುತಲೋಲಗಿಸುವಾಗ || ೮೩ ||

ಸುರಪರೀರ್ವರು ದೇವದೇವನ | ಯೆರಡು ಕೆಲನನಲಂಕರಿಸೆ ಇ |
ತ್ತೆರದಲಖಿಳೇಂದ್ರಾದಿ ಚತುರನಿಕಾಯ ವೋಲಗಿಸೆ ||
ಸುರಗಣಿಕೆಯರು ಪಾಡೆನಚ್ಚಣಿ | ಯರು ವಿಡಾಯದಲಾದೆ ತಾನ |
ತ್ತಿರದೆ ಶಚಿ ಶಿವದೇವಿಯ ನಿದ್ರೆಯನು ಪರಿಹರಿಸಿ || ೮೪ ||

ಸುತಮುಖ ನಿರೀಕ್ಷಣದ ಮಾಳ್ಪೊಡೆ | ಚತುರೆ ಕರೆತರೆ ಕಂಡು ಪುತ್ರನ |
ನತು ಹರುಷೆಯಾದಿರವನಂತುಟದಿಂತುಟೆನ ಬಹುದೆ ||
ಶತಮುಖನು ಜಗದಂಬಿಕೆಯ ಭೂ | ನುತೆಯನುಚಿತಾಸನದಲಿರಿಸಲು |
ಸತಿ ಸುಧಾಂಶುವ ಕಂಡ ಪಾಲ್ಗಡಲಂತೆ ಪೆರ್ಚಿದಳು || ೮೫ ||

ಒಮ್ಮೆ ತನುಜನ ನೋಡುವಳು ಮ | ತ್ತೊಮ್ಮೆ ಪುತ್ರನ ಭೂಷಣಂಗಳ |
ನೊಮ್ಮೆ ಕೈಗಳ ಮುಗಿದಕೊಂಡಿಹ ನುತ ಶತೇಂದ್ರರನು ||
ಒಮ್ಮೆ ಚತುರುನಿಕಾಯ ಪಂತಿಯ | ನೊರ್ಮೆವಾಹನ ದೇವತೆಗಳನು |
ಒಮ್ಮೆ ಸುರಗಣಿಕೆಯರ ನರ್ತನವನು ನಿರೀಕ್ಷಿಪಳು || ೮೬ ||

ತನುಜನೀ ಮಹಿಮೆಯನದೇನಂ | ಬೆನು ತ್ರಿಲೋಕೀ ಜನವೆ ಕಿಂಕರ |
ರನಿಮಿಷಾಂಗನೆಯರು ಮನೆಯ ತೊತ್ತಿರು ಸುವಸ್ತುಗಳೆ ||
ಮನೆಯೊಳಗೆ ತೆರಹಿಲ್ಲ ಜಗದ | ಯ್ಯಯನು ಪಡೆದಾಂ ಧನ್ಯಳಾದೆನು |
ಯೆನುತ ಮನದಲಿ ಕಾಂತೆ ಸಂತಸದಂತವೈದಿದಳು || ೮೭ ||

ಭೂವರೋತ್ತಮ ಕೇಳೆಲೇ ಶಿವ | ದೇವಿ ತ್ರಿಜಗತ್ಪಿತೃಗೆ ಪಿತೃಯುಗ |
ನೀವು ನೋಂತಂತಾರು ನೋಂತರೊ ಮೂರು ಲೋಕದಲಿ ||
ಈ ವಿಮಲಕಲ್ಯಾಣವನು ಜಿನ | ದೇವಗೀಪರಿ ಮಾಳ್ಪೆವೆಂಬುದ |
ದೇವಪತಿಯೆಲ್ಲವರಿಗೆಲ್ಲವ ತಿಳಿಯೆ ಪೇಳಿದನು || ೮೮ ||

ಪರಮ ನೊಡ್ಡೋಲಗದೊಳಂತೊ | ಪ್ಪಿರಲು ಮೌಹೂರ್ತಿಕರು ಬಂದಾ |
ದರದಿ ಬಿನ್ನಹ ಜಾತಕರ್ಮಕ್ರಿಯೆಯನೊಡರಿಪೊಡೆ ||

ವರ ಮುಹೂರ್ತ ಸಮೀಪವೆನೆ ಸುರ | ತರುಣಿಯರ ಮೊಗನೋಡೆ ಹರಿ ತಡೆ |
ದಿರದೆ ಶಿವದೇವಿಗೆ ಸುಮಂಗಲ ಮಜ್ಜನವ ಮಾಡೆ || ೮೯ ||

ಬಂದು ವಸ್ತ್ರಾಭರಣ ಕುಸುಮ ಸು | ಗಂಧದಿಂ ವಸದನಗೊಳಿಸಿ ಶಚಿ |
ಯಂದೊಲಿದು ಕೈಗೊಟ್ಟು ಕರೆ ತರೆ ಜಿನನ ಕಾಣುತಲೆ ||
ಮುಂದೊದಗಿ ಮೆರೆವರ್ಘ್ಯವೆತ್ತಿ ಜ | ಯೆಂದು ಭಕ್ತಿಯಲೆರಗಿಯುತ್ಸವ |
ದಿಂ ಧೃತೀಶ್ವರಿ ಮುಖ್ಯ ನಗದೇವೀ ಸಮೂಹಕ್ಕೆ || ೯೦ ||

ತರದಿ ರೋಹಿಣಿ ಸತ್ಯೆ ರುಗ್ಮಿಣಿ | ಯರು ವಿವಿಧ ಮಂಡಳಿಕ ಸಾಮಂ |
ತರ ಮಡದಿಯರು ಮುಖ್ಯ ಕಾಂತಾತತಿಗೆ ಶಿವದೇವಿ ||
ತರತರದೆ ಮಣಿಪಾತ್ರೆಯಲಿ ತುಂ | ಬಿರಿಸೆ ರತ್ನ ಸುವಸ್ತ್ರ ಭೂಷಣ |
ಪರಿಮಳಾದಿಯ ಬಾಯಿನವ ಕೊಟ್ಟಳು ಮನೋಮುದದಿ || ೯೧ ||

ಪ್ರವರೆಯಿಂತತಿ ಜಾತಕರ್ಮೋ | ತ್ಸವವ ಮಾಡಲು ಬಳಿಕ ಅಪಗತ |
ಭವಗೆ ಸುರಪನರಿಷ್ಟನೇಮಿಯೆನಿಪ್ಪ ನಾಮವವನು ||
ಸವೆದು ದಿವ್ಯಾಂಬರ ವಿಭೂಷಣ | ನಿವಹದಿಂ ಜಿನಜನಕನನು ಆ |
ದಿವಿಜಪತಿ ಪೂಜಿಸಿದನೆಲೆ ಭೂಪಾಲ ಕೇಳೆಂದ || ೯೨ ||

ಅವನಿಪತಿ ಕೇಳಾ ಸಮಯದಲಿ | ಇವನರಸನಿವನಿಂದ್ರನಿವು ಮನೆ |
ಯವು ವಿಮಾನಗಳೀಕೆ ಶಚಿಯಾವನಿತೆ ಶಿವದೇವಿ ||
ಇವರು ಪುರಜನವಿವರು ಸುರಜನ | ಯಿವರು ಮರ್ತ್ಯ ಸುನರ್ತಕಿಯರಿಂ |
ತವರಮರ ನರ್ತಕಿಯರೆಂಬ ವಿಭೇದ ದೋರಿಸದು || ೯೩ ||

ಸುರವರೋತ್ತಮ ನರ್ತಕಿಯರ | ಚ್ಚರಿಯೆನಲು ನಲಿದಾಡಿ ನೋಡುವ |
ಸುರನರೌಘವು ಹರುಷರಸ ವಾರಿಧಿಯೊಳೋಲಾಡೆ ||
ಪರಮನೊಡ್ಡೋಲಗದೊಳೊಪ್ಪಿದ | ಸುರಪನನು ಆನಂದ ಶಿಕ್ಷಕ |
ಕರೆಯೆ ನರ್ತಕನದನೆಲೆ ಭೂಪಾಲ ಕೇಳೆಂದ || ೯೪ ||

ರಸವು ಭಾವವುಮಭಿಯನವು ರಂ | ಜಿಸುವ ಸಿದ್ಧಿ ಪ್ರವೃತ್ತಿ ಗಾನವು |
ಮಿಸುಪ ಆದ್ಯವು ಸ್ವರವು ರಂಗವು ಧರ್ಮವೃತ್ತಿಯುತ ||
ಎಸೆವ ಸಂಗ್ರಹವೆಂಬ ಹನ್ನೊಂ | ದೆಸೆವ ನಾಟ್ಯಾಂಗದಲಿ ನೆರೆದೊ |
ಳ್ಪೆಸೆವ ದಶರೂಪಕದೊಳದೆ ತಾನೊಂದು ನಾಟಕವ || ೯೫ ||

ಆರಯಲು ತಾಂ ದೇವನಾಯಕ | ವೀರರಸಯುತ ಯೆನಿಸುವಸಮಾ |
ಕಾರರೂಪಕವೆಂಬುದನು ಕಲ್ಯಾಣ ಯೋಗ್ಯವನು ||

ಸಾರನೇತೃವೆ ಜಿನನುದಾರದ | ಯೋರುವೀರಮೆ ರಸವು ತ್ರಿಜಗೋ |
ದಾರಸಭೆ ಸಭೆಯಾಗೆ ಮುಕ್ತಿಫಲಾರ್ಥಿ ದೇವೇಂದ್ರ || ೯೬ ||

ಚತುರುವಿಧ ನೇಪಥ್ಯರಂಜಿತ | ಸುತನುವಾಗಿಯೆ ಸೂತ್ರಧಾರ |
ಸ್ಥಿತಿವಡೆದು ನೆರೆದರುಸನಾವರಣೀಯ ಹೋಹಂತೆ ||
ವಿತತ ಜವನಿಕೆ ತೊಳಗೆ ಮೇಳವೆ | ಚತುರ ಗಂಧರ್ವಾದಿಯಾಗಿರೆ |
ಶತಮಖನು ರಂಗವನು ಪೊಕ್ಕನದೊಂದು ಲೀಲೆಯಲಿ || ೯೭ ||

ಅರೆಮುಗಿದ ಕಣ್ ಶಾಂತಮುಖಸಮ | ಚರಣಮುಕುಳಿತ ಹಸ್ತ ಹೃದಯದೊ |
ಳಿರುತ ಕುಸುಮಾಂಜಲಿಗರೆದು ನೊಸಲಲಿ ಮುಗಿದಕರವ ||
ಇರಲು ಪರಮನ ಚರಣನಖ ಚಂ | ದಿರನ ಸೇವಿಸ ಬಂದು ತಾರೆಗ |
ಳಿರವೆನಿಸಿ ಹರಿಪೀಠವನು ಬಳಸಿದವು ಕುಸುಮಗಳು || ೯೮ ||

ಕಿವಿಗೆ ಸವಿಗೊದಗೆಯದೆಗೇಯದ | ಸವಿಗೆ ಸವಿಗೊಡೆ ವಾದ್ಯವಾದ್ಯದ |
ಪವಣಿಗದವೋಲಂಗವಿನ್ಯಾಸವು ಸುಲಾಸ್ಯದಲಿ ||
ಅವತರಿಸೆ ಆಸ್ಯದ ಸುನೃತ್ಯದ | ಲವಗಹಿಸೆ ರಸಪೂರ ಭಾವದ |
ತವರೆನಿಸಿ ತ್ರಿಜಗದ ಸಭೆಯು ಬೆರಗಾಗೆ ನರ್ತಿಸಿದ || ೯೯ ||

ಸಕಲ ಅಂಗೋಪಾಂಗದಿಂದಾಂ | ಗಿಕ ಮಗಾನ ಸುಧಾ ರಸದಿ ವಾ |
ಚಿಕಮನೇಪಥ್ಯದಿ ಮಿರುಗವಾಹಾರ್ಯಕವನಂತೆ ||
ಪ್ರಕಟ ಸತ್ವಜಭಾವದಿಂ ಸಾ | ತ್ವಿಕಮನಿಂತಭಿನುತ ಚತುಷ್ಕಮ |
ಮುಕುತಿ ಫಲದರ್ತಿಯಲಿ ನರ್ತಿಸಿ ಸಭೆಯ ಮೆಚ್ಚಿಸಿದ || ೧೦೦ ||

ಶಿರಕೆನತಿ ಕಂಗಳಿಗೆ ಉತ್ಸಾಹ | ಕರಗಳಿಗೆ....ಳಿಯೆ ಬರುತಿರೆ |
ಹರಿಯ ಮನದೊಳು ಜಿನಸುಭಕ್ತಿಯ ಪೆರ್ಮೆಯೇಂ ಘನವೊ ||
ಭರತಶಾಸ್ತ್ರದ ತಿರುಳೆ ಮೂರ್ತಿಯ | ಧರಿಸಿತೆನೆ ರಸಭಾವ ವೃತ್ತಿಯ |
ವಿರಚಿಸಿದನಹುದಯ್ಯ ಜೀವಝು ಭಾಪೆನಲು ಸಭೆಯು || ೧೦೧ ||

ಮಿಸುನಿವೆಟ್ಟವ ಮೊದಲಮೃತಜಲ | ವಿಸರದಲಿ ಮುಳುಗಿಸಿದ ವೊಲು ಮುಳು |
ಗಿಸಿದನಭವನ ಸಭೆಯ ನೃತ್ಯಾಮೃತದಲಹರಿಯಲಿ ||
ಮಿಸುಪ ತ್ರಿಜಗದ ಸಭೆಯೆ ಸಭೆಯೀ | ಕ್ಷಿಸೆ ಸಭಾಪತಿ ಮೂಜಗದ ಪತಿ |
ಒಸೆದ ನರ್ತಕನಿಂದ್ರನೇನೆಲೆ ವೊಗಳ್ವೆ ನರ್ತನವ || ೧೦೨ ||

ಸುರಪನೀಪರಿ ಪಲವು ಪೊತ್ತಾ | ಡಿರದೆ ತಾಂಡವಕೊಡರಿಸಿಯೇ ಬಾಂ |
ಬರೆಗ ಬೆಳೆದು ಸಹಸ್ರರೂಪದಿ ನಿಲವೆನಿತ್ತನಿತ ||

ಕರಣವೆನಿತಕ್ಷಿಯೆನಿತನಿ | ತುರುಕರಂಗಳವೆನಿ ತನಿತುಗತಿ |
ಶಿರಗಳೆನಿತನಿತೆಲ್ಲವನು ಒರ್ಮೊದಲೆ ತೋರಿದನು || ೧೦೩ ||

ಕಳಿದ ಪೂಗಳ ತೆರದಿ ರೇಚಕ | ದೆಲರಿನಿಂದುದುರಿದವು ತಾರೆಗ |
ಳಳವಿಗಳಿದಾ ತೋಳಳುಬ್ಬೆಗೆ ದಿಗ್ಗಜವ್ರಜವು |
ಪೆಳರಿದವು ಬಹುಚರಣದಾಟಕೆ | ನೆಲ ನಡುಗುತಿರೆ ವಾರಿನಿಧಿ ಬೆಂ |
ಬಳಿಯಲುರೆ ತುಳ್ಕಾಡಿ ತಾಂಡವವಾಡಿದನು ಸುರಪ || ೧೦೪ ||

ಒಂದು ಮೂರ್ತಿಯು ಓಲಗದಲ | ತ್ತೊಂದು ಮೂರ್ತಿಯು ಕಟ್ಟಗೆಯ ಪಿಡಿ |
ದೊಂದು ಮೂರ್ತಿಯು ನರ್ತನದಲಿರುತಿಹುದು ಗಗನದಲಿ ||
ಒಂದೆ ಪರಿಯಲಿ ದೆಸೆಗಳಲಿ ಮ | ತ್ತೊಂದು ಪರಿಯಲಿ ಭೂಮಿಯಲಿ ತಾ |
ನೊಂದು ಪರಿಯಲಿ ಇಂದ್ರತೋರೆ ಮಹೇಂದ್ರ ಜಾಲವನು || ೧೦೫ ||

ಪಲವು ಭುಜಶಾಖೆಗಳೊಳಗೆ ಮಣಿ | ವಲಯಮೆನೆ ಕೈಯುಗುರ್ಗಳಲಿ ಏಂ |
ನಲಿದರೋ ಸುರಕೋಟಿ ನರ್ತಕಿಯರು ಸರಾಗದಲಿ ||
ಸಲೆಬಿಡೋಜನು ನರ್ತಕಿಯರುಂ | ನಲಿವುತಿರೆ ಜಿನಸಭೆಯೊಳೆನೊಡ |
ವೆಳದುದೋ ತಾಂಡವವು ಲಾಸ್ಯವು ಎನಿಸಿತಾ ನೃತ್ಯ || ೧೦೬ ||

ಪೊಡವಿಯಲಿ ಕೇಳಿಕೆಯ ನೋಡಿಯೆ | ಕೊಡುವರಭಿಮತ ವಸ್ತುವನು ನಟ |
ಬಡವನಾಗಿರೆ ಒಡೆಯನಹವೊಲು ಏನ ಹೇಳುವೆನು ||
ಸಡಗರದಿ ಹರಿ ನಟನು ನರ್ತಿಸೆ | ಕೊಡುವ ಜಿನಪನೆ ಬಲ್ಲ ಚಾಗವ |
ಪಡೆವಯಿಂದ್ರನೆ ಬಲ್ಲನೆಂದನು ಮಾಗಧಗೆ ಮುನಿಪ || ೧೦೭ ||

ಇಂದ್ರನುಂ ನಿಜ ದಕ್ಷಿಣೇಂದ್ರನು | ಸಂದ ಸಚಿಯುಂ ಲೋಕಪಾಲರು |
ಬಂದು ಭೂಪೇಂದ್ರ ತೆಗೆ ಜಿನಪನುಪಾಸನ ಫಲದಿ ||
ಒಂದಿ ನಡೆದು ಸುಮುಕ್ತಿಯೆಯಿದುವ | ರೆಂದಡೇಂ ಧನ್ಯರೊ ಬಳಿಕ ದೇ |
ವೇಂದ್ರ ನೃತ್ಯದಿನೋಲಗಿಸಿ ಸರ್ವಜ್ಞಗೆರಗಿದನು || ೧೦೮ ||

ಸುರ ನಿವಾಸಿಗಳಪ್ಪ ಸುಮಹ | ಸ್ತರರ ದಾದಿಯರಂಗರಕ್ಷರ |
ತರುವ ಕಳ ಜಾವದರ ಸಹಚರ ಸುರಕುಮಾರಕರ ||
ಪರಮನನು ಓಲಗದೊಳೊಪ್ಪಿಸಿ | ಇರಿಸಿ ಜಿನನು ಜಿನಜನನೀ ಜನ |
ಕರನು ಬೀಳ್ಕೊಂಡೈದೆ ಬಲವಂದನು ಶಚೀರಮಣ || ೧೦೯ ||

ಸುರಪವೆತ್ತಾನುಂ ಶಚೀಸಹ | ವರಮನೆಯ ಪೊರಮಡಲು ದಿಟ್ಟಿಗ |
ಳರುಹನತ್ತೆಳೆಯಿತ್ತಮಾರ್ಗಂದೆಗೆಯೆ ಚರಣಗಳು ||

ಸುರಪಗೆಳೆತೆಗೆ ಯಾಯ್ತುಪಯಣವು | ವೆರೆದ ಚತುರನಿಕಾಯ ವಾಗಸ |
ದೆರವೆದುಂಬಲು ಮೆಲ್ಲನೈರಾವತವನೇರಿದನು || ೧೧೦ ||

ಬಳಿಕ ಚತುರ ನಿಕಾಯವನು ನಭ | ದೊಳೆ ಮುದದಿ ಬೀಳ್ಕೊಟ್ಟು ತನ್ನಯ |
ನಿಲಯವನು ಪೊಕ್ಕಡಿಗಡಿಗೆ ಜಿನ ಚರಣ ಸೇವೆಯನು ||
ಗಳಿಸಿದೆನಲಾ ಧನ್ಯ ನಾನೆಂ | ದಳವಿಗಳಿದತಿ ಭಕ್ತಿಯಿಂದೇಂ |
ನಲಿದನೋ ಮೃದುಮಧುರ ಕವಿತಾಮೃತರಸಾರ್ಣವನು || ೧೧೧ ||

ಶ್ರೀವದನದೊಳಗೆಸೆದು ದೆಳನಗೆ | ತಾವರೆಯನಸುನಗೆಯವೊಲು ಸಿರಿ |
ದೇವಿತಮೃತಾಂಶುವಿನೊಳಮರ್ದಿನ ಪನಿವೊಳೆವ ತೆರದಿ ||
ಆ ವಿಮಲದಂತಗಳ ಮೊಳೆವೆಳ | ಗಾವರಿಸಿದವು ನಗೆ ಮೊಗದೊಳಾ |
ದೇವದೇವನ ಶೈಶವದೊಳವನೀಶ ಕೇಳೆಂದ || ೧೧೨ ||

ತೊರೆವ ಸಲೆಯಲಿ ರಾಜಹಂಸೆಯ | ಮರಿ ನಡೆವವೊಲು ನೀಲರನ್ನದ |
ನೆರೆದ ನೆಲದಲಿ ದಟ್ಟಡಿಯ ನಿಡೆ ರನ್ನದಂದುಗೆಯ ||
ಮೆರೆವದನಿ ತಾವರೆಯ ರಜದಲಿ | ನೆರೆಪೊದಳ್ದೆಳೆದುಂಬಿ ಮಾಲೆಯ |
ಕಿರುದನಿಯವೊಲು ಜಿನನ ಚರಣಾಂಬುಜದಲೊಪ್ಪಿದವು || ೧೧೩ ||

ಸುರಕುಮಾರರ ನಭವನೊಲಿದಾ | ಪರಿಯ ಬೆನ್ನಲಿನಡಯಿಪನು ಭ |
ವ್ಯರನು ಈ ಪರಿಸುಪಥದಲಿ ನಡೆಯಿಸುವೆನೆಂಬಂತೆ ||
ಹರುಷದಲಿ ಮುಂಡಾಡಿ ತೆಕ್ಕೆಯ | ಲಿರಿಸಿ ಮುದ್ದಿಪ ವರಜನನಿ ಜನ |
ಕರಿಗೆ ಬಂಧು ವ್ರಜಕೆ ಪರಮಾನಂದಗೊಡುತಿಹನು || ೧೧೪ ||

ನೆರೆದಮರದಾದಿಯರು ಬೆನ್ನನೆ | ಪರಿದು ಪಾದವ ಕಟ್ಟಿಕೊಂಡಾ |
ಪರಮನನು ಮಜ್ಜನಗೊಳಿಸುವರು ಸೆಜ್ಜೆಗೊಳಿಸುವರು ||
ಕರೆದು ತಂದಮೃತಾನ್ನವೂಡುವ | ರಿರುಳು ಪಗಲಗಲದೆಯು ಜಾವದ |
ವರು ಮಹಾಸುವಿಧಾನದಿಂ ಬಿಡರಂಗರಕ್ಷಕರು || ೧೧೫ ||

ಸಿಂಗರಿಸುವರು ರನ್ನದೊಡವಿಂ | ಅಂಗದಲಿ ಮೃದು ತಳದಿ ತೊಡೆವರು |
ಭೃಂಗ ಸಂಗಿ ಸುಗಂಧವನು ದಿವ್ಯಾಂಬರವ ಪೊದಿಸಿ ||
ತುಂಗಗುಣಿಯ ಸಮುದ್ರ ವಿಜಯ ನೃ | ಪಂಗೆ ಕೊಡೆ ಕೈಗೈದು ತಲಿಯಿ |
ತ್ತಂಗೈಸಿ ಶೀವದೇವಿಯನು ಬಿಗಿದಪ್ಪಿ ನಗುತಿಹನು || ೧೧೬ ||

ತೋಳು ತೋಳೆನೆ ನೇಮಿಕುವರನು | ತೋಳನಾಡುವನೊರ್ಮೆ ಕೈಪರೆ |
ಮೇಳಿಸಿದ ಜನನೀ ಜನಕರನು ನೋಡಿ ನಸುನಗುತ ||

ತಾಳಜತ್ತಿಗೆ ಮರಿಯರಗೆಯಕೆ | ಕಾಲಗೆಜ್ಜೆಗಳುಲಿಯೆ ಕುಣಿದನು |
ಬಾಲಲೀಲೆಯಲೆಲ್ಲರನು ಸಂತೋಷ ಬಡಿಸಿದನು || ೧೧೭ ||

ಸರಿವರೆಯದಲಿ ಬೆಳೆಬೆಳೆದು ಜಿನ | ವರನೊಡನೆ ಶಿಶುಕೇಳಿಯನು ಮಿಗೆ |
ಚರಿಚರಿಸಿ ಸುರಕುವರರಳ್ಕರುಗೊಂಡು ಸುಖಿಸುವರು ||
ಅರಿಗಳಿಗಳಾಗಂಚೆ ಮರಿಯಾ | ಗೆರಳೆಯಾಗಿ ವಿನೋದಕೇಳಿಗೆ |
ಪರಿತೆರಲು ತಾನರಿಯದರವೊಲು ನಲಿವನದರೊಡನೆ || ೧೧೮ ||

ಸುರಕುಮಾರರು ಮೆಲ್ಲಮೇಷೋ | ದ್ಧರ ಮಹೀಪ ಕುಕ್ಕುಟ ವಿಡಾಯದಿ |
ಬರೆ ಕರುಣದಲಿ ನೋಡಿ ಅರ್ತಿಬಡುವನು ಕಾದಿದೊಡೆ ||
ಪರಮನೇಂ ಮೆಚ್ಚನು ಅಹಿಂಸಾ | ಪರನು ಹಿಂಸೆಯ ಮೆಚ್ಚುವನೆ ಈ |
ಪರಿಯಲೊಸರಿಸಿದನು ಶಿಶುತೆಯನರಸ ಕೇಳೆಂದ || ೧೧೯ ||

ಗುರುವದಾವನೊ ನೋಡೆ ತ್ರಿಜಗ | ದ್ಗುರುವೆನಲು ಬಹು ಶಾಸ್ತ್ರ ಶರಧಿಯ |
ಕರೆಯ ಕಂಡನು ಲೌಕಿಕದ ಕಲೆಯೆಲ್ಲವನು ತಿಳಿದ ||
ಬರೆಯದೋದದೆ ಸಾಧಿಸದೆಯೇ | ನರಿದೆ ರನ್ನದಮೊಳಗೆ ಶಾಂತಿಯು |
ಮರುಗ ಶಶಿಗಾ ಪರಿಮಲವು ಭೂಪಾಲ ಕೇಳೆಂದ || ೧೧೯ ||

ಗುರುವದಾವನೊ ನೋಡೆ ತ್ರಿಜಗ | ದ್ಗುರುವೆನಲು ಬಹು ಶಾಸ್ತ್ರ ಶರಧಿಯ |
ಕರೆಯ ಕಂಡನು ಲೌಕಿಕದ ಕಲೆಯೆಲ್ಲವನು ತಿಳಿದ ||
ಬರೆಯದೋದದೆ ಸಾಧಿಸದೆಯೇ | ನರಿದೆ ರನ್ನದಮೊಳಗೆ ಶಾಂತಿಯು |
ಮರುಗ ಶಶಿಗಾ ಪರಿಮಲವು ಭೂಪಾಲ ಕೇಳೆಂದ || ೧೨೦ ||

ಜನಿಯಿಪಂದೊಲಿ ತಂದುತನ್ನೊಳು | ಜನಿಯಿಸಿದವು ಮತಿಶ್ರುತಾವಧಿ |
ಯನೆ ಕುಮಾರನ ಮತಿಶ್ರುತಂಗಳನರಿವ ಹೊಗಳುವೆನು ||
ಎನಿಪುದದು ಪುನರುಕ್ತ ಸಗ್ಗದ | ಅನುಪಮಿತ ಭೋಗೋಪಭೋಗದಿ |
ದಿನದಿನಕೆ ಬೆಳೆಬೆಳೆದು ಯೌವ್ವನವಾಂತನಾ ನೇಮಿ || ೧೨೧ ||

ಸತತ ನಿಸ್ವೇದತೆ ವಿಮಳತಾ | ಸ್ಥಿತಿ ಸುಧಾ ಪಾಂಡುರರುಚಿರರುಧಿ |
ರತೆ ಪ್ರಥಮಸಂಸ್ಥಾನನ
ರತೆ ಪ್ರಥಮಸಂಸ್ಥಾನನ ಸಂಹನನತೆ ಸರೂಪತ್ವ ||
ಅತಿ ಸುರಭಿ ಗಂಧತ್ವಮುಂ ವಿ | ಶ್ರುತ ಸುನಂದ್ಯಾವರ್ತ ಸ್ವಸ್ತಿಕ |
ವಿತತವಹ ನೂರೆಂಟು ಲಕ್ಷಣ ಲಕ್ಷಿತತೆ ವೆರಸಿ || ೧೨೨ ||

ತಿಲ ಮಸೂರಿಕೆ ಮುಖ್ಯನವಶತ | ವಿಲಸಿತ ವ್ಯಂಜನ ಸುರಂಜನೆ |
ದಲೆದ ಸೌಲಕ್ಷಣ್ಯಮುಂ ಪ್ರಿಯಹಿತ ಶುಭಾಷಿತ್ವ ||
ಬಳವದಪ್ರತಿ ಹನರನನಂತೋ | ಜ್ವಳ ಮಹಾವೀರ್ಯತ್ವಮಿಂತೊಡ |
ವೆಳದ ಸಹಜಾತಿಶಯ ವೀರೈದೊಪ್ಪಿದವು ಜಿನಗೆ || ೧೨೩ ||

ನೆರೆನಿರಾಮಯವಾದ ಕಂಠಕ | ಗರಳ ಶಸ್ತ್ರಾದಿಗಳು ಅಳುರದ |
ನಿರತಿಶಯದಿಂದ್ರಿಯದತೀಂದ್ರಿಯ ಸೌಖ್ಯಕಾರಣದ ||
ವರದಶಧನೂತ್ಸೇದಹ ಸಾ | ಸಿರವರುಷ ಮಿತದಾಯವಿಹ ಭಾ |
ಸುರಹರಿನ್ಮಣಿ ರುಚಿರಕಾಂತಿ ಶರೀರವೊಪ್ಪಿದು || ೧೨೪ ||

ಕಾಮ ಸನ್ನಿಭ ರೂಪನೆಂಬೆನೆ | ಕಾಮವಿಜಯನೆನಿಪ್ಪ ಬಿರುದಿನ |
ಸೀಮೆಯಳಿವುದು ನೋಡುಪಾಪದ ಮಾತನಾಡುವೆನೆ ||
ಶ್ರೀಮುಖವು ಪಂಕಜವೆನಿಪ್ಪೆನೆ | ಆ ಮಹಿಮ ನಿಷ್ಪಂಕ ಅದರಿಂ |
ನೇಮಿ ಜಿನಪ ಸ್ವಾಮಿಯನುಪಮನೆಂಬವನೆ ಜಾಣ || ೧೨೫ ||

ಉದಯದರ್ಕ ಸಮಗ್ರ ಕರ ಸಂ | ಪದವನಾಂತವೊಲೆಳೆ ಶಶಿಯೇ ಪೆ |
ರ್ಚಿದರ ಕಲಾದರನಾದವೊಲು ವರಪಾರಿಜಾತ ಸಸಿ ||
ವಿದಿತವೃಕ್ಷತೆಗೊದಗುವಂದದಿ | ತ್ರಿದಶಪತಿ ನತ ನೇಮಿಬಾಲ್ಯದ |
ನೆಲೆಯನೋಸರಿಸಿದನು ನವ ಯೌವನವನಪ್ಪಿದನು || ೧೨೬ ||

ಬಗೆವೊಡಿಲ್ಲಿಂದಿತ್ತಲಿಂನಭ | ವಗೆ ತನಗೆ ಇಲ್ಲಿಲ್ಲ ತಾಂ ಪ |
ತ್ತುಗೆಯೆನಿಪ ಸವಿಬಾಲತನದಲಿ ಚರಮತನು ಚೆಲುವ ||
ಮಿಗೆತಳೆದು ಸುರಲೋಕವೇ ಪ | ಥ್ಯಗಳ ಚೆಲುವಿಗೆ ಚೆಲುವನಿತ್ತೇಂ |
ಸೊಗಯಿಸಿತೋ ಸರ್ವಜ್ಞ ಪರಮೌದಾರಿಕ ಶರೀರ || ೧೨೭ ||

ವರಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀಜಾತ ನವ ಮಧು |
ಕರ ವಿರಾಜಿತ ಸುಕವಿ ಸಾಳುವ ವಿರಚಿತವುಮಪ್ಪ ||
ಪರಮನೇಮಿ ಜಿನೇಶ ಪಾವನ | ಚರಿತೆಯೊಳಗೆಂಟನೆಯದತಿ ಬಂ |
ಧುರತೆವಡೆದುದು ಸುರಪಕೃತ ಕಲ್ಯಾಣ ಪರ್ವವಿದು || ೧೨೮ ||

|| ಅಂತು ಕಲ್ಯಾಣ ಪರ್ವಕ್ಕಂ ಸಂಧಿ ೩೩ಕ್ಕಂ ಮಂಗಲಮಹಾ ||

**ಸಂಧಿ ೩೪**

ಪರಮನಿರುತಿರಲತ್ತ ಹಸ್ತಿನ | ಪುರದಲಸ್ತ್ರಾಭ್ಯಸನವನು ಕಲಿ |
ತಿರದೆ ಪಾಂಡವರಂದು ಪೊಕ್ಕರುವಾರಣಾಸಿಯನು || ಪಲ್ಲ ||

ಕೇಳೆಲೇ ಶ್ರೇಣಿಕ ಧರಿತ್ರೀ | ಪಾಲ ನೇಮಿಸ್ವಾಮಿಯಿಂತು ದ |
ಯಾಳುವಿರುತಿರಲತ್ತ ಹಸ್ತಿನ ಪುರದೊಳಾ ಪಾಂಡು ||
ಬಾಲಕರು ರಾಣಿಯರು ಸಹಸಂ | ಮೇಳವಿರುತಿರಲದ ವಿಬೋಧರು |
ಶೀಲಗುಣವಂತ ಸುವ್ರತಾಖ್ಯರು ಬಂದರಾ ವನಕೆ || ೧ ||

ಪಲಋುತುಗಳೊಂದಾದುವೆನೆ ಬನ | ದೊಳು ಬೆಳೆದ ತಳಿರಲರು ಮಿಡಿಕಾ |
ಯ್ಗಳ ತೊಡೆಂಬೆಯ ಪೊತ್ತು ತಂದಿತ್ತರಸ ಬಿನ್ನಹವು ||
ಮಲರಹಿತರೆಮ್ಮ ಪವನವನೀ | ಚೆಲುವಿನಿಂ ಸಿಂಗರಿಸಿದಪರೆನ |
ಲೊಲಿದು ಕೊಟ್ಟನು ಋಷಿನಿವೇದಕಗಂಗ ಚಿತ್ತವನು || ೨ ||

ಪುರಜನವು ಸಹ ಹೋಗಿ ಮುದದಿಂ | ಗುರುಗಳನು ಪೂಜಿಸಿಯೆರಗಿ ಬಂ |
ದರಸು ಧರ್ಮವ ಕೇಳ್ದು ಸಂಸಾರದ ತೊಡಕಿಗಗಿದು ||
ಗುರುವೆ ದಯೆಗೈದೀಕ್ಷೆಯನು ಎಂ | ದರೆಯು ಪರಿಮೂರೇ ದಿನವು ಕೇ |
ಳರಸ ನಿನ್ನಯ ಬಾಳ್ಕೆ ಲೇಸಾಯ್ತೆಂದನಾ ಮುನಿಪ || ೩ ||

ಎನೆ ಹಸಾದವೆನುತ್ತ ವಂದಿಸಿ | ಮುನಿಪನನು ನಗರಕ್ಕೆ ನಡೆತಂ |
ದನು ಸಮಸ್ತರ ನೆರಪಿ ತನ್ನಚ್ಚುಗವ ಬಿಚ್ಚಳಿಸಿ ||
ತನುಜನಮಲ ಯುಧಿಷ್ಠಿರನನಾ | ಜನವರಿಯೆ ರಾಜ್ಯದಲಿ ನಿಲಿಸಿದ |
ವನುಪಮ ತಪೋವನಕೆ ಪೊರಮಟ್ಟನು ಗುಣೋನ್ನತನು || ೪ ||

ತೊರೆದು ಬೆನ್ನನೆ ಬರಲು ಪಲವುಂ | ತೆರದಿ ಕೊಂತಿಯ ನಿಲಿಸಿದನು ಏ |
ತರದೊಳಂ ನಿಲ್ಲದೆ ಸುಮದ್ರಿಯು ಬರೆ ತಪೋವನಕೆ ||
ತುರುಗಿ ಬರೆ ಪರಿವಾರ ಆ ನೃಪ | ಗೆರಗಿ ಸುವ್ರತ ಮುನಿಗಳಿಂದಾಂ |
ನೆರೆ ಮಹಾವ್ರತಿಯಾದನೆಲೆ ಭೂಪಾಲ ಕೇಳೆಂದ || ೫ ||

ಬಳಿಕ ಮದ್ರಿ ತಪಸ್ವಿಯಾದಳು | ತಳೆದು ಸನ್ಯಸನ ಸ್ಥಿತಿಯೊಲೊಡ |
ಲುಳಿದು ಸಗ್ಗಕೆ ಸಂದರತ್ತಲು ಇತ್ತಲಾ ಶಾಂತ ||

ತಳೆದು ಮುನ್ನವೆ ಸಪ್ತಮದಗುಣ | ನಿಳಯ ಶ್ರಾವಕವ್ರತದೊಳಗೆ ನಿ |
ಶ್ಚಲನಿರಲು ಸುತರಾದ ಚಿತ್ರವಿಚಿತ್ರ ವೀರ್ಯಕರು || ೬ ||

ಕಳಿದ ದೆಸೆಯಿಂ ಪುಟ್ಟಿ ಪಾಂಡುವ | ತೊಲಗಿಕೆಯ ಅತಿಬೆಳೆಯೆ ವಿರತಿಯು |
ಲಲನೆ ಸತ್ಯಾವತಿಯು ಸಹವಾ ಅಂಬೆ ಮೊದಲಾದ ||
ಚೆಲುವ ಸೊಸೆದಿರುವೆರಸಿ ದೀಕ್ಷೆಯ | ತಳೆದರವರತ್ತಿತ್ತ ಸುಖದಿಂ |
ದಿರಲು ಪಾಂಡವ ಕೌರವರು ಭೂಪಾಲ ಕೇಳೆಂದ || ೭ ||

ಬಂದನಾ ಭಾರದ್ವಜಾನ್ವಯ | ಸಂದ ವಿಪ್ರನು ದ್ರೋಣನೆಂಬವ |
ನಂದು ಕುರುವಂಶಜನು ಕೃಪನೆಂಬವನಿಪನು ಕಂಡು ||
ಚಂದದಲಿ ವಿನಯವನೆಸಗಿ ನಿಜ | ಮಂದಿರಕ್ಕೊಡಗೊಂಡು ಪೋದನು |
ಒಂದು ವಿಲು ವಿದ್ಯಾ ಪ್ರವೀಣನೆನಿಪ್ಪ ಕತದಿಂದ || ೮ ||

ಇರಿಸಿಕೊಂಡಿದ್ದೊಂದು ಶುಭವಾ | ಸರದೊಳಾ ಗಾಂಗೇಯನೋಲಗ |
ವಿರಲು ಕೃಪ ಕರೆತಂದು ಕಾಣಿಸಲೀತನಾರೆನಲು ||
ವರಧರ್ನುವಿದ್ಯಾ ತೀನೇತ್ರನು | ಸುರಸ ದ್ರೋಣಾಚಾರ್ಯನೆಂಬವ |
ನುರುಕಲಾವಿದ ವಿಪ್ರನೆಲೆ ಭೂಪಾಲ ಕೇಳೆಂದ || ೯ ||

ಎನೆ ನದೀಸುತ ಕೇಳಿ ನಮ್ಮೀ | ತನುಜರನು ಬಿಲುವಿದ್ಯೆಯಲಿ ಜಗ |
ಕನುಪಮರುಮೆಂಬಂತೆ ಶಿಕ್ಷಿಸಿಯೆನಲೊಡಂಬಡಲು ||
ತನುಜರನು ನೂರೈವರನು ದ್ರೋ | ಣನ ವಶಕೆ ಕೊಟ್ಟನು ಮೊದಲೆ ಬೇ |
ಳ್ಪನಿತು ವಸ್ತುವನಿತ್ತು ಬಳಿಕ ಸುದಿನ ಮುಹೂರ್ತದಲಿ || ೧೦ ||

ತೊಡಗಿಸಿದನಾ ವಿದ್ಯೆಯನು ಎಡೆ | ಬಿಡದೆ ಕೌರವ ಪಾಂಡವರು ಸಂ |
ಗಡವೆ ಸಾಧನೆ ಮಾಡುತಿರೆ ದ್ರೋಣಂಗೆ ಕೃಪಮೆಚ್ಚಿ ||
ಕೊಡೆ ಅನುಂದತಿ ಎಂಬ ತನುಜೆಯನು | ಪಡೆದಳಶ್ವತ್ಥಾಮನನು ಈ |
ಪೊಡವಿಯೊಳಜೇಯನನು ನಿಖಿಳ ಕಲಾ ಪ್ರವೀಣನು || ೧೧ ||

ಅರಸುಗೈಯುತ ಕರ್ಣನಂತಿರು | ತಿರಲು ಪರಿವಾರ ಪ್ರಧಾನರು |
ವರತನೂಜ ವಿಕರ್ಣನಿರೆ ಸಾಕಿದ ಮಗಗೆ ನೃಪತಿ ||
ಅರಸುತನವನು ಕೊಟ್ಟೆನೆಂದೆಂ | ಬರ ನುಡಿಯು ಕಿವಿದಾಗೆ ಕುಲದೊಂ |
ದಿರವ ಜನನೀ ಜನಕರನು ತಾನರಿಯಬೇಕೆಂದು || ೧೨ ||

ತರಣಿಸುತ ಪೆರರರಿಯದಂದಂದಿ | ಪುರವ ಪೊರಮಟ್ಟೈದಿದನು ಅ |
ಚ್ಚರಿಯ ವಿಜಯಾರ್ಧಾಚಳದ ಗುಹೆಯಲ್ಲಿ ನಿಷ್ಠೆಯಲಿ ||

ಸ್ಥಿರದಿ ಜ್ವಾಲಾಮಾಲಿನಿಯ ಬಂ | ಧುರ ಷಡಕ್ಷರ ಮಂತ್ರವನು ತಡೆ |
ದಿರದೆ ಜಪಿಸಲು ಮಂತ್ರ ಸಾಮರ್ಥ್ಯದಲಿ ಜ್ವಾಲಿನಿಯ || ೧೩ ||

ಬಳಿಕ ತಾನೆ ಪ್ರಸನ್ನೆಯಾದಳು | ಕುಲಿಶ ಕವಚ ವಹ್ನಿ ಬಾಣವ |
ನೊಲವಿನಿಂದುರಿ ಮಾಲೆಯೆಂಬಾ ಪೀತವಸನವನು ||
ಘಳಿಲನಿತ್ತಳು ಮಗನೆಯೇಂಬೇ | ಕೊಲಿದು ಬೇಡೆನೆ ನನ್ನ ಜನನಿಯ |
ತಿಳಿವ ಪರಿಯನು ಕರುಣಿಸೆನೆ ಕರ್ಣಂಗೆ ತದ್ದೇವಿ || ೧೪ ||

ಎಂದಳೀ ಉರಿಮಾಲೆ ವಸನದ | ಚಂದನದ ಚರ್ಚೆಯವೊಲಾಂತಾ |
ಸೌಂದರಿಯೆ ನಿಜಮಾತೆಯೆಂದರಿಯೆನಲು ಬೀಳ್ಕೊಂಡು ||
ಬಂದು ಚಂಪಾಪುರದೊಳಗೆ ಸುಖ | ದಿಂದಿರುವ ಪಾಂಡವರ ಕೌರವ |
ರೊಂದು ಬಿಲು ವಿದ್ಯಾ ಪ್ರಭಾವವ ಕಲಿಕರ್ಣ || ೧೫ ||

ಅವರವರ ಬಾಣಾಸನಾಭ್ಯಾ | ಸವನರಿವೆನೆಂದೋರ್ವನೇ ಕಡು |
ತವಕದಲಿ ಹಸ್ತಿನಪುರವನೈತರಲು ಗುರಿಯೆನುತ ||
ಅವರಿರಲು ತಾನಲ್ಲಿಗೈತರೆ | ಅವನಿಯೊಳು ನಡೆತಪ್ಪ-ಪೊಂಬೆ |
ಟ್ಟವೊಯೆನುತ ಬಿಲುವಿಡಿದು ಬಹ ಕರ್ಣನನು ನೋಡಿದರು || ೧೬ ||

ಅವರ ಪಕ್ಕದಲಿರ್ದು ಬಿಲುವಿ | ದ್ಯವನು ನೋಡಿದನಾಗರುಡಿಯಲಿ |
ರವಿತನೂಭವನೋರ್ವ ನೊಳುಯಿಂತೆಂದ ಕಟಕಿಯಲಿ ||
ಇವರೆ ದ್ರೋಣಾಚಾರ್ಯರೆಂಬವ | ರಿವರ ಕೈಯಲಿ ಕಲಿವ ಪಾಂಡವ |
ರಿವರೆ ಕಲಿತೀ ಬಿಲ್ಲ ಬಿನ್ನಣವಿಂತಿವೇಯೆಂದ || ೧೭ ||

ಎಂದು ಮಾತನು ಕೇಳಿ ಯಮಸುತ | ಗೆಂದನವ ನೃಪಕೇಳಿ ಬಾಯ್ಗೇಂ |
ಬಂದವೊಲು ನೂರಾಡಬಹುದಲ್ಲದೆ ನುಡಿದ ತೆರದಿ ||
ಒಂದು ಕಾರ್ಯವ ಮಾಡಿದೊಡೆ ದೇ | ವೇಂದ್ರನವನಾಜಿಯೊಳೆನುತ ಮುಳಿ |
ಸಿಂದ ನುಡಿದಾ ನುಡಿಯೆ ಕದನದ ಬೀಜವೆನಿಸಿದುದು || ೧೮ ||

ಎಲೆಯುಧಿಷ್ಠಿರ ನಿನ್ನ ನಗೆಮೊಗ | ದಲಿ ಮುಳಿಸು ಬರಬಹುದೆ ವಿದ್ಯೆಯ |
ಹಲಬರೀಕ್ಷಿಸಿ ಮೆಚ್ಚುವರು ಮೆಚ್ಚರು ಕೆಲರು ನರರ ||
ಬಲುಹನಾರೈ ಬಲ್ಲರೆಂದದ | ನಿಲಿಸಿದನು ಬಿಲ್ಲೋಜನಿರಲಾ |
ಗಳು ಸುಯೋಧನ ಕರ್ಣನನು ಕೈವಿಡಿದು ಕರಕೊಂಡ || ೧೯ ||

ತೋಳಬಲಹುಳ್ಳವನು ವಿದ್ಯವಿ | ಶಾಲನೀತನು ಭದ್ರಮೂರ್ತಿಯು |
ಮೇಳಗೊಳಬೇಕೀತನೊಳಗೆನುತಾತ್ಮ ಬುದ್ಧಿಯಲಿ ||

ಆಲಯಕೆ ಒಡಗೊಂಡು ಹೋಗಿ ನೃ | ಪಾಲನೊಲವಿಂ ಮಜ್ಜನವನಿಂ |
ಪೇಳೆ ಮೂಡಿಸಿ ವಿನಯದಿಂ ವಸ್ತ್ರಾಭರಣವಿತ್ತ || ೧೦ ||

ಇತ್ತ ಬಾರೈ ಕರ್ಣ ಕುಳ್ಳಿರು | ಮುತ್ತಿ ನೀ ಗದ್ದುಗೆಯೊಳಗೆ ನ |
ಮ್ಮೊತ್ತಿನೊಲಿಯೆಂದುರೆ ಕರೆಯೆ ಅಜ್ಞಾತ ಕುಲದವನು ||
ಎತ್ತಣವನಾನೆನ್ನದೀಪರಿ | ಚಿತ್ತಯಿಸುವರೆ ಅಮ್ಮೆನೆನೆ ಕೈ |
ಯೆತ್ತಿ ನನ್ನಾಣೆಂದು ಹಿಡಿದೆಳ ತಂದಿರಿಸಿಕೊಂಡ || ೧೧ ||

ಅರಸು ಮಗನಹುದೆಂಬುದನು ನಿಜ | ಪುರುಷ ಲಕ್ಷಣ ತಾನೆ ಪೇಳದೆ |
ಹರುಷ ನಮಗಂತಲ್ಲದಾಗದು ನೀವೆ ಬಂದುದೆನೆ ||
ಕರೆದರಾರೋಗಣೆಗೆ ಬೋನದ | ವರು ಬಳಿಕ ಕೈವಿಡಿದು ಕರ್ಣನ |
ಕರೆದು ಕೊಂಡೊಡನುಂಡು ಒಂದೇ ಹರಣವೆನೆ ನೆಗಳ್ದ || ೧೨ ||

ಅರಸನನಿತಂ ಗೆಯ್ದು ಪೂಣ್ದನೆ | ಕರೆದು ಕೊಂಡೊಳಗೈದಿ ತನ್ನೆಸೆ |
ವರಸಿಯರೊಳರ್ಕಜಗೆ ಬಂಧುಪ್ರೀತಿ ಮೂಡಿಸಿದ ||
ಇರದೆ ಕೊಟ್ಟನು ಅಂಗದೇಶದ | ಹರಣದೊಳಗಣ ಮಾತನೆಲ್ಲವ |
ವಿರಚಿಸಿದನತಿ ವಿನಯ ವಿತರಣಕವನೆ ಬೆರೆಗಾದ || ೧೩ ||

ಎಲೆ ಧರಿತ್ರೀಪಾಲ ನನ್ನಯ | ಕುಲವನರಿಯದೆ ಛಲವ ನೋಡದೆ |
ಒಲಿದು ಮೂಡಿದ ವಿನಯವೊಂದಕ್ಕೇ ಈ ಹರಣ ||
ಬೆಲೆಕಣಾ ಸೋಲಕ್ಕೆ ಸುರಗಿಯ | ತಳವೆ ಗೆಲ್ಲಕೆ ಗುಡಿಯ ಕಟ್ಟುವೆ |
ಚಲಿಸೆ ನಿನ್ನೆಂದೊಡನೆ ಸಾಧನೆ ಮಾಡುತಿಹ ಕರ್ಣ || ೧೪ ||

ಎಂದಿನಂದದಿ ದ್ರೋಣನಲಿ ತಾ | ವೊಂದಿ ಬಿಲುವಿದ್ಯೆಗಳ ಕಲಿತರು |
ಮುಂದೆ ದುರ್ಯೋಧನನು ಭೀಮನು ಗದೆಯೊಳರ್ಜನನು ||
ವೊಂದೆ ಬಿಲ್ಲೊಳು ಲಕುಳಕೊಂತದೊ | ಳಂದು ಸಹದೇವನು ಖಡುಗದಲಿ |
ಸಂದು ಸಾಧಿಸಿ ಸಕಲ ವಿದ್ಯಾ ಪ್ರೌಢರೆನಿಸಿದರು || ೧೫ ||

ವಿಪುಳ ಪಾಂಚಾಳಾವನೀಪತಿ | ದ್ರುಪದ ನಯಸಖನು ನಾಂ ಕಂ |
ಡಪೆನೆನುತ ಬಿಲ್ಲೋಜ ಪ್ರೇಮದಿ ಪೋಗೆ ತತ್ಪುರಕೆ ||
ದ್ರುಪದ ಮುನ್ನಣ ನಣ್ಪಳಿದು ಗ | ರ್ವಿಪುದೆ ಭೇದವನಾಂತು ದ್ರೋಣನು |
ಕುಪಿತಮನ ಮರಳಿದನು ಹಸ್ತಿನಪುರಕೆ ಶೀಘ್ರದಲಿ || ೧೬ ||

ಬಂದು ಪೇಳ್ದನಿದೆಲ್ಲವನು ಯಮ | ನಂದನಗೆ ಕೇಳ್ದಾ ಯುಧಿಷ್ಠಿರ |
ನೆಂದನಾ ತೆರನೆಲ್ಲವನು ಪಾರ್ಥಂಗೆ ಕಪಿಕೇತು ||

ಅಂದು ದ್ರುಪದನನೆಯ್ದಿ ವಿಕ್ರಮ | ದಿಂದ ಕೋಡಗಗಟ್ಟುಗಟ್ಟಿಯೆ |
ತಂದು ಅಗ್ರಜಗೊಪ್ಪಿಸಿದನಿಳೆಯೆಲ್ಲ | ದಿಂದ ಕೋಡಗಗಟ್ಟುಗಟ್ಟಿಯೆ |
ತಂದು ಅಗ್ರಜಗೊಪ್ಪಿಸಿದನಿಳೆಯೆಲ್ಲ ಬೆರಗಾಗೆ || ೧೭ ||

ಅರರೆ ಪ್ರಾರ್ಥನೆ ಲೋಕದಲಿ ದಂ | ಗರ ವಿಜಯನೆಂದೆಲ್ಲ ರಾಜಕು |
ವರರು ಸೋಜಿಗಗೊಳುತಿರಲು ದ್ರೋಣಂಗೆ ಧರ್ಮಜನು ||
ಇರದೆ ದ್ರುಪದನನೊಪ್ಪಿಸಲು ಬಂ | ದಿರೆಯಕಟ ನಿಮಗಿಂದು ಶಾಖಾ |
ಚರವಿಬಂಧನ ಬಂದುದೇ ಸುಡು ಎಂದನಾ ದ್ರೋಣ || ೧೮ ||

ಅರಸರಿಗೆ ಬಡ ಹಾರುವರಿಗೇ | ತರದು ಮಿತ್ರತೆಯೆಂಬುದನು ನಿ |
ಮ್ಮರಮನೆಯ ಬಾಗಿಲಿಲಿ ಕೇಳ್ದೆವು ಕಂಡವೆಲೆ ನಿಮ್ಮ ||
ನೆರೆದ ಈ ನೆರವಿಯಲಿ ನರನಿವ | ದುರುಳನೀಪರಿ ನಮ್ಮ ಮಿತ್ರನ |
ತರಬಹುದೆ ಎಂದಾ ದ್ರುಪದನನು ಬೀಳ್ಕೊಟ್ಟು ಕಳುಹಿದನು || ೧೯ ||

ನರನ ವೀರವನೆಲ್ಲರೂ ಬಿ | ತ್ತರಿಪ ನುಡಿ ಕಿವಿಶೂಲವಾಗಲು |
ಕುರುಪತಿಯು ಕಾಶಿಯಲಿ ಲಾಕ್ಷಾಮಾಡವನು ಚೆಲುವಿಂ ||
ವಿರಚಿಸಿದನತಿ ಗೂಢದಲಿ ತಾ | ನಿರದೆ ತಂದೆಗೆ ಬಂದು ಪೇಳಿದ |
ನರಸ ಕೌಂತೇಯರು ಗರ್ವಿಗಳಾದರೇವೇಳ್ವೆ || ೨೦ ||

ಲೆಕ್ಕಿಸರು ನಮ್ಮುವನು ಪಲವೇಂ | ಚಿಕ್ಕ ಹರೆಯದಿ ಮೊದಲು ನಮ್ಮೊಳು |
ಕರ್ಕಸವ ಬೆಳಸುವರು ಒಂದೆಡೆಯಿರ್ದುನಾವವರು ||
ತಕ್ಕುಲಿತೆಯನು ಮಾಡಿಕೊಂಬುದು | ಮಕ್ಕಳಾಟಿಕೆ ಬೇರೆ ಭೂಮಿಯ |
ದೊಕ್ಕನೀವುದು ತಕ್ಕುದವರಿಗೆ ಭೂಪ ಕೇಳೆಂದ || ೨೧ ||

ಎನಲು ಗಾಂಗೇಯರನು ಕರೆಯಿಸಿ | ತನುಜನೀ ನುಡಿಗೇಳಿಮೆನೆ ತೇ |
ದನು ಸುಯೋಧನ ತಾವು ಆಲೋಚಿಸಿ ಕುಮಾರರಿಗೆ ||
ಕನಪು ಬಾರದೆ ಬಿಡದು ಮುಂದೀ | ತನೆ ನುಡಿದವೊಲು ಬೇರೆ ಭೂಮಿಯ |
ನನುವಡಿಸಿ ಕೊಡುವುದೆ ಉಪಾಯವು ಎಂದರಾ ನೃಪನು || ೨೨ ||

ಕರೆಸಿದರು ಧರ್ಮಜನನತ್ಯಾ ಮುನಿಸಿನಿಸಾಗದಿರದದರಿಂ ||
ಹರುಷದಲಿ ನಿಜದೇಶದಲಿ ಬಂ | ಧುರದ ಕಾಶೀ ರಾಜಧಾನಿಯ |
ಳರಸುಗೈಯುತ ನಮ್ಮೊಳೈವರು ಸುಖದಲಿರಿಯೆನಲು || ೨೩ ||

ದೇವರೆಂದುದೆ ಹಿತವು ಬೇರೆನ | ಗಾವ ಬುದ್ಧಿ ಯದುಂಟೆಯೆಂದಾ |
ಭೂವರರು ಬೀಳ್ಕೊಂಡು ನಿಜಮಂದಿರಕೆ ನಡೆತಂದು |

ತೀವಿದನುಜರು ಕೊಂತಿ ಸಹ ತ | ಮ್ಮಾ ವಿದಿತ ಚತುರಂಗಬಲದ ಮ |
ಹಾ ವಿಭವದಲಿ ಪುರವ ಪೊರಮಟ್ಟನು ಯುಧಿಷ್ಠಿರನು || ೩೪ ||

ವಿನುತನಾ ಗಾಂಗೇಯ ಧೃತರಾ | ಷ್ಟ್ರನು ವಿದುರನು ದ್ರೋಣ ದುರ್ಯೋ |
ಧನನು ಮೊದಲಾದವರು ಕಳುಹುತ ಕಿರಿದು ದೂರಬರೆ ||
ಅನಿಬರನು ಪಾಂಡವರು ಸುವಚನ | ವಿನಯದಿಂ ಸತ್ಕರಿಸಿ ಮೆಲ್ಲನೆ |
ಕಳುಹೆ ಕತಿಪಯ ಪಯಣದಿಂ ವರವಾರಣಾಸಿಯನು || ೩೫ ||

ಪೊಗುವ ಸಮಯಕೆ ಕೌರವನನೆಡ | ಪಿಗ ಪುರೋಚನನಾ ಪೊಳಲ ಪೆಂ |
ಪೊಗೆದ ಗುಡಿತೋರಣಗಳಿಂ ಸಿಂಗರಿಸಿ ವೈಭವದಿ ||
ಸುಗುಣಿಗಳನಿದಿರ್ಗೊಂಡೆರಗಿ ಕೇ | ತುಗಳ ವಂದನೆಮಾಲೆಗಳ ಚೆಲು |
ವಲಗದರಗಿನ ಮಾಡದಲ್ಲಿರಿಸಿದನು ಹರುಷದಲಿ || ೩೬ ||

ವಿಮಲಮತಿ ಧರ್ಮಜನು ನೆರೆ ಧ | ರ್ಮಮನೆ ಪಿಡಿದರು ಅನುಜರುಂ ಸಹ |
ಸಮನಿಸಿದ ರಾಗದಲಿ ತನ್ನಗರಾಧಿಪತಿಯಾಗಿ ||
ಅಮರಪತಿನತ ಜಿನಪದಾಂಬುಜ | ಭ್ರಮರನೆನ್ನೆರೆ ಕೀರ್ತಿವೆತ್ತನು |
ವಿಮಲವಾಣೀ ನರ್ತಕೀ ರಂಗೋಪಮಾನನನು || ೩೭ ||

|| ಅಂತು ಸಂಧಿ ೩೪ಕ್ಕಂ ಮಂಗಲಮಹಾ ||

## ಪಾಂಡವ ಪರ್ವ (ಸಂಧಿ ೩೫)

**ಸಂಧಿ ೩೫**

ಉರಿಯೆ ಲಾಕ್ಷಾಗೇಹ ದೇಶಾಂ | ತರದೊಳಸುರರನಿಕ್ಕಿ ವಧುಗಳ |
ಧರಿಸಿ ದ್ರುಪದನ ಪೊಳಲು ಪೊಕ್ಕರು ಪಾಂಡುನಂದನರು || ಪಲ್ಲ ||

ಕೇಳೆಲೇ ಶ್ರೇಣಿಕ ಧರಿತ್ರೀ | ಪಾಲ ವಿದುರನು ತಿಳಿದನರಗಿನ |
ಶಾಲೆಯೆಂಬುದ ಕಳುಹೆ ಗೂಡದಿ ಕನಕ ಪಾಂಡವರ್ಗೆ ||
ಹೇಳಲಾಳೋಚಿಸಿಯೆ ದೇಶವಿ | ಶಾಲವನು ಗೂಢದಿ ಚರಿಯಿಸುವ |
ಬಾಳುವೆಯನವರೊಲಿಯೆ ಕನ್ನವ ಸವೆದನಾ ಕನಕ || ೧ ||

ನಿಲ್ಲಿ ನೀವನ್ನೆವರ ನಾ ಪೇ | ಳ್ವಲ್ಲದೈದಲೆ ವೇಡವೆಂದವ |
ನಲ್ಲಿರದೆ ಪೊರಮಟ್ಟು ತನ್ನುಜ್ಜುಗವ ಚಿಂತಿಸುತ ||

ನಿಲ್ಲದತ್ತೆಡೆಯಾಡುತಿಪ್ಪುದು | ಭಿಲ್ಲಿಯೈವರು ಸುತರು ಸಹ ಪಥ |
ದಲ್ಲಿ ಬರೆ ನೆರೆ ಕಂಡು ಮನದಲಿ ನಲಿದನಾ ಕನಕ || ೧ ||

ಎಲೆ ಬಡವೆ ನೀರಾರು ಈ ಮ | ಕ್ಕಳು ಸಹಿತ ಇತ್ತೆತ್ತ ಪೋದಪೆ |
ಬಳಲಿದೇಯೆನೆ ದೇಸಿಗಿತಿ ತಾನು ನಿಷಧಿಯೆನಿಪೆನಣ್ಣ ||
ಪೊಳಲೊಳೀ ಇರುಳೆಲ್ಲಿಯಿಹವೆನೆ | ತಳುವದೆನ್ನೊಡವನ್ನಿ ನಿಮ್ಮಯ |
ಬಳಲಿಕೆಯ ಕಳೆದೊಂದೆಡೆಯಲಿರಿಸುವೆನು ತಾನೆಂದ || ೩ ||

ಎನಲು ಕನಕನ ಹಿಂದೆ ಬರಲರ | ಮನೆಯಲೊಂದಂತರದಿ ಪಾಂಡವ |
ತನಯರರಿಯದ ವೊಲಿರಿಸಿಯಿರುಳರಮನೆಯ ಪೊಕ್ಕು ||
ವಿನುತೆ ಕೊಂತಿಯು ಸಹಿತೆ ಪಾಂಡವ | ರನಿಬರನು ಸವೆದಾ ಸುರಂಗದೊ |
ಳನುವಿನಿಂ ಪೊರಮಡಿಸಿ ಮುಚ್ಚಿದನಾ ಸುರಂಗವನು || ४ ||

ಬಳಿಕಲೀಯರುವರನು ಅರಮನೆ | ಯೊಳಗೆ ಕರೆದುಣಲಿಟ್ಟು ಮನ್ನಿಸಿ
ಬಳಲಿದಿರಿಯಿಲ್ಲಿಯೆ ವೊರಗಿಯೆಂದತಿ ವಿನಯದಿಂದ ||
ತಳುವದೊರಗಿಸಿ ದೀವಿಗೆಯು ಕಡು | ಬೆಳೆದು ಸುಟ್ಟುದೆನಿಪ್ಪ ಶಂಕೆಯ |
ಬೆಳಸಿ ಕಡುನಡುವಿರುಳದಕೆ ಕಿಚ್ಚಿಕ್ಕಿ ಹೊರವಂಟ || ೫ ||

ಹೊಗೆದು ಹೊತ್ತಿತು ಭುಗಿ ಭುಗಿಲ್ಧಗ | ಧಗಯೆನುತ ಕೇಸುರಿಯ ನಾಲಗೆ |
ನೆಗೆದುದೀಶ್ವರನಿಂ ತ್ರಿಪುರವುರಿದಂತೆ ನೆರೆನೆರೆದು ||
ಗಗನವನು ಚುಂಬಿಸಿತು ಇರುಳದು | ಹಲಗಲೆನಿಸಿದುದು ಸುತ್ತ ಯೋಜನ |
ದಗಲದಲಿ ಕಡು ಬೆಳಗೆ ಕಲವಳಿಸಿದುದು ಪುರಜನವು || ೬ ||

ಕರಿಕುಲದ ನಿಗಳಗಳ ಕಳೆದರು | ತುಗಗಳನತ್ತಿತ್ತಲೊಯ್ದರು |
ಸರಸರನೆ ಗೋವೃಂದವರನು ತೆವರಿದರು ತವತವಗೆ ||
ಉರಿದರಯ್ಯೋ ಪಾಂಡವರು ನಿಂ | ದುರಿವ ಕಿಚ್ಚಿನಲೆಂದು ಸಬ್ಬರು |
ಮರುಗಿದರು ಗೋಳಿಟ್ಟುದಾ ಪಾಂಡವ ಪರಿಗೃಹವು || ೭ ||

ಕುರುಪತಿಯ ಸೇವಕ ಪುರೋಚನ | ಹರುಷಬಟ್ಟನು ತಾನು ತನ್ನವ |
ರಿರದೆ ಅರಮನೆ ಮೂರು ಸುತ್ತಲು ಬೆಳತನಕ ತಿರುಗಿ ||
ಉರಿಯು ತನ್ನೊಳು ತಾನೆ ನಂದಲು | ಮೊರೆಯಿಡುತ ಪಾಂಡವರ ಪಳೆಯರು |
ಮುರುಟಿದಾರುಂ ಪೆಣನನೊಬ್ಬುಳಿ ಮಾಡಿ ದಹಿಸಿದರು || ೮ ||

ದೀವಳಿಗೆಯಾ ಹಬ್ಬದಲಿ ಮಿಗೆ | ದೀವಿಗೆಯ ಬೆಳಗುವ ವಿಧಾನದಿ
ನಾವೆ ಸುಟ್ಟವರಸುವ ಕೊಳಬೇಕೆಂದಿಹನ್ನವರ ||

ತಾವೆ ವಿಧವಶದೊಂದವಿನಿಂದಾ | ದೀವಿಗೆಯೆ ಮನೆಯಳುರೆ ಬೆಂದರು |
ಭೂವರನ ಪುಣ್ಯವಲೆಯೆಂದು ಪುರೋಚನನು ಮನದಿ || ೯ ||

ಬಳಿಕಿದೆಲ್ಲವ ಕಂಡು ಪಾಂಡವ | ರಳಿದರೆಂದು ಪುರೋಚನನು ಥಳ |
ಥಳನೆ ನೇಸರು ಮೂಡುತಿರಲು ಬಿನ್ನವತ್ತಳೆಯ ||
ತಳುವದಾಗಳೆ ಕೊಟ್ಟು ದೂತನ | ಕಳುಹಿ ಹಸ್ತಿನಪುರವ ಪೊಕ್ಕನು |
ಘಳಿನಾ ಧೃತರಾಷ್ಟ್ರನೊಡ್ಡೋಲಗವನೆಯ್ದಿದನು || ೧೦ ||

ಚರನು ರಾಯಸಿಗಂಗೆ ಓಲೆಯ | ನಿರದೆ ಕೊಡೆ ಮನದೊಳಗೆ ಓದಿದ |
ನರಸ ಬಿನ್ನಹವೆಂದು ಪಾಂಡವರಳಿದ ಒಕ್ಕಣೆಯ ||
ವಿರಚಿಸಿದನಾ ಚರನು ಮುಖದಿಂ | ಮರಳಿ ತದ್ವೃತ್ತಾಂತವನು ಬಿ |
ತ್ತರಿಸಿ ಬಿನ್ನಹ ಮಾಡಿಸಿದನೆದೆಗದಡೆ ಕೇಳ್ದವರು || ೧೧ ||

ಸುರನದೀಸುತನಂಧನೃಪ ವಿದು | ರರು ಗರುಡಿಯಾಚಾರ್ಯಮುಖ್ಯರು |
ಪಿರಿದು ದುಃಖಿತರಾದರಾ ಕೌರವನು ಹೂಸಕದ ||
ಕರುಣರಸವನು ಮೆರೆದರಾಗೆ | ಯ್ದುರುತರೋಪಾಯವು ಫಲಿಸಿತೆಂ |
ದಿರೆ ಮನದಲುಬ್ಬಿದನು ನೀರಿಳಿದರು ಬಳಿಕ್ಕವರು || ೧೨ ||

ಅರಗಿನಾ ಮಾಡದಲಿ ಕೌಂತೇ | ಯರನು ಕೌರವ ಕೊಂದನೆಂದಾ |
ತೆರನನೆಲ್ಲವ ಪೇಳಿ ಕೃಷ್ಣನು ಖೇದವನು ತಳೆದು ||
ಭರದಿ ಹಸ್ತಿನಪುರೆ ದಂಡೆ | ತ್ತಿರದೆ ನಡೆ ಎನೆ ಸಿರಿಧರನವ |
ಸರವಿದಲ್ಲನುಜಾತ ನೀನೀ ತೆರನ ಕೇಳೆಂದ || ೧೩ ||

ಮರೆವೆವೇ ಪಾಂಡವರು ಮಡಿದುದ | ಮರೆಯೆವೆಂತಂತತ್ತ ಚಕ್ರಿಯ |
ಮರೆಯನಾಜೀವಂಜಸೆಯ ಗಂಡನು ಮಡಿದ ನೋವ ||
ಅರಸಿಕೊಂಡವ ಬಾರದಿರನೀ | ತೆರನ ನೋಡುವ ಬೇರೆ ಬೇರಸಿ |
ಯೊರೆಯನುಚ್ಚಲದೇಕೆನುತ ನಿಲಿಸಿದನು ಮುರರಿಪುವ || ೧೪ ||

ಅತ್ತಲಾ ಪಾಂಡವರು ನದಿ ನಗ | ಉತ್ತರಿಸಿ ಪೋಪಲ್ಲಿ ವಿದ್ಯೋ |
ನ್ಮತ್ತ ಕಿಮ್ಮೀರಾಸುರನು ಕಾಮ್ಯಕ ವಿಪಿನದೊಳಗೆ ||
ಇತ್ತ ಬರದಿರೆ ನನ್ನ ಬನವೆಂ | ದೆತ್ತಿ ಬರೆ ಅಂತಕವದನದಲಿ |
ತುತ್ತಿದರು ಕಲಿ ಭೀಮನೆಲ್ಲರು ಪೊಕ್ಕರಾ ಬನವ || ೧೫ ||

ಇರದೆ ಮತ್ತಲ್ಲಿಂದ ದೇಶಾಂ | ತರವ ಚರಿಸುತವೊಂದೆಡೆಯ ಕಾ |
ಸರಪುರವ ಪೊಕ್ಕಿರ್ದರಾ ಪುರದರಸು ಧಾನ್ಯನೃಪ ||

ಅರಸಿ ಧಾತ್ರೀ ಸೌಂದರಿಯ ಬಂ | ಧುರ ತನೂಭವೆ ಕುಸುಮಮಾಲೆಯು |
ಧರೆಯಲಪ್ರತಿ ಸೌಂದರತೆವಡೆದಿಹಳು ಸುಕುಮಾರಿ || ೧೬ ||

ವಂದಿಮುಖದಿಂ ಕೇಳಿ ತಾಂ ಯಮ | ನಂದನನ ರೂಪಾತಿಶಯವನು |
ಅಂದು ಕಿವಿವೇಟದಲಿ ಬರಯಿಸಿ ವರ ಕುಸುಮಮಾಲೆ ||
ನೊಂದಿರಲು ತಜ್ಜನಕನಾಕೆಯ | ಬಂದ ವಿರಹದ ದೆಸೆಯ ಕಾಣದೆ |
ಬಂದು ಅವಧಿಜ್ಞಾನಿ ಶಾಂತಕ ಮುನಿಗೆ ವಂದಿಸಿದ || ೧೭ ||

ಕುಸುಮಮಾಲೆಗೆ ಗಂಡನಾವನು | ಬೆಸಸಿಮೆನೆ ಯಮನಂದನಗೆ ಅವ |
ಳಸುಗೆ ವಲ್ಲಭೆಂದದರಗಿನ ಮನೆಯಲವರೆಲ್ಲ ||
ಅಸುವ ಬಿಟ್ಟರು ಎನಲು ಆ ನುಡಿ | ಪುಸಿ ಕಣಾ ಚರಮಾಂಗರವರ |
ರ್ವಿಸುವ ಕಿಚ್ಚಿಂದಳಿಯರೆಂದನು ಭೂಪತಿಗೆ ಮುನಿಪ || ೧೮ ||

ಎನಲವರದೆಲ್ಲಿಹರು ಚಿತ್ತೈ | ಸೆನಗೆನಲ್ಕೀ ಪುರದಲಿಹರವ |
ರೆನೆ ಮುನಿಯ ಬೀಳ್ಕೊಂಡು ಸಾಧಿಸಿ ಅವರ ಕರೆತಂದು ||
ವಿನುತ ಧಾನ್ಯನೃಪಾಲ ಯಮನಂ | ದನಗೆ ನಿಜಸುತೆ ಕುಸುಮಮಾಲೆಯ |
ನನು ಮುದದಿ ಪಾಣಿಗ್ರಹಣ ವಿಧಿಯಿಂದೊಲಿದು ಕೊಟ್ಟು || ೧೯ ||

ಕೊಡೆ ಕುಸುಮಾಲೆಯಲಿ ಸವಿಸುಸಿ | ಲೊಡರಿಸಿಯೆ ಅಂದಿರ್ದುಯಿಂತಿ |
ರ್ದೊಡೆ ವಿದಿತರಾವಪ್ಪೆವೆಂದಾ ಧರ್ಮನಂದನನು ||
ಮಡದಿಗಾ ಮಾವಂಗೆ ತಮ್ಮಯ | ಅಡಕಥನುವನು ತಿಳಿಪಿ ಬೀಳ್ಕೊಂ |
ಡೊಡನೆ ನಡುವಿರುಳರುವರುಂ ಪೊರಮಟ್ಟರಲ್ಲಿಂದ || ೨೦ ||

ಭರವಸದಿ ಪೋಗುತಿರೆ ಮುಂದೊಂ | ದುರು ವಿಪಿನದಲಿ ತಾಪಸಾಶ್ರಮ |
ವಿರಲು ಬಳಲಿಕೆಗಳೆಯಲಲ್ಲಿರೆಯೋರ್ವ ಸುಕುಮಾರಿ ||
ಸ್ಮರನ ಮೋಹನ ಬಾಣವದೆ ಪೆ | ಣ್ಬರಿಜನಾಂತದೊ ಎನಲು ಸೊಗಯಿಪ |
ತರುಣಿ ತಪಗೆಯ್ಯಲಿಕೆ ಸಾರ್ದಳು ಕೊಂತಿಯಾಕೆಯನು || ೨೧ ||

ಹೊಸಹರೆಯದಲಿ ತಪವಿದೇಕಾ | ಯ್ತುಸುರೆನುತ ಮಿಗೆ ಕೀರಿ ಕೇಳಲು |
ಸಸಿವದನೆ ಕೇಳೆಮ್ಮ ಪಿತ ವಿಂಧ್ಯಕ ನೃಪಾಲಕನು ||
ಪೊಸೆದ ತಾಯ್ ಶ್ರೀದೇವಿ ನಾನವ | ರೊಸೆದ ಮಗಳು ವಸಂತ ಸೌಂದರಿ |
ಕುಸುಮಶರಸಮ ರೂಪನೆನಿಪ ಯುಧಿಷ್ಠಿರಂಗೆಂದ || ೨೨ ||

ಎನಲು ನಸುನಗೆ ಮೊಗದಿ ಕೇಳುತೆ | ವನಿತೆ ನೀಂ ಕೇಳೆಂದು ಯಮನಂ |
ದನನು ಕೊಂತಿಯು ತಮ್ಮ ವೃತ್ತಾಂತವನು ನೆರೆಯರುಪಿ ||

ಇನಿತು ಚಿಂತಿಸದಿರ್ಪುದೆಂದಾ | ವನದೊಳಗೆ ಯಿರುಳಿರ್ದು ಬೆಳಗ |
ಪ್ಪನಿತರೊಳೆ ಪೊರಮಟ್ಟು ಪೋದರು ಭೂಪಾ ಕೇಳೆಂದ || ೧೪ |

ಮುಂದುಮುಂದುರೆ ತೆಂಕುದಿಕ್ಕಿಂ | ಗೊಂದು ಬರೆ ತ್ರಿಶೃಂಗವೆಂಬಾ |
ಸಂದ ಪೊಳಲ ಬಹಿರ್ವನದಲುತ್ತುಂಗ ಕೂಟಗಳ ||
ವಂದನಾ ಮಾಲೆಗಳ ನಾನಾ | ಚಂದದಿಂ ರಮಣೀಯಮಾದಾ |
ಚಂದ್ರನಾಥ ಜಿನೇಂದ್ರ ಚೈತ್ಯಾಲಯವನೀಕ್ಷಿಸುತ || ೧೫ ||

ಬಂದು ತಾವರೆಗೊಳನೊಳಗೆ ನಲ | ವಿಂದೆ ಕರಣಚರಣಾನನವ ತೊಳೆ |
ದೊಂದು ಭಕ್ತಿಯಲಿ ಜಿನಾಲಯವನು ಪ್ರದಕ್ಷಿಣವ ||
ಬಂದು ಸರ್ವಾಂಗ ಪ್ರಣಾಮದಿ | ಸಂದು ಕೈಮುಗಿದನಿಬರುಂ ನೆರೆ |
ನಿಂದು ಜಯ ಜಯ ದೇವಚೂಡಾಮಣಿಯೆ ಎಂದವರು || ೧೬ ||

ಎಲೆ ಜಿನೇಶ್ವರ ಸಂಸರಣವೆಂ | ಬಳವಿಗಳಿದಾರಣ್ಯದಲಿ ಅತಿ |
ಬಲ ಚತುರ್ವಿಧ ದುಃಖದಾವಾಗ್ನಿಯಲಿ ನೆರೆ ಬೆಂದು ||
ಬಳಲಿ ತಳಮಳಗೊಳುತ ನಿಮ್ಮಡಿ | ಗಳ ನಖದ ತನಿವೆಳಗುಗೊಳದಲಿ |
ಮುಳುಗಿ ತಣ್ಣನೆ ತಣಿದೆವೆಂದರು ಪುಳಕಿತಾಂಗಿಗಳು || ೧೭ ||

ಅರಳುತಿದೆ ಮೊಗಕಮಲ ಕಣ್ಣೈ | ದಿಲುವೆರಸಿ ಹೃಚ್ಚಂದ್ರಕಾಂತೋ |
ಪಳವೊಸರುತಿರೆ ದುರಿತಗೆಸರೊಣಗುತಿದೆ ವರಭವ್ಯ ||
ಜಳಧಿಮಿಗೆ ಪೆಚ್ಚುತಿದೆ ಕುಮತಾ | ವಳಿಭಗಣಗಳು ಮಸುಳುತಿವೆ ನೀಂ |
ತಿಳುಪು ಚಂದ್ರಪ್ರಭನೊ ಸೂರ್ಯಪ್ರಭನೊ ಜಿನಪತಿಯೆ || ೧೮ ||

ಎಂದು ಚಂದ್ರಜಿನೇಂದ್ರನನು ಪಲ | ವಂದದಿಂ ನುತಿಗೆಯ್ದು ಪಾವನ |
ಗಂಧ ಗಂಧೋದಕ ಪವಿತ್ರಿತ ಗಾತ್ರರೊಲವಿಂದ ||
ಬಂದು ಜಿನಮುನಿಪೇಂದ್ರ ಪಾದಕೆ | ತಂದು ತಮ್ಮಯ ನೊಸಲ ಧರ್ಮವ |
ನಂದು ಕೇಳುವ ಸಮಯದಲಿ ಭೂಪಾಲ ಕೇಳೆಂದ || ೧೯ ||

ದೆಸೆಯ ಮುಸುಕುವ ವಾದ್ಯಗಳ ಸುರ | ಭಸದಿ ಮುತ್ತಿನ ಸತ್ತಿಗೆಯ ತಂ |
ಬಿಸಿಲಿನಲಿ ತತ್ಪುರದರಸುವರ ಚಂಡವಾಹನು ||
ಎಸೆವ ರತಿ – ಸಿರಿ-ಗಿರಿಜೆ-ಸರಸತಿ | ದೆಸೆವಡದಿಯರು ತಾವರೆ ಇವರೆನೆ |
ಮಿಸುಪ ಪನ್ನೀರ್ವರು ನಿಜಾತ್ಮಜೆಯರು ವೆರಸು ಬಂದ || ೨೦ ||

ಬಂದು ಭವ್ಯರ ಬಂಧುವೆನಿಸುವ | ಚಂದ್ರನಾಥಗೆ ಕಲ್ಪವೃಕ್ಷವೆ |
ಬಂದು ಪೂಜಿಸಿದಂತಿರಷ್ಟವಿಧಾರ್ಚನೆಯ ಮಾಡಿ ||

ಚಂದಚಂದದಿ ನುತಿಸಿ ವಂದಿಸಿ | ಬಂದು ಭಕ್ತಿಯಲೆರಗಿ ಬೋಧಾ |
ನಂದ ವರ್ಯಾಚಾರ್ಯರನು ಬೆಸಗೊಂಡನಾ ಭೂಪ || ೩೧ ||

ಎಲೆ ಮುನೀಶ್ವರ ಈ ಕುಸುಮಕೋ | ಮಲೆಯರಹ ತನುಜೆಯರ ಧರ್ಮಜ |
ಗೊಲಿದು ಕಡುವುಜ್ಜುಗದಿನಿರ್ದೆನುಯಿರೆ ಯುಧಿಷ್ಠಿರನು ||
ಅಳಿದ ಗಡ ಲಾಕ್ಷಾಗೃಹದಲೀ | ಲಲನೆಯರು ಅದ ಕೇಳ್ದು ದೀಕ್ಷೆಯ |
ಕೊಳಲು ಬಗೆದೆಯ್ತಂದಪರು ಮುನಿಹಂಸ ಕೇಳೆಂದ || ೩೨ ||

ಅರಸ ಕೇಳೈ ಪಾಂಡುತನುಜರು | ಚರಮದೇಹಿಗಳನ್ಯ ಘೌತದಿ |
ವರುಣವೈದುವರಲ್ಲ ನಂಬೆನೆ ಸಂತಸದಿ ಮುನಿಯ ||
ಚರಣಕಮಲಕ್ಕೆರಗಿ ಸುತೆಯರು | ವೆರಸಿ ತನ್ನರಮನೆಗೆ ಪೋದನು |
ವರಯುಧಿಷ್ಠಿರನಾ ಮುನಿಗೆ ಪೊಡವಟ್ಟು ಪೊರವಂಟ || ೩೩ ||

ಚರಮದೇಹಿಗಳವರು ಪೆರರಿಂ | ಮರಣವೆಯ್ದರೆನಲ್ಕೆ ತನ್ನೃಪ |
ಗುರುವಚನವನೆ ಪಿಡಿದು ಬೀಳ್ಕೊಂಡದುವೆ ಲೇಸಾಯ್ತು ||
ಮರಳಿ ಬೆಸಗೊಳೆವಿದಿತರಪ್ಪೆವು | ಕುರುಪತಿಯ ದುರ್ಯಶವು ಬಿಸುಟಂ |
ಬರಿದುದನು ನೋಡೆಂದು ತನ್ನವರ್ಗೆಂದನಾ ಭೂಪ || ೩೪ ||

ಏನನೆಂಬೆನು ಮುಂದೆ ಭೀಕರ | ಕಾನನದಲೊಂದಾಲವಿರ್ದುದು |
ಭಾನುವನು ತುದಿಗೊಂಬಿನಿಂ ಮೀಂಟಲು ಕಡಲ ಬಿರ್ದು ||
ತಾನು ಮರುದಿನಕಲ್ಲದಿತ್ತಣ | ಹಾನಿವೃದ್ಧಿಯನೋಡನವನಿಯ |
ಮಾನವನು ಮಾರಿದವವೊಲು ಪಸರಿಸಿತು ಶಾಖೆಗಳ || ೩೫ ||

ಘೋರವನದಾ ಭೀಳ ವಟುವನು | ಸಾರಿದರು ಪಾಂಡವರು ಪಡುವಣ |
ವಾರಿಧಿಯ ವಾರಿರುಹಸಖ ಸಾರಿದರು ಕತ್ತಲೆಯ ||
ಧಾರಿಣಿಯ ನುಂಗಿದುದು ಧರ್ಮಕು | ಮಾರಮುಖ್ಯರು ಪಥಪರಿಶ್ರಮ |
ಭಾರದಲಿ ಪೊರಗಿದರು ಕಾದಿರ್ದನು ವೃಕೋದರನು || ೩೬ ||

ಅನಿತರೊಳು ಚಂದನದ ಧೂಪದ | ನನೆಯ ನರುಗಂಪೆತ್ತಿ ಕೊಂಡೊ |
ಯ್ಯನೆ ನಿಜಾತ್ಮಜಗೊಂದು ಗದೆ ಬಹುದೆಂದರಿಪುವಂತೆ ||
ಅನಿಲನಾಗಳು ಬರಲಿದೇನೆಂ | ದನುಮನಿಸಿ ಅದು ಬಂದ ಬಟ್ಟೆಯ |
ನನಿಲಜನು ಕಿರಿದಂತರವ ಗಮಿಯಿಸಿ ನಿರೀಕ್ಷಿಸಿದ || ೩೭ ||

ಬಳೆದ ರೌದ್ರದ ಯಮನ ಕೈಯಿಂ | ದುಳುಚಿ ಬರೆ ಬೀಳ್ದಾಗ ಭೂತಳ |
ವಳಿವುದೆಂದಾ ವನದ ದೇವತೆ ನಿಡಿಯ ತೋಳೆತ್ತಿ ||

ತಳೆದವೊಲು ಪರ್ವಿದಿರ ಮೆಳೆಯಲಿ | ಪೊಳೆವ ರುದಿರೋದ್ಗಾರಿಯೆಂಬ |
ಗ್ಗಳಗದಾ ರತ್ನವನೆ ಅಷ್ಟವಿಧಾರ್ಚನೆಯ ಮಾಡಿ || ೩೮ ||

ಚಲಿಸದದ್ರಿಯೊಳಿರ್ದ ಪೂಜಕ | ನಳವನೀಕ್ಷಿಸಿ ಭೀಮ ಮೆಲ್ಲನೆ |
ಯೆಳಸಿ ಕೈ ನೀಡಲು ಗದೆಯು ಭೋರೆನೆ ಬರಲು ||
ತಳೆದುಡವರಿಸಿ ಬೀಸಿ ಮೊನೆಯಿ | ಕ್ಕಳವಡಲು ಪಡೆದಾಲವೃಕ್ಷದ |
ಬಳಿಗೆ ಭೀಮನು ಬಂದಿರಲು ಭೂಪಾಲ ಕೇಳೆಂದ || ೩೯ ||

ತೊಳತೊಳಪ ಸಸಿಕಲೆಯೆ ಬಾನಿಂ | ದಿಳಿದು ಬಂದುದೊ ಎನಿಪ ಚೆಲುವಿಕೆ |
ದಳೆದು ಮಣಿದೊಡವೆಳಗಿನಿಂ ಕೆಂಬಿಸಿಲ ನಿಂಬಿಡುತ ||
ಇಳಿದು ನಭದಿಂ ಬಂದು ಮಾಡಿಸಿ | ದಳು ವಿಯಚ್ಚರಿ ಭೀಮಸೇನನ |
ಕೆಲದಲಿರೆ ಕಣ್ಣಾರೆ ನೋಡಿದನಂದು ಸೊಬಗಿಯನು || ೪೦ ||

ತರುಣಿ ನೀನಾರೇಕೆ ಬಂದೀ | ಯಿರವ ಪೇಳೆನೆ ರಮ್ಯಪುರ ಖೇ |
ಚರ ಮಹೀಪತಿ ಸಿಂಹಘೋಷಗೆ ಸತಿ ಸುದರ್ಶನೆಗೆ ||
ವರ ತನೂಜೆ ಸುಕೇಶಿ ಯೆಂಬೆನು | ಗುರುಗಳೆಮ್ಮಯ್ಯಂಗೆ ಪೇಳ್ದರು |
ಎರಗಿ ನಿಲೆ ಬೆಸಗೊಂಡ ಕತದಿಂದೆಂದಳಾ ಕಾಂತೆ || ೪೧ ||

ಅರಸ ಕೇಳು ಹಿಡಿಂಬ ವನದಲಿ | ಪಿರಿಯ ಮೆಳೆಯಲಿ ನಿಂದ ಗದೆಯ |
ಚ್ಚರಿಯ ರುದಿರೋದ್ಗಾರಿಯದ ಪಡೆದವನೆ ನಿಜ ಸುತೆಗೆ ||
ಪುರುಷನೆನಲಾದೇಶಪುರಷನ | ನರಸೆ ಪಗಲಿರುಳಿಲ್ಲಿಗಾನೆ |
ಯ್ತರುತಿರಲ್ಕೆ ಹಿಡಿಂಬೆಯೆಂಬಭಿಧಾನವೆನಗಾಯ್ತು || ೪೨ ||

ತಿಳಿದನಂತಿದಲೇಂಕೆಯಾಳ್ವಾ | ಗಳ ಹಿಡಿಂಬ ವಿಯಚ್ಚರನು ದೋ |
ರ್ವಳನು ಸಾಧಿಸುತಿರ್ಪನದು ಪುಣ್ಯದಲಿ ನಿನಗಾಯ್ತು ||
ಮುಳಿದು ನಿನ್ನೊಳು ತಾಗದಿರನೀ | ನಲಘು ಭುಜಬಲವನು ನಿಮಿರ್ಚೆಂ |
ದೊಲಿದು ಪೇಳಲು ಬಂದೆನೆಂದಳು ಖಚರಿ ಭೀಮಂಗೆ || ೪೩ ||

ಎಂಬ ನುಡಿಗಳ ಕೂಡೆ ಮಸದಲ | ರಂಬಗಳು ಕಲಿಭೀಮನೆದೆಯಲಿ |
ತುಂಬಿ ಠಾಣೆಯವಿಕ್ಕಿದವು ಅತ್ತವಳ ಮನದೊಳಗೆ ||
ಶಂಬರಾರಿಯ ಮಲ್ಲಿಗೆಯ ಕೂ | ರಂಬುಗಳು ಪಾಳೆಯವ ಬಿಡಲು ಹಿ |
ಡಿಂಬ ಜಪ ಮುಗಿದೆವೆದೆರೆದು ಗದೆಯಿಲ್ಲದಿರೆ ಮುಳಿದ || ೪೪ ||

ಭರದಿ ತನ್ನಯ ಗದೆಯ ತ್ರ್ಗಿ | ತಿರುಹುತೆಯ್ತರೆ ಜವನ ಕೆಲದಲಿ |
ಇರುತಲಿಹ ಛಾಯಾವಧುವಿನಂತಿರ್ದ ಕನ್ನೆಯನು ||

ನೆರೆ ನಿರೀಕ್ಷಿಸಿ ಕೋಪ ಸಿಖಿಯು | ಬ್ಬರಿಸಿ ಸಿಡಿಲೆನೆ ಗಜರಿ ಗರ್ಜಿಸಿ |
ಬರಲು ಕಾಣುತ ಭೀಮನೆದ್ದನು ಆ ಗದೆಯ ಕೊಂಡು || ೪೫ ||

ಕಡು ಮುಳಿದು ಗದೆಯೆತ್ತಿ ನೆತ್ತಿಗೆ | ಹೊಡೆದನಡಸಿ ಹಿಡಿಂಬ ಹೊಯ್ಲಿಗೆ |
ಕೊಡಿವೆನೇ ಈ ಗದೆಯನಾಗದೆ ಸಲಿಸವಲ್ಲೆಂದು ||
ಎಡದ ಕರತಳಗೊಡುತ ಭೀಮನು | ಪೊಡೆಯೆ ನೆತ್ತಿಯ ನುಚ್ಚುನೂರಾ |
ಗೊಡೆಯೆ ಬೆಟ್ಟವು ಕೆಡೆದವೊಲು ಕೆಡೆದನು ಹಿಂಡಿಬಕನು || ೪೬ ||

ಸಲೆ ಒರಗಿದಾ ಪಾಂಡವರು ಈ | ಗಲಭೆಯಿಂದೆಚ್ಚತ್ತು ನೋಡಲು |
ಕೆಲದಲಿಹ ಕನ್ನೆಯನು ನೆತ್ತರಕಾರಿ ಮಡಿದಿರ್ದ ||
ಕಲಿಯ ಹೆಣನನು ಭೀಮಸೇನನ | ಬಲದ ಕೈಯ ಗದಾ ಸುರತ್ನದ |
ಬೆಳಗೆ ಬೆಳಗಾಗಿರಲು ಕಂಡರು ಕೊಂತಿ ಬೆರಗಾಗೆ || ೪೭ ||

ಇದರ ತೆರನೇನೆನೆಲು ಕೊಂತಿಗೆ | ವಿದಿತವಪ್ಪವೊಲಾ ಸುಕೇಶಿಯೆ |
ಮೃದು ಮಧುರ ವಚನದಿ ಪೇಳಲು ಕೇಳಿ ಸಂತಸದಿ ||
ಅಧಟನೆಂದ ನಿಲಜನ ನೃವರು | ಮುದದಿ ಕೊಂಡಾಡಿದರು ಅನ್ನೆಗ |
ಪದುಮಸಖನುದಯಿಸಿದನೆಲೆ ಭೂಪಾಲ ಕೇಳೆಂದ || ೪೮ ||

ವನದ ಭೀಕರತೆಯನು ಆಲದ | ಘನ ವಿಶಾಲತೆಯನು ನಿರೀಕ್ಷಿಸು |
ವನಿತರೊಳು ಪಾಲೂರದಿಚ್ಛಾಪುರವುಮೀ ಬನಕೆ ||
ಅನತಿದೂರದೊಳಲ್ಲಿ ಇಹವೆಂ | ದನಿಬರನು ಒಡಗೊಂಡು ಭೀಮನ |
ವನಿತೆ ಪೋಗಲಿಕವಳ ಜನಕನು ಮಗಳನರಸುತಲಿ || ೪೯ ||

ಬಂದು ಕಂಡನಿದೆಲ್ಲರನು ಸಾ | ನಂದದಲಿ ಮಿಗೆ ಸಿಂಹಘೋಷನು |
ತಂದು ತನ್ನ ವಿಮಾನವೇರಿಸಿ ರಮ್ಯಪುರಕೊಯ್ದು ||
ಒಂದು ಸುಮುಹೂರ್ತದಲಿ ಭೀಮಗೆ | ಚಂದವಾದ ಸುಕೇಶಿಯನು ನಲ |
ವಿಂದ ಕೈನೀರೆರೆದನವನವನೀಶ ಕೇಳೆಂದ || ೫೦ ||

ಪಡೆದಳಾಕೆ ಘಟೋದ್ಗಜನನು | ಗ್ಗಡದ ಭುಜಬಲಶಾಲಿಯನು ಒ |
ಗ್ಗೊಡೆಯದಿರ್ದಾ ಸಿಂಹಘೋಷ ಹಿಡಿಂಬೆಯರ ತಿಳಿಪಿ |
ತಡೆಯದಲ್ಲಿಂ ಬಡಗ ದಿಕ್ಕಿಗೆ | ನಡೆಯಲಿತ್ತಾ ಖಚರಿವಿದ್ಯದಿ |
ಕಡಲ ದಾಂಟಿದರೇಕಚಕ್ರವೆನಿಪ್ಪ ನಗರವನು || ೫೧ ||

ಪೊಕ್ಕರಲ್ಲಿಯ ಪಾರ್ವನೋರ್ವನ | ತಕ್ಕ ಗೃಹದಲ್ಲಿರಲು ನೆರಮನೆ |
ಯಕ್ಕೆಗೇಳುತ ಕೊಂತಿಯಲ್ಲಿಗೆ ಪೋಗಿ ಬ್ರಾಹ್ಮಿಣಿತಿ ||

ಅಕ್ಕೆ ನಿನಗೇಕಾದುದೆನೆ ಕೇ | ಳಕ್ಕ ಮಕ್ಕಳ ಹಡೆದ ತಾಯೇ |
ರಕ್ಕಸನುಮೀ ಪುರದ ಮಕ್ಕಳ ತಿಂದು ತೇಗಿದನು || ೫೨ ||

ಖಳನು ಮುನ್ನವೆ ಖಚರ ಗಡ ಮಿಗೆ | ಕಲಿತ ರಕ್ಕಸ ವಿದ್ಯೆಯಲಿ ಈ |
ಪೊಳಲಜನವೆಲ್ಲವನು ಒರ್ಮೆಯೆ ಕೊಲಲು ಬರೆ ಬೆದರಿ ||
ಅಳವಳಿದು ನೀವೆಂದ ಕಪ್ಪವ | ನೊಲಿದು ಕೊಟ್ಟಪೆವೆನೆ ಬಕನು ತಾಂ |
ತಿಳಿವೆನೆಂದನು ಬಾರಿಗೊಟ್ಟೊಡದೆಂತುಟೆನೆ ಪೇಳೆ || ೫೩ ||

ಪಿರಿಯ ಮಗನನು ಮನೆಮನೆಗೆ ಹ | ನ್ನೆರಡು ಖಂಡುಗದಶನ ಪಾಯಸ |
ಪರಿಪರಿಯ ಕಜ್ಜಾಯ ಬಂಡಿಯಲಿ ಕಳುಹಿದೊಡೆ ||
ಹರುಷದಿಂ ತಾಂ ತಿಂದುವುಳಿದರ | ಹರಣಗಾದಪೆನೆನಲು ತಾವೆ |
ಲ್ಲರು ಮಡಿದು ಫಲವೇನೆನುತ ಮನೆಮನೆಗೆ ಕೊಡುತಿಹರು || ೫೪ |

ಕೊಡಲು ಭಕ್ಷಿಸಿ ಈ ಪುರದ ಪೊರ | ಗಡವಿಯಲ್ಲಿರುತಿಹನು ತೂಣನು |
ಒಡತಿ ಕೇಳೌ ಬಂಡಿ ಬಂದಿದೆ ನನಗೆ ಮಗನೋರ್ವ ||
ಕೊಡುವೆನೆಂತಿಂದಿರುಳು ನನ್ನಯ | ಪಡೆದ ಕಂದನ ಮದುವೆಯೆನಿತುರೆ |
ಬಿಡದೆ ಪುತ್ರನನಪ್ಪಿ ಗೋಳಿಡೆ ಕಂಡು ಕರುಣದಲಿ || ೫೫ ||

ಮಗಳೆ ನೀ ಬೆದರದಿರುವೋರ್ಮನೆ | ಮಗನು ನಿನಗವನುಳುಹಿಕೊಳ್ಳು ನ |
ನಗಲವಯ್ವರು ಮಕ್ಕಳಿರ್ದಪರೋರ್ವರನು ಕೊಡುವೆ ||
ಮಿಗೆ ಸವೆದ ಬಲಿಗೂಳ ನೀ ಬಂ | ಡಿಗೆ ನೆರೆಯೆ ತುಂಬೆಂದು ತುಂಬಿಸಿ |
ನಗುತ ಕೊಂತಿಯು ಕರೆದು ಭೀಮನ ಕುಳ್ಳಿರಿಸಿ ಕಳುಹೆ || ೫೬ ||

ಹಿಂದೆ ಬಂಡಿಯನಿರಿಸಿ ಬರುಗೈ | ಯಂದದೋರ್ವನೆ ಬನಕೆ ಪೋದನು |
ಯಿಂದು ಹಸಿದೆವು ಹೊತ್ತು ಹೋಯ್ತೇಕೆಂದು ರಕ್ಕಸನು ||
ಮುಂದೆ ಬಂದೀಕ್ಷಿಸುತಿರಲು ಕಲಿ | ಯೊಂದಿ ಬರೆ ಕಾಣುತಲೆ ಕಡು ಭುಗಿ |
ಲೆಂದು ಗರ್ಜಿಸಿ ಬರಿದೆ ಬಂದೆಯಿದೇಕೆ ಹೇಳೆಂದ || ೫೭ ||

ಹಸಿದ ದಾನವನೆಂದು ತಾಯೆನ | ಗಸನವಿಕ್ಕದೆ ಶಕಟವನು ಹ |
ತ್ತಿಸಿ ಕಳುಹೆ ಹಸಿದುಂಟೆನೆಡೆಯಲಿ ನಿಮ್ಮ ಬೋನವನು ||
ಮಸುಳಿ ಹೋಗದೆ ಈ ಹದನ ನಿಮ | ಗುಸುರೆ ಬಂದೆನು ಮುನಿಯದಿರು ರ |
ಕ್ಕಸನೆ ಯೆನೆ ಪ್ರಳಯದ ಜವನವೊಲು ಮಸಗಿ ಮೇಲ್ವಾಯ್ದ || ೫೮ ||

ಸಿಡಿಲೆರಗಿದಂತೆರಗೆ ತೂಣನ | ನಿಡಿಯಗಂಟಲನೆಡದ ಕೈಯಿಂ |
ಪಿಡಿದು ಎಲೊ ಬಕ ನರರಡಗು ಸವಿಯೆನುತ ಮುಸುಡ ||

ಬಿಡೆ ತಿವಿದು ಹಲ್ಲುಗಳನುದುರಿಸಿ | ಬಿಡದೆ ನಾಲಗೆಗಿಳ್ತು ಹಿಂಗಾ |
ಲ್ಪಿಡಿದಸಗವೊಯಿಲಪ್ಪಳಿಸಿ ಮರ್ದಿಸಿದನಾ ಭೀಮ || ೫೯ ||

ಬಂಡಿ ತುಂಬಿದ ಕೂಳನಾ ಗೋ | ಮಂಡಲಕೆ ತಿನಲಿಟ್ಟು ದೈತ್ಯನ |
ಚಂಡಿಕೆಯ ಮೂಕಿಂಗೆ ಬಂಧಿಸಿ ಹೊಡೆದು ತರೆ ಜನವು ||
ಕಂಡು ವಿಸ್ಮಯಗೊಂಡುದರಿದೇ | ಚಂಡ ಕೇಸರಿ ಸಾಧು ಸರಸಿಜ |
ಷಂಡ ನವಮಾರ್ತಂಡನೆಂದುದು ಭೀಮಸೇನನನು || ೬೦ ||

ಪುರವಧೂತತಿ ಕೊಂತಿದೇವಿಯ | ಚರಣಕಮಲಕ್ಕೆರಗಿದುದು ಸ |
ಬ್ಬರು ಒಲಿದು ಭೀಮಂಗೆ ವಂದಿಸಿ ನಿಮ್ಮದೆಸೆಯಿಂದ ||
ಹರಣವುಳಿದುದು ಜನದ ಕಂಟಕ | ಪರಿಹರಿಸಿದತೆನೆ ಧರ್ಮರಾಯನು |
ಹರುಷವಾದನು ಭಾರತೀ ನವರತ್ನ ಕುಂಡಲನು || ೬೧ ||

ಇಂತು ಪಲಕಾಲವು ವಿವಿಧ ದೇ | ಶಾಂತರವ ಚರಿಸುತ್ತ ಸುಜನರ |
ಸಂತತಿಗೆ ರಕ್ಷೆಯನು ಖಲರಿಗೆ ಶಿಕ್ಷೆಯನು ಮಾಡಿ ||
ಸಂತಸದಿ ಪಾಂಡವರು ಭೂನುತೆ | ಕೊಂತಿ ಸಹ ನಡೆದೊಂದು ನದಿಯ |
ಪ್ರಾಂತದಾಲದ ಮರನ ತಳದಲಿ ಕರ್ನನಾಯಿರಲು || ೬೨ ||

ಹಲವು ರತುನದ ಮೊಗವಡೆದ ಥಳ | ಥಳಿಪ ಪೊಂಬೊರಜೆಯ ಸವಕಗಳ |
ತಳೆದ ಗಜಕಂದರರದಲೊಪ್ಪಿನ ಪೀನಮೌಕ್ತಿಕದ ||
ತೊಳಪ ಸತ್ತಿಗೆ ನೆಳಲೊಳಗೆ ಪ | ಜ್ಜಳಿಪ ಷೋಡಶಭೂಷಣಂಗಳ |
ತಳೆದು ವಸುವಸ್ತ್ರಗಳ ಹೇರಿದ ಹಲವು ಗಜಸಹಿತ || ೬೩ ||

ಇಕ್ಕೆಲದಲಾನೆಯಲಿ ಪಾಠಕ | ರೊಕ್ಕರಳಿನಲಿ ಕರ್ನನಾತ್ಯಾಗ |
ವಿಕ್ರಮದ ವೀರಾದಿ ಗುಣಗಳ ನೆಯ್ದೆ ಕೀರ್ತಿಸುತ ||
ಮಿಕ್ಕಸಂತಸವವರ ಮನದೊಳ | ಗುಕ್ಕುತಿರೆ ಬರುತಿರ್ದನಾ ಕವಿ |
ಚಕ್ರವರ್ತಿಯದೊಂದು ಸೊಬಗಿನಲಾ ಸಮಯದೊಳಗೆ || ೬೪ ||

ಸುಕವಿದೋರ್ವನದತ್ತಲುಂ ಪಾ | ಠಕಯುಗಳ ಸಹ ಬರುತ ಕಂಡನು |
ಪ್ರಕಟಕವಿಚಕ್ರಿಯನು ಭೂಭುಜನೆಂದೆ ಕೊಂಡಾಡೆ ||
ಸುಕವಿಗೊಂದಾನೆಯನು ಕೊಟ್ಟಲೆ | ಸುಕವಿಯಾಂ ಕವಿಕರ್ನನೆನ್ನವೊ |
ಲಖಿಲಕವಿಗಳನಿಂತು ಮಾಡಿದನಲ್ಲಗೆಯ್ದೆಂದ || ೬೫ ||

ಎನಲವನು ನಲಿದತ್ತ ಪೋದಪ | ನಿನಸುತನ ವಿತರಣಕೆ ಪಾಂಡವ |
ರನಿಬರುಂ ಮೆಚ್ಚಿದರು ದಾಂಟಿದರಂಗದೇಶವನು ||

ವಿನುತ ಪಾಂಚಾಳೋರ್ವರೆಗೆ ಮೆ | ಲ್ಲನೆ ಬರುತ ಧರಣೀಸುರನನ್ನೋ |
ರ್ವನನು ಕಂಡಲೆ ವಿಪ್ರ ನೀವೆತ್ತಣ ನಗರದವರು || ೬೬ ||

ಎಂದೊಡೀ ಪಾಂಚಾಲ ವಿಷಯದ | ಲೊಂದಿಹುದು ಮಾಹೇಂದ್ರ ನಗರವು |
ಚಂದದಳಕಾಪುರಿಗೆ ಸರಿಯಾದನಾಳ್ವ ದ್ರುಪದ ನೃಪ ||
ಸಂದ ದೃಢರಥೆ ರಾಣಿಯರೆ ಪೂ | ರ್ಣೇಂದುಮುಖಿ ದ್ರೌಪದಿಯೆನಿಪ ಕಡು |
ಸೌಂದರದ ಸರ್ವಸ್ವವಹ ಸುಕುಮಾರಿಯನು ಪಡೆದ || ೬೭ ||

ಅವಳಿಗಾದುದು ತುಂಬು ಜವ್ವನ | ಭವನ ಕಣ್ಣುರಿಯಿಂದುರಿದ ಹೃ |
ದ್ಭವಗೆ ಬಂದುದು ಮತ್ತೆ ಹೊಸ ಮೈಬಂಟಿನಗ್ಗಳಿಕೆ |
ಯುವತಿಯರ ಸೃಷ್ಟಿಯಲಿ ಸರಸಿಜ | ಭವಗೆ ಬಂದುದು ಉಜ್ಜವಣೆ ಭೂ |
ಭುವನ ನಯನಾಭರಣೆಯಾ ಸುಕುಮಾರಿ ಕೇಳೆಂದ || ೬೮ ||

ಅರಸನಾ ಮಗಳಂದ ವೀಕ್ಷಿಸಿ | ಹರುಷಮನಸಿರೆ ಶಸ್ತ್ರ ಶಾಲೆಯ |
ಲುರು ಭಯಂಕರ ಕಾಲದಂಡಸಮಾನ ಕೋದಂಡ ||
ಭರದುದಯಿಸಿತು ಗಾಂಡೀವಾಹ್ವಯ | ವಿರದೆ ಕಾರ್ಮುಕರತ್ನವನು ಬಿ |
ತ್ತರದಿ ಪೂಜಿಸಿಯಿಂತು ಸುಖದಿಂದಿರ್ದನಾ ದ್ರುಪದ || ೬೯ ||

ಒಂದು ದಿನದಲಿ ಅವಧಿ ಬೋಧಮು | ನೀಂದುಗಳ ಪದಪದುವವರ್ಚಿಸಿ |
ವಂದಿಸಿಯೆ ತನ್ನಾತ್ಮಜೆಗೆ ಪತಿಯಾರು ಬೆಸಸಿಮೆನೆ ||
ಎಂದೆರೆಲೆ ದ್ರುಪ ನಿನ್ನಯಾಯುಧ | ಮಂದಿರದಲುದಯಿಸಿದ ಗಾಂಡಿವ |
ವೆಂದೆನಿಪ ಕೋದಂಡ ರತ್ನವನಶ್ರಮದಿ ನೆಗಪಿ || ೭೦ ||

ತಿರುವನೇರಿಸಿ ತ್ರಿರ್ನ್ಗಗಳು | ತಿರುಗುತಿಹ ಆಕಾಶಯಂತ್ರ |
ಸ್ಫುರಿತ ಝಷದೆಡಗಣ್ಣನಾ ಮತ್ಸ್ಯನ ನೆಳಲಕೆಳಗೆ ||
ವಿರಚಿಸಿದ ಜಲದೊಳಗೆ ಕಂಡೆ | ಚ್ಚರು ಪರಾಕ್ರಮಿ ಭೂಚರನೆ ವರ |
ಪುರುಷನಾಕೆಗೆ ತಿಳಿವುದೆಂದನು ಭೂಪತಿಗೆ ಮುನಿಪ || ೭೧ ||

ಇದು ವಿಚಾರಿಪೊಡರ್ಜುನಂಗ | ಲ್ಲದೆ ಪೆರಂಗಸದಳವು ಮುನ್ನವೆ |
ಮುದದಿ ಕನ್ನೆಯನೀಯಲ್ಲಿದ್ದೆನು ಮಡಿದರವರೆಂಬ ||
ಅದು ನಿಬದ್ಧಿಯೆ ಬೆಸಸಿಮೆನೆ ಬೆಸ | ಸಿದ ದಿಗಂಬರ ವಚನದಿಂ ತಿಳಿ |
ದದರ ತೆರನನು ತಾಂ ಸ್ವಯಂವರವೋಡುತಹನೆಂದ || ೭೨ ||

ಪೇಳಿದಾ ಬ್ರಾಹ್ಮಣಗೆ ಕರ್ಪುರ | ವೀಳೆಯವನೊಸೆದಿತ್ತು ಕಳುಹಿ ದ |
ಯಾಳು ಮಧ್ಯಮ ಪಾಂಡವನ ಮೊಗನೋಡಿ ನಸುನಗುತ ||

ಲೋಲಲೋಚನೆಯಾ ಸ್ವಯಂವರ | ಕೇಳಿಯನು ನೋಡುವೆವೆನುತ ಸಂ |
ಮ್ಮೇಳಸಿದರಾ ವಿಪ್ರವೇಷವನರಸವ ಕೇಳೆಂದ || ೭೩ ||

|| ಅಂತು ಸಂಧಿ ೩೫ಕ್ಕಂ ಮಂಗಲಮಹಾ ||

## ಪಾಂಡವ ಪರ್ವ (ಸಂಧಿ ೩೬)

**ಸಂಧಿ ೩೬**

ಲೋಲಲೋಚನೆಯಾ ಸ್ವಯಂವರ | ಸಾಲೆಯಲಿ ಸಂದಣಿಸಿದವನೀ |
ಪಾಲರನು ದ್ರೌಪದಿ ವಿಡಂಬಿಸಿದಳು ಸುರೂಪಿನಲಿ || ಪದ ||

ಕೇಳು ಮಗಧ ನೃಪಾಲ ಪಾಂಡು ನೃ | ಪಾಲ ಪುತ್ರರು ಬಂದರತಿ ಶೋ |
ಭಾಲಲಿತ ಮಾಹೇಂದ್ರ ನಗರಕೆ ಪೊರವಳೆಯದಲ್ಲಿ ||
ಸಾಲು ಗೊಂಡೆಡೆವಿಡದೆ ತಮ್ಮ ವಿ | ಶಾಲ ಬಲಗಳ ಛತ್ರ ಚಾಮರ |
ದೋಳಿಗಳ ಸದದೂಸುಗಳ ಶೋಭೆಗಳ ನೋಡಿದರು || ೧ ||

ಲಾಟ ವಂಗ ಕಳಿಂಗ ವರ ಕ | ರ್ಣಾಟ ಕಾಶ್ಮೀರಾಂಧ್ರ ಸಿಂಧುವ |
ರಾಟ ಮಾಳವ ಚೇರ ತೌಳವ ಚೋಳ ಕಾಂಭೋಜ ||
ಭೋಟ ಕೇರಳ ದ್ರಾವಿಡ ಮಹಾ | ಭೋಟ ಗೌರ್ಜರ ಗೌಳ ಕೊಂಗ ವ |
ರಾಟ ಸೌರಾಷ್ಟ್ರದಿ ದೇಶಾಧೀಶರೊಪ್ಪಿದರು || ೨ ||

ಮುಂದೆ ನಾನಾ ಗುಡಿಪತಾಕೆಯ | ಚಂದಚಂದದ ಮಕರ ತೋರಣ |
ದಿಂದ ಶೋಭಿಪ ಚವುಪಳಿಗೆಗಳ ಸಾಲುಗಟ್ಟುಗಳ ||
ಸಂದಣಿಯ ಮಣಿಪೀಠಗಳ ಚೆಲು | ವಿಂದ ಸೊಗಯಿಸುವಾ ಸ್ವಯಂವರ |
ಸೌಂದರವನೀಕ್ಷಿಸುತ ವಿಪ್ರರ ಸಭೆಯನೈದಿದರು || ೩ ||

ನಾಳೆ ಭೂಪಾಲರಿಗೆ ಮದನನ | ಕಾಳಗವೊ ಮೋಹನ ಸುರಗಿಯು ||
ಕ್ಕಾಳುಗಳ ಸಿಂಗಾರದಲಿ ಕಳನೇರಿ ಬರಲೆಂದು ||
ಪಾಳೆಯಂಗಳೊಳೆಲ್ಲಿಯುಂ ಪಾಂ | ಚಾಲ ನವರಾಲಿಪರ ಕಿವಿಗಿಂ |
ಪೇಳೆ ಸಾರಿದರುಚ್ಚ ಸರದಲಿ ಹೊಯ್ದುಡಂಗುರವ || ೪ ||

ತಾವರೆಯ ಸಂಗಡಿಗನಾವಸು | ದಾರವರ್ಕಳ ತೆರದಿ ಮಿಗೆ ರಾ |
ಗಾವಿಳತೆದಳೆದಿಳಿದನಪರಾಂಬುಧಿಗೆ ನೃಪನಿಕರ ||

ವಿವಿಧದಿ ನಾವವಳನೊಲಿಸುವ | ವಾವವಶ್ಯದ ಬಲೆಯ ಬೀಸುವ |
ವಾವ ಪಸದನವಾಂಪವೆಂಬ ವಿಕಲ್ಪ ವೊಪ್ಪಿದುದು || ೫ ||

ಆ ವನಿತೆಯನು ಒಲಿಸಿದಾತನೆ | ಕಾವದೇವನು ನಾಳೆ ಆಕೆಯ |
ದಾವಗೊಲಿವಳೊ ಬಲ್ಲರಾರೆಂದು ಕೆಲರುಕೆಲರು ||
ಈ ವಿಪುಳಭುಜವೀ ಹರೆಯ ಚೆಲು | ವೀ ವಿಭವನಿರ್ದೆನ್ನನಲ್ಲದ |
ವಾವಗೊಲಿತಹಳೆಂದರರೆಬರು ಮನದ ಗರ್ವದಲಿ || ೬ ||

ನೆರೆದ ಪಾರ್ಥಿವರೆಲ್ಲರನು ಧಿ | ಕ್ಕರಿಸಿ ಪಾರ್ಥನೆ ಪಡೆವನಾ ಸೌಂ |
ದರಿಯನೆಮಗೇನುದ್ಧವೇರಿಯೆ ನೋಳ್ಪವೆಂಬಂತೆ ||
ತರಣಿಯುದಯಾದ್ರೀಂದ್ರಮನಲಂ | ಕರಿಸೆ ತಮ್ಮನಲಂಕರಿಸಿದರು |
ಸ್ಮರನೆ ಬಹುರೂಪಿಣಿಯನಾಂತನೊಯೆನೆ ಮಹೀಶ್ವರರು || ೭ ||

ವರಮಹತ್ತರದಿಂದ ದ್ರುಪದನು | ಕರಸೆ ಹರುಷದಿ ಬಂದುರೋರೊ |
ಬ್ಬರ ಸಿರಿಯನೋರೊಬ್ಬರಣೇವುತ ರೂಪುವಿಕ್ರಮದಿ ||
ಪರಿಪರಿಯ ಬಿರುದುಗಳ ಕಹಳೆಯ | ಪರಿಪರಿಯ ತೂರ್ಯ ಸ್ವನಂಗಳ |
ಪರಿಪರಿಯ ಪಾಠಕರ ಕಳಕಳವ್ಯೆದೆ ಸೊಗಯಿಸಿತು || ೮ ||

ಲೀಲೆಯಲಿ ಬಂದಾ ಸ್ವಯಂವರ | ಸಾಲೆಯಲಿ ತಂತಮ್ಮ ವಿವಿಧ ವಿ |
ಶಾಲ ಬಲಮಂತ್ರಿಪ್ರಧಾನ್ಯೆಶ್ವರ್ಯ ಪರಿವೃತರು ||
ಸಾಲು ಮಣಿಪೀಠಗಳನುರ್ವೀ | ಪಾಲ ಮಣಿಗಳಲಂಕರಿಸಿದರು |
ಮೇಳನಿಂದಿಳಿತಂದ ಜ್ಯೋತಿರ್ಲೋಕವೆಂಬಂತೆ || ೯ ||

ಮನುಜಕೃತ್ರಿಮವಲ್ಲದಾದನು | ಅನುಕರಿಸಿ ಮೆರೆವೆಂಟು ತೆರದ |
ರ್ಚನೆಯ ಮಾಡಿಸಿ ಮತ್ಸ್ಯ ಯಂತ್ರವನಾಗಸದೊಳಿರಿಸಿ ||
ವಿನುತ ರಾಜಮಹಾಸಭೆಯನತಿ | ವಿನಯ ವಚನದಿ ದ್ರುಪದ ಭೂವರ |
ನನುಸರಿಸಿದನು ವಿವಿಧ ವಿಭವ್ಯೆಶ್ವರ್ಯದೆಸಕದಲಿ || ೧೦ ||

ಅತ್ತಲದರಿಂ ಮುನ್ನವೇ ತ | ತ್ಪುತ್ರ ದ್ರುಷ್ಟದ್ಯುಮ್ನನುತ್ತಮ |
ಚಿತ್ತ ನಿಜ ಮಂತ್ರಿ ಪ್ರಧಾನಾದ್ಯರಿಗೆ ಉತ್ಸವದಿ ||
ಇತ್ತನಾಭರಣಾನುಲೇಪನ | ವಸ್ತ್ರಗಳ ಮತ್ತತ್ತಲೊಲಿದು ಮ |
ಹತ್ತರಿಯರಿರೆ ಮಜ್ಜನಂಗೊಳಿಸಿದರು ದ್ರೌಪದಿಯ || ೧೧ ||

ದೃಢರಥಾದೇವಿಯು ಸುರತ್ನದ | ತೊಡಿಗೆಗಳ ತರಿಸಲು ಸತಿಯ ಸಿರಿ |
ಮುಡಿಯನಾರಿಸಿ ತುರುಬನಿಟ್ಟರು ಮುತ್ತಿನೋಲೆಯನು ||

ದೃಢಗೊಳಿಸಿದರು ದುಗುಲವನು ನಿರೆ | ವಿಡಿಸಿದರು ಕಂಕಣವನಿಟ್ಟರು |
ಬಿಡದೆ ಕಟ್ಟಿದರಚ್ಚ ಮುತ್ತಿನ ಕಂಠಮಾಲೆಯನು || ೧೨ ||

ಸುಗುಣ ಮಣಿಭೂಷಣೆಯ ಸಹಜದ | ಲೊಗೆದ ಚೆಲುವಿಂ ಮಣಿವಿಭೂಷಣ |
ಮಿಗಿಲೆನುತ ಪರಿಮಳದಿನಧಿಕವೆ ಯಕ್ಷಕರ್ದಮವು ||
ಮೃಗಮದದ ತಿಲಕವನವೊಂದನೆ | ಸೊಗಸುಗೊಳಿಸಿದೊಡಿನಿತೆ ಸಾಲದೆ |
ತೆಗೆಯಿವೇಕಿನ್ನುಳಿದವೆಂದಳದೋರ್ವ ಜಾಣ್ಗೆಳದಿ || ೧೩ ||

ಎಂದೊಡಾಕೆಯ ನುಡಿಯನಾಲಿಸಿ | ಸೌಂದರಿಯೆ ಚೆಲುವಿಕೆಯನೀಕ್ಷಿಸಿ |
ಯೆಂದರಾ ಕೆಳದಿಯರು ನೀನೆಂದಂತಿದೇ ಸಾಕು ||
ಎಂದೊಡಂ ಸುವಿವಾಹ ಮಂಗಳ | ದೊಂದುಕಾರ್ಯನಿಮಿತ್ತವಿರಲೆಂ |
ದೊಂದಿಸಿದರತಿ ಚತುರೆಯರು ದ್ರೌಪದಿಗೆ ತೊಡಿಗೆಗಳ || ೧೪ ||

ನರುಮುಡಿದು ಹೊಂಗೇದಗೆಯ ನೇ | ಸರ ಹೆರೆಯ ಹಣೆಕಟ್ಟು ಕೆನ್ನೆಯ |
ಗರಿಯ ಮಕರಿಕೆಯೆಸೆವ ರತ್ನದ ಕರ್ಣಪೂರಗಳ ||
ಮೆರೆವ ಮುತ್ತಿನ ಮೂಕುತಿಯ ಮಿರು | ಮಿರುಪ ತ್ರಿಸರದ ಪಂಚಶರದ |
ಚ್ಚರಿದ ಹಾರದ ಬಣ್ಣ ಸರಗಳ ಸೊಬಗು ಸೊಬಗಾಯ್ತು || ೧೫ ||

ಪಂಚರತ್ನದ ತೋಳ ಬಳೆಗಳ | ಸಂಚಯದ ಕಂಕಣದ ಸೂಡಗ |
ದಿಂಚರದ ಮಣಿಮುದ್ರಿಕೆಯ ತೊಂಗಲುನಿರಿಗೆ ಮೆರೆವ ||
ಕಾಂಚಿಯಮರಿದ ಕಿಂಕಿಣಿಗಳ ಪ | ಳಂಚಲೆವ ನೇವುರದ ಅಡಿಯುಗು |
ರ್ವಿಂಚಿನಿಂ ಮಿಂಚಾದ ಬೆರಳಿನ ಹಜ್ಜೆವೊಪ್ಪಿದವು || ೧೬ ||

ಲಲನೆಯರ ಸೌಭಾಗ್ಯಲಕ್ಷ್ಮಿಯ | ಚೆಲುವಿನಿಂ ಮಣಿದೊಡಿಗೆ ತೊಡಿಗೆಯ |
ಚೆಲುವಿನಿಂ ಲಲಿತಾಂಗ ಮೈಮುಟ್ಟೆನಿಸಿ ಚೆಲುವಾಗೆ ||
ತಿಲಕವನು ರಚಿಸಿದರು ತನಿಪರಿ | ಮಳಕೆ ಪರಿಮಳವಿತ್ತುದಾ ಕೋ |
ಮಲೆಯ ಮೈಗಂಪಿಂಪು ಪೊಂಪುಳಿಯಾದುದೇನೆಂಬೆ || ೧೭ ||

ಒಂದು ಯೋಜನವೆತ್ತಲುಂ ಸವಿ | ದೊಂದು ನರುಗಂಪನು ಜರದುಪರಿ |
ತಂದುವಳಿಗಳ ಬಳಗವಾಕೆಯ ಮೈಯ ಪರಿಮಲಕೆ ||
ಅಂದು ಕಣು ಸವಿ ರೂಪು ಕಿವಿ ಸವಿ | ಯೊಂದು ನುಡಿ ಕೊನೆಮೂಗು ಸವಿ ಕಂ |
ಪೆಂದು ಮನವನು ಜಕ್ಕುಲಿಸಿದುದು ಭೂಪ ಕೇಳೆಂದ || ೧೮ ||

ಕುಸುಮ ಶರಗೊಂದಧಿಕ ದಿಟ್ಟಿಯು | ನೊಸಲಿನೊಳಗುದಯಿಸಿತೊ ಬೇರೊಂ |
ದೆಸೆವ ಸಮ್ಮೋಹನ ಶರವೆ ದೊರಕಿದುದೊಯಿಂದೊಂದು ||

ಹೊಸ ಜಯಧ್ವಜವೆತ್ತಿದುದೊ ರಂ | ಜಿಸುವ ಸಿಂಗರ ಸಿರಿಯೊ ಎದೀ |
ಕ್ಷಿಸಿತು ಕಣ್ಣಣಿವಿನೆಗವಂತಃಪುರದ ಕಾಂತೆಯರು || ೧೯ ||

ಇಂತು ಪಸದನವಾಮತು ದ್ರೌಪದಿ | ಕಾಂತ ಲಾಭದ ನಾಂದಿ ಮುಖದಲಿ |
ಕಾಂತಫಲಕರೆ ಮೋಕ್ಷ ಲಕ್ಷ್ಮೀಕಾಂತ ಸದನಕ್ಕೆ ||
ಸಂತಸದಲೈತಂದು ವಿಮಳ | ಸ್ವಾಂತ ವರಜಿನ ಪೂಜೆಗೈದೋ |
ರಂತೆ ವಂದಿಸಿ ಗಂಧ ಜಲ ಶೇಷಾಕ್ಷತೆಯನಾಂತು || ೨೦ ||

ಗುರುಗಳಡಿದಾವರೆಗೆರಗಿ ಮಿಗೆ | ಪರಕೆಗೊಂಡಂತರದಿ ನಿಜ ಮಂ |
ದಿರಕೆ ಬಂದಾ ದ್ರುಪದಧೃಡರಥೆಗೆರಗೆ ಭಕ್ತಿಯಲಿ ||
ನರನೆ ನಿನಗಾತ್ಮೇಶನಕ್ಕೆಂ | ದುರುಮುದದಿ ಪರಸಿದನು ಸೇಸೆಯ |
ವಿರಚಿಸಿದರತಿ ಮಂಗಲದಿ ಸೋವಾಸಿನಿಯರೊಲಿದು || ೨೧ ||

ದರಹಸಿತ ಮುಖ ಕಮಲೆಕಮಲೆಗೆ | ಸರಿಯೆನಿಪ ವಿಭವದಲಿ ಸಾಸಿರ |
ತರುಣಿಯರ ಮೇಳದಲಿ ಕಪ್ಪುರದುಂಬುಲವನಾಂತು ||
ಗುರು ಕುಚಂಗಳ ಬಿಣ್ಪೊರಗೆ ಹೊಂ | ಜರಿಗೆ ನಡು ಕಡು ಬಳುಕುತಿರಲೈ |
ಸರನ ಮದಗಜಮನದಲಿ ಪೊರಮಟ್ಟಳರಮನೆಯು || ೨೨ ||

ನುಡಿಗೆ ಗಿಳಿ ಯಿಂಚರಕೆ ಕಳರುತಿ | ನಡಿಗೆ ರಾಯಂಚೆಗಳು ಚೆಲುವಿನ |
ಮುಡಿಗೆ ಸೋಗೆ ನವಿಲ್ಗಳಳಕಕ್ಕಳಿಕುಳವು ಎಳಸಿ ||
ಬಿಡದೆ ಬರೆ ಬೇರೊಂದು ಖಗಕುಲ | ದೊಡತಿಯೋ ಭೂಚರಿಯರೆರೆಯಳು |
ದೃಢರಥಾದೇವಿಯ ಸುತೆಯೊಯೆನೆ ಬಂದಳಿಂದುಮುಖಿ || ೨೩ ||

ಕುಂಕುಮದ ಮೈದಿಗುರ ನೊಸಲಿನ | ಲಂಕಸಿದ ಕತ್ತುರಿಯ ತಿಲಕದ |
ಬಿಂಕದುಡುಗೆಯ ಕಾಲ ಖಡೆಯದ ನೆಗೆದ ಸತ್ತಿಗೆಯ ||
ಕಂಕಣದ ಸೆಳ್ಳುಗುರ ಸುರಗಿಯ | ಪಂಕಜಾನನೆ ಮನಸಿಜನ ಜಯ |
ದಂಕದುಕ್ಕಾಳೆನಿಸಿ ಮಣಿರಥಕಳನನೇರಿದಳು || ೨೪ ||

ನಗೆ ಮೊಗವೊ ಲಾವಣ್ಯ ಸರಸಿಯ | ಲೊಗೆದ ಕಮಲವೋ ಪೀವರಸ್ತನ |
ಯುಗವೊ ಮುಳುಗಿದ ಮದನಗಜಕುಂಭವೋ ಪುಳಿನವೋ ಕಟಿಯೊ ||
ನಗೆಗಣಗಳೋ ನೈದಿಲುಗಳೋ | ಮುಗುಳುನಗೆಯೋ ಕಿರುದೆರೆಯೊ ದಿ |
ಟ್ಟಿಗೆ ಸುಳಿಯೊ ಪೊಕ್ಕುಳೊ ಯೆಸೆದುದೊ ದ್ರೌಪದಿಯ ಚೆಲುವು || ೨೫ ||

ರತಿಯ ಮೋಹನ ವಸ್ಯಮಂತ್ರದ | ಸತಿಯೊ ಕಾವನ ಮಚ್ಚುಮದ್ದಿನ |
ಪ್ರತುಮೆಯೋ ಕಂದರ್ಪದೇವನ ಖಂಡೆಯದ ಸಿರಿಯೊ ||

ಅತನನುನೃಪ ಸಾಮ್ರಾಜ್ಯಲಕ್ಷ್ಮಿಯೊ | ರತಿಯರಸನಾರಾಧಿಸುವ ದೇ |
ವತೆಯೊ ಮೇಣ್ ದ್ರೌಪದಿಯೊ ಯೆಂದರು ನೋಡಿ ಪಾರ್ಥಿವರು || ೧೭ ||

ಜಗದ ಪೆಣ್ಗಳ ರೂಪ ಪರಮಾ | ಣುಗಳನಾಯ್ದು ಸುಧಾಕರನ ನಾ |
ರಗಳ ಪೂಜಿಸಿ ಹೊಂಬೆಳಗು ಸಹ ಪರಿಮಲವನೇರಪಿ ||
ಮುಗುಳುಗಣೆಗಳ ಮೋಹನದ ತನಿ | ಸೊಗಸ ನೋಡಿ ಮನೋಜ ದ್ರುಪದನ |
ಮಗಳ ನಿರ್ಮಿಸಿದನೊ ಎನುತ ನೋಡಿದ ನೃಪಸ್ತೋಮ || ೧೮ ||

ತಳಿರಡಿಯ ಪೊಂಬಾಳೆದೊಡೆಗಳ | ಪುಳಿನ ಜಘನದ ತೆಳುವಸುರ ಹೊಂ |
ಜಳೆ ನಡುವ ಪೊಂಬೊಗರಿ ಮೊಲೆಗಳ ಕಂಬುಕಂದರದ ||
ಹೊಳೆವ ಹೊಂಗನ್ನಡಿಗದಪುಗಳ | ತೊಳಪ ಮಾಣಿಕದುಟಿಯನನೆ ಗಂ |
ಗಳ ಕುಟಿಲಕುಂತಳದ ಚೆಲುವೆಯರೇರಿದರು ರಥವ || ೧೯ ||

ನಿರಿಗುರುಳನುಂ ಪಡರ್ದ ತುರುಬಿನ | ಹೆರೆನೊಸಲ ಕಡುವುರ್ವುಗಳ ಮಿಗೆ |
ತುರುಗೆವೆಯ ನಿಡಿಗಣ್ಣ ಸಂಪಿಗೆಮುಗುಳ ನಾಸಿಕೆಯ ||
ಮಿರುಪ ಹೊಂದಾವರೆ ಮೊಗದ ಸ | ಕ್ಕರೆ ಸವಿಯ ಚೆಂದುಟಿಯ ಸೊಬಗಿನ |
ಕಿರು ಮಡದಿಯರು ತಂಡತಂಡದಿ ಬಳಸಿದರು ಸತಿಯ || ೨೦ ||

ಸವಡಿ ಮಿಂಗಳಗಳ ಸುಧಾಳದ | ಅವಳ ಹೊಂಗನ್ನಡಿಗದಪುಗಳ |
ಹವಳಲತೆಗಳ ಬೆಸುಗೆದುಟಿಗಳ ಮುದ್ದುನಗೆಮೊಗದ ||
ಜವಳಿದಾವರೆಮೊಗ್ಗೆ ಮೊಲೆಗಳ | ನವಲತಾ ಮಧ್ಯದ ವಿಳಾಸದ |
ಯುವತಿಯರು ಸಂದಣಿಸಿದರು ದ್ರೌಪದಿಯ ಮಣಿರಥವ || ೨೧ ||

ಕುರುಳುಗಳ ಕಣ್ಣಿಗಳ ಮೈಸಿರಿ | ಹರಹು ಬಲೆಗಳ ಕೊಲ್ಲಿ ನೋಟದ |
ಸರಳುಗಳಯೇರಿಸಿದ ಹುಬ್ಬಿನ ಹೊಂಗು ಬಿಲ್ಲುಗಳ ||
ಭರದ ಮೊಲೆಗುಂಡುಗಳ ನಳಿ ತೋ | ಳುರುಳಿ ಬಡಿಗಳ ಸಡಗರದಲೈ |
ಸರನ ಬೇಂಟೆಯ ಬಂಧದಂದದಿ ಬಂದರಬ್ಬರದಿ || ೨೨ ||

ಅಡಿದಳಿರನುಪ್ಪೊಡೆಗದಳಿಗಳ | ನಡುಲತೆಯ ಪೊಕ್ಕುಳಗೊಳನ ಮೊಲೆ |
ಜಡಿವ ಕಾಯ್ಗಳ ತೋಳಶಾಖೆಯ ಮುಖಸರೋರುಹದ ||
ನುಡಿಗಿಳಿಯ ದನಿಕೋಗಿಲೆಯ ಸೋ | ರ್ಮುಡಿ ನವಿಲಕಣ್ಣರಲ ಕುರುಳಾ |
ರಡಿಯ ಸೊಬಗಿಯರೋಳಿ ಬಂದುದು ನಂದನದ ತೆರದಿ || ೨೨ ||

ತೋಳುಗಳ ಲೌಡಿಗಳ ಸೆಳ್ಳುಗು | ರೋಳಿಗಳ ಸುರಗಿಗಳ ಹುಬ್ಬಿನ |
ಸಾಲು ವಿಲುಗಳ ಓರೆನೋಟದ ಮಸೆದ ಬಾಣಗಳ ||

ಥಾಳಿಸುವ ತನಿಹೊಗರ ಖಡುಗದ | ಬಾಲೆಯರು ಮನಸಿಜನ ಶಸ್ತ್ರದ |
ಶಾಳೆಗಳವೊಲು ಬಂದರಂದು ವಿಡಾಯಕಾರ್ತಿಯರು || ೩೪ ||

ಅಲರ್ದ ಮೊಗದಾವರೆಯ ಕೋಗಿಲೆ | ಯುಲಿಯ ರಾಜಮರಾಳಗಮನದ |
ಗಿಳಿನುಡಿಯನರುಸಯ್ಯ ಸುರಭಿಸಮೀರಣದ ಸಿರಿಯ ||
ನಳಿನಳಿಪ ತನುಲತೆಯ ಕೇಸರಿ | …ಯನಾಂಚಲದಲಿ ಮಲ್ಲಿಗೆ |
ಯಲರ ಚೆಲುವಿನ ಸುಗ್ಗಿಯೆನೆ ಬಂದುದು ಸಖೀ ನಿವಹ || ೩೫ ||

ತಳಪಗಂಗಳ ಸೋಗೆಗಂಗಳ | ತೊಳಪ ಮೀಂಗಂಗಳ ಬಗಸೆ ಗಂ |
ಗಳ ಯೆಸಳುಗಂಗಳ ಪಳಂಚುವ ಮಿಂಚುಗಣ್ಣಗಳ ||
ಅಲರುಂಗಳ ಹುಲ್ಲೆಗಂಗಳ | ನಳಿನಗಂಗಳ ಚೆಲ್ಲೆಗಂಗಳ |
ಕೆಳದಿಯರು ಬಯಸಿದರು ದ್ರುಪದಾತ್ಮಜೆಯ ಮಣಿರಥವ || ೩೬ ||

ಮುತ್ತಿನೋಲೆಯ ಮೂಕುತಿಯ ಕಟಿ | ಸೂತ್ರನೇವುರ ಹಾರಗಳ ಚೆಲು |
ವೊತ್ತರಿಪ ಕಂಕಣದ ಸೂಡಗಬಾಹುಪೂರಗಳ ||
ವೃತ್ತ ಕುಚದೆಡೆಯೊಲೆವ ಹಾರದ | ಕತ್ತುರಿಯ ಹೆರೆನೊಸಲ ಕುಂಕುಮ |
ಮೆತ್ತಿದಂಗದ ಸಿಂಗರದ ಸೊಬಗಿಯನು ಪಸರಿಸಿತು || ೩೭ ||

ಓರೆ ಮುಸುಕಿನ ತೊರದುರುಬಿನ | ಬೋರೆನೋಟದ ಮುಗುಳು ಮೊಗಗಳ |
ದೋರೆವಲುಗಳು ತೊನೆವ ನಳಿತೋಳುಗಳ ಪಿಡಿನಡುವ ||
ಸೇರಿ ರಂಜಿಪ ಸಣ್ಣ ಬಣ್ಣದ | ಸೀರೆಗಳ ತೊಂಗಲು ಸಿರಿಯ ಕಡು |
ನೀರೆಯರು ಕಣ್ಸೂರೆಗೊಂಡರು ವಿವಿಧ ಭೂಭುಜರ || ೩೮ ||

ಮಿಸುನಿಡವಕೆಯ ಹಾವುಗೆಯ ಥಾ | ಳಿಸುವ ಕುಂಚದ ಸೀಗುರಿಯ ನಿ |
ಟ್ಟಿಸುವ ಮಣಿಗಣ್ಣಡಿಯ ಹಡಪದ ಆಳವಟ್ಟಗಳ ||
ಕುಸುಮಗಳ ಕಪ್ಪುರದ ಗಂಧದ | ರಸದ ಘಸೃಣದ ಕತ್ತುರಿಯ ರಂ |
ಜಿಸುವ ಮಣಿಭಾಜನವ ತಳೆದಲೆಯರು ಬಳಸಿದರು || ೩೯ ||

ಸಲಹಿದರಳೆಯ ಪದ್ಯವೋದುವ | ಗಿಳಿಯ ಪಾರವತದ ಸೋಗೆ ನ |
ವಿಲ ಪುರುಳಿಗಳ ಕೊಂಚೆಯಂಚೆಯ ಸಂಚಯದ ಕೂಡೆ ||
ಚೆಲುವಿನಿಂ ಬರೆ ಮೇಲೆ ಹೀಲಿಯ | ತಳೆವಿಡಿದವೊಲು ತುಂಬಿ ಬರೆ ಕಡು |
ಚೆಲುವನಾದದು ದ್ರೌಪದಿಯ ಗಮನವು ನಿರೀಕ್ಷಿಸಲು || ೪೦ ||

ತೊಲಗೆಲವೊ ಹೂಗೋಲರಾಯವ | ಚೆಲುವಿಕೆಯ ಭಂಡಾರ ಬರುತದೆ |
ತೊಲಗೆಲವೊ ನೀರೆಯರ ಸೃಷ್ಟಿಗೆಕಳಸ ಬರುತಲದೆ ||

ತೊಲತೊಲಗೊ ಪಾಂಚಾಲರಾಯನ | ಕುಲತಿಲಕ ಬರುತದೆ ಯೆನುತ ಮಿಗೆ |
ನೆಲನನುಗ್ಘಡಿಸುತ್ತ ನಡೆದರು ವೇತ್ರಧಾರಿಗಳು || ೪೧ ||

ರಂಭೆಯೀಕೆಯ ಮುಂದೆ ಕಾಷ್ಟದ | ಬೊಂಬೆಯಾದಳು ಚೆಲುವಿಕೆಯನೇ |
ನೆಂಬೆನಾರತಿಯಾರತಿಯೆ ತಾನಾದಳಾಸತಿಗೆ ||
ಶಂಬರಾರಿಯ ಹೊಸಮಸೆಯ ಹೊಗ | ರಂಬುಗಳ ಕೇಕರದಿ ದೆಸೆದೆಸೆ |
ಗಿಂಬಿಡುತ ವೈವಾಹ ರಥದಲಿ ಬಂದಳಿಂದುಮುಖಿ || ೪೨ ||

ಬಿಸಿಲನುಂಗಿತು ಭೂಷಣದ ಕೆಂ | ಬಿಸಿಲು ನಯನಾಂಚಲದ ರುಚಿ ಕೊ |
ರ್ವಿಸಿತು ಮಿಂಚನುಯೆಳೆನಗೆಯ ಬೆಳುದಿಂಗಳೆಡ್ಡೆಸೆಯ ||
ಮುಸುಕಿದುದು ದ್ರೌಪದಿಯ ಮೋಹನ | ವಿಸರ ಶೃಂಗಾರಾಂಬುನಿಧಿ ತೇಂ |
ಕಿಸಿತು ಸಕಳೋರ್ವಿಶ ಮುಖಚಂದ್ರೌಘವನು ಬಿಡದೆ || ೪೩ ||

ಏನನೆಂಬೆನು ಪಾರ್ಥಿವರ ಕಣು | ಮೀನುಗಳು ಮುಳುಗಿದವು ಸೊಬಗಿನ |
ಮಾನಿನಿಯ ಲಾವಣ್ಯರಸ ಪೀಯೂಷವಾರ್ಧಿಯಲಿ ||
ಮಾನದುರ್ಗದಲಿರ್ದ ಧೈರ್ಯನಿ | ಧಾನವಾಕೆಯ ಕಣ್ಣಚೂಣಿಯ |
ಲೇನು ಉಳಿಯದೆ ಕೊಳ್ಳುವೋದುದು ಭೂಪ ಕೇಳೆಂದ || ೪೪ ||

ತೊಳ ಪೂಜಿಸಿ ಕೊಂಡನಾ ಪೂ | ಗೋಲವೀರನು ಬೊಂಬೆಗಳನೆಡ |
ಗಾಲಿನಲಿ ತೊಡಚಿದನುಯಿಂದ ಸ್ವಯಂಬರದೊಳಿರಲು ||
ಭಾಳ ಲೋಚನನಗ್ನಿ ನೇತ್ರ | ಜ್ವಾಲೆಯನ ನಂದಿಸುವೆನೆಂದು |
ರ್ಕಾಳುಗಳ ಬಲ್ಲಹನು ಕಬ್ಬಿನಬಿಲ್ಲ ಜೇವಡೆದ || ೪೫ ||

ಐಸರಂಗಾಯ್ತುಂದು ಕಾರ್ಮುಕ | ಸಾಸಿರವು ನಿಡುದೋಳುಗಳ ವಿ |
ಚ್ಛಾಸಿರವು ಹೊಗೋಲಸಂಖ್ಯಾ ತಂಗಳೈದೇಳ್ವೆ ||
ಆ ಸತಿಯ ಕಂಡನಿಬರೆದೆಯಲಿ | ಸಾಸಿವೆಯನಿಡಲಂಬುಗೊಡದ |
ಭ್ಯಾಸಿಗಳ ದೇವನು ನನೆಯ ಕೂರ್ಗಣೆಯ ಮಳೆಗರೆದ || ೪೬ ||

ದ್ರೌಪದಿಯ ಸುವಿವಾಹ ಮಣಿರಥ | ಚೌಪಳಿಗೆಗಳ ಸಮತಳದಲಿರೆ |
ದ್ರುಪದ ಸುತನಾಕೆಯ ಪುರೋಭಾಗವನು ತಾನೈದಿ ||
ನೃಪತಿಗಳೊಳಿವನೀ ಪೆಸರ ಭೂ | ಮಿಪ ನೋಡೌ ತಂಗಿಯೆಂದಾ |
ವಿಪುಲರಥವನು ಮಂದಗತಿಯಲಿ ನಡಸಿ ತೋರಿಸಿದ || ೪೭ ||

ಈತ ಕುರುಕುಲ ಜಾತನತಿ ವಿ | ಖ್ಯಾತ ದುರ್ಯೋಧನಧರಾಧಿಪ |
ನೀತ ದುಶ್ಯಾಸನ ನೃಪಾಲಕನೀತದುಸ್ಸಹನು ||

ಈತ ದುರ್ಮರುಶಣ ಮಹೀಪತಿ | ಈತದುರ್ಜೆಯನೀತ ದುರ್ಮದ |
ನೀತ ಚಿತ್ರಕನಿಂತಿವರು ಧೃತರಾಷ್ಟ್ರನಂದನರು || ೪೮ ||

ವರ ವಿರಾಟನೃಪಾಲನಿವನು | ತ್ತರ ಕುಮಾರನು ಚಂದ್ರಸೇನನು |
ಸುರಸ ಭೂರಿಶ್ರವನು ದಕ್ಷಿಣಚೋಳ ಬಾಹ್ಲಿಕನು |
ಹರಿಣ ಲೋಚನೆಯಿವನು ಸೈಂಧವ | ಧರಿಣಿ ಪಾಲ ಸಮುದ್ರ ಸೇನನು |
ವರ ಬೃಹದ್ರತ ಚಿತ್ರಾಯುಧನು ಪಾಂಡನೃಪ || ೪೯ ||

ಇತ್ತನೋಡೆಲೆ ತಂಗಿ ದ್ರೋಣನ | ಪುತ್ರ ನಶ್ವತ್ಥಾಮನೀತನು |
ಮತ್ತಮಾತನ ಮಾವ ಕೃಪನೀತನುವಿಕರ್ಣನಿವ ||
ಇತ್ತಲೀಕ್ಷಿಸು ಸೂರ್ಯತನುಜನು | ದಾತ್ತ ಕರ್ಣನನೆಂದು ತೋರಿಸಿ |
ವೃತ್ತಕುಚೆಯೀಕ್ಷಿಸಿದಳಿಂತಖಿಳಾವನೀಶ್ವರರ || ೫೦ ||

ಎನಿತು ತಾರಗೆಯಿರ್ದೊಡಂ ಕುಮು | ದಿನಿ ಸುಧಾಂಶುವನೆಳಸಿ ಚಂದ್ರಿಕೆ |
ಯನು ಚಕೋರಿ ಮರಂಗಳೊಳು ಕೋಗಿಲೆರಸಾಳವನು ||
ಸುನಯದರಸುವ ತೆರದಿ ವರನನು | ವನಿತೆಯರಸುತ ನೃಪರ ಚೆಲುವನು |
ಮನವೊಗಡಿಸಲು ಕಂಗುಡಿತೆಯಲಿ ಮೊಗೆದು ಚೆಲ್ಲಿದಳು || ೫೧ ||

ಮೀಸೆದಿದ್ದುವ ಕೈಗಳಲ್ಲಿಂ | ದೋಸರಿಸವರಸುಗಳ ಬೆಳ್ಳೆಲೆ |
ಯೀಸಿ ಕೊಂಬಾಕೈಗಳಲ್ಲಿಯೇ ನಿಂದವಾನನವ ||
ಬೀಸಣಿಸಿದುದು ಕಂದು ವಿರಹದ | ಕೇಸುರಿಯ ಒಳಗೊಳಗೆ ಹಬ್ಬಿತು |
ಸೂಸಿದರು ಬೆಳುನಗೆಯ ಬರುಹೆಕ್ಕಳದ ಹೇರಳವ || ೫೨ ||

ಸಿಂಗರದ ಹೊಲದೊಳಗೆ ಅದಯನ | ನಂಗನಾಕೆಯ ದಿಟ್ಟಿ ಬಲೆಯೊಳ |
ಗಂಗರುಚಿ ದೊಡ್ಡಿಯಲಿ ಸಿಲುಕಿದ ನೃಪಮನೋಮೃಗವ ||
ತುಂಗ ಮೋಹನ ತವಗವೀರಿ ಬೆ | ಡಂಗಿಯೀಕ್ಷಣ ಬಾಣದಿಂದೆ |
ಚ್ಚೆಂಗುರಿಯ ಬರಿಕೆಯಿದಿದನೊ ಭ್ರೂಚಾಪದಿಂ ಬಡಿದು || ೫೩ ||

ಬಾಲೆ ನಿನ್ನಯ ಕಣ್ಣೆನಿತು ಭು | ಪಾಲರೇಂ ಸೊಗಯಿಸರಲಾ ಹೂ |
ಗೋಲುಯೀಕಡೆಗೊಂಡು ಬಂದದೆ ಮನಸಿಜನು ನಿನ್ನ ||
ಜೋಳವಾಳಿಯ ಬಂಟನಾದನು | ಸೋಲರೀ ಪಾರ್ಥಿವರೆನುತ ಘಾ |
ತಾಳೆಯರು ನಸುನಗೆಯನಿತ್ತರು ದ್ರೌಪದಿಯ ಮುಖಕೆ || ೫೪ ||

ತಂಗಿ ನಿಮ್ಮಯ ಕಣ್ಗೆ ಸೊಗಯಿಪ | ಸಿಂಗರದ ನೃಪರಿರ್ದು ಫಲವೇಂ |
ತುಂಗಗಾಂಡಿವವಿಕ್ಷುಧನು ಕೂರಂಬು ಪೂಗಣೆಯ ||

ಅಂಗಭವನಾ ಬಿಲ್ಲೆರೆಯನಿಂ | ನಂಗಯಿಪ ಬಗೆಯಂತ್ರವೆಂದಾ |
ಸಿಂಗರದ ಮಣಿರಥದ ಧೃಷ್ಟದ್ಯುಮ್ನ ತಿರುಹಿಸಿದ || ೫೫ ||

|| ಅಂತು ಸಂಧಿ ೩೯ ಕ್ಕಂ ಮಂಗಲಮಹಾ ||

## ಪಾಂಡವ ಪರ್ವ (ಸಂಧಿ ೩೭)

**ಸಂಧಿ ೩೭**

ದ್ರೌಪದಿಯನರ್ಜುನವರಿಸಿ ಭೂ | ಮಿಪರ ಭಂಗಿಸೆ ಬಳಿಕ ಪಾಂಡವ |
ನೃಪತಿಯಿಂದ್ರಪ್ರಸ್ಥದಲಿ ರಾಜ್ಯಾಧಿಪತಿಯಾದ || ಪದ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ಗಾಂಢೀವದ ಹೊರೆಯಲಾ |
ಬಾಲಕಿಯ ರಥನಿಂದುದೀ ನೆರೆದರಸುಗಳೊಳಿನ್ನು ||
ಸ್ಥೂಲ ಭುಜನಿದನಂದಿಗಂಬನು | ಮೇಳಯಿಸಿ ನಿರ್ನೆಳಲನೀಕ್ಷಿಸೆ |
ಮೇಲೆ ತಿರುಗುವ ಗಗನ ಯಂತ್ರದ ಮೀನಿನೆಡೆಗಣ್ಣ || ೧ ||

ಒಂದೆ ಕೋಲೊಳಗೆಚ್ಚು ಕೆಡಪುವು | ದಿಂದು ನೆರೆದೀ ಸಭೆಯೊಳಗೆ ನೆರೆ |
ಸೌಂದರಿಗೆ ವರನಪ್ಪುದೆಂದಾ ದ್ರುಪದನವರಿರದೆ ||
ಬಂದು ಡಂಗುರ ಸಾರಿದರು ಭೋ | ರೆಂದೆನಗೆ ತನಗೆನುತ ಮಿಗೆನಡೆ |
ತಂದುದೊಬ್ಬರನೊಬ್ಬರಣೆವುತ ವರನೃಪಸ್ತೋಮ || ೨ ||

ಕೆಲವರು ಧನುವನು ನೋಡುತಿದು ತಾಂ | ಪ್ರಳಯ ಕಾಲದ ಸರ್ಪನೆಂದೆದೆ |
ಚಲಿಸಿ ಕೈಗಳಗವಸಣಿಗೆ ದೊಡಿಸಿದರು ಕಣುಗಳಿಗೆ ||
ಚೆಲುವ ಮಗಳನು ತೋರಿ ಈ ಭೂ | ತಳ ಪತಿಗಳನು ಬಿಲ್ಲ ನೆವದಿಂ |
ಕೊಲಲು ಕರೆಸಿದನೆಂದು ಹೊಯ್ದರು ಕಾಲವಹಿಲದಲಿ || ೩ ||

ಅರೆಬರಾ ಭೀತರೆನೆ ಕಂಡೆದೆ | ಗರಗಿದನುವಿನಗಸಣಿಯುಳಿದರು |
ಅರೆಬರದ ಬಲ ಬಂದು ಪೊಡವಟ್ಟೀಕ್ಷಿಸುತ ಕೆಲಕೆ ||
ಸರಿದರರೆ ಬರು ಅಭಯ ಮಂತ್ರ | ಸ್ಮರಣೆಯುಂ ಕೈನೀಡಿಯಿದು ಕೇ |
ಸುರಿಯೆನುತ ಮೊಗದೆಗದರಬಲೆಯರಟ್ಟ ಹಾಸದಲಿ || ೪ ||

ಬಂದು ಬಿಲ್ಲನು ಮೂವಳಸ ಬಲ | ಬಂದು ಕುಸುಮ ವಸುರಿದು ನೊಸಲಿಗೆ |
ತಂದು ಕರವನು ಬಳಿಕ ಮಂಡಿಯ ಹೂಡಿ ಸತ್ವದಲಿ ||

ಹಂದದೀ ಧನುವೆಂದು ಪಿಡಿದಾ | ರ್ಪಿಂದ ಗದಿದೊಡೆ ಸೆಳದುದು ಕ |
ಣ್ಸಂದಿ ನೆತ್ತರಕಾರಿ ಬಿದ್ದನು ಪಾಂಡ್ಯಧರಣೀಶ || ೫ ||

ನಗೆಗಡಲು ಘೂರ್ಣಿಸಿತು ದ್ರುಪದನ | ಮಗಳ ಕೆಳದಿಯರತ್ತಣಿಂ ಕೈ |
ಮಿಗೆ ಮುಸುಡ ದುಗುಡದಲಿ ಮುಸುಕನು ಬಲಿದು ಹಿಂಗಿದನು ||
ಬೆಗಡುಗೊಳ್ಳದೆ ಚೋಳರಾಯನು | ಬಿಗಿದ ಹುಬ್ಬಿನ ಕುಣಿವ ಮೀಸೆಯ |
ಬಗೆಯ ಬಿಗುಹಿನ ಬಿಂಕಕಾರನು ಬಿಲ್ಲಿಗೈತಂದ || ೬ ||

ತೊಡಚೆ ನೆಗಪಿದೊಡತ್ತಲಿತ್ತಲು | ಮಿಡುಕದಿರೆ ಧನು ಭರದಿ ದಂಡೆಯ |
ದೃಢಗೊಳಿಸಿ ಮೊಳಕಾಲನಿಳೆಯೊಳು ಬಲಿದೌಡುಗಚ್ಚಿ ||
ಜಡಿದು ನೆಗಪಲು ಹೊಂಕರಿಸಿ ಕಾ | ಲುಡಿದು ಮುಂಗೈ ವಡಿದು ಮೆಲ್ಲನೆ |
ಕೆಡೆದು ಘೋಳೆನೆ ನಗಿಸಿದನು ನೋಟಕರ ನೆರವಿಯನು || ೭ ||

ನೆರವಿ ನಕ್ಕರೆ ನಗಲಿ ಬಿಲ್ಲಿಗೆ | ಕರವ ನೀಡುವರಲ್ಲರವದಿರು |
ಧರಣಿಪರು ಕಡು ಭಂಡರೈನಿಮಗೇತಕೀ ನಗೆಯು ||
ತರುಣಿಯನು ಮನದೊಳಗೆ ವರಿಸಿದ | ತೆರದಿ ಬಿಲ್ಲನು ನಿಮ್ಮ ಕೈಯಲಿ |
ಧರಿಸಿ ನಗಿ ಬಳಿಕೆಂದು ಜರಿದರು ಕೆಲರು ಕೆಲಬರನು || ೮ ||

ಮಾಳವನ ಮದವುಡುಗಿದುದು ನಿಡು | ದೋಳು ಪುರಿದುದು ಕೇರಳನ ಮಣಿ |
ಮೌಳಿ ಹುಡಿಹುಡಿಯಾಯ್ತು ಚೇರನ ತೆಲುಗ ಮಲಗಿದನು ||
ಗೌಳರಾಯನ ಕೌಳುಹರಿದುದು | ತೌಳವನ ತಕ್ಕಳಿದುದವನೀ |
ಪಾಲರೆಲ್ಲರನೈದೆ ಗೆಲಿದುದು ದಿವ್ಯಕೋದಂಡ || ೯ ||

ಸೂಳೆಯರ ಬಿರುನಗೆಯ ದ್ರೌಪದಿ | ಯಾಳಿಯರ ಬಲು ಹಾಸ್ಯವಾನಿ |
ಸ್ಸಾಳಗಳ ಮರಯಿಸಿತು ಸುಡುಸುಡು ಹೆಣ್ಣ ಕೋಟಲೆಯ ||
ಖೂಳರೋ ಬಂಡರೊನೃಪರು ಪಾಂ | ಚಾಳೆಯಟ್ಟಿಕ್ಕದರೆ ಪಡೆಯರೆ |
ಕೂಳನಿದಕಾವಾರೆವೆಂದರು ಕೆಲಬರವನಿಪರು || ೧೦ ||

ಕಂಡು ಖಾತಿಯಲೆರ್ದನಾ ದೋ | ರ್ದಂಡ ವಿಕ್ರಮ ಕೌರವನು ಕೋ |
ದಂಡವನು ಬಲವಂದುಕೈ ನೀಡಿದನು ಕದುಕಿದನು ||
ಮಂಡಿಗೊಂಡೆತ್ತಿದೊಡೆ ಧನುಮಾ | ರ್ಕೊಂಡೊಡೆಯೆ ಮುಕ್ಕುರಿಸಿ ಬೀಳುತ |
ಡೆಂಡೆಣಿಸಿ ಕೈಹೊಯ್ದು ನಕ್ಕುದು ಕಾಮಿನೀ ಜನವು || ೧೧ ||

ಅತ್ತ ನೋಡಿದನವರ ನಿರೆತಲೆ | ಗುತ್ತಿದನುಯಿನ್ನೀ ಧನುವ ಪಿಡಿ |
ದೆತ್ತುವಗ್ಗಳವಾವನವನನು ಕಾಬೆವಲಯೆನುತ ||

ಅತ್ತ ಸರಿದನು ಮುಸುಡ ದುಗುಡದ | ಚಿತ್ತದಳಲನು ಕಂಡು ಪರಬಲ |
ಮತ್ತಗಜ ಕಂಠೀರವನು ಕಲಿಕರ್ಣನೈತಂದ || ೧೨ ||

ಈತನೇನರ್ಜುನನೋ ನೋಡಿದೊ | ಡಾತನಚ್ಚಾಗಿಹನೆ ಈರ್ವರ |
ಮಾತೆಯೋರ್ವಳೊ ಕಡುಚೆಲುವನೆಂದುದು ನೆರವಿ ಮತ್ತೆ ||
ಈತಗಾ ಧನು ಓತಡಿಂ ಫಲ | ಮಾತದೇನೀ ದ್ರೌಪದಿಯ ಪು |
ಣ್ಯಾತಿಶಯವನು ಪೊಗಳಲರಿದೆಂದುದು ಸಖೀನಿವಹ || ೧೩ ||

ಗೆಲಿದನಾದಡೆ ಈ ಧನುವನಾ | ಲಲನೆ ಕುರುಪತಿಗೆಂದು ಮಿಗೆ ತೋ |
ಳ್ವಲದಿನೆತ್ತಿದನೊತ್ತಿಗೊಲೆಯೊತ್ತಿದೊಡದೊಂದಿನಿತು ||
ಉಳಿದೊಡನೆ ಭೋರ್ರೈಸೆ ಕೈಯಿಂ | ದಿಳುಹಿ ಹೋದನು ಹೆಕ್ಕಳವ ಮು |
ಕ್ಕುಳಿಸಿದಲಬಲೆಯರುಗುಳಿದರು ಬಳಿಕಟ್ಟಹಾಸವನು || ೧೪ ||

ಬಿಡುಬಿಡಿನ್ನೀ ಧನುವನೆತ್ತುವ | ಪೊಡವಿಪತಿಗಳ ಕಾಣೆ ಮಗಳಿಗೆ |
ಕೊಡಿಸಿ ಕಳೆಯಲಿ ದೀಕ್ಷೆಯನು ಪಾಂಚಾಲ ಭೂಪ ||
ಕಡಿಯ ದೊರಸದ ಮರನ ಬಿಲುಹುಳು | ಹಿಡಿದು ಕಡುವುದೆ ತಪ್ಪದೆಂದೊ |
ಗ್ಗೊಡೆಯದಾಡಿದರಂದು ಪೆಚ್ಚಿದ ನೋಟಕರ ನೆರವಿ || ೧೫ ||

ಭೂಮಿಪಾಲರ ಚೆಲುವಿನೀ ವಧು | ಧೂಮಕೇತುವೊ ವಿಕ್ರಮ ಪ್ರೋ |
ದ್ದಾಮ ಸೃಷ್ಟಿಗೆ ಕಾಲದಂಡವೊ ಚಂಡಕೋದಂಡ ||
ಆ ಮಹಾ ಮಹಿವರರ ಮಾನದ | ಸೀಮೆಯಳಿದುದು ಹಾಸ್ಯ ಭಾಜನ |
ಕಾಮುಕರು ತಾವಾದರೆಂದರು ನಗುತ ಭೂಸುರರು || ೧೬ ||

ಸ್ಮರನು ಹರಿಮೊದಲಾದ ಹರಿಕುಲ | ದರಸುಗಳು ಮಾಗಧನು ಬಾರದೆ |
ನರನು ಮೊದಲಾದವರಿರದೆಯಿವರಿದ್ದು ಫಲವೇನು ||
ನೆರೆದು ಭಂಡಾದರು ಮಹಾ ಭೂ | ವರರುಯೀಕೆಯನೊಲಿಸಿವೊಡೆ ಸೌಂ |
ದರತೆ ತೋಳ್ವಲಮಿಲ್ಲವೆಂದನು ದ್ರುಪದನಂದನನು || ೧೭ ||

ಬಳಿಕ ಪಾಂಚಾಲನು ಧರಾಮರ | ರೊಳಗೆ ದೋರ್ವಳ ಸಾಳಿಯಾದವ |
ಘಳಿಲನೆತ್ತಲಿ ಬಿಲ್ಲನೀ ಕನ್ಯಾಸುರತ್ನವನು ||
ತಳೆಯಲೆಂದಾ ವಿಪ್ರರರು ಸಭೆ | ಯೊಳಗೆ ಸಾರಿಸಿ ಕೇಳ್ದು ಭೂಪತಿ |
ಗಳಿಯನಾಗಿಯುಪಾಧ್ಯರೆಂದರು ನಗುತ ತಮ್ಮೊಳಗೆ || ೧೮ ||

ಕರೆದು ಕನ್ಯಾದಾನಗೊಟ್ಟೊಡೆ | ಕರವನಾನುವೆವಲ್ಲದೀ ಭೂ |
ವರರವೊಲು ಬಿಲ್ಲೆತ್ತಿ ನಗೆಗೆಡೆಯಹರುನಾವಲ್ಲ ||

ಮರುಳುಗಳ ಈ ಧನುವನೆತ್ತದೊ | ಡರರೆನಗೇಂ ಪಳಿವೆ ಶಾಸ್ತ್ರದ |
ಸುರಗಿಕಾರರು ನಾವು ನೋಡಲಿ ನೃಪತಿಸಾಧನೆಯ || ೧೯ ||

ವಾರಣಂಗಳು ತಾಗೆ ಚಲಿಸದ | ದಾರುವಧುಯೆಳೆ ಹುಲ್ಲೆ ನೂಕಲು |
ತೇರಯಿಪುದೇ ದಿವ್ಯ ಕೋದಂಡವನು ನೆಗಪುವೊಡೆ ||
ವೀರಪಾರ್ಥಿವರಿಳಿದರೆಂದರೆ | ಹಾರುವರಿಗದು ತಕ್ಕುವುದೇ ನಾ |
ವಾರು ಬಿಲ್ಲಾರಾಕೆ ನಮಗೇಕೆಂದುದಾ ಸಭೆಯ || ೨೦ ||

ನೆರೆದ ವಿಪ್ರರ ಸಭೆಯಲಿರ್ದಾ | ನರನು ನಸುನಗುತಣ್ಣನಾನನ |
ಸರಸಿಜವನೀಕ್ಷಿಸಲು ಹುಬ್ಬಿನ ಬೆಸನ ಕೊಡೆಪಡೆದು ||
ಸ್ಮರಿಸಿ ಗುರುಪಂಚಕವನೆದ್ದೊಂ | ದಿರವನೀಕ್ಷಿಸಿ ಆರು ನಿಮ್ಮನು |
ಕರೆದರೋ ದಕ್ಷಿಣೆಗೆನುತ ನಕ್ಕರು ಧರಾಮರರು || ೨೧ ||

ಭಟ್ಟರೆದ್ದಿಂದಾವ ಕಾರ್ಯಕೆ | ಗುಟ್ಟು ಘನವಾಗಿದೆ ನೃಪಾಲರ |
ನೊಟ್ಟಯೆಸಿದಾ ಧನುವನೆತ್ತಲು ಗಮಿಯಿಸುವ ಪರಿಯೊ ||
ಹೆಟ್ಟುಗೆಯ ಬಯಸಿದಿರೆಯೆದೆಯಲಿ | ನಟ್ಟವಲೆ ಹೂಗಣೆಗಳೆಂದವಲೆ |
ಅಟ್ಟಹಾಸವನೆಸಗೆ ನಸುನಗುತಿರ್ದನಾ ಪಾರ್ಥ || ೨೨ ||

ತಟ್ಟು ನಾಮದ ಬೆರಳ ದರ್ಭೆಯ | ಹೆಟ್ಟುವಸ್ತ್ರದ ಬಳಲುಗಚ್ಚೆಯ |
ಬಟ್ಟದರ್ಭೆಯ ಕರಡಗೆಯನವುಂಕಿದ ಕೌಂಕುಳಿನ ||
ಮುಟ್ಟೆ ತುಂಬುವ ಯಜ್ಞ ಸೂತ್ರದ | ಗಟ್ಟಿ ಭಾಂದಪ ನಿಮ್ಮನೊಲಿಯದೆ |
ಕೆಟ್ಟಳಾ ಪಾಂಚಾಲೆಯೆಂದರು ನಗುತ ಭೂಸುರರು || ೨೩ ||

ಹೂರಿಗೆಯೊ ಲಡ್ಡುಗೆಯೊ ದೋಸೆಯೊ | ಗಾರಿಗೆಯೊ ಪಾಯಸವೊ ಕಮ್ಮನ |
ನೀರುದುಪ್ಪವೊ ತೊಗೆಯೊ ಕಳವೆಯ ಕೂಳೊ ಕೆನೆಮೊಸರೊ ||
ಕ್ಷೀರವೋ ಈ ಧನುವೊ ದ್ರೌಪದಿ | ಹಾರುವಿತಿಯೋ ನಮಗೆ ಕೊರತೆಯ |
ತಾರದಿರಿ ಆರಾಧ್ಯರೇ ಯೆಂದುದು ಬುಧಸ್ತೋಮ || ೨೪ ||

ನಾವು ಕೊರತೆಯ ತಾರೆವಭವಕ್ಕ | ಪಾಲಲೋಕನವುಂಟು ಭೂಭುಜ |
ರಾವ ವಿಜಿಗೀಶುಗಳು ನೀವರೆಫಳಿಗೆ ನೋಡುತಿರಿ ||
ದೇವನಿರ್ಮಿತ ಚಾಪವನು ಭೂ | ದೇವಸಭೆಯೊಳಗೋರ್ವನೇ ನರ |
ನೋವೊಗೆಲಿದಪನೆಂಬ ಕೀರ್ತಿಯ ನಿಮಗೆ ತಹೆನೆಂದ || ೨೫ ||

ಎಂದು ವಿಪ್ರರ ಬೋಳೈಸಿ ನಡೆ | ತಂದನಾ ಸಭೆಯೊಳಗೆ ಶಕ್ರನ |
ನಂದನನು ಪೋಪಂದವನು ನೆರೆಕಂಡು ಬೆರಗಾಗಿ ||

ಬೆಂದುಹೋದಾ ಪಾರ್ಥನಿಂದೇಂ | ಬಂದನೋ ಈ ವೇಷದಲಿ ಇವ |
ನೊಂದು ಮನದಂಘಲಣೆ ಲೇಸೆಂದುದು ಬುಧಸ್ತೋಮ || ೧೬ ||

ಹಾರುವನೊ ಮೇಣ್ ಗೂಢವೇಷದ | ಧಾರುಣೀಶನೊ ವೀರರಳವನ |
ದಾರು ಬಲ್ಲರು ಭದ್ರಲಕ್ಷಣ ಮೂರ್ತಿತಾನಹುದು ||
ಬೋರನೇತುಗು ಚಾಪವನು ಗಗ | ನೋರು ಮತ್ಸ್ಯವನೆಸುಗುವರಿಸುಗು |
ನಾರಿಯನು ಸುಖಕಾರಿಯನುಯೆಂದರು ವಿವೇಕಿಗಳು || ೧೭ ||

ಸ್ಮರ ವಿಕಾರದ ಮೂರ್ತಿಯೋ ಅರಿ | ಮರುಳೊ ಪರಿಹಾಸಕನೊ ವಿಪ್ರರ |
ನೆರವಿಯನು ಮಿಗೆನಗಿಸಿಯೆತ್ತುವೆನೀಧನುವವನೆಂದು ||
ಭರದಿ ಬಹಪರಿಯೋಯೆನುತ ಭೂ | ವರರ ಸಭೆ ಗಹಗಹಿಸೆ ಅವರನು |
ಸರಕುಮಾಡದೆ ಬಂದನರ್ಜುನ ಗಾಂಢಿವದ ಹೊರೆಗೆ || ೧೮ ||

ಇತ್ತ ನೋಡೌ ತಂಗಿ ಹಾರುವ | ನೆತ್ತ ಬಿಲ್ಲೆತ್ತಕಟಬೇಟದ |
ಬಿತ್ತು ಮೋಹದ ಮುತ್ತು ಬಯಕೆಯ ತುತ್ತು ಬಂದಿತಲ ||
ನೆತ್ತಿದನು ತಾ ಬಿಲ್ಲನಾಗಳೆ | ಯಿತ್ತ ನೆರೆಯನು ನಿಮ್ಮ ಗೀತಗೆ |
ಪತ್ತುಗೆಯಲಾ ನಿಮ್ಮಮನವೆಂದುದು ಸತೀನಿವಹ || ೧೯ ||

ಹಾರುವಿತಿ ನೋಡಕ್ಕ ನಿಮ್ಮಯ | ಹಾರುವನು ಸಿಂಗಾರವನು ಸುಕು |
ಮರರಾರನು ಚೆಲುವಿನಿಂ ಮೆಚ್ಚದಮನಕೆ ಸೊಗಸು ||
ಸೇರಿತಲೆ ಮನಸಿಜನ ಹೂಗಣೆ | ಯಾರ ಕುಣಿಯಿಸದೆನಲು ದ್ರುಪದಕು |
ಮಾರಿ ನೋಡಿದಳಾತನನು ತಲೆವಾಗಿದಳು ಬಳಿಕ || ೨೦ ||

ತೆಳುಮುಗಿಲ ಮರೆಯುದಯಿಪರ್ಕನ | ನಳಿನಿ ಎಲೆ ಮರೆಯಿರ್ದ ಕುಸುಮವ |
ನಳಿನಿಯರಿವಲೊಲರಿದಳವಳಾದೇಶವಲ್ಲಭನ ||
ಬಳಿಕ ನಿಧಿಗಾ ದೀಪವರ್ತಿಯ | ಫಳಿಲನೆರಗುವ ತೆರದಿ ಬಗೆ ಸಂ |
ಚಳಿಸದೆರಗಿತು ಪುಳಕ ಗುಡಿಗಟ್ಟಿದಳು ಕಣುಸೋಂಕೆ || ೨೧ ||

ಅಂದು ಶಾರ್ಙ್ಗವ ಶಾರ್ಙ್ಗಯೇರಿಸಿ | ದಂದದಲಿ ಗಾಂಡಿವದ ಗಾಂಡೀವಿ |
ಯೊಂದು ವಹಿಲದಲೆತ್ತಿಯೇರಿಸಿ ಜೀವಿ ಜೇವೊಡೆದು ||
ಒಂದೆ ಶರದಿಂ ನೆಳಲನೀಕ್ಷಿಸಿ | ನಿಂದು ಯಂತ್ರದ ಜಶದೆಡದ ಕ |
ಣ್ಣೊಂದೆ ನಿಮಿಷದಲೆಚ್ಚು ಕೆಡಹಿದನಾಯೆನಲು ಜನವ || ೨೨ ||

ಅರರೆ ಮಝು ಕೋದಂಡ ಲಕ್ಷ್ಮೀ | ಸರಸಿಜಾಂಬಕ ಚೌಪವಿದ್ಯಾ |
ವರಶರಾಸನೆ ಸಾರ್ವಭೌಮನೆಯೆಂದರರ್ತಿಗಳು ||

ಯಿರದೆ ಜಯಿಸಿದೆವೆಂದು ವಿಪ್ರರ | ನೆರವಿ ನಲಿದುದು ನೃಪರ ಮೂಗಿಗೆ |
ಬೆರಳು ಬಂದುದು ದ್ರುಪದನವರಾನಂದವೈದಿದರು || ೩೩ ||

ನೆನೆದನಾ ಪಾಂಚಾಲನಂದಾ | ಮುನಿ ನಿರೂಪಿಸಿದಂದವನು ಪಾ |
ರ್ಥನ ಸುರೂಪನು ತೋಳ್ವಲವತಾ ಮುನ್ನ ಬಲ್ಲುದರಿಂ ||
ಮನದಲರ್ಜುನನೆಂದೆ ನಿಶ್ಚಯ | ವನು ತಳೆದು ಮುನ್ನೆನೆದ ಕಾರ್ಯವು |
ತನಗೆ ಸಿದ್ಧಿಸಿತೆಂದು ಸಂತಸದಂತವೈದಿದನು || ೩೪ ||

ಬಳಿಕ ಗಾಂಡಿವಗೊಂಡು ಗಾಂಡಿವಿ | ಕಲಿಗಳಾ ನಾಲ್ವರನಡುವೆ ಸಂ |
ಚಳಿಸದಿರ್ದನು ವಿಪ್ರಸಭೆ ಹೆಕ್ಕಳದಿ ಕುಣಿದಾಡೆ ||
ನಳಿನಮುಖಿ ರಥದಿಂದ ಭೂಮಿಗೆ | ಕೆಳದಿಯರು ಸಹವವತರಿಸಿದಳು |
ತಳೆದಳು ರಮಣಿ.................. || ೩೫ ||

ಒಂದಿ ಬರಲಳಿಮಾಲೆ ಕಡೆಗ | ಣ್ಣಿಂದೆ ಹೂಗಣೆಮಾಲೆ ಪೊಡೆವುತ |
ಮುಂದೆ ಬರಲೋಲೈಸಿ ಬರುತಿರೆ ಕೆಳದಿಯರಮಾಲೆ ||
ಹಿಂದೆ ಬರೆ ಸರ್ವರವಿಳೋಕನ | ದೊಂದು ಮಾಲೆ ಬೆಡಂಗಿ ದ್ರೌಪದಿ |
ಬಂದು ಮಾಲೆಯ ಸೂಡಿದಳು ಫಲುಗುಣನ ಕಂಠದಲಿ || ೩೬ ||

ಆಕೆಯಂದೈವರ ನಡುವೆ ಸುವಿ | ವೇಕಿ ನಿಲೆ ಜನವಾಗಳೀಕ್ಷಿಸಿ |
ಈ ಕುವರರಿರಲತ್ತಲೈವರ ಸಾರಿದಳು ನೋಡ ||
ಈಕೆಯೈವರ ದ್ರೌಪದಿಯು ಯೆನೆ | ಲೋಕದವರೈವರಿಗೆ ಪೆಂಡತಿ |
ಈಕೆಯೊರ್ವಳೆಯೆಂಬರತಿ ಪಾತಕದ ಹೊಲೆನುಡಿಯ || ೩೭ ||

ಕಷ್ಟಕಾಲದೊಳಿಂದು ಜನದೊಳ | ಗಿಷ್ಟರೀಕ್ಷಿಸಿದಬಲೆಯರ ನೊಡ |
ವುಟ್ಟಿದವರೆನೆ ಬಗೆವರೆನಲಾ ಪುಣ್ಯಕಾಲದಲಿ ||
ಶಿಷ್ಟರೊಡವುಟ್ಟಿದವರೈವರು | ಹೆಟ್ಟುಗೆಯನೋರ್ವಳನು ರಮಿಯಿಸೆ |
ಸೃಷ್ಟಿಗವರಭಿವಂದ್ಯರಹರೇ ಭೂಪ ಕೇಳೆಂದ || ೩೮ ||

ಹೋಗಲಾ ಮಾತೇಕೆ ದ್ರುಪದ ಸ | ರಾಗಿಯವರನು ಸೇರೆ ಖಡುಗವ |
ತೂಗುತಾ ಕ್ಷಣವಂಗರಕ್ಷಕ ಕೋಟಿ ಬಳಸಿದುದು ||
ಹೂಗಣೆಯಗಣೆಯಳಿಯನನು ಚೆಲು | ವಾಗಿ ಮಗಳನು ರಥವನೇರಿಸಿ |
ಆಗಳಾ ಪಾಂಡುಜರು ಕುಂತಿಸಮೇತಪುರವೈದೆ || ೩೯ ||

ಕುರುಪತಿಯು ಮಸಗಿದನು ದೊರೆಗಳ | ಕರಸಿ ಮೂಗನು ಕೊಯಿದ ದ್ರುಪದನು |
ನೆರೆದು ಭಂಡಾದಿರೆಲೆ ನಿಮ್ಮಯ ಮುಂದೆ ದ್ರೌಪದಿಯ ||

ತಿರುವ ಹಾರುವ ಕೊಂಡು ಹೋಹುದ | ನರಸುಗಳ ನೋಡುವಿರೆ ತಿರಿಕನ |
ತಿರಿಕನನೆ ಮಾಡದೊಡೆ ನಿಮ್ಮದು ಮೀಸೆಯೆಲ್ಲೆಂದ || ೪೦ ||

ಏನ ನೋಡುವಿರಿನ್ನು ನಿಮ್ಮಭಿ | ಮಾನಭಂಗನ ಕಂಡು ಬಳಿಕನು |
ಮಾನವೇತಕೆ ಇಡಿಕಿದೆಡೆಯೊಳಗರಸಿ ಕೊಳಬೇಕು ||
ಮೋನವನು ಬಿಡಿ ನಾವು ದ್ರುಪದನ | ಮಾನಿನಿಯ ಕಣ್ಣಿರತೆಯಲಿ ದು |
ಮ್ಮಾನಗೆಸರನು ತೊಳವವೆಂದನು ಕೌರವರರಾಯ || ೪೧ ||

ಎಂದು ನೃಪರನು ಮೂದಲಿಸಿ ತಂ | ನೆಂದವರು ಸಹವೆದ್ದುಯೆಡೆಯಲಿ |
ನೊಂದ ನೃಪರನಿಬರು ಬಳಸಿ ಮುತ್ತಿದರು ಕೋಟೆಯನು ||
ಒಂದು ಕಡೆಗೋಸರಿಸಿತಿಳೆ ಕವಿ | ತಂದ ಸೇನೆಯ ಪದಹತಿಗೆ ರಣ |
ದುಂದುಭಿಗಳಳರಿಸಿದವಾಶಾಗಜವನಡಿಗಡಿಗೆ || ೪೨ ||

ಮುತ್ತಿಗೆಯ ಬಿಡಿಸಿದರು ದ್ರುಪದನ | ತೆತ್ತಿಗರು ಪರಿವಾರವತಿ ನಿಶಿ |
ತಾಸ್ತ್ರಗಳ ವೇಹಾಳಿಯಲಿ ಭೀಮಾರ್ಜುನರು ರಥವ ||
ಒತ್ತಿ ನೂಂಕಿದರಹಿತ ಪುರಶಿಖಿ | ನೇತ್ರನಾ ಗಾಂಡೀವಿ ಹೊಸಮಸೆ |
ವೆತ್ತ ಕೂರ್ಗಣೆಯಿಂದ ಹೂಳಿದನಹಿತ ಸೈನಿಕವ || ೪೩ ||

ಅನಿಲಸುತನತ್ತಂಬು ವರುಷದ | ಪೊನಲೊಳಗೆ ಮುಳುಗಿಸಿದ ರಿಪು ವಾ |
ಹಿನಿಯನಿದು ಪಾಂಚಾಲ ಪುತ್ರಿಯ ಮದುವೆಯವತಳದೊ ||
ಎನುತ ದೇಶಾಧೀಶ್ವರರು ಒಂ | ದಿನಿತು ತಡೆಯದೆ ಹಾದಿಗೊಂಡರು |
ಇನಸುತನು ಬೊಬ್ಬಿರಿದು ನಿಂದನು ಸರಳಸರಿಗರಿದು || ೪೪ ||

ಆರು ನಿಲಬಹುದಮಮ ಶಕ್ರಕು | ಮಾರಕನ ಗಾಂಡೀವದಿದಿರಲಿ |
ಭೋರನೆರಗುವ ಕೆಂಗರಿಯ ಕೂರ್ಗಣೆಗೆ ಮೊಗದೆಗೆದು ||
ಹಾರುವರೊಳತಿ ಹಾರುವುದು ಕಡು | ವೀರವೇ ನಮಗೆಮ್ಮ ಮುಳಿಸಿಗೆ |
ಬಾರಿಯಳಾಗಿರಲಿ ದ್ರುಪದನು ರಾಯನೆಡೆಯೆಂದ || ೪೫ ||

ತಿರುಗಿದನು.......ಪಮುಕ | ಮುರಿದನಶ್ವತ್ಥಾಮ ಹಿಂಗಿದ |
ನಿರದೆ ಶಲ್ಯನು ಸರಿದ ದುಶ್ಶಾಸನನು ತೊಲಗಿದನು ||
ಪುರದ ಹಾದಿಯ ಹತ್ತಿದನು ದು | ರ್ಮರುಷಣನು ಹಸ್ತಿನ ಪುರದ ತಂ |
ಮರಮನೆಗಳೊಳು ನಿಂದರವರವನೀಶ ಕೇಳೆಂದ || ೪೬ ||

ಹಿಂದೆ ಬಂದರಸುಗಳ ಕೌರವ | ಗೆಂದರವರೇ ಪಾರ್ವರಲ್ಲ ಸು |
ರೇಂದ್ರನಂದನನೋರ್ವರನು ವಾಯುನಂದನನು ||

ಬಂದೊಡೆದೆ ಹಳಿಲೆಂದು ಭೋರನೆ | ಬಂದು ಗಾಂಗೇಯಾದಿಗಳಿಗಾ |
ತಂದ ಸುದ್ದಿಯ ಪೇಳಿದನು ಶ್ರಮದಿಂ ಸುಯೋಧನನು || ೪೭ ||

ಕೇಳಿದನು ಬಿಲ್ಲೋಜನವನೀ | ಪಾಲರನು ಭಂಗಿಸಿದ ದರ್ಪವಿ |
ಶಾಲ ಗಾಂಡಿವವೆತ್ತಿಯ ನಿಮಿಷವನು ನಿಮಿಷಕೆಸುವ ||
ತೋಳ ಬಲವರ್ಜುನಗವಲ್ಲದೆ | ಮೇಳಿಸದು ಮಿಕ್ಕವರೊಳೆನೆ ಭೂ |
ಪಾಲ ವಿದುರಾದಿಗಳು ನಿರ್ಧರಿಸಿದರು ಮನದೊಳಗೆ || ೪೮ ||

ಬಳಿಕ ದೂತರ ಕಳುಹಿ ಪಾಂಡುಜ | ರೊಳವರಿದು ಮಾಹೇಂದ್ರನಗರಕೆ |
ತಳೆದರಾ ಗಾಂಗೇಯ ದ್ರೋಣ ಧೃತರಾಷ್ಟ್ರ ||
ಘಳಿಲನಾ ಪಾಂಡುಜರು ದ್ರುಪದನು | ಬಳೆದ ರಾಗದಲಿದಿರುಗೊಂಡ |
ಗ್ಗಳದ ಭಕ್ತಿಯಲೆರಗಿದರು ಮರುಗಿದರು ಮನದೊಳಗೆ || ೪೯ ||

ಅರಮನೆಯನೈದಿದರು ಹರುಷೋ | ತ್ಕರುಷದಲ ಕುಳ್ಳಿರ್ದು ನೀವಂ |
ದರಗಿನಾವಾಸದಲಿ ತಪ್ಪಿದ ಪೋದ ಬಂದಿರವ ||
ವಿರಚಿಸೆನೆ ಕೇಳಜ್ಜ ನಿಮ್ಮಯ | ಕರುಣವಿರಲದು ನಮಗೆ ಹಾನಿಯ |
ತರಲು ಬಲ್ಲುದೆಯೆಂದನಾ ಶಾಂತಜಗೆ ಯಮಸೂನು || ೫೦ ||

ಬೆಂದುದಾ ಲಾಕ್ಷಾಗೃಹವು ನಾ | ವಂದೆ ಕನ್ನವಸವೆದು ಹೋದೆವ |
ದೊಂದೆಡೆಯೆ ಪಾಂಚಾಲ ಕಾಡನು ಪೊಕ್ಕೆವಸುರರನು ||
ಕೊಂದೆವಿಂತಬಲೆಯರನಾಂತೆವು | ಬಂದೆವಿಂತೆಮ್ಮ ಈ ಸುಕೃತವದು |
ತಂದು ನಿಮ್ಮಡಿ ತೋರಿತೆಂದನು ಧರ್ಮನಂದನನು || ೫೧ ||

ಮಗನೆ ನೀವೆಲ್ಲರು ಬಳಲಿದಿರಿ | ಜಗದಲಪಯಶವಾದುದಿತ್ತಲು |
ಮೃಗಧರಾನ್ವಯ ನೀನು ಕ್ಷಮಿಯಿಪುದೆಂದು ಭೀಷ್ಮರ್ಗೆ ||
ನಗುತ ಬಿನ್ನಹ ಮಾಡಿದನು ನೆ | ಟ್ಟಗೆ ಸುಯೋಧನನೆಂದು ನಮಗ |
ಚ್ಚುಗವ ಮಾಡುವನಲ್ಲ ಕರ್ಮದ ಶೇಷಫಲವೆಂದ || ೫೨ ||

ಮೆಚ್ಚಿದೆವು ಸುಜನತೆಗೆ ಮಗನೇ | ಅಚ್ಚುಗವು ನಿಮಗಿಲ್ಲ ಮನದೊಳು |
ನಚ್ಚಿ ವಿಮಲಾಪ್ತೋಕ್ತಿಯರಿದಾಚರಿಪ ಕತದಿಂದ ||
ಪೆಚ್ಚಿದೀ ಧರ್ಮದಲಿ ಧರ್ಮಜ | ನಿಚ್ಚಮಿರುತಿಹುದೆಂದು ನಿಮ್ಮೊಳು |
ಮಚ್ಚರವು ಬಾರದವೊಲಿಂದ್ರ ಪ್ರಸ್ಥದೊಳಗೆಂದ || ೫೩ ||

ಗುರುವಚನವ ದಲಂಘನೀಯವು | ಕರುಣದಿಂ ಬೆಸಸಿದವೊಲಿಹೆವೆನೆ |
ಹರುಷವನು ತಳೆದೆದ್ದು ಬಂದು ಸುಯೋಧನನ ಬೇರೆ ||

ಕರೆದು ನಯಭಯದೋರಿ ನಾನಾ | ಪರಿಯೊಡಂಬಡವೇಳ್ದು ಬಳಿಕಾ |
ಕುರುಪತಿಯ ಕಳುಹಿದನು ಹಸ್ತಿನಪುರಕೆ ಗಾಂಗೇಯ || ೫೪ ||

ವರ ಮುಹೂರ್ತವು ಪಾರುತಿದ್ದ | ಚ್ಚರಿ ವಿಭವದಲಿ ದ್ರುಪದ ಭೂಪನು |
ಸುರನದಿಯ ಸುಕುಮಾರನುಂ ದ್ರೌಪದಿ ಧನಂಜಯಗೆ ||
ಪರಿಣಯನವನು ಮಾಡದರು ಬೇಳ್ | ಪರ ಬಯಕೆಯನು ನೀಡಿದರು ಮ |
ತ್ತಿರದೆ ಸಂತಸಗೂಡಿದರು ತದನಂತರದಲವರು || ೫೫ ||

ಹರುಷದಲಿ ಧೃತರಾಷ್ಟ್ರವಿದುರರು | ವೆರಸಿ ಕುಂಭಜಸಹಿತ ದ್ರುಪದನ |
ಕರಸಿಯುಡುಗೊರೆಗೊಟ್ಟು ಕಳುಹಿಸಿಕೊಂಡು ಕುಂತಿ ಸಹ ||
ಸುರಸ ಪಾಂಡುಜರೊಡನೆ ದ್ರೌಪದಿ | ವೆರಸಿ ಪೊರವಂಟನು ಪುರವನಾ |
ಸುರನದಿಯ ಸುಕುಮಾರನಮರಾಧೀಶ ವೈಭವದಿ || ೫೭ ||

ದ್ರುಪದನಿತ್ತಾ ಬಳುವಳಿಗಳಾ | ದ್ವಿಪಹಯವ್ರಜವಸ್ತ್ರಭೂಷಣ |
ವಿಪುಳ ಪೆಟ್ಟಿಕೆಗಳ ಸಹಸ್ರ ಸಖೀಜನದ ಮೆರೆವ ||
ಚಪಳ ವಾಮನ ಕುಬ್ಜಮೂಕಾ | ನುಪಮ ಗಾಯಕ ಗಾಯಿನಿಯರೀ |
ಕ್ಷಿಪ ವಿಡಾಯದಿ ಬಂದಳಂದಳದೊಳಗೆ ಪಾಂಚಾಲಿ || ೫೭ ||

ಗಗನ ಪೂತವೊಲೆಸೆದವಾ ಸ | ತ್ತಿಗೆಗಳಾಡಿದವೈದೆ ಚವಲಗ |
ಳೊಗೆದ ಯಾಚಕ ಕಳಕಳವು ತೂರ್ಯರವ ಪೇಳೆರದು ||
ಜಗವ ಬಳಸಿತು ದ್ರುಪದನಾ ಭೋ | ಗಿಗಳ ಬೀಳ್ಕೊಂಡತ್ತ ಪೊಳಲಿಗೆ |
ಮಗುಳಿದರು ಪಾಂಚಾಳ ಧೃಷ್ಟದುಮ್ನರೊಲವಿಂದ || ೫೮ ||

ವರಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀಜಾತ ನವ ಮಧು |
ಕರ ವಿರಾಜಿತ ಸುಕವಿ ಸಾಳುವ ರಚಿತ ಮೃದುಲಲಿತ ||
ಪರಮ ನೇಮೀಶ್ವರನ ಪಾವನ | ಚರಿತೆಯೊಳಗೊಂಬತ್ತನೆಯದಿರು ||
ದೊರೆವಡೆದದಭಿವಿನುತ ಪಾಂಡವಪರ್ವ ಉರ್ವಿಯಲಿ || ೫೯ ||

|| ಅಂತು ಸಂಧಿ ೩೭ಕ್ಕಂ ಮಂಗಲಮಹಾ ||

**ಸಂಧಿ ೩೮**

ಕರಸಿ ಪಂಚಪ್ರಸ್ತದಿಂ ನಿಜ | ಪುರಕೆ ಕುರುಪತಿ ಜೂಜಿನಿಂದಾ |
ಧರೆಯನೆಳೆದರೆ ಪಾಂಡವರು ವನವಾಸವೆಯ್ದಿದರು || ಪದ ||

ಶ್ರೀಲಲನೆಯನು ವಕ್ಷದೊಳು ತುದಿ | ನಾಲಗೆಯೊಳತಿ ಸತ್ಯ ವಚನವ |
ತೋಳೊಳಮರಜಯಾಂಗನೆಯನಾಳುತ ನಿರಂತರದಿ ||
ಭೂಲಲನೆಯನು ರಾಮಚಂದ್ರನ | ಮೇಲುಪಂತಿಯನಾಳ್ದ ಧರ್ಮವಿ |
ಶಾಲ ಚರಿತನದೀನನೆಸೆದನೊ ಧರ್ಮನಂದನನು || ೧ ||

ಸುರನದಿಯು ಮೊದಲಾದ ತೆಂಕಣ | ಶರಧಿ ಪರ್ಯಂತೋರ್ವರೆಯನ |
ಚ್ಚರಿಯ ವೈಭವದಲಿ ನಿರಂತರ ಪಾಲಿಸುವುದೊಲಿದು ||
ವರ ನಿಜಾನುಜರೊಡನೆ ಹರುಷದೊ | ಳಿರು ಯುಧಿಷ್ಠಿರ ಎಂದು ಬಳಿಕಾ |
ಕುರುಪತಿಗೆ ಪೇಳದಿರು ಬುದ್ಧಿಯನಾ ವಿಭೋತ್ತಮರು || ೨ ||

ಉರಗ ಕೇತನ ಕೇಳು ಸಾಮಾ | ನ್ಯರೆ ವಿಚಾರಿಸೆ ಪಾಂಡುಜರು ಮ |
ಚ್ಚರವ ಮನದೊಳು ನೆನೆಯದಿರು ನಿನಗನ್ಯರಲ್ಲವರು ||
ಗುರುವಚನವಿದು ನಂಬು ಧರ್ಮಾ | ಚರಣರವರದರಿಂದ ನಿನ್ನೊಳು |
ಬರಿದೆ ತಪ್ಪರು ಕೂಡಿ ನಡೆಯೆಂದನು ನದೀಸುತನು || ೩ ||

ತಂದೆಯೆಂದುದು ಬುದ್ಧಿ ಕೇಳೆಲೆ | ಕಂದ ಪಾಂಡವು ನಾನುಮೆಂತೊಲ |
ವಿಂದ ನಡೆದೆವು ಪಾಂಡುಜರು ನೀನುಂ ನಡೆವುದಂತು ||
ಎಂದನಾ ಧೃತರಾಷ್ಟ್ರನಹುದಹು | ದೆಂದು ದೈವದ ಬಲವವರಿಗುಂ |
ಟೊಂದಿ ನಡೆವುದೆ ಬುದ್ಧಿಯೆಂದನು ಕುರುಪತಿಗೆ ವಿದುರ || ೪ ||

ಅವರಿಗಾದುದು ದೈವಬಲ ಗಡ | ನವಗೆ ದುರ್ಲಭವಾದುದೇಯೆನ |
ಲವನಿಪತಿಕೇಳಿದನು ಲಾಕ್ಷಾ ಗೇಹದುರಿಯೊಳಗೆ ||
ತವದೆ ದೈತ್ಯರನಿಕ್ಕಿ ಗದೆಯನು | ಯುವತಿಯರನಿರೆ ಪಡೆದು ಬಲುಗಾಂ |
ಡಿವದ ಗಳಿಸಿದರದಕೆ ಪೇಳಿದೆನೆಂದನಾ ವಿದುರ || ೫ ||

ಓಡಿದರು ನಟ್ಟಿರುಳು ಕಾಡನು | ಕೂಡಿದರು ಹುಲು ರಕ್ಕಸರುಗಳ |
ಕೂಡಣೆದು ಬಡಿವಣೆದು ಕಪಟದ ಬಿಲ್ಲನೆತ್ತಿದಡೆ ||

ಆಡುವಿರಿಲಧಟೆಂದು ಪಾರ್ವರ | ಕೂಡೆ ಕಾಳಗವೇಕೆನುತ ಕೈ |
ಮಾಡದಾನಿರೆ ವೀರರಾದರೆ ಯೆಂದನಾ ಕರ್ಣ || ೬ ||

ಎನಲು ನಸುನಗುತೆಂದನಾ ದ್ರೋ | ಣನು ವಿದಿತ ಕುರುವಂಶ ಭಾನುಗ |
ಳನು ನಯೋಕ್ತಿಯನೆಂದಡಲ್ಲೆ ನಲೇಕೆ ನಿಮಗದನು ||
ಎನೆಸುಯೋಧನ ವಿಷದ ಲಡ್ಡುಗೆ | ಯಿನಿದು ಮದ್ದಿನ ಕೈಪೆವೊಲು ಕಡೆ |
ಗಿನಿದುಗೊಡುವುದೆ ಎಂದೊಡಂಬಡಿಸಿದನು ಧೃತರಾಷ್ಟ್ರ || ೭ ||

ಬಳಿಕ ಗಾಂಗೇಯಾದಿಗಳು ನಿ | ರ್ಮಲ ಯುಧಿಷ್ಠಿರ ನೃಪನ ಮನ್ನಿಸಿ |
ದೊಲಿದು ಕಳುಹಿಸಿಕೊಂಡು ಹಸ್ತಿನಪುರವನ್ನೈದಿದರು ||
ತಳುವದೀ ಯಮಸೂನು ವರನಿನ | ಗಿಳೆಯದಿಂ ಪೊರಮಟ್ಟ ದೈತ್ಯರ |
ಗೆಲಿದ ತಮ್ಮಂದಿರ ಪರಾಕ್ರಮವಾದಿಯಾದವನು || ೮ ||

ಬರಸಿ ಪತ್ರಿಕೆಗೊಟ್ಟು ಕಳುಹಲು | ಚರರು ದ್ವಾರಾವತಿಯ ಪೊಕ್ಕಾ |
ಹರಿಕುಲದ ರಾಯರಿಗೆ ಕೊಡಲೋದಿಸಿ ತಿಳಿದು ಮನದ ||
ಹರುಷದಿಂದ ಸಮುದ್ರವಿಜಯಾ | ದ್ಯರು ವಿವೇಕಿಸಿ ದೇವತಾಕೃಪೆ |
ದೊರಕಿದವರಿಗೆ ಹಾನಿಯುಂಟೇಯೆಂದರೊಲವಿಂದ || ೯ ||

ಹರಿ ಚತುರ್ಭುಜನಾದನೆಂದೆ | ಲ್ಲರು ಚಮರ ಮನ್ನಿಸಿಯೆ ಪಾವುಡ |
ವೆರಸಿ ತನ್ನಯ ರಾಯಭಾರಿಗಳನು ಕಳುಹೆ ಹೋಗಿ ||
ವರ ಯುಧಿಷ್ಠರ ಮುಖ್ಯರನು ಕಂ | ಡಿರದೆ ಪಾಗುಡಗೊಟ್ಟು ಹರಿಕುಲ |
ದರಸುಗಳ ಹರುಷವನು ವಿರಚಿಸಿದರು ಮೃದೋಕ್ತಿಯಲಿ || ೧೦ ||

ಕೇಳೆ ಪಾಂಡವರಮಳ ಮನದಲಿ | ಮೇಳಿಸಿತು ಸಂತೋಷವನ್ನೆಗ |
ಮೇಳಲಂಕಾರಸರಪುರದ ಧಾನ್ಯಕ್ಷಿತೀಶ್ವರನು ||
ಲೋಲಲೋಚನೆ ಕುಸುಮಮಾಲೆಯ | ಲೀಲೆಯಿಂದೊಡಗೊಂಡು ವೈಭವ |
ಜಾಲ ಬರಲಿದಿರ್ಗೊಂಡನುತ್ಸವದಿಂದ ಯಮಸೂನು || ೧೧ ||

ಅಂದು ವನದಲಿ ತಪವನಾಂತರ | ವಿಂದನೇತ್ರ ವಸಂತ ಸೌಂದರಿ |
ಯೆಂದೆನಿಪ ತನುಜೆಯನು ವಂಧ್ಯಕನೃಪತಿಯಮಸುತಗೆ ||
ತಂದು ಮದುವೆಯ ಮಾಡೆ ಸಂಗಡ | ಬಂದು ನಲವಿಂ ಚಂಡವಾಹನ |
ನಂದು ಪನ್ನೀರ್ವರು ಕುವರಿಯರನಿತ್ತನಾ ಕ್ರಮದಿಂ || ೧೨ ||

ಕುಸುಮಮಾಲಾಕಾಂತೆಗಗ್ರನು | ಹಿಷಿ…………………… |
…………………….. ||

ಒಸೆದು ತನುಜೆ ಹಿಡಿಂಬಿಯನು ಆ | ಗಸಪಥದಿ ಕರತಂದು ಭೀಮಗೆ |
ಬೆಸುಗೆಗೊಟ್ಟವರೈದಿದರು ತಂತಮ್ಮ ಪುರಗಳನು || ೧೩ ||

ಬಳಿಕ ಸದ್ವಂಶಜ ಕುಮಾರರ | ಚೆಲುವ ಕುವರಿಯರನು ಮಹೋತ್ಸವ |
ದಲಿ ನಕುಳ ಸಹದೇವನೊಳು ಪಾಣಿಗ್ರಹಣ ಮಾಡಿ ||
ಕುಲದಳಾರನೆಯೊಳು ಮಿಗೆ ತೋಳ್ | ವಳದೊಳಮಳಿನ ಧರ್ಮದೊಳು ನೃಪ |
ಕುಳಕೆ ತಲೆಕಟ್ಟೆನಿಸಿದರು ಪಾಂಡವರು ಧರೆಯೊಳಗೆ || ೧೪ ||

ಸ್ವಸ್ಥದಿಂದನುಜರ್ಕಳ ತಿಳ | ಪ್ರಸ್ಥ ಕಣೆಯಪ್ರಸ್ಥ ನಾಗ |
ಪ್ರಸ್ಥ ಸ್ವರ್ಣಪ್ರಸ್ಥವೆಂಬುತ್ತಮ ಪುರಂಗಳಲಿ ||
ಸುಸ್ಥಿರಂಗೊಳಿಸಿದನು ಕ್ರಮದಿ ಗು | ಣಸ್ಥಿಗಿತ ಯಮಸೂನುವಿಂದ್ರ |
ಪ್ರಸ್ಥನಗರಿಯೊಳಿರ್ದನಾ ಜಿನಮತ ವನಧಿಚಂದ್ರ || ೧೫ ||

ವರಧನಂಜಯ ಕಣೆಯ ಪ್ರಸ್ಥದ | ಲಿರುತ ದ್ರೌಪದಿ ದೇವಿಯೊಳು ತನು |
ವೆರಡು ಜೀವಮದೊಂದೆನಿಸಿ ಮನಸಿಜ ಸುಖವನಾಂತು ||
ಇರಲು ಭೌತಿಕನೋರ್ವನಲ್ಲಿಗೆ | ಹರುಷದಿಂ ಬಂದರ್ಜುನನ ಕಂ | ”
ಡುರು ಮುದದಿ ನಿಲಲೇನು ಬಂದಪಿರೆಂದನಾ ಪಾರ್ಥ || ೧೬ ||

ಜನಪತಿಯೆ ನೀ ಕೇಳು ವಸುದೇ | ವನ ಮನೋಭವೆ ಖಚರಿ ನೀಲಾಂ |
ಜನೆಗೆ ಪುಟ್ಟಿದಳಾ ಸುಭದ್ರಾದೇವಿ ಕಡು ಚೆಲುವೆ ||
ವನಿತೆಯರ ಮಾಣಿಕವವಳ ಚೆಲು | ವನು ವಿಚಾರಿಸಿ ಕೌರವನು ತಾ |
ನನುನಯದಿ ಬೇಡಟ್ಟಿದರೆ ಕೊಡದಾದರವರೆಂದ || ೧೭ ||

ಕೊಡುವೆನರ್ಜುನಗೆಂದು ಕೃಷ್ಣನು | ಕಡಲ ಮಧ್ಯದಿ ಕನಕಪುರದೊಳು |
ಮಡಿಗಿಹನು ತದ್ವನಿತೆಗಿಂ ಗಾಂಡಿವದ ಪಿಡಿದೆತ್ತಿ ||
ತಡೆಯದಾಗಸ ಜಂತ್ರದಾ ಮೀ | ನೆಡೆದ ಕಣ್ಣಿಸು ವಂದದನೇ ಬೇ |
ಳ್ಪಡದೊಳಗೆ ಬರೆದರ್ಜಿಸುವಳಾ ರೂಪನವಳೆಂದ || ೧೮ ||

ಎಂದು ಪಟವನು ತೋರಿಚಿತ್ರದ | ಸೌಂದರಿಯ ಸೌಂದರತೆಯನು ಹರಿ |
ನಂದನನು ನಡೆನೋಡಿ ಸೋಲ್ತಾ ಭೌತಿಕಂ ಬೆರಸು ||
ಅಂದು ಕತಿಪಯ ಪರಿಜನವು ಸಹ | ಸಂದ ಶರಧಿಯನುತ್ತರಿಸಿ ಹಡ |
ಗಿಂದಿಳಿದು ತತ್ಕನಕ ಪುರವನು ಪೊಕ್ಕನಾ ಪಾರ್ಥ || ೧೯ ||

ಬಳಿಕಲಾ ವಸುದೇವ ಕೃಷ್ಣನು | [ತಿಳಿದು] ಪಾರ್ಥನ ಬಂದ ಬರವನು |
ಘಳಿಲನವರಾಪ್ತರು ನಿವೇದಿಸೆ ಹರುಷದಿಂ ಬಲನ ||

ಕಳುಹಿ ದ್ವಾರಾವತಿಗೆ ಕರಸಿದ | ರಳವಿದಳಿದುತ್ಸವ ಸುಲಗ್ನದಿ |
ನಳಿನಮುಖಿಯನು ಮದುವೆಗೈದರು ಪಾರ್ಥಗವರಂದು || ೨೦ ||

ಹರಿಕುಲದ ರಾಯರುಗಳೆಲ್ಲರು | ಪರಿಪರಿಯ ಬಳುವಳಿಯನಿತ್ತರು |
ಭರದಿ ಕಳುಹಲು ಬಂದ ಕಣಯ ಪ್ರಸ್ಥದಲಿ ನರನು ||
ಸ್ಮರಸರಾಗದಲಿರುತಮಿರೆ ಸೌಂ | ದರಿ ಸುಭದ್ರಾದೇವಿ ಪೆತ್ತಳು |
ಪರಬಲಾಂತಕನೆನಿಸುವಭಿಮನ್ಯುವನು ಸಂತಸದಿ || ೨೧ ||

ವೀರದಂಕುರ ಬೆಳೆಬೆಳೆದು ನುತ | ಭೂರುಹವು ತಾನಾದುದೆನೆ ಸುಕು |
ಮಾರಯೌವನವಾಂತನಾ ಬಹುವಿದ್ಯೆ ಕಲೆಯೊಡನೆ ||
ವಾರಿರುಹನಾಭನು ಕರೆಸಿ ಸಾಕು | ಮಾರಿಯೆನಿಪ ವಸುಂಧರೆಯ ಕೈ |
ನೀರೆರೆದನಭಿಮನ್ಯು ಕುವರೆಗೆ ಶುಭಮುಹೂರ್ತದಲಿ || ೨೨ ||

ನಳಿನನಾಭನು ವಿವಿಧ ವಸ್ತುವ | ಬಳುವಳಿಯನಿತ್ತಾ ಕುಮಾರಿಯ |
ನಳಿಯನನು ಕಳುಹುತ್ತ ಕಣಯ ಪ್ರಸ್ಥವನು ಪೊಗಲು ||
ಬಳೆದರಾಗದಿ ಸುತೆಯ ಮೋಹದೆ | ಪಲವು ಕಾಲವು ಕೃಷ್ಣ[ನಲ್ಲಿಯೆ] |
ತೊಲಗದಿರ್ದನು ಮೈದುನ ನೊಳತ್ಯಂತ ವಿನಯದಲಿ || ೨೩ ||

ನರಗೆ ನಾರಾಯಣಗೆ ಭಾವಿಸೆ | ಹರಣವೊಂದಣು ಭೇದವಿಲ್ಲೆಂ |
ದಿರದೆ ಧರೆ ಬಣ್ಣಿಸುವುದಿನ್ನುಂ ಪ್ರೇಂಮದೇಳ್ಗೆಯಲಿ ||
ಸರಸಿಜಾಕ್ಷನು ಬಳಿಕ ತನ್ನಯ | ಪುರವ ಪೊಕ್ಕಿರುತಿರ್ದನಿತ್ತಲು |
ಕುರುಪತಿಯು ಪಾಂಡವರಿಗೊಂದು ಕುಬುದ್ಧಿಯನು ಬಗೆದ || ೨೪ ||

ಕರೆಸಿದನು ವರಸಚಿವ ಶಕುನಿಯ | ನರಸ ಮಂತಣ ಶಾಲೆಯಲಿ ಕು |
ಳ್ಳಿರುತ ಕೇಳ್ಕೆ ಪಾಂಡುಜರು ದಿನದಿನಕೆ ಹೆಚ್ಚಿದರು ||
ಹರಿ ತನಗೆ ಕುಡಲಿರ್ದ ಪೆಣ್ಣನು | ನರನು ತಂದನು ಕೂಡಿ ನಡದಾ |
ಪರಿಯ ನೋಡವರೆಮ್ಮೊಳೆಂದನು ನೊಂದು ಕುರುರಾಯ || ೨೫ ||

ಇವರ ದೇಶಾಂತರಕೆ ಪೊರವಡಿ | ಸುವೊಡುಪಾಯವದಾವುದೆನೆ ಜೀ |
ಯವಧರಿಸು ಧರ್ಮಜನು ಜೂಜಿನೊಳರ್ತಿಕಾರನಲೆ ||
ಅವರ ಗೆಲುವೊಡೆ ಥಾಳವಾಸಿಗೆ | ಸವೆದವಿದೆ ನನ್ನಲ್ಲಿ ಜೂಜಿನ |
ಬೆವಹರಿಗ ನಾನಿನ್ನ ಗೆಲಿಸುವೆ ಭೂಪ ಕೇಳೆಂದ || ೨೬ ||

ಆಡಿದೊಡೆ ಹಾಸಂಗಿಯವು ತಾ | ಬೇಡಿದಾ ಡಾಯಗಳನೀವವು |
ನಾಡಿಗೊಡ್ಡುವ ಸೆಳೆವರಾಜ್ಯವ ಪೊರವಡಿಸಿ ಕಳೆವ ||

ನಾಡಳೆವಗಪಕೀರ್ತಿಯೇಂ ಜೂ | ಜಾಡೆ ಗೆಲುವುದು ಸೋಲ್ವುದುಳ್ಳುದು |
ರೂಢಿಯಿದು ಕುರುರಾಯ ಚಿತ್ತೈಸೆಂದನಾ ಶಕುನಿ || ೧೭ ||

ಮನದೊಳಗೆ ಗುಡಿಗಟ್ಟಿ ಶಕುನಿಯ | ಮನಗೆ ಕಳುಹಿಸಿ ಕಪಟದಲಿ ಶೋ |
ಭನವ ಬೆಳೆಯಿಸಿ ಬಂದು ವೃಂದವ ಕೂಡಿಪಾಂಡವರ ||
ಅನುನಯದಿ ಬಳಿಯಟ್ಟಿ ಕರೆಯಿಸಿ | ವಿನಯದಿಂದಿರ್ಗೊಂಡು ಬರು ಶೋ |
ಭನವ ವಿರಚಿಸಿ ಬಂಧುಗಳ ಪರಯಿಸಿದನವನೀಶ || ೧೮ ||

ವರಯುಧಿಷ್ಠಿರ ಮುಖ್ಯರನು ನಿಜ | ಪುರದೊಳಗೆ ಪ್ರೇಮದಲಿ ಪಲದಿನ |
ವಿರಿಸಿಕೊಂಡಿರುತೊಂದುದಿನ ಗೋಷ್ಠಿಯಲಿ ಧರ್ಮಜನು ||
ಇರೆ ಸುಯೋಧನ ಶಕುನಿಯೊಳು ಮಿಗೆ | ಹರುಷದಾಡುತ ಲೆತ್ತವನು ತಾಂ |
ಕರದನಾಡುವ ಬಾಯೆನುತ ಮೇಳದಲಿಯಮಸುತನ || ೧೯ ||

ಒಮ್ಮೆ ಕರೆದೊಡೆ ಒಲ್ಲದಿರೆ ಮ | ತ್ತೊಮ್ಮೆ ಕರೆದನು ನೀವು ಜೂಜಿನ |
ಮರ್ಮವನು ನೆರೆ ಬಲ್ಲಿರೆಂಬುದ ಕೇಳಿ ಬಲ್ಲಿನೆನೆ ||
ಧರ್ಮಶಾಸ್ತ್ರ ವಿಚಾರ ಚತುರನು | ಧರ್ಮರಾಯನು ಜೂಜನಾಡಿದ |
ಕರ್ಮವಾರನದೇವ ಮಾಡದು ಭೂಪ ಕೇಳೆಂದ || ೨೦ ||

ಅಳಲಿದಂತೆ ಸುಯೋಧನನು ಪೊಂ | ಗಳನು ಸಾಸಿರವೊಡ್ಡಿದನು ಓ |
ರ್ವಳರು ಭೀಮಾರ್ಜುರನು ಬೇಡೆನೆ ಕೇಳುದರ್ಲೇಳ್ದು ||
ಗೆಲಿದನಾ ಧರ್ಮಜನು ಕರುಪತಿ | ಬಳಿಕ ಭಂಡಾರವನು ತುರಗಾ |
ವಳಿಯನಿಭಘಟೆಯೆಲ್ಲವನು ಸಲೆ ಗೆಲಿದ ನಿಮಿಷದಲಿ || ೨೧ ||

ಅನಿತರೊಳಗಾ ದ್ರೋಣನೈತಂ | ದನು ಸುಯೋಧನ ಪಾಂಡುಜರ ನಿ |
ಮ್ಮನೆಗೆ ಕರೆಯಿಸಿ ಜೂಜಿನಿಂ ನೆರೆಗೆಲಿದನದನೇವೆ ||
ಅನತರಿಪುಗಳ ಧನವ ಖಡುಗದ | ಮೊನೆಯಲೆಳೆವುದು ಕ್ಷತ್ರಿಯರ ನಂ |
ದನರ ಧರ್ಮವು ಹಾಯಿಕದಿರು ಹಾಸಂಗಿಯನು ಶಕುನಿ || ೨೨ ||

ಎಂದೊಡೀರ್ವರು ಕೇಳೆದಾಳ ವ | ಸುಂಧರೆಗೆ ಜೂಜಾಡಿದರು ಮ |
ತ್ತೊಂದು ಹಲಗೆಗೆ ಸೋತನವನಿಯನಂದು ಧರ್ಮಜನು ||
ಅಂದುನೃಪಗಾಂಗೇಯರಿಗೆ ಪರಿ | ತಂದಿವೆಲ್ಲವನರಿಪಿ ತನ್ನನೆ |
ಕೊಂದು ಕೊಂಡನು ಸರ್ಪಕೇತನನೆಂದನಾ ದ್ರೋಣ || ೨೨ ||

ಅವನ ರುಧಿರೋದ್ಗಾರಿ ಗದೆಗೀ | ಭುವನವಾಂತೊಡೆ ಬಾಳುವುದೆ ಗಾಂ |
ಡಿವವೆ ಸಾಲದೆ ಶೂಲಪಾಣಿ ವಿರಂಚಿಗಳ ಗೆಲಲು ||

ನಮಗೆ ಬಗೆ ತಳ್ಕಳಿಸುತಿದೆ ಕೌ | ರವ ಬಗೆಯನಲೆ ಭೀಮ ಪಾರ್ಥರ |
ಹವಣನರಿಯನು ನೀವವರ ಸಂತೈಸಿ ನಡೆಯೆಂದ || ೩೪ ||

ಕೆಟ್ಟೆವೆಂದೈತಂದರಾತ್ಮಜ | ಬಿಟ್ಟು ಕಳೆ ಜೂಜಾಡಿ ನೀನು ಯು |
ಧಿಷ್ಠಿರನ ಕೈಯಿಂದ ಪಡೆದುದುನೆಮ್ಮ ವಂಶಕ್ಕೆ ||
ನೆಟ್ಟನಿದು ಕಿಡಿಯೆಂದು ವರಧೃತ | ರಾಷ್ಟ್ರ ನೆರೆದ ವಚಸ್ಸುಧಾಂಬುಗೆ |
ತಟ್ಟು ಮರಕೆಯೊಳಿರ್ದುದಾ ಭೂಪಾಲಕನ ಹೃದಯ || ೩೫ ||

ಏನ ಮಾಡಿದೆ ಪಾಂಡುರಾಯನ | ಸೂನು ನಿನಗೀದ್ಯೂತ ಕರ್ಮವು
ಮಾನಿತವೆ ಅಕಟಾ ಸುಮುಕ್ತಾಫಲಕೆ ಕೆನ್ನೀರು ||
ದಾನಿಗೊಂದೆ ಧರಾಕ್ಷರಾರ್ಥದ | ಹಾನಿಮಂತ್ರಕೆ ಮುನಿಸು ಮುನಿಗಪ |
ಮಾನಮಾನಿಗೆ ಬಂದತೆರನಾಯ್ತೆಂದನಂಧನೃಪ || ೩೬ ||

ಎಲೆ ಯುಧಿಷ್ಠಿರ ಸೋತಿರೇ ನಿ | ಮ್ಮಿಳೆಯನೆಂದೆನೆ ಜೀಯಮಾತಿನ |
ಮಲಕದೇತಕೆ ಸೋತನಹುದೆನೆ ಎಲೆ ಸುಯೋಧನನೆ ||
ಗೆಲಿದೆ ಯೈಯೆನೆ ಮುಚ್ಚುಮರೆಯೇ | ಗೆಲಿದೆಗೆಲಿದೆನು ಕೇಳಿಮೆನೆ ಕುರು |
ಕುಲದಳಿವನೇನೆಂಬೆನೆಂದನು ಸುಯಿದು ಧೃತರಾಷ್ಟ್ರ || ೩೭ ||

ಎನಲು ಫಣಿಕೇತನನು ತನ್ನವ | ರನು ಕರೆದು ನೀವಿಂದಿವರ ಬೆ |
ನ್ನನೆ ನಡೆದು ತಾಂ ಸೋತವಾಹನ ದೇಶಕೋಶವನು ||
ಇನಿತನುಳುಹದೆ ಒಪ್ಪುಗೊಂಡಿವ | ರನು ತೊಲಗಿಸುವುದೆಂದು ನೇಮಿಸಿ |
ದನು ಧರಾಶಯದೇನಮಾಡಲು................ || ೩೮ ||

ತರಿಸು ಭಂಡಾರವನು ಭೂಮಿಯ | ನಿರಿಸು ತೊಲಗಿಸದವರಿಗೆನೆ ಕೇ |
ಸುರಿಲವಣವನು ದಳ್ಳಿಸಿದವೊಲು ಗಜರಿನಾಗೆಲಿದ ||
ಧರೆಯನವರಿಗೆ ಬಿಡುವುದೇ ನೀ | ವರ ಮನೆಗೆ ಚಿತ್ತೈಪುದೆಂದಾ |
ಕುರುಪತಿಯು ಕಡುಮುಳಿದನಾ ಧೃತರಾಷ್ಟ್ರ ಮುಖ್ಯರಿಗೆ || ೩೯ ||

ಪೊಡವಿಯಿನು ಸೆಳೆಕೊಂಡವರ ಹೊರ | ಪಡಿಸುವುದು ಹಿತವಲ್ಲವವರಿಗೆ |
ಕೊಡುವುದೊಂದವಧಿಯನೆನುತ್ತನಿಬರು ಸುಯೋಧನನ ||
ಬಡಿದೊಡಂಬಡಿಸಿದೊಡನುಜ್ಞೆಯ | ಕೊಡಲು ಕುರುಪತಿ ಕಿವಿಯಲದ ತಾ |
ಪಡೆದು ದುರ್ಜನರೆರೆಯ ನುಡಿದನು ಶಕುನಿ ಸಭೆಯೊಳಗೆ || ೪೦ ||

ಖರೆಯನುಳಿದೀರಾರು ವರುಷಂ | ಬರೆಗೆ ವನವಾಸವನು ಚರಿಪುದು |
ಚರಮದಲಿ ಒಂದಬ್ದವಜ್ಞಾತದಲಿ ವರ್ತಿಪುದು ||

ಅರಕೆಗೀ ಪಾಂಡವರು ಬಂದರೆ | ಮರಳಿ ಪನ್ನೆರಡಬ್ದದೇಶಾಂ |
ತರವ ಪೋಪುದು ಬಳಿಕ ನಿಜರಾಜ್ಯದೊಳಗಿಹುದೆಂದ || ೪೧ ||

ಎನಲವನ ನುಡಿಗೇಳಿ ದುರಿಯೋ | ಧನನ ದುರ್ನಯಗಂಡು ಭೀಮಾ |
ರ್ಜುನರು ಕಿಡಿಕಿಡಿಯೋಗಿಯಿನ್ನೇತರದು ಬಂಧುತ್ವ ||
ತಣಿ ರಕುತವನು ಕಾರುವಂತೀ | ತನನು ಪಿಡಿದಪ್ಪಳಿಸಿಯರಗಿನ |
ಮನೆಗೊಲೆಯ ಹರುಬವ ಹಡದವೆಂದರು................ || ೪೨ ||

ಭೂರಿ ಕೋಪಾನಳವೆ ಬಾಡವ | ಚಾರು ನಯನದ ಕೆಂಪುವಿಧ್ರುಮ |
ವೀರವಧು ಕಡುಗುಂಪೆನಿಸಿದನಿಲೇಂದ್ರ ಸುತರೆಂಬ ||
ಮೇರೆದಪ್ಪಿಯೆ ಬಪ್ಪ ಕಲ್ಪದ | ವಾರಿಧಿಗಳೆರಡನು ಯಮನ ಸುಕು |
ಮಾರಕನ ಕಡೆಗಣ್ಣವಲಯೇ ತಡೆದುದಂದಿನಲಿ || ೪೩ ||

ಬಳಿಕ ಪಾಂಡುಜರನಿಬರುಂ ತ | ನ್ನಿಲಯದಿಂ ಪೊರವಟ್ಟನಾಗಳೆ |
ಕಳುಹಿದನು ಮಂತ್ರಿಗಳ ಭಂಡಾರವನು ಗಜಹಯವ ||
ಇಳೆಯನೊಪ್ಪಿಸಿ ಕೊಳುವುದೆನೆ ಕುರು | ಕುಲತಿಲಕ ಸರ್ವಸ್ವವನು ಕೊಳು |
ನೆಲನನುಳು ಹೊಡಹುಟ್ಟುವಾಳಿಯ ಕೆಡಿಸಬೇಡೆಂದು || ೪೪ ||

ಹೇಳಿದರು ಗಾಂಗೇಯ ಮುಖ್ಯರು | ಕೇಳದಾದದನು ನೃಪತಿಯಕಟಾ |
ಪಾಳಿದಪ್ಪಿದುದೆನ್ನವರು ಪಾಂಡವರ ಬಳಿಸಂದು ||
ತಾಳಲಾರದೆ ನೋವನಶ್ರುಜ | ಲಾಳಿ ಕನ್ನಡಿಸಿದವು ಭೀಷ್ಮ ನೃ |
ಪಾಲ ಮುಖ್ಯರ ಬಾಡಿದಾನನ ಸರಸಿರುಹದೊಳಗೆ || ೪೫ ||

ಬಳಿಕ ಅವರಡಿಗೆರಗಿ ಹರಕೆಯ | ತಳೆದರವರು ಕುಮಾರರಿರನಿಂ |
ಪಳುವದೊಳಗಾವೆಲ್ಲ ಪೊಳಲೊಳಗಿಪ್ಪದಾದುದಲ ||
ತಿಳಿವೊಡಿದು ತಾನೊಂದು ಪಾಪದ | ಫಲವೆನಲು ನಸುನಗುತ ನಿಮ್ಮಡಿ |
ಗಳ ಕೃಪಾಧೃತವೆಂಮನೆಲ್ಲಿಯು ರಕ್ಷಿಸುವುದೆಂದ || ೪೬ ||

ಆರಿಗಾವೆಡೆ ಜನನ ಮರಣವ | ದಾರಿಗಾವೆಡೆ ಸಿರಿ ದರಿದ್ರತೆ |
ಯಾರಿಗಾವೆಡೆಯುಳಿವು ಕಳಿವಿಂತುಭಯ ಕರ್ಮಜವ ||
ಆರಿ ಬಲ್ಲರು ದುಃಖಸುಖಗಳು | ಸೇರೆ ಸಮಪರಿಣಾಮದಲಿ ಮನ |
ವಾರೆಯುಂಬನೆ ಚದುರನೆಂದನು ಧರ್ಮನಂದನನ || ೪೭ ||

ಚಿಂತಿಸಲು ಬೇಡೆವಗೆ ನಾವು ವ | ನಾಂತರದೊಳನ್ನಗ್ನಿಯೆನೆ ನಿ |
ಶ್ಚಿಂತದಿಂ ರಕ್ಷಿಸುವೆ ಉಮ್ಮಳಿಸದಿರಿ ನೀವೆಂದು ||

ಸಂತಯಿಸೆಯಮಸುತನ ವಿಮಳ | ಸ್ವಾಂತ ಸತ್ವ ಕ್ಷಮೆಗೆ [ಧೈರ್ಯಕೆ] |
ಸಂತಸಂಬಡುತಿತ್ತ ಮರಳಿದರೀ ನೃಪಾಲಕರು || ೪೮ ||

ಅವರು ಇಂದ್ರಪ್ರಸ್ಥವನು ಪೊ | ಕ್ಕವನಿ ಭಂಡಾರಾದಿಯನು ಕೌ |
ರವನವರಿಗೊಪ್ಪಿಸಿಯೆ ಪಂಚಪ್ರಸ್ಥದೊಳಗಿರ್ದ ||
ಯುವತಿಯರು ಕೊಂತಿಯುವೆರಸಿ ಪಾಂ | ಡವರು ದಿಚಿ ಗೋಮುಖದಿ ನಡೆದವ |
ಯುವಧಿಯಲಿ ಗಂಗಾನದಿಯನುತ್ತರಿಸಿ ಬನದೊಳಗೆ || ೪೯ ||

ಬೀಡಬಿಟ್ಟರು ಬಳಿಕ ಬಂದೊಡ | ನಾಡಿ ಯಾಪ್ತ ಪ್ರಧಾನ ಮುಖ್ಯರ |
ನಾಡೆ ಮನ್ನಿಸಿ ಕಳುಹಿ ತಮ್ಮೆಲ್ಲರ ಮಧೂತತಿಯ ||
ರೂಢಿಸಿದ ತಂತಮ್ಮ ಜನಕರ | ಬೀಡಿನೊಳಗಿರಲಟ್ಟಿದರು ತಾಂ |
ಜೋಡಗಲೆನರ್ಜುನನೆಂದುಳಿದಳು ದ್ರುಪದ ತನುಜೆ || ೫೦ ||

ಕ್ಷಿತಿವಿನುತ ಪಾಂಡವರು ಕೊಂತಿಯು | ಚುತರೆ ಪಾಂಚಾಳೆಯುವೆರಸಿ ರಾ |
ಜಿತಮತಿಗಳಾದಕ್ಷಿಣಾಭಿಮುಖದಿ ನಡೆದು ಬಂದು ||
ವಿತತ ಬದರೀವನವ ಪೊಕ್ಕರು | ಶತವಿದಿತ ಶೃಂಗಾದ್ರಿ ತಪ್ಪಲೊ |
ಳತಿ ವಿಶದವಾದೆಡೆಯೊಳಿದ್ದನು ಭೂಪ ಕೇಳೆಂದ || ೫೧ ||

ಇರೆಯುಗಂಧರ ಯಮಳರೆಂದೆಂ | ಬುರು ಸುಗುಣಿಗಳು ಚಾರಣದ್ವಯ |
ವಿರದೆ ಚರಿಗೆಗೆ ಬರಲಿದಿರ್ಗೊಂಡೆರಗಿ ಸಾದರದಿ ||
ಇರಿಸಿ ನವವಿಧಿ ಪುಣ್ಯಯುತ ಬಂ | ಧುರದ ಸಪ್ತಗುಣಾನ್ವಿತ ಯುಧಿ |
ಷ್ಠಿರ ಮಹಾ ವಿಮಳಿನಾಹಾರವಮೊಸೆದು ಕೊಟ್ಟ || ೫೨ ||

ಅನುಪಮನು ಸತ್ಪಾತ್ರದಾನವ | ನನುವಡಿಡಿಯಾಶ್ಚರ್ಯ ಪಂಚಕ |
ವನುತಳೆದು ಸಂತುಷ್ಟನಾದನು ಪರಸಿ ಚಾರಣರು ||
ವಿನುತರತ್ತವತರಿಸಿದರು ಧ | ನ್ಯನು ವಲಂ ನಾನೆಂದು ನಲಿದನು |
ಜಿನಮತ ಕ್ಷೀರಾಂಬುನಿಧಿವರ್ಧನ ಸುಧಾಕರನು || ೫೩ ||

|| ಅಂತು ಸಂಧಿ ೩ಲಕ್ಕಂ ಮಂಗಲಮಹಾ ||

**ಸಂಧಿ ೩೯**

ಜನವಿನುತ ಪಾಂಡವರು ಬದರೀ | ವನದೊಳಿರೆ ಬಂದಿಂದ್ರರಥ ಖಚ |
ರನು ಕುರುಕ್ಷಿತಿ ಪತಿಯನೊಯ್ದೊಡೆ ತರಿಸಿದರು ಬಳಿಕ || ಪದ ||

ಶ್ರೀವರನು ಮೊದಲಾದ ಯಾದವ | ಭೂವರರು ತಾವತ್ತ ಪಾಂಡುಜ |
ರೀ ವಿಧದಿ ವನವಾಸವೈದಿದರೆಂದು ಅಭಿಮನ್ಯು ||
ಸಾವಧಾನದಿನಾ ಸುಭದ್ರಾ | ದೇವಿ ಪೇಳಲು ಕೇಳ್ದು ಕರ್ಮದ |
ಹಾವಳಿಯನೇನೆಂಬೆನೆಂದರು ಭೂಪ ಕೇಳೆಂದ || ೧ ||

ನಳಿನನಾಭನು ನೀತಿಯುತ ದೋ | ವಳ ಮಹಾ ವಿಕ್ರಮನೆನಿಪ ನಿ |
ರ್ಮಳನನೊಪ್ಪುವ ಕೃಷ್ಣನೆಂಬನ ಕಳುಹೆ ಪಾಂಡವರ ||
ಬಳಿಕೆ ಬಂದಡಿಗೆರಗಿ ನಿಮ್ಮಡಿ | ಗಳನು ರಕ್ಷಣ್ಯದಲಿ ಕಾದಿರ |
ಲೊಲಿದು ಕಳುಹಿದನೆಂದನು ಧರ್ಮಜಗೆ ಕೃಷ್ಣ || ೨ ||

ಎಂದೊಡವರತಿ ಹರುಷವಾಂತರು | ತಂದ ಕತಿಪಯ ಸುಭಟತತಿ ಸಹ |
ಬಂದ ಕೃಷ್ಣನು ಪಾಂಡವರ ಬೀಡಿರ್ದನಿರಲೆನುತ ||
ಒಂದು ದಿನ ಮನದೊಳು ವಿಹಾರಿಸು | ತಂದು ಕಂಡನು ಇಂದ್ರಕೀಲ ನ |
ಗೇಂದ್ರವನು ಚಂದನದಶೋಕೆಯ ಸಾನುವನು ಪಾರ್ಥ || ೩ ||

ಅದು ಮಹಾ ಪಂಚಾಶ್ಯ ಶಾರ್ದೂ | ಲದ ವಿಷಮ ಸತ್ವಗಳ ಹಾವಲಿ |
ವಿದಿತ ಕಿನ್ನರ ಕಿಂಪುರುಷ ಗಂಧರ್ವ ಯಕ್ಷಾದಿ ||
ಪಡೆದು ಕ್ಷಿಡಿಸುತಿಪ್ಪುದತೀ | ನದರೊಳಾ ಗಾಂಡೀವಿ ಬಿಲುಗೊಂ |
ಡದರ ಸಿರಿಯನು ನೋಡುತೈದಿದನೀಂದ್ರ ಕೀಲವನು || ೪ ||

ಇದಿರೊಳೀಕ್ಷಿಸಿ ಕಂಡನಾ ಪೇ | ರ್ವಿದಿರ ತುದಿಯೊಳಗಿರ್ದ ಖಚರನ |
.......................................................... ||
ಚದುರನೊಂದಂಬಿನಲಿ ಪರಿಯೆನೆ | ಬಿದಿರೊರಗಲಾ ಖೇಚರನನಾ |
ಸದಯನಾದರದಿಂ ಪಿಡಿದು ಬಿಡಿಸಿದನು ಬಂಧನವ || ೫ ||

ಕಲಿಧನಂಜಯನಡಿಗೆ ಖೇಚರ | ನೊಲಿದೆರಗಿ ಎಲೆ ಪುಣ್ಯ ಪುರುಷನೆ |
ಉಳಿದೆ ನಾನಿಮ್ಮಡಿಯ ಕೃಪೆಯಿಂದೆಂದು ಬಿನ್ನವಿಸೆ ||

ಎಲೆ ವಿಯಚ್ಚರ ನಿನಗೆಡರ ಕಡು | ಬಲಿದನಾರೆನೆ ಪೇಳಿದನು ದೋ |
ರ್ವಲನೆ ವಿಜಯಾರ್ಧೋತ್ತರ ಶ್ರೇಣಿಯೊಳು ನೆರೆಮೆರೆವ || ೬ ||

ಪುರವು ನೆರೆ ಅಂಬರ ತಿಲಕವಾ | ಪುರವರನು ನಾನಿಂದ್ರರಥ ಖೇ |
ಚರನೆನಿಸೆಗೀ ಗಿರಿಗೆ ವಿದ್ಯಾ ಸಾಧನಾರ್ಥದಲಿ ||
ಬರಲು ಮತ್ತಾಶ್ರೇಣಿಯೊಳು ಬಿ | ತ್ತರದಲೆಸೆವಾ ಗಗನವಲ್ಲಭ |
ಪುರದ ಮೇಘರಥಾಖ್ಯನೆನ್ನಯ ಪಗೆವನೈತಂದ || ೭ ||

ಅರಸ ಕೇಳಾ ವಿದ್ಯ ಮಂತ್ರೋ | ಚ್ಚರಣೆಯಿಂ ಜಪವಿರ್ದ ನನ್ನನು |
ಮರಸಿ ಬೆನ್ನನೆ ಬಂದು ಬಂಧನಗೈದವನು ತನ್ನ ||
ಪುರಕೆ ಪೋದನು ನಿಮ್ಮ ತೆರೆನನು | ವಿರಚಿಸುವುದೆನಲೆಲ್ಲವನು ವಿ |
ಸ್ತರದಿಯರುವಿದನಿಂದ್ರರಥಗೆ ಸಿತಾಶ್ವನೊಲವಿಂದ || ೮ ||

ಸಾಧಿಸಿದ ವಿದ್ಯೆಗಳನತಿ ಪು | ಣ್ಯೋದಯನು ನೀನಿದು ನಿನಗೆ ಸುಖ |
ಸಾಧ್ಯಮಪ್ಪವು ವಿಘ್ನವಾದುದು ತನ್ನ ಸಾಧನೆಗೆ ||
ಮೇದಿನೀಶ್ವರ ಜಯಸೇನುತ ನಿ | ರ್ವಾದದಿಂದ್ರರಥಾಖ್ಯ ಚರನನು |
ಸಾದರದಿ ವರಮಂತ್ರಗಳ ನೊಸೆದಿತ್ತನರ್ಜನಗೆ || ೯ ||

ಗಿರಿಯ ಗುಹೆಯೊಳು ವಿದಿತ ಚಕ್ರೇ | ಶ್ವರಿ ಮಹಾಯಕ್ಷಿಯ ಸಮಕ್ಷದಿ |
ನರನು ಸಾಧಿಸೆ ಶತ್ರುಮದ ಭಂಜಿನಿಯು – ಮಂತರದಿ ||
ವರ ತ್ರಿಲೋಕ ಮಹಾ ಪ್ರಸಾರಿಣಿ | ನೆರೆ ಮನೋರಥ ಸಿದ್ಧಿ ಮೊದಲಾ |
ದುರುತರದ ಮೂವತ್ತು ವಿದ್ಯೆದೇವತೆಗಳಾಗ || ೧೦ ||

ಬೆಸಸು ಬೆಸನೇನೆನುತ ಬಂದ | ರ್ವಿಸಲು ಕಂಡು ಮನೋನುರಾಗದಿ |
ನೆಸೆದು ಪಡೆದಾ ವಿದ್ಯೆಗಳ ಪೂಜಿಸಿ ಸರಾಗದಲಿ ||
ಅಸಿತ ಕಪಿಕೇತನನು ಕೆಲದಲಿ | ಮಿಸುಗುವೀಂದ್ರರಥನೊಳು ಸಂಭಾ |
ಷಿಸುತಿರಲ್ಕೇನೆಂಬೆನೆಲೆ ಭೂಪಾಲ ಕೇಳೆಂದ || ೧೧ ||

ಪರಿಜನವು ಸಹ ತನ್ನ ಕಾಂತೆಯು | ವೆರಸು ಮೇಘರಥಾಖ್ಯನವರಿಗೆ |
ಪಿರಿದು ಬಂಧನದಿಂದ್ರ ರಥನನು ತೋರಿಸುವೆನೆಂದು ||
ನೆರೆದು ಬಂದಾವಂಶವುಡಿದುದ | ನರನೊಳಿಂದ್ರ ರಥಾಖ್ಯನಿರ್ದಾ |
ತೆರನನೀಕ್ಷಿಸಿ ನಾಡೆ ಬೆರಗಾದನು ವಿಯಚ್ಚರನು || ೧೨ ||

ನರನನೀಕ್ಷಿಸಿಯಾದರದಿ ಬಿ | ತ್ತರದ ಪಡೆಯೆನೆ ತನ್ನರಾಶಿಯ |
ನೆರವಿಯೆನೆ ಖಗನಿಂದ್ರ ಸುತಗಾಂಡಿವವ ಪಿಡಿದೆತ್ತಿ ||

ಭರದಿ ಜೇವೊಡೆದೆಯ್ಯೆ ಮಿಗೆ ಭೀ | ಕರದ ಠಂಕೃತಗೇಳ್ದು ಭೋರೆನೆ |
ಸರಳ ಮಳೆಯನು ಮೇಘರಥ ಬಲಮೇಘ ಬೊಗ್ಗಲೆಯೆ || ೧೩ ||

ಮೇಲೆ ಬೀಳುವ ಕಳವಿದೆಲೆ ಬಿರು | ಗಾಳಿಗೌ ಹೊರತೇಲುವಂದದೆ |
ತೇಲಿದವು ಫಲುಗುಣನ ಬಾಣದ ಗರಿಯಗಾಳಿಯಲಿ ||
ಕೋಲು ಹರಿದವು ಖೇಚರರ ತಲೆ | ಯೋಳಿ ಪಾರಿದವುಡಿದ ತೊಡೆಮೊಳ |
ಕಾಲು ಕೈ ಕರುಳರುಣ ಜಲಗಳ ಮಳೆ ಕರೆದುದಾಗ || ೧೪ ||

ಅಸಮಭುಜ ಸವ್ಯಾಪ ಸವ್ಯದಿ | ನೆಸೆಸಿಳೀಮುಖವಂದು ಪರಿದಾ |
ಗಸದೊಳೀಕ್ಷಿಪ ಸುರಸರಣಿಯನು ಬೇಡಲ್ಪಟ್ಟಿದುದು ||
ಕುಸುರಿದರಿದವು ಖಚರ ಬಲವನು | ಮಸಗಿ ಮೇಘರಥನು ಬಳಿಕ ಮಂ |
ತ್ರಿಸಿ ಮಹಾಸ್ತ್ರದಲೆಚ್ಚನಾ ಶಾಖಾಚರಧ್ವಜನ || ೧೫ ||

ಖಂಡಿಸಿದನಾ ಖಂಡಲನ ಸುತ | ಚಂಡಬಾನವನೊಡನೆ ಜಯ ಕೋ |
ದಂಡನಾ ಖೇಚರನ ಬಿಲ್ಲಿನದೊಂದು ವಿಸಿಕದಲಿ ||
ತುಂಡುಗಳೆಯಲು ಬೆದರಿ ಹೊಯ್ದನು | ಕಂಡು ಕೈ ಪರೆಗುಟ್ಟಿ ದಿವಿಜರ |
ಹಿಂಡುನಗುತಿರಲಿಂದ್ರರಥ ಬೆಂಕೊಂಡನಹಿತನನು || ೧೬ ||

ಓಡಬೇಡೆಲೆ ಮೇಘರಥ ನೀಂ | ಹೇಡಿಯಲ್ಲದೊಡೆನ್ನ ವಿದ್ಯದ |
ಜೋಡಣೆಗೆ ಕೈದುವನುಳಿದು ಜಪವಿರ್ವನನಗಿಂತು ||
ಮಾಡುವ್ಯೆ ಎಂದಟ್ಟಿ ಹಿಡಿದತಿ | ಗಾಢದಲಿ ಸಲೆಕಟ್ಟಿ ತಂದು ವಿ |
ಭಾಡಿಸುತ ಗಾಂಡೀವಿಗೊಪ್ಪಿಸಿದನು ವಿಯಚ್ಚರನು || ೧೭ ||

ಕಟ್ಟಿಗೊಳಗಾಗದನವಧ್ಯನು | ಬಿಟ್ಟು ಕಲೆಯಿಂದ್ರನರಥಕೆಳೊಡ |
ವುಟ್ಟಿದಣ್ಣನ ಕಂಡವೊಲು ಬೆಸಕೆರಗು ಮೇಘರಥ ||
ಬಿಟ್ಟು ಕಳೆ ವೈರವನೆನುತ ಕೈ | ಗಟ್ಟಬಿಟ್ಟೊಡೆ ಜೀಯೆನುತೊಡಂ |
ಬಟ್ಟು ಫಲುಗುಣಗೆರಗಿ ಬೀಳ್ಕೊಂಡನು ನಿಜಾಶ್ರಯಕೆ || ೧೮ ||

ಬಳಿಕಲೆಸೆದಾ ಇಂದ್ರರಥನಾ | ಗಲೆ ವಿಮಾನವ ಬರಿಸಿಭೂರ |
ತಿಲಕ ನೀನೆನ್ನಾಲಯಕೆ ಬರಬಹುದೆ ಎಂದೊರೆದು ||
ಒಲಿದೆರಗಿ ಅರ್ಜುನನನೊಡಗೊಂ | ಡಳಿವಿಗಳಿದತಿರಾಗದಲಿ ದೋ |
ರ್ವಳನು ತನ್ನಯ ಪೊಳಲ ಪೊಕ್ಕನು ಮೊಳಗೆ ಪಟುಪಟಹ || ೧೯ ||

ಅರಮನೆಯನೈದಿದನು ತನ್ನೆಸೆ | ವರಸಿಯರ ಕರೆಸಿದವು ಪು |
ತ್ರರ ಬರಿಸಿದನು ತರಿಸಿದನಮಾತ್ಯರನಾಪ್ತ ಜನದೊಡನೆ ||

ನರನ ಚರಣಕ್ಕೆರಗಿಸಿದನೆ | ಲ್ಲರನು ತನಗುಪಕರಿಸಿದಂದವ |
ನೊರೆದಾತನ ಗಂಡಗುಣವನು ಜಾವಪರಿಯಂತ || ೧೦ ||

ಬಳಿಕ ಮಂಗಲಮಜ್ಜನವನನು | ಗೊಳಿಸಿ ಪೂಜಾದ್ರವ್ಯಸಹ ಜಿನ |
ನಿಳಯವನು ಪೊಗಿಸಿದನು ಖಗಪತಿ ತೀರ್ಥವಂದನೆಯು ||
ಗಳಿಸಿದುದು ನಿನ್ನಿಂದಮೆವಂಗೆ | ದಳವಿಗಳಿದತಿ ಭಕ್ತಿಯಲಿ ನಿ |
ರ್ಮಲ ವೃಷಭನಾತನನು ಪೂಜಿಸಿವಂದಿಸಿದನೊಲಿದು || ೧೧ ||

ಪ್ರವರ ಜಿನಮುನಿಗೆರಗಿ ಹರಕೆಯ | ಕವಚವನು ಮಿಗೆತೊಟ್ಟು ಬರೆ ಗಾಂ |
ಡಿವಿಯನೊಡಗೊಂಡಮೃತ ಬೋನನುಗೊಲಿಸಿ ವಿನಯದಲಿ ||
ಸವಿವೊಡೆದ ಕರ್ಪೂರ ತಾಂಬೂ | ಲವನು ಕೊಟ್ಟುಪಚಾರದಿಂ ಚಿ |
ತ್ತವನೊಲಿಸಿದನು ಮಾಡಿದುದು ಮರವನೆ ಗುಣೋನ್ನತನು || ೧೧ ||

ನಂದನರ್ಘ್ಯಾಂಬರ ವಿಭೂಷಣ | ದಿಂದ ಪೂಜಿಸಿಯರ್ಜುನಂಗೊಲ |
ವಿಂದ ವಂದಿಸಿ ತನ್ನ ನೂರ್ವರು ಸತ್ಕುಮಾರರನು ||
ತಂದು ಕೊಟ್ಟೆಲೆ ದೇವ ನಿಂದಯೆ | ಯಿಂದ ಬಿಲು ವಿದ್ಯೆಯನು ಶಿಕ್ಷಿಪು |
ದೆಂದವರನೆರಗಿಸಿದನೆಲೆ ಭೂಪಾಲ ಕೇಳೆಂದ || ೧೩ ||

ಬಿಲ್ಲ ಬಿಜ್ಜೆಯ ಕಲಿಸುತರ್ಜುನ | ನಲ್ಲಿ ಮಾಸತ್ರಯವನಿರ್ದನು |
ಮೆಲ್ಲನಣ್ಣನನೈದಬೇಕೆನೆ ಸುತರು ಸಹಖಚರ ||
ನಿಲ್ಲದೇರಿಸಿ ಮಣಿವಿಮಾನವ | ನೆಲ್ಲರುಂ ಬದರೀವನಕ್ಕೆ ಬಂ |
ದಲ್ಲಿ ಇಳೆಗವತರಿಸಿ ಯಮನಂದನಗೆ ನಮಿಸಿದರು || ೧೪ ||

ಇಂದ್ರರಥನನಿಬರಿಗೆ ತಾನೊಲ | ವಿಂದ ಪರಿಪರಿ ವಸ್ತುಗಳ ಮಿಗೆ |
ತಂದು ಪಾಗುಡಗೊಟ್ಟು ತಮ್ಮನಿಬರು ಯಥಾ ಕ್ರಮದಿ ||
ವಂದಿಸಲು ಧರ್ಮಜನು ಖಚರನ | ನೊಂದಿ ಕುಳ್ಳಿರಿಮೆನಲು ಕೃಷ್ಣನ |
ತಂದು ತನ್ನಾಸನದೊಳಗೆ ಕುಳ್ಳಿರಿಸಿಕೊಂಡಿರ್ದ || ೧೫ ||

ಎಲೆವಯಿಚ್ಚರ ನಿಮಗೆ ಫಲುಗುಣ | ನೊಳು ಕಲೆಯಿದೆಂತಾದುದೆಂದಾ |
ನಳಿನಾಭನು ಕೇಳೆ ತನ್ನಸುವನು ಪೊರೆದನೀತ ||
ಬಳಿಕ ವಿದ್ಯೆಯ ಸಾಧಿಸಿದ ದೋ | ರ್ವಲದಿ ಗೆಲಿದನು ಖಗನ ನಿಮ್ಮ |
ಕ್ಕಳಿಗೆ ಬಿಲುವಿದ್ಯೆಯನು ಕಲಿಸಿದನೆಂದನೆಲ್ಲವನು || ೧೬ ||

ಎಂದು ಪಾಂಡಜನರೆಲ್ಲರನು ಬಲ | ವಿಂದ ಬೀಳ್ಕೊಂಡೇರಿ ಪುತ್ರರ |
ಸಂದಣಿಯಲಾ ಮಣಿವಿಮಾನದೆ ಪೋಪ ಸಮಯದಲಿ ||

ಬಂದನಾ ಧೃತರಾಷ್ಟ್ರರಾಯನ | ನಂದನನು ನೂರ್ವರು ಸಹೋದರ |
ರೊಂದಿಬರೆ ಚತುರಂಗ ಸೈನ್ಯಾನೂನ ವೈಭವದಿ || ೧೭ ||

ಧಾರಿಣಿಯನವರುಳಿದು ವಿಪಿನದ | ನಾರು ಬೇರನು ತಿಂಬ ಬಡತನ |
ಸೇರಿ ಪಾಂಡುಜರಿಹುದ ನೋಡುವೆ ತನ್ನ ವೈಭವವ ||
ತೋರಿಸುವೆನೆಂದೈದೆ ಬರೆ ತಾ | ನೀರದಾಧ್ವರದೊಳಿಂದ್ರರಥನು ಕು |
ಮಾರಕರು ವಿಸ್ಮಯವನಾಂತರು ನೋಡಿ ವೈಭವವ || ೧೮ ||

ಬಂದು ವಿಪಿನವ ಪೊಕ್ಕು ಮಧ್ಯದೊ | ಳಂದವೆಸೆವಾಸ್ಥಾನ ಶೋಭೆಯ |
ಚಂದದಲಿ ವಿರಚಿಸೆನವಾಮ್ರತರು ಪ್ರದೇಶದೊಳು ||
ಸಂದ ಮಣಿಪೀಠಿಕೆಯಲತಿಮುದ | ದಿಂದಲೊಡ್ಡೋಲಗವನಿತ್ತು ನೃ |
ಪೇಂದು ಲಾಲಿಸುತಿರ್ದನಾ ಗಾಣಿಯರ ಗಾನವನು || ೧೯ ||

ಇತ್ತರದಲೊಪ್ಪಿದು ಘನಗುರು | ವೃತ್ತಕುಚೆಯರು ತುಂಬಿದಿಂಗಳ |
ನೊತ್ತರಿಪನಗೆಮೊಗದ ಬಿಂಬಾಧರದ ನಿಡುಗಣ್ಣ ||
ಹತ್ತು ಸಾವಿರ ಗಣಿಕೆಯರು ಮನ | ವೆತ್ತಲುಂ ಪೂತಂತೆ ತೋರಿತು |
ಬಿತ್ತರದ ನಗೆಗಣ್ಣ ಬೆಳತಿಗೆಯಿಂದ ಸಿರಿ ತುಳುಕೆ || ೨೦ ||

ಕುಶಲನವಲೋಕಿಸುವ ವಿದ್ಯೆಯ | ಬೆಸಗೊಳಲು ಪಡೆಯಾರದೆಂದಾ |
ಗಸಚರನೆ ಕೇಳೀತ ದುರ್ಯೋಧನನು ಪಾಂಡವರ ||
ವಸುಧೆಯನು ಸೆಳೆಕೊಂಡೆ ಕಪಟದ | ಹಸರಿಗನು ತಾನಿಂದಿರವನಾ |
ಬೆಸಲು ವಿಭವವ ತೋರ ಬಂದಪನೆಂದುದಾ ವಿದ್ಯೆ || ೨೧ ||

ಎನೆ ನಭಶ್ಚರನೆನ್ನ ಮಿತ್ರಂ | ನಿನಿತು ಗೆಯ್ದನೆಯೆಂದು ಕಾಯ್ದಿಂ |
ದೆನಸು ವೈಕುರ್ವಣಭರದಿನವತರಿಸಿ ಭೂತಳಕೆ ||
ಘನ ನಿನಾದದಿ ಘರ್ಜಿಸುತ ಮೆಣು | ವನದಿ ಮುಸುಕಿದ ತೆರದಿ ಭೀಕರ |
ವನತಿಶಯಮೆನೆ ಮುಸುಕಿದನು ಬೆದರಿದುದು ಕುರುಸೈನ್ಯ || ೨೧ ||

ನಡುಗಿದನು ಕಲಿಕರ್ಣ ತಾನೆದೆ | ಯೊಡೆದನಶ್ವತ್ಥಾಮ ಬಿಲ್ಲನು |
ಕೆಡಹಿದನು ಕೃಪದ್ರೋಣನಳುಕಿದ ಶಕುನಿಕಂಗೆಟ್ಟ ||
ಮಿಡುಕದಿರ್ದನು ಸೈಂಧವನು ಬಾ | ಯ್ಬಿಡುತಲಿರ್ದನು ಶಲ್ಯನಾಗಳು |
ಹಿಡಿದನಾ ದುರ್ಯೋಧನನ ದುಶ್ಶಾಸನನನೊಡನೆ || ೨೨ ||

ಕಟ್ಟಿಕೊಂಡಾ ಖಚರನಾಗಸ | ವಟ್ಟೆಯಲಿ ನಿಲಲಿತ್ತಲುರೆ ಬಾ |
ಯ್ಬಿಟ್ಟು ಗೋಳಿಟ್ಟತ್ತು ಕಂಗೆಟ್ಟೈದೆ ಭಾನುಮತಿ ||

ಕೆಟ್ಟೆ ಮೋರೆಯೊಯೆನುತ ಬಂದು ಯು | ಧಿಷ್ಠಿರನ ಚರಣದ್ವಿತಯದೊಳ |
ಗಿಟ್ಟು ನೊಸಲನು ನೇತ್ರಜಲದಿಂ ತೊಳೆದಳಂಘ್ರಿಗಳ || ೩೪ ||

ಏನದದ್ಭುತವಬಲೆ ಪೇಳೆಲೆ | ಭಾನುಮತಿಯೆನೆ ಕುರುಕುಲಾಂಬರ |
ಭಾನು ನಿನ್ನೊಡವುಟ್ಟಿದನನೆನ್ನಸುಗೆ ವಲ್ಲಭನ ||
… … … | … …. …. ||
… …. ………………… || ೩೫ ||

ಅತ್ತಿಗೆಯೆ ಕೇಳ್ನಮ್ಮನಮ್ಮೊಳು | ತತ್ತಡಾವೈವರೆ ಪೆರರು ಬಂ |
ದೊತ್ತಿದರೆ ನೂರೈವರಾವೆನ್ನನ್ಯರಲ್ಲೆಂದು ||
ಅತ್ತ ನೋಡಲು ಕೃಷ್ಣನೋಲೆಗೆ | ಹತ್ತಿಸಿದ ವಕ್ಕಣೆಯನಾಗಲು |
ಇತ್ತನರ್ಜುನಗೋಲೆಯನು ಗುಣಿಧರ್ಮನಂದನನು || ೩೬ ||

ಸರಳಿಗೋಲೆಯ ತೊಡಚೆ ಗಾಂಡೀವಿ | ತಿರುವಿಗಂಬನು ಹೂಡಿ ಕಣ್ಬಗ |
[ತೆರೆದು] ತೆಗೆದಾಬಾನಗೋಲೆಸೆ ಗರಿಯ ಮೊರಹಿನಲಿ ||
ಸುರಸರಣಿಯೊಳಗಿಂದ್ರರಥನ | ಚ್ಚರಿವಿಮಾನದ ಪಕ್ಕದಲಿ ಕುಡ |
ಭರದಿ ಪೋಪುದ ಪಿಡಿದು ತಂದೆಗೆ ಕೊಟ್ಟ ಖಚರಸುತ || ೩೭ ||

ಓಲೆವೋದಿಸಿ ಕಂಡು ಪಾರ್ಥನ | ಕೋಲಿದುದೆಂದದನಾದರಿಸಿ ಸ |
ಲ್ಲೀಲೆಯಿಂದಾ ಪರ್ಣಲಘುವಿದ್ಯೆಯನು ಖಗ ಬೆಸಸೆ ||
ಮೇಲಣೆಂದವರೀರ್ವರನು ಭೂ | ಪಾಲನದಿಮೊದಲಲ್ಲಿ ಸಿರಿ ಪೊ |
ಯ್ತಾಲತಾಂಗಿಯ ಮುಂದೆ ಕಟ್ಟನು ಕಳೆದ ಯಮಸೂನು || ೩೮ ||

ನೆರೆದು ಬಂದೀಕ್ಷಿಸಿತು ಕುರು ಭೂ | ವರನ ತಮ್ಮಂದಿರು ಕೆಳೆಯರ |
ಚ್ಚರಿಯ ಪರಿವಾರ ಪ್ರಧಾನರು ಕುತ್ತುದಲೆಯಿಂದ ||
ಕುರುಪತಿಯ ದುಶ್ಶಾಸನನುಮಿರೆ | ಪಿರಿದು ಬಳಲಿದಿರೆಂದು ತಾನನಿ |
ಬರನು ದಯೆಯಿಂದೊಲಿದು ಸಂತೈಸಿದನು ಧರ್ಮಜನು || ೩೯ ||

ನಾಳವಾಸಿಗೆಯಿಂದ ಕುರುಪತಿ | ಕೌಳಿಕಾರನ ತೆರದಿ ಪಾಂಡವ |
ರಾಳುವಿಗೆಯನು ಸೆಳೆದುಕೊಂಡದನೊಪ್ಪಿಸುವೊಡಿಂದು ||
ವೇಳೆ ಹಾದಿಯದೋಡಮವರೇಂ | ಕೂಳ ಕಾಣರೆ ಲೋಕಮಾನ್ಯರು |
ಬಾಳುವರು ತಾನುಚಿತ ಬಾಹಿರನೆಂದುದಖಿಲ ಜನ || ೪೦ ||

ಅವರ ನುಡಿಗೇಳದವೊಲಾ ಕೌ | ರವನು ನಿಜಪುರವೈದಿದನು ಸ |
ಬ್ಬವದ ಕೃಷ್ಣನು ಬಳಿಕ ದ್ವಾರಾವತಿಗೆ ತೆರಳಿದರು ||

ಇವರು ಬದರೀವನದೊಳಿರುತಿರೆ | ತವದ ರಾಗದೊಳರ್ಜುನನೊ |
ಪ್ಪುವಸುಖದಿನಿರೆ ತಲೆದಳಾ ಗರ್ಭವನು ಪಾಂಚಾಳೆ || ೪೧ ||

|| ಅಂತು ಸಂಧಿ ೩೯ಕ್ಕಂ ಮಂಗಲ ಮಹಾ ||

## ಅರಣ್ಯ ಪರ್ವ (ಸಂಧಿ ೪೦)

**ಸಂಧಿ ೪೦**

ದ್ರುಪದ ತನುಜಾ ಹರಣವಾಗಲು | ವಿಪುಳ ಭೀಮಾರ್ಜುನ ಬಲಾಚ್ಯುತ |
ರಪರಿಮಿತ ದೋರ್ವಳರು ತಂದರು ದ್ರೌಪದಿಯನಂದು || ಪದ ||

ಕನಕ ಕಮಲವ ನೋಳ್ಪ ಬಯಕೆಯು | ಮನದಲುದಯಿಸೆ ಜಿನಪತಿಗೆ ಕಾ |
ಮಿನಿ ಯರಿಪೆ ರಾಗದಿ ವಿಮಾನದೊಳಾಕೆ ಸಹ ನರನು ||
ವಿನುತ ಕಾಂಚನ ದೀಪವನು ಪೊ | ಕ್ಕನುಪಮಿತನಂದನದ ಮಿಗೆ ಚೆಲು |
ವನು ಸತಿಗೆ ತೋರಿಸಿ ಲತಾಮಂಟಪದೊಳಿರಿಸಿ || ೧ ||

ಇರಿಸಿ ಕನಕಾಂಭೋಜಷಂಡವ | ನರಸ ಹೊಗಲಿಕೆ ಇತ್ತಲೂ ಆ |
ಎರಡನೆಯ ದೀಪದಲಿ ಮೂಡಣಮೇರು ಭರತದಲಿ ||
ಮೆರೆವ ವಿಜಯಾರ್ಧಾಚಲದ ಬಂ | ಧುರದ ದಕ್ಷಿಣ ಶೇಢಿಯೊಳು ಬಿ |
ತ್ತರದ ರತನೂಪುರ ಪುರೇಶನು ಶಂಖಚರೇಂದ್ರ || ೨ ||

ಆತನಲ್ಲಿಯ ವಾಸುದೇವ ವಿ | ನೂತನಾತನ ಮೈದುನನು ವಿ |
ಖ್ಯಾತ ಪದ್ಮನೆನಿಪ್ಪ ವಿದ್ಯಾಧರ ವಿಹಾರಿಸುತ ||
ಆ ತಳೋದರಿಯಿರ್ದ್ದಸರಿಸದ | ಲಾತಲೆರ್ದ ವಿಮಾನ ಕೀಲಿಸ |
ಲಾತನಾಗಸದಿಳಿದು ಬಂದೀಕ್ಷಿಸಿದನಾಕೆಯನು || ೩ ||

ವನದ ಲಕ್ಷ್ಮಿಯೊ ರತಿಯೊ ಮೇಣು ಶ | ಕ್ರನ ಸತಿಯೆಂದಾತ ನೀಕ್ಷಿಸಿ |
ನನೆಗಣೆಗೆ ಮನಕಾತಳಿಸೆ ಅವಲೋಕಿನಿಯ ಕರೆದು ||
ವನಿತೆಯಿವಳಾರೆಂಬುದನು ತಿಳು | ಹೆನಲು ವಿದ್ಯಾದೇವಿಯೆಂದಲು |
ವಿನುತರೈ ಕುರುವಂಶಮಂಡನ ಪಾಂಡುನೃಪಸುತರು || ೪ ||

ವರಯುಧಿಷ್ಠಿರ ಮುಖ್ಯರವರ್ಗೆ | ವರು ಸಹೋದರರವರೊಳತಿಬಲ |
ನರಸ ಕೇಳೈ ಮೂರು ಲೋಕದ ಗಂಡನರ್ಜುನನು ||

ಅರರೆಯಲ್ಲಿಯ ವಾಸುದೇವನ | ಕರುಣದಾ ಮೈದುನನು ತತ್ ಸೌಂ |
ದರಿ ಮಹಾಸತಿ ವಿನುತೆಯಾತನ ಕಾಂತೆ ಗುಣವಂತೆ || ೫ ||

ಎನಲು ಬೆದರದೆ ಪದ್ಮನಾಭನು | ನನಗಣೆಗೆ ಗುರಿ ಮಾಡಿದರು ತ |
ನ್ನನು ತಳೋದರಿಯೆಂದಿವಳ ನೊಯ್ವುದದೆಂತೆನಲು ||
ಮನದೊಳಗೆ ಬೆದರಿದಳು ದೇವತೆ | ನಿನಗೆ ದುರ್ಜಗವೆಲ್ಲ ಬೇಡೆಂ |
ದೆನೆ ಮುಳಿದು ಹೇಳೆಂದು ಬೆಸಗೊಂಡನು ವಿಯಚ್ಚರನು || ೬ ||

ವರ ಧನಂಜಯನತ್ತ ಕನಕಾಂ | ಬರುಹವನು ತರ ಹೋದನಾತನ |
ಪರಿಜಿನಲಿ ಒಯಿ ಒಯಿದೊಡೇಂ ನಿನಗಾಗಳೀ ಸತಿಯು ||
ನರನು ಸೈರಿಸನೆನಲು ಕೇಳಲು | ತರುಣಿಯನು ಬಂದೊಯಿದ ವಿಷಯಾ |
ತುರರು ಮೇಲೆಣಿಕೆಗಳನರಿವರೆ ಭೂಪ ಕೇಳೆಂದ || ೭ ||

ಅವನ ಕಾತರದೊಂದು ಮಾತಿನ | ಹವಣರಿದು ಮನದೊಳಗೆ ಶಂಕಿಸಿ |
ಯುವತಿ ವರವಿದ್ಯಾ ಪ್ರಭಂಜಿನಿಯೆಂಬ ಮುದ್ರಿಕೆಯ ||
ತವಕದಿಂ ಮುಟ್ಟಿಸಲಳಿದು ಪೋ | ಯ್ತವನ ವೈಕುರ್ವಣವು ಮಾಯದ |
ಜವನೆನುತ ಕಂಗೆಟ್ಟು ಗೋಳಿಟ್ಟಳು ವಿಮಾನದಲಿ || ೮ ||

ಖಳ ದುರಾತ್ಮಕ ಪಾತಕನೆ ಕೆ | ಟ್ಟೆಳಸಬಹುದೇ ಪರವಧುಗೆ ಕುರು |
ಕುಲತಿಲಕರಹ ಪಾಂಡವರೊಳರ್ಜುನನ ಸತಿ ನಾತು ||
ಕಳವಿನಿಂದೆನ್ನೊಯ್ದೆ ಗಡ ನರ | ಹುಳುವೆ ನೀನಲಗಣಸೆ ತ್ರಿಭುವನ |
ದೊಳಗೆ ಮಲೆವವರಸುವನೆಳೆಯದೆ ಮಾಣನೆನ್ನರಸ || ೯ ||

ಎಂದು ದ್ರೌಪದಿ ಜರಿದು ಹಾಹಾ | ಕ್ರಂದನಂ ಗೈದೆಲೆ ದಿಗೀಶರು |
ಬಂದು ಖಳನನು ಕೊಲಿ ನಭಶ್ಚರ ದಿಕ್ಕಪಾತಕನ ||
ಕೊಂದು ಕೂಗಿದ ದಿವಿಜರೀತನ | ತಿಂದು ತೇಗೆಲೆ ರಾಕ್ಷಸರಿರಾ |
ಎಂದು ಬಾಳೀದತ್ತು ಬಸುರನು ಮೋದಿದಳು ಕಾಂತೆ || ೧೦ ||

ಶಶಿಮುಖಿಯ ರೋದನವ ಕೇಳ್ದರ | ಬಸುರೊಳಗೆ ಮಸದಲಗು ಕೊಂಡವೊ |
ಲಸು ಕುದಿದು ಕೆಲರತಿ ಕರುಣದಿಂ ಖಚರರವಗಾಂತು ||
ಅಸಿಯ ಹೊಯಿಲಿಂ ಭಂಗವಡೆದರು | ಕುಸುಮ ಕೋಮಲೆ ನಭದಿ ಬೀಳುವೆ |
ವಸುಧೆಗೆಂಬವಸರದೊಳಾತನೆ ಪಿಡಿದು ನಿಲಿಸಿದನು || ೧೧ ||

ಮುಟ್ಟದಿರು ಪಾತಕನೆ ನನ್ನನು | ಮುಟ್ಟಿದಡೆ ನಾಲಗೆಯ ಸುಗಿ ಕೊಂ |
ದಿಟ್ಟೆಳದಿ ನಾ ಮಡಿವೆನೆನೆ ಕಂಗೆಟ್ಟು ಕಾಮಾಂಧ ||

ಮುಟ್ಟೆ ನಿನ್ನನು ನಿಟ್ಟಿಯಿದೊಡಂ | ಬಟ್ಟ ಬಳಿಕಲ್ಲದೆ ತಳೋದರಿ |
ನೆಟ್ಟನಿದನಂ ಬೆಂದು ರಥನೂಪುರ ಪುರಕ್ಕೈದ || ೧೨ ||

ಒಂದು ತಾಣದಲಿರಿಸಿ ದ್ರುಪದನ | ನಂದನೆಯ ವಿದ್ಯಾ ಪ್ರಭಾವದ |
ಲೊಂದು ವಜ್ರದ ಮುಚ್ಚಳನು ತದ್ಭೂಮಿಗಳವಡಿಸಿ ||
ಸಂದ ಶಂಖನೆನಿಪ್ಪ ಚಕ್ರಿಯೊ | ಳೊಂದಿಯಲ್ಲಿಯ ವರ್ಧಮಾನ ಜಿ |
ನೇಂದ್ರ ಸಮವಶೃತಿಯ ಪೊಕ್ಕನು ಪದುಮನಾಭ ಖಗ || ೧೩ ||

ಇತ್ತಲಾ ಪಾಂಚಾಲೆ ತನ್ನಯ | ಚಿತ್ತವಲ್ಲಭನನು ಮನೋಮುದ |
ವೆತ್ತು ಕಾಬನ್ನೆವರಮನಸನವೆಂದು ಕೈಕೊಳಲು ||
ಅತ್ತಲಾಗಳೆ ಪದ್ಮನಾಭನ | ಪೆತ್ತ ತಾಯ್ತಂದೆಗಳನು ಕಡು ಬೆದ |
ರುತ್ತ ಪರಿತಂದರು ಪತಿವ್ರತೆಯೆಂದು ನುತಿಯಿಸುತ || ೧೪ ||

ಕರಗಳನು ಮುಗಿದಮ್ಮ ನೀವೀ | ಪರಿಯಲನಶನ ವಿಧಿಯನಾಂಪುದು |
ಮರುಳುತನ ಸಂಸಾರಿಗಳಿಗಾಗದ ವಿಪತ್ತುಂಟೆ ||
ದುರುಳ ಪದ್ಮನು ತಂದೊಡೇಂ ಪರಿ | ಹರಿಸಿವಾ ಖಚರೇಶ ಶಂಖನು |
ಬರೆ ಮಹಾಸತಿ ನಿಮ್ಮ ದುಃಖವನೆಂದರವರೊಲಿದು || ೧೫ ||

ಇರೆನುಡಿದು ನಿಜಗೃಹಕವರುಗಳು | ಮರಳಿದರು ತಾವತ್ತಲಿತ್ತಲು |
ಸುರಪಸುತ ಕನಕಾಂಬುಜಂಗಳ ತಂದು ದ್ರೌಪದಿಯ ||
ಅರಸಿಕಾಣದೆ ಲತೆವನೆಯಲೆದೆ | ಜರಿದು ಧೈರ್ಯವನೊಡೆದು ಮೂರ್ಛಾ |
ಶರಧಿಯಲಿ ಮುಳುಗಿದನು ಮೋಹವದಾರ ನೋಯಿಸದೊ || ೧೬ ||

ನರನು ಮೆಲ್ಲನೆ ಕಣ್ದೆರೆದು ಚೇ | ತರಿಸಿಕೊಂಡನು ತನ್ನ ಕಾಂತೆಯ |
ನಿರದೊಯಿದ ಹಗೆ ಬಾಳ್ವೊಡಂಬುಧಿ ನಾಲ್ಕು ದೆಸೆ ಪತ್ತು ||
ಗಿರಿಗಲೇನಿಳೆಯೊಂದು ತಾ ಮೈ | ಗರೆದದಾವೆಡೆಯಿರ್ಪನಾತನ |
ಕೊರಳ ಮುರಿವೆನು ತಹೆನು ಕಾಂತೆಯನೆಂದು ತರಿಸಂದ || ೧೭ ||

ಬಳಿಕಲಾಗಸವಟ್ಟೆ ಯೀಕ್ಷಿಸೆ | ಘಳಿಲನಾ ಸಮಯದಲಿ ಪದ್ಮನೊ |
ಳಳವಿ ಗೊಡುತವೆ ಭಗ್ನರಾದಾ ಖಚರರೈತಂದು ||
ತಿಳಿಪಿದಪರೆರಡನೆಯ ದೀಪದ | ಪೊಳಲು ಶ್ರೀನೂಪುರದ ಪದ್ಮನು |
ನಳಿನ ವದನೆಯನೊಯಿದನೆಂದಾ ತೆರನನೆಲ್ಲವನು || ೧೮ ||

ತಿಳಿದು ಬದರೀವನಕೆ ಬಂದಾ | ಗಳೆಯುಧಿಷ್ಠಿರಗರುಪಿ ಭೀಮನ |
ಘಳಿಲನೊಡಗೊಂಡರು ವಿಮಾನವನೇರಿ ಶೀಘ್ರದಲಿ ||

ತಳರ್ದನಾ ದ್ವಾರಾವತಿಗದಂ | ತಿಳುಪಿ ಹರಿಬಲ ದೇವ ಸಹವರಿ |
ಘಳಿಗೆ ತಳುವುದೇ ಧಾತಕೀ ಷಂಡಕ್ಷಿತಿಗೆ ಪೋದ || ೧೯ ||

ಅಧಟರಾ ಪಟ್ಟಣದ ಹೊರವಲ | ಯದಲಿ ನಿಂದರು ಭೀಮಸೇನನ |
ನೊದಗನಲು ಪರಿತಂದು ರುಧಿರೋದ್ಗಾರಿಗದೆಯಿಂದ ||
ಸದೆಯೆ ವಿದ್ಯಾ ವಜ್ರ ಪರಿಧಿಯ | ನದು ವಡೆಯಲೊಳಪೊಕ್ಕ ಭೀಮನ |
ಮುದದಿ ದ್ರೌಪದಿ ಕಂಡು ಮಾಯಾ ವಿಧಿಯೊಯಿದನೆಂದು || ೨೦ ||

ಮಿಸುಪ ಪರ ವಿದ್ಯಾ ಪ್ರಭಂಜಿನಿ | ವೆಸರ ತನ್ನುಂಗರವ ಮುಟ್ಟಿಸಿ |
ಸಸಿನೆ ಭೀಮನನರಿದು ಪೊರಮಡೆನಡಸಿ ತರುತಿರಲು ||
ಅಸಮ ಭುಜಬಲನೆನ್ನನುಜನೀ | ಯಸುವೆನಿಪಳನು ಕದ್ದುತಂದವ |
ನಸುವನೆಳೆವೆನು ಕರೆವುದಾತನನೆಂದು ಘರ್ಜಿಸಿದ || ೨೧ ||

ಎನಲು ತಾಗಿದ ಸುಭಟರರೆಬರ | ನನಿಲಜನು ಯಮಪುರಕೆ ಕಳುಹಿದ |
ವನಜನೇತ್ರ ಬಲಾರ್ಜುನಕ್ಕಳನೊಂದಿ ನೆರೆಕಂಡು ||
ವನಿತೆಯನು ನಾವೊಯಿದುದ ನುತ | ಜ್ಜನಪನಿಲ್ಲಿಯ ವಾಸುದೇವನ |
ಮನವರಿಯಲೆಂದೊತ್ತಿದನು ಶಂಕವನು ಮುರವೈರಿ || ೨೨ ||

ಮುಳಿದರಾದೊಡೆ ಮೂಜಗವ ತಲೆ | ಕೆಳಗು ಮಾಪ್ಪೊಡೆ ಶಾರ್ಙ್ಗಪಾಣಿಯು |
ಬಲನು ಭೀಮಾರ್ಜುನರದೋರೋರ್ವರೆ ಸಮರ್ಥರಲೆ ||
ತಿಳಿವುದೆಂದಾ ಶಾರ್ಙ್ಗಗರಿಪುವ | ವೊಲು ಮಹಾ ಭೈರವರವವು ಕಡು |
ಬೆಳೆದು ತೀವಿತು ಮೂಜಗವನಾ ಪಾಂಚಜನ್ಯಜವು || ೨೩ ||

ಆರು ನನ್ನಾ ಶಂಖವನು ಬಾ | ಯಾರೆ ಪೂರಿಸಿದಧಟನೆಂದು ವಿ
ಚಾರ ಪರನಾ ಶಂಖಬೆಸಗೊಳೆ ತದವನೀಶ್ವರರು ||
ವಾರಿಜಾಕ್ಷನೆ ಕೇಳು ನೀನು ವಿ | ಚಾರಿಪೊಡೆ ಶಂಖವದು ನಿನ್ನಯ |
ಸೇರುವೆಯದಲ್ಲೆಂದನಾ ಭೂಪತಿಗೆ ಮುನಿಹಂಸ || ೨೪ ||

ಎಂದೊಡಾದರು ಚಿತ್ತೈಸಿಮೆನೆ | ಸಂದ ಜಂಬೂದ್ವೀಪದಾರ್ಯೆಯೊ |
ಳೊಂದಿದಾ ಪುರುಷೋತ್ತಮನನುತ ಶಂಖನಿಸ್ವನವು ||
ಎಂದೊಡಾಧ್ವನಿಯಿತ್ತ ಪಸರಿಸ | ದಂದಮೆಂತೆನೆ ನಿನ್ನ ಮೈದುನ |
ನಿಂದ ಪಸರಿಸಿತಿತ್ತಲೆಂದನು ಭೂಪತಿಗೆ ಮುನಿಪ || ೨೫ ||

ಬೆಸಸಿಮಾತೆರನೆಲ್ಲವನು ಎನ | ನೊಸೆದು ಶಂಖನೆ ನೀ ತಿಳಿದು ಕೇ |
ಳುಸಿರ್ವಡಿಂದಿನ ಪದ್ಮನಾಭಂಗೆಂಟನೆಯ ಭವದ ||

ಪೆಸರು ಕಪಿಲನೆನಿಪ್ಪ ಬ್ರಾಹ್ಮಣ | ನೆಸೆವ ಸತಿಯಂಜನೆಯೆನಿಪ್ಪಳು |
ಬಿಸಜ ಗಂಧಿನಿಯೆಂದು ಬಂದಲ್ಲಿಯ ಚತುರ್ಭುಜನ || ೧೬ ||

ತರ್ಕಮೈದುನನರ್ಜುನನು ರಣ | ರಕ್ಕಸನು ಮೂಜಗದ ಗಂಡರ |
ನೊಕ್ಕಿಲಿಕ್ಕುವ ಬಾಹುಬಲನಾ ಭೂಪನರ್ಧಾಂಗಿ ||
ಚೊಕ್ಕ ಮನದವರಾಗಿ ದ್ರೌಪದಿ | ಮಿಕ್ಕ ರಾಗದಲಿರುತಿರಲು ಕಂ |
ಡುಕ್ಕಿವಳಿತಂದನು ಭವಪ್ರಣಯದಲವಳನೀತ || ೧೭ ||

ಅದರಿನವರಾ ತಮ್ಮ ಸೊಮ್ಮನು | ಕದನ ಕರ್ಕಶರರಸಿ ಬಡೆದರು |
ಸುದತಿಯನು ಕದ್ದೊಯ್ಯಲೇಕೆಲ್ಲರು ಪರಿಯರೆಂದು ||
ಒದರಿಸಿದನಾ ಶಾರ್ಙ್ಗ ಶಂಖಮ | ನಿದು ಕಣಾ ಭೂಪಾಲ ಕೇಳೆಂ |
ದದರ ತೆರನೆಲ್ಲವ ನಿರೂಪಿಸಿದನು ಮಹಾ ಮುನಿಪ || ೧೮ ||

ಎನಲು ಕೇಳ್ದಾ ಶಂಖಚಕ್ರಿಯು | ಮುನಿಗಳನು ಬೀಳ್ಕೊಂಡು ಮತ್ತಾ |
ಜಿನರ ವಂದಿಸೆ ಸಮವಸರಣನಾಗ ಪೊರಮಟ್ಟು ||
ಘನ ನಿನದ ವೆನಲೊದರೆ ತೂರ್ಯ | ಸ್ವನವು ಪೊಳಲನು ಪೊಕ್ಕು ಮಿಗೆ ಕಂ |
ಡನುವೊಡೆದ ಮುಚ್ಚಳನು ಕೆಡದತಿವೀರರಟ್ಟೆಗಳ || ೧೯ ||

ತಳೆದನತಿ ರೌದ್ರವನು ಶಂಕರ | ನೊಳರಿಸಿದನಾ ಶಂಖನಾಧ್ವನಿ |
ಬಳೆಯೆ ತನ್ಮಂತ್ರಿಗಳು ಸಮರೋದ್ಯೋಗಮಿದುಯೆಂದು ||
ತಿಳಿದು ಬಂದೆರಗಿದರು ದೇವರು | ಮುಳಿವುದನುಚಿತ ದೇವದಾನವ |
ರಳವಿಗೊಡಲೇನಾಪರೇ ನಿನಗೆಂದರವರಂದು || ೨೦ ||

ದೇವ ಬಿನ್ನಪ ಜಂಬುದ್ವೀಪದಿ | ನೀವಿಷಧಿಯನು ದಾಂಟಿಯಧಟಿಂ |
ದೀ ವಿಷಮ ಪುರದುದರದೊಳ ಪೊಕ್ಕೆಯಿದರಾ ವಧುವ ||
ಆ ವಿಭುಗಳಳವೀಹದನು ನಮ | ಗೇವುದವರೊಳು ಮುಳಿವು ತಿಳಿವೆಂ |
ಬೀವಿಧವು ತಮ್ಮೊಡವೆಯನು ತಾವೊಯಿದರೆಮಗೇನು || ೨೧ ||

ಎಂದು ಶಂಖವ ತಿಳುಹಿದರು ತಾ | ವೊಂದಿ ಪುರಜನವೆರಸಿ ಭೋರೆನೆ |
ಬಂದರಾ ಮುರವೈರಿ ಬಲ ಭೀಮಾರ್ಜುನರ ಪೊರೆಗೆ ||
ಅಂದು ಶಾರ್ಙ್ಗವ ನೇಗಿಲನು ಗದೆ | ಯಿಂದನಾ ಗಾಂಡಿವವ ಪಿಡಿವಧ |
ಟಿಂದ ಮೈವೆರ್ಚಿರ್ದ ನಾಲ್ವರ ಕಂಡರವರಂದು || ೨೨ ||

ಮುಗಿದು ಕೈಗಳ ನೀವಧಿಕ ಬಲ | ರಗಜೆಗೆಣೆಯಹ ಸರಿಯನಾ ಖಳ |
ನೆಗಪಿ ತಂದೊಡೆ ತಮ್ಮೊಡೆಯ ಶಂಖೋರ್ವಿಪತಿ ಪಳಿಗೆ ||

ಮೊಗಸುವನೆ ಪುಸಿ ನಿಮ್ಮೊಡವೆಯನು | ತೆಗೆದುಕೊಂಡಿರೆಯಿನ್ನು ತಡೆಯದೆ |
ಮುಗುಳಿಯೆಂದರು ಮಂತ್ರಿಮುಖ್ಯರು ತನ್ನೃಪಾಲರಿಗೆ || ೩೩ ||

ತಿಳಿದು ನೋಡೊವೊಡೆಮ್ಮ ನಿಮ್ಮ | ಗ್ಗಳಿಸುವಾ ದ್ವೀಪಗಳು ಬೇರೆಲೆ |
ನಳಿನ ಲೋಚನ ನಿಮಗಮೆಮ್ಮೆರೆಯಂಗೆ ಮಿತ್ರತೆಯು ||
ಕಲಹವೆಂಬೆರಡುಂ ನಿಷೇಧವು | ತಳೆದ ಚಿಹ್ನವವೀರ್ವರಿಗೆ ಸರಿ |
ತಳುವದೀಗಳೆ ಬಿಜಯಮಾಡುವುದೆಂದರೆನಲೊಡನೆ || ೩೪ ||

ನರನು ದ್ರುಪದಾತ್ಮಜೆಯು ಮಣಿ ಭಾ | ಸುರ ವಿಮಾನವನೇರಿ ಬಳಿಕಾ |
ಮುರಮಥನ ಹಲಧರ ವೃಕೋದರವೆರಸಿ ಬೇರೊಂದು ||
ವರ ವಿಮಾನವನೇರಿ ಭೋರೆಂ | ದಿರದೆ ಮಗುಳಿದರೈದಿದರು ಭಾ |
ಸುರದ ಬದರೀವನವನೆಲೆ ಭೂಪಾಲ ಕೇಳೆಂದ || ೩೫ ||

ಬಲಮುಕುಂದರನನುಜರನು ಕಂ | ಡಲು ತರದ ರಾಗದಲಿ ಸಂತಸ |
ದಳೆದು ಪರಸಿದನೆರಗಿದಾನಾದುನಿಗೆ ವಿನಯದಲಿ ||
ನಳಿನನಾಭಾದಿಗಳ ಮಿಎ ದೋ | ರ್ವಲಕೆ ಮೆಚ್ಚಿದನಮಲ ಜಿನಪದ |
ನಳಿನರೋಲಂಬಾಯಮಾನ ವಿನೇಯ ಕುಲತಿಲಕ || ೩೬ ||

|| ಅಂತು ಸಂಧಿ ೪೦ ಕ್ಕಂ ಮಂಗಲ ಮಹಾ ||

## ಅರಣ್ಯ ಪರ್ವ (ಸಂಧಿ ೪೧)

**ಸಂಧಿ ೪೧**

ಖ್ಯಾತರಾ ಪಾಂಡವರು ತಾವ | ಜ್ಞಾತವಾಸದಿ ವರವಿರಾಟನ |
ಭೂತಳದೊಳಿರೆ ತುರುವ ಹಿಡಿದುದು ಕೌರವನ ಬಲವು || ಪದ ||

ಶ್ರೀ ವದನದೊಳು ನನ್ನಿ ನಡೆಯೊಳು | ಪಾವನತೆ ಜಿನಭಕ್ತಿ ತನ್ನಯ |
ಭಾವದೊಳು ನೆಲೆವಡೆಯ ಪಾಂಡವ ಪಿರಿಯ ಸುಕುಮಾರ ||
ಶ್ರೀವರನನಾ ಬಲನನಾ ಕೊಂ | ತೀ ವಿಮಳೆಯನು ಕಳುಹಿತಾಂ ದ್ವಾ |
ರಾವತಿಯನವರೈದಿ ಸುಖದಿಂದಿರ್ದರವರಿರಲು || ೧ ||

ದ್ರುಪದಸುತೆಯನು ಬಳಿಕಲತ್ತಾ | ದ್ರುಪದನರಮನೆಗಟ್ಟಿದರು ತ |
ದ್ವಿಪಿನವಾಸದ ಪಾಳಿಯೀರಾರಬ್ಧವಾಗುತಿರೆ ||

ನೃಪತಿಯಲ್ಲಿರದೇಳ್ದು ಸಿರಿಗಿರಿ | ಯುಪನದಿಯನುತ್ತರಿಸಿ ಸಿರಿರಾ |
ಜಿಪವಿಡಾಯದ ಚೋಳಮಂಡಳ ಮಧ್ಯದೇಶದಲಿ || ೧ ||

ಎಸೆವ ಕಾಂಚೀನಗರದೊಳು ರಾ | ಜಿಸುವ ತಮ್ಮಂದಿರುವೆರಸಿಯಿ |
ರ್ದಸಮ ಭುಜರನಲ್ಲಿರದೆ ಪಡುವಣದಿಕ್ಕೆಗೈತರುತ ||
ಮಿಸುಪ ನಂದನ ಶಾಲಿವನ ರಂ | ಜಿಸುವ ನದಿ ಕಾಸಾರ ಶೋಭಾ |
ವಸದವೆನಿಪ ವಿರಾಟಪುರದ ಬಹಿರ್ವನವ ಪೊಕ್ಕು || ೩ ||

ಬೆಳೆದ ಮುಳುಗಳ ಹೊದರು ತೆಕ್ಕನೆ | ಬಳಸಿದಾ ಸಮಿವೃಕ್ಷಕೋಟರ |
ದೊಳಗೆ ತಮ್ಮಯ ದಿವ್ಯಮಯದಾಯುಧಗಳನು ಮಡಗಿ ||
ತಲೆದ ವಿದ್ಯಾ ದೇವತೆಗಳನು | ತೊಲಗದವ ಕಾದಿರ ನಿರೂಪಿಸಿ |
ಪೊಳಲ ಪೊಕ್ಕರು ದೊಕ್ಕನೀಕ್ಷಿಸಿದರು ಜಿನಾಲಯವ || ೪ ||

ಭರತನಂದಾಗಿಸಿದ ಬಸದಿಗೆ | ಸುರಗಿರಿಗೆ ದೊರೆಯೆನಿಪುದನು ನಿ |
ರ್ಭರ ಸುಭಕ್ತಿಯಲಮಳ ಹೃದಯರು ಪೊಕ್ಕು ಜಿನರ್ಗೆರಗೆ ||
ಪಿರಿದು ರೂಪಸ್ತವ ಗುಣಸ್ತವ | ವಿರುತಿ ಸೊಗಯಿಸೆ ನುತಿಸಿ ಪರಮನ |
ಚರಣ ಗಂಧೋಧಕ ಪವಿತ್ರಿತ ಗಾತ್ರರಳ್ತಿಯಲಿ || ೫ ||

ಗುರುಪದಾಂಬುಜಕೆರಗಿ ಪರಕೆಯ | ಧರಿಸಿ ಪೊರವಟ್ಟೊಂದು ತಾಣದೊ |
ಳುರುರಹಸ್ಯದೊಳನಿಬರುಂಕುಳ್ಳಿರ್ದು ತಮ್ಮೊಳಗೆ ||
ಪರಿವಿವೇಕಿಸಿ ವರುಷವದು ಹ | ನ್ನೆರಡು ಬದರೀವನದೊಳಾದುದು |
ಇರಲು ಬೇಕಜ್ಞಾತವಾಸದಿನೊಂದುವರುಷವನು || ೬ ||

ಎಂದು ರೂಪನು ಪಲ್ಲಟಿಸೆಯಮ | ನಂದನನು ಕಕ್ಷದಲಿ ಪೊತ್ತಗೆ |
ಸಂದನೊಸಲಲಿ ಮಟ್ಟಿಬೆರಳಲಿ ದರ್ಭೆಜೋಲ್ಗರ್ಚೆ ||
ಒಂದು ಹಿಡಿಜನ್ನವಿರ ಕಿವಿಯೊಳು | ನಿಂದ ಚೊಳಚೆಯ ಶೋಭೆಯಲಿ ಯಮ |
ನಂದನನು ಪೊಕ್ಕನು ವಿರಾಟ ನೃಪಾಲನರಮನೆಯ || ೭ ||

ವಿನುತ ಮಂತ್ರಾಕ್ಷತೆಯನಿತ್ತೊ | ಳ್ಪೆನಿಸುವಾಸನದಲ್ಲಿ ಕುಳ್ಳಿ |
ರ್ದನುವರಿದು ಶಾಸ್ತ್ರಪ್ರಸಂಗದಿ ನೃಪನನಹದೆನಿಸಿ ||
ಜನವರಿಯೆ ಪೌರಾಣಿಕನು ಪಾಕದ | ಮನೆಯ ಮುಖ್ಯಸ್ಥನನು ಪೊರ್ದಿಯೆ |
……………………. || ೮ ||

ಭರತ ಶಾಸ್ತ್ರ ವಿದಗ್ಧತೆಯಲಾ | ನರನು ಭಾರತಿಕರದೆಸೆಯಲ |
ಚ್ಚರಿಯನಟ್ಟುವನಾದನಾರೂಢಪ್ರವೀಣತೆಯಿಂ ||

ಅರಸನನು ಮೆಚ್ಚಿಸಿ ನಕುಲನಾ | ತುರಗ ಶಿಕ್ಷಕನೆನಿಸೆ ಗೋವಿ |
ಸ್ತರದ ಪಾಲಕನಾದನಾ ಸಹದೇವನೊಲವಿಂದ || ೯ ||

ಪಲದಿವಸಮಿಂತಲ್ಲಿ ಮೈಗರೆ | ಎಳೆಯೆರೆಯನನು ತಂನಿಯೋಗದ |
ಕಲೆಗಳಿಂದೋಲಗಿಸುತಿರಲೊಂದು ದಿವಸದಲಿ ||
ತಳುವದಾ ಖರ್ಪರನೆನಪದೋ | ರ್ವಳನು ಬಲುಕೆಸರಂಕಕಾರನು |
ಮಲವುತಲ್ಲಿಗೆ ಬಂದ ಕಂಡ ವಿರಾಟ ಭೂಪತಿಯ || ೧೦ ||

ವಲ್ಲನಾಗಳು ತನ್ನ ಪೌರುಷ | ವೆಲ್ಲವನು ಬಿಚ್ಚಳಿಸೆ ಭೂಪತಿ |
ಗಲ್ಲಿಗೇಳುತ ತನ್ನೃಪನ ಮೈದುನನು ಕೀಚಕನು ||
ಮಲ್ಲನನು ಕೆಳೆಗೊಂಡಿರುತೆ ನೃಪ | ವಲ್ಲಭನ ಪಂಙ್ತಿಯಲುಣಿಸನುಂ |
ಡಲ್ಲಿ ಕೈದೊಳಗಿಕ್ಕಿದ ಭೀಮನ ನಿರೀಕ್ಷಿಸಿದ || ೧೧ ||

ದಡಿಗನೀ ಬಾಣಸಿಗನನು ಕೈ | ವಿಡಿಯಿಸುವವಾ ಖರ್ಪರನೊಳೆನ |
ಲೊಡನೆ ಕೈವಿಡಿಯಿಸದೊಡೆಲೆ ಕೀಚಕನೆ ನಿನಗಾಣೆ ||
ಬಿಡಲು ಮಲ್ಲರ ಬಡಿಯಲಬಲ್ಲೆನು | ಅಡಿಗೆ ಮಾಡಲು ಬಂದೆನೆಂದಾ |
ನುಡಿ ಪುಸಿಯೆಯೆನೆ ಕೈವಿಡಿಸಿದನಾ ವಿರಾಜನೃಪ || ೧೨ ||

ಇಳೆಯೆರೆಯ ಕಾದಿಸಲು ಬಂದನು | ಕಳಕೆ ನೆರೆದುದು ನೋಟಕರು ಕಡು |
ಬೆಳೆದ ತೆಳ್ಗಳು ಕುಂಕುಮದ ಕಂಪದಲಿ ಹದಗೊಳಿಸಿ ||
ತಲೆಯಲೊಟ್ಟಿದ ಜಾಜು ಬಲಗಿವಿ | ಯೊಲೆವ ಹೂವಿನ ಝುಲ್ಲಿ ಬೆಟ್ಟವೆ |
ತಳೆರ್ದು ಬಂದವೊಲ್ಕೈದೆ ಬಂದನು ಕಳಕೆ ಖರ್ಪರನು || ೧೩ ||

ಮಲ್ಲ ಸಿಂಗರವಾಂತುನಸುಗಳು | ತೊಲ್ಲ ನೊಲ್ಲನೆ ಕೃತಕ ಬಾಣಸಿ |
ಭುಲ್ಲಯಿಸೆ ಬರೆ ಹವಣಿಮಾಡುತ ಭುಜವನೊದರಿಸುತ ||
ನಿಲ್ಲದಾ ಖರ್ಪರನಿದಿರ್ಚಲು | ತಲ್ಲಣಿಸದಿದಿರಾಂತು ದಂಡೆಯೊ |
ಳೆಲ್ಲ ಮೈಯಡಗಿದುದೆನಿಸಿ ಪುಸಿಗೈಯ ತೋರಿದನು || ೧೪ ||

ಅಂದು ಶಾರ್ಙ್ಗಿಯ ಕೂಡೆ ತತ್ತಥ | ಟಿಂದೆ ಚಾಣೂರನು ಸೆಣಸಿದೊಂ |
ದಂದದಲಿ ತಿವಿವೆತ್ತುವೊತ್ತುವ ತಪ್ಪುವುಪ್ಪರಿಪ ||
ನಿಂದುನೋಡುವ ಜರಿವದಗಮಿನ | ದೊಂದು ದನಿಯೆನೆ ಘಾಯಮಾಡುವ |
ಸಂದವಿಂದಾಣಗಳ ಚದುರಿಂದವರು ಕಾದಿದರು || ೧೫ ||

ಹಲವು ವಿಂದಾಣದಲಿ ಮಲ್ಲನ | ಬಳಲಿಸಿದನೆಡೆಯರಿದು ಮತ್ತವ |
ನಳವಿಗೊಡೆ ಪಿಡಿದೆತ್ತಿ ನೆಲಕಪ್ಪಳಿಸಿಕೊಲೆ ಭೀಮ ||

ಅಳಲಿ ಬಂದಾ ಕೀಚಕನು ಕಡು | ಮುಳಿದು ಖಂಡೆಯದಿಂ ಪೊಡೆಯೆ ತೋ |
ಳ್ಗಳ ಪಿಡಿದು ನೆಗ್ಗೊತ್ತಿ ತೂಂತಿದ ಜವನಾ ಬಾಯೊಳಗೆ || ೧೬ ||

ಅಳಿನೊಡೆಯನ ಮೈದುನನು ದೋ | ರ್ವಳನೆನುತ ಪರಿವಾರ ಭೀಮಗೆ |
ಮುಳಿದು ಬರೆ ಕಂಡಾ ವಿರಾಟನು ಜಡಿದವರ ನಿಲಿಸಿ ||
ಒಳಗನಾ ಬಾಣಸಿಗನಳಿದರೆ | ಕೊಲುವಿರೇ ಮಲ್ಲನನು ತಾನಿರ |
ದಳಲಿ ಬಾಳ್ಗಿತ್ತೆರಗಿ ಮಡಿದೊಡದೇವೆವಾಯೆಂದ || ೧೭ ||

ಎಂದು ಬಾಣಸಿಗನನು ಪಾಕದ | ಮುಂದಿರಕೆ ಕಳುಹಿದನು ಭೂವರ |
ಸಿಂಧುಮಿತ್ತಲು ಮತ್ತಮತ್ತಲು ಶಕುನಿಕುರುಪತಿಗೆ ||
ಎಂದನಾ ಪಾಂಡವರಿಗಂದೇ | ಸಂದುದೀರಾರಬ್ದವಿನ್ನವ |
ರಂದವನು ನಾವರಸದಿರ್ಪುದು ಚಂದವಲ್ಲೆಂದ || ೧೮ ||

ನಾರುಬೇರನು ತಿಂದು ಬಹುಕಾಂ | ತಾರದೊಳು ಮೃಗದಂತಿರಿರ್ದರ |
ನಾರಯಲು ನಮಗೇನು ಕಜ್ಜವದಿಂದು ಬಂದೆಮ್ಮ ||
ಧಾರಿಣಿಯ ಬೇಡುವರೆ ಬೇಡಿದೊ | ಡಾರು ಕೊಡುವರು ಬಿಡುಬಿಡೆಂಬಾ |
ಕೌರವನ ನುಡಿಗೇಳಿ ಭೀಷ್ಮ ನೃಪಾಲನಿಂತೆಂದ || ೧೯ ||

ಮಗನೆ ಕೇಳ್ಳೈ ಪಾಂಡವರು ನ | ನ್ನಿಗಪಳಿತರಂಲಂಜಿ ವಿಪಿನ |
ಪ್ರಗತರಾದರದಲ್ಲದೀ ತ್ರಿಭುವನದ ಗಂಡರಿಗೆ ||
ಅಗಿವರೀತೃಣದಿಂದ ಹೀನಕೆ | ಬಗವೆಯವರನು ನೀ ನುಡಿದ ಭಾ |
ಷೆಗೆ ನುಸುಳತರಲವನಿನಗದಿರನಂದನಾ ಭೀಷ್ಮ || ೨೦ ||

ಅವರ ವೀರವನಜ್ಞ ಬಲು ಬೆ | ಟ್ಟವನು ಮಾಡಿಯೆ ನುಡಿವಿರೇ ತ |
ಮ್ಮವರೊಳಾ ಕಲಿ ಶಲ್ಯದ್ರೋಣಾಚಾರ್ಯ ಕೃತವರ್ಮ ||
ರವಿತನುಜ ಭಗದತ್ತ ಭೂರಿ | ಶ್ರವರಿಗಶ್ವತ್ಥಾಮ ಕೃಪ ಭೂ |
ಧವರಿಗೆಣೆಯಹ ನಾಯಕವುಪುವ ಮೆಚ್ಚಿರೇಕೆಂದ || ೨೧ ||

ಮೆಚ್ಚಿವೆಂಬುದು ಮಾತೆ ಕುರುಪತಿ | ಯಿಚ್ಛೆಯನು ನುಡಿವವರು ನಾವ |
ಲ್ಲಚ್ಚುಗವ ಮಾಡದಿರು ಮುನ್ನಾಡಿದ ನುಡಿಗೆ ನೀನು ||
ತುಚ್ಛನೆನಿಸದೆ ಗೂಢ ಚರಿರಂ | ನಿಚ್ಚಯಿಪುದಿರ್ದರವನವರು ವಿ |
ಯಚ್ಚರರೆ ಕಂಡಾಗಳದು ನಿನಗಚ್ಚುಗೆದ್ದುದಲೆ || ೨೨ ||

ಸಿಂಧುಸುತ ಪಲವಂದದಿಂದಿಂ | ತೆಂದು ತಿಳುಪಲು ಬಳಿಕ ಕುರುಪತಿ |
ಯಂದು ಚರನನು ಕಲುಪೆ ಬದರೀವನವು ಮೊದಲಾದ ||

ಸಂದವನಮುಳ್ಳನಿತು ಪುರುಗಳ | ನಂದರಸಿ ಪಲದಿನದ ಮೇಲೈ |
ತಂದರೊಡಯಗೆ ಬಿನ್ನಯಿಸಿದರು ಗೂಢಚರರಂದು || ೧೩ ||

ಕುರುಕುಲಾಂಬರ ಭಾನು ನಿನ್ನಹಿ | ತರನದೆಲ್ಲಿಯು ಕಾಣೆವಗವನ |
ಪುರಗಳೊಳಗೆನಲವರ ಮೊಗವನು ನೋಡಿ ನಸುನಗುತ ||
ಪುರಗಳೊಳಗೆ ವಿಶೇಷ ವಾರ್ತಾಂ | ತರಗಳುಳ್ಳೊಡೆ ಪೇಳಿಮೆನೆ ಬಿ |
ತ್ತರಿಸಿದನು ಮತ್ತವರೊಳೋರ್ವನು ಪತಿಗೆ ಕೈಮುಗಿದು || ೧೪ ||

ದೇವ ಬಿನ್ನಹ ಮತ್ಸ್ಯರಾಯನ | ಠಾವಿನಲಿ ಬಾಣಸಿಗನೋರ್ವನ |
ತೀವ ಸತ್ತ್ವದ ಮಲ್ಲನನು ಕಡುಕಾದಿಕೊಲೆ ಕಂಡು ||
ಆ ವಿಭವ ಮೈದುನನು ಕೀಚಕ | ನೋವಡಿಸಿಗೊಂಡಪ್ಪಳಿಸಿ ನಿ |
ರ್ಜೀವವಾದನು ಕೈದುವಿಡಿಯದ ಪಾಚಿಕನ ಕೈಯ || ೧೫ ||

ಕೇಳಿದಿರೆ ಭೀಷ್ಮಾದಿ ಧಾತ್ರೀ | ಪಾಲರೀವಾರ್ತೆಯನು ಕೀಚಕ |
ನಾಳುತನವನು ನೋಡುವೊಡೆ ಮೃಡನಧಟಿಗಲಗಣನು ||
ನಾಳೆಯರಿವುದನಿಂದೆ ನಿಮಗಾಂ | ಪೇಳುವೆನು ಕೊಂದಾತನಾರೆನೆ |
ಗಾಳಿಯಾತ್ಮಜನಹುದು ಪೆರರಿಲ್ಲೆಂದನಾ ಭೂಪ || ೧೬ ||

ವಿತತ ಶಾಸ್ತ್ರ ವಿವೇಕ ವಿದ್ಯಾ | ಚತುರ ನೀನನುಮಾನವಿದು ನಿ |
ಶ್ಚಿತವಹುದು ತಪ್ಪಲ್ಲೆನುತ ಕೆಲ ಕೆಲರು ಕೊಂಡಾಡಿ ||
ಕ್ಷಿತಿಪನಾ ಮಂತ್ರಿಗಳ ಕರೆದೀ | ಪ್ಸಿತದ ಕಾರ್ಯವ ಕೇಳೆತದ್ಘೂ |
ಪತಿಗಳನು ಕಾಣ್ಬಂದವಿಂತೆಂದನು ಸುಶರ್ಮಾಖ್ಯ || ೧೭ ||

ತುರುವ ಹಿಡಿದ ವಿರಾಟನಗರಿಯ | ಹೊರವಳಯದಲಿ ಪಾಂಡವರು ತಾ |
ವರಿದು ಸೈರಿಪರಲ್ಲದಿರಿತಕೆ ಬಾರದಿರರಾಗ ||
ಅರಿದು ಮೇಲಣುಪಾಯವನು ನ | ಮ್ಮುರುವ ಪರಿಯಲಿ ಮಾಳ್ಪವೆನೆ ನ |
ನ್ನೆಡೆಯ ಮೆಚ್ಚಿಸು ಶರ್ಮನುಕ್ತಿಯನಾಗ ಕೈಕೊಂಡ || ೧೮ ||

ವರಸುಶರ್ಮಕಮಾತ್ರಿಗರ್ತೋ | ವರೆಯರಸನಿವರೀರ್ವರೊಡನಾ |
ನೆರೆದ ನಾಯಕನಿಕರ ಬಹು ಪರಿವಾರವನು ಕೂಡಿ ||
ಕುರುನೃಪತಿ ಕಳುಹಿಸಲು ಬೇರೀ | ವಿರುತಿ ದಸದಿಸೆಯಡರೆ ನಡೆತಂ |
ದರು ವಿರಾಟನ ಪೊಳಲತೆಂಕಣದೆಸೆಗೆ ನಿಲುಕಿದರು || ೧೯ ||

ತುರುವ ಹಿಡಿವರೆನಿಪ್ಪ ಗೋಪರ | ಮೊರೆಯ ಕೇಳ್ದುವಿರಾಟ ನೃಪತ |
ನ್ನುರುವ ಮಗುನುತ್ತರವನಾ ಪುರದೊಳಗೆ ಕಾದಿರಿಸಿ ||

ನೆರೆದ ಗಜಹಯರಥಪದಾತಿಯ | ತುರುಗಳಲಿ ಪೊರಮಟ್ಟನಾ ನಾ |
ಡೆರೆಯ ಪುರವನು ಧರ್ಮನಂದನನಾಥನಿಂತೆಂದ || ೩೦ ||

ಇವರು ನಮ್ಮುಮನರಸ ಬಂದಂ | ದವು ಕಣಾ ಯಿದುನವಗೆ ಹಿಂಗಿದು |
ದವಧಿ ಮುನ್ನವೆ ಮೈಗರೆಯಲೇಕವಗೆಲೇ ಪಾರ್ಥ ||
ತವಕಿಸದೆ ನೀನುತ್ತರನ ಪಿಂ | ದವಿಚಳ ನಿಲ್ಲೆಂದಿರಿಸಿ ಕಲಿ |
ಪವನಸುತ ಸಹ ತಾವು ನಾಲ್ವರು ಪೋಪಸಮಯದಲಿ || ೩೧ ||

ತರುಬಿ ಕಾದಿ ವಿರಾಟನಾಗಳೆ | ಮುರಿದು ಬರುತಿರೆ ಕಂಡು ಮೂವರ |
ನಿರಿಸಿ ಮಾರುತಿಯಾಗಳೋರ್ವನ ಹರಿಗೆ ಗಜೆಗೊಂಡು ||
ತರುವ ಬಿಡು ಫಡ ಹೋಗೆನುತ ತ | ತ್ತಿರಿವ ಸುಭಟರ ಹಣಿದು ಕಡು ಕೈ |
ಮೆರೆದು ಹಿಡಿತಂದಣ್ಣ ಗೊಪ್ಪಿಸಿದನು ಸುಶರ್ಮನನು || ೩೨ ||

ಬಿಡಿಸಿ ಕಳುಹಿದನಾ ಸುಶರ್ಮನ | ನೊಡನೆ ಕರುಣದಿ ಧರ್ಮಜನು ಸಂ |
ಗಡದಿ ತುರುವನು ಬಿಡಿಸಿ ತಮ್ಮನಿಬರು ಸರಾಗದಲಿ ||
ತಡೆಯದಾ ಮತ್ಸ್ಯಾವನಿಪನೊ | ಗ್ಗೊಡೆಯದೈದಿದರಂದು ಪುರವನು |
ಪೊಡೆವ ತಮ್ಮಟ ಭೇರಿಗಳ ಕೋಳಾಹಲಂಗಳಲಿ || ೩೩ ||

ಮರುದಿವಸವೀ ಭೂತಳವು ತಾಂ | ತೆರಪು ನೆರೆಯದೆನೆಪ್ಪವೊಲು ನಾ |
ಲ್ತೆರದ ಬಲಸಹವಾ ತ್ರಿಗರ್ತಾಧೀಶನೈತಂದು ||
ಉರುಬಿದನು ತತ್ಪುರದ ಬಡಗಣ | ತುರುವನಾ ಗೋವರ್ಕಳುರೆ ಬೊ |
ಬ್ಬಿರಿದು ಕವಿದಿದಿರಾಂತು ಸುರಿದರು ಸರಳ ತಂದಲನು || ೩೪ ||

ಕೆಡೆದು ವಹಿತ ಪದಾತಿ ಹಯಗಳು | ಮಡಿದವೊರಗಿದವಾನೆಗಳು ಸುಡು |
ಸುಡಲಿ ಗೋವರ ಕೋಲ ಖುರಪುಟ ಬಹಳವೆಂದರಿದು ||
ಫಡಫಡಿರಿ ತರಿ ಕುರುಗಳನುಸಿಯೆಂ | ದಡಸಿ ನೂರಿಕಿ ತ್ರಿಗರ್ತನೃಪನೊ |
ಗ್ಗೊಡೆಯದಿರಿದರು ಗೋವಳರು ಕಿಗ್ಗಟ್ಟುಗಳ ಕಿತ್ತು || ೩೫ ||

ಅರರೆ ಕಡಿಪಲ್ಲಟಗಳಾದುವು | ಉರುಳಿದರು ಗೋವಳರು ಹಿಡಿದರು |
ತುರುವನಹಿತರು ಕೇಳಿದರು ಮತ್ಸ್ಯಾವನೀಶ್ವರರು ||
ಕುರುಪತಿಯ ದುರ್ಯಶಕೆ ಪೇಸದೆ | ಧರೆಯನೆಳೆದನು ಪಾಂಡವರನಾ |
ತೆರದಿನೆನ್ನನು ಬಗೆದನೇ ಫಡಯೆಂದು ಘರ್ಜಿಸಿದ || ೩೬ ||

ಪುರವ ಪೊರಮಟ್ಟನು ಕುವರನು | ತ್ತರವೆರಸಿ ಚತುರಂಗ ಸೈನ್ಯದ |
ನೆರವಿಯಿಂದಾ ಮತ್ಸ್ಯ ಭೂಪತಿ ಪಿಂತೆ ಪಾಂಡವರು ||

ಇರದೆ ಬಂದಾ ಮರದ ಹೊದರಿನೊ | ಳಿರಿಸಿದಾಯಧಗಳನು ಯಕ್ಷೋ |
ತ್ಕರದ ಕಾಪಿನ ಪೆಂಪಿನವನಾಂತೊದವಿದರು ಕೂಡೆ || ೩೭ ||

ಕರಗಳೋ ನೀಲಾದ್ರಿಗಳ ಹರ | ವರಿಯ ತುರಗವೊ ಶರಧಿವೀಚಿಯೊ |
ಚರಿಪ ದುರ್ಗಾವ್ರಾತವೋ ತೇರುಗಳೊ ಕಾಲಾಳು ||
ನೆರೆದಮಿತ್ತುವಿನಾಳುಗಳೊ ಭೀ | ಕರದ ವಾದ್ಯವೊ ದೆಸೆವೊದರಿದವೊ |
ಪರಿಕಿಸುವೊಡರಿದಾಗಿ ತೋರಿದುದಂದು ಕುರುಸೈನ್ಯ || ೩೮ ||

ಇದು ಮಹಾ ಭೀಕರ ಪತಾಕಿನಿ | ಇದನಿರಿದು ತವಿಸುವನ ತಾಯ್ಪುಸಿ |
ಇದರೊಳಾಂತೋಡಿದೆವೆನಿಪ ಪಳಿಗಿಕ್ಕೆಯಾದವಲ ||
ಕದನವಿದನೇಂ ದ್ರುಪದನೃಪ ತ | ನ್ನೆದೆಯೊಳಗೆ ನಿಜ ಚಾತುರಂಗವ |
ನಿದೆರೆ ನೂಂಕಿದನೇರಿದುದು ನಿಸ್ಸಾಳದಬ್ಬರದಿ || ೩೯ ||

ಹಳಚಿ ಕಾದಿದುದೆರಡು ಬಲ ಕ | ಟ್ಟಳವಿಯಹ ಹಯಗಜ ಪದಾತಿಗ |
ಳಳದವೀರ್ವಲದೊಳಗೆ ಮತ್ತೊಂದಿನಿತು ಬೇಗದಲಿ ||
ಕಳವಳಿಸೆ ಬೆಂಗೊಟ್ಟು ಮತ್ಸ್ಯನ | ಬಲವು ಬರಲುತ್ತರವೆರಸಿ ಬೆಂ |
ಬಳಿಯ ಹಾಯ್ದ ವಿರಾಟ ನೃಪನನು ನೋಡಿ ಪಾಂಡವರು || ೪೦ ||

ಖಡುಗವನು ಯಮಸುತನು ಜಡಿಯಲು | ನಿಡುಗದೆಯನನಿಲಜನು ಗಾಂಡಿವ |
ವಿಡಿದವರ್ಜುನನಾಂತರಾ ಕೊಂತವನು ಮಾದ್ರಿಜರು ||
ಕಡಲು ಕದಡಿತು ಗಾಂಡಿವವ ಜೇ | ವೊಡೆಯೆ ಗಿರಿಸೆಂಡಾದವುರ್ವರೆ |
ನಡುಗಿದುದು ಕುರುಸೈನ್ಯ ತಳವೆಳಗೊಂಬುದೇನರಿದೆ || ೪೧ ||

ಕೆಡೆದುವಹಿತರ ಶಿರವು ಕರಿಗಳು | ಕಡುಗುದುರೆಗಳು ಪಾರ್ಥನಂಬಿನ |
ತೊಡವಳೆಯ ಪೊನಲೊಳೆ ಮುಳುಗಿದುದು ಭೀಮಗದೆಗೊಂಡು ||
ಹೊಡೆದನಾ ರಥನುಚ್ಚು ನೂರಾ | ಗೊಡೆಯ ಕರಿಶಿರದಿಂದ ಮೌಕ್ತಿಕ |
ಪೊಡವಿಗಡಿಯಿಡಲುಕ್ಕು ನಿಂದುದು ಬಳಿಕ ಕುರುಬಲದ || ೪೨ ||

ಪರಿದು ಬಂದೀಕ್ಷಿಸಿ ತ್ರಿಗರ್ತನು | ನೆರೆಯದಿದನಾತನು ಯುಧಿಷ್ಠಿರ |
ನರನವನುಪವಮಾನ ಸುತನವನಿವರು ಮಾದ್ರಿಜರು ||
ಧುರದೊಳಿವರಲ್ಲದೊಡೆ ಸಿಂಹಕೆ | ಕರಿಗಳಳುಕುವೋಲಳಿಕುವುದೆ |
ಕುರುಬಲವು ತಾನೆಂದು ನಿಜಬಲವೆರಸಿ ಬೆಂಗೊಟ್ಟು || ೪೩ ||

ಜವದ ಬಿರುಗಾಳಿಗೆ ತೆರಳ್ದೋ | ಡುವ ಮುಗಿಲವೊಲು ಪಾಂಡುತನುಜರ |
ಬವರಕಳುಕಿ ಸುಯೋಧನನ [ಸೇನೆಯೋಡಿದುದತ್ತ] ||

ಅವರ ಕಡೆವೋಗದವೊಲಾ ಗೋ | ನಿವಹವನು ಮಗುಳಿಸಿ ತರಲು ಬಂ |
ದವು ಭರದಿ ದೊಮ್ಮಳಿಸೆ ಹೆಣಗಣ ಬಣಬೆ ದುಳಿಯುತಲಿ || ೪೪ ||

ತೊರೆದು ಮೊಲೆಯೆಳೆಗಂಧಿಗಳು ಭೋ | ರ್ಗರೆದುವಿನಿವಾಲಿನಲಿ ಮಲೆಯ ಮು |
ನ್ನರುಣಜಲ ವರುಷದಲಿ ತಣಿದಾಯುದ್ಧ ಭೂಮಿಯಲಿ ||
ಸುರಿದ ಪಾಲಿನ ಹೊನಲದೆತ್ತಲು | ಪರಿವುತಿರೆ ಪೊಡೆತಂದರಾ ಭೂ |
ಪರು ವಿರಾಟನ ಪುರಕೆ ತುರುವನು ಭೂಪ ಕೇಳೆಂದ || ೪೫ ||

ಇವರು ಪಾಂಡವರೆಂದರಿದು ಬಂ | ದವರಡಿಗೆ ತಲೆವಾಗಿದನು ಭೂ |
ಧವಯುಧಿಷ್ಠಿರ ರಾಯ ಮೈಗರೆದಿಂತು ನೀವಿಹುದೆ ||
ನವಗೆ ನೀವಭಿವಂದ್ಯರೆಮ್ಮೀ | ಯವನಿ ನಿಮ್ಮದು ನಿಮ್ಮ ಬೆಸಕೆರ |
ಗುವನು ತಾನೆಂದೊಲಿದು ಬಿನ್ನೈಸಿದನು ಮತ್ಸ್ಯನೃಪ || ೪೬ ||

ತರಿಸಿ ತನ್ನಯ ಪಟ್ಟವರ್ಧನ | ಕರಿಯನೇರಿಸಿ ಧರ್ಮಜನನನಿ |
ಬರನು ತಕ್ಕಿಭಚಯದೊಳೇರಿಸಿ ನೆರಪಿ ಗುಡಿಗಟ್ಟಿ ||
ಪುರದೊಳುತ್ಸವ ವೆರಸಿ ವಾದ್ಯದ | ಭರದೊಳಗೆಯಾರತಿನಿವಾಳಿಯ |
ಪರಿಪರಿಯ ಮಂಗಲದಲಿದಿರ್ಗೊಳೆ ಪುರವನೈದಿದರು || ೪೭ ||

ಎಲೆಲೆ ಕೇಳ್ದಿರೆ ಸೊಜಿಗವನೀ | ಚೆಲುವನೆಮ್ಮ ಪುರಾಣ ಭಟ್ಟನು |
ಕಲೆಯೆರೆಯ ಧರ್ಮಜಗಡಾ ಬಾಣಸಿಗ ಭೀಮಗಡ ||
ಲಲೆಯರನಾಡಿಸುವನಟ್ಟುವ | ಕಲಿಧನಂಜಯ ಗಡತುರಗ ಗೋ |
ಕುಲದ ರಕ್ಷಕರಮಳಗಳು ಗಡಮೆಂದರವರವರು || ೪೮ ||

ಅರಮನೆಗಳೈದಿದರು ಮಣಿವಿ | ಷ್ಟರದೊಳಿರಿಸಿ ಯುಧಿಷ್ಠಿರನನನಿ |
ಬರನುಚಿತದೆಡೆಗೊಟ್ಟು ತನ್ನರಸಿಯರ ಕೈಯಿಂದ ||
ತರಸಿ ಯಾರತಿಯೆತ್ತಿಸಿದನಾ | ಹರುಷದಲಿ ಕಾಣಿಕೆಯನಿತ್ತಾ |
ದರವ ಮಾಡಲು ಸುಖದಲಾಸ್ತವನೀಯ ನಿರುತಿರಲು || ೪೯ ||

ವರಶತೇಂದ್ರಾರಾಶಿ ಜಿನಪತಿ | ಚರಣ ಕಮಲಭ್ರಮರ ಸನ್ನಿಭ |
ಸುರಸ ಕವಿ ಜಿನಭಕ್ತ ವಿರಚಿತ ಮಧುರವಾಗ್ಚರಿತ ||
ಪರಮ ನೇಮೀಶ್ವರನ ಪಾವನ | ಚರಿತೆಯೊಳಗೀರೈದನೆಯದಿದು |
ಪರಿಗಣಿಸಲಾರಣ್ಯ ಪರ್ವವು ಪಾಂಡುನಂದನರ || ೫೦ ||

|| ಅಂತು ಅರಣ್ಯ ಸರ್ವಕ್ಕಂ ಸಂಧಿ ೪೧ ಕ್ಕಂ ಮಂಗಲಮಹಾ ||

**ಸಂಧಿ ೪೧**

ಕ್ಷಿತಿವಿದಿತ ಪಾಂಡುಜರು ದ್ವಾರಾ | ವತಿಯ ಪೊಕ್ಕಿರೆ ಕೃಷ್ಣನಾ ಕುರು |
ಪತಿಗೆ ಸಂಧಾನ ಸ್ಥಿತಿಯನಾಡಿಸಿದನೊಲವಿನಲಿ || ಪದ ||

ಕೇಳು ಮಗಧಾಧೀಶ ಧಾನ್ಯನೃ | ಪಾಲವಿಂದಕ ಚಂಡವಾಹನ |
ನಾಲಲಿತಗುಣ ಸಿಂಹ ಘೋಷಾದಿಗಳು ತಂತಮ್ಮ ||
ಶೀಲವತಿ ಕುವರಿಯರ ಕರತಂ | ದಾಳಿಸಿದರಂತಕಸುತಗೆ ಸಂ |
ಮೇಳಗೊಂಡರು ದ್ರುಪದ ತನುಜೆ ಸುಭದ್ರೆಪಾರ್ಥನೊಳು || ೧ ||

ಸಿಂಗವಾಹನ ಖಚರನಾ ಲಲಿ | ತಾಂಗಿಯಗ ತನ್ನನುಜೆಯನು ಭೀ |
ಮಂಗೆ ಸೇರಿಸೆ ನಕುಲಸಹದೇವರಿಗೆ ಸೇರಿದುದು ||
ಸಿಂಗರವ ತಮ್ಮರಸಿಯರು ಸುಖ | ದಿಂಗಡಲೊಳೋಲಾಡುತಿರ್ದರ |
ಭಂಗರೆಂಬುದು ವಿಧಿತಮಾದುದು ಸಕಲಮಹಿಯೊಳಗೆ || ೨ ||

ಸುತ್ತಣಖಿಲ ಧರಿತ್ರಿಯಾಣ್ಮರು | ಮತ್ತಗಜ ಹಯ ರಥಪದಾತಿಯ |
ಮೊತ್ತದಲಿ ಬಂದೋಳಗಿಸುತಿರ್ದರು ವಿರಾಟನೃಪ ||
ಉತ್ತರನು ಮಿಗೆ ಸೇವೆಯನು ಮಾ | ಡುತ್ತಲಿರೆ ಜಿನಪಾದ ಪಂಕಜ |
ಮತ್ತು ಭೃಂಗರು ಪಾಂಡವರು ತತ್ಪುರದೊಳೊಪ್ಪಿದರು || ೩ ||

ಇರಲೊಡನೆ ನಾನಾ ವಿಧದ ಭೀ | ಕರ ಮಹಾ ವಿದ್ಯಾ ಪ್ರಭಾವನು |
ಸುರಪ ವೈಭವನಿಂದ್ರರಥನೆಂಬಾ ವಿಯಚ್ಚರನು ||
ನೆರೆದ ಬಹುಪರಿವಾರ ಸಹವಂ | ಬರದಿನಿಳಿತಂದತಿ ವಿನಯದಿಂ |
ದೆರಗಿ ಪಾಂಡುಜರೊತ್ತಿನಲಿ ಸೇವೆಯನು ಮಾಡುತಿರೆ || ೪ ||

ಬಳಿಕಲಾ ಮತ್ಸ್ಯಾವನೀಶನ | ಕೆಳಯನೊಪ್ಪುವ ಶೂರಪಾಂಡ್ಯನು |
ಲಲನೆಯರ ಸೀಮಂತ ಮಣಿಯಹ ಚಿತ್ರಲೇಖೆಯನು ||
ತಳುಪದರ್ಜುನನೊಳು ವಿವಾಹವ | ಬಲಿದು ತಲೆತೆಲ್ಲಟಿಯೆನುತ ತಾಂ |
ತೊಲಗದಾ ಪಾಂಡವರನೊಲವಿಂ ಸೇವೆಮಾಡುತಿರೆ || ೫ ||

ಚರರಿನರಿದು ಮುರಾಂತಕನು ಹಲ | ಧರನು ಸತ್ಯಕನೆಂಬುವನನುದು |
ಗೊರೆವೆರಸಿ ಕಳುಹಲು ವಿರಾಟಪುರಕ್ಕೆ ನಡೆತಂದು ||

ವರ ಯುಧಿಷ್ಠಿರಗೆರಗಿ ಯತ್ಯಾ | ದರದೊಳುಡುಗೊರೆಗೊಟ್ಟು ನಿಮ್ಮನು |
ಕರೆದು ತರವೇಳ್ದೆನ್ನನಟ್ಟಿದರೆಮ್ಮೊಡೆಯರೆಂದ || ೬ ||

ಎನಲು ಕೇಳ್ದತಿ ಹರಷದಲಿ ತಾಂ | ಮನೆನೆನೆಯೆ ಪುಳಕಗಳು ತನ್ನಯ |
ತನುವಿನಲಿ ದರಹಸಿತ ಕಾಂತಿಯು ಸಭೆಯ ಪಸರಿಸಲು ||
ನನಗಿದೇನುಪಚಾರವೇ ಎಂ | ದನಬರೆಲ್ಲರ ಕುಶಲವಾರ್ತೆಯ |
ನನು ನಯದಿ ಬೆಸಗೊಂಡನಾ ಪಾಂಡವಕುಮಾರನು || ೧೭ ||

ಬಂದ ಮಳೆಗಾಲವನು ಕಲಿದಾಂ | ಬಂದಪೆವು ನಾವೆಂತು ನೇಮಿ ಜಿ |
ನೇಂದುವಂಘ್ರಿಸರೋಜಯುಗವನು ಭಕ್ತಿಭಾವದಲಿ ||
ವಂದಿಸಲೆ ಬೇಹುದುಯೆನುತ ಸಾ | ನಂದದಿಂದುಡುಗೊರೆಯನಿತ್ತಾ |
ಬಂದ ಸತ್ಯಕನನು ಕಳುಹೆ ದ್ವಾರಾವತಿಗೆ ಪೋದ || ೮ ||

ಹರಿಹರಿಗದೆಲ್ಲವನು ವಿಸ್ತರ | ಮರುಪೆ ಕೇಳ್ದರುನಲವಿನಲಿ ತಾ |
ವಿರಲು ಕೊಂತಿಯು ಹಸ್ತಿನಾಪುರದತ್ತ ನಡೆತಂದು ||
ಹರುಷದಲಿ ವಿದುರನನು ಕೂಡ | ಲ್ಲಿರುತಮಿರ್ದತ್ತೊಂದು ದಿನದಲಿ |
ತರಣಿ ತನಯನ ಮನೆಗೆ ಬರೆ ಕಂಡೆರಗಿದನು ಕರ್ಣ || ೯ ||

ಕರವನೊಯ್ಯನೆ ಕೊಟ್ಟು ಅತ್ಯಾ | ದರದೊಳೊಡಗೊಂಡೊಳಗೆ ಪೀಠದೊ |
ಳಿರಿಸಿ ಕೇಳಲೆ ತಾಯೆ ಬಿಜಯಂಗೈದಿರಾಂ ಧನ್ಯ ||
ಪಿರಿದು ಸಂತಸವಾದುದೆನೆ ವಿ | ಸ್ತರದಲೇಕಾಂತದಲರುಪಿದಳು |
ಪಿರಿಯ ಮಗ ನೀನಾಗಬೇಕೆಂದದರ ವಿವರಣೆಯ || ೧೦ ||

ಎನಲು ಕೇಳ್ದಾ ಕರ್ಣನೆರಡೆಂ | ದನು ಜನನಿಜನಕರ ಪರೀಕ್ಷಿಸ |
ಲನುಗೈದು ಭಜನೆಯಲಿ ನಾನಿರುತಿರಲು ತದ್ದೇವಿ ||
ನನಗೆ ಕೊಟ್ಟಳದಂ ಪೊದೆದವಳೆ | ಜನನಿಯೆಂದರಿಯೆಂದೆನಲು ಪೊದ |
ಸೆನಲು ಪೊದಸಿಯದನುರಿವ ಪೀತಾಂಬರವನಾ ಕರ್ಣ || ೧೧ ||

ಚೆಂದಳಿರ ಹೊದರಿನಲಿ ಸುರವಧು | ವೊಂದು ಲೀಲೆಯಲಿರ್ದವೊಲು ತ |
ಪ್ಪೊಂದಿರಲು ತಾಯೆಂದರಿದು ಬಂದೆರಗೆ ಮತ್ತಾಕೆ ||
ಕಂದನನು ಬಿಗಿದಪ್ಪೆ ಕಣುನೀ | ರಿಂದ ಮೊಲೆವಾಲ್ಮುನ್ನೆ ತೊರೆದೊಗೆ |
ಅಂದವನು ಕಂಟಕಿತಮಾದುದು ತಾಯಿ ಮಕ್ಕಳಿಗೆ || ೧೨ ||

ಎಲೆ ಮಗನೆ ನಿನ್ನನುಜರೊಳು ನೀ | ನೊಲಿದು ನಡೆ ಬೆಸಕಯ್ಸಿ ಕೊಳ್ಳೆನೆ |
ತಲೆಯೊಲಹಿನಲಿ ನಿಮ್ಮಡಿಗಲಾ ಮಾತನಾಡಿದಿರಿ ||

ಒಲುಮೆ ನನಗೆಂತಹುದು ನೀವಿದ | ತಿಳಿವುದಾ ಗಾಂಧಾರಿಯಾತ್ಮಜ |
ರೊಲುಮೆ ನಿಮ್ಮಾತ್ಮಜರೊಳುಂಟೇ ತಾಯೆ ಕೇಳೆಂದ || ೧೩ ||

ಮೀರಬಾರದು ತಾಯ ಮಾತನು | ಮಾರುಗೊಂಡನು ನನ್ನ ಕುರುಪತಿ |
ಬೇರೆ ಮತ್ತೊಂದೆಣಿಸೆನಗೆ ನಾ ಗೆಡಗೆ ನಾನಹೆನು ||
ಆರೆನನಿತಕೆ ನಿಮ್ಮಡಿಗಳಿಂ | ನೂರಿ ನುಡಿದುದ ಕೊಂಬೆನೆನೆ ಕಡು |
ನೀರಮಗನನು ನೋಡಿ ನಸುನಗುತೆಂದಳಾ ಕೊಂತಿ || ೧೪ ||

ಆದೊಡೆತ್ತಾನುಂ ಕಲಹ ನಿಮ | ಗಾದೊಡಾತ್ಮಜನಿನ್ನನುಜರೊಡ |
ಕಾದಿರಿಸು ದಿವ್ಯಾಸ್ತ್ರವನು ತೊಡಬೇಡೆನಲು ತಾಯ ||
ಪಾದಪದ್ಮಕ್ಕೆರಗಿ ಜೀಯ ಹ | ಸಾದಯೆಂದೆನೆ ತಾಯಿ ನಾನೆಂ |
ದೋದದಿರು ಮತ್ತಾರ ಕೂಡೆಂದಾಣೆ ಮಾಡಿದಳು || ೧೫ ||

ವಿತತ ರತ್ನಾಭರಣಗಳ ನಿ | ತ್ತುತುಳೆ ಕಳುಹಿಸಿಕೊಂಡು ದ್ವಾರಾ |
ವತಿಗೆ ಪೋದಳತ್ತಲಿತ್ತಲು ತೀರೆ ಮಳೆಗಾಲ ||
ಸುತರು ಪಾಂಡವರಲ್ಲಿರದೆ ಕ್ರಮ | ಗತಿಯಲ್ಯೆದಿದರೊಲ್ದು ದ್ವಾರಾ |
ವತಿಯ ಪೊಗುತರೆ ಹರಿಹರಿಗಳಿದಿರ್ಗೊಂಡರುತ್ಸವದಿ || ೧೬ ||

ಧರೆಗಿದಚ್ಚರಿಯೆನಿಪ ಪುರಸಿಂ | ಗರಿಸಿದುದು ಮುನ್ನವೆ ಗಜಾರೂ |
ಢರು ಬಹಳ ಪರಿವಾರ ಭೂಪಾಲಕ ನಿಕರವೆರಸಿ ||
ಪುರವನೆಯ್ದಿದರೊಲ್ದು ನೇಮೀ | ಶ್ವರ ಪದಾಂಬುಜದಲ್ಲಿ ನೊಸಲನು |
ಪರಿಪಕರಿಸಿ ತತ್ಸಭೆಯೊಳಗೆ ನಲವಿಂದವೆಯ್ದಿದರು || ೧೭ ||

ವರಸಮುದ್ರ ವಿಜಯನೃಪಗೆ ಮ | ತ್ತಿರದೆ ಆಕ್ಷೋಭಸ್ತಿಮಿತ ಸಾ |
ಗರರಿಗಾ ಹಿಮವಂತ ವಿಜಯಾಚಲಗೆ ಧಾರಣೆಗೆ ||
ತರದಿ ಪೂರಣಗಾಭಿನಂದನ | ಗೆರಗಿ ವಸುದೇವಂಗೆ ಅಳಿಯಂ |
ದಿರು ಬಳಿಕ ತಮಗೆರಗಿದ ಪ್ರದ್ಯುಮ್ನಮುಖ್ಯರನು || ೧೮ ||

ಹರುಷದಿಂದನಿಬರನುಮೊಲವಿಂ | ಪರಸಿದರು ಬಿಳ್ಕೊಂಡರಾ ಜಿನ |
ವರರನಬುಜಾಕ್ಷನ ಸದನದಲಿ ಮಜ್ಜನಂಗೈದು ||
ಸುರಸ ಭೋಜನವಾಂತು ಹರ್ಷೋ | ತ್ಕರುಷದಲಿ ಸಂತುಷ್ಟ ಚಿತ್ತರು |
ಮರುದಿವಸವಚ್ಚುತಗೆ ಪಾಂಡು ತಾನೂಜರಿಂತೆಂದು || ೧೯ ||

ಧರೆಯ ಸೋತುದಮೀರಧಿಕ ದಶ | ವರುಷಕವನಿಯನಿಳಿವೆನೆಂದಾ |
ಕುರುಪತಿಯ ನುಡಿಯನು ಬನಂಪೊಕ್ಕಿರ್ದರವ ಬಳಿಕ ||

ವರುಷಮೈಗರೆದಾ ವಿರಾಟನ | ಪುರದೊಳಿರ್ದುದ ಗೋಗ್ರಹಣ ವಿ |
ಸ್ತರವನೆಲ್ಲವ ಧರ್ಮಜನು ಬಿಚ್ಚಲಿಸೆ ಹರಿ ಕೇಳ್ದ || ೧೦ ||

ಸೋದರರದೊಳಾದರವು ಮತ್ತಮ | ನಾದರವು ಬರೆ ಪೂರ್ವಕೃತ ಕ |
ರ್ಮೋದಯವು ತಪ್ಪೇನೆನುತಲತಿ ಚತುರಭಾಷಣನು ||
ಆದ ಕೃಷ್ಣನೆನಿಪ್ಪ ವನಕರೆ | ದೋದಿಸಿದನೆಲ್ಲವನು ಬಳಿಕಾ |
ಮಾಧವನು ಕಳುಹಿಸಲು ಪಲ್ಲಕ್ಕಿಯಲು ಗಮಿಯಿಸಿದ || ೧೧ ||

ಚರಿಸಿ ಹಸ್ತಿನಪುರವ ಪೊಕ್ಕಾ | ಗರಮನೆಯನೈತಂದು ಮೆರೆವವ |
ಸರದವರ ಪಕ್ಕದಲಿ ನಡೆದಾ ಕೌರವನ ಕಂಡು ||
ಕರವ ಮುಗಿದುಚಿತಾಸನದೊಳಿರೆ | ಹರಿಕುಲದ ನೃಪರೊಂದು ಕ್ಷೇಮವ |
ನರಸ ಬೆಸಗೊಂಡೇನು ಬಂದೀ ಹದನ ಹೇಳೆಂದ || ೧೨ ||

ಎಂದೊಡೆಲೆ ಕುರುವಂಶ ವಾರಿಧಿ | ಚಂದ್ರ ಕೇಳೈ ಪಾಂಡವರುಗಳೊ |
ಳಂದು ಜೂಜಿನದೆಸೆಯಿನವನಿಯನೆಳೆದುಕೊಂಡದನು ||
ಇಂದು ಬಿಡು ಪದಿಮೂರು ವರುಷವು | ಸಂದು ಒಡವುಟ್ಟಿದರೊಳೇತಕೆ |
ಕಂದು ನಿಮಗೇಕೆಂದರಿಪಲಟ್ಟಿದನೆಮ್ಮರಸನೆಂದ || ೧೩ ||

ಮರುಳು ನೀನೆಲೆ ಕೃಷ್ಣ ಕೌಂತೇ | ಯರೊಳು ಮಧುಸೂದನಗೆ ಮೋಹವು |
ಉರಿದು ತಾನದರಿಂದ ಕಳುಹಲು ಬಂದು ನೀನೆಂದೈ ||
ಕುರುಪತಿಯ ಕೈವೊಕ್ಕ ಭೂಮಿಯು | ಕರಿಪತಿಯ ಕೈವೊಕ್ಕ ಕಬ್ಬದು |
ಮರಳಬಹುದೇ ನರರಿಗೆಂದನು ಹೊಗೆಮೊಗದ ಭೂಪ || ೧೪ ||

ಸಸಿನ ಕೇಳೈ ವೀರಭೋಜ್ಯಾ | ವಸುಧೆಯೆಂಬುದನರಿಯೆ ಗಡನೆಲ |
ಬಿಸುಡಲಡವಿಯ ಹೋಗದಿರಿಗಿನ್ನರಸುತನವುಂಟೆ ||
ಒಸೆದು ಕೊಡುವವನಲ್ಲ ನನ್ನನು | ಗಸಣಿಗೊಳಿಸಲು ಚಾತುರಂಗ |
ಪ್ರಸರ ತಮ್ಮಗಿಲ್ಲೇನನಾಡುವೆ ಕೃಷ್ಣ ಕೇಳೆಂದ || ೧೫ ||

ವೀರಭೋಜ್ಯಾ ವಸುಧೆಯೆಂಬುದಿ | ದಾರ ಕುರಿತದನೆನಗೆ ಹೇಳೆಲೆ |
ಕೌರವೇಶ್ವರ ಬಂಧುಗಳೊಳೀ ವಾಕ್ಯ ಓದುತಿದೆ ||
ಮಾರ ಸಿದ್ಧಾಂತಗಳು ಸವಣರ | ಸೇರುವೆಯೆ ಅಸ್ಥಿರವೆನಿಪ ಸಂ |
ಸಾರದಲಿ ಪಳಿಗಂಜ ಬೇಹುದು ಭೂಪ ಕೇಳೆಂದ || ೧೬ ||

ಆಡಿದರು ಜೂಜನು ಛಲದಿ ಹೋ | ಗಾಡಿದರು ರಾಜ್ಯವನು ಕಾಡನು |
ಕೂಡಿದರು ತಾವೆಂಬ ಪಳಿಯದು ತವಗೊ ಮೇಣೆವಗೊ ||

ಪ್ರೌಢನೀನುಗಡಿತ್ತ ಹೊದ್ದಿಸ | ಬೇಡ ಬಯಲಿಗೆ ಮಿಕ್ಕನುಡಿಗಳ |
ನಾಡಿ ಕೆಡಿಸಲದೇಕೆ ಭೂಮಿಯನೀವೆನಲ್ಲೆಂದ || ೧೭ ||

ಕೇಳೆಲೆ ಕೌರವ ಧರಿತ್ರೀ | ಪಾಲಕನಧಟಕಾರ ಮಾತ್ರ ವಿ |
ಶಾಲರಾಜ್ಯವಿದೇತರದು ಷಟ್ಖಂಡ ಮಹಿಲಲನೆ ||
ಸೂಳೆಯಂದದಿ ಸೊಗಸನೂಡಿಸ | ಮೇಳದಿರುತಿಹಳತ್ತ ಪಲಬರ |
ತೋಳಲೊರಗುವಳ ಸತಿವೊಲವಲೆಂದನಾ ಕೃಷ್ಣ || ೧೮ ||

ಒಲಿದವೋಲಿರುತಿಹಳು ಕಡೆಗಂ | ಣಲಿ ಕರೆವಳತ್ತನ್ಯನನು ತಾಂ |
ಕಲವವಿಕ್ಕುವಳವರ್ಗೆ ಗೆಲಿದವಗೊರ್ಮೆ ಮೋಹಿಪಳು ||
ಪಳಿಗೆ ಪೇಸಳು ಕೂರ್ತ ಕಾಂತನೆ | ಕಲಿದೊಡಾರೊಡವೋದಳಿರದಾ |
ಗಳೆ ಪೆರನನಪ್ಪುವಳಿಳಾವಧುವರಸ ಕೇಳೆಂದ || ೧೯ ||

ಭೂತಳಶ್ರೀ ನಿಟ್ಟೆಯಾದೊಡೆ | ಖ್ಯಾತ ಭರತಾದಿಗಳು ತೊರೆವರೆ |
ನೀತಿವಿದರಿಗಿದೇನುಗಹನವು ದೊರಕಿದದರೊಳಗೆ ||
ಓತು ವರ್ಗತ್ರಯವನೆರಪಿ ವಿ | ನೂತಕೀರ್ತಿಯಗಳಿಸಿ ಬಂದು |
ಪ್ರೀತಿಪರನಹನವನೆ ಜಾಣನು ಭೂಪ ಕೇಳೆಂದ || ೨೦ ||

ಅಹುದು ಕೃಷ್ಣನ ಮಾತು ನಮಗೀ | ಮಹಿಯಿದೇತಕೆ ದೀಕ್ಷೆಯನುಕೊಳ |
ಬಹುದು ತಪ್ಪೇನಾದೊಡೆಂದು ವಿರಕ್ತಿ ಕಾರಣವು ||
ವಹಿಸಿತಲ್ಲವಗಿಂದು ಸುಡಲೀ | ಮಹಿಯ ಬೇಡಲದೇಕೆ ದೀಕ್ಷಾ |
ರುಹರೆನಿಸಿಯೆಂದವರ ಬೋಧಿಸದಾದೆಯೇಕೆಂದ || ೨೧ ||

ಕೊಳಚೆ ನೀರಲಿ ಮುಳುಗಿದವನಾ | ಜಲಧಿಯೀಸಲು ಬಲ್ಲನೇ ಅವ |
ರಿಳೆಯ ಮೇಗಣ ಲೋಭವಿರುತಿರೆ ದೀಕ್ಷೆ ನಿಮಗೇಕೆ ||
ನಳಿನನಾಭನ ಮೈದುನರು ತ | ಮ್ಮಿಳೆಯ ತಾಂ ಪಡೆಯದೊಡೆ ದೀಕ್ಷೆಯ |
ತಳೆಯದೇವರು ನಾನು ಬೋಧಿಸಲೇಕೆ ಹೇಳೆಂದ || ೨೨ ||

ಪಡೆವುದೆಂತೈ ರಾಜ್ಯವನು ಕೇ | ಳ್ಬಡವ ಕಂಡನಿಧಾನವೇ ಅದು |
ಪೆಡೆಯ ಮಣಿ ಅಂತಕನ ಕೊಂತವು ಭೈರವನದಾಡೆ ||
ಮದನ ಕೈಯ ತ್ರಿಶೂಲ ವಿವುಕೋ | ಕೊಳದೆಯ ಬಲ್ಲವೆ ಕೆಲಬರಿಂ ಬಲು |
ನುಡಿಗಳೆಮ್ಮೊಳಿವೇಕೆನುತ ಗರ್ಜಿಸಿದನಾ ಭೂಪ || ೨೩ ||

ಆದೊಡಾ ನೀನೊಂದನಾಡುವೆ | ಮೇದಿನೀಶ್ವರ ಕೇಳು ಬಲುಮೆಯ |
ನೋಡೆ ನಿನ್ನನುಜರಿಗೆ ನಿನ್ನಿಳೆಯರ್ಧವನು ಕೊಟ್ಟು ||

ಆದರಿಸಿದೊಡೆ ಕುಂದೆ ಅವಧಿಯು | ಪೋದುದವರಿಳೆಯವರಿಗಿತ್ತು ಸ |
ಹೋದರರ ತಲೆರನ್ನವೆನಿಸಿದು ರಾಜಗುಣವೆಂದ || ೩೪ ||

ಒಂದು ನಯದಿಂ ಬಂಧು ಜನದೊಳು | ಕಂದು ಬಾರದೆ ಬಿಡದು ಬಂದೊಡೆ |
ಬೆಂದರಜ್ಜುವೊಲಿರಿಸಿ ಕೊಂಬುದದುತ್ತಮರಗುಣವು ||
ಇಂದು ಸಂಧಾನಕ್ಕೆ ಬಲಗೋ | ವಿಂದರಾಡಿಸಿದಲ್ಲಿ ಕೇಳ್ದಡೆ |
ಕಂದದಿಹುದೈ ನಿನ್ನ ಕೀರ್ತಿಯ ಮುದ್ದು ಮೊಗವೆಂದನ || ೩೫ ||

ಸಾಕು ನಿಲ್ಲೈ ಕಿವಿಗೆಡಿಸದಿರ | ದೇಕೆ ಕೀರ್ತಿಯ ಮುಸುಡು ಕಂದುವು |
ದಾಕೆವಾಳರು ನೀವು ತಾವೆಂದಂತೆ ಕೇಳದೊಡೆ ||
ಜೋಕೆಗೆಡುವುದೆ ತನ್ನ ಸೇನಾ | ನೀಕ ಬಡವೇ ಕಾಡಹೊಕ್ಕ ವಿ |
ವೇಕಿಗಳಿಗಾರಿಳೆಯ ನೀವರು ಹುಚ್ಚು ಹೋಗೆಂದ || ೩೬ ||

ಮಗನೆ ಕೃಷ್ಣನಮಾತು ಸಜ್ಜನ | ರುಗಳ ಕರ್ಣರಸಾಯನವು ತಾ |
ನೊಗಡಿಕೆಯಲಾ ದುರ್ವಿವೇಕ ಮಹಾಜ್ವರಿತತತಿಗೆ ||
ಖಗಪತಿಧ್ವಜನುಕ್ತಿಯಿದು ಪ - | ನ್ನಗಪತಾಕನೆ ಮೀರದಿರು ಬಂ - |
ಧುಗಳೊಳೇಕತಿಮಥನವೆಂದನು ಜಡಿದು ಧೃತರಾಷ್ಟ್ರ || ೩೭ ||

ತಂದೆ ಯುಕ್ತಿಯ ಮೀರಸಲ್ಲದು | ಕಂದ ವಿದುರದ್ರೋಣರೊಡನೇ |
ಬಂದ ಕೃಷ್ಣನಕೂಡೆ ಪೋಗಿ ಬಲಾಚ್ಚುತರು ನಾನು ||
ತಂದು ಕೊಡವೆನು ಪಾಂಡವರನವ | ರೆಂದವೋಲಾದರಿಸಿ ಕುರುಕುಲ - |
ಚಂದ್ರ ನಿನಗಿನ್ನಹಿತರಿಲ್ಲೆನಿಸೆಂದನಾ ಭೀಷ್ಮ || ೩೮ ||

ಸುರನುಡಿಯ ಸುತನಾಡಿದುಕ್ತಿಗೆ | ಸರಿಯ ಕಾಣೆನು ಕೌರವೇಶ್ವರ |
ಮುರಿದು ಮನಸಿನ ಚಿಹ್ನಕಾಯ್ದದೆ ಮುಳಿನುಗಿಚ್ಚಿನಲಿ ||
ವರಬಲಾಚ್ಚುತರುತ್ತುಗೈರಿಸೆ | ಇರಿಸೆ ಬಂಧು ಪ್ರಣಯವೆಂಬಾ |
ಭರಣವತಿ ಮೆರೆವುದು ಧರಿತ್ರಿಯೊಳೆಂದನಾ ವಿದುರ || ೩೯ ||

ಮರುಳು ಮಾತುಗಳೇಕೆ ಹರಿಯನು | ಕರೆಸಿ ಬಲನನು ಬರೆಸಿ ಮಿಗೆಕರ |
ಕರಿಸಿ ಬಿಡಿಸುವವಿಳೆಯನೀತಗೆ ಬಾಧೆ ಬೇಡೆಂದು ||
ಹಿರಿಯರೆನಗಿದ ಚಿಂತಿಸುವ ಪರಿ | ಸರದಿಗಾಸರು ಗಿರಿಗೆ ಚಳಿಯಂ |
ಬರ ನಿರಂಬರವೆಂಬವೋಲಾಯ್ತೆಂದನವನೀಶ || ೪೦ ||

ಕುರುಪತಿಯ ಮನದದ್ಧತಿಕೆಯನು | ಧರೆಯ ಮೇಗಣ ಲೋಭವನು ಬಿ |
ತ್ತರದ ತನ್ನತಿರಥಮಹಾರಥ ಸೈನ್ಯಗರ್ವವನು ||

ಪರಮ ಭಾಗ್ಯರ ಪಾಂಡವರ ಹುಲು | ನರರ ಕಂಡವೊಲಿಳಿಸಿಯಾಡುವ |
ಪರಿಯನೆಲ್ಲವನರಿದು ಸೈರಿಸದೆಂದನಾ ಕೃಷ್ಣ || ೪೧ ||

ಕೇಳು ದೃತರಾಷ್ಟ್ರನ ಕುಮಾರಕ | ಹೇಳುವೆನು ಜೂಜಿನ ಬೆಸನದಲಿ |
ಸೂಳೆಗೈತದಲುಳ್ಳದೆಲ್ಲಿಯು ಕಪಟವದುವೊಳಗೆ ||
ಮೇಳಿಸಿದ ಸತ್ಯವನೆ ಪಿಡಿದು | ಕ್ಕಾಳುಗಳು ವಿಪಿನವನು ಹೊಕ್ಕೊಡೆ |
ಜಾಳುಗಳು ನಿಮಗೆಂದು ಬಗೆಯದಿರೆಂದನಾ ಕೃಷ್ಣ || ೪೨ ||

ಬೆರೆಯದಿರು ನಿನಗೀಸು ಸೇನಾ | ಶರಧಿಯುಂಟೆಂದರಸ ಸಬ್ಬರು |
ತುರುವ ಹಿಡಿಯಲು ಹೋಗಿಸಿಂಗವಕಂಡ ಸುಲಭಗಳ ||
ತೆರದಿ ಭೀಮಾರ್ಜುನರ ಕಾಣುತ | ಮುರಿದು ಬಾರದೆ ನಿನ್ನವರು ಕೇಳ್ |
ದರಿಯ ದ್ರುಪದ ಕುಮಾರಿಯನು ಕದ್ದೊಯ್ದ ಖೇಚರನ || ೪೩ ||

ಪುರಮಹೇಂದ್ರಕೆನಾಲ್ವರೇ ಕಡು | ಭರದಿ ನಡೆದವರೊಳಗದೋರ್ವನೆ |
ಮರುತಸುತಗದೆಯಿಂದೆ ವಿದ್ಯಾಪರಿಧಿಯನು ಜರಿದು ||
ಧುರಕಿದಿರ್ಚಿದ ಭಟರನರೆದಾ | ತರುಣಿಯನು ಕರೆತಂದರೆಂದೊಡೆ |
ಧರೆಯರಸುಗಳ ಕೊಳೆತ ಖಿಡ್ಡಿಗೆ ಬಗೆಯರವರೆಂದ || ೪೪ ||

ಅರಸ ಕೇಳೀ ಕೊಡನಮಗನೀ | ತರಣಿ ಸುತನೀ ಸೈಂಭವನುಮೀ |
ಗುರುಜನೀ ಶಲ್ಯನು ನಿಜಾನುಜರಖಿಳಪರಿವಾರ ||
ಇರಲು ನಿನ್ನನು ಕೊಂಡು ಗಗನಕೆ | ಚರನು ಪೋಪಂದೇನ ಮಾಡಿದ |
ರಿರದೆ ಮರಳಿಸಿದಾತನಾರರಿಯೆಂದನಾ ಕೃಷ್ಣ || ೪೫ ||

ಭೀಮಪಾರ್ಥರಿಗಣ್ಣನಾಜ್ಞೆಯ | ಸೀಮೆಯೊಂದೆ ಅಲಂಘನೀಯವು |
ತಾವದರ ದೆಸೆಯಿಂದ ನಿಮಗಳುಕಿದವರಾದರಲೆ ||
ಈ ಮರುಳುತನ ಬೇಡರಸ ಗುಣ | ಧಾಮರವನಯನವರಿಗೊಪ್ಪಿಸು |
ಪ್ರೇಮದಿಂದಾ ಬಂಧುಗಳೊಳಿಹುದೆಂದನಾ ಕೃಷ್ಣ || ೪೬ ||

ಉರಿವ ಕಿಚ್ಚಿನ ಮೇಲೆ ತುಪ್ಪವ | ಸುರಿದವೊಲು ಕೃಷ್ಣನ ನುಡಿಗೆ ಮೈ |
ಮುರಿದು ನೆಲೆದುದು ರೋಷ ಶಿಖಿಖುಡುಗವನು ಝಳಪಿಸುತ ||
ಧುರದೊಳವರೇ ಗಂಡರೆಂದೆಮ | ಗೊರೆದೆಯಲಾ ನೀನೆಂದವೊಲು ಸಂ |
ಗರವೆ ಮಾಡದೆ ಹರಣವಿರ್ದಾಧರೆಯ ಕೊಡೆನೆಂದ || ೪೭ ||

ವಸುಮತೀಶ್ವರ ಮುಳಿಸ ಮನದಲಿ | ಬೆಸದಿರೈ ಮೊಗದೀಕ್ಷೆಯನು ನಾ |
ನುಸುರ್ವವಲ್ಲೆನ್ನ ನುಡಿ ಮದ್ದಿನ ಕಹಿಯತೆರದಿ ||

ಅಸುವಿಗದು ಕಡೆಯಲಿ ಹಿತವು ದು | ರ್ವ್ಯಸನಿಗಳ ಖುಲ್ಲಕದ ನುಡಿಗಳು |
ವಿಷದ ಲಡ್ಡುಗೆಯಂತೆ ಸವಿಯಹುದೆಂದನಾ ಕೃಷ್ಣ || ೪೮ ||

ಮುಳಿಸು ನಿಮ್ಮೊಳು ನಮಗದೇತಕೆ | ಬಳಲಿದೆಯಲಾ ಪೋಗು ನಿನ್ನಯ |
ಪೊಳಲಿಗೆನೆ ಖಡ್ಡಿಯಹಿಡಿದು ಸಾರಿದೆನು ಬೇಡಗಡ ||
ಘಳಿಲನೀಯವರಿಳೆಯನವರಿಗೆ | ಉಳುಹಿಕೊಳು ಕೀರ್ತಿಯನದಲ್ಲದೊ |
ಡುಳಿಯಲೀವುದೆ ಭೀಮಸೇನನ ಭೀಮ ಗದೆಯೆಂದ || ೪೯ ||

ಮಗುಳಿ ಕಳೆನೀನಾಡಿನುಡಿನಗ | ಧರಗೆ ಮಾನ್ಯವು ಪೆರನನಾಲಗೆ |
ಯರಿಯದಿನ್ನೆಗವುಳಿವುದೇಯೆನೆ ಕೃಷ್ಣ ಬೀಳ್ಕೊಂಡು ||
ಸುಗುಣಿ ಕತಿಪಯ ಪಯಣದಲಿ ಪೆಂ | ಪೊಗೆದ ನಿಜಪುರವೈದಿ ಪಾಂಡವ |
ರುಗಳೊಡನೆ ಸುಖವಿರ್ದ ಬಲನಾರಾಯಣರ ಕಂಡ || ೫೦ ||

ತಿಳಿಯ ಬಿನ್ನೈಸಿದನು ಕಾರ್ಯದ | ನೆಲೆಯ ಹದನವನವನು ಕೇಳ್ದಾ |
ಯೆಲರ ಮಗನಣ್ಣನ ಮನವನರಿದೊಂದು ಬವಸೆಯಲಿ ||
ಕಲುಮನದ ಕೌರವನು ಕಾದಿದ | ಬಲಿಯಲಲ್ಲದೆ ಯಮಸುತಗೆ ತಾ |
ನಿಳೆಯ ನೀವವನಲ್ಲ ಸರಸಿಜನೇತ್ರ ಕೇಳೆಂದ || ೫೧ ||

ಎಂದು ಭೀಮನ ನುಡಿಯಲಾಯಮ | ನಂದನನು ಕೇಳಲೆ ವನಜ ಲೋ |
ಚನ ಕುರುಪನರಸಿನ ಮನೆಯಲೆಮ್ಮೆಲ್ಲರನು ಕೊಂದು ||
... ... ... ... ... ... | ... ... ... ... ... ... |
... ... ... ... ... ... || ೫೨ ||

ಅಹುದು ಭೀಮಾರ್ಜುನರ ನುಡಿ ನೀ | ನಹಿತನನು ಬರಿಯಣ್ಣನೆಂದೀ |
ಮಹಿಯ ನೀಗಲು ಬೇಡ ಭೀಮನ ಗದೆ ನರನ ಬಿಲ್ಲು ||
ಮಹಿಯನಾತಂಗಿರಿಸವಾತನ | ಮಹಿಳೆಯ ಕಣ್ಣು ನೀರ ಹೊನಲಲಿ |
ದಹಿಪ ತೋಳ್ಗಿಚ್ಚನು ನದಿಪುದೆಂದನು ಮುರಾಂತಕನು || ೫೩ ||

ಅರಸುಗಳ ಛಲವಾವುದೈ ಪಳಿ | ದರಸನನಾಗದೆ ದೇಹವಿರ್ದೀ |
ಧರೆಯನಹಿತಗೆ ಸೂಜಿಯಗ್ರದ ಮಣ್ಣನಿತ ಕೊಡುವೆ ||
ಹರಣ ಸಂಬಂಧಿಗಳ ಭೂಮಿಗೆ | ಶಿರವನಾಂಪುದು ಛಲವೆಯೆಂದಗ |
ಧರ ನಿರೂಪಿಸೆ ಸಮರ ಸಂವರಣೆಯನು ಮಾಡುತಿರೆ || ೫೪ ||

ಆ ಸಮಯದಲಿ ಧನದನೆನೆ ಧನ | ರಾಶಿ ರತ್ನದ ಪುಂಜ ವಸ್ತುವಿ |
ಳಾಸಗಳ ಕೊಂಡತಿ ಭರದಲುನ್ನತ ಬಹಿತ್ರದಲಿ ||

ಓಸರಿಸದೋರ್ವನು ವಣಿಗ್ವರ | ನಾ ಸಮುದ್ರದೊಳೊದಗಿ ಬಂದಾ |
ವಾಸುದೇವನು ಮೆರೆವ ದ್ವಾರಾವತಿಯ ಕರೆಗಿಳಿದ || ೫೫ ||

ಇದು ವಿಚಾರಿಸೆ ವರುಣಪುರವೋ | ಇದು ಸುರಾಧಿಪನ ಸುರಭಯದಿಂ |
ದುದಧಿಯಲಿ ತಂದಿಟ್ಟ ನಾಕವೊ ಕಣ್ಗೆ ಹೊಸದೆಂದು ||
ವಿದಿತ ನಾನೂರ್ವರು ಸಖರು ಸಹ | ಮುದದಿ ದ್ವಾರಾವತಿಯ ರನ್ನದ |
ಪುದಿದ ಮಾಡಗಳಿಂದ ಶೋಭಿಪ ಕೇರಿಗಳ ಕಂಡ || ೫೬ ||

ಪಲವು ರನ್ನದ ಪಾಸರೆಯ ಬಲು | ನೆಲನು ಪುರವೀದಿಗಳೊಳೆನಲಾ |
ಸುಲಭತೆಯನತಿ ಚೆಲುವಿಕೆಯನೇನೆಂಬೆ ಮನೆಮನೆಯ ||
ನೆಲೆನೆಲೆಯ ಪೊಂಬೆಸದ ಗೋಪುರ | ಗಳೆ ಸಿರಿಯನೀಕ್ಷಿಸುತ ರಾಜಾಂ |
ಗಳದಲಿಹ ಹಸ್ತ್ಯಶ್ವ ಕೋಟಿಯ ಸಂದಣಿಯ ಕಂಡ || ೫೭ ||

ಮಿಸುಪ ನವರತ್ನಮಯ ಸರ್ವಾ | ವಸರ ಮಂಟಪದೊಳಗೆ ಕತ್ತುರಿ |
ಗೆಸರ ಸಾರಣೆ ಪೂವಲಿಯ ಮಣಿಲಂಬನದ ಚೆಲುವಿಂ ||
ಯೆಸೆವ ಪಾಂಡವರಂಭವ ಫಲ | ವಸುಮತೀಶ್ವರರೊಗ್ಗಿನಲಿ ರಾ |
ಜಿಸುವ ಸಿಂಹಾಸನದೊಲೊಪ್ಪಿದ ಕೃಷ್ಣನನು ಕಂಡ || ೫೮ ||

ನೆರೆದ ಭೂಪರ ಮಣಿಸುರಥಗಳು | ಸುರಧನುಗಳೆಡೆಯಾಡುತಿರೆ ಪರಿ |
ಪರಿದು ಪೊಳದಾಡುತಿರೆ ಗಣಿಕೆಯರೆಸಳುಗಣ್ಣೆಳಗು ||
ಸುರ ತರಂಗಿಣಿಯೆಸೆವನಿರಿನಿರಿ | ದೆರೆಮುಸುಕುತಿಹ ನೀಲಮಣಿಗಿರಿ |
ಯಿರವೆನಲು ಚಾಮರಯುಗದ ನಡುವಿರ್ದನಬುಜಾಕ್ಷ || ೫೯ ||

ಸವಿನುಡಿಯ ಕವಿಯುಸುರ್ದರಸಗ | ಬ್ಬವನು ನುಂಚರದಿಂದ ಗಾಯಕ |
ನಿವಹ ಕಿವಿಸವಿಗೊಡತಿರಲು ಕೇಳುತ ವಣಿಗ್ವರನು ||
ವಿವಿಧವಸ್ತುಗಳನು ಪೊರಿಸಿ ಕೊಂ | ಡೆವೆಯಿಡದೆ ನೋಡುತ ಸ್ವಯಂಪ್ರಭ |
ನವನತೋತ್ತಮ ಮಸ್ತಕನು ಕೃಷ್ಣನ ಪೊರೆಗೆ ಬಂದ || ೬೦ ||

ಬಂದ ಕೌಸ್ತುಭರತ್ನನಿದಿರಲಿ | ತಂದು ರತ್ನವ ಸುರಿದು ಬಳಿಕೊಲ |
ವಿಂದೆ ಪೀತಾಂಬರೆಗೆ ದಿವ್ಯಾಂಬರದ ಕಾಣಿಕೆಯು ||
ಎಂದು ಕೊಟ್ಟಡಿಗೆರಗಿ ಮಿಗೆ ನಲ | ವಿಂದಮುಚಿತಾಸನದೊಳಿರ್ದು ಮು |
ಕುಂದನೊಡ್ಡೋಲಗವ ನೋಡಿದನಾ ಸ್ವಯಂಪ್ರಭನು || ೬೧ ||

ಮನದೊಳನುರಾಗಿಸುತ್ತಿರಲಾ | ವನಜನಾಭನು ಪೊನ್ನ ಬಟ್ಟಲ |
ಲನುನಯದಿ ತಾಂಬೂಲವಿತ್ತೆಲ್ಲಿಂದ ಬಂದಿರೆನೆ ||

ಇನಿತು ಕೃಪೆ ನಿಮ್ಮಡಿಗಳತ್ತಣಿ | ನೆನಗೆ ಬಹುದೆಸೆಯತ್ತಣಿಂ ಬಂ |
ದೆನು ನರೇಶ್ವರ ಎಂದು ಬಿನ್ನೈಸಿದನು ವರವಣಿಜ || ೬೧ ||

ನಿನ್ನ ಸೌಭಾಗ್ಯವನು ದೇವರು | ನಿನ್ನ ಚೆಲುವೋಲಗದ ಸೊಬಗನು |
ನಿನ್ನ ಸೌಂದರ್ಯವನು ಈ ದೊರೆಗಳ ಸಮಗ್ರವನು ||
ನಿನ್ನ ಸುತನೀ ಕಾಮದೇವನ | ಚೆನ್ನರೂಪ ವಿಮೋಹನವ ಕಂ |
ಡೆನ್ನ ಜನ್ಮಕೃತಾರ್ಥವಾದುದು ರಾಯ ಕೇಳೆಂದ || ೬೩ ||

ಮೆಚ್ಚಿ ಮನದಲಿ ವೈಶ್ಯಪುತ್ರಂ | ಗಚ್ಚುತನು ನೆಲೆಯಿಲ್ಲೆನಿಪ ಗುಣ |
ಪೆಚ್ಚೆದಾ ರತ್ನವಪಸಾಯವನೀಯೆ ತೇಕೊಂಡು ||
ಅಚ್ಚರಿಯದೆಂದಲ್ಲಿ ಬೀಳ್ಕೊಂ | ಡಿಚ್ಛೆಯಿಂ ಪಲದಿನವದಲ್ಲಿಯೆ |
ತೀರ್ಚೆಮಗುಳಿದನತ್ತ ಮಗಧ ಧರಿತ್ರಿಗಾ ವಣಿಜ || ೬೪ ||

ಮಿಸುನಿಗೊಂಡೆಯ ರನ್ನದೆನೆಗಳ | ಪೊಸತೆನಿಪ ಹುಲಿಮುಖದ ಗೋಪುರ |
ವಿಸರಗಳ ಮಣಿದೋರಣದ ಶಶಿಸೂರ್ಯವೀಥಿಗಳ ||
ಪಸರಗಳ ಸಾರಂಗಡಿಯ ಚೆಲು | ವೆಸೆವ ಸಿರಿಯರಮನೆಯನೀಕ್ಷಿಸು |
ತಸಮವಿಭವದೆ ರಾಜಗೃಹ ಪಟ್ಟಣವನೊಳಪೊಕ್ಕ || ೬೫ ||

|| ಅಂತು ಸಂಧಿ ೪೨ಕ್ಕಂ ಮಂಗಳ ಮಹಾ ||

## ಉದ್ಯೋಗ ಪರ್ವ (ಸಂಧಿ ೪೩)

**ಸಂಧಿ ೪೩**

ದಂಡ ಬಂದಾ ಕುರುಧರೆಯೊಳು ತ್ರಿ | ಖಂಡ ಚಕ್ರಿಯು ಬಿಡಲು ಕೌರವ |
ಮಂಡಲೇಶ್ವರನಾ ಜರಾಸಂಧನನು ಕೂಡಿದನು || ಪದ ||

ಕೇಳು ಮಗಧಾಧೀಶ ದಿವಿಜರ | ಮೇಳದಲಿ ದಿವಜೇಂದ್ರನೆಸೆವೊ |
ಡ್ಡೋಲಗದಲಿಹ ತೆರದಿ ದೇಶಾಧೀಶರೊಗ್ಗಿನಲಿ ||
ಸ್ಥೂಲ ಸಿಂಹಾಸನದೊಲೊಪ್ಪುವ | ಬಾಲಸೂರ್ಯನ ಮಿಗುವ ತನುರಚಿ |
ಜಾಲದಿಹ ಚಕ್ರಿಯನು ಕಂಡೆರಗಿದನು ತದ್ವಣಿಜ || ೧ ||

ಸರಸಿಜಾಂಬಕನಿತ್ತ ರತ್ನವ | ನಿರದೆ ಚಿನ್ನದ ಭಾಜನದಿ ತೆಗೆ |
ದರಸನಿದಿರಲಿ ಬಾಸಣಿಸದಂಬರವನೋಸರಿಸೆ ||

ತರಣಿ ಮೂಡಿದ ತೆರದಿ ಸಭೆಯನು | ವರರತುನ ರುಚಿ ಬೆಳಗುತಿರೆ ದೇ |
ವರಿಗೆ ಕಾಣಿಕೆಯೆಂದು ಕೊಟ್ಟನು ತತ್ಸ್ವಯಂಪ್ರಭನು || ೨ ||

ಎಲೆ ವಣಿಕ್ಪತಿ ಯಾವ ದೀಪಗ | ಳೊಳಗೆ ಗಣಿಸಿದೆ ಈಯಮೂಲ್ಯಾ |
ಮಲಿನ ರತ್ನಮನೆಂದು ಮಾಗಧ ಕೇಳೆ ಪೇಳಿದನು ||
ಜಲಧಿಯಾತ್ರೆಗೆ ಪೋದನತ್ತಾ | ಜಲಧಿಯಲಿವೊಂದ್ಯೆದ ಬಿಲಕೃತ |
ಪೊಳಲು ದ್ವಾರಾವತಿಯಿಹುದು ಭೂಪಾಲ ಕೇಳೆಂದ || ૩ ||

ವರಸಮುದ್ರವಿಜಯ ಮಹಾ ಭೂ | ವರ ಕುಮಾರಕ ನೇಮಿ ಜಿನಪನ |
ಚರಣಸರಸಿಜಯುಗಕೆರಗಿದೆನು ತನ್ನೃಪನ ತಮ್ಮ ||
ಸುರಸವಸುದೇವನ ಕುಮಾರಕ | ಸರಸಿಜಾಂಬಕ ಪಾಂಡವರುಗಳು |
ಬೆರಸಿ ಓಲಗದಿರಲು ಕಂಡೊಡೆ ಕೊಟ್ಟನಿವನೆಂದ || ೪ ||

ಅವರ ದ್ವಾರನ್ನಯವದಾವಧು | ನವಗೆ ಹೇಳೆನೆ ವಿಸ್ತರದಲೆ |
ಲ್ಲವನರುಪಿ ನೇಮೀಶ್ವರನ ಗರ್ಭಾವತರಣದಲಿ ||
ದಿವಿಜಪತಿ ಸುರಿದಮಲರತ್ನಗ | ಳಿವುಮೆನಲು ಕೊಂಡದಲಳಿದಯಾ |
ದವರುಳಿದು ನೀರ್ವೊಕ್ಕುವಾಳ್ದರೆ ಲೇಸು ಲೇಸೆಂದ || ೫ ||

ಘಳಿಲನಾ ದ್ವಾರಾವತಿಯ ನೀ | ರೊಳು ನೆರೆಯಿಸುವೆಯದುಕುಲದ ಬೇ |
ರ್ಗಳನೆ ಕೀಳುವೆನೆಂದು ಕಡುಕೋಪದಲಿ ಖಡುಗವನು ||
ಝಳಪಿಸಲು ಸುಗ್ರಾಮ ಬೇರಿಗ | ಲುಳಿಯಲೆಂದಾ ವೈಶ್ಯಪುತ್ರನ |
ನೊಲಿದು ಕಳುಹಿಸಿದಂಡುನಡದಪೆನೆಂಬ ವೇಳೆಯಲಿ || ೬ ||

ನೆರೆದು ಮಂತ್ರಿಗಳಂದು ಚಕ್ರೇ | ಶ್ವರ ವಿವೇಕಿ ಸುಬಿನ್ನಣವನೀ |
ಧರೆಯರಸುಗಳು ನಿನಗೆ ಮೃಗಗಳು ಮುಳಿದು ಕೇಸರಿಗೆ ||
ಸುರರು ದೇವೇಂದ್ರಂಗೆ ಮಾರ್ಮಲೆ | ದಿರಲು ಬಲ್ಲರೆ ಯಾದವರ ಬಿಡು |
ಶರನಿಧಿಯೊಳಡಗಿದವರಧಟರೆಯೆಂದರೊಲವಿಂದ || ೭ ||

ನೆರೆವ ಕರೆಕೂಟವನು ಕೂಡೆಂ | ಬರಸು ತನವೇ ನಿನಗೆ ಸೇನೆಗೆ |
ಧರಣಿ ನೆರೆಯದು ನಿನ್ನ ಚಕ್ರವೆ ಶತ್ರು ಸಂತತಿಯ ||
ಶಿರವರಿದು ತರದಿಹುದೆಯೆಂದಾ | ನರಪತಿಯ ಕೋಪವನು ತಣಿಯಿಸಿ |
ಇರದೆ ವಾಚಸ್ಪತಿಯೆನಿಪವರ ಮಂತ್ರಿಯಿಂತೆಂದ || ೮ ||

ಯದುನೃಪರು ನಮಗಳುಕಿ ಕಡಲಲಿ | ಪುದಗಿದವರಹುದಾದಡೀಗಳು |
ವಿದಿತ ಪುಣ್ಯದ ಮಹಿಮೆ ಪಿರಿದಾಯ್ತುವರಿಗಿಂತೆನಲು ||

ತ್ರಿದಶಪತಿನತ ನೇಮಿಜಿನಪತಿ | ಯುದಯಸಿಹ ಶಿವದೇವಿಯರ ಸಂ |
ಗದರಿ ಅವ್ಯಾಬಾಧರವರೀ ವೇಳೆಗರಿಯೆಂದ || ೯ ||

ಪಳಧರನು ಶರಭವು ಸಹಸ್ರದ | ಬಲವನುಳ್ಳದ ದೈವಬಲವಾ |
ನಳಿನನಾಭಂಗಧಿಕವಿಂದ್ರನೆ ಪಟ್ಟೆಗಟ್ಟಿಸಿದ ||
ಅಲಘುಭುಜ ಚರಮಾಂಗನಂಗಜ | ಚೆಲುವ ಮಗನಾ ದಾನವಾರಿಗೆ |
ಇಳೆಯೆರೆಯ ಚಿತ್ತೈಸು ಕೃಷ್ಣನು ಬಾಲ ಕಾಲದಲಿ || ೧೦ ||

ಪಲವು ದೇವತೆಗಳುಮನೀಪರಿ | ಯಲಿ ಮುರಾಂತಕ ಕೊಂದನೀಪರಿ |
ಯಲಿ ಫಣಿಯ ಶಯ್ಯಾದಿಯನು ಪಡೆದದುವೆ ಮೊದಲಾದ ||
ಒಲುಮೆಗಳ ನೊರೆದದು ನಿಮಿತ್ತದಿ | ಕಲಹವನು ಕೈಗಾದು ಮಾಡುವ |
ವೆಲೆ ನರಾಧಿಪ ಬಿನ್ನಯಿಸಿದೆನಿದೆನ್ನ ಮತವೆಂದ || ೧೧ ||

ಎಂದ ನುಡಿ ಚಕ್ರಿಯ ಕಿವಿಗೆ ಪೊಗ | ದಂದವನು ಮತಿಸಾಗರನು ತಿಳಿ |
ದೆಂದನಿದು ಮಂತಣವೆಯಾನೆಯನಡುಬಡವೆನೋಡ ||
ದಂದುಗದ ಹುಲು ಹಗೆಗಳಿಗೆ ಮಿಗೆ | ತಂದಿರೇ ಒಲುಮೆಯನು ಸಿಂಗದ |
ಮುಂದೆ ಬಡನರಿಯೊಂದು ಸತ್ವವ ಪೊಗಳಿದಂತೆಂದ || ೧೨ ||

ನಡೆಯನಮ್ಮ ಷಡಂಗ ಬಲವಾ | ಕಡಲ ಹೂಳದೆ ಧೂಳಿಯಿಂದಾ |
ಪೊಡೆಯಲರನಾ ಕೊಟ್ಟೆಯೊಡಯದೆ ಭೇರಿಯುಲಿಯಿಂದ ||
ಇಡಲು ಚಕ್ರದಿ ಮಾಧವನ ತಲೆ | ಕೆಡೆಯದೇ ರಾಯನಪೊಡರ್ಪನು |
ತಡೆಯ ಬಲ್ಲರೆ ದೇವ ದಾನವರೆಂದು ಘರ್ಜಿಸಿದ || ೧೩ ||

ಹಸುಳೆ ದೇವರು ಸುತೆಗೆ ಜೀವಂ | ಜಸೆಗೆ ವೈಧವ್ಯವನೆಸಗಿದನ |
ಬಿಸುರಗುತ ಪಾನದಲಿ ರಣದೇವಿಯರನೀರಡಿಕೆ ||
ನಸಿನವೊಲು ಮಾಡದೊಡೆ ನಿನಗೀ | ವಸುಮತೀಶ್ವರರಾಣ್ಮನೆಂಬುದು |
ಪುಸಿ ಸಮರ ಸನ್ನದ್ಧವಾಗೆಂದಾರ್ಧನಾ ಮಂತ್ರಿ || ೧೪ ||

ಎನೆ ಮದೋದ್ಧತನಾ ಜರಸಂ | ಧನು ಪಿಡಿದು ಮತಿಸಾಗರನ ನುಡಿ |
ಯನು ಬಳಿಕ ಪ್ರಸ್ಥಾನ ಭೇರಿಯ ನಿರದೆ ಪೊಡಯಿಸಲು ||
ದಿನಕರನ ಹಯವೊಂದು ಜೊತ್ತಗೆ | ಯನು ಕಡಿದು ಕೊಂಡೋಡಿ ಹೋಯ್ತಂ |
ದಿನಕತದಿ ಸಪ್ತಾಶ್ವನೆನಿಸಿದನಬುಜ ಬಾಂಧವನು || ೧೫ ||

ಸಿಂಗವಣೆಯಿಂದಿದ್ದನಾ ಕೃಪ | ಪುಂಗವನು ಒಡನೇಳೆ ನೃಪನಿಕ |
ರಂಗಳಂಬರವನು ವಿಭೂಷಣ ಕಾಂತಿ ಪಸರಿಸಲು ||

ತುಂಗ ಭುಜದಲಿ ಜವನ ದಾಡೆಯ | ಭಂಗಿಸುವ ಬಾಳ್ಪೊಡೆಯೆ ಪೊರವ |
ಟ್ಟಂಗಣಿಸೆ ಪದಿನಾರು ಸಾಸಿರ ಮಕುಟಬದ್ಧರಿಗೆ || ೧೬ ||

ಮುಂದೆ ನಡೆಗೊಳೆ ಭದ್ರಗಜವನು | ಮುಂದೆ ರಾಜಾಂಗಣದ ಕರಿಗಳ |
ಸಂದಣಿಯಲಿರೆ ಸಾರ್ವಭೌಮ ಕರೀಂದ್ರಕಂಧರವ ||
ಬಂದಲಂಕರಿಸಿದನು ಬೆಳು ಮುಗಿ | ಲೆಂದೆನಿಪ ಬೆಳ್ಗೊಡೆ ನೆಗೆಯೆ ಜತಿ |
ಯಿಂದೆ ಚಾಮರವಾಡೆ ರಾಜಗೃಹವನು ಪೊರವಟ್ಟ || ೧೭ ||

ನೆಲನು ಕಿರಿದೆನಿಸಿದುದು ಪೆಚ್ಚಿದ | ಬಲದ ಕಾಲಾಟಕ್ಕೆ ವಾದ್ಯದ |
ಲುಳಿಪರಿವೊಡಾ ಸುಘಟತಾನಲ್ಪವೆನಿಸಿಸುದುದು ||
ಇಳೆಯ ಪೊತ್ತಾನೆಗಳು ಮಿಗೆಕು | ಪ್ಪಳಿಸಿದವು ಭಾರಕ್ಕೆ ನೃಪಸಂ |
ಕುಲವೆರಸಿ ಹೊರಬೀಡ ಬಿಟ್ಟನು ಕಲಿಜರಾಸಂಧ || ೧೮ ||

ಬರಸಿದನು ತನ್ನಾ ತ್ರಿಖಂಡದ | ಲಿರುತಲಿಹ ಕುರುರಾಯ ಮೊದಲಾ |
ದರಸುಗಳಿಗುರೆ ರಾಯಸಂಗಳನೀಯಚರರೊದಗೆ ||
ಮರುದಿವಸವಲ್ಲಿರದೆ ಪಾಳೆಯ | ತೆರಳಿ ಪಯಣಕ್ರಮದಿ ನಡೆದುದು |
ಗಿರಿಗಳೌ ಹೆಟ್ಟಾದವಾರಿದವಬುಧಿ ಸಮನದಿಯು || ೧೯ ||

ಕಡಲನವನೀತಳವ ಮಾಡಿತು | ಕುಡಿದು ತೇಗಿತು ಕಾರದೊರೆಯ ಕೆಂ |
ಜೆಡೆ ಮೃಡಂಗಂದಿಂದಲಾದುದು ರವಿಯಗಮನಕ್ಕೆ ||
ತಡೆಯ ಕಟ್ಟಿತು ದಿಗಿಭಗಳನಾ | ಪೊಡವಿಯನು ಹೊತ್ತಾನೆ ಮಾಡಿತು |
ಪಡೆನಡೆಯಲಡಿವುಡಿ ಮಸಗಿ ಮಾಗಧ ನರೇಶ್ವರನ || ೨೦ ||

ನೆಗೆದ ಪಳಯಿಗೆವಿಂಡು ತಾಗಲು | ಮುಗಿಲೊಡೆದು ಮುತ್ತುಗಳು ಸುರಿದವು |
ಹಗಲುತಾರೆಗೆ ಜಯಸಿರಿಯಕಣ್ಬನಿಯವೊಲುತೋರೆ ||
ಹೊಗೆಯೆದಿಗುಮುಖ ಬೀಳೆ ಹಗಲುಳು | ಕುಗಳುಕಾರಳೆ ಕವಿಯೆ ಸುರಧನು |
ಒಗೆಯಲರ್ವಿಸಿ ಧೂಮಕೇತೂದಯವು ಸಮನಿಸಿತು || ೨೧ ||

ಒರೆಯನುಗಿದಾಯುಧವು ಭೂಮಿಗೆ | ಮುರಿದು ಬಿದ್ದುವು ರಕುತಧಾರೆಗ |
ಳೊರತೆ ಗಜತುರಗಗಳ ಕಂಗಳೊಳಾಯ್ತು ಭೂಕಂಪ ||
ನೆರೆದ ಕಾಳಾಯಸನು ಮುತ್ತಾ | ತೆರದು ಕಾಳಪುರುಷನು ದಿಟ್ಟೆಯ |
ತೆರವೆಯಲಿ ಸುಳಿದರು ಬಗೆಯನಾ ಸಮರ ಲಂಪಟರು || ೨೨ ||

ಅಂತಕೋಪಮ ಕೋಟಿಯಸುಭವ | ನಿಂತು ಬಗೆಯದೆ ಚಕ್ರಿರಣಮಿ |
ಚ್ಛಂತಿ ಪಾರ್ಥಿವಯೆಂಬುದನೆ ಪಿಡದೆತ್ತಿ ನಡೆಯಲಿಕೆ ||

ದಂತಿ ಕುಂಭೀರೌಘದಿಂ ಹಯ | ಸಂತತಿಯ ತೆರೆ ಮಾಲೆಯಿಂ ಬಲ |
ವಂತನಾಯಕ ಸುಭಟರತ್ನಾಕರವು ಘೂರ್ಣಿಸಿತು || ೧೩ ||

ಭರದಿ ಕುರುಜಾಂಗಳ ವಿಷಯದಲಿ | ನೆರೆದು ಬಿಟ್ಟುದು ಬೀಡುವತ್ತಲು |
ಕುರುಪತಿಯು ತನ್ನಖಿಲ ನೃಪರೊಂದಿರಲು ಚರರೈದಿ ||
ಇರದೆ ರಾಜಾದೇಶವನು ಕುಡೆ | ಶಿರದೊಳಾಂತದನೋದಿಸಿಯೇ ಕೇ |
ಳ್ದುರು ಭುಜವನೋಡಿದನು ಝಳಪಿಸಿ ತನ್ನ ಖಂಡಯವ || ೧೪ ||

ಮುಗುಳು ನಗೆಯಲಿ ಸೂರ್ಯತನುಜನ | ಮೊಗವ ನೋಡಿ ದ್ರೋಣ ತನಯಾ |
ದಿಗಳನೀಕ್ಷಿಸಿಯಿನ್ನು ನೋಡಲು ಬಹುದು ಪಾಂಡವರ ||
ನಗಧರನು ಮಮಕರಿಸಿ ಕೊಂಡೊಡೆ | ಬಗೆವನೇ ತನ್ನಯ ಕುಲದ ಬೆರ |
ಳುಗಳ ಕೀಳದೆ ಚಕ್ರವರ್ತಿಯು ಕಾ…………………….. || ೧೫ ||

ಎಂದ ಮಾತನು ಕೇಳಿ ಗಂಗಾ | ನಂದನನು ಕೇಳೆಲೆ ಸುಯೋಧನ |
ಚಂದವಲ್ಲಂ ನಿನ್ನ ನುಡಿ ನೆಲನಳುಪಿನಿಂದಕಟ ||
ಬಂಧು ವಧೆಗೆಳಸುವುದೆ ಕಾದುವೆ | ವೆಂದೊಡಪಜಯ ಜಯವದಾರ್ಗಹು |
ದೆಂದು ಬಲ್ಲವರಾರು ನನ್ನಯ ನುಡಿಯ ಕೇಳೆಂದ || ೧೬ ||

ವನಜನಾಭನು ಸೋದರತ್ತೆಯ | … … … … … |
… ವೇತಕೆ ನಿನಗೆ ಚಕ್ರಿಯೊಳಿಷ್ಟ ತಾನೇಕೆ |
ಜನವಿಧಿಯಿ ದೈತ್ಯಾರಿಯಿಂದಾ | ತನು ಮಡಿದನಾ ಚಕ್ರವಾ ಪೆಂ |
ಪಿನ ಸಿರಿಯ ಲಕ್ಷ್ಮೀಧರನವೋಲಾತಗಹುದರಿಯ || ೧೭ ||

ಅದು ನಿಮಿತ್ತದಿ ಪಾಂಡವರಿಗಾ | ಮೊದಲ ನೆಲನನು ಕೊಡುವುದೊಳ್ಳಿತು |
ಅಧಟರವರುಂ [ಕೊಳುವರೈ] ತಮ್ಮಿಳೆಯನಚ್ಚುತನು ||
ಕದನದೊಳು ತಾನವರ ಕಡೆ ನೀ | ನದನರಿತು ಮರುಳಾಗದಿರು ಪೆ |
ಚ್ಚಿದ ಬಲಕ್ಷಯ ಗೈವ ಸಮರೋದ್ಯೋಗವೇಕೆಂದ || ೧೮ ||

ಕೇಳಿದಿರೆ ನಿಮಜ್ಜರುಕ್ತಿಯ | ನೇಳಿದಿಕೆಯನು ನಮಗೆ ಭುಜಬಲ |
ದೇಳಿಗೆಯನಹಿತರಿಗೆ ನಮ್ಮೆಲ್ಲರಿಗಳುಕುದೋರಿ ||
ಹೇಳಬಹುದೇ ನನ್ನ ಮುಂದೆ ನೃ | ಪಾಲ ನೀನಂಜಿದೊಡಿಳಿಯೆ ಕೊ |
ಟ್ಟಾಳು ವೆಸಕೆರಗೆಂದು ಖಡುಗವ ಜಡಿದನಾ ಕರ್ಣ || ೧೯ ||

ಬಿಡುವೆ ಪ್ರಾಣವನಲ್ಲದಿಳೆಯನು | ಬಿಡುವೆನೇಯಿನ್ನೇಕೆ ನುಡಿಯನು |
ಕೆಡಿಸದಿರಿ ಮುತ್ತಯ್ಯ ನೀವೆನೆ ನಾವುಗತಯವರು ||

ಹಿಡಿಯಲಾರೆವು ಬಿಲ್ಲದಿಟ್ಟಗೆ | ಮಡಿದು ಬಿದ್ದೆವೆ ಹುಬ್ಬುಜಗಳದ |
ತೊಡಕು ನಿಮ್ಮದು ಗೆಲುವ ತೆರನರಿದೆಸೆಗೆ ನಿಲ್ಲೆಂದ || ೩೦ ||

ಎಂದ ಗಾಂಗೇಯರ ಚರಣಕೊಲ | ವಿಂದೆರಗಿ ಪ್ರಸ್ಥಾನ ಭೇರಿಯ |
ನಂದು ಪೊಡಯಿಸಿ ವಿವಿಧವೈಭದಿಂದ ಪೊರಮಡಲು ||
ಬಂದದಕ್ಷೋಣಿಯ ಬಲಹ | ನ್ನೊಂದು ಸುರಕರಿಸಮಗಜಂಗಳ |
ಸಂದಣಿಯ ಉಚ್ಚೈವಶ್ರವೋಪಮ ಹಯದ ತಿಂಥಿಣಿಯು || ೩೧ ||

ಅತಿರಥ ಮಹಾರಥರಖಿಳ ಭೂ | ಪತಿಗಳುನ್ನತ ರಥಗಳೊಡನಾ |
ಯತದ ಶಸ್ತ್ರಾಸ್ತ್ರಾದಿ ಸೌರಂಭಗಳ ತೇರುಗಳು ||
ವಿತತ ಧವಲಚ್ಛತ್ರ ಚಾಮರ | ತತಿ ಬಿರುದ ಠಕ್ಕೆಯವು ವಾದ್ಯವು |
ಮಿತವಿದಿಲ್ಲೆನೆ ಬರಲು ಪಯಣಂಗೈದನವನೀಶ || ೩೨ ||

ಶರಧಿಯೊಳು ಪೊಗು ತಂದುದೋ | ಮರು ಶರಧಿಯೆಂದಾ ಚಕ್ರವರ್ತಿಯೆ |
ಬೆರಗುಗೊಳೆ ನಡೆತಂದು ಪೊಕ್ಕುದು ನೆರೆದ ಕಟಕದೊಳು ||
ಕುರು ಪತಿಯ ಬಲಕಟಕವಾ ನೃಪ | ನಿರದೆ ವಿನಿಮಿತನಾಗಿ ಚಕ್ರಿಗೆ |
ಹರುಷದಿಂದುಚಿತಾಸನ ದೊಳಿರ್ದರದನಿಂತೆಂದ || ೩೩ ||

ನೀವು ಭರದಿಂದೆತ್ತಿ ಬರಲೆಂ | ದೇವದಾನವರಡಸಿ ನಿಂದರೊ |
ಗೋವಕಾವನನಟ್ಟಿ ಪಿಡಿತರವೇಳ್ದು ಕಳುಹಿದೊಡೆ ||
ನಾವು ತಂದೊಪ್ಪಿಸೆಲೆಯೆನೆ ಮಗ | ಧಾವನೀಶನು ಮೆಚ್ಚಿಯಿದು ನಿನ |
ಗೇವಿರಿದು ಯೆನುತಿತ್ತನಾ ಕರ್ಪೂರ ವೀಳೆಯವ || ೩೪ ||

ಅನಿತರೊಳಗಾ ಭೀಷ್ಮ ಹರಿವಾ | ಹನ ಜಯದ್ರಥ ಕರ್ಣ ದುಶ್ಶಾ |
ಸನ ಬೃಹದ್ರಥ ಶಲ್ಯ ಭೂರಿಶ್ರವ ಕೃಪಾಚಾರ್ಯ ||
ಕನಕವರ್ಮ ದ್ರೋಣ ಭಗದ | ತ್ತನು ಕೃಪಾಶ್ವತ್ಥಾಮ ಮೊದಲಾ |
ದನಿಬರುಂ ತಂತಮ್ಮ ಸೈನ್ಯ ಸಮೇತವೆರಗಿದರು || ೩೫ ||

ಅವರವರನೌಚಿತ್ಯ ದಾನದಿ | ನವನಿಪತಿಗಳ ದೇವಮನ್ನಿಸಿ |
ತವಕಿಸದೆ ಮರುದಿವಸದಂಡೆತ್ತಿದನು ಮದಜಲಧಿ ||
ಅವನಿಜವುಗೇಳುತಿರೆ ದೆಸೆಗಲು | ಕಿವುಡುಗೊಳುತಿರೆ ಹಯದ ಹೇಸಿತ |
ವಿವಿಧ ವಾದ್ಯದ ಬೊಬ್ಬೆಯಬ್ಬರದೊಂದು ಕೊಬ್ಬಿನಲಿ || ೩೬ ||

ಇತ್ತ ಬಾರೈ ಕುರುನೃಪತಿ ನ | ಮೊತ್ತಿಗೆಂದಾತನನು ಚಕ್ರಿಯುಲಿ |
ಹತ್ತಿರಿಕೆ ಕರಕೊಂಡು ತನ್ನಾತನ ಗಜದ್ವಯದ ||

ಸುತ್ತಲವನೀಶ್ವರನ ವಾಹನ | ವೆತ್ತಲುಂ ಪಸರಿಸಿ ಬರಲು ದಂ |
ಡೆತ್ತಿ ಬಂದಿರೆ ಬೀಡಬಿಟ್ಟನು ಕುರು ಧರಿತ್ರಿಯಲಿ || ೩೭ ||

|| ಅಂತು ಸಂಧಿ ४೩ ಕ್ಕಂ ಮಂಗಲಮಹಾ ||

## ಉದ್ಯೋಗ ಪರ್ವ (ಸಂಧಿ ४४)

**ಸಂಧಿ ४४**

ಶ್ರೀರಮಣನಾ ಪಾಂಡವರು ಸಹ | ನಾರದನ ನುಡಿಗೇಳಿ ರಿಪು ಸಂ |
ಹಾರಿ ದಂಡೆತ್ತಿದನು ಬಿಟ್ಟನು ಕುರುಧರತ್ರಿಯಲಿ || ಪದ ||

ಕೇಳು ಮಾಗಧ ಮಂಡಳೇಶ್ವರ | ಪಾಳೆಯವು ಕುರುಧರೆಯಲಿರೆ ಸ |
ಮ್ಮೇಳದಲಿ ಬಾನಿಂದ ನಾರದ ಬರೆ ಜರಾಸಂಧ ||
ಕಾಲಿಗೆರಗಿರೆ ಹರಸಿಯೆಲೆ ಭೂ | ಪಾಲ ನಿಮ್ಮುಜ್ಜುಗವಿದೇನೆನೆ |
ಪೇಳಿದನು ಕಂಸನ ಹರಿಬವನು ಹಡವೆತಾನೆಂದು || ೧ ||

ಮಸಿಯ ಬಣ್ಣದ ಮೈಯವನ ತನಿ | ಬಿಸಿರಕುತ ಜಲದಿಂದ ಜೀವಂ |
ಜಸೆಯ ಚಿತ್ತದಕೆಸರ ತೊಳೆಯಲು ಬಂದೆನೆಲೆ ಮುನಿಪ ||
ಮಸಗಿ ನಾ ಕೊಲಬರಲು ಕಾವುದೆ | ವಿಷಧಿಯೊಳು ಮೈಗರೆದೊಡದು ತ |
ನ್ನಸುವನಾ ಸಿಡಿಲೆರಗಿದಡೆ ಕೊಡೆತಡೆ ಕಾವುದೇ ಮುನಿಪ || ೨ ||

ಓಡಿ ಬದುಕಿದೊಡರಿಯೆ ಯುದ್ಧವ | ಮಾಡಿದೊಡೆ ಯಾದವರ ಹರಣಕೆ |
ಕೇಡತಾರದೆ ಮಾಣೆ ನಿಮ್ಮಡಿಯೆನ್ನ ತೋಳ್ವಲವ ||
ನೋಡುತಿರೆ ನಭದೊಳಗಿದೆಲ್ಲವ | ನಾಡಿ ಕುರುಭೂತಳಕವರ ನೆರೆ |
ಗೂಡಿ ತಹವೊಲು ಮಾಡಿಯೆಂದನು ಕಲಿಜರಾಸಂಧ || ೩ ||

ಬಡವನೇ ನೀ ಸಾರ್ವಭೌಮನು | ನುಡಿಯಬಹುದಿದನೆನಗೆನುತ ತಾ |
ನೊಡನೆ ಕಳುಹಿಸಿ ಕೊಂಡು ಬಾಂಬಟ್ಟೆಯಲಿ ಪರಿತಂದು ||
ತಡೆಯದಾ ದ್ವಾರಾವತಿಗೆ ಬರೆ | ಪೊಡೆಯಲರನೆದ್ದೆರಗಿ ಮಿಗೆ ತ |
ಕ್ಕಡೆಯೊಲಿರಿಸಿ ಇದೇನು ಬಿಜಯಂಗೈದಿರಿಂತೆಂದ || ४ ||

ಸರಸಿಜೋದ್ಭವಸೂನು ಕನ್ನಿಕೆ | ಯರನು ಕಂಡೆವಗೊಂದಿಸಲು ಬಂ |
ದಿರೊ ಉಸುರಿಮೆನೆ ನಸುನಗುತ ಕಡಲುಡುಗೆಯಾಗಿಹಳ ||

ವರನದೀನೇತ್ರೆಯ ಮಳೆಯ ದು | ರ್ಧರ ಶಿಖರಿಕುಚಯುಗೆಯ ನಾನಿಂ |
ದೊರೆಯ ಮೇಲುದನಾಂತ ಭೂಕನ್ನಿಕೆಯನಬುಜಾಕ್ಷ || ೫ ||

ಬರುತ ಕುರುಭೂಮಿಯಲಿ ಕಂಡೆನು | ದುರುಮುಖದಿ ನಿನಗೊಲಿವವಳನೆನ |
ಲರುಪಿ ಮುನಿಪತಿಯದರಿನೆನೆ ಕೇಳ್ದು ಕಮಲಾಕ್ಷ ||
ನೆರೆದಖಿಳ ಪರಿವಾರ ರಣಪರಿ | ಕರ ನೃಪಾಲಕ ನಿಕರ ಪರಿವೃತ |
ನುರು ಜರಾಸಂಧನು ಮುನಿದು ಬಂದಹನೆ ತಾನೆಂದ || ೬ ||

ಜಲಧಿತಟದಲಿ ನೀವಿಹುದು ತಾಂ | ತಿಳಿದು ಕಂಸನ ಕೊಲೆಯನರಸುವ |
ದಳಲಿ ಬಂದಹನವನ ಗರ್ವದ ನುಡಿಗಳನು ಕೇಳಿ ||
ಘಳಿಲನಲ್ಲಿರದೆದ್ದು ಬಂದೆನು | ತಳುವದಿನ್ನಪ್ಪುದನು ನೀವೀ |
ಗಳೆ ನೆಗಲಿ ಕಳನೇರಿ ಕೈಮರದಿರಲು ಬೇಡೆಂದ || ೭ ||

ಎನಲು ಘನಗರ್ಜನೆಯು ಕಿವಿಯಲಿ | ಮೊನಸಿಡಿಭರಿಪುವಂತೆ ಕಣ್ಣೊಳು |
ಜನಿಯಿಸಿತು ಕಡೆಗೆಂಪು ಗಂಟಿಕ್ಕಿದುದು ಕುಡಿವುರ್ವು ||
ತನಿಮಿಡುಕು ತುಟಿಯಲಿ ಕದಪಿನಲಿ | ಸೊನೆ ಬೆವರು ಭುಜದಲಿ ಕುಣಿತವದು |
ತನಗೊದವೆ ನಗಧರನು ತುಂಬಿದ ಸಭೆಯಲಿಂತೆಂದ || ೮ ||

ಒಲಿದು ಬಂದಧಿರಾಜ್ಯಸಿರಿಗೀ | ಬಲದ ಭುಜಕೆ ವಿವಾಹವಾಗಿದೆ |
ಬಲನು ಪಾಂಡುಜರಾದಿಯಾದವನೀಶಸಂಕುಲವು ||
ನಲಿದು ನಿಬ್ಬಣವಾಗಿ ಬಹುದಕೆ | ಬಲಯುತರು ಸಮಕಟ್ಟೆ ಕುರುಭೂ |
ತಳವೆ ಚೆನ್ನ ವಿವಾಹಮಂಟಪವೆಂದನಬುಜಾಕ್ಷ || ೯ ||

ಗಿರಿಯನುಂಗುಟದಿಂದ ಮೀಂಟಿಯೆ | ಬೆರಳ ತುದಿಯಲಿಯೇಳು ದಿವಸವು |
ಧರಿಸಿದತುಳಭುಜಂಗೆ ಮಾಗದ ಲೊಡ್ಡಲಾರ್ತಪನೆ ||
ಮುರಮಥನ ಜಯಿಸೆಂದು ಕಲಿಹಲ | ಧರನುಸುರೆ ಪಾಂಡವರು ಮೊದಲಾ |
ದರಸುಗಳು ಘೂರ್ಣಿಸಿತು ವೀರರಸಾರ್ಣವವೊ ಎನಲು || ೧೦ ||

ತಡೆಯದಾ ಪ್ರಸ್ಥಾನ ಭೇರಿಯ | ಪೊಡೆಯಿಸಿದನಾ ಸೀರಪಾಣಿಯು |
ಕಡಲುಬಾಂದೊರೆಯೊಂದುಗೂಡಿತು ಗಿರಿಗಳವು ಚೆಂಡ ||
ಬಡಿದವೊಲು ನೆಗೆದಾಡಿದವು ತಾ | ನೊಡೆದುದಬುಜಭವಾಂಡವದು ಮಿಗೆ |
ನಡುಗಿದರು ನಾಗಾಮರರು ಭೀಳಾರವವು ಬಳಸೆ || ೧೧ ||

ಕಳುಹಿ ನಾರದ ಮುನಿಯ ತಂದೆಯ | ಬಳಿಗೆ ಬಂದೀ ಹದನನೆಲ್ಲವ |
ತಿಳಿಹಿ ಬಲವಸುದೇವಸಹ ಪರಿಯಯ್ಯಲರಮನೆಗೆ ||

ನಳಿನಾಭನು ಪೋಗಿ ನಾರದ | ಗಳಪಿದಂದವನೆಲ್ಲವನು ಬಿ |
ಚ್ಚಳಿಸೆ ಕೇಳ್ದು ಸಮುದ್ರವಿಜಯ ಮಹೀಶನಿಂತೆಂದ || ೧೨ ||

ಸುರಪ ಕಳುಹಲು ಬಂದ ನೈಗದು | ಸುರ ನಿನಗೆ ಪಟ್ಟವನು ಕಟ್ಟುತ |
ಪರಸಿದನು ನೀನೀ ತ್ರಿಖಂಡಾಧೀಶನಾಗೆಂದು ||
ಸುರವಚನ ತಪ್ಪುವುದೆ ಮಗನೇ | ದೊರಕಿತದು ನಿನಗೆಂದು ನಾನಾ |
ಪರಕೆಗೊಡೆ ಕಾಲ್ಗೆರಗಿ ಕಳುಹಿಸಿ ಕೊಂಡನಬುಜಾಕ್ಷ || ೧೩ ||

ಸುರಭವನವನು ಪಳಿವ ರನ್ನದ | ಸಿರಿನಿಳೆಯಲೀ ದೇವ ಕುವರರ |
ನೆರವಿಯೋಗಲದಲ್ಲಿ ಮಣಿವಿಷ್ಟರದೊಲೊಪ್ಪಿರ್ದ ||
ಪರಮನೇಮಿಜಿನೇಂದ್ರ ಸಭೆಯನು | ಹರುಷದಿಂದೊಳಪೊಕ್ಕು ಬಲವಂ |
ದಿರದೆ ಸಾಷ್ಟಾಂಗ ಪ್ರಣಾವಂ ಗೈದನಬುಜಾಕ್ಷ || ೧೪ ||

ಮನದ ಸಂದೆಗ ತೊಲಗಿದುದು ಜಯ | ವನಿತೆ ತನಗಹಳೆಂಬ ನಿಶ್ಚಯ |
ವನು ಜಿನೇಂದ್ರನ ದರುಶದ ಸಾಮರ್ಥ್ಯದಲಿ ತಿಳಿದು ||
ವನಜನಾಭನು ಭುಜವನೊದಿರಿಸಿ | ಅನಿಬರುಂ ಜಿನರ್ಗೆರಗಿ ಬೀಳ್ಕೊಂ |
ಡನುಪಮಿತ ಮುದನಾದನಾ ದೇವಕಿಯ ಸುಕುಮಾರ || ೧೫ ||

ಪರಸಿ ಶಿವದೇವ್ಯಾದಿ ತಾಯ್ಗಳು | ಸುರುಚಿರಾಕ್ಷತೆಗಳನಿಡಲು ತಾಂ |
ಶಿರದೊಳಾಂತುತ್ಸಹದಿ ಮುರರಿಪು ಹಲಧರನು ಸಹಿತ ||
ಕರಿಪತಿಗಳುಮನೇರಿದರಲಂಕ | ಕರಿಸಿ ಮಿಗೆ ನೀಲಾದ್ರಿಗಳ ಮೇ |
ಲಿರಿಸಿದಂಜನಗಿರಿಯೊ ಬೆಳ್ಳಿಯ ಬೆಟ್ಟವೋ ಯೆನಲು || ೧೬ ||

ಎತ್ತಿದವು ಬೆಳಗೊಡೆಗಳೆರಡವು | ಇತ್ತರದ ಪಿಡಿಗಳಲಿ ಚಮರವ |
ನೆತ್ತಿಥಾಳಿಸುವಂಗನೆಯರೊಪ್ಪಿದರು ಮಣಿದೊಡಿಗೆ ||
ಪೆತ್ತ ಕಿರಿಣಗಳಾಗಸವ ಮಿಗೆ | ಚಿತ್ರಿಸಿದುವಾನಕ ನಿನದ ದಿಗು |
ಭಿತ್ತಿಯುಚ್ಚಳಿಸಿದುದು ಕೌತುಕವಾದುದಾ ಪಯಣ || ೧೭ ||

ವರಸಮುದ್ರವಿಜಯ ನೃಪಾಲನು | ನಿರವಿಸಿದೊಡಕ್ಷೋಹ ಮೊದಲಾ |
ದುರು ಪರಾಕ್ರಮಿಗಳು ನಿಜಾನುಜಕೀಳ್ವರಕ್ರೂರ ||
ವರಯುಧಿಷ್ಠಿರ ಮುಖ್ಯರೈವರು | ತರದಿ ಕಂದರ್ಪಾದಿಗಳುದ ಭಾ |
ಸುರ ಮದೋದ್ಧುರ ಸಿಂಧುರ ಸ್ಕಂದದೊಳಗೊಪ್ಪಿದರು || ೧೮ ||

ವರ ಹಿರಣ್ಯಾಕ್ಷೋಗ್ರಸೇನನು | ಸುರಸ ರುಗುಮಿಣದೇವಸೇನನು |
ದೊರೆವಡೆದ ಜಿತಶತ್ರು ಧೃಷ್ಟದ್ಯುಮ್ನ ಧಾನ್ಯನೃಪ ||

ಸ್ಫುರಿತ ವಿಂದ್ಯಕ ಚಂಡವಾಹನ | ವರ ದುರಪದನಾ ಸಿಂಹಘೋಷನು |
ಪರಮತನ ಬಲವೀರ ಪಾಂಡ್ಯಾದಿಗಳು ಸಂದಣಿಸಿ || ೧೯ ||

ಸಿಂಧು ಕಾಂಭೋಜೀ ಭವಂಗಳ | ನೊಂದಿದಶ್ವಂಗಳನಡರಿದರು |
ಬಂದು ಸುಮುಖ ಜಯದ್ರಥ ಧೃಡರಥ ವಿರಾಟನೃಪ ||
ಸಂದವುತ್ತರ ನಮಿ ಮಹಾರಥ | ಗಂಧರಥ ಮೇಘರಥ ಶಕ್ತಿಮು |
ಖೇಂದುಹಾಸ ಪ್ರಮುಖ ಭೂಭುಜರಡರಿದರು ರಥವ || ೨೦ ||

ಕಾಳಡಂಬರ ವಜ್ರದಾಡ ವಿ | ಶಾಲ ಜಂಬುಕುಮಾರ ಸಿಂಹ |
ಜ್ವಾಲ ನುದ್ಧತನಶನಿವೇಗನು ಸಿಂಹನಾದಕನು ||
ವ್ಯಾಳ ಸಿಂಹಗ್ರೀವ ಸಿಂಹಾ | ಭೀಳಕೇತು ಸದಿಂದ್ರರಥ ಮು |
ಖ್ಯಾಳಿ ವಿದ್ಯಾಧರನು ರತ್ನ ವಿಮಾನ ವೇರಿದರು || ೨೧ ||

ವಸುಧೆಯಲ್ಲವು ರಾಜಪುತ್ರ | ಪ್ರಸರಮಯವಾಗಸಮನಿತುವ |
ರ್ವಿಸುವ ಖೇಚರ ಸೈನ್ಯಮಯವಾಗಿವೆ ನಡೆವುತಿರಲು ||
ಸಸಿಯದನು ಕುಲಾನಿಲನು ಕಂ | ಪೆಸೆದ ತೀಡಲು ಧ್ವಜಪಟಹ ನ |
ರ್ತಿಸುವ ಜಯಮೇಯೆಸೆವ ಹಸ್ತಗಳಂತೆ ತೋರಿದವು || ೨೨ ||

ಬಿಸಿಲನುರೆ ನುಂಗಿದವು ಸತಿಗೇ | ವಸರಗಳು ಮಣದೊಡಿಗೆಗಳ ಕೆಂ |
ಬಿಸಿಲು ಬೆಳಗಿದುದೇಳ್ದ ರಜವೆದೆಗುಡದೆ ಕೀಲಿಸಲು ||
ಪಸರಿಸಿದ ಗಜಕರ್ಣ ವಾತವೆ | ದೆಸೆದೆಸೆಗೆ ನೂಂಕಿದುದು ಹೊಗರ |
ರ್ವಿಸುವ ಹೊಸಮಸೆಯಾಯುಧದ್ಯುತಿಕೊರ್ವಿ ಪರ್ವಿದುದು || ೨೩ ||

ತೊರೆ ಬಯಲ ತೊರೆಯಾಯ್ತು ವನಗಳು | ಮುರಿದು ಬೆಳುವೊಲನಾಯ್ತು ಗಿರಿಗಳು |
ಗರಿವಡೆದು ಹಾರಿದವೊಯೆನೆ ಬಕ್ಕಂ ಬಯಲದಾಗೆ ||
ತೆರೆದ ಸೈನ್ಯದ ಭಾರಕೊಂದೆಸೆ | ಗುರುಗುತಿರೆ ಭೂತಳವು ಯಾದವ |
ರೆರೆಯ ಪಯಣಶ್ರಮದಲೈದಿದನಾ ಕುರುಕ್ಷಿತಿಯ || ೨೪ ||

ಬಂದು ಚಕ್ರಿಯ ಬೀಡು ತಮಗಿ | ನ್ನೊಂದು ಯೋಜನವೆಂಬ ಪವಣಿನೊ |
ಳೊಂದು ತೆರೆಪಾದೆಡೆಯೊಳಗೆ ಬಿಡಸಿದನು ಕಟಕವನು ||
ಅಂದು ಪೊಡೆವ ಬಳಾನಕ ಧ್ವನಿ | ಮಂದಿಯಲಿ ಕಡಲೇಳು ತಮ್ಮೊಳ |
ಗೊಂದಿ ಮಾತಾಡಿದವೊಯೆನೆ ತೀವಿತು ದಿಗಂತವನು || ೨೫ ||

ಬಂದನಾಗಳು ಖಚರನೋರ್ವನು | ವಂದಿಸಿದ ಬಲ ವಾಸುದೇವರಿ |
ಗೆಂದನೆಂದನು ಕಾಲಶಂಬರಮುಖ್ಯರಟ್ಟಿದರು ||

ಸಂದ ಚಕ್ರಿಗೆ ನೆರವ ಬಹ ಖಗ | ವೃಂದವನು ವಿಜಯಾರ್ಧದಲಿ ತಡೆ |
ವಂದವನು ಚಿತ್ತೈಸಬೇಕೆಂದೊರೆದನೆಲ್ಲವನು || ೧೬ ||

ಎನಲು ಬಲನಾರಾಯಣರು ಯೋ | ಚನೆಯ ಕೊಂಡರು ಮಂತ್ರಿ ಮುಖದಲಿ |
ಮನವೊಲಿದು ವಸುದೇವ ಶಂಭುಕುಮಾರ ಪ್ರದ್ಯುಮ್ನ ||
ಇನಿಬರನು ವಿಜಯಾರ್ಧದಲಿ ಖಗ | ರನು ಜರಾಸಂಧನಹೊರೆಗೆ ಬರ |
ಲಿನಿಸುಗೊಡದಿರಿರಾಂಪುದೆಂದಟ್ಟಿದನವರನಂದು || ೧೭ ||

ಅತ್ತ ಚಕ್ರಿಯ ಕಟಕ ಬಿಟ್ಟಿರ | ಲಿತ್ತ ಬಲನಾರಾಯಣರ ಭೀ |
ಡೊತ್ತರಿಸಿ ಬಿಟ್ಟಿರಲು ಬಲಪರಿಮಾಣವೆಂತೆನಲು ||
ಪತ್ತಿ ಸೇನೆಯು ಸೈನ್ಯಮುಖ ಗು | ಲ್ಮತ್ತವಾಹಿನಿಯರು ಚಮೂಪುತ |
ನೊತ್ತಮಾನಕಿಯುಂಮೆನಲು ತಾನೆಂಟು ಭೇದವದು || ೧೮ ||

ತುರಗ ಮೂರಾಳೈದು ಕರೆಯೊಂ | ದರದವೊಂದಿರಲು ತ್ರಿಜಗ |
ದ್ಗುರು ನಿರೂಪದ ಪತ್ತಿಯೆನಿಸುವುದದರ ಮೂರು ಮಡಿ ||
ನೆರೆಯೆ ಸೇನೆಯು ಸೇನೆಮೂರ್ಮಡಿ | ನೆರೆಯೆ ಸೇನಾಮುಖವದಂ ಚದು |
ರರೆ ವಲಂ ತ್ರಿಗುಣಿಸಲು ಗುಲ್ಮವೆನಿಪ್ಪ ಪೆಸರೆಂದ || ೧೯ ||

ಅದರ ಮೂರ್ಮಡಿವಾಹಿನಿಯು ಮ | ತ್ತದರ ಮೂರ್ಮಡಿಯದು ಚಮೂಯೆಂ |
ದದರ ಮೂರ್ಮಡಿಯದು ಪೃಥನೆ ತಾನದರ ಮೂರ್ಮಡಿಯು ||
ಒದವಿದಡೆ ಪೆಸರಿಂದ ಸೀತೆಯು | ಮದರ ದಶಗುಣವಾದೊಡದು ಕೋ
ವಿದರು ಪೇಳ್ದಕ್ಷೋಹಿಣಿಯು ಸರ್ವಜ್ಞನಾಗಮದಿ || ೨೦ ||

ಎಂಟು ಇಪ್ಪತ್ತೊಂದು ಸಾವಿರ | ದೆಂಟು ನೂರಿಪ್ಪತ್ತು ಕರಿಯನಿ |
ತುಂಟು ರಥವಾಕೌಶ ಶಶಿರುತು ಬಾಣರುತು ಸಂಖ್ಯೆ ||
ಉಂಟು ಹಯವಾಲಕ್ಷದಿಮ್ಮೈ | ಗೆಂಟು ಒಂಬೈ ಸಾಸಿರದ ಮೇ |
ಗುಂಟು ಮೂನೂರಿಂದಧಿಕವೈವತ್ತು ಕಾಲಾಳು || ೨೧ ||

*(ಟಿಪ್ಪಣಿ : ಒಂದು ಅಕ್ಷೋಹಿಣಿಗೆ ಆನೆಯೆನಿತೆಂದರೆ ೨೧, ೮೭೦ ರಥಮನಿತೆ, ಕುದುರೆಗಳು ೬೫, ೬೧೦).*

ಪೇಳುವಡೆ ತಾನೆರಡು ಲಕ್ಷದ | ಮೇಲೆ ಪದಿನೆಂಟ್ಸಾಸಿರದ ಮುಂ |
ದೇಳುನೂರು ಸಂಖ್ಯೆವೊಂದಕ್ಷೋಹಿಣಿಗೆ ನೋಡೆ ||
ಆಳು ತೇರಾನೆಗಳು ಕುದುರೆಗ | ಳೋಳಿಯೆಲ್ಲವನಿಂತು ಕೂಡಿದೊ |
ಡೇಳಿದವೆ ಜಿನವಚನವಿದು ಭೂಪಾಲ ಕೇಳೆಂದ || ೨೨ ||

*ವಚನ : ಒಂದಕ್ಷೋಹಿಣಿಗೆ ಚತುರಂಗವನೊಂದುಗೂಡಿದ ಲೆಕ್ಕ : ೨, ೧೮, ೭೦೦*

ಈ ಹದದಿ ನಾಲ್ವತ್ತುಮೂರ | ಕ್ಷೋಹಿಣಿಯು ಮಾಗಧಗೆ ಹರಿಗ |
ಕ್ಷೋಹಿಣಿಯದಿಪ್ಪತ್ತಯಿದುಯಿಂತುಭಯ ಬಲದೊಳಗೆ ||
ಮೋಹಿತರುವತ್ತೆಂಟು ನೊಂದ | ಕ್ಷೋಹಿಣಿಯ ಬಲವಿರಲು ನಭದಿಂ |
ದಾ ಹೊಳೆವ ಬೆಳುಮೈಯ ಕಲಹಪ್ರಿಯನಿಳಿದು ತಂದ || ೩೩ ||

ವರಜರಾಸಂಧನು ಸುರೇಂದ್ರನ | ಸಿರಿಯ ಸಿರಿಯೋಲಗದಲಿರೆ ತಾಂ |
ಬರಲುಚಿತ ವಿನಯವನು ಮಾಗಧ ಮಾಡಲೊಡನಿರದೆ ||
ಹರಿಯೆನಾ ಹಲಧರನ ತಂದಪೆ | ನರಸ ಕೇಳೆನೆ ಕೊಳುವ ತಲೆಯನು |
ಕರೆದು ಕೊಡುವಂತಿದಿರ ಬಂದನೆ ಲೇಸು ಲೇಸೆಂದ || ೩೪ ||

ಎಂದು ವಾಚಸ್ಪತಿಯ ಮುಖವ ನ | ರೇಂದ್ರ ನೀಕ್ಷಿಸೆ ದೇವ ಬಿನ್ನಹ |
ಬಂದೆರಗಿದೊಡೆ ಕಾವುದಾಂತಡೆ ಕೊಲವುದರಸುಗುಣ ||
ಬಂದು ಕಂಡೊಡೆ ಕಾಣಲಾ ಗೋ | ವಿಂದನಲ್ಲದೊಡೆಮ ಚಕ್ರದ |
ಮುಂದುಳಿವುದೇ ಹಗೆಯತಲೆ ನರನಾಥ ಕೇಳೆಂದ || ೩೫ ||

ನಿನಗೆ ಮಸಗಿದ ಮಾರಿಗಾಂತಾ | ವನೊ ಬದುಕುವವನೊಮ್ಮೆ ಸಾವನ |
ಕೊನರಿಸುವವರಿವುರುವ ಕಳುಹಿಸುವವನೆ ಕಳುಹೆಂದ ||
ಎನಲಮಿತಿಗತಿಯಮಿತಸಾಗರ | ರನು ವಿವೇಕದ ರಾಯಭಾರಿಗ |
ಳನುಕರಿಸಿ ನುಡಿಗಲಿಸಿ ಕಳುಹಲು ಹೋದರವರಂದೆ || ೩೬ ||

ಹರಿಯ ಬಳಿಗಾರಾಯಭಾರಿಗ | ಳಿರದೆ ಬಂದೆರಗಿದರು ಸಂದವ |
ಸರಿಗರಭಿಮತದಿಂದ ಬಳಿಕುಚಿತಾಸನದಲಿದ್ದು ||
ತರತರದಿ ಕುಳ್ಳಿರ್ದ ಕೌಂತೇ | ಯರ ನಿಖಿಲದೇಶಾಧಿನಾಥರ |
ಸಿರಿಯ ಪಿರಿಯೋಲಗವನೀಕ್ಷಿಸಿ ಮೆಚ್ಚಿದರು ಮನದಿ || ೩೭ ||

ಕರಮೆಸೆಯೆ ಹರನೀಲವರ್ಣದ | ಗಿರಿಯನಾ ಬಿದಿ ಸಮೆದ ಪುತ್ಥಳಿ |
ಇರವೆನಲು ಕಾರ್ಮುಗಿಲ ಮೇಗಣ ದಿವಿಜ ಚಾಪವೆನೆ ||
ನೆರೆದ ಮಣಿಭೂಷಣಕಿರಣ ಬಂ | ಧುರತೆಯಿರೆ ಮಣಿಪೀಠವನಲಂ |
ಕರಿಸಿದಚ್ಚುತನಂದವನು ಪರಿವೀಕ್ಷಿಸಿದರವರು || ೩೮ ||

ವರಯುಧಿಷ್ಠಿರ ರಾಯ ತದನಂ | ತರದಲವರನು ಬಂದ ಕಾರ್ಯಾಂ |
ತರವದೇನೆನೆ ಚಿತ್ತಯಿಸು ನಗಧರನೆ ಬಿನ್ನಹವ ||
ಸರಿಯರಲಿ ಕಾದುವುದು ಜಾಣಧಿ | ಕರೊಳು ಕಾದುವುದೆಗ್ಗತನವದು |
ಕರಿಹಯ ಪಟ್ಟಾಂತರವು ನಿಮಗೆಮ್ಮವಗೆ ಕೇಳೆಂದ || ೩೯ ||

ಸರಣವಕ್ಕರೆ ಕಾವ ನಿಮ್ಮೀ | ರ್ವರನು ಬಲನಾರಾಯಣರಿರಾ |
ಧುರದೊಳಾಂತೊಡೆ ಕೊಲ್ವನಾತನ ಚಕ್ರದುಪಹತಿಯ ||
ಪರಿಹರಿಪೊಡಾ ಭಾಳನೇತ್ರಂ | ಗರಿದು ನಿನ್ನಳಿಸೇನೆ ತಡೆವುದೆ |
ಮರುಳುಗೊಳ್ಳದೆ ಕಂಡು ಬದುಕುವುದೆಮ್ಮ ನರಪತಿಯ || ೪೦ ||

ಬಿಡುಬಿಡಾನೆಯ ಕೊಂದು ಮಲ್ಲರ | ಕೆಡಹಿಮಾವನ ಮಡುಪಿ ಬಂಡಿಯ |
ಕಡಲ ಮರೆಹೊಗೆ ನಿಮಧಟು ನಡೆದುದಲೆ ತಾನಿನ್ನು ||
ನಡೆಯ ಬಲ್ಲುದೆ ಸೂರ್ಯನುದಯಿಸೆ | ಸೊಡರು ಬೆಳಪುದೆ ಮೇಣುವಜ್ರದ |
ಕಡಲೆ ಹಲ್ಲಿಗೆ ಹರಿಯಬಲ್ಲುದೆ ಭೂಪ ಕೇಳೆಂದ || ೪೧ ||

ಎನೆ ತೃಣೀಕೃತ ವಿಶ್ವನೃಪ ಸ | ತ್ತ್ವನು ಮುಕುಂದನು ಬಲನ ನೀಕ್ಷಿಸಿ |
ಕೊನರವತಿ ರೋಷವನು ಹೊಮ್ಮಿಸದೊಳಗೊಳಗೆ ತಡೆದು ||
ಜನಿತ ದರಹಸಿತಾನನನು ತಾ | ನಿನಿಸು ಲಾಲಿಸುತಿರಲವರು ಕೊ |
ರ್ವಿನಲಿ ಪಾಂಡುಜ ಮುಖ್ಯರನು ಕಂಡೇಳಿಸಿದರಿಂತು || ೪೨ ||

ಬಲನಧಿಕ ಬಲನೆಂದೊಡೀ ಕೃಷಿ | ವನು ಕಡುಜೂಜಾಳಿ ಧರ್ಮಜ |
ನೆಲರ ಮಗನೆಲೆ ಭೀಮನರ್ಜುನಕಯಗೆ ಬಳೆಯಿಟ್ಟು ||
ಲಲನೆಯರನಾಡಿಸುವನಟ್ಟುವ | ನಿಳೆಯ ಕರುಗಾಹಿಗಳಮಳುಗಳು |
ಮುಳಿದು ಬಹ ನಮ್ಮಾ ಮಕುಟ ಬದ್ಧರನು ತಡೆವವರೆ || ೪೩ |

ಎಂದು ದ್ರುಪದ ವಿರಾಟ ಕಂಸನ | ತಂದೆ ಮೊದಲಾದರಸುಗಳ ಪಲ |
ವಂದದಲಿರೋಡಾಡಿ ಕೇಳು ಮುಕುಂದ ನಿನಗಿವರು ||
ಬಂದು ಕೂಡಿದರೆಂದು ಗರ್ವವ | ತಂದುಕೊಳ್ಳದಿರೆಮ್ಮೊಡೆಯ ನಿಂ |
ದಂದುಳಿದ ನಿಮ್ಮೂರುಗಳನಾಳ್ದಿರು ಸುಖದೊಳೆಂದ || ೪೪ ||

ವನನಿಧಿಯ ಮರೆಗೊಂಡು ಬದುಕಿದಿ | ರಿನಿತುದಿನ ನಿಮ್ಮನ್ವಯವು ಸಹ |
ಮುನಿದು ಬಂದನು ಚಕ್ರಿಕೊಲಲೆನ್ನಾರು ಕಾವವರು ||
ದಿನಕರನು ದಿಕುಪಾಲಕನು ರು | ದ್ರನು ಸೆಣಸಿದೊಡಮವರುಗಳ ಜೀ |
ವನವನುಳುಹುವನಲ್ಲ ಕಾಣ್ಬುದು ಲೇಸು ಮುರವೈರಿ || ೪೫ ||

ಜಿನಪತಿಯ ಪದಯುಗಕೆ ತ್ರಿಜಗವು | ಜನಪತಿಯ ಚರಣಕ್ಕೆ ಭೂಪರು |
ಜನಿತ ಮುದದಿಂದೆರಗದೊಡೆ ಸುಖದಿಂದ ಬಾಳ್ದಪರೆ ||
ಮನದ ಗರ್ವವ ಬಿಸುಟುಕೇಳಲೆ | ವನಜಲೋಚನ ಕಂಡು ಬದುಕಾ |
ಳ್ದನ ಮದೀಯ ಸ್ವಾಮಿಯೆಂದಂತೆಂದವೆನಲೊಡನೆ || ೪೬ ||

ಇರದೆ ವಸುಪಾಲಕನೆನಿಪ ಭೂ | ವರನವರ ಮಾರ್ಕೊಂಡು ನೀವೀ |
ಪರಿಯಲಾ ಮಾಗಧನ ಬಾಹುಲ್ಯವನೆ ಹೇಳಿದಿರಿ ||
ಕರಿಯ ತೋರದೆ ರಿಂಹವಾರ್ಧಿಯ | ನರಿಯೆ ನೋಳ್ಪಾಗಸ್ತ್ಯನೆನಿರೋ |
ಹರಿಮುಳಿದೊಡಿದಿರಾಂತು ಬಾಳ್ವವನಾರೊ ಲೋಕದಲಿ || ೪೭ ||

ಬಿರುನುಡಿಯು ದೂತರವದನದಲಿ | ಮೆರವುದಲ್ಲದೆ ನಿಮಗದೇತಕೇ |
ಬರಿಯ ಗೃಹ ಗರ್ಜನೆಯಲೇಂ ಫಲ ನಾಳೆ ಕದನದಲಿ ||
ಅರಿಯ ಬಹುದದರಂದವನು ನಿ | ಮ್ಮರೆಯನನು ಕರೆಜಗಳಕೆಂದುಡು |
ಗೊರೆಯನಿತ್ತವರನು ಕಳುಹಿದನು ನಗುತನಗಧರನ || ೪೮ ||

ವರಜರಾಸಂಧನು ನಿಖಿಲ ಭೂ | ವರರೊಳೊಡ್ಡೋಲಗವಿರಲು ಬಂ |
ದೆರಗಿ ದೂತರೆಲೇನರೇಶ್ವರ ಬಿನ್ನಹವು ಜೀಯ ||
ಹರಿಯ ಬಳಿಗಾವೆಯಿದಿ ಕಾರ್ಯಾಂ | ತರವನೆಲ್ಲವನರಿಯ ಪೇಳ್ದೆವು |
ದುರುಳನವ ನಸು ನಿನ್ನ ಚಕ್ರವ ಬಯಸುತದೆಯೆನಲು || ೪೯ ||

ಸಿಡಿಲದನಿ ಗಿವಿವೊಕ್ಕ ಸಿಂಗದ | ಪಡಿಯೆನಲು ಕೆರಳಿದನು ಕೋಪದಿ |
ಪೊಡೆಸಲಾ ಸನ್ನಾಹ ಭೇರಿಯ ಭೀಳನಾದಕ್ಕೆ ||
ಮೃಡನನದ್ರಿಜೆಯಪ್ಪಿದಳು ಎಲೆ | ಮಡಿದರಮರರು ಕಡುಬೆದರಿ ಮದ |
ವುಡುಗಿದವು ದಿಗಿಭಗಳು ತೂರಿದವಂದು ತಾರೆಗಳು || ೫೦ ||

ಅದರ ಭೀಳಧ್ವನಿಯ ಮಿಗೆ ಕೇ | ಳಿದ ಬಲದ್ವಯದೊಳಗೆ ಕಟ್ಟು |
ರ್ಕೊದವಿ ಶಸ್ತ್ರಾಸ್ತ್ರಂಗಳನು ಮಸೆಯಿಸುವ ತಂತಮ್ಮ ||
ಕದನ ಸಾಧನವಾದ ಸಮಕ | ಟ್ಟೊದಗಿಸುವ ಕಡುವೀರಭಟರೊ |
ಪ್ಪಿದರು ಪ್ರಳಯಾಂತಕನ ಪಡೆಯೆನಲರಸ ಕೇಳೆಂದ || ೫೧ ||

ವರಶತೇಂದ್ರ ಪ್ರಣತಜಿನಪದ | ಸರಸಿರುಹರೋಲಂಬ ಲೀಲಾ |
ಸುರಸ ಕವಿ ಸಾಳ್ವರಚಿತ ಮಾಧುರ್ಯಗುಣಭರಿತ ||
ಪರಮನೇಮಿ ಜಿನೇಂದ್ರ ಪಾವನ | ಚರಿತೆಯೊಳು ಹನ್ನೊಂದನೆಯಂದಿದು |
ದೊರೆವಡೆದುದುದ್ಯೋಗಪರ್ವವು ವಿಶ್ವ ವಿಶ್ರುತವು || ೫೨ ||

|| ಅಂತು ಉದ್ಯೋಗಪರ್ವಕ್ಕಂ ಸಂಧಿ ೪೪ ಕ್ಕಂ ಮಂಗಳ ಮಹಾ ||

**ಸಂಧಿ ೪೫**

ಚಕ್ರಪಾಣೀಯು ಶಾರ್ಙ್ಗಪಾಣಿಯು | ವಿಕ್ರಮದ ಪಡೆವೆರಸಿ ಸಂಗರ |
ಚಕ್ರದೊಳು ಬಂದೊಡ್ಡಿನಿಂದರವ್ಯೂಹರಚನೆಯಲಿ || ಪದ ||

ಕೇಳೆಲೇ ಶ್ರೇಣೀಕಧರಿತ್ರೀ | ಪಾಲಕನೆ ಮೈವೆಚ್ಚಿಕುರುಭೂ |
ಪಾಲನಾ ಮಗಧಾವನಿಪನೆನೆ ವೋಲಗಕೆ ಪೋಗಿ ||
ನಾಳೆ ಸಂಗ್ರಾಮದಿಲಿರಿವ ಕೂ | ರಾಳೆನಿಪ ದೊರೆಗಳಿಗ ಕರ್ಪೂರ |
ವೀಳೆಯವನೆರೆಕೊಡಿಸಿ ನಿಜಸಿಬಿರದೊಳಗಿರಲೊಡನ || ೧ ||

ಇನನ ಬರವಿಂಗಾದ ಸಂಧ್ಯಾಂ | ಗನೆಯ ಮೊಗರಾಗದೆ ಹಸರಿಸಿತೊ |
ಯೆನಿಸುದದು ಪಡುಗೆಂಪು ಪುಷ್ಪಿತ ಪದ್ಮಿನಿಯೊಳೊಲಿದ ||
ಅನುನಯದಿ ವಾರುಣಿಯ ಸೋಂಕಿದ | ಮನದ ಕೊಕ್ಕರಿಕೆಯಲಿ ಅಂಬರ |
ವನು ತೊರೆದು ಮೀವಂತೆ ರವಿ ಮುಳುಗಿದನು ಕಡಲೊಳಗೆ || ೨ ||

ಎರಡು ಬಲದೊಳಗಖಿಲಭೂಮೀ | ಶ್ವರರ ಬೀಡೊಳಗಾರತಿಗಳವ |
ಸರದೊಳುಲಿದರು ಪೊಡೆವ ಘಟಿಕಾಭೇರಿಗಳ ಕೂಡೆ ||
ಇರೆ ಮೊಳಗಿದವು ಪಂಚವಾದ್ಯಗ | ಳರದ ಕರಿಹಯವಾಯುಧಂಗಳ |
ನುರು ಭಕುತಿಯಲಿ ಪೂಜಿಸಿದರಾ ವೀರಭಟರಂದು || ೩ ||

ಅರುಣಜಲಧಾರೆಯಲಿ ಕುಂಕುಮ | ವರೆದ ಗಂಧದಿ ಕೆಂಪಿನಕ್ಷತೆ |
ಯುರುತರದ ಪುಂಜದಲಿ ಕೆಚ್ಚನೆಯರಲರಚನೆಯಲಿ ||
ಪರಿಮಲಿಪ ಧೂಪದಲಿ ದೀಪದಿ | ಸುರಿದ ಕೆಂಗೊಳೇಳ್ಗೆಯಿಂ ಕ |
ಪ್ಪುರದ ವೀಳೆಯ ಪರಿಮಲದಿ ಭಟರರ್ಚಿಸಿದರಂದು || ೪ ||

ಅಂತೆಸೆಯೆ ಸಾವಂತ ಮಾ ಸಾ | ವಂತ ಮಂಡಳಿಕರ ಮಕುಟಗಳ |
ನಾಂತವರ ವರದಂಡನಾಥರುನೋಲಗಿಸುತೆಸೆವ ||
ಅಂತಕೋಪಮ ವೀರಭಟರು | ರ್ಕಾಂತು ತಂತಮ್ಮಾಳ್ವಸುಧಾ |
ಕಾಂತರಿಗೆ ತಂತಮ್ಮ ಪೂಣ್ಕೆಯನೊರೆದರುಕ್ಕಿನಲಿ || ೫ ||

ಕೂರಿಸಿದ ಹಿಡಿಯಂಬು ಬೆನ್ನಲಿ | ಪೂರಿಸಿದ ಬತ್ತಳಿಕೆ ಹೊದೆಗಳು |
ಸಾರೆಯಿರಿಸಿದ ಸರಳ ಹೊದೆಗಳು ತೀರುವಿನಮೆಸುವೆ ||

ನಾರಿಹರಿದೊಡೆ ಸುರರಿಗಿತ್ತು | ಭರ್ಾರದಲಿ ಹೊಕ್ಕಿರಿ……..ರಿ |
ವಾರವಾಯೆನೆ ಕಾದುವೆನು ಕೇಳೆಂದನವನೋರ್ವ || ೭ ||

ದೇವ ಬಿನ್ನಪ ನಾಳೆ ಸಮರದೊ | ಳಾವರಿಸಿದೊಡೆ ನೊಸಲ ಕಂಗಳ
ದೇವನಾಂತೊಡಮಿಕ್ಕಡಿಗೆ ಕಡಿದೊಕ್ಕಲಿಕ್ಕುವೆನು |
ಆವನಾಂಪನು ತನ್ನ ಹರಿಗೆಯ | ಡಾವರದ ಸಿಡಿಲಂತೆ ಹಳಚುವೆ |
ನೀವೆ ಭಲ ಯೆನೆ ಫೌಜುಗಲಕುವೆ ನೆಂದನವನೋರ್ವ || ೭ ||

ಆಳು ನನಗೊಡ್ಡಲ್ಲ ಹರಿಗೆಯ | ಗಾಳಿಯಲಿ ತೂರುವೆನು ರಿಪುಶುಂ |
ಡಾಳಗಳ ಭರಿಕಯಗಳನು ಹರಿಗಡಿವೆ ಬಾಳಿನಲಿ ||
ನಾಳೆ ನಿಮ್ಮಡಿ ನೋಡು ನನ್ನಯ | ಕಾಳೆಗವ ನೀನಿತ್ತ ಜೋಳದ |
ಪಾಳಿಯೀತಗೆ ಸಲುವುದೆನಿಸುವೆನೆಂದನವನೋರ್ವ || ೮ ||

ಹೊಡೆದೊಡಹಿತನ ಬಾಳಿನಿಂ ತಲೆ | ಸಿಡಿದು ಮೇಗಡೆ ಪಾರಿ ನಾಕಂ |
ಟಡಿಯನಾ ಮುಂಡದಲಿ ನಡೆದಾಂತರಿಯ ಮುಂದಲೆಯ ||
ಹಿಡಿದು ಕೊರಳನು ಕೊಯ್ದು ವೈರಿಯ | ಪಡೆಯೊಳೇಳೆಂಟಾಳು ಪಡಲಿಡ |
ಅಡುವೆನೆನ್ನಯ ಭಾಷೆಯಿದು ಚಿತ್ತೈಸಿ ಕೇಳೆಂದ || ೯ ||

ಬೆಳೆದ ಬಾಳೆಯ ತೋಟದೊಳು ಕರಿ | ಕಲಭ ಹೊಕ್ಕಂತಾಂತರಾತಿಯ |
ದಳದೊಳಗೆ ಬಾಳ್ಗೊಂಡು ಕಡಿವೆನು ಭಟಸಹಸ್ರವನು ||
ತಿಳಿರಕುತ ದೊರೆಯೊಳಗೆ ಭೂತಂ | ಗಲನು ಮಿಸಿಸದೊಡಸಿಯ ಹೊತ್ತೆನೆ |
ತುಳಿವೆ ನಾಳೆಯೆ ಕಾಣ್ಬದೆಂದು ಸಹಸ್ರಭಟ ನುಡಿದ || ೧೦ ||

ಆಳಪವು ಜನ ಬಳಸಿ ಹಿಡಿವೆನು | ಕೂಳಿಯೊಳಗಣ ಮೀನವೊಲು ಖುರ |
ಧೂಳಿಯಲಿ ರಿಪುವಕ್ತ್ರನಾಸಿಕೆ ಕರ್ಣ ಕುಹರಗಳ ||
ಹೂಳುವೆನು ಕಡುಗುದುರೆಗಳವನು | ತೂಳುವೆನು ತೇರಣವೆ ತಾಂ ರಣ |
ಗೂಳಿಯೆಂದಾ ಫಳಿನನಾಡಿದನಂದು ಭಾಷೆಗಳ || ೧೧ ||

ದ್ವಿಪ ಘಟಾಪೇಟಕಗಳವು ತಾಂ | ವಿಪುಳ ಘಟಗಳು ನೋಡೆ ತನ್ನಾ |
ದ್ವಿಪದ ಭರಿಕೈಲವುಡಿಗೈರಾವತವು ತಾಗಿದೊಡೆ ||
ನೃಪತಿ ಪೆಡಮೆಟ್ಟದೆ ಸೆಣಸಲಾ | ತ್ತಪುದು ಮಿಕ್ಕಾನೆಗಳು ಮೊಗವಿ |
ತ್ತಪವೆ ಊರಾನೆಗಳವೊಲು ಪೆಂಕುಳಿಗೊಳಿಪೆನೆಂದ || ೧೨ ||

ಆದರಿಸದಾನೆಚ್ಚು ಸೆಣಸುವ | ಜೋದರುನ್ನತ ಸಿರಿಗಳನು ಬಿ |
ಜ್ಜಾಧರರವೊಲು ನಭದಲಾಡಿಸುವೆನು ಲವುಡಿಯಿಂದ ||

ಮೋದುವೆನು ಸಿಡಿಲೆರಗಿದಂತೆ ದಿ | ಶಾಧಿಪರ ಕರಿ ಭೇದವೋಡೆ ನಿ |
ಷಾದಿಗಳ ಗಜದೆಲುವ ಚೂರ್ಣಿಪೆನೆಂದನವನೋರ್ವ || ೧೩ ||

ಕಂಗಳವು ಶೂಕರಗಳೆನಗಾ | ಕಂಗಳಿಗೆ ನನ್ನಾನೆಯಾ ಕೇ |
ಸರಿ ನಿಷಾದಿಗಳಕ್ಕೆ ತಾನೇ ನಿಶಾಚರಾಧಿಪನು ||
ಕರುಣಗೆಟ್ಟೆನ್ನಾನೆಗೊಲೆಯನು | ಧುರದೊಳೀಕ್ಷಿಸು ನಿಚ್ಚನೀಂ ಸಾ |
ಸಿರವ ಕೊಡುವುದನೆರೆಯದೆನಿಸುವೆನೆಂದನವನೋರ್ವ || ೧೪ ||

ಉಭಯ ಬಲದೊಳಗಿಂತು ಭೂಪರ | ಸಭೆಗಳಲಿ ಪಂಥಗಳನಾಡುವ |
ಸುಭಟ ಕೋಟಿಗಳಾಳರಿಂ ಕರ್ಪೂರ ವೀಳೆಯವ ||
ಪ್ರಭೆಯೆಸೆವ ಮಣಿದೊಡಿಗೆ ವಸ್ತ್ರ | ಪ್ರಭೃತಿಯನು ತಳೆದಾರ್ವ ವೀರರ |
ರಭಸ ವೋಲಗ ಪರೆದು ತಂತಮ್ಮಿಕ್ಕೆದಾಣದಲಿ || ೧೫ ||

ಬಿರುದಗಳ ಹೊಗಳಿಸುವ ಹಳೆವೀ | ರರ ಚರಿತೆಗಳ ಕೇಳ್ವ ಪದಗಾ |
ಣರನು ಹಾಡಿಸುವಾದಿಸುವ ಪೆಕ್ಕಣವ ಪೇರಣವ ||
ಅರಸುಗಳಿಗರಿದೆನಿಸಿ ಚಾಗವ | ಕರಕರದು ಯಾಚಕರಿಗೀವಾ |
ದರಿಸುವುತ್ಸಾಹದಲಿರುಳ ಕಲೆದರು ಮಹಾಭಟರು || ೧೬ ||

ಇಂದು ನೋಡುವೆ ತನ್ನವಂಶದ | ಲೊಂದಿರಸಗಳು ಅರ್ಕನೆಂದರ |
ವಿಂದ ಬಾಂಧವನೆಯಿದೆರಾಗಿಸಿ ಮೂಡವೆಟ್ಟೆಂಬ ||
ಸಂದ ಪೀಠವನೇರಿದನು ತಾ | ನೆಂದೆನಿಸಿ ರವಿಮೂಡಮೂಡಲ |
ದೊಂದೆ ನಿಮಿಷಕೆ ವೀರ ಪಸದನವಾಂತುದುಭಯ ಬಲ || ೧೭ ||

ವರ ಜರಾಸಂಧಾದಿರಾಜರು | ಭರದಿ ಮಂಗಳಮಜ್ಜನಂಗೈ |
ದರುಹನಡಿಗಳಿಗಷ್ಟವಿಧ ಪೂಜೆಯನೆಸಗಿ ಯೆರಗಿ ||
ಸ್ಫುರಿತ ಚಕ್ರವು ಮುಖ್ಯರತ್ನೋ | ತ್ಕರವ ನರ್ಚಿಸಿ ವಸ್ತ್ರ ದಿವ್ಯಾ |
ಭರಣ ಭೂಷಿತನಾಗಿ ಸಿಂಹಾಸನದಲೊಪ್ಪಿದನು || ೧೮ ||

ವೃತ ನೃಪಾಲಕ ಮಕುಟಬದ್ಧ | ಪ್ರತತಿ ಸುಭಟವ್ರಾತ ವೋಲಗಿ |
ಪತುಳಸಭೆಯಲಿ ಕೌರವನ ಸಾರಿರ್ದ ಕರ್ಣನನು ||
ಚತುರ ಚಕ್ರಿಯು ನೋಡಿ ಸೇನಾ | ಪತಿಯನಾವನ ಮಾಳ್ಪವೆಲೆ ಕುರು |
ಪತಿಯೆ ಯೆನೆ ಕೈಮುಗಿದು ಮತ್ತಿಂತೆಂದನಾ ಭೂಪ || ೧೯ ||

ವೀರದಲಿ ಹಾರದಲಿ ರಿಪು ಸಂ | ಹಾರ ಚಾಪಕಲಾಪ ಸೂರ್ಯಕು |
ಮಾರನೋರ್ವನೆ ಅಧಿಕನಾತಂಗೆಲೆ ನರಾಧಿಪನೆ ||

ಸೇರುವುದನೇ ಮೆಚ್ಚಿಯಾತಗೆ | ಚಾರು ಮಜ್ಜನಗೊಳಿಸಿ ನವ ರ |
ತ್ನೋರು ಭೂಷಣನಾಗೆ ಸೇನಾಪಟ್ಟಗಟ್ಟಿದನು || ೧೦ ||

ದಿವಸದಾಯಕೆ ಎಂದಿನಂದದಿ | ರವಿಸುತಗೆ ಪದಿನೆಂಟು ಕೋಟಿ ವ |
ಸ್ತುವನ ಕುರುಪತಿಮುಂದೆ ಸುರಿಯಿಸಲಿರುಳು ಕೊಟ್ಟಂತೆ ||
ಕವಿಗಮಕಿ ಮೊದಲಾದ ಯಾಚಕ | ನಿವಹಕಾಗಳೆ ಕೊಟ್ಟು ಬರುಕೈ |
ದವನಿಪತಿಗಳ ನಾಚಿಸಿದನಂಗಾಧಿ ನಾಯಕನು || ೧೧ ||

ಬಳಿಕ ಬಂದವರ ಖಳನೃಪ ಸಂ | ಕುಲವೆರಸಿ ಪಂತಿಯಲಿ ಭೋಜನ |
ದಳೆದು ಕೈದೊಳೆದಮೃತ ತಾಂಬೂಲವನು ಸಲೆಸವಿದು ||
ತಳುವದತಿಯುತ್ಸವದಿ ದೆಸೆಗಳ | ನಳರಿಸುವ ನಿಸ್ಸಾಳಗಳ ದನಿ |
ಬಳೆಯೆ ಪೊರವಟ್ಟನು ಜರಾಸಂಧನು ರಣಾವನಿಗೆ || ೧೨ ||

ಕರಿಪತಿ ಸ್ಕಂಧಾವಲಂಬನ | ನರಪತಿಯು ನಡೆಗೊಳಲು ತೀಡಿದು |
ದಿರದೆ ಪ್ರತಿಕೂಲಾನಿಲನು ಸಂಗರವ ಜಯಿಸುವುದು ||
ಅರಿದು ಹಿಂದಕೆ ತಿರುಗೆನಿಪವೊಲು | ಮುರಿದು ಕೇತು ಪಟಂಗಳಾಡಿದ |
ವುರುವಿಭವದಲಿ ಸಕಲಸೈನಿಕವೆರಸಿ ನಡೆಗೊಂಡ || ೧೩ ||

ಚರಣ ಘಾತೋದ್ಧೂತರಜವಂ | ಬರಕೆ ನೆಲನೇರಿದುದೆನಿಸಿ ಭೂ |
ತರುಣಿ ಧೂಳಿರೂಪದಲಿ ವಾದ್ಯಧ್ವನಿಗಳಿಂದ ||
ಧುರವನುಳಿನೀಂ ನಿನ್ನ ಸೇನೆಯ | ಹರಿಯ ದೆಸೆಯಿಂ ಹುಡಿಯೊಳೀಪರಿ |
ಹೊರಳ ಬೇಡೆಂದಪ್ಪಿದಂತಪ್ಪಿದುದು ಮಾಗಧನ || ೧೪ ||

ಹಯದ ಲಾಳಾ ಜಲವು ಗಜಸಂ | ಚಯದ ಮದ ಧಾರಾಜಲವು ಧೂ |
ಳಿಯನಡಂಗಿಸೆ ಭೂಮಿ ತೆರಪಿಲ್ಲೆನಿಪ ಸೈನಿಕದ ||
ಭಯ ರಹಿತನಾ ಚಕ್ರಿ ರಣ ಭೂ | ಮಿಯಲಿ ನಿಲಿಸಿ ಸುವರ್ಣತನು ಕಾಂ |
ತಿಯಲಿ ಹೊಂದೇರಿನಲಿ ಬಹುಕಲಿಕರ್ಣನನು ಕರೆದ || ೧೫ ||

ಕರೆಯೆ ಕರಕಮಲವನು ಮುಗಿದೆ | ನ್ನಿರವಿಸೆಲೆ ಪತಿ ಬೆಸನನೆಂದಾ |
ತರಣಿಸುತ ಬಿನ್ನೈಸೆ ಕಮಲವ್ಯೂಹ ರಚನೆಯಲಿ ||
ವಿರಚಿಸೈ ಚತುರಂಗವನು ಬಿ | ತ್ತರದಲೆನಲು ಹಸಾದವೆಂದಾ |
ದರದಿ ಮೌಹೂರ್ತಿಕರು ಪೇಳ್ದ ಮುಹೂರ್ತ ಸಮಯದಲಿ || ೧೬ ||

ಬರಿಸಿ ನಾಯಕನಿಕರಮಂಡಳಿ | ಕರನು ಮಾಸಾವಂತರನು ತರ |
ತರದಲಿಂತಿರಿಯೆಂದು ನೇಮಿಸಿ ರಿಪುಭಯಂಕರವು ||

ನೆರೆದ ಪದ್ಮವ್ಯೂಹವನು ಬಿ | ತ್ತರಿಸಲೊಡರಿಸಿ ಮಧ್ಯ ಕರ್ಣಿಕೆ |
ಯರು ಧರೆಯೊಳಾ ಚಕ್ರವರ್ತಿಯ ನಿಲಿಸಿದನು ಕರ್ಣ || ೧೭ ||

ಹರನ ಸಂಬಂಧಿಗಳೆನಿಪ ಸಿಂ | ಹರಥ ಸಿಂಹಧ್ವಜವು ಜಯಧ್ವಜ |
ವರನುವಜಿತಂಜಯನುಮಪರಾಜಿತನು ಕಾಲವಯ ||
ತರಣಿಮಿತ್ರನು ಸಿಂಹಕೇತುವು | ಕುರುಪತಿಯು ಮೊದಲಾದವರನಿಂ |
ತಿರಿಸಿದನು ಕೇಸರವೆನಲು ತಂತಮ್ಮ ಬಲವೆರಸಿ || ೧೮ ||

ಅವರ ಪೊರೆಗಾ ಭೀಷ್ಮಕಲಶೋ | ದ್ಭವ ಕೃಪಾಶ್ವತ್ಥಾಮ ಭೂರಿ |
ಶ್ರವ ಶಕುನಿ ಕೃತವರ್ಮಶಲ್ಯ ಸುಶರ್ಮಭಗದತ್ತ ||
ರವರನಾಂತಕ ಕನಕ ಸೈಂಧವ | ................ರಸೇನ ಬಾಹ್ಲಿಕ |
ಧವಳ ಬಾಣಾಸುರ ಜಯಂತಾದಿಗಳ ಬಲವೆರಸಿ || ೧೯ ||

ತೊಳಪ ಮೂವತ್ತೀರ್ವರನು ಮಂ | ಡಲಪತಿಗಳನು ಚೆಲುವನಾಂತಾ |
ನಳಿನದೆಸಳಾಗಿರಿಸಿ ತತ್ಸೇನಾಧಿನಾಥರನು ||
ಪೊಳೆವೆಸಳ ಮೊನೆಯಾಗಿರಿಸೆ ಕಂ | ಗೊಳುತ ಗಜಕಂದರದೊಳತಿ ಪ |
ಜ್ವಳಿಪ ಬೆಳುಗೊಡೆ ನೆಳಲಲಿಹ ಚಕ್ರೇಶ ಮೆಚ್ಚಿದನು || ೨೦ ||

ನರಪತಿಯ ಮೇಲಾಗಸದಲಾ | ತರಣಿ ಮಂಡಲದಂತೆ ಚಕ್ರ |
ಸ್ಫುರಿತ ರತ್ನವುನಿಲವನು ಬಳಸಿದಕಿರಣ ಸಾಸಿರದ ||
ಪರಿಯಲಾ ವಿದ್ಯತ್ಪ್ರಭನು ಕೇ | ಸರಿ ಸುವಿದ್ಯುದ್ಗತಿಯಶನಿವೇ |
ಗರು ವಿಮುಖ್ಯಾಂಬರಚರರ ಚೆಲುವಾಗಿ ನಿಲಿಸಿದನು || ೨೧ ||

ಇರಿಸಿ ತಂತಮ್ಮಖಿಳ ಸಾಧನ | ವೆರಸಿ ಸಂಗರ ಸರಸಿಯಲಿ ನೇ |
ಸರಕುಮಾರಕ ನೋಡಿಮೆರೆವಾ ವ್ಯೂಹಕಮಲದಲಿ ||
ನರಪತಿಯ ಭೂಷಣದ ರುಚಿಬಂ | ಧುರಪರಾಗಮದಾಗೆ ಭೂಮೀ |
ಶ್ವರರ ತನುಪರಿಮಲವೆ ಪರಿಮಲವಾಗಿ ಸೊಬಗಾಯ್ತು || ೨೨ ||

ವಿತತ ಹಯ ಹೇಸಿತವು ಗಜಬೃಂ | ಹಿತವು ವೀರಭಟಪ್ರಬಲ ಹೂಂ |
ಕೃತವು ಬಹುವಿಧವಾದ್ಯ ಘೋಷವು ಶಂಖ ಭೂಂಕೃತವು |
ಚತುರ ಕಹಳಾ ಚೀತ್ಕೃತವು ಪೆಣೆ | ದತುಳಲಯ ಸಮಯದ ಸಿಡಿಲ ಸಂ |
ತತಿಯ ತಾಯ್ಮನೆಯೆನಿಸಿತಾ ವ್ಯೂಹೋದರಾವನಿಯ || ೨೨ ||

ಮತ್ತಮಾರಿಪುಗಳ ಬರವ ಪಾ | ರುತ್ತ ಮಿತ್ರಕಮಾರನೊಳು ನುಡಿ |
ಯುತ್ತ ವೀರಾಳಾಪಗಳನಾ ಚಕ್ರಾಧರನಿರಲು ||

ಅತ್ತಲಾ ಗೋವರ್ಧನಾದ್ರಿಯ | ನೆತ್ತಿದಾತನು ನಿತ್ಯಕರ್ಮವ |
ನುತ್ತರಿಸಿ ಸರ್ವಾವಸರ ಮಂಡಪದೊಳೊಪ್ಪಿದನು || ೩೪ ||

ಎಸೆವ ಮಧ್ಯಮ ಪಾಂಡವನೆ ರಾ | ಜಿಸುವ ಮಂಗಳ ಮಜ್ಜನವನಾ |
ಗಿಸಿ ಸುರತ್ನಾಭರಣದಿಂ ಕೈಗೆಯಿಸಿಯುತ್ಸವದಿ ||
ಮಿಸುನಿವಣೆಯೊಳಗಿರಿಸಿವಾದ್ಯ | ಪ್ರಸರವುಲಿಯಲು ವೀರಪಟ್ಟವ |
ನೊಸೆದು ಕಟ್ಟಿದನಚ್ಯುತನು ಸೇನಾಧಪತ್ಯವನು || ೩೫ ||

ಧನದರಾಶಿಯ ಸುರಿದು ಯಾಚಕ | ಜನಕೆ ಆಶ್ರಿತ ಜನಕೆ ಸಾಕೆಂ |
ದೆನಿಸಿ ಮಿಗೆಮೊಗೆದಿತ್ತದೆಂದುಂಕೆಡೆದ ಜಸವೆಂಬ ||
ಧನವ ಗಳಿಸಿದನಾಗಳಖಿಳಾ | ವನಿಪರುರ್ಕುವ ವೀರಪಸದನ |
ವನುತಳೆದು ನಿಜ ಚಾತುರಂಗ ಸಮೇತರೊಪ್ಪಿದರು || ೩೬ ||

ಬಂದನಾ ಸಮಯದಲಿ ಗಲಗಲ | ನೆಂದುಲಿವ ಕಿರುಗೆಜ್ಜೆಯುಡೆದೊವ |
ಲೊಂದು ನೆನಪಿದ ಕುಂಚ ಪಚ್ಚೆಯಬೆಮರುಗುಪ್ಪಸವು ||
ಸಂದ ಟೊಪ್ಪಿಗೆ ಗಾಳಿಗೆಂಗರಿ | ಬಂದುದೋಯೆನೆ ವಹಿಲದಲಿ ಗೋ |
ಮಿಂದ ಬಿನ್ನಪ ಚಕ್ರಿ ಬಂದೊಡ್ಡಿದನು ಧುರಕೆಂದ || ೩೭ ||

ಚರರ ನುಡಿಯನು ಕೇಳಿ ನಗಧರ | ಧುರಗಮನ ಭೇರಿಯನು ಪೊಡಯಿಸೆ |
ಉರಗಪತಿ ಹೆಡೆಯುಡುಗಿ ಬಿಸಲತೆಯಂತೆ ಕುಪ್ಪಳಿಸೆ ||
ಸುರಪನನು ಮರೆವೊಕ್ಕರಾ ದಿವಿ | ಜರು ದಿಗೀಶರು ಪೀಠದಿಂ ಕೆಲ |
ಕುರುಳಿದರು ಭೀಕರ ರವಾತ್ಮಕವಾಯಿತಾ ಲೋಕ || ೩೮ ||

ವನಜನಾಭಯ ಬಳಿಕ ಮನದಂ | ದನುಮೆನಿಸಿದತಿರಥನೆನಿಪ ಕೃ |
ಷ್ಣನನು ಕಪಿಕೇತನನ ರಥವನು ಜೋಡಿಸೆನೆ ಕೃಷ್ಣ ||
ಮನೆದೆಗೊಂಡಾ ಸಿತಹಯನರಥ | ವನು ನಿವೇಷ್ಟಿಸಲದನರಿಯದ |
ರ್ಜುನನ ಬಂಡಿಯ ಬೋವನಚ್ಚುತನೆಂಬುದೀ ಲೋಕ || ೩೯ ||

ಬಳಿಕ ಮಂಗಳ ಪಸದನಂಗಳ | ತಳೆದು ಬಲನಾರಾಯಣರು ನೀ |
ರ್ಮಲವಿಬೋಧಜ್ಯೋತಿನೇಮಿಸ್ವಾಮಿಯನುಮನದ ||
ಒಳಗಿರಿಸಿ ಮುದದೆರಗಿ ವಿಭುದಾ | ವಳಿಯ ಪರಕೆಯನಾಂತು ರಾಜಾಂ |
ಗಳಕೆ ಬಂದನು ಕೃಷ್ಣರಾಯನು ಭೂಪ ಕೇಳೆಂದ || ೪೦ ||

ಮುಂದೆ ನಿಂದುದು ಮುಗಿಲು ಕಾಲ್ಗಳ | ನಂದು ಪಡೆದವೊ ಮೇಣ್ವಿಧಾತನ |
ದೊಂದು ನೀಲಾದ್ರಿಯ ವಿಭಾಕೃತಿಗೈದುಚೇತನವ ||

ವಂದಿಸಿದನೋ ಯೆನಿಸಿ ಬರಿಕೈ | ಯೊಂದಿ ಬಲಗೋಡೊಳು ವಿರಾಜಿಪ |
ಸಿಂಧುರ ಸ್ಕಂದಾವಲಂಬನನಾದನಾ ಕೃಷ್ಣ || ೪೧ ||

ಬಲದಲಾನೆಯ ಮೇಲೆಬಲನೆಡ | ದಲಿ ಗಜೇಂದ್ರನ ಮೇಲೆ ಧರ್ಮಜ |
ನೊಲಿದು ಬರೆಸಾಲೊಂದು ನಡೆದವು ಪಾಳಿಕೇತನವು ||
ಬೆಳುಗೊಡೆಗಳೆತ್ತಿದವು ಚಾಮರ | ತೊಲಗಿದವು ನೊಂದಕವನಾ ಹರಿ |
ಝಳಪಿಸುತಲದ ಕೈಗೆ ವಜ್ರಾಂಕುಶವೆನಿಸಿ ನಡೆಯೆ || ೪೨ ||

ಬೀಸಿದುದು ಮಿಗೆ ತಣ್ಣ ತಣ್ಣನೆ | ವಾಸಿಸುವೊಡದು ಕಮ್ಮಕಮ್ಮನೆ |
ಕೇಶವಂಗನುಕೂಲವಾಯು ಸಮಸ್ತರಾಯೆನಲು ||
ಲೇಸು ಶಕುನಗಳು ಪಡೆದುರಣ | ಸಾಸಿಗನು ಸುಮುಹೂರ್ತದಲಿ ಸೇ |
ನಾಸಮೇತನು ಬೀಡು ಪೊರವಟ್ಟನು ಮಹೋತ್ಸವದಿ || ೪೩ ||

ನಡೆದವೋರಂದದಲಿ ಪೊಜ್ಜರ | ವೆಡೆಗುಡದೆ ಸಾಲ್ಗೊಂಡವಾಚೆಂ |
ಗೊಡೆಗಳೋರಣವಾಗಿ ಸಿಂಧುಗಳುಪ್ಪರಿಸಿ ಪರಿಯೆ ||
ಪೊಡೆವ ತಮ್ಮಟ ವೀರಮದ್ದಳೆ | ಗಿಡಿಬಿಡಿಗಳೊದರುವ ಕಹಳೆಗಳು |
ಬಡಿವ ನಿಸ್ಸಾಳಗಳು ಬೊಬ್ಬಿಡೆ ನಡೆದುದಾ ಸೈನ್ಯ || ೪೪ ||

ಪಡಿಯರರು ಹರಿಹರಿದು ಪಕ್ಕದ | ಪಡೆವಳರ ಗಜಕುಲದ ಸಾಲ್ಗೊಳೆ |
ನಡಸುವೊಕ್ಕೊರಳೊಳೆನೆಕೀಬರು ನೆಲನನುಗ್ಘಡಿಪ ||
ದಡವಿಡಿದು ಕಟ್ಟಿಗೆಯವರು ಮುಂ | ಗುಡಿಯ ಫೌಜನು ಹೊಯ್ತೆಗೆದು ಇ |
ಕ್ಕಡಿಗೆ ಸೂತ್ರಿಸಿದಂತೆ ನಡೆಸುವ ಜಾಣ್ಮೆ ಪಸರಿಸಿತು || ೪೫ ||

ಸಂದಣಿಯ ಪಾಠಕರ ಭಟ್ಟರ | ವಂದಿಗಳ ಕಳಕಳದಿ ಭೂಪರ |
ಗೊಂದಳವು ಬರೆಮಿಸುನಿದೇರೊಳು ನಕುಳಸಹದೇವ ||
ಒಂದಿ ಬರೆ ಗಜಕಂಧರದಲೊಳ | ವಿಂದರುದಿರೋದ್ಗಾರಿ ಗದೆಯನ |
ದೊಂದು ಪರಿಘವನಾಂತು ಬಂದ ಹಿಡಿಂಬಕಾಂತಕನು || ೪೬ ||

ನಡೆವುತಿಹ ಚತುರಂಗ ಸೇನೆಯ | ನಡುವೆ ಮಣಿರಥವೇರಿ ಮಿಸುನಿಯ |
ಗಿಡಿಯ ದಂಡಾಗ್ರದಲಿ ವಾನರ ಲಾಂಛನವು ಮಿಳಿರೆ ||
ಕಡುಮೆರೆವ ನಿಜವೀರ ಪಸದನ | ವಿಡಿದ ಮಣಿರುಚಿರಿಪು ಸಮುದ್ರವ |
ಕುಡಿವ ವಡಬನ ನಾಲಗೆಗಳೆನೆ ಬಂದನಾ ಪಾರ್ಥ || ೪೭ ||

ನೆಲನನಾ ಚತುರಂಗ ಬಲವ | ಗ್ಗಳಿಸಿದುದು ತದ್ರಜಸಮಾಜವು |
ಜಲನಿಧಿಯನಾರಿಸಿತು ಪಳಯಿಗೆ ನಭವ ತೀವಿದುದು ||

ಉಲಿವ ವಾದ್ಯಧ್ವನಿ ದಿಗಂತವ | ನಲೆದುದಾ ಸಿತಹಯನ ಸೂತ್ರದ |
ಹಲವು ಬೊಂಬೆಗಳೆನಿಸಿ ನಡೆದುದು ಯುದ್ಧ ಭೂತಳಕೆ || ೪೮ ||

ಮುರಮಥನನರ್ಜುನನನಾಗಳು | ಬರಿಸ ವಜ್ರದ ಕವಚ ಘರ್ಮದ |
ತರಣಿರುಚಿಯನು ಬೀರೆ ಕಪಿಕೇತನವು ತೊಲತೊಲಗೆ ||
ಕರದೊಳಾ ಗಾಂಡಿವ ಶರಾಸನ | ವರಿಭಯಂಕರಮಾಗೆ ಸಿತಹಯ |
ಧುರ ರಥವನಾ ಕೃಷ್ಣ ಜೋಡಿಸೆ ಬಂದನೊಲವಿಂದ || ೪೯ ||

ಬಂದೆರಗಿ ಯೆಲೆ ದೇವ ಬೆಸನೇ | ನೆಂದು ಬಿನ್ನೈಸುವುದು ನೋಡಿಮು |
ಕುಂದನೆಂದನು ಪಡೆಯನೊಡ್ಡೈ ವ್ಯೂಹರಚನೆಯಲಿ ||
ಎಂದೊಡದನೆ ಹಸಾದ ರಚಿಸುವೆ | ನೆಂದು ಗರುಡ ಧ್ವಜಗೆ ಸಾರ್ಥಕ |
ವೆಂದು ಗರುಡವ್ಯೂಹವನು ರಚಿಸುವೊಡೆ ಬಗೆದಂದ || ೫೦ ||

ದೃಢರಥ ಜರಾವಿಷ್ಣು ಪೌಷ್ಟ್ರನ | ಪೊಡವಿಪತಿ ರಥನೇಮಿ ಭೂವರ |
ನೊಡನೆ ನೀಲಕುಮಾರನೊಪ್ಪುವ ಚಿತ್ತ ಭಾನುನೃಪ ||
ಪೊಡರ್ವಸೌರನು ಚಂದ್ರಮುಖ್ಯರ | ಪಡೆವೆರಸಿ ತಂಡಾಕೃತಿಯನಾ |
ಗೊಡರಿಸಿದನಾ ರಿಪು ಭಯಂಕರವಾಗಿ ಕಲಿ ಪಾರ್ಥ || ೫೧ ||

ದೊರೆವಡೆದ ಮಣಿಪುತ್ರ ಹಂಸೋ | ದ್ಧುರಮವುಲಿ ನೃಪ ಸೋಮದೇವೋ |
ವರೆಯರಸನಾ ಭದ್ರಸೇನ ............... ||
ಧರಣಿಪತಿಗಳನವರ ಸೇನಾ | ಪರಿಕರಣ ಸಹ ಕೊರಳ ಭಾವದ |
ಲಿರಿಸಿದನು ಪರನಯನ ಭೀಕರವಾಗೆ ಕಲಿಪಾರ್ಥ || ೫೨ ||

ತರತರದಿನಕ್ಷೋಭಾಸ್ತಿಮತ ಸಾ | ಗರವಿಜಯ ಹಿಮವಾಂತ ಸತ್ಯಕ |
ಸುರಸಧಾರಣ ಪೂರಣಾಚಲಜಯನು ಸತ್ಯಧರ ||
ಸ್ಫುರಸು .............. | ................ ಪಕ್ಷವಾಗಿಯೆ |
ವಿರಚಿಸಿದನವರವರ ಸೈನ್ಯ ಸಮೇತನರ್ಜುನನು || ೫೩ ||

ವರಯುಧಿಷ್ಠಿರ ಭೀಮ ಮದ್ರಿಜ | ರುರು ಘಟೋದ್ಗಜ ರಾಷ್ಟ್ರವರ್ಧನ |
ವರ ಮುಖದೃಷ್ಟಾರ್ಜುನನುಮಭೀಮನ್ಯು ಸುಕುಮಾರ ||
ದೊರೆಯಮಲಯಧ್ವಜ ವಿರಾಟಾ | ದ್ಯರನು ತಂತ್ಮಮಖಿಲ ಬಲಸಹ |
ವಿರಿಸಿದನು ತದ್ವಾಮಪಕ್ಷದವೀ ರಚನೆಯೊಳಾಗ || ೫೪ ||

ವಿನುತ ಕೀರ್ತಿಧ್ವಜ ಮಹಾಸೇ | ನನನು ಪೊಡರ್ಪಿಸೆ ಉಗ್ರಸೇನಾ |
ವನಿಪನಕ್ರೂರನು ಪೊದಳ್ದಾ ಸಿಂಹಕೇತುನೃಪ ||

ಜನವಿದಿತ ದೀಪಾಯನಾದ್ಯರ | ಘನ ಚತುರ್ವಲವೆರಸಿಯಿರಿಸಿದ |
ನನುವಡೆದ ಪುಚ್ಛಾಕೃತಿಯನರ್ಜುನನೃಪಾಲಕನು || ೫೫ ||

ಗಿರಿಧರನ ಹಲಧರನನಾ ಭೀ | ಕರ ಖಗೇಂದ್ರನ ಪಕ್ಷ ಮೂಲದ |
ಲುರು ಗಜಾರೂಢರನಿರಿಸಿನ್ನೇತ್ರಯುಗವಾಗಿ ||
ನರನು ತಾನುಮನಾಧೃತನುಮಿರೆ | ಹರಿಯ ಮೇಗಡೆ ಛತ್ರ ಬಹುಚಾ |
ಮರ ಬಿರುದ ಠಕೆಯ ಮೌಕೆಗಳಿತ್ತ ವದ್ಭುತವ || ೫೬ ||

ಅರಿಮಥನ ರಣ ಚಂದ್ರ ದಧಿಮುಖ | ಅರುಣ ಚಂದ್ರಮನಶನಿವೇಗನು |
ತರಣಿ ಮುಖನಾ ಸಿಂಹದಾದಮನೋಗಲೆಗಳಿಂತು ||
ನೆರೆದ ವಿದ್ಯಾಧರರ ಬಲತ | ಮ್ಮುರು ಪತಾಕಿನಿವೆರಸು ನಭದಲಿ ||
ನರನಿರಿಸಿ ಮಂಡಳಿಸಿ ನಿಂದುದದೊಂದು ಲೀಲೆಯಲಿ || ೫೭ ||

ಗರುಡರಾ ಗಾಂಧರ್ವರಾ ಕಿಂ | ಪುರುಷರಾ ಯಕ್ಷರ್ಸಮಸ್ತಾ |
ಸುರರೆನಿಪ ದೇವೌಘ ಮೇಘಾಕಾಶ ನೆರೆಯದೆನೆ ||
ಧುರವನೋಡುತ ಲೀಲೆಯಿಂ ಮಿಗೆ | ನೆರೆದು ನಿಂದುದು ಯಿಂತತುಳ ಬಲ |
ವೆರಡು ಸಂಗರಕೊಡ್ಡಿ ನಿಲಲವನೀಶ ಕೇಳೆಂದ || ೫೮ ||

|| ಅಂತು ಸಂಧಿ ೪೫ಕ್ಕಂ ಮಂಗಳ ಮಹಾ ||

## ಯುದ್ಧ ಪರ್ವ (ಸಂಧಿ ೪೬)

**ಸಂಧಿ ೪೬**

ಸಂಗರಕ್ಷೋಹಿಣಿಯುಭಯ ಚತು | ರಂಗಬಲವಧಟಿಂದ ನೋಳ್ಪರ |
ಕಂಗಳುಳುಕಲು ಕಾದಿದರು ಭೂಪಾಲ ಕೇಳೆಂದ || ಪಲ್ಲ ||

ಕೇಳೆಲೇ ಮಾಗಧ ಧರಿತ್ರೀ | ಪಾಲದಳವೆರಡರ ಭರಕೆ ಕ |
ಲ್ಲೋಲ ಮಸಗಿದ ಹಡಗೆನಿಸಿತಿಳೆ ವೀರಮದ್ದಳೆಯ ||
ಸ್ಥೂಲ ಬಿರುದಿನ ಪದಿರ ಹಳೆಗಳ | ಕಾಳೆಗಳ ಭಟರುಬ್ಬಟೆಯದನಿ |
ಕಾಳಗಕೆ ಕಡಲೆರಡು ಬಂದತಿ ಘೂರ್ಣಿಪಂತಾಯ್ತು || ೧ ||

ಆ ಸಮಯದೊಳಗಿಕ್ಕಡೆಯ ಸೇ | ನಾಸಮುದ್ರದ ನಾಯಕರು ವಿಳೆ |
ಯಾಸುರಾಗ್ನಿಜ್ವಾಲೆಗಳಿಗಿರದೊದವೆ ಬಿರುಗಾಳಿ ||

ಬೀಸಿದಂದದಿ ನಿಜಬಲಕೆ ಕೈ | ವೀಸಿದರು ಕರ್ಣಾರ್ಜುನರು ವಾ |
ರಾಸಿ ವಾರಾಸಿಯಲಿ ಹೂಣಿಸಿ ತಾಗುವಂದದಲಿ || ೧ ||

ಪೊಡೆವ ಚಂಬಕ ಗಿಡಿಬಿಡಿಗಳು | ಗ್ಗಡಿಪ ಕಹಳೆಯ ವೀರ ಬೊಬ್ಬೆಯ |
ಕಡುಹಿನಲಿ ಪಡೆಯೆರಡು ಹಳಚಿತು ಬಿಲ್ಲ ಪಡೆಬಿಲ್ಲ ||
ಪಡೆಯೊಳಡ್ಡಣ ಕಾರರಡ್ಡಣ | ವಡೆಯೊಳಾ ಕುದುರೆಗಳು ಕುದುರೆಗ |
ಳೊಡನೆ ತೇರ್ಗಳು ತೇರೊಳಾನೆಗಳಾನೆಗಳೊಳಡಸಿ || ೩ ||

ನಳಿನಡುವ ಬಿಗಿದೋರೆಗಾಸೆಯ | ಬಳಸಿದಾ ಬದ್ದುಗೆಯ ಗೊಂಡೆಯ |
ದೊಲಹುಗಳು ಪೊಂಜರಗಿಗಟ್ಟಿನ ನಿಡಿಯ ಗೊಂಡೆಯದ ||
ತಲೆತೌಳಿ ಮೈ ಜೋಡು ಬೆನುಬ | ತ್ತಳಿಕೆಯೆಡಗೈವಿಡಿದ ಹದವಿಲು |
ಸೆಳೆದೆಸುವ ಬಲಗೈಯೆಸುವ ಕೂರಾಳ್ಗಗಳೊಪ್ಪಿದರು || ೪ ||

ಗುರಿಯ ಮೇಗಣ ದಿಟ್ಟಿದಂಡೆಯ | ಮರಿದು ನೀಡಿದ ಮುಟಿಸರವನು |
ತಿರುವಿಗೊಂದಿಸಿ ಬರೆತೆಗೆದ ಬಲಗೈ ಕಿವಿಯ ಮುಟ್ಟೆ ||
ಮೆರೆಯೆ ಬಿಲ್ಲೊಳಡಂಗಿತೆನೆ ಮುಂ | ತೊರಗಿದೊಮ್ಮೆ ವಹಿಲದಲಿ ಕೂ |
ಕಿರಿದು ತಳಸಂಚದಲಿ ಕುಣಿ ಕುಣಿದೆಚ್ಚರೆಡೆವಿಡದೆ || ೫ ||

ದೆಸೆಗೆ ತೆರೆಸುತ್ತಾಯ್ತು ಮೇಲಾ | ಗಸಕೆ ಮೇಲ್ಗಟ್ಟಾಯ್ತುದೆತ್ತಲು |
ವಿಷಮಯವು ಧರೆಯಾಯ್ತು ಭಯದಳದೆಲ್ಲ ಬಿಲ್ಲಾಳೊ ||
ಎಸಲೊಡನೆಯಿನ್ನಿವರ ಯುದ್ಧದ | ಸಸಿನೆ ನೋಡುವ ವೊಡರಿದೆನುತ ಚಿಂ |
ತಿಸಿತು ಗಗನಾಂಗಳದಲೀಕ್ಷಿಸೆ ನೆರೆದ ದೇವಸಭೆ || ೬ ||

ಮೊರೆದು ಹರಿದವು ಕೂರ್ಗಣೆಗಳು | ಬ್ಬರಿಸಿ ಬಹಕಣೆಗಡಿದು ಜೋಡನು |
ಜರಿದು ಬೆನ್ನುಚ್ಚಳಿಸಿ ನಾಲ್ಕೆಂಟಾಳೊಡಲನುಗಿದು ||
ಧರೆಯ ಗರಿವರನಟ್ಟು ವಿತ್ತ | ತ್ತುರುಳಿದವು ರಿಪುಭಟರು ತನುಗಳು |
ಹರಿದುದರುಣ ಜಲಾಂಬುನಿಧಿ ಭೋರ್ಗರೆದುನಿಮಿಷದಲಿ || ೭ ||

ಪಾರಿದವು ತಲೆ ನಭಕೆ ನೆತ್ತರ | ಕಾರಿದವು ಮುಂಡಗಳು ಮುರಿದವು |
ಹಾರುಗಳು ರಿಪುಭಟರ ಮೈಗಳ ರೋಮಕೂಪದಲಿ ||
ಊರಿದವು ರಣಭೂತಗಳು ಬಾ | ಯಾರಿಬೀತುದು ಭಟರ ಜೀವದ |
ಹೇರು ನಡೆದು ಯಮಪುರಕೆ ಸರಳುಗಳ ಪಥವಿಡಿದು || ೮ ||

ತಿರುಗಳಾ ಠಂಕೃತದ ಗರಿಗಳ | ಹರಿವರಿಯ ಝುಂಕೃತದ ಮೈಗಳೊ |
ಗುರುಶರಂಗಳ ನೇಳ್ಕು ತಳ್ಕು ನಿಳುಳ ತದ ಜತಿಗೆ ||

ಗರಿಯ ಜೊಂಪವ ತೊಟ್ಟು ರಣದೇ | ವರಿಗೆ ವೀರಾವೇಷದಿಂ ಕುಣಿ |
ವಿರವೆನಲು ಕೋಲ್ಗೊಂಡು ಜಗ್ಗಾಡಿದರು ಭಟರಲ್ಲಿ || ೯ ||

ಸರವರಿಯೆ ತಿರುಪರಿಯೆ ಹದವಿಲು | ಮುರಿಯೆ ಬಿಲ್ಲಾಳೆಚ್ಚು ಕಟ್ಟಿದ |
ಸುರಗಗಳ ಕಿತ್ತಾಂಶ ಭಟರೆದೆವಟ್ಟು ತಾರಾಗೆ ||
ಬರಿಹರಿದು ಭಟರೊಡಲು ಕನ್ನವ | ಕೊರೆದವೊಲು ಮೈದೋರಿಗಳೆಯಲು |
ಸುರ ಗಿರಿಧರಂದೀಕ್ಷಿಸುವರಾಲಿಗಳು ಜುಮ್ಮಿಡಲು || ೧೦ ||

ನಡುಹಗಲು ರವಿಬಿಂಬ ಕೋಟಿಯು | ಪೊಡವಿಗಿಳಿದೊಂದೊಂದರೊಳು ಚಡು
ಫಡನೆ ತಾಗಿವೊಯೆನಿಸಿ ಕೆಂಬಿಸಿಲಂದದಿಂಬಿಡುತ ||
ಸಿಡಿದು ಸಿಡಿಲೊಳು ಹೆಣಗಿದವೊಯೆನೆ | ಘುಡು ಘುಡಿಸಿ ಹರಿಗೆಗಳು ಹಳಚಿದ |
ವೊಡೆದುದಬುಜ ಭವಾಂಡಮೆನೆ ಪೊಣ್ಮಿದುದು || ೧೧ ||

ಕರಿಯ ಸಿಂಹದ ಹುಲಿಯ ಚೋಹದ | ಗರುಡ ಹನುಮನ ಕೋಟೆ ಚವಲದ |
ತರಣಿ ಚಂದ್ರನ ಹೊನ್ನ ತಾರಕೆಗುಬ್ಬಿ ಚೆಂಡುಗಳ ||
ಸರಪಣಿಯ ಘಂಟೆಗಳ ಗೆಜ್ಜೆಯ | ಪಿರಿಯ ಝಲ್ಲಿಯ ಮೂರು ಕಂಗಳ |
ಹರಿಗೆಕಾರರು ಹಳಚಿ ಹೊಯ್ದಾಡಿದರು ಸಮರದಲಿ || ೧೨ ||

ಕಡೆಯ ಕಾಲದ ಮಿಂಚೊ ಕುಳಿಕನ | ನಿಡಿಯ ಹಲುಗಳೊ ಜವನ ದಾಡೆಯೊ |
ಕಡುಭಯಂಕರವೆನಿಪ ಹಲವಾಯುಧಗಳನು ಪಿಡಿದು ||
ಅಡಸಿ ಹೊಯ್ದಾಡಿದರು ಲೋಹದ | ಕಿಡಿಯುದುರೆ ತುಂಡಿಸೆ ಹರಿಗೆ ತೋ |
ಳುಡಿಯೆ ಸೀಸಕವೆರಸಿ ತಲೆಗಳ ಪಾರಿದವು ನಭಕೆ || ೧೩ ||

ಮೆಚ್ಚದವರಿರಿತವನು ಕೆಲಬರಿ | ದಿರ್ಚೆದಿರ್ಚೊಡ್ಡೆನುತ ಮೈಗಳ |
ವೆರ್ಚೆ ಕಡಗಕೆ ಹೊಯ್ದು ಪೋರೆಯಕೊದಗಿ ಮೊನೆದೋರಿ ||
ಕೊಚ್ಚಿದರು ಕೊಡಹಿದರು ಎಲುಗಳ | ನುರ್ಚೆದರು ಖಂಡಗಳ ಭೂತಕೆ |
ಹಚ್ಚಿದರು ಕುರಿದರಿದರದ್ಭುತವಾಗಿ ಪಟುಭಟರು || ೧೪ ||

ಪೊಡೆಯೆತಲೆ ಬೊಬ್ಬಿಡುತೆಗಗನಕೆ | ಸಿಡಿಯಲಟ್ಟೆಯು ಮುಂದೆ ಹತ್ತೆಂ |
ಟಡಿ ನಡೆದು ರಿಪುಭಟರು ನಿರಿದೊರಗಿದವು ಮುಂಡಗಳು ||
ಅಡಿಗಡಿಗೆ ಕುಣಿದಾಡಿದವು ತೊಡೆ | ನಡಿದು ಕಡಿ ಪಲ್ಲಡಿಸಿದವು ಹರಿ |
ಗಡಿದ ಕಾಲನ ಕುಮ್ಮರಿಯವೊಲು ಕೆಡೆದರಾ ಭಟರು || ೧೫ ||

ತಕ್ಕಡೆಯ ಪಟುಭಟರು ಹರಿಗೆಯ | ಸಿಕ್ಕ ಪಲ್ಲವ ಹಿಡಿದಿದಿರೆ ಹಾ |
ಯ್ದುಕ್ಕು ಕಡುಮಿಗೆ ಕೇಳುಧಾರೆಯ ಕೊಳಲು ತೊಡೆಗೊರೆದು ||

ಕುಕ್ಕರಿಸಿದರು ಭುಗಿಲೆನುತ ಕರು | ಳುಕ್ಕಿದವು ನೆತ್ತರ ಕೆರೆಗೆ ತುಂ |
ಬಿಕ್ಕಿದಂತೆದೆದೋರಿಗಳದುದದೊಂದು ನಿಮಿಷದಲಿ || ೧೬ ||

ಫಡಪಡಿದಿರಾಗೆನುತ ಕುಣಿಕುಣಿ | ವಡಿಗಳಿಂ ಸಬಳಿಗರು ಸಬಳಿಗ |
ರೊಡನೆ ಖಣಿಖಡಿಲೆನುತನೆವುತೊಳಪೊಕ್ಕು ತಿವಿದಾಡೆ ||
ಒಡೆದು ಜೋಡೆದೆಯುರ್ಚೆ ಬೆನ್ನಲಿ | ನಿಡು ಜವನ ಹಲ್ಲಂತೆ ತೋರಿದ |
ವೊಡನೆ ನೆತ್ತರ ಕಾರಿ ಕೆಡೆದರು ಸಮರ ಧರೆಯೊಳಗೆ || ೧೭ ||

ಇರದೆ ಘರ್ಜಿಸಿ ಶತಭಟರುಸಾ | ಸಿರಭಟರು ಲಕ್ಷಭಟ ಕೋಟಿಭ |
ಟರು ಕರುತ್ತಸಿ ಮುಸಲ ಕಂಪಣ ಕಣೆಯ ಪಿಂಡಿವಳ ||
ಮಸೆದು ಖಡುಗ ಮುಸುಂಬಿ ಕಕ್ಕಡೆ | ಯೆಸೆವ ಧನು ಮೊದಲಾದ ಕೈದುವಿ |
ನೆಸಕದಿಂ ಹಣೆದಾಡಿದರು ನೋಟಕರ ಕಣು ಬೆದರೆ || ೧೮ ||

ಹಸಿಯ ತಲೆಗಳು ಹಾರಿ ಇದಿರ | ರ್ವಿಸುವ ವೀರರ ಕೊರಲಕರ್ಚೆರ |
ದಸುವನುಗಿದವುಯಿರಿಯಲವುಕಿದ ತೋಳುಗಳು ಹರಿದು ||
ಅಸಿವೆರಸಿ ಹಗೆಯೊಡಲ ಬಗಿದವು | ಬಿಸಿ ರಕುತ ಗಡಲೊಳಗೆ ಕೂವುಡಿ |
ದಸಿಯ ದೋಣಿಗಳಂತೆ ಹೆಣಗಳ ಬಣಬೆ ತೇಲಿದವು || ೧೯ ||

ಇರಿವಿಡಿದ ಪೊಯ್ದೆಸುವ ಬೀಸುವ | ಕೊರೆವ ತಿವಿವಪ್ಪಳಿಸುವವುಕುವ |
ಬಿರುಬಿಗಾ ರಣದೇವಿಯರು ಚೆಂಡುಗಳಪೊಯ್ದಂತೆ ||
ನೆರೆನಿಮಿರ ಪಂದಲೆಗೆಳಾಗಸ | ದೆರವಿಯಲಿ ನೆರೆದಾಡಿದವು ಎವೆ |
ದೆರೆದವರ ಕಂಗಳಿಗೆ ಹಬ್ಬವನಿತ್ತುದಾ ರಣವು || ೨೦ ||

ಇಡುವ ಚಕ್ರವಿದೆಸುವಕಣೆಯಿದು | ಕಡಿವ ಖಂಡೆಯವಿದು ತಿವಿವ ಕ |
ಕ್ಕಡೆಯಿದಿರಿವಿಟ್ಟಿಯಿದು ಕುತ್ತುವ ನಿಡುಗಠಾರಿಯಿದು ||
ಪೊಡೆವಲವುಡಿಯಿದೆಂದು ಬಗೆಯದೆ | ಕಡುಗಲಿಗಳಚ್ಚಡಿಸಿ ಕಾದಿದ
ರಡಗಿನವಾರಿಯು ಮರುಳ ಪಡೆಗೆನಿಸಿತಾ ರಣವು || ೨೧ ||

ತಕ್ಕ ಭಟರು ಸಹಸ್ರ ಭಟರೆನೆ | ಲಕ್ಕ ಭಟರಾ ಕೋಟಿ ಭಟರೆನ |
ಲುಕ್ಕಿ ನಿಂದಿರಿದಾಡಿ ಮಡಿದವು ಕಂಡಲೋಹಗಳ ||
ಹಕ್ಕರೆಯ ಪೊಗರಂಬಗಳ ಚೆಲು | ವಿಕ್ಕಡೆಯೆ ಝುಲ್ಲಿಗಳ ಸಡಕದ |
ವೊಕ್ಕುಳುರು ಗಂಟೆಗಳ ತುರಗದಳಂಗಳತಿಮಸಗಿ || ೨೨ ||

ಸಿಂಗರದ ಬಲುವಜ್ರಮಯವಹ | ಕಂಗಲಿನ ಸೀಸಕದ ರಾಘೆಯ |
ತುಂಗಕಾರಿಯ ಭಲ್ಲೆಯದ ಸೆಲ್ಲೆಯದ ಖೇಡೆಯದ ||

ಕೆಂಗರಿಯ ಬತ್ತಳಿಕೆಗಳ ಚ | ಕ್ರಂಗಳೀ ದಿಟ್ಟಿಗಳ ಬಲು ಖಡು |
ಗಂಗುಳುಬ್ಬರವಾದ ಗೋಳಾಯ್ತುರು ಚಬಕುಮಾಡಿ || ೧೩ ||

ಖುರಹತಿಯ ಬಿರುದನಿಗೆ ಬೆದರಿಸಿ | ದುರಗ ಲೋಕವ ಚಿಮ್ಮುಗಲ್ಲು |
ಪ್ಪರಿಸಿತಾಗಲು ಮುರಿದು ದರುಣನ ಕಾಲು ದಿನಕರನ ||
ತುರಗವೊಂದಳಿದುದು ರಜೋ ಭೂ | ಧರವ ಪಾಯ್ದೊಡೆದವ ನರಿಯೆ ನೀ |
ನಿರುತಲದೆಯಂದಿಂದಲೊಂದೇ ಗಾಲಿರವಿರಥಕೆ || ೧೪ ||

ಪ್ರಳಯ ಕಾಲದ ತುಂಗಭಂಗಂ | ಗಳನೆರವಿಯೋವಾಹನವೊ ಮನ |
ಗಳೆಹಯಾಕೃತಿಯಾದವೋಯೆನೆ ದಿಟ್ಟಿಯುಂ ಮುಂಚೆ ||
ಅಳವಿಗೊಟ್ಟವು ಸಿಡಿಲು ಸಿಡಿಲೊಳು | ಹಳಚಿದವೊಯೆನೆ ತಾಗಿದವೊ ಕ |
ಣ್ಣಳುಕೆ ವಿಳಯದ ಮಿಂಚುಗಳವೊಲು ಬಾಳ್ಗಳಾಡಿದವು || ೧೫ ||

ತುರಗ ದಳಗಳು ಬೆರಸಿದನಿತರೊ | ಳಿರದೆ ಗಗನವೆ ಪೂತುದೋಯೆನೆ |
ಪರಕಲಿಸಿದವು ಮೊರೆವ ಪಂದಲೆಗಳು ವಿಗುರ್ವಿಸುತ ||
ಕರವುಡಿದು ತೋಳ್ಪರಿದು ತೊಡೆಯುಡಿ | ದುರುವಡೆದು ಕತ್ತರಿಸಿ ನಡುಭೋ |
ರ್ಗರೆದುದರುಣಜಲಾಂಬುನಿಧಿ ಸಂಗ್ರಾಮ ಭೂಮಿಯಲಿ || ೧೬ ||

ಕಲ್ಲಮಳೆ ಮೇಣ್ಕರೆದುದೆನೆ ನಭ | ದಲ್ಲಿರದೆ ಪಂದಲೆಗಳಾದರೆ |
ಎಲ್ಲಿ ಬೀಳ್ದವು ತಮ್ಮ ಜನನದಲುಂಡ ಕೆಂಡಗಳ ||
ನಿಲ್ಲದೇಂ ಕಾರಿದವೊಯೆನೆ ಕಿಡಿ | ಚೆಲ್ಲಿದವು ಲೋಹಗಳೆಣೆದು ನಭ |
ದಲ್ಲಿ ಪಗಲುಳುಗಳು ನೆರೆದವೊಯೆನಿಸಿ ತೋರಿದವು || ೧೭ ||

ನೊಸಲೆದೆಯ ಬಲುಗಾಯದಿಂ ಕಿಡಿ | ಮಸಗಿದಂದದಿ ಸೂಸೆ ನೆತ್ತರು |
ನೊಸಲ ಕಂಗಳ ರುದ್ರರರೆಬರು ಬಂದರೆಂದಾರ್ದು ||
ಕುಸಿದು ಭಕ್ತಿಯಲೆರಗಿ ಭೂತ | ಪ್ರಸರ ಸೇವೆಯ ಮಾಡಿದವು ಬಿಸಿ |
ಬಿಸಿಯುನೆತ್ತರ ಕುಡಿದು ಸೊಕ್ಕಿಂದಾ ರಣೋರ್ವಿಯ || ೧೮ ||

ಇವನ ನೊಸಲೀರೊಯಿತ ಬೆಳ್ಪುದೊ | ನಿವನದಾವನು ತಕ್ಕನೆಂದಾ |
ದಿವಿಜಗಣಿಕಾಗಣಕೆ ತೋರುವ ತೆರದಿ ಕೆಲರಲ್ಲಿ ||
ತಿವಿದುದೋರ್ವಳ ಸಾಲಿಗಳ ಮ | ತ್ತವರನಾ ಭಲ್ಲೆಯದ ಮೊನೆಯಿಂ |
ದವ ನೆಗಹಿ ಪಡಿದಿರ್ದರೀಕ್ಷಿಪ ಸುರರು ಬೆರಗಾಗೆ || ೧೯ ||

ತುರಗಗಳ ತಲೆ ಸಿಡಿದು ಮೇಗಡೆ | ಇರದೆ ಬೀಳುತ ನರರ ಮುಂಡದೊ |
ಳುರು ಭಟರ ಪಂದಲೆಗಳಶ್ವಕಬಂಧದಲಿ ನೆಲಸಿ ||

ಧುರಧರೆಗೆ ಘೋಡಾಮುಖರು ಬಂ | ದರೊ ಪುರುಷಮೃಗನಿಚಯ ಸುಳಿದವೊ |
ಪರಿಕಿಸುವೊಡರಿದೆಂದುದಂದನಿಮಿಷ ಕದಂಬಕವು || ೩೦ ||

ಸಿಡಿದು ಬೀಳುವ ತಲೆ ಪಲವು ಜಡೆ | ವಡದರ್ು ಪಲವೊಂದಾಗಿ ವೀರದಿ |
ಎಡೆವಿಡದೆ ಕುಣಿದಾಡುವಟ್ಟೆಗಳಗ್ರದಲಿ ಸೇರೆ ||
ಬಿಡದೆ ನಾಲ್ಮೊಗರೈಮೊಗರು ಮಿಗೆ | ಷಡಮೊಗರು ದಸಮೊಗರು ಸಂಗರ |
ಪೊಡವಿಗವತರಿಸಿದರೊ ಎನೆ ಭಯವಿತ್ತುದಾಹವವು || ೩೧ ||

ಸರಳುಗಳ ನಡೆಗೊತ್ತಿ ತ್ರ್ನಿ | ತಿರುಗುತವೆ ಸುರ್ರೆನುತ ಹರಿದವು ||
ಪರಿಯೊ ಯೆನೆ ದೆಸೆದೆಸೆಗೆ ತಲೆಗಳ | ಪರಪಿದರು ಪಾರುಂಬಳೆಗಲ |
ಚ್ಚರಿಯ ಭಟರಿಡಲಚ್ಚರಸೆಯರೆ ಕಂಡು ಬೆರಗಾಗೆ || ೩೨ ||

ಸಿಡಿದ ತಲೆಗಳು ಗಗನದಿಂ ಬೀ | ಳ್ವೆಡೆಯೊಳೊದಗಿದ ಚಕ್ರಚಕ್ರವ |
ನಡುವೆ ಸಿಲುಕಲು ಭರದಿ ತರತರದಿಂದ ಹೋಗುತಿರೆ ||
ಕಡುಮುದದಿ ಧುರದೇವಿ ಯೆಣ್ದೆಸೆ | ಮಡದಿಯರಿಗರುಣಾಬ್ಜ ಕೆಂಗೂ |
ಳ್ವಡಸಿಯಟ್ಟುವ ಪರಿಯಣದ ಬಾಯಿನಗಳೆನಿಸಿದವು || ೩೩ ||

ಹೊಡೆದಡೊಂದೇ ಹೊಯ್ಲಿಗೆರಡೇ | ಕಡಿಗಳಾದವು ಕುದುರೆ ಬಾನಿಂ |
ಕೆಡೆವ ತಲೆ ಖಡುಗಾಗ್ರದಲಿ ನಿಲೆಲೋಟಕರ ಕಣ್ಣೆ ||
ಖಡುಗಲತೆ ಹೂವಾಯ್ತೊ ಬೀರದ | ಮಡದಿಯರಮನೆಗತಿಮೆರೆವ ಮುಂ |
ಗುಡಿಯ ಕೀರಿತಿಮುಖವೊಯೆನಿಸಿತದೊಂದು ರೂಪಿನಲಿ || ೩೪ ||

ತುಂಡುತುಂಡಾದಶ್ವಗಳ ಕಡಿ | ಖಂಡವಾದಾ ರಾಹುತರ ಕೊಳ |
ಗೊಂಡನೆಣಗಳ ಮುಳಿದು ಮೂಲೆಯ ಹರಿದ ಹಾರುಗಳ ||
ಬೊಂಡೆಗರುಳಿನ ಬಣಬೆಗಳಯೆಡೆ | ಗಂಡಿಕೆಗಳಿರಲುಡಿದ ಖಡುಗದ |
ಮುಂಡಗಳ ಮಂಡೆಗಳ ತಂಡಗಳಿತ್ತುದತಿ ಭಯವ || ೩೫ ||

ತುರಗದಳವಳಿವನು ನಿರೀಕ್ಷಿಸು | ತಿರದೆ ಪೆಂಪಿನ ಶೂರ ಸಾರಥಿ |
ಧರತುರಂಗಮ ಧೃತವಿತತ ಶಸ್ತ್ರಾಸ್ತ್ರ ಚಾಪಯುತ ||
ವರರತುನಮಯ ಕೃತಫಲಕ ಬಂ | ಧುರ ರಜತಸುವರ್ಣನಾಂಗ |
ಸ್ಫುರಿತ ಕಾಂಚನದಂಡ ಸಂಭೃತ ರತನಿಗಳು ಮಸಗಿ || ೩೬ ||

ಕರಿಯ ಸಿಂಹದ ಹೆಬ್ಬುಲಿಯ ಶೂ | ಕರದ ವೃಷಭನ ನವಿಲ ನಾನಾ |
ಪರಿಯ ಬಿರುದ ಧ್ವಜಪತಂಗಳು ಮಿಳಿರೆ ನೇಮಿಗಳ ||

ಭರಕೆ ಧರೆಕಂಪಿಸಲು ಚೀತ್ಕೃತಿ | ಶರಧಿಯನು ತುಳುಕಾಡೆ ಪೊರ್ದರು |
ವರ ರಥಾಥಿರಥಾರ್ಧ ರಥಮಯ ರಥಮಹಾರಥರು || ೩೭ ||

ಮುಸುಕಿದುದು ಕೆಂಧೂಳಿಧಾಳಿಯ | ಮಸಕಿನಲಿ ಹಯರಥ ಶುಕವು ಪೂ |
ಣ್ದಿಸುವ ಬಿಲುಗಳ ಠಂಕೃತವು ದಸದೆಸೆಯಿನಾವರಿಸೆ ||
ಹೊಸಮಸೆಯ ಹೊಗರಂಬುಗಳು ನಿ | ಪ್ಪಸರದಲಿ ಕೆಂಗರಿಯ ಭೀಂಕೃತ |
ಯೆಸೆಯೆ ಗಣನಾತೀತ ಮುಸುಕಿದುದು ಭಯರಥಿನಿಯಲಿ || ೩೮ ||

ಕೊಚ್ಚಿದವು ಬಹುಕಣೆಗಳನು ಮೊಗ | ವುಚ್ಚಿದವು ತೇಜಿಗಳ ಥಟ್ಟನು |
ಬಿಚ್ಚಿದವು ಸಾರಥಿಗಳೆದೆಯನು ಸಿಂಧುಗಳ ಕಡಿದು ||
ಹಚ್ಚಿದವು ಚಾಪಗಳ ತುಂಡಿಸಿ | ಚುಚ್ಚಿದವು ಕವಚವನು ರಥಿಕರ |
ಕಚ್ಚಿದವು ತಲೆಗಳನುರುಚ್ಚಿದವೆಚ್ಚ ಸರಳುಗಳು || ೩೯ ||

ಮಡಿಯೆ ಸಾರಥಿ ತಾವೆ ರಥವನು | ನಡೆಯಿಸುತ್ತೆಚ್ಚಾಡಿ ಕುದುರೆಯು |
ಪಡಲಿಡಲು ಚಾಪವ ಬಿಸುಟುರಥದಿಂದಧುಮ್ಮಿಕ್ಕಿ ||
ತೊಡರ್ದು ಖಡ್ಗಾಖಡ್ಗಿಯಲಿ ಪೂಣ್ | ದೊಡನೆ ಹಾಣಾಹಾಣಿಯಲಿ ಸಂ |
ಗಡಿಸಿ ಮುಷ್ಠಾಮುಷ್ಠಿಯುದ್ಧದಿ ಕಾದಿದರು ಭರದಿ || ೪೦ ||

ಅಂಬು ಗೂಡಾಗಿರ್ದ ರಥಕ ಕ | ದಂಬವಾರಥದೊಳಗೆ ಪಳಯಿಗೆ |
ದಂಬವನು ನೆಮ್ಮಿರ್ದರಾಟವು ತಿರ್ದಬೊಂಬೆಯೆನೆ ||
ಅಂಬುಕೊಳೆ ತಲೆವಾರಿ ಅಂತಕ | ಡೊಂಬನಾಡಿಪ ಹಲಗೆ ಸೂತ್ರದ |
ಬೊಂಬೆಗಳವೊಲು ಕುಣಿದು ಕೆಡೆದುವು ತೇರೊಳಟ್ಟೆಗಳು || ೪೧ ||

ಮಸೆದ ಕೂರಂಬುಗಳು ಮಿಗೆ ತುಂ | ಡಿಸಿ ನೊಗನ ಜೊತ್ತಗೆಗಡಿದು ಸಂ |
ಧಿಸಿದ ರಥಗಳ ಹಲಗೆ ಬಿಚ್ಚಿಯೆ ರುಧಿರಗಡಲೊಳಗೆ ||
ದೆಸೆದೆಸೆಗೆ ಪೆಣವೆರಸಿ ಶಾಲಿಗ | ಳಸಮದೀಯವಮ ಪುರಗತರ ದಾಂ |
ಟಿಸುವ ಪರುಗಲುಗಳ ಗಡಣವೆನಲೊದವಿ ತೇಲಿದವು || ೪೨ ||

ರಣ ಮಹಾರಾಕ್ಷಸಿ ರಥಿನಿಯನು ನೋ | ನಣೆನೆಯೆ ಕಲ್ಪಾಂತರ ಮುಗಿಲುಗಳ |
ಗಣನೆಯೆನೆ ಕಡುಗರ್ಗಿ ಬೆಳೆದಾನೆಗಳು ತರತರದಿ ||
ಪೆಣೆದು ಹೆಮ್ಮಿಳಿ ಹೊರಜೆಗಳು ಕೀ | ಲಣೆಯ ರನ್ನದ ಕಾಂತಿಗಳು ಸಂ |
ದಣಿಸಿ ಪಣ್ಣಿದ ಪಂಚರತ್ನದ ಪಕ್ಕರೆಗಳಿಂದ || ೪೩ ||

ನೆಗೆದ ಬಾರಹ ಕಿಡಿಯ ಮುಖರಂ | ಬಗಳ ಜಲ್ಲಿಯ ಸಡಕಗಳ ಘಂ |
ಟೆಗಳ ಸಿಂಧದ ಸತ್ತಿಗೆಯ ಸೊಬಗೆಸೆವ ರಂಚೆಗೆಯ ||

ಬಿಗಿದು ಜೋದರಡರ್ದು ಬಿಲುಗಳ | ಹೊಗರೊಗುವ ಸರಳುಗಳ ಬಹು ಕೈ |
ದುಗಳ ಸಮಕಟ್ಟಿಂದೆ ಪಣ್ಣಿದ ಗಜಘಟಾವಳಿಯ || ೪೪ ||

ಕರಿಮುಗಿಲ ತುರುಗಲೊಳು ಬಿಜ್ಜು | ಧರರು ಸೊಗಯಿಸುವಂತೆ ಕರಿಕಂ |
ಧರದೊಳಿಹ ಜೋದರು ಬಳಿಕ ಮೊಗವಡುಗುಳನು ಕಳೆಯೆ ||
ಶಿರದಲಂಕುಶ ಬಳ್ಳಿ ಮಿಂಚಿನ | ಪರಿಯೆನಿಸಿ ಪೊಳೆದಾಡೆ ಕಂಗಳ |
ಉರಿಯನುಗುಳುತ ಪರಿದವದ್ಭುತವಾಗೆ ಗಜಘಟೆಯು || ೪೫ ||

ಎರಡು ಅಂಕೆಯು ವೆರಸಿ ಕೈವೆಡೆ | ದುರುತರದ ಪರ್ವತಗಳೆನೆ ಪ |
ಕ್ಕರೆ ಕೆದರೆ ಕೈನೀಡಿ ಪರಿವವು ಕಲ್ಪಸಮಯದಲಿ ||
ಉರಿವವಹ್ನಿಯ ಕರಿಯ ಹೊಗೆತರ | ತರದಿ ಪಸರಿಸಿ ಪರಿದುವೆನೆ ಸಂ |
ಗರಧರೆಯೊಳೆಡೆವಿಡದೆ ಮುಸುಕಿದವಾನೆಗಳ ಫೌಜು || ೪೬ ||

ದಿಗ್ಗಜಂಗಳು ದಿಗ್ಗಜಂಗಳೊ | ಳಗ್ಗಳಿಸಿ ತಾಪಂತೆ ತಾಗಿದೊ |
ಡುಗ್ಗಡಿಸಿದವು ಸಿಡಿಲ ಕೋಳ್ಕುಟ್ಟಿದವು ಮೊಗವೆತ್ತಿ ||
ನಿಗ್ಗವದಿ ಪೂಣ್ದಿರಿದವೇರಿಂ | ಬೊಗ್ಗನರುಣ ಜಲ ಪ್ರವಾಹವು |
ಭೋರ್ಗರೆಯಲದ್ಭುತವನಿತ್ತುದು ಗಜದ ಕಾಳಗವು || ೪೭ ||

ಭರದಿ ನೂಂಕುವೊಡರ್ಪು ಪೊಯ್ಯು | ಬ್ಬರದಧಟ ವಂಟಿಸುವ ಬಿನ್ನಣ |
ಕರವ ಕೊಡುವ ಬೆಡಂಗು ಕೊಂಕುವಳುರ್ಕೆ ಪುಗುವಾರ್ಪು ||
ತೆರಳಿ ಪುರವಣಿ ಪೊಕ್ಕು ನೀರ್ಗವ | ದಿರಿವ ತೆಗೆವಡರ್ವಣೆವ ಪೊಣರ್ವ |
ಚ್ಚರಿಯ ಸಾಧನೆಯಿಂದ ಕಾದಿದವಾನೆಗಳ ಫೌಜು || ೪೮ ||

ಸಿಡಿಲೆರಗಿದಂದದಲಿ ಲೌಡಿಯ | ಪಿಡಿದು ಕರದಿಂ ಕಂಗಳಾರ್ಪಿಂ |
ಪೊಡೆಯೆ ರಸದಾಳಿಂಬದೆಳೆ ಬಿತ್ತುಗಳ ವೊಲು ನುರಿಯೆ ||
ಒಡೆದು ಕುಂಭದ ಮುತ್ತು ನೆತ್ತರ | ಕಡಲೊಡನೆ ವಾರಿಧಿಯನೈದಿದ |
ಕಡೆಯನಬುಧಿಯೊಳಾಯ್ತು ಮೌಕ್ತಿಕವಲ್ಲದಂದುಂಟೆ || ೪೯ ||

ಪಟ್ಟೆಯದ ಕೈಯಿಂದೆ ಕರಿ ಪರಿ | ದಟ್ಟಿ ಪೊಯ್ದೊಡೆ ಕೈಪರಿದು ಕಾ |
ಲೆಟ್ಟು ಕೋಡೂರಿರ್ದವಾದಿ ವರಾಹದಂದದಲಿ ||
ಕುಟ್ಟಿದೊಡೆ ಕೋಡುಡಿದು ಕೊರಳೆಡೆ | ಬಿಟ್ಟು ಕಾಲೊಳು ಪರಿದು ಭೂಮಿಗೆ |
ಬಿಟ್ಟು ಬೀಳುವ ತೆರೆದು ಬಿದ್ದವು ಗಜಘಟಾಳಿಗಳು || ೫೦ ||

ತಿರುವ ಜೇವೊಡೆಗೈದು ಜೋದರು | ನೆರೆದು ಭೋರನೆ ಸರಳ ಮಳೆಯನು |
ಸುರಿಯೆ ಮುಸುಕಿದವಿಭಘಟಾವಳಿಯಿರದೆ ದೆಸೆದೆಸೆಗೆ ||

ಪರಿದವೇರಿದವಾಗಸವನಾ | ಸುರರ ಕಣ್ಣುಗಳುಕಲು ಕರಿಯಪ |
ಕರೆವಡೆದು ಕಟ್ಟುರ್ಚಿ ಬಿದ್ದವು ಕೂರ್ಗಣೆಗಳಿರದೆ || ೫೧ ||

ಪರಿಯೆ ಗುಳಮುಖರಂಬರಂಚೆಗೆ | ಮುರಿಯೆ ಬಲ್ಲೇರಿಂದೆ ಪಿಂತಣ |
ವರಗಿಕುಳ್ಳಿರೆದಾಡೆಗಡುಬೆನಲೊಂದು ಕೊಂಚುಡಿದು ||
ಮೆರೆಯ ಕೆಲದೊಳು ಕೆಂಪಿನರಳಿಂ | ತುರುಗಿಯರ್ಚಿಸಿದಂತೆ ಪುಣ್ಗಳು |
ನೆರೆಯೆ ಕರಿಪತಿಯಿರ್ದುದಂದು ವಿನಾಯಕನ ತೆರದಿ || ೫೨ ||

ತುರಗಿ ನಡೆಸರಳಿಬ್ಬರಿಯ ಕೆಂ | ಗರಿಗಳೊಪ್ಪ ವರಂಕೆಯಾಗಿರೆ |
ನಿರಿಮುಗಿಲ ಪೊದರಿಂದೆರಗುವಾಗರುಡುಳವೆನಿಸಿ ||
ನೆರೆದ ಕರಿಯಿಂದುರುಳಿದರು ತಲೆ | ಪರಿದು ತೊಡೆಕಡಿದೆಲು ಮುರಿದು ಕು |
ಕ್ಕರಿಸಿದರು ಕಲಕೆಲರು ಜೋದರು ಭರದಲೆಚ್ಚಾಡಿ || ೫೩ ||

ಮಸೆದ ತಲಕಣೆಗೊಂಡು ತಲೆತುಂ | ಬಿಸಿ ಕಪಾಲವು ಚೆಕ್ಕೆ ಬಡನಡು |
ಹಿಸಿಯೆ ತೊಡೆಬೇರಾಗಿ ತೋಳ್ಗಳು ತುಂಡುತುಂಡಾಗೆ ||
ಬಸುರೊಡೆಯೆ ಕರುಳುಕ್ಕೆ ಖಂಡವು | ದೆಸೆವಲಿಗಳೆನೆ ಬೀರೆ ಕೊಚ್ಚೆದ |
ರಸುವ ಬಿಡುವಾನೆಗಳು ಸಹವುರುಳಿದರು ಭೂತಳಕೆ || ೫೪ ||

ಖಂಡಗಳ ಬಲುರಾಶಿಪರ್ಚನೆ | ಮಂಡೆಗಳ ಪೇರ್ವೆಟ್ಟುಗುಡಿಸಿದ |
ಮುಂಡಗಳ ದಿಂಡುಗಳು ನೆತ್ತರ ತೊರೆನೆಣೆದ ಕೆರೆಯು ||
ತಂಡತಂಡದಿ ಮುಗಿಲೆಣವ ವೇ | ತಂಡಗಳೆ ಪೆಣನಾಗಲೀಕ್ಷಿಸೆ |
ಬಂಡಣಾಂಗಳವತಿ ಭಯಂಕರವಾಯ್ತು ಕಂಗಳಿಗೆ || ೫೫ ||

ಖಂಡಮಯ ಬಂಬಲಗರುಳಮಯ | ಮುಂಡಮಯನೆಣಮಯಮಿದುಳಮಯ |
ಜೊಂಡೆಮಯ ವಸ್ತಿಗಳ ಮಯ ಮುರಿವಡೆದ ಶಸ್ತ್ರಮಯ ||
ಮಂಡೆಗಳ ಮಯ ಪರಿವನೆತ್ತರ | ಖಂಡಮಯ ಮಿದುಳುಂಡು ತೇಗುವ |
ಚಂಡಿ ಶಾಖಿನಿ ಢಾಕಿನೀಮಯವಾಯ್ತು ರಣಭೂಮಿ || ೫೭ ||

ಉರುಳಿದಾ ಪೆಣಗಳಿಗೆ ಝುಮ್ಮನೆ | ಮೊರೆದೆರಗೆನೊಳಲವಿಲಿವಿಸುತು |
ಬ್ಬರಿಸಿ ಪುಳುಗಳು ಪೊಲಸುಗಂಧಕೆ ಹದ್ದು ಬಂದೆರಗೆ ||
ನರಿಗಳಾಗವಲರಿದು ಬೇಗದಿ | ಪರಿದು ಬಂದವೊಲೆಸಲು ಕೊಳೆ ಕೊ |
ಕ್ಕರಿಕೆಯನು ತೋರಿದುದು ಸಂಗರ ರಂಗವೀಕ್ಷಿಸಲು || ೫೮ ||

ಆಗಳಾ ಭೂತಗಳು ನೆರೆದಿಂ | ಬಾಗಿ ಬಾಯ್ದೆರೆದಡಗುಗಳ ಪಸಿ |
ದೊಗಲಗಿದಗಿದೊಡಲು ಬಿರುದಿನ ತಿಂದು ರಕುತವನು ||

ರಾಗದಿಂ ತಣಿಯೀಂಟಿ ರ್ದ್ವ | ತೇಗಿ ಕೈಪರೆಗುಟ್ಟಿ ಸೊಕ್ಕಿಂ |
ಕೂಗಿ ಜಕ್ಕಾಡಿದವು ಸಂಗರರಂಗದಲಿ ನಲಿದು || ೫೮ ||

ಮೀರಿ ಬಹಳವನುಂಡ ಜರನುರಿ | ಕಾರಿದಂದದಿ ಕೊಕ್ಕರಿಕೆಯನು |
ಬೀರಿದುದು ಚತುರಂಗ ಸೈನಿಕದೊಂದಳಿವು ನೋಡೆ ||
ಮೀರಿದೆರಡಕ್ಷೋಹಿಣಿಯ ಪರಿ | ವಾರವಳಿದುದು ಚಕ್ರಪಾಣಿಗೆ |
ವಾರಿಜಾಕ್ಷಂಗಳಿದುದೊಂದಕ್ಷೋಹಿಣಿಯ ಬಲವು || ೫೯ ||

ಆ ಸಮಯದಲಿ ದಿನಪನುಳಿದಖಿ | ಳಾಸೆಯನು ಮಧ್ಯಸ್ಥನಾಗಿರೆ |
ಲೇನು ತೇಜವನಾಂತು ರಾಜಿಪನಂತುಟಿರದಪರ ||
ಆಸೆಗೈದಪ ತೇಜನಾ ನಿವಿ | ಲಾಸವಳಿದಸ್ತಮಿಸಿದವನೆನೆ |
ಆಸೆಯೆಂಬುದು ಕಷ್ಟವೆಲೆ ಭೂಪಾಲ ಕೇಳೆಂದ || ೬೦ ||

ಪಿಂಗ ಸಂಧ್ಯಾಂಬರದಾವುದು | ಸಂಗರೋರ್ವರೆ ಯಾವುದೆಂಬ ಮ |
ನಂಗಳು ಭಯದಳಕ್ಕೆ ತೋರಲು ಬಂಡಳಂಗಳವ ||
ಹಿಂಗಿ ಮಾಗಧನತ್ತಲಿತ್ತಲು | ಶಾಂರ್ಙ್ಗ ನಿಜಸೈನಿಕವೆರಸಿ ಬೀ |
ಡಿಂಗೆ ಬಂದರಮನೆಯೊಳಿರ್ದರು ಭೂಪ ಕೇಳೆಂದ || ೬೧ ||

|| ಅಂತು ಸಂಧಿ ೪೬ ಕ್ಕ ಮಂಗಲ ಮಹಾ ||

## ಯುದ್ಧ ಪರ್ವ (ಸಂಧಿ ೪೭)

**ಸಂಧಿ ೪೭**

ಎರಡು ಬಲದೊಳು ನೆರೆದ ರಣರಸಿ | ಕರುಮೊನೆಯ ನಾಯಕರು ಮಿಗೆ ಸಂ |
ಗರವ ಮಾಡಿದರಧಟು ಮಿಗೆ ಸನ್ನಾಹ ಭೂಮಿಯಲಿ || ಪದ ||

ಕೇಳೆಲೇ ಮಾಗದ ಧರಿತ್ರೀ | ಪಾಲ ತಂತಮ್ಮೊಳ್ದರೆಸೆವಿರು |
ಓಲಗದೊಳಖಿಳಾವನಿಪ ಸಾವಂತ ನಾಯಕರು ||
ಆಳುತನವನು ತುಮುಳ ಯುದ್ಧದ | ಮೇಲೆ ಕಾಣಲು ಬಾರದದರಿಂ |
ನಾಳೆ ಮಾಳ್ಪುದುವೆಂದರವರಾ ದ್ವಂದ್ವ ಯುದ್ಧವನು || ೧ ||

ಎಂದು ಮತ್ತಾ ದ್ವಂದ್ವಯುದ್ಧಕೆ | ತಂದು ಮನವನು ಹೊನ್ನ ಬಟ್ಟಲ |
ಲೊಂದಿದಾ ಕರ್ಪೂರ ವೀಳೆಯವೀಸಿ ಕೊಂಡಿರದೆ ||

ಬಂದು ತಂತಮ್ಮ ಶಿಬಿರ ಕೈ | ತಂದು ತಮ್ಮ ಚತುರ್ವರ್ಣಂಗಳ |
ನಂದು ದಯೆಯಿಂ ನೋಡಿಯಾರೈದರು ವಿವೇಕಿಗಳು || ೨ ||

ಅಳಿದವರ ಪೈಕಕ್ಕೆ ಗಾಯದ | ಉಳಿದರಿಗೆ ತುರಗಗಳು ಕೈಗಳಿ |
ದವರಿಗಾಯುಧಗಳುಡಿದವರಿಗೆ ವರೂಥಗಳು ||
ಕಳನೊಳಗೆ ಮುರಿದವರಿಗಪ್ಪುದ | ನಳವಿಗಳಿದೀ ವೀಸಿಕೊಂಬ |
ಗ್ಗಳದ ದಂದುಗಲಿಂದಲಾಯ್ತು ರಣಾರ್ಥಿ ಜಾಗರವು || ೩ ||

ಬಿದಿಯೆನಿಪ ಕಮ್ಮರನು ಪೆಚ್ಚಿದ | ಮೊದಲ ಸಂಜಯ ಕೇಸುರಿಯೋಳಾ |
ತುದಿಯಿರುಳ ಮಸಿಬೇಯೆ ಕಾಸಿದ ಲೋಹಪಿಂಡವನು ||
ಚದುರಿನುಪರಿಮ ಕಿರಣದಿಕ್ಕುಳು | ನುದಯಗಿರಿಯೆಡೆಗಲ್ಲ ಮೇಗಿರಿ |
ಸಿದನೊಯೆಂದೆನೆ ತೋರಿದುದು ಮಾರ್ತಂಡ ಮಂಡಲವು || ೪ ||

ಉದಯಿಸಿದ ರವಿಯೊಡನೆ ವಿಕ್ರಮ | ಉದಯಿಸಿತು ಪಟುಭಟರಿಗಾಗಲು |
ಪದುಮನಾಭನುಮಾತ್ರಿಖಂಡಾಧೀಶ್ವರನುಮಿರದೆ ||
ಮೊದಲವೊಲು ಸಮಕಟ್ಟೆ ಸಂಗ್ರಾ | ಮದ ಧರಿತ್ರಿ ಯಲೊಡ್ಡಿ ನಿಂದರು |
ಸದೆವ ನಿಸ್ಸಾಳಗಳ ರವವಾರಿಸೆ ದಸದಿಸೆಯ || ೫ ||

ಮುರಮಥನನಾ ವುಗ್ರಸೇನನ | ಬರಿಸೆ ಸೇನಾ ಪಟ್ಟವಿದು ನಿನ |
ಗಿರಲಿಯಿಂದಿನ ದಿನದಲೆಂದು ನಿಯೋಗಿಸಲಮೊಡನೆ ||
ವರಯುಧಿಷ್ಠಿರರಾಯ ರಿಪು ಭೀ | ಕರವಿರಾಟ ಕುಮಾರ ಶ್ವೇತನ |
ಕರೆದು ಕಳುಹಿಸಲೀರ್ವರುಂ ತಮ್ಮಖಿಲ ಜನಸಹಿತ || ೬ ||

ಧರಧರೆಗೆ ನಡೆದೊಡ್ಡಿ ನಿಲಲವ | ರುರು ಜರಾಸಂಧನು ತನಗೆ ಸರಿ |
ದೊರೆಯೆನಿಪ ಶತ್ರುಕ್ಷಯಂಗಾ ಸೈನ್ಯ ನೇತೃತೆಯ ||
ದೊರೆಕೊಳಿಸೆ ಕೌರವನುಮೊಡನಾ | ಸುರನದಿಯ ನಂದನಗೆ ಪೇಳಲು |
ನೆರೆದ ಪಡೆಸಹಿತೊಡ್ಡಿ ಕೈವೀಸಿದರು ನಿಜಬಲಕೆ || ೭ ||

ಜಲಧಿ ಮೇಲೆಗಳೆರಡು ಎಡವಿಡ | ದುಲಿದು ತಮ್ಮೊಳು ತಾಗಿದಂದದಿ |
ಹಳಚಿದುಭಯ ದಳಂಗಳಾಗಲು ತುಮುಳಯುದ್ಧದಲಿ ||
ಇಲೆ ನಡುಗೆ ವಾರಾಸಿಗಳ ತಾ | ಯ್ಮಳಲು ತೂರಲು ಪಸರಿಸಿತು ದಿಗು |
ವಳಯವನು ನಿಸ್ಸಾಳಕೋಟಿಯ ಭೂರಿಭೀಳರವ || ೮ ||

ಏನನೆಂಬನು ಬಿಲ್ಲವರ ಬಲ | ಮಾನವನು ಪೂಣ್ದೆಸೆವ ವಿಲಯಕೃ |
ಶಾನುವಿನ ಕಬ್ಬೊಗೆ ಕವಿದ ತೆರನಾಗಿಯೆಡೆ ಗುಡದೆ ||

ಸೇನೆಯೆರಡನು ಕವಿದೆಸೆಯೆತ್ತಿ ನೆ | ಲನನು ತಾನೆತ್ತದನು ಮೇಗಣ |
ಬಾನದೇತೆಂದರಿಯಲರಿದಾಯ್ತು ಭಯಬಲದೊಳಗೆ || ೯ ||

ಒಂದು ಬಾಣವು ಹಸಿಯದಾಗಳೆ | ತಿಂದು ತೇಗಿದವಹಿತ ವೀರರ |
ವೃಂದವನು ಬಳಿಕೇನನೆಂಬೆನು ರಕುತ ಗಡಲೊಳಗೆ ||
ಸಂದಬಿಲುವೊಡೆಯೊಡಲ ತೆಪ್ಪದ | ಸಂದಣಿಗಳವು ತೇಲುತಿರ್ದವ |
ದೊಂದುಲವುಕುಳವಾಯ್ತು ನಿಮಿಷದಲಾ ಮಹಾರಣವು || ೧೦ ||

ಫಡಪಡಿರಿ ತರಿ ಕುತ್ತು ಕಡಿಪೊಡೆ | ಕಡೆಯೆನುತ ಬೊಬ್ಬಿರಿದು ಪರಿಗೆಯ |
ನೆಡದ ಮೈಯಲಿ ಧಪ್ಪಳಿಸಿ ಬಲಗೈಯ ಕಡಿತಲೆಯ ||
ಝುಡಿದು ಝುಳಪಿಸಿ ಹರಿಗೆಹರಿಗೆಯೊ | ಳಡಸಿ ಹೊಡದಾಡಿದರು ಪ್ರಳಯದ |
ಸಿಡಿಲುಗಳು ಕೋಲಾಹಳವೊಯೆನೆ ಮಸಗಿತಾ ರಣವು || ೧೧ ||

ತುಂಡು ತುಂಡಾದವು ತೊಡೆಗಳೆದೆ | ಗುಂಡಿಗೆಯ ಬಿಚ್ಚಿದುದು ಮೇಲಕೆ |
ಮಂಡೆಗಳು ಪಾರಿದವು ಭೂತಗಣಂಗಳೊಡನೊಡನೆ ||
ಮುಂಡಗಳು ಕುಣಿದಾಡಿದವು ಮಡು | ಗೊಂಡನೆತ್ತರ ಕಡಲೊಳಗೆ ಪೆಣ |
ತಂಡತಂಡದಿ ಮುಳುಗುತೇಲುತಲಿರ್ದವಡಿಗಡಿಗೆ || ೧೨ ||

ಕುದುರೆಗಳು ಮೊಗಮಾಡಿ ಭರದೇ | ರಿದವು ಕೆಂಧೂಳಿಗಳೆ ಭೂತಳ |
ವದಿರೆ ಖುರ ಘಟ್ಟಣೆಗೆ ರಾಹುತರೆತ್ತಿ ಖಂಡೆಯದಿ ||
ಸದೆಯ ಕಂಗಲು ಹರಿದು ಮೈಹ | ಚ್ಚಿದ ತೆರದಿ ತುಂಡಾಗೆ ಬಳಿಕ |
ಶ್ವದ ಕೊರಲು ಕತ್ತರಿಸಿಬಿದ್ದವು ಸಂಗರೋರ್ವಿಯಲಿ || ೧೩ ||

ಗಿರಿಗಳವು ಹುಡಿಯಾಗೆ ನೇಮಿಯ | ಹರಿವ ಭರಕೆ ಯುಗಾಂತ ಶರಧಿಯ |
ಪಿರಿಯ ಸುಳಿಗಳ ತೆರದಿ ತ್ರಿರ್ೆತಿರುಗುತಾರ್ಭಡಿಸಿ ||
ಅರವರಿಸದಿದಿರಾದವಾ ರಥಿ | ಕರು ಮಸಗಿಯಂಬಂಬನುಗುಳುವ |
ಪರಿಯಲೆಚ್ಚರು ಕೊಚ್ಚಿದರು ಸಿಂಧುಗಳ ಸತ್ತಿಗೆಯ || ೧೪ ||

ತುರಗಗಳು ಪಡಲಿಟ್ಟವರೆ ಬರ | ಶರಧಿ ಶರಕಾರ್ಮುಗಿಲಕೌಡಿದ |
ವರೆ ಬರರಥಂಗಲು ಮುಗಿದವು ಸಾರಥಿಗಳೊರಗಿದರು ||
ಅರೆಬರೊಡಲಲಿ ನತ್ತರೊರತೆಯು | ಪರಿದುರರೆಬರ ಪಂದಲೆಗಳಂ |
ಬರದೊಳಾಡಿದವಮದು ರಥಿಕರ ಕೋಲಖುರಪುಟದಿ || ೧೫ ||

ಬಿಸಿ ರಕುತದವಲಿಪ್ತ ಕುಂಕುವ | ರಸವ ಲೇಪವೇರ ಪುಣಗಳು |
ಮಿಸುವ ರನ್ನದ ತೊಡಿಗೆ ಕಿವಿಯೊಳುನಟ್ಟ ಕೆಂಗರಿಯೆ ||

ಎಸೆವ ಕರ್ಣಾಭರಣ ಮಿದುಳ | ರ್ವಿಸಿಯೆಸೆವ ಬಾಸಿಗವೆನಿಸೆ ಅನಿ |
ಮಿಷವನಿತೆಯರು ಕೊಂಡು ಪೋದರು ಚೆನ್ನಗಂಡರನು || ೧೬ ||

ಸಂದ ಚೋದರು ಪದಿರೆ ಭೈ ಭೈ | ಯೆಂದು ಪದಿನಾಲ್ಕುಂತೆರದಿ ಕರ |
ದೊಂದು ಕೊಲೆಯಿಂ ಮೆಚ್ಚೆ ಮೆಚ್ಚೆಂತೆಂದು ಪದಿನಾರು ||
ಚಂದ ನಾನಾ ಕೋಡುಗಳ ಕೊಲೆ | ಯಿಂದೆ ದಳಿದಳಿಯೆಂದು ಹದಿನಾ |
ಲ್ಕಂದವಹ ಕಾಲೊಲೆಯಿನಾನೆಗಳ್ಳೆದೆ ಹೋರಿದವು || ೧೭ ||

ಮತ್ತಮಾಗಳು ಭದ್ರಗಜವೊಂ | ದೆತ್ತಿ ಹಾಯ್ದೊಡೆ ಕೋಡರದನಿಯ |
ನೆತ್ತಿಯೆಲುವಿನೊಳೊಡೆದು ನಡೆ ಘೀಳಿಡುತಲದು ಮುರಿಯೆ ||
ಕುತ್ತಿದಾ ಕೋಡುಗಳು ಭೇರಿಂ | ಕಿತ್ತು ಕುಂಭದಿ ಸಿಲುಕಲೆರಡುಂ |
ನೆತ್ತರನೆ ಕಾರುತ್ತ ಕೆಡೆದುವು ಸಮರ ಭೂಮಿಯಲಿ || ೧೮ ||

ಹೊಸಮಸೆಯ ಹೊಗರಂಬುಗಳ ನಾ | ರ್ದೆಸುವ ಚೋದರು ಕೋಲುಗೊಂಡ |
ರ್ವಿಸುತ ಬಿಸುಟಂಬರಿದು ಕವಳಂಗೊಂಡವರಿಭಟರ ||
ಕಿಸುವೆಳಗ ಕಣ್ಣುಗುಳುತಿರೆ ಹಯ | ದಸುವಳಿದು ಕುಸುಗೆಡಹಿ ಚೋದರ |
ದೆಸೆಯಿಭಕೆ ಬಲಿಗೊಟ್ಟವೊಲು ಸೀಳಿಟ್ಟ ವಾನೆಗಳು || ೧೯ ||

ಕಡುವನದ ಕಲಿಗಳು ಮಸೆದ ಬಾ | ಲ್ವಿಡಿದು ಗಜವಜವೆಂಬ ವೊಲುವೇ |
ಮಿಡುಕದಡ್ಡಣವಿಕ್ಕಿ ಬೊಬ್ಬಿರಿದಾರ್ದು ಬಿರುವೊಯ್ಯೆ ||
ನಿಡಿಯ ಬರಿಕೈ ಪರಿಯೆ ಮುಂಗಾ | ಳುಡಿಯೆ ಪಕ್ಷವ ವಜ್ರಿವಜ್ರದಿ |
[ಕಡಿದ ಪರ್ವತ ನಿ] ಗಳವೊಲು ಪಡಲಿಟ್ಟವಾನೆಗಳು || ೨೦ ||

ಕಂಡು ನಿಜಬಲದಳಿವನಾ ದೋ | ರ್ದಂಡ ವಿಕ್ರಮಿ ಶ್ವೇತ ಭೂವರ |
ಚಂಡಭೀಷ್ಮರ ಸಮ್ಮುಖಕೆ ನೂಂಕಿದನು ನಿಜರಥವ ||
ಕಾಂಡತತಿಯನು ಕಾಂಡತತಿಬೆಂ | ಗೊಂಡು ಬೆನ್ನಟ್ಟುವ ತೆರದಿ ಕೋ |
ದಂಡವಿದ್ಯಾ ಚತುರನೆಡೆವಿಡದೆಚ್ಚು ಕೈಮೆರೆದ || ೨೧ ||

ಸುರನದಿಯ ಸುತನಾರ್ದೆಸಲು ಭೀ | ಕರಶರಂಗಳು ಕೊಚ್ಚಿದವು ಬಹ |
ಶರಗಳನು ಮುಂದಣೆದು ನೂಂಕೆವಿರಾಟಸುತಸವರಿ ||
ಸರಳ ಸಾರದ ಕಟ್ಟೆ ಮತ್ತೀ | ಸರಳುಗಳ ಹರಿಗಡಿದನಿಂತಿ |
ಪರಿಯಲಾ ಗಾಂಗೇಯಭೂವರ ಹೊತ್ತುಗಳೆಯುತಿರೆ || ೨೨ ||

ಮಸಗಿ ಮತ್ತಾಶ್ವೇತನಾರ್ದೆಸೆ | ಲಿಸುವ ಸರವಾಗಸದ ರೈತರೆ |
ಹೊಸಮಸೆಯ ಕವಲಂಬಿನಿಂದದ ಸವರಿ ಗಾಂಗೇಯ ||

ಅಸಮ ವಿಕ್ರಮನಹುದು ನೀನೇಂ | ದೆಸಲು ಶ್ವೇತನಮಕುಟ ಸಹ ಚೆಲು |
ವೆಸೆವ ತಲೆಹಾರಿದುದು ಗಗನಕೆ ನಿಮಿಷ ಮಾತ್ರದಲಿ || ೧೩ |

ಕುರು ಬಲದೊಳಾ ಜಯಪಟಹಗಳ | ವಿರುತಿ ನೆಗೆದುದು ಉಗ್ರಸೇನನೊ |
ಳರವರಿಸಲೆಚ್ಚಾಡಿ ಶತ್ರುಕ್ಷಯನೃಪತಿಮಡಿಯೆ ||
ನೆರೆದು ದಿತ್ತಲು ಜಯ ಪಟಹದ | ಬ್ಬರವು ಕೊಲೆಯನು ಕಂಡು ಮನಕೊ |
ಕ್ಕರಿಸಿದಂತಪರಾದ್ರಿಯನು ಮರೆಗೊಂಡನಾ ಸೂರ್ಯ || ೧೪ ||

ಹರಿಜರಾಸಂಧರ ಕಟಕಳು | ಮರಳಿ ಹೊಕ್ಕವು ತಮ್ಮ ಬೀಡನು |
ನೆರೆದ ನಾಯಕನಿಕರ ತಂತಮ್ಮಾಳ್ದರವಸರದ ||
ಇರುಳಿನೋಲಗವನು ನೆಡಪಿತ | ಮ್ಮುರು ನೆಲೆಯೊಳಿನಿತೊರಗಲಾದುದು |
ಹರೆಯ ಹೊಚ್ಚರುನಿದ್ರೆಯನು ಭೇರಿಧ್ವನಿಯು ಕಳೆಯೆ || ೧೫ ||

ಸರಸಿಜಂಗಳು ವೀರ ಲೋಚನ | ಸರಸಿಜಂಗಳು ವೊಡನರಲ್ದವು |
ತರಣಿಮೂಡಣ ಗಿರಿಯನಾರೋಹಿಸಲು ಜಗಗಳನು ||
ದೊರೆಗಳಾರೋಹಿಸಿದರಾಗಲೆ | ವರಜರಾಸಂಧನು ಮುರಾರಿಯು |
ದುರಧರೆಗೆ ಬಂದೊಡ್ಡಿ ನಿಂದರು ನಿಜಬಲಾವೃತರು || ೧೬ ||

ಕಲಿ ಜರಾಸಂಧನು ಕರೆದು ದೋ | ರ್ವಲನು ನಿಜಸುತ ಕಾಮದಂತಂ |
ಗೊಲಿದು ಸೇನಾಪಟ್ಟವನು ಕಟ್ಟಿದೋಡೆ ಕಾಮದನು ||
ಪ್ರಳಯ ಭೈರವನೆನೆ ಮಸಗಿ ಆ | ಗಳೆ ಮಹಾರಥವೇರಿ ತನ್ನ |
ಗ್ಗಳದ ಚಾತುರ್ದಂತ ಬಲಸಹವೊಡ್ಡಿ ನಿಲಲೊಡನೆ || ೧೭ ||

ಇತ್ತಲಾಗಳೆ ಶತ್ರು ಭೂವರ | ಮತ್ತಜಗ ಪಂಚಾಸ್ಯ ಬಲ ಭೂ |
ಪೋತ್ತಮನು ಸೀರಾಯುಧವನಾಂತಖಿಲ ಬಸವೆರಸಿ ||
ಒತ್ತಿ ಬರೆ ಮಾಗಧ ಸುತನ ಬಲ | ವಿತ್ತರದಿ ನುಗ್ಗಾಗುತಿದ್ದುದ |
ದತ್ತ ಗಾಂಗೇಯನ ಮನೆಗೆ ಪಾಂಚಾಲನಿಧಿರಾದ || ೧೮ ||

ಸರಿಸನೇ ಕೇಳಜ್ಜ ದ್ರುಪದನು | ಧುರದೊಳಗೆ ನಿಮಗೆಂದು ಶಲ್ಯನು |
ಸುರನದಿಯ ಸೂನುವನು ಪೆರಗಿಕ್ಕಿದರೆ ಬಿಲುವೊಯ್ದು ||
ಸರಳಸರಿಯನು ಸುರಿಯೆ ಮುಸುಕುವ | ಭರಕೆ ಪಾಂಚಾಳನ ಪಡೆಯ ಪೆರ |
ಸರಿವ ಪದದೊಳು ಮಾವನನು ಪಿಂತಿಕ್ಕಿ ಕಲಿಪಾರ್ಥ || ೧೯ ||

ಗಂಡುಗಲಿ ಕೋದಂಡ ವಿದ್ಯಾ | ಚಂಡ ದೂರ್ಝಟಿ ವೀರಪಾರ್ಥನು |
ಗಾಂಡಿವವ ಪಿಡಿದಾತ್ಮಬಲ ಸಹವೊಡ್ಡಿ ನಿಲೆ ಶಲ್ಯ ||

ಮಂಡಲದೊಳೆನ ಗಾಂಪೆನೆಂಬ ಪ್ರ | ಚಂಡನಾವನೊ ಯೆಂದೊದರಿ ಮುಂ |
ಕೊಂಡು ಬರೆಸೆಳೆದೆಚ್ಚು ಹೂಳಿದನಹಿತ ಸೈನಿಕವ || ೩೦ ||

ಉರುಳಿದರು ಪಟುಭಟರು ಪಾರ್ಥನು | ತುರಗದಳವೇನಾಯ್ತೊ ಗಜಘಟೆ |
ಯಿರದೆ ಪೆಡೆಮೆಟ್ಟಿದವು ಕಾಣುತ ಕಲಿಧನಂಜಯನು ||
ತಿರುವ ಜೇವಡೆಯಲು ಮಹಾ ಭೀ | ಕರ ರವಕೆ ಗಿರಿನಡುಗಿದುವು ಪೂ |
ಣರಿಭಟರ ಹೃದಯಗಳು ಭಿಕ್ಕನೆ ಬಿರಿವುದೇನರಿದೆ || ೩೧ ||

ತಿರುವಿಗಂಬನು ಹೂಡಿ ಗಾಂಡಿವಿ | ಬರೆ ತೆಗೆದು ಹಿಳುಕನು ಬಿಡಲು ಭೋ |
ರ್ಗರೆದು ಏರಿದವು ಹೊಸಮಸೆಯ ಹೊಗರುಗಳನಿಂಬಿಡುತ ||
ಭರದಿ ಶಲ್ಯನ ಸೈನ್ಯವನು ಸಂ | ಹರಿಸಿದವು ಗಜಗಳನು ಕಬಳಿಸಿ |
ತುರಗಳ ನುಣ್ಣನೆ ನೊಣೆದವೇನೆಂಬೆನದುಭುತದ || ೩೨ ||

ಶೂರ ಶಲ್ಯನು ವೀರಪಾರ್ಥನು | ಭೂರಿ ಭುಜಬಲನುಗ್ರರವ ಪರಿ |
ವಾರ ಪರಿವೃತರಾರ್ದು ಕಾದುತ್ತಿರ್ದರಿರಲಿತ್ತ ||
ಸೀರವಾಣಿಯ ಸೈನ್ಯದುಬ್ಬೆಗ | ತೀರಯಿಸುತಿರೆ ಕಾಮದಂತನ |
ಘೋರ ಬಲವದನೀಕ್ಷಿಸುತಲಾತನನು ಪೆರಗಿಕ್ಕಿ || ೩೩ ||

ಅಸನಿವೇಗನೆನಿಪ್ಪ ಭೂವರ | ನಸನಿ ಮಸಗದಿ ತೆರದಿ ಮಿಗೆ ಕೋ |
ಪಿಸಿ ಭಟನೊಳಿದಿರಾಂತು ಕೂರ್ಗಣೆವರುಷವನು ಕರೆಯೆ ||
ಬಸಿವ ರಕುತದ ಸಿಡಿದಲೆಯ ಕಂ | ಪಿಸುವ ತನುಗಳ ಸುರಿವಕರುಳಿನ |
ಬಸವಳಿವ ವೀರರನು ಕಾಣುತ ಬಲನು ಪೆರಗಿಕ್ಕಿ || ೩೪ ||

ಚಾರಣಾವನಿಪಾಲನಾಗಳು | ಭೋರೆನಿಸುವಳೆಗರೆಯೆರಿಪುಪರಿ |
ವಾರದನಿತರ ಮೈಗಳಲಿ ಮಸೆಗಾಣಿಸಿದವಿರದೆ ||
ವಾರಣಗಳಶ್ವಗಳು ಭಟರ್ಗಗಳು | ಮಾರಿಗೌತಳವಾದರಾಗಳು |
ವೀರಕೆರಳಿರ್ದಸನಿವೇಗನು ಕಂಡು ಖಾತಿಯಲಿ || ೩೫ ||

ತಿರುವಿಗಂಬನು ಹೂಡಿ ಹೂಣಿಸಿ | ಬರತೆಗೆದು ಹೊಕ್ಕೆಸಲು ಕವಿವ |
ಚ್ಚರಿಯಕಣೆಯನು ಕೊಚ್ಚಿದನುಕವಲಂಬಿನಿಂಮತ್ತೆ ||
ಧುರವಿಜಯ ಚಾರಣನೃಪಾಲಕ | ನಿರದಸನಿವೇಗನ ಶಿರಸ್ಸನು |
ಪರಿಸ ಬೋಳೆಯ ಕೋಲಿನಿಂದಿಳುಹಿದನು ನಿಮಿಷದಲಿ || ೩೬ ||

ಪೋದುದಂದಿನ ದಿವಸ ಮರುದಿನ | ವಾದೊಡಂದಿನ ತೆರದಿನಾ ಮಧು |
ಸೂದನನು ಮಾಗಧನು ನಿಜಬಲವೆರಸಿ ಸಂಗ್ರಾಮ ||

ಮೇದಿನಿಯೊಳೊಡ್ಡಿರಲು ದೋರ್ವಲ | ನಾದಮಾನಾವಂತನುದ್ಧತ |
ನಾದ ಮಗಧೇಶನ ಬಲದೊಳಿಹ ವಜ್ರಬಾಹುವೊಳು || ೩೭ ||

ಸತ್ಯಕನು ಸೆಣಸಿದ ಜಯದ್ರಥ | ಗುತ್ತರನು ತೊಡದಿರನು ಕೃಪನೊಳು |
ತತ್ತ ದೃಷ್ಟದ್ಯುಮ್ನ ದುಂದುಭಿಯೊಳು ಮಹಾಸೇನ |
ಕಿತ್ತನಲಗನು ವಜ್ರಮುಷ್ಠಿಯೊ | ಳೊತ್ತಿದನು ವಸುಪಾಲ ಭೂವರ |
ನೊತ್ತರಿಸಿ ಭೂರಿಶ್ರನೊಳಿದಿರಾದನಾ ನಕುಲ || ೩೮ ||

ಅವರವರು ಸಾರಥಿ ತುರಂಗಮ | ವಿವಿಧ ಧನು ಮಾರ್ಗಣನಿಶಿತ ಖ |
ಡ್ಗವು ಸಹಿತ ತಂತಮ್ಮ ತುರಗ ರಥಂಗಳನು ಪತ್ತಿ ||
ಅವಗಡಿಸುತಾ ದ್ವಂದ್ವಯುದ್ಧದಿ | ನವನಿಪತಿಗಳು ಮೂರು ಜಾವವು |
ತವುತಹನ್ನೆಗೆ ಕಾದಿದರು ಸಂಗ್ರಾಮಲಂಪಟರು || ೩೯ ||

ಇಸುವರುಷವನು ವಜ್ರಬಾಹುವು | ಪಸರಿಸಲು ಸತ್ಯಕನು ಮಾರ್ಕೊಂ |
ಡೆಸಲು ಮಧ್ಯದೊಳಾಯ್ತು ಸರಸರಗಳಿಗೆ ಬಲುಜಗಳ ||
ಕುಸುರಿದರಿದಾ ಕಣೆಗಳನು ಮ | ತ್ತೆಸಲು ಮಣಿಮಕುಟವು ಕೆಡುದುದಾ |
ಗಸಕೆ ಪಾರಿತು ವಜ್ರಬಾಹುವನಿರವು ನಿಮಿಷದಲಿ || ೪೦ ||

ವರ ಜಯದ್ರಥನೆಚ್ಚಡಿರದು | ತ್ತರನೊಡನೆ ಕೂರಂಬನೆಚ್ಚಡೆಯೋ |
ಉರುಳಿದವು ತೇರುಗಳು ಮುರಿದುದು ಧ್ವಜದ ನಿಡುಗಂಬ ||
ಉರಿಯನುಗುಳುತಲಾ ಜಯದ್ರಥ | ಭರದಿನೆಚ್ಚಾ ಸರಳಪಥವೆನ |
ಲಿರದೆ ಪೋದನು ಜವನಪುರಕುತ್ತರ ಕುಮಾರಕನು || ೪೧ ||

ಕೃಪನು ಧೃಷ್ಟದ್ಯುಮ್ನನುಂ ನಿ | ಷ್ಕೃಪೆಯನಾಂತು ಸಮಾನಸತ್ವಾ |
ಧಿಪರೆನಿಪಲಾದುಂದುಭಿಯೊಳಾಂತಾ ಮಹಾಸೇನ ||
ಕುಪಿತ ಮನನುರದೆಚ್ಚಿರಿಂ ಹೇ | ರಿಪುದು ತನಗರಿದಾಗೆ ತನ್ನಯ |
… …. ಪಿದಿದುದುಂದುಭಿ ರಥವ ಮಗುಳಿಸಿದ || ೪೨ ||

ಅತ್ತಲಾ ಭೂರಿಶ್ರವನು ಕಾ | ದುತ್ತ ಫಲವುಂ ಸೂಳನೋದುತ |
ಮತ್ತಕರಿಹರಿ ನಕುಲನೊಡನೆಚ್ಚಾಡುತಿರೆ ಬಳಿಕ ||
ಮತ್ತೆ ನಕುಲನು ಮಿಕ್ಕಸಲು ಧನು | ವೆತ್ತ ಹೋದುದೋ ಕಾಣೆಕೈಯಿಲಿ |
ಕುತ್ತುದಲೆಯಲಿ ವಿರುದನಾಗಿಯೆ ಮಗುಳಿದನು ಮನೆಗೆ || ೪೩ ||

ಕಾಲರುದ್ರನ ಕಾಪಿನಂ ಶರ | ಜಾಲದಿಂದಾ ವಜ್ರಮುಷ್ಠಿಯ |
ಮೇಲು ಠಕ್ಕೆಯ ಚೆಂಗೊಡಗಳನು ಕತ್ತರಿಸಿಕೆಡಹಿ ||

ವ್ಯಾಲಹಯ ಸಾರಥಿಯ ಥಟ್ಟನು | ಸೀಳಿ ಪೇರ್ಗೋರಳನು ತೊರೆಯೆ ತಲೆ |
ಮೇಲುದಲೆಯೆನೆ ಪಾರಿ ಕಲಿ ವಸುಪಾಲ ಬೊಬ್ಬಿರಿದ || ೪೪ ||

ಅರ್ಕನಪರಾದ್ರಿಯನು ಸಾರಲು | ಪೊಕ್ಕರವರೀರ್ವರು ಕಟಕಗಳ |
ನಿಕ್ಕಿದರು ನಿದ್ರಾಂಗನೆಗೆ ಹುಬ್ಬನು ಕಡೆಯೊಳಾನ ||
ತೆಕ್ಕೆದೊಲಗಿದರಾಗ ಮೂಡಣ | ದಿಕ್ಕಿನಲಿ ಮೊಗದೋರೆ ನೇಸರು |
ಚಕ್ರಿ ಶಾರ್ಙ್ಗಗಳೆಂದಿನಂದದಿ ಧುರದೊಳೊಡ್ಡಿದರು || ೪೫ ||

|| ಅಂತು ಸಂಧಿ ೪೭ಕ್ಕಂ ಮಂಗಲಮಹಾ ||

# ಯುದ್ಧ ಪರ್ವ (ಸಂಧಿ ೪೮)

**ಸಂಧಿ ೪೮**

ಆಹವ ತ್ರಿಪುರಾರಿ ಚಕ್ರ | ವ್ಯೂಹವನು ಹೊಕ್ಕಿರಿದು ವಿಕ್ರಮ |
ಸಾಹಸಿಗನಭೀಮನ್ಯುವಮರಿಯರುರಲೊರಗಿದನು || ಪದ ||

ಕೇಳಲೇ ಶ್ರೇಣಿಕ ಧರಿತ್ರೀ | ಪಾಲ ಸಂಗರ ವಿಜಯದೋರ್ವಳ |
ಸಾಲಿಗಳು ಪಾಂಡವರು ಯಾದವರೊಗ್ಗಿ ನಿಲಲೊಡನೆ ||
ಸ್ಥೂಲ ಭುಜದ ವಿಶಾಲವಕ್ಷದ | ಕಾಲ ತೊಡರಿನ ಚಲುವಿಕಯ ಕ |
ಟ್ವಾಳು ಸಮರ ಕುತೂಹಲನು ನಡೆತಂದನನಭಿಮನ್ಯು || ೧ ||

ನಗೆಮೊಗದ ಕೊನೆಮೀಸೆ ಮೈಯೊಳು | ತಿಗುರುಗುಂಕುಮ ಹೊನ್ನ ಬಣ್ಣವ |
ಮಿಗುವ ತನುರುಚಿ ತೊಟ್ಟ ರನ್ನದ ಜೋಡು ಬತ್ತಳಿಕೆ ||
ಬಿಗಿದ ತೊಂಗಲು ಕಾಸೆಯೆಡಗೈ | ಸೊಗಸುವಿಲ್ಲಿವು ವೀರರಸವನು |
ಮೊಗೆದು ತುಳಕಲು ಮಣಿರಥದಲಭಿಮನ್ಯುವೈತಂದ || ೨ ||

ಬಂದು ಕಮಲಾಕ್ಷಂಗೆರಗಿ ಜೀ | ಯೊಂದು ಬಿನ್ನಹವೆನಗೆ ಕರುಣದ |
ಲಿಂದು ಸೇನಾ ಪಟ್ಟವನು ಪಾಲಿಸುವುದೆಂದೊರೆಯೆ ||
ಒಂದಿನಿತು ತಾನಾತನಾನನ | ಚಂದಿರವನೀಕ್ಷಿಸಿ ಬಳಿಕಯಮ |
ನಂದನನೊಳಿಂತೆಂದನತಿದಯೆಯಿಂದ ಕಂಸಾರಿ || ೩ ||

ಹಸುಳೆಯೀಯಭೀಮನ್ಯು ಬಿಸಸನ | ಬೆಸನ ಬೇಡಿದೊಂಡಿಂತು ಕೊಡಬಹು |
ದುಸುರಿಮೆನೆ ಧರ್ಮಜನು ನಸುನಗುತೀ ಕುಮಾರಕನು ||

ಹಸುಳೆಯೆಂದೆನ ಬಹುದೆ ಪರಿಭಾ | ವಿಸಲು ನಿಮ್ಮಳಿಯನು ಧನಂಜಯ |
ನೆಸೆವ ಮಗನೆನೆ ಸಿಂಗವರಿನಿದಿರಹವೆ ಗಜವೆಂದ || ೪ ||

ಹರಿಕುಲಾಂಬರ ಸೂರ್ಯ ಬಿನ್ನಪ | ಕುರುಕುಲವು ತಾ ವೀರವಂಶವು |
ಪಿರಿಯನೆಂದೇಂ ಕಿರಿಯನೆಂದೇಂ ತತ್ಕುಲೊದ್ಭವರು ||
ಧುರದೊಳೆಲ್ಲರು ವಿಜಯಿಗಳು ಬಿ | ತ್ತರದಡವಿಯನದೊಂದೆ ಕಿಡಿ ಸು |
ಟ್ಟುರುಪದೇ ತೋಳ್ವಲವನೆನ್ನನು ಬಿಟ್ಟುನೋಡೆಂದ || ೫ ||

ಎನೆ ಮನದೆಗೊಂಡಳಿಯಗಾಗಳೆ | ಪನಜನಾಭನು ವೀರಪಟ್ಟವ |
ನನುನಯದಿ ಕಟ್ಟಿದೊಡೆ ಮಾವಗೆ ತಂದೆಗಳಿಗೆರಗಿ ||
ತನುಜನಮ್ಮನ್ವಯದ ವರ ಕೂ | ರ್ಪನು ಶಿಶುತ್ವದಿ ಗಳಿಸಿದೀ ಮಾ |
ವನ ಪರಾಕ್ರಮವನು ಮೆರೆದು ಗೆಲ್ಲೆಂದು ತಂದೆಗಳು || ೬ ||

ಹರಸೆ ಮಂಗಳ ತೂರ್ಯ ರವವಾ | ವರಿಸೆ ದೆಸೆಯನು ತೊಟ್ಟ ಕವಚವು |
ಬಿರಿಯೆ ವೀರವೇಷದಿಂದಭಿಮನ್ಯು ಸುಕುಮಾರ ||
ಧುರಧರೆಯೊಳಾರ್ದೊಡೆ ಮಣಿಪ್ರಭೆ | ಸುರರಥದೊಳಿರೆ ಕಂಡು ಮಾಗಧ |
ನರ ತನೂಭವನೆಂದರಿದು ಧೃತರಾಷ್ಟ್ರ ತನುಜಂಗೆ || ೭ ||

ಕಟ್ಟಿದನು ನೊಸಲಿನಲಿ ಸೇನಾ | ಪಟ್ಟವನು ಬಳಿಕಾ ಸುಯೋಧನ |
ನಿಟ್ಟಿಸಿದನಾ ಕಾಲರುದ್ರನ ಕಾಯ್ಪನೊಳಕೊಂಡ ||
ದಿಟ್ಟನಭಿಮನ್ಯುವನು ಮುಳಿದೊಡೆ | ಸಿಟ್ಟಿಯೊಳಗಿವಗಾಂಪನೆಂಬಾ |
ಜೆಟ್ಟಿಗನದಾರೆಂದು ಬಗೆದನದೊಂದುಪಾಯವನು || ೮ ||

ನರನುನೀತನು ಕೂಡಿದೊಡೆ ಪುರ | ಹರಗೆ ಗೆಲಲರಿದರ್ಜುನನ ನಿ |
ತ್ತರಿಸದಂತಗಲಿಸಲೆ ಬೇಕೆಂದಾತ್ಮ ಮಿತ್ರರಹ ||
ಸ್ಫುರಿತರಾಕ್ಷಸ ವಿದ್ಯೆಯಲಿ ನಿಪು | ಣರನು ಸಮಸಪ್ತಕರನಾಗಳೆ |
ಕರೆದು ನೀವಾ ಮೊನೆಯಲಿಕ್ಕುವುದರ್ಜುನನನೆಂದ || ೯ ||

ಬೆಸಸಲವರತ್ತೊಂದು ಮೊನೆಯೊಳು | ಮಸಗಿವಿದ್ಯಾ ಬಲವ ಪಡೆದ |
ರ್ವಿಸಿ ನಿಲಲು ತದ್ವಹವಕೋಳಾಹಳವನಾನಿಸುತ ||
ಪೆಸರುಗೊಂಡರ್ಜುನನ ಕರೆಯಲು | ಹಸಿದ ಜವನೆನೆ ಕೆರಳಿ ದೆಸೆ ಕಂ |
ಪಿಸುತಿರಲು ಗಾಂಡಿವವನೊದರಸಿ ನಿಂದನಾ ಪಾರ್ಥ || ೧೦ ||

ನಿಲಲೊಡನೆ ಕಡುಮಸಗಿ ವಿದ್ಯಾ | ಬಲವು ನಾನಾ ಕೈದುಗಳ ಕೈ |
ಚೆಳಕದಲಿ ಕೂಕಿರಿದು ತಿರುವಿನೆ ಹಿಳುಕ ಸಂಧಿಸುತ ||

ಸೆಳದೆಸಲು ಕಲಿಪಾರ್ಥನಾ ಬಿಲು | ಬಲುಮೆ ಬಡವೇ ಗಗನದೊಳು ಪಂ |
ದಲೆಗಳೊರ್ಮೋದಲಾಡುತಿರ್ದವು ಕೋಟಿ ಸಂಖ್ಯೆಯಲಿ || ೧೧ ||

ಪರಿದ ತಲೆಗಳುಮನಿತೆ ಮುಂಡದ | ತುರುಗಲುಗಳನಿತನಿತೆ ಮುನ್ನಿನ |
ತೆರೆದಲರ್ವಿಸೆ ಕವಿವ ಸೈನಿಕಮನಿತೆಯಿರುತಿರಲು ||
ನೆರೆಗಲಿಯು ನೆಳಲೊಳಗೆ ಹಾರುತ | ತೆರದಿ ಪ್ರತಿವಿದ್ಯಾಪ್ರಭಾವದಿ |
ತರುಬಿ ಕಾದುತ್ತಿರ್ದನಿತ್ತಲು ಭೂಪ ಕೇಳೆಂದ || ೧೨ ||

ಅರಿದು ಪೊಗವೊಡದರಿಗಂ ಕಣು | ದೆರೆದು ನೋಳ್ಪಡೆ ಬ್ರಹ್ಮಗಂಭೀ |
ಕರವು ಪೊಕ್ಕಡೆ ಮರಳುವುದು ತ್ರಿಪುರಾರಿಗಸದಳವು ||
ತರುಬಿ ಕಾದುವೆನೆಂದಡಸುರಾ | ಮರಗಿಗದು ಮೊಗ್ಗಲ್ಲೆನಿಸುವ |
ಚ್ಚರಿಯ ಚಕ್ರವ್ಯೂಹವನು ಕುರುರಾಯ ನೋಡಿದನು || ೧೩ ||

ಅದರ ಗುರುವನು ಕಂಡು ಪಾಂಡವ | ರಿದರೊಳೆಲೆ ಅಭಿಮನ್ಯು ಪೊಕ್ಕಿರಿ |
ದಿದನು ಜಯಿಸುವುದರಿದೆನಲು ಕಾಲಾಂತಕನು ಪೆರರ ||
ಉದಯದೊಳು ಪೊಕ್ಕಿಸುವ ನೆಲವಂ | ದದಲಿ ಪೊಕ್ಕ ಹಿತರನು ತಲೆಕೊ |
ಲ್ಲದೊಡೆ ಕಲಿಪಾರ್ಥನ ಕುಮಾರೆನೆಯೆಂದು ಘರ್ಜಿಸಿದ || ೧೪ ||

ತಡೆಯದಾ ಸಾರಥಿಗೆ ಬೆಸಸಲು | ಕಡುಜವದಿವರರಥವು ಹರಿದವು |
ಪಡೆವರಸಿಯಾ ತ್ರಿಪುರದಹನಕ್ರಿಯೆಗೆ ಕಡುಮುಳಿದು ||
ಮೃಡನೊದನೊದಗುವಂತೊದಗಿ ತಾ ಸಂ | ಗಡದಿ ನಿಶಿಶಾಸ್ತ್ರಗಳ ಹೇರಿದ |
ಪಡಿರತಂಗಳುವೆರಸಿ ಬರೆ ಬರೆ ಬಂದನಭಿಮನ್ಯು || ೧೫ ||

ಬರೆಗುಹೆಯ ಗಾಲಿಲಲಿ ಪರ ಭೀ | ಕರ ಜರತ್ಕೇಸರಿಯಗುರ್ವಿಸು |
ವಿರವಿನಿಂದ ವ್ಯೂಹದಾ ಬಾಗಿಲಲಿ ಬಿಲುಗೊಂಡು ||
ನೆರೆದ ನಾಯಕನಿಕರದೊಡನಿಹ | ಗರುಡಿಯಾಚಾರ್ಯನು ನಿರೀಕ್ಷಿಸಿ |
ಕಿರಿದು ದೂರಕೆ ಪೋದನಿಂದಿರಾಗೊಂದೆ ತೇರಿನಲಿ || ೧೬ ||

ಖತಹಯನ ಸುಕುಮಾರನನು ನೋ | ಡುತಲಿದೇನ್ಯೈ ಮಗನೆ ಅಕಟಾ |
ಮತಿಯನೊಕ್ಕನೆ ನಿಮ್ಮವರು ಈ ವಿಷಮ ಸಂಗರಕೆ ||
ಅತಿಬಲರು ತಾವತ್ತಲುಳಿದೆಂ | ಧೃತಿಯನಾಂತರೊ ಬಾಲಕನನೀ |
ಕ್ಷಿತಿಗೆ ಕಳುಹಿಸಿ ಬೀಜಭೋಜಿಗಳಾದರೇಯೆಂದ || ೧೭ ||

ಪೊಗುವುದರಿದಿದನೆತ್ತಲಾನುಂ | ಪೊಗಲು ಪೊರವಡುವೊಡೆ ಮಹಾರು |
ದ್ರಗೆ ಅಶಕ್ಯವೆನಿಪ್ಪ ವೀರರ ನೆರವಿಯಿದೆಯೆಂದು ||

ಮಗನೆ ನೀ ಜಯಸಿದೊಡೆಯಿಂದ್ರನ | ಮಗನ ಪುಣ್ಯವಿದೆಂದ ದ್ರೋಣನ |
ಮೊಗವ ನೋಡುತ್ತಕ್ಷಮತೆಯಿಂ ನುಡಿದನಭಿಮನ್ಯು || ೧೮ ||

ಗುರುವೆ ನೀನೀಗುಭಯ ಸೈನ್ಯಕೆ | ಗುರುವೆ ದಿಟ ನೀವೆಂದ ನುಡಿಗು |
ತ್ತರವನಾಂ ಕೊಡಬಾರದಾದೊಡೆಮೊಂದನಾಡುವೆನು ||
ನೆರೆದ ವೀರರು ಬಹಳವಿಧ ಹೊಗ | ಲರಿದು ನಿನಗೆಂಬೀ ನುಡಿಯನಾ |
ದರಿಸಲರಿಯೆನು ನೀನೆ ಮೆಚ್ಚಲು ತರಿವೆ ತಾನೆಂದ || ೧೯ ||

ಬೆಳೆದ ಕದಳಿಯ ಬನವನಾ ಕರಿ | ಕಲಭ ಹೊಕ್ಕಂದದಲಿ ಹೊಕ್ಕ |
ಗ್ಗಳದ ವ್ಯೂಹದ ವೀರರನು ಸವರುವೆನೆನುತ ಕೂಡೆ ||
ಘಳಿಲನೊಳಪೊಕ್ಕನು ಸರಳ ಪೆ | ರ್ಮಳೆಯ ಸುರಿದಾಮೊನೆಯನಾಯಕ |
ಕುಲವ ತರಿದನದೇಂ ಪ್ರತಾಪಿಯೊ ಪಾರ್ಥನಂದನನು || ೨೦ ||

ಬಲುವಲದ ಕಲಿತನದ ತಕ್ಕಿನ | ಚಲದ ಪೂಣೆಯ ನಾಯಕರ ನಾ |
ವುಲಿದ ಚಕ್ರವ್ಯೂಹದಾ ಬಾಗಿಲಲಿ ನಿಮಿಷದಲಿ ||
ಬಿಳಿಯ ಕಬ್ಬಿನವನವನಾ ಕರಿ | ಮುಳಿದು ಹೊಕ್ಕಂದದಲಿ ಪಡಲಿ |
ಟ್ಟಳವಿನಿಂದೊಡ ಹಾಯ್ಸಿ ನೂಂಕಿದನಾರ್ದು ನಿಜರಥವ || ೨೧ ||

ಪರಿದು ಘೀರ್ನ್ ಮುರಿವ ಬೀದಿಯ | ಲೆರಡು ಕಡೆಗಳೊಳಖಿಳ ಸೇನಾ |
ಪರಿವೃತರು ಕೃತವರ್ಮಕೃಪನೆಂಬುಗ್ರ ನಾಯಕರು ||
ಭರದಿನನಿಬರುಮೊರ್ಮೊದಲೆ ನಿ | ಷ್ಠುರದಲೊದರುವಲಗ್ಗೆ ವರೆಯ |
ಬ್ಬರವಿಗುರ್ವಿಸೆ ಕರೆದರಾಗಳು ಕಣೆಯ ಬಿರುಮಳೆಯ || ೨೨ ||

ಅರರೆ ಸಂಗರ ವೀರಭದ್ರನು | ತಿರುವ ಜೇವಡೆಗೈಯ ಬೀರದ |
ಬಿರಿದುಗಳ ಪಾರ್ಥರ ಕೈಕಾಣಿಕೈದುಗಳ ||
ಮೊರೆದೆರೆದ ಬಿಂಬುಗಳ ಗಾಳಿಯ | ಗರಿಗಳೆನೆ ಪಾರಿದವು ತಾ ಕ |
ಣ್ಗರಿಯೆನಿಸಿ ಸವ್ಯಾಪಸವ್ಯದಿದೆಚ್ಚನಭಿಮನ್ಯು || ೨೩ ||

ವರಶರಾಸನವಂದು ನೋಡುವ | ಡೆರಡು ಬಿಲ್ಲಾಗಿರ್ದುದಾಗಳು |
ಬರೆತೆಗೆವ ಕೈಯೆರಡು ಹಿಳುಕನು ಬಿಡುವ ಕೈಯೆರಡು ||
ಸರಳ ಮೂಡಿಗೆಯಿಂದುಗಿದ ಕೈ | ಯೆರಡು ಬಿಲ್ಲನು ಬಲ್ವಿಡಿದ ಕೈ |
ಯೆರಡೆನಿಸಿ ತೋರಿದವು ಸುರರಕ್ಷಿಗೆ ಕುಮಾರಕನ || ೨೪ ||

ಪರಿದುದಾ ಸಮಯದಲಿ ಬಿಸು ನೆ | ತ್ತರತೊರೆಯು ಕಳನೊಳಗೆ ನಭದಲಿ
ಪರಕಲಿಸಿದುವು ಹಸಿಯತಲೆಗಳು ಕರಿಗಳುರುಳಿದವು ||

ಎರಡು ಭಿತ್ತಿಯ ಚಾತುರಂಗವು | ಕುರಿದರಿಗಳಾದವು ಬಳಿಕಮುಖ |
ದಿರುಹಿದರು ಕೃತವರ್ಮಕೃಪನಾ ರಥವ ಧುಮ್ಮಿಕಿ || ೧೫ ||

ಅವರ ಗಮನದ ಭರಕೆ ತದ್ವ್ಯೂ | ಹವು ನೆರೆಯದೆನಲೊಡೊ ಬೆನ್ನಲಿ |
ತವಕಿದರು ತೋರಿದರು ಕಾಲಸಘಾಟಿಕೆಯನಾಗ ||
ದಿವಿಜರಾಗಸದಲ್ಲಿ ಘೊಳ್ಳೆಂ | ದವರವರ ಮೊಗನೋಡಿ ನಗುತಿರೆ |
ಕುವರನಾರ್ದೊಳಪೊಕ್ಕನವರಾ ಭಿತ್ತಿಗಳ ಹೊಗಲು || ೧೬ ||

ಮುಂದೆ ಬರೆಬರೆ ವೈರಿಭೂಪ | ಸ್ಯಂದನವ ಬಳಸಿರ್ದ ನೃಪರಥ |
ವೃಂದದೊಡ್ಡಣದಿದಿರೆ ನಿಜರಥವನು ನಿಲಿಸೆಜವನ ||
ಮಂದಿರಕೆ ರಿಪು ನೃಪರಜೀವದ | ಸಂದಣಿಯ ದಾಟಿಸುತ ವೀರಾ |
ನಂದನಿರೆ ಮತ್ತತ್ತಲಾ ವ್ಯೂಹದ ಪೆರಗೆ ಮಸಗಿ || ೧೭ ||

ಪವನಜನುಮಾದ್ರಿಜರು ದ್ರುಪದ | ಪ್ರವರ ಧೃಷ್ಟದ್ಯುಮ್ನಯುತ ಪಾಂ |
ಡವ ಪತಾಕಿನಿ ತಾಗೆ ಕರ್ಣದ್ರೋಣ ಮದ್ರಿನೃಪ ||
ಇವರು ಬಿಲ್ಲೊಯ್ದಂತು ಬಲು ಯು | ದ್ಧವನು ಮಾಡುತ್ತಿರ್ದರತ್ತಲು |
ಸವರಿಹೊಕ್ಕನು ವ್ಯೂಹವನು ಭೂಪಾಲ ಕೇಳೆಂದ || ೧೮ ||

ಮುಳಿದು ಮೃತ್ಯುವೆ ಪೊಕ್ಕು ತೊತ್ತಳ | ದುಳಿದವೊಲು ಕಾಳ್ಗಿಚ್ಚು ಕಾನನ |
ದೊಳಗೆ ಪೊಕ್ಕವೊಲೈದೆ ಚಕ್ರವ್ಯೂಹದೊಳಪೊಕ್ಕು ||
ಕೊಲುತಿರಲು ಅಭಿಮನ್ಯುವೆಂಬುದ | ತಿಳಿದು ಸುರಸಿಂಧುಜನು ಕುವರನು |
ಬಳಿಗೆ ಬಂದೆನ್ನಾಣೆ ನೀಂ ಬರಬಹುದೆ ಹೇಳೆಂದ || ೧೯ ||

ಅಕಟಕಟ ಪಾಂಡವರ ಸಂತಾ | ನಕೆ ಸಲಗನಿನ್ನಾವನೋ ಬಾ |
ಲಕನ ನಿನ್ನನು ಕಳುಹಬಹುದೇ ಪಾಂಡುನಂದನರು ||
ಪ್ರಕಟ ವೀರರ ಸವರಿ ಈ ವ್ಯೂ | ಹಕೆ ಬಲುಮೆಯಿಂ ಬಂದೆಯಿನ್ನಿರು |
ಸುಖದಿ ನನ್ನೊತ್ತಿನಲಿ ಕಾಳಗೆದೆಗೆಯೆ ಪೋಗೆಂದ || ೨೦ ||

ನುಡಿಯ ಬಹುದೇಯಜ್ಜ ಲಜ್ಜೆಯ | ನುಡಿಯ ನಿಮ್ಮಯ ಮೊಮ್ಮ ಮೊಮ್ಮನು |
ಪೊಡೆಯಲರನಳಿಯನು ತ್ರಿಲೋಕದ ಗಂಡನರ್ಜುನನು ||
ಮಡದಿಮಾಣಿಕವಹ ಸುಭದ್ರೆಯ | ವಡೆದ ಸಂತಾನ ರಣದೊಳಗೆ ಬಿಲು |
ವಿಡಿದು ಮರೆವೊಗಲಾಪೆನೆ ಚಿತ್ತೈಸು ಬಿನ್ನಪವ || ೨೧ ||

ಕೊಳನೊಳಿಹ ನಳಿನೀವನವ ಕರಿ | ಕಳಭ ಕೀಳ್ವಂದದಲಿ ವ್ಯೂಹದ |
ಬಲಯುತರ ಮಿಕ್ಕೊಕ್ಕಲಿಕ್ಕು ವೆನೆನುತಲಲ್ಲಿರದೆ ||

ಘಳಿಲನೊಳಪೊಕ್ಕೆಡಬಲದ ದೋ | ರ್ವಲರನಿಕ್ಕುತ ಬಹ ಕುಮಾರನ |
ನಳವು ಮಿಗೆ ಕುರುಪತಿಯ ಸುತ ಲಕ್ಕಣನು ತಾಗಿದನು || ೩೧ ||

ಲಕ್ಕಣನ ಕೂರ್ಗಣೆಗಳನು ತಾಂ | ಲೆಕ್ಕಿಸಿದನೇಯೆರಡು ಭುಜವೆಂ |
ಬುಕ್ಕಿನಾ ಕೋವಿಗಳ ಮುಖದಿಂ ಬುಗಿಲು ಬುಗಿಲೆನುತ ||
ಉಕ್ಕುವುರಿಮಾಲೆಗಳೊಯೆನೆ ನೆಗೆ | ದುರ್ಕಿನಂಬುಗಳಿಕ್ಕಡೆಯ ಭಟ |
ರುಕ್ಕು ಮುರಿದಿಕ್ಕಿದರು ಲಕ್ಕಣನುಗ್ರ ಸೈನಿಕದ || ೩೩ ||

ಉರಿಯ ನಾಲಗೆ ಸೋಂಕಿದರಗಿನ | ಪರಿಯಲಿತ್ತಲು ತನ್ನ ಸೈನಿಕ |
ಕೊರಗೆ ಕಡು ಕಾಯ್ದಿಟ್ಟಲಕ್ಕಣ ತಾನು ತೋಮರದಿ ||
ಹಣರ ಕೈಯ ತ್ರಿಶೂಲವೇ ಭೋ | ರ್ಗರೆದು ಬಂದುದೊಯೆನಿಸಿ ಬರಲದ |
ನರಿದನಾತನ ಶಿರವ ಪರಿಯೆಚ್ಚಾರ್ದನಭಿಮನ್ಯು || ೩೪ ||

ಮಸಗಿ ಬಂದವನನುಜರೊರ್ಮೆಯೆ | ಮುಸುಕಿದರು ನೂರ್ವರು ಸಿಡಿಲ್ಗಳ |
ಮಸಕದಲಿ ಘರ್ಜಿಸುತ ತಲೆವಿಲುಗೊಂಡು ಪೊಕ್ಕೆಸಲು ||
ಹೊಸಮಸೆಯ ಕೂರಂಬುಗಳು ಪಸ | ರಿಸಿಮುಸುಕಿ ಬರೆ ಪಾರ್ಥಸುತ ಖಂ |
ಡಿಸಿದನೊಂದಂಬಿಂದದೇಂ ಕಾರ್ಮುಕ ಕಲಾವಿದನೊ || ೩೫ ||

ತಿರುವಿಗಂಬನು ಹೂಡಿ ವಹಿಲದಿ | ಬರೆ ತೆಗೆದುಮರಸುತ್ತೆಸಳು ಸುಳಿ |
ವರಿವ ಬಾಣದಿ ಕುರುಪತಿಯನೂರ್ವರು ಕುಮಾರಕರ ||
ಕೊರಳುಗಲು ಕತ್ತರಿಸಿ ಸಮರೋ | ರ್ವರೆಗೆ ಬೀಳ್ದಿರೆ ರತ್ನ ಮಕುಟ |
ಸ್ಫುರಿತ ಕಾಂತಸಹಸ್ರ ಸುರಧನುಗಳನು ಪಸರಿಸಿತು || ೩೬ ||

ವರ ಧನಂಜಯಸೂನು ಬೆರಳಲಿ | ಸರಳ ತಿರುಹುತ ತನ್ನಸರಿ ವೀ |
ರರ ಬರವ ಪಾರುತ್ತನಿಂದಿರೆ ನಭದಿಲೀಕ್ಷಿಸುವ ||
ಸುರರು ಮಝು ಬಿಲ್ಲಾಳೆವೊರ್ವನೆ | ಅರೆದ ನೊಂದಕ್ಷೋಹಿಣಿಯ ನೀ |
ಧುರದೊಳೆಂದಭಿಮನ್ಯುವನು ಕೈವಾರಿಸಿದರಂದು || ೩೭ ||

ಅಳಿದರಾ ನೂರ್ವರು ಕುಮಾರಕ | ರಳವಿ ಗೊಟ್ಟೆಂದಹಿ ಪತಾಕನು |
ತಿಳಿದು ಮುಳಿದೇಳ್ವವಸರದೊಳಾ ಸೈಂಧವನು ಬಂದು ||
ಇಳೆಯೆರೆಯ ನಿನಗೊದವಿದೀಮನ | ದಳಲನಾರಿಪೆನೆಂದು ಬೆಸವಡೆ |
ದಲಘು ಭುಜ ಬಲನಾಂತವರ್ಜುನನಾತ್ಮಜನ ಕೂಡೆ || ೩೮ ||

ಕರದಿ ಬಿಲುವಿಡಿದೂರಿ ಎಡಗಾ | ಲ್ಬೆರಳಲೊತ್ತಿ ಜಾಲತೆಯ ನೀ |
ಬೆರಳಿನಿಂಕೊಪ್ಪಿಗೆ ತೊಡಿಸಿ ನೆರೆನೀವಿ ಜೇವಡೆದು ||

ಸರಲುನುಗಿದಾ ಬತ್ತಳಿಕೆಯಿಂ | ತಿರುವಿಗೊಂದಿಸಿಹಿಳುಕ ಪೊರಮೈ |
ವರಮೆಳೆಹ ಪೊಕ್ಕೆಚ್ಚನಾರ್ದಡೆವಿಡದೆ ಸೈಂಧವನು || ೩೯ ||

ಸರಳ ಸರಳಿಂ ಕಡಿದು ನರಳಿನ | ಸರಿಯ ಸುರಿದನು ಪಾರ್ಥಸುತನಾ |
ಸರಳ ಸಿರಿಯನು ಸರಳಿನಿಂ ಕಡಿದೊಟ್ಟೆ ಸೈಂಧವನು ||
ಸರಳ ತೊಡುವನಿತರೊಳೆ ಮಿಗೆ ಕ | ತ್ತರಿಸಿದನು ಬೆಳುಗೊಡೆಯೆ ಸಾರಥಿ |
ಯುರವನೆಚ್ಚನು ಕೊಚ್ಚಿದನು ಸಿಂಧುಗಳನಭಿಮನ್ಯು || ೪೦ ||

ಸಲುವುದೈ ಮಝು ಪೂತು ಪಾರ್ಥನ | ಕುಲತಿಲಕ ನೀನಹುದೆನುತ ಕಡು |
ಗಲಿ ಜಯದ್ರಥನೆಚ್ಚನೆಚ್ಚೊಡೆ ಕೊಚ್ಚಿದನು ಕಣೆಯ ||
ಪಲವು ಸೂಳೆಚ್ಚಾಡಿಕಳನೊಳು | ಬೆಳೆದವುಡಿದಂಬಿನ ಗಿರಿಗಳಿ |
ಕ್ಕಡೆಯ ಶತಬಂಡಿಗಳ ಕಣೆ ಬರಿದಾಯ್ತು ನರಸುತನ || ೪೧ ||

ಅಂಬುಗಳು ಸೌಭದ್ರಿಯಾಯು | ಷ್ಯಾಂಬುಗಳು ಸಂಗಡದಿ ತೀರ್ದವು |
ಬೆಂಬಳಿಯಲಾ ಸಿಂಧು ಭೂವರನೊಡಲುಗೊಳನೊಳಗೆ ||
ತುಂಬಿದಾರ್ಯುಜಲವು ನಾವೆರ | ಳೆಂಬನಿತೆ ಮಿಗಿನುಳಿದುದಕಟೀ |
ನೆಂಬೆನಾಹವ ಕಾಲರುದ್ರನು ಕಾದುತಿರಲೊಡನೆ || ೪೨ ||

ಸರಳು ತವುಕರೆ ತಡೆತಡೆದು ಭೋ | ರ್ಗರೆದೆಸಲು ಸರಲರತುವೆಂಬುದ |
ನರಿದು ತೆರಪನು ಕಂಡು ಸೈಂಧವನೆಚ್ಚಡೇನೆಂಬೆ ||
ಕೊರಳು ಪರಿದಭಿಮನ್ಯುವಿನ ತಲೆ | ಧುರ ಧರೆಗೆ ಬಿದ್ದುದು ಪ್ರತಾಪ |
ಸ್ಫುರಿತ ಪುಂಜದ ತೆರದಲಿರ್ದುದು ಮಣಿಮಕುಟವೆರಸಿ || ೪೩ ||

ಮದಗಜದ ಕೋಡೇರಿ ನೀಂ ಸಿಂ | ಹದ ಕುಮಾರನೆ ಮರಣವಾದಂ |
ತೊದಗಿದುದುಮೃತಿ ಪಾರ್ಥಸೂನುಲಿಗವನ ಕಣ್ಣೆಂದ ||
ಬಿದಿಯನಾವನೊ ಮೀರಬಲ್ಲನು | ಒದರಿದುದು ಜಯಪಟಹ ಮೈವೆ |
ಚ್ಚಿದನು ಸೈಂದವನೆತ್ತಿಸಿದ ವಿಜಯ ಧ್ವಜವನಾಗ || ೪೪ ||

ಅಳಿದನಾ ಅಭಿಮನ್ಯುವೆನೆ ಕೇ | ಳ್ದುಳಿದನಾತ್ಮಜರಳಿದ ನೋವನು |
ಬಳಿಕಲಾ ಕುರುರಾಯನಾ ವ್ಯೂಹೋದರದೊಳಿದ್ದ ||
ಮುಳಿವವರು ಮೊದಲಾಗಿ ಗೋಳಿ | ಟ್ಟಲುತಲಿದ್ದರು ಭೀಷ್ಮ ರಥದೊಳ |
ಗಿಳುಹಿಧನುವನು ಗಳಗಳನೆ ಕಣುನೀರುಮಳೆಗರೆದ || ೪೫ ||

ಮೊಳೆವ ಮೀಸೆಯ ನಗೆಮೊಗದಕ | ಟ್ಟಿಳೆಮಗನ ತಾಂವಿರುತಯುದ್ಧಕೆ |
ಕಳುಹಿಕೊಂದರೆ ಅಕ್ಕಟಾ ಸುಡು ರಾಜ್ಯಸಂಪದವ ||

ಅಳಿದುದೇ ಪಾಂಡವರ ಸಂತತಿ | ಇಳೆಯು ತವಗೇಕಿನ್ನು ತಾವಿ |
ನ್ನುಳಿದು [ಸುಖವಿಲ್ಲೆನುತ] ಕಂಬನಿಗರೆದನಾ ಭೀಷ್ಮ || ೪೬ ||

ಕೇಳಿ ಧನ್ಯರ ಬಸಿರೊಳಗೆ ಕೂ | ರ್ವಾಳ ಸೆಳೆದಂತಾದುದೆನೆ ತಾಂ |
ಕೇಳಿದಾಕ್ಷಣ ಹಡೆದ ತಾಯಿನ್ನೆಂತು ಸೈರಿಪಳೊ ||
ಬಾಲಕನು ಕ್ಷತ್ರಿಯರ ಸುತರಿಗೆ | ಕಾಳೆಗದಳಿರಿದೊಂದು ವೀರಕೆ |
ಮೇಲು ಪಂತಿಯನಿಟ್ಟನೆಂದನು ಬಳಿಕ ಗಾಂಗೇಯ || ೪೭ ||

ಬಾಲಕನೊ ಮಝು ಪೂತುಮಸಗಿದ | ಕಾಲರುದ್ರನೊಯೆನಿಸಿ ಕಾದಿದ |
ಕಾಳಗಕೆ ನಳಿವುಳಿವು ದೈವಾಧೀನವದಕೇನು ||
ಕಾಳಗಕೆ ಹೋಗದವರೆಲ್ಲರು | ಬಾಳುವರೆ ಮನೆಗಳಲಿ ಕ್ಷತ್ರಿಯ |
ಬಾಲಕರಿಗಿದು ಧರ್ಮವೆಂದುದು ನೆರೆದ ಸುರಸಭೆಯು || ೪೮ ||

ಅತ್ತಲಾ ವಸುಪಾಲಕನು ಪುರು | ಷೋತ್ತಮನ ಚೂಣಿಯಲಿ ಮಾಗಧ |
ನೊತ್ತರಿಸಿದಾ ಪಡೆಯಿರಿದು ಬಲವಜ್ರಖಾಂಡವನು ||
ತುತ್ತುಗೊಟ್ಟನು ಯಮಮುಖಕೆ ಮ | ತ್ತತ್ತಲಾ ಸಮಸಪ್ತಕರ ಮಿಗೆ |
ಬಿತ್ತರದ ವಿದ್ಯಾವಲವ ಪ್ರತಿವಿದ್ಯೆಯಿಂ ಗೆಲಿದ || ೪೯ ||

ಧುರದೊಳಾ ಸಮಸಪ್ತಕರ ತಲೆ | ಯರಿದನರ್ಜುನದೇವನ್ನೆಗ |
ತರಣಿಯಪರಾದ್ರಿಯನು ಸಾರಿದ ತೆಗೆದುದಿರ್ವಲವು ||
ತಿರುಗಿ ಬಪ್ಪನಿತರೊಳು ಕೃಷ್ಣಾ | ದ್ಯರು ನರಾತ್ಮಜನಳಿದ ಖೇದವ |
ಧರಿಸಿ ಯಮನಂದನನ ಬೀಡಿಗೆ ಬಂದು ಸಂದಣಿಸಿ || ೫೦ ||

ಹರುಷ ವೆನಗೇಕಿಲ್ಲವೀಡಿನೊ | ಳುರುತರದ ಹಾಹಾರುತವಿದೇ |
ತರಣಿಯುದಯಿಸಿದಂತೆ ನನ್ನಾನನ ಸರೋಜವನು ||
ಅರಳಿಸುವ ಬಿಗಿಯಪ್ಪಿ ಬಾಯ್ಬೊ | ಯ್ದೆರಸಿ ರಸದುಂಬುಲವ ಕೊಂಬಾ |
ತರುಣನೆಲ್ಲಿದನೆಂದು ಮನಗುಂದಿದನು ಕಲಿಪಾರ್ಥ || ೫೧ ||

ಬಂದುರಥದಿಂದಿಳಿದು ತನ್ನೃಪ | ಮಂದಿರವನೈತಂದು ಮಹಾ |
ಕ್ರಂದ ನಂನೈವರನು ತಲೆಗುತ್ತಿರ್ದ ವೀರರನು ||
ಇಂದ್ರನಂದನ ಕಂಡಿದೇನೆ | ನೆಂದು ಬೆಸಗೊಳೆಮಮೆಲ್ಲನಾ ಯಮ |
ನಂದನನು ಮುನ್ನೊರೆದನುಭಿನ್ಯುವಿನ ವೀರವನು || ೫೨ ||

ಬಳಿಕಲಾ ಕುರುಪತಿಯ ನಂದನ | ರಳಿವನೊರೆದನು ಮತ್ತೆ ಸೈಂಧವ |
ನಳಿಸರಲ ದೆಸೆಯಿಂದ ವಿಧಿಕೊಂದುದು ಮಗನನೆನಲು ||

ಗಳಗಳನೆ ಕಣುನೀರು ಪರಿದವು | ಬಳೆದಳಿಟ್ಟುಸುರದೆ ಹರಣವನು |
ಘಳಿಲನೊಯಿದು ಮಹಾಮಗನೆಯೆಂದೊರಗಿದನು ಪಾರ್ಥ || ೫೩ ||

ಅಳಿದನಾ ಮಗನಲ್ಲಿ ತಮ್ಮನು | ಕಳಿದನಿಲ್ಲಿಯೆನುತ್ತ ಧರ್ಮಜ |
ನುಳಿದನೊಡಲೆಚ್ಚರಿಕೆಯನುಮೆತ್ತಾನುಮದು ತೊಲಗೆ ||
ಬೆಳೆದ ಶೋಕಾಗ್ನಿಯೆದೆ ಫಲುಗುಣ | ನೊಳುನಿಲಿಸಿದುದು ರೌದ್ರವಹ್ನಿಯ |
ಪ್ರಳಯ ರುದ್ರನತೆರದಿ ಕಿಡಿಕಿಡಿಯೋಗಿ ಘರ್ಜಿಸಿದ || ೫೪ ||

ಕಳದೊಳೆನ್ನಾತ್ಮಜನ ಕೊಂದನ | ಕುಲದ ಬೇರನು ಕೀಳುವೆನುಮೇಣ್ |
ಹೊಳಕದಡಗುವನೆಂಬೆನಾ ತಾನಡಗಿ ಬಾಳುವುದೆ ||
ಇಳೆಯದೊಂದಾಕಾಶವಂಧಾ | ಜಲಧಿ ನಾಲ್ಕೀರೈದು ದೆಸೆಗಳು |
ಕುಲಗಿರಿಗಳೇಳೆತ್ತಲಡಗುವನೆಂದನಾ ಪಾರ್ಥ || ೫೫ ||

ನಾಳೆ ಸೂರ್ಯಾಸ್ತಮಯದೊಳಗಾ | ಶೂಲಿಯಿದ್ದೈಸಿದೊಡೆಮೆನ್ನ ವಿ |
ಶಾಲ ಕೋಪಾನಳನೊಳಗೆ ಸೈಂಧವನ ತಲಿಗೊಯಿದು ||
ಬೇಳುವೆನು ಕೊಲಲಾರದಂದಾಂ | ಬೀಳುವೆನು ಕುಂಡದಮಹಾಗ್ನಿಯ |
ಜ್ವಾಲೆಯೊಳಗಿದು ಪೂಣ್ಕೆ ಹತಿ ಕೇಳೆಂದನಾ ಪಾರ್ಥ || ೫೬ ||

ಎಂದು ನನ್ನಿಯ ಪೂಣ್ಕೆಗೈಯೆ ಮು | ಕುಂದ ಮೊದಲಾಗಿರ್ದ ಬಂಧುಗ |
ಳಂದು ಬೆಕ್ಕಸಬಟ್ಟು ತಂತಮ್ಮಾಲಯಕೆ ಸರಿಯೆ ||
ಅಂದಿನಿರುಳಭಿಮನ್ಯು ಪೊಕ್ಕಿರಿ | ದೊಂದು ವೀರಾಳಾಪದಲೆ ತಾ |
ನೊಂದು ಘಳಿಗೆಯದಿನಿಸಿತುಭಯ ಮಹಾಕಟಕದೊಳಗೆ || ೫೭ ||

|| ಅಂತು ಸಂಧಿ ೪ಲ ಕ್ಕಂ ಮಂಗಲಮಹಾ ||

# ಯುದ್ಧ ಪರ್ವ (ಸಂಧಿ ೪೯)

**ಸಂಧಿ ೪೯**

ಮೂರು ಲೋಕದ ಗಂಡ ಗೆಲಗೈ | ಕಾರನಾ ವ್ಯೂಹವನಿರಿದು ನೆರೆ |
ಸಾರಿಕೊಂದನು ಸೈಂಧವನನಮರೇಂದ್ರನಂದನನು || ಪದ ||

ಕೇಳೆಲೇ ಶ್ರೇಣಿಕ ಧರಿತ್ರೀ | ಪಾಲ ಸೂರ್ಯೋದಯದಲಿರ್ವಲ |
ಕಾಳಗಕೆ ಬಂದೊಡ್ಡಿನಿಲೆ ಮಾಗಧ ಸುಯೋಧನರು ||

ಕೇಳಿದರು ಸಿತಹಯನ ಪೂಣ್ಕೆಯ | ನಾಳವರಿದಾ ಕುರುನೃಪಾಲಕ |
ನಾಳನೋಡಿದ ಮತ್ತೆ ಚಕ್ರವ್ಯೂಹ ರಚನೆಯಲಿ || ೧ ||

ನರನ ಪೂಣ್ಕೆಯನಾ ಜಯದ್ರಥ | ಗೊರೆದು ನೀವೀ ಪಡೆಯಬೆಂಗಡೆ |
ಯಿರಿ ದಿನಾಧಿಪನಸ್ತಮಯಮಪ್ಪನ್ನವೆಂದಿರಿಸಿ ||
ವರ ಮಹಾರಥರಪ್ಪ ಗಾಂಗೇ | ಯರನು ಗುರುದುಶ್ಯಾಸನಾದ್ಯರ |
ನಿರಿಸಿದನು ತಾವಾಗಿ ಶಲ್ಯ ಸಮೇತವನಿಬರನು || ೨ ||

ದುಂದುಭಿಯು ಬಾಹ್ಲಿಕ ಬೃಹದ್ಬಲ | ಸಂದಜಯವಿಂದಾನು ವಿಂದುವೊ |
ಳೊಂದಿಸವುಬಲ ಸೋಮದತ್ತನೃಪಾಲ ಜಯದತ್ತ ||
ಎಂದೆನಿಪ ಭೂಮೀಶ್ವರರ ನೆರೆ | ಸಂದಣಿಯ ಚತುರಂಗ ಸಹವಾ |
ಮುಂದೆ ಬಾಗಿಲೊಳಿರಿಸಿ ತಾಂನಡುವಿರ್ದನಿರಲಿತ್ತ || ೩ ||

ಭುವನವಿಜಯನೆನಿಪ್ಪ ಜಯನನು | ಪವನಸುತಯಮಳರನು ಸತ್ಯಕ |
ಜನನ ಧೃಷ್ಟದ್ಯುಮ್ನ ಭೀಮಾತಜನನಿಂತಿರವಾರ ||
ಜವರಸುತನೊಡಗೂಡಿ ಧ್ರುಪದ | ಪ್ರವರ ಮತ್ಸ್ಯಾಶೋಕ ಕೈಕೆಯ |
ನವನಿಪಾಲಾದಿಗಳ ತಾನೊಡಗೊಂಡು ಕಲಿ ಪಾರ್ಥ || ೪ ||

ಎರಗಿ ಯಮನಂದನಗೆ ವಜ್ರದ | ನೆರೆದ ರಥವೇರಿದನು ಸುತ್ತಲು |
ತುರುಗಿ ಬರೆ ಚತುರಂಗ ಬಲವೇನುಗ್ರ ಕೇಸರಿಯೊ ||
ಕರೆಗೊರಲನೋ ಕಾಲಮೃತ್ಯುವೊ | ಬರಸಿಡಿಲೊ ಕೀನಾಶನೋ ಕಡೆ |
ಯುರಿಯೊ ಪಾರ್ಥನೊ ಕವಿದು ಬಹುದೇನೆಂದುದರಿಬಲವು || ೫ ||

ಬರುತ ಬರುತಾ ಪಾರ್ಥನಾಗಳು | ತಿರುಳ ಜೇವೊಡೆಗೈಯೆ ಕಲಕಿತು |
ಶರಧಿಯಮರರ ನೆರಚಿ ಚಲ್ಲನೆ ಚೆಲ್ಲಿದುದು ಬೆದರಿ ||
ಸರಲನೆತ್ತಲು ಪರಿಪೆ ಕರಿಘಟೆ | ತುರಗದಳ ರಥ ಪೇಟಕ ರಥೋ |
ತ್ಕರವು ಜೀರಗೆ ದೊಕ್ಕದಂದದಿ ತಗ್ಗಿ ತಾಕ್ಷಣವು || ೬ ||

ಸವ್ಯದೆಸುಗೆಯಿದೀಕ್ಷಿಸುವೊಡಪ | ಸವ್ಯದೆಸುಗೆ ಯಿದೆಂಬ ಕಲ್ಪನೆ |
ಗವ್ಯವಸ್ಥಿತಿಯಾದುದಾ ಕರ್ಣಾಂತ ಪೂರಿಸಿದ ||
ದಿವ್ಯ ಚೌಪದ ಮಿಡುಕನರಿವೊಡೆ | ದಿವ್ಯರಿಗೆ ಕಾಣಿಸದು ಕೊಂದವು |
ಸವ್ಯಸಾಚಿಯ ಬಾಣಗಳು ವ್ಯೂಹೋದರಸ್ಥರನು || ೭ ||

ಪೆಣಗಳನು ಬೀಳುವ ಭರಕೆ ಪೆಡೆ | ಮಣಿದುದಾ ಫಣಿಪತಿಗೆ ಪೆಣಗಲ |
ಬಣಬೆನೆತ್ತರ ತೊರೆಯೊಳಗೆ ತೆಪ್ಪಗಳವೊಲು ತಳರೆ ||

ಕುಣಿವ ಮುಂಡಗಳೊಂದೆಸೆಗೆ ಮೇ | ಗಣೆವ ಪಂದಲೆಯಾಗಸಕೆ ಸಂ |
ದಣಿಸಿ ಕೊಂದನು ಪಾರ್ಥಗಿದಿರಹರಾರು ತ್ರಿಜಗದಲಿ || ೮ ||

ಒಡೆಯೆ ಚಕ್ರವ್ಯೂಹದಲಿ ರಥ | ನಡೆವ ಪಥದಲಿ ಶಲ್ಯ ಬೆದರದೆ |
ಫಡಪಡಿದಿರಾಗೆನುತ ಕೆಂಗರಿಗಣೆಗಳನು ನೂಂಕೆ ||
ಕಡಿದು ಪಾರ್ಥನ ಕೂರ್ಗಣೆಗಳೆಡೆ | ವಿಡದೆ ಮುಂಬರಿದವನ ಧನುವನು |
ಗುಡಿಯನೆತ್ತಿದ ಸತ್ತಿಗೆಯ ಕಡಿದಿಡಿಕಿದವು ಧರಗೆ || ೯ ||

ಅತ್ತಲಾರ್ದು ಜರತ್ಕುಮಾರಕ | ಮೊತ್ತಿ ಚಕ್ರಿಯ ಕಾಲವಯನೊಳು |
ಸತ್ಯಕನು ಭೂರಿಶ್ರವನೊಳಾ ವ್ಯಾಘ್ರಕೇತುವೊಳು ||
ಪೆತ್ತವಜ್ರ ಶಿಖೇಂದ್ರ ವೃಷ ಸೇ | ನೋತ್ತಮನೊಳುಳ್ಕ ಮುಖ ಮಿಗೆ ಕಾ |
ದುತ್ತುಮಿರ್ದರು ಸುರರ ಕಂಗಚ್ಚರಿಯ ಘಟ್ಟಿಸುತ || ೧೦ ||

ಇತ್ತಲತಿ ರೌದ್ರದಲಿ ನೆರೆ ಸಂ | ವರ್ತಸಮಯದ ಯಮನೆನಿಸಿ ಪಡೆ |
ಯೊತ್ತರಿಸಿ ಬಹ ಭೀಮಸೇನನ ಕಂಡು ಭಗದತ್ತ ||
ಮತ್ತ ಹಸ್ತಿಯ ಸುಪ್ರತೀಕದ | ಪತ್ತು ಮಡಿಯಧಟುಳ್ಳ ಗಜವನು |
ಪತ್ತಿ ನೂಂಕಿದನೇನನೆಂಬೆನು ರಣದೊಳದ್ಭುತವ || ೧೧ ||

ಸೊಕ್ಕಿದಂತಕನೊಂದು ಕೋಣನ | ಮಿಕ್ಕುದಾದಿವರಾಹ ನಿಂತಂ |
ನುರ್ಕುಮಿಕ್ಕುದು ಮಝುರೆಮಿಳ್ತುವ ಗಜದರೂಪಾಯ್ತೊ ||
ರಕ್ಕಸರ ತಿಂದಾನೆ ಪೊಣ್ದಿ | ಕೆಕ್ಕೆಯಿಂ ಭೀಮನ ಪಡೆಯಪೊ |
ಕಿಕ್ಕಿಲಿಕ್ಕಿತು ಬಿಕ್ಕಿ ಬಿಸಟಂಬರಿದುದೇನೆಂಬೆ || ೧೨ ||

ಓಡಿದವು ಘಟ ಪೇಟಕಗಳ | ಲ್ಲಾಡಿದವು ರಥನಿಚಯ ತನ್ನಿ |
ಕೋ‌ರ್ಡುವಡಬ ಜ್ವಾಲೆಗಳವೊಲು ರಕ್ತಮಯವಾಗೆ ||
ಈಡಿರಿದುದಶ್ವಂಗಳನು ಬೀ | ಸಾಡಿದುದು ಭಟಕೋಟಿಯನು ನೆರೆ |
ನೋಡುವಮರರ ಮೆಚ್ಚಿಸಿತು ಭಗದತ್ತನೆದ್ದಾನೆ || ೧೩ ||

ಕೋಡಿರಿತದಲಿ ಕೆಲವು ಗಜಗಳ | ನೀಡೊರಸಿ ಕೆಡಪುತ್ತ ಜೋದರ |
ನಾಡಲೇಂ ಪಿಡಿದೊತ್ತಿ ತ್ರ್ನ್ಗೆ ತಿರುಗ ಬೀಸಿಡಲು ||
ನೋಡುವಮರರು ಬಹಭರಕೆ ಕಡು | ಹೇಡಿಗಳವೊಲು ಸಿಡಿಯೆನಲಿ ನಲಿ |
ದಾಡಿದನು ನಭದೊಳಗೆ ನಾರದನಾನೆಗೊಲೆಗಂಡು || ೧೪ ||

ತುಳಿದು ಕೆಲರನು ನಖರದಿಂ ಪೊ | ಗ್ಗಳೆದು ಕೆಲಬರನೊತ್ತಿ ಹಸ್ತದಿ |
ಹಿಳಿದುಕೆಲಬರ ಕೋಡಿನಿಂ ಕೆಡೆಚುಚ್ಚಿ ಕೆಲಬರನು ||

ಕೆಲಬರನು ಪಕ್ಕದಲೊರಸಿಕೆಲ | ಕೆಲಬರನು ಕಡಿಕೊಂಬುಗೊಂಡ |
ಗ್ಗಳಿಸಿದುದು ಭಗದತ್ತನೇರಿದ ಗಂಧಸಿಂಧುರವು || ೧೫ ||

ಚರಣಹತದಿ ಪದಾತಿಯನು ನಖ | ದುರವಣಿಯಿನಶ್ವವನು ಭಾರಿಯ |
ಕರದಿ ರಥನಿಕರವನು ಕೋಡಿಂ ರದನಿ ಸಂಕುಳವ ||
ಅರೆಯುತಿರೆ ಕೋಳ್ಕುಟ್ಟಿಕೆಂಡವು | ಸುರಿಯೆ ಕೆಂಡದ ಮಳೆಗರೆವ ಭೀ |
ಕರ ಲಯಾಂಬುದವೆನಿಸಿದಾ ಕರಿ ಯುದ್ಧರಂಗದಲಿ || ೧೬ ||

ಎರಡು ನಿರ್ಜರವುಳ್ಳ ನೀಲದ | ಗಿರಿಗೆ ಕೈಕಾಲ್ಬಂದವೊಲು ಭೀ |
ಕರಮದೇಭವು ಬಹಳ ಶುಂಡಾಲವನು ಕೊಂದುಳಿದ ||
ಕರಿಘಟೆಗಳನು ಮುರಿಯಲಟ್ಟುತ | ತುರಗವನು ಪಿಡಿದಪ್ಪಳಿಸಿ ಬಹು |
ತುರಗಗಳ ನಿರದಿಟ್ಟು ಬಿಸುಟಂಬರಿದುದಾಜಿಯಲಿ || ೧೭ ||

ಕೊಂದು ಸುಭಟನನಡ್ಡಗಟ್ಟಿದ | ದೊಂದುಸಬಕೋಡಿನೊಳು ಪೋಣಿಸಿ |
ದೊಂದುಹೆಣ ನೆಗಹಿದ ಕರಾಗ್ರದಿನೆಲೆವ ಹೆಣನೊಂದು ||
ಮುಂದೆ ನೆತ್ತರು ಸೂಳೆತಿರೆ ಭೋ | ರೆಂದುದಕೆ ಪರ್ದೆರಗುತಿರೆ ತಾ |
ನೊಂದೆ ಬಂಬಲುವರಿದುದಾ ಭಗದತ್ತ ಸಿಂಧುರವು || ೧೮ ||

ನೆರೆದ ತನ್ನೆಯ ಪಡೆಯನಂತಕ | ಪುರವ ನೈದಿಸುತಿರಲು ನೆರೆ ಕಂ |
ಡುರುತರದಿ ಧುಮ್ಮಿಕ್ಕಿ ರುದಿರೋದ್ಗಾರಿ ಗದೆವಿಡಿದು ||
ಕರಿಯ ಕರಕೆಡಗೈಗೊಡುತ ಪೊ | ಕ್ಕುರು ರದನವನು ಪಿಡಿದು ಮಿಗೆ ಕುಸು |
ಕಿರಿದು ಗದೆಯಿಂದಪ್ಪಳಿಸಿದನು ಗಜವ ಕಲಿ ಭೀಮ || ೧೯ ||

ನಿಡಿಯ ನೀಲಾಚಲದ ರಂಕೆಯ | ಕಡಿಯೆ ವಜ್ರಿಯವಜ್ರದಿಂದದು |
ಕೆಡೆವವೊಲು ನೆಲನದಿರೆ ಕೆಡೆವವಸರದೊಳಗೆ ಕಾಯ್ದು ||
ಪಿರಿದ ವಜ್ರಾಂಕುಶದಿ ಕೋಪಿಸಿ | ಯಿಡಲದಂ ಗದೆಯಿಂದಣೆದು ಮಾ |
ರ್ಪೊಡೆದನಾ ಕೆಡೆಯೆಂದು ಭಗದತ್ತನನು ಕಲಿಭೀಮ || ೨೦ ||

ಪೊಡೆಯೆ ಮಕುಟವು ನುಚ್ಚುನೂರಾ | ಗೊಡೆದು ಕಿಡಿಕಿಡಿವೋಗೆ ರಕುತವು |
ಕೊಡನ ಕುಟ್ಟಿದ ತೆರದಿ ತಲೆಕಾಪಾಲನುಗ್ಗಾಯ್ತು ||
ಕಡುಹಗಲು ತಾನಾದುದನ್ನೆಗ | ವೊಡನೆ ಭೂರಿಶ್ರವನದಿತ್ತಲು |
ಕಡುಪಿನಿಂ ಸತ್ಯಕನನೊತ್ತಲು ಕಂಡನಾ ಪಾರ್ಥ || ೨೧ ||

ಎಸಲು ಭೂರಿಶ್ರವನ ತಲೆಯಾ | ಗಸಕೆ ಪಾರಿದುದಿನ್ನು ಸೈಂಧವ |
ನಸುವ ಕಾವಗ್ಗಳನದಾರೆಂದಾರ್ದನಾ ಪಾರ್ಥ ||

ವಸುಧೆ ಕಂಪಿಸೆ ಬಿಲ್ಲ ಜೇವಡೆ | ದಸಮ ವಿಕ್ರಮ ಕೋಲಗುರುವಂ |
ದಿಸುವೊಡೆಣೆಯಿಂ ತೆಗೆದು ಪಿಡಿದೀಕ್ಷಿಸಿದನರ್ಜುನನ || ೧೨ ||

ಇಂದ್ರಸುತ ನಿನ್ನಿರುಳು ನಿನ್ನಯ | ಕಂದನಳಿದಾ ಶೋಕ ಮೋಹದಿ |
ಮುಂದುವರಿದಾಡಿದವೊಲೀಗಳು ಗಂಡಗರ್ವದಲಿ ||
ಮುಂದುವರಿಯದಿರೆಮ್ಮೊಡನೆ ಭೋ | ರೆಂದುರಿದ ಕಾಳ್ಗಿಚ್ಚಿನಲಿ ಪರಿ |
ತಂದು ಘರ್ಜಿಸಿ ಬಿರ್ದುಬಾಳ್ವುದೆ ಹುಲಿಯು ಕೇಳೆಂದ || ೧೩ ||

ಹಸುಳೆಮಗನನು ಸಂಗರಕೆ ಕಳು | ಹಿಸಲದೇತಕೆ ಕಾದಿ ಕೌರವ |
ನೆಸೆವ ಮಕ್ಕಳ ಕೊಂಡುವಡಿದಡೆ ದುಃಖವೇ ನಿನಗೆ ||
ಅಸುವ ನೆಳವೆಗದರಿಯನಲ್ಲದೊ | ಡಸುವನನ್ನಿಯೊಳೀಡುವೆ ಗಡ ನೀ |
ನುಸುರಿದುದೆ ತತ್ವವೆ ಬಿಡೆಂದಾರ್ದೆಚ್ಚನಾ ದ್ರೋಣ || ೧೪ ||

ಎಚ್ಚನಮ್ಮಯ ಗುರುವೆನುತ ಮೈ | ವೆರ್ಚೆ ಕೂರ್ಗಣೆಯನು ತಿರುವಿನೊಳ |
ಮರ್ಚಿತೆಗದೆಸೆ ಪರಿದವಿದಿರ್ರೈತಪ್ಪ ವಿಶಿಖವನು ||
ಕೊಚ್ಚಿದವು ಕುಂಭಜನ ಬಲಗೊಂ | ಡೊಚ್ಚತದಲೆರಸಿದವು ದಿಟ್ಟೆ ಜಿ |
ದಚ್ಚರಿಯದೆನೆ ಬಿಲ್ಲಬಿಜ್ಜೆಯ ತೋರಿದನು ಪಾರ್ಥ || ೧೫ ||

ನೋಟಕರ ಕಣೀರ್ವರಂಬುಗ | ಳಾಟವಾಗಸದೊಳಗೆ ಮರಸು |
ತ್ತಾಟವೆನೆ ಹೊಸ ಚಿಟ್ಟು ಮುರಿಯಾಟವನೆ ಪರಿಮರಿಯ ||
ಆಟವನೇ ಪರಿದಾಡಿದವು ಬಲು | ತೋಟಿಯಲಿ ಕಿಡಿಕೆಂಡವನು ಮೊನೆ |
ನಾಚಿ ಸುರಿದವು ಫಲ್ಗುಣ ದ್ರೋಣರ ಸಮರದೊಳಗೆ || ೧೬ ||

ಮೊನೆಮೊನೆಗೆ ಕಾಳಗವು ಹಿಳುಕಿಗೆ | ಮೊನೆಗೆ ಜಗಳವು ನೂಂಕು ವಂಬಿನ |
ಮೊನೆಗೆ ಮರಳುವ ಹಿಳುಕಿಗಾಹವ ಹಿಳುಕು ಹಿಳುಕುಗಳ ||
ಮೊನೆಮೊನೆಯ ಸಮಜೋಳಿಯೇವೇ | ಳ್ವೆನು ಹಿಳುಕು ಹಿಳುಕುಗಳ ಯುದ್ಧವು |
ಘನಪಥದೊಳಾಯ್ತೆಂದು ಪಾರ್ಥದ್ರೋಣರೆಚ್ಚಾಡೆ || ೧೭ ||

ಗುರುವೆ ಮಝು ಭಾಪಮಮ ಕಾರ್ಮುಕ | ಪರಮ ವಿದ್ಯಾ ಭಾಳಲೋಚನ |
ಸರಳಜಾಣ್ಮೆಯ ತೋರಿದಿರೆಯೆಂದೊಡೆಯಾನರಿದೆಚ್ಚು ||
ತುರಗವಿರ್ದೆಸೆಗೋಡೆ ಮೊಗನುಡಿ | ದುರುರಥವ ಹೋಳಾಗೆ ನೆಲಕವ |
ತರಿಸಿ ದ್ರೋಣಾಚಾರ್ಯನಿಂದನು ಬರಿಯ ಬಿಲುವಿಡಿದು || ೧೮ ||

ಅರಿಪಿದಾ ವಿದ್ಯೆಯನು ಶಿಷ್ಯನು | ಮರೆದನೋಯೆನೆಂದು ಪರಿಕಿಪ |
ತೆರದಿ ಕಣೆವಿನ್ನಣವ ತೋರ್ದಿರಿಕಲಿಸಿದಂದದಲಿ ||

ತರಿದೆನಲ್ಲದೆ ನಿಮ್ಮ ಬಾಣಕೆ | ಮರುಸರಳ ತೊಡಬಲ್ಲ ಬಲು ಬಿ |
ಲ್ಲರೆಯನವನಾರೀ ತ್ರಿಕೋಕದೊಳೆಂದನಾ ಪಾರ್ಥ || ೧೯ ||

ಎಂದು ದ್ರೋಣಾಚಾರ್ಯನು ಬಲ | ವಂದುದಾ ರಥ ಕೃಷ್ಣಬೋಧಿಸೆ |
ಮುಂದೆ ಭರದಲಿ ಪೋಗುತಿರೆ ಗಾಂಗೇಯರಿದಿರಾಗೆ ||
ತಂದೆಗಳು ಗುರುಗಳು ವಿಚಾರಿಪ | ದೊಂದೆ ಸರಿಯೆಂಬಂತೆ ಕುಂಭಜ |
ನಂದವನೆ ಸಿಂಧುಜಗೆ ಮಾಡಿದನಿಂದ್ರನಂದನನು || ೨೦ ||

ಬಳಿಕವರನಭಿವಂದಿಸುತ ಮುಂ | ದಳವಿಗಳಿದೊಳ ಪೊಗಲು ಕೇಸರಿ |
ಕೆಳರ್ದವೊಲು ದುಶ್ಯಾಸನನು ತಾಗಿದೊಡೆದೇನೆಂಬೆ ||
ಕೊಲೆಗೆ ಪೇಸದೆ ಕೊಂದನಾತನ | ಬಲ ಚತುಷ್ಕವನೆಚ್ಚು ಮತ್ತರೆ |
ಘಳಿಗೆಯಲಿ ದುಶ್ಯಾಸನಗೆ ವಿರತತೆಯನಾಗಿಸಿದ || ೨೧ ||

ಸಂದುದಾಗಳು ಮೂರು ಜಾವವು | ಒಂದು ಪಡೆಯಲಿ ಬೇಗದಲಿ ಪರಿ |
ತಂದು ರವಿಯಸ್ತಮಿಸನೇಕೆಯೊಯೆಂದು ಚಿಂತಿಪುದು ||
ಒಂದು ಪಡೆ ಬಯಸುವುದು ಭಾನುವ | ಮಂದ ಗಮನವನಿನ್ನು ಜಾವಕೆ |
ಬೆಂದು ಹೋಗದೆ ಮಾಣನರ್ಜುನನೆಂದನಾ ನೃಪತಿ || ೨೨ ||

ತ್ರಿಪುರದಹನಕೆ ರೌದ್ರದಿಂ ಬಹ | ತ್ರಿಪುರವೈರಿಯೊಲಾರ್ದು ಪಾರ್ಥನು |
ಕುಪಿತಮನನೊಡ್ಡಣೆದುನೆರೆನಿಲೆ ಕಂಡು ಸೈಂಧವನು ||
ನೃಪತಿ ಪೇಳ್ದಂತಿರಲು ಪಾರ್ಥನ | ವಪುವಳಿವುದೆಂದಾನದಾಂ ನಿಂ |
ದಪೆನೆ ತನ್ನಾಳ್ತನಕೆ ಹಾನಿಯದೆಂದು ಬಗೆದಂದ || ೨೩ ||

ಎಲವೊ ಸೈಂಧವ ನನ್ನ ಮಗನನು | ಕೊಲುವ ವೀರನೆ ನೀನೆ ಭಟರೂಡ |
ಲಲಿಸುರಿದು ಕಣೆತೀರದಡೆ ಕೈಮೆರೆದೆವೆಲೆ ನಿನ್ನ ||
ತಲೆಗೆ ಖೇಚರ ಪದವಿ ಘಟಿಸುವ | ಘಳಿಗೆ ಬಂದಿದೆ ಅಡಗದಿರು ನಿ |
ನ್ನಳಿಬಲದ ಹೊದರಿನೊಳಗೆಂದು ಕಿರೀಟಿ ಘರ್ಜಿಸಿದ || ೨೪ ||

ಕುಲಗಿರಿಯ ಮಲೆ ಸಾರಿದೊಡೆ ಭೂ | ತಲದೊಡಲನುರೆ ಬಗಿದು ಪೊಕ್ಕೊಡೆ |
ಜಲಧಿಯುದರದಲಡಗಿದರೆ ದಿಕ್ಪಾಲಕರ ಬೆನ್ನ ||
ನೆಳಲಲಿದ್ದಡೆ ಅರಸಿ ತಂದೀ | ಘಳಿಗೆಯಲಿ ನಿನ್ನಸುವನೊಡಲಿಂ |
ದೆಳೆಯದಿರೆ ಮೃಗರೆಯದಿದರಾಗೆಂದನಾ ಪಾರ್ಥ || ೨೫ ||

ಮರೆದು ಮಲಗಿದ ಕೇಸರಿಯ ನೆ | ಚ್ಚರಿಸುವುದು ಗಡ ವನಕರಿಯು ಕಣು |
ದೆರಯಿಪನು ಗಡ ಹಸಿದ ಮಾರಿಯ ಮುಂದೆ ನಿಂದೋರ್ವ ||

ನೆರೆದ ಸರ್ಪನು ಗರುಡ ಪಕ್ಷದ | ಗರಿಯ ಕಿಳ್ತಿಡುವುದು ಗಡೆನ್ನನು |
ಜರೆದು ಕರೆವುದು ಲೇಸುಮಗನನು ಕಾಣ್ಬೆ ನೀನೆಂದ || ೩೬ ||

ಕಡು ಮಸಗಿ ಸೈಂಧವನು ತನ್ನಯ | ಪಡೆಯ ನೂಂಕಲು ಬೆಟ್ಟ ಬೇಸಗೆ |
ನಡುಹಗಲ ರವಿಯಂತೆ ಕಿಡಿಯೋಗುತರ್ಜನನು ||
ತೊಡಚಿದನು ತಿರುವಾಯ್ಗೆ ಹಿಳುಕನು | ಕಡಿವಹಿಲದಲಿ ತೆಗೆದು ತನ್ನಯ |
ಮುಡುಹಿ ನಡೆಯಲಿ ಹಿಳುಕನೊಡೆದನದೇನ ಹೇಳುವೆನು || ೩೭ ||

ಶರಧಿಯಿಂ ತೆಗೆವಾಗಲೊಂದದು | ತಿರುವಿಗಿಡಲೀರೈದು ಬಿಡೆನೂ |
ರಿರದೆ ಪರಿವೆಡೆಯಲ್ಲಿ ಸಾಸಿರವರಿ ಶರಂಗಳನು ||
ಅರಿವೆಡಗೆ ಲಕ್ಷವದು ರಿಪು ಸಂ | ಹರಣದಲಿ ಕೋಟಿಯು ಬಳಿಕ ಸಂ |
ಗರನಭೋಂಗಣವೆಲ್ಲ ವಿಸುಮಯವಾದವರ್ಜುನನ || ೩೮ ||

ಹಸಿದ ಜವನಾರೋಗಿಸಿದ ಪೆಂ | ಪೆಸೆವ ಪರಿಯಣದಂತೆ ಕಣನಿರೆ |
ವಸಗಿ ನಿಜವಾಹಿನಿಯ ಮಣ್ಮಳಿಯಾದುದನು ನೋಡಿ ||
ನೊಸಲ ಕಣ್ಣಿಂದೀಶ್ವರನೊಯೆನಲ | ರ್ಪಿಸಿ ಜಯದ್ರಥನಾ ವರೂಥವ |
ನಸಮ ಭುಜಬಲನಿದಿರು ನೂಂಕಿದನತಿ ವಹಿಲದಿಂದ || ೩೯ ||

ಲೇಸುಮಝು ತುಳಿಲಾಗೆ ನಿನಗಿಂ | ತೀಸು ವಿಕ್ರಮವಿಲ್ಲದೊಡೆ ತ |
ನ್ನ ಸುತನ ಕೊಲಲಾಪೆಯಾ ಕೈಮಾಡು ಮಾಡೆನಲು ||
ಆಸಿಸುವ ಕೊಂದೊಂದು ಬಲುಕಡು | ಸಾಸಿಯಹ ನಿನ್ನೊಡಲ ರಕುತವ |
ಸೂಸಿ ಹರಣವನೆಳೆವೆನೆಂದಚ್ಚನು ಜಯದ್ರಥನು || ೪೦ ||

ಸರಳುಗಳು ಹಿಂದಿಕ್ಕಿ ಹಿಂದಣ | ಸರಳುಗಳು ಹರಿದವು ಕಿರೀಟಿಯ |
ಹೊರೆಗೆ ಮಝು ಬಿಲ್ಲಾಳ ಲೇಸೆಂದಾ ಕಪಿಧ್ವಜನು ||
ಕರಳ ಸರಳಿಂ ಕಡಿದು ಹಸ್ತದ | ಸರಿಯೆನಲು ನಿಜಹಸ್ತದಿಂ ಬಲು |
ಸರಳಮಳೆಯನು ಕರೆದನದುಭುತವಾಗೆ ಸಂಗರವು || ೪೧ ||

ಅರರೆ ಸೈಂಧವನೇಂ ಪ್ರತಾಪಿಯೊ | ಸುರಪ ಸುತನೆಚ್ಚಂಬ ನಡೆಗಡಿ |
ವರಿಸು ಭಟನಾವನೊ ಸವರಿದನು ಸರಳಸರಿವಳೆಯ ||
ಕೆರಳಿ ಮಧ್ಯಮ ಪಾಂಡವನು ಮುಳಿ | ದಿರದಿವನು ತೋರವನು ಮಾಡುವ |
ಪರಿದಿದೇಕೆಂದೊಂದು ಬಾಣವ ತಿರುವಿಗೊಂದಿಸಿದ || ೪೨ ||

ದೇವ ದಾನವ ಮರ್ತ್ಯರೊಳಗಿ | ನ್ನಾವನಾಗಲಿ ಸೈಂಧವನ ತಲೆ |
ಗಾವುದೆಡೆಯಲಿ ವೀರವುಳ್ಳಡೆ ನಾಂ ಪ್ರತಿಜ್ಞೆಯನು ||

ಕಾವೆನಲ್ಲದೆ ಇವನ ತಲೆಯನು | ಕಾವವನ ಲೆಂದೊದರಿ ಫಲುಗುಣ |
ತೀವಿ ತೆಗೆದೆನೆ ಹಾರಿ ಕೆಡೆದುದು ತಲೆ ಜಯದ್ರಥನ || ೪೩ ||

ಮೊಳಗಿದುದು ಜಯಪಟಹ ಪಾಂಡವ | ಬಲದೊಳಗೆ ಚತುರಾಸ್ಯ ಪುತ್ರನು |
ನಲಿದನಾಗಸದೊಳಗೆ ಮಝುರೇತಾಂ ಪ್ರತಿಜ್ಞೆಯನು ||
ಉಳುಹಿಕೊಂಡನು ಪಾರ್ಥನೆಂದೀ | ವ್ಽಲದೊಳಗೆ ಕಳಕಳವು ಪೆರ್ಚಿತು |
ಕಳಿದ ತಾವರೆಯಾಯ್ತು ಫಣಿಕೇತನನ ಸಿರಿಮೊಗವು || ೪೪ ||

ಸಿಡಿದ ಸೈಂಧವ ಶಿರದ ರಕುತವು | ಮಿಡಿದು ತಾಗಿತೊಯೆಂದು ಶಂಕಿಸಿ |
ಪಡುಗಡಲ ಮುಳುಗಿದ ತೆರದಿಯಪರಾಬ್ಧಿಗಿನನಿಳೆಯೆ ||
ಪಡೆಯೆರಡು ತೆಗೆದವು ಹರಿಯ ಪೆ | ವ್ಽಡೆಯೆ ನೈದಿದನರ್ಜುನನನುಜ |
ನುಡಿದುದಾ ಪಾರ್ಥಾಭಿಮನ್ಯುವ ವೀರದೆಸಕವನು || ೪೫ ||

|| ಅಂತು ಸಂಧಿ ೪೯ಕ್ಕಂ ಮಂಗಲ ಮಹಾ ||

# ಯುದ್ಧ ಪರ್ವ (ಸಂಧಿ ೫೦)

**ಸಂಧಿ ೫೦**

ಕುರುನೃಪಾಲಕನನುಜರನು ಸಂ | ಗರದೊಳಗೆ ಕಲಿಭೀಮ ಕೊಂದನು |
ಸುರನದೀ ಸುಕುಮಾರನಿರಿದನು ಪಾಂಡವರ ಪಡೆಯ || ಪದ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ಮರುದಿನದೊಡ್ಡಿನಿಂದುದು |
ವ್ಯಾಲ ಚಕ್ರಾಯುಧನ ದೈತ್ಯಾರಿಯ ಮಹಾಸೇನೆ ||
ಸೂಳೈಪ ನಿಸ್ಸಾಳಗಳ ದನಿ | ಮೇಳಿಸಿತು ದಿಗುವಳಯವನು ಕ |
ಟ್ಟಾಳು ದುಶ್ಯಾಸನನು ಭೀಮಗೆ ಮಾರ್ಮಲೆದು ನಿಂದ || ೧ ||

ತೋರಿದನು ಬಿಲುವಿದ್ಯೆಯನು ನೆರೆ | ಹಾರಸತ್ವವನವನ ಕಣೆಯನು |
ತೂರಿದನು ಹೊರಗಂಬುಗಳ ಕೆಂಗರಿಯ ಗಾಳಿಯಲಿ ||
ಏರುಪೂತುದು ಮೈಯೊಳಗೆ ಬಿಲು | ಜಾರಿದುದು ಕೈಯಿಂದ ಮರಳಿದ |
ನಾರದರಥದೊಳಗೆ ಭೀಮನಕೋಲ ಖುರಪುಟಕೆ || ೨ ||

ಕನಲಿ ಯೆಡವಂಕದಲಿ ದುರ್ದರು | ಶನನು ಬಲುವಂಕದಲಿ ದುರ್ಮರು |
ಶನನು ನಿಜಚತುರಂಗಸೈನ್ಯವನೊರ್ಮೋದಲೆ ನೂಂಕೆ ||

ಅನಿಬರೆಡೆವಿಡದೆಸುವಿರಿವ ತಿವಿ | ವನುವರದಲಾ ರಥವನಿಳಿದನು |
ಮುನಿದು ಕೊಲಲಿಳದಂತ ಕನವೊಲು ಬೆರಸಿದನು ಭೀಮ || ೩ ||

ಆಳನಾಳಿಂದಿಟ್ಟು ಸುಭಟರ | ಹೊಲಿದನು ತುರಗವನು ತುರಗದಿ |
ಬೀಳಹೊಯ್ದನು ರಥಗಳನು ಪಿರಿದೆತ್ತಿ ರಥಗಳನು ||
ಸೂಳವಿಸಿದನು ಬಾಲವಿಡಿದಾ | ವ್ಯಾಲದಂತಿಯ ನೆಗಪಿ ರಿಪು ಶುಂ |
ಡಾಲಗಳನಪ್ಪಳಿಸಿ ಕೊಂದನು ಭೀಮನಾಚೆಯಲಿ || ೪ ||

ಅರರೆ ಪರಬಲ ಭೀಮ ಭೀಮನ | ಬರವನಾಂಪವರಾರೊ ಕಾಣೆನು |
ಧರಧರೆಯೊಳಳಿದವರನಲ್ಲದೆ ಉಳಿದ ಸುಭಟರನು ||
ತಿರುಗಿ ಬಂದು ಹಿಡಿಂಬ ಕಾಂತಕ | ಮುರುರಥವ ಸಾರಿರಲೊಡನೆ ಮ |
ತ್ತರಸನನುಜರು ವೀರಗಂಕಣಗಟ್ಟಿದರು ನೊರೆದು || ೫ ||

ತುರುಗಿ ತಾವೆಲ್ಲರು ಸುಯೋಧನ | ನುರುವ ತಮ್ಮಂದಿರು ಪರಾಕ್ರಮ |
ನೆರೆದು ಬಂದೊಡ್ಡಿದರು ವನಕರಿನಿಕರಸುರಕರಿಯ ||
ತರುಬಿದಂದದಿ ಭೀಮಸೇನನ | ತುರುಬಿದರು ಮೊನೆಯಂಬುಗಳ ಮಳೆ |
ಗರೆದರಾ ಚಂಬಕಕಹಳೆಯುಲಿಯೊಡನೆ ಬೊಬ್ಬಿರಿದು || ೬ ||

ದಂಡಧರನತಿ ಮುಳಿದುಕೊಂಡನೊ | ದಂಡಮುಮನೆನೆ ಭೀಮಸೇನನು |
ಚಂಡರುಧಿರೋದ್ಗಾರಿ ಗದೆಯನು ಹಸ್ತದಿಂ ತೆಗೆದು ||
ಕೊಂಡುಡವರಿಸಿದನು ಕವಿವ ಬಹು | ಕಾಂಡಗಳು ಸಿಡಿದುಡಿಯೆ ಮಿಗೆ ದೋ |
ರ್ದಂಡವಿಕ್ರಮನಡಸಿ ಹೊಕ್ಕನು ಸುರರ ಕಣ್ಣೆದರೆ || ೭ ||

ಎತ್ತಿ ಹೊಯ್ದನು ಕೆಲಬರನು ಮೊನೆ | ಯೊತ್ತಿದನು ಕೆಲಬರನುಡವರಿಸಿ |
ಕುತ್ತಿದನು ಕೆಲಬರನು ಸೆಳೆದೊತ್ತಿದನು ಹಲಬರನು ||
ಮತ್ತಗಜ ವೊಳಹೊಕ್ಕ ಕದಳಿಯ | ಮೊತ್ತವೆನೆ ವೃಕ ಜಠರನುರುಬೆಗ |
ದೆತ್ತಲುಂ ಪಡಲಿಟ್ಟರಾ ಕುರುನೃಪ ಸಹೋದರರು || ೮ ||

ಅಳಿದರಾ ಮೂವತ್ತ ಮೂವರು | ಕಲಹದಲಿ ಕುರುರಾಯನನುಜರು |
ಕಳೆದನಲೆ ನೃಪಾ ಜಠರನಾ ವಿಪವೃಕ್ಷದೆಡಬಲದ ||
ಹಲವು ಬೇರ್ಗಳನೆಂದು ಸಂತಸ | ದಲಿ ನಿರಂತರಮುಲಿಯೆ ಯಾದವ |
ಬಲವದೆತ್ತಲು ಮಾಗಧನ ಮಾಧವನ ಮೊನೆಯೊಳಗೆ || ೯ ||

ಅತಿರಥರು ಸಮರಥರು ಮೊದಲಾ | ದತುಳ ಸಾವಂತರು ಸಮರ ಸಂ |
ಗತಿಯೆನೊಡರಿಸಿ ನೆರೆದ ಸಮಗಾಳಗದಲಿರಲಿತ್ತ ||

ಗತ ವಯೋಗತಿ ದೂರತೇಜ | ಸ್ಥಿತನಪರವಾರ್ಧಿಯೊಳು ದಿನಕರ |
ಪತಿತನಾದನು ಕಳಿವವಾವನೊ ಕಾಲನುಪಟಳವ || ೧೦ ||

ಬೀಡ ಹೊಕ್ಕುದು ಪಡೆಯೆರಡು ಕಡು | ಬಾಡಿದಾನನದಲಿ ದುಗುಡವನು |
ಸೂಡಿ ಬಂದನು ಸುರನದಿಯ ಸುಕುಮಾರನರಮನೆಗೆ ||
ನಾಡೆರೆಯನೆರಗಿದನು ಸುಯಿಗಳು | ತೀಡಲುಚಿತಾಸನದೊಳಿರ್ದಿಂ |
ತಾಡಿದನು ಚಿತ್ತೈಸಿ ಕೇಳುವುದಜ್ಜ ಬಿನ್ನಹವ || ೧೧ ||

ಮೊನ್ನೆ ಸುತರಳಿದಳಲು ತಾನಭಿ | ಮನ್ಯುವಿನ ಮೃತಿಯಿಂದ ಪೋದುದು |
ನಿನ್ನೆ ನೇಮಿಸಿ ಸೈಂಧವನ ತಲೆಗೊಂಡನಾ ಪಾರ್ಥ ||
ತನ್ನಯನುಜರ ನಿಂಮ ಮಾರುತಿ | ಬನ್ನ ಬಡಿಸಿಯೆ ಕೊಂದನೆಲೆ ನಿ |
ಮ್ಮಣ್ಣದಿರುತಿರೆ ದುರ್ಜಯವೆನವರುಗಜ್ಜ ಕೇಳೆಂದ || ೧೨ ||

ಸುರನದಿಯ ಸುತನಾ ವಿಭುವನೀ | ಪರಿಯ ದೀನೋಕ್ತಿಗೆ ಹೃದಯದಲಿ |
ಕರಗಿ ಮಗನೇ ಬಂಧುವಿಗ್ರಹ ಬೇಡವನ್ನಯವ ||
ಪರಿಹರಿಪುದೆಂದೆಮ್ಮ [ಪೇಳಿದ] | [ಗು]ರುವಚನವನು ಮೀರಿ ಈ ಸಂ |
ಗರವ ಬಯಸಿದೆ ಬಯಸಿದಂತೊಲಿವಳೆ ಜಯಾಂಗನೆಯು || ೧೩ ||

ಕೇಳೆಲೇ ಕುರುರಾಯ ಸಂಧಿಗೆ | ವೇಳೆಯಿದು ನಿಮಗೀಗಳಾದಾ |
ಸೋಲವಿಲ್ಲ ಜಯಾಂಗನೆಯ ಕಣ್ಣೊಲಹ ಕಂಡೆಯಲ ||
ಮೇಳದಿಂ ಕೌಂತೇಯರಿಗೆ ಮು | ನ್ನಾಳುವಿಳೆಯನು ಕೊಡುವುದೊಳ್ಳಿತು |
ಕಾಳಗವು ಬಂಧುಗಳೊಳಿನ್ನೇಕೆಂದನಾ ಭೀಷ್ಮ || ೧೪ ||

ಅಜ್ಜ ನೀವಿದನಾಡಿ ನನ್ನನು | ಲಜ್ಜಿಸಿದಿರೇ ಕೊಂಡವಾಸಿಯ |
ಹಜ್ಜೆ ಹೊರಮೆಟ್ಟಿದುದೆ ಕ್ಷತ್ರಿಯರಿಗೆ ಮರಣವಲ್ತೆ ||
ಅರ್ಜುನನ ಭೀಮನ ಮೊನೆಗೆ ಕಡು | ಬೆಜ್ಜರದಿ ನಾ ನೆಲನನೀವುದು |
ಕಜ್ಜವೇ ಅವರೀರ್ವರಸುವನು ಸೆಳಯದಿರೆನೆಂದ || ೧೫ ||

ಎಲೆ ಸುಯೋಧನ ಇರಿಯಲಾರದೆ | ತಲೆಗೆ ಲೋಭವ ಮಾಡಿ ನಾವೀ |
ಕಲಹಕಂಜಿದೆವೆಂದು ಬಗೆಯಲೆ ಬೇಡ ಮನದಿಂದ ||
ತೊಲಗಿಸೈ ಚಿಂತೆಯನು ನಾಳಿನ | ಕೊಳುಗುಳವ ನಾನಾಂಪೆನೆಂದತಿ |
ತಿಳುಹಿ ಕಳುಹಿದನಭಯ ವಚನದಿನಂಧನೃಪಸುತನ || ೧೬ ||

ತರಣಿಯುದಯದಲೆಂದಿನಂದದ | ಲೆರಡು ಬಲವೋಡಿದುದು ಗಾಂಗೇ |
ಯರು ಮುದದಲುಪ್ಪವಡಿಸಿಯೆ ಸುಸ್ನಾನಧೋತ್ರಗಳ ||

ಧರಿಸಿಯುಷ್ಟವಿಧಾರ್ಚನೆಯನಾ | ದರದಿ ಜಿನಪತಿಗೆಸಗಿ ವಂದಿಸಿ |
ಪರಮಗಂಧೋದಕ ಪವಿತ್ರಿತ ಗಾತ್ರನೊಪ್ಪಿದನು || ೧೭ ||

ಉಟ್ಟನೊಲವಿಂ ಕಾಸೆಯನು ಮಿಗೆ | ತೊಟ್ಟನಾ ಕವಚವನು ಶರಧಿಯ |
ಕಟ್ಟಿದನು ಬೆಂಗಳವಡಿಸಿದನು ತಲೆಗೆ ಸೀಸಕವ ||
ನಟ್ಟ ಹೇಮಧ್ವಜ ಪತಾಕೆಗ | ಳಿಟ್ಟಳದ ರಥವೇರಿದನು ಶರ |
ವೊಟ್ಟಿದಾ ಶತಶಕಟಪರಿವೃತನಂದು ಕಲಿ ಭೀಷ್ಮ || ೧೮ ||

ನಡೆದನಕ್ಷೋಹಿಣಿಯ ಗಡಣೆಯ | ಪಡೆವೆರಸಿ ಪಾಂಡವಪತಾಕಿನಿ |
ಗಡಸಿದಂತಕನಂತೆ ನೋಳ್ಪರ ಕಂಗಳೆವೆಸೀಯೆ ||
ಕಡೆಯ ರುದ್ರನ ಕಣ್ಣುರಿಯೆ ತಾ | ನೊಡಲುವಿಡಿದೈತಂದುದೋ ಎನೆ |
ಕಡು ಭಯಂಕರವಾಗೆ ಶಂತಕುವಾರನೊಪ್ಪಿದನು || ೧೯ ||

ವರ ಜರಾಸಂಧನು ಕುರುಕ್ಷಿತಿ | ವರನುಮಾಳೋಚಿಸಿದನಿಂದಿನ |
ಧುರಧೊಳೀ ಗಾಂಗೇಯರುರುಬೆಯನಾಂಪನವನಾರೊ ||
ನರನನಲ್ಲಿಂದಗಲಿಸುವವೆಂ | ದೊರೆದು ನಿಜ ವಿದ್ಯಾಧರರ್ಕಳ |
ಕರೆದು ಫಲುಗುಣನನು ಮೊನೆಯೊಳಿಕ್ಕುವುದು ನೀವೆನಲು || ೨೦ ||

ವಿತತ ವಿದ್ಯುತ್ಪ್ರಭನು ವಿದ್ಯು | ದ್ಗತಿಯು ಗಿರಿನಿಭರೌದ್ರಕೇಳಿ |
ಪ್ರತಿಭಯಂಕರ ಮುಖ್ಯ ವಿದ್ಯಾಧರನಿಕರವೆಯ್ದಿ ||
ಅತಿ ಭಯಂಕರ ವಿಕೃತ ವಿದ್ಯಾ | ಚತುರರೊಪ್ಪುವ ತಮ್ಮ ಬಲಸಂ |
ತತಿವಡೆದು ಬಂದೊಡ್ಡಿ ನಿಂದರು ಪಾರ್ಥನಿದಿರಿನಲಿ || ೨೧ ||

ಹರಿಯದಂ ತಿಳಿದಶನಿವೇಗನ | ನರುಣಚಂದ್ರನ ಸಿಂಹನಾದವ |
ಕರದು ಮಾನಸವೇಗ ಮುಖ್ಯರನರ್ಜುನನ ಕೂಡೆ ||
ಇಳಿಮೆನುತ ನೇಮಿಸಲು ವಿದ್ಯಾ | ಧುರವನಚ್ಚರಿಯಾಗಿ ಮಾಡು |
ತ್ತಿರಲು ಭೀಷ್ಮರಿಗಿದಿರು ಧುರದೊಳು ಭೂಪ ಕೇಳೆಂದ || ೨೨ ||

ವರಯುಧಿಷ್ಠಿರ ಭೀಮ ಮಾದ್ರಿಜ | ರುರು ವಿರಾಟದ್ರುಪದ ಕೇಕೆಯ |
ರುರುಘಟೋದ್ಗಜ ನೃಪತಿ ದೃಷ್ಟದ್ಯುಮ್ನ ಶ್ರೀವಿಜಯ ||
ಬಿರಿದ ಸೋಮಕ ಪಂಚ ಪಾಂಡವ | ರುರುಬಲಗಳಾಂತೊಡ್ಡಿನಿಲೆ ಕಡು |
ಭರದಿ ತಾಗಿತು ಚಾತುರಂಗವು ಚಾತುರಂಗದಲಿ || ೨೩ ||

ನೆರೆದುದುಭಯ ಪತಾಕಿನಿಯು ಬಲು | ಮೊನೆಯ ಸರಳಿನ ಸಿರಿಗೆ ನಿಜವಾ |
ಹಿನಿಯು ಮಡದಿರುಗುವುದನೀಕ್ಷಿಸಿ ತೋರೆಯುವನಾಗ ||

ಮುನಿದು ತಾಳಧ್ವಜ ರಥವ ಭೋಂ | ಕೆನೆ ಧರಾತಳವದಿರೆ ನೂಂಕುತೆ |
ಧನುವ ಹಿಡಿದನು ಜವನು ದಂಡವ ಹಿಡಿದ ಮಾಳ್ಕೆಯಲಿ || ೧೪ ||

ತಿರುವ ಜೇವಡೆಗೈಯೆ ಕುಲಭೂ | ಧರಗಳದಿರಿವಾರ್ದು ದಕ್ಷಿಣ |
ಕರದಿ ಡೊಣೆಯಿಂದಂಬನುಗಿದಾಜ್ಯಾಯೆಯೊಳು ತೊಡಚಿ ||
ಬರತೆಗೆದನಾ ಕರ್ಣಪೂರಕೆ | ಭರದಿನಂಬಂಬುಗಳುವಂದದಿ |
ಸುರರು ಮಿಗೆ ಬೆರಗಾಗಲೆಚ್ಚನು ಶಾಂತನೃಪತನುಜ || ೧೫ ||

ಹೊಸಮಸೆಯ ಹೊಗರಂಬು ನೆರೆದಾ | ಗಸವೆನಿತ ಶರಧಿಯಲಿ ಮಿಗೆ ಲಂ |
ಬಿಸುವ ಮೀನುಗಳಂತೆ ಹೊಳೆದಾಡಿದವು ಗರಿಗಾಳಿ ||
ಮಿಸುಪ ದಿವಿಜವಿಮಾನಗಳ ತೇ | ಲಿಸಿತು ಪಾಂಡವವಾಹಿನಿಯ ತೇಂ |
ಕಿಸಿತ್ತು ನೆತ್ತರವಾಹಿನಿಯೊಳೇನೆಂಬೆನದ್ಭುತವ || ೧೬ ||

ಬೆಳೆದು ಸಿಡಿವೋಡಲದ ಹೊಲನೆನೆ | ಕೊಳುಗುಳದ ಬಾಂದೆರೆಗೆ ಪಂದಲೆ |
ಗಳು ಸಿಡಿದವೆಡೆಬಿಡದೆ ಆಗಸತರುವಿನಿಂ ಕಳಿದು ||
ಪಳಪಳನೆ ಅಲ್ಲೊಗುವ ಪಲಸಂ | ಕುಳವೆನಲು ಕೆಡೆಕೆಡೆದು ನೆತ್ತರ |
ಹೊಳೆಯ ಚೆಂದಾವರೆಯ ಹೊದರುಗಳಂತೆ ತೋರಿದವು || ೧೭ ||

ಏನನೆಂಬೆನು ರಕುತ ಗಡಲೊಳ | ಗಾನೆ ಮೀನುಗಳಂತೆ ಪಾಂಡವ |
ಸೇನೆಯಾನೆಗಳಾಳುತೇಳುತ ಪೋದವಸುವಳಿದು ||
ಆನೆಗೊಲೆಯಿಂತೆನಲು ಸೈನ್ಯದ | ಹಾನಿಯನದೇನೆಂಬೆ ಬೇಗೆಯ |
ಕಾನನದ ಮೃಗದಂತೆ ದೆಸೆಬಿಟ್ಟೋಡಿದುದು ಪಡೆಯ || ೧೮ ||

ತೊಲ ತೊಲಗು ಪಾಂಡವತನೂಭವ | ತೊಲಗಿಸೈ ನಿನ್ನನುಜರನು ನೀ |
ವಲಗು ಭುಜರಹುದಹುದು ಗರುಡಗ ಪಥ್ಯವೇ ವಿಷವು ||
ಕಲಹಕಿಂದಾನಂಜೆ ಶಿಶುವಧೆ | ಗಳುಕಿದೆನು ನೀನಂತೆಯಾದೊಡೆ |
ನೆಲನನಾಂಪವನಾವನೆಂದಾ ಭೀಷ್ಮ ವಿಸ್ಮಿಸಲು || ೧೯ ||

ಮುಳಿದು ಗದೆಗೊಂಡಾರ್ದು ರಥದಿಂ | ದಿಳಿಯಲನುಗೈವನಿಲ ಜನನಾ |
ಗಳುಯುಧಿಷ್ಠಿರ ರಾಯನೀಕ್ಷಿಸಿ ದಿಟ್ಟಗೊನೆಯಿಂದ ||
ನಿಲಿಸಿದಳು ಕೇಳನುಜ ಹರೆಯವು | ಕಳಿದವೆಂಬವ ಮುಪ್ಪೆ ಅಜ್ಜನು |
ಹಳೆಯನೆಂದಿಳಿ ಕೈಯದಿರು ಬಡವನೆ ನದೀಸುತನು || ೨೦ ||

ಜನನಿ ಗಂಗಾದೇವಿ ಖೇಚರಿ | ತನಗೆ ಕೊಟ್ಟಗ್ಗಳದ ವಿದ್ಯೆಗ |
ಳೆನಿತುಮೊಳವವರೊಳಗೆಯಿನಿತನು ವೆಚ್ಚಿಸಿದುದಿಲ್ಲ ||

ಇನಿತು ಬಲವನು ಕೊಂದೆ ನಿಮ್ಮೆಂ | ಮನು ತೊಲಗು ತೊಲಗೆಂದರಲ್ಲದೆ |
ಕನಲಿ ನಮ್ಮಿಂತೊಂದು ಕಣೆಯನು ನೂಂಕಿದರೆ ಯೆಂದ || ೩೧ ||

ಎಂದು ತಮ್ಮನನಂಜಿಸುವಯಮು | ನಂದನನನೀಕ್ಷಿಸುತ ಗಂಗೆಯ |
ಕಂದನಾಗಳು ತೃಣವು ತೀರಲು ಬೇಗತಣಿದಂತೆ ||
ಮುಂದುವರಿಯದೆ ರಥವ ಸುಳಿಯಿಸಿ | ನಿಂದನತ್ತಾ ಮಾಗಧನ ಗೋ |
ವಿಂದನಾಗಸ ಚರರ ವಿದ್ಯಾ ಯುದ್ಧ ರಂಗದಲಿ || ೩೨ ||

ಗಗನಕಂಬಿನ ಗವಸಣಿಗೆಯನು | ಮಿಗೆ ತೊಡಿಸಿದರು ಪಾರ್ಥನಾಗಳು |
ಮುಗಿಲವಟ್ಟೆಯ ಮುಸುಕಿದ್ರಂಗಳನು ಮುಕ್ಕಡಿಗೆ ||
ಹೊಗರೊಗುವ ಕೂರಂಬಿನಿಂ ತೆರಿ | ದಗಲ ವಿಭವತ್ಸಾಧಿಪನ ಪೆಂ |
ಪೊಗೆದ ನಿಂದ ವಿಮಾನಗಳ ಕೀಲಿಸಿದನೆಡೆವಿಡದೆ || ೩೩ ||

ಮುಳಿದು ವಿಭವತ್ಸಾಧಿಪನು ಸಂ | ಚಳಿಸದೆಚ್ಚಾ ಶಿಖಿ ವಿಶಿಖವನು |
ಜಲ ಸಿಳೀಮುಖದಿಂದ ಮಳ್ಗಿಸೆ ಸರ್ಪಬಾಣವನು ||
ತಳುವದೆಸೆ ಗರುಡಾಸ್ತ್ರದಿಂ ತರಿ | ಹೇಳಿಪಿದನು ಗಿರಿಶರವ ನೆಸೆ ತಾಂ |
ಕುಳಿಸ ಮಾರ್ಗಣದಿಂದ ಪುಡಿಗೈದಾರ್ದನಾ ಪಾರ್ಥ || ೩೪ ||

ಇಂತು ಪಲತೆರನಾದ ವಿದ್ಯಾ | ಸಂತತಿಯಲವರೈದಿ ಕಾದುತ |
ಕಂತುಪಿತ ವಿದ್ಯಾ ಬಲವು ಗೆಲಗೈಯಲಿರಲಾಗ ||
ಇಂತಡದೆನಾದೊಡೆ ನದೀಸುತ | ನಂತಕನವೊಲು ಬಹಳಸೇನೆಯ |
ನಾಂತು ಕೊಲ್ಲದೆ ಮಾಣನೆಂಬಂತಿನನು ಮರೆಯಾದ || ೩೫ ||

ಮೊಳಗಿದತ್ತಪಹಾರ ತೂರ್ಯವು | ಬಲವೆರಡು ನೆರೆವೀಡ ಹೊಕ್ಕುವು |
ಗಳಿಯಗಳನಿಳುಹಿದುದು ತಂತಿಮ್ಮಿಕ್ಕೆ ದಾಣದಲಿ ||
ಪೊಳೆಯ ಮಗನಾಂತುಭಯದಳಪತಿ | ಗಳ ಪಿತಾಮಹನಳವದೇವ |
ಗ್ಗಳವೊಯೆಂದದೆ ಹಾಡುಗುಡಾಗಿರ್ದುದುಭಯ ಬಲ || ೩೬ ||

|| ಅಂತು ಸಂಧಿ ೫೦ ಕ್ಕಂ ಮಂಗಲಮಹಾ ||

**ಸಂಧಿ ೫೧**

ಸುರನದಿಯ ನಂದನನು ಹೃದಯದ | ಲಿರಿಸಿ ಕೊಂಡುಪಶಮವ ರಣದೊಳು |
ಸರಳ ಮಂಚದೊಳೊರಗಿದನು ಭೂಪಾಲ ಕೇಳೆಂದ || ಪಲ್ಲ ||

ಕೇಳು ಮಗಧಾಧೀಶ ಪಾಂಡುನೃ | ಪಾಲನಂದನನಂದು ತಾನಿರು |
ಳೋಲಗದಲರ್ಜುನನ ಸಾರಥಿ ಕೃಷ್ಣನನು ಕರೆದು ||
ಹೇಳಿದನು ಶಾಂತಜನ ಬಲುಹನು | ನಾಳೆಯಿವರನು ಗೆಲುವುಪಾಯವ |
ಹೇಳೆನಲು ತನ್ನೊಳಗೆ ತಿಳಿದಿಂತೆಂದನಾ ಕೃಷ್ಣ || ೧ ||

ದೇವರರಿಯದ ರಾಜತಂತ್ರವ | ನಾವನರಿವನು ನಾಳೆ ಗಾಂಗೇ |
ಯಾವನಿಪನಿಂದಿನ ತೆರದಿನಾಹವವ ಮಾಡಿದೊಡೆ ||
ಕಾವಡಂಬುಜ ಸಂಭವಂಗರಿ | ದೀವಿಧಿಯನೊಡರಿಸುವವೆಂದು ವ |
ಚೋವಿದಗ್ಧನು ಕೃಷ್ಣನುಡಿದನು ಧರ್ಮನಂದನಗೆ || ೨ ||

ಆದೊಡಲ್ಲಿಗೆ ನಾನೆ ಹೋಹೆನು | ಕಾದದಂದದಿ ಗೈವೆನೆನೆ ನೃಪ |
ನಾದರರದಿ ಕಳುಹಿಸಲು ವೈತಾಳಿಕರ ಕರಕೊಂಡು ||
ಹೋದನಲ್ಲಿಗೆ ಕೃಷ್ಣ ಭೀಷ್ಮರ | ಪಾದವನು ಕಂಡೆರಗಿ ಕುಳ್ಳಿ |
ರ್ದೋದಿದನು ಕಾದಿದ ಪೊಡರ್ಪನು ಮೆಚ್ಚುವಂದದಲಿ || ೩ ||

ನೊಸಲ ಕಣ್ಣೀಶ್ವರನನಿರದಂ | ಜಿಸಿದ ಮನಸಿಜ ವೀರನನು ಗೆಲಿ |
ದಸಮ ವಿಕ್ರಮ ನಿಮ್ಮಡಿಗಳಿದಿರಾಂಪರವರಾರೊ ||
ಎಸೆವ ಕುರುಕುಲತಿಲಕ ನಿಮಗಾ | ನುಸುರುವೆನು ಸೂರ್ಯಂಗೆ ಸೊಡರ |
ರ್ಚಿಸುವವೊಲು ಬಲ್ಲಂದದಲಿ ನಾನೊಂದು ಬಿನ್ನಹವ || ೪ ||

ಕುರುಪತಿಯು ಧರ್ಮಜನು ನಿಮ್ಮಡಿ | ಗೆರಡು ಕಂಗಳು ನೀವು ಮಧ್ಯ |
ಸ್ಥರು ವಿಚಾರಿಸೆ ಜೋಳವಾಳಿಯ ಬಂಟರಲ್ಲವಲ ||
ಧರೆಯ ಲೋಭವ ಶಾಂತ ಭೂಮೀ | ಶ್ವರ ಸಮಕ್ಷದಿ ಪರಿಹರಿಸಿ ಜಿನ |
ಶರಣೆನುತ್ತಿಹ ನಿಮಗೆ ರಾಗದ್ವೇಷವೇಕೆಂದ || ೫ ||

ಬಳಿಕ ಕೃಷ್ಣನ ಕಣ್ಣರಿದು ಬೆಂ | ಬಳಿಯ ವೈತಾಳಿಕರು ದಂಡಿಗೆ |
ಯುಲಿಯೊಡನೆ ಸರವೆತ್ತಿ ಕಿವಿಯೊಳಗಂಚೆದುಪ್ಪಳನು ||

ಸುಳಿಯಿಸಿದ ತೆರನಾಗೆ ಮೃದುಪದ | ದೊಳು ಸಮರ್ಥದ ಮೈಯೊಳಾಧ್ವನಿ |
ತೊಳಗುರೆರಲೋದಿದರು ಮೆರೆವವಿರಕ್ತಿ ಶತಕವನು || ೬ ||

ಶುದ್ಧ ಬುದ್ಧೈಕ ಸ್ವಭಾವದಿ | ಸಿದ್ಧ ಸದೃಶವುಶಕ್ತಿ ರೂಪದಿ |
ಬದ್ಧ ಜೀವಪದಾರ್ಥವಿದರೊಳಗಾರನಾಂ ಕೊಲುವೆ ||
ಉದ್ಧತಾಹಿತವೆಂಬವನೆ ಕುಲ | ವೃದ್ಧನಾಗಿಹನೊರ್ಮೆ ಮಗನುಪಿ |
ನದ್ಧರಿಪುವಾಗಿಹನದೊರ್ಮೆ ಸುಡಾಜವಂಜವ || ೭ ||

ಜಡರು ನೀರಸ ವಿಷಯಸುಖವನೆ | ಹಿಡಿದು ನಿರ್ವೃತಿ ಸುಖತರುವ ಬೇ |
ರ್ಗಡಿದು ಒಡಲಿದುನಿಟ್ಟೆಯೆಂದೇ ವಿಮೋಹಪಾಶದಲಿ ||
ತೊಡರ್ದು ವರಪೀಡೆಯನೆಸಗಿ ಬೆ | ಳ್ಪಡೆದು ಪಳಿಗಂ ಪಾತಕಕ್ಕೆದೆ |
ಗಿಡದೆ ನೊಂದರು ಜಿನಜಿನಾ ಸಂಸಾರ ದುಃಖದಲಿ || ೮ ||

ಎಂದು ಪಾಡೆ ವಿರಕ್ತಿ ಶತಕವ | ನಂದು ಶಾಂತರಸ ಪ್ರವಾಹವು |
ಸಿಂಧು ಸುತನಾ ಶ್ರವಣಪುಟದಿಂತುಂಬಿದೊಡೆ ಮತ್ತೆ ||
ಅಂದದೇನಲ್ಲಾಡಿ ತುಂಬುವ | ಚಂದವೆನೆ ತಲೆಯೊಲೆದು ಜಿನಜಿನ |
ಯೆಂದು ಶಾಂತಸ್ವಾಂತನಾದನು ಶಾಂತನಂದನನು || ೯ ||

ತಿಳಿದು ವೈತಾಳಿಕರಿಗುಡುಗೊರೆ | ಗಳನು ಕೊಟ್ಟಾ ಕೃಷ್ಣನನು ಬೆಂ |
ಬಳಿಯಲಿತ್ತಲು ಕಳುಹಿ ಭೀಷ್ಮರ ಮನವು ತಿಳಿದಂತೆ ||
ತೊಲಗಿದದು ಕತ್ತಲೆ ದಿವಾಕರ | ನೊಲಿದು ಮೂಡಣಗಿರಿಯ ಮಸ್ತಕ |
ದಲಿನೆಲಸಲೀರ್ವಲವು ಬಂದೊಡ್ಡಿತು ಯಥಾಕ್ರಮದಿ || ೧೦ ||

ಚಕ್ರಪಾಣಿಯ ಶಾಂರ್ಙ ಪಾಣಿಯ | ವಿಕ್ರಮದ ನಾಯಕರು ಚಂಡಪ |
ರಾಕ್ರಮದಿ ಮಿಗಿ ಕಾದುತಿರ್ದರದೊಂದು ಮೊನೆಯಲಿ ||
ಅಕ್ರಮದಿ ಕೌರವನ ನಾಯಕ | ರಾಕ್ರಮಿಸಿ ಪಾಂಡವರ ಸೇನಾ |
ಚಕ್ರದೊಳು ತತ್ತೊಂದು ಮೊನೆಯಲಿ ಕಾದುತಿರಲೊಡನೆ || ೧೧ ||

ಸುರನದಿಯ ಸುಕುಮಾರನಿತ್ತಲು | ಪರಮಗುರು ಪಂಚಕನೊಲವಿಂ |
ಸುರಚಿರಾಷ್ಟವಿಧಾರ್ಚನೆಗಳಿಂ ಪೂಜೆಯಂ ಮಾಡಿ ||
ಪರಿದು ಭಕ್ತಿಯಲೆರಗಿ ಆಯುವಿ | ನಿರವ ಕಾಲಜ್ಞಾನದಿಂದರಿ |
ದರುಹನನು ವಿಮಲಾಂತರಂಗಲಿರಿಸಿದನು ದೃಢದಿ || ೧೨ ||

ಮಕುಟಕುಂಡಲ ಬಾಹುಪೂರಾ | ದಿಕದಿ ಶೃಂಗಾರವನು ಬಾಣ |
ಪ್ರಕರವಿಹ ಬತ್ತಳಿಕೆ ಜೋಡನು ತೊಟ್ಟು ಬಿಲುವಿಡಿದು ||

ಪ್ರಕಟವೀರವನತ್ತಲಾ ಬಾ | ಹ್ಯಕೆ ಬೆಳಸಿಗುಣವಳಗಿರಲು ಕೇ |
ತಕಿಯ ಪೂವೆನೆ ಜ್ಯೋತಿಯಹಘುಟವೆನೆ ವಿರಾಜಿಸಿದ || ೧೩ ||

ಕುಳಿಸಮಯ ರಥವೇರಿದನು ನಿಜ | ಬಲವು ಬೆನ್ನಲಿ ಬರಲು ದೆಸೆಗಳು |
ತಳಮಳಲುಗೊಳೆ ಭೇರಿ ನಿಸ್ಸಾಳಗಳು ಮೊಳಗಿದವು ||
ಬಲವೆರಡು ಕಾದುತಿರೆ ನಿಜಕುರು | ಬಲವ ಪೊರಗಿಕ್ಕಿದರು ತನ್ನ |
ಗ್ಗಳದ ರಥವನು ಮುಂದೆ ನೂಂಕಿದನಾಜಿರಂಗದಲಿ || ೧೪ ||

ತಿರುವಿಗಂಬನು ಹೂಡಿ ಕರ್ಣಂ | ಬರೆಗ ತೆಗೆದಾ ರಥದ ಪುತ್ಥಳಿ |
ಯಿರವೆನಿಸಿ ಬಾಹ್ಯದಲಿ ಭೈರವನಾಗಿ ತೋರಿದನು ||
ಗುರುಗಳೈವರ ಪದವನೆದೆಯಲಿ | ಧರಿಸಿ ನಿಲೆ ಪಾಂಡವ ಪತಾಕಿನಿ |
ವರನ ಮೊನೆಯೊಳಗೊಂದಿ ಸುರಿದುದು ಸರಳ ಸೈವಳೆಯ || ೧೫ ||

ಅನಿತು ಸರಳುಗಳೊಂದು ಪುಸಿಯೆದೆ | ತನುವಿನಲಿ ಪುಳಕಗಳು ಮಿಗೆ ಝೊ |
ಮ್ಮೆನೆ ನೆಗೆದವೊಲು ನೆಳ್ಕುನಳ್ಕೆನೆ ಗರಿವರನ್ನೊಡಲು ||
ದ್ಯುನದಿ ನಂದನನಂಬುಗೂಡಾ | ದನು ಬಳಿಕ್ಕಾ ಸರಳ ಮಂಚದ |
ಲನುವಿನಿಂದೊರಗಿದನು ಪಾಂಡವ ಬಲವು ಬೊಬ್ಬಿರಿಯೆ || ೧೬ ||

ಮೊಳಗಿದುದು ಜಯಪಟಹ ಪಾಂಡವ | ಬಲದೊಳಗೆ ಕುರುರಾಯನಾಗಳು |
ಕುಲಗಿರಿಯೆ ಮೇಲ್ಗಡೆದವೊಲು ಕಳವಳಿಸಿದನು ಕೂಡೆ ||
ನಳಿನಮಿತ್ರನನೊಂದು ತಾಂ ನೀ | ರಿಳಿದನೋಯೆನೆ ಪಡುವ ಕಡಲೊಳು |
ಮುಳುಗಿದನು ಅಪಹಾರ ತೂರ್ಯಾರವವು ಬಳಸಿದನು || ೧೭ ||

ಎರಡು ಪಡೆಯತಿ ಭಕ್ತಿಯಲಿ ಭೀ | ಷ್ಮರನು ಬಲಗೊಂಡೆರಗಿ ಬೀಡಿಗೆ |
ಮರಳಿದರು ಪರಮಾತ್ಮ ಭಾವನೆಯಿಂದ ಬಿಸುಟೊಡಲ ||
ಸುರ ನಿವಾಸವನೈದಿದನು ತಾಂ | ಸುರನದಿಯ ಸುತನೆಂದು ಜಿನವರ |
ಚರಣ ಪರಿಣತ ಹೃದಯರಿಗೆ ಪರಲೋಕಸುಖಮಲ್ತೆ || ೧೮ ||

ಎರಡು ಪಾಳೆಯವೊಸೆದು ಗಂಗೆಯ | ವರಸುತನ ವೀರವನೆ ನಾನಾ |
ಪರಿವಿಡಿಯಗೈವುತ್ತಲಿರ್ದುದು ರಾಯನೋಲಗದ ||
ಇರುಳ ಕತ್ತಲೆಯಂಧನೃಪಸುತ | ವರನ ಕುರುಕುಲ ದೀಪಕನ ಸೌಂ |
ದರದ ಮೊಗದಲಿ ನಿಂದುದನು ಕಲಿಕರ್ಣನೀಕ್ಷಿಸಿದ || ೧೯ ||

ನೆರೆದ ಸಾಮಂತರ ಧರಾದೀ | ಶ್ವರನ ಸಭೆಯಲ್ಲೆಸೆವ ಮಿಸುನಿಯ |
ಗಿರಿಯೊಯೆನೆ ನಿಡಿವಾಳ ಝಳಪಿಸುತಿದಿರೆ ನಡೆತಂದು ||

ಅರಸ ಬಿನ್ನಹ ನಾಳಿನಾ ಸಂ | ಗರವು ನನ್ನದು ಚಿಂತೆ ನಿಮ್ಮಯ |
ಸಿರಿಮೊಗದೊಳಿರಲೇಕೆ ಜಯವನು ತಹೆನು ನಿಮಗೆಂದ || ೨೦ ||

ಆರನೆಚ್ಚರು ಭೀಷ್ಮರಾ ಪರಿ | ವಾರದಲಿ ಕೆಲಬರನು ಕೊಂದರು |
ವೀರರೆಂದಾ ಪಾಂಡವರುಗಳ ಹೊಗಳಿದಣಿಯರಲೆ ||
ಈರಣದೊಳೇನವರೊಳಾಂತರೆ | ತೂರುಗೋಲಂದೆಚ್ಚರೇ ಮೈ |
ಯಾರೆ ಪರಬಲದಿರಿತ ಕೊಡಲೊಪ್ಪಿಸಿದರವರೆಂದ || ೨೧ ||

ನಾಳೆ ಸಂಗ್ರಾಮದಲಿ ಪಾಂಡವ | ರಾಳುದೋರಿದರಾದೊಡೆನ್ನಯ |
ತೋಳ ಬಲುಹನು ತೋರುವೆನು ತೋರುವೆನು ಪರಬಲವ ||
ಕೀಳುವೆನು ಭೀಮಾರ್ಜುನರ ನಿಡು | ದೋಳನಮರರೆ ಬಾಳುಬಾಳೆನೆ |
ಜೋಳವಾಳಿಯ ಸಲುಸುವೆನು ಭೂಪಾಲ ಕೇಳೆಂದ || ೨೨ ||

ಎಂದ ಕಾನೀನನ ನುಡಿಗೆ ಮೊಗ | ದೊಂದು ಕಂದೋಸರಿಸಿದುದು ತರಿ |
ಸಂದನೀತನು ಭೀಮಪಾರ್ಥರಿಗಳಿವ ತಂದನಲೆ ||
ಎಂದು ಬಗೆದಾ ಪಿಂಗಲೋಚನ | ನಂದು ಕರ್ಪುರದಂಬುಲವನೊಲ |
ವಿಂದೆ ಕೊಡೆ ಪಡೆದಿರುಳ ಕಳೆದನು ರಾಧೆಯಾತ್ಮಜನು || ೨೩ ||

|| ಅಂತು ಒಟ್ಟು ಸಂಧಿ ೫೧ಕ್ಕಂ ಮಂಗಲಮಹಾ ||

## ಯುದ್ಧ ಪರ್ವ (ಸಂಧಿ ೫೨)

**ಸಂಧಿ ೫೨**

ತರಣಿ ತನುಜನು ಪಾಂಡವರನಾ | ಲ್ವರನ ಗೆಲಿದನು ಅತ್ತ ಬಲಭ |
ದ್ರನು ಕೆಡಹಿದನು ನಾಲ್ಕು ಸಾವಿರ ಮಕುಟಬದ್ಧರನು || ಪದ ||

ವಸುಮತಿಯೊಳಾ ಸೂರ್ಯತನುನ | ವಿಷ ಮರಣವನು ಸೂರ್ಯನೊಲಿದೀ |
ಕ್ಷಿಸಲು ಬಂದವೊಲುದಯಗಿರಿ ಪೀಠವನಲಂಕರಿಸಿ ||
ಬೆಸಸನಕೆ ಬಂದೊಡ್ಡಿದವು ಘೂ | ರ್ಣಿಸಿತು ಭಯ ಬಲವೆಂದಿನಂದದಿ |
ನಸಮ ಭುಜಬಲ ಕರ್ಣ ತಲೆದನು ವೀರ ಪಸದನವ || ೧ ||

ಪುದಿದ ವಜ್ರದ ಕವಚ ವೊಸೆದಿ | ಕ್ಕಿದ ಸುರತ್ನದ ಮಕುಟ ಕುಂಡಲ |
ಕದಪ ಚುಂಬಿಸೆ ವೀರರಸ ಕಾಸಾರವೆನೆ ಮೊಗವು |

ಹೊದೆಗಳಡಸಿದ ಬತ್ತಳಿಕೆ ಬೆಂ | ಗೊದವೆ ಪರಭೀಕರ ಶರಾಸನ |
ವದು ವಿರಾಜಿಸೆ ವಾಮಕರದಲಿ ಬಂದನಾ ಕರ್ಣ || ೨ ||

ಮುಗಿಲುಮುಟ್ಟುವ ವಾಯಸದ ಪಳ | ಯಿಗೆ ಸುವರ್ಣದ ಕಳಸವಿಕ್ಕಿದ |
ನೆಗೆದ ಸತ್ತಿಗೆ ನೆಳಲೊಳಾ ಮಣಿರಥವನಾರ್ದೇರಿ ||
ದಿಗಿಭಗಳು ಘೀಳಿಟ್ಟುವೆನೆ ಕೈ | ಮಿಗೆ ಬಡಿವ ನಿಸ್ಸಾಳಗಳ ಬೊ |
ಬ್ಬೆಗಲು ಪಬ್ಬಲು ಬಂದನೊಂದಕ್ಷೋಹಿಣಿಯು ಸಹಿತ || ೩ ||

ಬಂದು ಪಾಂಡವ ಬಲದಿದಿರೆ ತರಿ | ಸಂದು ಹೂಣಿಸಿಯೇರಿದನು ರವಿ |
ನಂದನನು ನಿರ್ದಯಯ ನಿರ್ವಲನಡಸಿ ತಾಗಿದುದು ||
ಒಂದು ಕಡೆಯಲಿ ಸರಳ ಸರಿ ಬೇ | ರೊಂದು ಕಡೆಯಲಿ ಬಾಳದಾಳಿಗ |
ಳೊಂದು ಕಡೆಯಲಿ ಸಬಳ ಕಬಳಿತವದುದಾಹವವು || ೪ ||

ಕಾದಿ ಮಣ್ಮಳಿಯಾಗೆ ನಿಜಬಲ | ವಾ ದಿನೇಶನ ಸೂನು ಸಾರಥಿ |
ಚೋದಿಸಲು ವರರಥವನೊಳಪೊಗುವಧಟನೀಕ್ಷಿಸುತ ||
ಮೇದಿನಿಯನದಿರಿಸುತ ಗಗನವ | ಭೇದಿಸುತ ಸಿಂಹಧ್ವಜದ ಸುವೃ |
ಕೋದರನ ರಥವತಿ ಭರದಿನಿದಿರಾಯ್ತು ಕರ್ಣಂಗೆ || ೫ ||

ದುರುಳ ಸೂತನ ಮಗನೆ ನಿನಗೀ | ಹರಿದು ಬಹುದಕೆ ಯಮುನೆಯೋ ಸಂ |
ಗರಧರಾತಳವಂಬಿಗರೊ ಮೇಣ್ ನಿನ್ನ ತೆತ್ತಿಗರೊ ||
ಕುರುಪತಿಯ ದುರ್ನಯವ ರಾಜ್ಯಕೆ | ಹಿರಿಯ ನಾಯಕ ಸೇನೆ ಎಂದ |
ಬ್ಬರಿಸಿ ಕೆಂಗರಿಗೋಲ ಸುರಿದನು ಭರದಿ ಕಲಿಭೀಮ || ೬ ||

ಹರಿದು ಮುಸುರುವ ಕಣೆಗಳನು ಕ | ತ್ತರಿಸಿದನು ಕೂರಂಬಿನಿಂ ನೀಂ |
ಮರುತ ಸುತನಹುದಹುದದಲ್ಲದಡಿಂತು ತೇಲುವವೆ ||
ಹರಿದು ಬಹ ನಿನ್ನಂಬುಗಳ ನೀ | ನೊರೆದವೊಲು ಕಣನಿದಿಯಮುನೆನೀಂ |
ಪಿರಿಯ ಮೀನೆಂನಂಬುವಲೆಯಲಿ ಸಿಲುಕಿಸುವೆನೆಂದ || ೭ ||

ಎಂಬನುಡಿ ಹಿಂಚೆದುದು ರವಿಸುತ | ನಂಬು ಮುಂಚಿದುದೇನನೆಂಬೆ ಹಿ |
ಡಿಂಬಕಾರಿಯ ಸಾರಥಿಯ ಕೊರಳಂತೆ ಬಿಲ್ಲುಡಿಯೆ ||
ಮುಂಬರಿವ ಕುದುರೆಗಳು ಪಳಯಿಗೆ | ಗಂಬದಂದದಿ ಕಡೆಯೆ ನೆರೆನಿಟಿ |
ಲಾಂಬಕನವೊಲು ಮಸಗಿ ಗದೆಕೊಂಡನು ವೃಕೋದರನು || ೮ ||

ಗದೆಯ ತಿರಹುತ ರಥದಿ ದುಮ್ಮಿ | ಕ್ಕಿದಿರೆ ಪರಿತರೆ ಕರ್ಣ ಕೈಚಳ |
ಕದಲಿ ದಿವ್ಯಾಸ್ತ್ರವನು ತೊಟ್ಟೆಸಲಂಬು ಕೊಳಲೊಡನೆ ||

ಅದಿರೆ ಭೂತಳ ಕುಲಗಿರಿಯ ಕೆಡೆ | ದುದೊಯೆನಲು ಬಿರುಬಿದ್ದನಾಗಳು |
ಪುದಿದ ಮೂರ್ಛೆಯಲೆರಡನೆಯ ಪಾಂಡವನು ಧುರಧರೆಗೆ || ೯ ||

ಬೀಳೆನುತ ಬೊಬ್ಬಿರಿದ ಕರ್ಣನ | ಬಾಳೆನುತ ಕುರುಬಲವು ಹೊಗಳಿತು |
ಸೂಳಯಿಸಿದುದು ಜಯಪಟಹ ಕೌರವನ ಪಡೆಯೊಳಗೆ ||
ತೋಳು ನಾಲ್ಕಾಯ್ತಾಗ ಕುರುಭೂ | ಪಾಲಕಗೆ ಪಾಂಡವರ ಬಲದೊಳು |
ಗೋಳುಗುಟ್ಟಿದರರೆಬರೆಲೆ ಭೂಪಾಲ ಕೇಳೆಂದ || ೧೦ ||

ಜನವು ಮೂರ್ಛಿಸಿ ಬೀಳೆ ಕಾಣುತ | ತನುಜನುದ್ಘ ಘಟೋದ್ಗಜನು ಬಿ |
ದ್ದನಿಲಜನ ಪಿಂತಿಕ್ಕಿ ರುದ್ರನಕಾಯ್ಪನೊಳಕೊಂಡು ||
ಕನಕಮಣಿಯ ರಥದಲಾರ್ದಂ | ಬಿನ ಮಹಾಮಳೆಗರೆಯೆ ಹರಿದುವು |
ಮೊನೆಯ ಹೊಳಹಿನಗರಿಯ ಮೊರಹಿನ ಬಿಂಕಝುಂಕೆಯಲಿ || ೧೧ ||

ಅಡಸಿ ತಾಗಿದವವುಕಿದವು ಜೋ | ದೊಡೆದವೆಡೆಯುಚ್ಚಲಿಸಿದವು ಬೆಂ |
ಗಡೆಗೆ ಮೊನಸಿದವುಚ್ಚಿ ಹಾಯ್ದವು ರಿಪುಹರಣವೆರಸಿ ||
ಪೊಡವಿ ಪತಿಯಾ ಸೇನೆಯಲಿ ಸಂ | ಗಡಿಸಿದೊಂದಕ್ಷೋಹಿಣಿಯ ಮಾ |
ರ್ಪಡೆಯನೆಲ್ಲವ ತಿಂದವಂಬುಗಳನಿಲಜಾತ್ಮಕನ || ೧೨ ||

ಅಂದು ಪಾರ್ಥನ ಸೂನುರಿಪುಗಳ | ಕೊಂದೊವೊಲು ಭೀಮಾತ್ಮಜನು ನೆರೆ |
ಕೊಂದನೊಂದಕ್ಷೋಹಿಣಿಯನೆಂದಾರ್ದು ಕಲಿಕರ್ಣ ||
ಸಂದ ಶಕ್ತಿಯನಿಡಲುಮಿಗೆ ಭೋ | ರೆಂದು ಪರಿತಹ ಭರಕೆ ಜಿನಜಿನ |
ಯೆಂದನಾ ನಾರದನು ಕಂಗೆಟ್ಟುದು ಮಹಾಕಟಕ || ೧೩ ||

ಸುರಪನಿಟ್ಟಡೆ ವಜ್ರವದು ಭೂ | ಧರವನೊಡೆದೊಳಪೊಕ್ಕವೊಲು ನಿ |
ಷ್ಠುರದ ಶಕ್ತಿಘಟೋದ್ಗಜನ ಪೇರುರವನೊಡೆದೊಳಗೆ ||
ನೆರೆ ಸಿಲುಕಿದುದು ಬಿಲ್ಲು ಬಿಸುಡದೆ | ಧುರಧರೆಗೆ ಧೊಪ್ಪನೆ ಕೆಡೆಯೆ ಬೊ |
ಬ್ಬಿರಿದುದಾ ಕುರುಬಲವು ಜಯದುಂದುಭಿಯ ದನಿಯೊಳಗೆ || ೧೪ ||

ವರಯುಧಿಷ್ಠಿರ ರಾಯನಿರದನಿ | ಬರನು ಪೆರಗಿಕ್ಕಿದಿರೆ ಮಣಿರಥ |
ಪರಿದು ಬರೆದೊಡೆಕಾಯ್ಪಿನಿಂದ ದಿವಾಕರಾತ್ಮಜನ ||
ಬೆರಳ ಕೊನೆಯಲಿ ತ್ರಿರ್ನ್ನಿ | ತಿರುಹಿಯಿಟ್ಟನು ಕಾದುಕೊಳ್ಳೆಂ |
ದುರು ಭಯಂಕರವಾದ ಪಾರುಂಬಳೆಯನಾಜಿಯಲಿ || ೧೫ ||

ಬೋಳೆಯಂಬಿನಲೆಚ್ಚು ಚಕ್ರವ | ಹೋಳುಗಳೆದನು ಕರ್ಣನಾ ಭೂ |
ಪಾಲನಾಗಳು ಕಕ್ಕಡೆಯನನುಗ್ಗೈದು ಪೂಣ್ದಿಡಲು ||

ಕೋಲಲದನುಡಿದೊತ್ತಿ ಸೂರ್ಯ ನೃ | ಪಾಲನಾತ್ಮಜ ತನ್ನೊಳಗೆ ತಾಂ |
ಪೇಳಿದನು ಕೊಲಬಾರದಹಿತನ ಕೊಲುವುದೆಂತೆಂದ || ೧೬ ||

ಅರರೆ ಮಝು ಮಾರಂಕದುರ್ಧರ | ಪುರ ಮಹೀಶ್ವರನರ್ಕಜನು ಮ |
ತ್ತರಗಳಿಗೆಯೊಳ್ ನೋಟಕರ ಕಂಗಟ್ಟಿದಂದದಲಿ |
ಶರಶರಾಸನ ಕವಚರಥಗಳ | ಹರಿಯಲೆಸೆಕಾಲನ ಕುಮಾರನು |
ಬರಿಯ ಕೈಯಲಿ ನಿಂದನಾ ಕೆಲಬಲನನೀಕ್ಷಿಸುತ || ೧೭ ||

ಧರ್ಮಶಾಸ್ತ್ರವನೋದಿ ಬದುಕಿದ | ಧರ್ಮರಾಯನು ನೀನಲೈ ಜಿನ |
ಧರ್ಮದೊದವನು ಬಲ್ಲವರಿಗೀ ಯುದ್ಧಪದ್ಧತಿಯು ||
ಧರ್ಮವೇ ಕೌಂತೇಯ ಹೋಗೈ | ಕಾರ್ಮುಕಕೆ ನೃಪಹಂಸನಿದಿರಹ |
ಪೆರ್ಮೆಯುಂಟೇ ಪಾರ್ಥನನು ಕರೆಯೆಂದನಾ ಕರ್ಣ || ೧೮ ||

ಯಮಸುತನ ಪೆರಗಿಕ್ಕಿಯೀರ್ವರು | ಯಮರೆನಲು ಮದ್ರಿಯಕುಮಾರಕ |
ರಮಮನಾರಾಚಗಳನಾರ್ದೆಡೆವಿಡದೆ ಮಿಗೆಸುರಿಯೆ ||
ಅಮರಗಿರಿಯೆನೆ ನಿಂದು ಶರವರು | ಷಮನು ಖಂಡಿಸಿ ಬಿಸುಟನರರೇ |
ದ್ಯುಮಣಿ ತನುಜನ ಸಂಗರದಳೊಡ್ಡುವ ಸುಭಟನಾರೊ || ೧೯ ||

ಕೊಂತಗಳ ಪಿಡಿದಿಟ್ಟರಹಿತ ಕೃ | ತಾಂತನೆನಿಪಂಗಾಧಿ ನಾಯಕ |
ನಂತಕನ ದಾಡೆಗಳೆರಡು ಬಹುತೆರದಿ ಬರೆಕಂಡು ||
ಕಂತು ಕೊಂತವಯೋಗಿ ಹರಿಗಡಿ | ದಂತೆ ತುಂಡಿಸಿ ಕೆಡಹಿದನು ಬಹ |
ಕೊಂತವೆರಡನು ದಿವ್ಯಬಾಣದಿ ರಾಧೆಯಾತ್ಮಜನು || ೨೦ ||

ವಿರಥರನು ಮಾಡಿದನು ಬಳಿಕೊಂ | ದರೆಘಳಿಗೆಯಲಿಯಮಳುಗಳನಾ |
ಹರನ ಹಣೆಗಣ್ಣುರಿಯ ನಂದಿಸಿದವಗೆ ಖದ್ಯೋತ ||
ಉರಿಯವೊಲು ತೋರುವುದೆ ಕೌಂತೇ | ಯರಿಗುಗಳು ನೀರೆನಲು ಬಡವೆಯ |
ತರುಣರಿಗೆ ನಿವಗೇಕೆ ಸಂಗರವೆಂದನಾ ಕರ್ಣ || ೨೧ ||

ಅತ್ತಲರ್ಜುನನಾಂತು ಚಕ್ರಿಯ | ಮತ್ತ ವಿದ್ಯಾಧರನ ವಿದ್ಯಾ |
ಯತ್ತ ಯುದ್ಧದಿ ಕಾದಿ ಮಿಗೆ ಸಂಹರಿಸುತಿರಲೊಡನೆ ||
ಇತ್ತಲಾ ನಗಧರನ ಕಟಕದ | ಲೊತ್ತಿ ಚಕ್ರಿ ತನೂಭವನು ಕಾ |
ದುತ್ತಲಿರ್ದನು ಕಾಲವಯನವನೀಶ ಕೇಳೆಂದ || ೨೨ ||

ಬಂದುದೊಂದಕ್ಷೋಹಿಣಿಯ ಬಲ | ವಂದು ಭೋರೆನೆ ಕಾಲವಯನವನೊಡ |
ವಂದರೊಪ್ಪುವ ಮಕುಟಬದ್ಧರು ನಾಲ್ಕು ಸಾಸಿರವು ||

ದುಂದುಭಿಯ ಮೊಳಗಿಸುತತಾಗಲು | ಬಂದನಾ ಬಲಭದ್ರ ಬಿಲುಗೊಂ |
ಡಂದು ತಾಳಧ್ವಜವರೂಥದಿ ತುಂಬಿತೆಗೆದೆಸುತ || ೧೩ ||

ಎನಲು ಮೂಡಿಗೆ ಯಾದವಹಿತರ | ಮಿಸುಪ ಮೈಗಳು ಬಾನೊಳಗೆ ಸಂ |
ಧಿಸಿದವಾಗಳದೊಂದು ಜ್ಯೋತಿರ್ಲೋಕವೆಂಬಂತೆ ||
ಎಸೆವ ರನ್ನದ ಮಕುಟಗಳು ಕೀ | ಲಿಸಿದ ಪಂದಲೆವಿಂಡುನೆತ್ತರ |
ರಸಧಿಯಲಿ ತೇಂಕಾಡಿದವು ಗಜಹಯ ಕದಂಬಗಳು || ೧೪ ||

ಹರಹಿಬಿದ್ದುವು ನಾಲ್ಕು ಸಾಸಿರ | ವರಮಕುಟ ಬದ್ಧರ ಶಿರಂಗಳು |
ಧುರವ ನೋಡಲು ನಿಮಿರಿದರೊ ಫಣಿಪತಿಗಳೆನೆ ತೊಲಗೆ ||
ವರ ಜರಾಸಂಧಂಗೆ ಮೊದಲಿದು | ಪರಿಭವಕ್ಕಾ ಸಮಯದಲಿ ಮೈ |
ಮುರಿದು ಭೀಮಘಟೋದ್ಗಜರು ತಾವೆದ್ದು ನಿಲಲೊಡನೆ || ೧೫ ||

ಇನತನೂಜರ ರೋಹಿಣೀ ಪು | ತ್ರನ ಮಹಾರಣವಾರ್ತೆಯನು ಸಂ |
ಜನಿತ ರಾಗದ ಪಡುವ ಮಡದಿಗೆ ಪೇಳಲಿಕೆ ಭರದಿ ||
ದಿನಕರನು ಪೋದಂತೆಯಪರಾಂ | ಗನೆಯನಪ್ಪಿದನತ್ತಲಿತ್ತಲು |
ಅನುವರವನುಳಿದೀರ್ವಲವು ಪೊಕ್ಕುದು ಶಿಬಿರಗಳ || ೧೬ ||

ಇರುಳಿನೋಲಗದೊಳಗೆ ಪಾಂಡವ | ಹಿರಿಯ ಪುತ್ರನು ಕರ್ಣನನು ಗೆಲ |
ಲರಿದು ದೋರ್ದರ್ಪದಲಿ ಪೆಚ್ಚಿದನೆಂದು ಚಿಂತೆಯಲಿ ||
ಪಿರಿದು ಪೊತ್ತನು ಕಲಿಯಲೋಲಗ | ಪರೆದು ಕಣ್ಣೈವನಿತರೊಳು ಓ |
ಸರಿಸಿತಿರುಳಿನ ಜವ್ವನವು ಭೂಪಾಲ ಕೇಳೆಂದ || ೧೭ ||

|| ಅಂತು ಒಟ್ಟು ಸಂಧಿ ೫೨೧ಕ್ಕಂ ಮಂಗಲಮಹಾ ||

# ಯುದ್ಧ ಪರ್ವ (ಸಂಧಿ ೫೩)

**ಸಂಧಿ ೫೩**

ದ್ರೋಣದ್ರುಪದನು ಕೊಂದು ವಿಗತ | ಪ್ರಾಣನಾದನು ರಾಯನನುಜರ |
ನಾಣೆಯಿಟ್ಟವೊಲಟ್ಟಿದನುಯಮಪುರಕೆ ಕಲಿಭೀಮ || ಪದ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ಪಾಂಡವಸುತರು ಕರ್ಣನ |
ತೋಳ ಬಲುಹಿಂಗಾನಲಾಘರೆ ಘಾಸಿಯದರೆಲೆ ||

ನಾಳೆ ರವಿಸುತಗಾಂತಡಳಿವರು | ಭೂಲಲನೆ ತನಗೆಂದೆ ಕುರುಭೂ |
ಪಾಲನತಿರಾಗಿಸಿದವೊಲು ರಾಗಿಸಿತು ಪೂರ್ವಾಸೆ || ೧ ||

ಮೂಡವೆಣ್ಣೊಲಿದಿಟ್ಟ ಚೆಲುವಿಗೆ | ರೂಢಿಸಿದ ಕುಂಕುಮದ ಬೊಟ್ಟೋ |
ಮೂಡಣಾನೆಯ ಫಣೆಯ ಸಿಂಧೂರದ ಸಂಘಾಟಿಕೆಯೊ ||
ಮೂಡವೆಟ್ಟದ ತುದಿಯರನ್ನದ | ಕೋಡುಗಲ್ಲೋಯೆನಿಸಿ ನೇಸರು |
ಮೂಡಲೀರ್ವರ ವೊಡ್ಡಿ ನಿಂದುದು ಮುನ್ನಿನಂದದಲಿ || ೨ ||

ಸೌಂದರಾಂಗ ನೃಪಾಲಕನನುರು | ನಂದನ ಕ್ಷಿತಿಪಾಲಕನನೋ |
ರಂದದಲಿ ತಂತಮ್ಮ ಸಾಧನವೆರಸಿ ಮುರವೈರಿ ||
ಸಂದ ಚಕ್ರಿಯ ಮೊನೆಗೆನೂಂಕಲು | ದುಂದುಭಿಯ ಮೊಳಗಿಸುತ ವೀರದ |
ಗುಂದಲೆಯ ಭಟಕೋಟಿಸಹ ಬಂದೊಡ್ಡಿನಿಲಲೊಡನೆ || ೩ ||

ಆರು ಸಾವಿರ ಮಕುಟಬದ್ಧರು | ಏರಿದರು ರಥಗಳನು ಬಹುಪರಿ |
ವಾರ ಸಹವಾ ಚಕ್ರಿಯನುಜನು ಶಂಕುಕರ್ಣನೃಪ ||
ಚೀರುತಿರೆ ಕಹಳೆಗಳು ರಜವನು | ತೂರುತಿರೆ ಪದಹತಿಯಉ ಪಡಪೊರ |
ಮಾರದೊಡ್ಡಡೆನುತ್ತ ತಾಗಿದರವರನತಿ ಭರದಿ || ೪ ||

ಕೇಣವಿಲ್ಲದೆ ಕಾದುತವರಿರೆ | ಶೋಣಹಯಗಳ ರಥದಲಮರ |
ತ್ರಾಣ ಧನುವಿದ್ಯಾ ಪ್ರವೀಣನನೇಕ ವಿದ್ಯಮಯ ||
ಬಾಣತೂಣಿಯರನು ಸಹಾಯ | ಪ್ರಾಣಕುಂಭಧ್ವಜವು ಮಿಳಿರಲು |
ದ್ರೋಣ ಬಂದೊಡ್ಡಿದನು ಬಹುಪರಿವಾರ ಪರಿವೃತನು || ೫ ||

ಕೊಡನ ಮಗನಿದಿರಾಗಿ ದ್ರುಪದನು | ಪಡೆವೆರಸಿ ಪೂಣ್ದೊಡ್ಡಿ ನಿಂದಾ |
ಪಡೆಗದೀರ್ವರುಮೊರ್ಮೆ ಕೈವೀಸಿದರದೇನೆಂಬೆ ||
ಫಡಫಡೊಡ್ಡನು ತನ್ನ ಸರಳಿನ | ಬಡಹವನು ಕರೆದರು ಮಹಾಹವ |
ಪೊಡವಿಲಿಯ ಬಿಸಿರಕುತ ಕಾಳ್ಪುರ ಹರಿದುದೆಡೆವಿಡದೆ || ೬ ||

ಎಚ್ಚರಿರಿದರು ಕುತ್ತಿದರು ನೆರೆ | ಕೊಚ್ಚಿದರು ತಲೆಪರಿದು ಕುರುಳುಗ |
ಳುಚ್ಚಿ ಮಣ್ಮಳಿಯಾದ ಬಲವನು ಕಂಡು ಕಾಯ್ಪಿನಲಿ ||
ಪೆಚ್ಚಿದತಿ ಕೋಪದಲಿ ಗಿರಿಗರಿ | ಯಚ್ಚಡಿಸಿದವೊಲೆಸಲು ಭರದಲಿ |
ದಿರ್ಚಿದವು ಕುಂಭಜನ ಪಾಂಚಾಲನ ವರೂಥಗಳು || ೭ ||

ಮರುಳ ಹಾರುವ ನಿನಗಕಟ ಸಂ | ಗರದ ಗಸಣಿಯಿದೇಕೆ ಗಲ್ಲವ |
ಮುರಿದು ಮಕ್ಕಳನೋದಿಸುವ ಮಠವೋ ಕ್ಷುದಾರ್ಥದಲಿ ||

ತಿರಿದು ಭಿಕ್ಷೆಯ ಪದೆವೊಡಿದು ಭೂ | ಸುರರ ಕೇರಿಯೊ ಯಜ್ಞಶಾಲೆಯೊ |
ಕರೆದು ದಾನಂಗೊಡುವೆಡೆಯೊ ಮಗುಳೆಂದನಾ ದ್ರುಪದ || ೮ ||

ತಿರಿದು ಜಾಣರೆ ನಾವು ಗಲ್ಲವ | ಮುರಿದು ಜಾಣರೆ ನಾವು ದಾನಕೆ |
ಕರವನೊಡ್ಡುವರಾವೆ ಕೇಳ್ಕೈ ದ್ರುಪದ ಭೂವರನೆ ||
ಅರಸು ಮಕ್ಕಳು ನೀವು ಬಡ ಭೂ | ಸುರನು ನಾನದಕೇನು ನಿನ್ನಯ |
ಸರಳ ಬಲುಹನು ತೋರು ಜರೆ ಬಳಿಕೆಂದನಾ ದ್ರೋಣ || ೯ ||

ಆದೊಡದೆಯದೆ ನಿನ್ನ ತಲೆಯನು | ಕಾದುಕೊಳ್ಳೆಂದುಗ್ರ ಶರವನು |
ಸೇದಿಬಿಟ್ಟನು ಭರದಲಾ ಪಾಂಚಾಲ ಭೂಪಾಲ ||
ಆ ದಿನೇಶನ ಕಿರಣಗಲೆ ಸರ | ಳಾದವೋಯೆನೆ ಕಿಡಿಯನುಗುಳುತ |
ಹೋದವಾವರಿಸಿದವು ಬಿಲ್ಲೋಜನನು ಬಾಣಗಳು || ೧೦ ||

ದ್ರೋಣನದ ಕಂಡೆಚ್ಚ ಕಣೆಗಳ | ಕಾಣಲಾದುದು ದ್ರುಪದನೆಚ್ಚಾ |
ಬಾಣಗಳು ತಾವೆತ್ತ ಹೋದವೊ ಸಮರ ಭೂಮಿಯಲಿ ||
ಚೂಣಿಯಲಿ ಪಾಂಚಾಲ ರಾಮನ | ಹೂಣಿದವು ದಳಾತಪತ್ರದ |
ಗೋಣ ಮುರಿದವು ಕೇತುಪಟವನು ಕಡಿದವಂಬುಗಳ || ೧೧ ||

ಹಾರುವನ ಕಣೆಗಿನಿತು ಬಂದುದೆ | ಕೂರವೆಂದೊಂದಂಬ ಮಂತ್ರಿಸಿ |
ಭೋರೆನಿಸಿ ಪಾಂಚಾಲನಸ್ತ್ರವು ಗಗನ ನೆರೆಯದೆನೆ ||
ಕಾರ ಮಳೆಯಂದದಲಿ ಕಳನೊಳು | ಭೋರೆನುತ ಕರೆಯಲ್ಕೆ ರೌದ್ರಾ |
ಕಾರನಿರೆ ಮರಸುತ್ತ ನೆಚ್ಚುಳುಹಿದನಲ್ಲದವನು || ೨ ||

ಇಟ್ಟ ನೊಂದಿಟ್ಟಿಯಲಿ ದ್ರುಪದನು | ಮುಟ್ಟಿ ಬರುತಿರೆ ಕೋಲಗುರು ಕಡಿ |
ದಿಟ್ಟ ನಂಬಿಂದದನು ಪಾಂಚಾಲನು ಬಳಿಕಮುಳಿದು ||
ಇಟ್ಟನಾ ಶಕ್ತಿಯನು ತ್ರಿಪುರವ | ಸುಟ್ಟವನ ಶೂಲದ ತೆರದಿ ಕಿಡಿ |
ಗುಟ್ಟಿ ಬರುತಿರಲೆಡೆಗಡಿದನಾ ಗರುಡಿಯಾಚಾರ್ಯ || ೧೩ ||

ಕಳಸಜನು ಬಳಿಕೊಂದು ಕಣೆಯನು | ಸೆಳೆದು ಬಿಟ್ಟೊಡದೇನನೆಂಬೆನು |
ಇಳೆಗೆ ಪಾಂಚಾಲನಕ ಬಂದವು ತಲೆ ನಭೋಂಗಣಕೆ ||
ಮಲಗಿದುದು ಪಾರಿದುದು ಕೌರವ | ಬಲದೊಳಗೆ ಜಯಭೇರಿಗಳು ಮಿಗೆ |
ಮೊಳಗಿದವು ದ್ರೋಣಂಗೆ ಸಮರತ್ರಾಣನವರಾರೊ || ೧೪ ||

ತಂದೆಯಳಿವನು ಕಂಡಡೆಮ್ಮನ | ಗುಂದಿದರೆ ರೌದ್ರದಲಿ ಮಾರ್ಗಣೆ |
ಯಿಂದ ಹೂಳಿದನಾರ್ದು ದೃಷ್ಟದ್ಯುಮ್ನನಾಕ್ಷಣಕೆ ||

ಒಂದು ಕಣೆಗಳ ಕಾಣೆನನೆ ಕಣೆ | ಯಿಂದ ತರಿದನು ಬಿಲ್ಲಗುರು ಭೋ |
ರೆಂದು ಕರೆದನು ಮತ್ತೆ ಕೆಂಗರಿಗೋಲ ವೃಷ್ಟಿಯನು || ೧೫ ||

ಸಾರಥಿಯು ಮೈಮೆರೆದನಂಬಿರ | ಧಾರೆ ಸೋಂಕಲು ಸಿಂಧವುಡಿದಾ |
ಧಾರಿಣಿಗೆ ಬೀಳಲ್ಕೆ ದೃಷ್ಟದ್ಯುಮ್ನ ಕಡುಕಾಯ್ದು ||
ಕೂರವಾದೊಂದಂಬನೆಚ್ಚೊಡೆ | ಘೋರನೊರಗಿತು ಸಿಂಧವಕಟಾ |
ಹಾರುವನೊಳಮಗಾಯ್ತೆ ಹರುಬದ ಬ್ರಹ್ಮಹತಿಯೆಂದ || ೧೬ ||

ಮೂರ್ಛೆ ತಿಳಿದುದು ಸಾರಥಿಗೆ ನೃಪ | ಹುಚ್ಚು ಗೊಂಡೈ ಬ್ರಹ್ಮಕರ್ಮದ |
ಲಿಚ್ಚೆವುಳ್ಳವರಿಂತು ಪಿಡಿವರೆ ಭೀಮಭಾಪವನು ||
ನಿಚ್ಚಟದಲಾಂತವನೆ ಪಾರ್ಥಿವ | ನುಚ್ಚಿದನು ನಿಮ್ಮಯ್ಯನಸುವನು |
ಕೊಚ್ಚು ಬೇಗದಲವನ ಕಂಡವನೆಂದು ಬೊಬ್ಬಿರಿದ || ೧೭ ||

ಎನಲು ಪಾಂಚಾಲಾವನೀಶನ | ತನುಜರ್ದೆಸುವನಿತರೊಳು ನೋ |
ಳ್ಪನಿಮಿಷರ ಕಣುಗಟ್ಟಿದಂದದಲೇನ ಹೇಳುವೆನೊ ||
ಧನುವನಿಕ್ಕಡಿಗಡಿದನೊಂದಂ | ಬಿನಲಿ ಕಾರ್ಮುಕ ಭಾಳಲೋಚನ |
ಗನುವರದೊಳಿದಿರಾರೊಯೆಂದೊದರಿದರು ನೋಟಕರು || ೧೮ ||

ಇನ್ನು ಬಾಣವ ತೊಟ್ಟನಾದರೆ | ನನ್ನ ಭಾರದ್ವಾಜ ವಂಶಕೆ |
ಬನ್ನವನು ತಂದವನು ನಾನ್ಯೆಸಲೆ ನಿರಾಯುಧನ ||
ನಿನ್ನನೆಸುವನೆ ಹೇಗೆ ಹಡೆವೈ | ನಿನ್ನ ತಂದೆಯ ಹರಿಬವನು ಕಡು |
ಖಿನ್ನವಾಗದೆ ಕೈದುವಿಡಿಯೊಂದಾರ್ದನಾ ದ್ರೋಣ || ೧೯ ||

ಕಡು ಮುಳಿದು ಕಳಸಜನ ಮಾತಿಗೆ | ಕಿಡಿ ಮಸಗಿ ಮುದುಹಾರುವನು ಹೇ |
ರೋಡುನೊಡೆದೊಗುವರುಣ ಜಲದರವಟ್ಟಿಗೆಯ ಮರುಳ ||
ಪಡೆಗೆ ಮಾಡುವೆನೆಂದು ವಿಳೆಯದ | ಸಿಡಿಲೆನಲು ಘರ್ಜಿಸುತ ಕೊಂತವ |
ಹಿಡಿದು ಭರದಿಂದಿಟ್ಟು ದೃಷ್ಟದ್ಯುಮ್ನ ಕೂಕಿರಿದು || ೨೦ || ಸ

ಇಳೆಯ ಸರ್ಪನ ತೆರದಿ ಸುರ್ರೆಂ | ದುಳುಕುಬಹವೊಲು ಪರಿಉದ ಬರಲಾಅ |
ಗಳೆಕಡಿದು ಮತ್ತೊಂದು ಕಣೆಯನು ಕುಂಭಸಂಭವನು ||
ಸೆಳೆದು ಬಿಟ್ಟಡೆ ನಿಂದು ಪಾರುಂ | ಬಳೆಯ ತಿರುಹುತಲಿರ್ದವನ ಜಳ |
ಜಳಿಪ ಮಕುಟವಕಾಣೆ ಕೆಂಡವ ಕೆದರಿದಂತಾಯ್ತು || ೨೧ ||

ಪರಿದುದೀತನ ತಲೆಯು ನೆತ್ತರು | ಮರುಗುತದೆಯೆಂದೀಕ್ಷಿಪರ ಕ |
ಣ್ದೆರವಿಯಲಿ ಮನದೊಳಗೆ ಪುಟ್ಟಿದು ಶಂಕೆ ಚಕ್ರವನು ||

ಕರಿಮನದ ಕಲಿಯಿಟ್ಟನೊಂದೊಂ | ದರಬಳಿಯಲೊಂದೊಂದು ಪರಿದವು |
ಪರೆಗಡಿದನಾ ಛತ್ರ ಚಾಮರ ಕೇತುಪಟಗಳನು || ೧೧ ||

ಅರರೆ ದೃಷ್ಟದ್ಯುಮ್ನನಲ್ಲದೆ | ಧುರದೊಳಗೆ ಕಲಿಯಾರೊ ಮುರಿದುದು |
ಕರದ ಬಿಲ್ಲೆದೆಗೆಟ್ಟನೇ ಸಾಮಾನ್ಯನ ಹಗೆಯು ||
ಗುರುಮುಳಿದು ದಿವ್ಯಾಸ್ತ್ರದೊಟ್ಟೊಡೆ | ವುರಿಯದೇ ತ್ರಿಪುರದ ತೆರದಿ ತ |
ತ್ತರಿ ಕಟಕವೆಂದುಭಯ ದಳದೊಳಗೆಂದರಲ್ಲಲ್ಲಿ || ೧೩ ||

ಏನನೆಂಬೆನು ಕೌರವೇಂದ್ರನ | ಹಾನಿಯನು ಕುಂಭಜನು ಮನದಲಿ |
ಮಾನವಿಲ್ಲದೆ ದಿವ್ಯಬಾಣವ ತೊಡುವ ಸಮಯದಲಿ ||
ತಾನೊದಗಿತೀ ದ್ರುಪದ ತನುಜನ | ಭಾನು ತೇಜದ ಶಕ್ತಿಯದು ಜೀ |
ವಾನಿಲನೀಂಟಿದುದು ವಿಧಿಯನದಾರೊ ಮೀರುವರು || ೧೪ ||

ಒರಗಿದುದು ಕುಂಭಜನ ತನು ಬೊ | ಬ್ಬಿರಿದನಾ ಹಗೆಕೆಡೆಯೆನುತ ಕೈ |
ಮರೆದನಕಟಾ ಕುಂಭಜನು ದಿವ್ಯಾಸ್ತ್ರಗಳನೆಸಲು ||
ನೆರೆಗಲಿಯು ನರನೋರ್ವನಲ್ಲದೆ | ತರಿಯ ಬಲ್ಲವರುಂಟೆ ಅದನೀ |
ಎರಡು ಬಲದೊಳಗೆಂಬ ಗಜಬಜವಾದುದಲ್ಲಲ್ಲಿ || ೧೫ ||

ಗುರುಗಳಿದನೆಂದೆರಡು ಬಲದೊಳ | ಗರಸು ಮಕ್ಕಳಿಗಾಯ್ತು ದುಃಖವು |
ನರನು ಬಿಸುಟನು ಬಿಲ್ಲನಶ್ರುಜಲಂಗಳನು ಕರೆದು ||
ಗುರು ವಿಯೋಗವದೇನ ಮಾಡದೊ | ಕುರುಪತಿಯು ಕೊರಗಿದನು ತನ್ನೆದೆ |
ಜರಿದು ದೃಷ್ಟದ್ಯುಮ್ನ ಖಡುಗವ ತೂಗುತಿರಲೊಡನೆ || ೧೬ ||

ಮುನಿದು ದುಸ್ಯಾಸನನು ಮೊದಲಾ | ದನಿಬರರ್ವತ್ತೇಳ್ವರೊರ್ಮೆಯೆ |
ಘನನಿನದವೆನೆ ಗಜರಿ ದೃಷ್ಟದ್ಯುಮ್ನನೊಡಲೊಡದು ||
ತನಿರಕುತವನು ಚೆಲ್ಲಿ ದ್ರೌಪದಿ | ಗನಿತು ಕಂಬನಿಗರಯಿಸುವವೆಂ |
ದನುವರದಲಾರ್ದಳವಿಗೊಟ್ಟರು ಬಹಳ ಬೊಬ್ಬೆಯಲಿ || ೧೭ ||

ಅಳವಿಗೊಡೆ ಕೌರವ್ಯ ಕಾಲಾ | ನಳನಿವಳ ಪೆರಗಿಕ್ಕಿ ಪಿಡಿದ |
ಪ್ಪಳಿಸಿ ಕೆಲಬರನಿಟ್ಟು ಕೆಲಬರನೊರಸಿ ಕೆಲಕೆಲರಂ ||
ತುಳಿದು ಕೆಲಬರ ಬಡಿದು ಕೆಲಬರ | ಹಿಳಿದು ಕೆಲಬರ ಮುರಿದು ಗಂಟಲ |
ಬಳೆಯ ಕೆಲಬರನಿಂತು ಕೊಂದನು ಮುಳಿದು ಕಲಿಭೀಮ || ೧೮ ||

ಮೊಳಗಿದುದು ಜಯಭೇರಿ ಪಾಂಡವ | ಬಲದೊಳಗೆ ಮತ್ತತ್ತಳಾಗಳು |
ನಳಿನನಾಭನ ಮೊನೆಯ ನಾಯಕರಗ್ಗಳದಿ ಕಾದಿ ||

ಬಲಯುತನು ಕಲಿಸೌಂದರಾಂಗನು | ಬಳಸಿದಧಟಿನ ನಂದನನು ಸಂ |
ಗಳಿಸಿ ಕಾದಿದರೀಕ್ಷಿಪಮರರ ಕಣೆಯಹಬ್ಬವೆನೆ || ೧೯ ||

ವರ ಜರಾಸಂಧಾನುಜನ ದು | ರ್ಧರ ಪರಾಕ್ರಮಿ ಶಂಕು ಕರ್ಣಿಯ |
ಪಿರಿಯ ಬಲವನು ನುಗ್ಗುಗಟ್ಟಿದರಾ ಸಮಯದೊಳಗೆ ||
ಗುರುಗಳನು ಬಂಧುಗಳನಕಟಾ | ಧರೆಯಲೋಭದಿ ಕೊಂದರಿನ್ನೀ |
ಧುರವನೀಕ್ಷಿಸೆನೆಂಬವೊಲು ಮರೆಯಾದನಾದಿತ್ಯ || ೨೦ ||

ಅನಿತರೊಳೆಗಪಹಾರ ತೂರ್ಯ | ಸ್ವನವ ಕೇಳ್ದು ರಥಾಂಗಪಾಣಿಯು |
ವನಜನಾಭನು ತೆಗೆದು ತಂತಮ್ಮರಮನೆಗೆ ಪೊಗಲು ||
ಜನಿತ ಖೇದದಿ ಕುರುಪತಿಯು ಖಿ | ನ್ನನೆ ಮುಸುಡ ದುಗುಡದಲಿ ಕುಳ್ಳಿ |
ರ್ದನು ಧರಾಧಿಪರೊಪ್ಪುತಿರ್ದಿರುಳೋಲಗದಲಂದು || ೨೧ ||

ಏಣನಧಟಿಂ ಕಾದಿ ಸಿಂಗದ | ಪ್ರಾಣವನು ಕೊಂಡಂದದಲಿ ಕಲಿ |
ದ್ರೋಣನಸುವನು ಕೊಂಡನಲೆ ಪಾಂಚಾಲನಂದನನು ||
ಕಾಣೆನೆನ್ನೊತ್ತಿನೊಳದಾವಗ | ಮಾಣಹತ ತಮ್ಮಂದಿರೆಲ್ಲರ |
ಬಾಣಸಿಗನುರೆ ಕೊಂದನೆಂದೆದೆಗರಗಿದನು ಬಳಿಕ || ೨೨ ||

ಅಂಗದೇಶಾಧೀಶನಾ ನೃಪ | ಪುಂಗವನ ಮನವರಿದು ನಾಳಿನ |
ಸಂಗರದೊಳೆಲೆ ರಾಯ ನಿನ್ನೀ ಚಿತ್ತದುಮ್ಮಳವ ||
ಹಿಂಗಿಸುವೆ ತೋರುವೆನು ನನ್ನೀ | ತುಂಗ ಭುಜಸಾಹಸವನಹಿತನ |
ಭಂಗಿಸದೊಡಿದು ಮೀಸೆಯಲ್ಲುಳಿ ನೋವ ನೀನೆಂದ || ೨೩ ||

ಎನಲು ಪೋದುದು ಕೌರವೇಂದ್ರನ | ಮನದಳಲು ಸೇನಾಧಿಪತ್ಯವ |
ನಿನಸುತಗೆ ಕಟ್ಟಿದನದತ್ತಲು ಕೃಷ್ಣನದನರಿದು ||
ಮನವೊಲಿದು ಧರ್ಮಜಗೆ ಪೇಳ್ದ | ರ್ಜುನಗೆ ಸೇನಾ ಪಟ್ಟಗಟ್ಟಿದ |
ರನುಪಮೋತ್ಸವವಾದುದಂದಿರುಳೆರಡು ಬೀಡಿನಲಿ || ೨೪ ||

ಮುರರಿಪುವು ತನ್ನಣ್ಣನೆನಿಸುವ | ಧುರವಿಜಯನಹ ಕೃಷ್ಮನನು ತಾಂ |
ನರಗೆ ಸಾರಥಿಗೈದ ಕರ್ಣಗೆ ನಾಳೆ ಪಾರ್ಥನೊಳು ||
ಭರದ ಕಾಳಗ ನೀವು ನನ್ನಯ | ಹರಣವೆನಿಸುವಿರೆಂದು ಶಲ್ಯನ |
ಯೆರಡು ಸಾರಥಿಮಾಡಿದನು ಕರ್ಣಂಗೆ ಕುರುರಾಯ || ೨೫ ||

ಪೊರೆದನತಿ ಮೋಹದಲಿ ತಮ್ಮಂ | ದಿರನು ನಂಬದ ಖಡ್ಗ ತನ್ನಯ |
ಹರಣವೆಂದೇ ನಚ್ಚಿನಂಬಿದನೆನ್ನನವನೀಶ ||

ಧುರದೊಳಾನೆಂತರಿತು ತಮ್ಮ | ದಿರನು ಕೊಲುವೆನು ಪಾತಕಕೆ ಹೇ |
ವರಿಸುತಿದೆ ಮನವೆಂದು ಮನದಲಿ ನೆನೆದನಾ ಕರ್ಣ || ೩೬ ||

ತೋರುವೆನು ತೋಳ್ವಲುಮೆಯನು ಪೊರ | ಮಾರದಿರಿವೆನು ಸಲುವುದೋಲೆಯ |
ಕಾರತನ ಮಝುಪೂತುರೆನಿಸುವೆನುಭಯ ಬಲದೊಳಗೆ ||
ಮೀರೆ ಜನನಿಯ ನುಡಿಯ ಚೆಲುವನು | ಕಾರೆ ಜೋಳದ ಪಾಳಿಗಸುವನು |
ಮಾರುವೆನು ದಿಟವೆಂದು ಬಲಿದನು ಮನವನಾ ಕರ್ಣ || ೩೭ ||

|| ಅಂತು ಒಟ್ಟು ಸಂಧಿ ೫೩ ಕ್ಕಂ ಮಂಗಲ ಮಹಾ ||

# ಯುದ್ಧ ಪರ್ವ (ಸಂಧಿ ೫೪)

**ಸಂಧಿ ೫೪**

ಚಂಡ ಭಾರತ ಮಲ್ಲನಾ ಮಾ | ರ್ತಾಂಡ ತನುಜನು ಮೂರು ಲೋಕದ |
ಗಂಡನರ್ಜುನನೈದಿಕಾದಿದನಾಜಿ ರಂಗದಲಿ || ಪಲ್ಲ ||

ಕೇಳಲೇ ಶ್ರೇಣಿಕ ಧರಿತ್ರೀ | ಪಾಲ ನಿಜನಂದನನ ಪಾರ್ಥನ |
ಕಾಳಗವನೇಂ ನೋಡ ಬಂದನೊಯೆನಲುದಯ ಗಿರಿಯ ||
ಚೂಳಿಕೆಯನಿನನೇರಿ ನಿದ್ರೆಯು | ಜಾಳಿಸಿತು ತಮದೊಡನೆ ಮಜ್ಜನ |
ವಾಳಿದರು ಕರ್ಣಾರ್ಜುನರು ತಂತಮ್ಮ ಬೀಡಿನೊಳು || ೧ ||

ಪರಮ ಜಿನಮಂದಿರವ ಪೊಕ್ಕರು | ಪರಮನಡಿಗಳನರ್ಚಿಸಿದರಾ |
ಪರಮಗುರು ಗಂಧಾಂಬು ಗಂಧಾಕ್ಷತೆಯನರನುಗಳ ||
ಧರಿಸಿ ವಂದಿಸಿ ಬಂದು ತಂತ | ಮ್ಮರಮನೆಯನೈತಂದು ಮಣಿವಿ |
ಷ್ಟರದೊಳೋಲಗದೊಳಿರ್ದರಾ ಸಂಗ್ರಾಮಲಂಪಟರು || ೨ ||

ಸಕಲ ಶೃಂಗಾರಾಂಗರಾದರು | ಸಕಲ ಭಟರನು ಮನ್ನಿಸಿದರಾ |
ಸಕಲ ಸಾಧನಗಳನು ನೆರಪಿದರಾಗಳರ್ಜುನನು ||
ಪ್ರಕಟದೂತರನಟ್ಟಲವರತಿ | ಚಕ ಚಕಿಪ ರವಿತನುಜನಾಸ್ಥಾ |
ಯಿಕೆಗೆ ಬಹುಸಮಯದಲಿ ಕಂಡರದೊಂದು ಸಂದಣಿಯ || ೩ ||

ಇನತನೂಭವನಿಂದ ಯಾಚಕ | ಜನವು ಚಾಗವ ಪಡೆದ ಪೆಂಪಿನ |
ಧನದ ರಾಶಿಯ ಹೇರಿದಾನೆಯ ಘಟೆಗಳೋರಣವ ||

ಕನಕವಕ್ಕರೆಯಿಟ್ಟ ಹಯಗಳ | ನನುಪಮಾಂಬರದುಂಬಿಯಾ ಕಾಂ |
ಚನದ ಬಂಡಿಯ ಸಾಲುಗಳ ಕಂಡಾಂತರಚ್ಚರಿಯ || ೪ ||

ತೆರಪನರಿದೆತ್ತಾನುಮೊಳ ಪೊ | ಕ್ಕುರುವ ಕೈವಾರಿಗಳ ಕಳಕಳ |
ದುರುಬೆಯನು ಪೆರಗಿಕ್ಕಿ ಕೈಮುಗಿದರಸ ಬಿನ್ನಹವು ||
ಕರೆ ಮರೆಯು ಹೊಗದುರ್ಕಿನಲಿ ಮಿರಿ | ಮಿರಿಪನಿಳೆಯದ ರುದ್ರನಿರಿವವ |
ರೆರೆಯ ಪರಕರಿಪಂಚ ತುಂಡನು ಪಾರ್ಥನಟ್ಟಿದನು || ೫ ||

ಇಂದಿನಾಹವದೊಳಗೆ ಹಲಬರ | ದಂಡುಗದ ಕಾಳಗವು ಸಲ್ಲದು |
ಬಂದುನೋಡುವ ಗರುಡಗಂಧರ್ವಾಮರರಕಣ್ಗೆ ||
ಸಂದ ಹಬ್ಬವು ನಮ್ಮರಸನೊಳು | ನಿಂದು ನೀ ಕಾದಿದೊಡೆಡೆಯಿದ ಪೇ |
ಳೆಂದು ಕಳುಹಿದರೆಂದಲಾ ಕಲಿಕರ್ಣಗವರಾರ್ದು || ೬ ||

ಅರಸ ಕೇಳಿನ್ನೊಂದನಾಡುವೆ | ಪರರೆ ಸಂಗ್ರಾಮದಲಿ ನೆರೆ ಜಯ |
ಸಿರಿಗೆ ಗುಂಡನು ವೀರಪಾರ್ಥನು ಬೇರೆಪೆರರುಂಟೆ ||
ನರನಿರಲು ನೀಂ ವೀರಪಟ್ಟವ | ಧರಿಸಬಹುದೇ ಹೇಳೆನಲು ದೂ |
ತರಿಗೆ ನಸುನಗುತೆಂದನಾ ಕಲಿಕರ್ಣ ಭೂವರನು || ೭ ||

ಕರೆಯಿರ್ರೈ ಪಾರ್ಥನನು ಇಂದಿನ | ಧುರದೊಳಗೆ ತನ್ನೆನ್ನ ಬಲುಹನು |
ಒರೆದು ನೀವೇ ನೋಡಬಹುದೆಂದವರಿಗುಡುಗೊರೆಯ ||
ತರಿಸಿ ಕೊಟ್ಟವರನುಕಳುಹಲ | ತ್ತೆರಡು ಬಲನೆರಡೊಡ್ಡಿದುದು ಭೀ |
ಕರ ರಣಾನಕ ಘೋಷ ಬದಿರಿತವಾಯ್ತು ದಿಗು ಚಕ್ರ || ೮ ||

ಕಲಿ ಜಯದ್ರಥನೆಂಬ ಬಂಟಿನ | ಚಲದ ಮಾಸಾಮಂತನನು ದೋ |
ರ್ವಲ ಜರಾಸಂಧನು ಬಹಳಬಲವೆರಸಿ ಮೊನೆಮಾಡಿ ||
ನಳಿನನಾಭನು ಪದ್ಮನೆಂಬ | ಗ್ಗಳಿದ ಮಾಸಾವಂತನನು ಪೇ |
ಳಲು ನೆರೆದ ಪಡೆವೆರಸಿ ಕಾದುತ್ತಿರ್ದರಿರಲಿತ್ತ || ೯ ||

ವೀರ ಪಟ್ಟವು ತೊಳಲುತಿರೆ ಕಡು | ವೀರ ಪಸದನವಾಂತನಾಗಳು |
ಕಾರಮಿಂಚಿನ ಬಳ್ಳಿಬಳಸಿದ ಹೊನ್ನಬೆಟ್ಟವೆನೆ ||
ಹೀರಮಯ ಕವಚವು ವಿರಾಜಿಸೆ | ಚಾರುಮಣಿಮಯ ಮಕುಟರುಚಿ ಸಂ |
ಧ್ಯಾರುಣತೆಯನು ಬೀರಲೇನೊಪ್ಪಿದನೊ ಕಲಿಕರ್ಣ || ೧೦ ||

ಬಿರುದನೋದುವ ಪಾಠಕರ ಕಲ | ವಿರುತಿಯನು ಪೆರಗೊತ್ತಿದುದು ನೇ |
ವುರದನುಣ್ಚರ ಕಾಂಚಿಯಿಂಚರ ವಾರನಾರಿಯರ ||

ಪರಕೆಯಲಿ ಪಿಕನಿನದವನು ಧಿ | ಕ್ಕರಿಸಿದುದು ಕಂಕಣ ಝಣತ್ಕೃತ |
ವೆರಸಿ ಬಹ ಶೇಷಾಕ್ಷತೆಗಳಾಡಿದವು ಮಕುಟದಲಿ || ೧೧ ||

ನೆರೆದ ಮಂಗಲ ಪಾಠಕರ ಬಲು | ಸರದ ಪೆಚ್ಚಿಗೆ ಮಂಗಳವನಿಂ |
ಚರದೆ ಪಾಡುವ ಗಾಯಕರ ಮೆಲುಸರಗಳೊಡನೊಡನೆ ||
ಬಿರುದ ಪಾಠಕ ಬಿರುದ ಗಾನರ | ವಿರುತಿಯಿತ್ತರದೊಳಗೆ ವಿಭುದರ |
ಹರಕೆ ಮಂಗಳ ತೂರ್ಯರವವೆತ್ತಲು ವಿರಾಜಿಸಿತು || ೧೨ ||

ಸೇನರಾತ್ಮಜನುಭಯ ಚಾಮರ | ಬೀಸುತಿರೆ ರಾಜಾಂಗಣಕೆ ಸುವಿ |
ಳಾಸಿನೀಜನವೋಲಗಿಸಿ ಬರೆ ಮೈಯ ಪರಿಮಳಕೆ ||
ಬೇಸರದೆ ಪರಮೆಗಳು ಪರಿತರೆ | ವಾಸಿಭಾಸೆಯ ಕಾಸೆಮೀಸೆಯ |
ಸಾಸಿ ಬಂದನು ವಾಮಚರಣದ ತೊಡರ ಝಣರವದಿ || ೧೩ ||

ಅಸಿತ ಹಯಗಳ ಹೂಡಿ ಮಣಿವಾ | ಯಸದ ಪಳಯಿಗೆ ನೆಗೆದು ಮೇಲಾ |
ಗಸವ ಚುಂಬಿಸೆ ನಿಖಿಳ ಶಸ್ತ್ರಾಸ್ತ್ರಗಳ ಸಂದಣಿಯ ||
ಮಿಸುಪ ವಜ್ರಾಪಾಯ ರಥವನು | ವಿಸಮ ವಿಕ್ರಮ ಶಲ್ಯ ಜೋಡಿಸೆ |
ಅಸಮ ಸಾಹಸಿಯೇರಿದನು ನಲವೇರಿ ಕಲಿಕರ್ಣ || ೧೪ ||

ಕುರುಬಲವ ಪೆರಗಿಕ್ಕಿ ನಿಜಬಲ | ವೆರಸಿ ರಥನಿಲಲೊಡ್ಡಿನಿಂದನು |
ಪರಬಲವು ತಳ್ಳಳಿಸುತಿರೆ ಕಹಳೆಗಳು ಚೀರುತಿರೆ ||
ನರನ ಬರವನು ಪಾಡುತೆಡಗೈ | ಯುರುಧನವನಣವೂರಿ ಬಲಗೈ |
ವೆರಳ ಕೊನೆಯಲಿ ಸರಳ ತಿರುಹುತ ನಿಂದನಾ ಕರ್ಣ || ೧೫ ||

ವೀರ ಪಾರ್ಥನದತ್ತಲಾಂತನು | ವೀರ ಶೃಂಗಾರವ ಜಯಾಂಗನೆ |
ಕೂರಿಸುವ ಚದುರಿನಲಿ ಅಭಿವಂದಿಸಿದನಗ್ರಜರ ||
ಭೂರಿ ಹರಕೆಯನಾಂತು ವಿಬುಧೋ | ದಾರದಾಶೀರ್ವಚನವನು ಮನ |
ವಾರೆ ಕೇಳಲು ಮೊಳಗಿದವು ಬಹು ಮಂಗಳಾನಕವು || ೧೬ ||

ಮಿಸುಪ ಜಂಗಮವಲ್ಲಿಗಳೆ ಕೆಂ | ಪೆಸೆವ ಪೂಗಳನೊಗುವವೊಲು ಶೋ |
ಭಿಸುವಬಲೆಯರು ತಳಿದರಾಗಳು ಹರಸಿಸೇಸೆಯನು ||
ವಿಷಮ ವೀರನ ಬೆನ್ನೊಳಗೆ ಶೋ | ಭಿಸದುದಕ್ಷಯ ಶರಶರಧಿ ಅ |
ರ್ವಿಸುವ ಗಾಂಡೀವಪಿಡಿದು ಬಂದನು ನಿಜಗೃಹಾಂಗಣಕೆ || ೧೭ ||

ಸಿತಹಯಂಗಳ ಹೂಡಿ ಸೊಗಯಿತು | ರತುನಮಯ ವಾನರ ಪತಾಕೆಯ |
ನತಿಬಲಿದ ಕಾಂಚನದ ಕಂಭಕೆ ವಜ್ರಮಯರಥವ ||

ಚತುರ ಕೃಷ್ಣನ ಜೋಡಿಸಲು ಭೂ | ನುತ ಪರಾಕ್ರಮ ರುದ್ರನೇರಿದ |
ನತುಳ ಭುಜಪೀಠವನು ಜಯರಮೆಯೇರಲೊಲವಿನಲಿ || ೧೮ ||

ಪೊಡೆವ ನಿಸ್ಸಾಳಗಳ ದನಿದೆಸೆ | ಯಡರೆ ರಥಬಹ ಭರಕೆ ಭೂತಳ |
ನಡುಗೆ ಭೋರನೆ ಬಂದು ಪಾಂಡವ ಬಲವಪೆರಗಿಕ್ಕಿ ||
ಕಡೆಯ ರುದ್ರನೆ ಮುನಿದು ಬಂದನೊ | ಪೊಡವಿಗೆನೆ ಭೀಷ್ಮ ಸುತ ಕರ್ಣಗೆ |
ಪಡಿಮುಖದೊಲಾರ್ದೊಡ್ಡಿ ನಿಂದನು ವೀರಫಲುಗುಣನು || ೧೯ ||

ಕುರುನೃಪನು ಮಾಗಧನುಮೀರ್ವರು | ತರಣಿ ತನುಜರ ದೋರ್ವಳದ ಸಂ |
ಗರವನೋಡಲು ಸಾರೆ ಹಲನಗಧರರು ಪಾಂಡವರು ||
ನರನಯುದ್ಧವ ನೋಡಲಿಕೆ ಪೊ | ರ್ದಿರಲು ಬಾನೊಳು ಕಿಂಪುರುಷ ಕಿ |
ನ್ನರ ಗರುಡ ಗಂಧರ್ವ ದೈತ್ಯಾಮರರು ಕೀಲಿಸತು || ೨೦ ||

ಕುರುಪತಿಯ ಬಲವೆಂಬ ಪೆರ್ಚಿದ | ಶರಧಿಯನು ಕಡೆಯಲಿಕೆ ಕಾಂಚನ |
ಗಿರಿಯನೇಳ್ಗೆಯ ಕಲಹವೆಂಬಾ ಹರಿಯೆ ತಂದಲ್ಲಿ |
ಇರಿಸಿದನೊಯೆನೆ ಸಮರಧರೆಯೊಳಗೆ | ಪರ ಬಲಾಂತಕ ಪಾರ್ಥನತಿ ಭೀ |
ಕರ ಶರಾಸನವಿಡಿದುನಿಲೆ ಬೆದರಿದುದು ಕುರುಸೈನ || ೨೧ ||

ಪುದಿದ ಬಿರುದರ ವೀರಡವುಡೆಯ | ಹದಿರ ಹರೆಗಳ ಬೊಂಬುಳಿಯ ಹೇ |
ಳಿದವೊಳೊದರುವ ಸೂಳೆಗಾಳೆಯ ಯಕ್ಕ ಮದ್ದಳೆಯ ||
ಸದೆಯಲುಬ್ಬುವ ಬಲಕೆ ಕೈವೀ | ಸಿದರು ಕಲ್ಪಾಂತಾನಳಗೆ ಬೀ |
ಸಿದ ವಿಷಾನಳನಂತೆ ಸೂರ್ಯ ಸುರೇಂದ್ರ ನಂದನರು || ೨೨ ||

ಜಲಧಿ ಬೇಳೆಯೊಳಾಗಸವು ಭೂ | ತಳದೊಳಾಂತವೊಲಚ್ಚಡಿಸಿದವು |
ಬಲವೆರಡು ಬರಸಿಡಿಲ ಬಳಗದ ತೆರದಿ ರಣಭೇರಿ ||
ಮೊಳಗುತಿರಲದನುಂಗಿದವು ಸಂ | ಗಳಿಸಿ ಬಿಲುಗಳ ಠಂಕೃತವು ದಿಗು |
ವಳೆಯವನು ಮುಸುಕಿದವು ಕೆಂಗರಿ ಮೊರಹಿನಂಬುಗಳು || ೨೩ ||

ಸರವೆ ಮುಗಿಲಾ ಮೊರಹೆ ಮೊಳಗಾ | ಗರಿಯ ಗಾಳಿಯೆ ಗಾಳಿ ಬಿಲ್ಲುಲಿ |
ಬರಸಿಡಿಲು ಹೊಸಮಸೆಯಬಾಯ್ದಾರೆಗಳೆ ಕುಡಿಮಿಂಚು ||
ಸುರಿವ ನೆತ್ತರ ಮಳೆಯದೇ ಪೊಳೆ | ವರಿಯೆ ಕುರುಭೂಮಿಯಲಿ ವೀರಾಂ |
ಕುರ ಕೊನರ್ತುದು ಕೊಯ್ದು ಬೆಳೆತುಂಬಿದುದು ಯಮಪುರವ || ೨೪ ||

ಬಳಿಕಲಾ ಕಲ್ಪಾಂತ ಮೇಘದ | ಹೊಳೆವ ಮಿಂಚುಗಳಂತೆ ಮಿಂಚುವ |
ಹಲವು ಕೈದುಗಳಾಡಿದವು ನೋಡುವರ ಕಣ್ಬೆದರೆ ||

ಮುಳುಗಿದವು ನೆತ್ತರಕಡಲ ಬಲು | ಸುಳಿಯೊಳಗೆ ಗಜಹಯ ಭಟರ ಪೆಣ |
ಗಳು ಸಿಡಿಲ್ದವು ಬೊಬ್ಬಿಡುತ ತಲೆಗಳು ನಭೋಂಗಣಕೆ || ೧೫ ||

ಮಡಿದುದಿಂತಿರಿದಾಡಿ ಪೆರ್ಚಿದ | ಪಡೆಯೆ ಬಿಲುಗಳವೊಯ್ದು ತನ್ನಯ |
ಪಡೆವೆರಸಿಯೆಡೆವೊಕ್ಕನಾಗಳು ಶಕುನಿ ಬರಲೊಡನೆ ||
ದಡಿಗ ರುಧಿರೋದ್ಗಾರಿ ಗದೆಯಲಿ | ಬಡಿದು ಕೆಲಬರ ತಿವಿದು ಕೆಲಬರ |
ಹೊಡೆದು ಕೆಲಬರನಟ್ಟಿದರು ಯಮಪುರಿಗೆ ಕಲಿಭೀಮ || ೧೬ ||

ಎಡೆವಿಡದೆ ಬಂದೆರಗಿದುದೊ ಬರ | ಸಿಡಿಲು ಮೇಣ್ ಪಾಷಾಣವೃಷ್ಟಿಯ |
ಗಡಣವೋಯೆನೆ ಕರಿನರಾಶ್ವರಥಂಗಳನು ಬಡಿದು ||
ಒಡೆವೆರಸಿ ಗಜಹಯದ ಬಾಲವ | ಪಿಡಿದು ಪವನಜ ಬೀಸಿಡಲು ಬಾಂ |
ಗಡಲಲಾಡುವ ಕರಿಮಕರ ಹಯ ಮತ್ಸ್ಯವೆನಿಸಿದವೂ || ೧೭ ||

ಇಡಲು ಗಗನಕೆ ಹೋಗಿ ತಾವಿಳಿ | ವೆಡೆಯೊಳಾನೆಯ ಮೇಲೆ ರಥವಾ |
ನಿಡುರಥವ ಮೇಲಶ್ವವಶ್ವದ ಮೇಲೆ ಪೇರಾಳು ||
ಅಡಸಿಬರುತದೆ ಸಂಗರದೊಳಿರಿ | ವೊಡೆ ವಿಕುರ್ಣವ ವಾಹನಂಗಳ |
ಪಡೆದು ಬಹ ಬಾಂಬಟ್ಟೆಗರೊಯೆನೆ ತೋರಿದರು ಕೆಲವರು || ೧೮ ||

ಕರಿಗಳನು ಹಿಡಿದೆತ್ತಿ ಮಾರುತಿ | ಭರದಲಪ್ಪಳಿಸಿದೊಡೆ ಕಾರಿದ |
ವುರಿಯ ಮಾಲೆಯ ತೆರದಿನೆತ್ತರನಾಗಳೀಕ್ಷಿಸಲು ||
ಇರುಳುಗಳು ದೀಪನಿಸಿ ಕೊಳ್ಳಲೆ | ನರಿಯದಾ ಕಿಸುಸಂಜೆಗಳ ತರ |
ತರದಿ ಕಾರಿದವೆನಿಸಿ ತೋರಿದವಾಜಿರಂಗದಲಿ || ೧೯ ||

ಹಿಡಿದು ತಿನಬಹ ಜವನ ಬಾಯೊಳ | ಗಡಗ ಹಾಹವನಂತೆ ತಿವಿಪೊಡೆ |
ಯೊಡಲನೊಡೆ ಕೊರೆ ಸೀಳೆನುತ ಬರೆ ಭೀಮ ಬದಿಯಿಂದ ||
ಪೊಡೆದೊಡಾಗಳು ಶಕುನಿಸಿಡಿಲುರೆ | ಪೊಡೆದ ಪಂಜರ ಶಕುನಿಯಂದದಿ |
ಕೆಡೆದು ನೆತ್ತರ ಕಾರಿ ಮಡಿದನು ಸಮರಧರೆಯೊಳಗೆ || ೨೦ ||

ಸೇನೆಮಣ್ಮಳಿಯಾಗೆವಿಳೆಯ ಕೃ | ಶಾನು ಮಸಗಿದ ತೆರದಿನತ್ತಲು |
ಭಾನುಸುತನಿತ್ತಲು ಯುಗಾಂತ ಕೃತಾಂತನೆನೆ ಪಾರ್ಥ ||
ಆ ನೆಲನರಥನೇಮಿಯದಿರಿಸಿ | ಬಾನೊಳಾರಲ ತೂರೆಪಳಯಿಗೆ |
ಸಾನುಮಾನಗಳಿದಿರೆ ಬಹವೊಲುನೂಕಿದರು ರಥವ || ೨೧ ||

ಆವ ರೌದ್ರಾಕಾರವನು ಕಂ | ಡೇವೆ ಮಡಿದನಿಮಿಷರು ದಿಗುಪತಿ |
ನೀವಹದೆ ನಡುಗಿದುದು ಮಾಗಧನಾ ಸುಯೋಧನನು ||

ಪವನಹತ ತರುವಾದರಾ ಪಾಂ | ಡವರ ಬಲನಾರಾಯಣರ ಬಗೆ |
ಬವಣೆಯಾಯ್ತೆನೆ ಮಿಕ್ಕ ಸುಭಟರ ಬಲುಹು ನಾನರಿಯೆ || ೩೧ ||

ಸರಳ ಭೂಮಾನದಲಿ ರಥನಿಲೆ | ತಿರುವ ಜೇವಡೆಗೈಯೆ ಮಣಿವಿ |
ಷ್ವರದಿ ಕೆಳಗುರುಳಿದರು ದಿಗುಪಾಲಕರು ಸುರನದಿಯ ||
ಶರನಿಧಿಯು ಮೌಕ್ತಿಕವು ತಾರೆಯು | ಬೆರಸಿದವು ಮಿಕ್ಕವರ ಪಾಡೇಂ |
ಹರನಗಿರಿಜೆಯ ತೆಕ್ಕೆ ಸಡಲಿತು ಭೀಳ ಠಂಕೃತದಿಂ || ೩೩ ||

ತಿರುವಿಗಂಬನು ಹೂಡಿ ಕರ್ಣಕೆ | ಬರೆತೆಗೆದು ಬಿಡಲೀರ್ವರುಂ ಕಡು |
ಭರದಿ ಪರಿದವದತ್ತಲಿತ್ತಲು ಗರಿಯಮೊರಹಿನಲಿ ||
ಸರಳ ಕೇರಾಯ್ತೆಂಟು ದೆಸೆಯಾ | ಸರಳ ಚಪ್ಪರವಾಯ್ತಾ ನಭವಾ |
ಸರಳ ಗರುಡಿಯದೆನಿಸಿದುದು ರಣ ಭೂಮಿ ನಿಮಿಷದಲಿ || ೩೪ ||

ತರಣಿ ಯಮನೊಡಹಾಯ್ದು ಹೋದವು | ಸುರಪುರಿಗೆ ದಿಗು ಪಾಲಕರ ನೀ |
ಡೊರಸಿದವು ನೆಲನುರ್ಚಿ ಫಣಿಲೋಕದಲಿ ಹೊಳಕಿದವು ||
ತರಣಿಸುತ ಕೌಂತೇಯರೆಚ್ಚಾ | ಸರಳು ಪೂರಿಸಲಾದುದಂದಿಂ |
ಶರದಿ ಶರನಿಧಿ ಸರಿಸರಳ ತರುವಂಬುನಿಧಿಯೆಂದು || ೩೫ ||

ಮರೆತು ಕಾಳಗವೇಕೆ ಬಾನೊಳು | ತುರುಗಿ ನಿಂದವರೀಕ್ಷಿಸಲು ಮಿಗೆ |
ತರಪುಗೊಡುವಂತೋರ್ವರೋರ್ವರು ಪೆಣೆದಕಣೆಗಳನು ||
ತರಿದರಾ ಪರಿಕರದರುರೆ ಕೈ | ಮೆರೆದ ರೊಡನೆಡೆಗಡಿದ ಕಣೆಗಳು |
ನೆರೆದು ಕುರುಗಿರಿಯೆನಿಸಿದುದು ಸಂಗ್ರಾಮರಂಗದಲಿ || ೩೬ ||

ಸರಳು ಸರಳುಗಳುಡಿದು ಕೆಂಡವು | ಸುರಿದು ಕಣೆವೆಟ್ಟವನು ಸುಡ ಲೆಂ |
ದುರಿದ ತ್ರಿಪುರದ ತೆರದಲರಿದುದುನಭದಲೆಡೆಗಿಡದೆ ||
ಸುರರು ಜಾರಿದರತ್ತ ತೆಗೆದ | ಚ್ಚರಿಯ ಹೊಗೆಹಿಡಿದಂದನಿಂದಂ |
ಬರತಳವು ಕಡುಕಂದಿದುದು ಕಜ್ಜಳದ ಪಣತೆಯೊಳು || ೩೭ ||

ನರನ ನಾಡಾಡಿಯ ಶರದಿಗೆಲ | ಲರಿದೆನುತ ಮಂತ್ರಿಸಿ ಮಹಾ ಭೀ |
ಕರ ತಮೋಬಾಣವನಿನಾತ್ಮ ಜನೆಚ್ಚದೇನೆಂಬೆ ||
ತರಣಿ ಕಿರಣವನುಂಗಿ ಸೂಜಿಯ | ಲಿರಿದಡದು ನಾಟದವೊಲೆಣ್ದೆಸೆ |
ಧರೆ ನಭೋಂಗಣವೆಲ್ಲವನು ತೀವಿದುದು ಕತ್ತಲೆಯು || ೩೮ ||

ಅರರೆ ಸರ್ವಂ ಕೃಷ್ಣಮಯ ವೆಂ | ಬರನುಡಿಗೆ ತೆರಪಾಯ್ತು ಕಾಣರು |
ಹರಿಯನದರೊಳು ತಮ್ಮ ತನುವನು ತಡಹಿ ನೋಡುವರು ||

ಅರಿಗಳೆಂದೊಳಗೊಳಗೆ ಪಾಂಡವ | ಪಿರಿಯ ಬಲಿವಿರಿದಾಡಿದುದು ಪರಿ |
ಹರಿಸಿದನು ನರನೊಂದು ತೇಜೋಬಾಣರವಿಯಿಂದ || ೩೯ ||

ತಳುವದೊಡನೊಂದಗ್ನಿ ಬಾಣವ | ಸೆಲೆದು ನರನೆಸಲದರ ಮುಂದಾ |
ವಿಳೆಯ ರುದ್ರನ ನೊಸಲ ಕಣ್ಣುರಿ ತಣ್ಣನಾದುದಲೆ ||
ಪ್ರಳಯವಹ್ನಿಯ ನಿಲಿಸಿ ದೆಸೆಗಳ | ಬಳಸಿ ಭುಗಿ ಭುಗಿಲೆನುತ ಬರೆ ಕುರು |
ಬಲವು ಹುರಿಮಳಲಾಯ್ತು ಕುಸಿದವು ಮೈಯರೋಮಗಳು || ೪೦ ||

ಓಡಿದುದು ಸುರಸಮಿತಿ ಉಷ್ಣಕೆ | ಸೂಡಿದನು ಬಾಂದೊರೆಯನೀಶನು |
ಬಾಡುವನು ತಾನಾಳಿಯುರಿಸುಡುತದೆ ಕಡಲನಿನ್ನು ||
ಆಡಲೇನಾ ಬಾಣವನು ತಡ | ಮಾಡದಾ ಜಲಬಾಣದೆನ್ನೀ |
ರೊಡಲನೆಚ್ಚದ ನಂದಿಸಿದನಾಕ್ಷಣದಿ ಕಲಿಕರ್ಣ || ೪೧ ||

ಪೂತು ಮಝು ಬಿಲ್ಲಾಳಹುದು ನನ | ಗೀ ತೆರದ ಬಿಲುಜಾಣಿಕೆಯನಾ |
ಸೂತ ಕಲಿಸಿದನೋ ಅರಿಯದಂಬಿಗರು ಮೇಣ್ ನೀನು ||
ಖ್ಯಾತ ಬಾಹುಜವಂಶದೊಳು ಸಂ | ಭೂತನಲ್ಲ ದೊಡೇನು ಕುರುಪತಿ |
ಯೋತು ಸಲಹಿದ ಕೈಯ ತೋರಿದೆಯೆಂದನಾ ಪಾರ್ಥ || ೪೨ ||

ಧುರದೊಳಿರಿಯದೆ ಪಳಿವರೆ ಹುಲು | ನರನ ನಿಮ್ಮಣ್ಣಂದಿರಿಗೆ ನಾ |
ಲ್ವರಳಧಿಕವೈ ಕುಲದೊಳಾಂ ನಿನಗೇಕಹಂಕಾರ ||
ಅರಸನಾಜ್ಞೆಗೆ ಬೆದರಿ ದೇಶಾಂ | ತರವ ಹೋಹಂದಿಲ್ಲವೇ ನೀ
ಕುರುಪತಿಯ ಬ[ಡಿ] ಹೋರಿನುಡಿಯದಿರೆಂದನಾ ಕರ್ಣ || ೪೩ ||

ಲೇಸನಾಡಿದೆ ಕರ್ಣ ನಿಮ್ಮವ | ಗೋಸರಿಸಿ ನಾವತ್ತಲಾ ವನ |
ವಾಸದೊಳಗಿಹ ಕಾಲದಲಿ ಕಡುವೈಭವದಿ ಬಂದು ||
ಆ ಸುಯೋಧನ ವೀರರನು ಕ | ಟ್ಟಾಸುರದ ಗಂಧರ್ವ ಕೊಂಡೊ |
ಯ್ವಾ ಸಮಯದೊಳಗಿಲ್ಲವಲೆ ನೀವೆಂದನಾಪಾರ್ಥ || ೪೪ ||

ಬಲ್ಲಿದನು ನೀನಹುದು ಕಂಡೆನು | ಬಿಲ್ಲ ಹಬ್ಬದಲೊರ್ಮೆ ನಿಮ್ಮವ |
ರೆಲ್ಲರುಂ ಬಳಿಕಿರಿಯ ಬಂದೆದೆಗೆಟ್ಟು ಹಾಯಾಗ ||
ಬಿಲ್ಲನೀ ಹಿಡಿದಿದ್ದೆಯೋ ಮೇ | ಣಿಲ್ಲವೋ ಹೇಳೆನಲು ರಿಪುಗಜ |
ಮಲ್ಲನಾಗಳು ಕಾಯ್ದು ಸುರಪನ ಸೂನುಗಿಂತೆಂದ || ೪೫ ||

ಸೂಜಿಕಲು ಸೂಜಿಯೆನೆ ಹಿಡಿವುದು | ಸಾಜವದರಿಂದೇನು ಮತ್ತಾ |
ಸೂಜಿಕಲು ಮೇಣ್ ಪರುವಹುದೇ ಸೂಜಿಹೊನ್ನಹುದೆ ||

ಸೂಜಿಹೊನ್ನವದಾದಡೇನಧಿ | ರಾಜಲಕ್ಷ್ಮಿಯ ಬೆಲೆಯೆ ಹಳಿವಿ |
ಲ್ಲಾಜಿಯೆಕೆ ನೀನಾದದಧಟನೆಯೆಂದನಾ ಕರ್ಣ || ೪೬ ||

ಕಳಿಲೆವಿಲ್ಲಾ ದೇಶದಲಿ ನಿನ | ಗೆಳಸಿ ಕೈಸಾರಿದಡೆವೋರ್ವಳು
ಕೊಳಕಿ ಮಾಲೆಯ ಸೂಡಿದಡೆ ನಿನಗಾಯ್ತೆ ಗಂಡಗುಣ ||
ಮುಳಿದು ನಮ್ಮವರಿರಿದರಾದೊಡೆ | ಉಳಿಯ ಬಲ್ಲುದೆ ನಿಮ್ಮ ತಲೆ ಮದ |
ವಳಿಗನೆಂದುಳುಹಿದರೆ ನೀವೀ ಜೀವಿಸುವೆಯೆಂದ || ೪೭ ||

ಬರಿಯ ಜರುಜಾಟದಲಿ ಫಲವೇ | ನರಿಯ ಬಹುದೀಕ್ಷಣವೆ ನಿನ್ನದೆ |
ಮುರಿಯ ಹೂಳುವೆನೊಡ್ಡೆನುತ ಗಿರಿಶರವ ತೊಟ್ಟೆಸಲು ||
ಬರಸಿಡಿಯ ಬಲ್ಲುಲಿಯೊ ನಭಭೊ | ಬ್ಬಿರಿದುದೋಯೆನೆ ಧ್ವನಿಸಿ ಪಕ್ಕರೊ |
ಹರಿದು ಬಿದ್ದವೊ ಪರ್ವತಗಳೆನೆ ಕೆಡೆಯವೆಡೆಬಿಡದೆ || ೪೮ ||

ಪ್ರಳಯದುರು ಮುಗಿಲಾಲಿ ಕಲುಗಳ | ಪಳಪಳನೆ ಕರೆದಂತೆ ಕರೆದಡೆ |
ಇಳೆನಡುಗಿ ಫಣಿಲೋಕ ಬೆದರಿತು ಪಾಂಡವರು ಕಂಡು ||
ತಳಮಳಲುಗೊಳೆ ಕೌರವಗೆ ಹೆ | ಕ್ಕಳವು ಮೇಳಿಸೆ ಹೂಳಿದವು ಗಜ |
ಕುಲರಥಾಶ್ವ ಸಪದಾತಿಯನು ನಗಮಯವದಾಯ್ತವನಿ || ೪೯ ||

ಅರರೆ ಪಾರ್ಥನದೇಂ ಪ್ರಚಂಡನೊ | ಭರದಿ ವಜ್ರಾಸ್ತ್ರವನೆಸಲು ಭೀ
ಕರದ ಬಡಿಯಿಂದಪ್ಪಳಿಸೆ ಘಟಕೋಟಿಯೊಡೆದಂತೆ ||
ಸಿರಿಗಳವು ಧೂಳಾದವಾ ನಿ | ಷ್ಠುರ ಶರಕ್ಕಗಿದಬುಧಿಯೊಳು ಕುಲ |
ಗಿರಿಗಳಂದಿಂದಡಗಿ ಬದುಕಿದವಿಂದು ಪರಿಯಂತ || ೫೦ ||

ಗಿರಿಶರವು ಕೌರವನ ಗರ್ವದ | ಗಿರಿಯೊಡನೆ ಚೂರ್ಣಿಸಲು ತೊಟ್ಟನು |
ತರಣಿಸುತನಭಿಮಂತ್ರಿಸಿಯೆ ಪೇರುರಗಬಾಣವನು ||
ಕರಿಮುಗಿಲ ಪಟಲಗಳವೊಲು ಭೀ | ಕರದ ಪೆಡೆಕೋಟಿಯ ತಳೆದು ಪೂ |
ತ್ಕರಿಸೆವುರ್ವಿತು ವಿಷದ ಕರ್ಬೊಗೆ ನಿಖಿಳದೆಸೆಗಳನು || ೫೧ ||

ಎಚ್ಚನಾಗಳದೇನೆ ಹೇಳುವೆ | ಕೆಚ್ಚನುಗುಳುತ ಪ್ರಳಯದುಳುಕೆನೆ |
ಚಚ್ಚರದಿ ಭುಗ್ಗೆನುತ ಬಂದವು ರಸನೆಗಳ ಕುಣಿಸಿ ||
ಪೆಚ್ಚಿದರಿ ಕಟಕವನು ಮುಸುಕಿತು | ಮೂರ್ಛಿಸಿದರರೆಬರು ಸುರರು ಕಡು |
ಬೆಚ್ಚಿದರು ತಲ್ಲಣಿಸಿದರು ಕಕುಭಾದಿ ನಾಯಕರು || ೫೨ ||

ಗರುಡಪಂಚಾಕ್ಷರಿಯ ಜಪಿಸಿದ | ರರೆಬರಾಗಳು ಘೋರಪಂಚಾ |
ಕ್ಷರಿಯನೆದೆಯೊಳು ತಳೆದರೀ ಪಾಂಡವರು ಫಣಿಶಯನ ||

ಉರಗಶಯ್ಯೆಯ ನೂರು ಮಡಿ ಭೀ | ಕರವಿದೆಂದಳವಳಿಯೆ ಕೊಂದುದು |
ನರನನೆಂದಹಿಕೇತನನು ನಿಜಭುಜವನೊದರಿಸಿದ || ೫೩ ||

ಅದರ ವೈಕುರ್ವಣವನೀಕ್ಷಿಸಿ | ಕದನ ಚಾಪಟಮಲ್ಲಮರೆ ಹೂ |
ಡಿದನು ಗರುಡಾಸ್ತ್ರವನಮಮ ತುಂಡವನು ನೆರೆತೆರೆದು ||
ಕೆದರಿ ಜೋಡಿಸಿ ಪಕ್ಕವನು ಕಿಡಿ | ಯುದುರುತಿರೆ ಕಿಸುಗಂಗಳಲಿ ನೋ |
ಡಿದುದು ಖಗಪತಿಯುಡುಗಿದುದು ಪಡೆಗಳನು || ೫೪ ||

ಎಚ್ಚೊಡಾ ಕಾಂತೆಯನದು ಮೈ | ವೆರ್ಚಿ ಪರಿದಡೆಗಟ್ಟಿದುದು ಬಗೆ |
ಬೆರ್ಚಿಯೋಡುವ ಸರ್ಪಬಾಣದ ಕೋಟಿ ಹೆಡೆಗಳನು ||
ಕಚ್ಚಿದುದು ಕೊಚ್ಚಿದುದು ನಖದಲಿ | ಚುಚ್ಚಿದುದಮರ್ಚಿದುದು ಸತ್ತ್ವ ವ |
ನುಚ್ಚಿದುದು ನಿಮಿಷದಲಿ ತಿಂದುದು ಗರುಡ ಸಾಯಕವು || ೫೫ ||

ಅಳಿದುದಾ ಕಾಂತೇಯರೆದೆ ಉ | ಮ್ಮಳವು ಕೌರವನಾಂತ ಬಲು ಹೆ |
ಕ್ಕಳದೊಡನೆ ಬಾಯ್ಗಡಸಿದೆರೆದಪ್ಪಿನ ಫಣಿಯ ತೆರದಿ ||
ಅಳಲಿ ವಜ್ರಾಸ್ತ್ರವನೊಡನೆ ಸಂ | ಗಳಿಸಿ ಫಡಫಡ ಪಾರ್ಥ ನಿನ್ನನು |
ಉಳಿಯಲರಿಯದು ಕಾದುಕೊಳ್ಳೆಂದೆಚ್ಚನಾ ಕರ್ಣ || ೫೬ ||

ಭಾಳಲೋಚನನಿಷ್ಟು ಭೀಕರ | ಶೂಲವೋ ಕಲ್ಪಾಂತ ವಹ್ನಿ |
ಜ್ವಾಲೆಯೋ ಮೇಣರ್ಕನುಕ್ಕಿಂದಿಳಿವನೋಯೆನಲು ||
ಭೀಳ ಬಾಣವು ಬರಲು ಗೋಳಾ | ಗೂಳ ಕೇತನನೆಚ್ಚ ವಜ್ರ ವಿ |
ಶಾಲ ಬಾಣವು ಕಿಡಿಮಸಗೆ ಹಳಚಿದುದು ಮಧ್ಯದಲಿ || ೫೭ ||

ಉಳುಕುಗಳು ಹರಿತಂದು ತಮ್ಮೊಳು | ಹಳಚಿ ಕೆಡೆದಂದದಲಿ ಮಿರುಗುವ |
ಕುಲಿಶಶರಗಳು ತೊಡದು ಕೆಡೆದವು ನೋಟಕರು ಬೆದರೆ ||
ಅಳವು ಕೌಂತೇಯರಿಗೆ ಭುಜಬಲ | ದಳಿವು ಕುರುಪತಿಗಾಯ್ತು ಕಾದುವ |
ಕಲಿಗಳಿನ್ನಾರೆಂದು ಮನದಲಿ ಮರುಗಿದನು ಕರ್ಣ || ೫೮ ||

ವಿಷಮ ಭಾರತ ಮಲ್ಲನಾಗಳು | ಮಸಗಿ ದೇವತೆಯಂದುಕೊಟ್ಟ |
ವಿಸವುರಿಯ ಬಾಣವನು ಡೊಣೆಯಿಂದುಗಿದು ತೊಡಲೊಡನೆ ||
ವಿಸದಿಯನು ಕುಡಿದುದು ದಿನೇಶನ | ಹೊಸದುದಾಶಾಧಿಪರ ಹುರಿದುದು |
ವಸುಧೆಯನು ಬಿಸಿಮಾಡಿದುದು ಬೆದರಿಸಿತು ಮೂಜಗವ || ೫೯ ||

ಇದು ಜಗವು ಭುಂಬುಕವಿಮೂಘವು | ವಿದರ ಮುಂದೆತ್ತಾನು ಮಾಂತೊಡೆ |
ಮದನ ಹರನನು ಭಸ್ಮವನು ಮಾಡುವುದು ನಿಮಿಷದಲಿ ||

ಇದನು ತೊಟ್ಟೆಸೆ ನರನಳಿವ ನಾ | ಡಿದೆನು ಜನನಿಗೆ ಬೇಡಿಕೊಂಡೊಡೆ |
ಅದನೆ ಪಾಲಿಪೆನೆಂದು ಮನದಲಿ ನೆನೆದನಾಕರ್ಣ || ೭೦ ||

ತೊಟ್ಟ ಬಾಣವನಾಗ ಶರಧಿಯೊ | ಳಿಟ್ಟನಾ ಕಾನೀಯನಲ್ಲವೆ |
ಸೃಷ್ಟಿ ತಲೆಕೆಳಗಾದಡಂ ಸತ್ಪುರುಷರಾದವರು ||
ಕೊಟ್ಟ ಭಾಷೆಗೆ ತಪ್ಪುವರೆ ನೆರೆ | ತೊಟ್ಟಿಡುವ ಕಂಬನಿಗಳಿಂ ಹಾ |
ಯ್ಕೆಟ್ಟನಕಟಾರಾಯನೆಂದನು ತನ್ನ ಮನದೊಳಗೆ || ೭೧ ||

ಲೇಸಮಾಡಿದೆ ಕರ್ಣ ಕೌರವ | ನೀಸು ದಿನ ನೆರೆ ನಚ್ಚಿ ನಿನ್ನನೆ |
ಮೀಸಲಾಗಿಯೆ ಸಲಹಿದಡೆ ನೃಪನಾನೆಯೆಲ್ಲವನು ||
ಸೂಸಿದೆಯಲಾ ಪಾಂಡವರುಗಳ | ನೀ ಸಮಯದಲಿ ತಿಂದು ಬಹೆನೆಂ |
ದಾಶರವೆ ಹೇಳುವವೊಲದೆ ಕೇಳೆಂದನಾ ಶಲ್ಯ || ೭೨ ||

ತೊಡುತೊಡಿನ್ನೊಮ್ಮೆ ಮಹಾಸ್ತ್ರವ | ತೊಡುವದೀಗಳೆ ಪಾಂಡವರ ಕುಲ |
ವೊಡೆದುಗಾಗಿಸು ಹರುಬವನು ಜಯಸಿರಿಯ ಮುಂದಲೆಯ ||
ಹಿಡಿದು ತಂದೀವಿರಿವೆರಡು ಗುಣ | ಕೊಡೆಯನಾಗೈ ಕರ್ಣ ರಾಯನ |
ಕೆಡಿಸದಿರು ನೆನೆ ಜೋಳವಾಳಿಯನೆಂದನಾ ಶಲ್ಯ || ೭೩ ||

ಉಗುರಿನಲಿ ಹೋಹುದಕೆ ಕೊಡಲಿಯ | ನೆಗೆಯಬೇಕೇ ಶಲ್ಯ ಬಿಡು ಹುಲು |
ಹಗೆಯ ಗೆಲುವುದೆ ಕೆಡಿಸುವೆನೆ ಈ ದಿವ್ಯ ಸಾಯಕವ ||
ಸುಗುಡಗಡನೀ ರಥವ ಜೋಡಿಪ | ಬಗೆಯ ತೋರಿದೊಡರ್ಜುನನತಲೆ |
ಸಿಗಿಯಲೆಸುವೆನು ನಿಮಿಷದಲಿ ನೋಡೆಂದನಾಕರ್ಣ || ೭೪ ||

ಆದೊಡದೆ ನೋಡೆನುತ ರಥವನು | ಜೋಡಿಸಿದನಾ ಶಲ್ಯ ಕೃತವಿ |
ದ್ಯೋದಯದಿ ಪಾರ್ಥನನು ಬಳಸಿತು ಬೀಸುಗೊಳ್ಳಿವೊಲು ||
ಆ ದಿನೇಶಾತ್ಮಜಮಯವು ರಣ | ವಾದುದೆತ್ತಲು ಸರಳಮಳೆಯಲಿ |
ನಾದುದಂದರ್ಜುನನ ತನು ಭೂಪಾಲ ಕೇಳೆಂದ || ೭೫ ||

ಸರಳುಗಳು ಕೃಷ್ಣನ ತನುವನೊಂ | ದೆರಡು ಮಸೆದೋರಿದವು ಸಿತಮಯ |
ತುರಗಗಳನೊಂದೆರಡು ಕಣೆಗಲು ಭೇದಿಸಿದವೊಡನೆ ||
ಪಿರಿಯ ಕಪಿಯನು ಚುಂಬಿಸಿದವೊಂ | ದೆರಡು ಕೋಲ್ಗಳು ಚೋದಿಸುವಯೆಸು |
ವುರವಣೆಗೆ ಶಲ್ಯನನು ಪೊಗಳಿದರಾಗಸದಿಸುರರು || ೭೬ ||

ಎಲ್ಲಿ ಕಲಿತನು ಕರ್ಣನೀ ಕಡು | ಬಲ್ಲಿತಹ ಬಹುರೂಪಿಣಿಯನೀ |
ಬಲ್ಲಡುಸುರೆನೆ ಪಾರ್ಥತಿಳಿ ಬಹುರೂಪಿನಿಯಿದಲ್ಲ ||

ಶಲ್ಯ ಕೌಶಲ್ಯವು ಕಣಾ ಜಗ | ದಲ್ಲಣನೆ ಪೇಳುವೆನು ಭಾರತ |
ಮಲ್ಲನನು ಗೆಲುವೊಂದುಪಾಯವನೆಂದನಾ ಕೃಷ್ಣ || ೬೭ ||

ಮೊದಲು ಶಲ್ಯನನಿಕ್ಕು ಬಲ್ಲಂ | ದದಲಿ ಬಳಿಕಾ ಕರ್ಣನೊಳು ಕಾ |
ದಧಟಿನಿಂದಿನೆ ಸೂತ್ರವನು ಮಿಡಿದಂತೆ ಕಲಿಪಾರ್ಥ ||
ಹೊದೆಯಲುಗಿದೊಂದಂಬ ಕೈಚಳ | ಕದಲೆಸಲು ಶಲ್ಯನ ತಲೆಯು |
ರಿದುದು ನಿಂದುದು ಬಳಿಕ ಕಾನೀಯನ ಮಹಾರಥವು || ೬೮ ||

ಭುವನವಿಜಯನು ಪಾರ್ಥನಾ ಗಾಂ | ಡಿವವ ಹಿಡಿದಡೆ ಕಾಲನಾದಂ |
ಡವನು ತಳೆದೊಡೆ ರಥದ ಚಕ್ರಕೆ ಕೈಯನೀಡಿದಡೆ ||
ಪವನಜನು ಗದೆಗೊಂಡಡಿಂದ್ರನು | ಪವಿಯನಾಂತೊಡೆ ನಗಧರನು ಶಾಂ |
ರ್ಙವ ತುಡುಕಿದಡೆ ನಿಲುವಸುಭಟನದಾರೊ ಧುರದೊಳಗೆ || ೬೯ ||

ನಿಂದು ಕಾದುತ್ತಿರ್ವರಿರೆ ಬಳಿ | ಕೊಂದು ತೆರಪರಿದರ್ಜುನನು ಭೋ |
ರೆಂದೆಸಲು ಹೇಮಾದ್ರಿಯಗ್ರದ ಶೋಣಮಣಿಶಿಖರ ||
ಅಂದದೇಂ ಕೆಡದುದೊಯೆನಲು ಝು | ಲ್ಲೆಂದು ಕಿಡಿಕೆಂಡಗಳು ಚೆಲ್ಲುತ |
ಬಂದುಬಿಟ್ಟುದು ಮಣಿಮಕುಟವಂಗಾಧಿನಾಯಕರು || ೭೦ ||

ಕದನ ಚೌಪಟಮಲ್ಲನೊತ್ತಿನ | ಲೊದರಿದುದು ಜಯಶಂಕವಾತ್ಮಜ |
ಗೊದಗಿದುದು ಪರಿಭವವೆನಿಪ ಮನದಳಲಿ ನೀಂ ಕುಡಿದು ||
ಪದುಮಿನಿಯ ವಲ್ಲಭನು ನಿಸ್ತೇ | ಜದಲಿ ಮರೆಸಾರುವತೆರದಿ ಸಾ |
ರಿದನು ಪರ ಭೂಧರವನವನೀಪಾಲ ಕೇಳೆಂದಾ || ೭೧ ||

|| ಅಂತು ಸಂಧಿ ೫೪ಕ್ಕಂ ಮಂಗಲಮಹಾ ||

## ಯುದ್ಧ ಪರ್ವ (ಸಂಧಿ ೫೫)

**ಸಂಧಿ ೫೫**

ಕುರುಪತಿಯನಾ ಭೀಮಸೇನನು | ವರಗದಾಯುದ್ಧದಲಿ ಗೆಲಿದನು |
ಭರದಿ ವೈಶಂಪಾಯನಾಖ್ಯ ಸರೋವರದ ಹೊರಗೆ || ಪದ ||

ಕೇಳು ಶ್ರೇಣಿಕ ಮಂಡಲೇಶ್ವರ | ಕಾಳಗವು ತೆಗೆದವರು ತಂತ |
ಮ್ಮಾಲಯಂಗಳ ಪೊಗಲು ಕರ್ಣನ ಮನದ ತೆರಪಿನಲಿ ||

ಮೇಳಿನಿತು ವೈರಾಗ್ಯಮಕುಟವು | ಶೂಲಪಾಣಿಗೆ ಬಾಗದುದರಣ |
ಕೇಳಿಯಲಿ ಹುಡಿಯಾಗೆ ಕೆಡೆದುದು ಸುಡುಬದುಕನೆಂದ || ೧ ||

ಮಾನಭಂಗವ ತಾಳ ಬಲ್ಲನೆ | ಮಾನಿಯುಪಶಾಂತತೆಯ ತಳೆದಾ |
ಭಾನಸೂನು ಸುದರ್ಶನೋದ್ಯಾನವನು ಹೊಕ್ಕಲ್ಲಿ ||
ತಾನು ದಮವರಸಾಗ ರಾಜ್ಯಮ | ಹಾನುಭಾವರ ಕೈಯೊಳೆರೆದು ಮ |
ಹೀ ನುತಾಶಾಂಬರತೆಯನು ಕೈಕೊಂಡು ವರ್ತಿಸಿದ || ೨ ||

ನಡೆದು ಜಿನತಪದಿಂದ ಸಗ್ಗವ | ಪಡೆದನಾ ಕಲಿಕರ್ಣನದರಿಂ |
ನಡೆವುತದೆ ಜನವರಿಯೆ ಕರ್ಣಸ್ಥಳಿಯೆನಿಪ ತೀರ್ಥ ||
ಪೊಡವಿಪತಿಯಾತನ ವಿಯೋಗದಿ | ಕಡು ದುಗುಡವನೆ ತಳೆದು ತನ್ನೆದೆ |
ಯೊಡೆದೊರಗದಾ ಬೆಳಗು ಜಾವದೊಳರಸ ಕೇಳೆಂದ || ೩ ||

ವರಕೃಪಾಚಾರ್ಯರು ನಿರೂಪಿಸಿ | ದುರುತರರದ ಮಂತ್ರವನು ತಳೆದೀ |
ರ್ವರುನೊಡನೆ ನಡೆತಂದು ವೈಶಂಪಾಯನನೆನಿಪ್ಪ ||
ಸರಸಿಯನು ಮತ್ತಾರುಮರಿಯದ | ತೆರದಿ ಹೊರಹಜ್ಜೆಯಲಿ ಹೊಕ್ಕನು |
ಕುರುನೃಪತಿ ಬಹುರೂಪಿಣಿಯ ಸಂಧಿಸುವ ಭರವಸದಿ || ೪ ||

ಮರುಳಲಾ ಕುರುರಾಯ ನೀನೀ | ಸರಸಿಯನು ಪೊಗಬೇಡ ಕೇಳೈ |
ಮರುತಸುತ ನೀನೆಲ್ಲಿ ಪೊಕ್ಕೊಡೆ ನಿನ್ನನುಳುಹುವನೆ ||
ತಿರುಗಿ ಹೋಗೆಂದುಲಿವವೊಲು ಮಧು | ಕರನಿಕರ ಬಳ ವಿಹಗವುಲಿದವು |
ಧರೆಯೊಳಾರೊಳಕೊಂಬರೈ ದುರ್ನಯ ವಿದಗ್ಧರನು || ೫ ||

ಕುರುನೃಪತಿ ಜಪಗೈವುತಲ್ಲಿರೆ | ತರಣಿ ಮೂಡಿದವನಿತರೊಳು ಬಂ |
ದರಸನನು ಕಾಣದೆ ಕೃಪಾಶ್ವತ್ಥಾಮ ಮೊದಲಾದ ||
ಭರದನಾಯಕರೆಂದಿನಂದದಿ | ಧುರಧರೆಗೆ ಬಂದೊಡ್ಡಿನಿಲೆ ಸಂ |
ಗರದೊಳಗೆ ಕೌರವನ ಕಾಣದೆ ಪಾಂಡುನಂದನರು || ೬ ||

ದೊರೆಗಳನು ಪರಿವಾರವನು ಬಲು | ಧುರವ ಮಾಡಲು ವೇಳ್ದರಾಗಳು |
ಮರುತಿ ಮಾಮಸಕದಲಿ ಹಗೆ ಮೇಣೆಲ್ಲಿಯಡಗಿದರೆ ||
ಅರಸಿ ತಂದುಸುಗೊಂಬೆನೆಂದ | ಬ್ಬರಿಸಿ ನೆಡೆಗೊಳೆ ಭೀಮನೊಡನೆಯೆ |
ಪರಿದರೀ ನಾಲ್ವರು ಹೊರಗೆ ಭೂಪಾಲ ಕೇಳೆಂದ || ೭ ||

ಅರಿದರೆತ್ತಾನುಂ ನೃಪಾಲನ | ತೆರನನುರು ವಾದ್ಯಗಳ ಹೊಯಿಸುತ |
ಕೆರೆಯ ಬಳಸಿದರಾನೆಯಿಟ್ಟವುಡಲದ ಮರೆಹೊಗುವ ||

ತೆರದಿನೆಮ್ಮಣ್ಣನ ಧರಿತ್ರಿಯ | ಸೆರೆವಿಡಿದು ನೀಂ ಕೆರೆಯ ಹೊಕ್ಕಡೆ |
ಮುರಿಯದಿಹೆನೇ ನಿನ್ನ ಗಂಟಲನೆಂದನಾ ಭೀಮ || ೮ ||

ಕುರು ನೃಪಾಲಕ ಬೇಗ ಪೊರಮಡು | ಭರದಿ ಭಾರಿಯ ಗದೆಯ ಹಿಡಿಹಿಡಿ |
ಧರೆ ನಗದೆ ನಿನ್ನೊಂದು ಬೀರದ ಚಲದಹಂಕೃತಿಯ ||
ಉರಿವ ಚಂಡ ಭುಜ ಪ್ರತಾಪ | ಸ್ಫುರಿತ ವಹ್ನಿಯನಿಂದು ನೀರಲಿ |
ನೆರೆಹಿದೆಯೊ ನೀರಿಳೆದೆಯೋ ಹೇಳೆಂದನಾ ಭೀಮ || ೯ ||

ಮುಳಿದು ಬಂದೊಡೆ ಕೊಲುವೆ ಕೈದುವ | ನಿಳುಹಿ ಬಂದೊಡೆ ಕಾವೆನಗ್ರಜ |
ನಿಳೆಯ ನಿತ್ತಪೆನೆಂದೊಡಗ್ರಜನೆಂದು ವಂದಿಸುವೆ ||
ತಳೆದವೈ ಜಿನದೀಕ್ಷೆಯುಮನೆನ | ಲೊಲಿದು ಬಂದು ನಮೋಸ್ತು ಮಾಡುವೆ |
ನುಳಿದ ಕಾರ್ಯವನರಿಯೆನಿವರೊಳಗೊಂದ ಹಿಡಿಯೆಂದ || ೧೦ ||

ಅಳಿದರನುಜಾತ್ಮಜರು ಸುಭಟರು | ಕಳಿದರೆಂಬೊಂದಳಲು ಮನದೊಳು |
ಮೊಳೆತ ಬಳಿಕೆದೆಗಲಿಗಳಾದವರೆಯ್ದೆ ರಣದೊಳಗೆ ||
ಅಳಿಕದಿರಿದಾಡುವುದೆ ಅರಮ | ಕ್ಕಳಿಗೆ ಧರ್ಮವಿದಲ್ಲದಕಟಾ |
ಮುಳಿದ ಚೇಟಿಯ ತೆರದಿ ಬೀಳ್ವುದೆ ನೀರ ನೀನೆಂದ || ೧೧ ||

ಲಲನೆಯರ ಮೇಳದಲಿ ಹೋಗುವುದು | ಕೊಳನನಲ್ಲವೆ ವೀರಲಕ್ಷ್ಮಿಯ |
ಮೊಲೆಯ ಬೇಗೆಯ ಬಿಡದೆ ಖಡ್ಗಾಂಗನೆಯ ಕೈವಿಡಿದು ||
ಕಳಗೊಳನ ಪೋಗುವುದು ಯಿದರಮ | ಕ್ಕಳ ವಿನೋದ ಕ್ರೀಡೆಯಲ್ಲದೆ |
ಜಲಚರದವೊಲು ನೀರೊಳೇಂ ಪೊರಮಡು ತಡೆಯದೆಂದ || ೧೨ ||

ಸಿರಿಕೆಡುವ ಕಾಲದಲಿ ಧೈರ್ಯದ | ಗಿರಿಗೆ ಪಕ್ಕವು ಬಹುದಲಾ ಕಾ |
ಪುರುಷರಿಗೆ ಚಲವಲೆದು ಜಾಣುಮೆಗೂಣೆಯವು ಬಂದು ||
ಬಿರಿದು ಬಿರಿದಳವಳಿದು ಕೀರಿತಿ | ಸಿರಿಯ ಮೈಸಿರಿ ಕಂದುವುದು ನೀ |
ಕುರುಕುಲಾಗ್ರಣಿ ನಿನಗೆ ಗುಣವಿದೆ ಎಂದನಾ ಭೀಮ || ೧೩ ||

ಮಡವಿನೊಳಗಣ ಕೃಷ್ಣ ಸರ್ಪನ | ಹಿಡಿದು ಕೃಷ್ಣನು ಕೊಂದವೊಲು ಕ |
ಮ್ಮಡುವ ಹೊಕ್ಕಹಿಕೇತನನ ಹಿಡಿತಂದು ತಡಿಯಲ್ಲಿ ||
ಬಡಿದು ಕೊಲುವೆನೆನುತ್ತ ಮಾರುತಿ | ಯಡಿಯಿಡುವ ಸಮಯದಲಿ ಪಾಂಡವ |
ರೊಡೆಯ ಕಂಡೆನ್ನಾಣೆ ನಿಲು ನೀನಿಳಿಯ ಬೇಡೆಂದ || ೧೪ ||

ಎನಲು ನಡನಡ ನಡುಗಿದನು ಭೀ | ಮನು ತಿಳಿದು ಕೇಳನುಜ ಕ್ಷತ್ರಿಯ |
ತನುಜರಿಗೆ ನೀರ್ವೊಕ್ಕ ಪುತ್ತೇರಿದ ಮರನನಡರ್ದ ||

ಅನುವರದಲೆರಗಿನ ನಿಜಾಯುಧ | ವನು ಬಿಸುಟ ಪಲುಗರ್ಚಿದೆಳೆ ಶಿಶು |
ವೆನಲು ಬೆರಳನು ಕಚ್ಚಿದನಿಬರವಧ್ಯರವರೆಂದ || ೧೫ ||

ಎನಲು ಜೀಯ ಹಸಾದ ದೇವರು | ಸುನಯವನು ಚಿತ್ತೈಸದಿರಿಯೆಂ |
ದನಿತು ಪರಿಯಲಿ ಜರೆದು ಕರೆದಡೆ ಕೊಳನ ಪೊರಮಡದೆ ||
ಜನಪನಲ್ಲಿರೆ ಸಿಂಹನಾದವ | ನನಿಲಜನು ಮಾಡಿದೊಡೆ ನೀರ್ಗಿ |
ಚ್ಚೆನಿಸಿ ನೀರೊಳಗುರಿದುದಾತನ ಕೋಪ ಶಿಖಿ ಭರದಿ || ೧೬ ||

ಮಿಗೆ ಮಸಗಿ ಫಣಿಪತಿಯೆ ರಸೆಯಿಂ | ನೆಗೆದನೋ ಎನೆ ಪೂಗೊಳದಿ ತಾಂ |
ನೆಗೆದು ಬಂದನು ಮಕುಟಮಣಿಗಣಕಿರಣ ಪೆಣೆದಣೆಯೆ ||
ಹೆಗಲ ಮೇಗಣ ಗದೆಪಿಡಿದು ತಿ |ರ್ಗಿ ತಿರುಹುತಕ್ಷಿದ್ವಯದಿ ಕಿಡಿ |
ಯೊಗುತ ಬಂದನು ಗರ್ಜಿಸುತ ಕಲಿ ಕೌರವೇಶ್ವರನು || ೧೭ ||

ಹರೆಯ ಹೊಯ್ದಡೆ ಬಾಯ್ಗೆ ಬಂದುದ | ಜರುಚೆದಡೆ ನಾಂ ಸರಕು ಮಾಡೆನು |
ಮರುತಸುತನಾ ಸಿಂಹನಾದಕೆ ನನ್ನ ಕೋಪಾಗ್ನಿ ||
ಮರಯಿಸಿತು ಮಂತ್ರವನು ಕೇಳಿರೆ | ವರಕೃಪಾಚಾರ್ಯನೆ ಬಿಡಿಂ ನೀ |
ತೆರನನೇನ್ಯೆ ಭೀಮ ನಿನಗೇಂ ಬೇಕು ಹೇಳೆಂದ || ೧೮ ||

ನೆಲನ ಮುನ್ನವೆ ಕೊಂಡು ಗದೆಪಿಡಿ | ದೊಲೆವುತಿಹ ಕಲಿಭೀಮನೆಂದನು |
ಜಲಚರಂಬೊಲು ಜಲವ ಹೊಕ್ಕೊಡೆ ಧರ್ಮನಂದನನು ||
ನೆಲನ ಬಿಡುವೆನೆ ಕೆಮ್ಮನೊಪ್ಪಿಸು | ಕಲಹಬೇಕೇ ಕಾದೆನಲು ನಿನ |
ಗಳುರಿ ನುಂಗಿದ ಚಲವನುಗುಳುವನಲ್ಲ ತಾನೆಂದ || ೧೯ ||

ಎಂದೊಡಾಗಳು ಧರ್ಮಸುತ ಪರಿ | ತಂದೆರಗಿ ಎಲೆ ಕುರುಕುಲಾರ್ಣವ |
ಚಂದ್ರ ಸುಕ್ಷಮೆಯಿಂದ ಕೇಳಿನ್ನೊಂದು ಬಿನ್ನಹವ ||
ಬೆಂದ ರಾಜ್ಯವದೇಕೆ ನಿನ್ನವ | ನೆಂದೆ ಸಲಹೆಮ್ಮುವನು ರಾಜ್ಯವ |
ನಿಂದೆ ಬಿಟ್ಟೆನು ಹುಸಿದೆನಾದಡೆ ಪಾಂಡವಾಣೆಂದ || ೨೦ ||

ಎನಲು ಗಹಗಹನೆಂದು ನಕ್ಕನು | ತನುಜರನುಜರು ಮಡಿದು ನಿಮ್ಮೊಳು |
ಮನವೊಲಿದು ನಾ ನಡೆಯಬಲ್ಲೆನೆ ಮಾಣ್ಬುದೀ ಮಾತ ||
ಅನಿಲಜನೋ ಮೇಣ್ ನೀನೊ ನರನೋ | ಮೊನೆಗೆ ಮೇಣ್ ನೀವೈವರೋ ನಿ |
ಮ್ಮನುವಿಗಿದ್ದವೊಲಾಗಿಯೆಂದನು ಮುನಿದು ಕುರುರಾಯ || ೨೧ ||

ಖಡುಗವನು ಕೊಳು ನೀನು ಗದೆಯನು | ಹಿಡಿಯಲಾತನು ಗಾಂಡಿವಕೆ ಕೈ |
ಗೊಡಲಿವನು ಕೊಂತಗಳನಾಂತವರಧಟಿನಿಂ ಬರಲಿ ||

ಹಿಡಿದುದೆನಗೀಯೊಂದೆ ಗದೆಯಲಿ | ಬಡಿದು ಕೆಡಹುದ ಪಕ್ಕಿವಿಂಡನು |
ಗಿಡುಗನೊಂದೆಂದದಲಿ ಮಾಡುವೆನೆಂದು ತರಿಸಂದ || ೧೧ ||

ಅರಸನಿಂತಾಡಲು ಕೃಪಾಚಾ | ರ್ಯರು ಯುಧಿಷ್ಠಿರರಾಯಡೊಂಬಿಯ |
ಧುರವಿದೇತಕೆ ಧರ್ಮಗಾಳೆಗಕೋರ್ವರಿದಿರಾಗಿ ||
ನೆರೆದ ನೋಟಕರಂತೆ ಮಿಕ್ಕವ | ರಿರಿಯೆನಲು ಧರ್ಮಜನೊಡಂಬಡೆ |
ಕುರುಪತಿಯು ಮಾರುತಿಯುಮಭಿಮುಖವಾದರಾಕ್ಷಣಕೆ || ೧೩ ||

ಭರದಿ ಗದೆಗಳ ತಿರುಹಿ ಚಕ್ರವ | ತಿರುಹಿದಂದದಿ ತಿರುಹಿತಖಿಳೋ |
ರ್ವರೆ ನಭೋಂಗಣದಲ್ಲಿ ನೋಡುವರಕ್ಷಿ ಭವಣಿಯಲಿ ||
ತಿರುಗಿದುದು ಓರೋರ್ವರಡಿಯಿಡೆ | ಧರೆಯ ಪೊತ್ತಹಿತಪತಿಯ ಕೊರಳಂ |
ದೆರಡುಕಡೆಗೋಲಾಡಿದುದು ಭೂಮಾನವಿಡಿದಿರಲು || ೧೪ ||

ಮುಳಿದು ಬಂದಂತಕರದೀರ್ವರು | ಕಳನ ಪೊಕ್ಕರೊ ದಂಡವಿಡಿದೆನೆ |
ಕಲಿಗಳೋರೋರ್ವರನು ಕಂಣಲಿನುಂಗುವಂದದಲಿ ||
ಅಳುರೆ ನೋಡೆಯುಧಿಷ್ಠಿರನ ಕ | ಣ್ಗಳಲಿ ಹೊಳೆಯನು ತಹೆನು ವಜ್ರದ |
ಮಳೆಯ ತಾಳುವಕೊಡೆಯದಾವುದು ಭೀಮ ಹೇಳೆಂದ || ೧೫ ||

ಅರಿಯ ಬಹುದಿಂತಡವೆ ಕುರುಕುಲ | ದೆರೆಯ ತೋರೈ ನಿನ್ನ ಒಲುಮೆಯ |
ನರಿಯದವರೇ ಕಂಡೆವಲೆ ಲಾಕ್ಷಾಗೃಹದಲೊರ್ಮೆ ||
ಮುರಿದೆ ನಮ್ಮೆಲ್ಲರನು ಶಕುನಿಯ | ಮರೆಯ ಢಾಳದಲೊರ್ಮೆ ನೀ ಕೈ |
ಮೆರೆದೆ ನಿನ್ನವೊಲಧಟರಿನ್ನಾರೆಂದನಾ ಭೀಮ || ೧೬ ||

ಕಾಲಜನ ಕಂಣೆನಿಪ ರಾಯನ | ಕೋಲು ತೆಗೆದಂ ಕವಿದು ಕೈಮಾ |
ಡಾಳುತನವನು ತೋರನಲು ಕಡುಮಸಗಿ ಬಲುಗದೆಯ |
ಚಾಳೆಯದಿ ಢಾಳಿಸುತ ಹಾವಿನ | ನಾಲಗೆಯವೊಲು ಮೊನೆಯೊಲೆದು ಮಿಗೆ |
ಮೇಲುವಾಯ್ದಪ್ಪಳಿಸಿದನು ಖಾತಿಯಲಿ ಕುರುರಾಯ || ೧೭ ||

ಹೊಯ್ಯಲಾ ಘಾಯವನು ಮಾರುತಿ | ಮೈಯ ವಂಚನೆಯಿಂದ ತೆಗೆದರೆ |
ಗೈಯ ತೋರಿದೆ ಕಾದುಕೊಳ್ಳೆಂದೆತ್ತಿ ಮಾರ್ಪೊಡೆಯೆ ||
ಒಯ್ಯನಂಗನ್ಯಾಸದಲಿ ಹೊರ | ಕೈಯ ಮಾಡಿದನರಸು ಮಝು ಭಾ |
ಪ್ಪಯ್ಯದೇಂ ಸಾಧಕರೊಯೆಂದುದು ನೋಟಕರ ನೆರವಿ || ೧೮ ||

ಮತ್ತೆ ಬಲಹಜ್ಜೆಯಲಿ ಗದೆಗಳ | ತೆತ್ತ ಕೊಟ್ಟಣೆದಣೆದು ನೋಡಿದ |
ರೊತ್ತಿ ಬಲಿಕಾ ಮೈಯೊಳಗೆಗದೆಗಳನು ನೆರೆ ನೆಗೆದು ||

ಕಿತ್ತರಾ ಹೆಜ್ಜೆಗಳ ನೀರೊಳ | ಗೊತ್ತರಿಪ ಸಾಲಗನೆನಲು ಪದ |
ವೆತ್ತುದಣಿದರು ಪೂತು ಹೊಯ್‌ಹೊಯ್ಯೆಂದಬ್ಬರಿಸಿ || ೧೯ ||

ಮತ್ತೆ ಹೊಯ್ದನು ಹೊಯ್ದಡದನಡೆ | ಗೊತ್ತಿದನು ಕುರುರಾಯ ಗದೆಯಲಿ |
ಕುತ್ತಿದನು ಚಾಳಯದಿಡವರಿಸಿ ತೆಗೆದು ಕಲಿಭೀಮ ||
ಬಿತ್ತರದಿ ಬೀಸಿದನು ಬೀಸಿಗೆ | ತೆತ್ತ ಕೊಡದೆಡಹೆಜ್ಜೆಯಲಿ ಹೊರ |
ಗೊತ್ತಿದನು ಮಸೆಗಾಣಿಸುವುದರಿದಾದುದೀರ್ವರಿಗೆ || ೨೦ ||

ಗರುಡಿಯೊಳಗಣ ಪರಡಿಗಳ ಬಿ | ತ್ತರದ ಮೇಳದ ಹಿಡಿತವೆನೆ ನೋ |
ಳ್ಪರ ಬಗೆಗೆ ತೋರಿದರು ಬಳಿಕಹಿಕೇತನನು ಪೊಡೆಯೆ ||
ಬರಸಿಡಿಲ ಬಲ್ಲುಲಿಯೊಯೆನೆ ಭೋ | ರ್ಗರೆದು ಬರೆ ಮುಗಿಲುದ್ದನೆಸೆದದ |
ನೆರಚಿದನು ಕೌರವ್ಯ ಕಾಲಾನಳನು ನಿಮಿಷದಲಿ || ೨೧ ||

ಬಂದು ಜವನೆನೆ ಯೀವ ಹೊಯ್ದಡೆ | ದಂದಶೂಕ ಪತಾಕನಿಂದಧ |
ಟೆಂದ ಚೆಕ್ಕನೆ ಸಿಂಹಲಂಘನದಿಂದಲಾ ಗೆದ್ದು ||
ಮುಂದೆ ಗ್ರ್ಜಿ ಬಂದು ಪೊಯ್ದಡೆ | ಸಂದ ರುಧಿರೋದ್ಗಾರಿ ಗದೆಯಿಂ |
ನಂದಿಸಿದನದ ನಣೆದ ಕಿಡಿ ಪೂರಿಸಿತು ಗಗನವನು || ೨೧ ||

ಗಜೆಗಜೆಗಳಿಂದಣದ ದನಿಗಳು | ಗುಜರು ಮುಗಿಲಲಿ ಸಿಲುಕಿ ಈಗಳು |
ಗಜರುತಲೆಯೆನೆ ಪೊಯ್ಯೆ ತೆರಪರಿದಾ ಸುಯೋಧನನು ||
ಬಜೆಯ ಕಾರಿಪೆನಲ್ಲದೊಡೆಯಿದು | ಭುಜವೆಯೆನುತೆರಗಿದಡೆ ಧನು ಪವ |
ನಜನು ಬಾರಿಸಿ ಕಟ್ಟಿದೆಡೆ ಸೆಳೆದೀಕ್ಷಿಸಿದ ತೆರಪ || ೨೨ ||

ಇದು ಮದೀಯಾತ್ಮಜರ ಕೊಲೆಗಿದು | ಇದು ನಿಜಾನುಜರಳಿದುದಕ್ಕಿದು |
ಇದುವೆ ಬಹುರೂಪಿನಿಯ ಪಡೆವುದಕೆಡಿಸಿದುದಕೆಂದು ||
ಸದೆದನಾ ಪಿಂಗಾಕ್ಷನುರೆ ಪೆ | ಚ್ಚಿದ ತೊಡೆಗಳನು ನಡುವನುರೆ ಕೊ |
ಬ್ಬಿದ ಭುಜವನದ ಬಗೆದನೇ ಕಲಿ ಭೀಮನೆಡೆವಡೆದು || ೨೪ ||

ಇದುವೆ ಲಾಕ್ಷಾ ಗೇಹ ದಾಹ | ಕ್ಕಿದುವೆ ಕಪಟದ ಜೂದುಗೈತ |
ಕ್ಕಿದುವವಧಿಯನು ಸಲಿಸಿದೊಡಮಿಳೆಯೀಯದುದಕೆಂದು ||
ಮೊದಲು ಕುರುಪತಿ ಪೊಯ್ವುವೊಲು ಸ | ಮ್ಮದದಿ ತೊಡೆನಡುತೋಳುಗಳನಿರ |
ದೊದಗಿ ವೊಯ್ದನುಮನಿಸುಮರ್ಮವ ನೆಚ್ಚರಿಸದಿಹುದೆ || ೨೫ ||

ಆಯವರಿದಾ ಮತ್ತೆ ಕೌರವ | ರಾಯನಾ ಪವನಜನ ವಜ್ರ |
ಪ್ರಾಯವಹ ಪೆರ್ದೊಡೆಯ ಹೊಡೆದೊಡೆ ಗದೆಮುರಿದು ತುಂಡು ||

ವಾಯುಪಥಕದು ಸಿಡಿಲುಮುರಿಯೆನೆ | ಪಾಯೆ ನೆರೆದೀಕ್ಷಿಸುವ ದಿವಿಜನಿ |
ಕಾಯವೋಡಿತು ವೀರಿವಿಮ್ಮಡಿಸಿದುದು ಕುರುನೃಪಗೆ || ೩೬ ||

ಫಡಫಡೆಂದಾರ್ಭಟಿಸಿ ಕೈಯಲಿ | ಹಿಡಿದ ಮುರಿಯಿಂದಿಟ್ಟು ಭಾನುವ |
ಹಿಡಿವವೊಲು ಭಾನುದ್ದನೆಸೆದೊಡೆ ಗದೆಯಾಲವಟೊಣೆದು ||
ಕಡುಜವದಿ ಸಿಲುವಾಗಳನಿಲಜ | ನಡಸಿ ಹೊಡೆದೊಡೆ ತೊಡೆಯುಡಿದುಗಿರಿ |
ಕೆಡೆದವೊಲು ನೆಲನದಿರೆ ಕೆಡೆದನು ಕುರು ನೃಪಾಲಕನು || ೩೭ ||

ಮೊಳಗಿತಾ ಸಮಯದಲಿ ಪಾಂಡವ | ರಳವಿಯಲಿ ಜಯಭೇರಿ ನಿಜಕರ |
ತಳಕೆ ಬಂದುದು ಮೂಜಗದ ಸಿರಿಯೆಂದು ಸಂತಸವ ||
ತಳೆದನಾ ಕಲಿಭೀಮ ತನ್ನಯ | ಮುಳಿಸನಾ ಕೌರವನ ಗರ್ವವು |
ಘಳಿಲನೊಡಗೊಂಡೋಡಿದಂತೆ ಕೌರವನನೀಕ್ಷಿಸಿದ || ೩೮ ||

ಅರರೆ ಕುರುಕುಲನೃಪ ಶಿರಃಶೇ | ಖರನೆ ಪಿಡಿದೊಂದುದ್ಧತಿಕೆಯನು |
ಬಿರಿದು ಬಿಂಕವ ಕೊಂಡು ಚಲವನು ಕಡೆತನಕ ಬಿಡದ ||
ಅರಸು ಮಗನವನಾವನೋ ಈ | ಧರೆಯೊಳೆಂದುರೆ ಹೊಗಳುತವೆಯಿರ |
ದೆರಗಿದನು ನಿಜಗದೆಯ ತೊನವುತ ಬಂದುಧರ್ಮಜಗೆ || ೩೯ ||

ಭೂನುತರು ನಿಃಶೇಷರಿಪು ಸಂ | ತಾನನಾಗಳು ಧರ್ಮಜನು ಪವ |
ಮಾನಸೂನುವ ಪರಸಿ ವಿಜಯಧ್ವಜವನೆತ್ತಿಸುತ ||
ಸಾನುರಾಗದಲನುಜರೊಡನಾ | ಸೇನೆಯನು ಪೊಕ್ಕಿರಲು ಮುರರಿಪು |
ತಾನಿದೆಲ್ಲವ ಕೇಳಿ ಸಂತಸದಂತವೈದಿದನು || ೪೦ ||

ಮಾರುತಿಯ ಭುಜವಿಜಯ ರುಧಿರೋ | ದ್ಗಾರಿ ಗದೆಯಿಂ ಕೌರವೇಶ್ವರ |
ನೂರುಯುಗವುಡಿದುದ ಜರಾಸಂಧನು ತಿಳಿದು ಬಳಿಕ ||
ಕೌರವನನಲ್ಲಿಗೆ ತರಿಸಿ ಕ | ಣ್ಣಾರ ಕಂಡುರೆನೊಂದು ತಕ್ಕುಪ |
ಚಾರವನು ಮಾಡಿಸಲು ಬೀಡಿಗೆ ಕಳುಹಿಸಿದನಾಗ || ೪೧ ||

ಕುರುನೃಪಾಲಕನಾ ಪ್ರತಾಪದ | ತರಣಿಯೊಡನಸ್ತಮಿಸೆ ತತ್ಕುರು |
ಬಲದ ಮುಖಕಮಲದೊಡನರವಿಂದಗಳು ಮುಗಿಯೆ ||
ವರಧರಾದೇವಿಯವ್ರಗಿಂದೀ | ವರವು ಪಾಂಡವ ದರ ಹಸಿತ |
.................................................. || ೪೨ ||

ವರಯುದಿಷ್ಠಿರರಾಯ ತಮ್ಮಂ | ದಿರುವೆರಸಿ ನಿಜಶಿಬಿರದೊಳಗಾ |
ಕುರಪತಿಯನನಿಲಜನು ಜಯಿಸಿದ ಮಾತೆಮಾತಾಗಿ ||

ಇರುತಿರಶ್ವತ್ಥಾಮನಾ ಕುರು | ವರನನೀಕ್ಷಿಸಿನೊಂದು ನಿಜಬಲ |
ವೆರಸಿನಟ್ಟಿರುಳಟ್ಟಿರಿದನಾ ಪಾಂಡುಬಲದೊಳಗೆ || ೪೩ ||

ಜವನೆನಶ್ವತ್ಥಾಮ ಹೂಣಿಸಿ | ಕವಿದಿರಿವುತಿರಲಾಗಳಾ ಪಾಂ |
ಡವ ಪತಾಕಿನಿ ಹಳೆಗಳೆಂದೊಳಗೊಳಗೆ ಕಡಿದಾಡಿ ||
ಹವಣಿಸಿದ ಭಟರಳಿದರೆತ್ತಲು | ತವತವಗೆ ಗಜತುರಗರಥಗಳ |
ನವಯವದಿ ಸರುಕಟ್ಟಿದುದು ಕಡುಗಲಭೆ ಮಸಗಿದುದು || ೪೪ ||

ಅವನಿ ಪತಿಗಳು ತವತವಗೆ ತ | ಮ್ಮವರು ಸಹ ಫೌಜಾಗಿ ನಿಲೆ ಪಾಂ |
ಡವರದೇತರ ಗಲಭೆಯೆನೆ ತಾನೋಡಿ ಬಹೆನೆಂದು ||
ಅವನೆ ಬಯಸಿದ ವಸ್ತು ಬಹುವೊಲು | ತವಕಿ ದೃಷ್ಟದ್ಯುಮ್ನ ನಾಂತನು |
ಕವಿಯ ಕಾಳಗವತಿ ಭಯಂಕರವಾಯ್ತು ನಿಮಿಷದಲಿ || ೪೫ ||

ಸುರಿಗಿರಿವ ಭಟ ನಿಕರವನು ಧಿ | ಕ್ಕರಿಸಿ ಹೆಣಗಳಮೆಟ್ಟಿ ಸಿಂಹವು |
ಕರಿಯ ಮೇಲ್ವಾಯ್ದಂತೆ ದೃಷ್ಟದ್ಯುಮ್ನ ಭೂವರನ ||
ಪಿರಿದು ಕೋಪದಲಾರ್ದುಯಿರವೆಸ | ನುರುವಗೆಯ್ದೆಂಬಂತೆ ಕೊಯ್ದನು |
ಕೊರಳನಶ್ವತ್ಥಾಮನಿರದೊಳಪೊಕ್ಕನಾ ಫೌಜ || ೪೬ ||

ದ್ರುಪದನಾತ್ಮಜ ಮಡಿದನೆಂದಾ | ದ್ರುಪದನಾ ಮೊಮ್ಮಕ್ಕಳೈವರು |
ವಿಪುಳ ಕೋಪದಿ ತಾಗೆ ಪಾಂಡವರೆಂದೆ ನೆರೆಕಾದಿ ||
ಕುಪಿತನಾ ಪಾಂಚಾಲರೈವರ | ನಪಹರಿಸಿ ತಲೆಗೊಂಡು ಮಿಗೆ ಘೂ |
ರ್ಣಿಪ ಪಡೆಯನೊಡಹೊಯಿಸಿ ಹೋದನು ತನ್ನ ಪಾಳೆಯಕೆ || ೪೭ ||

ತಲೆಗಳನು ಕುರುಭೂಪತಿಯ ಮುಂ | ದುಳುಹಿದನು ಪಾಂಡವರ್ಗಳೈವರ |
ತಲೆಗಳಿವು ನಿಮ್ಮಡಿಯವರಬವು ಬಂದಿತೇ ರಾಯ ||
ಕಲಿಯ ದೃಷ್ಟದ್ಯುಮ್ನ ಭೂಪನ | ತಲೆಯಿದೆಯಲಾ ತನ್ನ ತಂದೆಯ |
ಕೊಲೆಯ ಮರಳಿಸಿ ತಂದೆನೆಂದನು ಗುರುತನೂಭವನು || ೪೮ ||

ಎಂದೊಡೀಕ್ಷಿಸಿ ತಿಳಿದು ಪಾಂಡವ | ನಂದನರ ತಲೆಯಲ್ತು ಬರಿದೇಂ |
ಕೊಂದೆಯಲ ಪಾಂಚಾಲರನು ಶಿಶುವಧೆಯು ಬಂದಿತಲ ||
ಎಂದು ಅಶ್ವತ್ಥಾಮನೊಳು ನೃಪ | ಸಿಂಧು ನುಡಿದೆನಗೇಕೆ ಹಿಂಸಾ |
ನಂದವೆಂದುಪಶಮವನಾಂತನು ಭೂಪ ಕೇಳೆಂದ || ೪೯ ||

ಮಾಡಿದನು ಮೇಲರಿಯದಧಿಕರ | ಕೂಡೆ ಜಗಳವನವರು ಬೆದರಿಸೆ |
ಹೇಡಿಯಿಂದದಿಭಲವನುಗುಳಿದನೆಂಬುದಿಳೆಯೆಂದು ||

ಕೋಡದಿರಿದಾಡಿದೆನು ನನ್ನೊಳು | ಕೂಡಿದನ್ನಯದಿಂದ ಜಯಿಸಿರಿ |
ನೋಡಿದಳು ತಾನವರನೆಂದನು ಕೌರವರರಾಯ || ೫೦ ||

ಅಳಿದವರಿಗಾಗಿಸುವ ಶೋಕವ | ಸುಳಿದವರಿಗಾಗಿಸುವ ಮೋಹವ |
ನುಳಿದವರಿಗಾಗಿಸುವ ಕೋಪವನೊರ್ಮೊದಲೆ ತಳೆದು ||
ತಿಳಿದು ತನ್ನೊಳೆತಾನು ಶಾಂತತೆ | ದಳೆದು ವಿದುರಾಚಾರ್ಯವರ್ಯರ |
ಬಳಿಗೆ ಬಂದುನಮಸ್ಕರಿಸಿಯಿಂತೆಂದ ಕುರುರಾಯ || ೫೧ ||

ಅದಯನಾನತಿ ಪಾಪಿಯೊಡವು | ಟ್ಟಿದರ ಕೊಲೆಗೆಣಿಸಿದೆನು ಜೂಜಾ |
ಡಿದೆನು ರಾಜ್ಯವ ಸೆಳೆದೆ ಪೊರವಡಿಸಿದೆನವರನುರದೆ ||
ವಿದಿತರೊಳ್ಳಿತನಾಡಿದಡೆ ಕೇ | ಳದೆ ಸಮಸ್ತರ ಕೊಲಬಯಸಿ ಕಾ |
ದಿದೆನು ಕಂಡೆನು ಕೈಯೊಡನೆ ಆ ಫಲವನಾನೆಂದ || ೫೨ ||

ತೊರೆದೆನಿನ್ನೆಲ್ಲವನು ಚಿತ್ತದ | ಮರೆ ತೆರೆದುದಿಂತಡೆದನಾದಡೆ |
ಅರೆಮರುಳ ನಾನಹೆನೆನುತ ದಿಗುವಸನತೆಯನಾಂತು ||
ಕಿರಿದುಳಿದು ಮಕ್ಕಳುವೆರಸಿ ತಾಂ | ನೆರೆದಸುಸಮಾಧಿಯಲಿ ತನುವಿನ |
ಹೊರೆಯುಳಿದು ದಿವದರಸನಾದನು ಭೂಪ ಕೇಳೆಂದ || ೫೩ ||

ವರಶತೇಂದ್ರಾರ್ಚಿತ ಜಿನೇಶ್ವರ | ಚರಣಕಮಲಭ್ರಮರ ವಿಭ್ರಮ |
ಸುರಸಕವಿ ಸಾಳುವ ರಚಿತ ಮೃದುಲಲಿತರಸಭರಿತ ||
ಪರಮ ನೇಮಿಜಿನೇಂದ್ರ ಪಾವನ | ಚರಿತೆಯೊಳು ಪನ್ನೆರಡನೆಯದಿದು |
ದೊರೆವಡಿದುದೀ ಯುದ್ಧಪರ್ವವು ನಿಖಿಳ ಭೂಭುಜರ || ೫೪ ||

|| ಅಂತು ಯುದ್ಧ ಪರ್ವಕ್ಕಂ ಸಂಧಿ ೫೫ ಕ್ಕಂ ಮಂಗಲಮಹಾ ||

## ಚಕ್ರಪರ್ವ (ಸಂಧಿ ೫೮)

**ಸಂಧಿ ೫೮**

ಶ್ರೀರಮಣನಧಟಿಂದ ಮಗಧಮ | ಹೀ ರಮಣನನು ಕೆಡಪಿ ಪಡೆದನು |
ಧಾರುಣೀಸ್ತುವಹ ಸುದರ್ಶನ ಚಕ್ರರತ್ನವನು || ಪಲ್ಲ ||

ಕೇಳು ಮಗಧಾಧೀಶ ಮಗಧನೃ | ಪಾಲನಾ ಕುರುಪತಿಯಗಲ್ಕೆಗೆ |
ತೋಳುಮುರಿಯದಂದದಲಿ ಚಿಂತಾಕ್ರಾಂತನಾಗಿರಲು ||

ಆಳುದೋರಿತು ಬಿಸಿಲುರಾತ್ರಿಯ | ಪಾಳೆಯವು ಜಾಳಿಸಿತು ಚಕ್ರಿಗೆ |
ಕಾಲಮೃತ್ಯುವೆ ಮೂಡಿದಂದದಿ ಮೂಡಿದುದು ರವಿಯು || ೧ ||

ಮೊದಲ ಸಂಜೆಯ ಶಂಖಗಳು ಸಾ | ರಿದವು ಮೆಲ್ಸರದಿಂದ ವುಪ್ಪವ |
ಡದ ಪದಂಗಳಲ ಪಾಡುವೆಳೆವೆಣ್ಣುಗಳಗೇಯವನು ||
ಎದೆಗೊಳುತ ಉಪ್ಪವಡಿಸಿ ಮನೋ | ಮುದದಿ ನಿತ್ಯಕ್ರಿಯೆಯನಾಗಿಸಿ |
ಕದನಲಂಪ ಚಕ್ರಿ ತಳೆದನು ವೀರ ಪಸದನವ || ೨ ||

ಕುದುರೆಗಳ ಹಲ್ಲಣಿಸಿದರು ಪ | ಣ್ಣಿದರು ಗಜಘಟೆಗಳನು ಮಿಗೆ ಹೂ |
ಡಿದರು ತೇಜಿಗಳನು ರಥಾಳಿಗೆ ಬೇಗ ಸಮಗಟ್ಟಿ ||
ಕದನಕರ್ಕಶ ಶುಭಟತತಿ ಹಿಡಿ | ದುದು ನಿಖಿಲಶಸ್ತ್ರಾಸ್ತ್ರಗಳ ನೇ |
ರಿದುದು ಮೇಲಾಳೊದರಿದವು ನಿಸ್ಸಾಳ ಕೋಟಿಗಳು || ೩ ||

ಮಕುಟಬದ್ಧರ ಮಂಡಳೀಕರ | ಸಕಲ ಸಾಮಂತರ ಮೊನೆಯ ನಾ |
ಯಕರ ತಿಂಥಿಣಿವೆರಸಿ ಮಗಧಾಧೀಶನುರ್ಕಿನಲಿ ||
ವಿಕಚ ಬಂಧೂಕಪ್ರತಿಮ ಮಾ | ಣಿಕ ಮಯೋದ್ಭ ಕಿರೀಟಭೂಷಣ |
ನಿಕರನಾಗಳು ವಜ್ರಮಯನಿಜರಥವನೇರಿದನು || ೪ ||

ಚಂಡಕರಕಿರಣವನು ಮಸಳಿಸೆ | ಪುಂಡರೀಕವ್ರಜವು ಆಗಸ |
ಮಂಡಲವ ಕೆಂದೂಳಿಹೂಳು ಭೂಮಿ ಪದಹತಿಯಿಂ ||
ಡೆಂಡೆಣಿಸಿ ಕಡುಬೆರ್ಚೆದಿಗುವೇ | ತಂಡಗಲು ಕಹಳೆಗಳ ದನಿಗೆ ತ್ರಿ |
ಖಂಡ ಧಾತ್ರೀಶ್ವರನು ರಣಮಂಡಲಕೆ ನಡೆತಂದ || ೫ ||

ಪಿರಿದು ರಕ್ಷಕ ಯಕ್ಷ ನಿಕರದಿ | ತರಣಿಕೋಟಿ ವಿರಾಜಮಾನ |
ಸ್ಫುರಿತ ಭಾವಳೆಯದ ಸುದರ್ಶನ ಚಕ್ರ ಗಗನದಲಿ ||
ಬರಬರಲು ನೆಲಮೊಳಗೆ ವಾದ್ಯದ | ಮರುದನಿಗಳಂದುಳುಕು ಬೀಳಲು |
ಹರಿಯ ತೇಜವು ಬಿದ್ದುದೆಂದುದ್ಧತನು ನಡೆಗೊಂಡು || ೬ ||

ಕರಿತುರಗ ನೇತ್ರದಲಿ ಜಲತತಿ | ಸುರಿಯಲಾನಂದಾಶ್ರುವೆಂದಾ |
ತರತರದ ಜಯಕೇತುವೆಂದಾ ಧೂದುಕೇತುಗಳು ||
ಧುರದಲಂಪಟನ ಶುಭವನು ಧಿ | ಕ್ಕರಿಸಿ ಚಕ್ರದ ಬಲದ ಗರ್ವದ |
ಭರದಿ ಬಂದೊಡ್ಡಿದನು ತಡೆಯದೆ ಭೂಪ ಕೇಳೆಂದ || ೭ ||

ದೆಸೆ ಬೆಸೆಲೆಯಾದಂತೆ ಮೇಣಾ | ಗಸವೆ ಕರೆದಂತವನಿ ಬೆಳೆದಂ |
ತೆಸೆವ ಬಲವದೆ ಮೇಘ ಭೂಷಣ ರುಚಿಯೆ ಸುರಚಾಪ ||

ಮಿಸುಪ ಪಳಯಿಗೆ ಮಿಂಚುವಾದ್ಯವೆ | ಅಸನಿಯಾಗಿರೆ ತಾಂ ಭಯಾನಕ |
ರಸದ ಪೆರ್ವಳೆಗರೆಯುತಿರ್ದುದು ಯುದ್ಧರಂಗದಲಿ || ೮ ||

ಇತ್ತಲಾಹವಧಾತ್ರಿಯಲಿ ಪುರು | ಷೋತ್ತಮ ಸಂಕರುಷಣನು ಕಡು |
ಬಿತ್ತರದ ಸೈನಿಕವು ಪಾಂಡವ ಮಂಡಲಿಯುವೆರಸಿ ||
ಎತ್ತಲುಂ ತೆರಪಿಲ್ಲೆನಿಸಿ ನಿಂ | ದೊತ್ತಿ ಸೂಳೈಸುವ ಪಟಹರುತಿ |
ಸುತ್ತುವರಿಯಲು ಮೊದಲೆ ನೆಲೆಗೊಂಡಿರೆ ನಿರೀಕ್ಷಿಸಿದ || ೯ ||

ಕಲಿ ಜರಾಸಂಧನು ಗಜಂಗಳ | ದಳವನೊಮ್ಮೆಯೆ ನೂಂಕಿಗಿರಿಗಳ |
ಬಳಗವೆಲ್ಲವು ಕೂಟವಾಗಿಯೆ ಕೂಡಿದವೊಯೆನಲು ||
ನೆಲನೆ ತೆರಪಿಲ್ಲೆನಿಸಿ ಬರುತಿರೆ | ಜಲಜನಾಭನ ಕರಿಘಟಾವಳಿ |
ಮುಳಿದು ತಾಗಿದುದದುಭುತದ ನೆಲೆಯಾಯ್ತು ಸಂಗರವು || ೧೦ ||

ಅಡಸಿ ಕರಿಗಳು ಕೋಡುಗಟ್ಟಿದ | ಕಿಡಿಗಳಿಂದಾ ವಗ್ನಿ ಹಬ್ಬಿದ |
ನಿಡುಗಿರಿಗಳೆನಿಸಿದವು ಗಜಘಟೆ ಬೋಧರೆಚ್ಚೆರಿದು ||
ಇಡುತ ಕಡಿವುತ ಪೊಡೆವುತಿರಲವು | ಪೊಡವಿಗರುಣಾಂಬುದನು ಸೂಸುವ |
ಕಡುಗಲಿಯ ಮುಗಿಲೆನಿಸಿ ಕೆಡೆದವು ಯುದ್ಧಭೂಮಿಯಲಿ || ೧೧ ||

ಮುನಿದು ಸೇನಾನಿಯ ಜರಾಸಂ | ಧನು ಸಗರ್ವದಿ ನೂಂಕಿಯಾದವ |
ಜನಪನುಕ್ಕಾಳುಗಳಿರಿಯೆ ಬಳಿಕವರ ಜವತತ್ನ ||
ಮನೆಗೆ ಕರಕೊಂಡೊಯ್ಯೆ ಚಕ್ರೇ | ಶನು ಮಹಾ ಬಲರಾದ ಖಚರರ |
ನನುವರವ ಮಾಡೆಂದು ಬೆಸಸಿದನರಸ ಕೇಳೆಂದ || ೧೨ ||

ಅತಿಬಲಾಢ್ಯಾಂಗಾರವೇಗನು | ವಿತತ ವಿದ್ಯುತ್ಪ್ರಭನು ವಿದ್ಯು |
ದ್ರಥನು ವಿದ್ಯುದ್ವೇಗ ನಳಿನಧ್ವಜನು ನೀಳಗಳ ||
ವಿತತ ವಿದ್ಯಾಧರರುವಾಗಸ | ವತಿ ಕಿರಿಯದೆನೆ ತಮ್ಮ ಬಲಸಂ |
ತತಿವೆರಸಿ ನೆರೆದೊಡ್ಡಿ ನಿಂದರು ಮೊಳಗೆ ರಣಪಟಹ || ೧೩ ||

ಮುರಮಥನನದಕಂಡು ನಿಜ ಖೇ | ಚರರ ಬೆಸಸಿದೊಡಸನಿವೇಗನನು |
ಧುರವಿಜಯನಾ ಸಿಂಹದ್ರಾಡನು ವಜ್ರದಾಡಾಖ್ಯ ||
ಅರುಣರಣ ಚಂದ್ರಾಖ್ಯ ದಧಿಮುಖ | ನೆರೆದಕಂಪನ ಸಿಂಹಕಂಧರ |
ಪಿರಿಯನೆನಿಸುವ ಧುರಕುಮಾರಾದೀ ಪಡೆವೆರಸಿ || ೧೪ ||

ಅಟ್ಟೆರಿದು ವಿದ್ಯಾಪ್ರಭಾವದಿ | ದಿಟ್ಟರಖಿಳಾಸ್ತ್ರಾಯುಧದ ಕಡಿ |
ಪಟ್ಟು ನಿಮಿಷದಿ ರಕತಧಾರೆಯ ಮಳೆಯು ಭೋರ್ಗರೆಯೆ ||

ಇಟ್ಟ ಮಣಿಮಕುಟಗಳು ಸಹ ತಲೆ | ಯೊಟ್ಟೆಲುಡಿದವಯವಗಳಾರಣ |
ಸೃಷ್ಟಿ ಗುರುಳಿದವಾಗಸದಿ ನೋಟಕರು ನೆರೆಬೆದರೆ || ೧೫ ||

ಬಿಸಿರಕುತ ಮೇಲುಕ್ಕಿ ಚೆಲ್ಲಲು | ದೆಸೆಯಪಾಲಕರತ್ತ ಸಾರ್ದರು |
ಬಸಿವ ಕೀಲಾಲಂಬುವೃಷ್ಟಿಗೆ ಭೂತ ಜಾತಕವು ||
ಒಸೆದು ಮೊಗವೆತ್ತೀಂಟಿದವು ಒಣ | ಬಸುರಡೊಳ್ಳಿಸಿವಡೆವವೊಲು ಆ |
ರಸ ಚರರನಿಕ್ಕಿದನಾ ಧೃತಕುವರನುರ್ಕಿನಲಿ || ೧೬ ||

ಅತ್ತಲವರಿರಿದಾಡುತಿರೆ ಮ | ತ್ತಿತ್ತಲೊದಗೀ ರಥಾಂಗ ಪಾಣಿಯ |
ಬಿತ್ತರದ ವೃಷಸೇನ ಪಟ್ಟವಾಂತುಬರೆ ||
ಮತ್ತೆ ಕೇಸರವಾಹಿನೀ ರಥ | ವೆತ್ತಿದಾ ತಾಳಿಧ್ವಜದ ಪೆಂ |
ಪೊತ್ತರಿಸ ಬಲಭದ್ರನಾಂತರು ರುದ್ರರೌದ್ರದಲಿ || ೧೭ ||

ವೃಷಭಸೇನನು ಬಿಲುವಿಡಿದು ಕೂ | ರಿಸಿದ ಗುಂಬಪುಳುಂಬಗಳ ನಾ |
ರ್ದೆಸಲುಗರಿಗಳ ಮೊರಹು ಹರಿಗಳ ಬಿರುದಳಿಯಮರಸೆ ||
ದೆಸೆಗಳೆತ್ತಲು ಗಗನವೆತ್ತಲು | ವಸುಧೆಯೆತ್ತಲು ತಿಳಿಯಲರಿದೆನ |
ಲಿಸುಮಯವು ತಾನಾಗಲೀಕ್ಷಿಸಿ ರೋಹಿಣೀಸುತನು || ೧೮ ||

ಎಡೆವಿಡದೆ ಕವಿವನಿತು ಶರವನು | ಕಡಿದನೆಚ್ಚು ಶರಾಳಿನಿಂ ಮ |
ತ್ತೊಡನೆಸಲು ಶರರಾಹು ವೃಷಸೇನನ ಮುಖೇಂದುವನು ||
ಹಿಡಿದು ನುಂಗಿತು ತನ್ನೃಪಾಲನು | ಮಡಿಯೆ ಮತ್ತಿದಿರಹನೃಪಾಲನ |
ಗಡಣವನು ಪಾರುತ್ತಲಿರ್ದನು ರೇವತೀರಮಣ || ೧೯ ||

ಸಾಲುಗೊಂಡೇರಿದರು ರಥಗಳ | ಗಾಲಿ ಭೂಮಿಯನುಳಲು ಮಿಗೆ ಕೆಂ |
ದೂಳಿ ಮುಗಿಲನು ಮುಸುಕೆ ಬಂದಾ ಮಕುಟಬದ್ಧಕರು ||
ತಾಳು ತಾಳಧ್ವಜನೆ ಕೆಂಗರಿ | ಗೋಲವರ್ಷವನೆಂದು ಭರದಲಿ |
ಹಳಿದರು ಬಿಡದೆಚ್ಚು ಕಣೆಯಿಂ ಸಂಗರಾಂಗಣವ || ೨೦ ||

ತಿರುವಿಗಂಬನು ಪೂಡಿ ವಹಿಲದಿ | ಬರೆತೆಗೆದು ಪೂಣ್ದೆಚ್ಚನಾ ಹಲ |
ಧರನು ಹರಿವಂಶಜರು ಬಿಲುಬಲುಮೆಯನದೇನೆಂಬೆ ||
ಅರಿಶರಂಗಳ ಕಾಣೆನಾ ಸಂ | ಗರ ಮಹೀತಳದೊಳಗೆ ಮಕುಟದ |
ಶಿರದ ಹಸರವ ಕಾಣಲಾದುದು ಕಣ್ಗೆ ನೋಟಕರ || ೨೧ ||

ಬೇರೆಮತ್ತತ್ತೊಂದು ಮೊನೆಯಲಿ | ಏರಿದನು ವಸುಪಾಲ ಭೂವರ |
ಹಾರಲೂದಿದನಾ ಜರಾಸಂಧನ ಚತುರ್ವಲದ ||

ತಾರು ತಟ್ಟಾಗಿಯೆ ಕಡೆದು ವೊರ | ಮಾರುತಿರೆ ಚಕ್ರಿಯ ತನೂಭವ |
ಚೀರಿಸುತ ಕಹಳೆಗಳನೊದಗಿದ ಕಾಲವಯನಾಗ || ೧೧ ||

ಒಡನನುಜನಖಿಳಾವನೀಶರು | ಪಡೆವೆರಸಿ ಬಂದೊಡ್ಡಿ ನಿಲಲೀ |
ಕಡೆಯಲೊದಗಿಜರತ್ಕುಮಾರ ಜಯಂದಧನೇಮಿ ||
ಪೊಡವಿ ಪತಿಗಳು ತಮ್ಮ ಬಲಸಹ | ತೊಡಚಿ ಹಣಿದಾಡಿದರು ಘೂರ್ಣಿಸಿ |
ಕಡಲು ಕಡಲೊಳು ತಾಗಿದಂದದಿ ಬೊಬ್ಬೆಯಬ್ಬರಿಸೆ || ೧೩ ||

ವೀರರಿತ್ತಲದೊಂದು ಮೊನೆಯಲಿ | ಧಾರಣನು ಪೂರಣನು ಚಕ್ರಿಯ |
ವೀರಪಾರ್ಥಿವರೊಡನೆ ತತ್ತಿರಿದಾಡುತಿರಲಾಗ ||
ಆರು ಬಣ್ಣಿಪರಾ ಕೊಲೆಯ ಕ | ಣ್ಣಾರೆ ಕಾಂಬವರಾರುತಿರ್ದುದು |
ನಾರದನ ಬಲುಬಯಕೆ ನೆತ್ತರ ಕಡಲು ವೆರ್ಚಿದುದು || ೧೪ ||

ಧಾರಣನು ಕೃತಮಕುಟ ಬದ್ಧವಿ | ದಾರಣನು ತಾನಾದನತ್ತಲು |
ಪೂರಣನು ಮಾರಣವ ಮಾಡಿದನಹಿತ ಪಾರ್ಥಿವರ್ ||
ವೀರನೆನಿಪ ಜರತ್ಕುಮಾರನು | ಶೂರತನದಲಿ ಕಾಲವಯನ ಮ |
ಹೋರು ಬಲವನು ಸವರಿದನು ಜಯದಳವನೇನೆಂಬೆ || ೧೫ ||

ಕಲಿ ಅನಾಧೃತ ಮುಖ್ಯ ಖೇಚರ | ಬಲವು ತರಿದಂಗಾರವೇಗನ |
ಗೆಲೆ ಜರಾಸಂಧನು ಹಲವು ಮೊನೆಜರಿಯೆ ಕಡುಗಾಯ್ದು ||
ನೆಲನು ತೆರಪಿಲ್ಲೆನೆ ಮೆರೆದ ಪೇ | ರ್ವಲವ ನೂಂಕಲು ಶಾಂರ್ಙ್ಗಪಾಣಿಯ |
ಬಲವು ತಾಗಿತು ಕೊಂಬುಚೆಂಬಕದೊಂದು ಲಜ್ಜೆಯಲಿ || ೧೬ ||

ಮೇರೆದಪ್ಪಿಯೆ ತಾಗಿದವೊ ಮೇಣ್ | ಮಾರಿನಿಧಿಗಳವೆರಡು ಮೇಣ್ ಸಂ |
ಹಾರರುದ್ರನ ಮಾಟದೊಂದು ಮಹೇಂದ್ರ ಜಾಳಕವೊ ||
ವೀರರಸ ವಾರಾಸಿ ಫಲವಾ | ಕಾರಲಾಂ ತಂದೊಂದರೊಳು ಮೈ |
ಯಾರೆ ಹೋರುವತೆರನೊಯೆನೆ ಹೋರಿದವು ಪಡೆವೆರಡು || ೧೭ ||

ಸಂಗರಾಂಬುಧಿಯೊಳಗಣಾಮ | ತ್ಸ್ಯಂಗಳಂತಾಡಿದವು ಕಣೆಕಮ |
ಠಂಗಳಂತೆದ್ದವು ಹರಿಗೆಗಳು ತೆರೆಯವೊಲು ಕುದುರೆ ||
ಹೊಂಗಿದವು ಕರಿಮಕರದಂತೆಗ | ಜಂಗಳಣೆದವು ಹಡಗಿನಂತೆ ರ |
ಥಂಗಳತಿಜವದಿಂದ ಹರಿದವು ಕೇತುಪಟವೆತ್ತಿ || ೧೮ ||

ಕಡುಮಸಕದಲಿ ಕೂಕಿರಿದು ಬಿಲು | ವಡೆಗಳುಬ್ಬರವೆಸೆಯೆ ಹೆಣಗಳ |
ತಡಗ ಬಿಟ್ಟವು ಸಮರದಲಿ ಧರೆಯಲಿ ಗಗನರಂಗದಲಿ ||

ಎಡೆವಿಡದೆ ಪಡಿಗೆತ್ತವಂಬಿನ | ಗಡಣಗಳು ಬಿಸುನೆತ್ತರಿನ ಪೇ |
ರ್ಗಡಲ ತೆರೆದೆಸೆ ದೆಸೆಯ ಬಿತ್ತಿಯ ಹೊಯ್ದು ಭೋರ್ಗರೆಯೆ || ೧೯ ||

ಹರಿಗೆಕಾರರು ಹರಿಗೆಕಾರರೊ | ಳುರು ಭರದಿ ಹೊಯ್ದಾಡಿದಿರು ಕೇ |
ಸುರಿಯ ಕೆಂಡಗಳುದುರಿದವು ಖಡುಗಳ ಖಣ್ಕೃತಕೆ ||
ಶಿರದ ಮಾಲೆಯ ರುಂಡಮಾಲೆಯ | ಧರಿಸಿದಳು ಧುರಧರೆಯೆನಿಪ ಭೀ |
ಕರದ ಭೈರವಿ ಘುಳ್ಕು ಘುಳ್ಕನೆ ನುಂಗಿದಳು ಪಡೆಯ || ೨೦ ||

ಏರಿದವು ಕುದುರೆಗಳು ಧೂಳಿಯ | ಬೀರಿದವು ಖುರದಿಂದ ತವೆಪೊರ |
ಮಾರದೊಡಗಲಸಿದವು ರಾವುತರಸಿಯಹೊಯ್ಲಿನಲಿ ||
ತಾರುಥಟ್ಟಾ ದುಡಿದುನಡುತೊಡೆ | ಹಾರುಗಳು ತುಂಡಾಗಿ ತಲೆಗಳು |
ಹಾರಿದವು ಬೊಬ್ಬಿಡುತ ಕೆಡೆದವು ಗಗನದಿಂದಿಳೆಗೆ || ೨೧ ||

ಹಕ್ಕರಿಕೆ ಸಹವಶ್ವತತಿಗಳು | ಮುಕ್ಕುರಿಸಿದವು ಕೆಲವು ಕಂದದ |
ಹಕ್ಕರಿಸೆ ಸಹ ಹಯಶಿರಂಗಳು ಹಾರಿದವು ಧರೆಗೆ ||
ತೆಕ್ಕುವಳ್ಳೆಯ ಮಿಡುವೆದೆಯಕರು | ಳುಕ್ಕುವಡಲಿನ ಬಿಡುವ ಬಾಯ್ಗಳ |
ತಕ್ಕಳಿದ ಭಟಕೋಟಿಗಳು ಪಡಲಿಟ್ಟ ವಾಜಿಯಲಿ || ೨೨ ||

ಮುಗಿಲ ಮೊಗೆಯಲು ಕೇತುತತಿಗಾ | ಲಿಗಳು ಭೂಮಿಯನುತ್ತು ಧೂಳಿಯ |
ನೊಗಲು ಮಸಕದಲೆರಡು ಬಲದವರೂಥಚಯತಾಗೆ ||
ಗಗನಕಂಬಿನ ತಟ್ಟೆವಣೆದುದು | ವಿಗಡ ರಥಿಕರ ಬಿಲ್ಲಬಲು ಬೊ |
ಬ್ಬೆಗಳು ಹಬ್ಬಲು ಕಣ್ಣಹಬ್ಬವದೆನಿಸಿ ಕಾದಿದರು || ೨೩ ||

ಮಿಂಚುತಟ್ಟಿದ ತೆರದಿ ಬಳಿಕ ಪ | ಳಂಚಿ ಖಡ್ಗಾಖಡ್ಗಿಯಲಿ ಮೈ |
ವಂಚಿಸದೆ ಹೊಯ್ದಾಡಿದರು ನಡುಪಸಿಗೆ ಕೊಟ್ಟಂತೆ ||
ರಂಚಿ ಬಿದ್ದವು ಬೊಬ್ಬಿಡುತ ತಲೆ | ಮುಂಚಿದವು ಗಗನಕ್ಕೆ ನೆರೆಹರಿ |
ಹಂಚದಾಗಿಯೆ ಕೆಡೆದುದಾಂತ ವರೂಥಿನೀ ನಿಕರ || ೨೪ ||

ರತುನ ಕೂಟವನಾಂತ ನೀಲದ | ವಿತತಗಿರಿಗಳ ತೆರದ ಹೂಡಿದ |
ರತುನರಂಚಿಗೆಯಾನೆಗಳು ಘಂಟಾಪ್ರಣಾದದಲಿ ||
ಮತಿಗಿಡಿಸಿ ದಿಗುದಂತಿಗಳ ಮಿಗೆ | ಧೃತಿಗೆಡಿಸಿ ವಾಸುಗಿಯನುರುಪದ |
ಹತಿಯಿನದುಭುತವಾಗಿ ತಾಗಿದವೆರಡು ಕಡೆಯಿಂದ || ೨೫ ||

ಬೆಟ್ಟು ಬೆಟ್ಟವು ಪೋರ್ವವೊಲು ಕೈ | ಗೊಟ್ಟು ಸಲೆದೊಳಹೊಕ್ಕು ಮಿಗೆ ಕೋ |
ಳ್ಕುಟ್ಟಿದವು ಕನ್ನವ ಕೊರೆದವೊಲು ತೆರೆದ ಘಾಯದಲಿ ||

ಇಟ್ಟಳಿಸಿ ಬಹ ರಕುತವಬ್ಬಿಯ | ನಿಟ್ಟವೊಲು ಭೋರ್ಗಡೆಯೆ ಕೆಡೆದವು |
ತಟ್ಟು ತಾರಾಗಿಳಿಯದಿರುತಿರೆ ಆ ಸಮಯದೊಳಗೆ || ೩೬ ||

ವರ ನಿಷಾಧಿಗಳತಿ ವಹಿಲದಲಿ | ಕರ ವಿಮುಕ್ತವು ಯಂತ್ರ ಮುಕ್ತವು |
ನೆರೆದ ಮುಕ್ತಾಮುಕ್ತ ಮೊದಲಾದಖಿಳ ಕೈದುಗಳಿಂ ||
ಭರದಲಿಟ್ಟೆಚ್ಚೆರಿದ ಖಂಡವು | ಕರುಳು ಕಡಿಗಳು ಕರವು ಶಿರವುಂ |
ಕರಿಗಳುಂ ತಾವಡನೊಡನೆ ಪಡರಿಟ್ಟರಾಜಿಯಲಿ || ೩೭ ||

ಕಳಿಯೆ ತನ್ನಯ ಗಜಘಟಾವಳಿ | ಮುಳಿದು ಮಗಧಾಧೀಶ ತನ್ನ |
ಗ್ಗಳದ ತವಳರ್ಗನನು ನೂಂಕಲು ಕಲ್ಪ ಸಮಯದಲಿ ||
ಮುಳಿದು ಬಹ ಜವನಾಳ್ಗಳೆನೆ ಬಂ | ದಳವಿಗುಡೆ ಶಾಂರ್ಙ್ಗಿಯು ಬೆಸಸಲತಿ |
ಬಲರೆನಿಪ ತಳವರ್ಗಮದನಾಂತಿರಿದುದೆಡೆವಿಡದೆ || ೩೮ ||

ಜವನ ಕುಸುಮಿತ ಕೊರಕಿತಪ್ಪ | ಲ್ಲಿವಿತವಾದೊಂದಸುಕವನವೆನೆ |
ಜವನೆಕುಮ್ಮರಿಗಡಿತ ಕಾಡೊಳು ಮುತ್ತ ಹೂವಂತೆ ||
ಅವರವರ ಕಲಿತನದ ನಿಧಿಯನು | ತವಕದೆತ್ತಿದ ತಾಣವೆನೆ ಘಾ |
ಯವು ವಿಪೂಡಿಸಿತುಳಿದ ಗಜಹಯನರರ ಮೈಗಳಲಿ || ೩೯ ||

ಧುರದರಸಿಯರು ಕಾಲರಾಜನೊ | ಳರುಣಜಲಕುಂಕುಮವನಾಹವ |
ಧರೆಯೆನಿಪ ಸರಸಿಯಲಿ ಮೊಗೆದೊತ್ತುವ ಹಲವು ತೆರದ ||
ನರರ ರೂಪಿನ ಕುದುರೆವರಿಜಿನ | ಕರಿಗಳಂದದಿ ಚಿಕ್ಕೊಳವಿಗಳ |
ಪರಿಯಲಿರ್ದುದು ಘಾಯವಡೆದಾ ಕಟಕ ಕಳನೊಳಗೆ || ೪೦ ||

ನಸು ಮುಗಿದ ಕಣ್ಣಿನಿಸು ಕಟ್ಟಿದ | ರಸನೆ ಅರೆದೆರದಧರ ನೆತ್ತರ |
ಕೆಸರಲದ್ದಿದ ಕೇಶಪುಡಿಯಲೆ ಪೊರೆದ ಪೊಗೆಮೀಸೆ ||
ಉಸುರ ಮುಚ್ಚುವ ಹೊಲಸು ಝೊಮ್ಮನೆ | ಮುಸುಕುತಿಹನೊಳವಿವು ಜುಗುಪ್ಸೆಯ |
ಹಸರವೆನಿಸಿದವರಿದ ಕರೆಗಳು ಸಮರಧರೆಯೊಳಗೆ || ೪೧ ||

ನಾಳೆ ಗಳಿಸುವೊಡಿಲ್ಲವೆಂದು ತ್ರಿ | ಶೂಲಿ ಶಿರಮಾಲೆಗಳನಾಯ್ದನು |
ನಾಳೆ ಸೃಷ್ಟಿಗೆ ಬೀಜಮೊದಲಿಲ್ಲೆಂದು ಜೀವಗಳ ||
ಓಳಿಗಳನಾ ಬ್ರಹ್ಮ ಪಡೆದನು | ನಾಳೆ ಹಸಿವಹುದೆಂದು ಹೆಣಗಳ |
ತಾಳುಗೂಡಿದನಂತಕನು ಸಂಗ್ರಾಮ ರಂಗದಲಿ || ೪೨ ||

ಸಿಂಗಗಳ ಜಂಗುಳಿಯಲಾಂತ ಮ | ತಂಗವೆನೆ ಭೇರುಂಡನೊಳು ಯು |
ದ್ಧಂತೆಯಿದ ಸಂಶರಭಗಳೊಳು ಪ್ರಳಯಪ್ರಭಂಜನನ ||

ಸಂಗರದ ಮುಗಿಲಂತೆ ಹರಿಚತು | ರಂಗದಿಂತಕೆ ಮಾಗಧನ ಚತು |
ರಂಗ ಬೆಂಗೊಟ್ಟುದು ಬಳಿಕ ಭೂಪಾಲ ಕೇಳೆಂದ || ೪೩ ||

ಇಂತು ನಿಜಚತುರಂಗವಗಿಯಲು | ವಂತಕನ ಬಾಯೊಳಗಡಂಗಲು |
ವುಂತುವರಿವಗ್ನಿಗೆ ಘೃತಾಹುತಿಹಿತ್ತ ತೆರನಾಗಿ ||
ಕಂತುಪಿತನೊಡ್ಡಣಕೆ ಮಸಗಿ ಕೃ | ತಾಂತ ಕೋಪದಿ ಮಗಧ ಧಾತ್ರೀ |
ಕಾಂತ ನೂಕಿದನಾರ್ದು ತನ್ನಯ ವಜ್ರಮಯರಥವ || ೪೪ ||

ಶರಧಿ ಶಯನನದಂದು ಪಡೆದಾ | ಗರುಡವಾಹಿನಿ ವಿದ್ಯೆನು ತಾಂ |
ಸ್ಮರಿಯಿಸಲು ಶರರವಿಕಿರಣತನುರುಚಿ ಕಡಲನೀಂಟಿ ||
ಎರಡು ಪಕ್ಕವ ಕೆದರಿ ಘಾಳಿಯ | ನೊರಜೆನಿಸಿದವು ದಿಗಿಭವದು ಭೀ |
ಕರಿಸಿ ಬರಲಾ ಗರುಡವಾಹಿನಿ ರಥವನೇರಿದನು || ೪೫ ||

ವಾಸುದೇವನು ಭರದಿ ಬಹಪ್ರತಿ | ವಾಸುದೇವನ ರಥವ ಕಾಣುತ |
ವಾಸುಗಿಯಲು ಪಡೆಯುಡುಗೆ ಭೂತಳನಡುಗೆ ತಾಯ್ಮಳಲು ||
ಸೂಸೆವಾರುಧಿ ಕದಡಿ ದಿಗಿಭವ | ವಾಸಿಸುವ ಮದವೆತ್ತಿ ಕಟ್ಟೆ ಖ |
ಗೇಶ ವಾಹಿನಿ ರಥವ ನೂಂಕಿದನೊದರೆ ರಣಭೇರಿ || ೪೬ ||

ನಳಿನನಾಭನ ಕೂಡೆ ಕಾದಿದ | ಡುಳಿಯ ಬಲ್ಲೈ ನಿನ್ನ ಪಾರುಂ |
ಬಳೆಯು ನಿನಗಿನ್ನಾಗಬಲ್ಲುದೆ ಕೇಳು ಮಾಗಧನೆ ||
ತೊಲಗಿ ಹೋಗೆಂದಿದಿರೆಲರು ತಾ | ನುಲಿದು ಕೈವೀಸಿದವೊಳಾಗಳು |
ಚಲಿಸಿದವು ಕಿರುಘಂಟೆವಳಯಿಗೆ ಹರಿಯ ರಥದೊಳಗೆ || ೪೭ ||

ನಳನಳಿಪ ಖಗಪತಿಯ ಪಾರುಂ | ಬಳೆಯ ಬೆಚ್ಚನೆ ಬಿಸಿಲು ನಭದಲಿ |
ಹಳಬೆ ಹಣಿದಾಡಿದವು ಬತ್ತಿಸಿದವು ನಭೋನದಿಯ ||
ಜಳಧಿ ವೇಳಾವನವ ಹುರಿದವು | ಬಳಿಕ ರವಿ ರಥ ಕಡ್ಡ ಬಂದ |
ವ್ವಳಿಪ ರಾಹುವ ತೆರದಿ ಹರಿಯಿದಿರಾದ ಮಾಗಧಗೆ || ೪೮ ||

ಕಡಲ ಚುಲುಕದೊಳಾಂಪ ದಿಗಿಭವ | ಬಡಿವ ಕುಳಿಕನ ದಾಡೆಗೀಳುವ |
ಸಿಡಿಲು ಕಿಚ್ಚನು ಹೊಸೆವ ಮೇರುವ ಕಿತ್ತುಕೆಲಕಿಡುವ ||
ಮೃಡನ ಶೂಲವ ಸೆಳೆವ ಸೂರ್ಯನ | ಹಿಡಿವ ಕಲ್ಪಾಂತಕನ ದಂತವ |
ನುಡಿವ ರೌದ್ರನನಾಂತರಾ ಭವ ಬದ್ಧ ವೈರಿಗಳು || ೪೯ ||

ಎಲವೊ ಕೃಷ್ಣನೆ ನೀನು ಗೋವರ | ಕುಲದೊಳೊಳ್ಳಿದನಹುದು ನಿನ್ನನು |
ಕೊಲಲು ಹೇಸಿದವಂದು ಕುಲದೇವತೆಗಳಾನಿಂದು ||

ಮುಳಿದು ಕೊಲಬಂದೆನಲೆ ನಿನ್ನಯ | ತಲೆಯ ಕಾವವರುಂಟೆ ಬದುಕಿದೆ |
ಜಲಧಿಯೊಳೆ ಹೊಕ್ಕಿನ್ನವರಮೆಂದಾರ್ದನಾ ಚಕ್ರಿ || ೫೦ ||

ಎಲೆ ಜರಾಸಂಧನೆ ವಿಚಾರಿಸೆ | ಕುಲಜ ನೀನಿನಗಿದು ನುಡಿಯೆ ಭುಜ |
ಬಲವು… ರೈ ಹಾಸನೇರಿದ ಬಲಿಕಮೊರೆಯುಂಟೆ ||
ಉಲಿಯರೇಂ ಗೋಪಾಲರಲ್ಲವೆ | ನೆಲನ ಸಾರಿಪ ಪಾರ್ಥಿವದು ಕೊಳು |
ಗುಳದಲರಿಗಡ ಕುಲವನೆಂದನು ನಗುತ ನಗಧರನು || ೫೧ ||

ಒಳ್ಳೆಯೇರುವ ಬೆಸನನೇರಿಸಿ | ಗುಳ್ಳೆಯೂದಿದೊಡಂದು ಹಳ್ಳದ |
ಳೊಳ್ಳೆಗೊಂದಡೆ ಕರುವಕಾವುತ ಪೆಟ್ಟೆಯೊತ್ತಿದೊಡೆ ||
ಬೊಳ್ಳೆಗಜವನು ಬಡಿದು ಬಡಬಡ | ಮಲ್ಲವನು ಮುರಿದರನನರಿಯದೆ |
ಅಳ್ಳೆದೆಯ ಮಾವನನು ಕೊಂದಡೆ ಬಲ್ಲಿದನೆಯೆಂದ || ೫೨ ||

ಉರಗ ಶಯ್ಯೆಯದೊಳ್ಳೆಯಾದುದು | ಕರದ ಶಾರ್ಙ್ಗವು ಬೆಸೆಯದಾದುದು |
ಜರದ ವರನಾಲಗೆಗೆ ಬಿರುಸಾದಕ್ಕರವನುಂಟೆ ||
ಕರುವ ಕಾವುತ ಪೆಟ್ಟೆಯೆತ್ತಿದ | ಕರದ ಬಡನನು ನಿನ್ನ ಬಲುಗೈ |
ಯಿರವನೆಲ್ಲರದಿಟ್ಟಿದೊಲೆಯಲಿ ತೂಗಬಹುದೆಂದ || ೫೩ ||

ಕೇಳುನಂದನ ಮಗನೆ ನಿನ್ನು | ರ್ಕಾಳುತನವೀ ಚಕ್ರರತ್ನದ |
ಗಾಳಿ ಸೋಂಕಲು ನಿಲುವುದೇ ಪುಸಿಬಿಸುಡು ಬಿಂಕವನು ||
ಬಾಳಬೇಕೇ ಬಂದು ನಿನ್ನಯ | ಮೌಳಿ ಸಹವೆರಗೆನ್ನಡಿಗೆ ವನ |
ಮಾಳಿ ಕೊಲ್ಲೆನು ಸುಖದೊಳಿರು ಹೋಗೆಂದನಾ ಚಕ್ರಿ || ೫೫ ||

ಬೈಯಲರಿಯೆನು ಕೋಲಿಗೆರಗೆಂ | ದೊಯ್ಯನಾಡಲದೇಕೆ ಯುದ್ಧದ |
ಮೈಯೊಳಗೆ ಸೋತವರ ತಲೆಬಾಗದೆ ವಿಚಾರಿಸಲು ||
ಅಯ್ಯ ಭಾಪೆನೆ ನಿನ್ನ ಚಕ್ರದ | ಕೈಯ ತೋರೈಯಿಂತಡವೆ ಮುಂ |
ಗೈಯ ಕಂಕಣಕೇಕೆ ಕನ್ನಡಿಯೆಂದನಾ ಕೃಷ್ಣ || ೫೬ ||

ಎನೆ ಜರಾಸಂಧನು ಮಸಗಿ ಭೋಂ | ಕೆನೆ ಹಿಡಿದನಾ ದಿವ್ಯ ಚಾಪವ |
ಅನುವಿನಿಂ ಜ್ಯಾಲತೆಯ ಕೊಪ್ಪಿಗೆತೊಡಿಸಿ ನೆರೆನೀವಿ ||
ವನಜನಾಭನು ಶಾರ್ಙ್ಗಕಾರ್ಮುಕ | ವನು ಬಿಗಿದು ಮಿಗೆ ನೀವಲಾ ಪೊ |
ತ್ತಿನೊಳದೀರ್ವರು ಜೇವಡೆದರೇನೆಂಬೆನದುಭುತವ || ೫೭ ||

ಹರಿದಿಗಿಭವಾ ಪುಂಡರೀಕವು | ಜರಿಯೆ ಕುಮುದಾಂಜನವೆರಡು ಮೈ |
ಮರೆಯೆ ವಾಮನ ಪುಷ್ಪದಂತವು ಮದವುಡುಗಿ ಬೆದರಿ ||

ಶಿರಗಳೊಡೆದವು ಸಾರ್ವಭೌಮ | ದ್ವಿರದ ವಿಶ್ರುತ ಸುಪ್ರತೀಕಕೆ |
ಉರಗ ಪತಿಯಾ ಚಂದ್ರರೀರ್ವರು ನಾಡೆನಡುಗಿದರು || ೫೮ ||

ಎಚ್ಚರಾ ಪುಂಖಾನುಪುಂಖದಿ | ವಚ್ಚೆವೋಗದೆ ಹರಿದ ಕಣೆಗಳು |
ಬೆಚ್ಚಿಸಿದವಾಗರಿಯ ಮೊರಿಹಿನ ಝುಂಕೆಯಲಿ ಜಗವ ||
ಮುಚ್ಚಿ ಮುಸುಕಿದವಂಬರವ ನೆರೆ | ವಚ್ಚರಸೆಯರು ಬೆದರಿ ದೆಸೆದೆಸೆ |
ಯುಚ್ಚಳಿಸಿ ವಿಶ್ವವನು ಮುಳುಗಿಸಿದವು ಭಯಾಬ್ಧಿಯಲಿ || ೫೯ ||

ಪರೆದುದಂಬರದಂಬಿನೋಲಗ | ನೆರೆದುದಾಗಳೆ ಕಣೆಯ ಜಾತ್ರೆಯು |
ಹರೆಗಡಿದುದಾ ಸರಳಸಂದೆಯು ಹಲವು ಸೂಳಿನಲಿ ||
ಹರಣ ಭರಣ ಪ್ರೌಢಿಯನು ಬಿ | ತ್ತರಿಸಿದರು ಮಾರ್ಗಣದಿ ಚಕ್ರಿಯು |
ಗಿರಿಧರನು ಗೆಲಲರಿಯದೋರೋರ್ವರು ಕಡಂಗಿದರು || ೬೦ ||

ದ್ರೋಣ ಭೀಷ್ಮಾರ್ಕಜಕಿರೀಟಿಯ | ಬಾಣವಿದ್ಯಾ ಪ್ರೌಢಿನಿಂ ನೆಣೆ |
ಗಾಣೆನೆಂದೀಕ್ಷಿಸುವ ಸುರನರಯಕ್ಷ ರಾಕ್ಷಸರು ||
ಕೇಣವೇನವರಿಂದಿವರು ಬಿಲು | ಜಾಣಿಕೆಗೆ ನೂರ್ಮಡಿಯಧಿಕವೆಂ |
ದಾಣೆ ಮಿಗೆ ಕೊಂಡಾಡುವಾ ಧ್ವನಿದೆಸೆಗೆ ಪಸರಿಸಿತು || ೬೧ ||

ಶರಧಿಗೆಣೆ ಸಾಗರವೆ ಗಗನಕೆ | ಸರಿನಭವೆಯೆಂತೆಂತುಟಾ ದಶ |
ಶಿರನ ರಘುಜಯಯುದ್ಧವಂತುಟಿಗೆನಬಹುದು ಕವಿಗೆ ||
ವರ ಜರಾಸಂಧನು ಮುರಾರಿಯ | ಧುರದ ಬಲುಮೆಯ ಪೂತು ಮಝು ಬಾ |
ಪುರೆಯೆನುತ ಚತುರಾಸ್ಯಪುತ್ರನು ನಭದಳೊದರಿದನು || ೬೨ ||

ಸಮಬಲರು ಸಮಕರಿಣ ಕಾಯರು | ಸಮ ಮಹಾ ವಿದ್ಯಾ ಪ್ರವೀಣರು |
ಸಮ ಪರಾಕ್ರಮ ಶಾಲಿಗಳು ಸಮಶೀಲ ಸಂಪದರು ||
ಅಮಮ ಭಾವಿಸಿ ನೋಡಿವರ ಯು | ದ್ಧಮದು ಛಾಯಾ ಯುದ್ಧದಂತೆಂ |
ದಮರರೆನೆ ಮಾಗಧನು ತೆಗೆದನು ದಿವ್ಯ ಸಾಯಕವ || ೬೩ ||

ಎಸುವೆ ಕಾಷ್ಟಾಸ್ತ್ರವನು ಹೂಳುವೆ | ವಸುಧೆಯನು ಮೇಲಗ್ನಿಯಿಂದಾ |
ಮಸಿಯ ಬಣ್ಣದ ಮೈಯವನಮಸಿಮಾಡಿದಿರೆನೆಂದು ||
ಮಸಗಿ ಕಡುಗಲಿ ಚಕ್ರಿಯಭಿ ಮಂ | ತ್ರಿಸಿಯೆಸಲು ಬಹ ಕಾಷ್ಟ ಬಾಣವ |
ನಸಮ ವಿಕ್ರಮಿ ಶಾರ್ಙ್ಗಯುರಿಗಣೆಯಿಂದ ದಹಿಸಿದನು || ೬೪ ||

ಉರಿಸರಲನಾ ಚಕ್ರಿಯಂಬುಧಿ | ಶರವ ಭೇದಿಸೆ ಅಂಬುದಾಸ್ತ್ರವ |
ಮರುದೆಸುವಿನಿಂ ಹರಿಯರಿಯೆಯೆರುಲಂಬ ಮಾಗಧನು ||

ಉರಗ ಸಾಯಕದಿಂ ಸವರಲಾ | ವುರಗ ಮಾರ್ಗಣವನು ಮುರಾಂತಕ |
ಪರಿಹರಿಸಿದನು ಗರುಡ ವಿಶಿಖದಿ ಭೂಪ ಕೇಳೆಂದ || ೬೫ ||

ಸಿಂಹಬಾಣವನೆಚ್ಚನಾ ನೃಪ | ಸಿಂಹನದು ಸಂಗ್ರಾಮ ಧರೆಯಲಿ |
ಸಿಂಹಬಹುರೂಪಿಣಿಯ ಮಸಕವೆ ಪಸವರಿಸಿದುದೆನಿಸಿ ||
ಸಿಂಹಗಳೆ ಕವಿತರುತಿರಲ್ಕದ | ಸಂಹರಿಸಿದನು ಶುಭ ಶರದಿನ |
ದೇಂಹರಿಗೆ ಗಹನವ ಮುಳಿದು ಬಳಿಕಾ ಜರಾಸಂದ || ೬೬ ||

ಇಂತಖಿಳ ವಿದ್ಯಾಸ್ತ್ರದಿಂದೆಸ | ಲಂತವೆಲ್ಲವನೊಡನೆರಿಪು ಶರ |
ಸಂತತಿಯಿನೆಚ್ಚುಗಿದನಚ್ಚುತನೆಂದು ಮಗಧೇಶ ||
ಅಂತಕನ ಮುಳಿಸನು ಹರನ ವಿ | ಕ್ರಾಂತಿಯನು ಕೈಕೊಂಡು ಹಸ್ತದ |
ಲಾಂತನರ್ಕ ಸಹಸ್ರ ತೇಜದ ಚಕ್ರರತ್ನವನು || ೬೭ ||

ಭರದಿ ಚಕ್ರವ ತಿರುಹೆ ತ್ರಿ್ರ್ | ತಿರುಹಿದುದು ದಿಕ್ಚಕ್ರಮಿಗೆ ಮೊಗ |
ದಿರುಹಿದುದು ಯಾದವರ ಸೇನಾಚಕ್ರವೀಕ್ಷಿಸುತ ||
ಸುರಸಮೂಹದ ದೃಷ್ಟಿ ಚಕ್ರವು | ತಿರುಹಿದುದು ತತ್ಕಿರಣ ಸಂತತಿ |
ಶರನಿಧಿಗಳನು ಕುಡಿವಡಿಯಣಮಣಲ ಸೀಮೆಯನೆ || ೬೭ ||

ಇದು ಜಗದ್ಬಂಭುಕಮಮೋಘವು | ಯಿದನು ಹರಿತಾನೆಂತು ಕಾವನೊ |
ಯಿದಕೆ ಹಗೆಯಹಕ್ಕೈದುವಾವುದೊಯೆಂದು ಯಾದವರು ||
ಎದೆಗುದಿವುತಿರೆ ಕೃಷ್ಣನೇನಳು | ಕಿದನೆ ಕವಚವು ಬಿರಿಯೆ ಮೈವೆ |
ರ್ಚೆದನು ತೊಟ್ಟನದೊಂದು ದಿವ್ಯಾಸ್ತ್ರವನು ಮಿಗೆಮುಳಿದು || ೬೮ ||

ಚಕ್ರವೋ ಮೇಣ್ ವಿಳಯ ಕಾಲದ | ಚಕ್ರವೋಯೆನಿಪುದನು ಕೋವರ |
ಚಕ್ರದಂದದಿ ಬಗೆದು ಬಲಭದ್ರನು ನಿಜಾನುಜನ ||
ಆಕ್ರಮಿಸಗುಡೆನೆಡೆಗದಿವೆನೆಂ | ದಾಕ್ರಮದಿ ಶೀರಾಯುಧವನಾ |
ವಿಕ್ರಮದ ಕಣಿತಳೆದು ನಾರಾಯಣನು ಪೊರ್ದಿದನನು || ೬೯ ||

ಚಂಡಕರ ಮಂಡಲವನುರೆ ಬೆಂ | ಕೊಂಡು ರಾಹುವೆನುಂಗಿದಂದದಿ |
ಮಂಡಳಿಸಿ ಬಹುಚಕ್ರವನು ಖಂಡಿಪೆನೆಡೆಯೊಳೆನುತ ||
ಗಂಡ ಜಯಕೋದಂಡ ಮಧ್ಯಮ | ಪಾಂಡವನು ವಜ್ರಾಸ್ತ್ರವನು ನಿಜ |
ಗಾಂಡಿವಕೆ ಸಲೆ ತೊಡಚೆ ಬರೆ ತೆಗೆದಿರ್ದನೊತ್ತಿನಲಿ || ೭೦ ||

ಬಡಿದು ಕೋವರ ಚಕ್ರದಂದದಿ | ಪುಡಿಯಡರೆ ಚಕ್ರವನು ಚೂರ್ಣಿಪೆ |
ನಡೆಸಗುಡೆನಚ್ಚುತನ ದಿವ್ಯಕಳೇವರವನೆಂದು ||

ಕಡುಮುಳಿದು ಜವನಂತೆ ಕೋಪದಿ | ಕಿಡಿ ಮಸಗೆ ಕಲಿಭೀಮನಾರ್ಪಿಂ |
ಪಿಡಿದು ರುಧಿರೋದ್ಗಾರಿ ಗದೆಯನು ನಿಂದನೊತ್ತಿನಲಿ || ೭೧ ||

ನಳಿನನಾಭನ ದಿವ್ಯಮೂರ್ತಿಯ | ನಳುರಗೊಡದಾ ಚಕ್ರವನು ಪೋ |
ಳ್ಗಳವೆನೆಂದಾ ಮಿಕ್ಕಪಾಂಡವರಾಂತರಾಯುಧವ ||
ಉಳಿದ ಧಾರಣ ಪೂರಣಾದ್ಯರು | ಕಲಿಗಳಾ ಪಾಂಡವರವೊಲು ನೆರೆ |
ಗಳಿಯವನು ತುಡುಕಿದರು ಶಾರ್ಙ್ಗಯಸೊರ್ಕಿಗೊದಗಿದರು || ೭೨ ||

ಇಡಲು ಬಹ ಚಕ್ರಾಯುಧವನೆಡೆ | ಗಡಿವೆನೆಂದಿವರಿರದಲತ್ತಲು |
ಬಿಡುಬಿಡಲೆ ಗೋವಳನೆ ಗರ್ವವ ನಿನ್ನ ಬಿಲುಬಲುಮೆ ||
ನಡೆಯಲರಿಯದು ನಿನಗೆ ವ್ಯರ್ಥಕೆ | ಕೆಡೆದಿರೊಲಿದೈತಂದೆರಗು ತ |
ನ್ನಡಿಗದಲ್ಲದೊಡಾಜಿಯೊಳು ಕೈಗಾದೆನಲ್ಲೆಂದ || ೭೩ ||

ಎಲವೊ ಮಾಗಧ ನಿನ್ನ ಪಾರುಂ | ಬಳೆಯ ಬಲುಹೆನ್ನೊಡನೆ ನೆಡೆವುದೆ |
ಸಲೆ ತಿಮಿಂಗಿಲಗಿಳದೊಳುಂಟೇ ಬಕದ ಬಲುಬಿಂಕ ||
ಫಲವದೇಂ ನೀನಿಟ್ಟ ಪಾರುಂ | ಬಳೆಯ ಸಂಗಡ ಬಲವಿರೋಧಿಯ |
ಕುಲಷರುದ್ರನ ಶೂಲಬಂದೊಡಮರಿಯದಿರೆನೆಂದ || ೭೪ ||

ಇಡಲೊಡನೆ ತಚ್ಚಕ್ರರತ್ನವು | ಕಡುಭರದಿ ಬರೆಕಂಡು ನಭದೊಳ |
ಗೆಡೆವಿಡದ ಸುರಸಮಿತಿಯೋಡಿತು ಬರುತ ಮಧ್ಯದಲಿ ||
ಪೊಡವಿಪರ ಕೈದುಗಳಿದಿರಬರ | ಲಿಡಿಯ ನುಂಗುತ ಬಂದು ಕೃಷ್ಣನ |
ಬಿಡದೆ ಬಲಗೊಂಡಳಸಿನಿಂದುದು ಬಲಭುಜದ ಮೇಲೆ || ೭೫ ||

ಬೆರಗುವಡೆದರುಸ ಪಾಂಡವಾದಿಗ | ಳುರು ಮುದವನಿರೆ ತಲೆದು ಧಿಕ್ಕರಿ |
ಕರೆಸದೃಶ ದಕ್ಷಿಣಭುಜವನಿರೆ ನೀಡಿ ಚಕ್ರವನು ||
ಧರಿಸಿಯಿನ್ನೆಲೆ ಮಾಗಧನೆ ನಿನ | ಗರಿದು ಸಂಗರವೆನ್ನ ಚರಣ |
ಕ್ಕಿರದೆರಗು ತಲೆಗಾವೆನೆಂದನು ಗರುಡವಾಹನನು || ೭೬ ||

ಮರುಳುಗೋವಳ ಕಿಚ್ಚು ಕೆಳಮುಖ | ದುರಿಯಬಲ್ಲುದೆ ಚಕ್ರ ಹೋದಡೆ |
ಜರಿದುದೇ ತತ್ಪೌರುಷದ ಕಣಿಗೋವಳನೆ ನೀನು ||
ಧುರದೊಳಾ ಬಾಳಾಕ್ಷನಾಂತೊಡೆ | ನಿರಿವೆನಲ್ಲದೆಯೆರಗುವೆನೆಯೆಂ |
ದುರುನಿಶಿತ ಖಡುಗವನು ಕೊಂಡನು ಮಗಧನಾಯಕನು || ೭೭ ||

ಅವನಿಗೀಗಳೆ ಬೀಳ್ವೆನೆಂಬುದ | ನವನಿಗರಿಪುವ ತೆರದಿ ರಥದಿಂ |
ದವನಿಗಿಳಿದನು ಖಡುಗವನು ಝಳಪಿಸುತ ಬರಲೊಡನೆ ||

ಅವನಿಧರಧರನಿಟ್ಟೊಡಾ ಚ | ಕ್ರವು ಜರಾಸಂಧನ ಕೊರಲ ಕೊ |
ಯ್ದವನಿಗಟ್ಟೆಯನಾಗಸಕೆ ಮಸ್ತಕವನಟ್ಟಿದುದು || ೭೮ ||

ನಾರದನು ನರ್ತಿಸಿದನಾಗಳು | ಭೋರನಾ ಸುರಸಮಿತಿಗು ಸುಮಾ |
ಸಾರಗರೆದುದು ಪಾಂಚಜನ್ಯವನೊದರಿಸಿದ ಚಕ್ರಿ ||
ಸಾರಿದುದು ಬಳಿಕಭಯ ಘೋಷಣೆ | ವಾರಿಜಾಕ್ಷನು ಪಾಂಡವರು ಪರಿ |
ವಾರ ರಾಜ್ಯಕವೆರಸಿ ನಿಜಕಟಕವೈದಿದರು || ೭೯ ||

|| ಅಂತು ಒಟ್ಟು ಸಂಧಿ ೫೭ ಕ್ಕಂ ಮಂಗಲಮಹಾ ||

## ಚಕ್ರಪರ್ವ (ಸಂಧಿ ೫೮)

**ಸಂಧಿ ೫೮**

ಶ್ರೀವರನು ನಿಜಪುರವನೈದಿ ಮ | ಹಾವಿಭವದಲಿ ತ್ರಿಖಂಡ ಧ |
ರಾವಳಯವನು ದಂಡಯಾತ್ರೆಯಲೈದಿಸಾಧಿಸಿದ || ಪದ ||

ಕೇಳು ಶ್ರೇಣಿಕ ಮಂಡಲೇಶ್ವರ | ಹೇಳುವೆನು ಭೂದೇವಿಯಿಂ ಕಡು |
ಧಾಳಿಯರು ಘಾತಾಳೆಯರು ಸೂಳೆಯರು ಬೇರಾರೊ ||
ಏಳಿಸದೆ ಫಲದಿವಸವಾಳ್ವರ | ತೋಳು ಸಡಿಲಿದ ಮುನ್ನಿವರೊಳತಿ |
ಮೇಳಗೊಂಡಪಳೆನಲು ನಚ್ಚುವ ನರನು ಹುಚ್ಚನಲೆ || ೧ ||

ಹರುಷದಿಂದಾ ಚಕ್ರಧರನ | ಲ್ಲಿರೆ ಮೊದಲು ವಿಜಯಾರ್ಧಗಿರಿಗ |
ಟ್ಟಿರೆ ಜರಾಸಂಧನ ಹಿತವರಹ ಖಚರ ಸಂಕುಳವು ||
ಬರದೊಡದೆ ವಸುದೇವ ಭೂವರ | ನುರು ಮನೋಹರ ಶಂಭುಕುವರನು |
ತರುಬಿದನು ಕಲಿಕಾಳ ಶಂಭರ ಮುಖ್ಯರೆಂದಾಗಿ || ೨ ||

ಅವರನಧಟಿಂ ಗೆಲಿದು ಮೂವರು | ಹಲವಣಿಸಿದ ವಿಕ್ರಮ ಸಗರ್ವದಿ |
ದಿವಿಜರಂತೆ ವಿಮಾನದಲಿ ಬಂದಿಳಿದು ಮಾಧವನ ||
ತವಕ ಮಿಗೆ ನೆರೆನೋಡಿ ಆ ಚ | ಕ್ರವ ನಿರೀಕ್ಷಿಸಿ ತಕ್ಕ ವಿನಯದ |
ಲವರು ಕಾರ್ಯಾಂತರವನೊರೆದರಿದೆಯಿದೆ ಸುಖಿಸಿದರು || ೩ ||

ಅಂದು ನೃಪ ಗಾಂಧಾರಿ ವಿದುರರ | ಮಂದಿರಕೆ ಮರುದಿವಸ ಪಾಂಡವ |
ನಂದನರು ನಡೆತಂದೆರಗಿ ನಿಜಪುತ್ರರಳಿದದರಿಂ |

ಬಂದನೋವಾರುವ ತೆರದಿ ಪಲ | ವಂದದಿಂದವರನು ತಿಳುಹಿ ಮಿಗೆ |
ವಂದಿಸಿದ ಜನವೆಲ್ಲವನು ಸಂತಯಿಸಿದರು ಮುದದಿ || ೪ ||

ಅವಧರಿಸು ಬಿನ್ನಹವ ನಿಜರಾ | ಜ್ಯವನು ಪಾಲಿಸುವಡೆ ಬಿಜಯಮಾ |
ಡುವುದೆನುತ ಮಂತ್ರಿ ಪ್ರಧಾನರು ಬಿನ್ನವಿಸೆ ಕೇಳಿ ||
ಅವರವರ ಮನ್ನಿಸಿ ವಿದುರ ಭೂ | ಧವರನೊಡಗೊಂಡಿತ್ತಲಾ ಪಾಂ |
ಡವರು ಬರೆದುಃಖವನು ತಳೆದಾ ಕೊಂತಿಯಿರೆ ಕಂಡು || ೫ ||

ಇದರ ತೆರನೇನೆಂಬ ಸಮಯದ | ಲದನರಿತು ಮಧುಮಥನ ಬಂದಿರೆ |
ಸುದತಿ ಕರ್ಣನು ತನ್ನ ಮಗನೆಂದೆಲ್ಲ ವಿವರವನು ||
ವಿದಿತವಹವೊಲು ನುಡಿದು ತಪದಿಂ | ಪುದಿದು ಸಂದದರಿಂದ ನೋವಾ |
ದುದನರಿಪೆ ಹಿತವಚನದಲಿ ತಿಳುಹಿದನು ಕೊಂತಿಯನು || ೬ ||

ವಾರಿಜಾಕ್ಷನು ಬಳಿಕಪಯಣದ | ಭೇರಿಯನು ಪೊಡಯಿಸಿ ಸಕಳ ಪರಿ |
ವಾರ ನಾನಾ ಭೂಮಿಪಾಲರು ಧರೆಯ ತೀವಿರಲು ||
ವಾರಿದಾಧ್ವಕೇತುತತಿ ಪರಿ | ಪೂರಿಸಲು ದೆಸೆಕಿವುಡುಗೊಳೆ ತೂ |
ರ್ಯಾರವದಿ ಪಯಣಕ್ರಮದಿ ದ್ವಾರಾವತಿಯ ಪೊಕ್ಕು || ೭ ||

ರತುನಮಯ ಸೌಧಗಳ ದ್ವಾರಾ | ವತಿಯನೊಪ್ಪುವ ಚಕ್ರರತ್ನದ |
ವಿತತಕಾಂತಿಯೆ ಮುಸುಕಿನಾ ವೈಭವದಿ ಬಂದು ||
ಕ್ಷಿತಿವಿನುತ ಸಾಮುದ್ರ ವಿಜಯೋ | ನ್ನತಗೆ ಬಲನಾರಾಯಣರು ವಿನ |
ಮಿತರು ತಾವಾದರು ಜಯದ ಕಾರ್ಯಗಳನುಸುರಿದರು || ೮ ||

ಬಳಿಕ ನೇಮೀಶ್ವರರು ದಿವಿಜಾ | ವಳಿಗಳೊಡ್ಡೋಲಗವಿರಲು ದೋ |
ರ್ವಲರು ಬಲನಾರಾಯಣರು ಪಾಂಡವರು ವಾಹನವ ||
ಇಳಿದು ಬಂದವರಡಿಗೆಲದಲ | ಗ್ಗಳದ ಭಕ್ತಿಯ ಭರದಿ ತನುವನು |
ಇಳೆಯೊಳಗೆ ಹರಡಿದರುಯೆದ್ದರು ಮುಗಿದು ಕೈವೆರಸಿ || ೯ ||

ಪರಮ ಪಾವನ ಮೂರ್ತಿ ನಿಮ್ಮಯ | ಚರಣ ಕಮಲಕ್ಕೆರಗಿ ಪೋದಡೆ |
ದೊರಕಿತೆವಗೀ ಚಕ್ರವರ್ತಿತ್ವವು ಜಗದ್ಗುರುವೆ ||
ಧುರದೊಳಾಗಿಸಿ ತಂದ ದುರತೋ | ತ್ಕರವದೀಗಳು ನಿಮ್ಮಡಿಯ ಸಂ |
ದರುಶನದಿ ಪೋಯ್ತೆಂದು ಸಂತಸವಾಂತನಾ ಚಕ್ರಿ || ೧೦ ||

ಜಿನರ ಕಾರುಣ್ಯಾವಲೋಕನ | ವೆನಿಪ ಗಂಗೆಯ ಮಿಂದು ಬಗೆ ತ |
ಣ್ಣನೆ ತಣಿದು ಬೀಳ್ಕೊಂಡು ನಿಜಮಂದಿರವನೈತಂದು ||

ಅನಿಮಿಷೇಂದ್ರ ವಿಭೂತಿಯಲಿ ನಿಜ | ಜನನಿ ಜನಕರ ತನುಜರನುಜರ |
ವನಿತೆಯರ ಸಮ್ಮೇಳನದಲಿ ಸುಖವಿರ್ದನಾ ಚಕ್ರಿ || ೧೧ ||

ಅತಿಶಯದ ಮೋಹದಲಿ ಪಾಂಡು | ಕ್ಷಿತಿಪರನು ಪಲದಿವಸ ದ್ವಾರಾ |
ವತಿಯೊಳಗೆ ಹರಿಯಿರಿಸಿಕೊಂಡಿರ್ದುಡುಗೊರೆಯನಿತ್ತು ||
ವಿತತ ವೈಭವದಿಂದ ಕಳುಹಲು | ಕತಿಪಯಾಧ್ವ ಕ್ರಮದಿನಮರಾ |
ವತಿ ಸದೃಶ ಗಜಪುರವ ಹೊಕ್ಕರು ಪಾಂಡುನಂದನರು || ೧೨ ||

ಬಳಿಕಲಾ ಕೌರವ್ಯಕಾಲಾ | ನಳನೆನಿಪ ಭೀಮಾದಿಗಳ ನಿಲೆ |
ಕಳುಹಿದನು ತಮ್ಮಿಷ್ಟವಹ ನಿಜ ಜನಪದಂಗಳಿಗೆ ||
ಕಲಿವಿದುರ ಧೃತರಾಷ್ಟ್ರರಿಗೆ ಬೇ | ರಿಳೆಯ ಹಿಂಗಿಸಿ ಕೊಟ್ಟ ಗಜಪುರ |
ದೊಳಗವರನಿರವೇಳ್ದು ಹರುಷದಿ ಧರ್ಮನಂದನನು || ೧೩ ||

ವಿದಿತ ದಕ್ಷಿಣ ಮಧುರೆಯೊಳು ತಾಂ | ಮುದದಲಿರುತ ಸಮಸ್ತ ಸಂಜನ |
ಹೃದಯ ಸಂತೋಷವನು ವಿಮಲಚರಿತ್ರದಿಂದೆನಿಸಿ ||
ಅದರ ವಿಮಳಿನ ಪಂಚರತ್ನದಿ | ಸದಮಲ ಶ್ರೀ ಜಿನಭವನಗಳ |
ನುದಿತ ಮನದುತ್ಸಾಹದಿಂ ಧರ್ಮಜನು ನಿರ್ಮಿಸಿದ || ೧೪ ||

ಖುಲ್ಲರಿಲ್ಲ ಕುಮಾರ್ಗವರ್ತಿಗ | ಳಿಲ್ಲ ದುಃಖಿಗಳಿಲ್ಲ ನಿರ್ಧನ |
ರಿಲ್ಲ ನಿರ್ದಯರಿಲ್ಲ [ದುರ್ಜನರಿಲ್ಲ] ಖಳರಿಲ್ಲ ||
ಕಲ್ಲೆದೆಯರಿಲ್ಲನೃತರಿಲ್ಲರಿ | ವಿಲ್ಲದವರಿಲ್ಲಾ ಯುಧಿಷ್ಠಿರ |
ವಲ್ಲಭನ ರಾಜ್ಯದಲಿ ಧರಣೀಪಾಲ ಕೇಳೆಂದ || ೧೫ ||

ಪದುಮನಾಭನು ಮಾರ್ಗಶಿರ ಶು | ದ್ಧ ದಶಮಿಯಲೀ ದಿಗ್ವಿಜಯವನು |
ಕದನ ಕರ್ಕಶ ಪೊರಮಡಲೆ ಬಗೆದರುಹ ಪೂಜೆಯನು ||
ಸುದರುಶನವೆಸರಮಲ ಚಕ್ರವ | ನುದಿತ ಮುದದಲಿ ಪೂಜಿಸಿಯೆ ಹೊ |
ಯ್ಸಿದನು ಭೇರಿಯನಾ ಧ್ವನಿಯು ಪೂರಿಸಿತು ತ್ರಿಜಗವನು || ೧೬ ||

ವಾರಿಜಾಕ್ಷನ ಪುಣ್ಯಪಾರಾ | ವಾರಭವ ಶಂಖಂಗಳೊಡನೀ |
ರಾರೊದರಲಾ ದಿವ್ಯಭೇರಿಗಳಾರು ಸೂಳೈಸೆ ||
ಮೂರು ಲೋಕವು ತಲ್ಲಣಿಸೆ ಪದಿ | ನಾರು ಚಾಮರವಾಡೆ ಬಹುಪರಿ |
ವಾರ ಪರಿವೃತ ಮುಕುಟಬದ್ಧದ ತಿಂಥಿಣಿಯೊಳೆಸೆದ || ೧೭ ||

ಬಿತ್ತರದ ಮೌಹೂರ್ತಿಕರು ಸುಮು | ಹೂರ್ತವತ್ಯಾಸನ್ನವೆಂದ ಮು |
ಹೂರ್ತದಲಿ ನುತಗರುಡವಾಹಿನಿ ಸಿಂಹವಾಹಿನಿಯ ||

ಪರಿಪರಿಯ ಪಳಯಿಗೆ ಮನವು ಖೇ | ಚರ ಬಲದ ಮಯವಾಗಸವು ಬಿ |
ತ್ತರಿಪೊಡದು ಪುನರುಕ್ತವಾ ಚಕ್ರೇಶ್ವರನ ದಾಟಿ || ೧೮ ||

ಪಲವು ಪಯಣದಿ ತಾರಶೈಲ | ಸ್ಥಲವನ್ನೈತರಲತಿ ಬೆದರಿ ಬೆಂ |
ಬಳಿಯಲಾರ್ಯಾಖಂಡದವರೊಲಿದೀಯೆ ಕಪ್ಪವನು ||
ತಳುವದಲ್ಲಿಂ ನಡೆವುತಿರೆ ಕಳ | ವಳಿಸಿಯರ್ಜುನಗಿರಿಯ ದಕ್ಷಿಣ |
ವಳಯದಾ ಶ್ರೇಣಿಯ ಖಚರಸಂದೋಹವೈತಂದು || ೧೯ ||

ಕರಿ ತುರಗ ಕನ್ಯಾ ಸುರತ್ನವ | ಹರಿಗೆ ಕಪ್ಪವ ಕೊಟ್ಟು ಕೈಮುಗಿ |
ದಿರಲು ಮತ್ತಿರದೇಳ್ದು ಗಂಗಾನದಿಯ ಪೂರ್ವದಲಿ ||
ದೊರೆವಡೆದ ಬಲು ಮ್ಲೇಂಛಖಂಡವ | ಕರಗತವ ಮಾಡಿದನು ಲಾಂಗುಲ |
ಧರನು ಶಾರ್ಙ್ಗಿಯು ಸಾರ್ದರಾ ಕೈಲಾಸ ಪರ್ವತವ || ೨೦ ||

ತೊಳಪ ಲೇಖಾನದಿಯ ಪೆರ್ಚಿದ | ಬಳಸಿನಿಂ ಕಲಧೌತಮಯ ಗಿರಿ |
ತೊಳರೊಳಪ ಪರಿವೇಷವಡೆದಾ ಪೂರ್ಣಚಂದ್ರನೆನೆ ||
ಚೆಲುವನಾಂತಿರಲಲ್ಲಿರಿಸಿ ನಿಜ | ಬಲವನಾ ಸಂಕರುಷಣನುಮಾ |
ನಳಿನನಾಭನುಮೀರ್ವರೂ ಸಮಭಕುತಿಯನು ತಳೆದು || ೨೧ ||

ಭರತಕೃತ ಮಣಿಮಯ ರಚಿತ ಬಂ | ಧುರ ಜಿನಾಲಯಗಳನು ವಂದಿಸಿ |
ಪಿರಿದು ಭಕ್ತಿಯಲೆರಗಿ ಪೂಜಿಸಿ ಜಿನಪತಿಯ ನುತಿಸಿ ||
ಪರಮಹರುಷವನಾಂತು ಬಂದಾ | ಪಿರಿಯ ಕಟಕವ ಪೊಕ್ಕು ಮರುದಿನ |
ಸುರನದಿಯ ಪಿಡಿದೈದಿದರು ಮೂಡಣ ಸಮುದ್ರವನು || ೨೨ ||

ಸುರನದಿಯ ದ್ವಾರದಲಿ ಮಾಗಧ | ಸುರನನುದ್ಧತ ವೈಜಯಂತಿಯ |
ಪಿರಿಯ ಬಾಗಿಲಿನಿನ್ನೆವರತನುವೆಂಬ ದೇವನನು ||
ತರದಿ ಸಿಂಹದ್ವಾರದಿಂ ಭೀ | ಕರ ಪ್ರಭಾಸಾಮರನ ಸಾಧಿಸಿ |
ವರ ರತುನ ಭೂಷಣ ನಿಕರವನು ಪಡೆದರವನಿಂದ || ೨೩ ||

ಅವರದನು ಪೊರಮಟ್ಟು ಸಿಂಧು | ಪ್ರವರನದಿಪಿಡಿದೈದಿ ಪಡುವಣ |
ತವದ ಮೆಚ್ಚರನೆಯ್ದೆ ತಮಗೇರಿಸಿ ತ್ರಿಖಂಡವನು ||
ಸುವಿದಿತರು ವರುಷಾಷ್ಟಕವು ತವ | ಗವಧಿಯಂನೆಗಮಾಗೆ ಸಾಧಿಸಿ |
ಭುವನ ವಿಜಯಮನಾಂತರಾ ದೋರ್ವಲಪರಾಕ್ರಮರು || ೨೪ ||

ಬಂದನಾ ದ್ವಾರಾವತಿಗೆ ದೇ | ವೇಂದ್ರರೆಣ್ಬರ ವೈಭವದಲಿಯು |
ಪೇಂದ್ರನರ್ಕಸಹಸ್ರಕಿರಣದ ಚಕ್ರರತ್ನವನು ||

ಮುಂದೆ ಬರುತಿರೆ ಗಗನದಲಿ ಖಗ | ವೃಂದ ಬರೆ ಮದಗಜ ಮಹಾಹಯ |
ಸಂದಣಿಯಲಿಳೆ ತೀವಿ ಬರೆ ಭಾಗ್ಯವನದೇನೆಂಬೆ || ೧೫ ||

ಅಷ್ಟಶೋಭೆಗಳಿಂದ ದ್ವಾರಕಿ | ಪಟ್ಟಣವು ಶೃಂಗಾರವಾದುದು |
ಮುಟ್ಟಿದವು ಗುಡಿತೋರಣಂಗಳು ಮುಗಿಲನೆಡೆವಿಡದೆ ||
ಪಟ್ಟಮಾರ್ಗದೊಳಾರತಿಗಳಿರ | ದಿಟ್ಟಿಸಿದಿದವು ನೃತ್ಯಗಳನಾ |
ಹೆಟ್ಟುಗೆಯರಾಡಿದರಿವರು ಪೋತಂದರರಮನೆಯ || ೧೬ ||

ನೆರೆದ ಸುರನರಖಚರರಖಿಳೋ | ರ್ವರೆಯೆರೆಯರೊಡವೆರಸಿ ಪಾಂಡವ |
ರುರು ಸಮುದ್ರವಿಜಯ ಮಹಾರಾಯನು ಮಹೋತ್ಸವದಿ ||
ಹರಿಗೆ ಬಲಭದ್ರಂಗೆ ಶೋಭಾ | ಕರದಿ ಮಂಗಳಮಜ್ಜನವ ಬಿ |
ತ್ತರಿಸಿ ದಿವ್ಯಾಂಬರ ಸುರತ್ನಾಭರಣಗಳ ತರಿಸಿ || ೧೭ ||

ಚಂದದಿಂದಮಲಂಕರಿಸಿ ನಲ | ವಿಂದ ಮುತ್ತಿನ ಸೇಸೆಯನು ತರ |
ದಿಂದ ಪರಸಿಟ್ಟರು ಮೊಳಗುತಿರೆ ಪಂಚವಾದ್ಯಗಳು ||
ಅಂದೊಲಿದು ಪದಿನಾರು ಸಾಸಿರ | ಸೌಂದರಿಯರಾರತಿಯನೆತ್ತಿ ಮು |
ಕುಂದನಾತನು ತಾಂ ತ್ರಿಖಂಡಾಧೀಶ ಪದವಿಯನು || ೧೮ ||

ಮಿಗೆ ಸುದರುಶನಚಕ್ರ ಶಕ್ತಿ | ಪ್ರಗದೆ ನಂದಕ ಶಾರ್ಙ ಶಂಖ |
ಪ್ರಗತ ಕೌಸ್ತುಭರತ್ನಯೆಂಬೀ ಏಳು ರತ್ನವನು ||
ತೆಗೆದಿಹವು ಪ್ರತ್ಯೇಕವಾಗಿಯೆ | ನೆಗಳ್ದ ಸಾಸಿರಯಕ್ಷಿಗಳು ವೊ |
ಲಗಿಪವೆಯ್ದೆ ಚತುರ್ಭುಜನನವನೀಶ ಕೇಳೆಂದ || ೧೯ ||

ಎಸೆವ ಹರಿನೀಲಚ್ಛವಿಯ ತನು | ದಶ ಧನುತ್ಸೇಧವದು ಪರಮಾ |
ಯುಷವು ಸಾಸಿರವರುಷದೊಪ್ಪುವ ತನ್ನವೀರ್ಯನಲೆ ||
ಕುಸುಮಶರಪಿತನರ್ಧ ಚಕ್ರಿಯು | ವಸುಧೆಯೊಳು ಪುರುಷೋತ್ತಮನು ರಾ |
ಜಿಸಿದನಾ ಯದುಕುಲತಿಲಕನವನೀಶ ಕೇಳೆಂದ || ೨೦ ||

ವರ ಮುಸಲ ಹಲ ಗದೆ ಪರಿಘ ಬಂ | ಧುರದ ರತ್ನವು ನಾಲ್ಕು ನಾಲ್ಕನು |
ಬೆರಸಿಹವು ಮಿಗೆ ನಾಲ್ಕು ಸಾಸಿರಯಕ್ಷಿಗಳು ಹರಿಯ ||
ಸರಿಯೆ ದೇಹೋಚ್ಚೇದನಾಯಿಸ | ದಿರವದಿನ್ನೂರಧಿಕವಾ ಹಿಮ |
ಕರರುಚಿರತನುಕಾಂತಿ ಬಲಭದ್ರಂಗೆ ಸೊಗಯಿಪುದು || ೨೧ ||

ಬಲಯುತ ಶ್ರೀಕಾಂತನಾಜ್ಞೆಯು | ನಿಲೆ ನಿಖಿಲಭೂಪರ ಮುಕುಟದಲಿ |
ನಿಲೆ ದಿಶಾಧೀಶರ ಕಿರೀಟದೊಳಮರತ ರಜಸವು ||

ನಿಲೆ ಮಹಾಲಕ್ಷ್ಮಿಯು ಸುವಕ್ಷ | ಸ್ಥಳದೊಳಗೆ ತನ್ನೊಂದು ಚೆಲುವಿಕೆ |
ನಿಲೆ ವಧೂಹೃದಯದೊಳು ನಿಂದನು ಚಕ್ರಿರಾಜ್ಯದಲಿ || ೩೨ ||

|| ಅಂತು ಒಟ್ಟು ಸಂಧಿ ೫೭ಕ್ಕಂ ಮಂಗಲಮಹಾ ||

## ಚಕ್ರಪರ್ವ (ಸಂಧಿ ೫೮)

**ಸಂಧಿ ೫೮**

ವನಜನೇತ್ರನೊಳಾ ವಸಂತದ | ವನಜಲಕ್ರೀಡೆಯನು ಗೈದಾ |
ಜಿನನು ಮೂಜಗಬೆದರಲೂದಿನ ಪಾಂಚಜನ್ಯವನು || ಪದ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ದ್ವಾರಾವತಿಯೊಳುತ್ತಮ |
ರಾಳಿ ಸಗ್ಗದ ವಸ್ತ್ರಭೂಷಣ ಮುಖ್ಯವಸ್ತುಗಳ ||
ಮೇಳದಿಂ ಸುರಪತಿಯ ಬೆಸದಿ ವಿ | ಶಾಲ ಬೋಧನರಿಷ್ಟನೇಮಿ ಕೃ |
ಪಾಲು ಪಸದನವಾಂತಿರುತಿರಲೊಂದು ದಿವಸದಲಿ || ೧ ||

ಸುರಕುಮಾರಕನಿಕರ ಕರ ಚಾ | ಮರನಿಚಯ ಶೋಭೆಯಲಿ ಹರಿವಿ |
ಷ್ಟರದಲೊಡ್ಡೋಲಗದಿ ನೇಮಿಕುಮಾರನೊಪ್ಪಿರಲು ||
ಹರಿ ಮುಸಲ ಕೌಂತೇಯರವನೀ | ಶ್ವರರು ಮೊದಲಾದವರು ಗಗನೇ |
ಚರರು ಸಹ ವರ ಜಿನಸಭೆಯಲೋಲಗಿಸುತಿರಲೊಡನೆ || ೨ ||

ಅಸಮ ಸಾಹಸಗುಣ ಕಥನದಿಂ | ವಸುಧೆಯಾಣ್ಮರು ಕೆಲವರು ಮತ್ತೀ |
ಕ್ಷಿಸಲು ಭೀಮಂಗೆಣೆಯ ಸತ್ವಾಧಿಕರುಮಿಲ್ಲೆನಲು ||
ನಸುನಗುತ ಕೆಲರಲ್ಲಿ ಬಲನತಿ | ವಿಷಮ ಬಲನೆನೆ ಕೇಳ್ದು ನೀವೇ |
ನುಸುರಿದಿರಿ ಹರಿಯಧಿಕನೆಂದರು ಕೆಲರದೆಂತೆನಲು || ೩ ||

ಶಿಶುತನದಿ ಪೂತಿನಿಯ ಮುಖ್ಯರ | ಬಸಗೆಡಿಸಿ ತಾನನಿಲಜನು ಬಲನುಂ |
ಸಸಿನಿರಿರೆ ಜನನಿರಲು ಸತ್ವದೊಳಧಿಕರಾರೆನಲು || ೪ ||

ಅವರ ನುಡಿಯನು ಕೇಳ್ದು ಸತ್ವದ | ಹವಣನರಿಯದೆ ಗರ್ವದಲಿ ಮಾ |
ಧವನು ನೇಮಿಕುಮಾರನೀವಲೆ ಸತ್ವಯುಕ್ತರಲೆ ||
ಇವರು ಕಾಣದೆ ಹೇಳುವರೆ ನೋ | ಡುವೆನು ನಿಮ್ಮಯ ಸತ್ವವನು ಮಾ |
ಡುವವದೀರ್ವರು ಮಲ್ಲಯುದ್ಧವನೆಂದು ಮುರಿದೆದ್ದ || ೫ ||

ಎನಲು ನೇಮಿಸ್ವಾಮಿ ತಾನೊ | ಯ್ಯನೆ ದರಸ್ಮಿತ ವದನನಾಗಳು |
ವನಜನೇತ್ರನೆ ಮಲ್ಲಯುದ್ಧದ ಗಸಣಿ ತಾನೇಕೆ ||

ನಿನಗಧಿಕ ಸತ್ವವು ವಿಚಾರಿಸಿ | ಜನಿಸಿದೊಡೆ ನೀನೆಮ್ಮ ಪಾದುಕ |
ವನು ನೆಗವುದೆಂದೆಡದ ಪದದುಂಗುಟದಿನೊತ್ತಿದನು || ೬ ||

ಸಿಂಗವಣೆಯಿಂದಿಳಿಯದೆಡಗಾ | ಲುಂಗುಟದಿ ಜಿನನೊತ್ತಿದೊಡೆ ಮಣಿ |
ತುಂಗ ಪಾದುಕವನು ದಿಗಿಭಕರ | ಸಮಕರಂಗಳಲಿ ||
ಅಂಗಸತ್ವದ ಭರದಿ ನೆಗಪಲು | ಪಿಂಗಲಿರಲದು ಭೂಮಿಯನು ಕಲಿ |
ಶಾಂರ್ಙ್ಗಮಂಡಿಯ ಹೂಡಿ ಝಾಡಿಸಿ ತೂಗು ಬಳಲಿದನು || ೭ ||

ಕರಿಗೆ ಹೆಬ್ಬುಲಿ ನುರರಧಟಾ | ಕರಿಸಹಸ್ರದ ಸತ್ವ ಸಿಂಗಕೆ |
ಹರಿಸಹಸ್ರದ ತ್ರಾಣವಷ್ಟಪದಕ್ಕೆ ಮತ್ತಂತೆ ||
ಶರಭ ಸಾಸಿರ ಬಲ ಬಲಂಗದ | ನೆರಡುಮಡಿ ತಾನರ್ಧಚಕ್ರಿಗೆ |
ಪರಿಕಿಪೊಡೆ ಷಟ್ಖಂಡ ಚಕ್ರಧರಂಗೆ ತದ್ವಿಗುಣ || ೮ ||

ತರದಿ ನೋಡೆ ಸಹಸ್ರ ಚಕ್ರೇ | ಶ್ವರರ ಬಲವಿಂದ್ರಂಗೆ ಮತ್ತಾ |
ಪರಿಯಲಿಂದ್ರಸಹಸ್ರಬಲವಾ ತೀರ್ಥಕರ ಶಿಶುಗೆ ||
ಅರರೆ ನೋಳ್ಪರನಂತವೀರ್ಯಂ | ಗೊರೆಯದಾರ್ೈ ಸತ್ವದಲಿ ಗಿರಿ |
ವರನ ಗರ್ವವದಿಂತುಟಾದುದು ಭೂಪ ಕೇಳೆಂದ || ೯ ||

ಬಾಗಿದನು ಮಣಿಮಕುಟವನು ಸಿ | ಗ್ಗಾಗಿ ಹರಿಯಿರೆ ನಗಧರನೆ ತಲೆ |
ವಾಗದಿರು ನಿನ್ನನುಜನಿಂತುಟನಂತ ವೀರ್ಯನೆನೆ ||
ಭೋಗಿಪತಿ ಸುರಪತಿ ನತಕ್ರಮ | ನಾಗಿ ವರ್ತಿಪ ನೇಮಿಗಗ್ರಜ |
ನಾಗಿ ಬದಕುವ ನಿನಗೆ ಸರಿಯಾರೆಂದನಾ ಬಲನು || ೧೦ ||

ಎನಲು ನೀಲಾಂಬರನ ನುಡಿಗಾ | ವವಜನಾಭನು ಮನದೊಳು ಜಳ |
ಕ್ಕನೆ ವಿಷಾದಮನುಳಿದು ಸುಖದಿಂ ರಾಜ್ಯಲಕ್ಷ್ಮಿಯನು ||
ಅನುದಿನದಿ ನೆರೆದಿರಲು ಬಂದುದು | ಜನಮನೋತ್ಸವಕಾರಿ ನೆನೆಗೋ |
ಲನ ಸಗರ್ವ ವಿಲಾಸವೆನೆ ಮಧುಮಾಸದೊಲವಿನಲಿ || ೧೧ ||

ಎಸೆವ ವಾಮನಗಜದ ತನಿವಾ | ಸಿಸುವ ಮದಗಂಧದಿ ಪೊರೆದು ಕೆಂ |
ಪೆಸೆವ ಮಲಯಾಚಳನ ಚಂದನನಂದನದೊಳಾಡಿ ||
ಹಸಿದ ಹಾವುಗಳೀಂಟೆ ತಾಂ ಕಡು | ನಸಿದು ಸುರತಾಲಯದ ಖಚರಿಯ |
ರುಸುರಿನಿಂ ಮೈವೆರ್ಚೆ ಚೈತ್ರಾನಿಳವು ಪಸರಿಸಿತು || ೧೨ ||

ಜಾತಿಯನು ಸಿರಿಬಿಟ್ಟು ನಿಲುಕಂ | ಜಾತದೊಳು ರಾಯಂಚೆಗಳು ತಡ |
ವೀತುದಿನ್ನೈತನ್ನಿರವಿತಳೆಯುತ್ತರಾಯಣವ ||

ಚೂತ ಗುಡಿಗಟ್ಟಾಡು ಕೋಗಿಲೆ | ಮಾತನೆಂದು ವಸಂತರಾಯನ |
ದೂತನೆನಲಳಿರವದಿ ಸಾರಿತು ಹರಿದು ತೆಂಗಾಳಿ || ೧೩ ||

ಏರಿದುದು ತಂಬೆಲರು ಹಿವಪೊರ | ಮಾರಿದುದು ಕಾಸಾರದೊಳು ಕಾ |
ಲೂರಿದವು ರಾಯಂಚೆ ಪದುಮಿನಿ ನಗೆಮೊಗದ ಮಧುವ ||
ತೂರಿದವು ಪರಪುಟ್ಟಗಳು ಸರ | ದೋರಿದವು ದರ್ಪಕಗೆ ದರ್ಪವು |
ಪೇರಿದುದು ಜಾರಿದುದು ಜಾತಿಯ ಪೂತ ಸೌಭಾಗ್ಯ || ೧೪ ||

ಮಿಸುಪ ನುತ ವನಮಾಳಿನಂದನ | ಕುಸುಮಶರ ಲಕ್ಷ್ಮಿಬಲೋನ್ನತಿ |
ಬಿಸಜನೇತ್ರ ವಿಭಾಸಿಯಳಿಕುಳ ನೀಲ ತನುಕಾಂತಿ ||
ಒಸೆಯದುದ್ಧತ ಜಾತಿ ಮಧುರಿಪು | ಸಸುಕ ಜನ ಸಂತೋಷ ಚಕ್ರವಿ |
ಲಸಿತವೆನೆ ಬಂದುದು ವಸಂತವು ಕೃಷ್ಣನಂದದಲಿ || ೧೫ ||

ತೀವಿ ಕನ್ನಡವಕ್ಕಿಯೋದುವ | ಗಾವರದಿ ಪರಪುಟ್ಟ ಪಾಠಕ |
ರಾವದಿಂ ಮುಯ್ಯೀರಡಿಯ ಸಂಗೀತ ಬಂಧುರದಿ ||
ಆ ವಸಂತನು ತಂಬೆಲರು ನಿರೆ | ಕಾವನೊಡ್ಡೋಲಗವನಿರ್ದಾ |
ಚಾವಡಿಗಳೆನೆ ಬಂದ ಮಾಮರನಂದು ಶೋಭಿಪವು || ೧೬ ||

ಗಿಳಿಗೆ ತನಿವಣ್ಣುಗಳ ಕೋಗಿಲೆ | ಗಳಿಗೆ ಸದಿವೆಳೆದಳಿರನಳಿ ಸಂ |
ಕುಳಕ ಕಮ್ಮಲರ್ಗಳನು ಮುಗುಳಂಬಂಗೆ ನಣೆಗಣೆಯ ||
ಇಳೆಗಭೀಷ್ಟದ ರತಿಸತಿಗೆ ಚೆಂ | ದಳಿರನವಸಂತವನು ಸಲೆಕೊಡು |
ವಳವಿನಿಂ ಮಾದಾನಿಯೆನಿಸಿತು ಬಂದು ಮಾಕಂದ || ೧೭ ||

ಬಂದವಾ ಮಾಮರನೆನುತ ನಲ | ವಿಂದ ರಾಗಿಸೆ ತಸುಕೆ ಅಸುಕೆಯ |
ದೊಂದುರಾಗಕೆ ಪುಳಕವಾಂತುದು ಸುರಯಿಸುರಯಿಗಳು ||
ಇಂದು ಪುಳಕವನಾಂತವೆಂದೊಲ | ವಿಂದ ವಿಚಕಿಲವಲರ್ದವೆನಲಾ |
ನಂದ ಮಂದಿರವಾಯ್ತು ನಂದನ ಕುಸುಮ ಸಮಯದಲಿ || ೧೮ ||

ಸ್ಮರನ ತೇಜಃಪುಂಜವೆನೆ ಬಿ | ತ್ತರದ ಕಾಮಾಗ್ನಿಯನೆ ರವಿಯೆನೆ |
ವರ ರತಿಯು ಕೇಸಡಿಯ ಪೊಳಪೆನಲಸುಕೆವನದೆಸೆಯೆ ||
ಸ್ಮರ ಜಯಾಂಗನೆ ಯೆಳೆನಗೆಯವೊಲು | ಸ್ಮರನರಸಿಯಲರ್ಗಣ ರುಚಿಯೊಲು |
ಸ್ಮರೆ ಯಶೋಲತೆಯಂತೆ ಮಲ್ಲಿಗೆ ಪೂತು ಚೆಲುವಾಯ್ತು || ೧೯ ||

ಒಲಿದು ಗಾಢಾಲಿಂಗನದಿ ತನು | ಪುಳಕವಿತ್ತುದು ಚೂತರಮಣಗೆ |
ತಳೆದ ಮೈಗಂಪಿತ್ತಳಪ್ಪಿದ ಮಂದಮಾರುತಗೆ ||

ನಲಿದು ಬಂದಾಟಕ್ಕೆ ಮಧಪಂ | ಗಳು ಬರುತ ಚುಂಬಿಸಲು ಮೊಗವಿ |
ತ್ತಳು ವಿಕಚಮಲ್ಲೀವನಿತೆ ಸಲೆ ಜಾರೆಯಂದದಲಿ || ೧೦ ||

ಕೆಳೆವರನ ಸೆಳೆಗೊಂಬಿನೆಲೆವಸೆ | ಗಳಲಿ ಖಗದಂಪತಿಗಳಡಿಗಡಿ |
ಗೆಳಸಿ ಸುರತಂಗೈವ ವರಕೂಜಿತಕೆ ನಸುನಗುತ ||
ಎಳೆಯ ನಂದನ ಸಿರಿಯ ಬಾಯ್ದೆರೆ | ಎಳವನಾಂತರೆ ಬಿರಿದ ತನಿ ವ |
ಣ್ಗಳ ಭರದಿ ತೆಲೆವಾಗಿ ರಸದಾಳಿಂಬವಿಂಬಾಯ್ತು || ೧೧ ||

ಬಿರವಿಗಿನ್ನುಳಿವಿಲ್ಲ ಬಲುಮೊಲೆ | ಗಿರಿಗಳಿಡುಕುರೊಳಡಗಿ ಬದುಕಿರೊ |
ಗಿರಿಜೆಯನು ಬಿಗಿದಪ್ಪದಿರ್ದೊಡೆ ಹರನ ಹಣೆಗಣ್ಣ ||
ಉರಿಯನಾಗಳೆ ನಂದೆವೊಯ್ವನು | ನರನ ಹವಣೇನೆಂದು ಕಾವನ |
ಬಿರಿದ ಡಂಗುರ ಸಾರಿತೆನೆ ಚೀರಿದವು ಪಿಕನಿಕರ || ೧೨ ||

ಹೊಸಬಸಂತನೆ ಪಡೆವಳನು ಸಖ | ಶಶಿ ಮನೋರಥ ಬೇರೆ ಕೈ ಕೊಂ |
ಡ ಸರ್ವ ಸಾನೆಮದಿಂದೊಲೆವ ಚೂತವೆ ಜಗವ್ರಾತ ||
ಮಿಸುಪ ಶುಕಪಿಕ ಮೂಲಬಲ ಕಂ | ಪೆಸವ ಗಾಳಿಯ ತೇಜಿಯಲರ್ವುಡಿ |
ಮುಸುಕೆ ಕಾಮನಧಾಳಿ ಬಂದುದು ಬಿರಯಿಗಳ ಮೇಲೆ || ೧೩ ||

ಗಿಳಿಗೆ ಭೋಜನ ಶಾಲೆ ಕೋಗಿಲೆ | ಗಳಿಗೆ ಜೇವಣ ಶಾಲೆ ಮಧುಪಾ |
ವಳಿಗೆ ಸಮ್ಮಧುಪಾನ ಗೋಷ್ಠೀ ಶಾಲೆ ಮನಸಿಜಗೆ |
ತೊಳಗುವಾಯುಧ ಶಾಲೆ ಮಂದಾ | ನಿಳಗೆ ನಾಟಕ ಶಾಲೆಯೆನೆ ಕಂ |
ಗೊಳಿಸಿದದು ಮಧುಮಾಸದೋಲಗ ಶಾಲೆಯೆನೆ ಬನವು || ೧೪ ||

ಮಲ್ಲಿಗೆಯ ಬಲುಬಿಲ್ಲಿಗಾ ಕಂ | ಕೆಲ್ಲಿಯಲರ್ಗೊಂಡೆಯವು ತಳಿರ್ಗಳ |
ಝುಲ್ಲಿ ಸೊಗಯಿಪ ತುಂಬಿದಿರು ಮಾಂದಳಿರದೊಣೆದುಂಬಿ ||
ಮಲ್ಲಿಗೆಯ ನನೆಯಂಬುಮಾವಿನ | ಬಲ್ಲರಳ ಮಂತ್ರಾಸ್ತ್ರವೆಸೆವಳ |
ರ್ವಿಲ್ಲನೆಚ್ಚು ಜಗತ್ರಯದ ಜಯವಾಂತು ಕಲಿಯಾದ || ೧೫ ||

ಇಂತು ಬಂದು ಬಸಂತದೊಳು ಚೆಲು | ವಾಂತುದಾ ನಂದನವೆನಿಪ್ಪುದ |
ಕಂತು ಪಿತ ವನಪಾಲಕನ ಬಿನ್ನಹದಿ ನೆರೆಯರಿದು ||
ಸಂತಸಂದಳೆದೈದಿ ತನ್ನಯ | ಕಾಂತೆಯರಿಗೆಲ್ಲರಿಗೆ ಪೇಳ್ದು ವ |
ಸಂತ ಕೇಳಿಗೆ ನಂದನಕ್ಕೆ ಪೊರಮಡುವ ಸಮಯದಲಿ || ೧೬ ||

ಸುರಕುಮಾರರ ಗೋಷ್ಠಿಯಲಿ ಕೇ | ಸರಿ ಸುಪೀಠದೊಳಿರ್ದ ನೇಮೀ |
ಶ್ವರನ ಸಭೆಗೈತಂದು ವಂದಿಸಿ ಎಲೆ ಜಗದ್ಗುರುವೆ ||

ಬರಲೆ ಬೇಹುದು ಬನಕೆ ಚೈತ್ರದ | ಸಿರಿಯನೀಕ್ಷಿಪೊಡೆಂದು ವಿನಯವ |
ನೊರೆದು ಕುಟಿಲವಿದೂರನನು ಕರೆಕೊಂಡನೊಲವಿಂದ || ೧೭ ||

ಬಲನು ಮೊದಲಾದವನಿಪತಿ ಸಂ | ಕುಳವು ತನ್ನಯ ಪೆಂಡವಾಸವು |
ಬಳೆದರಾಗದಿ ಭದ್ರಗಜ ಪಿಡಿಗಳಲಿ ನಡೆಗೊಳಲು ||
ನಳನಳಿಸುವಾ ಸೋಳಸಾಸಿರ | ಲಲನೆಯರ ಲಕ್ಷ್ಮೀವರನ ನಿ |
ರ್ಮಲ ಜಿನನ ಪಯಣವನು ಬಣ್ಣಿಸ ಬಲ್ಲಕವಿಯಾರೊ || ೧೮ ||

ಲಲನೆಯರ ನಸುನಗೆಯ ಸಾಲ್ದರೆ | ಜಲಧಿಯಿಲ್ಲದೆ ದೆಸೆಗೆ ಹರಿದವು |
ಕೊಳಗಳಿಲ್ಲದೆ ದಿಟ್ಟೆನೆಯ್ದಿಲ ಬಳಗ ಪಸರಿಸಿತು ||
ಬಲದ ಮುಗಿಲಿಲ್ಲದೆ ವಿಯನ್ಮಂ | ಡಲದೊಳಗೆ ಸುರಧನುಗಳೆತ್ತಲು |
ಬಳಸಿದವು ಬಹುರತ್ನ ರುಚಿಯಿಂದವರ ಪಯಣದಲಿ || ೧೯ ||

ಅರೆಗೆರೆಯ ಜಲಕಣವ ಚಂದನ | ತರು ಸುಗಂಧವ ಮಳಲವೊಲು ಕೆರೆ |
ಗೊರೆದ ಮುಕ್ತಾಕ್ಷತೆಯ ಕಮ್ಮಲರುಗಳ ಸಂಪಗೆಯ ||
ಬಿರಿ ಮುಗುಳ ದೀಪಗಳ ಶೋಭೆಯ | ದೊರಕಿದಂದದಿ ಕೊಂಡು ಬಂದೊಂ |
ದೆರಲು ಪೂಜಿಸುವಂತೆ ಬಂದಭವನನು ಬಳಸಿದುದು || ೨೦ ||

ಅರಸಿಯರು ಹಲಧರನು ತ್ರಿಜಗ | ದ್ಗುರುವು ಸಹ ಬಂದುದಕೆ ನನಗತಿ |
ಹರುಷವಾಯ್ತೆಂದಳಿ ರವದಿ ಕೊಂಡಾಡಿ ಪರಿಮಲದ ||
ಬರವಿನುಡುಗೊರೆಗೊಟ್ಟು ಲಕ್ಷ್ಮೀ | ವರನನಪ್ಪಿದವೊಲಲೆಯೇ ತಂ |
ಬೆರಲು ವಾಹನ ವಿಳಿದು ವಿಭುಗಳು ಪೊಕ್ಕರಾ ಬನವ || ೨೧ ||

ತನುಲತೆಯ ತೊಡೆವಾಳೆಗಳ ಮುಖ | ವನಜಗಳ ಮೆಲ್ಲಡಿದಳಿರ ಕಂ |
ಮನೆ ಸುಳಿದ ಸುಯ್ಯೆಲರ ಪೊಕ್ಕಳುಗೊಳನ ಕಟಿಪುಳಿಲ ||
ಸ್ತನ ಫಲಂಗಳ ನುಡಿಗಿಳಿಯ ಮೆಲು | ದನಿ ಪಿಕದ ಸೊಬಗಿನಲಿ ಜಂಗಮ |
ವನವೆನಲು ಪೊಕ್ಕರು ವನವನಚ್ಯುತನ ರಾಣಿಯರು || ೨೨ ||

ಸುತ್ತುಗೇದಗೆ ಬಿತ್ತಿಯೊಳು ಮಿಗೆ | ಕತ್ತಲಿಪ ಮಾಧವಿಯ ಬಳಸಿನೊ |
ಳೊತ್ತರಿಪ ಪೂಗಳನು ಹೇರಿದ ಮಾಮರನ ನೆಳಲು ||
ಒತ್ತಿನೊಳು ರಾಗಿಸಿದಶೋಕೆಯ | ಬಿತ್ತರದ ಚಾವಡಿಯೊಳಗೆ ಪುರು |
ಷೋತ್ತಮನೆ ಕೈಗೊಡಲು ನೇಮಿಕುಮಾರನೈತಂದ || ೨೩ ||

ಚಂದ್ರಕಾಂತದ ಜಗತಿಯಲಿ ತನಿ | ಚಂದನ ಪೊಸದಳಿರ ಹಸೆಯಲಿ |
ಚಂದದರಳಿನ ಗದ್ದುಗೆಯೊಳಚ್ಯುತನು ಹಲಧರನು ||

ಇಂದ್ರವಂದ್ಯನ ನಿಲಿಸಿ ತಾವೊಲ | ವಿಂದ ಜಗತಿಯ ಕೆಳಗೆ ಪಾಸಿದ |
ಚೆಂದಳಿರ ಪಸೆಯೊಳಗೆ ಕುಳ್ಳಿರ್ದರು ಮನೋತ್ಸವದಿ || ೩೪ ||

ಕೆಲರು ದ್ರಾಕ್ಷಾಮಾಡದೊಳು ಕೆಲ | ಕೆಲರು ಮಲ್ಲಿಗೆಲತೆಯ ಮನೆಯೊಳು |
ಕೆಲರು ಹಬ್ಬಿದ ಮಾಧವೀ ಮಂಟಪದೊಳಳ್ತಿಯಲಿ ||
ಕೆಲರು ಕೆಂದಳಿರ್ವಂದರೊಳು ಕೆಲ | ಕೆಲರಶೋಕೆಯ ಪಟ್ಟ ಶಾಲೆಯೊ |
ಳೊಲಿದು ವಿಶ್ರಮಿಸಿದರು ಚಂದ್ರಾನನೆಯರರ್ತಿಯಲಿ || ೩೫ ||

ವನಿತೆಯರು ಪುಷ್ಪಾಪಚಯಕಾ | ವನದೊಳಗೆ ಹಸರಿಸಿದರೊಡನಿಂ |
ದನಿಗೆ ಕೋಗಿಲನುಡಿಗೆ ಗಿಳಿಯರಸಂಚೆ ಮೆಲುನಡಿಗೆ ||
ಘನ ಕುಚೆಕ್ಕೆಣಿವಕ್ಕಿ ಕಬರಿಗೆ | ಮನವೆಳಸಿ ಶಿಖಿಜಾಳಿ ಭ್ರಮೆಯಿಂ |
ದನುನಯದಿ ಸಾರ್ತರಲು ಸಾರ್ದರು ಕುಸುಮತನುಲತೆಯ || ೩೬ ||

ಅಳಿಕುಳವು ನಿರಿಗುರುಳು ತೋಳ್ಗಳು | ಮಿಳಿರ್ವ ಸೆಳೆಗೊಂಬುಗಳು ಕೋಮಲ |
ಕಲಿಕೆಗಳು ಬೆರಳುಗಳು ಮೊಲೆಗಳು ಪೂದೊಡಂ ಬೆಡಗು ||
ತಳವು ಕೆಂದಳಿರೊಂದನೋರ್ವ | ಗ್ಗಳಿಸುತಿರೆ ಸೊಗಯಿಪಲತಾಂಗಿಯ |
ರೆಳಸಿ ಸಾರ್ದರಶೋಕಲತೆಯನು ಕೊಯ್ದರರಳುಗಳ || ೩೭ ||

ಉಂಗುಟದಿ ನೆರೆನಿಂದು ತಿವಳಿಯ | ಡಂಗೆ ನುಣ್ದೊಡೆ ಸಂಚಳಿಸೆ ಹೊಸ |
ಹೊಂಗಲಸ ಮೊಲೆ ಬಿಗಿದು ಬಿಂಕಿಸೆ ಜಡಿಯೆ ಧಮ್ಮಿಲ್ಲ ||
ಕಂಗಳೆಳೆ ಮಿಂಗಳವೊಲಡರೆ ಲ | ತಾಂಗಿ ನಳಿತೋಳೆತ್ತಿ ನವಕುಸು |
ಮಂಗಳನು ನೆರೆನಿಲುಕಿ ಕೊಯ್ದಳು ಬಳ್ಳಿಸಂಪಗೆಯ || ೩೮ ||

ಇರಬಹುದೆ ನಮ್ಮೊಡನೆಯೆಲೆ ಹಾ | ದರಿಯೆ ಸಖಿ ಹಾದಿರಿಯೆ ಕಾಮಗೆ |
ಸರಳಸರಳಹೆ ತುಂಬಿ ಘನ ಸಂಪಗೆಯೆ ಸಂಪಗೆಯೆ ||
ಸ್ಮರ ಶಶೋಕೆಯಶೋಕೆ ಮಲ್ಲಿಗೆ | ಇರಿಯ ಬಹೆ ನಮ್ಮಲ್ಲಿಗೆನುತಾ |
ಹರಿಯರಸಿಯರು ಪೂಗೊಯ್ದರಳ್ತಿಯಲಿ || ೩೯ ||

ಲಲನೆ ಮಲ್ಲಿಗೆಯೀಕ್ಷಿಸಲು ಕ | ಣ್ದೊಳೆಯೆ ನೈದಿಲದೆಂದು ಕೊಯ್ಯದೆ |
ತಳವನೆತ್ತಲಶೋಕೆಯರಳೆಂದೊಡನೆ ಕೈದುಡುಕೆ ||
ಎಲೆಮರೆಯೊಳಳಿ ಮೊರೆಯೆ ಸ್ಮರನ | ಚ್ಚಲರ್ಗಣೆಯಮೊರಹೆಂದು ಮಿಗೆ ಕು |
ಪ್ಪಳಿಸಿಯೋರ್ವಳು ಮುಗ್ಧೆ ನಗಿಸಿದಳಾ ವಿದಗ್ಧೆಯರ || ೪೦ ||

ಮತ್ತಮೋರ್ವಳು ಬಳ್ಳಿ ಮಾವಿನ | ಪೆತ್ತಲರ ಕೊಯ್ದೆದೆಯೊಳೆಲೆ ಹೊದ |
ರೊತ್ತಿನಲಿ ಗಿಳಿ ಮೂಗು ತೋರಲು ಕಳಿಕೆಗೆತ್ತಳಿಸಿ ||

ವೃತ್ತ ಕುಚೆ ಕೈನೀಡಿ ಬೆದರಿದೊ | ಡಿತ್ತ ಕೋಡಗವೇಡಿಸಲು ನಡು |
ಗುತ್ತ ಕಂಗೆಟ್ಟೋಡಿ ನಗಿಸಿದಳಾ ಮೃಗಾಕ್ಷಿಯರ || ೪೧ ||

ತುಂಬಿಗಿಲ್ಲರಳೊಂದು ತಳಿರ ತೊ | ಡಂಬೆ ಕೋಗಿಲೆಗೊಂದುವಿಲ್ಲ ಮು |
ಸುಂಬನೂರಲು ಗಿಳಿಗೆ ಕಾಯ್ಪಣ್ಣೊಂದುವಿಲ್ಲವೆನೆ ||
ಮಿಂಬೊಣರುಗಣ್ಣವಲೆಯರು ಕೊ | ಯ್ದಿಂಬರಿದು ಸವೆದವರ ಪಚ್ಚದ |
ಳುಂಬದಲಿ ಕೈಗೈದು ಬಂದರು ನಿಜಪತಿಯ ಬಳಿಗೆ || ೪೨ ||

ಆ ಸಮಯದಲಿ ಕಮ್ಮ ಕಮ್ಮನೆ | ಬೀಸುತಿರೆ ತಂಗಾಳಿ ಪನ್ನೀ |
ರ್ಸೂಸುತಿರೆ ಧಾರಾಗೃಹದಿ ಗಂಧರ್ವ ಕಿನ್ನರರ ||
ವಾಸ ವೀಣಾನಾದವನು ಕಲ | ಭಾಷಿಗಳ ಗಾನವನು ಲೇಸಿನ |
ರಾಸಿ ಬರೆ ಕಿವಿಗೊಟ್ಟು ಮನ್ನಿಸುತಿರ್ದರಾ ನೃಪರು || ೪೩ ||

ಇರಲು ತರುಣಿಯರಿತ್ತ ಕುಸುಮಾ | ಭರಣಗಳನಾ ನೇಮಿ ಭೂಮೀ |
ಶ್ವರಗೆ ಬಲನಾರಾಯಣರು ಪಸದನಗೊಳಿಸಿ ಮುದದಿ ||
ಅರಲ ಪಚ್ಚಲ ತಾವು ತಳೆದತಿ | ಹರುಷದಿಂದಲ್ಲಿರದೆ ನಡೆದರು |
ಸರಸನಿಧಿ ಸರಿದೊರೆಯೆನಿಪ ಕೇಳೀ ಸರೋವರಕೆ || ೪೪ ||

ಕಂಗಳೆಳೆ ಮಿಂಚುಗಳು ಕುರುಳ್ಗಳು | ಭೃಂಗಗಳು ತಾವರೆಗಳವರ ಮು |
ಖಂಗಳೆಳೆನಗೆ ತರತರದಿ ಬಹಕಿರುದೆರೆಯ ಬಳಗ ||
ಅಂಗರುಚಿ ಜಳ ಕಟಿಯ ಪುಳಿಲು | ತ್ತುಂಗ ಕುಚವಂಬುಜದ ಮೊಗ್ಗೆ ಬೆ |
ಡಂಗನಾಳ್ದಿರೆ ಪೊಕ್ಕುದಾ ಪೆಣ್ಗೊಳನು ಪೂಗೊಳನ || ೪೫ ||

ಸಂದ ಕುಂಕುಮದಿಂದ ಕತ್ತುರಿ | ಯಿಂದ ಚಂದನದಿಂದ ನಾನಾ |
ಚಂದವಾಗಿ ಕಟಿಪ್ರಮಾಣ ಹಿಮಾಂಬು ಪೂರಿತವ ||
ಸೌಂದರಿಯರೊಡನಂಬುಜೋದರ | ನೊಂದಿ ಪೊಗೆಕೆಳೆಯಮರರೊಡನಿಂ |
ತೊಂದು ಕಡೆಯಲಿ ನೇಮಿಪೊಕ್ಕನು ಬಲನನೊಡಗೊಂಡು || ೪೬ ||

ಅರಳುಗಣ್ಣಿಂ ನೋಡಿ ತನ್ನೊಳು | ಹರುಷದಿಂ ನೀರೇರಿ ನಾನಾ |
ಪರಿಯ ಕೊಳರ್ವಕ್ಕಿಗಳದನಿವಾದ್ಯದಲಿದಿರುಗೊಂಡ ||
ನೆರದಳಸ್ವಲ ಮಂತ್ರದಿಂ ಕ | ಮ್ಮರಳುಗಳ ತೆರೆಗೈಯ ಬಗಸೆಯ |
ಸುರಿದು ಕೆರೆ ಜಿನಗೆರಗಿತರಿವವರೆರಗರೇ ಗುಣಿಗೆ || ೪೭ ||

ಗಿಳಿಯ ಪಾರಾಪರದ ಚಕ್ರದ | ಕಳಮರಾಳದ ನವಿಲ ಮದಕೋ |
ಕಿಳದ ಕೊಂಚೆಯ ಜೊನ್ನವಕ್ಕಿಯ ಪರಿಜನೊಳಕೊಂಡ ||

ಪಲವು ರನ್ನದ ವಾರಿಯಂತ್ರಂ | ಗಳನು ಪಡಿದೋರೋರ್ವರೊಡನೋ |
ಕುಳಿಯನಾಡಿದರಾಡೆ ಬಗೆರತಿ ರಸದಲೋಕುಳಿಯ || ೪೮ ||

ಹರಿಯುರದಲಾ ಜಲಕಣಂಗಳು | ನೆರೆದು ನೆನೆಯಿಸಿ ತಾರಲಡಿದಂ |
ಬರವ ಸಿರಿಯನು ಬಳಿಕ ಚಂದನಕರ್ದಮವ ಮೊಗೆದು ||
ತರುಣಿ ರುಗುಮಿಣಿ ಚೆಲ್ಲೆ ಹರಿಹಲ | ಧರನ ವಾಲಿರೆ ಕುಂಕುಮಾಂಬುವ |
ಸುರಿಯೆ ರೋಹಣಗಿರಿಯವೊಲು ಚೆಲುವಾಗಿ ರಂಜಿಸಿದ || ೪೯ ||

ಸುರನದಿಯಲಭ್ರಮುವನಭ್ರಮು | ವರಸ ಕರಪುಷ್ಕರದಿಮಿನಿಸುವ |
ತೆರದಿ ಪರಿಮಲ ಜಲವ ಕರದಿಂ ಮೊಗೆದು ರುಗುಮಿಣಿಗೆ ||
ಸುರಿಯೆ ಪುರುಡಿಸಿ ಸತ್ಯಭಾಮೆಯು | ಹರಿದು ಬಂದಂಡೆಯ ಜಲವನು |
ಪ್ವರಿಸಿ ಹೊಯ್ದೊಡೆ ನಸುನಗುತಸಿರಿಯರಸ ಮೈಗೊಟ್ಟ || ೫೦ ||

ತರುಣಿಯರನಂಗಜನು ಕತ್ತಲೆ | ಸರಳಿನಿಂದುರಿಬಾಣದಿಂ ಹಿಮ |
ಕರವಿಶಿಖದಿಂದೆಚ್ಚನೆನೆ ಕತ್ತುರಿಯ ಚಂದನದ ||
ಪರಿಮಳಪ ಕುಂಕುಮದ ರಸವು | ಬ್ಬರಿಸಿ ಜೀರ್ಕೊಳವೆಗಳಿನುರೆ ಭೋ |
ರ್ಗರೆದುನೆತ್ತಲು ಪೆಂಡವಾಸದ ತಂಡಗಳ ಕರದಿ || ೫೧ ||

ಕತ್ತುರಿಯ ಕುಂಕುಮದ ಚಂದನ | ದೊತ್ತರಿಪ ರಸದಿಂದ ತೊಯಿದಾ |
ವೃತ್ತಕುಚೆಯರ ನೀಲದಿಂ ಮಾಣಿಕದ ಮೌಕ್ತಿಕದಿಂ ||
ಬಿತ್ತರಿಸಿ ಸವೆದಿರಿಸಿ ದಾಮಣಿ | ಪುತ್ತಳಿಗಳೆನೆ ಕೊಳನೊಳಗೆ ತೊಳ |
ಗುತ್ತಲಿರ್ದರು ಮೂರು ಸಂಜೆಯ ಸಿರಿಗಳಂದದಲಿ || ೫೨ ||

ಸಾಸಿರಮರ ಕುಮಾರಕರು ಸುವಿ | ಳಾಸಿನಿಯರಿರವಾಂತು ನೇಮಿಜಿ |
ನೇಶನೊಡನತಿ ಬಿನದ ದೋಕುಳಿಯಾಡಿ ಕಲ್ಪಿಸಿದ ||
ಸಾಸಿರೆಸಳಬುಜದೊಳಿರಿಸೆ ಮಿಗೆ | ಸೂಸಿ ಚಂದನರಸವ ಚಂದ್ರ ಜಿ |
ನೇಶನಂತಿರೆ ಗೆಯ್ದು ಬಲನೊಲವಿಂದ ವಂದಿಸಿದ || ೫೩ ||

ಸಕಲಕಾಂತಾ ಜನದ ದೃಷ್ಟಿಯು | ಭಕುತಿಯಿಂದೆರಗಿದವು ಜಿನರೂ |
ಪಕದೊಳಂಗನೆ ಮಂಗರಾಜನ ಸಹಿತ ರೇವತಿಯು ||
ವಿಕಚ ಕುಲವಯ ನೇತ್ರೆ ಮೃಗನಾ | ಭಿಕೆಯ ರಸವನು ಪೊಯ್ಯೆ ಕಮಳಾಂ |
ಬಕನವೊಲು ಬಲಭದ್ರನುದ್ಧತ ರುದ್ರನೊಪ್ಪಿದನು || ೫೪ ||

ಬೆಳಪ ಬೆಳತಿಗೆಗಂಳವು ಬೆಳು | ವೆಳಗನಧರಕೆ ಕೊಟ್ಟವರಕೆಂ |
ಬೆಳಗನಾಗಳು ಮಾರುಗೊಂಡವೊಲೆಸೆದವಬಲೆಯರ ||

ಕಳಸಿ ಕುಚ ಚೂಚುಕವು ಸುರ್ಕಿದೊ | ಡಳಿವಿ ನೀಲಮ ಕೇಶಗಳು ಸು |
ರ್ಕುಳಿದ ವೆಂದಡೆ ಪುರುಡಗರುಡಿಗಳಲ್ತೆ ವನಿತೆಯರು || ೫೫ ||

ಭೋಗಿಪತಿ ನಾಗಿಣಿಯರೊಡನಾ | ನಾಗ ಲೋಕದಿನೆದ್ದು ಬಂದವೊ |
ಲಾಗಳಾ ಕೊಳನೊಳಗೆ ಪೆಂಡಿರ ತಂಡದೊಡನೊಲಿದು ||
ಭೋಗಿ ಶಯನನು ಬಂದು ಪೆರಗಿಂ | ಬಾಗಿ ನಿಂದಾ ತೊಯಿದ ವಸನವ |
ನೀಗಿಯನಿಬರು ತಳೆದರಾ ವಸ್ತ್ರಾಭರಣ ತತಿಯ || ೫೬ ||

ವಿನುತ ನೇಮಿಕುಮಾರ ನಿರದೊ | ಯ್ಯನೆ ಕೊಳನ ಪೊರಮಟ್ಟು ಬರೆ ಕಾ |
ಮಿನಿಯರಾ ಸೋಪಾನ ರತ್ನಸ್ಥಳಿಯೊಳಡಿಯಿಡುತ ||
ಜಿನನ ಚೆಲುವನು ನೋಡುತಿರೆ ಬಂ | ದನುಪಮನು ತಾನುಟ್ಟುದನು ಕೃ |
ಷ್ಣನ ಸವುಜ್ಞೆಗೆ ಸತ್ಯಭಾಮೆಯ ಕೈಗೆ ನೀಡಿದನು || ೫೭ ||

ನೀಡಿದೊಡೆ ಕೈದೆಗೆದಿದೆನ್ನಾ | ದಾಡಿಯವಳೇ ನಾನು ಕೃಷ್ಣನ |
ರೂಢಿಸಿದ ಹಿರಿಯರಿಸಿಯಲ್ಲೆನೆ ನಿನ್ನ ಮೈಲಿಗೆಯ ||
ಪಾಡಳಿದು ಪಿಡಿವೆನೆ ಎನಲು ಕೆ | ಟ್ಟಾಡಬಹುದೇ ಅಕ್ಕ ಎಂದಾ |
ಪ್ರೌಢ ರುಗುಮಿಣಿ ಈಸಿಕೊಂಡಿಂತೆಂದಳಾ ಸತಿಗೆ || ೫೮ ||

ಜಿನನ ಜನ್ಮಸ್ನಾನ ಪರಿಪಾ | ವನ ಜಲವನಿಂದ್ರಾದ್ಯರಾಂಪರು |
ಮನವೊಸೆದು ಮಸ್ತಕದೊಳೆನೆ ಹುಲುದೊತ್ತಿರಾವೆನಲು ||
ಅನಿಮಿಷಸ್ತ್ರೀ ನಿಕರವಾತನ | ಜನನಿಗಿಕ್ಕೆಯ ತೊತ್ತಿರಾಗಲೆ |
ಜಿನಗೆ ಬೆಸಕೆಯಿವಮರರನು ನೋಡೆಂದಳಾ ಕಾಂತೆ || ೫೯ ||

ರುಗುಮಿಣಿಯ ನುಡಿಗೇಳಿ ಮನದೊಳು | ಚಿಗುರೆ ಮುನಿಸೆಲೆ ಭೀಷ್ಮಜೆಯೆ ಕೇ |
ಳು ಗಡ ಪೂತಿನಿ ಮುಖ್ಯರನು ಬಾಲ್ಯದಲಿ ಬಡಿದಂತೆ ||
ನಗವನೆತ್ತಿದವೊಲು ಹರಿಯು ಪ | ನ್ನಗನ ಪಕ್ಕೆಯನೇರಿ ಶಾರ್ಙ್ಗವ |
ಬಿಗಿದು ಶಂಖವನೂದಿದವೊಲತಿ ಬಲರದಾರೆನಲು || ೬೦ |

ಅರೆ ಮರುಳಲಾ ಅಕ್ಕ ಕೇಳೀ | ನರರ ಸತ್ವವಿದೇನು ಈ ಭೂ |
ಧರನು ಗರ್ಭಕ್ಕೊಗೆಯದತ್ತರುದಿಗಂಳೆಂಬುದು ||
ಸುರಪತಿಯ ಸಿಂಹಾಸನವ ತಾ | ವರೆಯೆಲೆಯ ನೀರಂತೆ ನಡುಗಿಸಿ |
ದುರು ಮಹಿಮನಲ್ಲವೆ ವಿಚಾರಿಸು ಕೇಳು ಹೇಳುವನು || ೬೧ ||

ಕಂಡರಿಯಿದೇ ದಿವದ ಪೆಂಡಿರು | ಗಂಡರೆಲ್ಲರು ಮಿಕ್ಕ ದೇವರ |
ತಂಡತಂಡವು ನಮ್ಮ ಕಣ್ಬೊಲನಾಗಿ ಗಗನದಲಿ ||

ಮಂಡಳಿಸಿ ಬಂದೀ ಕುಮಾರನ | ಕೊಂಡು ಶಚಿಕೊಡಲೆತ್ತಿ ಕೊಂಡಾ |
ಖಂಡಲನು ಸುರಗಜದ ಮೇಲಾ ಮೇರುಗೈದುವದ || ೬೧ ||

ಮೇರುವಿಂ ಕ್ಷೀರಾಬ್ಧಿಗನಿಮಿಷ | ರೋರಣಿಸಿ ಇಕ್ಕಡೆಗೆ ಪೋಗಿ ಸು |
ಧಾರಸವ ಮೊಗೆದೆಂಟು ಯೋಜನದೊಡಲು ಯೋಜನದ ||
ಚಾರು ಮುಖವಿಸ್ತಾರವುಳ್ಳ ಘ | ಟೋರು ಮಾಲೆಯ ತರಲು ಶಕ್ರನು |
ದಾರನಾಗಳು ಕೋಟಿ ಹಸ್ತವನಾಂತು ಧರಿಸಿದನು || ೬೩ ||

ಎಡೆವಿಡದೆ ಮಜ್ಜನವ ಮಾಡಿಸೆ | ನಡುಗಿದನೆ ಶಿಶು ಸೀಂತೊಡಮರರ |
ಗಡನವೆಲರಿಂದೆಲ್ಲ ಭೂರವದಾದು ದೆಂಬುದನು ||
ನುಡಿಯರೆನಮಗಮರಿಯರೇ ಅಂ | ತೊಡೆಯನಾತನೆ ಮೂಜಗಕೆ ನಮ್ಮ |
ಗೊಡೆಯನಚ್ಚುತನಾ ಜಿನನೆ ಗುರುವೆಂದಳಾವನಿತೆ || ೬೪ ||

ಎಂದ ರುಗುಮಿಣಿಯುಕ್ತಿಗಾ ಪೂ | ರ್ಣೇಂದುಮುಖಿಯುತ್ತರವ ಕೊಡದಿರೆ |
ತಂದ ದಿವ್ಯಾಂಬರ ವಿಭೂಷಣದಿಂ ಬಲಚ್ಚುತರು ||
ಅಂದು ನೇಮಿಕುಮಾರನನು ಮಿಗೆ | ಚಂದದಲಿ ಸಿಂಗರಿಸಿ ಬನದಿಂ |
ಬಂದು ತಂತಮ್ಮಾಲಯಂಗಳ ಪೊಕ್ಕರನಿತರೊಳು || ೬೫ ||

ನಿನಗೆನಗೆ ತನಗಿನ್ನು ಹೋಹುದೆ | ಮನದ ಶಲ್ಯವು ಮರಲಿದಲ್ಲದೆ |
ಜಿನನೆ ಭಾವೆಯ ಗರ್ವವಚನದಿನಿನಿಸು ಮುನಿಸಾಂತು ||
ವನದಿ ಬರುತಚ್ಚುತನ ಕೈದುವ | ಮನೆಗೆ ಬಂದಿಭವಿಳಿದೊಳಗೆ ಪೊ |
ಕ್ಕನು ನಡುಗುತಿರಲೆಂಟು ಸಾಸಿರ ಯಕ್ಷದೇವತೆಯು || ೬೬ ||

ಏರುತಹಿಶಯ್ಯೆಯನು ಶಾರ್ಙ್ಗವ | ನೇರಿಸಿದನೆಡಗೈಯೊಳಾಗಳೆ |
ಚೇರಿಸಿದನಾ ಪಾಂಚಜನ್ಯವ ಮೂಗಿನಲಿ ನೇಮಿ ||
ತೋರಿದವು ತಾರೆಗಳು ದಿಗಿಭವು | ಹಾರಿಬಿದ್ದವು ನಡುಗುತಿರ್ದುದು |
ಮೂರು ಲೋಕವು ತದ್ಧ್ವನಿಗೆ ಭೂಪಾಲ ಕೇಳೆಂದ || ೬೭ ||

ಬಲನು ದುರ್ಬಲನಾಗಿ ಮಿಗೆ ನೇ | ಗಿಲನು ಹಿಡಿದು ಸತ್ಯಭಾಮೆಯು |
ಕಳವಳಿಸಿ ಬಿಗಿದಪ್ಪಿದಳಿವೇನೆಂದು ಚಿಂತೆಯಲಿ ||
ಮುಳುಗಿದನು ಕಂಸಾರಿ ಅಲ್ಲಿಂ | ತಳರ್ದು ಬಂದು ನಿಜಾಲಯದೊಳಾ |
ಗಳೆ ಜಗತ್ರಯ ಸತ್ವನಮರರೊಳಿರ್ದನೋಲಗವ || ೬೮ ||

ಹರಿದು ಬಂದಾ ಸಮಯದೊಳಗಾ | ಉರಗ ಶಯ್ಯಾದಿಗಳ ಕಾದಿಹ |
ವರ ಭಯಂಕರ ದೇವತೆಗಳೆಲೆ ದೇವಬಿನ್ನಹವು ||

ಭರದಿ ಸಾಲೆಯ ಪೊಕ್ಕು ನಮ್ಮನು | ಸರಕು ಮಾಡದೆ ಶಂಖ ಶಾರ್ಙ್ಗವ |
ನುರಗ ಶಯ್ಯೆಯನೇರಿಯೇರಿಸಿ ಪೂರಿಸಿದನರುಹ || ೬೯ ||

ಎಂದೊಡತಿ ವಿಸ್ಮಯವನಾಂತು ಮು | ಕುಂದನಾ ಬಲಭದ್ರನನು ಕರೆ |
ದೊಂದಿಯೆಲ್ಲರ ತೆಗೆದು ಕೇಳಗ್ರಜನೆ ನಮ್ಮನುಜ ||
ಇಂದ್ರವಂದ್ಯನನಂತ ವೀರ್ಯ ವ | ಸುಂಧರೆಗೆ ಕ್ರಮದಿಂದರಸು ಬೇ |
ಕೆಂದು ಮದ್ರಾಜ್ಯವನು ಸೆಲೆದಡೆ ಕಾವನಾರೆಂದ || ೭೦ ||

ಎಲೆ ಮುರಾಂತಕ ಅರಿಯದವರಂ | ತೊಳಲಲೇತಕೆ ಕಲ್ಪತರುವಿರೆ |
ಕೊಳತ ಕಡ್ಡಿಗೆ ಬಯಸುವರೆ ವರಮುಕ್ತಿ ಸಾಮ್ರಾಜ್ಯ ||
ಲಲನೆಯೊಕ್ಕತನುವುಳಿದು ನ | ಮ್ಮಿಳಿಗೆ ಜಾರೆಗೆ ಮೋಹಿಸುವ ಕೆ |
ಟ್ಟಳಿ ಮನವು ತೀರ್ಥಂಕರರಿಗಿರದೆಂದನಾ ಬಲನು || ೭೧ ||

ನೀವು ನುಡಿದುದೆ ಸತ್ಯವಾದೊಡಿ | ಳಾ ವಿನುತರು ಚಕ್ರವರ್ತಿ ಮ |
ಹಾ ವಿಭೂತಿಯನಂಗಜಾತತ್ತ್ವವನು ತೀರ್ಥಕರ ||
ಶ್ರೀವಿಶಿಷ್ಟತೆಯನು ಪುರಾತನ | ದೇವರಾಂತವರೊಳರೆನಲು ಬಲ |
ದೇವನರಿದು ಜನಾರ್ಧನಗೆ ಕೇಳದರಿರವನೆಂದ || ೭೨ ||

ಅವರಿಗಾಲಕ್ಷ್ಮಿಗಳು ಪುಣ್ಯದ | ತವಕದಿಂದೊಲಿ ತಂದವಲ್ಲದೆ |
ಅವರು ತಜ್ಜನ್ಮದಲಿ ಕಾಮಿಸಿ ಪಡೆದುದಿಲ್ಲೆನಲು ||
ಅವಧರಿಸಿ ಬಲನುಕ್ತಿಯನು ಮಾ | ಧವನು ಮತ್ತಿರದಾಗಳಾವೀ |
ಕುವರಗತಿ ವೈರಾಗ್ಯವನು ತಹವೆಂದು ಬಗೆದಂದ || ೭೩ ||

ಹೋದುದು ಮನದುಮ್ಮಳವು ಮಧು | ಸೂದನಗೆ ಮತ್ತಿತ್ತಲಾ ಪು |
ಣ್ಯೋದಯನು ಪಲದಿವಸವಮರರಕುಮಾರರೊಗ್ಗಿನಲಿ ||
ಶ್ರೀದಿವಿಜನರನಾಗ ಪತಿತಿನ | ಪಾದನಾ ನೇಮೀಶ್ವರನು ನಿ |
ರ್ವಾದ ಪಾವನಚರಿತನಿರ್ದನು ಭೂಪಕೇಳೆಂದ || ೭೪ ||

ವರಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀಜಾತಕಲ ಮಧು |
ಕರ ವಿರಾಜಿತ ಸುಕವಿ ಸಾಳ್ವ ವಿರಚಿತವೆನಿಪ್ಪ ||
ಪರಮ ನೇಮಿ ಜಿನೇಂದ್ರ ಪಾವನ | ಚರಿತೆಯೊಳು ಪದಿಮೂರನೆಯದಿದು |
ದೊರೆವಡೆದುದಾ ಚಕ್ರಪರ್ವವು ಮಿಗೆ ಜನಾರ್ದನನ || ೭೫ ||

|| ಅಂತು ಚಕ್ರ ಪರ್ವಕ್ಕಂ ಸಂಧಿ ೫೮ಲಕ್ಕಂ ಮಂಗಲಮಹಾ ||

# ಸುದೀಕ್ಷಾ ಪರ್ವ (ಸಂಧಿ ೫೯)

**ಸಂಧಿ ೫೯**

ನೇಮಿ ಲೋಕಸ್ವಾಮಿ ಮದುವೆಗೆ | ಆ ಮಹೋತ್ಸವದಿಂ ಬರುತನಿ |
ಸ್ಸೀಮ ದೀಕ್ಷಾಲಕ್ಷ್ಮಯೊಳು ಮದವಳಿಗ ತಾನಾದ || ಪದ ||

ಕೇಳು ಮಗಧಾಧೀಶ ನುತವನ | ಮಾಲಿಯಿರುತಿರುತೊಂದು ದಿನದಲಿ |
ತಾಳಲಾಂಛನ ಸಹ ಸಮುದ್ರ ವಿಜಯನೃಪಾಲಕನ ||
ಆಲಯಕೆ ನಡೆತಂದೆರಗಿ ಭೂ | ಪಾಲ ಚೂಡಾಮಣಿಯೆ ನೇಮಿಗೆ |
ಮೇಳಿಸಿತು ಯೌವನವು ಮದುವೆಯ ಮಾಡಬೇಕೆಂದ || ೧ ||

ಎಂದವರನಹುದೆನಿಸಿಯೆಲ್ಲರು | ಬಂದುಯದುಕುಲ ಮೌಳಿನೇಮಿಜಿ |
ನೇಂದುವನೊಡಂಬಡಿಸಿ ಮಂಗಲಕಾರ್ಯವನು ತಿಳುಹಿ ||
ಬಂದು ಬಳಿಕಾ ಉಗ್ರಸೇನನ | ಚಂದದಾತ್ಮಜೆಯನು ವಿಮಳಪೂ |
ರ್ಣೇಂದು ಮುಖಿಯನು ತರಿಸಿದನು ಭೂಪಾಲಕೇಳೆಂದ || ೨ ||

ಅತಿಚತುರ ವಿದ್ಯಾವಿಜಿತ ಭಾ | ರತಿಯ ನುಡಿತ ಪ್ರೇಮರಸ ಪಾ |
ರ್ವತಿಯ ನೂತನರತಿಯನಾ ರಾಜೀಮತಿಯ ಸತಿಯ ||
ಕ್ಷಿತಿವಿನುತರೈನೂರ್ವರವನೀ | ಪತಿಸುತೆಯನರೊಡವೆರಸಿ ಮೆರೆವ |
ಚ್ಯುತನು ತರಿಸಿದ ತನ್ನ ಮನೆಗವನೀಶ ಕೇಳೆಂದ || ೩ ||

ಬರೆ ಮುಹೂರ್ತಾಸನ್ನವಾಗಿರೆ | ಕರಮೆಸೆವ ನೀಲದನೆಲನು ಬಿ |
ತ್ತರದ ಪಳುಕಿನ ಕೇರುಪವಳದ ಕಂಬಹುಲಿಸಗಳ ||
ಪಿರಿಯವಾತಾಯನವು ಪಚ್ಚೆಯ | ಹರಿಜಗಲಿ ಗೋಮೇಧಿಕದ ಮೇ |
ಹುರವು ಮಾಣಿಕ ಗಳಸವೆಸೆವುದ್ವಾಹ ಗೇಹವನು || ೪ ||

ಸವೆದುದಾ ಮಧ್ಯದಲಿ ವೇದಿಕೆ | ಅವನಿಗದು ಹೊಸತೆನಿಸೆ ಕಟ್ಟಿದ |
ಚವಲನಗಳ ಮೌಕ್ತಿಕದ ವಂದನಮಾಲೆಗಳ ಚೆಲುವಿಂ ||
ನವ ರತುನಮಯ ಮಕರ ತೋರಣ | ವಿವಿಧ ಮಂಗಲ ಕೋಣಕಳಸ |
ಪ್ರವರ ಮಣಿ ಭೃಂಗಾರವೆಸೆದುದು ಧಾರೆಮಂಟಪವು || ೫ ||

ಅರುಣಮಣಿ ಪಾತ್ರೆಯೊಳು ಘಸೃಣವ | ಮರಕತದ ಬಟ್ಟಲೊಳು ಕರುಕೆಯ |
ನುರುವನೀಲದ ಚಸಕದೊಳು ಕತ್ತುರಿಯ ತೀವಿರೆಯು ||

ಬರಿಯವೆನೆ ಕಾಮಿಸಿದವತಿ ಬಂ | ಧುರದ ವರಮುತ್ತಿನ ಪದಾವಳಿ |
ಯೆರಳು ದಧಿ ಕನ್ನಡಿ ಕಳಸವಿಂಬಾದುದದರೊಳಗೆ || ೭ ||

ಅದು ವಿವಾಹಾಲಯವೆನಿಸಿ ಮ | ತ್ತದು ಮನೋಜನ ವಿಜಯಲಕ್ಷ್ಮಿಯ |
ಸದನವದು ಪೊಸಸುಗ್ಗಿಯರಮನೆಸುರಧನುವಿನಿಕ್ಕೆ ||
ಅದು ಗಜಾಶ್ವನರಾವಳೀ ಪ | ತ್ರದ ವಿಚಿತ್ರಿತ ಚಿತ್ರಮಂಟಪ |
ಮದುವೆ ಮದುವೆಗೆ ಪುದುವೆನಿಸಿ ನೋಟಕರನೊಲಿಸಿದುದು || ೭ ||

ಅರಸಿಯಾ ಶಿವದೇವಿಯಂತಃ | ಪುರದ ಸೇವಕ ಮುಖ್ಯರೆಲ್ಲರ |
ತರುಣಿಯರಿಗಾಭರಣವಸ್ತ್ರ ಸುಗಂಧಕುಸುಮಗಳ ||
ಪರಿಪರಿಯ ಬಾಯಿನವನಿತ್ತಳು | ವರ ಸಮುದ್ರ ವಿಜಯ ನೃಪಾಲಕ |
ಪುರ ಜನಕೆ ನೃಪತತಿಗೆ ವಿಬುಧರಿಗಿತ್ತನಾ ತೆರದಿ || ೮ ||

ಪಲವು ಗಂಧೌಷದಿ ವಡೆದ ನಿ | ರ್ಮಲಿನ ತೀರ್ಥೋದಕದಿ ಮಿಗೆ ಮಂ |
ಗಳವರೆಗಳುಲಿವುತಿರೆ ಮಂಗಲ ಮಜ್ಜನಂಗೊಳಿಸಿ ||
ಚೆಲುವ ನೇಮಿಕುಮಾರನನು ತೊಳ | ತೊಳಪ ಸಿಂಗರ ಮಂಟಪದಲ |
ಗ್ಗಳಿಸಿ ಪಸದನಗೊಳಿಸಿದರು ಭೂಪಾಲ ಕೇಳೆಂದ || ೯ ||

ಸುರಪನಟ್ಟಿದ ದಿವ್ಯ ರತ್ನಾ | ಭರಣ ಸುರಕುಜಜಾತ ದಿವ್ಯಾಂ |
ಬರ ಕುಸುಮ ದಿವ್ಯಾನುಲೇಪನದಿಂದನಿಜಾನಕ |
ಹರಿಬಲಾದ್ಯರು ಮೂರು ಲೋಕದ | ಸಿರಿಯ ಸೊಬಗಿನ ಚೆಲುವಿಕೆಯನಿರೆ |
ವರಿಸಿದನುಪಮ ಮೂರ್ತಿಯನು ಕೈಗೈಸಿದರು ನಲಿದು || ೧೦ ||

ವರ ಜಗತ್ತ್ರಯ ಶೇಖರನೆ ಶೇ | ಖರವು ನೀಲಾಚಂಡ ಚೂಳವು |
ಸುರಧನುವನಿಂಬಿಡುವ ರತ್ನದ ಶಿಖರವೆನೆ ಮೆರೆಯೆ ||
ಪರಮಲಕ್ಷ್ಮಿಯ ಧವಲ ಲೋಚನ | ಕಿರಣ ಪಸರಿಸಿದಂತೆ ಪೆಂಪಾ |
ದುರದೊಳೊಪ್ಪಿತು ತೋರ ಮುತ್ತಿನ ಹಾರ ಚೆಲುವಾಗಿ || ೧೧ ||

ತೊಳತೊಳಪ ತಿಳಿಜೊನ್ನನೀಲಾ | ಚಳವ ಬಳಸಿದ ತೆರದಿ ಸೊಗಯಿಸಿ |
ಬಳಸಿ ಮಿಗೆ ಚೆಲುವಾಯ್ತು ಕರೆವೆರಸಿದುದು ಕೂಲವನು ||
ತಳೆದ ನೇಮಿಕುಮಾರಕನ ಮಂ | ಗಳದ ಸದನದ ಚೆಲುವ ಶೇಷಂ |
ಗಳವೆ ಪೊಗಳುವೊಡೆನಲು ಬಣ್ಣಿಸಬಲ್ಲ ಕವಿಯಾರೊ || ೧೨ ||

ಯದು ನೃಪಾಲಕರೆಲ್ಲರಾಗಳು | ಮುದದಿ ಮಂಗಲವಾದ್ಯವುಲಿಯಲು |
ಮದವಣಿಗನನು ತಂದು ಕರಿಪತಿ ಕಂಧರದೊಳಿರಿಸಿ ||

ತ್ರಿದಶರಿಕ್ಕುವ ದಿವ್ಯ ಚಾಮರ | ವದುವೆ ಘನಮುಕ್ತಾತಪತ್ರವು |
ಪುದಿದೆಸೆಯೆ ಪೊರಮಟ್ಟುವಾ ದಿಬ್ಬಣವು ಸಬ್ಬವದಿ || ೧೩ ||

ಕೂಡೆ ಬಂದುದು ದೆಸೆಗೆ ತೀವಿದ | ನಾಡೆರೆಯರುರುವಾಹನದೊಳಾ |
ಗಾಡಿಕಾತಿಯರಲ್ಲಿ ಕನ್ನಡಿಕಲಶಗಳ ಪಿಡಿದು ||
ಪಾಡಿದರು ಶೋಭನಗಳನು ನಲಿ | ದಾಡಿದರು ನರ್ತಕಿಯರುರೆ ಕೊಂ |
ಡಾಡಿದರು ತರತರದಿ ಮಂಗಲಪಾಠಕರು ಜಿನನ || ೧೪ ||

ಇಂತು ನಿಬ್ಬಣ ಪೋಗುತಿರೆ ಕಂ | ಸಾಂತಕನ ರಾಜಾಲಯದ ಶಶಿ |
ಕಾಂತಮಯದುದ್ವಾಹಗೇಹದ ಸಾರೆ ಬರಬರಲು ||
ಅಂತಕನ ಬಾಯಂತೆ ಕಂಟಕ | ವಾಂತ ಗೇರೆಯದೊಳಗೆ ಮೃಗಗಳ |
ಸಂತತಿಯು ಕಡು ಹಸಿದು ಗೋಳಿಡುತಿರ್ದುವೆಡೆಬಿಡದೆ || ೧೫ ||

ಸದಯನಾಗಳು ಕಂಡು ತನ್ನಯ | ರದನಿಯನು ಕೂರಂಕುಶದಿ ಸೆಳೆ |
ದದಿರದಂದಲಿ ನಿಲಿಸಿ ಅಗಣಿತ ಮೃಗಗಣವ ವನದಿ ||
ಸದೆದು ತಂದವರಾರು ಘೋಳಿ | ಟ್ಟೊದರುತವೆ ಕಡುಹಸಿದುದೇಕೆನೆ |
ಲದನು ಹರಿ ಮುಂಕಲಿಸಿದಂದದಿ ಪೇಳ್ದನಾ ಶಬರ || ೧೬ ||

ದೇವ ನಿಮ್ಮಯ ಮದುವೆಗೆಂದಖಿ | ಳಾವನೀ ಜನ ಬಂದುದದರಿಂ |
ದೇವರರ್ತಿಯನೀಕ್ಷಿಸುತ್ತಿರೆ ಮೃಗಗಳನು ಕಡಿದು ||
ತೀವಿ ನೆತ್ತರ ಪೊಳೆಯು ನೆರೆ ಮಾಂ | ಸಾವಳಿಯನರಿದಟ್ಟು ಕೆಲಬರಿ |
ಗೀ ವಿಧದ ಭೋಜನಕೆ ತರಿಸಿದನೆಂದನಾ ವ್ಯಾಧ || ೧೭ ||

ಕೊಂದು ಮಾಡುವ ಧರ್ಮದಂತೆದು | ಗಿಂದು ಬಂದುದು ಮದುವೆನೊಳವನು |
ತಿಂದು ತಪಗೆಟ್ಟಂತೆ ಈ ಜೀವಂಗಳನು ಕೊಲಿಸಿ ||
ಬೆಂದ ಮದುವೆಯಲೇನು ಫಲವಾ | ಸೌಂದರ್ಯರೇಂ ಸುಖವನಿತ್ತಪ |
ಳೆಂದು ಪೇಸಿದನರಿದನವಧಿಯಿನಾಗಳದರಿರವ || ೧೮ ||

ಪಲಬರುಂಡು ಬಿಸುಟ್ಟ ಪುಲ್ಲಿಗೆ | ನಿಳೆಗೆಳಸಿದಪೆ ನಾನೆನುತ ಹರಿ |
ಯಳಿಮನದ ಶಂಖೆಯನು ತಳೆದೀ ಕೃತಕವೊಡ್ಡಿದನೆ ||
ಇಳೆಯ ಲೋಭವದೇನ ಮಾಡದು | ಹುಳುನೆಯಿದ ಬಲೆಯೊಳಗೆ ಸಿಲುಕುಗು |
ನೊಳವನಲ್ಲದೆ ಭದ್ರಗಜಸಿಲುಕುವುದೆ ಹೇಳೆಂದ || ೧೯ ||

ಮನದೊಳೀ ಧರೆ ತನ್ನದೆಂದೆಂ | ನೆನೆದ ತಿರುಕಂಗಾದೆಡೆಯು ಸಂ |
ಜನಿಸುವುದು ದುರ್ಗತಿಯುದಿಂ ತನ್ನದಿಳೆಯೆಂದು ||

ಮನವೊಸೆದು ಪೊತ್ತವನೂ ಮೇಲೇ | ಳ್ಕನೆ ಕುಸಿದು ಕೆಳ ಬೀಳ್ದನಲ್ಲದೆ |
ಎನುತ ರಾಜ್ಯವಿರುಕ್ತಿಯನು ಮನದೊಳಗೆ ಭಾವಿಸಿದ || ೨೦ ||

ಚತುರನರಿತು ಸಮುದ್ರ ವಿಜಯ | ಕ್ಷಿತಿಪನೆಂದನು ನಂದನನೆ ಮೃಗ |
ತತಿಯ ನಡವಿಗೆ ಬಿಡಿಸಿ ಕಳೆವ ವಿವಾಹವನು ತಳಯ್ಯೆ ||
ಅತಿಸಮೀಪ ಮುಹೂರ್ತವಿಂದ್ರಾ | ರ್ಚಿತಪದನೆ ನೂಂಕೀ ಭವ ನೆನೆ ದು |
ರ್ಗತಿಗೆ ಕಾರಣವಾದ ಮದುವೆಯಲೇನು ಫಲವೆಂದ || ೨೧ ||

ತಳೆವೆನುತ್ತಮ ಮೋಕ್ಷ ಲಕ್ಷ್ಮೀ | ಲಲನೆಯೊಳು ಪರಿಣಯನವನುಯೆನು |
ತಿಳಿದನಭವನು ಅಭವನೀರಿಳಿದಂತೆ ಸಂಸ್ಕೃತಿಗೆ ||
ಲಲನೆಯೊ ಪರಿಣಯನ ಗೇಹಕೆ | ತಳೆದು ಬಂದಾ ಕೃಷ್ಣ ಮುಖ್ಯರ |
ತಿಳುಹಲುಸುರಿದನಂದು ಸಂಸಾರ ಸ್ವರೂಪವನು || ೨೨ ||

ಹರಿ ಬಲಾದ್ಯರು ಬೆಕ್ಕಸಂಬ | ಟ್ಟರು ಸಮುದ್ರ ವಿಜಯ ನೃಪಾಲನ |
ಹರುಷರಸವಾರಾಸಿ ಹುಡುಹುಡಿಯಾಯ್ತು ಶಿವದೇವಿ ||
ಮರೆದಳೊಡಲೊಡತನವನಿರದಾ | ಪುರಜನದ ಪರಿಜನದ ಚಿತ್ತದ |
ಸರಸವಿರಸವದಾದುದೆಲೆ ಭೂಪಾಲ ಕೇಳೆಂದ || ೨೩ ||

ಜನನಿಗೆಚ್ಚರನೊರೆದು ಮತ್ತಾ | ಜನಕ ಬಲ ನಾರಾಯಣಾದ್ಯರ |
ನನುನಯದಿ ಪಾಂಡವರನೆಲ್ಲರನಭಿಮುಖಕೆ ತರಿಸಿ ||
ಇನಿತು ನೋಯಲದೇಕೆ ಮೋಕ್ಷಾಂ | ಗನೆಗೆ ಮೆಚ್ಚಿದ ಮನವು ಮಿಕ್ಕಿನ |
ವನಿತೆಯರಿಗೆಳಸುವುದೆ ಹೇಳೆಂದನು ಮನೋಜಾರಿ || ೨೪ ||

ಆವಸುಖವೀ ಮನುಜತೆಯೊಳಾ | ಸಾವಿನಂದದೆ ಜನನ ಕಾಲದ |
ನೋವು ಗರ್ಭದಲುಂಡ ದುಃಖದ ಹವಣದಂತಿರಲಿ ||
ಜೀವಿಸುವುದಜ್ಞಾನದೊಳಗಾ | ಜೀವಿತವು ಜಲಬುದ್ಬುದಸ್ಥಿತಿ |
ಕಾಮ ಮೋಹ ದ್ವೇಷವಹ್ನಿಯೊಳುರಿಯುತಿಹರೆಂದ || ೨೫ ||

ಇನಿತು ಘನವಾದಡೆಯು ತನಗಪ | ಗನವೆಸರನಿಟ್ಟಜನೆ ಸುಜನನು |
ಜನಿತ ದೋಷದ ಗುತ್ತು ಕುತ್ತದ ಬಿತ್ತು ಭಯದೊತ್ತು ||
ನೆನೆಯ ಬಾರದ ಹೇಸಿಗೆಗೆ ತಾ | ಯ್ದನೆ ವಿಚಾರಿಸೆ ಜೀವಗದೆ ಸೆರೆ |
ವನೆ ಯದನೆ ಬಿಟ್ಟವನೆ ಸುಖಿ ನಿಜಜನಕ ಕೇಳೆಂದ || ೨೬ ||

ಭೋಗವೆಂಬುದ ನೋಡ ವಿಷಯದ | ರೋಗಕಿಕ್ಕುದ ಮದ್ದು ಗೊತ್ತಾ |
ಭೋಗಮನ್ಯದ್ರವ್ಯ ಸಂಗಮದಿಂ ಪ್ರಯಾಸತೆಯಿಂ ||

ಸಾಗಿಸುವುದದು ಸವಿವಸಮಯದ | ಮೇಗ ಮೇಗ ತಿವಿರಸವದರಿಂ |
ಭೋಗಲಂಟಪನಾತ್ಮ ಘಾತಕನರಸ ಕೇಳೆಂದ || ೧೭ ||

ಹಡಿಕೆ ನಾರುವ ಹೇಸಿಕೆಯ ಕೊಳೆ | ವಿಡಿದು ಬೀಭತ್ಸಾಕೃತಿಯ ಹಾ |
ಳೆಡೆಯೊಳೊದಪಿದ ಜೇನಹುಟ್ಟಯೊಳಿರ್ದ ಹುಳಿಗಳಲಿ ||
ಕಡುವಿಕೃತಿಯನು ಪೇಸುಪತವಾ | ದೊಡಲ ನಾಗಳೆ ತಳೆದುದಿಮ್ಮನೆ |
ಕೆಡೆವ ನಾನಿರೆಯೋರ್ವರೆಗೆ ಪಾಪಾಚರಣಪರನು || ೧೮ ||

ಕಿಚ್ಚುರಿಯ ಮಸದೇಸಿಯಪಸರ | ಬೆಚ್ಚ ನೆಲದೊಳುಬಿರ್ದು ಬೆಂಡನೊ |
ಡರ್ಚ್ಚೆ ಮಿಗೆ ಪೊಡದಂತೆಯೇಳುತ ಬೀಳುತಡಿಗಡಿಗೆ ||
ಕಿಚ್ಚಿನಿಂ ನೆರೆಬೆಂದು ಕೈದುಗ | ಳುಚ್ಚಳಿಸಲೇರಾಮತು ತನುವಿನ |
ಪುಚ್ಚಳಿಯ ತಳೆದ್ಯೆದೆ ಮೊರೆಯಿಡುತಿಹರು ನಾರಕರು || ೧೯ ||

ಮೇರುವನು ಕಿತ್ತಿರಿಸಿದಡೆ ಬಿಸಿ | ನೀರವೊಲು ಕರಗಿಪುದು ಕೆಲವೆಡೆ |
ಮೇರುವನೆ ಕಡಗಾಸಿರಿಸೆ ನಿಮಿಷದಲಿ ತಣಿಯಿಪುದು ||
ಮೇರುಸಮ ಹೆಣಬಣಬೆ ಕೊರಗಿದ | ಭೂರಿದುರ್ವಾಸನೆಯ ಮಯವೆನೆ |
ನಾರಕರ ದುಃಖವನದೇನೆನಬಹುದು ಹೇಳೆಂದ || ೨೦ ||

ಸಿಡಲ ಕಡುಪೆನೆ ಘುಡುಘುಡಿಸುತಿರಿ | ಕಡಿ ಕೆಡಹು ಕುತ್ತೆನುತ ಮಚ್ಚಿಂ |
ಕಡಿಕಡಿದು ಪಳೆನಾರಕರು ಚೆನಿಖಂಡಮಾಗಿಸಲು ||
ಮಡುವಿನೊಳು ಗುಂದಿಕ್ಕೆ ನೀರ್ವನಿ | ಸಿಡಿದು ಕೂಡುವ ತೆರದೊಳವರೊಡ |
ಲೊಡನೆ ಮತ್ತೊಂದಾಗುತಿಹುದವನೀಶ ಕೇಳೆಂದ || ೨೧ ||

ಅಸುರ ಕುವರರು ನರೆದು ನೆರೆ ಘ | ರ್ಜಿಸುತ ಪೂರ್ವದ ವೈರವನು ನೆನೆ |
ಯಿಸಿ ಕೊಡುತ ಹೊಸ ಹೊಸಕಲೆಗಳನು ಕೊಲುವುದೆಂದವರ್ಗೆ ||
ಬೆಸಸುತರ್ಥಿಯ ನೀಕ್ಷಿಸುತ ಘೂ | ರ್ಣಿಸೆ ಪಳೆಯ ನಾರಕರವನ ಹೂ |
ಣಿಸಿ ಪಚಾರಿಸಿ ಕೊಲುವ ಕೊಲೆಯನದೇನ ಹೇಳುವೆನು || ೨೨ ||

ಹುಸಿದೆಯೆಂದರಿದಿಡುವರಾತನ | ರಸನೆಯನು ಪರವಧುವಿಗೆಂದಾ |
ಟಿಸಿದೆಯೆಂದಾ ಲೋಹಪುತ್ಥಳಿಗಾಸಿಯಪ್ಪಿಪರು ||
ಬಿಸಿಯ ಲೋಹದ ರಸವ ಮದಿರಾ | ರಸದ ಲಂಪಟನೆಂದು ಬಾಯ್ದೆರ |
ಯಿಸಿ ಕುಡಿಸುವರು ಕರಗಿತನುರಸದಂತೆ ಕೂಡುವುದು || ೨೨ ||

ಅಡಗುದಿಂಬಾ ಜಾಣನೆಂದವ | ನೊಡಲಖಂಡವ ಕಡಿಕಡಿದು ಬಾ |
ಯಡಸಿ ತಿನಿಸುವರದುಸವಿಯೊ ಮೇಣಿದುಸವಿಯೊಯೆಂದ ||

ಕೆಡಹಿಯೆದೆಯನು ಮೆಟ್ಟಿಬಾಯನು | ಬಿಡಿಸಿ ಕಾಸಿದ ಲೋಹಪಿಂಡವ |
ನೊಡನೆ ಗಂಟಲು ಗಡಿಯತೂಂತುವರರಸ ಕೇಳೆಂದ || ೩೪ ||

ಜೂದಿನರ್ಥಿಗನೆಂದು ಗದೆಯಿಂ | ಮೋದಿ ನೆತ್ತಿಯನೊಡೆದು ಮತ್ತಾ |
ಬಾದಣದಿ ಮಿದುಳೊಕ್ಕುದಿಲ್ಲಾಂ ಸೋತೆವೆನುತವರು ||
ಕೈದುವಿಡಿದ ಕಬ್ಬುಗಡಿವವೊ | ಲಾದರಿಸದುರೆ ಕಡಿದುಕಡುಬಿಸಿ |
ಯಾದ ಗಾಮದೊಳಾಲೆಯಾಡುವರರಸ ಕೇಳೆಂದ || ೩೫ ||

ಮರಳಿ ಮೈವೆತ್ತವನೆಂದು | ಬ್ಬರದ ಬೇಟೆಯ ಬೀರನೆಂದ |
ಬ್ಬರಿಸಿ ಪೆರ್ಬುಲಿಯಾಗಿ ಪೊಯ್ದುಗಿ ಬಗಿದು ಮುರಿತಂದು ||
ಸರಬವಾಗದ್ದೆಂಟು ಚರಣದಿ | ಭರದೊಡೆದು ಪಲಪಕ್ಕಿಮಿಗದೊಂ |
ದಿರವಿನಾ ವೈಕುರ್ವಣದಿನರ್ವಿಸಿ ಕೊಲುವರೆಂದ || ೩೬ ||

ಮಲಗಿಸಿದರಾ ವಿಸ್ಫುಲಿಂಗದ | ಸುಲಭತೆಯ ಹಾಸಿನೊಳುಗಣಿಕಾ |
ಲಲನೆಯನು ಬಿಗಿದಪ್ಪೆನುತ ಕರ್ವುನದುರಿಯ ಹೆಣ್ಣ ||
ಮಲಗಿಸುವರವನೊಡನೆ ಬಿಸುಗಾ | ವಲಿಯಲಿಕ್ಕಿದ ತಿಲದವೊಲುಸಂ |
ಚಲಿಸುತಿಹ ಚೆರ ದುಃಖಿಗಳು ಭೂಪಾಲ ಕೇಳೆಂದ || ೩೭ ||

ಬಳಲಿ ಕೊರಗಿರಲಳುರೆ ನೆರೆ ಬೇ | ಳ್ವಳಸಿ ಅಸಿಪತ್ರದ ಬನದನಡು |
ನೆಳಲೊಳಗೆ ವಿಶ್ರಮಿಪೆನೆಂದವನಲ್ಲಿ ಪುಗಲೊಡನೆ ||
ಬಳಿಕ ನಂಜಿನ ಗಾಳಿಗೆಲೆಗಳು | ಕಳಲಿ ಸಾಸಿರ ಕೈದುವಾಗಿಯೆ |
ಘಳಿಲವಡಗನು ಕಡಿದು ಬೀರುವನೆಂದನಾ ಜಿನಪ || ೩೮ ||

ಜಿತಮತವ ಪೊಗದಾಡೆನಾ ಜಿನ | ಮುನಿಗಳನು ನಿಂದಿಸಿದೆ ಕಲಿಮತವ |
ಮಳವೆಳಸಿ ಕೈಕೊಂಡೆ ಕೊಲೆಹುಸಿ ಕಳವು ಹಾದರವ ||
ಬಿನದದಲಿ ಮಾಡಿದೆನು ಧರ್ಮದ | ಧನವನುಂಡೆನುತ್ತ ಮಾಡಿದು |
ದನುಭವ ಪ್ರತ್ಯಯದಿ ನೆನವನು ಭೂಪ ಕೇಳೆಂದ || ೩೯ ||

ಪಿರಿದು ಕೊಲೆ ಹುಸಿ ಕಳವು ಪರವೆಂ | ಡಿರಿಗೆಳಸಿದವ ಮದ್ಯ ಮಾಂಸಾ |
ಚರಣ ಧರ್ಮದ್ರವ್ಯ ಭಕ್ಷಕ ಸೂಳೆಗೈವವನು ||
ತರದಿ ಮಿಥ್ಯಾದೃಷ್ಟಿ ರೌದ್ರೋ | ತ್ಕರನಮಲ ಮುನಿದೂಷಕನು ಚ |
ಚ್ಚರದಿ ಬೀಳ್ವರು ನರಕ ಭೂಮಿಗೆ ಸಾಕದಂತಿರಲಿ || ೪೦ ||

ಅಡವಿಯೊಳು ಪುಳು ನೊಳಕಡಿಯೆ ಕಡು | ಮಿಡುಕಿ ಬೀಯದಿರೆಚ್ಚಡಿರಿದಡೆ |
ಕಡಿದೊಡೆದೆಯೊಳು ನಡುಗಿ ಕೆಲದೀ ಕಟ್ಟಿಗೊಳಗಾಗಿ ||

ಪೊಡೆಯೆ ಬಡಿಯಲು ಬೆದರಿಪಸುತೃಷೆ | ಯಡಿಸಿದುದು ಹೊರೆ ಭಾರವೆಂಬುದ |
ನುಡಿಯದೇ ಮರುಗುವವು ತಿರ್ಯಂಚಗಳ ಜಾತಿಗಳು || ೪೧ ||

ಮರಣವರುದಿಂಗಳಿಗೆ ತಮಗಹ | ತೆರನನಾಭರಣಾದಿ ಮಸುಳಿಪ |
ಲರಿದು ಹಾನಂದನವೆ ಕೊಳನೇ ಸುರತ ಮಂದಿರುವೆ ||
ಬರುತಹನೆ ಯಮನಿನಿಯರನು ಬಿಡ | ಲರಿಯೆ ತಲೆಗಾಯೆಂದು ಮರುಗುವ |
ಸುರರ ದುಃಖವೆ ನರಕ ದುಃಖದ ಮೂರುಮಡಿಯೆಂದ || ೪೨ ||

ಈ ಚತುರ್ಗತಿ ವಿಷಯ ವಿಷಧಿಯ | ವೀಚಿ ಪರಿವೃತವಿದರೊಳಗೆ ಪಲ |
ವಾಚರಣೆಯೀರೊಟ್ಟಣದವೊಲು ತೊಳಲಿ ಬಳಿಲಿದೆನು ||
ಆ ಚದುರೆ ಮೋಕ್ಷಾಂಗನೆಯ ಕುಚ | ಚೂಚಕದ ಸೋಂಕಿದಲಲ್ಲದೆ |
ವಾಚಿಪೊಡೆ ಸುಖಮಿಲ್ಲವೆಂದನು ನೇಮಿಭೂವರನು || ೪೩ ||

ಎಂದು ಜನನೀ ಜನಕ ಬಾಂಧವ | ವೃಂದವನು ನಿಬ್ಬಣಿಗರನು ಚದು |
ರಿಂದೊಡಂಬಡಿಸಿಯೆ ಪೊಳಲ ಪೊರಮಡುವಸಮಯದಲಿ ||
ಬಂದರಾಗಳೆ ಬ್ರಹ್ಮಕಲ್ಪದೊ | ಳೊಂದಿದಾಲೌಕಾಂತಿಕರು ಭೋ |
ರೆಂದು ಸುರತರು ಕುಸುಮವನು ಸುರಿದೆರಗಿದರು ಜಿನಗೆ || ೪೪ ||

ತರದಿ ಸಾರಸ್ವತನುರವಿ ಶಿಖಿ | ಯರುಣನೊಪ್ಪುವಗರ್ದತೋಯನು |
ಪಿರಿದು ತುಷಿತನು ಪೆಂಪಿನವ್ಯಾಬಾಧನಮರಿಷ್ಟ ||
ಸುರರಿವರು ತಾವೆಣ್ಬರಾಗಳು | ಪರಮ ಲಕ್ಷ್ಮೀಕಾಂತ ಮೋಹಾ |
ಸುರಮಥನ ಜಿತಮದನ ಬಿನ್ನಹವಂದರವರಂದು || ೪೫ ||

ಅಂಬುಧಿಯ ಜಲದಿಂದ ಅರ್ಘ್ಯವ | ನಂಬುಧಿಗೆ ಕೊಡುವಂತೆ ನಿಜ ಬೋ |
ಧಾಂಬುನಿಧಿ ನಿಮ್ಮಡಿಗಳಿಗೆ ಜಡಮತಿಗಳುಸುರುವೆವು ||
ನಿಂಬೆಗಳು ಮೂಜಗದೊಳರನನ | ಳುಂಬುವೆನೆ ಸಂಸಾರ ಭೋಗವಿ |
ಡಂಬನವು ನಿನಗಾವುದೆಂದರು ಭೂಪ ಕೇಳೆಂದ || ೪೬ ||

ದೇವರುದಯಿಸೆ ಯದುಕುಲವೊಲು | ಸಾವನೀಯವು ಮೂರುಲೋಕವು |
ಈ ವಿರಕ್ತಿ ಮಹಾ ತಪಶ್ರೀರತಿ ಸುಮತಿ ನಿಮಗೆ ||
ತೀವಿದುದು ತಾಂ ಸಮವಶೃತಿ ಸಿರಿ | ದೇವಿ ಮಾಡಿದ ಪುಣ್ಯವದರಿಂ |
ನಾವು ಧನ್ಯರು ನಾಳೆ ಮೊಕ್ಷಾಂಗನೆ ಕೃತಾರ್ಥೆಯಲ || ೪೭ ||

ಎಂದು ಲೋಕಾಂತಿಕ ಸುರರು ಪಲ | ವಂದದಿಂ ಬೋಧಿಸಿ ಜಿನನನಭಿ |
ವಂದಿಸಿಯೆ ಮಗುಳುವುದುಮವಧಿಯಿನರಿದು ದೇವೇಂದ್ರ ||

ದುಂದುಭಿಯ ಮೊಳಗಿಸುತ ದಿವಿಜರ | ವೃಂದ ಸಹವಾ ದ್ವಾರಕೆಗೆ ನೆರೆ |
ಬಂದನಾ ಸುರತರು ಕುಸುಮ ಫಲವಾಂತು ಪರಿಕರನು || ೪೮ ||

ಇರದನೇಕ ಸುತೀರ್ಥ ಜಲದಿಂ | ದರುಹನಭಿಷೇಕವನು ಗೈದಾ |
ಸುರಪತಿಗೆ ದಿವ್ಯಾಭರಣವಸ್ತ್ರಾನು ಲೇಪನದಿ ||
ಪರಮನನು ಸಿಂಗರಿಸಿ ಶಿಬಿಕೆಯ | ತರಿಸಿ ಕೈಗೊಟ್ಟಮೃತ ಸೌಧಾಂ |
ತರದ ಮೆಟ್ಟೇರಿಪವೊಲೇರಿಸಿದನು ಮಹೋತ್ಸವದಿ || ೪೯ ||

ಏಳಡಿಯನಾ ಭೂಚರೇಶ್ವರ | ರೇಳಡಿಯನಾ ಖೇಚರೇಶ್ವರ |
ರೇಳಡಿಯನಾಕಾಶದೊಳು ದೇವಾಸುರರು ನೆರೆದು ||
ಕಾಲವೈರಿಯು ಶಿಬಿಕೆಯನು ಸ | ಮ್ಮೇಳದಿಂ ಪೊತ್ತೊಯ್ದರತ್ತಮ |
ರಾಳ ಪತಿಗಳು ಹೆಗಲ ಕೊಟ್ಟರು ಭೂಪ ಕೇಳೆಂದ || ೫೦ ||

ಅನುಪಮ ದ್ವಾರಾವತಿಯ ನಂ | ದನದೊಳೇಳೆವಾಲೆಗಳ ಚಂ |
ದನದಶೋಕೆಯ ಮಾಧವಿಯ ಮಲ್ಲಿಗೆಯ ಮಾಮರದ ||
ತನಿನೆಳಳೊಳಾ ದಿವಿಜ ಕೃತಪಾ | ವನ ತಪೋಮಂಟಪ ದುಕೂಲದಿ |
ನನಿಮಿಷರ ಕಣ್ಗೆಡ್ಡ ಮಾದುದು ಭೂಪ ಕೇಳೆಂದ || ೫೧ ||

ಕರಕುಶಲದಲಿ ಶಚಿಯೆ ನರೆ ಬಿ | ತ್ತರಿಸೆ ರತ್ನದ ವರ್ಣಪೂರದ |
ಸುರ ಕುಜದ ಪೂವಲಿಯ ಮುತ್ತಿನ ಖಡೆಯನರುವೊಗೆಯ ||
ಪರಿ ಪರಿಯ ಮಂಗಳದ ಪವಿಗಳ | ವಿರಚನೆಯ ಮಂಟಪವು ಸೊಗಯಿಸೆ |
ಪರಮನಿಳೆವತರಿಸಿದನು ಭೂಪಾಲ ಕೇಳೆಂದ || ೫೨ ||

ಸುರಪದತ್ತ ಕರಾವಲಂಬನ | ನಿರದೆ ನೇಮಿಸ್ವಾಮಿಯೊಳ ಪೊಗು |
ತುರು ಮಕುಟನಿಖಿಳಾಭರಣ ವಸ್ತ್ರಾದಿಯನು ಕಳೆದು ||
ಎರಡು ತೆರದ ಪರಿಗ್ರಹವನೋ | ಸರಿಸೆ ಕರ್ಮಾರಿಯನು ಸಂಹರಿ |
ಪೊರೆಯುಗಿದ ಕೂರಸಿಯೊಲಿರ್ದುದು ಜಿನನ ದಿವ್ಯಾಂಗ || ೫೩ ||

ಸುರರ ಕಳಕಳವನು ನಿಲಿಸಿ ಪಡಿ | ಯರರವೊಲು ದಿವಿಜೇಂದ್ರನೊಡವರೆ |
ಪರಮ ಪಲ್ಯಂಕಾಸನನುದಿಚಿ ದಿಶಾಮುಖನು ||
ಗುರುತನಗೆ ತಾನಾಗಿ ತ್ರಿಜಗ | ದ್ಗುರು ನಮಃಸಿದ್ಧೇಭ್ಯಯೆಂದಾ |
ದರಿಸಿದೈವಿಡಿಲೋಚದಳಿದನು ಭೂಪ ಕೇಳೆಂದ || ೫೪ ||

ಬಿತ್ತರದೆ ಪಂಚೇಂದ್ರಿಯದಟೆ | ಗಿತ್ತವೊಲು ಜಿನ ಪಂಚಮುಷ್ಟಿಯ |
ಕಿತ್ತ ನೀಳಾಳಕಮನಾಗಳೆ ರತ್ನ ಭಾಜನದಿ ||

ಪೆತ್ತು ಪೊತ್ತಾ ದಿವಿಜಪತಿಮೊಳ | ಗುತ್ತಿರಲು ಸುರಪಟಹ ನಿರ್ಮಲ |
ಚಿತ್ತನಿತ್ತನು ಪಾಲ್ಗಡಲೊಳವನೀಶ ಕೇಳೆಂದ || ೫೫ |

ವಿನುತ ಶ್ರಾವಣ ಶುದ್ಧ ಚೌತಿಯ | ದಿನದೊಳಾ ನಕ್ಷತ್ರ ಚಿತ್ರೆಯೆ |
ಜನಿಸಿದಾ ಪೂರ್ವಾಹ್ನದೊಳ ದಿಕ್ಷಾಸುಕಲ್ಯಾಣ ||
ಅನುವಡೆದುದಾ ನೇಮಿ ಮುನಿಗಂ | ದಿನ ನೆಲೆಗೆ ಮೂನೂರು ವರುಷವು |
ತನಗೆ ನೋಡೆ ಕುಮಾರ ಕಾಲವು ಭೂಪ ಕೇಳೆಂದ || ೫೬ ||

ಸುರರ ಜಯಜಯರಾವವಾಗಳು | ಸುರರಮಣಿಯರ ಗಾನನಾದವು |
ಸುರರ ದುಂದುಭಿ ನಾದವಾಶಾವಧಿಯ ಪೂರೈಸೆ ||
ಸುರಪನಾಗಳೆ ಬಂದು ತ್ರಿಜಗ | ದ್ಗುರುವನರ್ಚಿಸಿ ಮೂಮೆ ಬಲಬಂ |
ದೆರಗಿ ನುತಿಯಿಸಿ ಭಕ್ತಿಯಿಂ ಬೀಳ್ಕೊಂಡ ನೊಲವಿನಲಿ || ೫೭ ||

ಬಳಿಕ ಗಗನಾಂಗಣದೊಳಗೆ ನಿಂ | ದೊಲಿದು ಭವನಾಮರರನಾಗಳು |
ಪೊಳೆವವೀ ಜ್ಯೋತಿಷ್ಕರನು ವೆಂತರಗಣಂಗಳನು ||
ಕಳುಹಿನಿಖಿಳಾಮರರು ತನ್ನನೆ | ಬಳಸಿ ಬರೆ ಸೌಧರ್ಮಪತಿ ನಿಜ |
ನಿಲಯವನು ಪೊಕ್ಕನು ವಿನಯ ಕುಲೈಕ ಮಂಡನನು || ೫೮ ||

ವರಸಮುದ್ರ ವಿಜಯನೃಪಾಲಾ | ದ್ಯರು ಬಳಿಕ ತ್ರಿಜಗದ್ಗುರುಗೆ ತರ |
ತರದಿ ಪೂಜಿಸಿ ನುತಿಸಿವಂದಿಸಿ ಹೋದರವರತ್ತ ||
ಇರದೆ ರಥನೇಮಿ ಪ್ರಮುಖ ಭೂ | ವರರು ಸಾಸಿರ್ವರು ತಪಶ್ರೀ |
ಪರಿಣಯನವನು ತಲೆದರೆಲೆ ಭೂಪಾಲ ಕೇಳೆಂದ || ೫೯ ||

ರತಿಗೆಣೆಯ ರಾಜೀಮತಿಯು ನೃಪ | ಸುತೆಯರೈನೂರ್ವರುವೆರಸಿ ಸ |
ನ್ನುತೆಯರಾ ಕೆಳದಿಯರು ಸಹಿತಾವಾರು ಸಾವಿರವು ||
ಪತಿನವಗೆ ನೇಮಿಯೆವಿಚಾರಿಸಿ | ಪತಿ ಜಗತ್ರಯಕಾದ ಕತನದಿ |
ಪತಿಯ ಕೊಂಡದು ಮಾರ್ಗವೆಂದಾಂತರು ಸುದೀಕ್ಷೆಯನು || ೬೦ ||

ಅವರ ಪಾಣಿಗ್ರಹಣ ವಿದದು | ತ್ಸವವದೆತ್ತ ಮೃಗಾಳಿಯೆತ್ತೊ |
ಪ್ಪುವ ವಿರಕ್ತಿಯದೆತ್ತ ಪಾರಿವ್ರಾಜ್ಯ ನಿಧಿಯೆತ್ತ ||
ಯವನ ವಂದ್ಯಂಗಾಕ್ಷಣವೆ ಸಂ | ಭವಿಸಿತು ಮನಃಪರ್ಯಯ ಜ್ಞಾ |
ನವುವೊಡನೆ ಸಪ್ತರ್ಧಿಯುದಯಿಸಿತರಸ ಕೇಳೆಂದ || ೬೧ ||

|| ಅಂತು ಸಂಧಿ ೫೯ಕ್ಕಂ ಮಂಗಲಮಹಾ ||

**ಸಂಧಿ ೭೦**

ಭಾವಭವ ಭವಹರನು ಸುತಪ | ಶ್ರೀವರನು ತಾನಾಗಿ ತಳೆದನು |
ಕೇವಲ ಜ್ಞಾನಾಮಲ ಶ್ರೀಯೊಂದು ಮದುವೆಯನು || ಪದ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ಸೌಧರ್ಮೇಂದ್ರನಾ ದಿವಿ |
ಜಾಳಿಯೋಲಗದೋರೆ ನೇಮಿಗೆ ಮೂರು ಕಲ್ಯಾಣ ||
ಮೇಳಿಸಿತು ನಾ ಧನ್ಯನೆಂದು ವಿ | ಶಾಲ ಕೇವಲ ಯೋಧ ಮಂಗಲ |
ಕಾಳುವೆಸನನು ಪಾರುತಿರ್ದನದಿತ್ತಲಾ ಮುನಿಪ || ೧ ||

ಪರಮ ಗುರುವಾ ಪರಮ ಮುಕ್ತಿಂ | ದಿರೆಗೆ ನೆರೆ ಕೈಯಿಕ್ಕಿ ಕೈಯಿ |
ಕ್ಕಿರುತಮಷ್ಟಮದಿನದೊಳಗೆ ಕೈಯೆತ್ತಿಕೊಂಡೆದ್ದು ||
ಗಿರಿನಗರ ಪಟ್ಟಣಕೆ ದಯೆಯಿಂ | ಚರಿಗೆ ಕೊಟ್ಟನು ಭವ್ಯನಿಕರಕೆ |
ಕರೆದು ಕೊಡುವಂತನಘ ಧನವನು ಭೂಪಕೇಳೆಂದ || ೨ ||

ವರತಪೋನಿಧಿ ದಾನಸಾಧಕ | ತರ ಶರೀರ ಸ್ಥಿತಿ ನಿಮಿತ್ತವು |
ತರದಿ ನಾಲ್ವತ್ತಾರು ದೋಷ ವಿದೂರತಾ ಸ್ಥಿತಿಯು ||
ಪರಿ ವಿಮಲ ನವಕೋಟಿ ಗುಣಬಂ | ಧುರವು ದಾನಸುಮಾರ್ಗ ಪ್ರಕಟನ |
ಪರವು ಮಾಗಿರೆ ಚರಿಗೆಗೊಟ್ಟನು ನೇಮಿ ಮುನಿಹಂಸ || ೩ ||

ಪದಮ ಪಾಕೃತ ದೃತವಿಳಂಬವು | ಹೃದಯಮೈದೆ ದಯಾರಸಾರ್ಧವು |
ಪುದಿದ ತೋಳ್ಗಳ ಕಂಪನವು ನೊಗನ ಪ್ರಮಾಣವನು ||
ಚದುರಿನಿಂ ನೋಡುವ ವಿಳೋಕನ | ಮೊದವೆ ಚರಣಾಂಬುಜರಜವು ತಾ |
ನದೆ ಪವಿತ್ರತೆ ಮಾಡೆ ಭಾವರಿಗೊಟ್ಟನಾ ಮುನಿಪ || ೪ ||

ಅನತಿದೂರದಿ ಕಂಡು ಮತ್ತಾ | ಮುನಿನಿವೇದಕನರಿಪೆ ಮುನ್ನವೆ |
ಮುನಿಗಮನವನು ಪಾರುತಿಹ ವರದತ್ತ ಭೂವರನು ||
ವಿನುತ ಪಂಚದ್ರವ್ಯ ಪರಿಕರ | ವನತಿಶಯ ಭಕ್ತಿಯಲಿ ಬರೆ ಬೆ |
ನ್ನನೆ ಬರಲು ರಾಣಿಯರು ಕೆಲದಲಿ ಭವ್ಯ ಸಂಚಯವು || ೫ ||

ಬಂದುದಿದಿರಿನೊಳೆನ್ನ ಪೂರ್ವದ | ದೊಂದು ಪುಣ್ಯಾರ್ಜಿತವು ಈಯಲು |
ಬಂದುದಭಿಮತ ವಸ್ತುವನು ಪೊಸತೊಂದುಕಲ್ಪತರು ||

ಎಂದು ಭವ್ಯೋತ್ತಮನು ರಾಕಾ | ಚಂದಿರನ ಕಂಡಮೃತ ವಾರಿಧಿ |
ಯಂದದಲಿ ವರದತ್ತ ಭೂವರನಾಂತ ಸಂತಸವ || ೭ ||

ವಂದಿಸಿದನಾ ನೇಮಿನಾಥ ಮು | ನೀಂದ್ರರಡಿದಾವರೆಗಳನು ಸಲೆ |
ಸಂದ ಭಕ್ತಿಯಿಲ್ಯೆದೆ ನಿಲಿಸಿ ನಿಜಾಲಯಕೆ ಬರಿಸಿ ||
ಅಂದಮಳವೇತ್ರಾಸನದೊಳೊಲ | ವಿಂದಿರಿಸಿ ಪಾವನ ಪದಂಗಳ |
ನೊಂದಿ ನಿರ್ಮಲ ಜಲದಿ ತೊಳೆದನು ಭೂಪ ಕೇಳೆಂದ || ೭ ||

ಬಳಿಕ ತೀರ್ಥೋದಕದಿ ಚಂದನ | ದೊಳುಗೆಸರಿನಿಂ ಕಳವೆಯಕ್ಷತೆ |
ಗಲಿನರಲ್ದರಳಿಂದ ಚರುವಿಂ ದೀಪಧೂಪಗಳಿಂ ||
ಫಲಕುಲದಿ ನುತುಮುಕುತಿ ಫಲದನ | ಚಲನಗಳನರ್ಚಿಸಿಯೆ ತನ್ನೊಳು |
ತಳೆದ ನವವಿಧ ಪುಣ್ಯಗುಣ ಸಪ್ತಕ ಸಮನ್ವಿತನು || ೮ ||

ವರ ಭಕುತಿಯಲಿ ಸಿದ್ಧ ಭಕ್ತ್ಯಂ | ತರದಿ ನಿರವ ಸುರದುಂದುಭಿರವವು ಸುರ |
ರೊಲಿದಹೋ ಸತ್ಪಾತ್ರಧಾತೃ ವೆನಿಪ್ಪ ಕಳಕಳಧ್ವನಿ ||
ಇಳೆಯರಿಯೆ ಪಂಚಾಶ್ಚರ್ಯವಾ | ಗಳೆ ಸಮನಿಸಿದುದಾ ನೃಪಾಂಗಣ |
ದೊಳಗೆ ಪಾತ್ರ ಪವಿತ್ರ ದಾನದಿನೇನು ಸಮನಿಸದೊ || ೧೦ ||

ತಳೆದು ಬಂದುಜ್ಜಂತ ಗಿರಿಯೊಳು | ಮಲರಹಿತ ಶಶಿಕಾಂತ ಶಿಲೆಯೊಳು |
ಚಲಿಸೆವಿಲ್ಲಿಂ ನಾಲ್ಕು ತಿಂಗಳಿಗಲ್ಲದೆಂಬುದನು ||
ತಳೆದು ಸಮನಖದಿಂದವುಂಕಿದ | ಚಲನಯುಗ ಜಾನುದ್ವಯದ ಪೊರ |
ಗಳವೊಡಲು ಕರಯುಗವು ನಿಂದನು ನೇಮಿ ಮುನಿವರನು || ೧೧ ||

ಮೊಗದೊಳಿಲ್ಲ ವಿಕಾರವಾದಿ | ಷ್ಟಗಳ ಪರಿವನು ಕಾಣೆನಾ ಪು |
ರ್ಬುಗಳ ಧರನಾಸಿಕೆಗಳಾಂತವು ನಿರ್ವಿಕಾರವನು ||
ಸುಗುರುವಿರೆ ವರದತ್ತ ನೃಪಗಿರಿ | ನಗರಿ ಪಟ್ಟಣದಿಂದೆ ಬಂದಾ |
ಸುಗುಣಿ ಜಿನದೀಕ್ಷೆಯನು ತಳೆದನು ನೇಮಿಮುನಿಪನೊಳು || ೧೨ ||

ಇತ್ತೆರದ ತಪದಿಂದಲಾ ವರ | ದತ್ತಯತಿಪತಿ ವರ್ತಿಸುತ್ತಿರ |
ಲಿತ್ತಳಾ ಶ್ರೀ ನೇಮಿ ಮುನಿಪತಿಯೊಳಗೊಳಗಲೊಂದ ||
ಪೆತ್ತ ಜಪದವ್ಯಕ್ತದಕ್ಷರ | ದೊತ್ತರಿಪ ರವದಿಂದ ನಿರ್ಜರ |
ವೆತ್ತ ಗುಹೆಯೊಳಕೊಂದ ನೀಲಾಚನದವೋಲಿರ್ದ || ೧೩ ||

ಅಗಣಿತಾಮಳ ಸಿದ್ಧಪರಮೇ | ಷ್ಠಿಗಳ ಸುಗಣಾಷ್ಟಕಮನಾಗಳೆ |
ಬಗೆದು ಭಾವಿಸುತ್ಯೆದೆ ಸಧ್ಯಾನೋನ್ಮುಖತೆವಡೆದು ||

ಜಗವ ತೀವಿದ ನವಪದಾರ್ಥಮ | ನೊಗದೆ ಮತಿಸಿಂಗರಿಸಿ ಕೊಂಬುದ |
ನೊಗುವುದನು ವ್ಯವಹಾರವನ ನಿಶ್ಚಯಕೆ ಬರುತಿರ್ದ || ೧೪ ||

ಬಿಸಿಲಿನಿಂ ಪಾಸರೆಯು ಬೆಚ್ಚನೆ | ಬೆಸನನಾಂತಪುದೆಂದಡಿಗೆ ಪೊಂ |
ದಿಸುವವಾ ತಣ್ಬಿಸೆವ ಕಮಲಂಗಳನು ಮಸ್ತಕಕೆ ||
ಸಸಿನೆ ಬೆಳ್ಕೊಡೆವಿಡಿವವಾ ಪೆಂ | ಪೆಸೆವ ನವ ದೇವತೆಗಳಾವವ |
ನೊಸೆಯನ್ಕೈ ನಿಸ್ಸಂಗರಿಗೆ ಭೂಪಾಲ ಕೇಳೆಂದ || ೧೫ ||

ಕೊಳನ ತನ್ಬನಿಗಳನು ಲತೆಯಿಂ | ದಲರ್ದೊಗುವ ಪೂಗಳನು ಮಂದಾ |
ನಿಲನು ತಂದಭವನನು ನಿಚ್ಚಲು ಪೂಜಿಸುವನೆನಲು ||
ಮಲೆಯೊಳೊರ್ದೊಡಮವರು ಪೂಜ್ಯರು | ಮಲರಹಿತರಂದಾರು ಋತುಗಳು |
ಬಳಸಿದವುವೊರ್ಮೊದಲೆ ತಮ್ಮನಿವರ ತಪೋವನವ || ೧೬ ||

ತಳಿರ್ಗಳಲುಗದೆ ತರುಗಳೆಲೆಗಳು | ಕಳಲದೆಳೆ ಲತೆಗುಡಿಗಳಿನಿಸಂ |
ಚಲಿಸದಲರುಗಳೆಸಳು ಬಿಚ್ಚದೆ ಗಂಧವಹನಲ್ಲಿ ||
ಸುಳಿವನಾ ಬಂದಾಟವನು ಬಿ | ಟ್ಟೆಳಸದಾಸವ ಸಾರವನು ಪೂ |
ಗಳಿಸುರಿವನುಂಡಳಿ ಕುಲವು ಸುಖವಿಹವು ವನದೊಳಗೆ || ೧೭ ||

ಕರಿ ಕರಂಗಳ ನೆಮ್ಮಿ ಜರದ ಜ | ಗರವು ಬೇಡರ ಬಿಲ್ಲೊಳಗೆ ಕೋ |
ದಿರಿಸಿ ದೀವದ ಮೃಗಗಳನೆ ಮೃಗನಿಕರವರವಾವು ||
ನೆರೆದಿ ಶಿಖಿಗಳ ಸೋಗೆಗಳ ಬಗೆ | ದೊರಗುವವು ಕೇಸರಿಯ ನಿಡುಗೇ |
ಸರವ ಪಿಕ್ಕುವವಾನೆ ಮರಿಗಳು ತಮ್ಮ ಕೈಗಳಲಿ || ೧೮ ||

ಹರಿಣ ಶಿಶುಗಳು ಪೆರ್ಬುಲಿಯ ಪೆಂ | ಡಿರ ತೊರೆದ ಮೊಲೆಯುಂಬನಾ ಕೇ |
ಸರಿಣಿಗಳು ಕರಿಣಿಗಳು ಕಲಭಕೆ ಸಿಂಗವರಿಗಳಿಗೆ ||
ಬೆರಸಿ ಮೊಲೆಯೂಡುವವು ವೈರವ | ಮರೆದು ನೆರೆಸಾಳುವನರಂಕೆಯೊ |
ಳರೆಗಿಳಿಗಳಿಹವಾ ಮುನೀಂದ್ರ ತಪಪ್ರಭಾವದಲಿ || ೧೯ ||

ಯತಿಪತಿಯನಾ ವನದೊಳಿಹ ದೇ | ವತೆಗಳಾವಗ ಭಕುತಿಯಿಂ ಸಂ |
ಸ್ತುತಿಪನುತಿಯನು ಕಲಿತು ಪಕ್ಕಿಗಳೋದುತಿಹವಲ್ಲಿ ||
ಯತಿಪತಿಗೆ ಛದ್ಮಸ್ಥಕಾಲವು | ಚತುರಿನ್ನೈವತ್ತಾರು ದಿನ ಸಲ |
ಲತುಳನಾ ಗಿರಿಯಗ್ರಿಮದ ಪೆರ್ವಿದಿರ ಮೊದಲಿನಲಿ || ೨೦ ||

ವಿಮಲ ಪಾಷಾಣಸ್ಥಳಿಯಲಾ | ಸುಮುನಿಯೀರ್ಯಾ [ಪತ್ತಿಯಿಂದಾ] |
[ಕ್ರ]ಮದಚಲಯೋಗದಿನಿಲಲ್ಕೆಲೆಗಿರಿಕೆನವುಗಾಳಿ ||

ಭ್ರಮಿಸದುಲಿಯೆವು ಪಕ್ಕಿಗಳುಮಾ | ಕ್ರಮಿಸದೊಂದಡಿಯನು ಮೃಗಂಗಳು |
ಸಮನಿಸಿದ ಸನ್ಮುನಿಯ ಯೋಗವಿಘಾತ ಭೀತಿಯಲಿ || ೧೧ ||

ಯತಿಪತಿಗೆ ವ್ಯವಹಾರ ನಿಶ್ಚಯ | ಯುತ ಸುರತ್ನತ್ರಯ ತದಾತ್ಮಕ |
ಧೃತವಿ……………….ಶಿಷ್ಟತರವಾದ ||
ಪ್ರಥಮ ಶುಕ್ಲಧ್ಯಾನದಿಂ ನೆರೆ | ಹತವಡೆದುದಾ ಮೋಹನೀಯ |
ಸ್ಥಿತಿಯು ಹತ್ತನೆಯಾ ಗುಣಸ್ಥಾನಾಂತ್ಯ ಸಮಯದಲಿ || ೧೨ ||

ಅತಿಶಯದ ಶುದ್ಧೋಪಯೋಗೋ | ನ್ನತ ವಿಭೇದಾಭೇದ ರತ್ನ |
ತ್ರಿತಯ ರೂಪದ್ವಿತಯ ಶುಕ್ಲಧ್ಯಾನದಿಂದುಳಿದ ||
ಅತುಳಘಾತಿ[ಕರುಮಗ]ಳಳಿದವು | ನುತಿಪ ಕ್ಷೀಣ ಕಷಾಯನಂತ್ಯದೊ |
ಳತಿಶಯದ ನವಲಬ್ಧಿ ನಿಧಿಯಲಿ ಚಕ್ರಿಗೊದಗಿದವು || ೧೩ ||

ಮಿಕ್ಕು ಮುಸುಕಿದ ಘಾತಿತಮಮುವು | ಸಿಕ್ಕಿ ಶುಕ್ಲಧ್ಯಾನ ಕಿರಣದಿ |
ತಕ್ಕ ಭವ್ಯಾಂಬುಜವನರಳಿಸಿ ಸುರನಿಕರವೆಂಬ ||
ಚಕ್ರ ಕುತ್ಸವವಿತ್ತು ಕಣ್ಗೆಜ | ಲಕ್ಕನಾಗಿರೆ ಕೇವಲ ಜ್ಞಾ |
ನಾರ್ಕನುದಯಿಸಿದತ್ತು ನೇಮಿ ಜಿನೋದಯಾದ್ರಿಯಲಿ || ೧೪ ||

ಸುರಕುಸುಮ ವೃಷ್ಟಿಗಳುಮಾಗಳೆ | ಸುರಿಯೆ ಸುರತೂರ್ಯ ಪ್ರಣಾದವು |
ಸುರಗಣ ಸ್ತೋತ್ರಾರವಂಗಳು ಶ್ರುತಿಮಧುರವಾಗಿ ||
ಸುರಗಣಿಕೆಯರ ಗಾನದಿಂಚರ | ಸರಕೃತೋತ್ತಮ ಗಂಧವಹಮಿವು |
ಪರಕಲಿಸಿದವು ದಿಗುನಭೋಮಂಡಲವನಿಂಬಾಗಿ || ೧೫ ||

ಪಿಂಗದಾ ಕೈವಲ್ಯ ಲಕ್ಷ್ಮೀ | ಸಂಗದಿಂ ಪರಮಾತ್ಮ ನೆನಿಸಿದ |
ನಂಗವೈರಿಯ ದಿವ್ಯ ಪರಮೌದಾರಿಕ ಶರೀರ ||
ಕಂಗಲಿಗೆ ಸವಿಯಾಗಿ ಕೋಟಿ ಪ | ತಂಗ ಚಂದ್ರಜ್ಯೋತಿಮಯದಲಿ |
ಬಾಂಗೆ ಧರೆಯಿಂ ನೆಗೆದುದೈಸಾಸಿರ ಧನುಚ್ಚದಲಿ || ೧೬ ||

ಸುರಪಗಾ ಸಮಯದೊಳೆ ಹರಿವಿ | ಷ್ಟರವು ಕಂಪಿಸೆ ವನಭವನವಿ |
ಸ್ಫುರಿತ ಜ್ಯೋತಿರ್ಲೋಕ ನಾಕದೊಳಾ ಮುಹೂರ್ತದೊಳು ||
ತರದಿ ಭೇರೀ ನಾದ ಶಂಖ | ಸ್ವರಗಜಾರಿಧ್ವನಿ ಸುಘಂಟಾ |
ವಿರುತಿ ಅಕೃತಕವಾದುದೊರ್ಮೆಯೆ ಭೂಪ ಕೇಳೆಂದ || ೧೭ ||

ಅರುಹನರಿವು [ತ್ರಿಲೋಕ] ವಸ್ತುವ | ನಿರದದೊಂದೇ ಸಮಯದೊಳಗರಿ |
ವಿರವಿನಿಂದರಿದುದು ಜಗತ್ರಯವೊಂದೆ ಸಮಯದಲಿ |

ಪರಮನಾ ಕೈವಲ್ಯ ಲಕ್ಷ್ಮಿಯ | ಪರಿಣಯನವನು ತಿಳಿದು ನಭದಲಿ |
ನೆರೆದು ನಿಂದುದು ತಮ್ಮಲೋಕದೊಳೋರ್ವರಿಲ್ಲೆನಿಸಿ || ೧೮ ||

ಬಂದನಾ ಶಚಿವೆರಸು ಸೌಧ | ರ್ಮೇಂದ್ರನಾ ಸಮಯದಲಿ ನೇಮಿಜಿ |
ನೇಂದ್ರನಾ ಕಲ್ಯಾಣಪೂಜಾನಂದ ಮಂದಿರನು ||
ಸಂದ ಬಾಂದೊರೆಯೊಲೆವ ತೆಳುಧರೆ | ಯಂದದಲಿ ಸುರಕಾಂತೆಯರ ಕೈ |
ಯಿಂದ ಚವರಗಲಾಡುತಿರಲೈರಾವತದ ಮೇಲೆ || ೧೯ ||

ದೆಸೆಗಳುರುತರ ಚಾಪಮಯವಾ | ಗಸವೆ ಪೂರ್ಣ ಶಶಾಂಕಮಯವೀ |
ವಸುಧೆ ತಾರಾಮಯವೆನಿಸಿದುದು ನೋಟಕರಕಣ್ಗೆ ||
ಎಸೆವ ತೊಡವಿನ ಬೆರಕೆವೆಳಗಿನ | ಹಸರದಿಂ ಧವಲಾತಪತ್ರದ |
ಮುಸುಕಿನಿಂ ಮಂದಾರ ಕುಸುಮಾಸಾರ ಸಂತತಿಯಿಂ || ೨೦ ||

ಹೊಳೆವ ಮಿಂಚುಗಳಂತೆ ನಭದೊಳು | ತೊಳತೊಳಗಿ ಸುರನಚ್ಚಣಿಯರ |
ಗ್ಗಳಿಸಿ ಗೀತದ ತಾಳಮದ್ದಳೆಗಳ ಜತಿಯಕೂಡಿ ||
ನಲಿದು ನರ್ತಿಸಿ ಜೀವಜನುಮಂ | ಗಳ ವಿರುತಿ ತೂರ್ಯರವದೊಳೊಡ |
ವೆಳೆದುದ್ಯೆದೆ ಚತುರ್ನಿಕಾಯಾಮರರ ಗಗನದಲಿ || ೨೧ ||

ವರ ಶಚೀಪತಿಯಂತು ಬಂದಾ | ದರದಿ ಮುನ್ನವೆ ತನ್ನ ಬೆಸದಿಂ |
ಪರಮ ಭಕ್ತಿಯಿನಾ ಕುಬೇರನೆ ಕೂರ್ತು ನಿರ್ಮಿಸಿದ ||
ವರ ಸಮವಸರಣವನು ಪೊಕ್ಕಾ | ನಿರುಪಮಾಸ್ಥಾಣದ ನಡುವೆ ಕೇ |
ಸರಿ ಸುಪೀಠದೊಳಿರ್ದ ಜಿನರನು ಮೂಮೆಬಲಗೊಂಡ || ೨೨ ||

ಶ್ರೀ ನೇಮಿನಾಥ ಮಹಿನುತ |
[ಗನುಪಮ]ಭವ್ಯೌಘತಾಪಮಂ ಮಳ್ಗಿಸಲಿಂ ||
ನೇನೆಸೆದುದೊ ತ್ರಿಜಗತ್ಪ್ರಭು |
ನೀನೆಂಬುದನರಿಪುವಂತೆ ಮುಕ್ಕೊಡೆ ನಭದೊಳ್ || ೧ ||

ಜಿನನಿಮ್ಮ ಮಹಿಮೆಯೆನ್ನದೊ |
ವಿನೇಯ ಜನಸ್ವಪ್ನ ಭವವ... ಶಶಾಂಕ ||
ರ್ಕನ ಕಾಯ ಕಾಂತಿಯಿಂ ಮೋ |
ಹನೀಯ ತಮಮಂ ತೆರಳ್ಚುಗುಂ ಭಾವಲಯಂ || ೨ ||

ಪರಮೇಶ್ವರ ನಿಮಗಲ್ಲದೆ |
ಪರಮಾರ್ಹಂತ್ಯಾದಿ ಲಕ್ಷ್ಮಿಪೆರರ್ಗಿಲ್ಲಿಲ್ಲೆಂ ||

ದುರು ನಿನದದಿ ಸಾರುವವೊಲ್ |
ಸುರದುಂದುಭಿ ನಿಮ್ಮ ಸಭೆಯೊಳೇಂ ಧ್ವನಿಯಿಸಿತೊ || ೩ ||

ಮುತ್ತುಗಳುಂ ನೀಲಂಗಳು |
ಮೊತ್ತರಿಸಿಯೆ ಸುರಿವುದೆನೆ ನಭೋಂಗಣದಿಂದೆ ||
[ಉ] ತ್ತಮನೆ ನಿಮಗೆ ಕರೆದವು |
ಮುಕ್ತಾಳಿ ಪ್ರಯುತ ದಿವಿಜ ಕುಸುಮಾಸಾರಂ || ४ ||

ಕೃತಕೃತ್ಯ ನಿಮ್ಮ ಬೋಧಾ |
ಮೃತ ಶರಧಿಯ ತೆರೆಗಳೆನೆ ಚತುಷ್ಪವಿರ ||
ಜಿತ ಚಾಮರವೇನೆಸೆದುವೊ |
ಸತತಂ ಪುಣ್ಯದ ಪೊನಲ್ಗಳಂ ತುಳ್ಕುವವೋಲ್ || ೫ ||

ರಾಗ ವಿದೂರನೆ ನಿಮ್ಮಂ |
ಭೋಗಿಸುವಾತುರತೆವಡೆದ ಮುಕ್ತಿವಧೂಟಿ ||
[ರಾಗ]ಮಮೇಂ ಬಿಡದೇಂ ಚೆಲ್ |
ವಾಗಿರ್ದುದೊಯೆನಿಸಿ ರಾಗಿಸಿರ್ದುದಶೋಕಂ || ೬ ||

ಭವ್ಯಾನಂದ ಕರಂ ಷ |
ಡ್ದ್ರವ್ಯಾಭಿವ್ಯಕ್ತಮಸ್ತದೋಷಂ ತ್ರಿಜಗತ್ ||
ಸೇವ್ಯಂ ನೇಮಿ ಜಿನೇಶ್ವರ |
ದಿವ್ಯಧ್ವನಿ ನಿಮ್ಮ ಮುಖದೊಳೇನೊಪ್ಪಿದುದೊ || ೭ ||

ದುರಿತ ಕರಿಹರಿಯೆ ನಿಮಗೀ |
ಹರಿಪೀಠಂ ಸಲ್ವುದಲ್ಲದುಳಿದವರ್ಗಿದು ತಾಂ |
ದೊರಕೊಳ್ಳುವುದೆ ಸುರನರಫಣಿ |
ವರಮುಕುಟಸ್ಫುರಿತಮಣಿಗಣಾಂಶುವಿಳಾಸಂ || ೮ ||

ಇಂತು ನುತಿಯಿಸಿ ನಿಖಿಲನಿಹಿತಸು | ಮುಕುಳಿತ ಕರಯುಗನು ತ |
ತ್ಕಾಂತೆ ಶುಚಿಸಚಿ ನೀಡೆ ಪೂಜಾದ್ರವ್ಯಸಂಚಯವ ||
ಅಂತಕಾಂತಕನಡಿಗಳಿಗೆ ಸು | ಸ್ವಾಂತನಷ್ಟವಿಧಾರ್ಚನೆಯ ಚೆಲು |
ವಾಂತು ರಂಜಿಸಿಗೈದು ಪಮರಾನಂದವೈದಿದನು || ೩೩ ||

ಒದವಿದಾಶ್ವೀಜದಲಿ ಪಾಡ್ಯದೊ | ಳೊದಗೆ ಚಿತ್ರಾ ವಿದಿತ ನಕ್ಷ |
ತ್ರದೊಳು ಪೂರ್ವಾಹ್ನದೊಳು ಪೂಜೆಯಮಾಡಿ ಭಕ್ತಿಯಲಿ ||

ತ್ರಿದಶ ಪತಿತಾ ನೇಮಿಜಿನವರ | ರುದಿತ ಕೇವಲಬೋಧಕಲ್ಯಾ |
ಣದ ಮಹಾಮಹಿಮೆಯನು ನೆಗಳ್ದನು ವಿಮಲಜಿನಭಕ್ತ || ೩೪ ||

ವರಶತೇಂದ್ರ ವಿನಮ್ರ ಜಿನಪತಿ | ಚರಣ ಸರಸೀಜಾತ ಮಯ ಮಧು |
ಕರ ವಿರಾಜಿತ ಸುಕವಿ ಸಾಳುವ ವಿರಚಿತವೆನಿಪ್ಪ |
ಪರಮ ನೇಮಿ ಜಿನೇಂದ್ರ ಪಾವನ | ಚರಿತೆಯೊಳು ಪದಿನಾಲ್ಕನೆಯದಿದು |
ದೊರೆವಡೆದುದೊಳ್ಪೆನೆ ಸುದೀಕ್ಷಾ ಪರ್ವವೇಳೆಯಲಿ || ೩೫ ||

|| ಅಂತು ಸುದೀಕ್ಷಾ ಪರ್ವಕ್ಕಂ ಸಂಧಿ ೬೦ ಕ್ಕಂ ಮಂಗಲಮಹಾ ||

## ಭಾಭಾಸುರ ತ್ರಿಲೋಕ ಸಭಾ ಪರ್ವ (ಸಂಧಿ ೬೧)

**ಸಂಧಿ ೬೧**

ನೇಮಿ ಜಿನಪನ ಸಮವಸರಣ ಮ | ಹಾಮಹಿಮೆಯನು ನೋಡಿ ನೆರೆ ಸು |
ತ್ರಾಮನೆಮ್ಮನು ಮೆಚ್ಚಿದಣಿದನೊ ಸುಗುಣಿ ಜಿನಭಕ್ತ || ಪದ ||

ಕೇಳೆಲೇ ಮಾಗಧ ಧರಿತ್ರೀ | ಪಾಲ ಪೌಲೂಮೀಶನುತ್ತಮ |
ಶೀಲನಭವನ ಪೂಜೆಗಾತುರನದನೆಸಗಿ ಬಳಿಕ ||
ಪೇಳಲಭಿವರ್ಣಿಪೊಡಶಕ್ಯ ವಿ | ಶಾಲ ವಿಭವದ ಸಮವಸರಣದ |
ಮೇಳಿ……………….ಗಳ ನೀಕ್ಷಿಸುತಿರ್ದನೆಂತೆನಲು || ೧ ||

ಅದುವೆ ಪರಮಾರ್ಹಂತ್ಯಲಕ್ಷ್ಮೀ | ಸುದತಿ ಯುದ್ವಾಹದ ಸದನ ಮ |
ತ್ತದುವಮೃತ ಪುರಿಗಭವನೈದಲು ಬಿಟ್ಟಪೊರಬೀಡು ||
ಅದು ಗಗನ ಲಕ್ಷ್ಮೀಸು ಮಂಡನ | ವದರಗಲ ಹನ್ನೆರಡು ಗಾವುದ |
ವದರೊಳಭವನು ಮೆರೆದು ನಾಯಕ ರತುನವೆನೆ ಎಸೆದ || ೨ ||

ಧರೆಯ ನಾಕಾಶಕ್ಕೆ ಐಸಾ | ಸಿರದನುತ್ಸೇಧದಲಿ ನೀಲ |
ಸ್ಫುರಿತ ರನ್ನದಲೊಂದೆ ಶಿಲೆಯೊಳು ಮುಕುರಭಾಸಿಯೊಳು ||
ಮಿರುಪ ಧೂಳೀಸಾಲೆ ಸುರಧನು | ತಿರವಡೆದುದೆನು ಸಮವಸೃತಿಸೌಂ |
ದರಿ ತಳೆದ ಬಹುರತ್ನ ಕಾಂಚೀಧಾಮವೆನಿಸಿದುದು || ೩ ||

ಹರಿಗೆಗಳ ಮುಗಿಲಟ್ಟಳೆಯ ಬಿ | ತ್ತರದ ಪಳಯಿಗೆಗಳ ತೆನೆಗಳು |
ಬ್ಬರದ ಧೂಳೀಶಾಲೆಯೊಪ್ಪಿಹುದದರ ನಾಲ್ದೆಸೆಗೆ ||

ಸುರನದಿಯ ತೆರೆಯೆಳಿದವೋತರ | ತರದಿ ನೆನಲೆಂಬತ್ತು ಸಾಸಿರ |
ಸುರ ಚೆಲುವಿರುವ ಪಳುಕಿನಾ ಸೋಪಾನವೊಪ್ಪಿದವು || ೪ ||

ಸುರಖಚರ ಭೂಚರಫಣೀಯಂ | ತರ ನಿಚಯ ತಿರ್ಯಂಚ ಭವ್ಯರು |
ಭರವಸದಿ ಪರಿದೇರಿವಿಳಿವಯನಕ್ಕೆ ಸವೆದಿಟ್ಟ ||
ಚರಣ ಲೇಪೌಷಧಿ ವಿಲೇಪಿತ | ಭರದ ಮೊದಲಿನ ಕಡೆಯ ಶೋಭಾ |
ಕರದ ಸೋಪಾನಂಗಳೆಸೆದವು ನಾಲ್ಕುವೀಧಿಯಲಿ || ೫ ||

ರತುನಮಯದೋರಣದ ತೋರಣ | ಸತತದಿಂ ಕೆಂಬಿಸಿಲನಿಂಬಿಡು |
ವತಿ ಮೆರೆವ ಚೆಂಬೊನ್ನ ನೆಲಮಾಡಗಳ ಗೋಪುರದ ||
ಪಥದ ಬಾಗಿಲ ಕಾಪಿನವರು | ನ್ನತಿಯ ಜ್ಯೋತಿಷ್ಕಾಮರರು ರಾ |
ಜಿತತನುದ್ಯುತಿ ಪರ್ವದದಿವಿಡಿದಿಹರು ಕೇಳೆಂದ || ೬ ||

ಕಲಶ ಭೃಂಗಾರ ವ್ಯಜನ ನಿ | ರ್ಮಲ ಮುಕುರ ಚಾಮರ ಪತಾಕಾ |
ವಳಿಯ ಭಾಸುರ ಸುಪ್ರತಿಷ್ಠ ಚ್ಛತ್ರವೆಂದೆಂಬ ||
ತೊಳಗಿ ಬೆಳಗುವವಷ್ಟ ಮಂಗಳ | ವಿಳಸಿತದಿ ಚೆಲುವಾಯ್ತು ಗೋಪುರ |
ದೊಳ ಪೊರಗೆ ಮೆರೆವುಭಯವೇದಿಕೆ ಮತ್ತಮೆಂತೆನಲು || ೭ ||

ಪಲವು ಸೌಧದಿ ಪಲವು ಧಾನ್ಯದಿ | ಪಲವು ವಸನದಿ ಪಲವು ತೊಡವಿಂ |
ಪಲವು ಋತುಗಳ ಕುಸುಮ ಫಲದಿಂ ಪಲವು ಕೈದುಗಳಿಂ ||
ಪಲವು ಮಣಿಭಾಜನ ನಿಚಯದಿಂ | ಪಲವು ವಾದ್ಯದಿ ಪಲವು ರತ್ನದಿ |
ಪಲವು ಶೋಭೆಯಿನೆಸೆದುವಾ ಗೋಪುರದ ಜಗಲಿಗಳು || ೮ ||

ಅದರೊಳಗೆ ನೈಸರ್ಪ ಪಾಂಡುಕ | ಪದುಮ ಪಿಂಗಳ ಕಾಳನೆಸೆವ |
ಗ್ಗದ ಮಹಾಕಾಳಪ್ರವರ ಮಾಣವಕ ಶಂಖಾಖ್ಯ ||
ವಿದಿತ ಕಾಮದ ಸರ್ವ ರತ್ನವು | ಪದುಳದಿವು ಪ್ರತ್ಯೇಕ ನೂರೆಂ |
ಟೊದವಿಹವು ನವನಿಧಿಗಳೆಲೆ ಭೂಪಾಲ ಕೇಳೆಂದ || ೯ ||

ವರ ಚತುರ್ಮುಖ ಸಮವಶೃತಿ ಸೌಂ | ದರಿಯ ನಾಲುಕು ಬೈತಲೆಯ ವೊಲು |
ಮೆರೆದವಾ ಬೀದಿಗಳು ಮೊದಲಿನ ಪೀಠಪರಿಯಂತ ||
ಪಿರಿಯ ಗೋಪುರದಿಂದ ಪಳುಕಿನ | ಲೆರಡು ನಿಡು ಭಿತ್ತಿಗಳವರೊಳಿ |
ತ್ತರದ ಕಿರುವಾಗಿಲುಗಳೆಸೆದವು ಭೂಮಿಭೂಮಿಯಲಿ || ೧೦ ||

ಸಂದ ಗೋಪುರದಿಂದ ಮ | ತ್ತೊಂದು ದಿನವ್ಯೂತಿ ಪ್ರಮಿತದೊಳು |
ನಿಂದ ತೋರಣಶತಕದಿಂ ಗೋಪುರ ಚತುಷ್ಕಗಳಿಂ ||

ಸೌಂದರರದ ಪೊಂಗೋಟೆ ಮೂರರಿ | ನೊಂದಿ ಬೀದಿಯ ನಡುವೆ ನಾಲ್ದೆಸೆ |
ಗೊಂದೆ ಮಾಳ್ಕೆಯಲೆಸೆವ ಮಾನಸ್ತಂಭವೊಪ್ಪಿದವು || ೧೧ ||

ಸುರಪ ಕತೃಪರಿ ವರುಣ ಧನದರು | ಹರುಷದಿಂದನವರತ ಕ್ರೀಡಿಪ |
ವರರತುನ ಹರ್ಮ್ಯಗಳು ಪ್ರಥಮದ ಕೋಟೆಯಿಂದೊಳಗೆ ||
ಕರವೆಸೆದನಾ ನಾಲ್ದೆಸೆಗೆ ಮ | ತ್ತೆರಡನೆಯ ಪೊಂಗೋಂಟೆಯೊಳಗುರೆ |
ಮೆರೆವ ಕೋಣ ಚತುಷ್ಕದೊಳು ಕಂಗಳಿಗೆ ಚೆಲುವಾದ || ೧೨ ||

ತರದಿ ಪಾವಕ ಪುಣ್ಯ ಜನ ಬಂ | ಧುರ ಪವನ ಪಸುತಿಗಳೆಸೆವುವು |
ಪ್ಪರಿಗೆಗಳು ಕಾಂಚನದಿನೆಸೆದವು ಬೇರೆಬೇರವನು ||
ನೆರೆ ಬರಸಿದವು ನಂದನಂಗಳು | ದೊರೆವಡೆದ ಮೂರನೆಯ ಕೋಟೆಯ |
ಪರಿವಿನೊಳಗೊಪ್ಪಿರ್ದ ಪೀಠತ್ರಯದ ಮೇಲೆಸೆವ || ೧೩ ||

ತೊಳಪ ಮಾಣಿಕ ಜಿನಪ್ರತುಮೆ ಕಂ | ಗೊಳಿಸಿದವು ನಾಲ್ಕಲ್ಲಿ ಕಂಬವ |
ಕುಲಿಷ ಧಾರೆಗಳೆರಡು ಸಾವಿರವದರ ಜಂಘೆಯಿದು ||
ಪಳುಕಿನಾ ಸಮವೃತ್ತ ಮೇಲ | ಗ್ಗಳಿಪ ರನ್ನದ ಗಡಗೆನೆಯಿದಲು |
ಪೊಳೆವ ಗಡಗೆಮರಲ್ದ ತಾವರೆ ಹಲಗೆಯಗ್ರದಲಿ || ೧೪ ||

ಕನದರುಣ ಮಣಿಜಿನಪ್ರತುಮೆನಾ | ಲ್ಕನುವಡೆದುದಾ ದೇವಕೂಟದೊ |
ಳಿನ ಸಹಸ್ರ ಸುಕಾಂತಿ ರತ್ನದ ಕಲಶ ರಂಜಿಸಿತು ||
ಘನತರದ ಮೌಕ್ತಿಕದ ಲಂಬಣ | ವಿನುತ ಕೋಣ ಚತುಷ್ಪತಾಕೆಯು |
ದನಿಯ ತೋರುವು ರತುನ ಘಂಟೆಗಳದರೊಳೊಪ್ಪಿದವು || ೧೫ ||

ಪರಮನಮಲಾಂಗಕೆ ತಾಂ ಪ | ನ್ನೆರಡು ಮಡಿಯುಚ್ಚವನೆ ಮಾಡದೆ |
ದುರಭಿಮಾನಸ್ತಂಭವನು ತಾನಿನ್ನದರ ಮೊದಲ ||
ನೆರೆದ ಕೋಟೆಯ ಪೊರಗಣಾ ಗೋ | ಪುರ ಚತುಷ್ಕರ ಬಾಗಿಲೆಡೆಗಳೊ |
ಳುರೆ ಸಮವಶೃತಿ ಗೈದುವರು ಕಾಲ್ದೊಳೆಯಲುನುವಾದ || ೧೬ ||

ಕನಕ ಕುಂಡದ್ವಿತಯ ಮಧ್ಯದ | ವಿನುತ ಸಮ ಚತುರಸ್ರ ಸರಸಿಗ |
ಳನು ನಯದಿ ತಾಂ ನಾಲ್ಕು ನಾಲ್ಕಾ ನಾಲ್ಕು ಬೀದಯೊಳು ||
ಅನಿಮಿಷ ಸ್ತ್ರೀ ಸಂಕುಳದ ಮ | ಜ್ಜನಕೆ ಯೋಗ್ಯತೆಯಾದ ಕೆರೆಗಳ |
ನನಿಮಿಷೇಂದ್ರನು ನಂದೆ ಮೊದಲಾದವನು ನೋಡಿದನು || ೧೭ ||

ಸಂದ ಮಾನಸ್ತಂಭ ವೀಥಿಯ | ದೊಂದು ಯೋಜನದಗಲವದರೊಳು |
ನಿಂದವಾ ಮಧ್ಯದಲಿ ಮಾನಸ್ತಂಭವದರೆಡೆಯ ||

ಸಂಧಿಸಿರ್ದರೆ ಗಾವುದಂಗಳ | ಸೌಂದರವ ತೆರಪಿನೊಳು ನಾನಾ |
ಚಂದದುಪ್ಪರಿಗೆಗಳು ಮೆರೆದವು ಭೂಪ ಕೇಳೆಂದ || ೧೮ ||

ರತ್ನ ವೈದ್ಯೈದಮಲ ಚಿಂತಾ | ರತ್ನವೊಂದೊಂದಡಸಿ ತೋರುವ |
ರತ್ನ ಕಂಠಿಕೆ ಸಮವಶೃತಿಲಕ್ಷ್ಮಯಿ ಸೊಬಗಿಗೆನಿಸಿ ||
ರತ್ನ ಸೌಧಗಳೈದ್ಯೈದುದೆನುತ | ರತ್ನ ವಸತಿಲದೊಂದು ಧನದನ |
ಯತ್ನದಿಂ ಪ್ರಸಾದ ಚೈತ್ಯಾವನಿ ವಿರಾಜಿಸಿತು || ೧೯ ||

ತದುಪವನದೊಳು ಪದಹತಿಯ ಬಯ | ಸದೆಯಶೋಕೆ ಸರಾಗಿಸಿಹವಾ |
ಸುದತಿಯರ ಮೊಲೆ ಸೋಂಕು ಬಯಸದೆ ಕುರವಕಗಳಲರ್ದು ||
ವದನ ಮಧುವನು ಪಾರದಾ ನೋ | ಟದ ಸಘಾಟಿಕೆಗೆಳಸದೇಂ ಪೂ |
ತುದೊ ವಕುಲ ತಿಲಕದ್ವಯವು ಫಲತರುಗಳಿಂಬಿನಲಿ || ೨೦ ||

ಸರಸಿರುಹಕಲು ಹಾರ ನೈದಿಲು | ಪರಮಳಿಸುವಮಳಾಂಬು ಪೂರಿತ |
ಸರಸಿಗಳು ವೃತ್ತತ್ರಿಕೋಣದಿನದರೊಳೊಪ್ಪುವವು ||
ಸುರರು ಜೋತಿಷ್ಕರು ಖಚರವೆಂ | ತರ ಫಣಾಧರ ದಿವ್ಯಭವ್ಯರು |
ಹರುಷದಿಂದಾ ಪರಿಮಲೋದಕ ಬನಕುಸುಮದಿಂದ || ೨೧ ||

ಅರುಹನನು ಪೂಜಿಸುವ ರಾಗವ | ಮಿರದೆ ಮಂಗಲ ತೂರ್ಯವುಲಿಯಲು |
ತರತರದ ಮಣಿಮಯದ ನೆಲೆಯುಪ್ಪರಿಗೆಗಳನಡರ್ದು ||
ಪರಮಾನ ರೂಪಸ್ಥವಾದಿಯ | ನುರುಮುದದಿ ಪಾಡುವ ಪೊಗಳುವ |
ಚ್ಚರಿಯೆ ತತ್ಪ್ರಾಸಾದ ಚೈತ್ಯಾವನಿಯಲೊಪ್ಪಿದುದು || ೨೨ ||

ಅನುಪಮಿತ ಪ್ರಾಸಾದ ಚೈತ್ಯಾ | ವನಿಯೊಳಗೆ ಕಾಂಚನದ ವೇದಿಕೆ |
ಯನು ಪಡೆದುವಾ ನಾಲ್ದೆಸೆಯಲಿಹ ರೂಪ್ಯಗೋಪುರದ ||
ಘನದೊಳಗೆ ಮುಂಪೇಳಿದಂದದಿ | ವಿನುತ ನಿಧಿರಕ್ಷಕರು ಮಂಗಳ |
ವೆನಿತು ಚೆಲುವಾಗಿಹುದನೀಕ್ಷಿಸಿ ಶಕ್ರ ಮೆಚ್ಚಿದನು || ೨೩ ||

ಸೊಗಯಿಪದರಿಂದತ್ತ ಗಾವುದ | ದಗಲತನಗೆನೆ ನಿರ್ಮಲಾಂಬು |
ಪ್ರಗತ ಜಲ ಖಾತಿಕೆಯು ಮೆರೆದುದು ಮತ್ತಮದರೊಳಗೆ ||
ಪಗಲುವಿರುಳುಂ ಕಮಲ ಕುಮುದವು | ನಗೆಯ ಕುಂದವು ಜಲ ಚರಂಗಳು |
ಹಗೆಯ ನರಿಯದೆ ಸಂಚಲಿಸುತಿಹವತಿ ಮನೋಹರದಿ || ೨೪ ||

ನೆರೆಯದಗಲದೆ ಸಂತಸದೆ ಪಗ | ಲಿರುಳು ನಲಿವವು ಜಕ್ಕವಕ್ಕಿಗ |
ಳರಲ ಬೆಂಡನು ಪೀರಿದಳಿಗಳು ಕುಸುಮದೊಳಗಿಹವು ||

ತರತರದರಸಂಚೆಗಳು ಬಿ | ತ್ತರದ ಬಿಸುಕಾಂಡವನು ಸವಿಯದೆ |
ಹರುಷದಿಂ ನಲಿದಾಡುತಿವೆ ಯೆಂದೀಕ್ಷಿಸಿದನಿಂದ್ರ || ೧೫ ||

ಮುಳುಗಿ ಯೇಳುವ ಸುರತರುಣಿಯರ | ತಳತಳಿಪ ನನೆಮೊಗವ ನೀಕ್ಷಿಸಿ |
ಕೆಲಬರಮರಿಯರಬುಜವೆಂದಳಿಯೆಂದು ಕುಂತಳದ ||
ಹೊಳೆವ ಕಂಗಳ ನೆಯಿದಿಲೆಂದ | ವ್ವಳಿಸಿ ಕೊಯ್ಯಲು ಕೈಯ ನೀಡಿ ವಿ |
ಚಲನಯನೆಯರ ನಗಿಸುವದನಮರೇಂದ್ರನೀಕ್ಷಿಸಿದ || ೧೬ ||

ಅದರಿನಾಚೆಯ ತಡಿಯವೇದಿಯ | ಪುದಿದ ಬಾಗಿಲುವಾಡದಲಿ ನಿಂ |
ದುದು ನಿಧಿಯು ರಕ್ಷಕರು ಮಂಗಳವವರೊಳಿರ್ದಂತೆ ||
ಅದರಿನತ್ತಲು ಕ್ರೋಶ ನಾಲುಕು | ಪದಪು ರೈಯ್ಯ ನಾ ಮೋ |
ದದ ತವರ್ಮನೆಯೆನಿಸಿ ವಲ್ಲೀವನವು ಶೋಭಿಪುದು || ೧೭ ||

ಹಲವು ಋತುವೊಂದಾದುವೆನೆ ತಳಿ | ರಲರು ಮಿಡಿ ಕಾಯ್ವಣ್ಣುಗಳ ಸಂ |
ಕುಳದಿ ಕಂಗೊಳಿಸುವವು ಫಲವುಂತೇಗಳೋರಂತೆ ||
ಅಲೆವ ಬಂಡುಣಿವಿಂಡುಗಳ ತುರು | ಗಲಲಿ ಮಲ್ಲಿಗೆ ಜಾಜಿ ತನಿ ಪ |
ಡ್ಡಳಿಗಳಿದಿರ್ಮುತ್ತೆಗಳು ಮೊದಲಾಗೆಸೆವುದೆಡೆಬಿಡದೆ || ೧೮ ||

ಜಿನನನರ್ಚಿಪ ಭವಸೆಯಿಂ ಸುರ | ವನಿತೆಯರು ಗಿಡಲತೆಯೊಳೆಲ್ಲಿಯು |
ತನಿತ ಪೂಗಳನಾಯ್ವರೆಳೆನಗೆಯಿಂದ ಮಲ್ಲಿಗೆಯ ||
ನನೆಯನಧರದ ಕೆಂಪಿನಿಂ ಚೆಲು | ವೆನಿಪ ಬಂದುಗೆಯರನಿರಿಗುರು |
ಳಿನ ರುಚಿಯಿನೆಳೆದುಂಬಿಗಳ ಪುಟ್ಟಿಸುವ ವಿಭ್ರಮದಿ || ೧೯ ||

ಪ್ರಕಟತನ ನಿಧಿ ಯಕ್ಷ ದವ್ವಾ | ರಿಕ ಸುಮಂಗಲವುಳ್ಳ ಬೆಳ್ಳಿಯ |
ಸುಕರ ಗೋಪುರ ನಾಲ್ಕರಿಂ ಬಹುಸಾರಪ್ರಾಕಾರ ||
ವಿಕಚವಲ್ಲೀವನದಿನೊಳಗದು | ಚಕಚಕಿಪುದದರಿಂದೊಳಗೆ ನಾ |
ಲುಕು ಮಹಾವೀಥಿಗಳೆಡೆಯೊಳುದ್ಯಾನಮಹಿಯಿಹುದು || ೨೦ ||

ತಳಿರ ತೊಂಗಲನಲರಗೊಂಚಲ | ತಳೆದಶೋಕೆಯ ಬನವು ಪಣ್ಗಳ |
ತಳೆದು ಬಾಗಿದ ಚೆಲುವಿನೇಳೆಲೆವಾಳೆಗಳ ಬನವು |
ಅಲರ ಪೇರಿದ ಸಂಪಗೆಯ ಬನ | ತಳಿರಲರ್ ಕಾಯ್ವಣ್ಗಳನು ಮಿಗೆ |
ತಳೆದು ತೂಗುವ ಬಾಳ ಚೂತವನವು ವಿರಾಜಿಪುದು || ೨೧ ||

ಗಿಳಿಗಳಾ ಸ್ಯಾದ್ವಾದ ಶಾಸ್ತ್ರಂ | ಗಳನುಪನ್ಯಾಸಿಸುವವಾ ಕೋ |
ಕಿಳಗಳಾ ಚೆತ್ತಾರಿಮಂಗಳವನೆ ನುಡಿಯುತಿಹವು ||

ಅಳಿಗಳರುಸ್ತೋತ್ರಗಳ ಪ | ಜ್ಜಳಿಪ ಪಾಡುವವೊಲಿದು ಸಗ್ಗಿಗ |
ಳೆಳಸಿ ಬಳಸಿದರೀಯನಾಂತ ಧ್ಯಾನ ನಾಲ್ಕರೊಳು || ೩೧ ||

ರತುನಮಯ ಶಿಖರಗಳ ಮಣಿಮಯ | ಕೃತಕ ಪರ್ವತಗಳಲಿ ಸುರದಂ |
ಪತಿಗಳಾಡುವರಳ್ತಿಯಿಂ ಮತ್ತಾ ಬನಂಗಳಲಿ ||
ವಿತತ ಮಧ್ಯಸ್ಥಲದಲೊಂದೊಂ | ದತಿಶಯದ ನೆರೆ ಚೈತ್ಯ ವೃಕ್ಷವು |
ನುತಿಯಿಪೊಡೆ ಚೆಲುವಾಯ್ತು ಹೊಂಗೋಂಟೆಗಳ ಮೂವಳಸಿಂ || ೩೩ ||

ಮೆರೆವ ಮಣಿಮಯ ಧಾತ್ರಿಪೀಠದೊ | ಳುರುವವೆಂಟುಂ ಪ್ರಾತಿಹಾರ್ಯದಿ |
ನರುಹ ನಭಿಮುಖವಾಗಿ ಪರ್ಯಂಕಾಸನವನಾಂತು ||
ಸುರುಚಿರಾರ್ಹದ್ಬಿಂಬವಿಭವವ | ನುರುವ ಸವನೋತ್ಸವದಿ ಭವನಾ |
ಮರರು ವೈಮಾನಿಕರು ವ್ಯಂತರ ದೇವರೊಪ್ಪಿಹರು || ೩೪ ||

ಸಂದ ಪಾವನ ಚೈತ್ಯ ವೃಕ್ಷಮ | ನೊಂದನೊಂದನೆ ಮಧ್ಯದೊಳು ತಳೆ |
ದಂದವಾದಾ ವನಚತುಷ್ಕದ ನಾಲ್ಕು ಬೀದಿಗಳು ||
ಚಂದದೆರಡುಂ ಕಣೆಗಳೊಳು ಚೆಲು | ವಿಂದೆಸೆವ ಕಿರುವಾಗಿಲೆಂಟರ |
ಸೌಂದರತೆಯಿರ್ದೆಸೆಗದೆರಡೆರಡಾಗಿ ಮಣಿಮಯದ || ೩೫ ||

ಮೂರು ನೆಲೆಗಳಲೆಸೆವವಾ ಹದಿ | ನಾರು ನಾಟಕಶಾಲೆ ಕಂಸನು |
ಬೀರುತಿಹನಾ ಧೂಪಘಟಹರಿನಾರವರ ಮುಂದೆ ||
ತೋರುತಿಹವೊಂದೊಂದು ನೆಲೆಯೊಳು | ನೀರೆಯರು ಸುರನಚ್ಚಣಿಯರಿಂ |
ಪೇರೆ ಮೂವತ್ತೀರ್ವರಾಡುವರಭವ ನಾಟಕವ || ೩೬ ||

ಬಂದು ಕಂಡಾ ನಿಖಿಳ ಭವ್ಯರ | ಸಂದಣಿಗೆ ತರದಿಂದ ಹಿಂದಣ |
ಮುಂದಣೇಳುಂ ಭವವನರುಹುವ ತಿಳಿದುಕೊಂಡರ್ಗೆ ||
ಒಂದು ಭವವನು ತಿಳುಹಿಸುವ ಫಲ | ವಂದ ವಾಪೀಜಲದಿ ನಾನಾ |
ನಂದನೋರ್ವರಯೆಸೆವುದನು ಶತಮನ್ಯು ವೀಕ್ಷಿಸಿದ || ೩೭ ||

ನಳನಳಿಸುವ ಉಪವನದಿನೊಳಗು | ಜ್ಜುಳಿಪ ಮಿಸುನಿಯ ವೇದಿ ನಾಲ್ದೆಸೆ |
ಗಳೊಳು ಬೆಳ್ಳಿಯ ಚೆನ್ನ ಬಾಗಿಲುವಾಡಗಳೊಳೆಯಿದಿ ||
ತಳೆದ ಮಂಗಲಯಕ್ಷ ರಕ್ಷಕ | ರೊಳವೆನಿಪ ನಿಧಿ ಸಮಿತಿಯಿಹುದಾ |
ಬಳಸಿನೊಳಗಿಹುದಾ ಧ್ವಜೋರ್ವರೆಯದರ ಸಿರಿಪಿರಿದು || ೩೮ ||

ಒಂದು ಗಾವುದದಗಲದಲಿ ತಾ | ನೊಂದಿಹುದು ಧ್ವಜಭೂಮಿ ಮೆರೆವರ |
ವಿಂದ ಚಕ್ರಮರಾಳಗರುಡ ಮಯೂರ ಗಜಸಿಂಹ ||

ಚಂದ್ರ ಮಾಲ್ಯಾಂಬರಸುಲಾಂಛನ | ದಿಂದ ದಶವಿಧದಾ ಧ್ವಜಂಗಳು |
ಸೌಂದರರದ ಪೊಂಗಂಬಗಳ ಮೇಲಿಹುದು ಚೆಲುವಾಗಿ || ೩೯ ||

ತರದಿ ನೂರೊಂದೊಂದು ದೆಸೆಗ | ಚ್ಚರಿಯ ಧ್ವಜನೂರೆಂಟು ನಾಲ್ಸಾ |
ಸಿರದ ಮೂನೂರಿಪ್ಪತಾದುದು ನಾಲ್ದೆಸೆಗೆ ಗಣಿಸೆ ||
ಅರಿವುದೊಂದೊಂದಕ್ಕುಪ ಧ್ವಜ | ವಿರುತಿಹವು ನೂರೆಂಟವಂ ಬಿ |
ತ್ತರಿಸಿ ಋತು ನಭ ಬಾಣ ಋತು ಋತು ವೇದ ಸಂಖ್ಯೆಗಳು || ೪೦ ||

ಬಗೆವೊಡೆಂಬತ್ತೆಂಟುವೆರಳೊಂ | ದಗಲ ಸಾಸಿರದೆಂಟುನೂರೊ |
ಳ್ಪೊಗೆದ ಚಾಪೋತ್ಸೇಧವಿಪತ್ತೈದು ಬಿಲ್ಲನಿತು ||
ಸೊಗಯಿಪೆಡದೆರ ಪೊಪ್ಪಿತಾರೆಯ | ನೆಗೆದು ತೂಂತುವ ತೆರದಿಗಗನಕೆ |
ನೆಗೆದು ಪುಣ್ಯದ ಫಲದ ಬೆಳಗೈಯೆನಿಸಿತಿಂದರರನ || ೪೧ ||

ಮಿರುಗುವಾ ಧ್ವಜಭೂಮಿಯಿಂದೊಳ | ಗುರುವ ಮೌಕ್ತಿಕ ಕರ್ಣಕೋಟೆಯ |
ಮೆರೆವ ಬೆಳ್ಳಿಯ ಗೋಪುರಂಗಳು ಮಂಗಳದಿ ನಿಧಿಯಿಂ ||
ನೆರೆ ಬಲಜ ಪಾಲಕರನಾ ಕುವ | ರರ ನಿಕರದಿಂದೊಪ್ಪುವತಿ ಬಂ |
ಧುರದ ಶಾಲದಿನೊಳಗೆ ಸುರತರು ವನವಿರಾಜಿಪುದು || ೪೨ ||

ತೀವಿ ಜೋತಿಯನೀವ ಮಂದಿರ | ವೀರ ಭೋಜನವೀವವಸ್ತ್ರ ಮ |
ನೀವ ವಾದ್ಯಮನೀವ ಮಾಲೆಯನೀವ ಘಟವೀವ ||
ಶ್ರೀ ವಿಭೂಷಣವೀವ ದೀಪವ | ನೀವ ಪಾನವನೀವ ಸೈಪಿನ |
ಭೂ ವಿನೂತನ ದಶಾಂಗ ಕಲ್ಪವನಿಜವನವಿಹುದು || ೪೩ ||

ಕೃತಕ ನಗ ನದಿ ಸರಸಿಯೊಳು ವಿ | ಶ್ರುತ ಕನಕದುಯ್ಯಲೊಳು ಕುಸುಮ |
ಪ್ರತತಿಕಲ್ಪದೊಳುಲ್ಲಸಿತ ಲತೆವನೆಗಳೊಳು ಮೆರೆವ ||
ವಿತತ ಸುರದಂಪತಿಗಳಾಡುವ | ರತುನ ವಿಜಯನ ಪಾಡುವರು ಸಂ |
ತತಮೆನಲು ಸುರತರವನಸ್ಥಿರೆಯೆಂಬುದುಂಟಾಯ್ತು || ೪೪ ||

ಮತ್ತಮಾ ನಾಲ್ಕುಂ ಬನದನಡು | ವೊತ್ತರಿಸಿ ಮುಂಪೇಳ್ದವೊಲ ಶಾ |
ಲತ್ರಯವು ಬಳಸಿದಸುಪೀಡತ್ರಯದೊಳಗೆ ನಿಂದ ||
ಬಿತ್ತರದ ಪಳುಕಿನ ವಿಮಲಸಿ | ದ್ಧೋತ್ತಮ ಪ್ರತುಮೆಗಳನಾಂತ ಗು |
ಣಾತ್ತ ಸಿದ್ಧಾರ್ಥಕ ಮಹೀಜವು ನಾಲ್ಕವರೊಳಿಹುದು || ೪೫ ||

ಕೊಂಬು ಕೊಂಬುಗಳಲ್ಲಿ ಮೌಕ್ತಿಕ | ಲಂಬಣವು ಚವಲಗಳು ಮಾಲೆಗ |
ಳಿಂಬುವಡೆದಾ ರತ್ನಘಂಟಾಜಾಲಗಳು ಚೆಲುವಿಂ ||

ತುಂಬಿಯೆಸೆವ ನಮೇರು ಮಂದಾ | ರಂ ಬಲಿಕಲಾ ಪಾರಿಜಾತ ಗು |
ಣಂಬಡೆದ ಹರಿ ಚಂದನಾಖ್ಯೆಯನಾಂತು ಸೊಗಯಿಪವು || ೪೬ ||

ಕಿರಿಯ ಬಾಗಿಲ ನಾಟ್ಯ ಶಾಲೆಯ | ನರುವೊಗೆಯ ಗುಂಡಿಗೆಯುನಚ್ಚಣಿ |
ಯರು ಮೊದಲೆ ಪೇಳ್ದನಿತೆ ಶೋಭಿಪ ಕಲ್ಪ ತರುವನದ ||
ತುರುಗಲಿಂದೊಳಗಿಹುದು ನಿಧಿ ಪರಿ | ಕರ ಸುಮಂಗಳ ದ್ವಾರಪಾಲಕ |
ರುರಗರೊಪ್ಪಿದ ಗೋಪುರೋಧ್ವ ಸುವರ್ಣವೇದಿಕೆಯು || ೪೭ ||

ಅದರಿನೊಳಗರೆ ಯೋಜನವಿಶಾ | ಲದಲಿಹುದು ನಯನಾಮೃತವು ಕ |
ರ್ಣದ ರಸಾಯನವೆನಿಸಿ ಸುರನರ ಜನದ ಸುಖಭೂಮಿ ||
ವಿದಿತ ಮಣಿಮಯ ಚಿತ್ರಕೂಟಾ | ಸ್ಪದವಖಿಲ ರಚನಾತಿಶಯ ರುದು |
ಸದನವೆನೆ ಸಂಗೀತ ಹರ್ಮ್ಯಾವನಿಬೆಡಂಗಾಯ್ತು || ೪೮ ||

ದೇವ ಗಾಯಕಿಯರು ಸುತಿಸ್ವರ | ವೋವಿದಂಡಿಗೆವಿಡಿದು ಝೊಮ್ಮನೆ |
ತೀವಿ ಜೇಂಗೊಡನುರ್ಕಿದುದೊ ಸುರಿದುದೊ ಸೊದೆಯ ಸೋನೆ ||
ಕಾವ ದೇವನುವೂವು ವಿಲ್ಲನು | ಜೇವೊಡೆಯೆ ರಸವೊಸರಿದುದೊಯೆನೆ |
ಭಾವಕರ ಬಗೆ ನೀಂಪನೀಂತುದು ಪಾಡವಂಚರರು || ೪೯ ||

ಶ್ರುತಿಯೊಳೊಗ್ಗಿದ ಗೀತಗೀತ | ಪ್ರತತಿ ತಾಳನಿಬದ್ಧ ತಾಳದ |
ಜತಿಗೆ ಸೊಗಯಿಪ ಮದ್ದಲೆಯ ಪಲವಾವುಜದ ನಾದ ||
ತತವಿತತ ಘನಸುಸಿರವಾದ್ಯದ | ಚತುರಿಕೆಗೆ ಗೀತದ ಸುತಾನಕೆ |
ಸುತಿಪನಚ್ಚಣಿಯರೆ ಹರಣವೆನೆ ನಲಿದು ನರ್ತಿಪುದು || ೫೦ ||

ರಸಮೆ ಕಾಳ್ಪುರಮಾಗೆ ಭಾವ | ಪ್ರಸರಮುಂಬರಿವಾಡೆ ವೃತ್ತಿಗ |
ಳೆಸಕ ಭಾವಕ ರಕ್ಷಗಭಿಮುಖವಾಗೆ ಮೂಜಗದ ||
ಮಿಸುಪ ಸಭೆ ಸೈವೆರಗುಗೊಳೆ ಚೆಲು | ವೆಸೆವ ಮೋಹನವುಬ್ಬರಿಸೆ ನ |
ರ್ತಿಸುವನಚ್ಚಣಿಯರನು ಸುರಪತಿ ನೋಡಿಮೆಚ್ಚಿದನು || ೫೧ ||

ವಿನುತತರ ಸಂಗೀತ ಹರ್ಮ್ಯಾ | ವನಿ ಸುಚಕ್ರದ ಮಧ್ಯಮಧ್ಯದ |
ಘನತರದ ಚಪ್ಪೀದಿಗಳ ಮಧ್ಯದಲಿ ಮಣಿಮಯದ ||
ಜನಿತ ಶತತೋರಣದೊಳಗೆ ಲೇ | ಸೆನಿಪ ಮುಕ್ಕೊಡೆ ಚವಲಮಾಲೆಯ |
ಕನಕ ಕಿಂಕಿಣಿ ಘಂಟೆಗಳ ಮಾಳಾ ವಿಳಾಸದಲಿ || ೫೨ ||

ಪ್ರವರಚೆನ ಸಿದ್ಧಪ್ರತಮೆಗಳ | ನವಗಹಿಸಿ ಮಾಣಿಕ್ಯಮಯವಹ |
ನವನವಸ್ತೂಪೆಗಳು ಭವ್ಯರ ಪುಣ್ಯ ಪುಂಜವೆನೆ ||

ವಿವಿಧ ರಚನೆಯಿನಿಹುದು ಮತ್ತೊ | ಪ್ಪುವ ಸುಸಂಗೀತ ಕ್ಷಿತಿಯನೊಳ |
ಗವಿಚಲಿತ ಕಾಂತಿಯಲಿ ಪಳುಕಿನ ಕೋಟೆ ಬಳಸಿದುದು || ೫೩ ||

ಮಂಗಳವನಾ ನಿಧಿಗಳನು ತಳೆ | ದಂಘಯಿಪ ಕಲ್ಪಜರ ಕಾಪಿನ |
ತುಂಗತರದ ಹರಿಣ್ಮಣಿಯ ಗೋಪುರಚತುಷ್ಕಗಳ ||
ಸಿಂಗರದ ಕೋಟೆಯಮೊದಲಿನಿಂ | ತಾಂಗಿ ಗಾವುದದಗಲದಲ್ಲಿ ಬೆ |
ಡಂಗುವಡೆದುದು ಕಂಗೊಳಿಸೆಲಕ್ಷ್ಮೀ ಸುಮಂಟಪವು || ೫೪ ||

ಗಗನವಳುಕಿನ ಮಂಟಪವು ತಾ | ಮುಗಿಲನಿರಿವುದು ಮತ್ತಮದರೊಳು |
ಸೊಗಯಿಸುವ ಹದಿನಾರು ಬಿತ್ತಿಗಳಿಂದ ಹನ್ನೆರಡು ||
ನೆಗೆದ ಕೋಷ್ಠಗಳಿಹವು ನಾಲ್ದೆಸೆ | ಗೊಗೆದ ವೀಥಿ ಚತುಷ್ಕದೆಡೆಯಲಿ |
ಮಿಗೆ ಜಯತ್ರಯ ಗರ್ಭವದು ಗಣಭೂಮಿಯಿಂತೆನಲು || ೫೫ ||

ಮುನಿಪರಮರಿಯರಜ್ಜಿಕೆಯರೊ | ಳ್ವನಿಪ ಜೋತಿಷ್ಕಾಂಗನೆಯರಾ |
ವನಜ ವಧುಗಳ ಭವನವಾಸಿಯರೆಸೆವ ಭವನಜರು ||
ವನಜರಾ ಜೋತಿಷ್ಕರಮರರು | ಮನುಜರಾ ತಿರ್ಯನ್ನಿವಹವಿಹ |
ಘನತೆಯಿಂದೀರಾರು ಗಣಕೋಷ್ಠವು ತರದಿನಿಹುದು || ೫೬ ||

ಬಳಸಿದಾ ಗಣ ಭೂಮಿವಳಯದಿ | ನೊಳಗೆ ಪಚ್ಚೆಯ ಗೋಪುರಂಗಳು |
ಬಗೆದ ನಿಧಿಮಂಗಲದಿ ಕಲ್ಪಜರುಗಳ ಕಾಪಿಂದ ||
ತೊಳಗುತಿರೆ ಚೆಲುವಾದುದಾ ನಿ | ರ್ಮಲನ ಗಗನಸ್ಫಟಿಕ ವೇದಿಕೆ |
ಯೊಳಗೆ ಪೀಠತ್ರಯವು ಸೊಗಯಿಸುತಿರ್ದುದೆಂತೆನಲು || ೫೭ ||

ಸವೆದ ವೈಡೂರ್ಯದಿ ಸುವರ್ಣದಿ | ನವರತುನ ಮಯದಿಂ ತರದಿನೊ |
ಪ್ಪುವ ಸುಪೀಠಗಳೇಳು ನೂರೈವತ್ತು ಬಿಲ್ಲುಗಳು ||
ಅವರ ನೆಗಹೆಂಟೆಂಟರರ್ಧವು | ವಿವರಿಪೊಡೆ ಮೂರನೆಯ ದೈನೂ |
ರವಗಹಿಕೆಯಷ್ಟಾರ್ಧ ಚಾಪೋತ್ಸೇಧವೆಣಿಸುವೊಡೆ || ೫೮ ||

ಒಂದು ಚಾಪಪ್ರಮಿತವನು ಬೆಳ | ಗಿಂದೆಸೆವ ವರ ಧರ್ಮಚಕ್ರವ |
ನಂದವಹ ಮಕುಟದಲಿ ಪೊತ್ತಾ ಯಕ್ಷರಕ್ಷಿಪೊಡೆ ||
ಸಂದ ನಾಲ್ದೆಸೆಗಿಹರು ನಾಲ್ವರು | ನಿಂದು ಮೊದಲಿನ ಪೀಠದೊಳು ದೇ |
ವೇಂದ್ರ ಮನುಜೇಂದ್ರಾರ್ಚಿತದೊಳದನಿಂದ್ರನೀಕ್ಷಿಸಿದ || ೫೯ ||

ಎರಡನೆಯ ಪೀಠದಲಿ ಶಿಖಿಯಾ | ಪರಿಯ ಹಂಸೆಯವುಳಿಯಲೆಂಟುಂ |
ತೆರೆದ ಕೇತನವಿಹವು ಕೇತನ ಭೂಮಿವೊಲು ಮುಂದೆ ||

ಮೆರೆಗು ಮಗ್ರದ ಪೀಠದಲಿ ಕೆಲ | ಕುರುವ ಮಂಗಲ ನಿಧಿ ನಿಕರವಿಹು |
ದುರುತರ ಶ್ರೀಗಂಧಕುಟಿ ನಡುವೆಸೆದುದೆಂತೆನಲು || ೬೦ ||

ಅಗಲವದಕರು ನೂರು ಬಿಲ್ಲನಿ | ತೊಗೆದ ನವಶತ ಚಾಪದುದ್ದವು |
ಸೊಗಯಿಪುದು ಮಣಿಗಣನಿಬದ್ಧ ಸುಚಿತ್ರ ಪತ್ರದಲಿ ||
ಜಗದೆರೆಯನಾ ದಿವ್ಯ ದೇಹದಿ | ನೊಗುವ ಲೋಕದ ಪರಿಮಳಂಗಳ |
ನಗುವ ಗಂಧವನಾಂತು ಸಾರ್ಥಕವಾಯ್ತು ಗಂಧಕುಟಿ || ೬೧ ||

ದರ ಮಧ್ಯದೊಳಮಲ ಬಹುರ | ತ್ನದಿನಿಹುದು ಸಿಂಹಾಸನವು ಮ |
ತ್ತದರ ಮೇಲೆ ಸಹಸ್ರದಳ ಕನಕಾಬ್ಜಕರ್ಣಿಕೆಯು ||
ಸದಯನದನಾಲ್ವೆರನಿತ ನಗೆ | ದುದಯಿಸಿಹನಾ ಕೋಟಿರವಿಶಶಿ |
ವಿದಿತ ಕಾಂತಿಯ ದಿವ್ಯ ಪರಮೌದಾರಿಕಾಂಗದಲಿ || ೬೨ ||

ಸಲೆ ಮೆರೆವ ಸಿಂಗವಣೆ ಮುಕ್ಕೊಡೆ | ಯಲರಮಳೆ ಪೂತಸುಕೆ ನುತ ಭಾ |
ವಲಯ ಸುರದುಂದುಭಿ ಚವಲವರುವತ್ತು ನಾಲ್ಕೆಸೆಯೆ ||
ಮಲರಹಿತ ನಿಖಿಲಾರ್ಥಭರಿತೋ | ಜ್ವಲಿತ ದಿವ್ಯಧ್ವನಿ ಜಗವ ಬಗೆ |
ಗೊಳಿಸುತಿರ್ದವು ಪ್ರಾತಿಹಾರ್ಯಾಷ್ಟಕವು ಜಿನವರನ || ೬೩ ||

ಚತುರ ಚತುರಾಸ್ಯತೆ ನಭೋಯಾ | ನತೆ ಅಪಹಾರೋಪಸರ್ಗತೆ |
ಸತತಮನಿ ಮೇಷತೆ ಸಮಸ್ತಾಗಮ ವಿದಗ್ಧತೆಯ ||
ನುತಮಹಿಂಸತೆ ನೂರುಗಾವುದ | ಮಿತ ಸುಭಿಕ್ಷತೆ ಸಮ ನಖಸುಕೇ |
ಶತೆ ಗತಚ್ಛಾಯತೆಯಿವೀರೈದತಿ ಶಯವು ಜಿನನ || ೬೪ ||

ಘಾತಿಗಳು ಕಿಡಲಾದ ವಿವು ಗ | ವ್ಯೂತಿನಾಲ್ವತ್ತೆಂಟು ಪರಿಮಿತ |
ಧಾತ್ರಿ ಲೋಕೇಶನ ಸಭೆಯನುರೆ ಪುಗಲು ಪೊರಮಡಲು ||
ಮಾತದೇನಂತರ್ಮುಹೂರ್ತಕೆ | ಧಾತುಗಿಡಧಾತಪ್ಪ ವನಿತೆಯ |
ರಾ ತೆರದಿ ಬಾಲಕರು ವೃದ್ಧರು ಜಿನಪನತಿಶಯದಿ || ೬೫ ||

ನೋಡುವರು ಕಂಗುರುಡರೊಲಿದೆಡೆ | ಯಾಡುವರು ಪಂಗುರುಳ ಸವಿ ನುಡಿ |
ಯಾಡುವರು ಮೂಕರು ಕಿವುಡರೆಲ್ಲವನು ಕೇಳುವರು ||
ಆಡಲೇಂ ಮೃತಿಜನನ ರತ ತನು | ಪೀಡೆ ಪಸಿತೃಷೆ ದೇಹಿಗಳಿಗಿರ |
ದೋಡುವುದು ತಾನಲ್ಲಿ ಜಿನಸಾಮರ್ಥ್ಯವೇಂ ಬಡವೆ || ೬೬ ||

ಬಗೆವೊಡಜ್ಞಾನತ್ರಿಶಯ ಜೀ | ವಗಳು ಮಿಥ್ಯಾದೃಷ್ಟಿಗಳಭ |
ವ್ಯರ್ಗ[ಳೊರ್ವರುಮಾ] ಸಮವಸರಣದೊಳಿಲ್ಲ ಮತ್ತಲ್ಲಿ ||

ನೆಗೆದ ವೇದಿಕೆ ಕೋಟೆಗಳು ಮೂ | ಜಗದೆರೆಯನಾ ದೇಹದಿಂ ಬೆಸೆ |
ಚ್ಚುಗೆಯು ನಾಲ್ವಡಿ ತೋರಣಗಳವರಿಂದನಿತ್ತಧಿಕ || ೬೭ ||

ತರದಿ ಮಂಡಪ ಸದಿತಿ ಬಹು ಗೋ | ಪುರ ಸುಹರ್ಮ್ಯಸ್ತೂಪಗಳು ಸೌಂ |
ದರದ ಕೇಳೀ ಶೈಲಸಿದ್ಧರ ಚೈತ್ಯ ಭೂರುಹವು ||
ಸ್ಫುರದಶೋಕ ಮಹೀರುಹವು ತ | ತ್ಪರಮ ಪುರುಷನ ತನುವಿನಿಂ ಹ |
ನ್ನೆರಡು ಮಡಿಯತ್ಸೇಧವಿದು ಸರ್ವಜ್ಞನಾಗಮದಿ || ೬೮ ||

ಸುರಪನಾ ತೀರ್ಥೇಶ್ವರನ ಸೌಂ | ದರತೆಯನು ನೆರೆ ನೋಡುವಡೆ ಸಾ |
ಸಿರನಯನವನು ತಳೆದು ದಣಿಯಂಗಡ ಫಣೀಶ್ವರನು ||
ಪಿರಿದು ಸಾಸಿರ ರಸನೆಗಳನಾಂ | ತುರುಮುದದಿ ಕೀರ್ತಿಸಿ ದಣಿಯನೆನೆ |
ನರಹುಳುವು ನಾಮ ಪೊಗಳ ಬಲ್ಲೆನೆ ಜಿರನರಾ ಸಭೆಯ || ೬೯ ||

ಇಂತು ಮೆರೆವಾ ನೇಮಿನಾಥನ | ನಂತವೀರ್ಯನ ಸಮವಸರಣವ |
ನಾಂತ ನಿರ್ಭರ ಭಕ್ತಿಭಾವದಿ ನೋಡಿ ಸುತ್ರಾಮ ||
ಸಂತಸದಿ ಸದ್ದ್ರವ್ಯನಿಚಯದಿ | ನಂತಶಾಂತಕನಡಿಯ ಪೂಜಿಸಿ |
ಕಂತುವಿಜಯನ ನುತಿಸಿ ನಿಜಕೋಷ್ಠದೊಳಗಿರಲೊಡನೆ || ೭೦ ||

ಹರಿಯು ಬಲನು ಸಮುದ್ರ ವಿಜಯಾ | ದ್ಯರು ವಿದಿತಯದು ವಂಶಜರು ಗತ |
ದುರಿತನಾ ಕಲ್ಯಾಣವರಿದಾನಂದ ಭೇರಿಯನು ||
ತಿರುವಿಗೈಯಿಸಿ ಸಕಲಭವ್ಯರ | ನೆರವಿಯಿಂದೈತಂದು ದೂರಾಂ |
ತರದಿ ವಾಹನ ರಾಜ ಚಿಹ್ನವನುಳಿದು ಭಕುತಿಯಲಿ || ೭೧ ||

ಸಮವಸರಣವನೇರಿ ವೀತ | ಶ್ರಮದಿನತ್ಯಾಶ್ಚರ್ಯಮುಮನನು |
ಪಮವ ಮುಹುರೀಕ್ಷಣ ಕುತೂಹಲ ಚಿತ್ತರಳ್ತಿಯಲಿ ||
ಕ್ರಮದಿನೀಕ್ಷಿಸುತೈದೆ ಬಲವಂ | ದಮಲ ಗಂಧಕುಟಿಯನು ಸಕಲಾ |
ಗಮವನರ್ಚಿಸಿ ನುತಿಸಿ ನಿಜಕೋಷ್ಠದೊಳು ಕುಳ್ಳಿರ್ದ || ೭೨ ||

ಕಿರಿದು ಪೊತ್ತಿರ್ದೆದ್ದು ಮೂಜಗ | ದೆರೆಯ ನೇಮಿಸ್ವಾಮಿಯಡಿಗಳಿ |
ಗೆರಗಿಯಾನಂದಾ[ಂಬು] ಕಾಳ್ಪುರವಾಗೆ ಯಾದವರು ||
ನೆರೆದು ತತ್ಸಭೆಯೀಕ್ಷಿಸುತ ಸೈ | ವೆರಗುಗೊಳತಿಪ್ಪತ್ತು ಸಾಸಿರ |
ಮಿರುಪ ಸೋಪಾನವನಿಳಿದು ಪೊಕ್ಕರು ನಿಜಾಲಯವ || ೭೩ ||

ಇತ್ತಲಾ ಶತಮನ್ಯು ಕೈಮುಗಿ | ದೆತ್ತಿ ನಿಟಿಲದೊಳಿರಿಸಿ ಯೆಲೆದೇ |
ವೋತ್ತಮನೆ ಭರತಕ್ಷಿತಿಯ ನುತ ಭವ್ಯಸಂತತಿಗೆ ||

ಉತ್ತಮದ ಧರ್ಮಾಮೃತವಕರೆ | ದೊತ್ತರಿಪ ದುರಿತಾಗ್ನಿಗೆಡಿಪೊಡು |
ದಾತ್ತ ಸಮಯವಿದಹುದೆನುತ ಸಲೆ ಬಿನ್ನಯಿಸಲೊಡನೆ || ೭೪ ||

ತ್ರಿದಶಜ್ಯೋತಿಷ್ಕಾಮರರುವೊ | ರ್ಮೊದಲೆ ತದ್ಭೇರಿಗಳ ಸದೆಯಲು |
ವೊದರುವವೊ ದಶದೆಸೆಗಳೆನೆ ಪರ್ವಿದುದು ತದ್‌ಧ್ವನಿಯು ||
ಪುದಿದ ಲೋಕದ ಭವ್ಯಜನದ | ಗ್ಗದ ಸುಪುಣ್ಯವೆನಡಸಿದುದೊಯೆನೆ |
ತ್ರಿದಶಪತಿ ಜಿನಸಮವರಸರಣಮನೆಯ್ದೆ ನಡೆಸಿದನು || ೭೫ ||

ಜಿನನ ಚರಣನ್ಯಾಸಮೇದುರ | ಕನಕ ಕಮಲಗಳೇಳು ಮಿಗೆ ಪೆಂ |
ಪೆನಿಪ ಸಿಂಹಾಸನದ ಪರಭಾಗದಲಿ ಶೋಭಿಪವು ||
ಅನುಪಮಿತ ಸೌಹಾರ್ದ ಮಾಗಧ | ಜನಿತ ಭಾಷೆ ಜನಾನುರಾಗತೆ |
ಜಿನನಯಾತ್ರೆಯೊಳಲೆದು ದೆಸೆಗನುಕೂಲಗಂಧವಹ || ೭೬ ||

ಧರೆಯೊಳಗೆ ತೃಣಕಂಟಕವು ಕಲು | ಪರಳು ಕೀಟಕ ಧೂಳಿಯಿಲ್ಲದ |
ತೆರದಿ ಯೋಜನಪರಿಮಿತವನಾ ವಾಯುನಂದನರು ||
ನೆರೆದು ಸಮ್ಮಾರ್ಜಿಸುವರೊಡನೆಯೆ | ಸುರಪತಿಯ ಬೆಸನಿಂದೆ ಮೇಘ ಕು |
ವರರು ಬಹುಪರಿಜಲಾಸಾರದಲಿ ಸಿಂಪಿಪರು || ೭೭ ||

ನೆಲೆಸಿದಾ ಸಕಲರ್ತು ಸೂಚಕ | ಫಲಕುಸುಮ ಕಿಸಲಯ ಭರಿತನವು |
ಗಳು ಮುಕುರ ಸಮರತ್ನಮಯ ಭೂವಳಯ ಸಲ್ಯಾದಿ ||
ಫಲಭರಿತವಹ ಸರ್ವಸಸ್ಯಾ | ವಳಿ ಪರಸ್ಪರ ವೈರಮಂ ಬಿ |
ಟ್ಟೆಳಸಿಹವು ತಿರ್ಯಂಚ ಮನುಜಾವಳಿಗಳವನಿಯಲಿ || ೭೮ ||

ಮುಗಿಲು ಮೂಡದು ಪಕ್ಕಿ ಹಾರವು | ಗಗನದಲಿ ಬಿಳಿದಾಯ್ತು ತೆರೆಮೊರ |
ಹುಗಳು ಕಡಲೊಳಗಿಲ್ಲ ರಜದಿಂ ತಮದಿ ದೆಸೆಯೆಂಟು ||
ಹೊಗೆಯಲಮ್ಮವು ನಾಲ್ದೆರದದೇ | ವಗಣ ಸುರಪತಿಯಾಜ್ಞೆಯಿಂ ಹರಿ |
ದಗಲ ಕಿತ್ತಿತ್ತವರ ಕರೆವುದು ಜಿನವಿಹಾರಕ್ಕೆ || ೭೯ ||

ಜಿನ ಸಭಾಮಂಡಲದ ಮುಂದೊಂ | ದಿನ ಸುಮಂಡಲವಿರ್ದವೊಲು ಪೆಂ |
ಪೆನಿಸಿದರ ಸಾಸಿರ ಕಿರಣಯುತ ಧರ್ಮಚಕ್ರವದು ||
ಅನುವಡೆದು ದೆಸೆವಷ್ಟಮಂಗಳ | ವನು ತಳೆದು ಮುಂದೆಬರೆ ದಿವಿಜಾಂ |
ಗನೆಯರಂಬರದೊಳು ಜಿನೇಂದ್ರ ವಿಹಾರವೊಪ್ಪಿದುದು || ೮೦ ||

ಗತದುರಿತಗೀಪರಿಯ ಪದಿನಾ | ಲ್ಕತಿಶಯವು ದೇವೇಂದ್ರ ಕೃತಮ |
ಪ್ರತಿಮ ಸಹಜಾತಿಶಯಮನು ಮುಂಪೇಳ್ದುದೀರ್ಯೆದು ||

ವಿತತ ಘಾತಿಗಳಳಿಯಲೀರ್ರೈ | ದತಿಶಯಂಗಳಿವೀಕ್ಷಿಸಲು ಜಿನ |
ಪತಿಗಳಲ್ಲದೆ ಪೆರರೊಳುಂಟೆ ಭೂಪ ಕೇಳೆಂದ || ೮೧ ||

ಧರೆಯೊಳಗೆ ಧರ್ಮಾಮೃತವ ಮಳೆ | ಗರೆವಪೂರ್ವದ ಮೇಘಮಂದಳ |
ದಿರವೊ ಮೇಣ್ ಮಿಥ್ಯಾತ್ವ ಮಾರ್ಗತಮಂಗಳನು ಕೆಡಿಪ ||
ತರಣಿ ಮಂಡಲವೊಯೆನಿಸಿ ಭ | ವ್ಯರ ಸುಕೃತ ಮಂಡಲವು ನಿಖಿಳೋ |
ರ್ವರೆಯೊಳು ವಿಹಾರಿಸಿತು ಜಿನನಾಸ್ಥಾನ ಮಂಡಪವು || ೮೨ ||

ದೇವಪತಿನತ ನೇಮಿಜಿನನ ಮ | ಹಾ ವಿಭೂತಿಯ ಸಮವಶ್ರುತಿಯನು |
ದೇವಪತಿನಡಯಿಸುವನೆನೆ ಲೋಕತ್ರಯವು ನೆರೆದು ||
ಶ್ರೀ ವಿಹಾರವ ಬಣ್ಣಿಸುವೊಡವ | ನಾವ ಕವಿಬಲ್ಲನೊ ನಿಖಿಳ ದೇ |
ಶಾವಳಿಯು ಧರ್ಮಾಮೃತಾಸಾರದಲಿ ಮುಳುಗಿದುದು || ೮೩ ||

|| ಅಂತು ಒಟ್ಟು ಸಂಧಿ ೬೧ಕ್ಕಂ ಮಂಗಲ ಮಹಾ ||

## ಭಾಭಾಸುರ ತ್ರಿಲೋಕ ಸಭಾ ಪರ್ವ (ಸಂಧಿ ೬೨)

**ಸಂಧಿ ೬೨**

ಶ್ರೀ ನೇಮಿ ತೀರ್ಥೇಶ್ವರನ ಸಮವಸರಣದೊಳು |
ಮೀನಾಂಕ ಮೊದಲಾದ ನೃಪರು ರುಗುಮಿಣಿ ಮುಖ್ಯ |
ಮಾನಿನಿಯರೊಸೆದು ತಂತಮ್ಮ ಭವಮಂ ಕೇಳ್ದು ತೊರೆದು ದೀಕ್ಷೆಯನಾಂತರ್ರೈ || ಪ ||

ಕೇಳು ಮಗಧಾಧೀಶ ನೇಮಿಜಿನಪನ ದಯಾ |
ಪಾಲಕನ ಸಮವಶೃತಿ ವಿಹರಿಸುತ ಬಂದು ಸುವಿ |
ಶಾಲದ ದ್ವಾರಕೆಯ ದೈವದುದ್ಯಾನದುಪರಿಮಗಗನ ತಳದೊಳಿರಲು ||
ಸೂಳುಯಿಪ ದೇವದುಂದುಭಿಯ ಜಯ ಜಯರವವ |
ಕೇಳಿ ನಗಧರ ಹಲಧರಾದಿ ಯದು ವಂಶಜರು |
ಮೇಳಿಸಿದ ಭಕ್ತಿಯಿಂದ್ಯೆದಿ ದೀಕ್ಷೆಯನಾಂತು ಸಮವಸರಣದ ಸಭೆಯಲಿ || ೧ ||

ಇರಲು ವರದತ್ತಗಣಧರರ್ಗೆ ಕೈ ಮುಗಿದೆಲೇ |
ಗುರುವೆ ಓರನ್ನರಹರೀರ್ವ ರೀರ್ವರು ತಪೋ |
ಧರರೆನ್ನ ಮನೆಗೊಲಿದು ಮೂಮೆ ಚರಿಗೆಗೆ ಬರಲು ನನಗವರೊಳೇಕೆ ಮೋಹ ||
ದೊರೆಕೊಂಡುದೆಂದು ದೇವಕಿಬಿನ್ನಯಿಸಲೊಡನೆ |

ಪರಿಕಿಪೊಡಮರು ನಿನ್ನ ನಂದನರು ನೈಗಮಾ |
ಮರನೊಯಿದಮಳುಗಳರು ವರ ಚರಮದೇಹಿಗಳು ತಳೆದರಾಶಾಂಬರತೆಯ || ೧ ||

ಎಂದು ನಿರವಿಸೆ ಸಂತಸದಲಿರ್ದಳಿದಲೊಡನೆ |
ಚಂದ್ರಮುಖಿ ಸತ್ಯಭಾಮೆಯು ತನ್ನ ಭವವನೊಲ |
ವಿಂದ ಕೇಳಲು ಪೇಳ್ದವರು ಮಗಳೆ ಕೇಳು ಶೀತಲ ತೀರ್ಥಕರು ವರ್ತಿಸಿ ||
ಸಂದ ಧರ್ಮವು ಕೆಟ್ಟ ಕಾಲದಲಿ ಮೇಘರಥ |
ನೆಂದೆಬರಸು ಭದ್ರಿಳವೆನಿಪ್ಪ ಪರವರಂ |
ನಂದಿನಿಯೆನಿಪ್ಪ ರಾಣಿ ಸುಖದಿನವರಿರಲಲ್ಲಿ ಓರ್ವನತಿದುಷ್ಟಮನನ್ಯೆ || ೩ ||

ಭೂತಿಶರ್ಮನು ವಿಪ್ರ ಕಮಲೆವಧು ಮಂದನೆಂ |
ಬಾ ತನುಜನಾತಂಗೆ ಪುಟ್ಟಿ ಬಳೆದು ದು |
ರ್ನೀತಿಯ ಕುಶಾಸ್ತ್ರಮಂ ಕಲಿತು ಸಪ್ತವ್ಯಸನಲಂಪಟನು ಪಾಪದೋದ ||
ನೂತನವ ಮಾಡಿ ಭೂಪತಿಗೆ ಜನಪದಕೆ |
ಮಾತನೋನಂಬಲೋದಿಸಿ ಕಡೆಯೊಳಳಿದು ದುಃ |
ಖಾತಿಶಯದೇಳನೆಯ ನರಕದುಃಖವನುಂಡು ತಿರ್ಯಂಚದೊಳು ತಿರಿದನ್ಯೆ || ४ ||

ತಿರಿಕದೊಳು ತಿರಿತಂದುಮೆತ್ತಾನುಮುಪಶಮದಿ |
ವರಗಂಧಮಾದನ ನಗೇಂದ್ರ ತಟ ಗಂಧವತಿ |
ಯುರು ನದಿಯ ಹೊರೆಯ ಬಲ್ಲೂಕನೆಂಬಾ ಶಬರ ಶಿಬಿರದೊಳು ಕಾಲನೆಂಬ ||
ಪಿರಿಯ ಲುಬ್ಧಕನಾಗಿ ಇರುತೊಂದು ದಿನಲಬ್ಧಿ |
ದೊರೆಕೊಂಡು ಧರ್ಮರೆಂಬಾಶಾಂಬರರ ಕಂಡು |
ಚರಣ ಕಮಲಕ್ಕೆರಗಲವರು ಕುಡೆ ಧರ್ಮಮಂ ಪಿಡಿದುನಡೆದೊಡಲನುಳಿದು || ೫ ||

ಮೆರೆಯ ವಿಜಯಾರ್ಧವಳಕಾಭಿದಾನವು ಪುರವ |
ದರಪತಿಯು ಪೆಸರಿನಿಂದುರು ಬಲವಿಯಚ್ಚರನು |
ತರುಣಿ ಜ್ಯೋತಿರ್ಮಾಲೆಯವರ್ಗೆ ಹರಿಬಲನೆಂಬ ಮಗನಾಗಿ ರಾಜ್ಯವಾಳಿ ||
ತರಿ ಸಂದನಂತ ವೀರ್ಯಾಚಾರ್ಯರಿಂ ತಪ ಮ |
ನುರೆ ತಲೆದು ಮುಡುಪಿ ಸೌಧರ್ಮದೊಳು ಪುಟ್ಟಿಯವ |
ಚರದ ಸುಖವುಂಡು ಬಂದಿಲ್ಲಿ ನಾನಾದೆಯೆನೆ ಹರುಷದಿರ್ದಳು ಸತ್ಯೆಯು || ೬ ||

ಬಳಿಕ ಕೈಮುಗಿದು ರುಗುಮಿಣಿಕೇಳೆ ಪೇಳ್ದಪರು |
ತಿಳಿವುದೀ ಭರತದೊಳು ಮಗಧ ವಿಷಯದೊಳಿಹುದು |
ಹೊಳಲು ತಾಂ ಶ್ರೀಪುರವು ಸೋಮಶರ್ಮನ ಧರ್ಮ ವಿಪ್ರನಾತನ ಬ್ರಾಹ್ಮಣಿ ||
ಚೆಲುವೆ ಕೈಗೈದು ಕನ್ನಡಿ ನೆಳಲು ಕಂಡುವಾ |

ಗಳು ಚರಿಗೆಗೆಂದು ಮಾಸೋಪವಾಸಿಗಳು ನಿ |
ರ್ಮಲರಹ ಸಮಾಧಿಗುಪ್ತರು ಬರಲು ಮುಕರದೊಳು ಕಂಡು ಕಡುಹೆದರಿದವಳು || ೭ ||

ಕೆಡೆ ನುಡಿದು ಜಿನಮುನಿಯ ನೂಂಕಿಸಿದಳಾಕೆ ತಾಂ |
ಕಡೆಯೊಳಾ ಮೈ ಕೆಟ್ಟು ಕೊಳೆದಿಡುತತದ್ಗೃಹದಿ |
...ದಿಲಿ ಕೊಳೆವಾವು ಬೆಳುಗತ್ತಹೀಹಂದಿ ಸಾರಮೇಯಂಗಳಾಗಿ ||
ಕಡುದುಃಖವುಂಡುಂಡು ಮಡಿದು ಕಾಳಿಂದಿ ನದಿ |
ಯೆಡೆಯ ಮಂದಿರಪುರದ ಮತ್ಸ್ಯಮೀಂಬುಲಿಗಂಗೆ |
ಮಡದಿ ಮಾಂದೂತಿಗಂಪೂತಿಗಂ ಪೂತಿನಿಯೆಂಬ ಮಗಳಾಗಲೇ ವೇಳ್ವೆನ್ನೈ || ೮ ||

ಅಳಿದರಾಕೆಯ ತಂದೆ ತಾಯ್ಗಳನ್ಯರ ಕೀಳಿ |
ಳೊಳಗಾಕೆಯಿರಲವಳ ದುರ್ಗಂಧಕತಿ ಹೇಸಿ |
ತಳುವದಲ್ಲಿಯ ಜನಂ ಪೊರಮಡಿಸಿ ಕಳೆಯೆ ಕಾಳಿಂದಿಯಂಬಿಗರ ಪೊರ್ದಿ ||
ಪೊಳೆಯೊಳಿರಲಂದಿನ ಸಮಾಧಿಗುಪ್ತರೆ ಬಂದು |
ನಳಿನಬಾಂಧವನಸ್ತಮಿಸಲಾ ನದಿಯ ತೀರ |
ದಲಿಯೋಗದಿರೆ ಕಂಡು ಕಡುಬಡವನೆಂದು ಪರುಗಲಬಲೆಯ ಮರೆಗೈದಳು || ೯ ||

ಮಶಕ ದಂಶಾದಿ ಬಾಧೆಯು ಪೊರ್ದಂದಂತೆ ಸಂ |
ತಸದಿ ಹಗ್ಗಿಯನುರುಹಿ ಭಕುತಿಯಿಂದಿರಲೊಡನೆ |
ಬಿಸುಗದಿರನುದಯಿಸಲು ಕೈಯೆತ್ತಿ ಕೊಂಡವಧಿಯಿಂದರಿದು ಲಕ್ಷ್ಮೀಮತಿ |
ಗಸಣಿಗೊಳಗಾದೆ ಗಡ ಯೆಂದಾಮುನೀಂದ್ರರದ |
ನುಸುರೆ ದುರ್ಗಂಧಿಯು ಭವಸ್ಮರಣೆ ಪುಟ್ಟಿ ವಂ |
ದಿಸಿ ಮಗಳೆ ನೀನಂದು ನಮ್ಮ ಪಡೆದಿಂತಾದೆಯೆಂದೆಲ್ಲವಂ ಪೇಳ್ದರು || ೧೦ ||

ಮುನಿವರರು ಪಂಚಾಣು ವ್ರತವನಾ ಪೂತಿಗಂ |
ಧಿನಿಗಿತ್ತು ಪರಸಿ ಬಿಜಯಂಗೈದರಾಕೆ ಜಿನ |
ಮುನಿಪತಿಯ ನಗನಾಗಮೃಗಪತಿಯ ನಾನಂದು ಪಳಿದಿಂತು ನೊಂದೆನಕಟ ||
ಎನುತ ಪಶ್ಚಾತ್ತಾಪದಿಂ ಧರ್ಮಮಂ ಪಿಡಿದು |
ಜಿನರೆ ಸರಣೆನುತಿಪ್ಪಿನಂ ರಾಜಗೃಹಕೊಲಿದು |
ಜಿನಪೂಜೆಯಂ ನೋಳ್ಪೊಡಜ್ಜಿಕೆಯರೈದುತಿರೆ ಬೆಂಬಳಿಯೆ ತಾಂ ಪೋದಳು || ೧೧ ||

ಪೋಗಿಯಾ ಪೊಳಲ ಪೊರವಲಯದೊಳಗತಿವಿದಿತ |
ವಾಗಿರ್ದ ಶಿಲೆಯೆಂಬ ಗಿರಿಯಾ ಮಧ್ಯದ ಗುಹೆಯ |
ಬಾಗಿಲಲಿ ಆ ವಸುಂಧರೆಯರೆಂಬಜ್ಜಿಕೆಯರೆಂದಂತೆನೋನುತಾಕೆ ||
ಆಗಳಿರುತಿರಲಾ ಸಮಾಧಿಗುಪ್ತರುವಲ್ಲಿ |

ಗಾಗಿಬರೆ ತತ್ಪುರದ ನೃಪನ ಸುತೆ ಶ್ರೀಮತಿಯು |
ಬೇಗದಿಂ ಬಂದವರ ಪದಪದ್ಮಗಳನು ಪೂಜಿಸಿ ನಮಸ್ಕರಿಸಿದವಳು || ೧೨ ||

ಪರಸಿ ಆ ಶ್ರೀಮತಿಗೆ ಪೂತಿಗಂಧಿಯ ಭವವ |
ನೊರೆದರಾ ಮುನಿಪರರದ ಕೇಳ್ದುಲಕ್ಷ್ಮಿ ಮತಿಯು |
ದೊರೆಯಪ್ಪ ತನ್ನ ಸಖಿ ಮುನ್ನೆಂಬುದಂ ತಿಳಿದು ಪೂತಿಗಂಧಿಯನುಕಂಡು ||
ಪಿರಿದು ಸಂಭಾಷಿಸಿತದಾರ್ಯಿರಿಕೆಯರಿಂ ಕರ್ಮ |
ಹರಿವಿನೂತಾಷ್ಟಮಿಯ ನೋಂಪಿ ಮೊದಲಾದವಂ |
ತರದಿ ಕೈಗೊಳಿಸಲಾಕೆಯು ನೆಡಪುತಿರಲೆಂದಿನಂತೆ ಪಾರಣೆಯದಿನವು || ೧೩ ||

ಸುರಸಾನ್ನವನು ವಿರತೆಯನು ನೀಡಲುಳಿದನಿತ |
ನರಿಯ ಮೈನಿರೆಬಿಸುಡಲೊಗೆದಿರುಪೆಗಳು ಮಡಿದ |
ದುರಿತವಿರೆ ಪತ್ತಿದುದು ಪೂತಿಗಂಧಿಗೆ ಜೀವಿತಾಂತ್ಯದೊಳಗಾಗುರುಗಳ ||
ವರಸುಂಧರೆ ಕಂತಿಯರು ಸನ್ಯಸನನವಿದ್ಯೆ |
ನುರು ಸಮಾಧಿಯನು ಕೈಗೊಳಿಸಿ ತನುವನು ಬಿಸುಟು |
ಮೆರೆವಚ್ಚುತೇಂದ್ರಂಗೆ ಗಗನವಲ್ಲಭೆಯೆಂಬ ವಧುವಾಗಿ ಸುಖವಿರ್ದಳು || ೧೪ ||

ಪಳಿತೋಪಮಾಯುವಂ ರಾಗದಿಂದುಂಡು ಬಂ |
ದೆಲೆ ಮಗಳೆ ರುಗುಮಿಣಿಯೆ ನೀನಾದೆ ಅಂದಿನಾ |
ಕೊಳೆದ ಕೂಳಿಡಲೊಗೆದು ಮಡಿದಜೀವಗಳಿಂದ ಬಂದಪಾಪವೆಯಿಂದುತಾಂ ||
ಫಳಿಯಿಸಿತು ನಿಜಬಂಧುಬಾಂಧವರ ದೆಸೆಯಿಂದೆ |
ಬಳೆದಶೋಕವು ನಿನಗೆ ನಾಲ್ಕಾಕೆ ಕೇಳ್ದುತಂ |
ನೊಳೆ ತಿಳಿದು ಸಂಸಾರವತಿ ಚತ್ರವೆಂದುಗಣಧರರ್ಗೆರರ್ಗಿ ಸುಖವಿರ್ದಳ್ಳೆ || ೧೫ ||

ಇರಲು ಜಂಬಾವತಿಯು ತನ್ನಭವಂ ಕೇಳೆ |
ಗುರು ನಿರೂಪಿಪರೆಸೆವ ಪುಷ್ಕಳಾವತಿಯ ಬಂ |
ಧುರನಗರವತಿ ಶೋಕೆ ಪೆಸರಿನಿಂದದರೊಳಿಹ ನಂದನವನಕವನಿಜನು ||
ತರುಣಿಯೊಪ್ಪುವ ದೇವಮತಿಯವರಿಗಾತ್ಮಭವೆ |
ವರ ವಿಮಲೆಯೆಂಬಳವಳನು ಸುಮಿತ್ರನೆನಿಪ್ಪ |
ವರಗೆ ಕುಡಪಡೆದ ಪಲದಿನದ ಮೇಲಳಿದನಾತನು ಕಾಲನೇಗಯ್ಯನು || ೧೬ ||

ಬಳಿಯನಾಂ ವಿಮಲೆ ಜಿನದೇವಗುರುಗಳು ಪೇಳೆ |
ತಳೆದು ಶೀಲವಿಶಾಲೆಯಾಗಿ ಕಳಿದನಿಮಿಷಾ |
ಚಲದ ನಂದನವನದ ವನದೇವಿಯಾಗಿ ನಾಲ್ಕಧಿಕಸಾಸಿರದೆಂಬಂತು ||
ತಳೆದಬ್ದದಾಯುರವಸಾನದಲಿ ತದ್ವಿಷಯ |

ದೊಳೆ ವಿಜಯಪುರದ ವಿಜಯಾಖ್ಯ ಪರದನವನಿತೆ |
ಚೆಲುವೆ ನೆರೆ ಬಂಧುಮತಿಯಂತವರ್ಗೆ ವಿಜಯಸೇನೆಯೆನಿಪ್ಪ ಮಗಳಾದಳು || ೧೭ ||

ಜಿನದೇವ ವಣಿಜಸುತ ಜಿನದತ್ತೆಯೆಂಬವಳೊ |
ಳನುಬಂಧೆಯಾಗಿ ಶ್ರೀಪಂಚಮಿಯ ನೋಂಪಿಯನು |
ಮನವಾರೆ ನೋಂತು ಕಡೆಯೊಳು ಕಲಿದು ಸೌಧರ್ಮಕಲ್ಪದೊಳು ದೇವಿಯಾಗಿ ||
ಅನಿಮಿಷೆಯ ಪುಂಡರೀಕಿಣಿಪುರದ ವಜ್ರಸೇ |
ನನ ಸತಿ ಸುಭದ್ರೆಗೊಪ್ಪುವ ಸುಮತಿಯೆಂಬ ವಣಿಜಾತ್ಮಜೆಯುತಾನಾದಳು || ೧೮ ||

ಪರದಸುತೆ ಸುವ್ರತೆಯರೆಂಬಜ್ಜಿಕೆಯರಿಗುರೆ |
ಚರಿಗೆ ಮಾಡಿಸಿ ಅವರ ಪಕ್ಕದೊಳಗಿರ್ದು ಬಂ |
ಧುರ ಸುರತ್ನಾವಳಿಯೆನಿಪ್ಪ ನೋಂಪಿಯ ನೋಂತು ಕಳಿದೈದನೆಯ ಕಲ್ಪದ ||
ಸುರಪತಿಗೆ ವಧುವಾಗಿ ಹದಿಮೂರು ಪಲ್ಯದೊಂ |
ದಿರವಾದ ದಿವ್ಯಸುಖವುಂಡು ಬಂದೀ ಜಂಬು |
ಧರಣೀಶಗಾತ್ಮಜೆಯು ಹರಿಗರಸಿ ನೀನಾದೆ ಯೆನೆಸಂತಸಂಬಟ್ಟಳು || ೧೯ ||

ಎಸೆವಾ ಸುಶೀಮೆ ಲಕ್ಷ್ಮಣಿ ಗೌರಿ ಗಾಂಧಾರಿ |
ಯೆಸೆವ ಪದ್ಮಾವತಿಯುಮೆಂಬವರು ಮುರವೈರಿ |
ಯಸುವೆನಿಪ ಪಟ್ಟಮಾ ದೇವಿಯರು ಮೊದಲಾದವರು ತಮ್ಮ ತಮ್ಮ ಭವವ ||
ಸಸಿನೆ ಕೇಳ್ದರಿದು ವರದತ್ತಗಣಧರರ್ಗೆ ವಂ |
ದಿಸಿ ಸಂತಸಲಿರ್ದಲಿರಲೊಡನೆ ಬಲಭದ್ರ |
ನೊಸೆದು ನೆರೆ ನಿಟಿಲತಟ ಘಟ್ಟಿತಮುಕುಳಿತಕರಯುಗಜಿನೇಂದ್ರಂಗೆಂದನು || ೨೦ ||

ಶತಮನ್ಯು ಕೃತಜಲಧಿವೃತವೆಂದು ಪೊಳಲು ಸಂ |
ನುತ ನೇಮಿನಾಥ ಜಿನ ನಿಮಗ್ರಜಾತನು |
ದ್ಧತದಾನವಾರಿಯೆನಿಸಿಹ ಚಕ್ರಪಾಣಿಯದರಿಂದಾ ಪುರಕ್ಕೆ ಹರಿಗೆ ||
ಸ್ಥಿತಿ ನಿತ್ಯವೋ ಮೇಣನಿತ್ಯವೋ ಎಂದುವಿ |
ಶ್ರುತಬಂ ಬೆರಸುಗೊಳಲು ಗಣಧರರು ಪೇಳ್ದಪರು |
ಹಿತಮೃದುಮಧುರಗಭಿರೋಕ್ತಿಯಿಂ ಯಾದವ ಪ್ರಮುಖ ಸಭೆ ಕೇಳುತಿರಲು || ೨೧ ||

ಸುರೆಯತ್ತಣಿಂದೆ ದೀಪಾಯನನ ದೆಸೆಯಿಂದೆ |
ಗಿರಿಧರನು ಸೀನು ಪೊರಗಾಗಿಯೆನಿತಿರದಳಿಗು |
ಪುರವೆಲ್ಲವುಂ ನೆರೆ ಜರತ್ಕುಮಾರಕನಿವನ ಹೊನ್ನಂಬಿಸಿಂ ಮಡಿವನು ||
ಮುರರಿಪುವಮೋಘವೆಲೆ ಬಲಭದ್ರ ಕೇಳೆನಲು |

ಪರಮೇಶ್ವರನ ವಚನ ತಪ್ಪುವುದೆ ಸುಡು ಸುಡೀ |
ನರರ ರಾಜ್ಯವ ಯವ್ವನವಚಿರಾಯುವನೆಂದು ಬೆಕ್ಕಸಂಬಟ್ಟರವರು || ೧೧ ||

ಹಲಧರನು ಮತ್ತೆ ಕೈಮುಗಿದೆಲೆ ಸ್ವಾಮಿಯದು |
ಕುಲತಿಲಕ ಕೃಷ್ಣಂಗೆ ನನಗೆ ಮುಂದಣ ಭವದ |
ನೆಲೆಯೇನದಂ ಬೆಸಸಿಮೆನೆ ಮೂರನೆಯ ನರಕದೊಳುಪುಟ್ಟುವನು ಕೃಷ್ಣನು ||
ಸಲೆ ಜಘನ್ಯಾಯು ಸಾಗರ ಮೂರನುಂಡು ತಾಂ |
ಬಳಿಕಮುತ್ಸರ್ಪಣದ ಕಾಲದೊಳು ಬಂದಿಲ್ಲಿ |
ಮಲರಹಿತ ಚರಿತದಿಂ ತೀರ್ಥೇಶನಾಗಿಮುಕ್ತಿ ಶ್ರೀಯನಿರೆ ನೆರೆವನು || ೧೨ ||

ಅನುಜನವಿಯೋಗದಿಂ ನೀನಿರ್ದುವುಪಶಮದಿ |
ತನುವನುಳಿದೈದನೆಯ ಕಲ್ಪದೊಳು ಸುರನಾಗಿ |
ಅನಿಮಿಷ ಶ್ರೀಯುಂಡು ಬಂದಿಲ್ಲಿ ಕೃಷ್ಣನಾ ಸಮಶ್ರುತಿಯೊಂದಿ ಬಳಿಕ ||
ವಿನುತನೈ ನೀನೆ ವೊಡನೆಯೆ ಸಲುವೆ ಮೋಕ್ಷಕೆ |
ಎನಲು ಹರಿಯುಂ ಬಲನುಮಾಸನ್ನವಾದುದೆಮ |
ಗನವಧಿಯೆನಿಪ್ಪ ಸಂಸಾರವೆಂದಾ ಜಿನನಮೋಘವಾಕ್ಯವಪಿಡಿದರು || ೧೪ ||

ಗುರುನಿರೂಪವಮೋಘವಾರಾರು ದೀಕ್ಷೆಗೊ |
ಳ್ವರನಿನಿತು ಬೇಡೆನ್ನನೆಂದು ಚಕ್ರಾಯುಧಂ |
ಕರಮೊಸೆದು ಭಾವಿ ತೀರ್ಥೇಶನಪ್ಪುದರಿಂದೆ ಸಮ್ಯಕ್ತ್ವವನು ತಾಳ್ದಿದಂ ||
ಪರಮೇಶ್ವರರಿಗೆರಗಿ ಬೀಳ್ಕೊಡಲು ಯಾದವರು |
ಹರಿಯ ಮುಂದಿಟ್ಟುಕೊಂಡಾ ದ್ವಾರಿಕಾಪುರವ |
ನಿರೆ ಪೊಕ್ಕು ತಂತಮ್ಮ ರಾಜಾಲಯದೊಳಿರ್ದರವನೀಶ ! ಕೇಳೆಂದನು || ೧೫ ||

ಕೆಡುವುದು ಗಡೆನ್ನಿಂದ ಮೀದ್ವಾರಕಿಯು ನಾನು |
ಬಿಡದೆನೀ ಪೊಳಲನೆಂದಲ್ಲಿಂದ ಪೋಗಿತ |
ನ್ನೊಡಲನಾ ದೀಪಾಯನನು ದೀಕ್ಷೆಗೊಡ್ಡಿದನು ಮೆರೆವಾ ಜರತ್ಕುಮಾರ ||
ಕಡಲೊಳಾ ಹೊನ್ನ ಕುಪ್ಪಿಗೆಯೆಚ್ಚು ಕೌಶಂಭ |
ವಡವಿಯದನೈದಿ ಬೇಡರನೆರವಿಯೊಳಗಿರ್ದ |
ಪೊಡೆಯಲರನಾ ಪಟ್ಟಣದೊಳುಳ್ಳ ಕಳ್ಳೆಲ್ಲವಂತರಿಸಿಯೂರ ಹೊರಗೆ || ೧೬ ||

ಸುರಿಸಿದನು ಕಲ್ಲಡೊಣೆಗಳಲಿ ಬಾಡವನ ಭಯ |
ಕಿರಲಂಜಿ ಕಡಲಗಿದುದೊ ಎನಲು ಬಹಳವಾ |
ಗಿರಲದರ ಬಾಗಿಲಿಗೆ ಕಲ್ಲ ಬಾಸಣಿಸಿ ಮತ್ತಾಮದ್ಯವನು ಮಾಡದ ||
ಪರಿಯಲಾಜ್ಞಾಪಿಸಿದನಿನ್ನು ಬಾಧಾಹೇತು |

ಪರಿಹರಿಸಿತೆಂದು ಮೋಹಾಂಧನತಿ ರಾಗದಿಂ |
ಹರಿಯಿರ್ದನಾವನಂ ಮರುಳು ಮಾಡದೊ ಮೋಹನೀಯವೀ ದೇಹಿಗಳನು || ೧೭ ||

ಜಗದ ಗುರು ವಚನವನು ಹುಸಿಗೈವೆನೆಂಬೆ ಕೇ |
ಳ್ಬಗೆಯನೆಮ್ಮಯ್ಯನೇಕೆಯೊ ಬಗೆದನಕಟಕಟ |
ಬಗೆವೊಡದು ತಪ್ಪುಗುಮೆ ಮೋಹಾಂಧರೆನಿತುಮೇನರಿವರೇ ಮೇಲೆಣಿಕೆಯ ||
ಮಿಗೆ ಮೆರೆವ ಜನಪದಂ ಪುತ್ರರುಂ ಮಿತ್ರರುಂ |
ಸೊಗಸೆನಿಪ ತನುವೆಲ್ಲವಸ್ಥಿರವೆನಿಪ್ಪರಿವ |
ನೊಗುವುದದು ಮರುಳುತನವೆಂದು ತನ್ನನೆ ತಾನು ತಿಳಿದು ಮತ್ತಿಂತೆಂದನು || ೧೮ ||

ಮುನ್ನಮರಿಯಮೆಯಿಂದ ಸಂಸಾರವಾರಾಸಿ |
ಯನ್ನೆರೆಯ ಪೊಕ್ಕುದುಃಖದ ಸುಳಿಗಳೊಳು ಸಿಲುಕಿ |
ಬನ್ನಬಡೆದುರೆ ತೊಳಲಿ ಬಳಲಿ ಬಂದೆತ್ತಾನುಮೀ ನೇಮಿ ಜಿನಪರಿಂದೆ ||
ಮುನ್ನಾದ ಹಲವು ಭವವರಿತೆ ನಿನ್ನಪ್ಪುದನು |
ಚೆನ್ನಾಗಿ ತಿಳಿದೆನೀ ಕಿಡುವೊಡಲ ನೀಂ ಪೊರೆವು |
ದನ್ನಯವು ತಾನೆಂದು ಪ್ರದ್ಯುಮ್ನ ರಾಜವೈರಾಗ್ಯಪರನಾದನಿರದೆ || ೧೯ ||

ಸುಗುಣ ಮಣಿಭೂಷಣಂ ಮಣಿಭೂಷಣಂಗಳಂ |
ತೆಗೆದು ಕಾಲ್ವಟ್ಟೆಯಿಂದೇಕಾಕಿಯಾಗಿ ಬರೆ |
ನಗಧರನ ರಾಣಿಯರ ಮನೆಗೆ ರುಗುಮಿಣಿದೇವಿ ನಿಜಪುತ್ರನನು ಕಾಣುತ ||
ಮಿಗೆ ಬೆಕ್ಕಸಂಬಟ್ಟಳಕಟಕಟ ನೋಳ್ಪಡೆಲೆ |
ಮಗನೆ ನಿನ್ನೀ ಬರವು ಹೊಸತಯ್ಯ ಮೈಯಾಂತು |
ಸೊಗಯಿಪಾಭರಣಂಗಳಿಲ್ಲೇಕೆ ನಿನ್ನೊಡನದಾರುವೇಕಿಲ್ಲೆಂದಳು || ೨೦ ||

ಎಲೆ ತಾಯೆ ಚಿತ್ತೈಸು ಗುಣಮಣಿಯೆ ಭೂಷಣವು |
ಪಲವು ಭವದುಃಖವನು ಸವಿದಂದು ಸಂಗಡೇಂ |
ಪಲರಾರುಮುಂಟೆ ನೀವದನರಿಯಬೇಕೆಂದು ಬಂದೆನೆನೆ ಕೇಳ್ದು ದೇವಿ ||
ಸಲೆ ಚಿತ್ತದೊಳು ನೆನೆದಳೀ ಮಗಂ ಚರಮಾಂಗ |
ನಲಸಿದನೊ ಸಂಶ್ರುತಿಗೆ ದಿಟದಿಂ ವಿರಾಗದಿಂ |
ತಳೆವೆನೆಂದಾ ನೇಮಿ ತೀರ್ಥೇಶರೆಂದಂತೆ ತರಿಸಂದನೋ ಎನುತಲಿ || ೨೧ ||

ಎಂದಿನಂದದಲೊತ್ತಿನಲ್ಲಿ ಕುಳ್ಳಿರಿಸಿ ಕೊಂ |
ಡಿಂದುಮುಖಿಮೋಹದಿಂ ಕಂದನನು ನೋಡಿತಿರೆ |
ಕಂದರ್ಪರಾಜನಾಗಳು ಭೋಂಕನೆದ್ದುನಿಂದಮ್ಮ ಕೇಳ್ ಬಿನ್ನಹವನು ||
ಪಿಂದೆ ನನ್ನರಿವಳಿದನಂತ ಭವದಲಿ ಸಿಲುಕಿ |

ನೊಂದೆನೆತ್ತಾಣು ಪುಣ್ಯದಲಿ ನಿಮ್ಮುದರದೊಳು |
ಬಂದ ಬಳಿಕಿನ್ನು ನಾಂಬೆಳಹೆನೇ ಪಾವನ ಜಿನೇಂದ್ರರೂಪಂ ತಳೆವೆನು || ೩೧ ||

ಎನೆ ಮನೋಜನ ಮಾತೆ ಹೆಂಚಿತಾ ರುಗುಮಿಣಿಗೆ |
ಘನತರದ ಮೂರ್ಛೆಮುಂಚಿತು ಬಳಿಕಮೊಯ್ಯನೊ |
ಯ್ಯನೆ ತಿಳಿದು ಕಂದ ನೀನಿಂತು ಬಗೆದ್ಯೆ ನಿನ್ನ ಪಡೆದ್ಯೆದನೆಯದಿನದಲಿ ||
ಮುನಿವಂತಿರಗಲಿ ಪದಿನಾರಬ್ದವತಿ ದುಃಖ |
ವನೆಮಾಡಿದ್ಯೆ ನಿನ್ನ ಕಂಡುದ ದುಃಖಂಗಳಂ |
ನೆನೆಯದಾನಿರೆಪೂಳ್ದ ಕಿಚ್ಚ ಕೆದರಿದ ತೆರನ ಮಾಡಿದ್ಯೆ ನೀನೆಂದಳು || ೩೨ ||

ಕಂದ ನೀಂ ಬಂಧುವಿಂ ಬಳದಿಂ ಪರಿಗ್ರಹದ |
ದಂದುಗದಿ ದುಃಖವೆಂಬುದನರಿಯಿರೇ ಜನನಿ |
ಎಂದೊಡೇನಣ್ಣ ನೀಂ ಕಂದನೆಂಬಾ ಕಂದನೇ ನಿನ್ನ ಪೋಲ್ವರುಂಟೆ ||
ಎಂದಿನಾ ಜನ್ಮದೊಳು ದೊರೆಕೊಳ್ವರೆನಗೆ ನೀ |
ನಿಂದಿಂತು ಬೋಧಿಸಿದಾನೊಡಂಬಡುವೆನೆಂ |
ಬಂದವನು ಕಾಣೆನೆಂದತಿ ಧೃತಿಗೆಡುತ್ತಿರ್ದಳಾಗಳಂಗಜರಾಜನು || ೩೪ ||

ಪಡಿಮಾತದೇನಮ್ಮ ನಿಮ್ಮ ಭವವನ್ನೆನೆಯಿ |
ಮಿಡಿದ ದುಃಖವನಂತರೆಂತುಂಡಿರೆನ... |
ಲೊಡನೆತನ್ನಂ ತಾನೆ ತಿಳಿದು ಪುರುಷಂ ಸೋಂಕಿದುರ್ಕಿನಂತಾ ಭೀಷ್ಮಜೆ ||
ದೃಢದೆ ಶುದ್ಧಾಂತರಂಗವನಾಂತು ನಿನ್ನನಾಂ |
ಪಡೆದು ಮಿಗೆ ಧನ್ಯಳಾದೆನು ನಿನ್ನ ಕಾರ್ಯಮಂ |
ಬಿಡದದೆಸೆಗೆನೆ ಜನನಿಯಡಿಗೆರಗಿ ನಿಂದನೆಲೆ ಭೂಪಾಲ ಕೇಳೆಂದನು || ೩೫ ||

ಬಂದುದುದನರಿದು ಮದನನ ಪೆಂಡವಾಸವಿರ |
ದಿಂದುಮುಖಿ ರತಿದೇವಿ ಸಿಂಗರಿಸಿಕೊಂಡಿದಿರೆ |
ನಿಂದಿದೇ ಕುಸುಮಕೋದಂಡ ಪೆಂಡಿರಕಣ್ಣಸೆಯಿಪವೀರತಿಯನಾಂಪೆ ||
ಕುಂದು ನಿನಗೇನಾಯ್ತೊ ಮುಪ್ಪೊ ಬಡತನವೊ ಸುಖ |
ವಿಂದೇನುವಿಲ್ಲವೋ ನಿನ್ನಿಚ್ಛೆಗೂಟಕ್ಕೆ |
ಸಂದಳ್ತಿದೋರ್ವ ನೀರೆಯರಿಲ್ಲವೋ ನಿನಗಿದೇಕೆಂಬುದುದು ವಿರತಿಯು || ೩೬ ||

ಮರುಳಲಾ ರತಿದೇವಿಯಿಂದ್ರಿಯ ಸುಖಂ ಸುಖವೆ |
ಪರಿಕಿಪೊಡೆಯಿಂದ್ರಿಯವೆ ರೋಗ ವಿಷಯವೆ ಮದ್ದು |
ಸುರವಧುವು ಸಂಗಪೀಯೂಷಾದಿ ಸೇವೆಯಿಂ ಮಾಣ್ದುವಿಲ್ಲದುವೆಂದೊಡೆ ||
ನರರನೀಂ ಬಾಳಲೀವುದೆಯೆಂದು ತೊರೆದು ಸಂ |

ಸರಣಕ್ಕೆ ಬೆದರಿ ಭರತಾದಿಗಳು ನಿಜರೂಪ |
ವೆರಸಿನಿಬ್ಬಣವೆಣ್ಣ ಸವಿಸುಸಿಲನುಂಡರೆನೆ ಮತ್ತಾಕೆಯಿಂತೆಂದಳು || ೩೭ ||

*(ಟಿಪ್ಪಣಿ:- ಪದ್ಯ ೩೮, ೩೯ ಸರಿಯಾಗಿಲ್ಲ. ಅವನ್ನು ಬಿಡಲಾಗಿದೆ.)*

ಕೊಣೆನಾರ್ವ ಕೀವು ನೆಣ ನೆತ್ತರಡಗೆಲುವಿನಿಂ |
ಬಳೆದ ಮಲ ಮೂತ್ರ ಶುಕ್ಲಂಗಳಿಂ ಲಿವಿಲಿವಿಪ |
ಪುಳುಗಳಿಂದುರುದುರಿಪ ಮಿದುಳಿನಿಂ ಕರುಳಿನಿಂ ಬಿಗಿದರನರ ಸೆರೆಗಳಿಂದ ||
ಪೊಳೆವ ತೆಳುದೊಗಲ ಹೊದಕೆಯಿನೊಪ್ಪುವೀಮೈಯ |
ನುಳುಹಿ ಕೊಂಡಿದರೊಳಗೆ ಸಿಕ್ಕಿ ಸಿಡಿಮಿಡಿಗೊಳುತ |
ಬಳಲುವೆನೆ ಜಿನದೀಕ್ಷೆನಿದ ನೋಡಿ ಪಡೆವೆನಾನಮೃತ ಸೌಖ್ಯಮನೆಂದನು || ೪೦ ||

ಸ್ಮರರಾಜ ನೀನೆ ಮಜ್ಜೀವಿತಾಧೀಶನಾ |
ಗಿರಬೇಹುದೆಂಬ ಬಗೆಯಿಂತರಗಿಣಿಯನು ಬಂ |
ಧುರವಾದ ಪಳುಕಿನಾಸರಿನಲ್ಲಿ ನಾಡೆ ತಪಮಂ ಮಾಡಿ ಪಡೆದೆನಂದು ||
ಇರೆ ನಿನ್ನನಿಂದೆನ್ನ ಬಿಟ್ಟು ಪೋಪ್ಪೆ ದಯಾ |
ಪರನೆ ನೀನೆಂಟು ಸಾಸಿರಹೆಂಡಿರಸುಗೊಳ್ವ |
ಪರಿಲೇಸು ನೋಯಿಸಿಯೆ ಮುಂದೆ ಪಡೆವಾ ಸೌಖ್ಯವೇನೆಂದಳಾ ಕಾಂತೆಯು || ೪೧ ||

ಮುಂದೆ ಪಡೆವಾ ಸೌಖ್ಯದಿರವನೆನ್ನಂತೆ ಬಗೆ |
ದಂದವರ್ಗಲ್ಲದರಿವುದು ಸಖ್ಯವಬಲೆ ನೀ |
ನೆಂದು ಮೋಹದಿ ನೊಂದೆ ಮುಂದೇನನಂತಕನುಕೊಂಡ ಕೊಂಡೊಯ್ವಾಗಳೊ ||
ಇಂದುಮುಖಿ ನೀನೋಯದೇಗೆಯಿದೆ ನೋಳ್ಪಡದ |
ರಿಂದೆ ನಾಂ ಶಾಶ್ವತ ಸುಖಂಬಡೆವೆನೆಂಬುದುಂ |
ಮುಂದೆ ನಿಂದಾ ವಿದರ್ಭಾದೇವಿ ಕಣುನೀರ ಪೊನಲನೊಗುತಿಂತೆಂದಳು || ೪೨ ||

ಕುಸುಮ ಶರ ಕೇಳಂದು ನಿನ್ನ ಚೆಲುವನು ಕಾಣು |
ತೊಸೆದು ಕುಲವಂಚಲವನೆಮ್ಮವರಿಗಹ ಕುಂದ |
ನುಸುರಲೇನಣಮೆನಿಸದೈದೆ ಬೆಂಬತ್ತಿ ಬಂದವಳಾನದೇನಲ್ಲವೆ ||
ಹಸುಳೆಯಾದೆನ್ನ ಕೊಲುವುದೆತೊಲಗಿ ನೀಂ ನಾನು |
ನಸು ಮುನಿಸೆ ಬಂದೆನ್ನನಾವ ಬಗೆಯಿಂ ತಿಳುಪಿ |
ಕುಶಲರದದಿಂದೊಲಿ ಓಪ ನೀಂ ತೊಲಗೆ ಜೀವಿಪೆನೆಂತು ಪೇಳೆಂದಳು || ೪೩ ||

ಸರಳೆ ನಿನ್ನಳ್ತಿಯಂ ಸಲಿಸುವುಜ್ಜುಗದಿನಿಂ |
ತಿರುತಿರ್ದೆನಲ್ಲದಾನಿನ್ನೆವರಮಿಹೆನೆ ಕಾ |

ತರಿಸದಿಹುದೆಂದು ಕರುಣದಿ ನುಡಿಯೆ ಬಂದುದದಿ ಬಾಷ್ಪಾಂಬುವಂ ಕರೆವುತ ||
ಸ್ಮರರಾಜ ನಿನಗೆಂದ ಹರಸಿ ಪಡೆದೆನ್ನನಂ |
ತಿರದೆಮ್ಮವರು ನಿನಗೆ ಕುಡೆಬಂದ ಬಾಲಕಿಯ |
ಕರುಣವಳಿದಿಂತು ನೀಂ ಬಿಟ್ಟಾಗಳೆನ್ನೊಡಲ ಬಿಟ್ಟುಪೋಗದೆ ಹರಣವು || ೪೪ ||

ಎಂದು ಪಲತೆರದ ದೈನ್ಯದ ನುಡಿಯ ಕೇಳುತಾ |
ಮಂದರಾಚಲ ಧೈರ್ಯನಾಕೆಯಂ ಸಂತೈಸೆ |
ಬಂದನಾಗಳೆ ಕೇಳ್ದು ಚಕ್ರೇಶನೈ ಮಗನೆ ನೀನೆಂತು ಬಗೆದೆಯಕಟ ||
ಕಂದನಂ ಪರಸಿ ಪೆರ ತಂದೆತಾಯ್ಗಳ ಕಂಗ |
ಳಂದೆ ಪೋದಪವೆಂಬ ಗಾದೆನಿಮಗಿಂದಿನಿಂ |
ನಿಂದಾಯ್ತು ನೀನಿಲ್ಲದೇನಿರ್ದು ಫಲವೇನೊಯೆಂದುಮತ್ತಿಂತೆಂದನು || ೪೫ ||

ಎಲೆ ಮಹಾಪುರುಷ ಹದಿನಾರು ವರುಷಂಬರಂ |
ಬಲದ ತೋಳಿಲ್ಲದಂತಿರ್ದೆನಾಂ ನೀನಿಲ್ಲ |
ದಲಗುಭುಜ ಬಲಿಕ ನಿನ್ನನು ಚಕ್ರರತ್ನವನು ಪಲವುವಸ್ತುವ ಪಡೆದನು ||
ಸಲೆಸುಖದೊಳಿಹೆನು ಚಿಂತಿಸದೆಂಬ ಕಾಲದಲಿ |
ತೊಲಗುವೊಯ್ಯನೆ ಮಹಾರಾಜನೀಂ ಚಿತ್ತೈಸು |
ತೊಲಗುವೊಯ್ಯನೆ ಮಹಾರಾಜನೀಂ ಚಿತ್ತೈಸು |
ತೊಲಗದಿಂತಾವವುಂನಿತ್ಯವೇ ಮುಕ್ತಿ ಸುಖವೊಂದೆ ಶಾಶ್ವತವೆಂದನೈ || ೪೬ ||

ಎನ್ನೆವರ ಮರುನೊಲುಮೆಯುಂಟನ್ನೆವರವೊಲಿದು |
ಸನ್ನಯದಿ ಲಕುಮಿಮೊದಲಾದವಿರುತಿರ್ಪವಿದು |
ಭಿನ್ನವಾದೊಡನವುಂ ಕೆಡುವವದರಿಂದಿನ್ನೆವರಮಿರ್ದುದೇ ಬೆಳ್ತನ ||
ಬನ್ನವಡೆಯದ ಸಿರಿಯನೊಲಿಸುವೊಂದುಜ್ಜುಗವ |
ನಾನ್ನೆಗಳ್ವನಂತಲ್ಲದೀ ಸ್ವಲ್ಪ ಸುಖಕಾಗಿ |
ಬನ್ನವಾಂತಳಿಗಾಡಿಬಳ್ಳವನು ಹೋಗಾಡಿದಂತೆ ಬಗೆಗೆಡೆನೆಂದನು || ೪೭ ||

ಸುರರಾಜನಿಂತೆಂದು ಪೇಳೆ ಶಂಬುಕುಮಾರ |
ನರಲಂಬನೆನ್ನ ಪಲ ಜನ್ಮವೊಡವುಟ್ಟಿದನು |
ವಿರತನಾದಂ ಗಡಾ ನೇರಿಪಿಂಗುವೆನೆಯೆಂದು ತರಿಸಂದು ತಳುವದೊಡನೆ ||
ವಿರತನಾದನು ತಡಯದೀರ್ವರುಂತಂದೆ ತಾ |
ಯ್ವಿರ ಬಲ ಸಮುದ್ರ ವಿಜಯಾದ್ಯರಡಿಗೆರಗಿ ಸ |
ಬ್ಬರನುಚಿತವಚನದಿಂ ತಳುಪಿಪೊರಮಟ್ಟರಘ ಬೀರುಗಳದೇತಕಿಹರು || ೪೮ ||

................................ |
................................ |

ಶ್ರುತಕಾಮದೇವನಸಮಾನ ವಿಕ್ರಮನಖಿಲ ಸೌಭಾಗ್ಯಸಾರೋದಯ ||
ನುತನವ ವಯಸ್ಕನತಿ ನೀರನೆಂದೊಮ್ಮೋಹ |
ಯುತನಾದನೇ ನೋಡ ಪುಣ್ಯಮೂರ್ತಿಯೆನುತ |
ನುತಿಸುತ್ತೈತಂದುದಾ ಪುರದ ಪೆಣ್ಣಂ ಗಂಡುಮಂಗಜನ ನೆರೆನೋಡುತ || ೪೯ ||

ಅಂಗಜನು ತಪವನಾಂತಂಗದಿಂ ನಮಗೇತ |
ಕಂಗಜಕಲಾಕೇಳಿಯೆಂದುದರೆಬರುಪೆಣುಗ |
ಳಂಗಡಿಯೊಳೆಡೆಯಾಡುತಿಪ್ಪಾಗಳಿಮ್ಮ ಕಂಗಳ ಹಾಹೆದುಂಬಿಗಳಿಗೆ ||
ಜಂಗಮಂತಾಂತಮಂ ಜರಿಯಾದವಂ ಪೋದ |
ನಿಂಗೋಲಬಿಲ್ಲನಿಲ್ಲದ ರಾಜ್ಯದಿಂದಡವಿ |
ಸಿಂಗಾರವೆಂದು ಕೆಲಬಲರುಕಾಮಿನಿಯ ತೊರೆದರು ಭೂಪಕೇಳೆಂದನು || ೫೦ ||

ಮನಸಿಜನು ಶಂಬುಕುವರನು ವಿರಕ್ತಿಯನಾಂತು |
ಜಿನಸಭೆಗೆ ನಡೆಗೊಳಲು ತರಿಸಂದು ತಾವು ಬೆ |
ನ್ನನೆ ಸತ್ಯಭಾವೆರುಗುಮಿಣಿಯ ಮೊದಲಾದ ಪಲಬರು ಮುರಾರಿಯಸತಿಯರು ||
ನನೆಗಣೆಯನೆಂಟು ಸಾಸಿರಕಾಂತೆಯರು ಪುರದ |
ವನಿತೆಯರು ಕೆಲರು ಕೆಲರುಳಿದ ಭೂವರರ ಭಾ |
ಮಿನಿಯರಾ ಸಂಸಾರ ತನುಭೋಗ ನಿರ್ವೇಗಪರರಾದರೇವೇವೇಳ್ವೆನು || ೫೧ ||

ಜನನುತ ಸಮುದ್ರವಿಜಯಾದಿ ವಸುದೇವ ಕಡೆ |
ಎನಿಪವರು ವಸುದೇವ ವಸುತರುಬಲಾತ್ಮಜರು |
ವನಮಾಲಿಯುಳಿದ ಕುವರರು ಪರಮವೈರಾಗ್ಯಪರರಾಗಿ ಕಾಮನೊಡನೆ ||
ಜಿನಸಮವಶ್ರುತಿಯ್ಯೆದಿ ನೇಮಿಜಿನರಡಿಗಳಿಗೆ |
ಮನವೊಸೆದು ಮನಸಿಜಿನನಂಗಸೌಖ್ಯವನಮೃತ |
ಘನಲಕುಮಿಯೊಳು ಪಡೆದನವರವರು ತಮ್ಮಾಳ್ವ ಮನದಪರಿಣಾಮದಿಂದ || ೫೨ ||

[ಸರುವ] ಮೋಕ್ಷಂಗಳನು ಪಡೆದರಿತ್ತಲು ರಾಜ್ಯ |
ಭಾರದಲ್ಲಚ್ಚುತನ ಮೇಲಣತಿ ಮೋಹದಿಂ |
ಕ್ಷೀರಪಾಣಿಯಿರುತಿರ್ದನೆಂದನು ಮುನಿಪನ್ಯೆಯಯ್ಯ || ೫೩ ||

(ಈ ಪದ್ಯ ಸರಿಯಿಲ್ಲ )

# ಭಾಭಾಸುರ ತ್ರಿಲೋಕ ಸಭಾ ಪರ್ವ (ಸಂಧಿ ೬೩)

**ಸಂಧಿ ೬೩**

ಪರಮೇಶಂ ನುಡಿದಾದೇಶವೆ ತಾಂ | ಉರಿದುದೊ ದ್ವಾರಿಕೆ ಅಳೆದನು ಹರಿಮಿಗೆ |
ತಿರಿದನು ಹಲಧರ………ನಯ್ಯಯ್ಯ [ಪರಮೇಶಾ] || ಪದ ||

ಕೇಳೆಲೆ ಮಗಧಾಧೀಶನೆ ಬಲಗೋ | ಪಾಲರು ಸುಖದಿಂ ರಾಜ್ಯಾಂಗನೆಯೊಳು |
ಮೇಳದಿನಿರೆಯಿರೆ ಪನ್ನೆರಡಬ್ದವು ಸಂದುದು ಸಲಲೊಡನೆ ||
ಆಲೋಚಿಸಿ ಆ ದೀಪಾಯನ ಮುನಿ | ಆಳೋಕಿಪೆವಿನ್ನಾ ಹಲಧರ ವನ |
ಮಾಲೆಗಲನು ತಾನಂದೆಯಿತಂದಪನಾ ದೇಶಕ್ಕಿರದೆ || ೧ ||

ಕಳಿದುದು ದಿನನುಡಿದವಧಿಯದೆಂಬುದ | ನಿಳಿದನು ಮುನಿಪತಿಯಧಿಕದಿ ಮಾಸವ |
ದುಳಿದಪುದೆಂಬಾ ಗಣನೆಯನಿನಿಸುಂ ಮನದಲಿ ಭಾವಿಸದೆ ||
ಬಳಿಕಾ ಪುರದ ಬಹಿರ್ವನದೊಳು ಸಂ | ಚಳಿಸದೆ ಸೂರ್ಯಪ್ರತಿಮಾಯೋಗವ |
ತಳೆದಿರೆ ನಿಂದನು ತಂದುದು ವಿಧಿ ಭೂಪಾಲಕೆ ಕೇಳಿದನು || ೨ ||

ಇರಲಾ ಪೊಳಲರಮಕ್ಕಳುಗಳು ವನ | ಕರಿಗಳ ಬೆಂಟೆಯನಾಡುವ ಬಂದಾ |
ಪಿರಿಯಡವಿಯಲತಿ ಬಳಲಿದ ನೀಚರು ಮುಂದಂಗೈ ತರುತ ||
ಸುರೆಯನು ಹೊಯಿಸಿಸಿದಂದಿನ ದೊಣೆಯಲಿ | ಹೊರೆಬಿಟ್ಟರೆ ಮುಚ್ಚುಳುಗಲ್ಲದನೀ |
ಚರೆತೆಗೆ ದೊಳಪೊಕ್ಕೀಕ್ಷಿಸಿ ತಿಳಿನೀರೆಂದದ ನೀಂಟಿದರು || ೩ ||

ಮಳೆ ಬಂದೊಡೆ ನೀರನುಕರೆದನು ತಾ | ನೊಳಕೊಂಬುದು ಘರ್ಮದ ಬಿಸಿಲಿಗೆ ಕಿರಿ |
ದಿಳಿವುದು ತನ್ನಂತಸ್ಸಾರವು ನೂರ್ಮಡಿಸುವುದದ ನೀಂಟಿ |
ಫಳಿಲನೆ ಸೊಕ್ಕಿದ ಪೊಲೆಯರು ತನ್ಮುನಿ | ಗಳನೀಕ್ಷಿಸಿ ಪಾಪಿಗಳಕಟಾ ಕ |
ಲ್ಗಳಿನವರನ್ನವರಂಘ್ರಿಗಳಿಂ ಮಸ್ತಕ ಪರಿಯಂತರ [ಹೂಳಿದರು] || ೪ ||

ಜಿನಜಿನ ಪಾತಕರಂಜದೆ ಮತ್ತಾ | ಮುನಿಪನ ನೆತ್ತಿಯನೊಡೆಗುಟ್ಟಿದರಾ |
ವನದಿಂದವರತ್ತಲು ಪೋದರು ಹರಿ ಬಲರರಿಯದೆಯ್ತೈತಂದು ||
ಮನಮರುಕದಿನಾ ಕಲುಗಳ ಬೆಟ್ಟವ | ನಿನಿಸಿರದೆಲ್ಲವ ತೆಗೆದೀರ್ವರೆ ತಾ |
ವನುನಯದಿಂ ಕ್ಷಮಿಯಿಸಲೇ ಯತಿಪತಿಯಂದಡಿಗೆರಗಿದರು || ೫ ||

ಎರಗಲು ಮುನಿಪತಿಯವರೀರ್ವರಕಣು | ದೆರೆದೀಕ್ಷಿಸಿದನು ಕೊರಳೆಡೆಯೊಳಗಸು |
ತುರುಗಿರೆ ಬಿಡುವೆನು ನಿಮ್ಮೀರ್ವರನೆಂದಂಗುಲಿ ಸನ್ನೆಯಲಿ ||

ಅರುಹಿದನತಿ ಕೋಪಾಟೋಪದಿ ದಯೆ | ಯರಿತಿರೆ ಹದಿನಾರನೆಯಾ ಸ್ವರ್ಗಕೆ |
ನರೆದಾಯುರ್ಬದ್ಧವೆ ಪರಿಪಟ್ಟುದು ಕೋಪದಿ ಕೆಡೆದವರಾರ್ || ೬ ||

ಯತಿಗುಪಸರ್ಗವು ಬಂದೊಡೆ ಪೂರ್ವಾ | ರ್ಜಿತವುದಯಿಸಿತಿದನನುಭವಿಸುವಮೆಮ |
ಗತಿಹಿತವಾದುದು ಕೆಡುವೊಡಲುಳಿವುದೆ ನನ್ನ ಸುಧಾತ್ಮನನು ||
ಗತಿಗೆಡಿಸುವೆನೇಯೆಂದು ಮಹಾ ಶಾಂ | ತತೆಯನು ಸದ್ಭಾವನೆಯಿಂ ತಳೆಯದೆ |
ಯತಿಕೆಟ್ಟನು ನಿಜಗೃಹವೈದಿದರಲ್ಲಿರದಾ ಭೂವರರು || ೭ ||

ಭವನಾಮರೊಳಗುಂಟಂಟಗ್ರದ | ಹವಣಿಸದಗ್ನಿ ಕುಮಾರಕನಾಗಿರ |
ದವಧಿಯಿನರಿದಾ ಹೊಲೆಯರು ತನ್ನನು ಕೊಂದರಲಾಯೆಂದು ||
ಕವಿದಾ ಹೊಲೆಗೇರಿಯದೆನಿತನಿತುಮ | ನೆವೆದೆರೆವನಿತರೊಳಗೆ ಸುಟ್ಟನು ಮಾ |
ರ್ಗವೆ ದೇವಂಗದು ಪೊಲೆ ಮುಳಿಸಿರಲಾವನಗುಣ ಕೆಡದಿಹುದೈ || ೮ ||

ಆಸಮಯದೊಳಾ ಪ್ರಳಯದ ವಾಯುವೆ | ಬೀಸಿತೊಯೆನೆ ಬಿರುಗಾಳಿಯೊದವೆ ವಾ |
ರಾಸಿ ಸಹಸ್ರವು ಘೂರ್ಣಿಸಿದುದೊಯೆನೆ ಭೋರ್ಭುಗಿಭುಗಿಲೆನುತ ||
ಕೇಸುರಿಯಾ ದ್ವಾರಾವತಿಯನು ಕ | ಟ್ಟಾಸುರದಿಂ ಪತ್ತಿದುದೂರವರಾ |
ಯಾಸವ ನಾನಿನ್ನೇನೆಂಬೆನು ಜಿನಜಿನನೆ ಮಹಾದೇವ || ೯ ||

ಅದೆಅದೆಯತ್ತಲೆ ಪೋಗದು ಮತ್ತಿ | ತ್ತೆದೆಯಿದೆ ಹೊತ್ತಿತು ಮತ್ತಿತ್ತಲು ಹೋ |
ಗದೆಯುರಿ ನೆಗೆದುದು ನೋಡಿರೆ ಸುತ್ತಲು ಹಬ್ಬಿತು ಕೊಬ್ಬಿತಲೆ ||
ಎದೆಯಿದೆ ಈ ಬಂದುದು ಕೆಟ್ಟೆವು ಕಿ | ಚ್ಚೊದವಿತು ಮಕ್ಕಳ ತೆಗೆ ತುರುಗಳ ಬಿಡು |
ಕುದುರೆಯನಾನೆಯ ಪೊರಮಡಿಸೆಂಬಬ್ಬರವಾ ನಗರದೊಳು || ೧೦ ||

ಹರಿದುಪ್ಪರಿಗೆಯನೇರೆ ನಿರೀಕ್ಷಿಸಿ | ಯಿರಲೆಡೆಗಾಣವು ನಾಲ್ದೆಸೆಯನು ಕೇ |
ಸುರಿ ಕವಿತಂದುದು ಕೆಟ್ಟವುಪೊರೆಯೋ……..ಣದ ||
ನಾರಿಯರೆಲ್ಲರು ಗೋಳಿಡುತೆದೆ ಬಡಿ | ದಾರಿಸಿ ವಸ್ತ್ರಾಭರಣಧನಂಗಳ |
ತರತರದಿಂ ಪೊತ್ತಡಕುವ ದೇವಕವೊಪ್ಪಿದುದನಿತರೊಳು || ೧೧ ||

ಇದು ತೃಣವಿದು ಕಾಷ್ಠವು ಪಾಷಾಣವಿ | ದಿದು ಲೋಹಂಗಳಿದೊಳಗಿದು ಪೊರಗೆಂ |
ಬುದನೆನರಿದುದೇ ಪ್ರಳಯಾಗ್ನಿಯನಾಲ್ವಡಿ ತೀವ್ರವನಾಂತು ||
ಅದಿದೆನ್ನದೆ ಛುಂಛುಂಚಟ ಚಟ | ದಿದಿದಿದಿ ಉಧಿಗಲ್ದಗ ಧಗಯೆಂ |
ಬುದತಿ ಭೂಷಣ ರವಮಾಶ್ಚರ್ಯಮದಾದಪುದಯ್ಯಯ್ಯ || ೧೨ ||

ಉರಿ ಪರಿದಂದಿಂತಾ ಪುರಮೆಲ್ಲವ | ನುರಿಪುವುದನು ನಗಧರನೀಕ್ಷಿಸಿಯಿದು |
ಸುರದಾನವ ವೈಕುರ್ವಣವೆಂಬುದನರಿದು ಸುಚಕ್ರವನು ||

ಸ್ಮರಿಯಿಸಲದು ತಾಂ ಮೊದಲಾಗಿಹ ಸು | ಸ್ಥಿರ ರತ್ನಂಗಳ ಕಾಣೆನು ಬೆಸಸೆಂ |
ಬುರು ದೇವತೆಗಳು ಮುನ್ನವೆ ಹೋದರು ನೆರೆಕಡಲೆನೆ || ೧೩ ||

…………..ಡಿದಗಜೇಂದ್ರದವೊಲು | ನೆರೆಗರಳವು ಸೋರ್ದಮಹಾಹಿವೊಲು ನಿ |
ಷ್ಠುರನಖದಂತಂಗಳು ಕತ್ತರಿಸಿದ ಹರಿಯಂದದ ಹರಿಯು ||
ಇರಲಾ ಬಲಭದ್ರನು ನೇಗಿಲಿನಿಂ | ಶರಧಿಯ ನೀನರು ಸೋಂಕಲು ತುಪ್ಪವ |
ನೆರೆದಂತಾಯ್ತುದು ನೀರ್ಗೆಟ್ಟಬುಜಕೆ ಪಗೆಯಾದರೆ ರವಿಯು || ೧೪ ||

ಸಿರಿಧರ ತಾನದನೀಕ್ಷಿಸಿ ನೆರೆತಾಂ | ಬಾರಿಪುದರಿದೆಂದಾಪೊಳಲಿಂದಲೆ |
ವಾರಿಜಮಿತ್ರನ ಪೂರಮಡಿಸಿಯೆ ಕೊಂಡ್ಯೆತರುತಿರೆ ಕವಿದು ||
ಭೋರನೆ ಸುಡುಗ್ನಿಯು ತೆರಪನು ಕುಡೆ | ವಾರಿನಿಧಿಯ ತೀರದೊಳಿರೆಮಿಂದಾ |
ದ್ವಾರಕಿ ಬೇವುದನೀಕ್ಷಿಸಿ ಭೇದವನಾಂತನು ನಗಧರನ್ಯೆ || ೧೫ ||

ತರತರದಿಂ ಪೊನ್ನುಪ್ಪರಿಗೆಗಳುಂ | ಪರಸಿದ ಬೆಳ್ಳಿಯಗೋಪುರಗಳು ಭೀ |
ಕರತರ ಶಸ್ತ್ರಾಸ್ತ್ರಂಗಳ ತಿಂಥಿಣಿ ಕಡುಗಿಚ್ಚಿಂ ಕರಗಿ ||
ತೆರೆಮಸಗುತ ಭೋರ್ಗರೆಯುತದತ್ತಲು | ಪರಿದಂಬುಧಿಯನು ಕೂಡುತಿರಲಾ |
ಸರಸತಿ ಜನ್ನವಿ ಜಗುನೆಗಳವು ಪರಿವಂದದಿ ತೋರಿದವ್ಯೆ || ೧೬ ||

ಇಂದ್ರನ ಬೆಸದಿಂದ್ಯೆಳನೆ ಬೀಳನೆ | ಚಂದದಿ ಮಾಡಿದಮಣಿಮಯದರಮನೆ |
……………..ಯೊಳಗಿರ್ದರಸಿಯರೂ ವಧುನಿಕರ ||
ಬೆಂದುದುಗಜಹಯಗೋಮಂಡಲಿಮಿಗೆ | ಬೆಂದುದು ಧನಕನಕಾದಿಗಳಕಟಾ |
ಬೆಂದುದು ಪೊಳಲೊಳು ನರನಾರೀಜನವೆಂದೆದೆಗರಗಿದನು || ೧೭ ||

ಬಿಡು ಮಾಧವ ಖೇದವನಿರದಾಪ | ತ್ತಡಸಿದೆಡೆಗೆಧೈರ್ಯವೆ ದೇಹಿಗೆ ಸಂ |
ಗಡಿಗನು ನೀನಿದರಿಂ ಪಿರಿಧೈರ್ಯವು ಕೆಡುವುದು ಕೆಡದಿಹುದೆ ||
ಕೆಡೆದಡೆ ಮುಕ್ತಿಯದೊಂದಲ್ಲದೆ ಮಿ | ಕ್ಕೆಡೆ ಮಹದೈಶ್ವರ್ಯಂಗಳಿವೆಲ್ಲವು |
ಕೆಡುವುದೆ ದಿಟವಲ್ಲದಡಿದನೊಲ್ಲದೆ ಭರತಾದಿಗಳದು || ೧೮ ||

ದೊರೆಕೊಳೆ ಶುಭಕರ್ಮವು ನಮಗಂದಾ | ಶರಧಿಯೆ ತೆರೆಪಾದುದು ಹಣಹತ್ತದೆ |
ಸುರಪುರಿಗೆಣೆಯೂರಾದುದು ಇಂದು ಶುಭೋದಯವಾಗಲಿಕೆ ||
ಶರಧಿಯ ನೀರೆವಲಂಘತವಾದುದು | ಉರಿವಾ ಬೀಳಾಗ್ನಿಗೆ ಭಾವಿಸೆ ಸಂ |
ಸರಣ ವಿಚಿತ್ರವ ನೀನರಿಯದನೇಯೆಂದನು ಹಲಧರನು || ೧೯ ||

ಎಂದಾ ಚಕ್ರೇಶನನಬುಧಿಯ ತಡಿ | ಯಿಂದೊಡಗೊಂಡತ್ತೊಂದಡವಿಗೆನಡೆ |
ತಂದನು ಖಚರಸುರಾಸುರ ನೃಪಸಂಕುಲವಿರಬೆಸಕ್ಯೆವ ||

ಚಂದದ ಸಿರಿಯೆರೆಯರು ಪೂರ್ವಾರ್ಜಿತ | ದಿಂದವರೀರ್ವರೆ ಕೆಟ್ಟಡವಿಯ ಸಾ |
ರ್ತಂದರೆನಲುಮಿಕ್ಕರ ಸಿರಿಯೇ ತರದವನಿಪ ಕೇಳೆಂದ || ೧೦ ||

ಬನದೊಳಗೊಂದು ಮಹೀಜದ ಮೊದಲೊಳು | ಜನಪರಿಗಳು ವಿಶ್ರಮಿಸಿದರೇವೇ |
ಳ್ವೆನೊ ಅಸುರಾರಿಯ ಧೈರ್ಯದ ಕನಕಾಚಲವಾದ್ವಾರಕೆಯ ||
ಘನತರದಿಂ ಸುಡುವುರಿಯಿಂ ಕರಗಿತೊ | ಮನದೊಳೊಗಿನಿಸಂ ಕಾಣೆನು ಹಸಿದಪೆ |
ವೆನಹುದೇ ನೋಡೊಳಗತಿಖೇದವನೆಂತುಟೊ ಸೈರಿಪರೈ || ೧೧ ||

ಎಂದಡೆ ಹಲಧರ ಧಿಗಿಲೆಂದಾಯುಧ | ನಿಂದೀವರ ಲೋಚನ ನೀವಿಲ್ಲಿರಿ |
ತಂದೆಪೆನುಣಿಸಲು ಪೊರಗೆವಿಚಾರಿಸಿಯೆಂದಂತೈದುತಿರೆ ||
ಮುಂದೊಂದೆಡೆಯೊಳು ಹಬ್ಬಿದ ಮಲೆಯೊಳ | ದೊಂದೂರಿರಲೆಡೆಯೊಳಗೋರ್ವನ ಕಂ |
ಡಂದನಿದಾವುದು ಪುರವಿದರರಸಾರೆನಲವನಿಂತೆಂದ || ೧೨ ||

ಇದುವೆ ವದನದ ಕಾಸ್ತೆಯು ಪೆಸರಿಂ | ದಿದರಧಿಪತಿ ಕುಯವರ ಭೂಪಾಲಕ |
ನೊದವಿದ ವಿಭವದ ಕೌರವರಾಯನ ಮೊಮ್ಮೊಗನವನೆನಲು ||
ಅದನೇ ಬಗೆಯದೆ ಪೋಪಾಗಳು ಬೆಂ | ದುದು ತದ್ವಾರವತಿಯೆಂದರಿದ |
ಗ್ಗದ ರಾಗೋಕ್ತಿಯಲಿಹಜನವನು ನೋಡುತ್ತಂತೈದಿದನು || ೧೩ ||

ಬಲಭದ್ರನು ಪುರದಂಗಡಿಯಲಿ ಸಂ | ಗಳಿಸಿದ ವೈಶ್ಯನ ಫಣಿದತ್ತನ ಕಂ |
ಡಲೆ ಪರದನೆ ಪಿಡಿ ಎಂದುತ್ತಮವಹ ರನ್ನದ ಕುಂಡಲವ ||
ತಳೆದಿತ್ತನು ಕೊಡು ಕಲಸಿದ ಬುತ್ತಿಯ | ತಳುವದೆ ತನಗೆನಲಾಡಿಸಿ ಕೊಳುತಂ |
ನೊಳು ತಾಂ ನಷ್ಟಾದೃಷ್ಟರು ಪೆರರಿನ್ನಾರೆಂದೈದುತಿರೆ || ೧೪ ||

ಇದುವೆ ಅನರ್ಘ್ಯದ ರತ್ನದ ಕುಂಡಲ | ವಿದು ಸಾಮಾನ್ಯನದಲ್ಲೆಂದದನಾ |
ವಿದಿತವಣಿಗ್ವರನಾ ಕುಯವರಗಿತ್ತದರಮದವನುಸುರೆ ||
ಚದುರನು ತಿಳಿದನು ಬಲಭದ್ರನೆ ತ | ಪ್ಪದು ತಾನೆಂದಾಗಳೆ ಪಡೆಸಹ ಸಂ |
ಮದದಲಿ ಬೆಂಬತ್ತಿದನಡೆಗಟ್ಟಿದ ಪಗೆ ಸಿಲುಕಿದನೆಂದು || ೧೫ ||

ಪಡೆ ಬೆಂಬತ್ತಿಬರಲು ಬಲನೀಕ್ಷಿಸಿ | ವೊಡೆಯಲರನ ಪುಣ್ಯದ ದೇವತೆಯು |
ಳ್ಕೊಡೆಪಿಡಿಯೆಂದಾಕಾಶಕೆ ಬುತ್ತಿಯ ನೀದಲದುಕೆಡೆವುತಿರೆ ||
ಪಿಡಿದೆನ್ನನು ರಕ್ಷಿಪ ದೇವನೆಯು | ಳ್ಕೊಡೆ ಪಿಡಿಯೆಂದಿಡೆ ಗಗನದಲದು ನಿಲೆ |
ಕಡೆಯೊಳು ನಟ್ಟಾನೆಯ ಕಂಭವ ಕತ್ತೆತ್ತಿದ ಹಲಧರನೈ || ೧೬ ||

ಪಿಡಿದೆಡ ಬಲದೊಳಗಡಸುವ ಪಡೆಯನು | ಪೊಡೆದೊಡೆ ಬರಸಿಡಿಲಡಸಿ ಪೊಡೆದವೊಲು |
ಪಡಲಿಟ್ಟುದು ತಲೆ ಒಡದೆಲುವುಡಿದೊಡಲಡಸಿಕರುಳು ಸುರಿದು ||

ಕಡಲುವರಿಯೆ ಬಿಸುನೆತ್ತರು ಕರಿಗಳು | ಮಡಿದವು ಕುದುರೆಗಳಳಿದವು ತೇರ್ಗಳೆ |
ಪುಡಿಯಾದುವು ಮಣ್ಮಳಿಭಟರೊಂದರೆ ಘಲಿಗೆಯೊಳಗೆ ಮಡಿಯೆ || ೧೭ ||

ಇವನಾ ಜವಗಾಂತಾರುಳಿವರು ಪೇ | ಳವನಿಯೊಳೆಂದೆರಳೆಗೆ ಗರಿ ಮೂಡಿದ |
ತವಕದಿ ಹಾಯ್ದನು ತನ್ನಯ ದುರ್ಗಕೆ ಕುಯವರ ಭೂಪಾಲ ||
ಆವನೋಡುವ ಭರವನು ನೋಡುತಲಾ | ಪ್ರವರನು ಶೀಘ್ರದಿ ಬರೆ ಬನದೊಳು ಮಾ |
ಧವನನು ದೂರಾಂತರದಲಿ ಕಾಣುತ ಮನದಲಿ ಮರುಗಿದನೈ || ೧೮ ||

ಸುರಪುರಕೆಣೆಯಹ ಪೊಳಲೊಳು ಮಣಿಮಯ | ದರಮನೆಯೊಳು ದಿವಿಜಾಂಗನೆಯರ ಧಿ |
ಕ್ಕರಿಸುವ ಚೆಲುವಿನ ಸೋಳಹ ಸಾಸಿರ ಪೆಂಡಿರ ಸಿಂಗರದ ||
ಸಿರಿಯೋಲಗದೊಳಗಾಣತಿಗಾಣಿಯ | ರುರುಗೈದಾಸ್ವಾದನದಿಹ ಚಕ್ರಿಯ |
ಪರದೇಶಿಯವೋಲೋರ್ವನೆ ವಿಪಿನದೊಳಿಹುದಾದುದಲೆಂದು || ೧೯ ||

ನಟನೆಯಲೋಲಗಿಪಾರುಸಹಸ್ರ ಮ | ಕುಟಬದ್ಧರ ನಿಖಿಳಾಪತಿ ರುತಿಗಳ |
ಕುಟಿಲಾಳಕಿಯರ ಭೂಷಣ ರುಚಿಹರಿ ನೀಲಸ್ಥಳಿಯೊಳಗೆ ||
ಸ್ಫುಟತರ ಸುರಬಾಣಾಸನ ತಲೆಯೆನೆ | ನಟಿಯಿಸೆ ಹರಿಪೀಠದೊಳಿಹ ಚಕ್ರಿಯ |
ನಟವಿಗೆ ತಂದೇಕಾಕಿಯಮಾಡಿದೆ ಗಡ ಹಾಹಾವಿಧಿಯೆ || ೨೦ ||

ಎಂದೀ ಪರಿಯಲಿ ಶೋಕಿಸುತಿರದೈ | ತಂದನು ಲಕ್ಷ್ಮೀಕಾಂತನುಮಣ್ಣನು |
ತಂದಾ ಬುತ್ತಿಯನುಂಡೊಯ್ಯನೆ ವಿಶ್ರಮಿಸಿರೆ ಬಲಭದ್ರ ||
ಬಂದಾ ಕೌರವ ನೃಪತಿಯ ಮೊಮ್ಮಗ | ನಿಂದಾದಾ ಯುದ್ಧವನರಿಪಲು ಗೋ |
ವಿಂದನು ಧೃತಿಗೆಟ್ಟನು ಪಗೆವರನಾಡೊಳಗೆಂತಿಹೆನೆಂದೈ || ೨೧ ||

ಅಲ್ಲಿರದಿರ್ದಾ ಕೌಸುಂಭಾಟವಿ | ಯಲ್ಲಿಗೆ ನಡೆತಂದಾದಾಲದ ಮೊದ |
ಲಲ್ಲಿ ಪೊದಳ್ಕೆಯ ಕಿರು ಮೆಳೆಗಳ ಹೊದರಿನ ಬಳಸಿನನಡುವೆ ||
ಫುಲ್ಲಶರನ ಜನಕನು ಬಲಭದ್ರನು | ಮೆಲ್ಲನೆ ವಿಶ್ರಮಿಸಿರೆ ರುಗುಮಿಣಿಯಾ |
ವಲ್ಲಭಗಾದುದು ನೀರಳ್ಕೆಯು ಭೂಪಾಲಕ ಕೇಳೆಂದ || ೨೨ ||

ಪುರವನುದ ಪೊರಮಡುವಾಗಳು ಚಕ್ರೇ | ಶ್ವರಗೊಂದರಗಂಬಳಿ ಕೈಗೊದವಿತು |
ಸರಿಯೊಡವಪ್ಪುದೆ ಪಲದಿನವೊಡನಿರ್ದೊಡಲದು ಬಾರದೆನೆ ||
ಪುರುಷೋತ್ತಮಗಾ ಕಂಬಳಿಯನೆ ಬಿ | ತ್ತರದಲಿ ಹಾಸಿಹೊದಸಿ ಮಲಗಿಸಿತಾಂ |
ಪರಿದೆಯಿದಿದನಾ ನಿರ್ಮಲ ಬಲಯುತ….. || ೨೩ ||

………………………….. | ಳುತ್ತ ಜರತ್ಕುವರನು ತನ್ನಂಬುಮ |
ನೊತ್ತಿ ಸೆಳೆದ ಶರನಿಧಿಯೊಳಗೆಸೆಮೀನೊಂದದನುಂಗಿರಲು ||

ಎತ್ತಾನುಂ ವಾಗುರಿಕರ ದೆಸೆಯಿಂ | ಸುತ್ತಾಮತ್ತ್ಯೋದರದೊಳುಸರಳದು |
ಪತ್ತಿದ ಬಸೆಯಿಂ ಕರ್ಬೊನ್ನವೊಲಿರೆ ಭೂವರ ಕೇಳಿದನ್ನೈ || ೩೪ ||

ಬಿದಿರಕ್ಕಿಯ ಜೇನ್ನೈಮೀನಂಗಳ | ನೊದಿವಿಸೆ ತದ್ವಿಪಿನದಿ....ರೊಳ |
ಗದನುರೆ ಮಾರುತ ಬಂದ ಜರತ್ಕುವರಂಗಾ ಕುಪ್ಪಿಗೆಯ ||
ಪದುಳಿಸಿ ಬಲಗಾರರೆ ಕುಡೆ ಕರುಪರಿ | ಯದೆ ಪಡೆದಿರುತ ತೊಳಲ್ತರುತಾತನೆ |
ಪೊದರಿನೊಳೊಂದಂಬಿನೆಯಿದುವಸಿಮೆಯೊಳೀಕ್ಷಿಸಿದನುನಿಂದೈ || ೩೫ ||

ಹರಿಯಾರೆನ್ನದ ಕಂಬಳಿಯನು ಹೊದೆ | ದಿರೆ ಚರಣವನಾ ಚರಣದ ಮೆಲಿ |
ಟ್ಟಿರಲದು ಚಿತ್ರದಮೃಗವಾ ಕಾಲ್ಗಳೆ ಮೃಗದಕಿವಿಗಳೆಂದು ||
ಭರದಿ ಜರುತ್ಕುವರನು ಬಿಲ್ಲಿಗೆತೊಡೆ | ಶರವೆಂಬುದನದು ತೆಗೆದೆಸೆ ಕೃಷ್ಣನ |
ಚರಣವನುಚ್ಚಳಿಸಿದುದಾದೇಶವನಾವನೊ ಮೀರುವನ್ನೈ || ೩೬ ||

ನಳಿನಾಕ್ಷನು ಹಾ ಬಲಭದ್ರಾಯೆಂ | ದೊಲೆದೇಳಲು ನಾರಾಯಣನೆಂಬುದ |
ತಿಳಿದು ಜರತ್ಕುವರನು ಪರಿತಂದೆದೆ ಬಾಯನು ಹೊಯಿಕೊಂಡು ||
ಖಳಪಾತಕನವಿವೇಕಿಯು ತಾನರಿ | ವಳಿದಕಟಕಟಾ ಬಂಧುವ ಕೊಂದೆನು |
ಹೊಲೆಯನು ತಾನೆಂದಚ್ಯುತನಡಿಗಳ ಕೆಲದಲಿ ಹೊರಳಿದನ್ನೈ || ೩೭ ||

ಹೊರಳುತಲಿರ್ದ ಜರತ್ಕುವರನನಾ | ಹರಿ ಕಂಡಿರಿದೇನೆನೆ ಮೃಗವೆಂದೇ |
ಮರುಳನು ತಾನರಿಯಮೆಯಿಂದೆಚ್ಚೆನು ಪಾತಕನದೆನೆನೆ ||
ಮುರರಿಪುವಾತನವದ್ಯನೆನಿಪ್ಪುವ | ನರಿದಂಜದಿರೇಳೇಳಳದಿರು ಪರಿ |
ಹರಿಪೊಡೆಶಕ್ಯವೆ ಸಿದ್ಧಾದೇಶವನೆಂದನು ಕೋಪಿಸಿದೈ || ೩೮ ||

ಬಲದೇವನು ಬಹನೀಗಳು ಕಂಡೊಡೆ | ಕೊಲುವನು ನಿನ್ನನು ತಡೆಯದೆ ಪೋಗೆನೆ |
ನಳಿನಾಕ್ಷನ ನುಡಿಗೇಳುತಲಾತನು ಪೋಗಲು ಮೊದಲಂತೆ ||
ಮಲಗಿದನಣ್ಣನು ಬಹತನಕಿವನನು | ಕಳುಹದಿರಿಸಿಕೊಂಡಿರ್ದು ವಿಚಿತ್ರದ |
ಕೊಲೆಗೊಲಿಸದೆ ಬಿಟ್ಟೆನುತಾನೆಂದನು ಮನದೊಳು ಬಳಿಕಿರದೆ || ೩೯ ||

ಎಂದಾಳೋಚಿಸುವಾ ರೌದ್ರಧ್ಯಾ | ನಂ ದೊರೆಕೊಂಡಿರೆ ಮಡಿದಿರದಾಗೋ |
ವಿಂದನು ಮೂರನೆಯಾ ನರಕದೊಳಿರೆ ಪುಟ್ಟಿದ ಬಲನಿತ್ತ ||
ಒಂದಬ್ಜಾಕರ ಕಂಡುಗೊರದುನಾ | ನಂದದಿ ತಾವರೆಯೆಲೆಯಲಿ ಪೊಟ್ಟಳ |
ವಂ ದೊರೆಕೊಳಿಸಿಯೆ ವಹಿಲದಿ ತಂದನು ವೈಕುಂಠನ ಬಳಿಗೆ || ೪೦ ||

ಹರಿ ನಿದ್ರೆಯೊಳೊರಗಿರ್ದಪನೆಂದಾ | ಕರುಣಿಯಿರಲ್ಕಾ ನೊಳಗಳು ಝೊಮ್ಮನೆ |
ಚರಣದ ಗಾಯಕ್ಕೆರಗಲು ದೇಹಳಿಲೆಂದು ನಿಜಾನುಜನ ||

ಸರಸಿರುಹಾಂಕಿತದಂಗಾಲೊಳು ಬಲು | ಸರಳಿನ ಹಜ್ಜೆಯ ನೀಕ್ಷಿಸಿ ಮುಸಕನು |
ತೆರೆದಾನನವನು ಕಂಡರಿದನು ಪಂಚತ್ವಮನಾಂತುದನ್ನೈ || ೪೧ ||

ಅರಿದನು ಘಳಿಲನೆ ಮೂರ್ಛೆಸಿ ನೆಲದೊಳ | ಗೊರಗಿದನೆತ್ತಾನುಂ ಮೆಲ್ಲನೆ ಯೆ |
ಚ್ಚರುತೆನ್ನನುಜನಕೊಂದವನೀ ವನದೊಳಗಡಗಿಹನವನ ||
ಅರಸುವೆನೆಂದಾ ಕೌಸುಂಬಾಟವಿ | ಯುರುತರುಗಳನೆಲ್ಲವ ನಿಮಿಷಕೆ ಬುಡ |
ಹೊರಗಾಗಲು ಕಿತ್ತೀಡಾಡಿದನೇನತಿಬಲನ್ನೈ ಬಲನ್ನೈ || ೪೨ ||

ಮಸಗಿದ ಜವನಂತತಿ ಕೋಪದಿ ಘೂ | ರ್ಣಿಸುತಾ ಮುನ್ನಿನ ತಾಣಕೆ ಬಂದೀ |
ಕ್ಷಿಸಿ ಎಲೆ ತಮ್ಮನೆ ನಿನ್ನನು ಕೊಂದವನಾವೆಡೆಗೈದಿದನ್ನೆ ||
ಸಸಿನೆನಗರಿಪೀ ಕ್ಷಣದೊಳೆ ಕೊಲುವೆನು | ತಿಸುಳಿಯ ಮರೆವೊಕ್ಕಡೆ ಬಿಡೆವೆಂದರಿ |
ವಿಸಿದನು ಶೋಕಾಗ್ನಿಯ ಮಿಕ್ಕುದು ಕೋಪಾಗ್ನಿಹಲಾಯುಧನ್ನೈ || ೪೩ ||

ಬಳಿಕನುಜನ ಕೊರಲನು ತೆಕ್ಕಿಸಿಕೊಂ | ಡಳುತಳುತಕಟಾ ತಮ್ಮನ ದೇವತೆ |
ಗಳ ಬಾಲ್ಯದಿ ಬೇಡಿದಧಟೆಲ್ಲಿತೊಪರ್ವ…… ||
…ದುದೊ ಫಣಿಶಯ್ಯೆಯನಡ | ರ್ದಳವೇನಾದುದೊ ಗಜವನು ಮಲ್ಲರ |
ಕಲಿ ಕಂಸನ ಕೊಂದಧಟೇನಾದುದೊ ಹಾ ವಿಧಿಯೇ ಎಂದ || ೪೪ ||

ಕಡು ಮುಳಿಸಿಂದೆ ಜರಾಸಂಧನು ಪೂ | ಣ್ದಡೆ ನಿನ್ನಯ ವಜ್ರೋಪಮವಹ ಚೆಲು
ವೊಡಲನು ಭೇದಿಸಲರಿಯದೆ ಚಕ್ರವು ನಿನಗೊಲಿತಂದುದಲ ||
ಅಡವಿಯೊಳಗೆ ಹುಲು ಬೇಡನ ಸರಳಿಂ | ಮಡವೀ ಪ್ರಾಪ್ತಿಯು ನಿನಗಿಂದಾದುದು |
ಗಡ ಹಾಹಾ ಖಳ ಪಾಪಿ ವಿಧಾತನೆ ಕೊಂದೆ ಗಡಾ ಎಂದ || ೪೫ ||

ಬಳೆದೀ ಶೋಕದಿ ಪಳವಿಸಿ ನೆರೆಬಾ | ಯಳಿದು ಮನಂಗೆಟ್ಟರಿಮರುಳಾಗಿಯೆ |
ನೆಲನೊತ್ತುಗುಮೀ ತಮ್ಮನ ಚೆಲುವಿನ ಲಲಿತಾಂಗವನೆಂದು ||
ಬಲನಾ ಬೆಳ್ಳಿಯ ಬೆಟ್ಟವ ನೀಲಾ | ಚಲವನು ಪೊತ್ತಂತಿರೆ ಪೊತ್ತನು ಪೆಗ |
ಲೊಳು ಕೃಷ್ಣನ ಸಬವನು ಬಂಧುಗಳಳಿವಾರನು ಮರುಳಿಸದೈ || ೪೬ ||

ಎಲೆ ನಂದನವೇ ಎಲೆ ಚಂದನವೇ | ಎಲೆ ಗಿರಿಗಳಿರಾ ಎಲೆ ದರಿಗಳಿರಾ |
ಎಲೆ ಕೆರೆಗಳೆ ಕೇಳೆಲೆ ತಾರೆಗಳೇ ಹೇಳೆಲೆ ನಿರ್ಜರವೆ ||
ಚೆಲುವನು ನನ್ನನುಜನು ಯಾದವಕುಲ | ತಿಲಕವದೇಕೆಯೊನುಡಿಯನೆನುತ ಮಿಗೆ |
ಹಲುಬುತ ಹೊತ್ತರುದಿಂಗಳು ತೊಳಗಿದನನ್ನೆಗಮದನರಿದ್ಯೆ || ೪೭ ||

ಬಂದನು ಸಿದ್ಧಾರ್ಥಾಮರವೆರಸೊಲ | ವಿಂದಾ ನೈಗಮದೇವನು ತಾ ನೊಡ |
ನೊಂದು ವಿಶಾಲ ಶಿಲಾತಳದೊಳು ಕಬ್ಬನು ನಟ್ಟುದಕವನು ||

ತಂದಡಕುವ ದಂದುಗವನು ಬಲನಾ | ಬಂದೀಕ್ಷಿಸಿ ಯೆಲೆ ಮರುಳರಿರಾ ನಿ |
ರ್ವಂದಮಿದೇತಕೆ ಕಲ್ಲೊಳು ಕಬ್ಬಿನ ಕೆಯಿ ಬೆಳೆವುದೆ ಎಂದ || ೪೮ ||

ಮರುಳುತನವೆ ನಮ್ಮುಜ್ಜುಗವೆಂದೆನೆ | ಮರುಳುತನವೆಯಿದು ಸಂದೆಗವಿಲ್ಲೆನೆ |
ಮರುಳುತನವು ನಮಗಂ ನಿಮಗಂ ಸರಿಯಿದು ಬೆಳೆಯದ ತೆರದಿ ||
ಹರಣವು ಬರಲರಿಯದು ಆ ಹೆಣಕೆನೆ | ಮರಳು ಮಸಗಿ ಬಂದತಿ ಕೋಪಿಸಿತಲೆ |
ಎರಡುಂಟೇ ನಿಮಗೆನ್ನನುಜನ ಹೆಣ ನೆನಬಹುದೇ ಎಂದೈ || ೪೯ ||

ಬಡಿಯ ಬರಲು ಸಿಲುಕದೆ ಮತ್ತತ್ತೊಂ – | ದೆಡೆಯಲಿ ಬಿತ್ತು ಮರವನವರೀರ್ವರು |
ಬುಡಮೇಲಾಗಿರೆ ನಟ್ಟುದಕವನಡುಕುತ್ತಿರೆ ವಿಭು ಕಂಡು ||
ಕೆಡುಗೆಲಸವಿದೇಕರೆ ಮರುಳರಿರಾ | ಬುಡಮೇಲಾದೊಣರ್ಮರ ಚಿಗುರ್ವುದೆಯೆನೆ |
ಬಿಡು ಮೋಹವನಸು ಬಹುದೇ ಶಬಕದನುಳಿನೀನೆಂದಪರೆ || ೫೦ ||

ಎನೆ ಹಲಧರ ಮುನಿದತ್ತೆದುತ್ತಿರ | ಲನಿಮಿಷರುಮಿಯನು ಕಟ್ಟುವ ಹುಡಿಮಳ |
ಲನು ಹಿಂಡುವನಿರ್ಗದೇವವಸರದಿಂ ಮುನ್ನಿನವೊಲುನುಡಿಯೆ ||
ಮನದಿಂ ಮೋಹವು ಬಲಭದ್ರಗೆ ಮೆ | ಲ್ಲನೆ ತೊಲಗಿತು ರವಿಗೊಡ್ಡಿದ ಮುಗಿಲೊ – |
ಯ್ಯನೆ ತೊಲಗವೊಲು ಬಳಿಕರಿದಿಳುಹಿದನಾ ಶವವನು ಕೆಳಗೆ || ೫೧ ||

ಬಳಿಕಾ ದಿವಿಜರದೃಶ್ಯದೆ ಪೋದರು | ಬಲನಾ ಶವವನು ನಿರ್ಮಲವಾದಾ |
ಸ್ಥಳನಲಿ ಸಂಸ್ಕರಿಸುವೆ ತಾನೆಂದಾ ತುಂಗೆಯೆನಿಪ ಗಿರಿಯ ||
ತಲೆಯಲಿ ಚಂದನದಿಂಧನವನು ಸಂ – | ಗೊಳಿಸಿ ಮುರಾರಿಯ ವಪುವನು ದಹನಂ |
ಗೊಳಿಸಿದ ಪದದೊಳಗಾಗಸ ವಚನವದಾದುದದೆಂತೆನಲು || ೫೨ ||

ಈ ತೆರದಿಲ್ಲಿಯೆ ನೀನೇ ತಂ – | ದೀತನವಪುವನು ಮುನ್ನೇ ಹಲವು ಸೂ |
ಳೋತುದಹನವನು ಮಾಡಿದಗಣನೆಗೆ ಸಲಿಗೆಯಿದೆನೆ ಕೇಳಿ ||
ವೀತವಿಪಾಧದಿನಂತ್ಯಕ್ರಿಯೆಗೈ | ದಾತನೆ ತದ್ವನದೊಳು ಚಾರಣರಿಂ – |
ಮಾತೇಂ ದೀಕ್ಷೆಯನಾಂತಾಗಿರಿಯೊಳು ತಪವಿರ್ದನು ಬಲನೈ || ೫೩ ||

*( ಇಲ್ಲಿ ಪರ್ವ ಮುಕ್ತಾಯವನ್ನು ಸೂಚಿಸುವ ಪದ್ಯವಿಲ್ಲ. ಬಹುಶಃ ಕೆಲವು ಪದ್ಯಗಳು ಲುಪ್ತವಾಗಿರುವ ಸಂಭವವಿದೆ. )*

**ಸಂಧಿ ೬೪**

ಶ್ರೀಮದಮರಾಧೀಶವಂದಿತ | ನೇಮಿನಾಥನ ಘಾತಿಕರ್ಮಾ |
ರಾಮದಿಂ ಪೊರಮಟ್ಟು ಮೋಕ್ಷಾಂಗನೆಯನಪ್ಪಿದರು || ಪಲ್ಲ ||

ಕೇಳೆಲೇ ಶ್ರೇಣಿಕ ಧರಿತ್ರೀ – | ಪಾಲ…………… |
…………………..ನಡುವಿರ್ದ ದ್ವಾರಾವತಿ ||
ಖೀಳವನ್ನಿಯನುರಿದುದೆನೆ ಭೂ | ಪಾಳವಂದ್ಯನ ತರ್ಕ ಚಕ್ರಿಯು |
ಹಾಳು ಸರಳಿಂಮಡಿದನೆನೆ ಚಿರವಾವುದಿನ್ನೆಂದು || ೧ ||

ಭರವಸದಲ್ಯೆತಂದು ನೀಲಾಂ | ಬರದಿಗಂಬರರಡಿಗೆರಗಿಯಘು |
ಹರನ ನೇಮಿಸ್ವಾಮಿಯಂಘ್ರಿಗೆ ಪೂಜೆಯನು ಮಾಡಿ ||
ಅರುಹನಾ ದಿವ್ಯಧ್ವನಿಯನಾ | ಹರಿಗೆ ಬಂದಾ ಮರಣವನು ವಿ |
ಸ್ತರದಲರಿದರು ದ್ವಾರಾವತಿಯುರಿದೊಂದು ಸಂಗತಿಯ || ೨ ||

ಅರಿದು ವೈರಾಗ್ಯಾಂತರಂಗರು | ಮರಳಿದರು ನಿಜ ಪುರಕೆ ತಾ ಹಲ |
ಧರಯತೀಶ್ವರರುತ್ತರೋತ್ತರ ತಪವನ್ನುತ್ತರಿಸಿ ||
ವರಸಮಾಧಿಯಿಂ ಮುಡುಪಿ ಜನಿಯಿಸಿ | ದರುವಿಮಲರಾ ಬ್ರಹ್ಮಕಲ್ಪದೊ |
ಳಿರದೆ ಋಜುಪರಿಣಾಮಿಗಳಿಗಿದು ಭೂಪ ಕೇಳೆಂದ || ೩ ||

ಇತ್ತಲಾ ಅಭಿಮನ್ಯುವಿಗೆ ಸೇ – | ವುತ್ತರಗೆ ಹುಟ್ಟಿದ ಪರೋಕ್ಷ ನೃ – |
ಪೋತ್ತಮನನಾ ರಾಜ್ಯ ರಕ್ಷಣ್ಯಕ್ಕೆ ಸ್ಯೆತಿರಿಸಿ ||
ಮತ್ತಮಾ ಪಾಂಡವರು ಬರೆ ಬೆಂ | ಬತ್ತಿ ಕುಂತಿಯು ಬರಲು ದ್ರುಪದನ |
ಪುತ್ರಿ ಮೊದಲಾದವರ ವಧುಗಳು ಬಂದುವಂದಿರದೆ || ೪ ||

ಬಂದು ಬಂಧುರವಾದಪಲಋತು | ಮಂದಿರದ ನಂದನದ ಚೆಲುವಿಕೆ |
ಯಿಂದೆಸೆವ ಹಿಮವನ್ನಗೇಂದ್ರಾಗ್ರದಲಿ ಸಮವಶ್ರುತಿ ||
ಅಂದಿರಲು ನೇಮೀಶ್ವರನ ಸಭೆ | ಯೊಂದಿದಿರು ಪಾಂಡವರು ಜಡಜನ |
ವಿಂದುವೆಂಬುದು ಹಿಮವ ಪೊಕ್ಕವರ್ಗಗಳು ಮಡಿದರೆಂದು || ೫ ||

ಪರಮ ನೇಮೀಶ್ವರನ ಅಷ್ಟೋ | ತ್ತರ ಸಹಸ್ರ ಸುನಾಮಯೋಗ್ಯರ |
ನಿರದೆ ವಿವಿಧಾರ್ಚನೆಗಳಿಂದರ್ಚಿಸಿ ನುತಿಸಿ ನತಿಸಿ ||

ದೊರೆವಡೆದ ವರದತ್ತ ಗಣಧರ | ಚರಣ ಕಮಲಕ್ಕೆರಗಿ ಕುಳ್ಳಿ |
ರ್ದೆರಡು ಕೈಗಳ ಮುಗಿದು ನೊಸಲೊಳಗಿರಿಸಿ ಯಮಸುತನು || ೬ ||

ಬೆಸಸಿಯೆನ್ನಯ ಭವವನೆನೆಗುರು | ಉಸುರಿದಪರೀ ಗಂಧದೇಶದೊ |
ಲೆಸೆವ ಚಂಪಾಪುರದ ಕುರುಕುಲತಿಲಕ ಮೇಘರಥ ||
ರಸಿಕನಾತನ ಮಂತ್ರಿ ಸೋಮಂ | ಗಸುವೆನಿಪ ಸೋಮೆಗೆ ಸುತರು ಭಾ |
ವಿಸಲು ಮೂವರು ಸೋಮದತ್ತನು ಸೋವಿಲನುವೆಸರಿಂ || ೭ ||

ಕಿರಿಯನೆನಿಸುವ ಸೋಮಭೂತಿಯ | ನೆರೆದರುರುಗುಣ ವಿದ್ಯೆಸಂಗಡ |
ನೆರೆಯೆ ಕಂಡಾ ತಂದೆ ತನ್ನಯ ತಂಗಿಯಗ್ಗಿಲಿಗೆ ||
ಪುರುಷನೆನಿಸಿರ್ದಗ್ನಿ ಭೂತಿಗೆ | ವರಧನ ಶ್ರೀ ಮಿತ್ರ ಸಿರಿ ಆ |
ಕಿರುಕುಳೆಯ ನಾಗಶ್ರೀಯೆನಿಪ ತನುಜೆಯರು ಜನಿಸಿರಲು || ೮ ||

ತರದಿ ಮೂವರು ಸೊಸೆಯರನು ತನು | ಜರಿಗೆ ಮದುವೆಯಮಾಡಿ ಶುಭದಿಂ |
ದಿರುತಿರಲು ತತ್ಪುರಬಹಿರ್ವನದೊಳಗೆ ಯೋಗದಲಿ ||
ಇರಲು ಮುನಿಪತಿ ಭೂತಹಿತರದ | ನರಿದು ಸುರಪತಿ ಮೇಘರಥ ಭೂತ |
ವರನು ತನ್ನಯ ಮಂತ್ರಿ ಸೋಮ ಸಮೇತವೈತಂದ || ೯ ||

ಪರಮಭಕ್ತಿಯನಾಗುರುಶ್ರೀ | ಚರಣಗಳನರ್ಚಿಸಿಯೆರಗಿ ತ |
ನ್ನುರು ಭವಾವಳಿಯನು ನಿರೂಪಿಸುಪುದೆಂದು ಬಿನ್ನವಿಸಿ ||
ಗುರುನಿರೂಪದಿನಾ ತೆರನ ವಿ | ಸ್ತರದಲರಿದನು ತೊರೆದನಘ ಸಂ |
ಹರಣ ಕಾರಣವಾದ ವೈರಾಗ್ಯವನು ಧರಿಸಿದನು || ೧೦ ||

ಹೊಳಲ ಹೊಕ್ಕನು ಮೇಘರಥನಾ | ಯಿಳೆಯನಾತ್ಮಜ ವಿಮಲವಾಹನ |
ನೊಳೆನಿಲಿಸಿ ನಿಜಮಂತ್ರಿ ಸೋಮನು ಪಲನೃಪರುವೆರಸಿ ||
ಸಲೆವಿಮಲಮತಿಯೆಂಬ ಜಿನಮುನಿ | ಗಳ ಸಮಕ್ಷದಿ ಜಾತರೂಪನು |
ತಳೆದನಾ ಸಮ್ಯಕ್ತ್ವ ಚೂಡಾಮಣಿ ವಿರಕ್ತಿಯಲಿ || ೧೧ ||

ಅರಸುಮಗನಾ ವಿಮಲವಾಹನ | ಧರೆಯನಾಳುತ ಸೋಮಮಂತ್ರಿಯ |
ವರತನೂಜರು ಸೋಮದತ್ತಾದ್ಯರು ಹಿತವರೆಂದು ||
ಇರುತಿರಲು ಬಂದುದು ಬಸಂತವು | ಹರುಷದಿಂ ವನಕೇಳಿಗಾ ಭೂ |
ವರನು ಹೋಗಲು ಸೋಮದತ್ತನದೊಂದು ಕಾರಣದಿ || ೧೨ ||

ಉಳಿದು ತಮ್ಮಂದಿರನು ಸಂಗಡೆ | ಕಳುಹಿದನು ಮತ್ತಾ……….. |
……….ತ್ರಶ್ರೀಯ ರಾವನಕೇಳಿಗವರೊಡನೆ ||

ತಳರೆ ನಾಗಶ್ರೀಯು ಪಸದನ | ಗೊಳುತಿನಿತು ತಡವಾಗೆ ಬಳಿಕಾ |
ನಿಳಯಕಮಲನ ಧರ್ಮರುಚಿ ಭಟ್ಟಾರಕರುಮ್ಮೈದೆ || ೧೩ ||

ಬಂದರಾ ಮಾಸೋಪವಾಸಿಗ | ಳಿಂದು ಗತಿಯಿಂ ಪಾರಣೆಗೆ ಬರೆ |
ಬಂದೆರಗಿ ನೆರೆ ಸೋಮದತ್ತನು ಸತ್ಕ್ರಮದಿನಿಲಿಸಿ ||
ಬಂದುದರಸಿನ ತರಹುಮಂತ್ರಿಗೆ | ನಿಂದು ಚರಿಗೆಯ ಮಾಡಿಸಲು ತಳು |
ವೆಂದು ನಾಗಶ್ರೀಗೆ ಹೇಳಿದನರಸ ಕೇಳೆಂದ || ೧೪ ||

ಗುರುಗಳತಿ ಬಳಲಿದರು ಮಿಗೆ ಸಾ | ದರದಿ ನೀವೆ ನಿರಂತರಾಯವ |
ಕರವಸೆದು ಮಾಡಿಸುವುದೆಂದಾ ಬನಕೆ ತೆರಳಿದನು ||
ಮರುಳೆ ನಾಗಶ್ರೀ ಮಸಗಿದಳು | ಗುರುಗಳಿಂಬನಕೇಳಿಇ ವಿಘ್ನವು |
ದೊರಕಿತೀ ಹಾಳಾದ ಬೆಸನೆನೆ ಭಾವ ಹೇಳಿದನು || ೧೫ ||

ಎಂದು ನೋಡೆಯು ಪಾಪಿ ಗುರುಗಳ | ಬೆಂದ ಚರಿಗೆಯ ಬೆಸನೆ ತನಗಹು |
ದೊಂದು ಗೋಷ್ಠಿಗೆ ತೆರಪುಗುಡರಿವರೆಂದು ಕೋಪದಲಿ ||
ಕಂದೆದೆಯ ಪಾತಕಿಯು ವಿಷದೊಳ | ಗೊಂದಿಸಿದ ಮೋದಕವನವರಿಗೆ |
ತಂದು ಕೈಯಲಿ ಕೊಡುವ ಕೊಂಡರು ಕೊಂಡುದಾವಿಷವು || ೧೬ ||

ವಿಷವಡಕಿ ಬೆದರಿದಡೆ ಕೋಪದ | ದೆಸೆಯ ಕಂಡರೆ ದೇಹದಾತ್ಮನ |
ಬೆಸುಗೆ ಬೇರೆಂದರಿದು ಸದ್ಭಾವನೆಯ ಭಾವಿಸುತ ||
ಅಸುವುಳಿದು ಸರ್ವಾರ್ಥಸಿದ್ಧಿಯೊ | ಳುಸುರಲೇನಹುಮಿಂದ್ರರಾದರು |
ಪ್ರಶಮಿತಾತ್ಮರದೇಕೆ ಕೆಡುವರು ಭೂಪ ಕೇಳೆಂದ || ೧೭ ||

ಅನುಜರೊಡನಾ ಸೋಮದತ್ತನು | ಮನೆಗೆ ಬಂದಾ ಪಾತಕಿಯು ಜಿನ |
ಮುನಿಯ ವಧೆಮಾಡಿದ ಮಹಾಪಾತಕಕೆ ಕೊಕ್ಕರಿಸಿ ||
ವಿನುತರಾ ಮೂವರು ತೊರೆದು ಪೆಂ | ಪೆನಿಸಿದರುಣಾಚಲದೊಳಿರೆ ಭೋ |
ರೆನೆ ಬರಲು ಚಾರಣಯುಗಲವವರಂಘ್ರಿಗವರೆರಗಿ || ೧೮ ||

ಮೋಕ್ಷ ಸಂಪದದಾಯಿಯನು ಜಿನ | ದೀಕ್ಷೆಯನು ತಲೆದರು ತಳೆಯಲೊಡ |
ನಾಕ್ಷಣವೆ ತೊರೆದಾ ಧನಶ್ರೀಮಿತ್ರ ಸಿರಿಯುಗಳ ||
ದೀಕ್ಷೆಗೊಂಡರು ಗುಣವತಿಯರ ಸ | ಮಕ್ಷಮದಲಿ ಸದ್ಧರ್ಮಮುನಿವಧೆ |
ಯೀಕ್ಷಿಪರೆ ಪರಿಹರಿಸದೊಡಲನು ತೊರೆಯದುತ್ತಮರು || ೧೯ ||

ಬಳಿಕಲವರೈವರು ಸಮಾಧಿಯ | ನುಳಿದೊಡಲನಚ್ಯುತ ಸುಕಲ್ಪ |
ಸ್ಥಳದೊಳನಿಮಿಷರಾದರಿಪ್ಪತ್ತೆರಡೆ ಕಡಲಾಯು ||

ನೆಲಸಿತಿತ್ತಲು ವಿಮಲವಾಹನ | ಪೊಳಲರಸನದನರಿದು ತಾನಾ |
ಗಳೆ ತಳಾರರ ಪೇಳ್ದನವಳನನ್ನಯಕೆ ಶಿಕ್ಷಿಪೊಡೆ || ೨೦ ||

ಇರದೆ ನಾಗಶ್ರೀಯನಾ ತಳ | ವರರು ಲೋಕಕೆ ಹೊಸತೆನಿಪ ದು |
ರ್ಧರವಿಬಂಧನ ಪೀಡೆಯಿಂ ಶಿಕ್ಷಿಸಿ ಬಳಿಕ್ಕವಳ ||
ಪುರದ ಹೊರಗೆಳಯಿಸಿ ಬಿಸುಡಿಸಲು | ಪಿರಿದು ದುಃಖದಿ ಮಿಡುಕಿ ಮಡಿದಳು |
ಧರಿಯಿಸಿದ ಕೆಡು ಕೃಷ್ಣಲೇಸ್ಯದಿನುಚ್ಚಗತಿಯಹುದೆ || ೨೧ ||

ಐದನೆಯ ನರಕವನು ತಾನಿರ | ದೈದಿ ನಾಗಶ್ರೀಯುಕಾಸಿದ |
ಕೈದು ಮೊದಲಾದೆಲ್ಲ ಬಾಧೆಗಳಿಂದ ನರಳುತಲಿ ||
ಯ್ಯೆದೆ ಹದಿನೇಳಬುಧಿಯಾಯುವ | ಮೈದು ದುಃಖದಿನುಂಡಳಿಲ್ಲಿಂ |
ಪೈದು ಬಂದಿತ್ತಾ ಸ್ವಯಂಪ್ರಭವೆಂಬದೀಪದೊಳು || ೨೨ ||

ದಿಷ್ಟಿ ವಿಷಫಣಿಯಾಗಿ ದುರಿತದಿ | ಬೆಟ್ಟು ದೊರೆಯಿಂ ಕುಸಿದು ದುರಿತದ |
ಕಟ್ಟಕಡೆಯೆನಲೆರಡೆನಯನರಕಕ್ಕೆ……. ….. ||
… … … … … … | … … … … … … |
… … … … … … … … || ೨೩ ||

… … … … … | … … … … … |
… … … … … … ||
… ನೆಂಬಾ ಮಾದೆಗಗೆ ತಾಠ – | ನಿರದೆ ಮಗಳಾಗಿರಲೊಡನೆ ಕುಂ |
ಮರಿ ಗಡಿದವೋಲು ತಂದೆ ತಾಯ್ಗಳು ಬಂಧುಗಳು ಮಡಿಯೆ || ೨೪ ||

ದೇಸಿಗತಿ ತಾನಾಗಿ ಬಳೆದಾ | ಕೂಸು ನಿರ್ನಾಮಿಕೆಯೆನಿಸಿ ಕಡು |
ಘಾಸಿಯಾಗುದರಾಗ್ನಿ ಪೆರ್ಚೆರಲಡವಿಯನು ಹೊಕ್ಕು ||
… … … … … | … … …ಂದಿರಲುಗಣ- |
ರಾಸಿಗಳು ಸಂದವದಿ ಬೋಧಮುನೀಂದ್ರರೈತರಲು || ೨೫ ||

ಬಂದನಾ ಪುರದರಸು ಯತಿಪನ | ನಂದದಿಂ ಪೂಜಿಸಿಯೆರಗಿಗುರು |
ವೆಂದ ವಾಕ್ಸುಧೆವೀಂಟಿ ಪುರಜನವೆರಸಿ ನೃಪತನ್ನ ||
ಮಂದಿರಕೆ ಪೋತಂದನೀಕೆಗೆ | ಹಿಂದಣಾ ಪಾತಕವು ತವುತರ |
ಲೊಂದು ಪರಿಣಾಮದಲಿ ನುತಿಸುತಲೆರಗಿದಳುಯತಿಗೆ || ೨೬ ||

ಎರಗಿ ನೀವೇನಿತ್ತಿರೀ ಪೊಳ | ಲೆರೆಯಗೆನಗದನಿನಿಸಕೊಡಿಮೆನೆ |
ತೊರೆದು ಕಲೆದುದು ಮಾಂಸಗಳನೆನೆ ಜೀಯೆನುತ ಪಡೆದು ||
ನೆರನಡೆದು ಮಡಿದಾಪುರದಕೆ | ಟ್ಟುರವ ತಂದುವೆನಿಷ್ಟ ವಣಿಜಗೆ |
ಮಿರುಪ ಧನದೇವಿಗೆ ತನೂಭವವೆಯಾದಳಾ ನೀಚೆ || ೨೭ ||

ಪೆಸರನಿಂ ಸುಕುಮಾರಿ ಮನಕೆ | ಯೆಸೆವದುರ್ಗಂಧಾಂಗಿಯಾಗಿರ |
ಲೊಸೆದು ಬಂಧುವ ಸೋದರಳಿಯ ಯಶೋಧೆಯಾತ್ಮಜನು ||
ರಸಿಕ ಧನದೇವನ ಸುತನು ರಾ | ಜಿಸುವ ಜಿನದೇವಾಂಕನಿರೆ ಪೊ |
ರ್ದಿತುವರಾಕೆಯ ತನ್ನೊಳೆಂದರಿದೆಯಿದೆ ಹೇಸಿದನು || ೧೮ ||

ಕೊಳಕಿಗತಿ ಕೊಕ್ಕರಿಸಿ ತಾನಾ | ಗಲೆ ತಪೋಲಕ್ಷ್ಮಿಯೊಳು ನೆರೆದಿರೆ |
ತಳುವದಾ ಜಿನದೇವನಾತನ ತಮ್ಮ ಜಿನದತ್ತ ||
ತಳೆದನವರುಪರೋಧ ಕವಳನು | ಬಳಿಕವಳ ಸೋಂಕದೆಯಿರಲ್ಕಾ |
ಲಲನೆ ಖೇದವನಾಂತಿರಲು ಭೂಪಾಲ ಕೇಳೆಂದ || ೧೯ ||

ದೊರೆವಡೆದ ಸುವ್ರತೆಯರಲ್ಲಿಗೆ | ಬರಲೆರಗಿಯಜ್ಜಿಕೆಯರಂಘ್ರಿಗೆ |
ಕರಣದಿಂದವರಮಲ ಜೈನವ್ರತಂಗಳನು ಕೊಡಲು |
ಧರಿಸಿ ಪಾವನವಾದ ಗತಿ ಸೌಂ | ದರಿಯಳಲವೆಯರುಪಸಮಾಂತಃ |
ಕರಣೆಯರು ಸುವ್ರತಿಯರೊಡಬರೆ ಕಂಡು ಸುಕುಮಾರಿ || ೨೦ ||

ಇವಳಿಗೀ ಯೌವ್ವನದೊಳಗೆ ಏಂ | ಭವಿಸಿತೇತಕೆ ದೀಕ್ಷೆಯದರಂ |
ದವನು ಬೆಸಸುವುದೆಂದು ಸುವ್ರತಿಯರಿಗೆ ಬಿನ್ನವಿಸೆ ||
ಅವರು ಪೇಳ್ದಪರಿವರುಮೀರ್ವರು | ಸವಣಿಸಿದ ಹಿಂದಣದಭವದಳೊ |
ಪ್ಪುವ ಸುರೇಂದ್ರಂಗರಸಿಯರು ಸುಪ್ರಭೆಯು ವಿಮಲಮತಿ || ೨೧ ||

ಎನಿಸಿರುತೆ ನಂದೀಶ್ವರ ಮಹಾ | ವಿನುತ ಪರ್ವಕೆ ಸುರಪನೊಡನೆಯೆ |
ಮನಮೊಸೆದು ಪೋತಂದು ನೆರೆ ಧರ್ಮಾನುರಾಗದಲಿ ||
ಅನಿಮಿಷೆಯರಾ ತತ್ತ್ವನಿಚಯಮ | ನೆನಿಸು ಮರೆಯಲೆವೇಳ್ಕುಮೀರ್ವರು |
ಮನುಜತೆಗೆ ಬಂದಂದುನಾವೇಕನುತ್ತ್ವವನು ತಳೆವ || ೨೨ ||

ಎಂದು ಪೂಣ್ದೀರ್ವರು ನಿಜಾಯುವ | ಸಿಂಧುಬತ್ತಲು ಬಂದಯೋಧ್ಯೆಯ |
ಸೌಂದರ ಶ್ರೀಷೇಣರಾಯಂಗೈದೆ ಹರಿಸೇನೆ ||
ಎಂದುತಾಂ ಶ್ರೀಷೇಣೆಯೆಂದತಿ | ಚಂದವುಳ್ಳಾತ್ಮಜೆಯರಾದರು |
ತಂದೆಯಾ ಮಕ್ಕಳಿಗೆ ಮಾಡಿಸಿದನು ಸ್ವಯಂವರವ || ೨೩ ||

ಸುರಕುಮಾರರ ನೆರವಿಯೆನೆ ಚೆಲು | ವರಸು ಮಕ್ಕಳ ನೆರವಿಯಿರಲೀ |
ತರುಣಿಯರು ತಾವವರ ನೀಕ್ಷಿಸುತಾ ಭವಸ್ಮರಣೆ ||
ದೊರೆಕೊಳಲು ತಾವಂದು ಮಾಡಿದ | ಪಿರಿಯ ಪೂಂಕೆಯ ನೆನೆದು ವಿರತಿಯ |
ಭರದಿ ದೀಕ್ಷೆಯನಾಂತು ಬಂದರು ತೀರ್ಥವಂದನೆಗೆ || ೨೪ ||

ಎನಲೊಡನೆ ಸುಕುಮಾರಿಗಾಗಳು | ಜನಿಯಿಸಿತು ವೈರಾಗ್ಯವೀನೆ |
ನ್ನನೆ ಕೃತಾರ್ಥನೆ ಮಾಳ್ಪುದೆಂದು ತದಾರ್ಯಿಕೆಯರಿಂದೆ ||
ವಿನುತ ದೀಕ್ಷೆಯನಾಂತು ನೋಂಪಿಗ | ಳನು ಪಲವನೆಸಗಲ್ಕೆ ಪೋದುದು |
ತನುವಿನಾ ದುರ್ಗಂಧವೆಲೆ ಭೂಪಾಲ ಕೇಳಂದ || ೩೫ ||

. . .ನವಾ ವಿಮಲಬೋಧ ಮು | ನೀಂದುಗಳ ಚರಣಕ್ಕೆರಗಿಯವ |
ರಿಂದೆ ನಾಗಶ್ರೀಯು ತಾನಾದದುವೆ ಮೊದಲಾದ ||
ಸಂದ ಭವವನು ಕೇಳ್ದರಿದು ತ | ನ್ನಂದಿನೋಪನು ಸೋಮಭೂತಿ ಜಿ |
ನೇಂದ್ರ ತಪಸಿನ ಫಲದಿನಚ್ಚುತ ಕಲ್ಪದೊಳು ಸಂದ || ೩೬ ||

ತೆರನನರಿದಾ ದೇವನೊಳುದುನ | ವೆರಗಿ ಸುಕುಮಾರಾರ್ಯಿಕೆಯರಂ |
ತಿರುತ ಕಡೆಯೊಳು ಮುಡುಪಿ ಪೇಳ್ದಾ ಸೋಮಭೂತಿವಪ ||
ಸುರಗೆ ಕಮಲಪ್ರಭೆವೆಸರಮನ | ದೆರೆಯಳಾದಳು |
ನುರುವ ಮಹಾದಾಶ್ರಯವು ಕೆಟ್ಟುದು ಭೂಪ ಕೇಳೆಂದ || ೩೭ ||

ತರದಿನೆಸೆವಾ ಸೋಮದತ್ತಾ | ಮರರ ಸೋವಿಲಸೋಮಭೂತಿ |
ಚರರು ಧನಶ್ರೀವಿತತ ಮಿತ್ರಶ್ರೀಚರಸ ಸುರರು ||
ಶರಧಿಯುಪಮಾಯುಷ್ಯವಿಪ್ಪ | ತ್ತೆರಡನತಿ ಸೌಖ್ಯದಿ ಸವಿದರೈ |
ವರುಕಳಿದು ಬಂದಿಲ್ಲಿ ಪಾಂಡವರಾದಿರೆಲೆ ಭೂಪ || ೩೮ ||

ಬಳಿಕ ಐವತ್ತೈದು ಪಲ್ಯವ | ಕಳಿದು ಕಮಲಪ್ರಭೆಯ ಬಂದ |
ಗ್ಗಳದ ಗುಣಿಯಾ ದ್ರುಪದ ನಂದನೆಯಾದಳಿಂತೆಂದು ||
ಮಲರಹಿತ ವರದತ್ತಗಣಧರ | ರೊಳರೆ ಕೇಳ್ದುವಿರಕ್ತಿ ಮನದೊಳು |
ನೆಲಸಿ ತದ್ಗಣಧರರ ಕೈಯಲಿ ಪಾಂಡನಂದನರು || ೩೯ ||

ಪಲಬರವನೀಶ್ವರರು ಪುರಜನ | ವೆರಸಿದೀಕ್ಷೆಯ ಕೊಳಲು ಕೊಂತಿಯು |
ಪಲಬರವನೀಶ್ವರರ ಸತಿಯರು ಪುರದನಾರಿಯರು ||
ತಿಳಿದು ದ್ರೌಪದಿ ಆ ಸುಭದ್ರಾ | ಲಲನೆ ವೆರಸು ತಪಸ್ಥೆಯಾದಳು |
ಬಳಿಕಲಾ ಪಾಂಡವರು ಹನ್ನೆರಡು ತಪವ || ೪೦ ||

ಅವಧಿ ಬೋಧೋದಯವು ವರ ಪಾಂ | ಡವ ಯತೀಶ್ವರ್ಗಾದುದಾಯುವ |
ಹವಣನರಿದು ನಿರರ್ಗಳರು ಕೃಪೆಯಿಂದೆ ಹಾರಿಸುತ ||
ವಿವಿಧ ದೇಶವ ಪೊಕ್ಕು ಬಂದೂಂ | ದವನಿಧರ ಶತ್ರುಂಜಯಾಖ್ಯವು |
ದಿವಿಜನಗವನು ನಗುವುದದು ಮಣಿಶಿಖರಸಾನುಗಳಿಂ || ೪೧ ||

ಆ ಶಿಖರಿ ಶಿಖರಾಗ್ರದೊಳು ನೆರೆ | ಹಾಸಿದೆಳೆವಳುಕಿನ ಶಿಲೆಯ ಮೇ |
ಲಾಸು ಸಂಯವಿಗಳು ಸಯೋಗಿಗಳೈವರಲ್ಲಿರಲು ||
ಆ ಸುಯೋಧನನಾತ್ಮಜನ ಮಗ | ನೇಸು ಪಾಪಿಯೊಯಿವರಿಹುದನರಿ |
ದಾಸುರದಿ ಕುಯವರನು ಬಂದನು ಹಗೆಗೊಲೆವೆನೆಂದು || ४१ ||

ಬಂದರೇ ನೀವಿತ್ತ ಬಂಧುವ | ಕೊಂಡು ಪಡೆದೈಶ್ವರ್ಯದೊಪ್ಪುವು |
ಹಿಂದೆ ಮುಂದೆಡಬಲದೊಳಿಲ್ಲ ನಿಜಾನುಜರ ಕೈಯ ||
ಅಂದಿನಾಗದೆಗಾಂಡಿವಾದಿಯ | ನಿಂದದಾರ್ಸೆಳಕೊಂಡ….. |
…ರಿವನಿಂ ಮುತ್ತು ನಂದಿತೊ ಹೇಳು ಹೇಳೆಂದ || ४२ ||

ಎಂದು ಕಡುಕೋಪದಲಿ ಬಾಯಿಗೆ | ಬಂದ ತೆರದಲಿಗೆಡೆದು ಮಿಗೆ ಸಾ |
ರ್ತಂದನಂತರ್ಮುಖರು ತಾವವನೆನಲು ಮುಳಿಸುವರೆ ||
ಒಂದು ತುಪ್ಪದ ಕೊಡನ ಮೇಗಿಲಿ | ನಿಂದೊಡ………….. |
………ರೆಕೆಡುವುದಾವುದು ಭೂಪ ಕೇಳೆಂದ || ४४ ||

ನೆಟ್ಟನಾ ತ್ರಿಭುವನದ ರಾಜ್ಯಕೆ | ಪಟ್ಟಗಟ್ಟುವ ತೆರದಿ ನೊಸಲಿಗೆ |
ಕಟ್ಟಿದನು ಕಡುಗಾಸಿ ಕೆಂಡವನೊಗುವ ಕರ್ಬೊನ್ನ ||
ಪಟ್ಟವನು ಕೌಂತೇಯಮುನಿಗಡಿ | ಗಿಟ್ಟನಾತೆರದಿಂದ…….. |
…………………………………….ಗಳನು || ४೫ ||

ಪರಮ ಶಾಂತರಸಾಂಬುಧಿಯೊಳಗೆ | ಪಿರಿದು ವಸ್ತ್ರವನೆಣ್ಣೆಯಿಂತೊ |
ಯ್ದಿರದೆ…………………… ||
………….. | ………………. |
……………………………… || ४೬ ||

… … ಗ್ನಿಯ | ಬಳುಸುದಿವ್ಯ ಮುನೀಂದ್ರರಿಗೆನಿ |
ರ್ಮಲಿನ ಶಾಂತರನಾಂಬುನಿಧಿಯೊಳಗಾತ್ಮ ಮುಳುಗಿರಲು ||
ಒಳಗೆ ಶುಕ್ಲಧ್ಯಾನ ಪಾವಕ | ವಿಳೆಯಲುರಿದುದು ಘಾತಿವನವದು |
ತೊಲಗೆಕೆಟ್ಟವು ಚಕಚಕಿಪ ಹೇಮದವೊಲಿಪ್ಪಿದರು || ४೭ ||

… … ನುತ | … … …. |
ಚತುರಿನಿಂದುದಯಿಸಲು ಕೇವಲ ಪೂಜೆಗೈತಂದ ||
ಶತ ಮುಖನ ಸುರದುಂದುಭಿಧ್ವನಿ | ಗತಿ ಬೆದರಿ ಕುಯವರನು ಸಿಂಗದ |
ರುತಕೆ ಕರಿಬೆದರೋಡುವಂತೋಡಿದನು ಕಂಗೆಟ್ಟು || ४೮ ||

ಸುರಪನಾ ಮೂವರು ಜಿನೇಂದ್ರರ | ಚರಣಗಳನರ್ಚಿಸಿ … … |
… … ನಪಹರಿಸಿ ಮೋಕ್ಷದಲಿ ||
ಸ್ಥಿರತೆವಡೆದರು ನಕುಲ ಸಹದೇ | ವರು ಶುಭಧ್ಯಾನದಿ ತನುವನುಳಿ
ದರು ಸುಖದ ಸರ್ವಾರ್ಥಸಿದ್ಧಿಗೆ ಸಂದರೆಂದ || ೪೯ ||

ಇತ್ತಲಾ ಪ್ರದ್ಯುಮ್ನ ಜಿನಮುನು | ಪೋತ್ತಮರು ವರಶಂಬುಕುವರ ದ |
ಯಾತ್ತ ಯತಿಗಳ ಒಡನೆನೆರೆದುಜ್ಜಂತಗಿರಿಯಲ್ಲಿ ||
ಪೆತ್ತರಾಮೋಕ್ಷ …. …. | …. ತೆರನೆನುತವರ … |
ದತ್ತ ಗಣಧರರೆಂದರಾ ಶ್ರೇಣಿಕ ನೃಪಾಲಂಗೆ || ೫೦ ||

ಗದ್ಯ

ಮತ್ತಮಿತ್ತ ಅನಂತ ಚತುಷ್ಟಯ ಚತುಷ್ಟಯ ಲಕ್ಷ್ಮೀಸಮಾಶ್ಲಿಷ್ಟನುಮಷ್ಟಮಹಾ ಪ್ರಾತಿಹಾರ್ಯಾ ಪ್ರಕೃಷ್ಟನು ಮಷ್ಟೋತ್ತರ ಸಹಸ್ರ ನಾಮಾರ್ಹನುಮಷ್ಟಾದಶ ದೋಷದೂರನುಂ ಸಪ್ತರ್ಧಿ ಸಮದಯ (ವಿನು) ತೋಪಾಸ್ಯನುಂ ಚತುಸ್ತ್ರಿಂಶದತಿಶಯ ಸಮೇತನುಂ ಪಂಚ ಮಹಾ ಕಲ್ಯಾಣ ವಿಭೂತಿನಾಥನುಂ ಶತೇಂದ್ರ ಮುನೀಂದ್ರ ವಂದ್ಯನುಂ ಕಾಯಾಕಾರಪರಿಣತ ತ್ರಿಲೋಕಾಗ್ರ ಪುಣ್ಯಪುದ್ಗಲ ಪುಂಜಾಯ ಮಾನ ಪರಮೌದಾರಿಕ ಕಾಯನುಂ ಸಿದ್ಧಾಶೇಷಸಾಧ್ಯನುಂ ಬುದ್ಧಸಮಸ್ತ ಬೋಧ್ಯನುಂ ಆಗಿರ್ದ ಜಗನ್ನಾಥನಾ ಸ್ಥಾನದೊಳು ವರದತ್ತ ಗಣಧರ ಪ್ರಮುಖೈಕಾದಶ ಗುಣೌಗ್ರಣಿಗಳುಂ ನಾಲ್ಸಾಸಿರ್ವರ್ದಶಪೂರ್ವಧರರುಂ, ತತ್ಪ್ರಮಾಣ ಕೇವಲ ಜ್ಞಾನಿಗಳುಂ ಸಾಸಿರದ ನೂರ್ವರ್ವೈ ಕ್ರಿಯಾರುದ್ಧಿ ಸಮೃದ್ಧರು ಮೊಂಬೈನೂರ್ವರ್ ಮನಃಪರ್ಯಯ ಜ್ಞಾನಿಗಳುಂ ರಾಜೀಮತ್ಯಾರ್ಯಿಕಾ ಪ್ರಭೃತಿ ನಾಲ್ವತುಸಾಸಿರ ನಿರತಿಯರುಂ ಲಕ್ಷೈಕ ಶ್ರಾವಕರುಂ ಮೂರುಲಕ್ಷ್ಮ ಶ್ರಾವಿಕೆಯರುಂ ಅಸಂಖ್ಯಾತ ದೇವದೇವಿಯರುಮಸಂಖ್ಯಾತ ತಿರ್ಯಕ್ಸಮಾಜಮುಂ, ಬೆರಸಿಮ ಮೋಘವಾಗಮೃತ ಪೀಯೂಷವರ್ಷಮೇಘಂ, ಸೌರಾಷ್ಟ್ರ ಮಹಾರಾಷ್ಟ್ರ ಕುಂತಳಾವಂತೀ ವಿದರ್ಭ ಪಾಂಚಲ ಕರುಜಾಂಗಳಾದಿ ವಿಷಯಂಗಳುಂ ಧರ್ಮತೀರ್ಥ ಪ್ರವರ್ತನಾರ್ಥಂ ವಿಹಾರಿಸುತ್ತ – ಶಿಷ್ಯ ಭವ್ಯ ವನಂಗಳೊಳಗಣ್ಯ ಪುಣ್ಯ ಪೀಯಾಷವರ್ಷಮಂಭೋರ್ಗರೆದು ನಿಜಾಯುಷ್ಯದೊಳೇಕ ಮಾಸಮುಳಿದುದೆನೆ ಬಂದೂರ್ಜಯಂತ ಗಿರಿವರಾದಿತ್ಯಕದೊಳೊಂದತ್ಯಂತ ಪಾವನ ಸ್ಫಟಿಕ ಶಿಲಾತಳ ಪ್ರದೇಶದೊಳು ವಿಸರ್ಜಿತ ವಿಹರಣ ವಿಧಾನನುಮಾಗಿಯೈನೂರ ಮೂವತ್ತಮೂವರ್ಪಂಚಮಗತಿ ಪ್ರಾಪ್ತರ್ಬೆರಸು ಪೂರ್ವಾಭಿಮುಖದೊಳ್ ಪಲ್ಯಂಕಾಸನದಿಂ ಯೋಗ ನಿರೋಧವಾಗಿ ಲೋಕತ್ರಯಾರಾಧ್ಯಂ ನೇಮಿತೀರ್ಥಂಕರ ಸೂಕ್ಷ್ಮಕ್ರಿಯಾ ಪ್ರತಿಪಾದಿಯೆಂಬ ತ್ರಿತೀಯ ಶುಕ್ಲಧ್ಯಾನಮನೊಳಕೆಯಿದಂತರ್ಮುಹೂರ್ತದಿಂ ಚರಮಾಂಗ ತ್ರಿಗುಣ ಬಾಹುಲ್ಯದಿನೇಕ ಸಮಯದೊಳ್ ಮುಂಪೇಳ್ದ ಬಾಹುಲ್ಯಾಯಾಮದಿಂ ಜವಳಿಗದವಿನ ಪರಿಜಿನಿಂ ಜೀವಪ್ರದೇಶ ಪ್ರಸರ್ಪಣಮಷ್ಟಕನಾಟ ಸಮುದ್ಘಾತಮುಮಂ – ಮೂರನೆಯ ಶಮಯ ದೊಳ್ವಾಯುತ್ರ……-ವಶೇಷ ಲೋಕತ್ರಯ, ಲೋಕಾಕಾಶ, ಜೀವಪ್ರದೇಶ ಪ್ರವರ್ತನಮಪ್ಪ ಪ್ರಸರ ಸಮುದ್ಘಾತಮುಮಂ, ನಾಲ್ಕನೆಯ ಸಮಯದೊಳಂ ಸಕಲ ಲೋಕವ್ಯಾಪ್ತಿ ಜೀವಪ್ರದೇಶ ಪ್ರವರ್ತಮಪ್ಪ ಲೋಕಪೂರಣ ಸಮುದ್ಘಾತಮುಮಂ ನೆರಪಿ ಮತ್ತಂಯುತ್ಕಮ ಪ್ರವರ್ತಿಕ ತತ್ತುದುಪಸಂ… ತಿಕ್ರಿಯಂ ಘಾತಿಕಾ ಘಾತಿ ಸ್ಥಿತಿ ಅನುಭಾಗಂ ಸಂಪ್ರಾಪ್ತ ಪೂರ್ವತಾಯ ಪ್ರಮಾಣೋಕ್ತ ಪ್ರದೇಶನಾಯಸ್ಥಿತಿಯೊಳುಳಿದ ಘಾತಿಸ್ಥಿತಿಯಂ ಸಮಾನಂಗೈದು ಬಳಿಯನಂತ ಮುಹೂರ್ತದಿಂಬಾದರ ಮನೋವಚನೋಚ್ಛಾಸಾದಿಗಳಂ ನಿರೋಧಿಸಿ ಬಳಿಯುಂ ಸೂಕ್ಷ್ಮ ಕಾಯನಾಗಿ ಪಂಚಘ್ನಕ್ಷರೋಚ್ಚರಣ ಸಮಯದೊಳು ಅಯೋಗಿಕೇವಲ ಗುಣಸ್ಥಾನ ಸ್ಥಿತವಿವರತ ಕ್ರಿಯಾನಿವೃತ್ತಿಯೆಂಬ ನಾಲ್ಕನೆಯ ಪರಮಶುಕ್ಲಧ್ಯಾನದಿಂ ಶೇಷಘಾತಿಗಳಂ ನಿಮೂಲನಂ ಗೈದು ತ್ರಿಲೋಕ ಸ್ವಾಮಿ ನೇಮಿತೀರ್ಥೇಶ್ವರಂ, ಆಷಾಡ ಶುದ್ಧ ಸಪ್ತಮಿಯ ದಿನ ಪೂರ್ವಾಹ್ಣದೊಳ್ ನಾಲ್ವತೈದು ಲಕ್ಷ ಯೋಜನ ವಿಸ್ತಾರಮಾದ ಮನುಷ್ಯ ಕ್ಷೇತ್ರ ಪ್ರಮಾಣ ವಪ್ಪೀಷತ್

ಪ್ರಾಗ್ಭಾರ ಮೆಂಬಷ್ಟಮ ಪೃಥ್ವಿಯೊಳಷ್ಟ ಯೋಜನೋತ್ಸೇದಮಾಗಿ ಧವಲ ಛತ್ರಕಾರವಾಗಿ ತೊಳತೊಳಪ ಸಿದ್ಧಶಿಲಾಗ್ರದೊಳ್ ಲ್ಲೋಕಾಗ್ರವಾಗಿರ್ದ ತನುವಾತದೊಳೇಕ ಸಮಯದೊಳ್ಪೋಗಿ ನಿಜಪರ ಮೌದಾರಿಕ ದಿವ್ಯಶರೀರದಿನಿತುಗುಂದಿದಾಕಾರದಿಂ ನೆಲಸಿ ಆ ಶರೀರ ಜೀವಘನಾಕಾರದಿಂ ಛಾಯಾ ಪ್ರತಿಮೋಪನು ಸಾಕಾರ ನಿರಾಕಾರರುಮತೀಂದ್ರನು ಗೋಚರರುಂ ಕ್ಷಾಯಿಕ ಸಮ್ಯಕ್ತ್ವ ಕೇವಲಜ್ಞಾನ ಕೇವಲದರ್ಶನ, ಅನಂತವೀರ್ಯ, ಪರಮ ಸೂಕ್ಷ್ಮತ್ವ ಅವಗಾಹನತ್ವಾಗುರು ಲಘುತ್ವಾವ್ಯಾಭಾಧಂಗಳೆಂಬಷ್ಟ ಗುಣ ವಿಶಿಷ್ಟರುಂ ನಿತ್ಯರುಂ ಕೃತಕೃತ್ಯರುಂ ಪುನರ್ಬಂಧರಹಿತರುಂ ಸುಖದ ಕಣಿಗಳುಮಷ್ಟ ಸಿದ್ಧಪರಮೇಷ್ಠಿಗಳಾದರನ್ನೆಗಮಿತ್ತಲು.

**ಭಾಮಿನೀ ಷಟ್ಪದಿ**

ಸುರಪನಾಸನ ಕಂಪದಿಂದರಿ |
ದಿರದೆ ನೇಮಿ ಜಿನೇಶ್ವರನು ದು |
ರ್ದರದಘಾತಿಯ ಕೆಡಿಸಿ ಮುಕ್ತಿಶ್ರಿಗೆ ಪತಿಯಾದ ||
ತೆರನನಾಗಳೆ ಶಚಿಸಹಿತ ಸುರ |
ಕರಿಯಡರಿಯೆ ಚತುರ್ನಿಕಾಯಾ |
ಮರರು ಸಹಿತುಜ್ಜಂತಗಿರಿಗೈದಿದನು ಭಕುತಿಯಲಿ ||

……….. …… |
……….. …… |
……….. …… ….. ||
……….. …… |
……….. ……. …… ||

|| ಗ್ರಂಥಂ ಮಂಗಲಂ ಸಮಾಸ್ತಂ ||

## ಶಾರದಾ ವಿಲಾಸಂ

## ದ್ವಿತೀಯ ಪರಿಚ್ಛೇದಂ

ಧ್ವನಿವ್ಯಂಗ್ಯಪ್ರಕರಣಂ

**ವ.** ಕಾವ್ಯವಿಶೇಷಭೇದಂಗಳಂ ಪೇಟ್ವೆನದೆಂತೆಂದೊಡೆ -

**ಸೂ.** ಆವೆಡೆಯೊಳಂ ವಾಚ್ಯದತ್ತಣಿಂದಧಿಕಮಪ್ಪ ವ್ಯಙ್ಗ್ಯಮನುಳ್ಳ **ದುತ್ತಮಕಾವ್ಯಂ.** ಆ ಕಾವ್ಯಮುಂ **"ಧ್ವನಿ"** ಯೆಂಬ ಪೂರ್ವಾಚಾರ್ಯರಿಂ ಪೇಟಲ್ಪಟ್ಟಿತು.

**ಧ್ವನಿಗುದಾಹರಣೆ**

*ಎಲೆ ಗಡ ಪಾಂಥ ಕೆಯ್ಗಮರ್ದ ಪುಸ್ತಕವೇನಿದು ಪ್ರಶ್ನೆವೇಜ್ವೆಯೋ*
*ವಿಲಸಿತವೈದ್ಯಕೋವಿದನೊ ನಿಲ್ ನುಡಿ ವೈದ್ಯನೆಯಾದೊಡತ್ತೆಯರ್*
*ಸಲೆ ನಿಶೆಯಲ್ಲಿ ಕಾಣಳಿನಿತೌಷಧಿವೇಟ್ ಪತಿಯೂರ್ಗೆ ಪೋಗಿ ತಾಂ*
*ನೆಲಸಿದನಲ್ಲಿ ಬರ್ಪ ದಿನವಾವುದು ಪ್ರಾಶ್ನಿಕನಾದೊಡಿಂತೆ ಪೇಟ್ ೧*

**ಸೂ.** ಆವುದಾನೊಂದೆಡೆಯೊಳ್ ವಾಚ್ಯಾರ್ಥದತ್ತಣಿಂದನತಿಶಯಮಾಗಿ ತೋಱುತಿರ್ಪ ವ್ಯಙ್ಗ್ಯಮನುಳ್ಳುದು **ಮಧ್ಯಮಕಾವ್ಯಂ.**

**ಇದರ್ಕುದಾಹರಣೆ**

*ನಡೆವ ಸುವರ್ಣಪುತ್ರಿಕೆಯಿದೆಂದೆನೆ ನೀರ್ವೊಟೆಗೊರ್ವಳಟ್ಟೆಯಿಂ*
*ದಡಿಯಿಡುವನ್ನೆಗಂ ಪದದಿನೊಯ್ಯನೆ ಹಬ್ಬೆ ಯದೊಂದು ದಂಡಮಂ*
*ಪಿಡಿದಿದಿರ್ವರ್ಪನಂ ಪದೆದು ನಿಟ್ಟಿಸಿ ಮೆಯ್ಮಱವಟ್ಟಳ್ ಕರಂ*
*ತಡಬಡಿಸುತ್ತೆ ನಿಂದು ಪಟೆಗಾಜಿನ ಪುತ್ತಳಿಯಂತಿರೊಪ್ಪಿದಳ್ ೨*

**ವ.** ಇಲ್ಲಿ ಹಬ್ಬೆಯಂ ಕೊಂಡಿದಿರ್ವರ್ಪಿನಂ ಕಂಡು ಕಾಂತೆ ಕಂದಿದಳೆಂಬ ವಾಚ್ಯಾರ್ಥದತ್ತಣಿಂ ಸಂಕೇತಗೃಹದಿಂ ಮರಳಿದನೆಂಬ ವ್ಯಙ್ಗ್ಯಾರ್ಥಂ (ವಾಚ್ಯಾರ್ಥಮಂ) ಮೀಱದು; ಮತ್ತಮದರ್ಕೆ.

*ವಿಮಳತೆವೆತ್ತ ನೀರ್ವೊಟೆಯ ತೀರದೆ ಚಾರುನಿಕುಂಜಪಙ್ತಿಯೊಳ್*
*ಸಮನಿಸೆ ಬೇಗೆಗಿಚ್ಚುಳುರ್ವ ಕೇಸುರಿಯಾಸುರಮಾಗೆ ಕಂಡು ವಿ*
*ಭ್ರಮಮಟಿದಿರ್ಪುಗುಂದಿ ಬಸಿಱಂ ಪೊಸೆದೊತ್ತಿನೊಳೊಂದಿ ನಿಂದರಂ*
*ತೆಮರಿ ತೆರಳ್ದ ಕಾರ್ಯಮಣಮಿಲ್ಲದೆ ಬಿಣ್ಬಟೆದೊರ್ವಳೊಪ್ಪಿದಳ್ ೩*

**ವ.** ಇಲ್ಲಿ ತನ್ನ ಸಂಕೇತಸ್ಥಾನಮಟಿದುದೆಂಬ ವ್ಯಙ್ಗ್ಯವಾಚ್ಯಮಂ ಮೀಱಲಾಱದು.

**ಸೂ.** ಶಬ್ದಾರ್ಥೋಭಯಚಿತ್ರಮಾಗಿ ವ್ಯಙ್ಗ್ಯರಹಿತಮಪ್ಪು**ದಧಮಕಾವ್ಯಂ.**

**ಇದರ್ಕುದಾಹರಣೆ**

*ಅತುಳೋತ್ತಾಳತಿಮಿಂಗಿಳಪ್ರಬಳಪಕ್ಷೋದ್ಧೂತವಾತಪ್ರಕಂ*
*ಪಿತಕುಕ್ಷಿ್ಲಸಮಗ್ರವಿಗ್ರಹಘನಗ್ರಾಹಗ್ರಹವ್ಯಗ್ರವಿ*
*ಗ್ರತವಕ್ರೋದರಭಾಗಘೂರಿಕಮರಪ್ರಕ್ಷಿಪ್ತಕಲ್ಲೋಲಕ*
*ಲ್ಪಿತಕೋಳಾಹಳಕಲ್ಪಕಾಲರಭಸಪ್ರಸ್ಪರ್ಧಿಯಂ ವಾರ್ಧಿಯಂ ೪*

*ತಿಳಿನೀರಂ ತೆಂಗು ರಂಭಾಪ್ರತತಿಗೆಜೆಯೆ ರಂಭಾಳಿಗಳ್ ತಮ್ಮ ಸಾರಾ*
*ವಳಿಯಂ ಪುಂಡ್ರೇಕ್ಷುವಾಟಾವಳಿಗೆ ಸುರಿಯೆ ಪುಂಡ್ರೇಕ್ಷುಗಳ್ ತಮ್ಮ ಸಾರಂ*

*ಕಳಮಕ್ಷೇತ್ರಕ್ಕೆ ಪೂರಂಬರಿಯಿಸೆ ಕಳಮಶ್ರೇಣಿಗಳ್ ತಮ್ಮ ಪಾಲಂ*
*ಗಿಳಿವಿಂಡಿಂಗೀಯೆ ಚೆಲ್ವಾದುದು ಪುರಬಹಿರುದ್ಯಾನಕೇದಾರಜಾಳಂ ೫*

*ಕೊಂಕಣಚಕ್ರವರ್ತಿ ಜಯಕೇಶಿನೃಪಾಲನೊಳಾಂತ ಭೂಭುಜರ್*
*ಕಂಕಣಚಿತ್ರಪತ್ರಘನಮಾರ್ಗಣಸಂಯುತರಾದರಾನತರ್*
*ಕಂಕಣಚಿತ್ರಪತ್ರಘನಮಾರ್ಗಸಂಯುತರಾದರೋಡಿದರ್*
*ಕಂಕಣಚಿತ್ರಪತ್ರಘನಮಾರ್ಗಣಸಂಯುತರಾದರದ್ಭುತಂ ೬*

**ಶಬ್ದಾರ್ಥಸ್ವರೂಪನಿರೂಪಣಂ (ಶಬ್ದವೃತ್ತಿ ವಿವರಣಂ)**

**ವ. ವಾಚಕ, ಲಕ್ಷಣ, ವ್ಯಂಜಕ**ಮೆಂದು ಶಬ್ದಂ ಮೂದೆಱಂ. ಅವರ್ಕೆ ವಿಷಯಮಾದರ್ಥಂ **ವಾಚ್ಯ, ಲಕ್ಷ್ಯ, ವ್ಯಙ್ಗ್ಯ**ಮೆಂದು ತ್ರಿವಿಧಂ. ಮಱೆಯಿಲ್ಲದೆ ಸಂಕೇತದಿಂದರ್ಥಮನಱಿಪುವುದು **ವಾಚಕಂ;** ಅದು **ಜಾತಿ, ಗುಣ, ಕ್ರಿಯಾ, ದ್ರವ್ಯ, ಯದೃಚ್ಛಾ** ಶಬ್ದಮೆಂದಯ್ದು ತೆಱಂ. ಅದರ್ಕುದಾಹರಣೆ - ಪಾರ್ವಂ, ಕೆಂಚಂ, ದೇವಾಲಯಕೆ ಪೋಗುತುಂ, ದಂಡಿ, ವಿಷ್ಣುಶರ್ಮಂ. ಶಬ್ದಕರೆಬರ್ ಸಾಮಾನ್ಯದಲ್ಲಿ ಸಂಕೇತಮಂ ಪೇೞ್ವರ್ [ಅರೆಬರ್ ವಿಶೇಷದೊಳ್ ಪೇೞ್ವರ್] ಅರೆಬರುಭಯದಲ್ಲಿ ಸಂಕೇತಮಂ ಪೇೞ್ವರ್, ಅದಱೊಳ್ ಕಥಂಚಿತ್ಸಾಮಾನ್ಯಂ, ಕಥಂಚಿದ್ವಿಶೇಷಂ, ಕಥಂಚಿದುಭಯಮೆಂಬುದೆಮಗಂಗೀಕಾರ್ಯಂ, ತದ್ವಿಸ್ತರಮಂ ಗ್ರಂಥವಿಸ್ತರ ಭಯದಿಂ ಪೇೞ್ದುದಿಲ್ಲ, ಬೇಕಾದವರ್ "ಕಾವ್ಯಪ್ರಕಾಶಿಕೆ" "ಸಾಹಿತ್ಯ ಸುಧಾರ್ಣವಂ" ಮುಂತಾದುವ ಱೊಳ್ ನೋಡಿಕೊಂಬುದು.

**ಸೂ.** ಮುಖ್ಯಾರ್ಥಬಾಧೆಯಾಗೆ, ತದ್ಯೋಗಮುಂಟಾಗೆ, ರೂಢಿಪ್ರಯೋಜನ ದತ್ತಣಿಂದರ್ಥಾಂ ತರಮಂ ತೋರ್ಪುದು **ಲಕ್ಷಕ**ಮೆನಿಕ್ಕುಂ. [ವ್ಯಙ್ಗ್ಯಮಿಲ್ಲದುದು ರೂಢಿಯೆನಿಕ್ಕುಂ] ವ್ಯಙ್ಗ್ಯಸಹಿತಮಾದುದು ಪ್ರಯೋಜನಮೆನಿಕ್ಕುಂ -

ರೂಢಿಗುದಾಹರಣೆ - ಕುಶಲಪ್ರವೀಣಾದಿಕಂಗಳ್, **ಕುಶಲ**ನೆಂದು ಪುಲ್ಗೊಯ್ವನ ಪೆಸರ್, ಅದಂ ಬಾಧಿಸಿ ಚದುರಂಗೆ ನಾಮಮಾದುದು ಪ್ರವೀಣನೆಂದು ಒಳ್ಳೆಯ ವೀಣೆಯುಳ್ಳವನ ಪೆಸರ್, ಅದಂ ಬಾಧಿಸಿ ಒಳ್ಳೆಯ ಪ್ರೌಢಂಗೆ ನಾಮಮಾದುದು.

**ಪ್ರಯೋಜನ ಲಕ್ಷಣೆಯ** ವಿವರಣಮಂ ಪೇೞ್ವೆನದೆಂತೆಂದೊಡೆ (೧) **ಉಪಾದಾನ ಲಕ್ಷಣೆ**ಯೆಂದುಂ, (೨) **ಲಕ್ಷಣಲಕ್ಷಣೆ**ಯೆಂದುಂ, (೩) **ಗೌಣ ಸಾರೋಪಲಕ್ಷಣೆ** ಯೆಂದುಂ, (೪) **ಗೌಣಸಾಧ್ಯವಸಾನಲಕ್ಷಣೆ**ಯೆಂದುಂ (೫) **ಶುದ್ಧಸಾರೋಪಲಕ್ಷಣೆ**ಯೆಂದುಂ (೬) **ಶುದ್ಧಸಾಧ್ಯವಸಾನಲಕ್ಷಣೆ**ಯೆಂದುಂ ಪ್ರಯೋಜನಲಕ್ಷಣೆಗಳಾಱು ತೆಱಂ ಅವು ಗೂಢಾಗೂಢ ಭೇದದಿಂ ಪನ್ನೆರಟ್ತೆಱಂ.

(೧) **ಅಲ್ಲಿಯುಪಾದನಲಕ್ಷಣೆಯೆಂತೆಂದೊಡೆ –** ತನ್ನ ಪ್ರಸಿದ್ಧ ನಿಮಿತ್ತಂ ತನ್ನು ಪಾದಾನ ದತ್ತಣಿಂ ಪರಾಕ್ಷೇಪಮಂ ಮಾೞ್ಪುದು **ಉಪಾದಾನಲಕ್ಷಣೆ**ಯೆನಿಕುಂ. ಅದೆಂತೆಂದೊಡೆ - "ಲಕ್ಷಸಬಳಂ ಬಂದುದು" ಎಂಬಲ್ಲಿ ಅಚೇತನಮಪ್ಪ ಸಬಳಂಗಳ್ಗೆ ಗಮನಮಿಲ್ಲಾದು ದಱಿಂ ಮುಖ್ಯಾರ್ಥಬಾಧೆಯಾಗೆ ಸಬಳಮಂ ಪಿಡಿದ ವೀರಭಟರ್ ಬಂದರೆಂಬು ದರ್ಥಂ - ಸಬಳಿಗನಾಧಾರಂ, ಸಬಳಮಾಧೇಯಂ, ಅದಱಿಂದಾಧಾರಾ ಧೇಯ ಭಾವಸಂಬಂಧಮೆನಿಕ್ಕುಂ. ಶಸ್ತ್ರಬಾಹುಳ್ಯರೌದ್ರಾದಿಕಂಗಳ್ ಪ್ರಯೋಜನಂ. ಇದರ್ಕು ಪಾದಾನಲಕ್ಷಣೆಯೆಂದ**ಜಹಲ್ಲಕ್ಷಣೆ**ಯೆಂದು ನಾಮಾಂತರಂ.

(೨) **ಇನ್ನು ಲಕ್ಷಣಲಕ್ಷಣೆಯೆಂತೆಂದೊಡೆ –** ತನ್ನ ಸಂಬಂಧಿಯಾದರ್ಥಂ ನಿಮಿತ್ತಮಾಗೆ ತನ್ನರ್ಥಮಂ ಬಿಡಲ್ಪಟ್ಟುದಾವುದಾನೊಂದುಂಟು ಅದು **ಜಹಲ್ಲಕ್ಷಣೆ ಯೆನಿಕುಂ,** ಲಕ್ಷಣಮೆಂದು ತನ್ನರ್ಥಮಂ ಪರಾರ್ಥದೊಳಾರೋಪಣಂ ಮಾೞ್ಪುದಱಿಂ ಕಾಣಲ್ಪಟ್ಟ ಲಕ್ಷಣೆ ಲಕ್ಷಣಲಕ್ಷಣೆಯೆನಿಕ್ಕುಂ, ಇದರ್ಕೆ **ಜಹಲ್ಲಕ್ಷಣೆ**ಯೆಂದುಂ, **ಸಾಂತರಾರ್ಥವಿಷಯ ಲಕ್ಷಣೆ**ಯೆಂದುಂ ಶಾಸ್ತ್ರಾಂತರದೊಳ್ ಪರ್ಯಾಯನಾಮಂ,

ಅದರ್ಕುದಾಹರಣೆ - "ಪೊಟೆಯೊಳ್ ಪೊಟಿಲ್" ಎಂಬಲ್ಲಿ ಜಲದೊಳ್ (ಪೊಟಿಲ್) ಪುರಮಸಂಭಾವ್ಯ ಮಾದುದಱಿಂ ಮುಖ್ಯಾರ್ಥಬಾಧೆ, ತತ್ಸಂಬದ್ಧಮಪ್ಪ ತಡಿಯೊಳ್ ಪೊಟಿಲ್ ಎಂಬುದರ್ಥಂ, ಶೈತ್ಯಪಾವನಾದಿಕಂಗಳ್ ಪ್ರಯೋಜನಂ-

(೩) **ಗೌಣಸಾರೋಪಲಕ್ಷಣೆ**ಯೆಂದೊಡೆ - ಆರೋಪ್ಯಾರೋಪಕಂಗಳ್ ಆವುದಾನೊಂದೆಡೆಯೊಳ್ ಭಿನ್ನಮಾಗಿ ಪೇೞಲ್ಪಟ್ಟುವು ಸ್ವಭಾವದಿಂದಾಲಕ್ಷಣೆ **ಗೌಣ ಸಾರೋಪಲಕ್ಷಣೆ** ಯೆನಿಕುಂ - ಅದರ್ಕುದಾಹರಣೆ - "ಪಾರ್ವನೆತ್ತೆಂ" ಬಲ್ಲಿ ಪಾರ್ವಂಗೆ ಪಾದ ಚತುಷ್ಟಯಂ ಶೃಂಗದ್ವಯಾದಿಗಳಸಂಗತಮಾದುದಱಿಂ ಮುಖ್ಯಾರ್ಥ ಬಾಧೆ, ಸ್ಥೂಲ ಸತ್ವಾದಿಕಂಗಳ್ ಲಕ್ಷ್ಯಂ, ಜಾಡ್ಯಮಾಂದ್ಯಾದಿಕಂಗಳ್ ಪ್ರಯೋಜನಂ.

(೪) **ಗೌಣಸಾಧ್ಯವಸಾನಕ್ಕೆ** ಉಪಮೇಯಂ ಪೋಗೆ ಉಪಮಾನಂ ಉೞಿದೊಡೆ **ಗೌಣ ಸಾಧ್ಯವಸಾನ**ಮೆನಿಕ್ಕುಂ. "ಅವಳ್ ತಾವರೆಗೊಳದೊಳಡಂಗಿದೊಳಡರಸಿದೆಂ" ಎಂಬಲ್ಲಿ ಮುಖ್ಯಾರ್ಥಬಾಧೆ, ತಾವರೆಯಂತಪ್ಪ ಮುಖಮನುಳ್ಳವಳೆಂಬುದು ಸಾದೃಶ್ಯಂ. ಪದ್ಮಿನಿಜಾತಿಸ್ತ್ರೀಯೆಂಬುದು ವ್ಯಙ್ಗ್ಯಂ.

(೫) **ಶುದ್ಧಸಾರೋಪಲಕ್ಷಣೆ**ಯಂತೆಂದೊಡೆ - ಸಾದೃಶ್ಯ ಸಂಬಂಧಮಿಲ್ಲದೆ ಸಂಬಂಧಾ ರೋಪದಿಂ ತಾದಾತ್ಮ್ಯಮಾಗೞಿವುದು **ಶುದ್ಧಸಾರೋಪಲಕ್ಷಣೆ**ಯೆನಿಕ್ಕುಂ. "ಆವ ನೊರ್ವನ ಖಡ್ಗಂ ದೇವಸ್ತ್ರೀಯರ್ಕಳ ಮದುವೆಯಲ್ಲಿ ಕೆಯ್ಗೂಡುವುದವಂ" ಪ್ರಯೋಜ್ಯ ಪ್ರಯೋಜಕಭಾವಮೆಂಬುದು ಸಂಬಂಧಂ. ಧರ್ಮವಿಜಯಮೆ ವ್ಯಙ್ಗ್ಯಂ.

(೬) **ಶುದ್ಧಸಾಧ್ಯವಸಾನಮೆಂ**ತೆಂದೊಡೆ - ಇದು ಕೆಯ್ಗೂಡದು ಎಂಬಲ್ಲಿ ಎಲ್ಲಂ ಪೂರ್ವ ದಂತೆ ಭೇದಂ - ವಿಶೇಷಂ ಗೂಢವ್ಯಙ್ಗ್ಯಗಳಾಱವರನೀ ತೆಱದಿನೂಹಿಸಿ ಕೊಳ್ವುದು -

ಅರೆಬರ್ **ಜಹದಜಹಲ್ಲಕ್ಷಣೆ**ಯಂ ಪೇೞ್ವರದೆಂತೆಂದೊಡೆ - "ಗ್ರಾಮಂ ಬಂದುದು, ವನಂ ಪೂತುದು, ನಗರಂ ಬೆಂದುದು, ಇವು ಮುಂತಾದುವಱೊಳ್ ಗ್ರಾಮ ವನ ನಗರಂಗಳ್ ಏಕದೇಶದಿಂ ಬಂದುದು ಪೂತುದು ಬೆಂದುದು. ಎಂಬಲ್ಲಿಯೆಲ್ಲಂ ಬಂದುದು, ಪೂತುದು, ಬೆಂದುದು, ಎಂಬರ್ಥಮಿಲ್ಲಾದುದಱಿಂ **ಜಹದಜಹಲ್ಲಕ್ಷಣೆ** ಯೆನಿಕುಂ.

ಇವು ಮೊದಲಾದ ಲಕ್ಷಣೆಗಳೊಳ್ ಅವಿನಾಭಾವಸಂಬಂಧಂ ಪೊಱಗಾಗಿ ಉೞಿದ ಸಂಬಂಧಂಗಳಿವಱೊಳೊಳವು - ಅನಿನಾಭಾವಸಂಬಂಧಮೆಂದೊಡೆ "ದೊಡ್ಡವನಪ್ಪ ದೇವದತ್ತಂ ಪಗಲಿನಲ್ಲಿ (ದಿವದಲ್ಲಿ) ಯೆಂದುಂ ಉಣ್ಣ" ನೆಂಬುದಱಿಂ "ರಾತ್ರಿಭೋಜನ ಮುಂಟೆಂ" ಬುದಱಿಯೆ ಬರುತ್ತಿರ್ದತ್ತದುಕಾರಣಂ ಇವು ಮುಂತಾದುವು ಲಕ್ಷಣೆಯಾಗುಗೆ ಎಂದೊಡೆ ಅವಿನಾಭಾವಮುಂಟಪ್ಪುದಱಿಂ ಲಕ್ಷಣೆಯಲ್ತು.

ತಾದಾತ್ಮ್ಯದೊಳ್ ಇಂದ್ರನಿಮಿತ್ತಮಾದಮರರ್ಗಿಂದ್ರನೆಂಬುದು. ಸ್ವಸ್ವಾಮಿ ಸಂಬಂಧ ದೊಳ್ ಅರಸಾಳನರಸೆಂಬುದು. ಅವಯವಾವಯವಿಸಂಬಂಧದೊಳ್ ತುದಿವೆರಲಂ ಪಿಡಿದು ಕೆಯ್ಯಂ ಪಿಡಿದನೆಂಬುದು. ತತ್ಕರ್ತೃ ಸಂಬಂಧದೊಳ್ ಚಿತ್ರಿಗನಲ್ಲದನಂ ಚಿತ್ರಮಂ ಬರೆವುದಱಿಂ ಚಿತ್ತರಿಗನೆಂಬುದು. ಇವು ಮೊದಲಾದುವಂ ನೋಡಿಕೊಂಬುದು.

ಅವಿನಾಭಾವಸಂಬಂಧಮಂ ಪರಿಹರಿಸಿದ ಕಥನಮೆಂತೆಂದೊಡೆ - "ಗೌರನು ಬಂಧ್ಯಃ" (ಪಶುವು ಕೊಲ್ಲಲ್ಪಡತಕ್ಕುದು) ಎಂಬ ಈ ಶ್ರುತಿವಾಕ್ಯದಿಂ ಗೋಜಾತಿಯೊಳ್ ವಧಬಂಧಾದಿ ಕಂಗಳ್ ಅಶಕ್ಯಮಾದುದಱಿಂ ಜಾತಿಯೊಡನವಿನಾಭಾವಮಾದ ವ್ಯಕ್ತಿಗಾಕ್ಷೇಪಂ. ಅದಱಿಂ ವ್ಯಙ್ಗ್ಯಮಿಲ್ಲಾಗಿ ಲಕ್ಷಣೆಯಲ್ತು -

**ಶಬ್ದಮೂಲವ್ಯಂಜಕಮೆಂತೆಂದೊಡೆ**

ಅನೇಕಾರ್ಥಮನುಳ್ಳ ಶಬ್ದಕ್ಕೆ ಸಂಯೋಗಾದಿಕಂಗಳಿಂದೇಕಾರ್ಥದೊಳ್ ನಿಯಮ ಮುಂಟಾಗರ್ಥಾಂತರಮಂ ತೋರ್ಪುದು ಶಬ್ದಮೂಲವ್ಯಂಜಕಮೆನಿಕುಂ-

**ಸಂಯೋಗಾದಿಕಂಗಳೆಂತೆಂದೊಡೆ**

**ಸಂಯೋಗ**ಮೆಂದುಂ, **ವಿಪ್ರಯೋಗ**ಮೆಂದುಂ, **ಸಾಹಚರ್ಯ**ಮೆಂದುಂ, **ವಿರೋಧ**ಮೆಂದುಂ, **ಅರ್ಥ**ಮೆಂದುಂ, **ಪ್ರಕರಣ**ಮೆಂದುಂ, **ಲಿಂಗ**ಮೆಂದುಂ, **ಅನ್ಯಶಬ್ದ ಸನ್ನಿಧಿ**ಯೆಂದುಂ, **ಸಾಮರ್ಥ್ಯ**ಮೆಂದುಂ, **ಔಚಿತ್ಯ**ಮೆಂದುಂ, **ದೇಶ**ಮೆಂದುಂ, **ಕಾಲ**ಮೆಂದುಂ, **ವ್ಯಕ್ತಿ**ಯೆಂದುಂ, **ಸ್ವರ**ಮೆಂದುಂ, ಇವು ಮೊದಲಾದುವು ಶಬ್ದಾರ್ಥಂಗಳ್ಗೆ ಸಂದೇಹಮಾದೊಡೆ ನಿಶ್ಚಯಮಂ ಮಾಳ್ಪುವು. ಅವರ್ಕೆ ಕ್ರಮದಿಂದುವಾ ಹರಣೆಗಳೆಂತೆಂದೊಡೆ. "ಶಂಖ ಚಕ್ರಾಂಕಿತ ಹರಿ ಬಂದ" ನೆಂಬಲ್ಲಿ ಹರಿಶಬ್ದಕ್ಕೆ ಸಿಂಹಾದ್ಯ ನೇಕಾರ್ಥಂಗಳುಂಟಾದೊಡಂ ಶಂಖಚಕ್ರಶಬ್ದ ಸಂಯೋಗದಿಂ ಕೃಷ್ಣನೆಂಬರ್ಥಮಾದುದು - "ಸೀತೆಯಿಂದಗಲ್ದ ರಾಮ" ನೆಂಬಲ್ಲಿ ರಾಮಶಬ್ದಕ್ಕೆ ಅನೇಕಾರ್ಥ ಮುಂಟಾದೊಡಂ ಸೀತಾವಿಯೋಗದಿಂದೆ ದಶರಥರಾಮನೆಂಬುದರ್ಥಂ - "ರಾಮ ಲಕ್ಷ್ಮಣರ್ ಸಂಗ್ರಾಮದೊಳ್ ಕೋದಂಡಮಂ ಪಿಡಿದ" ರೆಂಬಲ್ಲಿ ರಾಮಶಬ್ದಕ್ಕ ನೇಕಾರ್ಥ ಮುಂಟಾದೊಡಂ ಲಕ್ಷ್ಮಣಸಾಹಚರ್ಯದಿಂ ರಾಘವನೆಂಬುದರ್ಥಂ, – "ಕರ್ಣಾರ್ಜು ನರ್ ಕಾದಿದ" ರೆಂಬಲ್ಲಿ ಅರ್ಜುನ ಶಬ್ದಕ್ಕೆ ನಾನಾರ್ಥಮುಳ್ಳೊಡಂ ವಿರೋಧದಿಂ ಪಾರ್ಥನೆಂಬುದರ್ಥಂ - "ಮಕರಧ್ವಜದೇವಂ" ಎಂಬಲ್ಲಿ ದೇವಶಬ್ದಕ್ಕೀಶ್ವರವಿರೋಧ ವಾಚಕತ್ವಮುಳ್ಳೊಡಂ ಅರ್ಥದಿಂ ಕಾಮನೆಂಬುದು. "ದೇವರಱಿಯದವಿಷಯಮಿಲ್ಲ" ಎಂಬಲ್ಲಿ ಪ್ರಕರಣದಿಂ ದೇವ ಶಬ್ದಕ್ಕೆ ನೀನೆಂಬುದರ್ಥಂ, "ಮಕರಧ್ವಜಂ" ಕೋಪಿಸಿದ ನೆಂಬಲ್ಲಿ ಮಕರಧ್ವಜಶಬ್ದಕ್ಕೆ ಸಮುದ್ರಾರ್ಥಮುಳ್ಳೊಡಂ ಕೋಪಚಿಹ್ನದಿಂ ಮದನನೆಂಬು ದರ್ಥಂ. "ತ್ರಿಪುರಾರಿದೇವ"ನೆಂಬಲ್ಲಿ ದೇವಶಬ್ದಕ್ಕೆ ಪಲವರ್ಥಮುಳ್ಳೊಡಂ ತ್ರಿಪುರಶಬ್ದ ಸಾನ್ನಿಧ್ಯದಿಂ ಭವಾನೀಪತಿಯೆಂಬುದರ್ಥಂ - "ಮಧುವಿಂ ಸೊರ್ಕಿತು ಕೋಕಿಳ" ಮೆಂಬಲ್ಲಿ ಮಧುಶಬ್ದಕ್ಕೆ ಪುಷ್ಪರಸಂ ಮೊದಲಾದ ನಾನಾರ್ಥಮುಳ್ಳೊಡಂ ಸಾಮರ್ಥ್ಯದಿಂ ವಸಂತಕಾಲಮೆಂಬುದರ್ಥಂ. ಭೋಜನದೊಳ್ "ಸೈಂಧವಮಂಕೊಂಡು ಬಾ" ರೆಂಬಲ್ಲಿ ಸೈಂಧವಶಬ್ದಕ್ಕನೇಕಾರ್ಥಮುಳ್ಳೊಡಮೌಚಿತ್ಯದಿಂ ಲವಣಮೆಂದಱಿದುಕೊಳ್ಳುದು, – "ಪಟ್ಟಣಮಂ ಪರಮೇಶ್ವರಂ ಪಾಲಿಸಿದ" ನೆಂಬಲ್ಲಿ ದೇಶದಿಂ ಪರಮೇಶ್ವರಶಬ್ದಕ್ಕೆ ರಾಜನೆಂಬುದರ್ಥಂ, – "ಚಿತ್ರಭಾನು ಶೋಭಿತ" ಮೆಂಬಲ್ಲಿ ದಿವಮಾದೊಡೆ ಸೂರ್ಯನೆಂದಱಿವುದು, ಇರುಳಾದೊಡೆ ಬೆಂಕಿಯೆಂದಱಿವುದು. "ನಾರಿಗಳಂ ಕಡಿದ"ನೆಂಬಲ್ಲಿ ನಪುಂಸಕವ್ಯಕ್ತಿಯಿಂ ಬಿಲ್ಲ ಹೆದೆಗಳಂ ಕಡಿದನೆಂಬುದರ್ಥಂ. "ನಾರಿಯರಂ ಕಡಿದನೆಂಬಲ್ಲಿ ಸ್ತ್ರೀಲಿಂಗವ್ಯಕ್ತಿಯಿಂ ಸ್ತ್ರೀಯರಂ ಕಡಿದನೆಂಬುದರ್ಥಂ, **ಸ್ವರಗಳ್** ವೇದದಲ್ಲಿ ಪ್ರಸಿದ್ಧಂಗಳ್, ಕಾವ್ಯಮಾರ್ಗದೊಳ್ ಅಪ್ರಸಿದ್ಧಂ. ಆದಿ ಶಬ್ದದಿಂದಭಿನಯಾದಿ ಕಂಗಳ್.

ಅಭಿನಯಕ್ಕುದಾಹರಣೆ -

*ಇಂತಪ್ಪ ಕಣ್ಗಳಾಕೆಯ*
*ನಿಂತಪ್ಪಾ ಕುಚಯುಗಂಗಳಾ ಬಾಲಿಕೆಯಂ*
*ಇಂತಪ್ಪ ನಡುವಿನಾಕೆಯ*
*ನಂತಿರ್ದಂತಗಲೆ ಹಂಪನಂತಿಂತಾದಂ  ೭*

**ವ .** ಈ ರೀತಿಯಿಂದನೇಕಾರ್ಥಮುಳ್ಳ ಶಬ್ದಕ್ಕೆ (ಅರ್ಥ) ನಿಯಂತ್ರಣಮಾಗೆ ಅರ್ಥಾಂತರ ಪ್ರತೀತಿಗೆ ಕಾರಣಮಪ್ಪುದು ಶಬ್ದಮೂಲವ್ಯಂಜನೆಯೆನಿಕುಂ.

**ಅದರ್ಕುದಾಹರಣೆ**

ಶಬ್ದಮೂಲವ್ಯಙ್ಗ್ಯಂ :-

*ವಿದಳಿತಮಾದ ಕಂಟಕ ಕದಂಬದಿನುರ್ವಿದ ವಾಹಿನೀಸಮೂ*
*ಹದಿನುರೆ ವೃದ್ಧಿವೆತ್ತು ಭುವನಾಶ್ರಯದಿಂ ಬಗೆಗೊಳ್ವ ಕುಂದದ*
*ಭ್ಯುದಯದ ಲೀಲೆವೆತ್ತಟಱಿ ಪೋದ ಮದೋದ್ಧತರಾಜಹಂಸ ತೇ*
*ಜದಿನೆಸೆದತ್ತು ರಾಜ್ಯವಿಭವಂ ಜಲದಾಗಮಚಕ್ರವರ್ತಿಯಾ* ೮

ಅರ್ಥವಿವರಣಂ - ಕೆಡವಲ್ಪಟ್ಟ ಕಂಟಕತರುಗಳ ಸಮೂಹದಿಂ, ಉಬ್ಬಿದಂಥ ಸೇನಾ ಸಮೂಹದಿಂ, ಪೆರ್ಚುಗೆವಡೆದು, ಲೋಕಕಾಶ್ರಯವಾಗಿ, ಬಗೆಗೊಳ್ವ, ಕುಂದ ದೈಶ್ವರ್ಯದ ಲೀಲೆವೆತ್ತು, ಮಸುಳಿಹೋದಂಥ ರಾಜಶ್ರೇಷ್ಠರುಗಳ ತೇಜದಿಂ ಜಲದಾಗಮಚಕ್ರವರ್ತಿಯೆಂಬ ಪೆಸರುಳ್ಳಾತನ ರಾಜ್ಯವಿಭವಮೊಪ್ಪಿತು - ಎಂಬುದು ವಾಚ್ಯಾರ್ಥಂ. -

ಇಲ್ಲಿ ಪ್ರಕರಣಾದಿಬಲದಿಂ ಶಬ್ದಂಗಳ್ಗೀಯರ್ಥದಲ್ಲಿ ನಿಯಂತ್ರಣಮಾಗೆ ಆವುದಾ ನೊಂದಱಿಂ, ವಿದಳಿತಮಾದ ಕಂಟಕದಿಂ - ಕೆಡವಲ್ಪಟ್ಟ ಮುಳ್ಳನುಳ್ಳಕಡವದ ಮರದಿಂ, ಉಬ್ಬಿದ ನದಿಗಳ ಸಮೂಹದಿಂ, ಪೆರ್ಚುಗೆವಡೆದು ಕೆಡಿಸಲ್ಪಟ್ಟ ಚಂದ್ರ ಸೂರ್ಯರ ತೇಜಮನುಳ್ಳ ಮಱೆಗಾಲಮೆಂಬ ಚಕ್ರವರ್ತಿಯ ರಾಜ್ಯವಿಭವಮೊಪ್ಪಿತ್ತು ಎಂಬರ್ಥ (ಎರಡರ್ಥ) ಮಂ ಕೊಂಡುಬರ್ಪುದು **ಶಬ್ದಮೂಲವ್ಯಙ್ಗ್ಯ** ಮೆಂದಱಿವುದುದ.

**II ಅರ್ಥಶಕ್ತಿಮೂಲವ್ಯಂಜನೆಯಂ** ಪೇೞ್ವೆನಂದೆಂತೆಂದೊಡೆ

ಶಬ್ದಮಂ ಸಹಕಾರಿಯಂ ಮಾಡಿಕೊಂಡು ಅರ್ಥದಿಂದೆ ಅರ್ಥಾತರಂ ಪುಟ್ಟುವುದು **ಅರ್ಥಮೂಲವ್ಯಂಜನೆ**ಯೆನಿಕ್ಕುಂ, ಆಯರ್ಥಂ **ವಾಚ್ಯಮೂಲಂ, ಲಕ್ಷ್ಯಮೂಲಂ, ವ್ಯಙ್ಗ್ಯಮೂಲ**ಮೆಂದು ಮೂದೆೞಂ. (೧) ವಾಚ್ಯದತ್ತಣಿಂದರ್ಥಾಂತರಂ ಪುಟ್ಟುವುದು **ವಾಚ್ಯಮೂಲ** ಮೆನಿಕ್ಕುಂ.

**ಅದರ್ಕುದಾಹರಣೆ**

*ಇಂದೆ ವಲಂ ಗೃಹೋಪಕರಣಂ ಮನೆಗಿಲ್ಲೆನುತೆಯ್ದಿ ಮತ್ತೆ ನೀ*
*ನೊಂದಿದ ಚಿತ್ತವಿಹ್ವಳತೆಯಿಂದಿರೆ ಕಾರಣಮೇವುದಬ್ಬೆ ನಾಂ*
*ತಂದಪೆನಿಂತು ಕಾಲವಿರದೇವೆಸನೇವುದು ಕಜ್ಜಮೆಂದ ಮಾ*
*ತಂ ದಯೆಯಿಂ ನಿರೂಪಿಪುದು ಪೋಪೆನೆ ಕಾಡದೆ ಪೇೞ್ ನಿರಾಕುಳಂ* ೯

ವಿವರಣಂ - ಇಲ್ಲಿ ಸರಸನಪ್ಪ ವಿಟವಿಶೇಷನಂ ಬಯಸಿ ಪೋಪುದರ್ಕೆತಾಯೊಡ ನಾಡುವ ಗಣಿಕೆಯ ಮಾತು. ಇಂತು ಕಾಲವಿರಬಾರದೆಂಬುದಱಿಂ ಸ್ವೇಚ್ಛಾವಿಹಾರಿಣಿ ಯೆಂಬರ್ಥಂ ವ್ಯಙ್ಗ್ಯಂ.-

(೨)ಲಕ್ಷಣಮೂಲಗೂಢವ್ಯಙ್ಗ್ಯಂ ಪ್ರಾಧನ್ಯಮಗೆ ವಾಚ್ಯಾರ್ಥಾವಿವಕ್ಷಿತ ಮಾಗಿಯೆಲ್ಲಿ ತೋರ್ಕುಮದು **ಲಕ್ಷಣಮೂಲಧ್ವನಿ**ಯೆನಿಕ್ಕುಂ, ಅದು (a) **ಅರ್ಥಾಂತರ ಸಂಕ್ರಮಿತ** ವಾಚ್ಯ (b) **ಮತ್ಯಂತತಿರಸ್ಕೃತ** ವಾಚ್ಯಮೆಂದಿರ್ತೆಱಂ.

ವಾಚ್ಯಾರ್ಥಂ ಪ್ರಯೋಜನಮಿಲ್ಲದುದ ಱಿಂ**ದರ್ಥಾಂತರಪರಿಣಮಿತಂ** (a) ಅರ್ಥಾಂತರ ಸಂಕ್ರಮಿತವಾಚ್ಯಮಪ್ಪುದು ಎಂತೆಂದೊಡೆ -

**ಲಕ್ಷ್ಯಂ**

*ಆನಾಗಿರ್ದಪೆನೊಲವಿಂ*
*ನೀನಱಿಯಲ್ ಪೇೞ್ದಿಸೀ ಬುಧರ್ಕಳ ನಡುವಿ*
*ರ್ದೀ ನಿನ್ನ ಬುದ್ಧಿಲಾಸಮ*
*ದೇನಿಲ್ಲದೆ ನಿಲ್ವುದಿಲ್ಲ ನೆಲೆಗೊಂಡನಿಶಂ ೧೦*

**ವಿ.** ಇಲ್ಲಿ ಪ್ದೇನೆಂಬುದು ಮಂತ್ರಾದ್ಯುಪದೇಶಮಾಗಿ ಪರಿಣತಮಾದುದು ಮದಱಿಂ ನಿಷ್ಪ್ರಯಾಸದಿಂ ಶಿಕ್ಷಿಪೆನೆಂಬುದು ವ್ಯಙ್ಗ್ಯಂ -

**ವ .** ಒಂದಾನೊಂದು ಠಾವಿನಲ್ಲಿ ವಾಚ್ಯಾರ್ಥಂ ಯುಕ್ತುಶೂನ್ಯಮಾದುದಱಿಂ

**(b) ದತ್ಯಂತತಿರಸ್ಕೃತಂ,** ಎಂತೆಂದೊಡೆ -

**ಲಕ್ಷ್ಯಂ**

*ಅರಸೆಲೆ ನೀವೆ ಮಾಡಿದುಪಕಾರವನಾಡುವೊಡೆನ್ನ ಶಕ್ಯವ*
*ಲ್ತುರುಸುಜನತ್ವಕಿಂತೆಸೆವ ನಿಮ್ಮನೆ ಪೇೞ್ವ ಬಟಿಕ್ಕೆ ಮಿಕ್ಕರಂ*
*ಸ್ಮರಿಯಿಸತಕ್ಕುದಲ್ತು ಬಿಡದೀ ತೆಱದಿಂದೆ ಪೆಱರ್ಗೆ ಲೇಸನಾ*
*ದರದೊಳೆ ಮಾೞ್ಪ ನೀವವನಿಯೊಳ್ ಸ್ಥಿರಜೀವಿಗಳಾಗಿ ವರ್ತಿಸಿಂ ೧೧*

**ವಿ.** ಇಲ್ಲಿ ಉಪಕಾರಮಿಲ್ಲದವನಂ ಕೂರ್ತು ವಿಪರೀತಲಕ್ಷಣೆಯಿನೊಬ್ಬಾನೊಬ್ಬನಂ ಪೇೞು ತಿರ್ದಪನೆಂಬುದು ವ್ಯಙ್ಗ್ಯಂ.

(೩) ವ್ಯಙ್ಗ್ಯಾರ್ಥದತ್ತಣಿಂ ವ್ಯಙ್ಗ್ಯಾಂತರಂ ಪುಟ್ಟುವುದು **ವ್ಯಙ್ಗ್ಯ ಮೂಲ ವ್ಯಂಜನೆ** ಯೆನಿಕ್ಕುಂ.

**ಅದರ್ಕುದಾಹರಣೆ**

*ಎಲೆ ಎಲೆ ನೋಡ ತಾವರೆಯ ಪತ್ರದೊಳೊಂದು ಬಳಾಕಪಕ್ಷಿ ನಿ*
*ಶ್ಚಲಿತಜಾಂಗನಾಗಿ ಪೊಸಪಚ್ಚೆಯ ಭಾಜನದಲ್ಲಿ ಶಂಖಮು*
*ಜ್ಜ್ವಲಿಸುವ ಮಾೞ್ಕೆಯಿಂ ತೊಳಗುವಂದಮಿದಾದಮನೋಜ್ಞಮಾಯ್ತು ನಿ*
*ರ್ಮಲತರಶೈತ್ಯಸಾರಜಲಪೂರಿತಮಪ್ಪ ಸರೋಜಷಂಡದೊಳ್ ೧೨*

**ವಿವರಣಂ:** ಇಲ್ಲಿ ನಿಶ್ಚಲಿತನಿಜಾಂಗನೆಂಬುದಱಿಂ ನಿಶ್ಚಲಿತಾತ್ಮಮೆ ಮುಖ್ಯಾರ್ಥ ಮಾಗಿ ತೋಱೆಯದಱಿಂ ಜನವಿರಹಿತಮೆಂಬುದು ವ್ಯಙ್ಗ್ಯಂ. ಅದಱತ್ತಣಿಂದೀ ಪ್ರದೇಶಮೆ ಸಂಕೇತಕ್ಕೆ ಯೋಗ್ಯಮೆಂಬುದು ವ್ಯಙ್ಗ್ಯಂ, ಅದಱಿಂ ಗಾಢಸಂಭೋಗಮಪ್ಪುದೆಂಬುದು ವ್ಯಙ್ಗ್ಯಂ, ಅದಱಿಂ ನಾಯಕನುಷ್ಣಶರೀರಿಯೆಂಬುದು ವ್ಯಙ್ಗ್ಯಂ.

ಇವಂ ಸಾಮಾನ್ಯದಿಂ ಪೇೞ್ದೆಂ, ಇನ್ನಿತ್ತಲ್ ವಿಶೇಷಮಂ ಪೇೞ್ವೆನದೆಂತೆಂದೊಡೆ- ಮುಖ್ಯಲಕ್ಷ್ಯಾರ್ಥದತ್ತಣಿಂದೆ ಭಿನ್ನಮಾಗಿ ಪ್ರತೀತಿವಿಷಯಮಾದ ವ್ಯಙ್ಗ್ಯಮಪ್ಪರ್ಥಮೆ **ಧ್ವನಿ**ಯೆಂದು ಪೇೞಿಪಟ್ಟುದು. ಅದು ವಸ್ತ್ವಲಂಕಾರರಸಾದಿಭೇದದಿಂ ಮೂದೆಱಂ - ಮುಖ್ಯಲಕ್ಷ್ಯಂಗಳತ್ತಣಿಂದತ್ಯಂತ ಭಿನ್ನಮಾದ ಧ್ವನಿ, ವಾಚ್ಯಂ, ವಿಧಿರೂಪಮಾಗೆ ಪ್ರತಿಷೇಧ ರೂಪಂ - ಅದೆಂತೆಂದೊಡೆ -

**ಲಕ್ಷ್ಯಂ**

*ಬೆಂಗಡಿಸುತಿರ್ದುದಿನ್ನೆವರಮೀತಟಿನೀ ನಿಕಟಪ್ರದೇಶದೊಳ್*
*ಸೊಗಯಿಸುತಿರ್ಪ ಸಾಲ್ವೊದಱ ತಣ್ಣೆೞಲೊಳ್ ನೆಲಸಿರ್ದ ನಾಯದಂ*
*ದುಗಿಬಗಿಯಾದುದಿಂದು ನಖರಾಯಧಭೀಕರಸಿಂಹದಿಂದೆ ನೀಂ*
*ವಿಗತವಿಶಂಕೆಯಿಂ ಸುೞಿಯಲಾದುದು ತತ್ಪಥದೊಳ್ ಸುಮಪ್ರಿಯಾ* ೧೩

**ವಿ.** ಇಲ್ಲಿ ಸಿಂಗದಿಂ ನಾಯ್ ಕೊಲಲ್ಪಟ್ಟಿತು [ನೀಂ] ನಿಶ್ಶಂಕೆಯಿಂದೆಡೆಯಾಡೆಂಬ ವಿಧಿರೂಪ ವಾಚ್ಯದಿಂ ಸಂಕೇತಸ್ಥಾನಮಪ್ಪ ನದೀತಟನಿಕುಂಜದೊಳ್ ಸಿಂಹಮಿರ್ದುದು ಅಲ್ಲಿ ನೀನೆಡೆಯಾಡಲಾಗದೆಂಬೀ ನಿಷೇಧರೂಪಮಪ್ಪ ವ್ಯಙ್ಗ್ಯಾರ್ಥಂ ಪ್ರಾಧಾನ್ಯದ್ಯೋತಕ ಮಪ್ಪುದು -

**ನಿಷೇಧದೊಳ್ ವಿಧಿಯೆಂತೆಂದೊಡೆ**

*ಒಱಗುವಳತ್ತೆ ಮೆಲ್ಲರಳವಾಸಿನೊಳೀಯೆಡೆಯಲ್ಲಿ ಸೋಂಕದಂ*
*ತೊಱಗುವನೊತ್ತಿನೊಳ್ ಪೞೆದ ಪಾಸಿನೊಳಾನಿರುಳಂಧನಪ್ಪ ನೀಂ*
*ಮಱೆಯದೆ ಕಾಣೆವಂ ಮಸು[ಕು]ಗಟ್ಟಿಲೆ ಬೀೞದ ಮುನ್ನ ತಳ್ಕೆಗೊಂ*
*ಡೆಱಗದಿರೊಂದಿದೆಮ್ಮೆರಡು ಪಟ್ಟೆಗಳಿರ್ಪೆಡೆಯೊಳ್ ಪ್ರವಾಸಿಗಾ* ೧೪

**ವಿ.** ಇಲ್ಲಿ ತನ್ನ ಪಾಸುಗೆಯಲ್ಲಿ ಮಲಗದಿರೆಂಬ ನಿಷೇಧರೂಪದಿಂದಿಲ್ಲಿಗೆ ಬಾರೆಂಬ ವಿಧಿ ಧ್ವನಿಸಲ್ಪಟ್ಟಿತು -

**ವಿಧಿಯೊಳ್ ವಿಧಿಯೆಂತೆಂದೊಡೆ**

*ಎಲೆ ನೆರೆಯಾತನೆಯೀಗಳ್*
*ನಲವಿಂ ಪತಿ ಪೋದನೂರ್ಗೆ ಮತ್ತೊರ್ವನುಮಿ*
*ಲ್ಲಲಘುತರಮಾಯ್ತು ಕಡುಗ*
*ತ್ತಲೆ ನೀಂ ಪರಿಹರಿಪುದೆನಗೆ ಚೋರರ ಭಯಮಂ* ೧೫

**ವಿ.** ಇಲ್ಲಿಯೆನಗೆ ಚೋರರ ಭಯಮಂ ಪರಿಹರಿಪುದೆಂಬೀ ವಿಧಿಯಿಂದೆ, ಗಾಢಾಂಧಕಾರ ಮಪ್ಪ ರಾತ್ರಿಯಂ, ಪತಿ ದೇಶಾಂತರಕ್ಕೆ ಪೋದುದಂ, ಗೃಹದೊಳಾರು ಮಿಲ್ಲದುದಂ ಅಱಿಪಿ ನೀಂ ನಿರ್ಭೀತನಾಗಿ ತನ್ನ ಸಮೀಪಕ್ಕೆ ಬಾರೆಂಬ ವಿಧ್ಯಂತರಂ ತೋಱ ಸಲ್ಪಟ್ಟಿತು -

**ನಿಷೇಧದೊಳ್ ನಿಷೇಧಮೆಂತೆಂದೊಡೆ**

*ಎಲೆ ವೃಷಭ ಗೇಹಪತಿ ಮನ*
*ವಲಸದೆ ಬೞಿಗಂತು ಗಟ್ಟಿಯಾತ್ಮಕ್ಷೇತ್ರ*
*ಸ್ಥಲಮಂ ರಕ್ಷಿಸುತಿರ್ದಪ*
*ನುಲುಪಿಲ್ಲದೆ ತೊಲಗು ಪೋಗು ಕಾಣದ ಮುನ್ನಂ* ೧೬

**ವಿ.** ಇಲ್ಲಿ ಗೃಹಪತಿ ಕ್ಷೇತ್ರದೊಳ್ ದುಷ್ಟವೃಷಭನಿವಾರಣತತ್ಪರನಾಗಿರ್ದಪನೆಂಬ ನಿಷೇಧವಾಕ್ಯ ದೊಳ್ ಉಪಪತಿನಿವಾರಣಂ ನಿಷೇಧಾಂತರಂ ತೋಱಿಸಲ್ಪಟ್ಟಿತು.

**ವಿಧಿನಿಷೇಧಮಿಲ್ಲದಲ್ಲಿ ವಿಧಿಯೆಂತೆಂದೊಡೆ**

*ಎಲೆ ಗಡ ಪಾಂಥ ನಿರ್ಭರದಿನೆಯ್ತುರುತಿರ್ದಪೆಯುಟ್ಟ ಸೀರೆಯಂ*
*ಸುಲಿವೊಡೆ ಬರ್ಪೆಯಕ್ಕುಮಿದನಾರ್ಗುಸಿರ್ವೆಂ ನೆಱೆದಾರುಮಿಲ್ಲ ಕ*
*ಟ್ಟಿಲೆ ತಲೆದೋಱುತಿರ್ದಪುದು ಭಾವಿಸೆ ಬಾಲಿಕೆಯೊರ್ವಳಾನೆ ನೀಂ*
*ಬಲಯುತನೆಂತು ಗೆಯ್ದಪೆಯೊ ದೂರಮದಿಲ್ಲಿಗೆ ಮನ್ನಿಜಾಲಯಂ* ೧೭

**ವಿ.** ಇಲ್ಲಿ ವಿಧಿನಿಷೇಧಂಗಳಂ ಪೇೞದಿರ್ದೊಡಂ ಆನೊರ್ವಳ್, ಗ್ರಾಮಂ ದೂರಮೆಂಬಿವು ಮೊದಲಾದೇಕಾಂತೋಪದೇಶದಿಂ ತನ್ನ ನಿತಂಬದ ವಸ್ತ್ರಮಂ ತೆಗೆಯೆಂಬ ವಿಧಿ ಧ್ವನಿಸಲ್ಪಟ್ಟಿತು-

**ವಿಧಿನಿಷೇಧಂಗಳಲ್ಲದವಱೊಳ್ ನಿಷೇಧಮೆಂತೆಂದೊಡೆ**

*ಎನಗಿನಿಯನೆ ಬಾೞ್ವಾಸೆಯೆ*
*ಘನವರ್ಥದ ಮೇಲಣಾಸೆಯಿಲ್ಲಿರ್ಪೊಡೆ ನೀಂ*
*ಮನವತ್ತಿರು ಪೋಪೊಡೆ ಪೋ*
*ಗಿನಿತು ಟಿಯುದೆಯೆನ್ನವಸ್ಥೆಯಂ ನಿನಗುಸಿರ್ದೆಂ* ೧೮

**ವಿ.** ಇಲ್ಲಿ ಪೋದರೆ ಪೋಗು, ಇರ್ದರೆ ಇರು ಎಂಬ ವಿಧಿನಿಷೇಧಂಗಳಿಲ್ಲದಲ್ಲಿ, ನನಗೆ ಬರ್ದುಂಕುವಾಸೆ ಬಹುಳಂ, ಧನದಾಸೆಯಿಲ್ಲಮೆಂಬ ವಚನದಿಂ ನೀ ನಿಲ್ಲದೊಡಾಂ ಬರ್ದುಕುವುದರ್ಕೆ ಸಮರ್ಥೆಯಲ್ಲೆಂಬಾಕ್ಷೇಪದಿಂ ಗಮನನಿಷೇಧಂ ತೋಱಿಸಲ್ಪಟ್ಟಿತು -

**ವಿಧಿನಿಷೇಧಂಗಳಲ್ಲಿ ವಿಧ್ಯಂತರಮೆಂತೆಂದೊಡೆ**

*ಎಲೆ ಎಲೆ ಪಾಂಥ ಪೋದಪೆಯದೆಲ್ಲಿಗೆ ಮದ್ವಧುವಿರ್ಪ ತಾಣಕೀ*
*ಪೊಲದೊಳೆ ಪೋಗದನ್ಯ ಪಥದೊಳ್ ಗಮಿಸಿಲ್ಲಿಯೆ ಪೋಪೆಯಪ್ಪೊಡೀ*
*ನೆಲೆಯ ತಳಾಱನಾತ್ಮಭವೆ ಪೂರ್ಣಸುಧಾಕರಬಿಂಬವಕ್ತ್ರೆ ನಿ*
*ರ್ಮಲತರಗಾತ್ರೆ ಚಾರುಸರಸೀಜದಳಾಯತನೇತ್ರೆಯಿರ್ದಪಳ್* ೧೯

**ವಿ.** ಇಲ್ಲಿ ಈ ಮಾರ್ಗದಲ್ಲಿ ಪೋಗಬೇಡ ಮತ್ತೊಂದು ಮಾರ್ಗದಲ್ಲಿ ಪೋಗು ಎಂದು ವಿಧಿನಿಷೇಧಂಗಳಂ ಪೇೞ್ದುದಱಿಂ ಎಲೆ ಸೊಬಗನಪ್ಪಾತನೆ ನಿನ್ನ ಸ್ತ್ರೀಯ ರೂಪಂ ನೆನೆದು ಕಾಣ್ಬಲ್ಲಿ ತತ್ಪರನಾದಾತನೆ ಈ ಗ್ರಾಮದ ತಳಾಱನ ಮಗಳಂ ನೀನವಶ್ಯಂ ಕಾಣ್ಬುದರ್ಕೆ ಯೋಗ್ಯಳೆಂಬ ವಿಧ್ಯಂತರಂ ತೋಱಿಸಲ್ಪಟ್ಟಿತು -

**ವಿಧಿನಿಷೇಧಂಗಳಲ್ಲ ನಿಷೇಧಮೆಂತೆಂದೊಡೆ**

*ಎಲೆ ವೊಕ್ಕಲಿಗನ ಸೊಸೆ ಕೇಳ್*
*ನಲವಿಂ ಬಿಟ್ಟಲರನಾಯ್ದುಕೊಳ್ ಗಿಡುವಂ ಸ*
*ಯ್ತಲುಗದೆ ಕರವಲಯದ ಬ*
*ಲ್ಲುಲಿಪಿಂದವಸಾನವಿರಸಮಕ್ಕುಮಮೋಘಂ ೨೦*

**ವಿ.** ಇಲ್ಲಿ ಬಿದ್ದಲರನಾಯ್ದುಕೊಳ್ ಗಿಡುವನಲುಗವೇಡಾ, ಎಂದು ವಿಧಿ ನಿಷೇಧಂಗಳಂ ಪೇೞ್ದುದಱಿಂ ಎಲೆಸಖಿ ಚೌರ್ಯರತದೊಳ್ ವಲಯಶಬ್ದಂ ಮಾಡಲ್ ಯೋಗ್ಯ ಮಲ್ತೆಂಬ ನಿಷೇಧಾಂತರಂ ತೋಱಿಸಲ್ಪಟ್ಟಿತು -

**ವಿಧಿಯಲ್ಲಿ ಅನುಭಯಮೆಂತೆಂದೊಡೆ**

*ಕಡು ಬಡನಡುವಿನ ಪೊಸಪೊಂ*
*ಗೊಡಮೊಲೆಗಳನಾಂತ ನೀರೆ ಮೆಲ್ಲನೆ ನೀಂ ಮೆ*
*ಲ್ಲಡಿಯಿಡು ಬಹುಪ್ರಯಾಸದೆ*
*ಪಡೆದಂ ಕರಕುಶಲನಪ್ಪ ಧಾತ್ರಂ ನಿನ್ನಂ ೨೧*

**ವಿ.** ಇಲ್ಲಿ ಮೆಲ್ಲಡಿಯಿಡುಯೆಂದು ವಿಧಿಯಂ ಪೇೞ್ದುದಱಿಂ ಧ್ವನಿರೂಪಮಪ್ಪ ವಿಧಿ ನಿಷೇಧಂಗಳಿಲ್ಲಂ. ಮತ್ತೆ ವರ್ಣನಾಮಾತ್ರಂ (ಪ್ರತೀಯತೇ) ತೋರ್ಪುದು.

**ನಿಷೇಧದಲ್ಲನುಭಯಮೆಂತೆಂದೊಡೆ**

*ವದನದ ಕಾಂತಿಯಿಂದೆ ಶಶಿಕಾಂತಿಯನೋವದೆ ಗೆಲ್ದ ನೀ ಱಿ ಪೋ*
*ಗದೆ ತಿರುಗಜ್ಜ ಬುದ್ಧಿಗೆಡೆಯಾದಳೆ ನೀನಭಿಸಾರಿಕಾಜನ*
*ಕ್ಕೊದವಿದ ವಿಘ್ನಮಂ ನೆಱೆಯೆ ಮಾಡುತುಮಿರ್ದಪೆ ಅಕ್ಕಟಕ್ಕಟಾ*
*ಸುದತಿಯ ರೂಪೆಯಾಗಿ ಕುಲಕಂಟಕಿಯಪ್ಪುದು ಪೆಣ್ಗೆ ನೀತಿಯೇ ೨೨*

**ವಿ.** ಇಲ್ಲಿ ನೀಂ ತಿರುಗೆಂಬ ನಿಷೇಧವಾಕ್ಯದಿಂ ವ್ಯಙ್ಗ್ಯಂ ವಿಧಿನಿಷೇಧಮಲ್ತು, ಮತ್ತೆ ಮುಖ ಚಂದ್ರಕಾಂತಿ ವರ್ಣನಾಮಾತ್ರಂ (ಪ್ರತೀಯತೇ) ತೋರ್ಪುದು.

**ವಿಧಿನಿಷೇಧದೊಳನುಭಯಮೆಂತೆಂದೊಡೆ**

*ಎಲೆ ದಕ್ಷಿಣ ನಿಡುಸುಯ್ಯುಂ*
*ಸಲೆ ರೋದನಮುಂ ಸಮಂತುವೊರ್ವಳೆ ಬರ್ಪಾ*
*ಲಲನೆಯೆನಗಕ್ಕೆ ನಿನಗಾ*
*ಗಲೆ ಬೇಡವಳಿಂದೆ ಬೞಿಕೆ ನಿನಗಕ್ಕೆ ವಲಂ        ೧೩*

**ವಿ.** ಇಲ್ಲಿ ಯೆನಗೆ ಶ್ವಾಸರೋದನಂಗಳಾಗಲಿ, ನಿನಗೆ ಬೇಡ, ಆಕೆಯಿಲ್ಲದಿರೆ ನಿನಗಾಗಲಿ ಎಂದು ವಿಧಿನಿಷೇಧಂಗಳಂ ಪೇೞ್ವುದಱಿಂ ವ್ಯಙ್ಗ್ಯಂ ವಿಧಿಯುಮಲ್ತು ನಿಷೇಧಮು ಮಲ್ತು, ಮತ್ತೆ ಕಪಟವಲ್ಲಭನ ನಿಂದಾರೂಪಂ ತೋಱಲ್ಪಟ್ಟಿತು.

**ವಿಧಿ ನಿಷೇಧಮಲ್ಲದವಱೊಳ್ ಅನುಭಯಮೆಂತೆಂದೊಡೆ**

*ನವನಖ ರೇಖಾಂಕಿತ ತನು*
*ವವನಿದ್ರಾಲಸ ವಿಲೋಚನಂ ನಲ್ಲನೆ…….*
............................
............................        *೧೪*

...............................
...............................
...............................
.....*ನ್ನೆ ನೀರ್ವೊೞೆಯ ವಾರಿಯನೀಗಳೆ ತೀವಿ ತಂದಪೆಂ   ೧೫*

**ವಿ.** ಇಲ್ಲಿ ಚೌರ್ಯರತಗೋಪನವಱಿಯಬರುತಿರ್ದಪುದು.

**ಪ್ರತಿಪಾದ್ಯವಿಶೇಷದೊಳೆಂತೆಂದೊಡೆ**
**ಲಕ್ಷ್ಯಂ**

*ಉರದೆ ವಿಲಿಪ್ತಚಂದನದ ನಾಮಮೆ ಪೋಯ್ತಧರಂ ಬೆಳರ್ತುದೋ*
*ಸರಿಸಿದುದಂಜನಂ ನಯನದಿಂ ಪುಳಕೋಜ್ಜ್ವಳಮಾಯ್ತು ಮೆಯ್ಯಿದೇ*
*[ನರಿಯದೆ ದೂತಿ ಬಂಧುಜನಪೀಡೆಯ] ವಾಪಿಗೆ ಮೀಯೆ ಪೋದೆ ನೀಂ*
*ಕರೆವೊಡೆ ಪೋದುದಿಲ್ಲಧಮನಲ್ಲಿಗೆ ಪೇೞ್ [ಪುಸಿದಿಂತು] ಬರ್ಪರೇ          ೧೬*

**ವಿ.** ಇಲ್ಲಿ ದೂತಿಯಿಂದೆ ನಾಯಕನ ಸಂಭೋಗಂ ಪೇೞೆಪಟ್ಟುದು.

**ಕಾಕುವಿನಿಂದೆಂತೆಂದೊಡೆ**

**ಲಕ್ಷ್ಯಂ**

*ದ್ರುಪದನರೇಂದ್ರಜಾತೆವೆರಸುಗ್ರತರಾಟವಿಯೊಳ್ ತೊೞಲ್ದಳ*
*ಲ್ದುಪಚಿತವಲ್ಕಲಂದಳೆದು ಪೇಸದೆ ಮತ್ಸ್ಯನೃಪಾಲಸೇವೆಯೊಳ್*

*ಕೃಪಣತೆವೆತ್ತ ನಮ್ಮೊಡನೆ ಧರ್ಮಸುತಂ ಮಿಗೆ ಖಾತಿಗೆಯ್ಯುತಿ*
*ರ್ದಪನುಱದಿನ್ನೆಗಂ ಕುರುಧರಾಧಿಪನೊಳ್ ಖತಿಗೆಯ್ಯನೊರ್ಮೆಯುಂ ೧೭*

**ವಿ.** ವ್ಯಾಕುಲಮೆನ್ನಲ್ಲಿ ಯೋಗ್ಯಮಲ್ತು, ಕುರುಕುಲನಲ್ಲಿ ಯೋಗ್ಯಮೆಂದು ಕಾಕುವಿನಿಂ ಪ್ರಕಾಶಿಸಲ್ಪಟ್ಟುದು.

**ವಾಕ್ಯವಿಶೇಷದೊಳೆಂತೆಂದೊಡೆ**

*ನಲವಿಂ ಮಗಳಂ ಕೊಟ್ಟೆಂ*
*ಸಲೆ ಪೆಟ್ಕೆಗೆ ಪಾವನಿತ್ತೆನಾಂ ಸೇತುವನಿಂ*
*ತಲಸದೆ ಕಟ್ಟಿದಪನೆನುತೆ*
*ಜಲನಿಧಿ ಕಂಪಿಸುವ ತೆಱದೆ ಕಂಪಿಸುತಿರ್ಕುಂ ೧೮*

**ವಿ.** ಇಲ್ಲಿ ನಾರಾಯಣನೆಂಬುದು ಅಱಿಯಲ್ಪಟ್ಟುದು.

**ವಾಚ್ಯವಿಶೇಷದೊಳೆಂತೆಂದೊಡೆ**

**ಲಕ್ಷ್ಯಂ**

*ಸುರುಚಿರ ನರ್ಮದಾತಟದೊಳೊಪ್ಪುವ ಬಾಟಿವನಂಗಳೊಳ್*
*ಸ್ಫುರಿತ [ಲತಾನಿಕುಂಜ] ತತಿ ರಾಜಿಸುವೀಯೆಡೆಯೊಳ್ ಸಮಂತು ನಿ*
*ರ್ಭರರತಮಿತ್ರವಾಯು ಸುಟಿಗೊಂಡಪುದಿಂತಿವಱಗ್ರದಲ್ಲಿ ನಿ*
*ಷ್ಠುರನೆನಿಸಿರ್ಪ ಕಾಲಕುಪಿತಂ ಮದನಂ [ಚಲದಿಂ] ತೊಳಲ್ದಪಂ ೧೯*

**ವಿ.** ಇಲ್ಲಿ ಸುರತನಿಮಿತ್ತಮಾಗಿ ಕುಪಿತನೆಂಬುದು ವ್ಯಙ್ಗ್ಯಂ.

*ಅನ್ಯಾಸತ್ತಿಯೊಳೆಂತೆಂದೊಡೆ*

........................................
........................................
........................................ ೨೦

..........................................
............................................
..............................................
.............................................. ೨೧

**ದೇಶವಿಶೇಷದೊಳೆಂತೆಂದೊಡೆ**

*ಎಲೆ ಕೆಳದಿಯರಿರ ನಾನೀ*
*ನೆಲದಿಂದಂ ಪಜ್ಜೆಯಿಕ್ಕಲಾಜೆಂ ಪೂವಂ*
*ನಲವಿಂ ಕುಯ್ದಪೆನಿಲ್ಲಿಯೆ*
*ವಿಲಸದ್ವಾಟೆಯೊಳ್ ಚಲಿಸಿ ನೀಂ ಪೂಗೊಯ್ಯಿಂ ೨೨*

**ವಿ.** ಇಲ್ಲಿ ಆರುಮಿಲ್ಲದಿರ್ಪೀ ಪ್ರದೇಶಕ್ಕೆ ಗುಪ್ತವಿಟನಂ ನೀಂ ಬೇಗಂ ಕಳಿಪೆಂಬುದು ತೋಱಲ್ಪಡುಗುಂ.

**ಕಾಲವಿಶೇಷದೊಳೆಂತೆಂದೊಡೆ**

**ಲಕ್ಷ್ಯಂ**

*ಮಾತಾಪಿತೃಗಳಧೀನದಿ*
*ನೋತಿರ್ಪೆನಿಯನೆ ಪರೋರ್ವಿಗೆಯ್ದುವಯ್‌ಪೋ ಪೋ*
*ಗೇತದ್ದಿನದೊಳಭಾಗ್ಯೆಯ*
*ಮಾತಂ ವಾರ್ತೆಯೊಳೆ ಕೇಳ್ದಪಯ್ ಬಱಕೆನ್ನಂ ೨೩*

**ವಿ.** ಇಲ್ಲಿ ವಸಂತಕಾಲದಲ್ಲಿ ನೀಂ ಪೋದೆಯಾದೊಡೆ ನಾನುೞಿವುದಿಲ್ಲಂ ನೀನುೞಿವೆಯೊ ಉೞಿಯೆಯೋ ಎಂಬುದಿಂತು ವ್ಯಙ್ಗ್ಯಂ.

**ಚೇಷ್ಟಾವಿಶೇಷದೊಳೆಂತೆಂದೊಡೆ**

*ದ್ವಾರದುಪಾಂತದೊಳ್ ಪದೆದು ನಿಂದನನೆನ್ನನಭೀಕ್ಷಿಸುತ್ತೆ ವಿ*
*ಸ್ತಾರಿತಜಾನುಯುಗ್ಮೆ ತೊಡೆಯಂ ಮಗುೞ್ದೊಂದಿಸಿ ಚಂಚಲತ್ವಮಂ*
*ಬಾರಿಸಿ ನೇತ್ರದೊಳ್ ನುಡಿವುದಂದ ಮಿಗೆ ಮಾಣ್ದು ಕುಚಾಗ್ರದಲ್ಲಿ ಸ*
*ಯ್ತೋರೆ ಮುಸುಂಕನಿಟ್ಟಗಲಿಸಿರ್ದ ಭುಜಂಗಳನೊಂದುಗೂಡಿದಳ್ ೨೪*

**ವಿ.** ಇಲ್ಲಿ ಚೇಷ್ಟೆಯಿಂ ಗುಪ್ತಕಾಮುಕನ ವಿಷಯಮಾಗುಳ್ಳ ಅಭಿಪ್ರಾಯ ವಿಶೇಷಂ ವ್ಯಙ್ಗ್ಯಂ.

**ಲಕ್ಷ್ಯಾರ್ಥದೊಳೆಂತೆಂದೊಡೆ**

*ಕೆಳದಿ ಮನೋಜ್ಞ ನಂ ಪಡೆದು ಸಾಧಿಪೆ ನೀನೆನಗಾಗಿ ನೀಂ ಕರಂ*
*ಬಳಲುತುಮಿರ್ಪೆ ಕಾರ್ಯಮದು ನಿನ್ನಯ ಭಾರಕೆ ಸಾಟಿಯಾಗಿ ಕ*
*ಣ್ಗೊಳಿಪವೊಲೆನ್ನ ನೇಹಕಣೆಯಾಗಿ ನೆಗೞ್ತೆಯು ನೆಮ್ಮುವಂತೆವೋಲ್*
*ವಿಳಸಿತಕಾರ್ಯಮಂ ನಲವಿನಿಂ ರಚಿಸಿರ್ಪವೊಲಾದುದೞ್ತಿಯಿಂ ೨೫*

**ವಿ.** ಎಂಬಲ್ಲಿ ಮುನಿದಿನಿಯನಂ ತಿಳಿಪಲ್ ಪೋಗಿ ತಿರುಗಿ ಬಂದ ಸಖಿಯ ಸಂಭೋಗ ಚಿಹ್ನಮಂ ಕಂಡು ನಲ್ಲದೊಳ್ ನೆರೆದಳೆಂದು ಅಱಿದು ನಾಯಿಕೆ ನುಡಿದ ತಿರಸ್ಕಾರ ವಚನಂ, ಅದಱಿಂದಪಕಾರಮಂ ಮಾಡಿದ ಸಖಿಯೊಳುಪಕಾರಪರಂಗಳಪ್ಪ ವಚನಂಗಳ ನುಚಿತಮಾಗಿ

ಮುಖ್ಯಾರ್ಥಬಾಧೆಯಾಗಿ (ವ್ಯಾಘಾತಸಬಂಧದವೊಲ್) ವೈರ ಸಂಬಂಧದಿಂ ಸವತಿಯೆಂಬುದು ಲಕ್ಷ್ಯಂ. ಈ ಲಕ್ಷ್ಯಾರ್ಥದಿಂ ನಿನ್ನಿಂದೆ ಪಗೆತನ ಮಾಚರಿಸಲ್ಪಟ್ಟುದು, ಅದನಾಶ್ರಯಿಸಿದ ವ್ಯಂಜನೆಯಿಂದಿನಿಯನಪರಾಧಂ [ತೋಱಲ್ಪಟ್ಟುದು.] ಇದು ಲಕ್ಷ್ಯಮೂಲವ್ಯಙ್ಗ್ಯಂ.

**ವ್ಯಙ್ಗ್ಯಾರ್ಥದೊಳೆಂತೆಂದೊಡೆ**

*ಮದಗಜಮೌಕ್ತಿಕಂ ಕುಡುವುದಿರ್ದಪುವೇ ಎನೆ ಸೆಟ್ಟಿಗುಲ್ಲಸ*
*ದ್ರದನವಿಹೀನವಕ್ತ್ರೆ ಮುದುವೇಡಿತಿಯುತ್ತರವಿತ್ತಳಣ್ಣ ಕೇಳ್*
*ಸದಮಳಕೋಮಳಾಂಗಿ ಸೊಸೆ ಮದ್ಯಮದಾಲಸೆ ಬಿಟ್ಟಮಂಡೆಯಂ*
*ಪದುಳಿಸಿ ಕಟ್ಟಿದಂದಿನ ದಿನಂ ದೊರೆಕೊಳ್ವುದು ಮೌಕ್ತಿಕವ್ರಜಂ* ೩೬

**ವಿ.** ಇಲ್ಲಿ ಬಿಟ್ಟಮಂಡೆಯಂ ಕಟ್ಟಳೆಂಬುದಱಿನನವರತಕ್ರೀಡಾಸಕ್ತಿ ವ್ಯಙ್ಗ್ಯಂ ಅದಱಿಂ ಸತತಸಂಭೋಗದಿಂದಾಕ್ರೋಶತ್ವಂ ಧ್ವನಿಸಲ್ಪಟ್ಟಿತು -

ಶಬ್ದ ಶಕ್ತಿ ಮೂಲವ್ಯಙ್ಗ್ಯಂ ಪದದೊಳ್, ವಾಕ್ಯದೊಳ್ ಪ್ರತ್ಯೇಕಮಾಗಿರ್ಪೆಱಂ, ಮುಖ್ಯ ಶಬ್ದಶಕ್ತಿವ್ಯಙ್ಗ್ಯಂ ಪದಂಗಳೊಳೆಂತೆಂದೊಡೆ -

*ಅಸಮತರಭುಕ್ತಿಮುಕ್ತಿ*
*ಪ್ರಸರಮನುರೆ ಮಾಡಲೆಸಗುವೇಕಾಂತಮನೊ*
*ಲ್ದುಸಿರ್ವೆಡೆಯೊಳ್ ತತ್ಪರಮಾ*
*ದ ಸದಾಗಮಮಾರ್ಗೆ ಪುಟ್ಟಿಸದು ಮುದದೊದವಂ* ೩೭

**ವಿ.** ಇಲ್ಲಿ ಆವಳೋ ಒರ್ವಳ್ ಸಂಕೇತಮಂ ಮಾಡಿದಾತನಂ ಮುಖ್ಯವೃತ್ತಿಯಿಂ ಕೂಡಾಡು ತಿರ್ಪಳ್. [ಎಂಬುದು ಸದಾಗಮಪದದಿಂದ ಪ್ರಕಾಶಿಸಲ್ಪಡುವುದು ವೈಸಾದೃಶ್ಯಮಿರ್ಪುದ ಱಿಂದುಪಮಾಲಂಕಾರ ವ್ಯಙ್ಗ್ಯಮಿಲ್ಲಂ.]

**ವಾಕ್ಯದೊಳೆಂತೆಂದೊಡೆ**

*ಇದು ಪಡೆದೆಮ್ಮ ಪೂರ್ವ [ಭವದಾಗ್ರಹದಿಂ] ಗೊಣೆಗಲ್ಲ ಮೇಲೆ ಕ*
*ಟ್ಟಿದ ಮನೆ ಪಟ್ಟೆಗೆಟ್ಟು ನೆರೆ ಪಾಸರೆಯಲ್ಲಿರುಳಾಯ್ತು ಭೀತಿಯೊ*
*ಡ್ಡೊದವಿದುದೀ ಪಯೋಧರದ ಪೆರ್ಚುಗೆಯಂ ಸಲೆ ನಿಟ್ಟಿಸನ್ಯದಾ*
*ಸ್ಪದವತಿದೂರಮಿರ್ಪೊಡಿತು ಪೋಪೊಡೆ ಪೋಗೆಲೆ ಪಾಂಥ ಕೇಳಿದಂ* ೩೮

ನಾಲ್ಕು ಜಾವಮುಂ ಸಂಭೋಗಮಂ ಮಾಟ್ಟುದಱಿಂ ನಿದ್ರೆಯಂ ಮಾಟ್ಟುದರ್ಕೆ ಶಕ್ಯಮಲ್ತು. ಇಲ್ಲಿರ್ದವರೆಲ್ಲರುಮೆಗ್ಗರದು ಕಾರಣದಿಂ ಉನ್ನತಪಯೋಧರೆಯಾದೆನ್ನ ಸಂಭೋಗಮಂ ಮಾಟ್ಟುದರ್ಕೆ ತಾನುಮ ಸಮರ್ಥನಾದೊಡಿರು ಎಂಬುದು ವ್ಯಙ್ಗ್ಯಮಾದುದು [ವಾಚ್ಯಬಾಧೆಯಿಂದೆ ವ್ಯಙ್ಗ್ಯಮಿರ್ಪುದಱಿಂದವರ್ಕೆ ಉಪಮಾನೋಪಮೇ ಯಭಾವಮಿಲ್ಲಾದು ದಱಿಂದಲಂಕಾರ ವ್ಯಙ್ಗ್ಯಮಲ್ತು]

**ಮುಖ್ಯಶಬ್ದಶಕ್ತಿವೃಙ್ಗ್ಯಮಪ್ಪಲಂಕಾರಂ ಪದದೊಳೆಂತೆಂದೊಡೆ**

*ಬಲವದರಿರುಧಿರಲೇಪೋ*
*ಜ್ಜ್ವಲತರ ಕರವಾಳ ರುಚಿರ ಭುಜನೊಪ್ಪಿದನ*

*ಸ್ಖಲಿತ ಭ್ರುಕುಟಿ ವಿಟಂಕಿತ*
*ಲಲಾಟಪಟ್ಟಂ ಪ್ರತಾಪನಿಧಿ ನೃಪ ಭೀಮಂ ೩೯*

**ವಿ.** ಇಲ್ಲಿ ಭಯಂಕರ ಮೂರ್ತಿ (ನೃಪಂ)ಗೆ ಭೀಮಸೇನನುಪಮಾನಂ.

**ಮುಖ್ಯಶಬ್ದಶಕ್ತಿ ವ್ಯಙ್ಗ್ಯಮಪ್ಪಲಂಕಾರಂ ವಾಕ್ಯದೊಳೆಂತೆಂದೊಡೆ**

*ಪರಿಕಿಪೊಡತ್ತಲ್ ಚಂದ್ರಾ*
*ಭರಣೆ ಲಸಚ್ಛ್ಯಾಮೆ ತಾರಕಾತರಳೆ ಕರಂ*
*ಸ್ಫುರದುದ್ದೀಪಿತ ಮನ್ಮಥೆ*
*ಪಿರಿದೊಲವನದಾರ್ಗೆ ಮಾಡದಿರ್ಪಳ್ ಜಗದೊಳ್ ೪೦*

**ವಿ.** ಇಲ್ಲಿ ವಾಕ್ಯಮಸಂಬದ್ಧಾರ್ಥವಾಗಬಾರದೆಂದು ಪ್ರಸ್ತುತಾಪ್ರಸ್ತುತಂಗಳ್ಗೆ ಉಪಮಾನೋಪ ಮೇಯಭಾವಮಂ ಕಲ್ಪಿಪುದಱಿಂದುಪಮಾಲಂಕಾರಂ ವ್ಯಙ್ಗ್ಯಂ.

**ಲಕ್ಷ್ಯಕ್ಕೆ ಶಬ್ದಶಕ್ತಿಯಿಂದೆ ಪುಟ್ಟಿದ ವ್ಯಙ್ಗ್ಯಮಪ್ಪ ವಸ್ತು (೧) ಪದದೊಳೆಂತೆಂದೊಡೆ**

*ಘನಮಾಲಾಡಂಬರಂ ಕೇಕಿಗಳ ನಿನದಮೋರಂತೆ ಬಿಟ್ಟಿರ್ಪ ತಂದ*
*ಲ್ವನಿ ತಾಮಾದಂ (ಸಮಂತೊಪ್ಪೆ) ಕಠಿನಮನನುದ್ಯೋಗನಾಗಿರ್ಪ ರಾಮಂ*
*ಗೆನಗೀಗಳ್ ಬಾಧಕಂಗೆಯ್ದೊಡಮಿವನುಱೆ ಸೈರಿಪ್ಪೆನಂತಾದೊಡಂ ತ*
*ಜ್ಜನಕಾತ್ಮೋದ್ಭೂತೆ ಸೀತಾವನಿತೆ (ಹರಯದಲ್ಲೆಂತು) ಸೈರಿಪ್ಪೊಡಾರ್ಪಳ್ ೪೧*

**ವಿ.** ಪ್ರಸ್ತುತಮಾದುತ್ತಮಪುರುಷದಿಂ ರಾಮನೆಂಬುದಱಿಯಬರ್ಪುದಱಿಂ ರಾಮಪದಂ ವ್ಯರ್ಥಂ, ಕಠಿನಮನನೆಂಬುದಱಿಂದೆ ರಾಮಪದಂ ಬೇಕಾದುದು. ಇಲ್ಲಿ ಪಿತೃಮರಣ ಸೀತಾವಿಯೋಗಂ ಮೊದಲಾದ ದುಃಖಾಸ್ಪದನೆಂಬುದಂ ಲಕ್ಷಿಸುತ್ತ ಸಾಧಾರಣಂಗಳಪ್ಪ ನಿರ್ವೇದ ಗ್ಲಾನಿ ಮೋಹಾದಿಕಂಗಳುಂ ಧ್ವನಿಸಲ್ಪಟ್ಟಿತು.

**ವಾಕ್ಯದೊಳೆಂತೆಂದೊಡೆ**

*ಕೃತ ವಿದ್ಯ ಶೂರ ಸೇವಾ*
*ಚತುರರ್ ತಾವೆನಿಪ ಮೂವರುಂ ಸ್ವರ್ಣಸುಪು*
*ಷ್ಪಿತಮಾದಿಳೆಯಂ ನೆರಪುವ*
*ರತಿಶಯಮಂ ಪಡೆವರೆಂಬುದೇನಚ್ಚರಿಯೇ ೪೨*

ಇಲ್ಲಿ ಸುವರ್ಣದಿಂ ಪುಷ್ಪಿತವಾದ ಇಳೆಯಂ ನೆರಪುವರೆಂಬೀ ವಾಕ್ಯಮಸಂಭವ ಮಾದರ್ಥಮನುಳ್ಳುದು. ಸಾದೃಶ್ಯಸಂಬಂಧದಿಂ ಸುಲಭಸಮೃದ್ಧ್ಯತಿಶಯಭಾಜನತ್ವಮಂ ಲಕ್ಷಿಸುತೆ ಶೂರಕೃತವಿದ್ಯಸೇವಕರ್ಗಳ್ಗೆ ಪ್ರಾಶಸ್ತ್ಯಮಂ ದ್ಯೋತಿಸುತ್ತಿರ್ದತ್ತು.

**ಅರ್ಥಶಕ್ತಿಮೂಲವ್ಯಙ್ಗ್ಯಮೆಂತೆಂದೊಡೆ**

**ವಿ.** ವಸ್ತ್ವಲಂಕಾರಂಗಳ್ಗೆ ಪ್ರತ್ಯೇಕಮಾಗಿ ವಸ್ತ್ವಲಂಕಾರ ವ್ಯಂಜಕತ್ವಮುಂಟಾಗೆ ಅರ್ಥಶಕ್ತಿ ಮೂಲವ್ಯಙ್ಗ್ಯಮೆನಿಪ್ಪುದು - ಅದು ಪದ ವಾಕ್ಯ ಪ್ರಬಂಧಗಳೊಳ್ ತೋರ್ಪುದು. ಅಲ್ಲಿಯೆ ಅರ್ಥಮೆನಿತುಪ್ರಕಾರಮೆಂತೆಂದೊಡೆ. ಸ್ವತಃಸಂಭವಿ, ಕವಿಪ್ರೌಢೋಕ್ತಿಮಾತ್ರ ನಿಷ್ಪನ್ನಶರೀರಂ, ಕವಿನಿಬದ್ಧವಕ್ತೃಪ್ರೌಢೋಕ್ತಿ ಮಾತ್ರ ನಿಷ್ಪನ್ನ ಶರೀರಮೆಂದು ಮೂದೆಱಂ - ಉಂಟಾದ ವಸ್ತುವಂ ಉಂಟಾಗಿ ವರ್ಣನೆಯಂ ಮಾಡಿದೊಡೆ **ಸ್ವತಸ್ಸಂಭವಿ**ಯೆನಿಕುಂ, ಕವಿಯ ಜ್ಞಾನಬಲ್ಮೆಯಿಂ ಬಾಹ್ಯದೊಳಿಲ್ಲದಿರ್ಪುದು ನಿರ್ಮಿತ (ಕಲ್ಪಿತ) ಮಾದೊಡೆ **ಕವಿಪ್ರೌಢೋಕ್ತಿ ಮಾತ್ರನಿಷ್ಪನ್ನ ಶರೀರ**ಮೆನಿಕ್ಕುಂ. ಕವಿ ಪ್ರೌಢೋಕ್ತಿಯಿಂ ಪೇೞ್ದರ್ಥಂ ವಕ್ತೃವಿನಿಂ ವಿಶೇಷಿಸಲ್ಪಟ್ಟೊಡೆ **ಕವಿನಿಬದ್ಧವಕ್ತೃ ಪ್ರೌಢೋಕ್ತಿ** ಮಾತ್ರ ನಿಷ್ಪನ್ನ ಶರೀರಮೆನಿಕ್ಕುಂ.

**ಸ್ವತಃಸಂಭವಿಯಲ್ಲಿ ವಸ್ತುವ್ಯಂಜಕತ್ವಂ (೧) ಪದದೊಳೆಂತೆಂದೊಡೆ –**

*ಸಿರಿಗೆ ಸುರದ್ರುಮಕ್ಕೆ ಸಹಜಾತನೆನಲ್ ಪೆಸರ್ವೆತ್ತ ರತ್ನಮುಂ*
*ತ್ವರಿತದೊಳೀ ೞ್ದೆವೆಂಬ ಮತಿಯಲ್ಲಿ ಸಮಸ್ತರ ಮಾನಸಂಗಳೇ*
*ಕರಸತೆವೆತ್ತ ಕಾರಣಮುದಗ್ರನಿತಂಬಿನಿಯೋಷ್ಠ ಪಲ್ಲವಾಂ*
*ತರದೊಳ್ ಜಾಣ್ಮೆಯಿಂದಿರಿಸಿಲಾಯ್ತು ನೆಗೞ್ತೆಯ ಪುಷ್ಪಸಾಯಕಂ ೪೩*

**ವಿ.** ಎಂಬಲ್ಲಿ ಪುಷ್ಪಸಾಯಕನೆಂಬ ಪದದಿಂ ಕಾಮದೇವಂಗೆ ಮೃದೂಪಾಯ ಸೌಕರ್ಯಮುಂ ಪ್ರಕಾಶಿಸಲ್ಪಟ್ಟಿತು.

**(೨) ವಾಕ್ಯದೊಳೆಂತೆಂದೊಡೆ**

*ಇದುವೆ ದಿಟಕ್ಕೆ ನಾಂ ಮೊದಲೆ ಪೋಗುತೆ ನೋಡಿದ ಭಾವಿಯಲ್ತು ಮೇ*
*ಉದಿತತರಂಗಮಾಲೆಗಳಿನೊಪ್ಪುವ ತೀರವಿದಲ್ತು ಮತ್ತಿದಂ*
*ಮುದದೊಳ್ ಕಂಡ ನಾಂ ಪೆಱನೆಯೋ ಚಲಿತೋದ್ಧ್ವಬಲಾಕಸಂಘಮು*
*ಳ್ಳುದಕವಿದಲ್ತು ಗೌಡನ ಮಗಳ್ ಬರೆ ಮೀಹಕೆ ಹರ್ಷದೇೞ್ಗೆಯಿಂ ೪೪*

**ವಿ.** ಎಂಬಲ್ಲಿ ವಾಕ್ಯಾರ್ಥಂ ವಸ್ತುಮಾತ್ರರೂಪದಿಂದಮೆ ಪದಾರ್ಥಂಗಳಂ ವಾಂಛಿಸಲ್ ಯೋಗ್ಯಮಪ್ಪ ಚೆಲ್ವಿಕೆಯುಂ ಜನಕೃತಮೆ ಪರಮಾರ್ಥಮಪ್ಪುದಲ್ತು ಎಂಬ ವಸ್ತು ವ್ಯಙ್ಗ್ಯಂ-

**ವಸ್ತುವಿನಿಂದಲಂಕಾರವ್ಯಂಜಕತ್ವಂ (೧) ಪದದೊಳೆಂತೆಂದೊಡೆ**

*ಅರಿಗಜಕುಂಭದೊಳೋರಂ*
*ತಿರೆ ಧೀರರ ದೃಷಿಯೆಂತು ಕ್ರೀಡಿಪುದಂತು*
*ದ್ಧುರ ಕುಂಕುಮಾಂಕಿತ ಸ್ತನ*
*ಭರದೊಳ್ ಕ್ರೀಡಿಸುವುದಿಲ್ಲ ಚಿತ್ರಂ ಪ್ರಿಯೆಯಾ ೪೫*

**ವಿ.** ಇಲ್ಲಿ ಧೀರರ್ಕಳೆಂಬ ಪದಾರ್ಥಂ ವಸ್ತುರೂಪಂ. ಕುಚಂಗಳ್ಗಂ ಕುಂಭ ಸ್ಥಳಂಗಳ್ಗಂ ಉಪಮಾಲಂಕಾರಮಂ ಧ್ವನಿಯಿಸಿತು.

**(೨) ವಾಕ್ಯದೊಳೆಂತೆಂದೊಡೆ**

*ಸುತ ಶೋಕ ವಹ್ನಿ ದಗ್ಧೋ*
*ನ್ನತಕಾಯಂ ಬಾಹ್ಯಕುಂಡಸಂಸ್ಥಿತಶಿಖಿ ತಾ*
*ನತಿಶೀತಮೆಂದು ನಿಲ್ಲದೆ*
*ದ್ರುತಗತಿಯಿನಗಾಧಮಪ್ಪ ಮಡುವೊಳ್ ಬಿಷ್ದಿಂ* ೪೭

ಇಲ್ಲಿ ವಸಿಷ್ಠಂ ಪುತ್ರಶೋಕದಿಂ ಬೆಂದು ಅಗ್ನಿಯಂ ಪೊಕ್ಕೊಡೆ ಬೇಯನೆಂಬ ವಾಕ್ಯಾರ್ಥ ರೂಪಮಪ್ಪ ವಸ್ತುಸ್ವಭಾವಂ, ಶೋಕಂ ಬಾಹ್ಯಾಗ್ನಿಯಿಂದಧಿಕಮೆಂಬ ವ್ಯತಿರೇಕಾಲಂಕಾರಮಂ ಧ್ವನಿಯಿಸಿತು.

**ಅಲಂಕಾರಕ್ಕೆ ವಸ್ತುವ್ಯಂಜಕತ್ವಂ (೧) ಪದದೊಳೆಂತೆಂದೊಡೆ**

*ಚೂತಂ ತಳಿರ್ತು ಕುಸುಮ*
*ವ್ರಾತಮನುಱೆ ತಳೆಯೆ ಮಿತ್ರಮಧುವಾಸಶ್ರೀ*
*ಯೋತುಮೊಡಗೂಡದಿರ್ದೊಡೆ*
*ಚೂತಂ ಚುಂಬಿಸಲೆ ಸಂದನುದ್ಗ ಮಚಾಪಂ* ೪೮

**ವಿ.** ಇಲ್ಲಿ ಕೂಡದಿರ್ದೊಡಮೆಂಬುದಱಿಂ ವಿರೋಧಾಲಂಕಾರಂ ವಾಚ್ಯ ಮಾಯ್ತುದಱಿಂ ಮಧುಮಾಸಂ ಪ್ರೌಢಮಪ್ಪುದಾಗೆಯೆಂತಪ್ಪುದೋ ! ಎಂಬ ವಸ್ತು ಧ್ವನಿಸಲ್ಪಟ್ಟುದು.

**ಅಲಂಕಾರಕ್ಕೆ [ವಸ್ತು] ವ್ಯಂಜಕತ್ವಂ (೨) ವಾಕ್ಯದೊಳೆಂತೆಂದೊಡೆ**

*(ತರಾವೋದ್ಧತದುಹೃನ್ಮ)? ಮದವಾರಣಕುಂಭಶೋಣಿತೋ*
*ಲ್ಲಸಿತಮುದಗ್ರಬಾಹು* **ಕವಿಸಾಳುವಮಲ್ಲ***ಕರಸ್ಥಿತಂ ಕರಂ*
*ನಿಶಿತಕರಾಳಖಡ್ಗವೆಸೆದತ್ತರಿವೀರರ ಕಣ್ಗೆ ಯುದ್ಧದೊಳ್*
*ಮಸಕದ ಮುಪ್ಪೊಟಿಲ್ಗೆ ಮುಳಿದೀಶ್ವರಕೇಕರಕಾಂತಿ ನೀಳ್ದವೋಲ್* ೪೯

**ವಿ.** ಇಲ್ಲಿ ಸ್ವತಸ್ಸಂಭವಿಯಪ್ಪುತ್ಪ್ರೇಕ್ಷಾಲಂಕಾರದಿಂ ಸಕಳರಿಪುಬಲಕ್ಷಯಂ ಕ್ಷಣಾರ್ಧದೊಳ್ ಮಾಡಲ್ಪಟ್ಟುದೆಂಬ ವಸ್ತುವ್ಯಙ್ಗ್ಯಂ -

**ಅಲಂಕಾರದಿನಲಂಕಾರವ್ಯಙ್ಗ್ಯಂ (೧) ಪದದೊಳೆಂತೆಂದೊಡೆ**

*ಮದವಳಿಗೆ ನಿನ್ನಕಾಂತನ*
*ಸದಮಳರಾಗೋಷ್ಠವಿಂದಿನುದಯದೊಳುಱೆ ಬಾ*
*ಡಿದ ಸರಸಿಜದೆಸಳಾಯ್ತೆಂ*
*ಬುದುಗೇಳುತ್ತಿರದೆ ಬರೆದಳೊರ್ವಳ್ ನೆಲನಂ* ೫೦

**ವಿ.** ಇಲ್ಲಿ ಬಾಡಿದ ಸರಸಿಜದೆಸಳಾಯ್ತೆಂಬ ಪದದಿಂ ವಾಚ್ಯಮಾದ ರೂಪಕದಿಂ ಬಾಡಿದು ದರ್ಕೆ ಮತ್ತೊಂದುಕಾರಣಮಿಲ್ಲದುದಱಿಂ ನಿನ್ನಿಂದೀತನಧರಂ ಮರಲ್ದು ಮರಲ್ದು ಚುಂಬಿಸಲ್ಪಟ್ಟಿತೆಂದನುಮಾನಾಲಂಕಾರಂ ವ್ಯಂಜಿಸಲ್ಪಟ್ಟಿತು.

**ಅಲಂಕಾರದಿನಲಂಕಾರವ್ಯಙ್ಗ್ಯಂ (೧) ವಾಕ್ಯದೊಳೆಂತೆಂದೊಡೆ**

*ನಿರುಪಮಸಾಳುವಮಲ್ಲನ*
*ವರಗುಣಮಂ ಪೊಗೞ್ವೆನೆಂಬನಾವಂ ರತ್ನಾ*
*ಕರಜಲಮಂ ಕರತಳದಿಂ*
*ಭರದಿಂದಂ ತೀವಿ ತೀರ್ಚಲಾಪನ್ನನವಂ ೫೧*

**ವಿ.** ಇಲ್ಲಿ ನಿದರ್ಶನಾಲಂಕಾರದಿಂ ಸಾಳುವಮಲ್ಲನ ಗುಣಂಗಳ್ ವರ್ಣಿಪೊಡ ಶಕ್ಯಮೆಂದು ಪೇೞ್ವ ಅಸಾಧಾರಣ ತದ್ವಿಶೇಷಂಗಳಂ ಪ್ರಕಾಶಿಸುವಲ್ಲಿ ತತ್ಪರಮಾದಾಕ್ಷೇ ಪಾಲಂಕಾರಂ ಧ್ವನಿಸಲ್ಪಟ್ಟಿತು-

**(೨) ಅರ್ಥಶಕ್ತಿ ಮೂಲವ್ಯಙ್ಗ್ಯಂ ಪ್ರಬಂಧದೊಳೆಂತೆಂದೊಡೆ**

*ಎಲೆ ಮಾನವರಿರ ಪೊೞ್ತಿದೆ*
*ಸಲೆ ಕನಕಪ್ರತಿಮೆಯಂತೆ ತೋರ್ಪೀ ಸಿಸುವಂ*
*ನೆಲದೊಳ್ ನಿಕ್ಷೇಪಿಸ ಬೇ*
*ಡೊಲೆದಿರ್ದಸು ಮಗೞ್ದು ಬರ್ಕುವದು ಬಿದಿವಶದಿಂ ೫೨*

**ವಿ.** ಇದು ರಾತ್ರಿಯಲ್ಲಿ ಸಮರ್ಥನಪ್ಪ ನರಿಯ ಮಾತು

*ಅತಿಭಯಮಂ ಪುಟ್ಟಿಸುವೀ*
*ಪಿತೃವನಮಂ ಪೊಕ್ಕು ಮಗುೞ್ದಿ ಶವ (ಮೊಂದಿ) ಲ್ಲೀ*
*ಕ್ಷಿತಿಯೊಳ್ ಮರ್ವೊದವದ ಮು*
*ನ್ನೆ ತೊಲಗಿ ಸುಕ್ಷೇಮವೃತ್ತಿಯಿಂ ಮನೆಗೆಯ್ದಿಂ ೫೩*

**ವಿ.** ಇದು ದಿನದಲ್ಲ ಸಮರ್ಥ[ನಪ್ಪ] ಪರ್ದಿನ ಮಾತು.

ಇಂತೆಂದು ಪ್ರಬಂಧದಿಂ ಪೇೞಲ್ಪಟ್ಟರ್ಥದಿಂ ನರಿಪರ್ದುಗಳ ತಂತಮ್ಮ ವೇಳೆ ಯಲ್ಲಿಯಾ ಶವಭಕ್ಷಣಾಭಿಪ್ರಾಯಂ ಪ್ರಕಾಶಿಸಲ್ಪಟ್ಟಿತ್ತು. ಈ ರೀತಿಯಲ್ಲಿ ವಸ್ತುವಿನಿಂದ ಲಂಕಾರ ವ್ಯಂಜಕತ್ವಮಂ, ಅಲಂಕಾರದಿಂ ವಸ್ತುವ್ಯಂಜಕತ್ವಮಂ, ಅಲಂಕಾರದಿಂದಲಂ ಕಾರವ್ಯಂಜಕತ್ವಮಂ ಪ್ರಬಂಧದೊಳ್ ಮೇಣ್ ಯೋಜಿಸಿಕೊಳ್ವುದು.

**ಕವಿಪ್ರೌಢೋಕ್ತಿಯುಳ್ಳ ವಸ್ತುವಿನಿಂ ವಸ್ತುವ್ಯಙ್ಗ್ಯಮೆಂತೆಂದೊಡೆ**

*ಸುರಗಿರಿಕೂಟದೊಳ್ ನೆಗೞ್ದ ಕಿನ್ನರಿಯರ್ಕಳ್ ಸಾಳ್ವಮಲ್ಲಭೂ*
*ವರವರಕೀರ್ತಿಯಂ ಪದೆದು ಪಾಡುವಿನಂ ದಿಗಿಭಾಳಿ ಕೇಳ್ದು ಕೇ*
*ಕರದೊಳ್ ಕರ್ಣಮೂಲಮನಭೀಕ್ಷಿಸಿ ಸತ್ತುಲಿನಸ್ಥಳಾಗ್ರಸಂ*
*ಸ್ಫುರಿತ ಮೃಣಾಳಮೆಂದು ಸೆಳೆವುಜ್ಜುಗದಿಂ ಕರಮಂ ನಿಮಿರ್ಚುಗುಂ ೫೪*

**ವಿ.** ಇಲ್ಲಿ [ಸಾಳ್ವ ಮಲ್ಲಭೂಪನ] ಕೀರ್ತಿಯಂ ಕೇಳ್ದು ದಿಗಿಭಾಳಿ ಕರ್ಣ ಮೂಲಮನೀಕ್ಷಿಸಿ (ಯಲ್ಲಿ ತೋರ್ಪ ಜಸಮಂ) ಮೃಣಾಳಮೆಂದು ಸೆಳೆವುಜ್ಜುಗದಿಂ ಕರಮಂ ನಿಮಿರ್ಚುಗುಮೆಂಬ ವಾಚ್ಯಾರ್ಥಮಪ್ಪ ಕವಿನಿಬದ್ಧಪ್ರೌಢೋಕ್ತಿಯಿಂ (ಯಶಮಂ ಬಿಳಿದೆಂದು ಬಣ್ಣಿಪುದು ಕವಿಸಮಯ ಸಿದ್ಧಮಾದುದಱಿಂ) ದಾತನಕೀರ್ತಿ ದಿಗಂತ ಪ್ರಸಾರಿತಮಾಯ್ತೆಂಬ ವಸ್ತು ವ್ಯಂಜಿತವಾದುದು.

**ಕವಿಪ್ರೌಢೋಕ್ತಿಯೊಳ್ ವಸ್ತುವಿನಿಂದಲಂಕಾರಮೆಂತೆಂದೊಡೆ**

***ವರಸಾಳ್ವಮಲ್ಲನಿಂ ಸಂ***
*ಗರದೊಳ್ ಜಯಲಕ್ಷ್ಮಿ ಚಾರುತರವಚದಿಂ ಸ್ವೀ*
*ಕರಿಸಲ್ಪಟ್ಟಳದೇಂ ತ*
*ತ್ಕರಿಕಂಧರವದ್ರಿಕುಹರದಿಂ ಸ್ವೀಕರಿಕುಂ*      *೫೫*

**ವಿ.** ಇಲ್ಲಿ ವಿಜಯಲಕ್ಷ್ಮಿಯ ಮುಂದಲೆವಿಡಿದುದಂ ನೋೞ್ಪುದಱಿಂ ಮದನೋ ದ್ರೇಕಂಗಳಾದುವೆಂಬಂತೆ ಗಿರಿಕಂದರಂಗಳ್ ನಿನ್ನ ಶತ್ರುಗಳೋಡಿ ಗುಹೆಯೊಳಿರ್ದಪ ರೆಂಬುದಲ್ತು. ಮತ್ತಂ ನಿನ್ನತ್ತಣಿಂದಪ್ಪ ಪರಾಭವಮಂ ಶಂಕಿಸಿ ಗುಹೆಗಳವರ ಕೊರಲು ವೀಯವೆಂದು ಪಿಡಿದುವೆಂಬುದಪಹ್ನುತ್ಯಲಂಕಾರಂ ವ್ಯಙ್ಗ್ಯಂ.

**ಕವಿಪ್ರೌಢೋಕ್ತಿಯೊಳಲಂಕಾರದಿಂ ವಸ್ತುವ್ಯಙ್ಗ್ಯವೆಂತೆಂದೊಡೆ**

*ಭರದೇಕಾಂತನಿವಾಸದೊಳ್ ಪದೆದು ಗಾಢಾಲಿಂಗನೋದ್ಯುಕ್ತನಾ*
*ಗಿರೆ ಕಾಂತಂ ಘನಮಾನಗರ್ವಿತೆಯರಪ್ಪಾನೀರೆವೆಂಡಿರ್ಗಳು*
*ದ್ಧುರಮಾನಂ ದೃಢಪೀಡನೋದ್ಭಭಯದಿಂ ಬಿಟ್ಟು ಪೋಯ್ತೆಂಬಿನಂ*
*ಪಿರಿದಾವೇಗದೆ ಪಿಂಗಿದತ್ತು ಹೃದಯಾಂಭೋಜಾತಪೀಠಸ್ಥಿತಂ*    *೫೬*

**ವಿ.** ಇಲ್ಲಿ ಕವಿಪ್ರೌಢೋಕ್ತಿಯಿಂದ ಪುಟ್ಟಿದುತ್ಪ್ರೇಕ್ಷಾಲಂಕಾರದಿಂ ಮನದ ತೊಲಗಿಕೆಯಿಂ ಸೂಚಿಸಲ್ಪಟ್ಟ ಪ್ರತ್ಯಾಲಿಂಗನಂ ಮೊದಲಾದುವಱ ಪೆರ್ಚುಗೆಯೆಂಬ ವಸ್ತು ಧ್ವನಿಸಲ್ಪಟ್ಟಿತು.

**ಕವಿಪ್ರೌಢೋಕ್ತಿಯೊಳಲಂಕಾರದಿನಲಂಕಾರವ್ಯಙ್ಗ್ಯವೆಂತೆಂದೊಡೆ**

*ವರಕವಿವಕ್ತ್ರ ಪಂಕರುಹದೊಳ್ ನೆಲೆಗೊಂಡು ಸಮಸ್ತವಿಷ್ಟಪೋ*
*ತ್ಕರಮನೊರಲ್ದಲಂಪಿನೊಳೆ ನೂತನಮಾಗಿ (ಯೊಸರ್ವ) ಸೃಷ್ಟಿಯು*
*ದ್ಧುರತರಲೀಲೆಯಿಂ ಕಮಲವಿಷ್ಟರನಂ ನಗುತಿರ್ಪಳಾವಳಾ*
*ಸರಸತಿ ಕೂರ್ತು ಬೇಟ್ಟ ವರಮಂ ಭಜಕಾವಳಿಗೀಗೆ ಸಂತತಂ*      *೫೭*

**ವಿ.** ಇಲ್ಲಿ ನಗುತಿರ್ಪಳೆಂಬಂತೆಯೆಂಬುತ್ಪ್ರೇಕ್ಷಾಲಂಕಾರದಿಂ ಚಮತ್ಕಾರಕ್ಕೆ ಮುಖ್ಯ ಕಾರಣ ಮಾದ ಜಗತ್ತಿನ ಜಡಜಾಸನನಸ್ಥೆಯಾಗಿ ನಿರ್ಮಿಸಲ್ಪಟ್ಟಳೆಂಬ ವ್ಯತಿರೇಕಾಲಂಕಾರಂ ವ್ಯಙ್ಗ್ಯಂ-

**ಕವಿನಿಬದ್ಧ ವಕ್ತೃಪ್ರೌಢೋಕ್ತಿಯೊಳ್ ವಸ್ತುವಿನಿಂ ವಸ್ತುವ್ಯಙ್ಗ್ಯವೆಂತೆಂದೊಡೆ**

*ವಿಳಸಲ್ಲಂಕಾಚಲೋಪಾಂತದೊಳ್ ಸುೞಿದ ಸಂಭೋಗಕಾಂತೋರಗೀಸಂ*
*ಕುಳಮಾದಂ ಪೀರ್ದು ಮೆಯ್ಸಣ್ಣಿಸಿದ ಲಲಿತವಾಯುಪ್ರತಾನಂಗಳೀಗಳ್*
*ಮುಳಿಸಿಂ ಕಾಂತರ್ಕಳೊಳ್ ಪಿಂಗಿದ ವಿರಹದ ಪೆಂಡಿರ್ಗಳಾಸುಯ್ಲು ಮೇಳಂ*
*ದಳೆದುರ್ವಿಂ ಬೀಸುಗುಂ ಬಾಲತೆಯೊಳ್ ಹರೆಯಂ ಪೂರ್ತಿವೆತ್ತಂತುವೆತ್ತಂ* ೫೮

**ವಿ.** ಇಲ್ಲಿ ನಿಟ್ಟುಸಿರನುಳ್ಳ ಪ್ರಾಪ್ತಮಾದೈಶ್ವರ್ಯಮನುಳ್ಳ ವಾಯುಗಳ ಘಟಿತಮಾದ ಕಾರ್ಯಮಂ ಸಂಘಟಿಸುತ್ತುಮಿರ್ದುಪುವೆಂಬಿವು ಮೊದಲಾದುವು ವ್ಯಙ್ಗ್ಯಂ.

**ವಸ್ತುವಿನಿಂದಲಂಕಾರ ವ್ಯಙ್ಗ್ಯವೆಂತೆಂದೊಡೆ**

*ಏನೆಂಬೆಂ ಕೆಳದಿಯೆ ಮ*
*ನ್ಮಾನವನೀ ಹೃದಯದಲ್ಲಿ ಸೆಱೆಗೆಯ್ದುದಱಿಂ*
*ದಾನಿರೆ ಪತಿವೀಕ್ಷಣ ಸಂ*
*ಧಾನಸಹಾಯದೆ ಕಟಲ್ದು ಪೋಯ್ತುತಿವೇಗಂ* ೫೯

**ವಿ.** ಇಲ್ಲಿ ಮಾನಪಲಾಯನರೂಪಮಾದ ವಸ್ತುವಿನಿಂ ನಾಯಕಂ ಪ್ರಾರ್ಥನೆ ಮಾಡದಿ ರ್ದೊಡಂ ನಾಯಿಕೆ ಪ್ರಸನ್ನಳಾದಳೆಂಬ ವಿಭಾವನಾಲಂಕಾರಂ ವ್ಯಙ್ಗ್ಯಂ. ಮೇಣ್ ಪ್ರಿಯದರ್ಶನಸೌಭಾಗ್ಯದ ಬಲಂ ಧೈರ್ಯದಿಂ ತಾಳ್ವೆನೆಂದೊಡೆ ಶಕ್ಯಮಲ್ತುಯೆಂಬುತ್ಪ್ರೇಕ್ಷಾಲಂಕಾರಂ ವ್ಯಙ್ಗ್ಯಂ. ಮೇಣ್ ಪ್ರಿಯದರ್ಶನಕ್ಕೆ ನಾಯಕತ್ವಂ, ಮಾನಕ್ಕೆ ಪ್ರಿಯದರ್ಶನತ್ವಂ ಧೈರ್ಯಕ್ಕೆ ತತ್ಸಾಮಂತತ್ವಮೆಂಬೀ ವ್ಯವಸ್ಥೆಗಳ್. ಉತ್ಪ್ರೇಕ್ಷಾಲಂಕಾರಂ ವ್ಯಙ್ಗ್ಯಂ.

**ಅಲಂಕಾರದಿಂ ವಸ್ತುವ್ಯಙ್ಗ್ಯವೆಂತೆಂದೊಡೆ**

*ಸರಸಿಜನೇತ್ರೆ ಕಾಯ್ಪು ಮನಕಾದುದೆ ಪೇೞ್ ನಯನಂಗಳಲ್ಲಿ ಕೆಂ*
*ಪುರುತರಮಾಯ್ತು ಕೇಳ್ ಪ್ರಿಯನೆ ನಿನ್ನಯ ಮೆಯ್ಯೊಳ್ ತಳ್ತು ಸಾರ್ದ ದು*
*ರ್ಧರನಖಘಾತಿ ರಕ್ತವಸನೋಜ್ಜ್ವಳಶೋಭೆಯೆಯೆನ್ನ ದೃಷ್ಟಿಗಾ*
*ಧರಣಿಯೊಳೀಯಲಾದುದುರುಕೋಪದ ಕೆಂಕಮಿದಲ್ತು ನಿಶ್ಚಯಂ* ೬೦

ಇಲ್ಲಿ ಕುಪಿತಮಾದ ಲೋಚನಂಗಳನೇಕಾರಣಂ ಧರಿಯಿಸುತಿರ್ದೆಯೆಂಬ ಪ್ರಶ್ನೋತ್ತರಾಲಂಕಾರದಿಂ ಬಱಿಯಾರ್ದ್ರನಖಕ್ಷತಾದಿಗಳನೆ ಮಱೆಸುತಿರ್ದಪುದೆಂಬುದಲ್ತು ಅದರ್ಕೆ ಸಂದುಂ ಪ್ರಸಾದ ಪಾತ್ರವಾದುದಿಲ್ಲಮೆಂಬ ವಸ್ತು ವ್ಯಙ್ಗ್ಯಂ.

**ಅಲಂಕಾರದಿನಲಂಕಾರವ್ಯಙ್ಗ್ಯವೆಂತೆಂದೊಡೆ**

*ಭಾವಕ ಕೇಳ್ ಭವದ್ಧೃದಯಮೊಪ್ಪುವ ಸಾಯಿರವೆಂಡಿರಿಂದೆ ಪೂ*
*ರ್ಣಾವಹಮಿಂತಿದಿನ್ನಿದಱೊಳಾಂ ಪುಗಲಿಂಬಿನಿತಿಲ್ಲೆನುತ್ತೆ ನಾ*
*ನಾವಿಧದುಜ್ಜುಗಂಗಳಿನಿತಿಲ್ಲದೆ ತನ್ವಿಯೆನಾದೊಡಂ ಕರಂ*
*ಭಾವಿಸಿ ನಲ್ಮೆಯಿಂದತಿತನುತ್ವಮನೆನ್ನ ಶರೀರಕಿತ್ತಪೆಂ* ೬೧

**ವಿ.** ಇಲ್ಲಿ ಹೇತ್ವಲಂಕಾರದಿಂ ಸಣ್ಣಮಾದ ಶರೀರಮತಿಸಣ್ಣಮಂ ಮಾಡಿದೊಡಂ ನಿನ್ನ ಚಿತ್ತದೊಳಾಂ ವರ್ತಿಸೆನೆಂಬ ವಿಶೇಷೋಕ್ತ್ಯಲಂಕಾರಂ ವ್ಯಙ್ಗ್ಯಂ. ಗ್ರಂಥ ವಿಸ್ತರ ಭಯದಿ ನತಿವಿಸ್ತರಮಂ ಮಾಡಿದುದಿಲ್ಲಂ.

**ಶಾ ರ ದಾ ವಿ ಲಾ ಸ ದೊ ಳ್**

ಧ್ವನಿಙ್ಗ್ಯ ವಿವರಣಂ
**ದ್ವಿತೀಯ ಪರಿಚ್ಛೇದಂ**
ಸಮಾಪ್ತಂ

# ಅನುಬಂಧಗಳು:

# ಅನುಬಂಧ ೧ – ಜೈನಾಚಾರ್ಯರು

(ಸಾಳ್ವ ಭಾರತದಲ್ಲಿ ಉಲ್ಲೇಖವಾಗಿರುವ ಕೆಲವು ಜೈನಾಚಾರ್ಯರ ಕಿರುಪರಿಚಯವನ್ನು ಇಲ್ಲಿ ಕೊಟ್ಟಿದೆ. ಜೈನ ತೀರ್ಥಂಕರರು ಉತ್ತರ ಭಾರತದಲ್ಲಿ ಜನ್ಮ ಭಾರತದಲ್ಲಿ ಜನ್ಮ ತಳೆದಿದ್ದಾರೆ-ಶ್ರೇಷ್ಠ ಜೈನಾಚಾರ್ಯರೂ, ಅದರಲ್ಲಿಯೂ ದಿಗಂಬರಾಚಾರ್ಯರು ದಕ್ಷಿಣ ಭಾರತದಲ್ಲಿ ಜನ್ಮ ತಳೆದಿದ್ದಾರೆ-ಇದು ಗಮನಾರ್ಹವಾಗಿದೆ. ಕನ್ನಡ ಕವಿಗಳಲ್ಲಿ ಜೈನಾಚಾರ್ಯರ ಹೆಸರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉಲ್ಲೇಖಿಸುವವರಲ್ಲಿ, ಶಾಂತಿನಾಥ, ಸಾಳ್ವಕವಿ ಮತ್ತು ಶಿಶುಮಾಯಣ ಮುಂತಾದವರು ಗಣ್ಯರಾಗಿದ್ದಾರೆ.)

**ಅಕಲಂಕದೇವ [೧-೧೭]:** ತಾರ್ಕಿಕ ಚೂಡಾಮಣಿ, ಜಿನಶಾಸನ ದೀಪಕ ಪ್ರಶಸ್ತಿ ಖ್ಯಾತರಾದ ಅಕಲಂಕದೇವರು (ಅಕಳಂಕ, ಭಟ್ಟಾಕಳಂಕ) ಜೈನ ನ್ಯಾಯಶಾಸ್ತ್ರ ಪ್ರತಿಷ್ಠಾಪಕರು. ಉಮಾಸ್ವಾತಿಗಳ ತತ್ವಾರ್ಥಸೂತ್ರಕ್ಕೆ 'ತತ್ವಾರ್ಥರಾಜವಾರ್ತಿಕ' ವೆಂಬ ಟೀಕಾಕಾರರು, ಸಮಂತಭದ್ರರ ಆಪ್ತಮೀಮಾಂಸಾ ಕೃತಿಗೆ ಅಷ್ಟಶತೀ ಎಂಬ ಭಾಷ್ಯಕಾರರು. ಇತರ ಕೃತಿಗಳು: ನ್ಯಾಯವಿನಿಶ್ಚಯ, ಪ್ರಮಾಣ ಸಂಗ್ರಹ, ಲಘೀಯ ಸ್ತ್ರಯ, ಸಿದ್ಧಿವಿನಿಶ್ಚಯ. ಬೌದ್ಧರೊಡನೆ ವಾದಗಳಲ್ಲಿ ಗೆದ್ದು ದಿಗ್ವಿಜಯ ಸಂಪಾದಿಸಿದರು. ಪ್ರಾಚೀನ ನಳಂದ ವಿಶ್ವವಿದ್ಯಾಲಯದಲ್ಲಿ ಧರ್ಮಪಾಲರ ನೇತೃತ್ವದಲ್ಲಿ ಬೌದ್ಧ ಧರ್ಮ ವಿಜೃಂಭಿಸುತ್ತಿದ್ದಾಗ ಅಕಲಂಕರು ಅಹಿಂಸೆ – ಸ್ಯಾದ್ವಾದದ ಧ್ವಜವನ್ನು ಹಾರಿಸಿದ್ದು ಅಸಾಮಾನ್ಯ ಘಟನೆ. ಅಕಲಂಕರ ಕಾಲ ಏಳನೆಯ ಶತಮಾನ.

**ಅನಂತವೀರ್ಯ [೧-೧೭]:** ಅಕಲಂಕಾಚಾರ್ಯರ ಪಂಥದಲ್ಲಿ ಬಂದ ಗಣ್ಯ ಆಚಾರ್ಯರು. ಅಕಲಂಕರ ಅನುಪಲಬ್ಧ ಕೃತಿಗಳಲ್ಲೊಂದಾದ ಸಿದ್ಧಿ ವಿನಿಶ್ಚಯಕ್ಕೆ ಅನಂತವೀರ್ಯರು ನ್ಯಾಯ ವಿನಿಶ್ಚಯ ವೃತ್ತಿಯೆಂಬ ವಿದ್ವತ್ಪೂರ್ಣವಾದ ಟೀಕಾಗ್ರಂಥ ಬರೆದಿದ್ದಾರೆ. ವಾದಿರಾಜರು (೧೧ನೆಯ ಶ.) ತಮ್ಮ ನ್ಯಾಯವಿನಿಶ್ಚಯ ವಿವರಣವೆಂಬ ಕೃತಿಯಲ್ಲಿ 'ಪ್ರಪಂಚವನ್ನೇ ನುಂಗುವ ಶೂನ್ಯವಾದವೆಂಬ ಅಗ್ನಿಯು ಅನಂತವೀರ್ಯರ ವಚನಾಮೃತ ವೃಷ್ಟಿಯಿಂದ ಶಾಂತವಾಯಿತು' ಎಂದು ಬರೆದಿದ್ದಾರೆ. ಅನಂತವೀರ್ಯರ ಇನ್ನೆರಡು ಕೃತಿಗಳು ಪ್ರಮಾಣ ಸಂಗ್ರಹ ಭಾಷ್ಯಾ ಮತ್ತು ಪ್ರಮೇಯ ರತ್ನಮಾಲಾ. ಅಕಲಂಕರ ಶಿಷ್ಯರಾದ ಮಾಣಿಕ್ಯ ನಂದಿಗಳು ಪ್ರತಿಪಾದಿಸಿದುದನ್ನು ಅನಂತವೀರ್ಯರು ಎತ್ತಿ ಹಿಡಿದಿದ್ದಾರೆ: 'ಅಕಲಂಕರ ಶಬ್ದ ಸಾಗರವನ್ನು ಮಥಿಸಿದ ಮಾಣಿಕ್ಯ ನಂದಿಗಳಿಗೆ ನಮಸ್ಕರಿಸುತ್ತೇನೆ.' ಇವರ ಕಾಲ ಹತ್ತನೆಯ ಶತಮಾನ.

**ಅಭಯಸೂರಿ [೧-೪೩]:** ಅಭಯ ಚಂದ್ರರೆಂಬ ಹೆಸರಿನ ಆಚಾರ್ಯರಿಗೂ ಈ ಹೆಸರಿತ್ತು. ಇವರು ೧೩೩೩-೧೩೪೩ರಲ್ಲಿದ್ದ ಒಬ್ಬ ಪ್ರಸಿದ್ಧ ಜೈನಾಚಾರ್ಯರು. ಅಭಯಸೂರಿಗಳು. ಚಾವುಂಡರಾಯನ ಗುರುಗಳಾದ ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯರಿಂದ ರಚಿತವಾದ ಗೊಮ್ಮಟ ಸಾರವೆಂಬ ಗ್ರಂಥಕ್ಕೆ 'ಮಂದಪ್ರಭೋಧಿನೀ' ಎಂಬ ಟೀಕಾಕೃತಿಯನ್ನು ರಚಿಸಿದ್ದಾರೆ. ಇವರು ಮಹಿಭೂಷಣಾಚಾರ್ಯರ ಶಿಷ್ಯರು. ಸಾಳ್ವ ಕವಿಯ ಕಾವ್ಯವನ್ನು ಆಲಿಸಿದ ಆಚಾರ್ಯ ವರಗುಮ್ಮಟಾರ್ಯರು ಈ ಅಭಯಸೂರಿಗಳ ಶಿಷ್ಯರು. ಇವರ ಕಾಲ ೧೪ನೆಯ ಶತಮಾನ.

**ಅರ್ಹದ್ಬಲಿ [೧-೧೩]:** ಇವರು ಆಚಾರಾಂಗ (ಏಕಾಂಗ) ಶ್ರುತಧರರು. ಅರ್ಹದ್ಬಲಿ ಆಚಾರ್ಯರನ್ನು ಪ್ರಾಕೃತದಲ್ಲಿ ಅಹಿವಲ್ಲ ಎಂದು ಹೆಸರಿಸಿದೆ.ಇವರಿಗೆ ಗುಪ್ತಿಗುಪ್ತ ವಿಶಾಖಾಚಾರ್ಯ ಎಂಬ ಹೆಸರುಗಳೂ ಇರುವಂತೆ ತೋರುತ್ತದೆ. ಲೋಹಾಚಾರ್ಯರಾದ ಮೇಲೆ ಈ ಅರ್ಹದ್ಬಲಿಗಳೇ ಪ್ರಮುಖರು. ಇವರಾದ ಮೇಲೆ ಮಾಘನಂದಿ, ಧರಸೇನ, ಧರಸೇನ, ಭೂತಬಲಿ, ಪುಷ್ಪದಂತರು ಬಂದರೆಂಬುದಕ್ಕೆ ಆಧಾರಗಳಿವೆ: 'ನಂದಿಪಟ್ಟಾವಲೀ'ಯಲ್ಲಿ ಬರುವ ಪದ್ಯ;

*ಅಹಿವಲ್ಲಿ ಮಾಘನಂದಿಯ ಧರಸೇಣಂ ಪುಷ್ಪಯಂತ ಭೂದಬಲಿ|*
*ಅಡವೀಸಮ್ ಇಗವೀಸಮ್ ಉಗಣೀಸಂ ತೀಸವೀಸವಾಸಪುಣೋ* ||

ಭದ್ರಾಬಾಹುಗಳ ಶಿಷ್ಯರು ಅರ್ಹದ್ಬಲಿ, ಇವರ ಶಿಷ್ಯರು ಕುಂದ ಕುಂದರು. ಲೋಹಾಚಾರ್ಯ, ಅರ್ಹದ್ಬಲಿ, ಮಾಘನಂದಿ, ಜಿನಚಂದ್ರ, ವಜ್ರಸ್ವಾಮಿ-ಇವರ ಸತೀರ್ಥರು; ಕಾಲ ಸುಮಾರು ಕ್ರಿ.ಪೂ.ಒಂದನೆಯ ಶತಮಾನ.

**ಉಮಾಸ್ವಾತಿ [೧-೧೫]:** ಉಮಾಸ್ವಾತಿ (-ದ್ವಿ, -ಮಿ)ಗಳು ಶ್ವೇತಾಂಬರ – ದಿಗಂಬರ ಇಬ್ಬರಿಂದ ಮಾನ್ಯರು: ಶ್ವೇತಾಂಬರರು ವಾಚಕಾಚಾರ್ಯರೆಂದೂ, ದಿಗಂಬರರು ಶ್ರುತಕೇವಲೀ ಸದೃಶರೆಂದೂ ಕರೆದಿದ್ದಾರೆ. ಶ್ರುತಕೇವಲಿದೇಶಿಯ, ಗೃಧ್ರ (ಗೃದ್ಧ) ಪಿಂಛಾಚಾರ್ಯ ಎಂಬ ಹೆಸರುಗಳೂ ಇದ್ದಂತೆ ಕಾಣುತ್ತದೆ. ಇವರು ಕುಂದಕುಂದರ ತರುವಾಯದವರು, ಸಮಂತ ಭದ್ರರಿಗಿಂತ ಮೊದಲಿನವರು. ನ್ಯಾಯದರ್ಶನದಲ್ಲಿ ನ್ಯಾಯಸೂತ್ರಗಳಿಗೆ, ವೇದಾಂತ ದರ್ಶನದಲ್ಲಿ ವೈಶೇಷಿಕ ಸೂತ್ರಗಳಿಗೆ, ಮೀಮಾಂಸಾ ದರ್ಶನದಲ್ಲಿ ಜೈಮಿನಿ ಸೂತ್ರಗಳಿಗೆ, ವೇದಾಂತ ದರ್ಶನದಲ್ಲಿ ಬಾದರಾಯಣ ಸೂತ್ರಗಳಿಗೆ, ಯೋಗ ದರ್ಶನದಲ್ಲಿ ಯೋಗ ಸೂತ್ರಗಳಿಗೆ ಇರುವ ಸ್ಥಾನ ಜೈನ ದರ್ಶನದಲ್ಲಿ ಉಮಾಸ್ವಾತಿಗಳ ತತ್ವಾರ್ಥ ಸೂತ್ರಕ್ಕಿದೆ. ಡಾ || ಹೀರಾಲಾಲ್ ಜೈನರ ಅಭಿಪ್ರಾಯದಂತೆ 'ತತ್ವಾರ್ಥ ಸೂತ್ರವು ಜೈನರ ಬೈಬಲ್, ಕುಂದಕುಂದರ ಕೃತಿಗಳು ಜೈನರ ವೇದಾಂತ. ಉಮಾಸ್ವಾತಿಗಳ ಕಾಲ ಮೂರನೆಯ ಶತಮಾನ. ಉಮಾಸ್ವಾತಿ – ಕುಂದಕುಂದರು ಅಭಿನ್ನರೆಂಬವಾದವೂ ಇದೆ.

**ಕವಿಪರಮೇಷ್ಠಿ [೧-೧೬]:** ಇವರು ಪ್ರಥಮಾನುಯೋಗಶಾಸ್ತ್ರಬಲ್ಲ ಮಹಾಮುನಿ ಗಳಾಗಿದ್ದರಲ್ಲದೆ ಮಹಾಕವಿಗಳೂ ಹೌದು. ಆಚಾರ್ಯ ಜಿನಸೇನರು ಇವರನ್ನು ಕುರಿತು –

*ಸ ಪೂಜ್ಯಃ ಕವಿಭಿರ್ಲೋಕೇ ಕವಿನಾಂ ಪರಮೇಶ್ವರಃ|*
*ವಾಗರ್ಥ ಸಂಗ್ರಹಂ ಕೃತ್ಸ್ನಂ ಪುರಾಣಂ ಯಃ ಸಮಗ್ರಹೀತ್*||

ಎಂದೂ, ಗುಣಭದ್ರ ಆಚಾರ್ಯರು –

*ಕವಿ ಪರಮೇಶ್ವರ ನಿಗದಿತ ಗದ್ಯ ಕಥಾಮಾತೃಕಂ ಪುರೋಶ್ಚರಿತಮ್*
*ಸಕಲ ಛಂದೋಽಲಂಕೃತಿ ಲಕ್ಷ್ಯಂ ಸೂಕ್ಷ್ಮಾರ್ಥ ಪದರಚನಮ್*||

ಎಂದೂ ನೆನೆದಿದ್ದಾರೆ. ಆರ್ಷ ಪ್ರಣೀತವಾದ ತ್ರಿಷಷ್ಠಿ ಶಲಾಕಾ ಪುರುಷ ಪುರಾಣವನ್ನು ಗದ್ಯದಲ್ಲಿ ಕವಿಪರಮೇಷ್ಠಿ ಆಚಾರ್ಯರು ರಚಿಸಿದ್ದು ಅದು ಅನುಪಲಬ್ಧವಾಗಿದೆ. ಇವರ ಕಾಲ ಸುಮಾರು ಆರನೆಯ ಶತಮಾನ.

**ಕುಂದಕುಂದಾಚಾರ್ಯ [೧-೧೫] :** ಇವರಿಗೆ ಪದ್ಮನಂದಿ, ಏಲಾಚಾರ್ಯ, ಗೃಧ್ರಪಿಂಛಾಚಾರ್ಯ (?) ಮೊದಲಾದ ಹೆಸರುಗಳಿದ್ದವು. ಚಾರಣ ಋದ್ಧಿಯಿದ್ದ ದಕ್ಷಿಣದ ಮಹಾನ್ ಆಚಾರ್ಯರಾದ ಕುಂದಕುಂದರಿಗೆ ಕನ್ನಡ ತೆಲುಗು ತಮಿಳು ಭಾಷೆಗಳಲ್ಲಿ ಗೌರವ ಸಾಹಿತ್ಯವಿದೆ. ತಮಿಳಿನ ತಿರುಕ್ಕುರಳ್‌ನ ಕರ್ತೃ ಇವರೇ ಎಂದು ಪ್ರಾ || ಎ. ಚಕ್ರವರ್ತಿಯವರು ಅಭಿಪ್ರಾಯಸಿದ್ದಾರೆ. ದ್ರಾವಿಡ ಸಂಘದ ಸಂಸ್ಥಾಪಕರಲ್ಲೊಬ್ಬರಾದ ಇವರ ಹುಟ್ಟೂರು ಕೌಂಡಕುಂಡ (ಕೌಂಡುಕುಂಡ ಪುರವಾಸಿ). ಕೌಂಡ (ಕವುಂಡ) ಕುಂಡವೆಂಬ ದ್ರಾವಿಡ ಶಬ್ದ ಸಂಸ್ಕೃತೀಕರಣಗೊಂಡು 'ಕುಂಡಕುಂದ' ವೆಂದಾಗಿರಬಹುದು. ಡಾ || ಹೀರಾಲಾಲ್ ಜೈನರ ಅಭಿಪ್ರಾಯದಂತೆ ಇವರು ಶ್ವೇತಾಂಬರ-ದಿಗಂಬರ ವಿಭಜನೆಯಾದ ಮೇಲಿನವರು. ಇವರು ೮೪ ಪಾಹುಡ ಗ್ರಂಥಗಳನ್ನೂ, ದಶಭಕ್ತಿಯ ಪ್ರಾಕೃತಸ್ತೋತ್ರ ಪಾಠಗಳನ್ನೂ ರಚಿಸಿದ್ದಾರೆ. ಕ್ರಿಸ್ತಶಕದ ಆರಂಭದಲ್ಲಿದ್ದವರೆಂದು ಡಾ.ಆ.ನೇ. ಉಪಾಧ್ಯೆಯವರ ಅಭಿಪ್ರಾಯ.

**ಗೃಧ್ರಪಿಂಛಾಚಾರ್ಯ (೧-೧೩):** ಸಾಳ್ವಕವಿ ಉಮಾಸ್ವಾತಿಗಳನ್ನೂ (೧-೧೫) ಗೃಧ್ರಪಿಂಛಾ ಚಾರ್ಯರನ್ನೂ ಪ್ರತ್ಯೇಕವಾಗಿ ಸ್ಮರಿಸಿರುವುದನ್ನು ನೋಡಿದರೆ ಆತನಿಗೆ ಇವರಿಬ್ಬರೂ ಬೇರೆ ಬೇರೆ ಇರಬೇಕೆಂಬ ನಂಬಿಕೆಯಿದ್ದಂತೆ ತೋರುತ್ತದೆ; ಆದರೆ ಇವರಿಬ್ಬರೂ ಅಭಿನ್ನರೆಂಬ ತಿಳುವಳಿಕೆಯಿದೆ (ನೋಡಿ: ಉಮಾಸ್ವಾತಿ). ಅದರಂತೆ ಕುಂದಕುಂದರಿಗೂ ಈ ಹೆಸರು ಇದ್ದಂತೆ ಅಭಿಪ್ರಾಯ ವ್ಯಕ್ತವಾಗಿದೆ (ನೋಡಿ: ಕುಂದಕುಂದಾಚಾರ್ಯ). ಅಲ್ಲದೆ ಕುಂದಕುಂದರಿಗೂ ಈ ಹೆಸರು ಇದ್ದಂತೆ ಅಭಿಪ್ರಾಯ ವ್ಯಕ್ತವಾಗಿದೆ (ನೋಡಿ:ಕುಂದಕುಂದಾಚಾರ್ಯ). ಅಲ್ಲದೆ ಉಮಾಸ್ವಾತಿಯೂ, ಕುಂದ ಕುಂದರೂ ಅಲ್ಲದ ಗೃಧ್ರಪಿಂಛಾಚಾರ್ಯರೆಂಬುವರೊಬ್ಬರು ಇದ್ದಂತೆ ಹೇಳಿಕೆಯಿದೆ. ಕಾಲ ಸರಿಯಾಗಿ ತಿಳಿಯದು. ಡಾ || ಆ.ನೇ.ಉಪಾಧ್ಯೆಯವರು ಉಮಾಸ್ವಾತಿಯವರೇ ಇವರೆಂದು ಒಪ್ಪಿದ್ದಾರೆ. ಕವಿಗಳು ಗೃಧ್ರಪಿಂಛರು, ಸಿದ್ಧಸೇನರು ಮತ್ತು ಸಮಂತಭದ್ರರನ್ನು 'ರತ್ನತ್ರಯ'ರೆಂದು ಕರೆದಿದ್ದಾರೆ.

**ಗುಣಭದ್ರದೇವ [೧-೧೮]:** ಆಚಾರ್ಯ ಜಿನಸೇನರ ಶಿಷ್ಯರಾದ ಗುಣಭದ್ರರು ಮಾನ್ಯಖೇಟ ಹಾಗೂ ಬಂಕಾಪುರಗಳಲ್ಲಿ ಬಹುಕಾಲ ನೆಲಸಿದ್ದ ಕನ್ನಡನಾಡಿನ ಆಚಾರ್ಯರು. ಜಿನಸೇನರು ಪ್ರಾರಂಭಿಸಿ ಮುಗಿಸಲಾಗದ ಮಹಾಪುರಾಣದ ಉತ್ತರಾರ್ಧ (ಉತ್ತರ ಪುರಾಣ) ವನ್ನು ಇವುರ ಪೂರ್ತಿಗೊಳಿಸಿದರು. ಕೃತಿಗಳು: ಆತ್ಮಾನುಶಾಸನ, ಉತ್ತರ ಪುರಾಣ, ಜಿನದತ್ತ ಚರಿತೆ, ಭಾವಸಂಗ್ರಹ. ಆತ್ಮಾನುಶಾಸನ ೨೭೨ ಪದ್ಯಗಳ ಆಧ್ಯಾತ್ಮ ಗ್ರಂಥ. ಇದಕ್ಕೆ ಪ್ರಭಾಚಂದ್ರರು ಸಂಸ್ಕೃತದಲ್ಲಿ ಟೀಕೆ ಬರೆದಿದ್ದಾರೆ, ಅಲ್ಲದೆ ಹಿಂದಿಯಲ್ಲೂ ಕನ್ನಡದಲ್ಲೂ ಬೇರೆ ಟೀಕೆಗಳಿವೆ. ವೀರಬಂಕೇಯನ ಮಗ ಲೋಕಾದಿತ್ಯನು ಇವರ ಪರಮಶಿಷ್ಯ. ಗುಣಭದ್ರರಿಗೆ ಜಿನಸೇನರೂ, ಅದರಂತೆ ಆಚಾರ್ಯ ದಶರಥರೂ ಗುರುಗಳು. ಕನ್ನಡ ಕವಿಗಳ ಮೇಲೆ ಗುಣಭದ್ರರ ಪ್ರಭಾವ ಅಪಾರ.ದ ಇವರ ಕಾಲ ಒಂಬತ್ತನೆಯ ಶತಮಾನದ ಅಂತ್ಯಭಾಗ.

**ಗುಮ್ಮಟಾರ್ಯ [೧-೪೩] :**ಸಾಳ್ವ ಮತ್ತು ಶಿಶುಮಾಯಣರಿಬ್ಬರೂ ಇವರನ್ನು ನೆನೆದಿದ್ದಾರೆ. ಸಾಳ್ವಭಾರತವನ್ನು 'ವರಗುಮ್ಮಟಾರ್ಯರು ಅವಧಾರಿಸಿದ್ದರಿಂದ ಈ ಕೃತಿಯೆ ಸುಕೃತಿಯಲಾ' ಎಂದು ಸಾಳ್ವಕವಿ ಹರ್ಷೋದ್ಗಾರವೆತ್ತಿದ್ದಾನೆ. ಇವರು ಮಹಿಭೂಷಣ ಮುನಿಗಳ ಶಿಷ್ಯರಾದ ಅಭಯಸೂರಿಮುನಿಗಳ ಶಿಷ್ಯರು. ಗಮ್ಮಟಾರ್ಯರು ಆಗಮತ್ರಯಸಾರ ಸರ್ವಜ್ಞರು, ವಿನೇಯ ನೃಪಾಲವಂದಿತರು, ಪ್ರತಿವಾದಿಗಜಕಂಠೀರವರು. ಇವರು ಎಲ್ಲೆಲ್ಲ ವಾದಗಳನ್ನು ಮಾಡಿದರೆಂಬುದು ತಿಳಿಯದು. ನಗಿರೆ, ಹಾಡುವಳ್ಳಿ, ಹೊನ್ನಾವರ, ಕಳಸ, ಕಾರಕಳ ರಾಜ್ಯಗಳ ದೊರೆಗಳಿಂದ ಇವರು ಮಾನ್ಯರಾಗಿದ್ದರೆಂದು (ವಿನೇಯ ನೃಪಾಲವಂದಿತರು) ತೋರುತ್ತದೆ. ಇವರ ಕಾಲ ೧೫ನೆಯ ಶತಮಾನದ ಉತ್ತರಾರ್ಧ. ಸಾಳ್ವಕವಿ ಮತ್ತು ಶಿಶುಮಾಯಣರು ಗುಮ್ಮಟಾರ್ಯರ ಶ್ರಾವಕ ಶಿಷ್ಯರು. ಶ್ರವಣ ಬೆಳ್ಗೊಳದ ೪೮೩ (೩೪೨) ನೆಯ ಶಾಸನದಲ್ಲಿ ಉಕ್ತರಾದ 'ಹಿರಿಯ ಅಯ್ಯಗಳ ಶಿಷ್ಯರು ಗುಂಮಟಂಗಳು' ಇವರೇ ಎಂದು ತೋರುತ್ತದೆ.

**ಚಾರುಕೀರ್ತಿ ಪಂಡಿತಾಚಾರ್ಯ [೧-೧೯] :** ಶ್ರವಣ ಬೆಳುಗೊಳದ ಮಠಾಧೀಶರಾದ ಇವರನ್ನು ಬಾಹುಬಲಿಪಂಡಿತನು (೧೩೫೦) ತನ್ನ ಧರ್ಮನಾಥ ಪುರಾಣದಲ್ಲಿ (೧-೨೪)ಸ್ಮರಿಸಿದ್ದಾನೆ. ಇವರು ಕುಂದಕುಂದಾನ್ವಯ ಪುಸ್ತಕಗಚ್ಛ ದೇಶೀಯಗಣದವರು. ಹೊಯ್ಸಳದೊರೆ ಒಮ್ಮಡಿ ಬಲ್ಲಾಳನನ್ನು (೧೧೦೦-೧೧೦೬) ಆಗಿನ ಚಾರುಕೀರ್ತಿಗಳು ರೋಗಮುಕ್ತನನ್ನಾಗಿ ಸಿದ್ದರಿಂದ ಬಲ್ಲಾಳರಾಯ ಜೀವರಕ್ಷಕರೆಂಬ ಬಿರುದಿದೆ. ಶ್ರವಣ ಬೆಳುಗೊಳ ಮತ್ತು ಬಿಳಿಗಿಯ ಶಾಸನಗಳಲ್ಲಿ ಈ ವಿಷಯ ಉಕ್ತ. ಇವರು ಸಿಂಹಪುರ (ಚಿಟ್ಟಾಂಬೂರ್-ಚಿತ್ತಾಮೂರ್-ಚಿತಾಂಬ್ರ-ಚಿತಾಮ್ರ) ದವರು. ಕೃತಿಗಳು: ಗೀತವೀತರಾಗ ಪ್ರಬಂಧ (ಋಷಭನಾಥರ ಚರಿತೆ) ಮತ್ತು ಜಿನಸೇನರ ಪಾರ್ಶ್ವಾಭ್ಯುದಯ ಟೀಕೆ; ಇವೆರಡೂ ಸಂಸ್ಕೃತದಲ್ಲಿವೆ. ಇವರ ಕಾಲವನ್ನು ೧೫ನೆಯ ಶತಮಾನದ ಪೂರ್ವಾರ್ಧವೆಂದು ಡಾ || ಆ.ನೇ.ಉಪಾಧ್ಯೆಯವರು ಸಾದರಪಡಿಸಿದ್ದಾರೆ.

**ಜಿನಚಂದ್ರ [೧-೧೪]:** ಈಗ ತಿಳಿದು ಬರುವಂತೆ ಇಬ್ಬರು ಜಿನಚಂದ್ರ ಮುನಿಗಳಿದ್ದಾರೆ. ಇವರಲ್ಲಿ ಒಬ್ಬರನ್ನು ಪೊನ್ನಕವಿ ತನ್ನ ಶಾಂತಿಪುರಾಣದಲ್ಲಿ ಸ್ಮರಿಸಿದ್ದಾನೆ. ಸಾಳ್ವಕವಿ ಸ್ತುತಿಸುವ ಜಿನಚಂದ್ರರು ಕುಂದಕುಂದರಿಗಿಂತ ಪೂರ್ವದವರು, ಸು.ಕ್ರಿಪೂ ೧೭ರಲ್ಲಿ ಇದ್ದವರು. ಈ ಜಿನಚಂದ್ರರು ೨೪ ವರ್ಷ ಒಂಬತ್ತು ತಿಂಗಳು ಗೃಹಸ್ಥಾಶ್ರಮದಲ್ಲಿದ್ದು ದೀಕ್ಷಿತರಾಗಿ ೩೨ ವರ್ಷ ಸನ್ಯಾಸಶ್ರಮದಲ್ಲಿದ್ದರು. ಇವರು ಮೂಲ ಸಂಘದ ನಂದಿ ಆಮ್ನಾಯಬಲಾತ್ಕಾರಗಣ ಸರಸ್ವತೀ ಗಚ್ಛದ ಪಟ್ಟಾವಲಿಗೆ ಸೇರಿದವರು. ಇವರ ಕಾಲ ಕ್ರಿ.ಪೂ.೧ನೆಯ ಶತಮಾನದ ಕಡೆಗಾಲ.

**ಜಿನಸೇನ [೧-೧೭]:** ಸಮಂತಭದ್ರರ ಶಿಷ್ಯ ಪರಂಪರೆಯ ವೀರಸೇನರ ಶಿಷ್ಯರು ಈ ಜಿನಸೇನರು. ಇವರ ಶಿಷ್ಯರು ಗುಣಭದ್ರರು. ಜಿನಸೇನರು ಪಂಚಸ್ತೂಪಾನ್ವಯದ ಸೇನಸಂಘದ ಆಚಾರ್ಯರು. ಇವರು ತಮ್ಮ ಕೃತಿಯಲ್ಲಿ ತಮಗಿಂತ ಹಿಂದೆ ಆಗಿಹೋದ ಕೆಲವು ಜೈನಾಚಾರ್ಯರನ್ನು ಸ್ಮರಿಸಿರುವುದು ಅವರ ಕಾಲನಿರ್ದೇಶನಕ್ಕೆ ಅತ್ಯುಪಯುಕ್ತ. ರಾಷ್ಟ್ರಕೂಟ ಚಕ್ರವರ್ತಿ ಅಮೋಘ ವರ್ಷ ನೃಪತುಂಗ (ಬೊದ್ದಣರಾಯ)ನಿಗೆ ಇವರು ರಾಜಗುರು. ಕನ್ನಡ ಕವಿಗಳ ಮೇಲೆ ಜಿನಸೇನರ ಪ್ರಭಾವ ಅಚ್ಚಳಿಯದಷ್ಟು ಗಾಢ. ಜಿನಸೇನರ ಕೃತಿಗಳು : ಆದಿಪುರಾಣ (ಪೂರ್ವ ಪುರಾಣ), ಜಯಧವಲಾ ಟೀಕೆ, ಪಾರ್ಶ್ವಾಭ್ಯುದಯ, ವರ್ಧಮಾನ ಪುರಾಣ; ಇವುಗಳಲ್ಲಿ ಕಡೆಯ ಕೃತಿ ಅನುಪಲಬ್ಧ. ಪಾರ್ಶ್ವಾಭ್ಯುದಯ ಕಾಳಿದಾಸನ ಮೇಘದೂತನ ಮಾದರಿಯಲ್ಲಿ ೨೬೪ ಮಂದಾಕ್ರಾಂತ ವೃತ್ತಗಳಿರುವ ಕೃತಿ. ಜಯಧವಲಾ ಟೀಕೆ ಸಂಸ್ಕೃತ ಪ್ರಾಕೃತ ಸಮ್ಮಿಶ್ರ ಶೈಲಿಯಲ್ಲಿದೆ. ಆದಿಪುರಾಣ ಜಿನಸೇನರ ಮಹಾಕಾವ್ಯ. ಪಂಪನ ಆದಿಪುರಾಣಕ್ಕೆ ಇದೇ ಮೂಲ ಆಕರ. ಜಿನಸೇನರ ಕಾಲ ಒಂಬತ್ತನೆಯ ಶತಮಾನದ ಪೂರ್ವಾರ್ಧ.

**ಧರ್ಮಚಂದ್ರ [೧-೨೩]:** ಇವರು ಕವಿ ಸಾಳ್ವನ ಗುರು. 'ಪೆತ್ತ ಮದ್ಗುರು ಧರ್ಮಚಂದ್ರ ಬುಧೋತ್ತಮರ ಪದಕೆರಗಿ' ಕವಿ ತನ್ನ ಗುರುಗೌರವವನ್ನು ಸಾದರಪಡಿಸಿದ್ದಾನೆ. ಇವರ ವಿಷಯವಾಗಿ ಹೆಚಿನ ಸಂಗತಿಗಳು ತಿಳಿಯದು. ಈ ಧರ್ಮಚಂದ್ರರ ಕಾಲಕೂಡ ೧೫ ನೆಯ ಶತಮಾನದ ಉತ್ತರಾರ್ಧ.

**ನೇಮಿಚಂದ್ರ [೧-೧೭]:** ಸಿದ್ಧಾಂತ ಚಕ್ರವರ್ತಿಯೆಂದು ಪ್ರಸಿದ್ಧರಾದ ನೇಮಿಚಂದ್ರಾ ಚಾರ್ಯರು ಹತ್ತನೆಯ ಶತಮಾನದ ಕನ್ನಡ ನಾಡಿನ ಗಣ್ಯ ಆಚಾರ್ಯರು. ಇವರು ಚಾವುಂಡರಾಯನ ಪೂಜ್ಯ ಆಚಾರ್ಯರು. ಶಿಷ್ಯ ವತ್ಸಲ ಪ್ರೇರಣೆಯಿಂದ ಚಾವುಂಡರಾಯನಿಗಾಗಿ ಇಡೀ ಜೈನ ಧರ್ಮದ ಮಹತ್ವವನ್ನು ಸಾರಸಂಗ್ರಹವಾಗಿ ನಿರೂಪಿಸುವ ಗೊಮ್ಮಟ ಸಾರವನ್ನು ನೇಮಿಚಂದ್ರರು ಪ್ರಾಕೃತದಲ್ಲಿ ರಚಿಸಿದ್ದಾರೆ. ಗೊಮ್ಮಟ (ಮನ್ಮಥ?ಕೂಷ್ಮಾಂಡ?) ಎಂಬುದು ಚಾವುಂಡರಾಯನಿಗಿದ್ದ ಪ್ರಿಯವಾದ ಬಿರುದು. ಅದರಿಂದಲೇ ಆತ ಶಿಲೆಯಲ್ಲಿ ಮಾಡಿಸಿದ ಬಾಹುಬಲಿ (ಭುಜಬಲಿ) ಮೂರ್ತಿಗೆ ಗೊಮ್ಮಟೇಶ್ವರನೆಂಬ ಹೆಸರು. ನೇಮಿಚಂದ್ರರು ಗೊಮ್ಮಟನಿಗಾಗಿ ಬರೆದ ಬರೆದ ಜಿನಧರ್ಮಸಿದ್ಧಾಂತ ಸಾರಕ್ಕೂ ಗೊಮ್ಮಟಸಾರವೆಂಬ ಹೆಸರು. ನೇಮಿಚಂದ್ರರು ದ್ರವ್ಯ ಸಂಗ್ರಹ, ತ್ರಿಲೋಕ ಸಾರ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಕುಂದಕುಂದಾಚಾರ್ಯರ ತರುವಾಯ ಪ್ರಾಕೃತದಲ್ಲಿ ಶಾಸ್ತ್ರಗ್ರಂಥಗಳನ್ನು ರಚಿಸಿದವರಲ್ಲಿ ನೇಮಿಚಂದ್ರ ಪ್ರಮುಖರು. ಇವರ ಕಾಲ ೧೦ ನೆಯ ಶತಮಾನ.

**ಪ್ರಭೇಂದು [೧-೧೮]:** ಸಾಳ್ವ, ಮುಮ್ಮಡಿ ಮಂಗರಸ, ಆದಿಯಪ್ಪ, ದೇವಪ್ಪ ಮೊದಲಾದ ಕವಿಗಳು ಪ್ರಭೇಂದುಗಳನ್ನು ಬಹು ಗೌರವದಿಂದ ನೆನೆದಿದ್ದಾರೆ. ಮಂಗರಸನು 'ಸ್ವಗುರು ಚಿಕ್ಕ ಪ್ರಭೇಂದುವನ್ನು ಹೆಸರಿಸಿರುವುದರಿಂದ ಅವರಿಗಿಂತ ಹಿಂದಿನವರಾದ ಈ ಪ್ರಭೇಂದುಗಳೂ ೧೪ನೆಯ ಶತಮಾನದ ಕಡೆಯಲ್ಲೊ ೧೫ನೆಯ ಶತಮಾನದ ಆದಿಯಲ್ಲೋ ಆಗಿಹೋಗಿರಬೇಕೆಂದು ಊಹಿಸಬಹುದು. ಆದರೆ ಪ್ರಭೇಂದು [ಪ್ರಭಾ-ಇಂದು(=ಚಂದ್ರ)] ಎಂಬ ಶಬ್ದವನ್ನು ಪ್ರಭಾಚಂದ್ರ (ಅಥವಾ ಚಂದ್ರಪ್ರಭಾ) ಎಂಬ ಶಬ್ದದ ಪರ್ಯಾಯವಾಗಿ ಬಳಸಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೆ ಹಸ್ತಿಮಲ್ಲಾಚಾರ್ಯರು ಕೂಡ ತಮ್ಮ ಸುಭದ್ರಾಹರಣ ನಾಟಕದ ಕಡೆಯ ಮೂರು ಪದ್ಯಗಳಲ್ಲಿ ಪ್ರಭೇಂದುಗಳನ್ನು (ಪ್ರಭಾ ಚಂದ್ರಾಚಾರ್ಯರನ್ನು) ನೆನೆದಿದ್ದಾರೆ. ಹಸ್ತಿಮಲ್ಲರ ಕಾಲ ಸು.೧೩೨೦. ಅದರಿಂದ ಪ್ರಭೇಂದು ಅಥವಾ ಪ್ರಭಾಚಂದ್ರರ ಕಾಲ ಇನ್ನೂ ಹಿಂದಕ್ಕೆ ಹೋಗುತ್ತದೆ; ಚಾವುಂಡರಾಯನು ಇವರನ್ನು ಸ್ಮರಿಲ್ಲವಾದ ಕಾರಣ ಇವರ ಕಾಲ ೧೦ನೆಯ ಶತಮಾನದ ತರುವಾಯ ಆಗುತ್ತದೆ. ಪ್ರಭೇಂದುಗಳೆಂಬುವರು ಪ್ರಮೇಯ ಕಮಲ ಮಾರ್ತಾಂಡ ಮೊದಲಾದ ಕೃತಿಗಳನ್ನು ಬರೆದ ಪ್ರಭಾಚಂದ್ರರೇ ಎಂಬುದಾಗಿ ನಿರ್ಧರಿಸಬಹುದು. ಪ್ರಭೇಂದುವು ಭೋಜರಾಜನ ಸಭೆಯಲ್ಲಿ ಅಮಾವಾಸ್ಯೆಯನ್ನು ಹುಣ್ಣಿಮೆಯನ್ನಾಗಿ ಮಾಡಿದರೆಂದು ಪಾಮವರ್ಣಿ ತನ್ನ ಜ್ಞಾನಚಂದ್ರ ಚರಿತೆಯಲ್ಲಿ ಹೇಳಿದ್ದಾನೆ. ಈ ಪ್ರಭೇಂದುಗಳ ಕಾಲ ೧೧ನೆಯ ಶತಮಾನ. ಮೂರನೆಯ ಮಂಗರಸನ ಗುರುಗಳಾದ ಚಿಕ್ಕ ಪ್ರಭೇಂದುಗಳ ಕಾಲ ಸು.೧೫೦೦.

**ಪಾಲ್ಯಕೀರ್ತಿ [೧-೨೨]:** ಪಾಲ್ಯಕೀರ್ತಿ ಅಥವಾ ಪಾಲಕೀರ್ತಿಯು ವ್ಯಾಕರಣದಲ್ಲಿ ಘನ ವಿದ್ವಾಂಸರಾಗಿದ್ದು ಶಾಕಟಾಯನ ವ್ಯಾಕರಣವನ್ನು ರಚಿಸಿದ್ದಾರೆ. ಶಾಕಟಾಯನ ವ್ಯಾಕರಣ ರಚಿಸಿದ್ದರಿಂದ ಪಾಲ್ಯಕೀರ್ತಿಗೆ ಶಾಕಟಾಯನ ಎಂಬ ಹೆಸರೂ ಬಳಕೆಯಾಗಿದೆ. ಪಾಲ್ಯಕೀರ್ತಿಯು ತಮ್ಮ ವ್ಯಾಕರಣದ ಮೇಲೆ ತಾವೇ 'ಅಮೋಘ' ವೃತ್ತಿಯೆಂಬ ಟೀಕೆಯನ್ನೂ ರಚಿಸಿದ್ದಾರೆ. ಮತ್ತೊಂದು ಮುಖ್ಯವಾದ ಮಾತೆಂದರೆ ಇವರು ಯಾಪನೀಯ ಸಂಘದ ಆಚಾರ್ಯರೆಂಬುದು. ಪ್ರಾಚೀನಾಚಾರ್ಯರಾದ ವೀರಸೇನ, ಜೀನಸೇನ, ಗುಣಭದ್ರ, ವಿದ್ಯಾನಂದ, ಅನಂತವೀರ್ಯ ಇವರೆಲ್ಲ ಒಂಬತ್ತನೆಯ ಶತಮಾನಕ್ಕೆ ಸೇರಿದ ಆಚಾರ್ಯರು. ಸಾಳ್ವಕವಿ ಈ ಪದ್ಯದಲ್ಲಿ ಪಾಲ್ಯಕೀರ್ತಿಗಳು ಸಾಯಂಕಾಲದಿಂದ ಬೆಳಗ್ಗೆವರೆಗೆ, ಬೇಸಗೆ ಮಾಗಿ ಮಳೆಗಾಲವೆನ್ನದೆ ಹಾವು ಹುಲಿಗಳಿಗೆ ಹೆದರದೆ ನಟ್ಟಡವಿಯಲ್ಲಿ ನಿಂತು ಧ್ಯಾನ ಜಪವೆಸಗಿದ ಸಂಗತಿಯನ್ನು ಹೇಳಿದ್ದಾನೆ. ಪಾಲ್ಯಕೀರ್ತಿಗಳ ಕಾಲ ಎಂಟನೆಯ ಶತಮಾನ. ೧೨ನೆ ಶತಮಾನಕ್ಕೆ ಸೇರಿದ ಇನ್ನೊಬ್ಬ ಪಾಲ್ಯ ಕೀರ್ತಿಗಳಿದ್ದಾರೆ. ಅವರು ಯಾಪನೀಯ ಸಂಘದ ವಂದಿಯೂರ್ ಗಣದ ಬಾಲಕೀರ್ತಿಗಳ ಶಿಷ್ಯರಾದ ಮುನಿಚಂದ್ರರ ಶಿಷ್ಯರು.

**ಪಾಲದಿದೇವ [೧-೨೧]:** ಪಾಲಾದಿದೇವ ಅಥವಾ ಪೋಲಾದಿದೇವರ ವಿಷಯ ಅಷ್ಟಾಗಿ ತಿಳಿಯದು. ಇವರು ಸುಮಾರು ಹತ್ತನೆಯ ಶತಮಾನದ ಆಚಾರ್ಯರೆಂದು ತೋರುತ್ತದೆ. ಪಾಲ್ಯಕೀರ್ತಿಯ ಶಬ್ದಾನುಶಾಸನದ ಮೇಲೆ 'ರೂಪಸಿದ್ಧಿ' ಎಂಬ ಟೀಕಾ ಗ್ರಂಥವನ್ನು ಬರೆದ ದಯಾಪಾಲ ಮುನಿಯೇ ಈ ಪಾ (ಪೋ) ಲಾದಿದೇವರಿರಬಹುದೇ?

**ಪುಷ್ಪದಂತ [೧-೧೪]:** ಇವರು ಆಚಾರಾಂಗ (ಏಕಾಂಗ) ಶ್ರುತಧರರು. ಅರ್ಹದ್ಬಲಿ ಆಚಾರ್ಯರ ಅನಂತರ ಬಂದ ಶ್ರೇಷ್ಠ ಆಚಾರ್ಯರಾದ ಧರಸೇನಾಚಾರ್ಯರ ಶಿಷ್ಯವರೇಣ್ಯರು ಈ ಪುಷ್ಪದಂತರು ಮತ್ತು ಭೂತಬಲಿ ಆಚಾರ್ಯರು. ಇವರಿಬ್ಬರೂ ದಕ್ಷಿಣದವರು. ಇಬ್ಬರಿಗೂ ಗುರುಗಳಾದ ಧರಸೇನರು ಮಾತ್ರ ಸೌರಾಷ್ಟ್ರದೇಶದವರು, ಅಲ್ಲಿನ ಗಿರನಗರದ ಬಳಿಯ ಊರ್ಜಯಂತಗಿರಿಯ ಚಂದ್ರಗುಹೆಯಲ್ಲಿ ಈ ಮುನಿಮುಖ್ಯರು ತಪವೆಸಗಿದರು. ಪುಷ್ಪದಂತರು ಭೂತ ಬಲಿಗಳಿಗಿಂತ ಹಿರಿಯರು ('ಜ್ಯೇಷ್ಠ'). ಪುಷ್ಪದಂತರು ವನವಾಸ (ಬನವಾಸಿ) ದೇಶಕ್ಕೆ ಬಂದು ನಿಂತರೆಂಬುದಕ್ಕೆ ಆಧಾರಗಳಿವೆ. ಅದರಿಂದ ಅವರು ಕರ್ನಾಟಕದವರೆನ್ನಬಹುದು. ವನವಾಸ (ಬನವಾಸಿ) ದೇಶದಲ್ಲಿದ್ದಾಗ ಪುಷ್ಪದಂತರು ತಮ್ಮ ಸೋದರಳಿಯನಾದ ಜಿನಪಾಲಿತನಿಗೆ ದೀಕ್ಷೆಯಿತ್ತು ಆತನಿಗಾಗಿ, ಷಟ್ಖಂಡಾಗಮದ ಮೊದಲ ಖಂಡವಾದ ಜೀವಸ್ಥಾನದ ಎಂಟು ಅನುಗಮಗಳಲ್ಲೊಂದಾದ ಸತ್ಪ್ರರೂಪಣೆಯನ್ನು ೧೭೭ ಸೂತ್ರಗಳಲ್ಲಿ ರಚಿಸಿದರು. ಇವರ ಕಾಲ ೨ನೆಯ ಶತಮಾನ.

**ಪೂಜ್ಯಪಾದ [೧-೧೬]:**ಜೈನಾಚಾರ್ಯರಲ್ಲಿ ಪ್ರಸಿದ್ಧರು, ಕನ್ನಡ ಕವಿಗಳಿಂದ ಬಹುಸ್ತುತ್ಯರು. ಉಮಾಸ್ವಾತಿಗಳ ತತ್ವಾರ್ಥಸೂತ್ರಕ್ಕೆ ಸರ್ವಸಿದ್ಧಿಯೆಂಬ ಟೀಕೆಯನ್ನು ಅಯ್ದೂವರೆ ಸಾವಿರ ಶ್ಲೋಕ ಪ್ರಮಾಣದಲ್ಲಿ ರಚಿಸಿದ್ದಾರೆ. ಪೂಜ್ಯಪಾದರು ವಿಖ್ಯಾತ ವೈಯಾಕರಣಿ, ಸುಕವಿ,

ಗಗನ ಸಮರ್ಥರು, ತಾರ್ಕಿಕ ತಿಲಕರು, ಹಾಗೂ ವೈದ್ಯ ವಿಜ್ಞಾನಿ. ಇವರ ಜೈನೇಂದ್ರ ವ್ಯಾಕರಣ ಪ್ರಸಿದ್ಧಿ ಪಡೆದಿದೆ. ಪೂಜ್ಯಪಾದರಿಗೆ ದೇವನಂದಿಯೆಂಬ ಹೆಸರೂ ಇದ್ದಿರಬಹುದು. ಇವರದು ಪ್ರಭಾವಶಾಲಿ ವ್ಯಕ್ತಿತ್ವ. ಸಮಕಾಲೀನ ಹಾಗೂ ಅನಂತರದ ಆಚಾರ್ಯರ ಮೇಲೆ ಇವರ ವರ್ಚಸ್ಸು ಬಿದ್ದಿದೆ. ಗಂಗವಂಶದ ಪ್ರಸಿದ್ಧ ದೊರೆಯಾದ ದುರ್ವಿನೀತನಿಗೆ (೪೮೧-೫೨೨) ಪೂಜ್ಯಪಾದರು ಗುರುಗಳು. ಇವರ ಕೃತಿಗಳು: ಸರ್ವಾರ್ಥಸಿದ್ಧಿ, ಪಾಣಿನಿ ಶಬ್ದಾವತಾರ, ಜೈನೇಂದ್ರ ವ್ಯಾಕರಣ, ಪಂಚವಸ್ತುಕ, ಸಮಾಧಿತಂತ್ರ, ಇಷ್ಟೋಪದೇಶ. ಪೂಜ್ಯಪಾದರ ಕಾಲ ೫ ನೆಯ ಶತಮಾನದ ಅಂತ್ಯ.

**ಭೂತಬಲಿ [೧-೧೪] :** ಇವರು ಆಚಾರಾಂಗ (ಏಕಾಂಗ) ಶ್ರುತಧರರು. ಪುಷ್ಪದಂತರು ಇವರ ಸಹೋದರರು (ಸಹಯೋಗಿಗಳು ಮತ್ತು ಹಿರಿಯರು. ಮಹಾವೀರರು ಮುಕ್ತರಾದ ಆರನೂರು ಎಂಬತ್ತಮೂರು ವರ್ಷಗಳ ತರುವಾಯ ಇದ್ದ ಧನಸೇನಾಚಾರ್ಯರು ಪುಷ್ಪದಂತರಿಗೂ ಭೂತಬಲಿಗಳಿಗೂ ಆಚಾರ್ಯರು, ಉಪದೇಶಕರು. ವೇಣಾಕತಟದ ಕಡೆಯಿಂದ ಹೋಗಿ ಈ ಶಿಷ್ಯರಿಬ್ಬರೂ ಗುರುಗಳ ಬಳಿ ಶಿಕ್ಷಣ ಪಡೆದು ವನವಾಸ ದೇಶಕ್ಕೆ ಬಂದರು. ಭೂತಬಲಿಗಳು ಅಲ್ಲಿಂದ ಮಧುರೆಗೆ ಹೋದರು. ಅಲ್ಲಿ ಇವರು ಜೀವಸ್ಥಾನದ ಏಳು ಅನುಗಮನಗಳನ್ನೂ, ಕ್ಷುದ್ರಬಂಧ, ಬಂಧಸ್ವಾಮಿತ್ವವಿಚಯ, ವೇದನಾಖಂಡ, ವರ್ಣನಾಖಂಡ, ಮಹಾ ಬಂಧ-ಎಂಬ ಇತರ ಐದು ಖಂಡದ ಆಗಮನವನನ್ನು ಗ್ರಂಥರೂಪಕ್ಕಿಳಿಸಿದರು. ಈ ಪವಿತ್ರ ಗ್ರಂಥ ರಚನೆ ಜ್ಯೇಷ್ಠ ಶುದ್ಧ ಪಂಚಮಿಯೆಂದು ಪೂರೈಸಿದ್ದರಿಂದ ಅಂದು ಶ್ರುತಪಂಚಮಿ ಪೂಜೆ, ಆಚರಿಸುತ್ತಾರೆ. ಇವರ ಕಾಲ ಎರಡನೆಯ ಶತಮಾನ.

**ಮಯೂರ ಪಿಂಛಾಚಾರ್ಯ [೧-೧೩]:** ಜೈನಾಚಾರ್ಯರು ಪಿಂಛ (ಪಿಂಛಿ) ಮತ್ತು ಕಮಂಡಲು ಎಂಬ ಎರಡು ವಸ್ತುಗಳನ್ನು ಮಾತ್ರ ತಮ್ಮ ಬಳಿ ಇಟ್ಟುಕೊಂಡಿರುತ್ತಾರೆ. ಈ ಪಿಂಛವನ್ನು ಗೋವಿನಬಾಲದ ಕೂದಲುಗಳಿಂದಲೂ, ಗೃಧ್ರದ (ಹದ್ದಿನ) ಗರಿಗಳಿಂದಲೂ, ನವಿಲಿನ ಗರಿಗಳಿಂದಲೂ ಮಾಡುತ್ತಿದ್ದರು. ಇದರಿಂದ ಇವುಗಳಿಗೆ ಕ್ರಮವಾಗಿ ಗೋಪಿಂಛ, ಗೃಧ್ರಪಿಂಛ ಮತ್ತು ಮಯೂರ ಪಿಂಛ ಎಂಬ ಹೆಸರುಗಳಾದುವು. ಮಯೂರ ಪಿಂಛವನ್ನು ಉಪಯೋಗಿಸುವವರು ಮಯೂರ ಪಿಂಛಾಚಾರ್ಯರು. ಅದರೆ ಇಲ್ಲಿ ಸಾಳ್ವಕವಿ ಮಯೂರ ಪಿಂಛಾಚಾರ್ಯ ಎಂಬುದನ್ನು ಸಾಮಾನ್ಯರ್ಥದಲ್ಲಿ ಸಾಧರಣೀಕರಿಸಿಲ್ಲ. ಇಮ್ಮಡಿ ಗುಣ ವರ್ಮನೂ, ವೃತ್ತವಿಲಾಸನೂ ಮುಮ್ಮಡಿ ಮಂಗರಸಕವಿಯೂ ಮಯೂರ ಪಿಂಛಾಚಾರ್ಯರನ್ನು ಸ್ಮರಿಸಿದ್ದಾರೆ. ಸಾಳ್ವನು ತನ್ನ ಪದ್ಯದಲ್ಲಿ

*ಆರ್ಯನುತ.......ಸುರಗಿರಿ*
*ಧೈರ್ಯರೆನಿಸಿದ* *ಗೃಧ್ರಪಿಂಛಾ*
*ಚಾರ್ಯರಮಳ ಮಯೂರಪಿಂಛಾರ್ಯರಡಿಗೆರಗೀ*|

ಎಂದು, ಸ್ಪಷ್ಟವಾಗಿ ಹೇಳಿದ್ದಾನೆ. ಆಚಾರ್ಯರು ಸುಮಾರು ಒಂದನೆಯ ಶತಮಾನದಲ್ಲಿದ್ದಿರಬಹುದು.

**ಮಹಿಭೂಷಣಮುನಿ [೧-೨೧] :**ಇವರನ್ನು ಸಾಳ್ವಕವಿ ಮತ್ತು ಶಿಶುಮಾಯಣಕವಿ ಇಬ್ಬರೂ ಸ್ಮರಿಸಿದ್ದಾರೆ. ಇವರ ವಿಚಾರವಾಗಿ ಹೆಚ್ಚು ತಿಳಿಯದು. ಇವರ ಕಾಲ ಸುಮಾರು ೯ನೆಯ ಶತಮಾನ.

**ಮಾಘಣಂದಿ [೧-೧೮]:** ಅಂಗಪೂರ್ವದೇಶದ ಪ್ರಕಾಶಕರಲ್ಲಿ ಅರ್ಹದ್ಬಲಿ ಮುನಿಗಳಾದ ಮೇಲೆ ಬಂದವರು ಮಘನ[ಣ]ಂದಿಗಳು. ಇವರಾದಮೇಲೆ ಧರಸೇನಾಚಾರ್ಯರು ಪ್ರಸಿದ್ಧರು. ಮಾಘನಂದಿಗಳನ್ನು ಶಾಂತಿನಾಥನೇ ಮೊದಲಾದ ಹಲವು ಕನ್ನಡ ಕವಿಗಳು ಸ್ತುತಿಸಿದ್ದಾರೆ. ಲೋಹಾಚಾರ್ಯರ್ಯದ್ಬಲಿ-ಮಾಘನಂದಿ-ಧರಸೇನ-ಪುಷ್ಪದಂತ-ಭೂತಬಲಿ ಇದು ಈ ಪ್ರಾಚೀನಾಚಾರ್ಯರ ಕ್ರಮ. ಮಾಘನಂದಿಗಳು ೨೧ವರ್ಷ ಆಚಾರ್ಯರಾಗಿದ್ದರು. ಇವರ ಕಾಲ ಕ್ರಿ.ಪೂ.೧ನೆಯ ಶತಮಾನ (ಅಕಲಂಕಾಚಾರ್ಯಾನಂತರದ ಮಹಾ

ನ್ಯಾಯಶಾಸ್ತ್ರಜ್ಞರೂ, ಶಾಸ್ತ್ರಸಾರ ಸಮುಚ್ಚಯ ಕರ್ತೃವೂ ಆದ ಮಾಘನಂದಿ ಎಂಬ ಇನ್ನೊಬ್ಬ ಆಚಾರ್ಯರೂ ಇದ್ದಾರೆ. ಇವರ ಕಾಲ ಸು. ೮ನೆಯ ಶತಮಾನ).

**ಮಾಣಿಕ್ಯನಂದಿ [೧-೧೮] :**ಕೇವಲ ಛಂದಸ್ಸಿನ ಸೌಕರ್ಯಕ್ಕಾಗಿ ಸಾಳ್ವಕವಿ ಮಾಣಿಕನಂದಿ ಎಂದು ಕರೆದಿದ್ದರೂ ಮಾಣಿಕ್ಯನಂದಿ ಎಂಬುದೇ ಸರಿಯಾದ ರೂಪ. ಅಕಲಂಕಾನಂತರದ ಉಚ್ಚನ್ಯಾಯಶಾಸ್ತ್ರಜ್ಞರಾದ ಇವರ ಕೃತಿ ಪರೀಕ್ಷಾಮುಖವು ಅಕಲಂಕಾಚಾರ್ಯರ ಕೃತಿಗೆ ಬರೆದ ಸೂತ್ರಗ್ರಂಥ. ಇದರಲ್ಲಿ ಪ್ರಮಾಣ (ಪ್ರತ್ಯಕ್ಷ-ಪರೋಕ್ಷ-ಅನುಮಾನ) ಮತ್ತು ಪ್ರಮಾಣಾಭಾಸಗಳ ಹೃದ್ಯ ವಿವೇಚನೆಯಿದೆ. ದಿಗಂಬರ ಸರಸ್ವತೀಗಚ್ಛದ ಪಟ್ಟಾವಲಿಯಂತೆ ೫೨೩ ರಲ್ಲಿ ಇವರು ಪಟ್ಟಧರರಾದರೆಂದು ತಿಳಿದುಬರುತ್ತದೆಯಾದರೂ ಅದನ್ನು ಒಪ್ಪಲಾಗುವುದಿಲ್ಲ. ಇವರು ಆಲಂಕರಿಗೆ ಉತ್ತಮ ಭಾಷ್ಯಕಾರರಾಗಿದ್ದುಕೊಂಡು ಅಕಲಂಕರ ನ್ಯಾಯಸರಣಿಯನ್ನು ಮುಂದುವರಿಸಿದ್ದಾರೆ. ಇವರ ಪರೀಕ್ಷಾಮುಖಕ್ಕೆ ಅನಂತವೀರ್ಯಾಚಾರ್ಯರೇ ಪ್ರಮೇಯ ರತ್ನಮಾಲಾ ಎಂಬ ವ್ಯಾಖ್ಯಾನ ಬರೆದಿದ್ದಾನೆ. ಕಮಲಮಾರ್ತಾಂಡದ ಕರ್ತೃ ಪ್ರಭಾಚಂದ್ರರು 'ಮಾಣಿಕ್ಯ ನಂದಿಗಳ ಕೃತಿಯದ್ವಾರಾ ಅಕಲಂಕರ ವಿಷಯ ಪ್ರತಿಪಾದನೆ ಗ್ರಹಿಸಲು ಸುಲಭಸಾಧ್ಯ' ವೆಂದು ಭಾವಿಸಿದ್ದಾರೆ. ಮಾಣಿಕ್ಯನಂದಿಗಳ ಕಾಲ ಒಂಬತ್ತನೆಯ ಶತಮಾನ.

**ಮೇರುನಂದಿ [೧-೨೧]:** ಇವರೂ ಒಂಬತ್ತನೆಯ ಶತಮಾನದ ಜೈನಾಚಾರ್ಯರು.

**ರಾಮಚಂದ್ರ [೧-೧೮]:** ಮಾಘನಂದಿ ತ್ರೈವಿದ್ಯದೇವರು ಮತ್ತು ಶುಭಚಂದ್ರ ತ್ರೈವಿದ್ಯದೇವರು (ಶುಭಚಂದ್ರರು ದೇವಕೀರ್ತಿ ಪಂಡಿತದೇವರ ಶಿಷ್ಯರು) – ಇವರಿಬ್ಬರೂ, ಜತೆಗೆ ರಾಮಚಂದ್ರ ತ್ರೈವಿದ್ಯದೇವರು ಹಾಗೂ ಅಕಲಂಕ ತ್ರೈವಿದ್ಯದೇವರೂ ಸಮಕಾಲೀನರು. ಇವರೆಲ್ಲರೂ ಕನಕ ನಂದಿ ಮತ್ತು ದೇವಚಂದ್ರರೆಂಬ ಆಚಾರ್ಯರ ಸಧರ್ಮಿಗಳು. ಇವರ ಕಾಲ ಎಂಟನೆಯ ಶತಮಾನ. ಹೇಮಚಂದ್ರರ (೧೦೮೮-೧೧೭೨) ಶಿಷ್ಯರಾದ ರಾಮಚಂದ್ರರು ಬೇರೆ ಇದ್ದಾರೆ. ಅವರ ಕೃತಿ ದ್ರವ್ಯಾಲಂಕಾರ. ಕಾಲ (೧೨ನೆ ಶ.)

**ರಾಮಸೇನ [೧-೧೭]:** ಆಚಾರ್ಯ ಜಿನಸೇನರ ಸತೀರ್ಥರಾದ ಆಚಾರ್ಯ ವೀರಸೇನರ ಶಿಷ್ಯರಾದ ಕುಮಾರಸೇನರ (ವಿ.ಸಂ.೭೫೩) ಕಾಷ್ಠಾ ಸಂಘಕ್ಕೆ ಸಂಬಂಧಿಸಿದಂತೆ ವಿ.ಸಂ. ೯೫೩ರಲ್ಲಿ ಮಧುರೆಯಲ್ಲಿ ಮಾಥುರ ಸಂಘವನ್ನು ಸ್ಥಾಪಿಸಿದವರು ಈ ರಾಮಸೇನರು. ನಂದಿತಟದಲ್ಲಿ ವಾಸಿಸುತ್ತಿದ್ದ ಕಾಷ್ಠಾಸಂಘಸ್ಥಾಪಕರಾದ ಕುಮಾರಸೇನರು ಕರ್ಕಶಕೇಶ (ದನದ ಕೂದಲಪಿಂಛ) ಧರಿಸುತ್ತಿದ್ದರು. ಮಯೂರಪಿಂಛವನ್ನು ವಿರೋಧಿಸುತ್ತಿದ್ದರು. ಮಧುರೆಯಲ್ಲಿದ್ದ ರಾಮಸೇನರು ಮುನಿಗಳಿಗೆ ಪಿಂಛವೇ ಬೇಡವೆಂದೂ ನಿಃಪಿಂಛಕರಾಗಿರುವಂತೆಯೂ ಬೋಧಿಸಿದರು, ಈ ಸಂಘಕ್ಕೆ ಮಾಥುರ ಸಂಘವೆಂದು ಹೆಸರಾಯಿತು. ಆಚಾರ್ಯ ರಾಮಸೇನರ ಶಿಷ್ಯರು ಆಚಾರ್ಯ ಮಾಥುರರು. ರಾಮಸೇನರಿಂದ ಸ್ಥಾಪಿತವಾದ ಮಾಥುರ ಸಂಘವನ್ನು, ಕುಮಾರಸೇನರಿಂದ ಸ್ಥಾಪಿತವಾದ ಕಾಷ್ಠಾಸಂಘದ ಶಾಖೆಯೆಂದು ಪರಿಗಣಿಸುತ್ತಾರೆ. ರಾಮಸೇನರ ಕಾಲ ೯ನೆಯ ಶತಮಾನದ ಅಂತ್ಯ ಮತ್ತು ೧೦ ನೆಯ ಶ.ದ ಆರಂಭ.

**ವಾಸುವೇಂದು [೧-೧೮]:** ವಾಸುವೇಂದು ಎಂಬುದು ದೇವಚಂದ್ರ ಎಂಬ ಹೆಸರಿನ ಬೇರೊಂದು ರೂಪವೆಂದು ತೋರುತ್ತದೆ. ಮಾಘನಂದಿ, ಶುಭಚಂದ್ರ, ಕನಕನಂದಿ, ರಾಮಚಂದ್ರ ಮೊದಲಾದ ಆಚಾರ್ಯರೂ ವಾಸವೇಂದುಗಳೂ ಸಮಕಾಲೀನರು. ಇವರ ಕಾಲ ಎಂಟನೆಯ ಶತಮಾನ.

**ವಿಜಯಕೀರ್ತಿ [೧-೨೧]:** ಶೃಂಗಾರಾರ್ಣವ ಚಂದ್ರಿಕಾ ಎಂಬ ಕೃತಿಯನ್ನು ರಚಿಸಿರುವ ವಿಜಯವರ್ಣಿಗಳ ಶಿಷ್ಯರಾದ ಈ ವಿಜಯಕೀರ್ತಿಗಳನ್ನು ಹಲವು ಜೈನ (ಕನ್ನಡ) ಕವಿಗಳು ಸ್ತುತಿಸಿದ್ದಾರೆ. ವಿಜಯಕೀರ್ತಿ ಎಂಬ ಹೆಸರಿನ ಜೈನಾಚಾರ್ಯರು ಕೆಲವರಿದ್ದಾರೆ.

೧. ಪೂಜ್ಯಪಾದರ ಶಿಷ್ಯನಾದ ದುರ್ವಿನೀತನ ತಂದೆಯಾದ ಗಂಗರ ದೊರೆ ಅವಿನೀತನ (೪೩೦-೪೮೨) ರಾಜಗುರುಗಳಾದ ವಿಜಯಕೀರ್ತಿಗಳು

೨. ರಟ್ಟರ ದೊರೆ ಮುಮ್ಮಡಿ ಗೋವಿಂದನು (೭೯೨-೮೧೪) ಒಬ್ಬ ವಿಜಯಕೀರ್ತಿಗಳ ಶಿಷ್ಯರಾದ ಆಚಾರ್ಯ ಅರಿಕೀರ್ತಿ (ಅರ್ಕಕೀರ್ತಿ ?)ಗೆ ದತ್ತಿಕೊಟ್ಟಿದ್ದನು.

೩. ವಿಜಯವರ್ಣಿಗಳ ಶಿಷ್ಯರಾದ ವಿಜಯಕೀರ್ತಿಗಳು

ಇವರಲ್ಲಿ ಸಾಳ್ವಕವಿ ಸ್ಮರಿಸಿರುವುದು ಕಡೆಯ ವಿಜಯಕೀರ್ತಿಗಳನ್ನು; ಇವರ ಕಾಲ ೧೩ನೆಯ ಶತಮಾನ – ಎಂದು ಭಾವಿಸಬಹುದಾದರೂ ಸಂಗೀತಪುರದ ಜೈನ ಆಚಾರ್ಯದಲ್ಲಿ ಬರುವ ಒಮ್ಮಡಿ ವಿಜಯಕೀರ್ತಿಗಳನ್ನು ಸಾಳ್ವಕವಿ ಸ್ಮರಿಸಿದ್ದಾನೆಂದು ತಿಳಿಯುವುದಕ್ಕೆ ಅನ್ಯ ಆಧಾರಗಳಿವೆ.

**ವಿದ್ಯಾನಂದ [೧-೧೮]:** ಆಚಾರ್ಯ ವಿದ್ಯಾನಂದರು ಉಮಾಸ್ವಾತಿಗಳದ ತತ್ವಾರ್ಥ ಸೂತ್ರಕ್ಕೆ 'ತತ್ವಾರ್ಥ ಶ್ಲೋಕವಾರ್ತಿಕ' ವೆಂಬ ಟೀಕೆಯನ್ನು ರಚಿಸಿದ್ದಾರೆ. ಇವರು ಅಕಲಂಕಾಚಾರ್ಯರ ಶಿಷ್ಯರು. ಜಿನಸೇನಾಚಾರ್ಯರೂ ತಮ್ಮ ಆದಿ ಪುರಾಣದಲ್ಲಿ ವಿದ್ಯಾನಂದರನ್ನು ಪರಕೇಸರಿ ಸ್ವಾಮಿ ಎಂಬ ವಿಶೇಷಣದಿಂದ ಗೌರವಿಸಿದ್ದಾರೆ. ಹಿಂದೂ ಧರ್ಮದ ಇನ್ನಿತರ ಸಮಕಾಲೀನ ಶಾಖೆಗಳ ತರ್ಕ ಹಾಗೂ ತತ್ವಗಳನ್ನು ಕೂಡಾ ಪ್ರಸ್ತಾಪಿಸಿರುವುದು ವಿದ್ಯಾನಂದರ ಕೃತಿಗಳ ಹಿರಿಮೆ. ವಿವಿಧ ದರ್ಶನಗಳ ಪಾರಗಾಮಿ ವಿದ್ವಾಂಸರೂ ಪಾಟಲಿಪುತ್ರದವರೂ ಆದ ವಿದ್ಯಾನಂದರು ಅಕಲಂಕಾಚಾರ್ಯರ ಅಷ್ಟಸತೀ ಗ್ರಂಥಕ್ಕೆ ಅಷ್ಟ ಸಹಸ್ರೀ ಎಂಬ ಬೃಹತ್ ಕೃತಿ ಬರೆದಿದ್ದಾರೆ. ಕೃತಿಗಳೂ: ಅಷ್ಟಸಹಸ್ರೀ, ಆಪ್ತಪರೀಕ್ಷಾ, ತತ್ವಾರ್ಥಶ್ಲೋಕವಾರ್ತಿಕ, ಪತ್ರಪರೀಕ್ಷಾ, ಇವೆಲ್ಲ ಪ್ರೌಢ ದಾರ್ಶನಿಕ ಗ್ರಂಥಗಳಾಗಿವೆ. ಇವರ ಕಾಲ ಒಂಬತ್ತನೆಯ ಶತಮಾನದ ಆರಂಭ. (ವಿದ್ಯಾನಂದ ಎಂಬ ಹೆಸರಿನ ಅಚಾರ್ಯರು ಹಲವರಿದ್ದಾರೆ.)

**ವಿಶಾಲಕೀರ್ತಿ [೧-೧೬]:** ವಿಶಾಲಕೀರ್ತಿಗಳು ಪಂಡಿತ ಪ್ರವರ ಆಶಾಧರರ ಶಿಷ್ಯರಲ್ಲೊಬ್ಬರು. ಆಶಾಧರರು ವಿಶಾಲಕೀರ್ತಿಗಳಿಗೆ ತರ್ಕಶಾಸ್ತ್ರವನ್ನು ಓದಿಸಿದ್ದರು. ಇವರನ್ನು ೧೩೫೦ ರಲ್ಲಿದ್ದ ಬಾಹುಬಲಿ ಪಂಡಿತ ಕವಿ ತನ್ನ ಧರ್ಮನಾಥ ಪುರಾಣದಲ್ಲಿ ಹೆಸರಿಸಿದ್ದಾನೆ. ಈಗಲೂ ಲಾಕೂರು ಮಠಾಧೀಶರಿಗೆ ವಿಶಾಲಕೀರ್ತಿಗಳೆಂಬ ಹೆಸರಿದೆ. ಇವರ ಕಾಲ ೧೩ನೇ ಶತಮಾನದ ಉತ್ತರಾರ್ಧ. ಆದರೆ ಆಂಧ್ರದ ಕರ್ನೂಲು ಜಿಲ್ಲೆಯ ಆಲೂರು ತಾ || ನ ಚಿಪ್ಪಗಿರಿಗೆ ಸೇರಿದ ೧೬ನೆಯ ಶತಮಾನದ ದಾಖಲೆಯೊಂದರಲ್ಲಿ ಆದವಾನಿಯ ವಿಶಾಲಕೀರ್ತಿ ಆಚಾರ್ಯರ ಉಲ್ಲೇಖವಿದೆ (A.R.on SIE ೧೯೪೩ – ೪೪ ಮತ್ತು ೪೪-೪೫). ಸಾಳ್ವ ಕವಿ ಈ ಇಮ್ಮಡಿ ವಿಶಾಲಕೀರ್ತಿಗಳನ್ನು ಸ್ಮರಿಸಿದ್ದಾನೆಯೆ?

**ವೀರಸೇನ [೧-೧೭] :** ಇವರು ಆಚಾರ್ಯ ಜಿನಸೇನರ ಸತೀರ್ಥರು. ಈ ವೀರಸೇನರ ಶಿಷ್ಯರು ಕುಮಾರ ಸೇನರು; ಈ ಕುಮಾರ ಸೇನರು ಕಾಷ್ಠಾ ಸಂಘವನ್ನು ಸ್ಥಾಪಿಸಿದರು. ಇವರು ನಂದಿತಟದಲ್ಲಿ ವಾಸಿಸುತ್ತಿದ್ದರು. 'ಆರ್ಯ ಆರ್ಯನಂದಿಯ ಶಿಷ್ಯನೂ ಚಂದ್ರಸೇನನ ಪ್ರಶಿಷ್ಯನೂ ಪಂಚಸ್ತೂಪಾನ್ವಯದ ಸೂರ್ಯನೂ ಆದ ವೀರಸೇನ ಸ್ವಾಮಿ' ಎಂಬರ್ಥದ ಪ್ರಾಕೃತ ಪದ್ಯ ಧವಲ ಟೀಕೆಯ ಪ್ರಶಸ್ತಿಯಲ್ಲಿದೆ. ವೀರಸೇನರು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ವಿಶಾರದರಾಗಿದ್ದರು. ಜತೆಗೆ ಅಗಮಗಳ ತಜ್ಞರೂ ಆಗಿದ್ದರು. ವೀರಸೇನರು ಷಟ್ ಖಂಡಾಗಮ ಸೂತ್ರಕ್ಕೆ ೭೨ ಸಾವಿರ ಶ್ಲೋಕಗಳ ಧವಲಾಟೀಕೆಯನ್ನೂ, ಕಷಾಯಪ್ರಾಭೃತಕ್ಕೆ ೨೦ಸಾವಿರ ಶ್ಲೋಕಗಳ ಜಯಧವಲಾ ಟೀಕೆಯನ್ನೂ ಬರೆದಿದ್ದಾರೆ. ಇವರ ಕಾಲ ೮ನೆಯ ಶತಮಾನ.

**ಶ್ರುತಕೀರ್ತಿ[೧-೨೧] :** ಶ್ರುತುಕೀರ್ತಿ ಎಂಬ ಹೆಸರಿನ ಆಚಾರ್ಯರು ಕೂಡ ಹಲವರಿದ್ದಾರೆ. ಕಡೆಯ ಪಕ್ಷ ಆರು ಜನರಾದರೂ ಇದ್ದಾರೆ. ಕದಂಬರ ದೊರೆ ಕಾಕುತ್ಸ್ಥವರ್ಮನು (೪೨೫-೪೫೦) ಯುವರಾಜನಾಗಿದ್ದಾಗ ರವಿಕೀರ್ತಿ ಮತ್ತು ಶ್ರುತುಕೀರ್ತಿಗೆ ಬೋಧವರ ಕ್ಷೇತ್ರವನ್ನು ದಾನಮಾಡಿದ ಸಂಗತಿ ಶಾಸನದಲ್ಲಿದೆ ([1]A.VI. ಪುಟ ೨೪): ಈ ಕಾಕುತ್ಸ್ಥವರ್ಮನ ಮೊಮ್ಮಗನಾದ ಮೃಗೇಶವರ್ಮನು (೪೭೦-೪೮೮) ವೈಜಯಂತಿಯಲ್ಲಿನ ದತ್ತಿಯಲ್ಲಿ ದಾಮಕೀರ್ತಿಯ ತಾಯಿಗೆ ದತ್ತಿಕೊಟ್ಟ ಸಂಗತಿಯಿದೆ ([1]A.VII. ಪುಟ ೩೬-೩೭). ಅಗ್ಗಳ ಕವಿಯ ಗುರುಗಳಾದ ಶ್ರುತ ಕೀರ್ತಿಗಳು ಬೇರೆ ಇದ್ದಾರೆ. ಆದರೆ ಸಾಳ್ವಭಾರತದಲ್ಲಿ ಸಾಳ್ವಕವಿ ಹೇಳುವ ಶ್ರುತಕೀರ್ತಿಗಳು ಕವಿಯ ಗುರು: ‘ಕಲಿಕಾಲಜಿನನೆನೆ ಸೊಗಯಿಪೆನ್ನೆಯ ಗುರುಗಳಾ ಪದಯುಗಕೆ ಭಕ್ತಿಯೊಳೆರಪೆನಾ ಶ್ರುತಕೀರ್ತಿ ದೇವರನೂ’ ಎಂದು ಹೇಳಿದ್ದಾರೆ. ಅದರಿಂದ ಇವರ ಕಾಲ ೧೫ನೆಯ ಶತಮಾನದ ಉತ್ತರಾರ್ಧವೆಂದು ಹೇಳಬಹುದು; ಇವರು ಸಂಗೀತ ಪುರದ ಒಮ್ಮಡಿ ವಿಜಯಕೀರ್ತಿಗಳ ಶಿಷ್ಯರಾದ ಇಮ್ಮಡಿ ಶ್ರುತಿಕೀರ್ತಿಗಳು.

**ಸಮಂತಭದ್ರ I [೧-೧೬]:** ಜೈನಶಾಸ್ತ್ರ ಪ್ರಣೀತರಾದ ಸಮಂತಭದ್ರರು ಅತಿ ಪ್ರಭಾವ ಶಾಲಿ ಆಚಾರ್ಯರು. ಮಗಧ ದೇಶದ ರಾಜ ಶ್ರೇಣಿಕನಂತೆ (ಬಿಂಬಸಾರ) ಸಮಂತಭದ್ರರು ಕೂಡ ಭವಷ್ಯತ್ ಕಾಲದ ತೀರ್ಥಂಕರರಾಗುವರು. ಶ್ರವಣಬೆಳ್ಗೊಳ ಶಾಸನ ೨೫೪ ರಲ್ಲಿ ಇವರ ಪ್ರಸ್ತಾಪವಿದೆ. ಮಲ್ಲಿಷೇಣರು ಕೂಡ ಸಮಂತ ಭದ್ರರನ್ನು ‘ಜೈನ ದಿಗಂತವನ್ನು ಬೆಳಗಿದ ಚಂದ್ರ’ರೆಂದು ಕರೆದಿದ್ದಾರೆ. ವಿದ್ಯಾನಂದರು ‘ಪರೀಕ್ಷೇಕ್ಷಣ’ರೆಂದೂ (ಪರೀಕ್ಷಾ ನೇತ್ರಗಳಿಂದ ಇಲ್ಲವನ್ನೂ ಕಾಣುವಂಥವರು), ವಾದಿರಾಜರು ‘ಸ್ವಾಮಿ, ದೇವ’ ಎಂದೂ ಕರೆದಿದ್ದಾರೆ.

ಸಮಂತಭದ್ರ ಸ್ವಾಮಿಗಳ ಲಬ್ಧ ಕೃತಿಗಳು : ಆಪ್ತಮೀಮಾಂಸಾ (ದೇವಾಗಮ), ಜಿನಸ್ತುತಿ ಶತಕ, ಬೃಹತ್ ಸ್ವಯಂಭೂ ಸ್ತೋತ್ರ, ಯುಕ್ತ್ಯಾನುಶಾಸನ (ವೀರಜಿನ ಸ್ತೋತ್ರ) ರತ್ನ ಕರಂಡ (ಕ) ಶ್ರಾವಕಾಚಾರ. ಇದರಿಂದ ರಚಿತವಾದ ಕರ್ಮಪ್ರಾಭೃತಟೀಕಾ, ಗಂಧಹಸ್ತಿ ಮಹಾಭಾಷ್ಯ, ತತ್ವಾನುಶಾಸನ, ಪ್ರಾಕೃತ ವ್ಯಾಕರಣ, ಪ್ರಮಾಣ ಪದಾರ್ಥ, ಜೀವಸಿದ್ಧಿ ಮೊದಲಾದ ಕೃತಿಗಳು ಅನುಪಲಬ್ಧ, ಸಮಂತಭದ್ರರನ್ನು ಅಕಲಂಕರೂ (ಅಷ್ಟಶತೀ), ವಿದ್ಯಾನಂದಿಗಳೂ (ಅಷ್ಟಸಹಸ್ರೀ), ಜಿನಸೇನರೂ (ಆದಿಪುರಾಣ), ಪುನ್ನಾಟ ಜಿನಸೇನರೂ (ಹರಿವಂಶ), ವಾದಿರಾಜ ಸೂರಿಗಳೂ (ನ್ಯಾಯವಿನಿಶ್ಚಯ ವಿವರಣ ಮತ್ತು ಪಾರ್ಶ್ವನಾಥ ಚರಿತೆ), ವೀರನಂದಿಗಳೂ (ಚಂದ್ರಪ್ರಭಚರಿತೆ), ಹಸ್ತಿಮಲ್ಲರೂ (ವಿಕ್ರಾಂತ ಕೌರವ ನಾಟಕ), ಪಂಪ ಮೊದಲಾದ ಕನ್ನಡ ಕವಿಗಳೂ ಗೌರವ ಪುರಸ್ಸರವಾಗ ಸ್ಮರಿಸಿದ್ದಾರೆ.

ಏಳನೆಯ ಶತಮಾನದ ಕುಮಾರಿಲನು ಸಮಂತಭದ್ರರನ್ನು ಸ್ಮರಿಸುವುದರಿಂದ ಇವರು ಅದಕ್ಕಿಂತ ಹಿಂದಿನವರೆಂಬುದು ಸ್ಪಷ್ಟ. ಸ್ವಾಮಿ ಸಮಂತಭದ್ರರ ಉಪಾಸನಾ ದೇವಿ ಯಕ್ಷಿ ಜ್ವಾಲಾ ಮಾಲಿನಿದೇವಿ. ಇವರ ಸಂಬಂಧವಾದ ಸ್ಥಳಪುರಾಣಗಳು ನಗಿರೆ (ಗೇರುಸೊಪ್ಪೆ), ನರಸಿಂಹರಾಜಪುರ (ಸಿಂಹನಗದ್ದೆ)ಗಳಲ್ಲಿ ಉಪಲಬ್ಧವಾಗಿವೆ (ಎಕ VI, ಕೊಪ್ಪ ತಾಲೂಕಿನ ಎಡೆಹಳ್ಳಿಯ ಶಾಸನ, ೧೫ನೆಯ ಶತಮಾನ). ಅಲ್ಲದೆ ಸಮಂತಭದ್ರರೆಂಬ ಹೆಸರಿನ ಆಚಾರ್ಯರು ಹಲವರಿದ್ದಾರೆ. ಉದಾಹರಣೆಗೆ ೧೫ನೆಯ ಶತಮಾನದ ಪೂರ್ವಾರ್ಧದಲ್ಲಿ ಆಗಿಹೋದ ಮಾಘನಂದಿ ವ್ರತಿಗೆ (ಐತಿಹಾಸಿಕ ಸ್ತುತಿ ಅಥವಾ ಚಿಕ್ಕ ಸಮಂಥಭದ್ರ ಸ್ತೋತ್ರದ ಕರ್ತೃ) ಚಿಕ್ಕ ಅಥವ ಲಘು ಸಮಂತಭದ್ರರೆಂಬ ಹೆಸರಿದೆ; ಇವರು ಆಚಾರ್ಯ ಅಮರ ಕೀರ್ತಿಯ ಶಿಷ್ಯರು! ಚಿಕ್ಕ (ಲಘು) ಸಮಂತಭದ್ರರ ಶಿಷ್ಯನಾದ ಭೋಗರಾಜನು ೧೪೫೯ರಲ್ಲಿ ಶಾಂತಿನಾಥ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಸಂಗತಿ (S.I,Jainism, part II,ಪುಟ ೫೭) ಶಾಸನದಿಂದ ತಿಳಿದುಬರುತ್ತದೆ.

ಸ್ವಾಮಿ ಸಮಂತಭದ್ರರ ರತ್ನಕರಂಡಕ್ಕೆ ಕನ್ನಡದಲ್ಲಿ ವರ್ಧಮಾನ ಸಿದ್ಧಾಂತಿ ದೇವನ ಶಿಷ್ಯನಾದ ಆಯತವರ್ಮನೆಂಬ ಕವಿ (೧೪೦೦) ಚಂಪೂ ರೂಪದಲ್ಲಿ ವ್ಯಾಖ್ಯಾನ ಬರೆದಿದ್ದಾನೆ. ಅದಲ್ಲದೆ ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಇನ್ನೂ ಕೆಲವು ಅನುವಾದ ಕೃತಿಗಳಿವೆ, ಮಿರ್ಜಿ ಅಣ್ಣಾರಾಯರು ಹೊಸಗನ್ನಡ ಅನುವಾದ ಪ್ರಕಟಿಸಿದ್ದಾರೆ (ಜೀವರಾಜ ಜೈನ ಗ್ರಂಥಮಾಲಾ, ಕನ್ನಡ ಗ್ರಂಥ ೧, ಸೊಲ್ಲಾಪುರ. ೧೯೬೦) ಜೆ.ಮುಕ್ತಾರೆಯವರ ಹಾಗೂ ಪಂಡಿತ ನಾಥೂರಾಮ್ ಪ್ರೇಮಿಯವರ ಪುಸ್ತಕಗಳಲ್ಲಿ ಇನ್ನೂ ಹೆಚ್ಚಿನ ವಿವರಗಳು ಸಿಗುತ್ತವೆ. ಸಮಂತ ಭದ್ರರ ಕಾಲ ನಾಲ್ಕನೆಯ ಶತಮಾನ. (ಸಾಳ್ವಕವಿ ಇಬ್ಬರು ಸಮಂತಭದ್ರರನ್ನು ಸ್ಮರಿಸಿದ್ದಾನೆ; ಇನ್ನೊಬ್ಬರ ವಿವರ ಮುಂದೆ ಕೊಟ್ಟಿದೆ.)

**ಸಮಂತಭದ್ರ II [೧-೨೧]:** ಸಾಳ್ವಕವಿ ಈ ಕಾವ್ಯದಲ್ಲಿ ಇಬ್ಬರು ಸಮಂತಭದ್ರರನ್ನು ಸ್ಮರಿಸಿದ್ದಾನೆಂಬುದು ಸ್ಪಷ್ಟ. ಒಂದನೆಯ ಸಂಧಿಯಲ್ಲಿನ ೧೬ನೆಯ ಪದ್ಯದಲ್ಲಿ ಉಲ್ಲೇಖಿಸಿರುವುದು ವಿಖ್ಯಾತ ಸಮಂತಭದ್ರರನ್ನು; ಈ ೨೧ ನೆಯ ಪದ್ಯದಲ್ಲಿ

*ಪಣಿದಣುವ್ರತರಾಗಿಯುಂ ವರ*
*ಗುಣಧರ ಪ್ರಾಯರೆದಲೆಸಿಸುವ*
*ಗುಣ ಸಮುದ್ರ ಸಮಂತಭದ್ರ ಚರಣಕೆರಗುವೆನು* ||

ಎಂದು ಹೇಳಿದೆ. ಗೇರುಸೊಪ್ಪೆ ರಾಜ್ಯದ ಕಾಳದಲ್ಲಿ ಆಗಿ ಹೋದ ಸಮಂತಭದ್ರರನ್ನು ಸಾಳ್ವಕವಿ ಇಲ್ಲಿ ನೆನೆದಂತೆ ತೋರುತ್ತದೆ. ಶಿಶುಮಾಯಣ ಕೂಡ ಇದೇ ರೀತಿ ಇಬ್ಬರು ಸಮಂತಭದ್ರರನ್ನು ಸ್ಮರಿಸಿದ್ದಾನೆ. ಈ (ಇಮ್ಮಡಿ) ಸಮಂತಭದ್ರರ ಕಾಲ ಸು.೧೪೧೦, ಇವರ ಶಿಷ್ಯರು (ಇಮ್ಮಡಿ) ಗುಣಭದ್ರರು, ಅವರ ಶಿಷ್ಯರು ವೀರಸೇನರು. ಈ ವೀರಸೇನರು ಗೇರುಸೊಪ್ಪೆಯ ದೊರೆ ಭೈರವ ರಸನ ರಾಜಗುರುಗಳು, ಮತ್ತು ಈ ವೀರಸೇನಾಚಾರ್ಯರ ಆಜ್ಞಾನುಸಾರವಾಗಿ ಆದಿಯಪ್ಪ ಕವಿ ತನ್ನ ಧನ್ಯಕುಮಾರ ಚರತೆ ರಚಿಸುವುದಾಗಿ ತಿಳಿದು ಬರುತ್ತದೆ. (ಹಂಪ. ನಾಗರಾಜಯ್ಯ; ಸಾಂಗತ್ಯ ಕವಿಗಳು: ೧೯೭೫, ಪು.೨೯)

## ಅನುಬಂಧ ೨ – ಪಾರಿಭಾಷಿಕ ಶಬ್ದಗಳು

**ಅ**

**ಅಚ್ಯುತ ಕಲ್ಪ** (೮-೫೦): ಜೈನರ ತ್ರಿಲೋಕಾಕೃತಿಯಂತೆ ಇದು ೧೬ನೆಯ ವಿಮಾನ (ಸ್ವರ್ಗ)ದ ಹೆಸರು. (ನೋಡಿ:ಕಲ್ಪ)

**ಅರ್ಘ್ಯ** (೩-೩೦): ಅಷ್ಟ ವಿಧಾರ್ಚನೆಯ ಒಂದು ಭಾಗ.

**ಅಜ್ಜಿಕ (**೩೦-೫೫): ಜೈನ ಸನ್ಯಾಸಿನಿ; ಅರ್ಯಿಕಾ, ಆರ್ಯಿಕೆ, ಅಜ್ಜಿಕೆ, ಕಂತಿ ಎಂದೂ ಹೇಳುವರು.

**ಅಣುವ್ರತ** (೫-೪೫): ಗೃಹಸ್ಥರಿಗೆ ಕೊಡುವ ಆಯ್ದು ಪ್ರಕಾರದ ಚಿಕ್ಕ ವ್ರತಗಳು; ಅಹಿಂಸೆ, ಸತ್ಯ, ಅಸ್ತೇಯ (ಅಚೌರ್ಯ), ಬ್ರಹಚರ್ಯ, ಅಪರಿಗ್ರಹ.

**ಅಂತರಾಯ** (೧-೮): ಜೈನಯತಿಗಳು ಆಹಾರ ತೆಗೆದುಕೊಳ್ಳುವಾಗ ಉಂಟಾಗುವ ಅಡ್ಡಿ, ತೊಡಕು ಎಂಬುದು ಸಾಮಾನ್ಯಾರ್ಥ. ಅಂತರಾಯವೂ ಒಂದು ಕರ್ಮ ವೆಂಬುದು ವಿಶೇಷಾರ್ಥ; ದಾನ, ಲಾಭ, ಭೋಗ, ಉಪಭೋಗ, ವೀರ್ಯಾ ಎಂಬ ಅಯ್ದು ವಿಧವಾದ ಅಂತರಾಯಗಳು, ಇವು ಮೋಕ್ಷಾಪೇಕ್ಷಿಗಳಾಗಿ ಹೊರಟ ಜೀವಗಳಿಗೆ ಎದುರಾಗುವ ವಿಘ್ನಗಳು. ಇವುಗಳು ಉಂಟಾದರೆ ಆಹಾರ ಬಿಡಬೇಕು. ಇವನ್ನು ಜಯಿಸಿದರೆ ಇಂದ್ರಪದವಿ, ಮೋಕ್ಷ ಸಾಧ್ಯ.

**ಅನಂತ ಚತುಷ್ಟಯ** (೬೫-೫೦ವ): ಅನಂತದರ್ಶನ, ಅನಂತ ಜ್ಞಾನ, ಅನಂತ ಸುಖ ಮತ್ತು ಅನಂತ ವೀರ್ಯ – ಈ ನಾಲ್ಕು

**ಅನಂತ ವೀರ್ಯ** (೬೫-೫೦ ವ): ನೋಡಿ ಅನಂತ ಚತುಷ್ಟಯ.

**ಅಮರಾಧೀಶ** (೧-ಪಲ್ಲವಿ): ದೇವೇಂದ್ರ : ಜೈನ ಪುರಾಣಗಳ ದೇವೇಂದ್ರನು ತೀರ್ಥಂಕರರ ತಪಸ್ಸಿಗೆ ಅಡ್ಡಿಗಳನ್ನೊಡ್ಡುವವನಲ್ಲ, ಬದಲು ಉಂಟಾಗುವ ಅಡ್ಡಿಗಳನ್ನು ನಿವಾರಿಸುತ್ತಾನೆ ಮತ್ತು ಅನುಕೂಲಗಳನ್ನು ಕಲ್ಪಿಸುತ್ತಾನೆ.

**ಅನುಬದ್ಧ ಕೇವಲಿ** (೧-೧೨): ಇವರು ಮೂವರು -ಗೌತಮ, ಸುಧರ್ಮಾಚಾರ್ಯ, ಜಂಬೂಸ್ವಾಮಿ.

**ಅಮೃತ ಸಂಪದ** (೧-೧): ಮೋಕ್ಷ ಅಥವಾ ಮುಕ್ತಿ ಅಥವಾ ಆಪ್ತವರ್ಗ.

**ಅಗುರು ಲಘುತ್ವ** (೬೫-೫೦ ವ): ಯಾವ ಶಕ್ತಿಯ ಕಾರಣದಿಂದ ದ್ರವ್ಯದ ದ್ರವ್ಯತೆ ಸ್ಥಿರವಾಗಿರುತ್ತದೆಯೋ, ಒಂದು ಗುಣವು ಮತ್ತೊಂದು ಗುಣವಾಗಿ ಪರಿಮಮಿಸುವುದಿಲ್ಲವೋ ಒಂದು ಪರ್ಯಾಯವು ಮತ್ತೊಂದು ಪರ್ಯಾಯವಾಗಿ ಪರಿಣಮಿಸುವುದಿಲ್ಲವೋ ಅದಕ್ಕೆ ಅಗುರು ಲಘುತ್ವಗುಣವೆನ್ನುತ್ತಾರೆ.

**ಅಂತರ್ಮುಹೂರ್ತ**?(೬೫-೫೦ ವ): ಒಂದು ಆವಲಿಯ ಮೇಲೆ ಒಂದು ಮುಹೂರ್ತದೊಳಗಿನ ಕಾಲ,

**ಅಕೃತಿಯ ವಸದಿ** (೮-೩೯): ಸ್ವರ್ಗದೊಳಗಿನ ಸಹಜ ಚೈತ್ಯಾಲಯ.

**ಅಯೋಗಿ ಕೇವಲಿ** (೬೫-೫೦ ವ): ಯೋಗದ ಅಭಾವವಿರುವ 'ಅಯೋಗಿ ಕೇವಲಿ ಗುಣ ಸ್ಥಾನ' ಎಂಬ ೧೪ನೆಯ ಗುಣಸ್ಥಾನದಲ್ಲಿ ವರ್ತಿಸುವವನು.

**ಅಯ್ದು ಚಾರಿತ್ರ** (೧-೩): ಸಾಮಾಯಿಕ, ಛೇದೋಪಸ್ಥಾಪನಾ, ಪರಿಹಾರ ವಿಶುದ್ಧ, ಸೂಕ್ಷ್ಮ ಸಾಂಪರಾಯ, ಯಥಾಖ್ಯಾತ.

**ಅಯ್ದು ಶುದ್ಧಿ** (೩-೨೫): ಭಾವಶುದ್ಧಿ, ಕಾಯಶುದ್ಧಿ, ವಿನಯಶುದ್ಧಿ, ವಾಕ್ಯಶುದ್ಧಿ ಈರ್ಯಾಪಥ ಶುದ್ಧಿ.ಸ

**ಅಯ್ದು ಸತ್ವ** (೧-೩): ಇದು ವೀರ್ಯಾಚಾರಕ್ಕೆ ಸಂಬಂಧಿಸಿದೆ.

**ಅವಧಿ ಜ್ಞಾನ** (೭-೩): ಇಂದ್ರಿಯಗಳ ಮೂಲಕ ಪಡೆಯುವ ಜ್ಞಾನ ಮತಿಜ್ಞಾನ, ಓದಿ ಕೇಳಿ ತಿಳಿದ ಜ್ಞಾನ ಶ್ರುತಜ್ಞಾನ, ಕಾಲದೇಶಗಳು ಎಷ್ಟೇ ದೂರವಾಗಿದ್ದರೂ ಅಲ್ಲಿನ ವಿಷಯಗಳನ್ನು ತಿಳಿಯುವುದು ಅವಧಿಜ್ಞಾನ. ಅವಧಿಜ್ಞಾನವುಳ್ಳವನು ಅವಧಿಜ್ಞಾನಿ.

**ಅರೂಪರು** (೧-೨): ಅರೂಪರೆಂದರೆ ರೂಪವಿಲ್ಲದವರು, ಅಮೂರ್ತರು ಎಂದರ್ಥ. ಅಘಾತಿ ಕರ್ಮಗಳನ್ನು ನಾಶಮಾಡಿ ದೇಹವನ್ನು ಬಿಟ್ಟು ಸಿದ್ಧ ಶಿಲೆಗೆ ಹೋಗಿ ಶಾಶ್ವತ ಸುಖದಲ್ಲಿ ನೆಲಸುವ ಅಯೋಗ ಕೇವಲಿಗಳಿಗೆ ಸಿದ್ಧರು, ಅರೂಪರು, ಅಮೂರ್ತರು ಮುಂತಾಗಿ ಕರೆಯುತ್ತಾರೆ. ಇವರು ಪಂಚಪರಮೇಷ್ಠಿಗಳಲ್ಲೊಬ್ಬರು. ನೋಡಿ, ಪಂಚಪರಮೇಷ್ಠಿ.

**ಅಷ್ಟ ಕರ್ಮ** (೧-೨): ನಾಲ್ಕು ಘಾತಿ ಕರ್ಮಗಳು ಮತ್ತು ನಾಲ್ಕು ಅಘಾತಿ ಕರ್ಮಗಳು ಸೇರಿ ಆಗುವ ಎಂಟು ಕರ್ಮಗಳು; ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ, ಆಯುಃ ಕರ್ಮ, ನಾಮಕರ್ಮ, ಗೋತ್ರಕರ್ಮ ಮತ್ತು ವೇದನೀಯ ಕರ್ಮ.

**ಅಷ್ಟ ಗುಣ** (೬-೨೧): ಯೋಗದಿಂದ ಸಿದ್ಧಿಸುವ (ಸಿದ್ಧಿ) ಗುಣಗಳು: ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ. ಆದರೆ ಸಿದ್ಧಪರ ಮೇಷ್ಠಿಗಳ ಗುಣಗಳು ಬೇರೆ. ಕ್ಷಾಯಿಕ ಸಮಕ್ತ್ವ,ಅನಂತ ಜ್ಞಾನ, ಅನಂತ ದರ್ಶನ, ಅನಂತ ವೀರ್ಯ, ಸೂಕ್ಷ್ಮತ್ವ, ಅವಗಾಹಿತ್ವ ಅಗುರು ಲಘುತ್ವ, ಅವ್ಯಾಭಾದತ್ವ.

**ಅಷ್ಟಮಹಾ ಪ್ರಾತಿಹಾರ್ಯ** (೬೫-೫೦ ವ): ತೀರ್ಥಂಕರರ ವೈಭವ ಸೂಚಿಸುವ ವಸ್ತುಗಳು: ಅಶೋಕ ವೃಕ್ಷ, ಸುರಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಸಿಂಹಾಸನ, ಭಾಮಂಡಲ, ದೇವದುಂದುಭಿ, ಮೂರು ಛತ್ರಗಳು (ಮುಕ್ಕೊಡೆ.)

**ಅಷ್ಟಾಮಾವನಿ (**೧-೯): ನಾವು ವಾಸಮಾಡುವ ಭೂಲೋಕದ ನಟ್ಟನಡುವೆ ಮೇರು (ಮಂದರ) ಪರ್ವತವಿದೆ. ಇದರ ಸುತ್ತ ಜಂಬೂದ್ವೀಪ ಮುಂತಾದ ಎಂಟು ದ್ವೀಪಗಳಿವೆ. ಎಂಟನೆಯದೇ ನಂದೀಶ್ವರ ದ್ವೀಪ. ಇದನ್ನೇ ಎಂಟನೆಯ ಭೂಮಿ ಎನ್ನುವರು.

**ಅಷ್ಟಾಂಗ** (೩-೧೦): ಎಂಟು ನೈಮಿತ್ತಿಕಾಂಗಳು; ಅಂತರಿಕ್ಷ, ಭೌಮ, ಅಂಗ, ಸ್ವರ, ವ್ಯಂಜನ, ಲಕ್ಷಣ, ಭಿನ್ನ, ಸ್ವಪ್ನ.

**ಅಷ್ಟಾಹ್ನಿಕ** (೩-೧೪): ಆಷಾಢ ಕಾರ್ತಿಕ ಫಾಲ್ಗುಣ ತಿಂಗಳುಗಳಲ್ಲಿ ಶುಕ್ಲಪಕ್ಷದ ಅಷ್ಟಮಿಯಿಂದ ಪೌರ್ಣಮಿಯವರೆಗೆ ಎಂಟೆಂಟು ದಿವಸ ದೇವತೆಗಳು ನಂದೀಶ್ವರ ದ್ವೀಪಕ್ಕೆ ಹೋಗಿ ಅಲ್ಲಿನ ಜಿನಬಿಂಬಗಳನ್ನು ಪೂಜಿಸುವರೆಂಬ ಭಾವನೆಯಿಂದ ಜೈನರು ಮಾಡುವ ಪೂಜೆ; ನಂದೀಶ್ವರ ಅಷ್ಟಾಹ್ನಿಕವೆಂದೂ ಹೆಸರಿದೆ.

**ಅಷ್ಟೋತ್ತರ ಸಹಸ್ರನಾಮ** (೬೫-೫೦ ವ): ತೀರ್ಥಂಕರರಿಗೆ ಇರುವ ಸಾವಿರದೆಂಟು ಹೆಸರುಗಳು.

**ಅಷ್ಟಾದಶ ದೋಷ** (೬೫-೫೦ ವ): ಹಸಿವು ನೀರಡಿಕೆ ಅಂಜಿಕೆ ವೈರ (ತಿರಸ್ಕಾರ) ಪ್ರೀತಿ ಮೋಹ ಚಿಂತೆ ಮುಪ್ಪು ಬೇನೆ ಸಾವು ಬೆವರು ದುಃಖ ಗರ್ವ ಕಾಮ ಸೇವನೆ ಆಶ್ಚರ್ಯ ಹುಟ್ಟು ನಿದ್ರೆ ಹಳಹಳಿ – ಇವು ಹದಿನೆಂಟು ದೋಷಗಳು. ಇವು ಇಲ್ಲದವನೇ ದೇವರು.

**ಆ**

**ಆಚಾರ್ಯ** (೧-೩): ಪಂಚಾಚಾರ ಮೊದಲಾದವುಗಳನ್ನು ಆಚರಿಸುತ್ತ ಶಾಸ್ತ್ರವಿಶಾರದರೂ ಆತ್ಮರತರೂ ಆಗಿದ್ದು ನಿಶ್ಚಯ ಮಾರ್ಗದಲ್ಲಿ ನಡೆಯುವವರು, ಅದರ ಹಾಗೆ ವ್ಯಾವಹಾರಿಕವಾಗಿ ಶಿಷ್ಯರಿಗೆ ಧರ್ಮೋಪದೇಶ ಮಾಡುವರು, ಧರ್ಮದಲ್ಲಿ ಶಾಸನಾಧಿಕಾರ ಇದ್ದವರು.

**ಆರ್ಯೆ** (೧-೧೪): ಆರ್ಯಾಖಂಡ ; ಜಂಬೂ ದ್ವೀಪದ ಭರತ ಕ್ಷೇತ್ರದಲ್ಲಿನ ವಿಜಯಾರ್ಧ ಪರ್ವತ ಮತ್ತು ಗಂಗಾ ಸಿಂಧೂ ನದಿಗಳು ಭರತ ಕ್ಷೇತ್ರವನ್ನು ಉತ್ತರ -ದಕ್ಷಿಣವಾಗಿ ವಿಭಾಗಿಸಿದೆ. ದಕ್ಷಿಣ ಭಾರತದ ನಡುವಿನ ಖಂಡ ಆರ್ಯಾ ಖಂಡ, ಇಲ್ಲೇ ನಾವು ಇರುವುದು.

**ಆಸನ ಕಂಪ** (೪-೧೩): ಮುನಿಗಳಿಗೆ ಕೇವಲ ಜ್ಞಾನ ಉಂಟಾದಾಗಲೂ ತೀರ್ಥಂಕರರು ಹುಟ್ಟುವಾಗಲೂ ಇಂಥ ಇತರ ಸಂದರ್ಭಗಳಲ್ಲೂ ಆಯಾ ಸೂಚನೆಗಾಗಿ ಇಂದ್ರನ ಪೀಠ ಅಲಗುತ್ತದೆ. (ಆಗ ಅವನು ಅವಧಿಜ್ಞಾನದಿಂದ ಆಯಾ ವಿಷಯವನ್ನು ತಿಳಿದು ತದನುಗುಣವಾಗಿ ನಡೆಯುತ್ತಾನೆ) ಇದೇ ಆಸನ ಕಂಪ.

**ಈ**

**ಈರೈದು ಪೂರ್ವರು** (೧-೧೧): ದಶ ಪೂರ್ವಿಗಳು ಅಥವಾ ದಶಪೂರ್ವಧರರು; ವಿಶಾಕ ಪ್ರೋಷ್ಠಿಲ ಕ್ಷತ್ರಿಯ ಜಯಸೇನ ನಾಗಸೇನ ಸಿದ್ಧಾರ್ಥ ಧೃತಿಸೇನ ವಿಜಯ ಸೇನ ಬುದ್ಧಿಲಿಂಗ (ಬುದ್ಧಿಲ\ಬಹುಧೂಲಿ), (ಗಂಗ) ದೇವ (ಸುಧರ್ಮ). ಹದಿನಾಲ್ಕು 'ಪೂರ್ವ' ಜ್ಞಾನಗಳಲ್ಲಿ ಹತ್ತನ್ನು ಹೊಂದಿದವರು.

**ಈಷತ್ ಪ್ರಾಗ್ಭಾರ** (೬೫-೫೦ ವ): ದೇವತೆಗಳ ನಿವಾಸವಾದ ಊರ್ಧ್ವಲೋಕದಲ್ಲಿ ಕಲ್ಪ, ಗ್ರೈವೇಯಕ, ಅನುದಿಶ, ಅನುತ್ತರ, ಈಷತ್ ಪ್ರಾಗ್ಭಾರ ಎಂಬ ವಿಭಾಗಗಳು ಆರೋಹಣ ಕ್ರಮದಲ್ಲಿದೆ. ಈಷತ್ ಪ್ರಾಗ್ಭಾರವೆಂಬುದು ಸಿದ್ಧಕ್ಷೇತ್ರ, ಇಲ್ಲಿ ಸಿದ್ಧಶಿಲೆಯಿದೆ, ಇದರ ನೆತ್ತಿಯಲ್ಲಿ ಸಿದ್ಧರು ನೆಲಸುತ್ತಾರೆ.

**ಉ**

**ಉಭಯ ಪರಿಗ್ರಹ** (೧-೪): ಬಾಹ್ಯ – ಅಭ್ಯಂತರ ಎಂಬ ಎರಡು ಪರಿಗ್ರಹಗಳು.

**ಉಪಸರ್ಗ** (೧೮-೨೦): ಮುನಿಗಳ ತಪಸ್ಸಿಗೆ ಉಂಟಾಗುವ ತೊಂದರೆಗಳು, ಇವು ನಾಲ್ಕು ವಿಧ; ದೇವಮ ಅಚೇತನ, ತಿರ್ಯಕ್ ಮತ್ತು ಮಾನುಷ. ಇವುಗಳಿಗೆ ಕ್ರಮವಾಗಿ ದೇವೋಪ ಸರ್ಗ, ಅಚೇತನೋಪಸರ್ಗ, ತಿರ್ಯಕೋಪಸರ್ಗ ಮತ್ತು ಮಾನುಷೋಪಸರ್ಗವೆಂದು ಹೆಸರು.

**ಋ**

**ಋದ್ಧಿ** (೬೫-೫೦ ವ): ತಪಸ್ಸಿದ್ಧಿ ಪಡೆದವರಿಗೆ ಉಂಟಾಗುವ ಮಹಿಮೆ. ಋದ್ಧಿಗಳು ಏಳು; ಬುದ್ಧಿಋದ್ಧಿ, ತಪರ್ಧಿ, ಔಷಧರ್ಧಿ, ರಸರ್ಧಿ, ಬಲರ್ಧಿ ಜ್ಞಾನರ್ಧಿ ಮತ್ತು ಚಾರಣರ್ಧಿ.

**ಋಷಿ ನಿವೇದಕ** (೭-೨): ಜೈನ ಪುರಾಣಗಳಲ್ಲಿ ಬರುವ ಸುದ್ಧಿವಾಹಕ. ಈತ ನಗರದ ಹೊರವಲಯದಲ್ಲಿದ್ದು ಅಲ್ಲಿಗೆ ಆಗಮಿಸುವ ಮುನಿಗಳ ವಿಚಾರವನ್ನು ಕೂಡಲೆ ದೊರೆಗೆ ಅರಿಕೆ ಮಾಡಿಕೊಳ್ಳುತ್ತಾನೆ.

**ಎ**

**ಎಂಟು ಅವಬೋಧ** (೧-೩): ಅವಬೋಧ ಎಂದರೆ ಜ್ಞಾನ. ಇದರಲ್ಲಿ ಎಂಟು ವಿಧ: ಕುಮತಿ, ಕುಶ್ರುತ, ವಿಭಂಗ, ಮತಿ, ಶ್ರುತ, ಅವಧಿ, ಮನಃ ಪರ್ಯಯ ಮತ್ತು ಕೇವಲಜ್ಞಾನ ಎಂಬ ಎಂಟು ಬಗೆಯ ಜ್ಞಾನ. ಆಚಾರಕ್ಕೆ ಸಂಬಂಧಿಸಿದಂತೆ ಇನ್ನು ಎಂಟು ವಿಧ ಹೀಗಿದೆ : ೧. ಅರ್ಥಜ್ಞಾನಾಚಾರ, ೨. ವಚನ ಜ್ಞಾನಾಚಾರ, ೩. ಅರ್ಥವ್ಯಂಜನಪೂರ್ಣ, ೪. ಕಾಲಜ್ಞಾನಚಾರ, ೫. ಉಪದಾ, ೬. ಪ್ರಶ್ರಮ, ೭. ಸ್ವಾಚರ್ಯಾದ್ಯನಪಹ್ನವ ಮತ್ತು ೮. ಬಹುಮತಿ ಜ್ಞಾನಾಚಾರ.

**ಎಂಟು ಸುದರ್ಶನ** (೧-೩): ಇದು ದರ್ಶನಾಚಾರಕ್ಕೆ ಸಂಬಂಧಿಸಿದೆ.

**ಔ**

**ಔದಾರಿಕ ಕಾಯ** (೬೫-೫೦ ವ): ಮನುಷ್ಯ ತಿರ್ಯಂಚರ ಶರೀರ ಔದಾರಿಕ ಕಾಯ.

**ಕ**

**ಕಲ್ಯಾಣ ಪಂಚಕ** (೧-೧): ತೀರ್ಥಂಕರರಿಗೆ ದೇವೇಂದ್ರಾದಿ ದೇವತೆಗಳು ಭಕ್ತಿ ಭಾವದಿಂದ ನೆರವೇರಿಸುವ ಆಯ್ದು ಕಲ್ಯಾಣಗಳು: ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲ ಜ್ಞಾನ, ನಿರ್ವಾಣ (ಪರಿನಿರ್ವಾಣ). ಈ ಶಬ್ದಗಳಿಗೆ ಕಲ್ಯಾಣ ಅಥವಾ ಉತ್ಸವ ವೆಂಬ ಶಬ್ದವನ್ನು ಸೇರಿಸಿ ಜನ್ಮಾಭಿಷೇಕೋತ್ಸವ ಅಥವಾ ಜನ್ಮಾಭಿಷೇಕ ಕಲ್ಯಾಣ ಎಂಬಂತೆ ಹೇಳುವುದೂ ಉಂಟು.

**ಕಲ್ಪ** (೮-೫೦): ಸೌಧರ್ಮ, ಈಶಾನ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ, ಬ್ರಹ್ಮೋತ್ತರ, ಲಾಂತವ, ಕಾಪಿಷ್ಠ, ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರ ಅನತ, ಪ್ರಾಮತ, ಆರಣ, ಅಚ್ಯುತ ಎಂಬ ೧೬ ಕಲ್ಪಗಳು. ಈ ಸ್ವರ್ಗಗಳಲ್ಲಿ ಹುಟ್ಟಿದ ದೇವತೆ ಕಲ್ಪಜ.

**ಕೇವಲಿ** (೧-೧೨): ಜ್ಞಾನಾವರಣಾದಿ ಘಾತಿಕರ್ಮಗಳ ನಾಶದಿಂದ ಲೋಕ-ಅಲೋಕಗಳನ್ನು ಅರಿಯುವ ಜ್ಞಾನವಂತನಾದ ಮಹಾತ್ಮ: ಪರಿಶುದ್ಧವೂ ಪರಿಪೂರ್ಣವೂ ಸರ್ವವ್ಯಾಪ್ತಿಯೂ ಆದ ಅನಂತಜ್ಞಾನವೇ ಕೇವಲಜ್ಞಾನ. ಕರ್ಮ ಬಂಧವನ್ನು ಕಳಚಿ ಬಿಸುಟ ಮುಕ್ತ ಜೀವಕ್ಕೆ ಇದು ಸಹಜ ಪ್ರಾಪ್ತ.

**ಕೃಷ್ಣ ಲೇಶ್ಯಾ** (೬೫-೫೦ ವ): ಆತ್ಮವು ಯಾವುದರ ಮೂಲಕ ಪುಣ್ಯಪಾಪಗಳಿಗೆ ಒಳಗಾಗುವುದೋ ಅದು ಲೇಶ್ಯ. ಕಷಾಯಗಳಲ್ಲಿ ಅನುರಕ್ತವಾದ ಆತ್ಮಯೋಗದಲ್ಲಿ ಪ್ರವೃತ್ತಿಸುವುದು. ಆತ್ಮನಲ್ಲ ಕ್ರೋಧ ಕಷಾಯ ಹುಟ್ಟಿದರೆ ಕ್ರೋಧವಶನಾದವನು ಬೇಕಾದುದನ್ನು ಮಾಡುವನು ಮತ್ತು ಅದರಿಂದ ಇತರ ಕರ್ಮಗಳ ಯೋಗ ಉಂಟಾಗುತ್ತದೆ. ಲೇಶ್ಯೆಯಲ್ಲಿ ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ ಮತ್ತು ಶುಕ್ಲಗಳೆಂದು ಆರು ಪ್ರಕಾರಗಳಿವೆ.

**ಕೂಷ್ಮಾಂಡಿಯಕ್ಷಿ** (೧-೮): ೨೨ನೆಯ ತೀರ್ಥಂಕರನಾದ ನೇಮಿನಾಥಸ್ವಾಮಿಯ ಯಕ್ಷಿಯ ಹೆಸರು. ಪ್ರತಿಯೊಬ್ಬ ತೀರ್ಥಂಕರಿಗೂ ಒಬ್ಬೊಬ್ಬ ಯಕ್ಷ-ಯಕ್ಷಿಯರು ಇರುತ್ತಾರೆ.

**ಕ್ಷಾಯಿಕ ಸಮ್ಯಕ್ತ್ವ** (೬೫-೫೦ ವ): ಅನಂತಾನುಬಂಧಿ ಕ್ರೋಧ ಮಾನ ಮಾಯ ಮತ್ತು ಲೋಭ ಮಿಥ್ಯಾತ್ವ ಸಮ್ಯಕ್‌ಮ್ಮಿಥ್ಯಾತ್ವ ಮತ್ತು ಸಮ್ಯಕ್ ಪ್ರಕೃತಿ ಇವೇಳು ಪ್ರಕೃತಿಗಳನ್ನು ಕೇವಲಿ ಭಗವಂತನ ಅಥವಾ ಶ್ರುತ ಕೇವಲಿ ಮುನೀಂದ್ರರ ಪಾದ ಮೂಲದಲ್ಲಿಕ್ಷಯ ಮಾಡುವುದರಿಂದಗುವ ಜೀವಾದಿ ತತ್ತ್ವಾರ್ಥ ಶ್ರದ್ಧಾನರೂಪ ಪರಿಣಾಮವೇ ಕ್ಷಾಯಿಕ ಸಮ್ಯಕ್ತ್ವವು.

ಗ

**ಗಂಧಕುಟಿ** (೪-೪೨): ಸಮವ ಸರಣದ ಮೂರನೆಯದಾದ ರತ್ನ ಪೀಠದ ಮೇಲೆ ಒಂದೊಂದು ರಮಣೀಯ ಸುಗಂಧಮಯ ಕಾಂತಿಯುಕ್ತ ಗಂಧಕುಟಿ ಇರುತ್ತದೆ. ಇದರ ನಡುವೆ ಸ್ಫಟಿಕಮಣಿ ನಿರ್ಮಿತ ರಮಣೀಯ ಸಿಂಹಾಸನಗಳಿರುತ್ತವೆ. ಈ ಸಿಂಹಾಸನದ ಮೇಲೆ ನಾಲ್ಕು ಬೆರಳಿನ ಅಂತರಾಳದಲ್ಲಿ ಅರಹಂತರು ಇರುತ್ತಾರೆ.

**ಗಂಧೋದಕ** (೩-೪೦): ಶ್ರೀಗಂಧ ಮತ್ತು ನೀರು ಸೇರಿಸಿದ್ದು; ತೀರ್ಥಂಕರ ಮೂರ್ತಿಗಳಿಗೆ ಗಂಧವನ್ನು ಬಳಿದು ನೀರಿನಿಂದ ಅಭಿಷೇಕಿಸಿದಾಗ ಬಂದ ಮಿಶ್ರ ಜಲ. ಇದನ್ನು ತೀರ್ಥವೆಂದು ಶ್ರಾವಕರು ತಲೆಯ ಮೇಲೆ ಸಿಂಪಡಿಸಿಕೊಳ್ಳುತ್ತಾರೆ.

**ಗಣಧರ** (೧-೬): ಯತಿ ಮುಂತಾದ ಹನ್ನೆರಡು ಗುಣಗಳನ್ನು ಮಿಥ್ಯಾತ್ವಾದಿಗಳಿಂದ ಬಿಡಿಸಿ ರತ್ನತ್ರಯಗಳಲ್ಲಿ ಸ್ಥಾಪನ ಮಾಡುವ ಧರ್ಮಾಚಾರ್ಯರಿವರು. ಇವರು ಸಪ್ತಧಿಯುಕ್ತರು, ತೀರ್ಥಂಕರರ ಮುಖ್ಯ ಶಿಷ್ಯರು.

**ಗುರು ಪಂಚಕ** (೩-೩೨): ಅರಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಮತ್ತು ಸರ್ವಸಾಧುಗಳು.

**ಗುಣಾಷ್ಟಕ** (೧-೨): ಕ್ಲಾಯಿಕ ಸಮ್ಯಕ್ತ್ವ, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಸೂಕ್ಷ್ಮತ್ವ, ಅವಗಾಹಿತ್ವ, ಅಗುರುಲಘುತ್ವ ಮತ್ತು ಅವ್ಯಾಭಾಧತ್ವ.

**ಗೌತಮಗಣಧರ** (೧-೪೯): ವರ್ತಮಾನಕಾಲದ ಅಂತಿಮ ತೀರ್ಥಂಕರರಾದ ವರ್ಧಮಾನ ಮಹಾವೀರರ ಗಣಧರರು. ಶ್ರೇಣಿಕನ ಪ್ರಶ್ನೆಗಳಿಗೆ ಉತ್ತರಿಸಿದವರು.

ಚ

**ಚಂದ್ರಗತಿ** (೩-೪): ಜೈನ ಮುನಿಗಳು ಆಹಾರಕ್ಕೆ ಹೋಗುವಕಾಲದ ಹಿತವಾದ ನಡಿಗೆ.

**ಚಂದ್ರಪ್ರಭಜಿನ** (೩-೧): ಜೈನರ ಎಂಟನೆಯ ತೀರ್ಥಂಕರರು.

**ಚರ್ಯಾಕಾಲ** (೩-೨): ಜೈನಯತಿಗಳು ಆಹಾರಕ್ಕಾಗಿ ಹೊರಡುವ ಸಮಯ.

**ಚರಿಗೆ** (೩-೧೮): ಜೈನಮುನಿಗಳು ತೆಗೆದುಕೊಳ್ಳುವ ಭಿಕ್ಷೆ, ಆಹಾರ.

**ಚರು** (೩-೨೮): ಎಂಟು ಪೂಜಾದ್ರವ್ಯಗಳಲ್ಲೊಂದು: ಜಲ ಗಂಧ ಅಕ್ಷತೆ ಪುಷ್ಪ ಚರು ದೀಪ ಧೂಪ ಫಲ ಮತ್ತು ಅರ್ಘ್ಯ.

**ಚರಮತನು** (೧-೬): ಚರಮದೇಹಧಾರಿ, ಚರಮಾಂಗ : ಕೊನೆಯ ದೇಹ ಧರಿಸಿದವನು. ಆ ದೇಹ ಬಿದ್ದ ಮೇಲೆ ತಿರುಗಿ ಹುಟ್ಟದೆ ಮುಕ್ತನಾಗುವವನು.

**ಚೈತ್ಯಾಲಯ** (೪-೨೮): ಜಿನಮಂದಿರ, ಬಸದಿ; ಜೈನದೇವಾಲಯ.

**ಚಾರಣಯುಗ** (೪-ಪಲ್ಲವಿ): ಆಕಾಶದಲ್ಲಿ ನಡೆಯುವ ಜೈನ ಮುನಿಗಳಜೋಡಿ, ಚಾರಣರು ಗಚ್ಛಪರಿಗ್ರಹವಿಲ್ಲದವರು, ಸದಾಸಂಚಾರಿಗಳು, ಇವರಿಗೆ ಶಿಷ್ಯರಿಲ್ಲ, ಇವರು ದೀಕ್ಷೆ ಕೊಡುವುದಿಲ್ಲ.

**ಚತುರ್ವಿಧದಾನ** (೧೧-೧೧): ಆಹಾರ (ಅನ್ನ), ಅಭಯ, ಭೈಷಜ್ಯ (ಔಷಧ) ಮತ್ತು ಶಾಸ್ತ್ರದಾನ,.

**ಚಕ್ರರತ್ನ** (೧೧-೩೪): ಚಕ್ರವರ್ತಿಯಾಗುವ ಪುಣ್ಯವಂತನಾದ ರಾಜನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟುತ್ತದೆ. ಅದರ ಜತೆಯಲ್ಲೇ ಖಡ್ಗ, ರತ್ನ, ದಂಡರತ್ನ, ಛತ್ರ, ರತ್ನ, ಮಣಿರತ್ನ, ಚರ್ಮರತ್ನ, ಕಾಕಿಣೀರತ್ನ, ಗೃಹಪತಿ ರತ್ನ, ಸೇನಾಪತಿರತ್ನ, ಸ್ಥಪತಿರತ್ನ, ಪುರೋಹಿತರತ್ನ, ಸ್ತ್ರೀರತ್ನ, ಗಜರತ್ನ, ಅಶ್ವರತ್ನ-ಒಟ್ಟು ೧೪ ರತ್ನಗಳೂ ನವನಿಧಿಗಳೂ (ಕಾಲ, ಮಹಾಕಾಲ, ನೈಸರ್ಪ, ಪಾಂಡುಕ, ಪದ್ಮ, ಪಿಂಗಳಮಾಣವಕ, ಶಂಖ, ಸರ್ವರತ್ನ) ಚಕ್ರವರ್ತಿಗೆ ಕೈ ಸೇರುತ್ತವೆ.

**ಛಾಯಾಪ್ರತುಮೆ** (೧-೨): ಸಿದ್ಧ ಪರಮೇಷ್ಠಿಗಳು, ಇವರಿಗೆ ಆಕಾರವಿಲ್ಲ. ಪುನರ್ಜನ್ಮವಿಲ್ಲ ಇವರ ವರ್ಣ ಸ್ಫಟಿಕದಂತೆ ಬಿಳಿಪು.

ಜ

**ಜಂಬೂದ್ವೀಪ** (೮-೩೨): ಭೂಲೋಕದ ಮಧ್ಯೆ ಮಂದರ ಪರ್ವತವಿದ್ದು ಅದರ ಸುತ್ತಲೂ ಜಂಬೂ, ಧಾತಕೀ, ಪುಷ್ಕರವನ, ವಾರಣೀವರ, ಕ್ಷೀರವರ, ಘೃತವರ, ನಂದೀಶ್ವರ ದ್ವೀಪಗಳಿವೆ.

**ಜನ್ಮಾಭಿಷೇಕ** (೪-೩೭): ತೀರ್ಥಂಕರನ ಪಂಚ ಕಲ್ಯಾಣಗಳಲ್ಲಿ ಎರಡನೆಯದು.

**ಜಪ** (೩-೩೧): ಧ್ಯಾನ, ಆತ್ಮವನ್ನು ಕುರಿತ ಚಿಂತನೆ; ೧೨ ವಿಧವಾದ ತಪಗಳಲ್ಲಿ ಇದು ಸೇರಿದೆ.

**ಜಾತರೂಪ** (೮-೪೧): ಜನನ ಕಾಲದಲ್ಲಿದ್ದ ರೂಪ, ದಿಗಂಬರತ್ವ.

**ಜಿನಭವನ** (೧-೫೩): ಚೈತ್ಯಾಲಯ, ಬಸದಿ.

**ಜಿನಪತಿ** (೩-೩೧): ಅರಿ (ರ) ಹಂತರು : ನಾಲ್ಕು ಘಾತಿ ಕರ್ಮಗಳನ್ನು ಗೆದ್ದವರು ಸಮವಸರಣದಲ್ಲಿ ದಿವ್ಯಧ್ವನಿಯ ಮೂಲಕ ಉಪದೇಶಿಸುವವರು. ಇವರ ಬಣ್ಣ ಚಿಗುರು ಬಾಳೆ ಎಲೆಯ (ಎಳೆ ಹಸಿರು) ಬಣ್ಣ, ಇವರು ೪೫ ಗುಣಗಳಿಂದ ಕೂಡಿರುತ್ತಾರೆ, ೧೮ ದೋಷಗಳಿಂದ ಮುಕ್ತರಾಗಿರುತ್ತಾರೆ.

**ತ**

**ತತ್ವಾರ್ಥ** ಸೂತ್ರ (೧-೧೫): ಇದು ಉಮಾಸ್ವಾತಿಗಳ ಕೃತಿ.

**ತನುವಾತ** (೧-೨): ಕೊನೆಯಿಲ್ಲದೆ ಹಬ್ಬಿರುವ ಆಕಾಶದ ಮಧ್ಯದಲ್ಲಿರುವ ಘನೋವಧಿ, ಘನವಾತ, ತನುವಾತಗಳೆಂಬ ಮೂರು ಗಾಳಿಗಳಿರುತ್ತವೆ. ಈ ಗಾಳಿಗಳ ಮಧ್ಯದಲ್ಲಿ ಷಡ್ ದ್ರವ್ಯಗಳಿರುತ್ತವೆ, ಷಡ್ ದ್ರವ್ಯಗಳಿರುವ ಭಾಗವೇ ಲೋಕ,ಲ ಉಳಿದದ್ದು ಅಲೋಕ.

**ತೀರ್ಥಕರ** (೩-೩೦): ಯಾವುದು ಭವ್ಯರನ್ನು ಸಂಸಾರದಿಂದ ಪಾರು ಮಾಡುತ್ತದೆಯೋ ಅದು ತೀರ್ಥ (ಧರ್ಮ), ಆ ಧರ್ಮ ತೀರ್ಥವನ್ನು ಜಗತ್ತಿನಲ್ಲಿ ಮಾಡುವವರು, ಪ್ರವರ್ತಿಸುವವರು ತೀರ್ಥಂಕರರು. ತೀರ್ಥಂ ಕರೋಹಿತಿ ತೀರ್ಥಂಕರ, ಇವರಿಗೆ ಪಂಚ ಕಲ್ಯಾಣಗಳುಂಟು. ಭೂತ, ವರ್ತಮಾನ ಮತ್ತು ಭವಿಷ್ಯತ್ – ಹೀಗೇ ಮೂರೂ ಕಾಲಗಳಲ್ಲಿ ೨೪ ಜನ ತೀರ್ಥಂಕರರಿರುತ್ತಾರೆ.

**ತ್ರಿಗುಪ್ತಿ** (೧೦-೩೯): ಕರ್ಮವನ್ನು ತಡೆಯುವುದಕ್ಕೆ ಅಗತ್ಯವಾದ ಆಚರಣೆ ಅಥವಾ ಮನ ವಚನ ಕಾಯಗಳ ವ್ಯಾಪಾರವನ್ನು ಬಾಹ್ಯ ಪ್ರವರ್ತನಕ್ಕೆ ಬಿಡದೆ ತಡೆಯುವುದನ್ನು ಗುಪ್ತಿ ಎನ್ನುವರು. ಇವರಲ್ಲಿ ಮೂರು (ತ್ರಿ)ವಿಧ: ೧. ಮನೋಗುಪ್ತಿ, ೨. ವಚನಗುಪ್ತಿ, ೩. ಕಾಯಗುಪ್ತಿ

**ನ**

**ನಂದೀಶ್ವರ** (೯-೨೫): ಮಧ್ಯಲೋಕದ ನಡುವೆ ಇರುವ ಮೇರು ಪರ್ವತದ ಸುತ್ತ ಇರುವ ಎಂಟು ದ್ವೀಪಗಳಲ್ಲಿ ಎಂಟನೆಯದು ನಂದೀಶ್ವರ. ಆಷಾಡ ಕಾರ್ತಿಕ ಫಾಲ್ಗುಣಗಳಲ್ಲಿ ಎಂಟು ದಿನ ದೇವತೆಗಳು ಇಲ್ಲಿಗೆ ಬಂದು ಜಿನಬಿಂಬಗಳನ್ನು ಪೂಜಿಸುವ ಕಾಲ ನಂದೀಶ್ವರ.

**ನಮೋಸ್ತು** (೧-೨೨): ಜೈನ ಯತಿಗಳು ; ನಮೋಸ್ತುಗಳೆಂದು ಸವಣರ್ಗೆ ಪೆಸರ್ ; ನಮಸ್ಕರಿಸುವುದು.

**ನಾಗಪತಿ** (೧-೧): ಸರ್ಪಗಳೊಡೆಯ, ಧರಣೇಂದ್ರ ಯಕ್ಷ.

**ನಿದ್ರಪ್ರಬೋಧಿನಿ** (೧೬-೩೯): ಆತ್ಮನ ದರ್ಶನ ಶಕ್ತಿಯನ್ನು ಮುಚ್ಚುವ ಕರ್ಮವು ದರ್ಶನಾವರಣೀಐ ಕರ್ಮ. ಇದು ಚಕ್ಷು-ಅಚಕ್ಷು, ಅವಧಿ, ಕೇವಲ, ನಿದ್ರಾ, ನಿದ್ರಾನಿದ್ರಾ, ಪ್ರಚಲಾ, ಪ್ರಚಲಾಪ್ರಚಲಾ. ಸ್ತ್ಯಾನವೃದ್ಧಿ ಎಂದು ಒಂಭತ್ತು ವಿಧ.

**ನೈಗಮಾಮರ** (೨೦-೯೧): ಜೈನ ಪುರಾಣಗಳಲ್ಲಿ ಬರುವ ದೇವತೆಗಳಲ್ಲಿ ಒಬ್ಬ.

**ನಿರ್ವಾಣ** (೧-೪೮): ಮೋಕ್ಷ ಗಮನ.

ಪ

**ಪಂಚಾಗ್ನಿ** (೨೯-೯೪): ವಡವಾಗ್ನಿ ಮಂದಾಗ್ನಿ ಜಠರಾಗ್ನಿ, ಶೋಕಾಗ್ನಿ, ಕಾಮಾಗ್ನಿ,

**ಪಂಚಚಾರ** (೧-೩): ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು ವೀರ್ಯಾಚಾರ.

**ಪಂಚಮಹಾಕಲ್ಯಾಣ** (೬೫-೫೦ ವ): ನೋಡಿ: ಕಲ್ಯಾಣ ಪಂಚಕ.

**ಪದಿಮೂರು ಚಾರಿತ್ರ**(೧-೩): ಇದು ಚಾರಿತ್ರಾಚಾರಕ್ಕೆ ಸಂಬಂಧಿಸಿದೆ.

**ಪನ್ನೆರಡು ತಪ** (೧-೩): ಅನಶನ, ಅವಮೋದರ್ಯ, ವೃತ್ತಿ ಪರಿಸಂಖ್ಯಾನ, ರಸಪರಿತ್ಯಾಗ, ವಿವಕ್ತ ಶಯ್ಯಾಸನ, ಕಾಯಕ್ಲೇಶ (ಇವು ಆರು ಬಾಹ್ಯತಪಗಳು); ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ, ಧ್ಯಾನ (ಇವು ಆರು ಆಭ್ಯಂತರ ತಪಗಳು). ಈ ಎರಡು ರೀತಿಯ ತಪದಲ್ಲಿ ಪ್ರವೃತ್ತನಾಗುವುದೇ ತಪಾಚಾರ.

**ಪನ್ನೊಂದಂಗ** (೧-೨): ಆಚಾರಾಂಗ, ಸೂತ್ರ ಕೃತಾಂಗ ಸ್ಥಾನಾಂಗ, ಸವವಾಯಾಂಗ ವ್ಯಾಖ್ಯಾಪ್ರಜ್ಞಪ್ತಿ, ಜ್ಞಾತೃ ಧರ್ಮಕಥಾಂಗ, ಉಪಾಸಕಾಧ್ಯಯನಾಂಗ, ಅಂತಕೃದ್ದಶಾಂಗ, ಅನುತ್ತರೋಪಪಾದಿಕದಶಾಂಗ, ಪ್ರಶ್ನ ವ್ಯಾಕರಣಾಂಗ, ವಿಪಾಕ ಸೂತ್ರಾಂಗ.

**ಪ್ರಥಮಾಂಗ** (೧-೧೨): ಆಚಾರಾಂಗ.

**ಪರಮೌದಾರಿಕ** (೬೫-೫೦ ವ): ಘಾತಿಕರ್ಮ ನಾಶಮಾಗಿ, ಅರ್ಹವವಸ್ಥೆಯಲ್ಲಿರುವ ದಿವ್ಯ ಶರೀರ.

**ಪಲ್ಯಂಕಾಸನ** (೬೫-೫೦ ವ): ನಿಂತಿರುವುದು ಕಾಯೋತ್ಸರ್ಗವಾದರೆ ಸುಖಾಸನದಲ್ಲಿ ಕುಳಿತಿರುವುದು ಪಲ್ಯಂಕಾಸನ (ಪರ್ಯಂಕಾಸನ)

**ಪುದ್ಗಲ** (೬೫-೫೦ ವ): ರೂಪ ರಸ ಗಂಧ ಸ್ಪರ್ಶವುಳ್ಳ ಮೂರ್ತವೂ ಅಚೇತನವೂ ಆದ ಮೂರ್ತ ದ್ರವ್ಯಕ್ಕೆ ಪುದ್ಗಲವೆಂದು ಹೆಸರು.

**ಪಲ್ಯೋಪಮಾರ್ಥ** (೧೨-೯): ಆಯುಷ್ಯ ಪ್ರಮಾಣ.

**ಪರ್ಣಲಘುವಿದ್ಯೆ** (೧೬-೩೮): ತಪಸ್ಸಿನಿಂದ ಸಾಧಿಸುವ ಋದ್ಧಿ, ಇದರಿಂದ ಗಾಳಿಯಲ್ಲಿ ಎಲೆ ಹಾರುವಂತೆ ಹಾರಿಹೋಗಿ ಬೇಕಾದಲ್ಲಿ ಇಳಿಯಬಹುದು.

**ಪರಿಗ್ರಹ** (-೧೪): ಸ್ವೀಕರಿ (ಸಂಗ್ರಹಿ) ಸುವುದು ಇದರಲ್ಲಿ ಎರಡು ವಿಧ : ೧) ಬಾಹ್ಯ ಪರಿಗ್ರಹ- ಧನಧಾನ್ಯಾದಿಗಳು ೨) ಅಭ್ಯಂತರ ಪರಿಗ್ರಹ – ಕ್ರೋಧಾದಿಗಳು.

**ಪರೀಷಹ** (೭-೧೦): ಮೋಕ್ಷಗಾಮೀ ಜೀವಕ್ಕೊದಗುವ ತೊಂದರೆ. ಇವು ೨೨ ಇವೆ. ನೆಲೆ, ನಿಲ್ಲಲು ಮನೆಯಿಲ್ಲದ, ಮೈಮೇಲೆ ಬಟ್ಟೆಯಿಲ್ಲದ, ನೆರಳಿನಲ್ಲದ, ಸಂಗ್ರಹವಾಗಿ ಹೇಳುವುದಾದರೆ ಸಂಸಾರಿಗಿರುವ ಅನುಕೂಲಗಳಿಲ್ಲದವನಿಗೆ ಈ ೨೨ ಪರೀಷಹಗಳು ಅನಿವಾರ್ಯ. ಪರೀಷಹಗಳು-ಹಸಿವು, ಬಾಯಾರಿಕೆ, ಚಳಿ, ಬಿಸಿ, ಕ್ರಿಮಿಗಳ ಕಡಿತ, ಬೆತ್ತಲೆ ತೊಂದರೆ, ಅರತಿ ಬಾಧೆ, ಸ್ತ್ರೀಬಾಧೆ, ಓಡಾಟ ಬಾಧೆ, ಮಲಗುವಾಗಿನ ಬಾಧೆ,ದ ಬೈಗುಳು, ಕುಳಿತಾಗಿನ ತೊಂದರೆ, ಹೊಡೆತ ಭಿಕ್ಷಾ ಕಾಲದ ಬಾಧೆ, ಭಿಕ್ಷೆ ಸಿಗದಿರುವಾಗಿನ ಬಾಧೆ, ತಪೋಮಹಿಮೆ

ಕಾಣದಿರುವುದು, ರೋಗ, ಮುಳ್ಳು ಕಲ್ಲುಗಳ ಬಾಧೆ, ತನ್ನ ಪ್ರಜ್ಞೆಗೆ ಅಹಂಕಾರ, ಅಜ್ಞಾನಕ್ಕಾಗಿ ಕೊರಗುವಿಕೆ, ಜ್ಞಾನಬಾಧೆ, ಪುರಸ್ಕಾರ ಸಿಗದಾಗಿನ ಬಾಧೆ.

**ಪಾಂಡುಕ ಶಿಲೆ** (೮-೧೭): ಮೇರು ಪರ್ವತದ ಮೇಲಿರುವ ಅರ್ಧ ಚಂದ್ರಾಕೃತಿಯ ಶಿಲೆ. ಇಲ್ಲಿ ತೀರ್ಥಂಕರರ ಜನ್ಮಾಭಿಷೇಕ ನಡೆಯುವುದು.

**ಪಾರಣೆ** (೧೯-೩೯): ವ್ರತೋಪವಾಸ ಮಾಡಿದ ಮರುದಿನ ಆಹಾರ ಸ್ವೀಕಾರ.

**ಪ್ರಾತಿಹಾರ್ಯಾಷ್ಟಕ** (೪-೪೩)ನೋಡಿ: ಅಷ್ಟಮಹಾಪ್ರಾತಿಹಾರ್ಯ.

**ಪೀಠತ್ರಯ** (೪-೩೦): ಸಮವಸರಣ ಮಂಟಪದ ಮಧ್ಯದಲ್ಲಿ ಒಂದರ ಮೇಲೆ ಒಂದರಂತೆ ಬರುವ ವೈಢೂರ್ಯ ಪೀಠ, ಕಾಂಚನ ಪೀಠಂ ಮತ್ತು ರತ್ನ ಪೀಠ ಎಂಬ ಮೂರು ಪೀಠಗಳು.

**ಪೂರ್ವವಿದೇಹ** (೬-೧): ಜಂಬೂ ದ್ವೀಪದ ಮೇರು ಪರ್ವತಕ್ಕೆ ಪೂರ್ವ ದಿಕ್ಕಿಗೆ ಇರುವ ವಿದೇಹ ಕ್ಷೇತ್ರ.

**ಬ**

**ಬಸದಿ** (೨-೨೫): ಜೈನದೇವಾಲಯ, ಚೈತ್ಯಾಲಯ. ಸಂ. ವಸತಿ (ತ್ಭ) ಬಸದಿ.

**ಭವ್ಯ (೧-೩):** ಚೈತನ್ಯ ಜೀವವು ಸಮ್ಯಗ್ ದರ್ಶನಾದಿ ಭಾವರೂಪದಲ್ಲಿ ಪರಿಣತಿ ಹೊಂದಿ ಮೋಕ್ಷಗಾಮಿಯಾಗಲು ಅರ್ಹತೆ ಸಂಪಾದಿಸಿರುವ ಜೀವ. ಸಮ್ಯಕ್ತ್ವ ದೊರೆಯುವ ಸಂಭವ ಬೇಗ ಬರುವುದಾದರೆ ಆಸನ್ನಭವ್ಯ, ನಿಧಾನವಾಗಿ ಬರುವುದಾದರೆ ದೂರಭವ್ಯ.

**ಮ**

**ಮಹತ್ತರ ದೇವಿ** (೭-೧೮): ಜೈನ ತೀರ್ಥಂಕರ ಪುರಾಣಗಳಲ್ಲಿ ಬರುವ ದೇವಿಯರು, ೧೬ ಕಲ್ಪಗಳಲ್ಲಿರುವ ಈ ದೇವಿಯರು ಆಯಾ ವಿಮಾನದಲ್ಲಿ ಹುಟ್ಟುವ ಭವ್ಯಜೀವಗಳಿಗೆ ತಿಳಿವಳಿಕೆ ಕೊಡುವರು.

**ಮಹಾವ್ರತಿ** (೫-೪೫):ಮುನಿ, ಜೈನ ಸನ್ಯಾಸಿ, ಗೃಹಸ್ಥರು ಅಣುವ್ರತಗಳನ್ನು ಸ್ವೀಕರಿಸಿದರೆ ಯತಿಗಳು ಮಹಾವ್ರತಗಳನ್ನು ಪಾಲಿಸಿ ಮಹಾವ್ರತಿಗಳಾಗುತ್ತಾರೆ. ಸಾಧುಗಳಿಗಿರುವ ೨೮ ಮೂಲ ಗುಣಗಳಲ್ಲಿ ಇವೂ ಇವೆ.

**ಮಾನಸ್ತಂಭ** (೨-೨೫): ಜೈನ ದೇವಾಲಯಗಳ ಮುಂದೆ ಪ್ರವೇಶದ್ವಾರದ ಹೊರಗೇ ಇರುವ ಸ್ತಂಭಕ್ಕೆ ಮಾನಸ್ತಂಭವೆಂದು ಹೆಸರು. ಸಮವಸರಣದ ನಾಲ್ಕೂ ದ್ವಾರಗಳಲ್ಲಿ ನಾಲ್ಕು ಮಾನಸ್ತಂಭಗಳಿರುತ್ತವೆ.

**ಮನಃಪರ್ಯಯಜ್ಞಾನ** (೬೫-೫೦ ವ): ಕರ್ಮಕ್ಷಯ ಮಾಡಿಕೊಂಡ ಜೀವಕ್ಕೆ ಪ್ರಾಪ್ತವಾಗಿರುವ ಜ್ಞಾನಗಳಲ್ಲೊಂದು. ಇತರರ ಮನಸ್ಸಿನಲ್ಲಿರುವುದನ್ನು ಇದರಿಂದ ತಿಳಿದುಕೊಳ್ಳಬಹುದು.

**ಮುಕ್ಕೊಡೆ** (೩-೩೦): ತೀರ್ಥಂಕರರಿಗೆ ಪ್ರಾಪ್ತವಾಗಿರುವ ಅಷ್ಟಮಹಾಪ್ರಾತಿಹಾರ್ಯಗಳಲ್ಲೊಂದು ಈ ಮುಕ್ಕೊಡೆ (ಛತ್ರತ್ರಯ).

**ಮುಕ್ತಿ** (೪-ಪಲ್ಲವಿ): ಘಾತಿ ಅಘಾತಿ ಕರ್ಮಗಳನ್ನು ಪೂರ್ತಿ ಕಳೆದುಕೊಂಡ ಜೀವ ಕರ್ಮ ಬಂಧನದಿಂದ ಬಿಡುಗಡೆ ಪಡೆಯುವುದೇ ಮುಕ್ತಿ, ಮೋಕ್ಷ. ಕರ್ಮಬಂಧ ಕಳಚಿದ ಮೇಲೆ ಜೀವ ಅಜೀವದಿಂದ ಪ್ರತ್ಯೇಕಗೊಂಡು ಸಹಜ ಸ್ಥಿತಿ ಪಡೆದು ಅನಂತ ಚತುಷ್ಟಯದಿಂದ ಬೆಳಗುತ್ತಾ ಸಿದ್ಧ ಶಿಲೆಯಲ್ಲಿ ನೆಲಸುತ್ತದೆ. ಈ ಮುಕ್ತಜೀವಕ್ಕೆ ಮತ್ತೆ ಸಂಸಾರದ ಬಂಧನವಿಲ್ಲ.

**ಯ**

**ಯಕ್ಷಿ** (೧-೮): ಜೈನ ಪುರಾಣಗಳಲ್ಲಿ ಬರುವ ಯಕ್ಷರಿಗೂ ಜೈನೇತರ ಯಕ್ಷರಿಗೂ ವ್ಯತ್ಯಾಸಗಳಿವೆ. ಇಲ್ಲಿನ ಪ್ರತಿ ತೀರ್ಥಂಕರರಿಗೂ ಒಬ್ಬ ಯಕ್ಷ, ಒಬ್ಬ ಯಕ್ಷಿ ಇರುತ್ತಾರೆ. ೨೨ನೆಯ ತೀರ್ಥಂಕರನಾದ ನೇಮಿನಾಥನ ಯಕ್ಷ ಸರ್ವಾಹ್ಣ, ಯಕ್ಷಿ ಕೂಷ್ಮಾಂಡಿನೀದೇವಿ.

**ರ**

**ರತ್ನತ್ರಯ** (೧-೪): ಸಮ್ಯಕ್‌ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ಯ – ಇವು ಮೂರು ರತ್ನಗಳು. ಇವು ಮೋಕ್ಷದ ಮಾರ್ಗಗಳಾಗಿವೆ.

**ರಜ್ಜು** (೧-೧೫): ಒಂದು ಸಮಯಕ್ಕೆ ಅಸಂಖ್ಯಾತ ಯೋಜನ ದೂರದವರೆಗೆ ಹೋಗುವ ದೇವ ವಿಮಾನವು ಹಗಲಿರುಳು ಅಸಂಖ್ಯಾತಾಬ್ದದವರೆಗೆ ಎಷ್ಟು ದೂರ ಹೋಗುತ್ತದೆಯೋ ಅಷ್ಟು ದೂರಕ್ಕೆ ಒಂದು ರಜ್ಜು ಎನ್ನುವರು.

**ಲ**

**ಲೇಶ್ಯೆ:** ಇದು ಆತ್ಮನ ಮೇಲೆ ರಾಗ-ದ್ವೇಷಗಳಿಂದ ಆಗುವ ಪರಿಣಾಮ ವಿಶೇಷವನ್ನು ಬಣ್ಣಗಳ ಮೂಲಕ ತಿಳಿಸುವುದು. ಇದು ಆರು ಪ್ರಕಾರವಾಗಿದೆ: ೧. ಕೃಷ್ಣ, ೨.ನೀಲ, ೩.ಕಪೋತ, ೪. ಪೀತ, ೫. ಪದ್ಮ, ೬. ಶುಕ್ಲ, ಮೊದಲ ಮೂರು ಅಶುಭ, ಕೊನೆಯ ಮೂರು ಶುಭ.

**ವ**

**ವಿದೇಹ** (೧-೧೫): ಜಂಬೂದ್ವೀಪದ ನೀಲಪರ್ವತದ ಕ್ಷೇತ್ರ. ಮಂದರ ಪರ್ವತವಿರುವುದು ಈ ವಿದೇಹ ಕ್ಷೇತ್ರದ ನಡುವೆ.

**ವಿಮಾನ** (೭-೧೫): ಆಕಾಶದಲ್ಲಿ ಸಂಚರಿಸುವ ದೇವತೆಗಳ ವಾಹನ ; ದೇವತೆಗಳ ವಾಸಸ್ಥಾನ, ಸ್ವರ್ಗ.

**ವಿಪುಳಗಿರಿ** (೧-೪೯): ಮಗಧ ದೇಶದ ರಾಜಧಾನಿಯಾದ ರಾಜಗೃಹದ ಬಳಿಯ ಪರ್ವತ. ಮಹಾವೀರರು ಶ್ರೇಣಿಕಾದಿಗಳಿಗೆ ಉಪದೇಶಿಸಿದ್ದು ಇಲ್ಲಿಯೇ.

**ವೈಕುರ್ವಣ** (೧೮-೨೮): ದೇಹದ ರೂಪವನ್ನು ತನಗೆ ಬೇಕಾದ ಹಾಗೆ ಬದಲಾಯಿಸಿ ಕೊಳ್ಳುವ ಶಕ್ತಿ; ಇದು ದೇವ ನಾರಕರಿಗೆ ಮಾತ್ರ ಸಾಧ್ಯ.

**ಷ**

**ಷಡ್ದ್ರವ್ಯ** (೧-೫೧): ಜೀವ, ಪುದ್ಗಲ, ಅಧರ್ಮ, ಆಕಾಶ, ಕಾಲ.

**ಷೋಡಶ ಕಲೆ** (೧-೪೮): ಚಂದ್ರನಿಗೆ ಸಂಬಂಧಿಸಿದಂತೆ ಹದಿನಾರು ಭಾಗಗಳ ಕಾಂತಿ.

**ಶ**

**ಶಾಂತಿಧಾರೆ** (೩-೩೧): ಪೂಜಾಕಾಲದಲ್ಲಿ ಜಲ ಗಂಧ ಅಕ್ಷತೆ ಪುಷ್ಪ ಚರು ದೀಪ ಧೂಪ ಫಲ ಅರ್ಘ್ಯಗಳನ್ನು ಅರ್ಪಿಸಿದ ಮೇಲೆ 'ಸರ್ವಲೋಕ ಶಾಂತ್ಯರ್ಥಂ ದಿವ್ಯ ಶಾಂತಿಧಾರಂ ನಿರ್ವಪಾಮಿಸ್ವಾಹಾ' ಎಂದು ಬಿಡುವ ಉದಕಧಾರೆ.

**ಶ್ರಾವಕ** (೪-೧೫): ಜೈನ ಗೃಹಸ್ಥ

**ಶ್ರಾವಿಕೆ** (೬೫-೫೦): ಜೈನ ಗೃಹಸ್ಥೆ

**ಶಿಕ್ಷಾವ್ರತ** (೭-೧೦): ಶ್ರಾವಕರು ಮುನಿಜೀವನದ ಶಿಕ್ಷಣವನ್ನು ಪಡೆಯುವುದು. ಇದರಲ್ಲಿ ದೇಶಾವಕಾಶಿಕ, ಸಾಮಾಯಿಕ, ಪ್ರೋಷಧೋಪವಾಸ, ವೈಯಾವೃತ್ಯಗಳೆಂದು ನಾಲ್ಕು ವರ್ಗಗಳು.

**ಶುಕ್ಲಧ್ಯಾನ** (೧೦-೫೦): ಶುಚಿತ್ವ ಸಮೇತವಾದ ಅತ್ಯಂತ ನಿರ್ಮಲವಾದ ಧ್ಯಾನ. ಇದು ಸಾಕ್ಷಾತ್ತಾಗಿ ಮುಕ್ತಿಗೆ ಸಾಧನ ; ಮುಕ್ತಿ ಹೊಂದುವುದೊಂದನ್ನೇ ಚಿಂತಿಸುವುದು.

**ಶುಕ್ಲ ಲೇಶ್ಯೆ** (೧೦-೪೯): ಶುಕ್ಲಲೇಶ್ಯೆ ಶಂಖದಂತೆ ಶುಭ್ರವಾಗಿರುತ್ತದೆ. ನೋಡಿ : ಲೇಶ್ಯೆ.

**ಶ್ರುತ ಪಂಚಮಿ** (೧-೧೩): ಅರ್ಹದ್ಬಲಿ ಮುನಿಗಳಾದ ಮೇಲೆ ಮಾಘನಂದಿ ಆಚಾರ್ಯರು ಅಂಗಪೂರ್ವ ದೇಶದ ಪ್ರಕಾಶಕರಾಗಿದ್ದರು. ಆಮೇಲೆ ಬಂದವರು ಗುಜರಾತಿನ ಗಿರಿನಾರ್ ಬಳಿಯ ಚಂದ್ರಗುಹೆಯಲ್ಲಿ ನಿವಾಸ ಮಾಡಿದ ಧರಸೇನರು. ಆಚಾರ್ಯ ಧರಸೇನರು ಅಷ್ಟಾಂಗ ಮಹಾನಿಮಿತ್ತದ ಪಾರಗಾಮಿಗಳು. ಅಗ್ರಾಯಣೀ ಪೂರ್ವದ ಅಂತರ್ಗತ ಪಂಚಮ ವಸ್ತುವಿನ ಚತುರ್ಥ ಮಹಾ ಕರ್ಮ ಪ್ರಾಭೃತವನ್ನು ಧರಸೇನರು ಅರಿತಿದ್ದರು. ಮಾನವನ ಧಾರಣಾಶಕ್ತಿ ಕುಗ್ಗುತ್ತಾ ನಡೆಯುವುದರಿಂದ ಶ್ರುತಜ್ಞಾನ ಸಂರಕ್ಷಣೆಗೆ ತೊಡಗಿದರು. ವೇಣಾತಟಾಕಪುರದಲ್ಲಿದ್ದ ಮಹಿಮಾ ಶಾಲಿ ಸಾಧು ಸಂಘದಿಂದ ತೀಕ್ಷ್ಣ ಬುದ್ಧಿಶಾಲಿಗಳಾದ ಪುಷ್ಪದಂತ ಭೂತಬಲಿ ಎಂಬ ಇಬ್ಬರು ಸಾಧುಗಳನ್ನು ಕರಸಿಕೊಂಡರು. ಗುರುವಿನಯ ಜ್ಞಾನ ವಿನಯದಿಂದ ಅವರು ಸಮರ್ಥರಾಗಿರುವುದನ್ನು ಧರಸೇನರು ಅರಿತರು. ದೀರ್ಘಕಾಲದ ಅಧ್ಯಯನಾನಂತರ ಆಷಾಢ ಬಹುಳ ಏಕಾದಶಿಗೆ ಗ್ರಂಥ ವ್ಯಾಖ್ಯಾನ ಮುಗಿಯಿತು. ಧರಸೇನರ ಅಪ್ಪಣೆ ಪಡೆದು ಭೂತಬಲಿ ಪುಷ್ಪದಂತರು ದಕ್ಷಿಣದ ಕರಹಾಟಕ್ಕೆ ಬಂದರು. ಆಚಾರ್ಯ ಪುಷ್ಪದಂತರಿಗೆ ಜಿನಪಾಲಿತರು ಶಿಷ್ಯರಾದರು. ಪುಷ್ಪದಂತರು ಜೀವಸ್ಥಾನಧಿಕಾರ ರಚಿಸತೊಡಗಿ ಅದರಲ್ಲಿ ಗುಣಸ್ಥಾನ – ಜೀವ ಸಮಾಸ ಮೊದಲಾದ ೨೦ ಪ್ರರೂಪಣೆ ವರ್ಣಿಸಿ ಜಿನಪಾಲಿತರಿಂದ ಭೂತಬಲಿಗೆ ಕಳುಹಿಸಿದರು. ಭೂತಬಲಿಗಳು ಆರು ಸಾವಿರ ಶ್ಲೋಕಗಳಲ್ಲಿ ದ್ರವ್ಯರೂಪಣಾಧಿಕಾರ ರಚಿಸಿ, ಮುವ್ವತ್ತು ಸಾವಿರ ಶ್ಲೋಕಗಳಲ್ಲಿ ಮಹಾಬಂಧವೆಂಬ ಆರನೆಯ ಖಂಡ ಮುಗಿಸಿದರು. ಅದು ಲಿಪಿಬದ್ಧವಾದದ್ದು ಜ್ಯೇಷ್ಠ ಶುದ್ಧ ಪಂಚಮಿಯಂದು. ಅದುವರೆಗೆ ಕಂಠಸ್ಥರೂಪದಲ್ಲಿದ್ದ ಶ್ರುತಜ್ಞಾನ ಅಂದು ಲಿಪಿಬದ್ಧವಾದ್ದರಿಂದ ಅದನ್ನು ಭಕ್ತಿ ಶ್ರದ್ಧೆಗಳಿಂದ ಬಟ್ಟೆಯಲ್ಲಿ ಕಟ್ಟಿ ಪೂಜಿಸಿದರು. ಆ ಶುಭಮಂಗಳ ದಿನವಾದ ಜ್ಯೇಷ್ಠ ಶುಕ್ಲ ಪಂಚಮಿಯ ದಿನವನ್ನು ಶ್ರುತಪಂಚಮಿ ಎಂಬ ಹೆಸರಿನಿಂದ ಗೌರವಿಸತೊಡಗಿದರು.

**ಸ**

**ಸಂಸೃತಿ**(೪-೧೪): ಸಂಸಾರ

**ಸಗ್ಗ** (೪-೧೭): ಸ್ವರ್ಗ, ಜೈನ ಸ್ವರ್ಗ ಜೈನೇತರ ಸ್ವರ್ಗದ ಕಲ್ಪನೆಗಿಂತ ಬೇರೆ, ಇಲ್ಲಿ ಸ್ವರ್ಗವೆಂದರೆ ಮೋಕ್ಷವಲ್ಲ.

**ಸಪ್ತಭಂಗಿ** (೧-೬): ವಸ್ತುನಿರೂಪಣೆಯ ಏಳು ಪ್ರಕಾರಗಳು. ಇದೇ ಸ್ಯಾದ್ವಾದ : ಸ್ಯಾದಪ್ತಿ, ಸ್ಯಾನ್ನಾಸ್ತಿ, ಸ್ಯಾದಸ್ತಿನಾಸ್ತಿ, ಸ್ಯಾದವಕ್ತವ್ಯಂ, ಸ್ಯಾದಸ್ತ್ಯವಕ್ತವ್ಯಂ, ಸ್ಯಾನ್ನಾಸ್ತ ವಕ್ತವ್ಯಂ, ಸ್ಯಾದಸ್ತಿನಾಸ್ತವಕ್ತವ್ಯಂ.

**ಸಪ್ತರ್ಧಿ** (೬೦-೫೦ ವ): ಏಳು ಋದ್ಧಿಗಳು;ನೋಡಿ, ಋದ್ಧಿ.

**ಸಮಶ್ರುತಿ** (೧-೧): ಸಮವಸರಣಕ್ಕೆ ಇರುವ ಇನ್ನೊಂದು ಹೆಸರು ; ನೋಡಿ ಸಮವಸರಣ.

*A)* **ಸಮವಸರಣ** (೪-೧೩): ತೀರ್ಥಂಕರರಿಗೆ, ಅವರಿಗೆ ಕೇವಲ ಜ್ಞಾನ ಪ್ರಾಪ್ತಿಯಾದ ಮೇಲೆ ದೇವೇಂದ್ರನ ಅಪ್ಪಣೆಯಂತೆ ಕುಬೇರನು ರಚಿಸುವ ಸಭೆಯೇ ಸಮವಸರಣ. ಇದು ನೆಲದಿಂದ ಅಯ್ದು ಸಾವಿರ ಧನುಸ್ಸು ಎತ್ತರದಲ್ಲಿ ಹನ್ನೆರಡು ಯೋಜನ ವಿಸ್ತಾರದ ಒಂದೇ ಇಂದ್ರನೀಲ ಮಣಿಯ ಮಹಾಶಿಲೆಯಿಂದ ನಿರ್ಮಿತ. ಇದರಲ್ಲಿ ಹನ್ನೊಂದು ಭೂಮಿಗಳಿರುತ್ತವೆ. ಇದರ ನಾಲ್ಕೂ ಕಡೆ ನಾಲ್ಕು ರತ್ನಮಯ ಮಾನಸ್ತಂಭಗಳಿರುತ್ತವೆ.

**ಸವಣ** (೨೦-೧೮): ಜೈನ ಸನ್ಯಾಸಿ, ಶ್ರಮಣ – ಶ್ರವಣ – ಸಮಣ/ಸವಣ

**ಸರ್ವಾರ್ಥಸಿದ್ಧಿ** (೧೦-೪೭): ಅನುತ್ತರ ವಿಮಾನಗಳಲ್ಲ ಎಲ್ಲಕ್ಕೂ ಮೇಲಿರುವುದು ಮತ್ತು ಅತ್ಯುತ್ತಮವಾದದ್ದು.

**ಸರ್ವಾಹ್ಣ ಯಕ್ಷ** (೧-೯): ೨೨ನೇ ತೀರ್ಥಂಕರನಾದ ನೇಮಿನಾಥ ಯಕ್ಷ.

**ಸರ್ವಸಾಧುಗಳು** (೧-೫): ಪಂಚಪರಮೇಷ್ಠಿಗಳಲ್ಲಿ ಕಡೆಯವರು ; ಮುನಿದೀಕ್ಷೆಯನ್ನು ಹೊಂದಿ ರಾಗದ್ವೇಷಾದಿಗಳನ್ನು ತೊರೆದು ಜ್ಞಾನ ಧ್ಯಾನಗಳಲ್ಲಿ ಆಸಕ್ತರಾಗಿ ಸಿದ್ಧಿಯ ಸಾಧನೆಯಲ್ಲಿರುವ ಜೈನ ಮುನಿಗಳು. ಸರ್ವಸಾಧುಗಳ ಗುಣಗಳು ೨೮; ೫ ಮಹಾವ್ರತಗಳು + ೫ ಸಮಿತಿಗಳು + ಇಂದ್ರಿಯ ನಿರೋಧ + ೬ ಆವಶ್ಯಕಗಳು + ಲೋಚು, ಅಸ್ನಾನ, ಕ್ಷಿತಿಶಯನ, ಅದಂತಧಾವನ, ಸ್ಥಿತಿಭೋಜನ, ಏಕಭುಕ್ತಿ, ನಗ್ನತ್ವ.

**ಸಮ್ಯಕ್ತ್ವ** (೧.೧೯): ಸಮ್ಯಕ್ ದರ್ಶನ. ಸಂಸಾರದೊಳಗಿನ ದುಃಖಗಳನ್ನು ನಾಶಮಾಡಿ ಆತ್ಮಕಲ್ಯಾಣದ ಪರಮೋಚ್ಚ ಸ್ಥಿತಿಗೆ ಮುಟ್ಟಿಸುವಂಥ ಶಕ್ತಿ; ಜೈನ ತತ್ವಗಳಲ್ಲಿ ನಂಬಿಕೆಯಿಡುವುದು, ಇದರಲ್ಲಿ ಉಪಶಮ – ವೇದಕ-ಕ್ಷಾಯಿಕ ಸಮ್ಯಕ್ತ್ವಗಳೆಂದು ಮೂರು ಪ್ರಕಾರ.

**ಸಮ್ಯಗ್‌ದೃಷ್ಟಿ** (೧-೩೯): ಜೀವಾದಿ ಸಪ್ತ ತತ್ವಗಳಲ್ಲಿ ನಿರ್ದಿಷ್ಟ ರೀತಿಯಿಂದ ನಂಬಿಕೆ ಇಡುವುದು. ಇದನ್ನೇ ಸಮ್ಯಗ್ದರ್ಶನ, ಸಮ್ಯಕ್ತ್ವ ಎನ್ನುವರು. ರತ್ನತ್ರಯದಲ್ಲಿ ಮೊದಲನೆಯದು.

**ಸಿದ್ಧರು** (೧-೨): ಅಷ್ಟಕರ್ಮದಿಂದ ಮುಕ್ತರಾಗಿ, ಅಷ್ಟ ಗುಣಗಳನ್ನು ಹೊಂದಿ ಸಿದ್ಧಶಿಲೆಯಲ್ಲಿ ವಿರಾಜಮಾನರಾದ ಪರಮ ಆತ್ಮರಿವರು. ಮುಕ್ತಾತ್ಮರು.

**ಸಿದ್ಧಶಿಲೆ** (೬೫-೫೦ ವ): ಮನುಷ್ಯಲೋಕದ ಪ್ರಮಾಣದಷ್ಟೇ ಪ್ರಾಗ್ಭಾರಾ ಎಂಬ ಎಂಟನೆಯ ಭೂಮಿಯು ಈ ಲೋಕದ ತುದಿಯಲ್ಲಿದೆ. ಸರ್ವಕರ್ಮಕ್ಷಯವಾದ ಮುಕ್ತ ಸಿದ್ಧಾತ್ಮರು ಇರುವುದು ಇಲ್ಲಿಯೇ. ಇದೇ ಸಿದ್ಧಶಿಲೆ. ಇದರ ಆಕಾರ ಅರ್ಧಚಂದ್ರನಂತೆ. ಅಂದರೆ ಛತ್ರಾಕಾರ; ಬಣ್ಣ ಬಿಳಿ, ಅಗಲ ಒಂದು ರಜ್ಜು.

**ಸೌಧರ್ಮ ಕಲ್ಪ** (೭-೧೧): ಕಲ್ಪಗಳಲ್ಲಿನ ದೇವತೆಗಳ ವಿಮಾನದ ಹೆಸರು.

**ಸ್ವಯಂಭೂರಮಣ** (೧-೫೨): ಜಂಬೂದ್ವೀಪಾದಿ ಎಂಟು ದ್ವೀಪಗಳ ಸುತ್ತ ಎಂಟು ಸಮುದ್ರಗಳಿವೆ. ಇವುಗಳಲ್ಲಿ ಕಟ್ಟ ಕಡೆಯದು ಸ್ವಯಂಭೂರಮಣ ಸಮುದ್ರ.

**ಹ**

**ಹನ್ನೊಂದಂಗ** (೧೦-೪೬): ನೋಡಿ : ಪನ್ನೊಂದಂಗ.

**ಹದಿನಾರು ಭಾವನೆ** (೧೦-೪೬): ಷೋಡಶ ಭಾವನೆ; ದರ್ಶನ ವಿಶುದ್ಧಿ, ವಿನಯ ಸಂಪನ್ನತೆ, ಶೀಲವ್ರತೇಷ್ವನತಿಚಾರ, ಅಭೀಕ್ಷ್ಣ, ಜ್ಞಾನೋಪಯೋಗ, ಸಂವೇಗ, ಶಕ್ತಿತಸ್ತ್ಯಾಗ, ಶಕ್ತಿತಸ್ತಪ, ಸಾಧು ಸಮಾಧಿ, ವೈಯಾವೃತ್ಯಕರಣ, ಅರ್ಹದ್ಭಕ್ತಿ, ಆಚಾರ್ಯ ಭಕ್ತಿ, ಬಹುಶ್ರುತ ಭಕ್ತಿ, ಪ್ರವಚನ ಭಕ್ತಿ, ಆವಶ್ಯಕಾಪಹಾರಿಣಿ, ಮಾರ್ಗಪ್ರಭಾವನೆ, ಪ್ರವಚನೆ ವತ್ಸಲತ್ವ.

## ಅನುಬಂಧ ೩ – ಆಲಂಕಾರಿಕರು ಮತ್ತು ಅಲಂಕಾರ ಗ್ರಂಥಗಳು

**ಅಮೃತನಂದಿ** (೧-೮): ಈತನನ್ನು ಸಾಳ್ವನು ಉಲ್ಲೇಖಿಸಿ ಈತನ ಮಾರ್ಗದಲ್ಲಿ ಕೃತಿಯನ್ನು ರಚಿಸಿದ್ದೇನೆ ಎಂದಿದ್ದಾನೆ. ಮದ್ರಾಸು ಪ್ರಾಚ್ಯಕೋಶಾಲಯದಲ್ಲಿ 'ಅಮೃತನಂದಿಯ ಅಲಂಕಾರ ಸಂಗ್ರಹ' ಎಂಬ ಸಂಸ್ಕೃತ ಹಸ್ತಪ್ರತಿಯೊಂದಿದೆ. ಬಹುಶಃ ಇದು ಈತನದೇ ಇರಬೇಕು.

**ಆಲಂಕಾರಿಕರು (ಸಂಸ್ಕೃತ)**

**೧. ಪ್ರಾಚೀನ ಆಲಂಕಾರಿಕರು:** ಭರತ-ನಾಟ್ಯಶಾಸ್ತ್ರ (೧ನೇ ಶತ); ಭಾಮಹ – ಕಾವ್ಯಾಲಂಕಾರ (೭ನೇ ಶತ); ದಂಡಿ – ಕಾವ್ಯಾದರ್ಶ (ಸು. ೭ನೇ ಶತ); ವಾಮನ – ಕಾವ್ಯಾಲಂಕಾರ (೮ನೇ ಶತ); ರುದ್ರಟ – ಕಾವ್ಯಾಲಂಕಾರ (೯ನೇ ಶತ)

**೨. ನವೀನ ಆಲಂಕಾರಿಕರು:** ಆನಂದವರ್ಧನ-ಧ್ವನ್ಯಾಲೋಕ (೯ನೇ ಶತ); ಧನಂಜಯ – ದಶರೂಪಕ (ಸು. ೧೦ನೇ ಶತ); ಮಮ್ಮಟ-ಕಾವ್ಯಪ್ರಕಾಶ (೧೧ನೇ ಶತ); ಹೇಮಚಂದ್ರ-ಕಾವ್ಯಾನುಶಾಸನ (೧೦೮೮-೧೧೭೩); ವಿದ್ಯನಾಥ-ಪ್ರತಾಪ ರುದ್ರ ಯಶೋಭೂಷಣ (೧೩ನೇ ಶತ); ವಿಶ್ವನಾಥ-ಸಾಹಿತ್ಯದರ್ಪಣ (೧೪ನೇ ಶತ); ಅಪ್ಪಯ್ಯ ದೀಕ್ಷಿತ-ಕುವಲಯಾನಂದ (೧೬ನೇ ಶತ); ಜಗನ್ನಾಥ-ರಸಗಂಗಾಧರ (೧೭ನೇ ಶತ).

**ಆಲಂಕಾರಿಕರು** (ಕನ್ನಡ): ಶ್ರೀ ವಿಜಯ-ಕವಿರಾಜಮಾರ್ಗ (೯ನೇ ಶತ); ೨ನೇ ನಾಗವರ್ಮ – ಕಾವ್ಯಾವಲೋಕನ (ಸು. ೧೧೪೫); ಉದಯಾದಿತ್ಯ-ಉದಯಾದಿತ್ಯಾಲಂಕಾರ (ಸು.೧೧೫೦) ಕವಿಕಾಮ-ಶೃಂಗಾರ ರತ್ನಾಕರ (ಸು.೧೨೦೦); ಮಾಧವ- ಮಾಧವಾಲಂಕಾರ (ಸು.೧೫೦೦); ಸಾಳ್ವಕವಿ-ರಸರತ್ನಾಕರ, ಶಾರದಾವಿಲಾಸ (೧೪೮೫); ತಿರುಮಲಾರ್ಯ-ಅಪ್ರತಿಮವೀರ ಚರಿತೆ (೧೭ನೇ ಶತ); ಲಿಂಗರಾಜ -ನರಪತಿ ವಿಜಯ (೧೯ನೇ ಶತ)

**ನಾಗವರ್ಮ** (೧-೮ವ): ಕಾವ್ಯಾಲೋಕನವೆಂಬುದು ಈತನ ಅಲಂಕಾರ ಗ್ರಂಥ. ಒಂದು ಪ್ರಕರಣದಲ್ಲಿ ಅತಿ ಸಂಗ್ರಹವಾಗಿ ರಸವಿಷಯದ ಬಗ್ಗೆ ಬರೆದಿದ್ದಾನೆ.

**ಉದಯಾದಿತ್ಯ :** ಈತನ ಕೃತಿ ಉದಯಾದಿತ್ಯಲಂಕಾರ. ಇದರಲ್ಲಿ ರಸವಿಷಯವೇ ಉಕ್ತವಾಗಿಲ್ಲ.

**ಕವಿಕಾಮ** (೧-೮ವ): ಈತನ ಕೃತಿ-ಶೃಂಗಾರ ರಸರತ್ನಾಕರ. ಇದರಲ್ಲಿ ಶೃಂಗಾರರಸವು ವಿಸ್ತಾರವಾಗಿಯೂ ಉಳಿದ ರಸಗಳು ಅತಿ ಸಂಕ್ಷಿಪ್ತವಾಗಿ ನಿರೂಪಿತವಾಗಿದೆ.

**ಕಾವ್ಯ ಪ್ರಕಾಶಿಕೆ** (ಶಾರದವಿ-೬ವ): ಪ್ರಸಿದ್ಧವಾದ ಸಂಸ್ಕೃತ ಭಾಷೆಯ ಅಲಂಕಾರ ಗ್ರಂಥ. 'ವಾಚಕ'ದ ಅರ್ಥವಿಸ್ತಾರಕ್ಕೆ ಈ ಗ್ರಂಥವನ್ನು ಅವಲೋಕಿಸಲು ಸಾಳ್ವಕವಿ ತಿಳಿಸುತ್ತಾನೆ.

**ಗಣೇಶ್ವರಾಜ್ಞಿ** (ಗ್ನಿ): 'ಸಾಹಿತ್ಯ ಸಂಜೀವನ' ಎಂಬ ಗ್ರಂಥ ಬರೆದಂತೆ ತಿಳಿದು ಬರುವುದು.

**ರುದ್ರಭಟ್ಟ** (೧-೮): ಸಾಳ್ವನು ಒಂದೆಡೆಯಲ್ಲಿ 'ರುದ್ರಭಟ್ಟನ ರಸಕಳಿಕೆಯೊಳ್' ಎಂದಿದ್ದಾನೆ. ಆದ್ದರಿಂದ ಈ ರುದ್ರಭಟ್ಟನನ್ನು ಕಾವ್ಯದಾರಂಭದಲ್ಲಿ ಸ್ಮರಿಸಿದ್ದಾನೆ ಹಾಗೂ ಆತನ ಮಾರ್ಗದಲ್ಲಿ ತನ್ನ ಕೃತಿಯನ್ನು ರಚಿಸಿದ್ದೇನೆ ಎಂದಿದ್ದಾನೆ.

**ವಿದ್ಯಾನಾಥ** (೧-೮): ಈತನು ಓರಂಗಲ್ಲಿನ ಕಾಕತೀಯ ವಂಶದ ಪ್ರತಾಪರುದ್ರನ ಆಶ್ರಿತನೆಂದು ತಿಳಿದುಬರುತ್ತದೆ. ಈ ಆಲಂಕಾರಿಕನ ಕೃತಿಯಾವುದೆಂದು ತಿಳಿಯದು. ಈತನ ಕಾಲ ಕ್ರಿ.ಶ.೧೩ನೇ ಶತಮಾನ. ಈತನ ಮಾರ್ಗದಲ್ಲಿ ಕೃತಿರಚಿಸಿದ್ದಾನೆ ಸಾಳ್ವಕವಿ.

**ಸಾಹಿತ್ಯ ಸುಧಾರ್ಣವಂ** (ಶಾರದವಿ-೬ವ): ಅಲಂಕಾರ ಗ್ರಂಥ. ಇದರ ಬಗ್ಗೆ ಹೆಚ್ಚಿನ ಸಂಗತಿ ತಿಳಿಯದು. ಇದರಲ್ಲಿ 'ವಾಚಕ'ದ ಅರ್ಥವಿಸ್ತಾರವನ್ನು ಗಮನಿಸಬಹುದು.

**ಹೇಮಚಂದ್ರ** (೧-೮): ಈತನು ರಾಜಮಾನ್ಯನಾದ, ಕಲಿಕಾಲ ಸರ್ವಜ್ಞ ಎಂದು ಖ್ಯಾತನಾಗಿದ್ದ ಶ್ವೇತಾಂಬರ ಜೈನಾಚಾರ್ಯ. ಈತನು ವ್ಯಾಕರಣ, ಛಂದಸ್ಸು, ಅಲಂಕಾರ, ನಿಘಂಟು ಮೊದಲಾದ ಶಾಸ್ತ್ರಗಳಲ್ಲಿಯೂ ಜೈನ ದರ್ಶನದಲ್ಲಿಯೂ ಪಾರಂಗತನಾದವನು. ೬೦ಕ್ಕಿಂತಲೂ ಹೆಚ್ಚು ಗ್ರಂಥಗಳನ್ನು ರಚಿಸಿರುವನು. ಈತನ ಕಾಲ ಕ್ರಿಶ. ೧೦೮೯ ರಿಂದ ೧೧೭೩. ಈತನ ಮಾರ್ಗವನ್ನು ಸಾಳ್ವಕವಿ ಅನುಸರಿಸಿದ್ದಾನೆ.

## ಅನುಬಂಧ ೪ – ಸಹಾಯಕ ಸಾಹಿತ್ಯ


ಸಾಳ್ವ ಭಾರತ – ಸಂ.ಹಂಪ. ನಾಗರಾಜಯ್ಯ (೧೯೭೬)

ಕನ್ನಡ ಜೈನ ಭಾರತಗಳು – ಬಿ.ಎಸ್.ಕುಲಕರ್ಣಿ (ಪ್ರ.ಕ. ೩೮-೧)

ಷಟ್ಪದಿ ಸಾಹಿತ್ಯ – ಕೆ. ಮರುಳಸಿದ್ದಪ್ಪ (೧೯೭೫)

ಸಾಂಗತ್ಯ ಕವಿಗಳು – ಹಂಪ. ನಾಗರಾಜಯ್ಯ (೧೯೭೫)

ನೇಮಿಚಂದ್ರ ಕೃತ ನೇಮಿನಾಥ ಪುರಾಣಂ – ಸಂ. ಬಿ.ಎಸ್. ಕುಲಕರ್ಣಿ (೧೯೬೮)

ನೇಮಿಚಂದ್ರ ವಿರಚಿತ ನೇಮಿನಾಥ ಪುರಾಣಂ – ಸಂ.ಬಿ.ಎಸ್.ಸಣ್ಣಯ್ಯ (೧೯೬೧)

ಬಂಧುವರ್ಮ ವಿರಚಿತ ಹರಿವಂಶಾಭ್ಯುದಯ. – ಸಂ.ಬಿ.ಎಸ್. ಸಣ್ಣಯ್ಯ (೧೯೭೪)

೩ನೇ ಮಂಗರಸನ ನೇಮಿಜಿನೇಶ ಸಂಗತಿ – ಸಂ.ಎ.ಶಾಂತಿರಾಜಶಾಸ್ತ್ರಿ (೧೯೮೯ ದ್ವಿ.ಮು.)

ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ – ಟಿ.ವಿ. ವೆಂಕಟಾಚಲ ಶಾಸ್ತ್ರೀ (೧೯೬೮)

ಜೈನ ಮಹಾಭಾರತ – ಎಲ್.ಆರ್.ಹೆಗಡೆ (೧೯೭೪)

ಕವಿಸಾಳ್ವಕೃತ ರಸರತ್ನಕಾರಂ – ಸಂ.ಎ.ವೆಂಕಟರಾವ್, ಎಚ್.ಶೇಷ ಅಯ್ಯಂಗಾರ್ (೧೯೭೫ ದ್ವಿ.ಮು.)

ಸಾಳ್ವಕವಿ ವಿರಚಿತ ರಸರತ್ನಾಕರಂ – ಸಂ.ಎಚ್.ಕೆ.ನರಸಿಂಹೇಗೌಡ (೧೯೭೨)

ಕನ್ನಡದಲ್ಲಿ ಅಲಂಕಾರ ಗ್ರಂಥಗಲು – ಕೆ.ಕೃಷ್ಣಮೂರ್ತಿ (ಕ.ಸ.ಪ. ೪೭-೨)

ಭಾರತೀಯ ಕಾವ್ಯ ಮೀಮಾಂಸೆ – ತೀ.ನಂ.ಶ್ರೀಕಂಠಯ್ಯ (೧೯೬೧)

ಕನ್ನಡದಲ್ಲಿ ಕಾವ್ಯತತ್ತ್ವ – ಕೆ. ಕೃಷ್ಣಮೂರ್ತಿ (೧೯೬೪)